ಭಕ್ತವಿಜಯವು

ಮಹಾರಾಷ್ಟ್ರ ಭಾಷೆಯಿಂದ ಕನ್ನಡಿಸಿದುದು.

ಶ್ರೀಮನ್ಮೈಸೂರಮಹಾರಾಜಾಸ್ಥಾನಸಂಬಂಧವಾದ
ಮೈಸೂರ ಸೀತಾರಾಮಶಾಸ್ತ್ರಿಗಳಿಂದ
ಪರಿಷ್ಕರಿಸಿ ಮುದ್ರಿಸಲ್ಪಟ್ಟುದು.

ತೃತೀಯಮುದ್ರಣ.

ಮೈಸೂರು

೧೯೩೧

 [ಬೆಲೆ ೩–೮–೦

ಭಕ್ತವಿಜಯ

ಮಹಾರಾಷ್ಟ್ರಭಾಷೆಯಿಂದ ಕನ್ನಡಿಸಲ್ಪಟ್ಟದ್ದು

ಶ್ರೀಮನ್ಮಹೀಶೂರಮಹಾರಾಜಾಸ್ಥಾನಪಂಡಿತರಾದ
ಮೈಸೂರು ಸೀತಾರಾಮಶಾಸ್ತ್ರಿಗಳಿಂದ
ಪರಿಷ್ಕರಿಸಿ ಮುದ್ರಿಸಲ್ಪಟ್ಟುದು.

ತೃತೀಯ ಮುದ್ರಣ.

ಮೈಸೂರು,
ಶ್ರೀ ಕೃಷ್ಣರಾಜವಾಣೀವಿಲಾಸ ಮುದ್ರಾಕ್ಷರಶಾಲೆ.
1921

ಪ್ರಥಮಮುದ್ರಣಪೀಠಿಕೆ.

ಭಕ್ತರ ವಿಜಯವನ್ನು ಪ್ರತಿಪಾದಿಸುವುದರಿಂದ ಈ ಗ್ರಂಥಕ್ಕೆ ಭಕ್ತವಿಜಯವೆಂದು ಹೆಸರು. ಪರಮಾತ್ಮನಲ್ಲಿ ಭಕ್ತಿಯುಳ್ಳವರು ಭಕ್ತರೆನಿಸುವರು. ದೊಡ್ಡವರ ವಿಷಯದಲ್ಲಿ ಉಂಟಾದ ಅನುರಾಗವೇ ಭಕ್ತಿ. "ಪೂಜ್ಯೇಷ್ವನುರಾಗೋ ಭಕ್ತಿಃ" ಎಂದು ಹೇಳಲ್ಪಟ್ಟಿರುವುದು. ಭಕ್ತಿಯೆಂಬುದು ಸೇವಾರ್ಥಕವಾದ "ಭಜ" ಎಂಬ ಧಾತುವಿನಿಂದ ನಿಷ್ಪನ್ನವಾದುದು. ಇದರಿಂದ ಸೇವೆಯೆಂದೂ ಅರ್ಥವಾಗುವುದು. "ಗುರುಭಕ್ತಿ ಪಿತೃಭಕ್ತಿ ರಾಜಭಕ್ತಿ" ಎಂದು ಪಲವು ತೆರವುಂಟು. ಜಗತ್ಪೂಜ್ಯನಾದ ಭಗವಂತನ ವಿಷಯದಲ್ಲಿ ಉಂಟಾದ ಅನುರಾಗವು ಭಗವದ್ಭಕ್ತಿಯೆನಿಸುವುದು. ಈ ಭಕ್ತಿ:—

"ಶ್ರವಣಂ ಕೀರ್ತನಂ ವಿಷ್ಣೋಸ್ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥"

ಎಂದು ಒಂಬತ್ತುತೆರವುಳ್ಳದಾಗಿರುವುದು. ಭಗವಂತನ ಚರಿತ್ರೆಯುಂ ಕೇಳುವುದು ಶ್ರವಣವೆಂದೂ, ಆತನ ಚರಿತ್ರೆಯನ್ನಾಗಲಿ ನಾಮವನ್ನಾಗಲಿ ಪಠಿಸುವುದು ಕೀರ್ತನವೆಂದೂ, ಆತನಂ ಚಿಂತಿಸುವುದು ಸ್ಮರಣವೆಂದೂ, ಆತನ ಚರಣವನ್ನು ಸೇವಿಸುವುದು ಪಾದಸೇವನವೆಂದೂ, ಆಸ್ವಾಮಿಯನ್ನು ಪುಷ್ಪಾದ್ಯುಪಚಾರಂಗಳಿಂದ ಪೂಜಿಸುವುದು ಅರ್ಚನವೆಂದೂ, ಆತನಿಗೆ ನಮಸ್ಕಾರವನ್ನು ಮಾಡುವುದು ವಂದನವೆಂದೂ, ಆತನಲ್ಲಿ ಸ್ನೇಹವುಳ್ಳವನಾಗಿರುವುದು ಸಖ್ಯವೆಂದೂ, ಆತನಿಗೆ ತನ್ನದೆಲ್ಲವನ್ನೂ ಸಮರ್ಪಿಸುವುದು ಆತ್ಮನಿವೇದನವೆಂದೂ ನಿರೂಪಿಸಲ್ಪಟ್ಟಿರುವುದು. ಈ ವೊಂದೊಂದು ಭಕ್ತಿಯಿಂದಲೆ ಒಬ್ಬೊಬ್ಬರು ಕೈವಲ್ಯವನ್ನು ಪಡೆದಿರುವರು. ಇದಕ್ಕೆ ಪ್ರಮಾಣವೇನೆಂದರೆ:—

ಪರೀಕ್ಷಿನ್ಮಹಾರಾಜನು ಭಾಗವತಶ್ರವಣದಿಂದಲೂ, ಶುಕಮುನೀಂದ್ರನು ಭಾಗವತ ಕೀರ್ತನದಿಂದಲೂ, ಪ್ರಹ್ಲಾದನು ಭಗವಂತನ ಸ್ಮರಣದಿಂದಲೂ, ಲಕ್ಷ್ಮಿ ಭಗವಂತನ ಚರಣ ಸೇವೆಯಿಂದಲೂ, ಪೃಥುಚಕ್ರವರ್ತಿ ಅರ್ಚನದಿಂದಲೂ, ಅಕ್ರೂರನು ನಮಸ್ಕಾರದಿಂದಲೂ, ಹನುಮಂತನು ದಾಸ್ಯದಿಂದಲೂ, ಅರ್ಜುನನು ಸಖ್ಯದಿಂದಲೂ, ಬಲಿಚಕ್ರವರ್ತಿ ತನ್ನ ಸರ್ವಸ್ವವನ್ನು ಸಮರ್ಪಿಸಿದುದರಿಂದಲೂ ಭಗವದನುಗ್ರಹಕ್ಕೆ ಪಾತ್ರರಾದರು. ಈಯರ್ಥದಲ್ಲಿ ಅಭಿಹಿತವಾದ ಒಂದು ಪುರಾತನಶ್ಲೋಕವುಂಟು:—

ಶ್ರೀವಿಷ್ಣೋಃ ಶ್ರವಣೇ ಪರೀಕ್ಷಿತಿರಭೂದ್ವೈಯಾಸಕಿಃ ಕೀರ್ತನೇ ।
ಪ್ರಹ್ಲಾದಸ್ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ ॥
ಅಕ್ರೂರಸ್ತ್ವಭಿವಂದನೇ ಚ ಹನುಮಾನ್ ದಾಸ್ಯೇಽಥ ಸಖ್ಯೇಽರ್ಜುನಃ ।
ಸರ್ವಸ್ವಾತ್ಮನಿವೇದನೇ ಬಲಿರಭೂತ್ಕೈವಲ್ಯಮೇಷಾಂ ಪದಮ್ ॥

ಇಂತಿರಲು, ಭಗವಂತನಲ್ಲಿ ಆಬಗೆಯ ಎಲ್ಲಾಭಕ್ತಿಗಳನ್ನೂ ಎಸಗುವವರು ಇನ್ನೆಷ್ಟು ಧನ್ಯತೆಯುಳ್ಳವರೋ! ಭಕ್ತಿಯೆಂಬುದು ದೊಡ್ಡದು. ಭಕ್ತಿಯಿಂದ ಸಮರ್ಪಿಸಿದುದು ಸ್ವಲ್ಪವಾದರೂ ಭಗವತ್ಪ್ರೀತಿಕರವಾಗುವುದು. ಗೀತೆಯಲ್ಲಿ:—

"ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ॥"

ಎಂದು ಭಗವಂತನು ಹೇಳಿರುವನು.

ಇಂತಹ ಭಕ್ತಿವಿಷಯಗಳಿಂದ ಭರಿತವಾದ ಈ ಭಕ್ತವಿಜಯವನ್ನು ಮಹಾರಾಷ್ಟ್ರದೇಶದ ಆಸ್ತಿಕಶಿರೋಮಣಿಯಾದ ಮಹೀಪತಿಯೆಂಬಾತನು ಉತ್ತರದೇಶದ ನಾಭಾಜಿಯೆಂಬವನಿಂದಲೂ, ಮಾನದೇಶದ ಉದ್ಧವಚಿದ್ಘನನೆಂಬವನಿಂದಲೂ ವಿರಚಿತವಾದ ಸಾಧುಚರಿತ್ರೆಗಳನ್ನು ಒಳಕೊಂಡ ಗ್ರಂಥಗಳ ಆಧಾರದಿಂದ ಸ್ವಭಾಷೆಯಲ್ಲಿ ರಚಿಸಿರುವನು. ಈ ವಿಷಯವು ಪೀಠಿಕಾಪ್ರಕರಣದಲ್ಲಿ ಹೇಳಲ್ಪಟ್ಟಿದೆ.

"ಪ್ರವರೆಯ ದಕ್ಷಿಣಭಾಗದ ಪಂಚಕ್ರೋಶದಲ್ಲಿ "ತಾಹಾರಬಾದ"—ಎಂಬ ಊರಲ್ಲಿ ಒಂದು ಸಾಸಿರದ ಆರುನೂರೆಂಬತ್ತುನಾಲ್ಕನೆಯ ಶಾಲಿವಾಹನಶಕಾಬ್ದಕ್ಕೆ ಸಂದ ಚಿತ್ರಭಾನುಸಂವತ್ಸರದ ವೈಶಾಖಬಹುಳದ್ವಿತೀಯಾದಿನದಲ್ಲಿ ಈ ಭಕ್ತವಿಜಯಗ್ರಂಥವು ಸಿದ್ಧಿಯೊಂದಿತು" ಎಂದು ಕವಿ ಕಡೆಯಲ್ಲಿ ಹೇಳಿರುವನು. ಇದರಿಂದ ಈ ಗ್ರಂಥವನ್ನು ರಚಿಸಿದುದು ನೂರೈವತ್ತುವರ್ಷಗಳ ಹಿಂದೆ ಎಂದು ನಿಶ್ಚಿತವಾಗುವುದು.

ಪ್ರಸಿದ್ಧಕ್ಷೇತ್ರನೆನಿಸಿದ ಪಂಢರಾಪುರದ ಶ್ರೀಪಾಂಡುರಂಗವಿಟ್ಠಲಸ್ವಾಮಿಯ ಭಕ್ತರ ಚರಿತ್ರೆಗಳು ಆಕ್ಷೇತ್ರದ ಮಹಿಮೆಯೊಡನೆ ಇಲ್ಲಿ ವಿಶೇಷದಿಂದ ಹೇಳಲ್ಪಟ್ಟಿವೆ. ಕೆಲವರಾದ ರಾಮಭಕ್ತರ ಚರಿತ್ರೆಗಳೂ ಬಂದಿವೆ. ಈ ಗ್ರಂಥವು ಸುಲಲಿತವಾಗಿದೆ. ಸ್ತ್ರೀಯರಿಗೂ ಓದಲು ತಕ್ಕುದೆನಿಸಿರುವುದು. ಭಗವದ್ಭಕ್ತಿಪರಿಪೋಷಕವಾಗಿಯೂ ವಿಶೇಷದಿಂದಲ್ಲಲ್ಲಿ ನಿರೂಪಿಸಲ್ಪಡುವ ದೃಷ್ಟಾಂತಗಳಿಂದ ಪಾಠಕರ ಮನಸ್ಸನ್ನು ಆಕರ್ಷಿಸಿ ಉಲ್ಲಾಸಗೊಳಿಸುವುದಾಗಿಯೂ ಇದೆ. ಇದನ್ನು ಓದುವುದರಿಂದ ಎಂತವನಿಗಾದರೂ ಚಿತ್ತಪರಿಪಾಕವುಂಟಾಗದೆ ಇರದು. ಈ ಗ್ರಂಥವು ಇಂತು ಸರಸಾರ್ಥಚಮತ್ಕಾರಗರ್ಭಿತವಾಗಿರುವುದರಿಂದಲೇ ತಮಿಳು ತೆಲುಗು ಮುಂತಾದ ಅನೇಕಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟು ಪ್ರಸಿದ್ಧವಾಗಿದೆ. ಇದರಲ್ಲಿ ಅನೇಕವಾದ ಅತ್ಯದ್ಭುತ ಸಂಗತಿಗಳು ಹೇಳಲ್ಪಟ್ಟಿವೆ. ಇವು ಕೆಲವು ಕಥಾಚಮತ್ಕಾರಕ್ಕೆ ಕವಿಯಿಂದ ಕಲ್ಪಿಸಲ್ಪಟ್ಟಿರುವಂತೆ ತೋರುವುವು. ಇಂತಹ ಅದ್ಭುತವಿಷಯವು ಈ ಕಾಲದಲ್ಲಿ ಯಥಾರ್ಥವೆಂದು ಒಪ್ಪುವುದಕ್ಕೆ ಆಗದಿದ್ದರೂ ಇತರವಾದ ಸದ್ವಿಷಯಗಳು ಅಭಿನಂದನೀಯಗಳೇ ಆಗಿರುವುವು, ಆದರೆ ಈ ಕಾಲದಲ್ಲಿಯೂ ಅನೇಕಮಹನೀಯರು ಭಗವತ್ಸಾಕ್ಷಾತ್ಕಾರವನ್ನು ಪಡೆದು ಅನೇಕಾದ್ಭುತಕಾರ್ಯಂಗಳನ್ನು ಮಾಡಿರುವರೆಂಬುದು ಸುಳ್ಳಲ್ಲ. ಇಲ್ಲಿ ಪ್ರತಿಪಾದಿತರಾದ ತುಳಸೀದಾಸ ಕಬೀರದಾಸ ನಾಮದೇವ ಮುಂತಾದ ಮಹನೀಯರು ಸಾಧಾರಣರಲ್ಲ. ಇವರಿಗೆ ಭಗವಂತನು ಪ್ರತ್ಯಕ್ಷನೆಂಬುದು ಪ್ರಸಿದ್ಧವಾದುದು. ಇವರ ಕಾರ್ಯಗಳು ಅತ್ಯದ್ಭುತವಾದವುಗಳು. ಇವರ ಮಹಿಮೆ

ಅಸಾಧಾರಣವಾದುದು. ಇಂತವರ ಚರಿತ್ರೆಯನ್ನು ಪ್ರಖ್ಯಾತರಾದ "ಸ್ವಾಮಿವಿವೇಕಾನಂದ" ಎಂಬವರು ತಾವು ಚೆನ್ನಾಗಿ ಬರೆಯಬೇಕೆಂಬ ಕುತೂಹಲವುಳ್ಳವರಾಗಿದ್ದರು. ಈವಿಷಯದಲ್ಲಿ ಕಳೆದ ಸಂವತ್ಸರದ ಮಾರ್ಚಿ ತಿಂಗಳ ಪ್ರಬುದ್ಧಭಾರತವೆಂಬ ಆಂಗ್ಲೇಯವಾಣಿಯ ಮಾಸ ಪುಸ್ತಕದ ಮೂವತ್ತನೆಯ ಪುಟದಲ್ಲಿ ಮುದ್ರಿತವಾಗಿರುವ ಅವರ ಲೇಖನದ ಮುಖ್ಯಾಂಶವು ಇಲ್ಲಿ ಕನ್ನಡಿಸಲ್ಪಟ್ಟಿರುವುದು:—

"ಪ್ರಿಯ—,

....

ಬರೆಯಬೇಕಾದ ತುಳಸೀದಾಸ್ ಕಬೀರದಾಸ್ ನಾಮುಕ್ ಮೊದಲಾದ ದಕ್ಷಿಣಹಿಂದು ಸ್ಥಾನದ ಸದ್ಭಕ್ತರ ಅದ್ಭುತಕಾರ್ಯಂಗಳಿಂದ ಕೂಡಿದ ಜೀವನಮಾನದ ಚರಿತ್ರೆಗಳು ಇನ್ನೂ ಬರೆಯ ಲ್ಪಟ್ಟಿಲ್ಲ. ಅವು ಅತ್ಯಂತಗಂಭೀರವಾಗಿಯೂ ಪ್ರೌಢವಾಗಿಯೂ ಇರುವ ಶೈಲಿಯಿಂದ ಬರೆಯ ಬೇಕಲ್ಲದೆ ಏನೋ ತೋರಿದಂತೆ ಸಾಮಾನ್ಯವಾದ ರೀತಿಯಲ್ಲಿ ಬರೆಯತಕ್ಕುವಲ್ಲ.

... ...

ಸರ್ವಪ್ರಿಯನಾದ ನಿಮ್ಮ ವಿವೇಕಾನಂದ

ಇದರಿಂದ ಈ ಭಕ್ತವಿಜಯವು ಈಗಿನ ನಾಗರಿಕತೆಯುಳ್ಳ ಆಂಗ್ಲೇಯಭಾಷಾಪಿಕಾರದ ರಿಗೂ ಅಭಿನಂದ್ಯವೆನಿಸಬಹುದು.

ಇಂತಹ ಗ್ರಂಥವು ಕನ್ನಡಿಗರ ಉಪಯೋಗಕ್ಕೋಸ್ಕರ ಹಿಂದೆ ನಮ್ಮ ಮೈಸೂರ ಅರಮ ನೆಯಲ್ಲಿ ಕನ್ನಡಮಾಡಿಸಿ ಇಡಲ್ಪಟ್ಟಿದ್ದಿತು. ಇದನ್ನು ಪೂರ್ವದ ಸೀತಾವಿಳಾಸಸನ್ನಿಧಾನದ ಶ್ರೀಮನ್ಮಹಾರಾಜ್ಞಿಯವರು ೨೬ ವರ್ಷಗಳ ಹಿಂದೆ ಅರಮನೆಯ ಅಂಬಾವಿಲಾಸದ ಶಿಲಾ ಯಂತ್ರದಲ್ಲಿ ಮಿತವಾಗಿ ಮುದ್ರಣಗೊಳಿಸಿ ಅರಮನೆಗೆ ಸೇರಿದ ಮುಖ್ಯರಾದ ಕೆಲವರಿಗೆ ದಯೆ ಪಾಲಿಸಿದರು. ಇತರರಿಗೆ ಅಲಭ್ಯವಾಗಿದ್ದ ಈ ಗ್ರಂಥವನ್ನು ನಾನು ಸರ್ವರ ಉಪಯೋಗಕ್ಕೋ ಸ್ಕರ ಮುದ್ರಿಸಬೇಕೆಂದು ಆಲೋಚಿಸಿ ಇದರ ಮುದ್ರಣಮುಂತಾದ ಸ್ವಾತಂತ್ರ್ಯದ ವಿಷಯದಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಘನವಾದ ಅಪ್ಪಣೆಯನ್ನು ಪಡೆದು ಆಮಹಾಪ್ರಭುಗಳವರ ಉದಾರವಾದ ಸಾಹಾಯ್ಯದಿಂದ ಇದನ್ನು ಮಾಸಸಂಚಿಕೆಯಾಗಿ ಮುದ್ರಿಸಲುಪಕ್ರಮಿಸಿದೆನು. ಭಗವದನುಗ್ರಹದಿಂದ ಗ್ರಂಥಮುದ್ರಣವು ನಿರ್ವಿಘ್ನವಾಗಿ ಪರಿಪೂರ್ಣವಾಯಿತು.

ಈ ಗ್ರಂಥದಲ್ಲಿ ಸ್ವಲ್ಪದೂರದವರೆಗೆ ಸಂದರ್ಭೋಚಿತವಾದ ಕೆಲವು ಸಂಸ್ಕೃತಪದ್ಯಗಳನ್ನೂ ಹೊಸತಾಗಿ ರಚಿಸಿದ ಕೆಲವು ಕರ್ಣಾಟಪದ್ಯಗಳನ್ನೂ ನಾನು ಸೇರಿಸಿರುವೆನು. ಮುಂದೆಯೂ ಸೇರಿಸಬೇಕೆಂದಿದ್ದರೂ ಗ್ರಂಥವಿಸ್ತರಭಯದಿಂದ ಪ್ರವರ್ತಿಸಲಿಲ್ಲ. ಮೊದಲು ಕನ್ನಡಿಸಲ್ಪಟ್ಟ ಈ ಗ್ರಂಥದ ಭಾಷಾಶೈಲಿಮುಂತಾದುದು ಸ್ವಲ್ಪವೂ ತೃಪ್ತಿಕರವಾಗಿರಲಿಲ್ಲ. ನನಗೆ ಸಾಧ್ಯವಾದ ರೀತಿಯಲ್ಲಿ ವಿಶೇಷಶ್ರಮದಿಂದ ಪರಿಷ್ಕರಿಸಿರುವೆನು. ಗುಣಜ್ಞರು ನೋಡಿ ಸಂತೋಷಿಸದೆ ಇರಲಾರರು. ನನ್ನ ಈ ಪ್ರವರ್ತನೆಯಿಂದ ಜನಗಳಿಗೆ ಸ್ವಲ್ಪವಾದರೂ ಉಪಯೋಗವುಂಟಾದರೆ ನನ್ನ ಶ್ರಮವೆಲ್ಲವೂ ಸಫಲವೆಂದು ಎಣಿಸುವೆನು.

ಈ ಗ್ರಂಥವು ಇಂತು ಮುದ್ರಿತವಾಗುವುದಕ್ಕೆ ವಿಶೇಷಸಾಹಾಯ್ಯವನ್ನು ಮಾಡಿದ ವಿದ್ಯಾಧಿಮಾನಿಗಳಾದ ಅರಮನೆಯ ಇಞ್‌ಛಾರ್ಜ್ ಆಫೀಸರ್ ಮ|| ರಾ|| ರಾ|| ಬಿ. ರಾಮಕೃಷ್ಣರಾಯರ ವಿಷಯದಲ್ಲಿ ಅತ್ಯಂತಕೃತಜ್ಞನಾಗಿರುವೆನು.

ನನಗೆ ದೊರೆತ ಮಹಾಶಯರಾದ ನಮ್ಮ ಚಂದಾದಾರರ ಉದಾರಪ್ರೋತ್ಸಾಹವು ಚಿರಸ್ಮರಣೀಯವಾಗಿರುವುದು.

೨೫-೬-೧೯೧೦, }
ಮೈಸೂರು. }

ಮೈಸೂರ ಸೀತಾರಾಮಶಾಸ್ತ್ರಿ,
ಎಡಿಟರ್, ಭಕ್ತಿಪ[illegible]ಯು.

ದ್ವಿತೀಯಮುದ್ರಣಪೀಠಿಕೆ.

ಈ ಭಕ್ತವಿಜಯವು ಮೊದಲನೆಯಆವೃತ್ತಿ ಮುದ್ರಿತವಾದ ಅಲ್ಪಕಾಲನಲ್ಲಿಯೇ ಇದರ ಪ್ರತಿಗಳು ಮುಗಿದುಹೋದುವು. ಅಂದಿನಿಂದಲೂ ಅನೇಕರು ಅತಿಕುತೂಹಲದಿಂದ ಅಪೇಕ್ಷಿಸುತ್ತಿದ್ದಕಾರಣ ಮತ್ತೆ ಮಾಸಸಂಚಿಕೆಯಾಗಿ ಮುದ್ರಿಸಲಾಯಿತು. ರಸಜ್ಞರಾದ ಪಾಠಕಮಹಾಶಯರು ಆಸ್ತಿಕರಾದ ತಂತಮ್ಮ ಇಷ್ಟಮಿತ್ರರನ್ನು ಈ ಪುಸ್ತಕಮಂ ತೆಗೆದುಕೊಳ್ಳುವ ವಿಷಯದಲ್ಲಿ ಪ್ರೋತ್ಸಾಹಿಸಿ ಅವರನ್ನೂ ಈ ಗ್ರಂಥದ ರಸಾನುಭವದಿಂದ ಆನಂದಮಗ್ನರನ್ನಾಗಿ ಮಾಡಿ ಅತಿಶಯಿತವಾದ ಭಗವತ್ಪ್ರೀತಿಯಂ ಸಂಪಾದಿಸುವರೆಂದು ನಂಬಿರುವೆನು.

೫-೫-೧೯೧೪ }
ಮೈಸೂರು. }

ಮೈ. ಸೀ.

ತೃತೀಯಮುದ್ರಣಪೀಠಿಕೆ.

ಎರಡನೆಯ ಆವೃತ್ತಿ ಮುದ್ರಿಸಲ್ಪಟ್ಟ ಈ ಭಕ್ತವಿಜಯದ ಪ್ರತಿಗಳು ಅತ್ಯಲ್ಪಕಾಲದಲ್ಲಿಯೇ ಮುಗಿದುಹೋದುವು. ಅಂದಿನಿಂದ ಜನಗಳು ಈ ಪುಸ್ತಕವನ್ನು ಕೇಳಲು ಆರಂಭಿಸಿದರು. ಮತ್ತೆ ಮುದ್ರಣಗೊಳಿಸಬೇಕೆಂಬ ಕುತೂಹಲವಿದ್ದರೂ ಈಚೆಗೆ ಕಾಗದ ಮುಂತಾದುದರ ಬೆಲೆ ಮಿತಿಮೀರಿದ್ದುದರಿಂದ ಕೆಲವುಕಾಲ ಸುಮ್ಮನಾದೆ. ಮತ್ತೆ ಈಚೆಗೆ ಅನೇಕರು ಪುಸ್ತಕವನ್ನು ಕಳುಹಬೇಕೆಂದು ಅನೇಕಪತ್ರಗಳನ್ನು ಬರೆಯುತ ಬಂದರು. ಅನೇಕರು ಕಂಡು ಕೇಳಿದರು. ಅವರೆಲ್ಲರಿಗೂ ಅಡಿಗಡಿಗೆ ನಿರರ್ಥಕವಾದ ಉತ್ತರವನ್ನು ಕುಡುವುದು ಸಂಕೋಚವನ್ನುಂಟುಮಾಡಿತು. ಈಗಿನ ಕಾಲನಲ್ಲಿ ಇಂತಹ ದೊಡ್ಡಪುಸ್ತಕವನ್ನು ಸರಿಯಾದ ರೀತಿಯಿಂದ ಮುದ್ರಣಗೊಳಿಸುವುದು ನನ್ನಂತವರಿಗೆ ಅಸಾಧ್ಯವೇಸರಿ. ಹಿಂದೆ ಈಗ್ರಂಥದ ಪ್ರಥಮದ್ವಿತೀಯಮುದ್ರಣಗಳಾದಾಗ

ಕಾಗದದ ಬೆಲೆಯೂ ಇತರವಾದ ವೆಚ್ಚವೂ ಅಲ್ಪವಾಗಿದ್ದಿತು; ಅಲ್ಲದೆ ಗ್ರಾಹಕರ ಮುಂಗಡವಾದ ದ್ರವ್ಯಸಾಹಾಯ್ಯವೂ ಒದವಿದ್ದಿತು. ಆದುದರಿಂದ ಆಗ ಕಷ್ಟವೇನೂ ತೋರಲಿಲ್ಲ. ಈಗ ಅಸಹಾಯನಾಗಿ ಮುದ್ರಣಕಾರ್ಯಭಾರವನ್ನು ವಹಿಸುವುದು ಎಂತೆಂದು ಚಿಂತಿಸುತ್ತ ಮತ್ತೆ ಕೆಲವು ಕಾಲ ತಟಸ್ಥನಾಗಿದ್ದೆನು. ಬರುತಬರುತ ಪುಸ್ತಕಾಪೇಕ್ಷಿಗಳ ಕುತೂಹಲವೂ ನಿರ್ಬಂಧವೂ ಉತ್ಕಟವಾಯಿತು. ಎಂತಾದರೂ ಇನ್ನು ಮುದ್ರಣಕಾರ್ಯವನ್ನು ಆರಂಭಿಸಬೇಕೆಂದು ನಿಶ್ಚಯಿಸಿ ದೈವನ್ಯಸ್ತಭರನಾಗಿ ಪ್ರವರ್ತಿಸಿದೆನು. ದಯಾನಿಧಿಯಾದ ಪರಮಾತ್ಮನ ಪರಮಾನುಗ್ರಹದಿಂದ ಗ್ರಂಥದ ಈ ತೃತೀಯಮುದ್ರಣವೂ ನಿರ್ವಿಘ್ನವಾಗಿ ನೆರವೇರಿತು. ಇನ್ನು ಪುಸ್ತಕವು ಕುತೂಹಲಿತರಾದ ಪಾಠಕಮಹಾಶಯರ ಹಸ್ತವನ್ನು ಅಲಂಕರಿಸಬಹುದೆಂದು ಮನಸ್ಸಿಗೆ ಅತ್ಯಂತಸಂತೋಷವುಂಟಾಗಿರುವುದು.

ರಸವತ್ತರವೆನಿಸಿ ಸುಪ್ರಸಿದ್ಧವಾದ ಈ ಭಕ್ತವಿಜಯಕ್ಕೆ ಯಾವುದೊಂದುಭಾಗದಲ್ಲಿಯೂ ಸಾಟಿಯೆನಿಸಿಕೊಳ್ಳದಿದ್ದರೂ ಸ್ವಲ್ಪ ವ್ಯತ್ಯಸ್ತವಾದ ಇದೇಹೆಸರನ್ನುಮಾತ್ರ ಪಡೆದು ಈಚೆಗೆ ಕೆಲವು ಪುಸ್ತಕಗಳು ಹೊರಟಿವೆ. ಗ್ರಾಹಕರು ನಾಮಸಾದೃಶ್ಯದಿಂದ ಭ್ರಾಂತಿಗೊಂಡು ಮೋಸಹೋಗಬಾರದು. ವಿಚಾರದಿಂದ ಪರಾಮರ್ಶಿಸಿ ಇತ್ತಕಡೆ ಕಟಾಕ್ಷವಿಟ್ಟು ಆಸ್ತಿಕರಾದ ತಂತಮ್ಮ ಇಷ್ಟಮಿತ್ರರನ್ನೂ ಈ ಪುಸ್ತಕವಂ ಗ್ರಹಿಸುವ ವಿಷಯದಲ್ಲಿ ಪ್ರೇರಿಸಿ ಅವರನ್ನೂ ಈಗ್ರಂಥದ ರಸಾನುಭವದಿಂದ ಆನಂದಮಗ್ನರನ್ನಾಗಿ ಮಾಡಿ, ಅತಿಶಯಿತವಾದ ಭಗವತ್ಪ್ರೀತಿಗೆ ಭಾಜನರಾಗಬೇಕೆಂದು ಪ್ರಾರ್ಥಿಸುವೆನು.

ಈ ಗ್ರಂಥದ ಪರಿಶೋಧನವು ಪೂರ್ವಕ್ಕಿಂತಲೂ ಅತ್ಯಂತತೃಪ್ತಿಕರವಾಗಿರುವುದು. ಪುಸ್ತಕದ ಸ್ವರೂಪವು ಮೊದಲಿಗಿಂತ ಯಾವ ವಿಷಯದಲ್ಲಿಯೂ ನ್ಯೂನತೆಯನ್ನು ಹೊಂದಿಲ್ಲ. ಆದರೂ ವಿಶೇಷಧನವ್ಯಯವುಂಟಾಗಿರುವ ಈ ವೇಳೆಯಲ್ಲಿಯೂ ಗ್ರಾಹಕರ ಮನಸ್ಸಿಗೆ ಹೆಚ್ಚಾದ ಕ್ಲೇಶವುಂಟಾಗಬಾರದೆಂದು ಕೇವಲಲಾಭದಲ್ಲಿ ಲಕ್ಷ್ಯವಿಡದೆ ಹಿಂದಣಬೆಲೆಗಿಂತ ಎಂಟಾಣೆಮಾತ್ರವೇ ಹೆಚ್ಚಿಸಲ್ಪಟ್ಟಿರುವುದು.

ತಮ್ಮ ಮುದ್ರಾಕ್ಷರಶಾಲೆಯಲ್ಲಿ ಅಗಾಧವಾದ ಸ್ವಕೀಯಮುದ್ರಣಕಾರ್ಯಸಂರಂಭವಿದ್ದರೂ ಉದಾರವಾದ ಮನಸ್ಸಿನಿಂದ ಅವಕಾಶವಿತ್ತು, ಕ್ಷಿಪ್ರದಲ್ಲಿ ಈಗ್ರಂಥವನ್ನು ಮುದ್ರಣಗೊಳಿಸಿಕೊಟ್ಟ ಮಹಾಶಯರಾದ ಮ|| ಎಮ್. ವೆಂಕಟಕೃಷ್ಣಯ್ಯನವರ ವಿಷಯದಲ್ಲಿ ನಾನು ಅತ್ಯಂತಕೃತಜ್ಞನಾಗಿರುವೆನು.

೨೦-೭-೨೧,
ಮೈಸೂರು.

ವೈ. ಸೀ.

ವಿಷಯಾನುಕ್ರಮಣಿಕೆ.

ಜಯ ಪುಂಡರೀಕವರದ

ಶ್ರೀ ಪಾಂಡುರಂಗವಿಟ್ಠಲ ಭಗವನ್



ಶ್ಲೋ ॥ ಭಾಸ್ವನ್ಮಙ್ಗಳಮೂರ್ತಿರಿಷ್ಟಕಚಿತೇ ಪೀಠೇ ಪದಾಭ್ಯಾಂ ಸ್ಥಿತಃ ।
ಪಾಣಿದ್ವನ್ದ್ವಸಮುಲ್ಲಸತ್ಕಟಿತಟಶ್ಶ್ರೀಪುಣ್ಡರೀಕೇಕ್ಷಣಃ ॥
ಭೀಮಾತೀರವಿಭಾಸಿಪಣ್ಢರಪುರಾವಾಸೀ ಹರಿರ್ವಿಟ್ಠಲಃ ।
ಚಿತ್ತೇ ಖೇಲತು ಪುಣ್ಡರೀಕವರದಶ್ಶ್ರೀಪಾಣ್ಡುರಙ್ಗೋ ವಿಭುಃ ॥

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀರಸ್ತು

॥ ಶ್ರೀ ಪಾಂಡುರಂಗಾಯ ನಮಃ. ॥

ಭ ಕ್ತ ವಿ ಜ ಯ

ಮೊ ದ ಲ ನೆ ಯ ಅ ಧ್ಯಾ ಯ

॥ ಭಾಮಿನೀಷಟ್ಪದಿ ॥

ಶ್ರೀವಿರಂಚಿಪ್ರಮುಖರಮರ । ಭೂರಿವಿತಾರ್ಥಾರಂಭಕಾಲದೊ । ಳಾವದೇವಂಗೆರಗಿ
ತಾಂ ಕೃತಕೃತ್ಯರೆನಿಸಿದರೊ ॥ ಆ ವರಪ್ರದನಾದ ಜನಕನ । ಪಾವನೋತ್ತಮನೆನಿಪ
ಪದರಾ । ಜೀವಯುಗಳವನಾವಗಂ ಮನದಲ್ಲಿ ಭಾವಿಪೆನು ॥ ೧ ॥

ಶಾರದೆಯ ನಿಜಕಾಂತಿನಿರ್ಜಿತ । ಶಾರದೆಯು ವಿಧಿಸತಿಯು ಸಕಲವಿ । ಶಾರದೆಯೆ
ವೀಣಾವಿಭೂಷಿತಪಾಣಿಪಲ್ಲವೆಯು ॥ ಸಾರದಳೆ ಸತತಲೋಕವಿದ್ಯಾ । ಸಾರದೆಯು ದುರ್ವಿ
ಷಯತತಿಯಂ । ಸಾರದೆಯು ಇಷ್ಟರ್ಂತೆ ಪೊರೆವುದು ತಾಯೆ ಮತ್ಕೃತಿಯ ॥ ೨ ॥

ಹಿಂಸೆಗೊಳಿಸುತುಮಿರ್ದ್ದ ಕೊರ್ವಿದ । ಕಂಸಮುಖರಪ ದುಷ್ಟರಂ ವಿ । ಧ್ವಂಸನಂ
ಗೆಯ್ದೊಲಿದು ಸಂತರನೆಲ್ಲರಂ ಪೊರೆದ ॥ ಹಂಸವಾಹನವಿನುತ ನತಜನ । ಪಾಂಸುಭೇದಕ
ವೃಷ್ಣಿವಂಶವ । ತಂಸ ಲಕ್ಷ್ಮೀಕಾಂತ ಕರುಣಿಸು ದೇವಕೀತನಯ ॥ ೩ ॥

ಪುಂಡರೀಕಾಕ್ಷನೆ ವರಾದೃತ । ಪುಂಡರೀಕನ ಪಂಡಿತೇಡ್ಯನೆ । ಪಂಢರೀಪುರದಲ್ಲಿ
ಲೀಲೆಯಿನಾಂತು ವಿಹರಿಪನೆ ॥ ಪಾಂಡುನಂದನಹಿತನೆ ಕಟಿತಟ । ಮಂಡನಾಯಿತಪಾಣಿ
ಯುಗಳನೆ । ಪಾಂಡುರಂಗನೆ ಭಾಸುರಾಂಗನೆ ಸಲಹು ವಿಟ್ಠಲನೆ ॥ ೪ ॥

ಸರಸಕಲ್ಪನವೀಚಿವಿಸರದೆ । ಮೆರೆವ ನಿಜಹೃದಯಾಂಬುನಿಧಿಯೋ । ವರಿಯೊಳುದಿತ
ಜ್ಞಾನವೆಂಬ ಗಭೀರಮಂಥನದೆ ॥ ಪರಮಭಾರತವೆಂಬ ಸುಧೆಯಂ । ಭರದೆ
ತೆಗೆದೀಜಗತಿಗರ್ಪಿಸಿ । ಹರುಸನೊಂದಿಸಿ ಜಸನಿಂಸೆವಾ ವ್ಯಾಸಮುನಿಯೊಸೆಗೆ ॥ ೫ ॥

ಸಕಲದೇವತಾಸ್ವರೂಪನಾದ ತಾನೊಬ್ಬನೇ ಶ್ರೀಗಣೇಶಸರಸ್ವತ್ಯಾದಿರೂಪಗಳಿಂದ ಭಿನ್ನನಾಗಿ ತೋರುತ್ತ, ಸಕಲಚರಾಚರಂಗಳೊಳಗೆ ವ್ಯಾಪ್ತನಾಗಿದ್ದರೂ ಸರ್ವಾತೀತನೆನಿಸಿ, ಭಕ್ತವತ್ಸಲನೂ ಕೃಪಾಸಾಗರನೂ, ಶ್ರೀಭೀಮಾತೀರವಿಹಾರಿಯೂ ಆದ ಪರಮಾತ್ಮನಿಗೆ ನಮಸ್ಕಾರ.

ತಾರಕವಾದ ಭಗವನ್ನಾಮಸಂಕೀರ್ತನೆಯಲ್ಲಿಯೇ ಪ್ರೀತಿಯನ್ನು ಹೆಚ್ಚಿಸಿ ಸುಜ್ಞಾನವನ್ನುಂಟುಮಾಡಿ, ಭವಬಂಧನವಂ ಪರಿಹರಿಸಿದ ಆತ್ಮಾರಾಮನಾದ ಸದ್ಗುರುವಿಗೆ ವಂದಿಸುವೆನು.

ಶ್ರೀರಾಮಾಯಣಭಾರತಾದಿಮಹಾಪ್ರಬಂಧಗಳಿಂದ ಲೋಕವನ್ನು ಅನುಗ್ರಹಿಸಿದ ಶ್ರೀವಾಲ್ಮೀಕಿವ್ಯಾಸಪ್ರಭೃತಿಗಳಾದ ಮಹಾಕವಿಗಳನ್ನು ಮನದಲ್ಲಿ ಅಡಿಗಡಿಗೂ ಧ್ಯಾನಿಸುವೆನು.

ಯಾರು ಶ್ರೀಹರಿಗೆ ಪ್ರಾಣಂಗಳಿಗಿಂತಲೂ ಪ್ರಿಯರಾಗಿ, ಕಲಿಯುಗದಲ್ಲಿ ಭೂಮಿಯೊಳವತರಿಸಿ, ಜಡರಂ ಅಜ್ಞಾನದಿಂದ ಉದ್ಧರಿಸಿದರೋ; ಆ ಸಾಧುಸಜ್ಜನರಿಗೆ ಭಕ್ತಿಯಿಂದ ಪ್ರಣಾಮವನ್ನು ಸಮರ್ಪಿಸುವೆನು.

ಎಲೈ ಸಜ್ಜನರಿರಾ! ನಾನು ಭಕ್ತವಿಜಯವೆಂಬ ಗ್ರಂಥವನ್ನು ಆರಂಭಿಸಿರುವೆನು. ಬಡವನು ತನ್ನ ಮನೆಯಲ್ಲಿ ಪ್ರಸ್ತುತವನಾರಂಭಿಸಲು, ಶ್ರೀಮಂತರೆಂತು ಸಾಹ್ಯವಂ ಮಾಡುವರೋ; ಕಣ್ಣುಳ್ಳವರು ಕೃಪಾವಂತರಾಗಿ, ಕೈಹಿಡಿದು, ಕುರುಡನಿಗೆ ಎಂತು ತೀರ್ಥಾಟನೆಯಂ ಮಾಡಿಸುವರೋ; ಅಂತು ನೀವು ಈ ಗ್ರಂಥವಂ ಸಿದ್ಧಿಹೊಂದಿಸಬೇಕು. ನಾನು ಮಂದಮತಿ; ಅಜ್ಞಾನಿ; ಕಾವ್ಯಪಠನವನ್ನೇನೂ ಮಾಡಿದವನಲ್ಲ; ಪುರಾಣಂಗಳಂ ನೋಡಿದವನಲ್ಲ; ಗೀರ್ವಾಣಭಾಷೆಯನರಿತವನಲ್ಲ; ಪರಂತು ಭಕ್ತರ ಚರಿತ್ರಗಳು ಶ್ರೀಹರಿಗೆ ಇಷ್ಟವೆಂದು ಪರಮೇಶ್ವರನು ಭವಿಷ್ಯೋತ್ತರಪುರಾಣದಲ್ಲಿ ಹೇಳಿರುವುದರಿಂದ ನನ್ನ ಬುದ್ಧಿಯೊಳತ್ಯಂತಪ್ರೀತಿಯುಂಟಾಗಿರುವುದು. ಚಂಚುವಿನಿಂದ ಟಿಟವಿಯೆಂಬ ಪಕ್ಷಿಯು ಸಮುದ್ರವಂ ಶೋಷಿಸಲು ಬಯಸಿದಂತೆ ನಾನು ಈ ಅಸಾಧ್ಯಕಾರ್ಯಕ್ಕೆ ಪ್ರವರ್ತಿಸಿರುವೆನು. ಯಾರ ಗುಣಂಗಳಂ ವರ್ಣಿಸುವಾಗ, ಶ್ರುತಿಗಳು ಅತ್ಯಂತಮೌನವಂ ಪಿಡಿದುವೋ; ಆದಿಶೇಷನ ನಾಲಗೆಯು ಸೀಳಿಹೋಗಲು, ಅವನು ಹಾಸಿಗೆಯಾದನೋ; ಬ್ರಹ್ಮನು ಹರನು ಇಂದ್ರನು ಯಾರ ಪಾರವನ್ನರಿಯರೋ; ಆ ಶ್ರೀಹರಿಯ ಗುಣಗಳಂ ಪಾಮರನಾದ ನಾನು ಹೇಗೆ ವರ್ಣಿಸಬಲ್ಲೆನು? ಬಾಲಕನು ದುರ್ಘಟವಾದುದಂ ಅಪೇಕ್ಷಿಸಿದರೂ, ಅದಂ ತಾಯಿಯೆಂತು ಈಡೇರಿಸುವಳೋ; ಅಂತು ಆ ದೀನದಯಾಳು ನನ್ನ ಅಪೇಕ್ಷೆಯಂ ಈಡೇರಿಸುವನು. ಧ್ರುವಬಾಲಕನು ತನ್ನ ತಂದೆಯ ತೊಡೆಯ ಮೇಲೆ ಕುಳ್ಳಿರಬೇಕೆಂದು ಅಪೇಕ್ಷಿಸಲು, ಶ್ರೀಹರಿಯು ಅವನಂ ಎಂತು ಧ್ರುವಪದದಲ್ಲಿ ಸ್ಥಾಪಿಸಿದನೋ; ಉಪಮನ್ಯು ಬಟ್ಟಲು ತುಂಬಾ ಹಾಲನ್ನು ಬೇಡಲು, ಅವನಿಗೆ ಎಂತು ಕ್ಷೀರಸಾಗರವನ್ನೇ ಕೊಟ್ಟನೋ; ಅಂತು ಆ ದೀನದಯಾಳು ನನ್ನ ಕೋರಿಕೆಯಂ ಪೂರೈಸುವನು.

ಕೃತತ್ರೇತಾದ್ವಾಪರಯುಗಂಗಳಲ್ಲಿ ಯಾವ ಭಕ್ತರು ಭೂಮಿಯೊಳವತರಿಸಿದ್ದರೋ; ಅವರೆ ಈ ಕಲಿಯುಗದಲ್ಲಿಯೂ ತಾರಕರಾಗಿ ಪ್ರಕಟರಾದರು. ಅಂತವರ ಚರಿತ್ರೆಯಂ ಬಣ್ಣಿಸಲು ನನಗೆ ಬಹೂಲ್ಲಾಸವಾಗುವುದು. ಆದುದರಿಂದ ಶ್ರೋತೃಗಳು

ನನಗೋಸ್ಕರ ಅವಧಾನವಂ ಕೊಡಬೇಕು. ನಾನು ಅವ್ಯುತ್ಪನ್ನನು ; ಚಾತುರ್ಯವನ್ನು ಅರಿಯೆನು ; ಅಧ್ಯಾತ್ಮಗ್ರಂಥದಲ್ಲಿ ಬಹುಶ್ರುತನೂ ಅಲ್ಲ ; ನಿಶ್ಚಯವಾಗಿಯೂ ಸಂಸ್ಕೃತವನ್ನು ಬಲ್ಲವನಲ್ಲ; ಇದಂ ಶ್ರೀರುಕ್ಮಿಣೀಪತಿ ಬಲ್ಲ. ಪೂರ್ವದಲ್ಲಿ ಏಕನಾಥರು ಸಾಧುಗಳಂ ನಮಸ್ಕರಿಸಿ ರಾಮಾಯಣವಂ ಪೇಳಿದರು. ನನ್ನವು ಅಂತಹ ವರಪ್ರಸಾದ ವಚನಂಗಳಲ್ಲ. ವಾಮನರು ಶ್ರೀಭಾಗವತದ ಟೀಕೆಯನ್ನೂ, ಶ್ರೀಧರರು ಹರಿವಿಜಯವನ್ನೂ ಹೇಳಿರುವರು. ನನ್ನವು ಅಂತಹ ವರಪ್ರಸಾದವಾಣಿಗಳಲ್ಲ. ರಾಮದಾಸರು ಕೈವಲ್ಯಪ್ರದವಾದ ಗೀತಾರ್ಥದ ಬೋಧರಾಜವನ್ನು ರಚಿಸಿರುವಂತೆ, ನಾನು ಗ್ರಂಥ ರಚನೆಮಾಡತಕ್ಕವನಲ್ಲ. ರಸವತ್ತರವೆನಿಸಿ ಪ್ರಸಿದ್ಧವಾಗಿರುವಂತೆ, ಗಣೇಶನಾಥನೂ ಕೇಶವಸ್ವಾಮಿಯೂ, ಸ್ವಭಾಷೆಯಾದ ಹಿಂದೂಸ್ಥಾನಿಯಲ್ಲಿ ಕಬೀರನೂ ಗ್ರಂಥಗಳನ್ನು ರಚಿಸಿರುವರು. ಇಂತಹ ಸಾಧುಗಳ ಗ್ರಂಥಗಳಂ ಪ್ರೇಮದಿಂದ ಶ್ರವಣಮಾಡಲು, ಅಜ್ಞಾನಿಗಳು ಜ್ಞಾನಿಗಳಾಗುವರು. ಅದೆಂತೆಂದರೆ, ಪೈಠಣದಲ್ಲಿ ಜ್ಞಾನೇಶ್ವರರು ಕೋಣನಿಂದ ವೇದವನ್ನು ಹೇಳಿಸಿದರು. ಇದಾಶ್ಚರ್ಯವು! ಇಂತಹ ಗುಣಾಢ್ಯರಾದ ಸಾಧುಗಳಂ ಗ್ರಂಥಾರಂಭದಲ್ಲಿ ನಾನು ನಮಸ್ಕರಿಸುವೆನು.

ಗಂಗೆಯೊಡನೆ ಸಮರಸವಾಗಿ ಸೇರಲು, ಅಡವಿಯ ಹಳ್ಳವು ಎಂತು ಪವಿತ್ರವಾಗುವುದೋ ; ಕಬ್ಬಿಣವು ಪರುಸವನ್ನು ಸೋಂಕಲು, ಅದು ಶ್ರೀಮಂತರಿಗೆ ಎಂತು ಭೂಷಣವೆನಿಸುವುದೋ ; ಅಂತು ನನ್ನ ನುಡಿಯು ಸಂತರ ಸುಗುಣಗಳನ್ನು ವರ್ಣಿಸುವುದರಿಂದ ಶೋಭಿಸದೆ ಇರಲಾರದು. ರಾಜಪುತ್ರನ ಗುಣಗಳಂ ವರ್ಣಿಸಿದರೆ, ಪ್ರಧಾನಜನಂಗಳು ಯಥಾರ್ಥವೆಂದು ಎಂತು ತಲೆದೂಗುವರೋ ; ಅಂತು ಭಕ್ತರ ಚರಿತ್ರೆಯಂ ವರ್ಣಿಸಲು, ಸಾಧುಗಳು ವಿಕಲ್ಪಗೊಳ್ಳದೆ ಸಂತೋಷಪಡುವರು. ನದಿಯು ಪುರಾಣಸಿದ್ಧವಲ್ಲದಿದ್ದರೂ, ಸಮುದ್ರಸಂಗಮದಿಂದ ಎಂತು ಮಾನ್ಯತೆಯಂ ಪಡೆಯುವುದೋ ; ಅಂತು ಸಿದ್ಧಿಯಿಲ್ಲದುದಾದರೂ, ಭಗವದ್ಭಕ್ತರ ಗುಣಂಗಳಂ ವರ್ಣಿಸುವ ನನ್ನ ನುಡಿ ಭಕ್ತವತ್ಸಲನಾದ ಶ್ರೀರುಕ್ಮಿಣೀಪತಿಯ ಅನುಗ್ರಹದಿಂದ ಮಾನ್ಯವೆನಿಸುವುದು. ಕಲ್ಪವೃಕ್ಷದ ನೆಳಲನ್ನು ಆಶ್ರಯಿಸಲು, ದಾರಿದ್ರ್ಯಬಾಧೆಯೆಂತು ಉಂಟಾಗದೋ ; ಅಂತು ಸಂತರ ಚರಿತ್ರೆಯನ್ನು ಅವಲಂಬಿಸಲು, ಕೊರತೆಯೇನೂ ಬಾರದು. ನಾನು ಯಾರ ಗೋತ್ರದಲ್ಲಿ ಹುಟ್ಟಿದೆನೋ ಆ ವಸಿಷ್ಠರಿಗೆ ಸಾಷ್ಟಾಂಗನಮಸ್ಕಾರವು. ಅವರೂ ಅನುಗ್ರಹಮಾಡಿ, ಈ ಗ್ರಂಥವನ್ನು ಸಿದ್ಧಿಹೊಂದಿಸಬೇಕು. ಯಾರು ಸಮಸ್ತತೀರ್ಥಗಳಿಗಿಂತಲೂ ಶ್ರೇಷ್ಠರೋ ; ಪುಣ್ಯವಿಶೇಷದಿಂದ ಗಮ್ಯವಾದ ಈ ನರದೇಹವು ಯಾರಿಂದ ನನಗೆ ಆಕಸ್ಮಿಕವಾಗಿ ಲಭಿಸಿದುದೋ, ಆ ಮಾತಾಪಿತೃಗಳಿಗೆ ಭಕ್ತಿಯಿಂದ ವಂದನೆಯನ್ನು ಸಮರ್ಪಿಸುವೆನು. ನಮ್ಮ ಉಭಯಕುಲದಲ್ಲಿಯೂ ಇಷ್ಟದೈವತವು ಶ್ರೀರುಕ್ಮಿಣೀಪತಿ; ಅವನಂ ನಮಿಸಲು, ದೇವತೆಗಳೆಲ್ಲರೂ ಸಂತುಷ್ಟರಾಗುವರು. ಸಮುದ್ರನ ಪೂಜೆಯಂ ಮಾಡಲು, ಎಂತು ಸಕಲನದಿಗಳೂ, ಪೂಜಿಸಲ್ಪಟ್ಟಂತಾಗು

ವುದೋ ; ಚಂದ್ರದರ್ಶನವಂ ಮಾಡಲು, ಎಂತು ಎಲ್ಲಾ ನಕ್ಷತ್ರಗಳನ್ನೂ ಸುತ್ತಿದಂತಾಗುವುದೋ, ಭೂಮಿಯ ಪ್ರದಕ್ಷಿಣೆಯಂ ಮಾಡಲು, ಎಂತು ಎಲ್ಲಾ ಕ್ಷೇತ್ರಗಳನ್ನೂ ಸುತ್ತಿದಂತಾಗುವುದೋ ; ಅಂತು ಶ್ರೀಪಾಂಡುರಂಗನ ಸೇವೆಯಂ ಮಾಡಲು, ಸಕಲದೇವತೆಗಳನ್ನೂ ಸೇವಿಸಿದಂತಾಗುವುದು. ಆತನು ದೇವಾದಿದೇವನಾದುದರಿಂದ ಸರ್ವಭಾರವೂ ಆತನಮೇಲೆಯೇ ಇಡಲ್ಪಟ್ಟಿರುವುದು. ಆ ಚಕ್ರಪಾಣಿಯು ಪ್ರೇರಿಸಿ ಕವಿತ್ವವನ್ನು ನುಡಿಯಿಸಿದಂತೆ ನುಡಿಯುವೆನು. ಇದಂ ಸಾಧುಗಳು ಅವಹಿತಚಿತ್ತರಾಗಿ ಆದರದಿಂದ ಕೇಳಬೇಕು. ಸ್ವಬುದ್ಧಿಯಿಂದ ಕಲ್ಪನೆಯಂ ಮಾಡುವನೆಂದೀರಿ. ಅಂತು ತಿಳಿಯಲಾಗದು; ಮನದಲ್ಲಿ ವಿಕಲ್ಪವಂ ಬಿಡಬೇಕು.

ಉತ್ತರದೇಶದಲ್ಲಿ ಇರುವ ನಾಭಾಜಿಯೆಂಬ ಬ್ರಹ್ಮನ ಅವತಾರಪುರುಷನಿಂದ ಸಾಧುಗಳ ಚರಿತ್ರೆಯಾದ ಭಕ್ತವಿಜಯವು ರಚಿಸಲ್ಪಟ್ಟಿರುವುದು. ಮತ್ತು ಮಾನದೇಶದ ಉದ್ಧವಚಿದ್ಘನನು ಭಕ್ತರ ಚರಿತ್ರೆಯಂ ಬಣ್ಣಿಸಿರುವನು. ಆಯೆರಡು ಗ್ರಂಥಗಳ ಸಮ್ಮತಿಯಿಂದ ನಾನೀ ಭಕ್ತವಿಜಯಗ್ರಂಥವನ್ನು ಆರಂಭಿಸಿರುವೆನು. ಶ್ರೀಭೀಮಾತೀರವಿಹಾರಿಯಾದ ರುಕ್ಮಿಣೀರಮಣನು ಬುದ್ಧಿಯಂಕೊಟ್ಟು ಪ್ರಾಕೃತ ಗ್ರಂಥವನ್ನು ನನ್ನ ಮುಖದಿಂದ ಹೇಳಿಸುವನು. ಸಜ್ಜನರು ಅದಂ ಪ್ರೀತಿಯಿಂದ ಕೇಳಬೇಕು. ಎಲೈ ಸಜ್ಜನರಿರಾ! ಬಾಲಕನು ಮುದ್ದುಮುದ್ದಾಗಿ ಮಾತನಾಡಲು, ತಾಯಿಯು ಅದಕ್ಕೆ ಎಂತು ಸಂತೋಷಪಡುವಳೋ ; ಅಂತು ನೀವು ಸಂತೋಷಿಸಿ ನನ್ನ ನುಡಿಗಳಂ ಅಂಗೀಕರಿಸುವಿರಿ—ಎಂದು ನಂಬಿರುವೆನು. ಅಂತು ನೀವು ದಯೆಯಿಟ್ಟು ಅಂಗೀಕರಿಸಿದರೆ, ನನ್ನ ಪ್ರಾಕೃತವಚನವೂ ಮಾನ್ಯವೆನಿಸುವುದು. ಅಡವಿಯ ಹಳ್ಳವು ಗಂಗೆಯೊಡನೆ ಕೂಡಲು, ಆಕೆ ಅದಂ ತನಗೆ ಸಮಾನವಾದುದನ್ನಾಗಿ ಮಾಡಳೇ? ಅಥವಾ ಕಸ್ತೂರಿಯಲ್ಲಿ ಮೃತ್ತಿಕೆಯು ಸೇರಲು, ಅದಕ್ಕೆ ಸಮವಾದ ಬೆಲೆಯುಳ್ಳದಾಗದೇ? ಹಾಲಿನಲ್ಲಿ ಸ್ವಲ್ಪವಾದ ನೀರು ಬೆರೆಯಲು, ಅದರಂತೆಯೇ ಆಗುವುದಿಲ್ಲವೇ! ಅಂತು ನಿಮ್ಮ ಪರಿಗ್ರಹದಿಂದ ಶ್ಲಾಘ್ಯತಮವೆನಿಸದೆ ಇರದು. ಸಾಧುಗಳಾದ ನೀವು ಈಶ್ವರಸ್ವರೂಪರು—ಎಂದು ಮನದಲ್ಲಿ ನಿಶ್ಚಯವಿರುವುದರಿಂದ ಮಹೀಪತಿ ಸದ್ಭಾವದಿಂದ ನಿಮಗೆ ನಮಸ್ಕರಿಸುವನು. ಈಗ ಅವಹಿತಚಿತ್ತರಾಗಿ ಕೇಳಿರಿ.

ಶ್ರೀಕೃಷ್ಣಾವತಾರಸಮಾಪ್ತ್ಯನಂತರದಲ್ಲಿ ಈ ಕಲಿಯುಗದೊಳ್ ಯಜ್ಞದಾನಧರ್ಮಂಗಳು ಲೋಪವನ್ನು ಹೊಂದುತ ಬಂದುವು. ಚಾತುರ್ವರ್ಣ್ಯದಲ್ಲಿ ಆಯಾವರ್ಣಾಶ್ರಮದವರು ತಮ್ಮ ತಮ್ಮ ಕರ್ಮಗಳನ್ನು ಬಿಡುತ್ತ ಬಂದರು. ಮಗನು ತಂದೆಯ ಮಾತನ್ನು ಕೇಳನು. ಶಿಷ್ಯನು ಗುರುಸೇವೆಯನ್ನು ಮಾಡನು. ಜನಗಳಿಗೆ ತೀರ್ಥಯಾತ್ರೆ ರುಚಿಸದು. ಪುರಾಣಶ್ರವಣವಾಗದು. ಭಗವದ್ಭಕ್ತಿ ಹೋಯಿತು. ಹರಿಕೀರ್ತನವಂ ಬಿಟ್ಟು ದೊಂಬರ ಆಟದಲ್ಲಿ ಪ್ರೀತಿಯಂ ಮಾಡುವರು. ಸುಳ್ಳುಮಾತುಗಳು ಪ್ರಬಲವಾದುವು. ಸಾಧುನಿಂದೆ ಹೆಚ್ಚಿತು. ನ್ಯಾಯಾನ್ಯಾಯಗಳು ವ್ಯತ್ಯಸ್ತವಾ

ದುವು. ಕೂಟಸಾಕ್ಷಿವಾದವು ಮಿತಿಮೀರಿತು. ದಿವ್ಯಮಂತ್ರಗಳು ಶಕ್ತಿಗುಂದಿದುವು. ಕುಟಿಲರು ನಂಬುಗೆಗೊಳಿಸಿ ಸಜ್ಜನರಿಗೆ ಘಾತವಂ ಮಾಡುತ್ತಿರುವರು. ಅಸತ್ಯಕ್ಕೆ ಸಮವಾದ ಪಾಪವಿಲ್ಲ; ಸತ್ಯಕ್ಕಿಂತಲೂ ಸುಕೃತವಿಲ್ಲ. ಅಂತಹ ಸತ್ಯವು ವಿಶೇಷದಿಂದ ಲೋಪವನ್ನು ಹೊಂದಿತು. ರಾಹು ಉದಯಿಸಲು, ಆಕಾಶದಲ್ಲಿ ಅಂಧಕಾರವು ಎಂತು ತುಂಬುವುದೋ; ಮೃತ್ಯು ಸನ್ನಿಹಿತವಾಗಲು, ದೇಹದಲ್ಲಿ ರೋಗಗಳು ಎಂತು ಒಟ್ಟುಗೂಡುವುವೋ; ರಾತ್ರಿಯಾಗಲು, ಪಿಶಾಚಂಗಳು ಶ್ಮಶಾನದಿಂದ ಎಂತು ತೆರಳುವುವೋ; ದುರದೃಷ್ಟವು ತಲೆದೋರಲು, ದೈನ್ಯವೂ ದುಃಖವೂ ಎಂತು ಬಂದೊದವುವೋ; ಗುರು ಕ್ಷೋಭೆಯುಂಟಾಗಲು, ಶಿಷ್ಯನಿಗೆ ಅಜ್ಞಾನವೆಂತು ಬಂದು ಮುಸುಕುವುದೋ; ತಾರುಣ್ಯದಶೆಯು ಪ್ರಾಪ್ತವಾಗಲು, ದೇಹದಲ್ಲಿ ಅಹಂಕಾರವು ಎಂತು ಹೆಚ್ಚುವುದೋ; ಕುಟಿಲಮನುಷ್ಯನು ಸಭೆಗೆ ಬರಲು, ಎಂತು ನಿಂದಾವಚನಗಳು ತನಗೆತಾನೇ ಹೊರಡುವುವೋ; ಅಂತು ಕಲಿ ತಲೆದೋರಲು, ಎಲ್ಲೆಲ್ಲಿಯೂ ವಿವಿಧವಾದ ದುರಿತಗಳು ವಿಶೇಷದಿಂ ಹೆಚ್ಚಿದುವು. ಮಹರ್ಷಿಗಳೆಲ್ಲರೂ ಬದರಿಕಾಶ್ರಮಕ್ಕೆ ತೆರಳಿದರು. ಎಲ್ಲಿಯೂ ಪಾಪಿಗಳೇ ಹೆಚ್ಚಿದರು.

ಹೀಗಿರಲು, ಬಳಿಕ ವೈಕುಂಠದೊಳ್ ಶ್ರೀಹರಿಯು ನಿಜಭಕ್ತರೊಡನೆ ಆಲೋಚನೆಯಂ ಮಾಡಲು ತೊಡಗಿದನು. "ಎಲೈ ಭಕ್ತರಿರ! ಮರ್ತ್ಯಲೋಕವು ಪಾಪಭೂಯಿಷ್ಠವಾಯಿತು, ಯಜ್ಞಗಳೆಲ್ಲವೂ ನಿಂತುವು. ಚಾತುರ್ವರ್ಣ್ಯದವರು ತಮ್ಮ ತಮ್ಮ ಕರ್ಮಗಳನ್ನು ಬಿಟ್ಟರು. ಜನವು ಅಜ್ಞಾನದಿಂದ ದುಃಖಸಾಗರದಲ್ಲಿ ಮುಳುಗಿತು. ಇದಕ್ಕೆ ಏನು ಮಾಡುವುದು?—ಎಂದೆನಲು, ಭಕ್ತರೆಲ್ಲರೂ ಕೈಗಳಂ ಕಟ್ಟಿಕೊಂಡು ಸನ್ನಿಧಿಯಲ್ಲಿನಿಂದು, ಸರ್ವಜ್ಞನೂ ಸರ್ವಚೈತನ್ಯಸ್ವರೂಪನೂ ಆದ ಎಲೈಭಗವಂತನೆ! ಈ ವಿಷಯದಲ್ಲಿ ನಮಗೇನಪ್ಪಣೆಯಾಗುವುದೋ ಅದರಂತೆ ನಾವು ನಡೆದುಕೊಳ್ಳುವೆವು-ಎಂದು ಬಿನ್ನವಿಸಿದರು.

ಆಗ ಸ್ವಾಮಿಯು-ಹಿಂದೆ ನಾನು ಅವತರಿಸಿ, ದುಷ್ಟದೈತ್ಯರಂ ಸಂಹರಿಸಿದೆನು; ಭೂಮಿಯಲ್ಲಿ ಗರ್ವಿತರಾದ ವೀರರು ಇಲ್ಲದಂತೆ ಮಾಡಿ, ಈಗ ಬೌದ್ಧಾವತಾರವನ್ನು ವಹಿಸಿ ನಿಂದಿರುವೆನು. ಈಗ ನೀವೆಲ್ಲರೂ ಮರ್ತ್ಯಲೋಕದಲ್ಲಿ ನನ್ನ ಸ್ಥಾನಗಳಾದ ಪುರಾತನಕ್ಷೇತ್ರಗಳು ಎಷ್ಟು ಇವೆಯೋ; ಅಲ್ಲಿ ಎಲ್ಲಾ ಕಡೆಯಲ್ಲಿಯೂ ಅವತಾರವಂ ಮಾಡಬೇಕು; ಪಂಢರಪುರದ ದಿಂಡೀರವನದಲ್ಲಿ ಉದ್ಧವನು ಅವತರಿಸಿ, ದಕ್ಷಿಣದೇಶದ ಸರ್ವಜನರನ್ನೂ ನನ್ನಲ್ಲಿ ಭಕ್ತಿಯಿಡುವಂತೆ ಮಾಡಬೇಕು. ಮಥುರೆಯ ಗೋಕುಲ ಬೃಂದಾವನದಲ್ಲಿ ಅಕ್ರೂರನು ಅವತರಿಸಿ, ಸಕಲರನ್ನೂ, ಭಕ್ತಿಯಿಂದ ನನ್ನನ್ನು ಸ್ಮರಣೆ ಮಾಡುವಂತೆ ಮಾಡಬೇಕು, ಪಶ್ಚಿಮದೇಶದ ಡಾಕೂರಲ್ಲಿ ದಾರುಕನು ಅವತಾರವಂ ಮಾಡಿ ಎಲ್ಲರನ್ನೂ ನನ್ನ ಭಜನೆಯಲ್ಲಿರಿಸಿ ಅವರುದ್ಧಾರವಂ ಮಾಡಬೇಕು. ಪೂರ್ವದೇಶವಾದ ಜಗನ್ನಾಥದಲ್ಲಿ ವ್ಯಾಸನು ಅವತರಿಸಿ ನನ್ನ ಅದ್ಭುತಚರಿತ್ರಗಳನ್ನು ಜನಕ್ಕೆ

ಶ್ರವಣಮಾಡಿಸಬೇಕು. ಹಸ್ತಿನಾಪುರಕ್ಷೇತ್ರದಲ್ಲಿ ವಾಲ್ಮೀಕಿಯವತರಿಸಿ, ನನ್ನ ಭಜನೆಯಲ್ಲಿ ಎಲ್ಲರಿಗೂ ಆದರವುಂಟಾಗುವಂತೆ ಮಾಡಬೇಕು. ನಾನು ರಾಮಾವತಾರವಂ ಮಾಡಿದಾಗ ನೀವು ವಾನರರಾಗಿ ಇದ್ದಿರಿ. ನಿಮ್ಮ ಸಾಹಾಯ್ಯದಿಂದ ರಾವಣನಂ ಸಂಹರಿಸಿ, ಸಮಸ್ತದೇವತೆಗಳೊಡನೆ ಇಂದ್ರನಂ ಬಿಡಿಸಿದೆನು. ಆ ವಾನರರಾಗಿದ್ದ ನೀವೇ ಕೃಷ್ಣಾವತಾರದಲ್ಲಿ ಕೆಲವರು ಗೋಪಾಲಕರಾಗಿಯೂ, ಕೆಲವರು ಪ್ರೀತಿಯ ಯಾದವರಾಗಿಯೂ ಹುಟ್ಟಿದಿರಿ. ಆಗ ದುಷ್ಟರಾದ ಕಂಸಾದಿಗಳಂ ಸಂಹರಿಸಿ, ಗೋಬ್ರಾಹ್ಮಣಾದಿಗಳನ್ನು ರಕ್ಷಿಸಿದೆನು. ಈಗ ನಾನು ಬೌದ್ಧಾವತಾರವನ್ನು ವಹಿಸಿ ಸುಮ್ಮನೆ ನಿಂತು ಬಿಟ್ಟಿರುವೆನು. ನೀವಲ್ಲದೆ ನನ್ನ ಕೀರ್ತನವಂ ಜನಕ್ಕೆ ಶ್ರವಣಮಾಡಿಸುವರಿನ್ನಾರು? ನಿಮಗೋಸ್ಕರವೇ ನಾನು ಸಗುಣನೆನಿಸಿರುವೆನು. ಇಲ್ಲದಿದ್ದರೆ, ನನ್ನನ್ನು ಯಾರು ಕೇಳುವರು? ಭಕ್ತರಲ್ಲದೆ ನನಗೆ ಪ್ರಾಣಾಪ್ತರು ಯಾರೂ ತೋರಲಿಲ್ಲ—ಎಂದು ನುಡಿಯಲು, ಭಕ್ತರೆಲ್ಲರೂ ಆನಂದಗೊಂಡು ಜಯಜಯಶಬ್ದವನ್ನು ಮಾಡಿ, ಎಲೈ ಭಗವಂತನೆ! ನೀನು ದೀನದಯಾಳು; ಪತಿತಪಾವನನು; ಶರಣಾಗತವತ್ಸಲನು; ಜಗದುದ್ಧಾರಕನು; ಸತ್ಯಸಂಕಲ್ಪನು; ಪರಾತ್ಪರನು; ನಿನ್ನಿಂದಲೇ ನಾವು ಲೋಕದಲ್ಲಿ ಪ್ರತಿಷ್ಠೆಯನ್ನು ಪಡೆದಿರುವೆವು. ನಿನ್ನಿಂದಲೇ ನಮಗೆ ಮಹತ್ತ್ವವುಂಟಾಗಿರುವುದು. ಸೂರ್ಯನಿಂದ ಕಿರಣಗಳು, ಭೂಮಿಯಿಂದ ಚಿನ್ನಗಳು, ನೀರಿನಿಂದ ವೃಕ್ಷಗಳು, ಆಕಾಶದಿಂದ ನಕ್ಷತ್ರಗಳು, ಜಲದಿಂದ ಜಲಚರಗಳು, ಪುಷ್ಪದಿಂದ ಮಕರಂದಗಳು, ತಂತುವಿನಿಂದ ಹೊದಿಕೆಗಳು, ದೀಪದಿಂದ ಬೆಳಕುಗಳು, ಚಿನ್ನದಿಂದ ಕಂಕಣಗಳು, ಆಕಾಶದಿಂದ ಶಬ್ದಗಳು ಎಂತೋ, ಅಂತು ನಿನ್ನಿಂದ ನಾವು ಸ್ಥಿತಿಗೊಂಡಿರುವೆವು. ಸೂತ್ರವಂ ಹಿಡಿದು ಬೊಂಬೆಗಳಂ ಕುಣಿಯಿಸುವಂತೆ, ಲಂಕೆಯ ಜಯವಿಷಯದಲ್ಲಿ ನೀನು ನಮ್ಮನ್ನು ಕುಣಿಯಿಸಿದೆ. ನಾವು ನಿಮಿತ್ತಮಾತ್ರರಲ್ಲದೆ ಸ್ವತಂತ್ರರಲ್ಲ. ಊದುವವನು ಊದುವಂತೆ, ಕೊಳಲು ನಾನಾರಾಗವನ್ನಾಲಾಪಿಸುವುದು. ಅದೇರೀತಿಯಲ್ಲಿ ಕೃಷ್ಣಾವತಾರದಲ್ಲಿಯೂ, ನಮ್ಮಿಂದ ಪ್ರತಾಪವಂ ನಡೆಯಿಸಿದೆ. ನಿನ್ನ ಇಚ್ಛಾಮಾತ್ರದಿಂದ ಬ್ರಹ್ಮಾದಿಗಳೆಲ್ಲರೂ ಆಗುವರು; ಹೋಗುವರು. ಬ್ರಹ್ಮಾಂಡಗಳೆಲ್ಲವಂ ಮಾಡುವವನೂ ಪಾಲಿಸುವವನೂ ಕೆಡಿಸುವವನೂ ನೀನೆ. ನಿನ್ನ ಮಹಿಮೆ ಅಮೇಯವಾದುದು. ನಿನ್ನ ಅಪ್ಪಣೆಯಂತೆ ನಾವೆಲ್ಲರೂ ತ್ವರೆಯಿಂದ ನಡೆದುಕೊಳ್ಳುವೆವು—ಎನಲು, ಭಕ್ತರೆಲ್ಲರೂ ಪೇಳಿದುದನ್ನು ಕೇಳಿ ಸಂತೋಷಗೊಂಡು, ಲಕ್ಷ್ಮೀಪತಿಯು ಉದ್ಧವನಂ ಕುರಿತು, ಎಲೈ ಉದ್ಧವನೆ! ಭೂಮಂಡಲದೊಳಗೆ ಪಂಢರಪುರದಲ್ಲಿ ನೀನು ಅವತರಿಸಿ, ಸಿಂಪಿಗರನ ವಂಶದೊಳ್ ನಾಮದೇವನೆಂಬವನಾಗು; ನನ್ನ ಅನಂತನಾಮಾವಳಿಯನ್ನು ಜನಕ್ಕೆ ಶ್ರವಣಮಾಡಿಸು; ನಾನು ರಾಮಕೃಷ್ಣಾದ್ಯವತಾರಂಗಳಂ ಮಾಡಿ ನಿಮಗೆ ಯಾವ ಯಾವ ಚರಿತ್ರೆಗಳಂ ತೋರಿಸಿರುವೆನೋ; ಅವನೆಲ್ಲವನ್ನೂ ಜನಕ್ಕೆ ತಿಳಿಯಿಸು. ಕಲಿಯುಗದಲ್ಲಿ ನನ್ನ ನಾಮಕೀರ್ತನೆಯೊಂದೇ ತಾರಕವು—ಎಂದೂ, ಶುಕನಂ ಕುರಿತು ನೀನು

ತುರುಷ್ಕಜಾತಿಯಲ್ಲಿ ನಿಮಿತ್ತಮಾತ್ರಕ್ಕೆ ಸೇರಿ ಕಬೀರನೆಂಬ ಭಕ್ತನಾಗು. ನಿನಗೆ ಅಯೋನಿಜತ್ವವಂ ಕೊಡುವೆನು. ನನ್ನ ನಾಮದ ಮಹಿಮೆಯನ್ನು ಅದ್ಭುತವಾಗಿ ಪ್ರಕಟಮಾಡು—ಎಂದೂ, ಬಳಿಕ ವಾಲ್ಮೀಕಿಯನ್ನು ನೋಡಿ, ನೀನು ತುಲಸೀದಾಸನೆಂಬ ಬ್ರಾಹ್ಮಣನಾಗಿ ಅವತರಿಸಿ, ನನ್ನಲ್ಲಿ ಭಕ್ತಿವಿಶೇಷವುಂಟಾಗುವಂತೆ ಬೋಧನೆಮಾಡು; ಪೂರ್ವದಲ್ಲಿ ನೀನು ಹೇಳಿದ ಶತಕೋಟಿರಾಮಾಯಣವನ್ನೇ ಪ್ರಾಕೃತಮಾಡಿ ಜನಗಳಿಗೆ ತಿಳಿಯಪಡಿಸು—ಎಂದೂ, ದಾರುಕನಂ ಕುರಿತು, ನೀನು ಡಾಕೂರಲ್ಲಿ ರಾಮದಾಸನೆಂಬ ಬ್ರಾಹ್ಮಣನಾಗು; ನಾನು ದ್ವಾರಕೆಯಿಂದ ನಿನ್ನ ಭಕ್ತಿಗೋಸ್ಕರ ತ್ವರೆಯಿಂದ ಓಡಿಬ ರುವೆನು—ಎಂದೂ, ಶಂಕರನಂ ಕುರಿತು, ಜುನ್ನಾಗಡಿಯಲ್ಲಿ ನೀವು ನರಸಿಂಹಮಹಾಂ ತರೆಂಬವರಾಗಬೇಕು; ನೀವು ಮುಂದೆ ಹೊರಡಿ; ನಾನು ಹಿಂದಿನಿಂದ ಬರುವೆನು; ನಾನು ಜ್ಞಾನೇಶ್ವರನೆಂಬವನಾಗವತರಿಸಿ, ಗೀತಾರ್ಥವಂ ಹೇಳುವೆನು. ಬ್ರಹ್ಮನು ಸೋಪಾನನೆಂಬವನಾಗಿ ಹುಟ್ಟುವನು. ನೀವು ನಿವೃತ್ತಿಯೆಂಬವರಾಗಿಯೂ ಅವತರಿ ಸುವುದು. ಆದಿಮಾಯೆ ಮುಕ್ತಾನಾಮದಿಂದ ತಾನು ಅವತಾರವಂ ಮಾಡುವಳು— ಎಂದೂ, ಇನ್ನೂ ಅನೇಕರನ್ನು ಕುರಿತು ಅನೇಕಪ್ರಕಾರವಾಗಿಯೂ ನುಡಿಯಲು, ಎಲ್ಲರೂ ಆನಂದಗೊಂಡು ಜಯಜಯಧ್ವನಿಯೊಡನೆ ಪುಷ್ಪವೃಷ್ಟಿಯಂ ಕರೆದರು. ಮತ್ತು ನಾವು ಧನ್ಯರಾದೆವು; ಇಂದು ಸುದಿನವು; ಜಗಜ್ಜೀವನನು ನಮ್ಮಮೇಲೆ ಕರುಣಿಸಿದನು; ಇನ್ನು ಮರ್ತ್ಯಲೋಕದಲ್ಲಿ ಅವತಾರವೆಸಗಿ ಉದ್ಧಾರಮಾಡುವನು—ಎನ್ನುತ್ತ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ವೈಕುಂಠಕೈಲಾಸಾದಿಗಳಿಗಿಂತ ಮರ್ತ್ಯಲೋಕವಧಿಕವೆಂದು ನಮಗೆ ತೋರು ವುದು; ಯಜ್ಞಾದಿಪುಣ್ಯಕರ್ಮಗಳೂ ಪಾಪಗಳೂ ಇಲ್ಲಿ ಫಲಿಸುವುವು. ಕರ್ಮ ಭೂಮಿಯಲ್ಲಿ ಮಾಡಿದ ಸುಕೃತವು ವೆಚ್ಚವಾಗಲು. ಸ್ವರ್ಗದಿಂದ ಮತ್ತೆ ಮರ್ತ್ಯ ಲೋಕಕ್ಕೆ ನೂಕಿಬಿಡುವರು. ಮರ್ತ್ಯಲೋಕದಲ್ಲಿ ಶ್ರೀಹರಿಯ ಚರಣಗಳು ದೊರೆ ಯುವುವು. ವೈಕುಂಠವು ಇಲ್ಲಿಯೇ ಲಭಿಸುವುದು. ಇಲ್ಲಿ ಹುಟ್ಟುವುದರಿಂದ ಶ್ರೀಹರಿ ಕೀರ್ತನೆಯು ಕಿವಿಗಳಲ್ಲಿ ಬೀಳುವುದು. ಆದುದರಿಂದಲೇ ದೇವರ್ಷಿಗಳು ಕರ್ಮಭೂ ಮಿಯಲ್ಲಿ ತಾವು ಅವತಾರಮಾಡಲು ಬಯಸಿ ನುಡಿದರು. ಅದರಂತೆ ವಿಶ್ವೋದ್ಧಾರವಂ ಮಾಡಲೋಸುಗ ಆ ವಿಷ್ಣುಭಕ್ತರು ಭೂಮಿಯಲ್ಲಿ ಅವತರಿಸಿದರು. ಸವಿಸ್ತರವಾದ ಅವರುಗಳ ಚರಿತ್ರೆಯಂ ಆದರದಿಂದ ನೀವೆಲ್ಲರೂ ಕೇಳಬೇಕು.

ಈ ಕಥೆಗಳು ವ್ಯಾಸೋಕ್ತಪುರಾಣಗಳಲ್ಲಿ ಇಲ್ಲ—ಎಂದು ಮನದಲ್ಲಿ ವಿಕಲ್ಪ ಗೊಂಡು ಸಂಶಯದಲ್ಲಿ ಮಗ್ನರಾಗಬೇಡಿ; ಭವಿಷ್ಯೋತ್ತರಪುರಾಣದಲ್ಲಿ ವ್ಯಾಸರು ತಾವು ಹೇಳಿರುವರು; ಅದೇನೆಂದರೆ:—“ಕಲಿಯುಗದಲ್ಲಿ ಭಗವದ್ಭಕ್ತರು ಸ್ವಲೀಲೆ ಯಿಂದ ನೀಚಯೋನಿಯಲ್ಲಿ ಅವತರಿಸುವರು. ಅಘಟಿತಚರಿತ್ರೆಗಳಂ ಜನಗಳಿಗೆ ತೋ ರಿಸಿ ಚಕ್ರಪಾಣಿಯಂ ಸ್ವಾಧೀನಮಾಡಿಕೊಂಡು ಆತನ ನಾಮಮಹಿಮೆಯಂ ಪ್ರಕಾಶ

ಗೊಳಿಸಿ ಸಿದ್ಧಾಂತಜ್ಞಾನದಲ್ಲಿ ತತ್ಪರರಾಗುವರು ” ಎಂದು. ಅಂತಹ ಭಗವದ್ಭಕ್ತರು ಯಾರುಯಾರು? ಯಾವಯಾವ ಅವತಾರವಂ ಮಾಡಿದರು?—ಎಂಬುದಂ ಸಜ್ಜನರು ತಿಳಿಯಬೇಕು. ಮುಂದಣ ಅಧ್ಯಾಯದಲ್ಲಿ ಶ್ರೀಜಯದೇವನ ಚರಿತ್ರೆ ಅತಿಪಾವನವು. ಸಾಧುಗಳು ಚಿತ್ತಸ್ವಾಸ್ಥ್ಯವನ್ನು ಕೊಡಬೇಕೆಂದು ಮಹೀಪತಿ ಪ್ರಾರ್ಥಿಸುವನು.

ಇಂತು ಶ್ರೀಭಕ್ತವಿಜಯದ ಪೀಠಿಕಾಪ್ರಕರಣವೆಂಬ
ಪ್ರಥಮಾಧ್ಯಾಯಂ ಸಂಪೂರ್ಣಂ.
ಮಂಗಳಮಸ್ತು.

ಎರಡನೆಯ ಅಧ್ಯಾಯ

ಜಯದೇವಚರಿತ್ರೆ

ಶ್ರೀಕಮಲನಯನನು “ನೀವು ಹದಿನೆಂಟು ಪುರಾಣಂಗಳಂ ಮಾಡಿದಿರಿ. ಆದರೂ ಕಲಿಯುಗದಲ್ಲಿ ಜನಂಗಳು ಅಜ್ಞಾನಿಗಳಾದುದರಿಂದ ಅವುಗಳ ಅರ್ಥವು ಅವರಿಗೆ ಚೆನ್ನಾಗಿ ತಿಳಿಯದು. ನೀವು ಜಯದೇವನಾಮದಿಂದ ಅವತರಿಸಿ, ಜನಗಳನುದ್ಧರಿಸಬೇಕು” ಎಂದು, ತಮಗೆ ಹೇಳಿದುದನ್ನು ಅಂಗೀಕರಿಸಿ, ವೇದವ್ಯಾಸರು ಜಗನ್ನಾಥಕ್ಷೇತ್ರಸಮೀಪದ ಕಂದುಬಿಲ್ವ—ಎಂಬ ಹೆಸರುಳ್ಳ ಗ್ರಾಮದಲ್ಲಿ. ಬ್ರಾಹ್ಮಣಕುಲದೊಳಗೆ ಜನಿಸಿದರು. ಭಗವಂತನಿಂದ ಸೃಜಿಸಲ್ಪಟ್ಟ ಉತ್ತಮವಾದ ಚಾತುರ್ವರ್ಣ್ಯದಲ್ಲಿ ಬ್ರಾಹ್ಮಣ್ಯವು ಮುಖ್ಯವೆಂದು ವ್ಯಾಸರು ಲೀಲೆಯಿಂದ ಬ್ರಾಹ್ಮಣರಲ್ಲಿಯೇ ಜನಿಯಿಸಿ, ಜಯದೇವನೆಂಬ ಹೆಸರಿನಿಂದ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಬೆಳೆಯುತ್ತ ಬಂದರು. ಮಾತಾಪಿತೃಗಳು ಆತನಿಗೆ ಉಪನಯನವಂ ಮಾಡಿದರು ಆತನು ಅಭ್ಯಾಸ ಮಾಡದೆಯೇ ಸಕಲವಿದ್ಯೆಗಳಲ್ಲಿಯೂ ನಿಪುಣನಾದನು. ನಕ್ಷತ್ರಗಳಲ್ಲಿ ಚಂದ್ರನು, ದೇವತೆಗಳಲ್ಲಿ ಇಂದ್ರನು, ಪಕ್ಷಿಗಳಲ್ಲಿ ಗರುಡನು, ತಪಸ್ವಿಗಳಲ್ಲಿ ಶಂಕರನು, ಯಾದವರಲ್ಲಿ ಶ್ರೀಕೃಷ್ಣನು, ಎಂತು ಅಡಗಿ ಇರರೋ; ಕನಕದಲ್ಲಿ ರತ್ನವು ಎಂತು ಅಡಗಿಸಿದರೂ ಅಡಗದೋ; ಸೈನ್ಯದಲ್ಲಿ ಶೂರನು, ಆಕಾಶದಲ್ಲಿ ಸೂರ್ಯನು, ಗುಂಡಿಯಲ್ಲಿ ಸಮುದ್ರನು ಎಂತು ಮುಚ್ಚಿದರೂ ಮುಚ್ಚಲ್ಪಡರೋ; ಅಂತು ಮಹಾಪ್ರಭಾವನಾದ ಆತನು ಸಾಮಾನ್ಯಜನದಂತೆ ತಾನು ಅಡಗಿರಲು ಆಗಲಿಲ್ಲ. ಅಜ್ಞಾನಿಗಳ ಮಧ್ಯದಲ್ಲಿ ನಿಪುಣನಾದ ಶ್ರೋತೃವು, ಹರಿಕೀರ್ತನದಲ್ಲಿ ವಕ್ತೃವು, ಪಕ್ಷಿಗಳಲ್ಲಿ ರಾಜಹಂಸನು,

ದೂರದಿಂದಲೇ ಶೋಭಿಸುವಂತೆ, ಎಲ್ಲರಲ್ಲಿಯೂ, ನಿಪುಣತಮನಾದ ಜಯದೇವನು ಚೆನ್ನಾಗಿ ಕಂಗೊಳಿಸುತ್ತಿದ್ದನು. ಪ್ರಜೆಗಳಲ್ಲಿ ರಾಜನು, ಸಕಲಸಾಧನಗಳಲ್ಲಿ ಶುದ್ಧ ಭಾವವು ಎಂತೋ ಅಂತು ಬ್ರಾಹ್ಮಣರಲ್ಲಿ ಜಯದೇವನು ಮಹಾಪ್ರತಿಭೆಯುಳ್ಳವನಾಗಿ ಕಾಣುತ್ತಿದ್ದನು. ಕಲಿಯುಗದಲ್ಲಿ ನನ್ನ ಭಜನೆಯೊಂದೇ ತಾರಕವೆಂದು ಶ್ರೀಪತಿಯು ಉದ್ಧವನಿಗೆ ಹೇಳಿದಂತೆ; ಶ್ರುತಿಸ್ಮೃತಿಗಳಲ್ಲಿಯೂ, ಹದಿನೆಂಟುಪುರಾಣಗಳಲ್ಲಿಯೂ, ಹರಿಕೀರ್ತನೆಯೇ ಸಾರಭೂತವೆಂಬುದನ್ನು ತಿಳಿದು, ಜಯದೇವನು ಗೀತಗೋವಿಂದ ವೆಂಬ ಪ್ರಬಂಧವಂ ಮಾಡಿದನು. ಅದು ರಾಧಾವಿಲಾಸವೆಂಬ ಪದ್ಮಪುರಾಣದಿತಿಹಾಸ ವನ್ನು ಒಳಕೊಂಡಿರುವುದು. ಮತ್ತು ಇದರಲ್ಲಿ, ಭಗವಂತನು ಶ್ರೀಕೃಷ್ಣಾವತಾರದಲ್ಲಿ ಗೋಕುಲದೊಳಗೆ ತೋರಿಸಿದ ಲೀಲೆಯೂ ಬಣ್ಣಿಸಲ್ಪಟ್ಟಿರುವುದು. ಮೊದಲೇ ಶ್ರೀ ಹರಿಯ ಗುಣಂಗಳು ; ಅದರಮೇಲೆ ಜಯದೇವಕವಿಯ ವಾಣಿ. ಹೇಳತಕ್ಕುದೇನು !! ಕಂಕಣದ ಕುಂದಣದಲ್ಲಿ ರತ್ನಗಳಂ ಕೆತ್ತಿದಂತೆ ತೋರುವುದು. ಜಯದೇವಕವಿ ಇಂತಹ ಗೀತಗೋವಿಂದಪ್ರಬಂಧವಂ ರಚಿಸಿರಲು, ಸಕಲರೂ ಅದಂ ಬರೆದುಕೊಂಡು ಪಾಠವಂ ಮಾಡಿ, ಮನೆಯೊಳಗೆ ಪಾಡುತ್ತಿರುವರು. ಹೂವು ಒಂದು ಸ್ಥಳದಲ್ಲಿದ್ದರೂ, ಅದರ ಸುವಾಸನೆಯು ಎಂತು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸುವುದೋ, ಅಂತು ಜಯ ದೇವನಲ್ಲಿದ್ದ ಗೀತಗೋವಿಂದಪ್ರಬಂಧವು ಎಲ್ಲಾ ಸ್ಥಳಗಳಲ್ಲಿಯೂ ಪ್ರಕಟವಾಯಿತು.

ಆ ಜಗನ್ನಾಥದಲ್ಲಿ ಸಾತ್ವಿಕನೆಂಬ ಒಬ್ಬ ಅರಸು ಇದ್ದನು. ಆತನು ಈ ಜಯ ದೇವನಂತೆ ಒಂದುಗ್ರಂಥವನ್ನು ರಚಿಸಿದನು. ಆತನು ಆ ಗ್ರಂಥದ ಪ್ರತಿಗಳಂ ಬರೆ ಯಿಸಿ ಜನಗಳಿಗೆ ಕಳುಹಿಸಿಕೊಟ್ಟು "ನೀವೆಲ್ಲರೂ ಈ ಗ್ರಂಥವಂ ಪಾಠಮಾಡಿ" ಎಂದು ಅಪ್ಪಣೆಮಾಡಿದನು. ಈ ಸುದ್ದಿಯಂ ಕೇಳಿ ಸರ್ವಜ್ಞರಾದ ಪಂಡಿತರು ಕೋಪಗೊಂಡು ಜಗನ್ನಾಥಕ್ಕೆ ಬಂದು ಅರಸನನ್ನು ಕುರಿತು ಇಂತೆಂದರು:—"ನೀನು ಮಾಡಿರುವ ಗ್ರಂಥವು ನಿನಗೆ ಮೆಚ್ಚಿಕೆಯಾಗಿರುವುದು ; ಜಯದೇವನ ಗ್ರಂಥಕ್ಕೆ ಸಮ ವಾಗಿ ಇರುವುದೆಂದು ನುಡಿಯುವೆ. ಯಾರು ಅಭಿಜ್ಞರಾಗಿರುವರೋ, ಅವರು ತಮ್ಮ ಗುಣಗಳಂ ತಮ್ಮ ಮುಖದಿಂದ ವರ್ಣಿಸುವುದಿಲ್ಲ. ನೀನು ಜನಗಳನ್ನು ಕುರಿತು 'ನನ್ನ ಗ್ರಂಥವನ್ನು ಪಾಠಮಾಡಿ'—ಎಂದು ಹೇಳುವೆ. ವಿದ್ಯೆ ಹರಿಕೀರ್ತನೆ ಗುರುಮಂತ್ರ ಬ್ರಹ್ಮಜ್ಞಾನ ಹೂವಿನಹಾರ ಮಹಾರತ್ನ—ಎಂಬಿವುಗಳನ್ನು ತೆಗೆದುಕೊಳ್ಳಿ—ಎನಲು, ಬೆಲೆಯು ಕಡಿಮೆಯಾಗುವುದು. ಕಸ್ತೂರಿ ಮಲಯಗಿರಿಚಂದನ ಕುಂಕುಮಕೇಸರ ಜವ್ವಾಜಿ—ಎಂಬಿವುಗಳನ್ನೂ, ಚಿನ್ನ ಮುತ್ತು ಉತ್ತಮವಸ್ತ್ರ ಕೃಷ್ಣಾಗರು—ಎಂಬಿವು ಗಳನ್ನೂ, ಆಯಾವಸ್ತುವಿನವರು ಸ್ವಮುಖದಿಂದಲೇ ಹೆಚ್ಚಾಗಿ ಹೊಗಳಿಕೊಂಡರೆ ಕ್ರಯವು ಹೀನವಾಗುವುದು. ಉತ್ತಮಕವಿಯ ಚಾತುರ್ಯದ ಮಾತುಗಳೂ ಅಂತೆಯೇ. ಎಲೈ ನೃಪತಿಯೆ! ನೀನು ಮನದಲ್ಲಿ ಅಹಂಕಾರಗೊಂಡಿರುವೆ ; ಆದುದರಿಂದ ನಿನ್ನ ಗ್ರಂಥವು ವ್ಯರ್ಥ"—ಎಂದು ನುಡಿಯಲು, ಬಳಿಕ ರಾಜನು ಅವರಂ ಕುರಿತು—ಎರಡು

ಗ್ರಂಥಗಳಂ ತಂದು ರಾತ್ರಿಯಲ್ಲಿ ಶ್ರೀಜಗನ್ನಾಥದೇವರ ಸಮೀಪದಲ್ಲಿ ಇರಿಸಿ. ಜಯದೇವನು ಹರಿಗುಣಗಳನ್ನೇ ವರ್ಣಿಸಿರುವನು ; ನಾನೂ ಅವುಗಳನ್ನೇ ಬಣ್ಣಿಸಿರುವೆನು. ಶ್ರೀಹರಿಗೆ ಯಾವುದು ಸಮ್ಮತವಲ್ಲವೋ; ಅದನ್ನು ಹೊರಗೆ ಬಿಸುಟು ಬಿಡಲಿ–ಎಂದನು. ಆ ರೀತಿಯಲ್ಲಿಯೇ ಎರಡು ಗ್ರಂಥಗಳಂ ತಂದು ದೇವರ ಇದುರಿಗೆ ಇರಿಸಿ, ಬೀಗಗಳಂ ಹಾಕಿಕೊಂಡು ಪೂಜಕರು ಹೊರಗೆಬಂದರು. ಎರಡನೆಯ ದಿವಸ ಪ್ರಾತಃಕಾಲದಲ್ಲಿ ಬ್ರಾಹ್ಮಣರ ಸಭೆಯೆಲ್ಲವೂ ಸೇರಿತು. ದೇವರ ಪೂಜೆಗೆ ಪೂಜಕರು ಬಂದರು. ಶ್ರೀಪುರುಷೋತ್ತಮನು ಉತ್ತಮವಾದ ಜಯದೇವನ ಗ್ರಂಥವಂ ಸಮೀಪದಲ್ಲಿಯೇ ಇರಿಸಿಕೊಂಡು, ರಾಜನ ಗ್ರಂಥವಂ ಈಚೆಗೆ ಬಿಸುಟನು. ಅದಂ ಸರ್ವರೂ ನೋಡಿದವರಾದರು. ಬ್ರಾಹ್ಮಣರು ಸಂತೋಷಗೊಂಡು ಚಪ್ಪಾಳೆಯಂ ಬಾರಿಸಿದರು. ರಾಜನು ತಲೆಯಂ ತಗ್ಗಿಸಿಕೊಂಡು ಕೆಳಗೆನೋಡುತಿದ್ದನು ಪಂಡಿತನ ಮತ್ತು ರಾಜನ ವಿಷಯದಲ್ಲಿ ಸ್ವಾಮಿಯು ಕ್ಷೀರನೀರವಿಭಾಗವಂ ಮಾಡಿ ತೋರಿಸಿದನು. ವೇದಾಂತಕ್ಕೂ ಕೊಕ್ಕೋಕಶಾಸ್ತ್ರಕ್ಕೂ ಸಾಮ್ಯವೆಂತು ಬಂದೀತು ? ರಾಜಹಂಸಕ್ಕೂ ಕಾಗೆಗೂ, ಚಿನ್ನಕ್ಕೂ ಬೇಗಡೆಗೂ, ಸುಜ್ಞಾನಿಯಾದ ಪಂಡಿತನಿಗೂ ಅಧಮನಿಗೂ, ಸಾದೃಶ್ಯವೆಂತು ಬಂದೀತು ? ಜಾಲಿಗೂ ಶ್ರೀಗಂಧಕ್ಕೂ, ಮೈಲಾಗಿರಕ್ಕೂ ಸುರಗಿಗೂ, ಸಜ್ಜನನಿಗೂ ದುರ್ಜನನಿಗೂ, ಹೋಲಿಕೆಯೆಂತು ಉಂಟಾದೀತು ? ಸಾಧುವಿಗೂ ನಿಂದಕನಿಗೂ, ಕಪಟಿಗೂ ಭಾವುಕನಿಗೂ, ಇಂದ್ರನಿಗೂ ಭಿಕ್ಷುಕನಿಗೂ, ಸಾಟಿಯೆಂತು ಆದೀತು ? ಅಂತು ನಿನ್ನ ಕವಿತ್ವವೂ ಜಯದೇವನ ಗೀತಗೋವಿಂದವೂ ಸಮವಾಗಲಾರದೆಂದು ಜಗನ್ನಾಥನು ನಿನ್ನ ಗ್ರಂಥವಂ ಬಿಸುಟನು–ಎಂದೆಲ್ಲರೂ ಹೇಳಲು, ರಾಜನು ಕೇಳಿ ಬಹುಲಜ್ಜಿತನಾಗಿ, ಶ್ರೀಜಗನ್ನಾಥನ ಇದಿರಿಗೆ ಹೋಗಿ ನಿಂತುಕೊಂಡು, ಬದ್ಧಾಂಜಲಿಪುಟನಾಗಿ, ಆದೇವರಂ ಕುರಿತು–ಎಲೈ ಸ್ವಾಮಿಯೆ ! ಇಂದು ನಿನ್ನ ಬಿರುದುಗಳೆಲ್ಲವೂ ನನಗೆ ತಿಳಿದುವು. ನಿನ್ನ ನಾಮವು ಪತಿತಪಾವನನೆಂಬುದು ನನಗೆ ಇಂದು ಪುಸಿಯಾಗಿ ತೋರುವುದು, ಒಬ್ಬನನ್ನು ಉಪೇಕ್ಷಿಸಿ, ಮತ್ತೊಬ್ಬನನ್ನು ತನ್ನವನೆನಿಸುವೆ. ನೀನು ಸಮಸ್ತಘಟಗಳಲ್ಲಿಯೂ ಸಮವಾಗಿ ವ್ಯಾಪಕನಾಗಿರುವೆ; ಭಕ್ತನು ಅಭಕ್ತನು ಎಲ್ಲರೂ ನಿನ್ನಸತ್ತ್ವದಿಂದಲೇ ನಡೆಯುತ್ತಿರುವರು. ಸೂರ್ಯನು ಸಮಸ್ತಘಟಗಳಲ್ಲಿಯೂ ಎಂತು ಪ್ರತಿಬಿಂಬಿಸುವನೋ ; ಅಂತು ನೀನು ಎಲ್ಲಾಘಟಗಳಲ್ಲಿಯೂ ಪರಿಪೂರ್ಣನಾಗಿರುವೆ. ಉದಕವು ಹಸುವಿಗೂ ಹುಲಿಗೂ ಎಂತು ಸಮವೋ ಅಂತು ನೀನು ಎಲ್ಲರಿಗೂಸಮನು. ಎಲೈ ಯದುನಾಯಕನೇ ! ತಾಯಿಗೆ ಅಜ್ಞನು ಮತ್ತು ಬುದ್ಧಿವಂತನು ಇಬ್ಬರೂ ಎಂತು ಸಮರೋ ಅಂತು ನೀನು ಎಲ್ಲರಿಗೂ ಸಮನು. ಎಲೈ ಪುರುಷೋತ್ತಮನೇ ! ಬೆಳ್ದಿಂಗಳು ರಾಜನಿಗೂ ಭಿಕ್ಷುಕನಿಗೂ ಎಂತು ಸಮವೋ ಅಂತು ನೀನು ಎಲ್ಲರಿಗೂ ಸಮನು. ಜಯದೇವನ ಮುಖದಿಂದ ಕವಿತ್ವವನ್ನು ನುಡಿಯಿಸಿದವನು ನೀನಾದರೆ, ನನ್ನಲ್ಲಿ ಪ್ರೇರಿಸಿ ನನ್ನ ಮುಖದಿಂದ ನುಡಿಯಿಸಿದವನಾರು ? ಅನಂತನೆ ! ನನಗಿದನ್ನು

ಹೇಳು. ಆಕಾಶವು ಗರುತ್ಮಂತನಿಗೂ ಮಿಡಿತೆಗೂ ಎಂತು ಸಮಾನವ್ರೋ ಜಗದೀಶನಾದ ನೀನು ಅಂತು ಸರ್ವರಿಗೂ ಸಮಾನನಲ್ಲವೇ? ಈಪ್ರಕಾರವಿರುವಲ್ಲಿ, ಜಗನ್ನಾಥನೇ! ನೀನು ನನ್ನಗ್ರಂಥವಂ ಬಿಸುಟುಬಿಟ್ಟೆ. ಆದುದರಿಂದ ನಾನು ಪ್ರಾಣವಂ ಬಿಡುವೆನು—ಎಂದು ದೈನ್ಯದಿಂದ ನುಡಿಯಲು, ಕರುಣಾನಿಧಿಯಾದ ಶ್ರೀಮನ್ನಾರಾಯಣನು ಈ ಕರುಣವಚನವಂ ಕೇಳಿ, ಕರುಣೆಯಿಂದ ರಾಜನಿಗೆ ಪ್ರಸನ್ನನಾಗಿ, ಈತನ ಗ್ರಂಥದ ಬಳಗಣಿಂದ ಇಪ್ಪತ್ತುನಾಲ್ಕು ಶ್ಲೋಕಗಳಂ ತೆಗೆದು ಜಯದೇವನ ಗ್ರಂಥದಲ್ಲಿ ಬರೆದಿಟ್ಟನು. ಜಗಜ್ಜೀವನನು ರಾಜನಿಗೆ ಇಷ್ಟುಮಾತ್ರದಿಂದ ಸಮಾಧಾನವನ್ನುಂಟುಮಾಡಿದನು. ಜಯದೇವನ ಪ್ರಶಸ್ತಿ ಈರೀತಿ ಹೆಚ್ಚಿತು. ಎಲೈ ಸಾಧುಗಳಿರ! ಇಲ್ಲಿ ತಿಳಿಯಿಸಬೇಕಾದ ಮತ್ತೊಂದು ಕಥೆಯುಂಟು; ಆಲಿಸುವುದು:—

ಜಗನ್ನಾಥಕ್ಷೇತ್ರದಲ್ಲಿ ಅಗ್ನಿಹೋತ್ರಿಯಾದ ಒಬ್ಬ ಬ್ರಾಹ್ಮಣನು ಇದ್ದನು. ಆತನ ಮಡದಿಯ ಗರ್ಭದಲ್ಲಿ ಒಬ್ಬ ಕನ್ಯೆಯುದಯಿಸಿದಳು. ಆಕೆ ಪದ್ಮಾವತೀದೇವಿಯಂತೆ ರೂಪಲಾವಣ್ಯವುಳ್ಳವಳಾದುದರಿಂದ ದ್ವಿಜೋತ್ತಮನು ಪದ್ಮಾವತಿಯೆಂಬ ಹೆಸರನ್ನೇ ಇಟ್ಟನು. ಆಕನ್ಯೆ ದಿನದಿನಕ್ಕೆ ತಾನು ಬಳೆಯುತ್ತಿರಲು, ಬ್ರಾಹ್ಮಣನು ಲಾವಣ್ಯಗುಣರಾಶಿಯಾದ ಈ ಪೆಣ್ಮಣಿಯನ್ನು ಶ್ರೀಜಗನ್ನಾಥಸ್ವಾಮಿಗೆ ಸಮರ್ಪಿಸಬೇಕೆಂದು ಮನಸ್ಸಿನಲ್ಲಿ ಆಲೋಚನೆಯಂ ಮಾಡಿದನು. ಆ ಕನ್ಯೆಯ ರೂಪವಂ ನೋಡಿ ಯಾರು ಯಾರೋ ಬ್ರಾಹ್ಮಣರು ಕೇಳುವುದಕ್ಕೋಸ್ಕರ ಬರುವರು. ಆತನು ಕನ್ಯೆಯನ್ನು ಕೃಷ್ಣಾರ್ಪಣಮಾಡಿರುವೆನೆಂದು ಹೇಳುತ್ತಿರುವನು. ಇದು ಎಲ್ಲರಿಗೂ ತಿಳಿಯಿತು. ಆ ಬ್ರಾಹ್ಮಣನ ಕನಸಿನಲ್ಲಿ ಜಗನ್ನಿವಾಸನು ಬಂದು ಇಂತು ಹೇಳುವನಾದನು:—ನಿನ್ನ ಕನ್ಯಕೆಯಂ ನನಗೆ ಕೊಡುವೆನೆಂದು ಹೇಳುವೆ. ನಾನು ಬೌದ್ಧಾವತಾರವಂ ವಹಿಸಿರುವೆನು. ಜಯದೇವಕವಿ ಪರಿಪೂರ್ಣನಾದ ನನ್ನ ಅಂಶನಾಗಿರುವನು. ಆತನಿಗೆ ಸಾಲಂಕೃತಕನ್ಯಾದಾನವಂ ಮಾಡುವವನಾಗು—ಎಂದು. ಇಂತಹ ಕನಸಂ ಕಾಣುವುದೂ ಬ್ರಾಹ್ಮಣನು ಮನದಲ್ಲಿ ಸಂತಸಂಬಟ್ಟು ಜಯದೇವನಂ ಕರೆಯಿಸಿ ಲಗ್ನನಿಶ್ಚಯವಂ ಮಾಡಿದನು. ಬ್ರಾಹ್ಮಣರು ಘಟಿತಾರ್ಥವಂ ನೋಡಲು, ಮೂವತ್ತಾರುಗುಣಂಗಳೂ ಕೂಡಿಬಂದುವು. ಆತನು ಸಕಲಸಾಹಿತ್ಯವಂ ಅಲಂಕಾರಸಹಿತವಾಗಿ ಸಿದ್ಧವಂಮಾಡಿದನು. ವಿಘ್ನೇಶ್ವರಪೂಜೆಯಂ ದೇವರಪ್ರತಿಷ್ಠೆಯಂ ಮಾಡಿ ಬ್ರಾಹ್ಮಣಸಂತರ್ಪಣೆಯನ್ನೂ ನೆರವೇರಿಸಿದನು. ಮರುದಿವಸ ಸ್ವಸ್ತಿವಾಚನಾದಿ ಶುಭಕರ್ಮಂಗಳೂ ಬಳೆದುವು. ಅನಂತರ ಬ್ರಾಹ್ಮಣರು ಅಂತರಪಟವಂ ಹಿಡಿದು, ಕೇಶವನೆ! ನಾರಾಯಣನೆ! ಮಾಧವನೆ! ಗೋಪಾಲನೆ! ದೇವಾದಿದೇವನೆ! ಮಧುಸೂದನನೆ! ವಧೂವರರಂ ರಕ್ಷಿಸು. ಶ್ರೀಕೃಷ್ಣನೆ! ವಿಷ್ಣುವೆ! ವಾಮನನೆ! ಭಕ್ತಾಭಿಮಾನಿಯೆ! ಗುಣನಿಧಾನನೆ! ಬಲಿಬಂಧನನೆ! ತ್ರಿವಿಕ್ರಮನೆ! ವಧೂವರರಂ ರಕ್ಷಿಸು. ಗೋವರ್ಧನೋದ್ಧಾರನೆ! ದ್ವಾರಕಾವಾಸಿಯೆ! ಪಂಡರಪುರಾಧೀಶನೆ! ಹೃಷೀಕೇಶನೆ! ಜಗ

ತ್ಪಾಲಕನೆ ! ವೈಕುಂಠವಿಹಾರನೆ ! ರುಕ್ಮಿಣೀರಮಣನೆ ! ಕ್ಷೀರಸಾಗರದಲ್ಲಿ ಶೇಷಶಯನನಾಗಿರುವನೆ ! ರಘುಕುಲನಂದನನೆ ! ಅಯೋಧ್ಯಾಧೀಶನೆ ! ನಿಜಭಕ್ತರಂ ರಕ್ಷಿಸುವನೆ ! ಶ್ರೀಸೀತಾಕಾಂತನೆ ! ವಧೂವರರಂ ಪಾಲಿಸು. ಎಂದು ಪರಮಾತ್ಮನಂ ಪ್ರಾರ್ಥಿಸಿ —

|| ಕಂದಪದ್ಯಂಗಳು ||

ಪಾದಂಗಳ ನಮಿಪರ್ಗ್ಗತಿ |
ಮೋದಂಗಳನೀವ ವಿಘ್ನರಾಜನೆ ದಯೆದಿಂ ||
ಆದಂ ವಾರಿಸಿ ವಿಘ್ನಮ |
ನೀದಂಪತಿಗಳ್ಗೆ ಕಾರ್ಯಜಯಮಂ ಮಾಡೈ || ೧ ||

ದೊರೆವಡೆದ ಕಲೆಗಳರಸಿಯೆ |
ಸರಸಿಜಸಂಭವನ ಸತಿಯೆ ಯೆಲೆಸರಸತಿಯೇ ||
ಸರಸತೆಯ ಜಾಣ್ಮೆಯಂ ಬಿ |
ತ್ತರಿಸಿ ವಧೂವರರನೊಲ್ದು ನೀಂ ಸಲಹೆಂದುಂ || ೨ ||

ವಿಧಿಯೆ ಚರಾಚರವಿಷ್ಟಪ |
ವಿಧಾನಚಾತುರ್ಯನಿಧಿಯೆ ವಾಣೀಪತಿಯೇ ||
ಅಧಿಕಾಯುಷ್ಯಮನೀಯುತೆ |
ವಧೂವರರ್ಕ್ಕಳನೊರಲ್ದು ರಕ್ಷಿಪುದಿವರಂ || ೩ ||

ಸಕಲಜಗಜ್ಜನನಿಯೆ ನಾ |
ಲಕುಮಿಯೆ ಹರಿಹೃದಯಸಿಂಹಪೀಠೇಶ್ವರಿಯೇ ||
ಅಕಲಂಕಸಂಪದಂಗಳ |
ನಿಕರವನೊದವಿಸಿ ವಧೂವರರ್ಕ್ಕಳ ಪೊರೆ ನೀಂ || ೪ ||

ಒಸೆದು ವರಂಗಳನೀವನೆ |
ಬಿಸಜಾಕ್ಷನೆ ದೇವವರನೆ ಲಕ್ಷ್ಮೀವರನೇ ||
ಪಸೆಮಣೆಯಲ್ಲಿ ವಿಳಾಸದಿ |
ನೆಸೆವ ವಧೂವರರ ನಿವರನೆಂದುಂ ಪೊರೆಯೈ || ೫ ||

ಕಡುಮೈಮೆಗೆ ನೆಲೆಯೆನಿಪಳ |
ಮೃಡನರೆಮೆಯ್ಯವಳ್ ಸರ್ವಮಂಗಳೆ ಗೌರೀ ||
ಕುಡು ಸರ್ವಮಂಗಳಂಗಳ |
ನಡಿಗಡಿಗೀವಧುಗಮೀ ವರಂಗಂ ಗಿರಿಜೇ || ೬ ||

ಕರುಣೋಜ್ಜೀವಿತಮದನಂ |
ಗಿರಿಜಾಕಮನಂ ಮುನೀಂದ್ರಮಾನಸಸದನಂ ||
ವರದಂ ಪ್ರಸನ್ನವದನಂ |
ಪರಮೇಶಂ ದಯದೆ ಪೊರೆಗೆ ವಧುವಂ ವರನಂ ||೭||

ರವಿಶಶಿಕುಜಬುಧಮುಖ್ಯರ್ |
ನವಗ್ರಹಂಗಳ್ ದಿಗೀಶರಿಂದ್ರಾದಿಗಳುಂ |
ನವದಂಪತಿಗಳ್ಗೊದವಿಸು |
ಗವಿರತವಾರೋಗ್ಯಭಾಗ್ಯವಿಜಯಶ್ರೀಯಂ ||೮||

ಎಂದು ಮಂಗಳಾಷ್ಟಕದ ಪದ್ಯಂಗಳನ್ನೂ ಪಾಡಿ, ಸಾಂಗವಾಗಿ ಲಗ್ನವಂ ನೆರವೇರಿಸಿದರು. ಆಗ ಜಯಜಯಧ್ವನಿಯಾಯಿತು. ನಾನಾವಾದ್ಯಗಳು ಮೊಳಗಿದುವು. ಇಂತು ನಾಲ್ಕುದಿನವೂ ಮಹೋತ್ಸವವು ಬೆಳೆಯಿತು. ಬೀಗರೆಲ್ಲರೂ ಬಹುಮಾನಿತರಾಗಿ ಸಂತುಷ್ಟರಾದರು.

ಬಳಿಕ ಜಯದೇವನು ಜಗನ್ನಾಥದಲ್ಲಿಯೇ ವಾಸಮಾಡುತ್ತ, ನಿತ್ಯವೂ ಜಗನ್ನಾಥನ ಗುಣಂಗಳಂ ವರ್ಣಿಸುತ್ತ, ಪ್ರೇಮಯುಕ್ತನಾಗಿ ಕೀರ್ತನವಂ ಮಾಡುತಿದ್ದನು.

ಅಲ್ಲಿ ಒಬ್ಬ ಸಾಧುಕಾರನಿದ್ದನು. ಆತನು ಆಸ್ತಿಕನು ಅತ್ಯುದಾರನು. ಜಯದೇವನು ಆತನ ಮನಸ್ಸಂ ನೋಡಿ, ಆತನಂ ಅನುಗ್ರಹಿಸಿ ಶಿಷ್ಯನನ್ನಾಗಿ ಮಾಡಿಕೊಂಡನು. ಅವಿಶ್ವಾಸಿಯನ್ನೂ, ಲೋಭಿಯನ್ನೂ, ಜನದ ದೋಷಗಳನ್ನೇ ಹುಡುಕುವವನನ್ನೂ ಪರದ್ರವ್ಯಾಸಕ್ತನನ್ನೂ ಶಿಷ್ಯನನ್ನಾಗಿ ಪರಿಗ್ರಹಿಸಬಾರದು. ಪರಮದುರ್ಜನನನ್ನೂ, ಪಿತೃದ್ರೋಹಿಯಾದ ಚಂಡಾಲನನ್ನೂ, ಪರದಾರೈಕಲೋಲನನ್ನೂ, ಶಿಷ್ಯನನ್ನಾಗಿ ಪರಿಗ್ರಹಿಸಬಾರದು. ಮತ್ತು ಬಹುಭಾಷಿಯನ್ನೂ, ಹರಿಕೀರ್ತನೆಯೊಲ್ಲದವನನ್ನೂ, ಅನುಭವವಿಲ್ಲದೆ ಬರಿಬಾಯಿಂದ ಬ್ರಹ್ಮಜ್ಞಾನವಂ ಹೇಳುವವನನ್ನೂ, ಶಿಷ್ಯನನ್ನಾಗಿ ಅನುಗ್ರಹಿಸಬಾರದು. ವೇದಶಾಸ್ತ್ರಗಳಲ್ಲಿ ವಿಶ್ವಾಸವಿಲ್ಲದವನನ್ನೂ, ಸಾಧುಗಳ ವಾಕ್ಯವಂ ಕೇಳದವನನ್ನೂ, ಭೂತದಯೆಯಿಲ್ಲದವನನ್ನೂ, ಶಿಷ್ಯನನ್ನಾಗಿ ಗ್ರಹಿಸಬಾರದು. ಈಸಾಧುಕಾರನು ಅಂತಹನಲ್ಲ; ಪರಮಭಾವುಕನು; ಉದಾರಹೃದಯನು; ಗುರುಸೇವಾತತ್ಪರನು. ತನ್ನ ಮನೆಗೆ ಬರಬೇಕೆಂದು ಮನಃಪೂರ್ವಕವಾಗಿ ಜಯದೇವನನ್ನು ಪ್ರಾರ್ಥಿಸಿ ಬಿನ್ನವಿಸಿ ಒಪ್ಪಿಸಿ ರಥದಲ್ಲಿ ಕುಳ್ಳಿರಿಸಿಕೊಂಡು ತನ್ನ ಊರಿಗೆ ಕರೆದುಕೊಂಡುಹೋದನು. ಶ್ರೀಹರಿಯ ಗುಣಕೀರ್ತನೆಯೂ ಆತ್ಮಚರ್ಚೆಯೂ ಬ್ರಹ್ಮಜ್ಞಾನವೂ ಸತ್ಸಮಾಗಮವಿಲ್ಲದೆ ಬರಲಾರದು. ಕ್ಷಮೆ ದಮೆ ಶಾಂತಿ ನಿಷ್ಕಾಮಬುದ್ಧಿ ಯಜ್ಞವು ದಾನಾದಿಗಳೂ ಸತ್ಸಹವಾಸವಿಲ್ಲದೆ

ಎಂದಿಗೂ ಉಂಟಾಗಲಾರವು—ಎಂದು ತನ್ನ ಮನದಲ್ಲಿ ಭಾವಿಸಿ, ಜಯದೇವನನ್ನು ತನ್ನ ಮನೆಯಲ್ಲಿ ಉಲ್ಲಾಸದಿಂದ ಹಗಲೂ ರಾತ್ರಿಯೂ ಸೇವಿಸುತ್ತ ಇದ್ದನು.

ಜಯದೇವನು ಸರ್ವಕಾಲದಲ್ಲಿಯೂ ಹರಿಕೀರ್ತನೆಯಂ ಮಾಡುತ್ತ, ಜಡರನ್ನೂ ಅಜ್ಞಾನಿಗಳನ್ನೂ ದುರಾಚಾರಿಗಳನ್ನೂ ಭಕ್ತಿಮಾರ್ಗದಲ್ಲಿ ನೆಲೆಗೊಳಿಸುತ್ತ ಒಂದು ತಿಂಗಳು ಆತನ ಮನೆಯಲ್ಲಿ ಇದ್ದು ಆ ಸಾಧುಕಾರನನ್ನು ಕುರಿತು—ಜಗನ್ನಾಥಕ್ಕೆ ಹೋಗಲು ನನಗೆ ಅನುಜ್ಞೆಯಂ ಕೊಡಬೇಕೆನಲು, ಸಾಧುಕಾರನು ಜಯದೇವ ಸ್ವಾಮಿಯನ್ನು—ನನ್ನ ಮಸ್ತಕದಲ್ಲಿ ಹಸ್ತವಂ ಇರಿಸಬೇಕು; ಸೇವಕನ ವಿಷಯದಲ್ಲಿ ಸರ್ವಕಾಲದಲ್ಲಿಯೂ, ಇದೇ ರೀತಿಯಿಂದ ಅನುಗ್ರಹವಂ ಮಾಡಬೇಕೆಂದು ಪ್ರಾರ್ಥಿಸಿ, ಕನಕಾಸನದಲ್ಲಿ ಕುಳ್ಳಿರಿಸಿ ಭಕ್ತಿಯಿಂದ ಪೂಜೆಮಾಡಿ, ಗುರುದಕ್ಷಿಣೆಯೇನಂ ಕೊಡಬೇಕೆನುತ ಆಲೋಚಿಸಿ, ರತ್ನಗಳೂ ಚಿನ್ನಬೆಳ್ಳಿಗಳೂ ಗುರುಗಳಿಗೆ ಮೃತ್ತಿಕೆಯ ಸಮಾನ; ಆದುದರಿಂದ ಇವರ ಪತ್ನಿಯರಿಗೆ ಏನಾದರೂ ದ್ರವ್ಯವಂ ಕಳುಹಬೇಕೆಂದು ನಿಶ್ಚಯಿಸಿ, ಗುರುಗಳಿಗೆ ತಿಳಿಯದಂತೆ ಬಗೆವಗೆಯ ರತ್ನಗಳನ್ನೂ ದಿವ್ಯಮುಕ್ತಾಸರಗಳನ್ನೂ ತರತರದ ಒಡವೆಗಳನ್ನೂ ರಥದಲ್ಲಿ ಇಡಿಸಿ ಅದರಮೇಲೆ ಹಾಸಿಗೆಯಂ ಹಾಸಿಸಿ ಜಯದೇವನನ್ನು ಸನ್ಮಾನದಿಂದ ಹತ್ತಿಸಿ ಸಂಗಡ ಹೋಗಲು ಸೇವಕನನ್ನು ನಿಯಮಿಸಿ ತಾನೂ ಸ್ವಲ್ಪದೂರ ಸಾಗಕಳುಹುತ್ತ ಹೊರಟು ತನ್ನ ಸೇವಕನನ್ನು ಕುರಿತು—ನೀನು ಜಗನ್ನಾಥದಲ್ಲಿ ಇವರ ಮನೆಯನ್ನು ಸೇರಿದಬಳಿಕ ಪದ್ಮಾವತೀದೇವಿಯರ ಪಾದಪದ್ಮಗಳಿಗೆ ನಾನು ಎರಗಿದನೆಂಬುದಂ ಬಿನ್ನವಿಸಿ, ಗುರುಗಳು ಅರಿಯದಂತೆ ನಾನು ಸಮರ್ಪಿಸಿರುವ ವಸ್ತ್ರಭೂಷಣಂಗಳಂ ಆ ಗುರುಪತ್ನಿಯರಿಗೆ ಒಪ್ಪಿಸಿ ಹಿಂದಿರುಗಿ ಬರುವುದು—ಎಂದು ಹೇಳಿ ತಾನು ಜಯದೇವನ ಅಪ್ಪಣೆಯಂ ಪಡೆದು ತನ್ನ ಮನೆಯಂ ಬಂದು ಸೇರಿದನು.

ಅತ್ತಲಾಗಿ ಇಬ್ಬರು ಕಳ್ಳರು, ಸಾಧುಕಾರನು ಗುಪ್ತದಾನವಂ ಮಾಡಿರುವನೆಂಬುದನ್ನು ಸುಳಿವಿನಿಂದ ತಿಳಿದು, ಜಯದೇವನು ಹೊರಟುದನ್ನು ಕಂಡು, ತಾವೂ ಹಿಂದುಗಡೆಯಲ್ಲಿ ಹೊರಟರು. ಸಾಧುಕಾರನ ಸೇವಕನು ದಾರಿಯಲ್ಲಿ ಜಯದೇವನನ್ನು ಕುರಿತು—ಸ್ವಾಮಿ! ಈದಿವಸ ನನ್ನ ಮನೆಯಲ್ಲಿ ಅತ್ಯಾವಶ್ಯಕವಾದ ಕಾರ್ಯವುಂಟು; ದಯೆಯಿಟ್ಟು ತಾವು ನನ್ನನ್ನು ಬಿಟ್ಟುಕೊಟ್ಟರೆ ನಾನು ಹಿಂದಿರುಗಿ ಹೋಗುವೆನು—ಎಂದು ಬೇಡಿಕೊಳ್ಳಲು, ಉದಾರಮನಸ್ಕನಾದ ಜಯದೇವನು ಸೇವಕರ ಮತ್ತು ಕಾಂತೆಯ ಪಶುಗಳ ಕ್ರಿಮಿಕೀಟಂಗಳ ತರುಲತಾದಿಗಳ ಬಾಳಿಕೆ ಪರತಂತ್ರವಾದುದು—ಎಂದು ಮನದಲ್ಲಿ ಕನಿಕರಗೊಂಡು, ಅಪ್ಪಣೆಯಂ ಕೊಟ್ಟು ಆ ಸೇವಕನಂ ಕಳುಹಿಸಿಕೊಟ್ಟನು. ಬಳಿಕ ಆ ಕಳ್ಳರಿಬ್ಬರು ಜಯದೇವಕವಿಯ ಇದಿರಿಗೆ ಬಂದು ವಂದನೆಯಂ ಮಾಡಿ, ಬಕಪಕ್ಷಿಗಳು ಗಂಗಾತೀರವಂ ಆವರಿಸಿಕೊಂಡು ನೆಲಸುವಂತೆ ಸಮೀಪವನ್ನು ಆಶ್ರಯಿಸಿ ನಡೆಯುತ ಬಂದರು. ಅವರ ಲಕ್ಷಣಗಳಿಂದ ದುರ್ಜನರೆಂದು ಜಯದೇವ

ಸಿಗೆ ತೋರಿತು. ಕುಟಿಲನನ್ನೂ ದುರಾಚಾರನನ್ನೂ ಶಠನನ್ನೂ ಚೋರನನ್ನೂ ಜಾರನನ್ನೂ ಅಭಾವುಕನನ್ನೂ ಬುದ್ಧಿವಂತರು ದೂರದಿಂದಲೇ ತಿಳಿಯುವರು. ಜಯದೇವನು ಅವರ ಇಂಗಿತವಂ ಬಗೆದು ಅವರನ್ನು ಕುರಿತು—ನಿಮ್ಮ ಮನಸ್ಸಿನಲ್ಲಿ ಏನಪೇಕ್ಷೆಯಿರುವುದು? ಅದನ್ನು ನನಗೆ ತಿಳಿಯಿಸಿ; ನಾನು ಈಡೇರಿಸುವೆನು. ಈ ರಥದಲ್ಲಿ ವಸ್ತ್ರಗಳೂ ಭೂಷಣಗಳೂ ತರತರದ ದಿವ್ಯರತ್ನಗಳೂ ಇರುವುವು; ಇವಂ ನಿಮಗೆ ಸಮರ್ಪಿಸಿರುವೆನು—ಎಂದುನುಡಿದು—ದ್ರವ್ಯವಿದ್ದ ಕಡೆಯಲ್ಲಿ ಅನೇಕಾನರ್ಥಗಳುಂಟು; ಅಲ್ಲಿ ಪ್ರಾಣಘಾತವೂ ಆಗುವುದು—ಎಂದು ಮನದಲ್ಲಿ ಎಣಿಸಿ ರಥದಿಂದ ಇಳಿದು ಮುಂದೆ ತ್ವರೆಯಿಂದ ನಡೆದನು. ಜಯದೇವನು ಮುಂದೆ ಹೋಗಿ ಸಾಧುಕಾರನಿಗೆ ತಿಳಿಯಿಸಿ ನಮಗೆ ಶಿಕ್ಷೆಯಂ ಮಾಡಿಸುವನೆಂದು ಕಳ್ಳರು ಆಲೋಚನೆಯಂಮಾಡಿ ಮೊದಲು ಇವನ ಪ್ರಾಣವಂ ತೆಗೆದು, ಬಳಿಕ ವಸ್ತ್ರಭೂಷಣಂಗಳಿಂದ ಕೂಡಿದ ರಥವನ್ನು ಸಾಗಿಸಿಕೊಂಡು ಹೋಗಬೇಕೆಂದು ನಿಶ್ಚಯಿಸಿ, ಜಯದೇವನ ಸಮೀಪಕ್ಕೆ ತ್ವರೆಯಿಂದ ಓಡಿಬಂದು ಅಷ್ಟರಲ್ಲಿ ಇವನ ಪ್ರಾಣಘಾತವಂ ಮಾಡುವುದು ಸರಿಯಲ್ಲ; ಕೈಕಾಲುಗಳನ್ನು ಕಡಿದು ಹಗೇವಿನಲ್ಲಿ ಹಾಕಬೇಕೆಂದು ಆಲೋಚಿಸಿ, ಅದರಂತೆ ಜಯದೇವಕವೀಂದ್ರನ ಕೈಕಾಲುಗಳಂ ಥಟ್ಟನೆಕಡಿದು, ಸಮೀಪದಲ್ಲಿ ಇದ್ದ ಒಂದು ಹಗೇವಿನಲ್ಲಿ ಹಾಕಿಬಿಟ್ಟು, ಆ ರಥವಂ ಸಾಗಿಸಿಕೊಂಡು ತಮ್ಮ ಊರಿಗೆ ಹೊರಟುಹೋದರು.

ಬಳಿಕ ಜೀವಸಹಿತನಾಗಿ ಹಗೇವಿನಲ್ಲಿ ಬಿದ್ದಿರುವ ಪಂಡಿತಜಯದೇವಕವಿಯು ಶ್ರೀಧರನನ್ನು ಪ್ರೇಮಭಾವದಿಂದ ನೆನೆದು,—ಪ್ರಾಣಕ್ಕೆ ಘಾತವಾಗುತ್ತ ಇದ್ದಿತು; ಆತ್ಮಾರಾಮನು ಅಲಿಪ್ತನು; ಸುಖದುಃಖಗಳಿಗಿಂತ ಬೇರೆಯಿರುವನು. ದೇಹವು ಸಕಲರೋಗಗಳಿಗೂ ಮನೆ, ದೇಹವೇ ಕಾಮಕ್ರೋಧಗಳಿಗೆ ಕಾರಣವಾದುದು. ಗುಣತ್ರಯವಿಕಾರವು ದೇಹದಿಂದಲೇ ಹುಟ್ಟುವುದು—ಎಂದು ಬಗೆದು, ದೇಹಾತೀತನಾಗಿ ಕ್ಷೀರಸಾಗರವಾಸಿಯಾದ ಆ ಭಗವಂತನನ್ನು ಅಡಿಗಡಿಗೂ ಧ್ಯಾನಿಸುತ್ತ ಇದ್ದನು.

ಆದಿವಸ ಕ್ರೌಂಚರಾಜನೆಂಬ ಒಬ್ಬ ರಸು ಬೇಟೆಯಾಡುವುದಕ್ಕೋಸ್ಕರ ಅರಣ್ಯಕ್ಕೆ ಬಂದು ಆಗ ರಾತ್ರಿಯಲ್ಲಿ ಸಂಚರಿಸುತ್ತ, ಒಂದುಕಡೆ ಹಗೇವಿನಲ್ಲಿ ಅಕಸ್ಮಿಕವಾಗಿ ಉಂಟಾದ ಪ್ರಕಾಶವಂ ಕಂಡು, ಅದರ ಸಮೀಪಕ್ಕೆ ಬಂದು ನೋಡಲು, ಪರಮತೇಜಸ್ಸಿನಿಂದ ದೇದೀಪ್ಯಮಾನನಾಗಿ,—ರಾಮಾ! ಕೃಷ್ಣಾ! ಗೋವಿಂದಾ!—ಎಂದು ಭಗವನ್ನಾಮಸಂಕೀರ್ತನೆಯಂಮಾಡುತ್ತ ಧ್ಯಾನಾರೂಢನಾಗಿ ಕುಳಿತಿದ್ದ ಆ ಭಾಗವತಶಿರೋಮಣಿ ದೃಗ್ಗೋಚರನಾದನು. ರಾಜನು ಆತನಿಗೆ ವಂದನೆಯಂಮಾಡಿ ಚೆನ್ನಾಗಿ ನೋಡಿ, ಕೈಕಾಲುಗಳು ಛಿನ್ನವಾಗಿದ್ದುದನ್ನು ತಿಳಿದು ಭಯಸಂಭ್ರಾಂತನಾಗಿ ಆತನನ್ನು ಕುರಿತು—ಸ್ವಾಮಿ! ತಮಗೆ ಇಂತಹ ಅವಸ್ಥೆಯು ಏಕೆ ಪ್ರಾಪ್ತವಾಯಿತು?—ಎಂದು ಬೆಸಗೊಂಡನು. ಅದಕ್ಕೆ ಜಯದೇವಕವೀಂದ್ರನು ರಾಜನಂಕುರಿತು—ನಾನು ಹುಟ್ಟುವಾಗಲೇ ಕರಚರಣಂಗಳಿಲ್ಲದೆ ಸಕಲೇಂದ್ರಿಯಗಳಿಗೂ ಬಾಹ್ಯನಾಗಿ ಇಂತು ಇರುವೆನೆಂದನು.

ಆ ರಾಜನು—ಈತನು ಪೂರ್ಣಜ್ಞಾನಿಯಾದ ಭಾಗವತೋತ್ತಮನೆಂದು ಮನದಲ್ಲಿ ನಿಶ್ಚಯಿಸಿ, ಆತನಂ ಪ್ರಾರ್ಥಿಸಿ ಪಲ್ಲಕ್ಕಿಯೊಳ್ ಕುಳ್ಳಿರಿಸಿಕೊಂಡು ತನ್ನ ಊರಿಗೆ ಕರೆದುಕೊಂಡುಹೋಗಿ ಪ್ರೀತಿಯಿಂದ ಪೂಜಿಸುತ್ತ ವಿನೀತನಾಗಿ ಇದ್ದುಕೊಂಡು ಆತನ ಅನುಗ್ರಹವಂ ಸಂಪಾದಿಸಿದನು. ಮತ್ತು ಸಿಂಹಾಸನದಲ್ಲಿ ಕುಳ್ಳಿರಿಸಿ—ನಿತ್ಯವೂ ಇವರ ಸೇವೆಯಂ ಭಕ್ತಿಯಿಂದ ಮಾಡಬೇಕು—ಎಂದು, ತನ್ನ ಸೇವಕರಿಗೆ ಆಜ್ಞೆಮಾಡಿದನು. ಆ ಸೇವಕರೂ ನಮ್ಮ ಭಾಗ್ಯೋದಯದಿಂದ ಇಂತಹ ಸಾಧುಗಳ ಸಂದರ್ಶನವೂ ಸೇವೆಯೂ ಲಭಿಸಿತೆಂದು ಸಂತೋಷಪಡುತ್ತ ಆತನಂ ಸೇವಿಸುತ್ತ ಇದ್ದರು.

ಅನಂತರವೊಂದುದಿನ ರಾಜನು ಗುರುವಿನ ಸನ್ನಿಧಿಗೆ ಹೋಗಿ, ಏನಾದರೂ ಸಾಧನವಂ ಬೆಸಗೊಳ್ಳಬೇಕೆಂದು ಮನದಲ್ಲಿ ನಿಶ್ಚಯಿಸಿ, ಸಿಂಹಾಸನಾರೂಢನಾಗಿದ್ದ ಜಯದೇವಕವೀಶನ ಬಳಿಗೆ ಬಂದು ಬದ್ಧಾಂಜಲಿಪುಟನಾಗಿ—ನನಗೇನಾದರೂ ಸಾಧನವಂ ಅಪ್ಪಣೆಕೊಡಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಜಯದೇವನು ರಾಜನಂ ಕುರಿತು—ನೀನು ನಿತ್ಯವೂ ಸಾಧುಗಳ ಸೇವೆಯಂ ಮಾಡುವವನಾಗು ; ಅದಕ್ಕಿಂತ ದೊಡ್ಡಸಾಧನವು ಯಾವುದೂ ಅಲ್ಲ. ಮನೆಗೆ ಸಾಧುಗಳು ಬರುತ್ತಿರುವರು ; ಅವರಿಗೆ ಇಷ್ಟಾನುಸಾರವಾಗಿ ಆದರದಿಂದ ಭೋಜನವಂ ಮಾಡಿಸಬೇಕು. ವಸ್ತ್ರಗಳನ್ನೂ ಭೂಷಣಗಳನ್ನೂ ದ್ರವ್ಯಗಳನ್ನೂ ಕೊಡಬೇಕು ; ಇಂತು ಸಾಧುಗಳ ಸೇವೆಯಂ ಮಾಡಿದರೆ ಶ್ರೀವಾಸುದೇವನಿಗೆ ಬಹುಸಂತೋಷವಾಗುವುದು. ಸಾಧುಗಳ ಸೇವಕರು ಶ್ರೀಹರಿಗೆ ಲಕ್ಷ್ಮಿಗಿಂತಲೂ ವಿಶೇಷವಾಗಿ ಪ್ರಿಯರು—ಎಂದನು.

ಬಳಿಕ ರಾಜನು ಜಯದೇವನಂ ಕುರಿತು—ಸ್ವಾಮಿ! ಸಾಧುಗಳೆಂತು ಇರುವರು? ಅವರ ಲಕ್ಷಣವೇನು? ಅಜ್ಞಾನದೋಷದಿಂದ ನನಗೆ ತಿಳಿಯದು—ಎನಲು, ಜಯದೇವನು ರಾಜನನ್ನು ನೋಡಿ—ಅಯ್ಯಾ ಆಸ್ತಿಕಶಿರೋಮಣಿಯೆ! ಕೇಳು :— ಸಾಧುಗಳು ಭಗವನ್ನಾಮಸಂಕೀರ್ತನೆಯಲ್ಲಿ ನಿರತರಾಗಿರುವರು ; ಊರ್ಧ್ವಪುಂಡ್ರಾದಿಗಳನ್ನು ಧರಿಸಿರುವರು. ತುಳಸೀಮಾಲಾದಿಗಳಿಂದ ಅಲಂಕೃತರಾಗಿರುವರು ; ಇಷ್ಟುಮಾತ್ರವೇ ಅಲ್ಲ ; ಸಾಧುಗಳನ್ನು ಅನುಭವದಿಂದ ತಿಳಿದುಕೊಳ್ಳಬೇಕು. ಸಾಧುಗಳು ತಾವು ಪರರನ್ನು ದೂಷಿಸರು. ಪರರು ತಮ್ಮನ್ನು ದೂಷಿಸಿದರೆ ಕೇಳಿಕೊಂಡಿರುವರು. ಯಾರಲ್ಲಿಯೂ ಪ್ರಿಯವಚನವನ್ನೇ ಆಡುತಿರುವರು ; ಯಾವಾಗಲೂ ಪರಬ್ರಹ್ಮಚಿಂತೆಯಲ್ಲಿಯೇ ಇರುವರು ; ದುಃಖಿಗಳಾದವರನ್ನು ನೋಡಿ ಕನಿಕರದಿಂದ ಮರುಗುವರು. ಈ ಮಾಯಾಪಾಶದಿಂದ ಯಾಕೆ ತೊಳಲುತ್ತಿರುವಿರಿ? ಆತ್ಮಜ್ಞಾನವನ್ನು ಸಂಪಾದಿಸಿ—ಎಂದು ಉಪದೇಶಿಸುತ್ತಿರುವರು. ಪರರನ್ನು ಬಿಟ್ಟು ತಾವು ಸ್ವಾದುವಾದುದಂ ಭುಂಜಿಸರು. ನಿಷ್ಠುರವಾದ ಮಾತನ್ನು ಎಂದಿಗೂ ಆಡರು. ಈ ಪ್ರಪಂಚವನ್ನು ನಶ್ವರವೆಂದೇ ತಿಳಿದಿರುವರು. ಇತರರು ತಮಗೆ ಅಪಕೃತಿಯನ್ನು ಮಾಡಿದರೂ ಅವರಿಗೆ ಶ್ರೇಯಸ್ಸನ್ನೇ ಕೋರುತ್ತಿರುವರು. ತಮಗೆ ಸಂಕಟಗಳು ಬಂದೊದವಿದರೂ ಕುಸಿ

ಯದೆ ಇರುವರು. ನಿರ್ಬಂಧದಿಂದ ಯಾವಸ್ಥಳದಲ್ಲಿಯೂ ನಿಲ್ಲರು. ತಮಗೆ ಇಷ್ಟವಾದ ಕಡೆಯಲ್ಲಿ ಇರುತ್ತಿರುವರು. ಕಳೆದುಹೋದುದನ್ನು ಮನದಲ್ಲಿ ನೆನೆಯರು. ಮುಂದೆ ಬರುವುದಕ್ಕೆ ಚಿಂತಿಸರು. ಆಕ್ಷಣ ಬಂದುದನ್ನು ಅನುಭವಿಸುವರು. ಕಾಮಕ್ರೋಧಾದಿಗಳ ಕೋಟಲೆಗೆ ಒಳಗಾಗರು. ಏನನ್ನು ಕೇಳಿದರೂ ಕೊಡುವರು. ನಿರಂತರವೂ ಸಂತೋಷಸಮುದ್ರದಲ್ಲಿ ಮುಳುಗಾಡುತ್ತಿರುವರು. ಸರ್ವರಲ್ಲಿಯೂ ಸಮರಾಗಿರುವರು. ನೋಡಲು ಬಾಲೋನ್ಮತ್ತರಂತೆಯೇ ಚರಿಸುತ್ತಿರುವರು. ಸುಳ್ಳನ್ನು ಹೇಳರು. ಅಹಿಂಸೆಯೇ ಪರಮಧರ್ಮವೆಂದು ತಿಳಿದಿರುವರು. ಇಂತಹ ಗುಣಗಳುಳ್ಳ ಸಾಧುಗಳಿಗೆ ಅನನ್ಯಭಾವದಿಂದ ನಮಸ್ಕರಿಸಿ ಆದರದಿಂದ ಅವರನ್ನು ಉಪಚರಿಸಬೇಕು—ಎಂದನು. ಈಮಾತಂಕೇಳಿ ರಾಜನು—ಅವಶ್ಯವಾಗಲೆಂದು ಗುರುವಿನ ಆಜ್ಞೆಯನ್ನು ಶಿರದಲ್ಲಿ ತಾಳಿ ಅದೇರೀತಿಯಿಂದ ಸಾಧುಗಳ ಸೇವೆಯಂ ಮಾಡುತಿದ್ದನು.

ಈಸುದ್ದಿಯನ್ನು ಕೇಳಿ ಸಂತೋಷದಿಂದ ಬಹುದೂರದಲ್ಲಿರುವ ಸಾಧುಗಳನೇಕರು ನಿತ್ಯವೂ ಈ ರಾಜನ ಮನೆಗೆ ಬರುತ್ತಿರುವರು. ಮರದ ನೆಳಲಂ ನೋಡಿ ಮಾರ್ಗಸ್ಥರು ಕುಳಿತುಕೊಳ್ಳುವುದಕ್ಕೋಸ್ಕರ ಎಂತು ಬರುವರೋ; ಫಲಪಲ್ಲವಂಗಳಂ ನೋಡಿ ಪಕ್ಷಿಗಳು ಉಲ್ಲಾಸದಿಂದ ಎಂತು ಹಾರಿಬರುವುವೋ; ದಾತೃವಿನ ಔದಾರ್ಯವಂ ಕೇಳಿ ಯಾಚಕರು ಎಂತು ಓಡಿಬರುವರೋ; ಸಕ್ಕರೆಯ ಸವಿಯಂ ತಿಳಿದು ಇರುವೆಗಳು ಎಂತು ಬಂದು ಮುತ್ತುವುವೋ; ಅಡವಿಯಿಂದ ಬಂದ ಹಸುವನ್ನು ಕಂಡು ಕರುಗಳು ಎಂತು ಸಂಭ್ರಮದಿಂದ ನಡೆತರುವುವೋ; ಮೇಘೋದಯವನ್ನು ತಿಳಿದು ಚಾದಗೆಗಳು ಎಂತು ಆವರಿಸುವುವೋ; ಚಂದ್ರನ ಚಂದ್ರಿಕೆಯಂ ಕಂಡು ಚಕೋರಗಳು ಎಂತು ಬಂದು ಸೇರುವುವೋ; ಸಮರದ ಸಂರಂಭಮಂ ಶೂರರು ಕೇಳಿ ಎಂತು ಥಟ್ಟನೆ ಬರುವರೋ; ಮೇಘಧ್ವನಿಯನ್ನಾಲಿಸಿ ಉಲ್ಲಾಸಂಬಡುವ ನವಿಲುಗಳಂದದಿಂದ ಅಂತು ತನ್ನ ಉದಾರವಾದ ಭಕ್ತಿಭಾವವನ್ನು ಕೇಳಿ ಸಂತೋಷಿಸುತ್ತ ಬಳಿಗೆ ಬರುತ್ತಿರುವ ಆ ಸಾಧುಗಳಂ ಕಂಡೊಡನೆಯೆ ನಮಸ್ಕರಿಸಿ ಆದರಿಸಿ ಉಪಚರಿಸಿ ಇಷ್ಟವಾದ ಮೃಷ್ಟಾನ್ನಮಂ ಭೋಜನಮಾಡಿಸುತ್ತ ನಾಲ್ಕು ತಿಂಗಳು ತನ್ನ ಮನೆಯಲ್ಲಿ ಇರಿಸಿಕೊಂಡು, ಅವರು ಏನೇನ ಬಯಸುವರೋ ಅದನೆಲ್ಲವನ್ನೂ ಸಲಿಸುತ್ತ, ಅಮಿತವಾದ ವಸ್ತ್ರಭೂಷಣಂಗಳನ್ನೂ ದ್ರವ್ಯಗಳನ್ನೂ ಕೊಡುತ್ತಿರುವನು.

ಇಂತಿರಲು, ಜಯದೇವನ ಕರಚರಣಂಗಳಂ ಕಡಿದುಹಾಕಿದ್ದ ಪಾಪಿಗಳಾದ ಆ ಕಳ್ಳರೂ ಈಸುದ್ದಿಯನ್ನು ಕೇಳಿ, "ನಾವೂ ಸಾಧುಗಳ ವೇಷವಂ ಧರಿಸಿಕೊಂಡು ರಾಜನ ಬಳಿಗೆ ಹೋಗೋಣ; ನಮಗೂ ಅಪರಿಮಿತವಾದ ಧನಕನಕವಸ್ತುಗಳಂ ಕೊಡುವನು" ಎಂದು ಆಲೋಚಿಸಿ, ಜಯದೇವಕವಿ ಆರಾಜನಬಳಿಯಲ್ಲಿ ಇರುವು

ದನ್ನು ತಿಳಿಯದೆ, ಕಪಟವಾದ ಸಾಧುವೇಷವಂ ಹಾಕಿಕೊಂಡು ಅರಮನೆಗೆ ಬಂದರು. ಅವರು ಗೋಪೀಚಂದನವಂ ಲೇಪಿಸಿಕೊಂಡಿರುವರು. ದ್ವಾದಶನಾಮಂಗಳಂ ಹಾಕಿಕೊಂಡಿರುವರು ; ಕಂಠದಲ್ಲಿ ತುಳಸೀಮಾಲೆಯಂ ಧರಿಸಿಕೊಂಡಿರುವರು. ನೋಡಲು ಅತ್ಯಂತಪರಿಶುದ್ಧರಾಗಿ ಕಾಣುತ್ತಿರುವರು. ಮುನೀಶ್ವರನಿಗಿಂತಲೂ ಬಕದ ಧ್ಯಾನವು ಎಂತು ಹೆಚ್ಚಾಗಿಕಾಣುವುದೋ; ಹರಿದಾಸನಿಗಿಂತ ಗೋರಿಯುವನ ಗಾನವು ಎಂತು ಚೆನ್ನಾಗಿರುವುದೋ; ಬೆಳ್ಳಿಗಿಂತ ಕಪ್ಪೆಚಿಪ್ಪಿನ ಥಳಥಳ್ಯವು ಎಂತು ಶೋಭಿಸುವುದೋ ಅಂತು ಸಾಧುಗಳೆನಿಸಿಕೊಂಡಿರುವ ಕಳ್ಳರ ವೇಷವು ಮೇಲೆ ನೋಡಲು ಮನೋಹರವೆನಿಸಿದ್ದಿತು. ಹೃದಯದಲ್ಲಿ ಕಪಟವಿರುವುದು ಯಾರಿಗೂ ತಿಳಿಯದು. ಅವರಿಬ್ಬರೂ ರಾಜದರ್ಶನಕ್ಕೋಸ್ಕರ ಆತುರರಾಗಿ ಕೈಯಲ್ಲಿ ಜಪಸರವಂ ತಿರುಗಿಸುತ್ತ ಕೇವಲವಿರಕ್ತಭಾವವಂ ತೋರಿಸುತ್ತ ಮುಂದೆ ಹೊರಡಲು, ಸಿಂಹಾಸನಾರೂಢನಾಗಿದ್ದ ಜಯದೇವಕವೀಂದ್ರನು ಥಟ್ಟನೆ ದೃಗ್ಗೋಚರನಾದನು. ಒಡನೆಯೆ ಕಳ್ಳರ ಹೃದಯದಲ್ಲಿ ಚಿಂತಾಗ್ನಿ ಹೊತ್ತಿತು. ಪರಸ್ಪರವಾಗಿ ಸನ್ನೆಯಂ ಮಾಡುವರು. ಅಗ್ನಿಕುಂಡದಲ್ಲಿ ನಾವಾಗಿಯೇ ಬಿದ್ದೆವಲ್ಲಾ !!—ಎನ್ನುವರು. ಯಾವನ ಕೈಕಾಲುಗಳಂ ನಾವು ನಿರ್ದಯರಾಗಿ ಕಡಿದುಹಾಕಿದೆವೋ ಆ ಜಯದೇವನೇ ಇಲ್ಲಿ ಇರುವನು. ಅಹಹ! ನಮ್ಮ ಕಪಟವು ತತ್ಕಾಲದಲ್ಲಿಯೇ ಫಲಿಸಿತು. ಭಕ್ಷ್ಯಾಶೆಯಿಂದ ಹಾವಿನಬುಟ್ಟಿಯನ್ನು ಕಡಿಯುವುದಕ್ಕೆ ಹೋದ ಇಲಿಗೆ ಆ ಸರ್ಪದಿಂದ ದಂಶವುಂಟಾಗುವಂತೆ, ದ್ರವ್ಯಾಶೆಯಿಂದ ರಾಜನಬಳಿಗೆ ಬಂದ ನಮಗೆ ರಾಜನಿಂದಲೇ ಶಿಕ್ಷೆಯಾಗುವುದೆಂದು ತೋರುವುದು—ಎನ್ನುತ್ತ ಇದಿರಿಗೆ ಹೋಗಲು, ಜಯದೇವಕವೀಂದ್ರನು ಕಂಡು ಗುರುತುಹಿಡಿದನು. ಪರಸ್ಪರಕಟಾಕ್ಷಪ್ರಸಾರವಾಯಿತು. ಜಯದೇವಪಂಡಿತನು ಸರ್ವಭೂತಗಳಲ್ಲಿಯೂ ನಿರ್ವೈರನಾಗಿ ಸಹಜವಾದ ಸದ್ಭಾವದಿಂದ ಇರುವನು. ಕ್ಷಮೆಯೂ ಶಾಂತಿಯೂ ಆತನಲ್ಲಿ ನೆಲಸಿ ನಿಂದಿರುವುವು. ಶತ್ರುಮಿತ್ರರಂ ಸಮವಾಗಿ ಕಾಣುತ್ತ, ಪರರ ದೋಷಗಳನ್ನು ಎಣಿಸದೆ, ಸರ್ವವನ್ನೂ ಬ್ರಹ್ಮವನ್ನಾಗಿ ತಿಳಿಯುವುದೇ ಸಾಧುಗಳ ಲಕ್ಷಣ; ಮಕ್ಕಳು ತನ್ನವರಾಗಲಿ ಪರರವರಾಗಲಿ, ಅಳುತ್ತಲಿರುವುದಂ ಕಂಡರೆ, ಉಭಯರ ವಿಷಯದಲ್ಲಿಯೂ ಸಮವಾಗಿ ಕಳವಳಗೊಳ್ಳುವುದೇ ಸಾಧುಗಳ ನಡತೆ. ರಾಜರು ವಸ್ತ್ರಭೂಷಣಂಗಳಂ ಕೊಡುವರು ; ಬಡವರು ಪತ್ರಶಾಕಂಗಳಂ ಕೊಡುವರು. ಆಯೆರಡರಲ್ಲಿಯೂ ಸಮಾನವಾದ ಸಂತೋಷವೇ ಸಾಧುಗಳ ಲಕ್ಷಣ. ಅಂತಹ ಸಾಧುವರೇಣ್ಯನಾದ ಜಯದೇವಸ್ವಾಮಿಯು ಆಗ ಶತ್ರುಗಳು ಸಮೀಪಕ್ಕೆ ಬಂದುದಂ ನೋಡಿ, ಸಿಂಹಾಸನದಿಂದ ಥಟ್ಟನೆ ಧುಮುಕಿ ಅಡ್ಡಬಿದ್ದನು. ಆಗ ಅವರೂ ಜಯದೇವನಿಗೆ ಎರಗಿದರು. ಪದ್ಮಾವತೀರಮಣನು ಅವರನ್ನು ಆಲಿಂಗಿಸಿಕೊಂಡು, ಸೇವಕರಂ ಕುರಿತು—ಸಾಧುಗಳು ಮನೆಗೆ ಬಂದಿರುವರು ; ಇವರಿಗೆ ಸನ್ಮಾನವಂ ಮಾಡಬೇಕು—ಎಂದು ಮಹಾರಾಜನಿಗೆ ತಿಳಿಯಿಸಿ—ಎಂದು ಬೆಸಸಲು, ಸೇವಕರು ಥಟ್ಟನೆ

ಹೋಗಿ ರಾಯನಿಗೆ ಈ ವಿಷಯವಂ ಅರಿಕೆಮಾಡಿದರು. ರಾಯನು ಆಕ್ಷಣ ಬಂದು ಅವರಿಗೆ ನಮಸ್ಕಾರವಂಮಾಡಿ ಕರೆದುಕೊಂಡುಹೋಗಿ ಬಗೆಬಗೆಯ ಉಪಚಾರಗಳಿಂದ ಅವರನ್ನು ಪೂಜಿಸಿ, ಮೃಷ್ಟಾನ್ನವಂ ಭೋಜನಮಾಡಿಸಿ ಸುಖಾಸನದಲ್ಲಿ ಕುಳ್ಳಿರಿಸಿ, “ನಿಮ್ಮ ಇಚ್ಛೆಯಿರುವವರೆಗೂ ನನ್ನ ಮನೆಯಲ್ಲಿ ಸೇವೆಯಂ ಕೈಕೊಂಡು ನನ್ನನ್ನು ಅನುಗ್ರಹಿಸಬೇಕು” ಎಂದು ಬಿನ್ನವಿಸಿದನು. ಆ ವೇಷಧಾರಿಗಳು ಅದನಾಲಿಸಿ, ಅಂತು ಅವಶ್ಯವಾಗಲಿ-ಎಂದರು. ರಾತ್ರಿಯಲ್ಲಿ ತಮ್ಮೊಳುತಾವೇ-ಕೊನೆಗೆ ಗತಿಯೇನಾಗುವುದೋ ಉಪಚಾರಗಳಾವುವೂ ಹಿತವಾಗಿ ತೋರುವುದಿಲ್ಲ ; ನಾವು ಇಲ್ಲಿಗೆ ಬಂದು ಸೇರಿದುದು, ಗಿಳಿಯು ನೆಳಕೆಯ ಮೇಲೆ ಬಂದು ಕುಳಿತು ಪಂಜರದಲ್ಲಿ ಬೀಳುವಂತಾಯಿತು. ಉಂಡೆಯಂ ಕಂಡು ಮಾಂಸವೆಂದು ಭ್ರಮಿಸಿ ನುಂಗಿ ಕೊರಲಲ್ಲಿ ಮುಳ್ಳುನೆಟ್ಟು ಕೊಂಡು ಸಂಕಟಪಡುವ ಮೀನಿನಂತೆ ಈಗ ನಮ್ಮ ಸ್ಥಿತಿಯಿರುವುದು. ಶೂದ್ರನು ಕುರಿಯನ್ನು ಬಗೆವಗೆಯಿಂದ ಸಾಕಿ ಕೊನೆಗೆ ಶಸ್ತ್ರದಿಂ ಘಾತಮಾಡುವಂತೆ, ರಾಜನು ಪರಿಪರಿಯಿಂದ ನಮ್ಮನ್ನು ಪರಿಪೋಷಿಸಿ ವಧೆಮಾಡಿಸುವನೋ ಏನೋ—ಎಂದು ಹಲವುಬಗೆಯಿಂದ ಚಿಂತಿಸಿ, ಸರ್ವಕಾಲದಲ್ಲಿಯೂ ಕೊರಗುತ್ತ ಕ್ಷಯರೋಗಹತ್ತಿದಂತೆ ಶರೀರದಲ್ಲಿ ಕೃಶರಾಗುತಬಂದರು.

ಬಳಿಕ ಬಂದುದಿನ ರಾಯನು ಜಯದೇವಸ್ವಾಮಿಯಂ ಕುರಿತು—ಸ್ವಾಮಿ! ತಮ್ಮ ಸನ್ನಿಧಿಯಲ್ಲಿ ನನ್ನ ಬಿನ್ನಪವೊಂದಿರುವುದು. ಮನೆಗೆ ಸಾಧುಗಳು ಯಾರಾದರೂ ಬಂದರೆ, ತಾವು ದೂರದಿಂದಲೇ ನಮಸ್ಕಾರಮಾಡುವಿರಿ ; ಈಗ ಬಂದಿರುವ ಸಾಧುಗಳಿಗೆ ದೀರ್ಘದಂಡದಂತೆ ಭೂಮಿಯಲ್ಲಿ ಅಡ್ಡಬಿದ್ದಿರಿ. ನಾನು ನಾನಾವಿಧವಾದ ಉಪಚಾರಗಳನ್ನು ಮಾಡಿಸುತ್ತಿರುವೆನು. ಆದರೂ ಈ ಸಾಧುಗಳಿಬ್ಬರೂ ದಿನದಿನಕ್ಕೆ ಶರೀರದಲ್ಲಿ ಕೃಶರಾಗುತ್ತಿರುವರು ; ಇದಕ್ಕೆ ಕಾರಣವೇನು ? ಎನಲು, ಅದಕ್ಕೆ ಜಯದೇವನು ರಾಯನಂ ಕುರಿತು—ಎಲೈ ರಾಯನೆ ! ಸಾಧುಗಳಿಗೆ ವಿಷಯಗಳು ರುಚಿಸವು ; ಕೇವಲವಿರಕ್ತರಿಗೆ ಮಮತೆ ವಿಷಮಯವಾಗಿ ತೋರುವುದು. ಇಲ್ಲಿಗೆ ಸಾಧುಗಳನೇಕರು ಬರುತ್ತಿರುವರು ; ಇವರು ಅವರೆಲ್ಲರಿಗಿಂತಲೂ ವಿರಕ್ತರು. ನಿನ್ನ ಪುಣ್ಯವಿಶೇಷವು ಪರಿಪಕ್ವವಾದುದರಿಂದ ಇಲ್ಲಿ ನಿಂತರು. ಇವರು ಪ್ರಯಾಣಮಾಡಬೇಕೆಂದರೆ, ಅನುಜ್ಞೆಯಂ ಕೊಡು. ಎಷ್ಟು ದ್ರವ್ಯವನ್ನು ಅಪೇಕ್ಷಿಸಿದರೂ ಸಮರ್ಪಿಸಿ ಕಳುಹಿಸಿ ಕೊಡು—ಎನಲು, ರಾಜನು ಅದೇರೀತಿಯಲ್ಲಿ ನೆರವೇರಿಸುವೆನೆಂದು ನಮಸ್ಕರಿಸಿ ಮುಂದಣ ತನ್ನ ಕಾರ್ಯಕ್ಕೆ ಹೋದನು.

ಬಳಿಕ ಬಂದುದಿನ ಆ ವೇಷಧಾರಿಗಳು ರಾಜನಬಳಿಗೆ ಬಂದು—ನಾವು ತೀರ್ಥವಾಸಿಗಳು ; ಬಹುದಿವಸ ಬಂದುಕಡೆಯಲ್ಲಿಯೇ ನಿಲ್ಲತಕ್ಕವರಲ್ಲ ; ಹೊರಡಲು ನಮಗೆ ಅನುಜ್ಞೆಯಂ ಕೊಡಬೇಕು—ಎನಲು, ರಾಜನು ನಿಮಗೆ ಏನಪೇಕ್ಷೆಯಿರುವುದು ?—

ಎಂದು ಕೇಳಿದನು. ಅದಕ್ಕೆ ಆ ಕಪಟಿಗಳು ನಮಗೆ ಎರಡುರಥದಲ್ಲಿ ದ್ರವ್ಯವಂ ಹೇರಿಸಿ ಕಳುಹಿಸಿಕೊಡಬೇಕು–ಎನಲು, ರಾಜನು–ನಿಮ್ಮ ಅಪೇಕ್ಷೆಯನ್ನು ಪೂರೈಸುವೆನು–ಎಂದು ವಸ್ತ್ರಭೂಷಣಾದಿಗಳಂ ಸಮರ್ಪಿಸಿ, ಅವರ ಇಷ್ಟದಂತೆ ಎರಡು ರಥದಲ್ಲಿ ದ್ರವ್ಯವಂ ತುಂಬಿಸಿ ಸಂಗಡ ದೂತರಂ ನಿಯಮಿಸಿ ಕಳುಹಿಸಿಕೊಟ್ಟನು.

ಆ ಕಳ್ಳರು ಜಯದೇವಕವಿವರನ ಅನುಜ್ಞೆಯನ್ನು ಪಡೆದು ತ್ವರೆಯಿಂದ ಪ್ರಯಾಣವಮಾಡಿದರು. ದೂರವಾದ ಅರಣ್ಯವನ್ನು ಸೇರಿದ ಬಳಿಕ ದೂತರು ಕೈ ಮುಗಿದುಕೊಂಡು, ಅತ್ಯಂತವಿನಯದಿಂದ ಅವರಿಬ್ಬರನ್ನೂ ಕುರಿತು–ಎಲೈ ಸಾಧು ವರೇಣ್ಯರೇ! ನಮ್ಮ ಮಹಾರಾಜನ ಮಂದಿರಕ್ಕೆ ನಿತ್ಯವೂ ಅನೇಕರಾದ ಸಾಧುಗಳು ಬರುತ್ತಿರುವರು; ಅವರೆಲ್ಲರಿಗಿಂತಲೂ ನಿಮ್ಮ ವಿಷಯದಲ್ಲಿ ಆ ಗುರುಗಳಿಗೆ ಪ್ರೀತಿ ವಿಶೇಷವುಂಟು. ಇದಕ್ಕೆ ಕಾರಣವೇನಿರಬಹುದು?–ಎಂದು ಬಿನ್ನವಿಸಿಕೊಳ್ಳಲು, ಅದಂ ಕೇಳಿ, ವೇಷಧಾರಿಗಳು ದೂತರಂ ಕುರಿತು–ಎಲೆಸೇವಕರಿರಾ! ಹಿಂದೆ ಪೂರ್ವಾಶ್ರಮದಲ್ಲಿ ನಾವೂ ನಿಮ್ಮ ರಾಜಗುರುವೂ ದುಷ್ಟನಾದ ಒಬ್ಬರಸನ ಬಳಿಯಲ್ಲಿದ್ದೆವು. ಆತನು ಅರಸನ ಸನ್ನಿಧಿಯಲ್ಲಿ ಮುಖ್ಯನಾಗಿದ್ದನು. ನಾವು ಕೊಲೆಗಾರರಾಗಿ ಜೀವನ ಮಾಡುತ್ತ ಇದ್ದೆವು. ಆತನು ಏನೋ ಒಂದು ಮಹಾಪರಾಧವನ್ನು ಮಾಡಿದುದರಿಂದ ಅರಸನು ಕೋಪಗೊಂಡು–ಇವನನ್ನು ಅರಣ್ಯಕ್ಕೆ ಕರೆದುಕೊಂಡುಹೋಗಿ ಇವನ ಶಿರಸ್ಸಂ ಛೇದಿಸಿ–ಎಂದು ನಮಗೆ ಅಪ್ಪಣೆಯಂ ಮಾಡಿದನು.

ಬಳಿಕ ನಾವು ಅರಣ್ಯಕ್ಕೆ ಕರೆದುಕೊಂಡು ಹೋಗಿ, ದಯದಿಂದ ಪ್ರಾಣಘಾತವಂ ಮಾಡದೆ ಕೈಕಾಲುಗಳನ್ನು–ಕಡಿದು ಸಮೀಪದಲ್ಲಿ ಇದ್ದ ಒಂದು ಹಗೇವಿನಲ್ಲಿ ತಳ್ಳಿಬಿಟ್ಟು ಹಿಂದಿರುಗಿ ಪಟ್ಟಣಕ್ಕೆ ಬಂದು ಸೇರಿದೆವು.

ಕೆಲವುಕಾಲ ಕಳೆದ ಬಳಿಕ ನಮ್ಮ ಸ್ಥಿತಿಯಿಂದ ಮನಸ್ಸಿನಲ್ಲಿ ಪಶ್ಚಾತ್ತಾಪವುಂಟಾಗಿ ನಾವೂ ವಿರಕ್ತರಾದೆವು; ಅಂದಿನಿಂದ ರಾಜಸೇವೆಯಂ ಬಿಟ್ಟು ವಿಷ್ಣುಭಕ್ತರಾಗಿ ತೀರ್ಥಾಟನೆಯಂ ಮಾಡುತ್ತ ಇರುವೆವು; ಮಾರ್ಗವಶದಿಂದ ನಿಮ್ಮ ಊರಿಗೆ ಬಂದೆವು. ಅರಮನೆಗೆ ಬರುವುದೂ, ಪರಸ್ಪರಸಂದರ್ಶನವಾಯಿತು. ನಾವು ಮಾಡಿದ್ದ ಜೀವದಾನವನ್ನು ನೆನೆದು ಕೃತಜ್ಞತೆಯಿಂದ ಜಯದೇವನು ನಮಗೆ ಥಟ್ಟನೆ ಅಡ್ಡಬಿದ್ದು, ರಾಜನಲ್ಲಿ ನಮ್ಮನ್ನು ಪ್ರಶಂಸಿಸಿ, ವಿಶೇಷದಿಂದ ನಮ್ಮ ಸೇವೆಯಂ ಮಾಡಿಸಿದನು–ಎಂದು ನುಡಿದರು. ಪ್ರಪಂಚದಲ್ಲಿ ಅಸತ್ಯಕ್ಕಿಂತಲೂ ದೊಡ್ಡದಾದ ಪಾಪವು ಯಾವುದೂ ಇಲ್ಲ. ಆದುದರಿಂದ ಆ ದುರಾತ್ಮರು ಇಂತಹ ಅಸತ್ಯದ ಮಾತನ್ನು ನುಡಿದೊಡನೆಯೇ ಭೂಮಿಯು ಗಡಗಡನೆ ನಡುಗಿ ಇಬ್ಭಾಗವಾಗಿ ಬಾಯ್ಬಿಡಲು, ಅದರಲ್ಲಿ ಅವರು ಇಳಿದುಹೋದರು. ಅದಂ ನೋಡಿ ಸೇವಕರಿಗೆ ಅತ್ಯಾಶ್ಚರ್ಯವಾಯಿತು. ಇಂತು ಘೋರದ ಅನರ್ಥವುಂಟಾಯಿತು; ರಾಜನು ನಮಗೆ ಸುಶಿಕ್ಷೆಯಂ ಮಾಡಿಸುವನೋ–

ಎಂದು ಭಯಪಡುತ್ತ ಆ ಸೇವಕರು ಪರಸ್ಪರವಾಗಿ ಆಲೋಚನೆಯಂ ಮಾಡುತ್ತ, ಏನಾದರೂ ಆಗಲಿ; ಯಥಾರ್ಥವಂ ಹೇಳಬೇಕು—ಎಂದು ನಿಶ್ಚಯಿಸಿ, ಪಟ್ಟಣಕ್ಕೆ ಹಿಂದಿರುಗಿ ಜಯದೇವಕವೀಂದ್ರನ ಬಳಿಗೆ ಬಂದು ನಡೆದುದೆಲ್ಲವನ್ನೂ ಬಿನ್ನವಿಸಿದರು. ಅದನ್ನು ಕೇಳಿ ಜಯದೇವಪಂಡಿತನು ಮನದಲ್ಲಿ ಸಂತಾಪಗೊಂಡು ಕಣ್ಬನಿದುಂಬಿ, ಶ್ರೀಕೃಷ್ಣನೆ! ಪತಿತಪಾವನನೆ! ಭಕ್ತವತ್ಸಲನೆ! ರುಕ್ಮಿಣೀರಮಣನೆ! ಜಗಜ್ಜೀವನನೇ! ನನ್ನ ಶತ್ರುಗಳಿಗೆ ಏಕೆ ಅಧೋಗತಿಯಂ ಕೊಟ್ಟೆ? ನಿನ್ನ ಶತ್ರುಗಳಾದ ಕಂಸಚಾಣೂರಾದಿಗಳಿಗೆ ಮೋಕ್ಷವನ್ನು ಕೊಡಲಿಲ್ಲವೇ? ನನ್ನ ಶತ್ರುಗಳನ್ನೇಕೆ ಅಧೋಗತಿಯನ್ನೈದಿಸಿದೆ? ರಾವಣನು ನಿನ್ನ ವಿರೋಧಿ; ಆದರೂ ಅವನಿಗೆ ಸಾಯುಜ್ಯವಂ ಕೊಟ್ಟೆ? ನನ್ನ ವಿರೋಧಿಗಳಿಗೆ ಏಕೆ ಇಂತಹ ದುರ್ಗತಿಯಂ ನೀಡಿದೆ? ಶಿಶುಪಾಲನು ಮಹಾಪರಾಧಿ; ಆದರೂ ಅವನಲ್ಲಿ ಅನುಗ್ರಹವಂ ಮಾಡಿದೆ. ಎಲೆದಯಾನಿಧಿ! ನನ್ನ ಶತ್ರುಗಳ ವಿಷಯದಲ್ಲಿ ನೀನು ಇಂತು ಆಗ್ರಹವಂ ಮಾಡಬಹುದೆ?—ಎಂದು ಭಗವಂತನನ್ನು ಕುರಿತು ಮೊರೆಯಿಡಲು, ಕರುಣಾನಿಧಿಯಾದ ಪುಂಡರೀಕಾಕ್ಷನು ಭಕ್ತನ ಕರುಣವಚನವಂ ಕೇಳಿ ಚತುರ್ಭುಜನಾಗಿ ಸಗುಣರೂಪದಿಂದ ಥಟ್ಟನೆ ಬಂದು ಆತನಿಗೆ ಪ್ರಸನ್ನನಾದನು. ಒಡನೆಯೆ ಜಯದೇವವರ್ಯನಿಗೆ ಪೂರ್ವದಂತೆ ಕೈಕಾಲುಗಳು ಕೂಡಿಕೊಂಡುವು. ಅಧೋಗತಿಯನ್ನು ಹೊಂದಿದ್ದ ಆ ವೇಷಧಾರಿಗಳು ಥಟ್ಟನೆ ವಿಮಾನವನ್ನೇರಿ ಸ್ವರ್ಗಕ್ಕೆ ಹೋದರು. ಭಕ್ತರ ಮಹಿಮೆಯು ದೊಡ್ಡದು. ಬ್ರಹ್ಮಾದಿಗಳಿಗೂ ತಿಳಿಯದು. ಭಗವಂತನು ಜಯದೇವವರ್ಯನನ್ನು ಕುರಿತು, ಎಲೆಜಯದೇವನೆ! ನೀನು ಧನ್ಯ; ಭಕ್ತಿ ಕ್ಷಮೆ ಶಮ ದಮವೆಂಬಿವು ನಿನ್ನಲ್ಲಿಯೇ ಪರಿಪೂರ್ಣವಾಗಿರುವುವು. ಯಾರಿಗೆ ಶತ್ರುಮಿತ್ರರು ಸಮರೋ ಅವರಿಗೆ ನಾನು ಅಧೀನನು—ಎಂದು ನುಡಿದು ಆಕ್ಷಣದಲ್ಲಿ ಅಂತರ್ಹಿತನಾದನು. ಜಯದೇವಕವೀಂದ್ರನಿಗೆ ಕೈಕಾಲುಗಳು ಬಂದುದಂ ನೋಡಿ ರಾಯನು ಆಶ್ಚರ್ಯವಂತಾಳಿ ಬದ್ಧಾಂಜಲಿಪುಟನಾಗಿ ಹಿಂದಣ ಸಂಗತಿಯನ್ನು ಬೆಸಗೊಂಡನು. ಜಯದೇವನು ನಡೆದುದನೆಲ್ಲವಂ ತಿಳಿಯಿಸಿ ರಾಯನ ಮನಸ್ಸಿಗೆ ಸಂತೋಷವನ್ನುಂಟುಮಾಡಿ ಜಯಜಯಧ್ವನಿಯೊಡನೆ ಭಗವನ್ನಾಮಕೀರ್ತನೆಯಂ ಮಾಡುತ್ತಿದ್ದನು.

ರಾಯನು ಪಲ್ಲಕ್ಕಿಯಂ ಕಳುಹಿಸಿ, ಇಂದಿರಾವತಾರವೆನಿಸಿದ ಜಯದೇವಪತ್ನಿಯಾದ ಪದ್ಮಾವತಿಯಂ ಕರೆಯಿಸಿ, ವಸ್ತ್ರಭೂಷಣಾದಿಗಳಿಂದ ಸನ್ಮಾನಿಸಿ, ಭಕ್ತಿವಿಶೇಷದಿಂದ ಆ ದಂಪತಿಗಳಿಬ್ಬರಿಗೂ ಸಾಷ್ಟಾಂಗನಮಸ್ಕಾರವೆಸಗಿ ಉಪಚಾರವಮಾಡಿದನು. ಮತ್ತು ತನ್ನ ಕಾಂತೆಯಿದ್ದ ಸ್ಥಳಕ್ಕೆ ಹೋಗಿ, ಏಕಾಂತದಲ್ಲಿ ಆಕೆಯಂ ಕುರಿತು, ಜಯದೇವಸ್ವಾಮಿಯ ರಾಣಿಯಾದ ಪದ್ಮಾವತಿಯೆಂಬಾಕೆಯು ಬಂದಿರುವಳು; ಈಕೆ ನಮಗೆ ಗುರುಪತ್ನಿಯಾದುದರಿಂದ ತಾಯಿಗೆ ಸಮಾನೆ, ಈಕೆಯ ಸೇವೆಯಂ ಭಕ್ತಿಯಿಂದ ನೀನೇ ಮಾಡಬೇಕು—ಎಂದು ಅಪ್ಪಣೆಮಾಡಲು, ಆಕೆಯು ಪತಿಯ ಆಜ್ಞಾವಚ

ನವಂ ಸಿರದಲ್ಲಿ ವಹಿಸಿ, ಅವಶ್ಯವಾಗಿ ಮಾಡುವೆನೆಂದು ಅಂಗೀಕರಿಸಿದಳು. ರಾಜನು ಸೇವಕರನ್ನು ದೂರಮಾಡಿ, ನಿತ್ಯವೂ ಜಯದೇವಸ್ವಾಮಿಯ ಸೇವೆಯಂ ತಾನೇ ಮಾಡುತ್ತ ಇದ್ದನು.

ಇಂತಿರಲು ಒಂದುದಿವಸ, ಸದ್ಗುಣರಾಶಿಯಾದ ಪದ್ಮಾವತಿಯು, ನದಿಗಳಲ್ಲಿ ಗಂಗೆಯಂತೆಯೂ, ಸತಿಯರಲ್ಲಿ ಸಾವಿತ್ರಿಯಂತೆಯೂ, ಸಕಲಮಂತ್ರಗಳಲ್ಲಿ ಗಾಯತ್ರಿಯಂತೆಯೂ, ಸುಗಂಧದಲ್ಲಿ ಕಸ್ತೂರಿಯಂತೆಯೂ, ಅಲಂಕಾರಗಳಲ್ಲಿ ಮಂಗಳಸೂತ್ರದಂತೆಯೂ, ಸುತ್ತಲೂ ನೆರೆದಿದ್ದ ರಾಜಸ್ತ್ರೀಯರಲ್ಲಿ ಮೇಲಾಗಿ ಶೋಭಿಸುತ್ತ, ಉನ್ನತವಾದ ರತ್ನಾಸನದಲ್ಲಿ ಕುಳಿತುಕೊಂಡಿದ್ದಳು. ಆಗ ಆಕಸ್ಮಿಕವಾಗಿ ದೂತನು ಬಂದು ರಾಣಿಯನ್ನು ಕುರಿತು, ತಮ್ಮ ಬಂಧುವೊಬ್ಬನು ಪರಲೋಕವನ್ನೈದಿದನು ; ಆತನ ಪತ್ನಿಯು ಪತಿಯಂ ಧ್ಯಾನಿಸುತ್ತ ಸಹಗಮನವಂ ಮಾಡಿದಳು—ಎಂದು ಅರಿಕೆಮಾಡಿದನು. ಇದಂ ಕೇಳಿ, ಅಲ್ಲಿ ನೆರೆದಿದ್ದ ರಾಜಸ್ತ್ರೀಯರೆಲ್ಲರೂ ವ್ಯಸನವನ್ನು ತಾಳಿದರು. ಪದ್ಮಾವತಿಯು ಸ್ವಸ್ಥೆಯಾಗಿಯೇ ಕುಳಿತಿದ್ದಳು. ಇದಂ ಕಂಡು ಎಲ್ಲರಿಗೂ ವಿಸ್ಮಯವಾಯಿತು. ರಾಜ್ಞಿಯು ಬದ್ಧಾಂಜಲಿಪುಟೆಯಾಗಿ ಪದ್ಮಾವತಿಯಂ ಕುರಿತು—ತಾಯೆ ! ಆ ಸತಿ ನಿಜಪತಿಯನ್ನು ಧ್ಯಾನಿಸುತ್ತ ಸಹಗಮನವಂ ಮಾಡಿದಳೆಂಬುದಂ ಕೇಳಿ, ನಿಮಗೇತಕೆ ಆಶ್ಚರ್ಯವಾಗಲಿಲ್ಲ ? ಸಹಗಮನವೆಂಬುದು ಅಸಾಧಾರಣವಲ್ಲವೆ? ಲೋಕದಲ್ಲಿ ಪತಿವ್ರತೆಯಾದವಳು ಮಮತೆಯಂ ಬಿಟ್ಟು ಪತಿಭಕ್ತಿಯಿಂದ ಸಹಗಮನವಂ ಮಾಡಿದರೆ, ಆತನೆ ಏಳುಜನ್ಮಗಳಲ್ಲಿಯೂ ಪತಿಯಾಗುವನೆಂದು ದೊಡ್ಡವರು ಹೇಳುವರು—ಎಂದು ಹೇಳಲು, ಪದ್ಮಾವತಿ ಆಕೆಯ ಮಾತಂಕೇಳಿ, ಸಹಗಮನಮಾಡುವುದರಿಂದೇನು? ಮುಂಚೆ ಹೊರಟುಹೋದ ಪತಿಯು ಇವಳಿಗೆ ಎಂದಿಗೆ ದೊರೆಯುವನು ? ಬಹುಕಾಲ ಕಳೆದಮೇಲೆ ಇವಳು ಹೋದರೆ, ಸಹಗಮನವೆಂತಾಯಿತು ? ಸೂರ್ಯನು ಅಸ್ತನಾಗಲು ಕಿರಣಗಳು ಸಂಗಡವೇ ಹೋಗುವಂತೆ, ಪತಿಯು ಮೃತನಾಗಲು, ಸತಿಯ ಪ್ರಾಣಗಳು ಥಟ್ಟನೆ ಹೋಗಬೇಕು—ಎಂದು ನುಡಿದಳು. ಈನುಡಿ ಅಲ್ಲಿ ನೆರೆದಿದ್ದ ಅವಿಶ್ವಾಸಿನಿಯರಾದ ಮೂಢಮತಿಯರೆಲ್ಲರಿಗೂ ಅಸತ್ಯವಾಗಿ ತೋರಿತು. ರಾಜ್ಞಿಯು ಅತ್ಯಾಶ್ಚರ್ಯಗೊಂಡಳು. ಇದು ಸಲ್ಲದ ನುಡಿಯೆಂದೇ ತಿಳಿದಳು. ಅನುಭವವಿಲ್ಲದ ಬ್ರಹ್ಮಜ್ಞಾನವೂ, ಪ್ರಾಣಂಗಳಿಲ್ಲದ ಶರೀರವೂ, ಈಶ್ವರಾನುಗ್ರಹವಿಲ್ಲದ ಮಾತೂ, ಯಜಮಾನನಿಲ್ಲದ ಮನೆಯೂ, ಮೂಗಿಲ್ಲದ ಮುಖವೂ, ಮಹತ್ತ್ವವಿಲ್ಲದ ಆಳ್ವಿಕೆಯೂ, ಯೌವನವಿಲ್ಲದ ರೂಪೂ, ಔದಾರ್ಯವಿಲ್ಲದ ಲೋಭಿಯ ಪ್ರೇಮವೂ, ವೃಕ್ಷಗಳಿಲ್ಲದ ಗ್ರಾಮವೂ, ಭಕ್ತಜನವಿಲ್ಲದ ದೇವಾಲಯವೂ, ಸೈನ್ಯವಿಲ್ಲದ ರಾಜ್ಯವೂ, ಶುದ್ಧಭಾವವಿಲ್ಲದ ಸಾಧನವೂ ಎಂತು ವ್ಯರ್ಥವೋ, ಅಂತು ಸುಜ್ಞಾನವಿಲ್ಲದ ಆ ರಾಜ್ಞಿಯ ದೊಡ್ಡತನವು ವ್ಯರ್ಥವೆನಿಸಿತು. ಪದ್ಮಾವತಿಯ ನುಡಿಯನ್ನು ಅಸತ್ಯವೆಂದು ತಿಳಿದು, ಆಕೆಯು ಪ್ರಧಾನನಂ ಕರೆಯಿಸಿ, ಅವನೊಡನೆ ಆಲೋಚನೆಯಂಮಾಡಿ, ನನಗೋಸ್ಕರ ನೀನು

ಸುಳ್ಳನ್ನು ಹೇಳು ; ಜಯದೇವಸ್ವಾಮಿ ಸತ್ತನೆಂದು ಎಂತಾದರೂ ಸುದ್ದಿಯನ್ನು ಕಳು
ಹಿಸು ; ನಡೆ—ಎಂದು ಅವನಿಗೆ ಅಪ್ಪಣೆಯಂ ಮಾಡಿದಳು.

ಬಳಿಕ ಒಂದುದಿವಸ ರಾಯನು ವನವಿಹಾರಕ್ಕೋಸ್ಕರ ಜಯದೇವಸ್ವಾಮಿ
ಯನ್ನೂ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಅರಣ್ಯಕ್ಕೆ ಹೋದನು. ಪ್ರಧಾನನು ಅದೇ
ಸಮಯದಲ್ಲಿ, "ಹುಲಿಯು ಕಾಡಿನಲ್ಲಿ ಜಯದೇವಸ್ವಾಮಿಯನ್ನು ಕೊಂದಿತು" ಎಂಬ
ಸುದ್ದಿಯಂ ಒಬ್ಬ ದೂತನ ಮುಖದಿಂದ ಕಳುಹಿಸಿಕೊಟ್ಟನು. ದೂತನು ಅರಮನೆಗೆ
ಬಂದು, ಜಯದೇವವರ್ಯನ ಮರಣವಾರ್ತೆಯನ್ನು ತಿಳಿಯಿಸಿ, ತಾನು ತಂದಿದ್ದ ರಕ್ತ
ಮಯವಾದ ವಸ್ತ್ರಗಳನ್ನು ತೋರಿಸಿದನು. ರಾಜ್ಞಿಯು ಕೇಳಿ, ಕಪಟಭಾವದಿಂದ
ವ್ಯಸನವನ್ನು ತಾಳಿ ಅಳುತ್ತ, ಪದ್ಮಾವತಿಯ ಬಳಿಗೆ ಓಡಿಬಂದು, ತಾಯೆ! ಅನರ್ಥ
ವಾಯಿತು; ಕಾಡಿನಲ್ಲಿ ಹುಲಿಯು ಜಯದೇವಸ್ವಾಮಿಯಂ ಕೊಂದುಬಿಟ್ಟಿತು!—
ಎಂದಳು, ಪದ್ಮಾವತಿಯು ರಾಣಿಯಂ ಕುರಿತು, ಈ ಮಾತು ಸತ್ಯವೇ? ಸತ್ಯವೇ?
—ಎಂದು ಕೇಳಿದಳು. ಅದಕ್ಕೆ ರಾಣಿಯು—ಇದೋ ಇಲ್ಲಿಬಂದಿರುವ ದೂತನೇ ಸುದ್ದಿ
ಯಂ ಹೇಳಿದನು ; ರಕ್ತದ ಬಟ್ಟೆಗಳನ್ನೂ ತಂದು ತೋರಿದನು ; ಇದು ಸತ್ಯ—ಎಂದು
ನುಡಿಯಲು, ಪೂರ್ಣಿಮಾಚಂದ್ರನು ಅಸ್ತನಾಗಲು, ಅವನ ಕಳೆಗಳು ಎಂತು ಕಾಣಿಸದೆ
ಹೋಗುವುವೋ ; ಪುಷ್ಪವು ಕೈಯಿಂದ ನುಲಿಯಲು, ಆಕ್ಷಣವೇ ಅದರ ಸೌರಭ್ಯ
ಸೌಕುಮಾರ್ಯಂಗಳೆಂತು ನಷ್ಟವಾಗುವುವೋ ; ಸೂರ್ಯನು ಅಸ್ತಂಗತನಾಗಲು, ಅವನ
ಕಿರಣಗಳು ಎಂತು ಒಡನೆಯೇ ಹೋಗುವುವೋ ; ದೀಪವು ನಂದಲು, ಅದರ ಪ್ರಭೆ
ಗಳು ಎಂತು ಲೋಪವನ್ನು ಹೊಂದುವುವೋ ; ಅಂತು ಪದ್ಮಾವತಿಯು, ತನ್ನ ಪತಿಯು
ಮೃತನಾದನೆಂಬುದಂ ಕೇಳಲು, ಒಡನೆಯೆ ಆಕೆಯ ಪ್ರಾಣಗಳು ತಮಗೆ ತಾವೇ
ಹೊರಟುಹೋದುವು.

ರಾಯನು ಅಷ್ಟರಲ್ಲಿ ಜಯದೇವಸಮೇತನಾಗಿ ಊರಿಗೆ ಬಂದನು. ಅನರ್ಥ
ವಾದುದಂ ಕಿವಿಯಲ್ಲಿ ಕೇಳಿದನು. ಪ್ರಧಾನನಂ ವಿಚಾರಿಸಿ, ನಡೆದ ಸಕಲವೃತ್ತಾಂತ
ವನ್ನೂ ತಿಳಿದು, ಆಗಲೇ ತನ್ನ ಪತ್ನಿಯಂ ಸಂಹರಿಸಬೇಕೆಂದು ಹೊರಟು, ಹಾಗೆಯೇ
ಮನದಲ್ಲಿ ವಿಚಾರದಿಂದ ವಿವೇಕವನ್ನು ತಂದುಕೊಂಡು, ಸ್ತ್ರೀವಧೆಗೆ ಹೆದರಿ ಸುಮ್ಮ
ನಾಗಿ, ಅಗ್ನಿಯಲ್ಲಿ ತನ್ನ ದೇಹವಂ ನೀಗಬೇಕೆಂದು ಆಲೋಚಿಸಿ, ಊರ ಹೊರಗೆ
ಅಗ್ನಿಯನ್ನು ಪ್ರದೀಪ್ತವನ್ನಾಗಿ ಮಾಡಿಸಿ, ಜಯದೇವಸ್ವಾಮಿಯ ಬಳಿಗೆ ಬಂದು,
ಆತನಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ, ಸ್ವಾಮಿ! ನನ್ನಿಂದ ಮಹಾನರ್ಥವಾಯಿತು;
ನನಗೆ ಪ್ರಾಣತ್ಯಾಗಕ್ಕೆ ಅನುಜ್ಞೆಯಂ ಕೊಡಬೇಕೆಂದು ಬೇಡಿದನು. ಜಯದೇವನು
ಅಂತರಸಾಕ್ಷಿಪೂರ್ಣನಾದುದರಿಂದ ರಾಯನಿಗೆ ಪ್ರಾಣತ್ಯಾಗವಮಾಡಬೇಡವೆಂದು ಸಮಾ
ಧಾನಮಾಡಿ, ಶವವಾಗಿ ಬಿದ್ದಿರುವ ತನ್ನ ಪತ್ನಿಯ ಸಮೀಪಕ್ಕೆ ಬಂದು ತಾಳವನ್ನು

ಹಾಕುತ್ತ ತಂಬೂರಿಯಂ ಮೀಟುತ್ತ ತಾನು ಮಾಡಿರುವ ಅಷ್ಟಪದಿಗಳನ್ನು ಪಾಡಲು ಆರಂಭಿಸಿದನು. ಅದೆಂತೆನೆ :—

ಭಗವದ್ದಶಾವತಾರವರ್ಣನಂ.

॥ ಪ್ರಥಮಾಷ್ಟಪದೀ ॥

(ಮಾಳವರಾಗೇಣ ಗೀಯತೇ)

ಪ್ರಳಯಪಯೋಧಿಜಲೇ ಧೃತವಾನಸಿ ವೇದಂ ।
ವಿಹಿತವಹಿತ್ರಚರಿತ್ರಮಖೇದಂ ॥
ಕೇಶವ ಧೃತಮೀನಶರೀರ ಜಯ ಜಗದೀಶ ಹರೇ ॥ ॥ ೧ ॥

ಕ್ಷಿತಿರತಿವಿಪುಲತರೇ ತವ ತಿಷ್ಠತಿ ಪೃಷ್ಠೇ ।
ಧರಣಿಧರಣಕಿಣಚಕ್ರಗರಿಷ್ಠೇ ॥
ಕೇಶವ ಧೃತಕಚ್ಛಪರೂಪ ಜಯ ಜಗದೀಶ ಹರೇ ॥ ೨ ॥

ವಸತಿ ದಶನಶಿಖರೇ ಧರಣೀ ತವ ಲಗ್ನಾ ।
ಶಶಿನಿ ಕಲಂಕಕಲೇವ ನಿಮಗ್ನಾ ।
ಕೇಶವ ಧೃತಸೂಕರರೂಪ ಜಯ ಜಗದೀಶ ಹರೇ ॥ ॥ ೩ ॥

ತವ ಕರಕಮಲವರೇ ನಖಮದ್ಭುತಶೃಂಗಂ ।
ದಳಿತಹಿರಣ್ಯಕಶಿಪುತನುಭೃಂಗಂ ॥
ಕೇಶವ ಧೃತನರಹರಿರೂಪ ಜಯ ಜಗದೀಶ ಹರೇ ॥ ೪ ॥

ಛಲಯಸಿ ವಿಕ್ರಮಣೇ ಬಲಿಮದ್ಭುತವಾಮನೆ ।
ಪದನಖನೀರಜನಿತಜನಪಾವನ ॥
ಕೇಶವ ಧೃತವಾಮನರೂಪ ಜಯಜಗದೀಶ ಹರೇ ॥ ೫ ॥

ಕ್ಷತ್ರಿಯರುಧಿರಮಯೇ ಜಗದಪಗತಪಾಪಂ ।
ಸ್ನಪಯಸಿ ಪಯಸಿ ಶಮಿತಭವತಾಪಂ ॥
ಕೇಶವ ಧೃತಭೃಗುಪತಿರೂಪ ಜಯ ಜಗದೀಶ ಹರೇ ॥ ೬ ॥

ವಿತರಸಿ ದಿಕ್ಷು ರಣೇ ದಿಕ್ಪತಿಕಮನೀಯಂ ।
ದಶಮುಖಮೌಳಿಬಲಿಂ ರಮಣೀಯಂ ॥
ಕೇಶವ ಧೃತರಘುಪತಿರೂಪ ಜಯ ಜಗದೀಶ ಹರೇ ॥ ೭ ॥

ವಹಸಿ ವಪುಷಿ ವಿಶದೇ ವಸನಂ ಜಲದಾಭಂ ।
ಹಲಹತಿಭೀತಿಮಿಳಿತಯಮುನಾಭಂ ॥
ಕೇಶವ ಧೃತಹಲಧರರೂಪ ಜಯ ಜಗದೀಶ ಹರೇ ॥ ೮ ॥

ನಿಂದಸಿ ಯಜ್ಞವಿಧೇರಹಹ ಶ್ರುತಿಜಾತಂ |
ಸದಯಹೃದಯ ದರ್ಶಿತಪಶುಘಾತಂ ||
ಕೇಶವ ಧೃತಬುದ್ಧಶರೀರ ಜಯ ಜಗದೀಶ ಹರೇ || ೯ ||

ಮ್ಲೇಚ್ಛನಿವಹನಿಧನೇ ಕಲಯಸಿ ಕರವಾಲಂ |
ಧೂಮಕೇತುಮಿವ ಕಿಮಪಿ ಕರಾಲಂ ||
ಕೇಶವ ಧೃತಕಲ್ಕಿಶರೀರ ಜಯ ಜಗದೀಶ ಹರೇ || ೧೦ ||

ಶ್ರೀಜಯದೇವಕವೇರಿದಮುದಿತಮುದಾರಂ |
ಶೃಣು ಸುಖದಂ ಶುಭದಂ ಭವಸಾರಂ ||
ಕೇಶವ ಧೃತದಶವಿಧರೂಪ ಜಯ ಜಗದೀಶ ಹರೇ ||

ಶ್ಲೋ || ವೇದಾನುದ್ಧರತೇ ಜಗನ್ತಿ ವಹತೇ ಭೂಗೋಳಮುದ್ಬಿಭ್ರತೇ |
ದೈತ್ಯಂ ದಾರಯತೇ ಬಲಿಂ ಛಲಯತೇ ಕ್ಷತ್ರಕ್ಷಯಂ ಕುರ್ವತೇ ||
ಪೌಲಸ್ತ್ಯಂ ಜಯತೇ ಹಲಂ ಕಲಯತೇ ಕಾರುಣ್ಯಮಾತನ್ವತೇ |
ಮ್ಲೇಚ್ಛಾನ್ ಮೂರ್ಛಯತೇ ದಶಾಕೃತಿಕೃತೇ ಕೃಷ್ಣಾಯ ತುಭ್ಯಂ ನಮಃ ||

ಇಂತಿದುಮೊದಲಾದ ಪ್ರಸಿದ್ಧವಾದ ಇಪ್ಪತ್ತುನಾಲ್ಕು ಅಷ್ಟಪದಿಗಳನ್ನು ಆನಂದದಿಂದ ಗಾನಮಾಡಿ ಬಳಿಕ ಸಾಬಹಿರಾಗವನ್ನು ಹಾಡುತ್ತ ಕೀರ್ತನರಂಗದಲ್ಲಿ ಪರವಶನಾಗಿ ಕುಣಿಯುತ್ತ :—

ಬೃಂದಾವನಲೋಲನೆ ಗೋ ||
ಬೃಂದಾವನಲೀಲನೆ ಸ್ವಮಂದಾರುಜನಾ ||
ನಂದನಮಂದಾರನೆ ಪೊರೆ |
ನಂದನ ಮಂದಿರದ ನಿಧಿಯೆ ಧೃತಮಂದರನೇ || ೧ ||

ಭೇದಿಸಿ ಕಂಬವನುದಯಿಸಿ |
ಯಾ ದನುಜನ ಹೃದಯವಂ ವಿದಾರಿಸಿ ಮೇಣ್ ಪ್ರ ||
ಹ್ಲಾದನ ಪಾಲಿಸಿ ಜಗದಾ |
ಹ್ಲಾದನೆನಿಸಗಿದೆಶ್ರೀಹರಿಯೆ ಪೊರೆ ನರಹರಿಯೇ || ೨ ||

ದುರುಳಂ ದುಶ್ಶಾಸನನಂ |
ಬರಮಂ ಬರೆಸೆಳೆಯೆ ವಸನಮಂ ಪೊರೆ ನೀನೇ ||
ಶರಣೆನುತುಂ ಮೊರೆಯಿಟ್ಟಾ |
ತರುಣಿಯ ತನುವಿಂದೆ ಪೊರೆದ ದೇವನೆ ಪೊರೆಯೈ || ೩ ||

ಮೊಸಳೆಯ ಹಿಂಸೆಯ ತಾಂ ಸೈ |
ರಿಸಲಾರದೆ ಶರಣವೊಂದಿದಾ ಕರಿವರನಂ ||
ಅಸವಸದಿಂ ಬಂದೊದವಿದ |
ಬಿಸಜಾಕ್ಷನ್ನೆನಿಂ ಪ್ರಸನ್ನನಾಗೆನಗೀಗಳ್. || ೪ ||

ಕುಂದನೆ ಮಾಡದಿರೆನಗೆ ಮು |
ಕುಂದನೆ ನಿಜಮಂದಹಸಿತಪರಿಹಸಿತಮುಖಾ ||
ಕುಂದನೆ ಪತಿತೋದ್ಧಿತಕಮುಕು |
ಕುಂದನೆ ಗೋವಿಂದನೇ ಜಗದ್ವಂದಿತನೇ || ೫ |

ಕುಶಲವತಾತಾ ತಾತಾ |
ಕುಶಲವನೆನಗೊಲ್ದು ಕಾಮಿತಾವಳಿಕಲನಾ ||
ಕುಶಲ ವರದೃಷ್ಟದೈತ್ಯಾಂ |
ಕುಶ ಲವಮಾತ್ರಂ ನಿನತ್ತ ದಯೆಯಿರೆ ಸಾಲ್ಗುಂ || ೬ ||

ಎಂದು ಬಗೆವಗೆಯಿಂದ ಪರಮಾತ್ಮನಂ ಪ್ರಾರ್ಥಿಸಿದನು.

ಆರ್ತತ್ರಾಣಪರಾಯಣನಾದ ನಾರಾಯಣನು ಜಯದೇವನ ನುಡಿಯನ್ನು ಕೇಳಿ, ಕರುಣೆಯಿಂದ ಆಕ್ಷಣವಲ್ಲಿ ಪ್ರಸನ್ನನಾಗಿ, ಜಯದೇವನನ್ನು ಕುರಿತು, ಎಲೆ ಜಯದೇವನೆ! ನಿನ್ನ ಅಷ್ಟಪದಿಗಳಂ ಯಾರು ಪಾಡುವರೋ ಮತ್ತು ಕೇಳುವರೋ ಅವರ ಸವಿಾಪದಲ್ಲಿ ನಾನು ಉಲ್ಲಾಸದಿಂದ ನಿಂದಿರುವೆನು—ಎಂದು ವರವಚನವನ್ನು ನುಡಿದು, ಪದ್ಮಾವತಿಯನ್ನು ಜೀವಪ್ರದಾನದಿಂದ ಏಳಿಸಿ ಬಡನೆಯೇ ಅಂತರ್ಹಿತನಾದನು. ಶವವು ಎದ್ದುದಂ ನೋಡಿ, ಎಲ್ಲರೂ ಆಶ್ಚರ್ಯಗೊಂಡು ಜಯಜಯಧ್ವನಿಯನ್ನು ಮಾಡಿದರು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ಭಕ್ತರೆಲ್ಲರೂ ಸಂತೋಷದಿಂದ ಜಯದೇವನನ್ನು ಹೊಗಳಿದರು. ರಾಯನು ಉಲ್ಲಾಸಗೊಂಡು ಜಯದೇವಸ್ವಾಮಿಗೆ ನಮಸ್ಕಾರವಮಾಡಿದನು.

ಇಂತಹ ಜಯದೇವನ ಚರಿತ್ರೆಯಂ ಭಾವುಕರಾರು ಪಾಡುವರೋ ಕೇಳುವರೋ ಸಂಕಟದ ವೇಳೆಯಲ್ಲಿ ಸ್ಮರಿಸುವರೋ ಅವರಿಗೆ ರುಕ್ಮಿಣೀರಮಣನು ಒಲಿಯುವನು. ಆವನು ವ್ಯಾಸರವತಾರವೋ, ಆವನಿಗೆ ಶತ್ರುಮಿತ್ರರು ಸಮರೋ ಆತನ ಚರಿತ್ರವಿದು. ಬ್ರಹ್ಮನ ಅವತಾರವಾದ ಗ್ವಾಲಿಯರ'ದೇಶದ ನಾಭಾಜಿಯೆಂಬ ಬ್ರಾಹ್ಮಣೋತ್ತಮನು ಯಥಾರ್ಥವಾಗಿ ಬಣ್ಣಿಸಿರುವ ಭಕ್ತರ ಚರಿತ್ರೆಯ ರುಚಿರತರವಾದ ಸೂಕ್ತಿಗಳನ್ನು ನೋಡಿ ನಾನು ಮಹಾರಾಷ್ಟ್ರದಲ್ಲಿ ಈ ಗ್ರಂಥವಂ ಬರೆದಿರುವೆನು. ಆಟಗಾರನು ಸೂತ್ರವಂ ಹಿಡಿದು ಬೊಂಬೆಯಿಂದ ನರ್ತನವಂ ಮಾಡಿಸುವಂತೆ ರುಕ್ಮಿಣೀರಮಣನು ನನ್ನ ಹೃದಯದಲ್ಲಿ ಇದ್ದುಕೊಂಡು ನನ್ನ ಮುಖದಿಂದ ಈ ಜಯದೇವಾಖ್ಯಾನವನ್ನು

ನುಡಿಯಿಸಿದನು. ಭೀಮಾತೀರವಾಸಿಯೂ ಭಕ್ತಪಕ್ಷಪಾತಿಯೂ ಆದ ಜಗಜ್ಜೀವನನೇ ಈ ಗ್ರಂಥದ ವಕ್ತೃವು. ಮುಂದಣ ಅಧ್ಯಾಯದಲ್ಲಿ ಭಕ್ತನಾದ ತುಲಸೀದಾಸನ ಅತ್ಯದ್ಭುತವಾದ ಚರಿತ್ರೆಯನ್ನು ನುಡಿಯಿಸುವವನೂ ಆ ಶ್ರೀನಿವಾಸನೇ. ಅದಂ ಭಾವುಕರು ಸಾವಧಾನತೆಯಿಂದ ಕೇಳಬೇಕು.

ಇಂತು ಶ್ರೀಭಕ್ತವಿಜಯದಲ್ಲಿ ಎರಡನೆಯ ಅಧ್ಯಾಯಂ
ಸಂಪೂರ್ಣಂ.
ಮಂಗಳಮಸ್ತು.

ಮೂರನೆಯ ಅಧ್ಯಾಯ

ತುಲಸೀದಾಸಚರಿತ್ರೆ.

ಜಯ ಪುಂಡರೀಕನೇತ್ರನೆ |
ಜಯ ಭೀಮಾತೀರವಾಸಿಯೇ ಶ್ರೀಹರಿಯೇ ||
ಜಯ ಪುಂಡರೀಕವರದನೆ |
ಜಯಜಯ ವಿಟ್ಠಲನೆ ಭಕ್ತಜನವತ್ಸಲನೇ ||

ಪರಮಪುರುಷನೆ! ಸಚ್ಚಿದಾನಂದನೆ! ಗೋವಿಂದನೆ! ಯಾದವೇಂದ್ರನೆ! ಸೊಂಟದಲ್ಲಿ ಹಸ್ತಗಳನ್ನಿಟ್ಟು ಭಕ್ತರ ಮಾರ್ಗವಂ ನಿರೀಕ್ಷಿಸುತ್ತಿರುವೆ. ಪತಿತಪಾವನನೆ! ಮಹಾಪಾತಕಿಗಳನ್ನು ದಯದಿಂದ ಉದ್ಧರಿಸುವೆ. ಗಜೇಂದ್ರನು ಪಶು; ಅಜ್ಞಾನಿ. ಸಂಕಟದಲ್ಲಿ ನಿನ್ನಂ ಸ್ಮರಿಸಿ ದೈನ್ಯದಿಂದ ಮೊರೆಯಿಡಲು, ಆತನ ಕರುಣಾವಚನವಂ ಕೇಳಿ, ಕರುಣೆಯಿಂದ ಸುದರ್ಶನವನ್ನೇ ಕಳುಹಿಸಿದೆ. ಮೊಸಳೆಯಂ ಶಿಕ್ಷಿಸಿ ಆ ಗಜೇಂದ್ರನಿಗೆ ದರ್ಶನವಂ ಕೊಟ್ಟು ಅವನನ್ನು ವಿಮಾನವೇರಿಸಲು, ಆ ಮೊಸಳೆಯು ನಿನ್ನನ್ನು ನೋಡಿ ನಕ್ಕು, "ಎಲೈ ಸ್ವಾಮಿಯೆ! ನಿನ್ನನಾಮವು ಪತಿತಪಾವನವು; ನನ್ನನ್ನು ಉಪೇಕ್ಷಿಸಿ ಗಜೇಂದ್ರನನ್ನು ವಿಮಾನದಲ್ಲಿ ಕರೆದುಕೊಂಡು ಹೋಗುವೆ. ಎಲೈ ಚಕ್ರಪಾಣಿಯೆ! ಪತಿತಪಾವನನೆಂಬ ನಿನ್ನ ಬಿರುದನ್ನು ಬಿಟ್ಟುಕೊಡು" ಎಂದು ಹೇಳಲು, ಆ ಮೊಸಳೆಯ ಮಾತನ್ನು ಕೇಳಿ ದಯದಿಂದ ಅವನನ್ನೂ ವಿಮಾನವೇರಿಸಿದೆ. ಭಕ್ತನಿಗೂ ಅಭಕ್ತನಿಗೂ ಸಾಯುಜ್ಯವಂ ಕೊಡುವೆ. ನಿನ್ನ

ಮಹಿಮೆ ತಿಳಿಯಲಸದಳವು. ಆದಿಶೇಷನು ನಿನ್ನ ಗುಣಗಳಂ ವರ್ಣಿಸಲು ತೊಡಗಿ ಪಾರವಂ ಕಾಣದೆ ಶ್ರಾಂತನಾದನು. ದಿವ್ಯವಾದ ನಿನ್ನ ಗುಣಕಥಾಮೃತವು ಇಂದ್ರಾದಿಗಳಿಗೂ ದುರ್ಲಭವು. ಅನನ್ಯಭಾವದಿಂದ ನಿನ್ನಲ್ಲಿ ಪ್ರೇಮವುಳ್ಳ ಭಕ್ತರಿಗೆ ಆ ಕಥಾಮೃತವು ಸುಲಭವು. ತಾಯಿಯು ವಾತ್ಸಲ್ಯದಿಂದ ಮಕ್ಕಳಂ ಸಾಲಾಗಿ ಕುಳ್ಳಿರಿಸಿ, ಅವರಿಗೆ ಎಂತು ಗ್ರಾಸವಂ ನೀಡುವಳೋ ಅಂತು ನೀನು ಕರುಣೆಯಿಂದ ನಿಜಭಕ್ತರಿಗೆ ನಿನ್ನ ಕಥಾಮೃತರಸವಂ ಪಾನಮಾಡಿಸುವೆ. ಅಂತು ನೀನು ನಿನ್ನ ಭಕ್ತರಿಗೆ ಸತ್ಕಥಾಸುಧಾರಸವಂ ವರ್ಷಿಸಿ ನೀಡುತ್ತಿರುವಲ್ಲಿ, ಅನಾಥನೂ, ದೀನನೂ ಯಾಚಕನೂ ಆದ ನಾನೊಬ್ಬ ಬಂದಿರುವೆನು. ಆ ಭಕ್ತವರೇಣ್ಯರು ನಿನ್ನ ಕಥಾಮೃತರಸವಂ ಸೇವಿಸಿ ತೃಪ್ತರಾಗಿರುವರು. ಜಗನ್ನಾಥನೇ! ಅನಾಥನಾದ ನನಗೆ ಅವರ ಉಚ್ಛಿಷ್ಟವಂ ಕೊಡುವನಾಗು. ದೀನದಯಾಳುವೇ! ರುಕ್ಮಿಣೀರಮಣನೇ! ನಿನ್ನ ಅದ್ಭುತವಾದ ಕೀರ್ತಿಯಂ ಕೇಳಿ, ನಿನ್ನ ಪ್ರಸಾದವಂ ಉಚಿತವಾಗಿ ಬೇಡಲು ಕಾದುಕೊಂಡಿರುವೆನು. ನಿನ್ನ ಭಕ್ತರು ಮಹನೀಯರು; ಅವರುಗಳ ಚರಿತ್ರೆ ಬಹುರಸಭರಿತವಾದುದು. ನೀನು ಎಂತು ಪ್ರೇರಿಸುವೆಯೋ ಅದಂ ನಾನು ಅಂತು ವರ್ಣಿಸುವೆನು.

ಎಲೈ ಶ್ರೋತೃಗಳಿರಾ! ಇನ್ನು ಮುಂದಣ ಕಥೆಯಂ ಕೇಳಿರಿ. ವಾಲ್ಮೀಕಿಮಹರ್ಷಿಯು ಶ್ರೀಹರಿಯ ನಿದೇಶದಿಂದ ಉತ್ತರದೇಶದ ಹಸ್ತಿನಾಪುರದಲ್ಲಿ ಆತ್ಮಾರಾಮನೆಂಬ ಬ್ರಾಹ್ಮಣನ ಮನೆಯಲ್ಲಿ ಲೀಲೆಯಿಂದ ಅವತರಿಸಿದನು. ಆ ಆತ್ಮಾರಾಮನು ಅಕಬರ್‌ಧೊರೆಯ ಆಸ್ಥಾನದಲ್ಲಿ ಇದ್ದನು. ಆತನು ಧರ್ಮಶೀಲನು ಪಾವನನು. ವಾಲ್ಮೀಕಿಯು ಅಂತವನ ಮಡದಿಯ ಗರ್ಭದಲ್ಲಿ ಜನಿಯಿಸಿದನು. ಆತ್ಮಾರಾಮನು ಕುಮಾರನಿಗೆ ಜಾತಕರ್ಮನಾಮಕರಣಂಗಳಂ ಬಳೆಯಿಸಿ ತುಲಸೀದಾಸನೆಂಬ ಹೆಸರನ್ನಿಟ್ಟು ಪ್ರೀತಿಯಿಂದ ಆಡಿಸುತ್ತಿದ್ದನು. ದಿನದಿನಕ್ಕೆ ಕುಮಾರನು ಬಳೆಯುತ್ತ ಬರಲು, ಆತ್ಮಾರಾಮನು ಅವನಿಗೆ ಉಪನಯನವಂ ಮಾಡಿ, ಹನ್ನೆರಡುವರ್ಷಗಳವರೆಗೆ ಬ್ರಹ್ಮಚರ್ಯವ್ರತದಿಂದಿರಿಸಿ, ಸ್ನಾನಸಂಧ್ಯಾವಂದನಾದಿನಿತ್ಯಕರ್ಮಗಳನ್ನೂ ವೇದಾಧ್ಯಯನವನ್ನೂ ವಿಧ್ಯುಕ್ತವಾಗಿ ತಪ್ಪದೆ ಮಾಡಿಸುತ್ತಿದ್ದು, ಬಳಿಕ ಕನ್ಯೆಯಂ ವಿಚಾರಿಸಿ ವಿವಾಹವನ್ನೂ ಮಾಡಿದನು. ಬಾಲ್ಯವು ಕಳೆದು ತಾರುಣ್ಯದಶೆಯು ಪ್ರಾಪ್ತವಾಗಲು, ಆ ನವದಂಪತಿಗಳಿಗೆ ಪರಸ್ಪರಪ್ರೀತಿಯುಂಟಾಯಿತು. ಒಬ್ಬರನ್ನೊಬ್ಬರು ಅಗಲಿಇರರು. ಬಗೆವಗೆಯ ವಸ್ತ್ರಗಳನ್ನೂ ಮುತ್ತಿನ ಹಾರಗಳನ್ನೂ ರತ್ನಭೂಷಣಗಳನ್ನೂ ಧರಿಸುತ್ತ ಇರುವರು. ಘಮಘಮಿಸುವ ಪರಿಮಳದ್ರವ್ಯಗಳನ್ನು ತೊಡೆದುಕೊಳ್ಳುತ್ತಿರುವರು. ಮಗಮಗಿಸುವ ಕುಸುಮಗಳನ್ನು ಮುಡಿದುಕೊಳ್ಳುತಿರುವರು. ಏಲಾಲವಂಗಾದಿಪರಿಕಲಿತವಾದ ಕತ್ತರಿಸಿದಡಕೆಯಿಂದ ಕೂಡಿ, ಬಿಳಿದೂ ಎಳದೂ ಅಚ್ಛಿದ್ರವೂ ಆಗಿ, ಸೊಗಸಾಗಿರುವ ವೀಳೆಯದೆಲೆಗಳನ್ನು ಚರ್ವಣಮಾಡುತ್ತಿರುವರು. ನಿತ್ಯವೂ ಭೋಗಗಳನ್ನು ಅನುಭವಿಸುತ್ತ ಸುಖದಿಂದಿರುತಿದ್ದರು.

ತುಳಸೀದಾಸನ ಹೆಂಡತಿಯ ಹೆಸರು ಮಮತಾದೇವಿಯೆಂದು. ಆಕೆ ಸತೀಶಿರೋಮಣಿ. ಸರ್ವಕಾಲದಲ್ಲಿಯೂ ಪತಿಸೇವೆಯಂ ಮಾಡುತಿರುವಳು.

ಒಂದುದಿವಸ ಅಕಬರ್‌ಧೊರೆಯು. ತುಳಸೀದಾಸನನ್ನೂ ಸಂಗಡ ಕರೆದುಕೊಂಡು ಗ್ರಾಮಾಂತರಸಂಚಾರಕ್ಕೆ ಹೊರಟನು. ಆಸಮಯದಲ್ಲಿ ಮಮತಾದೇವಿಯನ್ನು ತೌರ್ಮನೆಯಿಂದ ಕರೆಯುವುದಕ್ಕೆ ಬಂಧುಗಳು ಬಂದು, “ನಿಮ್ಮ ತಾಯಿಗೆ ದೇಹದಲ್ಲಿ ಅಸ್ವಸ್ಥತೆಯುಂಟಾಗಿರುವುದು ; ನೋಡಿಕೊಂಡು ಬೇಗ ಹಿಂದಿರುಗಿಬರಬಹುದು ; ಪ್ರಯಾಣಮಾಡು” ಎಂದು ತ್ವರೆಪಡಿಸಿದರು. ಅದಕ್ಕೆ ಆಕೆ ಸಂಭ್ರಾಂತೆಯಾಗಿ ವ್ಯಸನಪಡುತಿದ್ದುದನ್ನು ಕಂಡು, ವ್ಯಸನಪಡಬೇಕಾದ ಸಂದರ್ಭವೇನೂ ಇಲ್ಲ; ನಿನ್ನನ್ನು ನೋಡಿ ಬಹುಕಾಲವಾಯಿತು. ಹೊರಡಲು ನಿನ್ನ ಪತಿಯು ಅಪ್ಪಣೆಯಂ ಕೊಡುವನೋ ಕೊಡನೋ—ಎಂದು ನಾವು ಸುಳ್ಳುಮಾತನಾಡಿದೆವು—ಎಂದರು. ಮಮತಾದೇವಿ ಆಮಾತನ್ನು ಕೇಳಿ ಸ್ವಲ್ಪ ಸಮಾಧಾನವನ್ನು ಹೊಂದಿ, ತನ್ನ ಪತಿಯು ಊರಿಗೆ ಬರುವಷ್ಟರಲ್ಲಿ ತಾಯಿಯಂ ನೋಡಿಕೊಂಡು ಬರುವೆನೆಂದು ಅತ್ತೆಮಾವಂದಿರ ಅಪ್ಪಣೆಯನ್ನು ಪಡೆದು ತೌರ್ಮನೆಗೆ ಹೊರಟಳು. ತುಳಸೀದಾಸನು ಅದೇದಿವಸ ಊರಿಗೆ ಬಂದನು. ಮನೆಯಂ ಹೊಕ್ಕು ತನ್ನ ಪ್ರಾಣವಲ್ಲಭೆಯನ್ನು ಕಾಣದೆ ತಾಯಿಯಂ ಕೇಳಿ ವೃತ್ತಾಂತವೆಲ್ಲವಂ ತಿಳಿದು ಮಡದಿಯನ್ನು ಅಗಲಿರಲಾರದೆ ಕಳವಳಗೊಂಡು—ಎಲೆಪ್ರಿಯೆ! ನನ್ನನ್ನು ಬಿಟ್ಟು ಪೋದೆಯಾ? ನೀನಿಲ್ಲದೆ ನಾನು ಇರಲಾರೆನು; ಮಲಗಿದರೆ ನಿದ್ರೆ ಬರುವುದಿಲ್ಲ—ಎಂದು ಹಂಬಲಿಸುತ್ತ ಥಟ್ಟನೆ ಅಲ್ಲಿಂದ ಹೊರಟು ರಾತ್ರಿವೇಳೆಯಲ್ಲಿಯೇ ಐದುಹರಿದಾರಿ ನಡೆದು ಮಾವನ ಮನೆಯನ್ನು ಸೇರಿದನು. ಅಷ್ಟು ಹೊತ್ತಿಗೆ ರಾತ್ರಿಯೆರಡುಜಾವವಾಗಿದ್ದಿತು. ಬಾಗಿಲುಗಳು ಮುಚ್ಚಿದ್ದುವು. ಸುತ್ತಲೂ ನೋಡಿದನು. ಒಳಗೆಪ್ರವೇಶಿಸಲು ಅವಕಾಶವಿರಲಿಲ್ಲ. ಒಂದುಕಡೆ ದೀರ್ಘವಾದ ಒಂದು ಸರ್ಪವು ಮೇಲಣಿಂದ ಜೋಲಾಡುತಿದ್ದುದಂ ಕಂಡು ಹಗ್ಗವೆಂದು ಭ್ರಮಿಸಿ ಅದನ್ನು ಹಿಡಿದುಕೊಂಡು ಉಪ್ಪರಿಗೆಯಮೇಲೆ ಹತ್ತಿಹೋದನು. ಒಳಗೆ ಪ್ರವೇಶಿಸುವುದೂ ಸೇವಕರು ಎಚ್ಚರಗೊಂಡು ನೋಡಿದರು. ಲಾವಣ್ಯದ ಗಣಿಯಾದ ಮಮತಾದೇವಿಯೂ ಆಕ್ಷಣದಲ್ಲಿ ಎಚ್ಚರಗೊಂಡು ವಲ್ಲಭನಂ ಕಂಡು ಚಮತ್ಕಾರದಿಂದೆದ್ದಳು. ತುಳಸೀದಾಸನು ಪ್ರಿಯೆಯನ್ನು ಕಂಡು, ಎಲೆ ಲಾವಣ್ಯದ ಗಣಿಯೆ! ರಾಗಿಣಿಯೆ! ಮನ್ಮಥನ ಮೋಹದ ಗಿಣಿಯೆ! ಸುಗುಣತರಂಗಿಣಿಯೆ! ಕ್ಷಣವಾದರೂ ಅಗಲಿರಲಾರದ ನನ್ನನ್ನು ಬಿಟ್ಟು ಇಲ್ಲಿಗೆ ನೀನೊಬ್ಬಳೇ ಏತಕ್ಕೆ ಬಂದೆ? ನಿನಗೋಸ್ಕರ ನಾನು ಐದು ಹರಿದಾರಿಯ ದಾರಿಯನ್ನು ನಡೆದುಬಂದೆ—ಎಂದನು. ಆಮಾತಂ ಕೇಳಿ ಮಮತೆಯು ಈಗ ಯಮುನೆಯ ಪ್ರವಾಹವು ಪೂರ್ಣವಾಗಿ ಬಂದಿರುವುದು. ನೀವು ನಡೆದು ಬಂದುದೆಂತು? ಅದಲ್ಲದೆ ಈ ಹೊತ್ತಿನಲ್ಲಿ ಮನೆಯೊಳಗೆ ಪ್ರವೇಶಿಸಿದ ಪರಿಯೆಂತು? —ಎಂದಳು. ಅದಕ್ಕೆ ತುಳಸೀದಾಸನು—ಪ್ರಿಯೆ! ನಿನ್ನ ಮೇಲಣ ಮೋಹದಿಂದ ನನಗೆ

ದಾರಿಯು ಸುಗಮವಾಗಿಯೇ ಇದ್ದಿತು. ನನ್ನಲ್ಲಿ ಉಂಟಾದ ಪ್ರೀತ್ಯತಿಶಯದಿಂ ಮೇಲಣಿಂದ ನೀನು ಇಳಿಬಿಟ್ಟಿದ್ದ ಹಗ್ಗವಂ ಹಿಡಿದುಕೊಂಡು ಹತ್ತಿ ಬಂದೆನು—ಎಂದುದಂ ಕೇಳಿ ಆಕೆ—ನಾನು ಹಗ್ಗವನ್ನು ಬಿಟ್ಟಿರಲಿಲ್ಲ; ಇದು ಸುಳ್ಳುಮಾತು—ಎನಲು, ತುಳಸೀದಾಸನು—ಸುಳ್ಳೋ ದಿಟವೋ ನನಗೆ ತಿಳಿಯದು; ನಾನು ಬಂದ ಪರಿಯಿಂತು—ಎಂದನು. ಅದಕ್ಕೆ ಆಕೆ ಆ ಹಗ್ಗವನ್ನು ತೋರಿಸಿ; ನೋಡಬೇಕು—ಎಂದು ಅಪೇಕ್ಷಿಸಲು, ಸೇವಕರು ದೀಪವನ್ನು ತೆಗೆದುಕೊಂಡು ಬಂದರು; ಹೋಗಿ ನೋಡುವಲ್ಲಿ ಭಯಂಕರವಾದ ಮಹಾಸರ್ಪವು ಜೋಲುತಿದ್ದುದು; ಎಲ್ಲರೂ ಕಂಡು ವಿಸ್ಮಿತರಾದರು. ಮಮತೆಯು ಕಾಂತನ ಕೈಯಂ ಬಿಡಿದು, ತನ್ನ ಏಕಾಂತಗೃಹಕ್ಕೆ ಕರೆದುಕೊಂಡು ಹೋಗಿ ಪರ್ಯಂಕದಲ್ಲಿ ಕುಳ್ಳಿರಿಸಿ, ಪ್ರಾಣಕಾಂತನೇ! ನನ್ನ ಮಾತನ್ನು ಆಲಿಸುವುದು; ನೀವು ಬುದ್ಧಿವಂತರೆನಿಸಿಕೊಳ್ಳುವಿರಿ. ನೀವು ಇಂತಹ ಕಾರ್ಯವನ್ನು ಮಾಡಬಾರದು; ನಿಮಗೆ ವಿವೇಕವಿಲ್ಲ. ಹಗಲೂ ರಾತ್ರಿಯೂ ಅಜ್ಞಾನವು ಮುಸುಕಿಕೊಂಡಿರುವುದು; ತಾಯಿ ತಂದೆಗಳನ್ನೂ ನಂಟರಿಷ್ಟರನ್ನೂ ಧನಕನಕಾದಿಗಳನ್ನೂ ಬಿಟ್ಟು ಈ ರಾತ್ರಿವೇಳೆಯಲ್ಲಿ ನನಗೋಸ್ಕರ ಏಕೆಬಂದಿರಿ? ಮಹಾಸರ್ಪವು ಕಚ್ಚಿದ್ದರೆ, ಏನುಗತಿ? ನಿಮ್ಮ ಜೀವನೇ ಹೋಗುತ್ತ ಇದ್ದುದಲ್ಲಾ! ಸಂಸಾರವು ಅನಿತ್ಯವಾದುದು; ನಿಮಗೆ ತಿಳಿಯದು, ನನ್ನಲ್ಲಿ ಅಪೇಕ್ಷೆಗೊಂಡು ಈ ನಿಶೆಯಲ್ಲಿ ಓಡಿಬಂದಿರಿ. ಸ್ತ್ರೀಜನದ ಸಂಗತಿಯಿಂದ ಅನೇಕರು ನಾಶವನ್ನೈದಿರುವರು. ಅಹಲ್ಯೆಯ ಸೌಂದರ್ಯಕ್ಕೆ ಮೋಹಿಸಿ ದೇವೇಂದ್ರನು ಗೌತಮರ ಆಶ್ರಮಕ್ಕೆ ತೆರಳಿ ಕೆಟ್ಟನು. ರಾವಣನು ಸೀತೆಯಮೇಲಣ ಮೋಹದಿಂದ ನಾಶವನ್ನೈದಿದನು. ಆದರೆ ಇವರು ಪರಸ್ತ್ರೀಕಾಮುಕರಾಗಿದ್ದರು. ನಿಮ್ಮ ವಿಷಯದಲ್ಲಿ ನಾನು ಅಂತು ಹೇಳುವುದಿಲ್ಲ. ಮುಖ್ಯವಾಗಿ ಸ್ತ್ರೀಮೋಹವು ಕೆಟ್ಟುದು. ದೀಪದ ಕಾಂತಿಯಂ ನೋಡಿ ಪತಂಗಗಳು ಭ್ರಾಂತಿಯಿಂದ ಓಡಿಬಂದು ಬೀಳುವಂತೆ ಪುರುಷರು ಮೋಹಿತರಾಗಿ ಸ್ತ್ರೀಸಂಗತಿಯಿಂದ ಕೆಡುವರು. ವಿಷಯಾಭಿಲಾಷೆಯು ಭ್ರಾಂತಿಮೂಲಕವೆಂದು ತಿಳಿದು, ಆತ್ಮಾರಾಮರು ಸುಗುಣಂಗಳಿಗೆ ಆರಾಮವೆನಿಸಿದ ಆರಾಮನನ್ನು ಹೃದಯದಲ್ಲಿ ಸರ್ವಕಾಲದಲ್ಲಿಯೂ ಧ್ಯಾನಿಸುತ್ತ ಇರುವರು. ಇತರರು ಆಸ್ವಾಮಿಯನ್ನು ಅರಿಯರು. ಇವರಿಗೆ ಪಶುಪತ್ನೀಸುತಾಲಯಂಗಳು ಪ್ರಾಣಗಳಿಗಿಂತಲೂ ಪ್ರಿಯತಮಗಳಾಗಿರುವುವು. ಶ್ರೀರಾಮನ ಚರಣಾರವಿಂದವನ್ನು ಧ್ಯಾನಿಸಿದರೆ ಜನ್ಮ ಸಾರ್ಥಕವಾಗುವುದು—ಎಂದು ನುಡಿಯಲು, ತುಳಸೀದಾಸನು ಚಿತ್ತದಲ್ಲಿ ಪಶ್ಚಾತ್ತಾಪವನ್ನು ಹೊಂದಿ, ಕಾಂತೆಯನ್ನು ಕುರಿತು, ತಾಯೆ! ನೀನು ಹೇಳಿದುದು ಸತ್ಯವೇ ಸರಿ—ಎಂದು ನಮಸ್ಕಾರಮಾಡಿ, ಬಾಲಕನು ಕಗ್ಗಲಿಯ ಕೆಂಡವಂ ಕೈಯಲ್ಲಿ ಹಿಡಿಯಲು, ಜನನಿಯು ಥಟ್ಟನೆ ಬಿಸುಡಿಸಿ ಎಂತು ರಕ್ಷಿಸುವಳೋ ಅಂತು ಮೋಹಾಗ್ನಿಯಿಂದ ನೀನು ನನ್ನನ್ನು ರಕ್ಷಿಸಿದೆ—ಎಂದು ನುಡಿದು ಥಟ್ಟನೆ ಅಲ್ಲಿಂದ ಹೊರಟು ಭಗವಂತನನ್ನು ಧ್ಯಾನಿಸಿ ತನ್ನ ಜನ್ಮದ ಕಾರಣವನ್ನು ನೆನೆದು, ನಾನು ವಾಲ್ಮೀಕಿಯಲ್ಲವೆ?

ಮರ್ತ್ಯಲೋಕದಲ್ಲಿ ಅವತಾರವಂ ಮಾಡಿರುವೆನು. ಶ್ರೀರಾಮಚರಿತ್ರೆಯಂ ಗಾನಮಾಡಿ ಜನಗಳನ್ನು ಭಕ್ತಿಮಾರ್ಗದಲ್ಲಿಡಬೇಕು. ನಶ್ವರವಾದ ವಿಷಯಸುಖವನ್ನು ಅನುಭವಿಸುತ್ತ ಮೋಹಪಾಶದಲ್ಲಿ ಸಿಕ್ಕಿ ತೊಳಲುತಿದ್ದೆನು—ಎಂದು ವಿವೇಕವನ್ನು ತಂದುಕೊಂಡು, ಕಾಶೀಪಟ್ಟಣವನ್ನು ಸೇರಿ, ನಿತ್ಯವೂ ಪ್ರಾತಃಕಾಲದಲ್ಲಿ ಭಾಗೀರಥೀಸ್ನಾನ ಮಾಡುತ್ತ, ತೀವ್ರವಾದ ಅನುಷ್ಠಾನವನ್ನು ಆರಂಭಿಸಿ, ಅನ್ನಫಲಗಳಂ ವರ್ಜಿಸಿ, ಗಳಿತಪರ್ಣವಂ ಭಕ್ಷಿಸುತ್ತ—ಅಯೋಧ್ಯಾವಾಸಿಯೇ! ಜಾನಕೀಜಾನಿಯೇ! ನನಗೆ ಸಂದರ್ಶನವಂ ಕೊಡಬೇಕು—ಎಂದು ಶ್ರೀರಾಮಸ್ಮರಣೆಯಂ ಮಾಡುತ್ತ ಹನ್ನೆರಡುವರ್ಷಗಳವರೆಗೆ ಒಂದುದಿವಸವೂ ತಪ್ಪದೆ ಅಹೋರಾತ್ರದಲ್ಲಿಯೂ ಆ ಶ್ರೀರಾಮನ ನಾಮಸಂಕೀರ್ತನವಂ ಗೈಯುತಿದ್ದನು.

ನಿತ್ಯವೂ ಶೌಚಕ್ಕೋಸ್ಕರ ಅರಣ್ಯಕ್ಕೆ ಹೋಗಿ, ಪಾತ್ರೆಯಲ್ಲುಳಿದ ನೀರನ್ನು ಅಲ್ಲಿಯೇ ಒಂದು ವೃಕ್ಷದ ಕೆಳಗೆ ಚೆಲ್ಲುತ್ತಿದ್ದನು. ಒಂದುದಿನ ಶೌಚಕ್ಕೆ ಹೋಗಿ, ಉಳಿದ ನೀರನ್ನು ನಿತ್ಯದಂತೆ ಚೆಲ್ಲಲು, ಆಗ ಮಹಾಭಯಂಕರನಾದ ಪಿಶಾಚನು ಇದಿರಾಗಿ ಕಾಣಿಸಿಕೊಂಡು ಕೈಗಳಂ ಜೋಡಿಸಿಕೊಂಡು ನಿಂತು, "ನಾನು ನಿನಗೆ ಪ್ರಸನ್ನನಾಗಿರುವೆನು; ಏನಾದರೂ ವರವಂ ಬೇಡು. ಅದಂ ಸಲಿಸುವೆನು" ಎನಲು, ತುಲಸೀದಾಸನು ನೋಡಿ—ನೀನು ಯಾರು? ಪ್ರಸನ್ನನಾಗಿರುವುವೆನೆಂಬುದೆಂತು? ನನಗೆ ತಿಳಿಯದು; ಹೇಳು—ಎಂದನು. ಅದಕ್ಕೆ ಆ ಪಿಶಾಚನು—ಬಹುದಿವಸದಿಂದ ನಾನು ಇಲ್ಲಿ ಇದ್ದುಕೊಂಡು ನೀನು ನಿತ್ಯವೂ ಚೆಲ್ಲುವ ಉದಕವಂ ಪಾನಮಾಡುತ್ತಿರುವೆನು; ವಾಪೀಕೂಪಸರಿತ್ಸಮುದ್ರಂಗಳಂ ಸ್ಪರ್ಶಮಾಡಲು ನನಗೆ ಯೋಗ್ಯತೆಯಿಲ್ಲ. ಬಾಯಾರಿಕೆ ಅಪರಿಹಾರ್ಯವಾದುದು. ಹನ್ನೆರಡುವರ್ಷಗಳವರೆಗೆ ನೀನು ನನಗೆ ಉದಕದಾನವಂ ಮಾಡಿದೆ. ನನ್ನನ್ನು ನೀನು ಏನಕೇಳಿದರೂ ಅದಂ ಕೊಡುವೆನು—ಎಂದನು. ತುಳಸೀದಾಸನು ಆಶ್ಚರ್ಯಗೊಂಡು, ಶ್ರೀರಾಮನ ಸಂದರ್ಶನವನ್ನು ಅಪೇಕ್ಷಿಸುತ್ತ ಇದ್ದರೆ, ನನಗೆ ಪಿಶಾಚದ ದರ್ಶನವಾಯಿತಲ್ಲಾ! ಸವಿಮಾವಿನಮರವನ್ನು ಬೆಳೆಯಿಸಿ ಅದರ ಫಲವನ್ನು ನಿರೀಕ್ಷಿಸುತ್ತಿರಲು, ಅದರಲ್ಲಿ ದಾಸವಿಕ್ಕೆಕಾಯಂ ಕಂಡಂತಾಯಿತು. ನಂದಿನೀಧೇನುವಿನ ದರ್ಶನವನ್ನಪೇಕ್ಷಿಸುತ್ತ ಇರಲು, ಹಂದಿಯು ಮುಂದೆ ಬಂದು ನಿಂತಂತೆ, ರಾಜಹಂಸವನ್ನು ನೋಡಲಪೇಕ್ಷಿಸುತ್ತ ಇರಲು, ಆಕಸ್ಮಿಕವಾಗಿ ಕಾಗೆಯು ಗೋಚರವಾದಂತೆ, ಸತ್ಪುರುಷನ ಸಂಗವಂ ಬಯಸುತ್ತಿರಲು, ನಿಂದಕನು ಗಂಟುಬಿದ್ದಂತೆ, ಅಧ್ಯಾತ್ಮವಿಚಾರವಂ ಶ್ರವಣಮಾಡಬೇಕೆಂದಿರಲು, ಕಿವಿಗೆ ಕೊಕ್ಕೋಕಶಾಸ್ತ್ರದ ವಿಷಯವು ಕೇಳಿಸಿದಂತೆ, ಕಲ್ಪವೃಕ್ಷದ ನೆಳಲನ್ನು ಇಚ್ಛಿಸುತ್ತಿರಲು, ಆಕಸ್ಮಿಕವಾಗಿ ಈಚಲಮರವು ಕಣ್ಣಿಗೆ ಕಂಡಂತೆ; ಕ್ಷೀರಸಮುದ್ರದ ದರ್ಶನವನ್ನು ಅಪೇಕ್ಷಿಸುತ್ತಿರಲು, ಕೆಸರುಗುಂಡಿಯು ಗೋಚರವಾದಂತೆ; ಶ್ರೀರಾಮಚಂದ್ರನ ದರ್ಶನವಂ ನಾನು ಬಯಸುತಿರಲು, ಪಿಶಾಚವು ಪ್ರಸನ್ನವಾಯಿತಲ್ಲಾ!—ಎಂದು ಚಿಂತಿಸುತಿದ್ದನು.

ಬಳಿಕ ಪಿಶಾಚವು ಆತನನ್ನು ನೋಡಿ, ನೀನು ಅಭಿಜ್ಞನಾಗಿ ತೋರುವೆ ; ಸಂಕೋಚ ಪಡದೆ ಯೋಗ್ಯವಾದ ವರವಂ ಕೇಳು ಎಂದಿತು.

ಲೋಕದಲ್ಲಿ ಯಾರಿಗೆ ತಮ್ಮ ಕಾರ್ಯದ ಆವಶ್ಯಕತೆಯಿರುವುದೋ ಅವರು ದೊಡ್ಡವರು ಚಿಕ್ಕವರು—ಎಂಬ ಭೇದವನ್ನೆಣಿಸಬಾರದು ; ಸಣ್ಣನಾರನ್ನು ಉಪೇಕ್ಷಿಸಲು, ಹಾರಕ್ಕೋಸ್ಕರ ಹೂವನ್ನು ಪೋಣಿಸುವುದಕ್ಕೆ ಆಗದು ; ಸಣ್ಣದಾದ ಸೂಜಿಯು ಇಲ್ಲದಿದ್ದರೆ, ಅಂಗಿಯನ್ನು ಹೊಲಿಯುವುದಕ್ಕೆ ಆಗದು ; ಈಚಲು ಅಪವಿತ್ರವೆಂದು ಸಂಮಾರ್ಜನಿಯನ್ನು ಉಪೇಕ್ಷಿಸಬಾರದು ; ವಸ್ತುವು ನೀಚವಾದುದಾದರೂ ವಿಚಕ್ಷಣರು ಆದರಿಂದಲೇ ಕಾರ್ಯಸಾಧನವಂ ; ಮಾಡಿಕೊಳ್ಳುವರು—ಎಂದು ತುಳಸೀದಾಸನು ತನ್ನ ಮನದಲ್ಲಿ ಎಣಿಕೆಗೊಂಡು, ಪಿಶಾಚವನ್ನು ಕುರಿತು—ನೀನು ನನಗೆ ಪ್ರಸನ್ನನಾದವನಾದರೆ ಶ್ರೀರಾಮಚಂದ್ರನ ಸಂದರ್ಶನವಂ ಮಾಡಿಸು ; ನನಗೆ ಮತ್ತೊಂದಪೇಕ್ಷೆಯಿಲ್ಲ—ಎಂದನು. ಪಿಶಾಚವು ಅದಂ ಕೇಳಿ—ನೀನು ಯಾರ ಸಂದರ್ಶನವಂ ಮಾಡಿಸು—ಎಂದು ಹೇಳುವೆಯೋ ಆತನ ನಾಮವಂ ಕಿವಿಯಿಂದ ಕೇಳಲು, ಪಿಶಾಚಗಳು ದೂರವಾಗುವುವು ; ಆ ನಾಮಾಕ್ಷರಗಳನ್ನು ಉಚ್ಚರಿಸಿದರೆ, ನಾನೇ ನಾಶವನ್ನೈದುವೆನು ; ಇಂತಿರಲು, ಆತನ ದರ್ಶನವಂ ನಾನು ಮಾಡಿಸುವುದೆಂತು? ಆತನ ಸೇವಕನಾದ ಹನುಮಂತನ ದರ್ಶನವನ್ನು ಮಾಡಿಸಬಲ್ಲೆನು—ಎನಲು, ಅದಕ್ಕೆ ತುಳಸೀದಾಸನು ಹನುಮಂತನೆಲ್ಲಿರುವನು ? ಅವನಂ ನೀನು ತೋರಿಸಿದವನಾದರೆ, ನನ್ನ ಅಪೇಕ್ಷೆಯಂ ಪೂರ್ಯಿಸಿದಂತೆಯೇ ಆಯಿತು—ಎಂದನು. ಆ ಮಾತಂ ಕೇಳಿ ಪಿಶಾಚವು—ನೀನು ನಿತ್ಯವೂ ಪುರಾಣವಂ ಕೇಳುವುದಕ್ಕೆ ಹೋಗುವೆಯಲ್ಲಾ ? ಅಲ್ಲಿಗೆ ಒಬ್ಬನು ವೃದ್ಧ ಬ್ರಾಹ್ಮಣರೂಪದಿಂದ ಬರುವನು ; ಆತನು ಎಲ್ಲರೂ ಬರುವುದಕ್ಕೆ ಮುಂದಾಗಿ ಬಂದು ಕುಳಿತುಕೊಳ್ಳುವನು ; ಎಲ್ಲರೂ ಹೊರಟುಹೋದ ಬಳಿಕ ಎದ್ದು ಹೋಗುವನು ; ತಲೆಯಲ್ಲಿ ಟೊಪ್ಪಿಗೆಯನ್ನು ಇಟ್ಟಿರುವನು ; ಕೈಯಲ್ಲಿ ಕೋಲಂ ಪಿಡಿದಿರುವನು ; ಜೀರ್ಣವಸ್ತ್ರವಂ ಧರಿಸಿರುವನು ; ಕೌಪೀನವನ್ನೂ ಹಾಕಿಕೊಂಡಿರುವನು; ಈ ಗುರುತಿನಾತನೇ ಹನುಮಂತನು—ಎಂದು ತಿಳಿ—ಎಂದು ನುಡಿದು ಅದೃಶ್ಯವಾಯಿತು.

ತುಳಸೀದಾಸನು ತನ್ನ ಆಶ್ರಮಕ್ಕೆ ಹಿಂದಿರುಗಿಬಂದು, ಮರುದಿವಸ ಸ್ನಾನ ನಿತ್ಯನಿಯಮಂಗಳಂ ಮಾಡಿಕೊಂಡು, ಪುರಾಣಕಥನವಾಗುವಲ್ಲಿಗೆ ತ್ವರೆಯಿಂದ ಹೋದನು. ಪಿಶಾಚವು ಹೇಳಿದಂತೆ ಗುರುತುಳ್ಳ ಒಬ್ಬ ವೃದ್ಧಬ್ರಾಹ್ಮಣನು ಆಗಲೇ ಬಂದು ಕುಳಿತಿದ್ದನು. ಪುರಾಣಕಥನವು ಸಮಾಪ್ತವಾಗಲು, ಎಲ್ಲರೂ ಹೊರಟುಹೋದಬಳಿಕ ಆ ವೃದ್ಧಬ್ರಾಹ್ಮಣನು ಮೌನದಿಂದ ಹೊರಟನು. ತುಳಸೀದಾಸನು ಆತನ ಸಂಗಡವೇ ಹಿಂದುಗಡೆಯಲ್ಲಿ ನಡೆದನು. ಆ ಬ್ರಾಹ್ಮಣನು ಊರ ಹೊರಭಾಗಕ್ಕೆ ಹೋದೊಡನೆಯೇ ತ್ವರೆಯಿಂದ ನಡೆಯಲು ತೊಡಗಿದನು. ಯಾರೂ ಇಲ್ಲದುದಂ ನೋಡಿ, ತುಳಸೀದಾಸನು ಆ ಬ್ರಾಹ್ಮಣನ ಪಾದಗಳನ್ನು ದೃಢವಾಗಿ ಪಿಡಿದು—

ಸ್ವಾಮಿಯೆ ! ನನ್ನ ವಿಷಯದಲ್ಲಿ ಅನುಗ್ರಹವಂ ಮಾಡಬೇಕು—ಎಂದನು. ಆತನು—ನೀನು ಯಾರು ? ನನ್ನನ್ನು ಏಕೆ ಮುಟ್ಟಿದೆ ? ನಾನು ಬಡವನು, ಅನಾಥನು, ದೀನನು; ನನ್ನ ಪಾದಂಗಳಂ ಅದೇಕೆಪಿಡಿದೆ !—ಎಂದನು. ಅದಕ್ಕೆ ತುಳಸೀದಾಸನು—ನೀನು ಶ್ರೀರಾಮಭಕ್ತನು ಆಂಜನೇಯನು ;—ಎಂದು ಮತ್ತೆ ಆತನ ಪಾದಗಳಿಗೆ ಎರಗಿದನು. ಆಂಜನೇಯನು ಮನದಲ್ಲಿ ಆಲೋಚಿಸಿ, ಈತ ವಾಲ್ಮೀಕಿಯವತಾರನೆಂದು ಪ್ರೀತಿಯಿಂದ ಆಲಿಂಗನೆಮಾಡಿಕೊಂಡು—ನಿನಗೆ ನಾನು ಪ್ರಸನ್ನನಾದೆನು—ಎನಲು, ಅದಕ್ಕೆ ತುಳಸೀದಾಸನು—ಮಹಾನುಭಾವನೆ ! ನಿನ್ನ ದಯೆಯನ್ನು ಇಚ್ಛಿಸುತ್ತಿರುವೆನು ; ನನಗೆ ಶ್ರೀರಾಮಸಂದರ್ಶನವಾಗುವಂತೆ ಅನುಗ್ರಹಿಸಬೇಕು—ಎನಲು, ಆಂಜನೇಯನು—ಅವಶ್ಯವಾಗಿ ನಿನಗೆ ಶ್ರೀರಾಮಸಂದರ್ಶನವಂ ಮಾಡಿಸುವೆನು—ಎಂದು ನುಡಿದು ಅಲ್ಲಿ ಅದೃಶ್ಯನಾಗಿ ಬಳಿಕ ಶ್ರೀರಾಮನಂ ಸೇರಿ ಆ ಭಗವಂತನಂ ಕುರಿತು—ಎಲೈ ಸ್ವಾಮಿಯೆ ! ನನ್ನೊಂದು ಮಾತಂ ನಡೆಯಿಸಬೇಕು ; ತುಳಸೀದಾಸನು ಮಹಾಭಕ್ತನು ; ವಾಲ್ಮೀಕಿಯವತಾರ ; ತನ್ನ ಸಾಕ್ಷಾತ್ಸಗುಣಮೂರ್ತಿಯಂ ಆತನಿಗೆ ತೋರಬೇಕು; ಈ ನನ್ನ ಮನೋರಥವಂ ಪೂರೈಸಬೇಕು—ಎಂದು ಬಿನ್ನವಿಸಿ ಕೊಂಡನು. ಶ್ರೀರಘುನಂದನನು ಆಂಜನೇಯನ ಈ ನುಡಿಯಂ ಕೇಳಿ ಒಡಂಬಟ್ಟು ಕೋದಂಡಪಾಣಿಯಾಗಿ ಸಕಲವಾನರಸೈನ್ಯದೊಡನೆ ಹೊರಟು ತುಳಸೀದಾಸನ ಆಶ್ರಮದ ಮುಂದೆ ನಡೆದನು. ವಾನರರು ಮಹಾವೀರರಾಗಿಯೂ, ಶ್ರೀರಾಮಚಂದ್ರನು ಯವನರಾಜನಾಗಿಯೂ ಕಣ್ಣಿಗೆ ಕಂಡುದರಿಂದ ಯಾವನೋ ಯವನರಾಜನೇ—ಎಂದು ತಿಳಿದು ತುಳಸೀದಾಸನು ನಮಸ್ಕಾರ ಮಾಡದೆ ಸುಮ್ಮನಿದ್ದನು. ಬಳಿಕ ಆಂಜನೇಯನು ತುಳಸೀದಾಸನ ಬಳಿಗೆ ಬಂದು—ಶ್ರೀರಘುನಾಥನು ನಿನ್ನ ಮನೋರಥವಿದ್ದಂತೆ ದರ್ಶನವಂ ಕೊಟ್ಟು ಅನುಗ್ರಹಿಸಿದನೇ ? —ಎಂದು ಕೇಳಲು, ತುಳಸೀದಾಸನು—ನಾನು ಶ್ರೀರಘುನಾಥನನ್ನು ಕಾಣಲಿಲ್ಲ—ಎಂದನು. ಆಂಜನೇಯನು ಮತ್ತೆ—ಈಗತಾನೇ ನಿನ್ನ ಆಶ್ರಮದ ಮುಂದಣಿಂದ ರಘುನಾಥನು ಹೋದನಲ್ಲಾ—ಎನಲು, ತುಳಸೀದಾಸನು—ಇತ್ತ ಕಡೆ ಹೋದವನು ಶ್ರೀರಾಮನೇ ? ಯಾವನೋ ಯವನರಾಜನೆಂದು ನಾನು ತಿಳಿದೆನಲ್ಲಾ ! ಆ ಸ್ವಾಮಿಯ ಸಂದರ್ಶನವು ನನಗೆ ಆಗಲಿಲ್ಲವಲ್ಲಾ ! ನನ್ನ ಮನೋರಥವು ಭಗ್ನವಾಯಿತಲ್ಲಾ !—ಎಂದನು. ಅದಕ್ಕೆ ಆಂಜನೇಯನು—ಕಾಮಧೇನುವು ಮನೆಗೆ ಬಂದಿರಲು, ಅದನ್ನು 'ಇದು ಆಡು' ಎಂದು ಹೊರಡಿಸಿಬಿಟ್ಟಂತಾಯಿತು ; ಮಾರ್ಗದಲ್ಲಿ ನಡೆಯುವಾಗ ಸ್ಪರ್ಶವೇಧಿಶಿಲೆಯಂ ಕಾಣಲು, ಅದನ್ನು ಕಾಡಕಲ್ಲೆಂದು ಬಿಸುಟಂತಾಯಿತು ; ಆಕಸ್ಮಿಕವಾಗಿ ಅರಗಿಳಿಯು ಆಶ್ರಮಕ್ಕೆ ಬರಲು, ಅದನ್ನು ಕಪೋತವೆಂದು ನೂಕದೆ ಬಿಟ್ಟಂತಾಯಿತು ; ಪುಣ್ಯವಶದಿಂದ ಕಂಡ ಕಲ್ಪವೃಕ್ಷವನ್ನು ಈಚಲುಮರವೆಂದು ಉಪೇಕ್ಷಿಸಿದಂತಾಯಿತು ; ಮಹಾಪರ್ವದಿನದಲ್ಲಿ ಮನೆಗೆ ಬ್ರಾಹ್ಮಣನು ಬರಲು, ಆತನನ್ನು ಕುರುಬನೆಂದು ತಿಳಿದು ನಿರಾಕರಿಸಿದಂತಾಯಿತು ; ರಾಜಹಂಸವು ಹಾರಾಡುತ್ತಿರಲು, ಅದನ್ನು ಕಾಗೆಯೆಂದು

ಧಿಕ್ಕರಿಸಿದಂತಾಯಿತು ; ವನವಾಸದಿಂ ತೊಳಲುತ್ತಿರುವ ಧನಹೀನನ ಮನೆಗೆ ಮಹಾಲಕ್ಷ್ಮಿ ಬರಲು, ಆಕೆಯಂ ದಾಸಿಯೆಂದು ತಿಳಿದಂತಾಯಿತು ; ದೈವಹೀನನು ಮನೆಯ ಭಿಕ್ತಿ ಕಟ್ಟುವಾಗ ಚಿನ್ನದಗಣಿಯು ದೊರೆಯಲು, ಅದಂ ಮಣ್ಣೆಂದು ತಿಳಿದು ಉಪೇಕ್ಷಿಸಿದಂತಾಯಿತು; ಮಲಯಗಿರಿಚಂದನವಂ ಹಿಂಗು—ಎಂದು ವಿಸರ್ಜಿಸಿದಂತಾಯಿತು ; ಪಾರ್ವತೀಪತಿಯಾದ ಪರಮೇಶ್ವರನು ಭಿಕ್ಷುಕರೂಪದಿಂ ಬರಲು, ಯಾವನೋ ಎಂದು ಆತನಿಗೆ ಭಿಕ್ಷವಂ ನೀಡದೆ ಅಟ್ಟಿದಂತೆ, ಶ್ರೀರಾಮನಂ ಯವನಬುದ್ಧಿಯಿಂದ ಸನ್ಮಾನಿಸದೆ ಕಳುಹಿಸಿದೆಯಲ್ಲಾ !—ಎನಲು, ತುಳಸೀದಾಸನು ಸ್ವಾಮಿಯೆ ! ನನ್ನಮೇಲೆ ಏಕೆ ಅನ್ಯಾಯವಂ ಹಾಕುವೆ? ವಿಶ್ವಂಭರನಾದ ಚಕ್ರಪಾಣಿಯು ವಿಶ್ವವ್ಯಾಪಕನಾಗಿದ್ದರೂ ಕಾಣಿಸುವುದಿಲ್ಲವಲ್ಲಾ ! ಕ್ಷೀರವು ನೀರಿಂದ ವ್ಯಾಪ್ತವಾಗಿದ್ದರೂ ನೀರನ್ನು ತಿಳಿಯಲು ಎಂತು ಆಗುವುದಿಲ್ಲವೋ ; ಅಂತು ಈ ಪ್ರಪಂಚವೆಲ್ಲವೂ ಭಗವಂತನಿಂದ ವ್ಯಾಪ್ತವಾಗಿದ್ದರೂ, ಭಗವಂತನ ಸ್ವರೂಪವನ್ನು ತಿಳಿಯಲು ಅಸಾಧ್ಯ. ಒಂದೇ ಸುವರ್ಣವು ಆಭರಣರೂಪದಿಂದ ಬೇರೆಬೇರೆ ತಿಳಿಯಲ್ಪಡುವಂತೆ, ವಿಶ್ವವ್ಯಾಪಕನಾದ ಭಗವಂತನೊಬ್ಬನೇ ಅನೇಕ ರೂಪಗಳಿಂದ ಗ್ರಹಿಸಲ್ಪಡುವನು. ಒಂದೇನೀರು ಬೇರೆಬೇರೆಯಾಗಿದ್ದರೂ, ಚಾತಕಗಳು ತಮಗೆ ಇಷ್ಟವಾದ ಮೇಘೋದಕವನ್ನೇ ಗ್ರಹಿಸುವಂತೆ, ಶ್ರೀರಾಮೋಪಾಸಕರು ಭಗವಂತನ ಅನೇಕಸ್ವರೂಪಗಳಲ್ಲಿ ತಮಗೆ ಅಭಿಮತವಾದ ಸ್ವರೂಪವನ್ನೇ ಗ್ರಹಿಸಿ ಭಜಿಸುವರು. ವಾಲ್ಮೀಕಿಯಿಂದ ವರ್ಣಿಸಲ್ಪಟ್ಟ ಧ್ಯೇಯವಾದ ಸ್ವರೂಪದಿಂದ ಅಯೋಧ್ಯಾವಾಸಿಯಾದ ಜಾನಕೀಪತಿಯು ನನಗೆ ಪ್ರತ್ಯಕ್ಷನಾಗಬೇಕು—ಎನಲು, ಆಂಜನೇಯನು ಈ ಮಾತಂ ಕೇಳಿ ಮುಗುಳ್ನಗೆಗೂಡಿ—ಶ್ರೀರಾಮಚಂದ್ರನು ನಿನ್ನ ಮನೋರಥವಂ ಪೂರೈಸುವನು—ಎಂದು ನುಡಿದು ಅಂತರ್ಹಿತನಾಗಿ ಶ್ರೀರಾಮಮೂರ್ತಿಯಂ ಧ್ಯಾನಿಸುತ್ತ ಪ್ರೀತಿಯಿಂದ ಸ್ತುತಿಯಿಸಲು ಆರಂಭಿಸಿದನು :—

ಜಯ ಸಕಲಾತ್ಮಾರಾಮಾ |
ಜಯ ಸುಗುಣಾರಾಮ ಸಕಲದುರಿತವಿರಾಮಾ ||
ಜಯ ಜಿತಭಾರ್ಗವರಾಮಾ |
ಜಯ ಜಯ ಲೋಕಾಭಿರಾಮ ಸೀತಾರಾಮಾ ||

ಜಯ ರಿಪುಕುಲಸಂಹಾರಾ |
ಜಯಜಯ ಯೋಗೀಂದ್ರಹೃದಯನಿಲಯವಿಹಾರಾ ||
ಜಯ ದುಷ್ಕೃತಾಪಹಾರಾ |
ಜಯ ಜಯ ವಕ್ಷೋವಿಭಾಸಿನವಮಣಿಹಾರಾ ||

ಜಯ ನಿರುಪಮಪ್ರಕಾರಾ |
ಜಯ ಜಯ ಮಾರ್ತಾಂಡವಂಶಸದಲಂಕಾರಾ |

ಜಯ ಮೋಚಿತಸುರಕಾರಾ ।
ಜಯ ಜಯ ನೀಲಾಂಬುವಾಹಲಸದಾಕಾರಾ ॥

ಇಂತು ಬಗೆಬಗೆಯಿಂದ ಸ್ತುತಿಯಿಸಲು, ಕರುಣಾನಿಧಿಯಾದ ಸೀತಾಕಾಂತನು ಆಂಜನೇಯನನ್ನು ಕುರಿತು—ಇಂದು ಅದೇಕೆ ಬಹುಸ್ತೋತ್ರವಂ ಮಾಡುತ್ತ ಇರುವೆ? ನಿನ್ನ ಮನೋರಥವೇನು?—ಎನಲು, ಆಂಜನೇಯನು—ಭಕ್ತಕಲ್ಪತರುವೆ! ಸಗುಣಸ್ವರೂಪನೆ! ನೀನು ತುಳಸೀದಾಸನಿಗೆ ಸಾಕ್ಷಾದ್ದರ್ಶನವಂ ಕೊಡಬೇಕು—ಎಂದನು. ಅದಕ್ಕೆ ಶ್ರೀರಾಮನು—ಕಲಿಯುಗದಲ್ಲಿ ಸಾಕ್ಷಾದ್ದರ್ಶನವು ಅವನಿಗೆ ಎಂತು ದೊರೆಯುವುದು?—ಎನಲು, ಹನುಮಂತನು—ಸ್ವಾಮಿಯೆ! ವಾಲ್ಮೀಕಿಯಾದ ಆತನು ನಿಮ್ಮ ಅಪ್ಪಣೆಯಿಂದಲೆ ಜನಗಳನ್ನು ಭಕ್ತಿಮಾರ್ಗದಲ್ಲಿ ನೆಲೆಗೊಳಿಸುವುದಕ್ಕೋಸ್ಕರ ಭೂಮಿಯಲ್ಲಿ ಅವತರಿಸಿರುವನು; ಆದುದರಿಂದ ಅವನ ವಿಷಯದಲ್ಲಿ ಅನುಗ್ರಹಮಾಡುವುದು ಆವಶ್ಯಕವಲ್ಲವೆ?—ಎನಲು, ಆನುಡಿಯಂ ಕೇಳಿ, ರಘುನಂದನನು—ಆಂಜನೇಯನೆ! ನೀನು ಹೇಳಿದಂತೆ ಕೇಳುವೆನು; ಕಲ್ಪಾಂತರದಲ್ಲಿಯೂ ನಿನ್ನ ಮಾತು ತಪ್ಪತಕ್ಕುದಲ್ಲ—ಎಂದು, ಸೀತಾಲಕ್ಷ್ಮಣಸಮೇತನಾಗಿ ಸಗುಣರೂಪವಂತಾಳಿ, ಆಂಜನೇಯನೊಡನೆ ತುಳಸೀದಾಸನ ಆಶ್ರಮವನ್ನು ಕುರಿತು ಹೊರಟನು. ಆಂಜನೇಯನು ಮುಂದೆಹೋಗಿ ತುಳಸೀದಾಸನಿಗೆ—ಈಗಲೇ ಶ್ರೀರಘುವೀರನು ನಿನ್ನ ಮನೋರಥವಂ ಪೂರೈಸಲು ಬರುತ್ತಿರುವನು—ಎಂದನು. ತುಳಸೀದಾಸನು ಆಂಜನೇಯನ ವಚನವಂ ಕೇಳಿ ಸಂತೋಷಗೊಂಡು, ಮುಂದುಗಡೆಯಲ್ಲಿ ಕಿರೀಟಕುಂಡಲಾದಿಗಳಿಂದ ಅಲಂಕೃತನಾಗಿ ಪೀತಾಂಬರವನ್ನು ಧರಿಸಿ, ಕೈಗಳಲ್ಲಿ ಧನುರ್ಬಾಣಗಳಂ ಪಿಡಿದು, ಸೀತಾಲಕ್ಷ್ಮಣಸಮೇತನಾಗಿ, ದೇದೀಪ್ಯಮಾನನಾಗಿ ಮಂದಗಮನದಿಂ ಬರುತ್ತಿರುವ ನೀಲಮೇಘಶ್ಯಾಮನಾದ ಶ್ರೀರಾಮಚಂದ್ರನಂ ಕಂಡು ಆನಂದಸಾಗರದಲ್ಲಿ ಮುಳುಗಿ, ಅನನ್ಯಭಾವದಿಂದ ಸಾಷ್ಟಾಂಗ ಪ್ರಣಾಮವಂ ಮಾಡಿ, ಹಲವುಬಗೆಯಿಂದ ಸ್ತುತಿಯಿಸಿದನು. ಕೃಪಾಳುವಾದ ಶ್ರೀರಾಮನು ಆತನಿಗೆ ಆಲಿಂಗನವಂ ಕೊಟ್ಟನು. ಬಳಿಕ ಆಂಜನೇಯನು ತುಲಸೀದಾಸನನ್ನು ಕುರಿತು—ಶ್ರೀರಾಮನ ಸ್ವರೂಪವಂ ಕಣ್ಣಿಂದ ಕಂಡೆ; ನೀನು ಭಾಗ್ಯಶಾಲಿ; ಪೂರ್ವದಲ್ಲಿ ಬಣ್ಣಿಸಿದ ಪರಮಾತ್ಮನ ಲೀಲೆಗಳನ್ನೇ ಈಗ ಸರ್ವರಿಗೂ ತಿಳಿಯಿಸು; ಯೋಗವೂ ಯಾಗವೂ ಸಾಂಗಾಧ್ಯಯನವೂ ಕಲಿಯುಗದಲ್ಲಿ ಮುಖ್ಯಸಾಧನಂಗಳಲ್ಲ. ನಾಮಸಂಕೀರ್ತನೆಯೊಂದೇ ತಾರಕವು; ಆದುದರಿಂದ ನಾಮಮಹಿಮೆಯನ್ನೇ ಪ್ರಕಟಮಾಡಿ ಜನಗಳನ್ನು ಭಕ್ತಿಮಾರ್ಗದಲ್ಲಿ ನೆಲೆಗೊಳಿಸಬೇಕು—ಎಂದು, ಬಳಿಕ ಶ್ರೀರಾಮಚಂದ್ರನನ್ನು ಕುರಿತು—ಸ್ವಾಮಿಯೆ! ದಯೆಯಿಟ್ಟು ಈತನ ಶಿರಸ್ಸಿನಲ್ಲಿ ಅಭಯಕರವನ್ನಿರಿಸಬೇಕು—ಎಂದು ಬಿನ್ನವಿಸಿದನು. ಶ್ರೀರಾಮನು ಅಂತೆಯೇ ಒಪ್ಪಿ ಆತನ ಮಸ್ತಕದಲ್ಲಿ ಅಭಯಹಸ್ತವನ್ನಿಟ್ಟು ಎಲ್ಲರೊಡನೆ ಅದೃಶ್ಯನಾದನು.

ತುಳಸೀದಾಸನು ಸರ್ವಕಾಲದಲ್ಲಿಯೂ ಶ್ರೀಹರಿಯ ಗುಣಗಳನ್ನು ವರ್ಣಿಸು

ತಿದ್ದನು. ವಾರಾಣಸಿಯ ಸಕಲರೂ ಹರಿಕೀರ್ತನೆಯ ಶ್ರವಣವಂ ಮಾಡುತ್ತ ಇರುವರು. ತುಳಸೀದಾಸನಿಗೆ ಮಠವಂ ಕಟ್ಟಿಸಿಕೊಟ್ಟರು. ಶ್ರೀಮಂತರಾದ ಭಾವುಕರು ತುಳಸೀದಾಸನಿಂದ ಅನುಗೃಹೀತರಾಗಿ ವಿವಿಧವಾದ ಸಾಮಗ್ರಿಗಳಂ ಆಶ್ರಮಕ್ಕೆ ತಂದುಕೊಡುತ್ತಿರುವರು. ತುಳಸೀದಾಸನ ಪಙ್ಕ್ತಿಯಲ್ಲಿ ನಿತ್ಯವೂ ಸಹಸ್ರಬ್ರಾಹ್ಮಣರು ಭೋಜನವಂ ಮಾಡುತ್ತ ಇರುವರು. ದೀನರೂ, ಯಾಚಕರೂ ಅನ್ನಾರ್ಥಿಗಳೂ ಆಶ್ರಮಕ್ಕೆ ಬಂದು ಸಂತೋಷಗೊಳ್ಳುತ್ತಿರುವರು. ಜನಗಳಲ್ಲಿ ಬಹು ಪ್ರಖ್ಯಾತಿಯಾಯಿತು. ಅಪಾರದ್ರವ್ಯಗಳನ್ನೂ ದೊಡ್ಡದೊಡ್ಡ ಚಿನ್ನಬೆಳ್ಳಿಯ ಪಾತ್ರೆಗಳನ್ನೂ ಅಸಂಖ್ಯಾತವಾಗಿ ತಂದುಕೊಡುತ್ತಿರುವರು. ಯಾರಾದರೂ ಕೊಡಲಿ, ಅಥವಾ ತೆಗೆದುಕೊಂಡುಹೋಗಲಿ, ನಿಂದಿಸಲಿ, ಸ್ತೋತ್ರಮಾಡಲಿ ; ಉಪಾಧಿವಶದಿಂದ ಕಾಲತ್ರಯ ಸಂಬಂಧವುಳ್ಳುದಾದರೂ ಅದರಿಂದ ಲಿಪ್ತವಾಗದ ಆಕಾಶದಂತೆ ನಿರ್ಲಿಪ್ತನಾಗಿ ಇದ್ದನು. ಬ್ರಾಹ್ಮಣರ ಭೋಜನವಾಗುವುದೂ, ಹರಿಕೀರ್ತನೆ ನಡೆಯುವುದು; ಭಾವುಕರನೇಕರು ಭಗವನ್ನಾಮಸ್ಮರಣೆಗೋಸ್ಕರ ಬರುತ್ತಿರುವರು ; ಬಾಗಿಲುಗಳಂ ತೆರೆದುಬಿಟ್ಟು ಜನಗಳೆಲ್ಲರೂ ನಿದ್ರೆಯಂ ಮಾಡುತ್ತಿರುವರು ; ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿಯೂ ಶ್ರೀರಾಮಸ್ಮರಣೆಯಂ ಮಾಡುತ್ತಿರುವರು. ಅದಂತಿರಲಿ ಕಳ್ಳರಿಬ್ಬರು ಆಲೋಚನೆಯಂ ಮಾಡಿದರು :—ತುಳಸೀದಾಸನ ಆಶ್ರಮದಲ್ಲಿ ಯಾರೂ ಎಚ್ಚರಿಕೆಯಿಂದಿರುವುದಿಲ್ಲ ; ನಿರ್ಭಯತೆಯಿಂದ ಅಲ್ಲಿಗೆ ಹೋಗಿ ಬೇಕಾದಷ್ಟು ಸುವರ್ಣಪಾತ್ರೆಗಳಂ ಕಟ್ಟಿಕೊಂಡು ಬರೋಣ—ಎಂದು. ರಾತ್ರಿ ಹರಿಕೀರ್ತನೆಯಾಗುವುದೂ, ಎಲ್ಲರೂ ನಿದ್ರೆಮಾಡಿದರು. ಆಗ ಆ ಕಳ್ಳರೂ ಆಶ್ರಮವಂ ಪ್ರವೇಶಿಸಿ ಬೇಕಾದಷ್ಟು ಚಿನ್ನದ ಪಾತ್ರೆಗಳಂ ಮೂಟೆ ಕಟ್ಟಿ ತಲೆಯಮೇಲೆ ಹೊತ್ತುಕೊಂಡು ತ್ವರೆಯಿಂದ ಹೊರಟರು ; ಬಾಗಿಲಬಳಿಗೆ ಬರುವಾಗ ಅಲ್ಲಿ ಶೂರರಿಬ್ಬರು ಕೈಗಳಲ್ಲಿ ಧನುರ್ಬಾಣಗಳಂ ಹಿಡಿದು ನಿಂದಿದ್ದರು ; ಕಳ್ಳರು—ಇಲ್ಲಿ ರಕ್ಷಕರು ಯಾರೂ ಇರಲಿಲ್ಲ ; ಈಗ ಇವರಲ್ಲಿ ಬಂದರು ?—ಎಂದು ವಿಸ್ಮಿತರಾಗಿ ತ್ವರೆಗೊಂಡು ಅಲ್ಲಿಂದ ಹಿಂತಿರುಗಿ ಉತ್ತರದ್ವಾರಕ್ಕೆ ಬರಲು, ಕಿರೀಟಕುಂಡಲಗಳಿಂದ ದೇದೀಪ್ಯಮಾನರಾಗಿ ಧನುರ್ಬಾಣಧರರಾದ ವೀರಪುರುಷರಿರ್ವರು ಅಲ್ಲಿಯೂ ಇದ್ದರು ; ಕಳ್ಳರು ದೂರದಿಂದಲೇ ನೋಡಿ ಲಜ್ಜಿತರಾಗಿ ದಕ್ಷಿಣದ್ವಾರದ ಬಳಿಗೆ ಹೊರಟರು. ಅಲ್ಲಿಯೂ ಇದ್ದ ಇಬ್ಬರಂ ಕಂಡು ಆಶ್ಚರ್ಯಯುಕ್ತರಾಗಿ—ಈ ಧನುರ್ಧಾರಿಗಳು ಎದ್ದು ಹೋದಾರು ; ಈ ಚಿನ್ನದ ಪಾತ್ರೆಗಳಂ ತೆಗೆದುಕೊಂಡು ಹೋಗೋಣ—ಎಂದು ಆಲೋಚಿಸಿ ಸ್ವಲ್ಪಕಾಲ ಸುಮ್ಮನೆ ಕುಳಿತಿದ್ದು, ನಾಲ್ಕುನಾಲ್ಕುಗಳಿಗೆಗೆ ಒಂದೊಂದುಬಾರಿ ಬಾಗಿಲ ಬಳಿಗೆ ಬಂದು ನೋಡುತ್ತಿರುವರು ; ಕೈಯಲ್ಲಿ ಧನುರ್ಬಾಣಂಗಳಂ ಹಿಡಿದು ಆಕರ್ಣಾಂತವಾಗಿ ಸೆಳೆದು ಮೊಣಕಾಲೂರಿ ಇಬ್ಬರೂ ಅಲ್ಲಿ ಕುಳಿತಿರಲು, ಕಳ್ಳರು ಭಯಗೊಂಡು ಸುವರ್ಣಭಾಜನಂಗಳಂ ಅಲ್ಲಿಯೇ ಬಿಸುಟು ಬಾಗಿಲ ಬಳಿಗೆ ಬಂದರೂ ಹೊರಗೆ ಹೋಗಲು, ಅವರು ಅವಕಾಶವಂ ಕೊಡಲಿಲ್ಲ. ಬಳಿಕ

ಕಳ್ಳರಿಬ್ಬರೂ ಚಿಂತೆಯಂ ಮಾಡುತ್ತ ರಾತ್ರಿಯೆಲ್ಲವಂ ಕಳೆದರು. ಅರುಣೋದಯವಾಗುವುದೂ ಎಲ್ಲರೂ ಎದ್ದರು. ತುಳಸೀದಾಸನು ಪ್ರಾತಸ್ಸ್ಮರಣೆಯಂ ಮಾಡುತ್ತ ಹೊರಗೆ ಬಂದನು. ಆಗ ಕಳ್ಳರಿಬ್ಬರೂ ತುಳಸೀದಾಸನ ಬಳಿಗೆ ಬಂದು ಪಾದಕ್ಕೆರಗಿ—ಸ್ವಾಮಿ! ನಮ್ಮಪರಾಧವಂ ಕ್ಷಮಿಸಬೇಕು—ಎಂದು ಗದ್ಗದಸ್ವರದಿಂದ ನುಡಿಯಲು, ತುಳಸೀದಾಸನು—ನೀವು ಯಾರು? ಏನು ಸಂಗತಿ? ಹೇಳಿ—ಎಂದನು. ಅದಕ್ಕೆ ಅವರು—ನಾವು ಕಳ್ಳರು; ಕಳುವುದಕ್ಕೆ ಬಂದೆವು; ಬಾಗಿಲಬಳಿಯಲ್ಲಿ ಇಬ್ಬರು ಧನುರ್ಧಾರಿಗಳು ಆಚೆಗೆ ಹೋಗಲೀಯರು; ಕಟ್ಟಿದ್ದ ಚಿನ್ನದ ಪಾತ್ರೆಗಳ ಮೊಟ್ಟೆಗಳಂ ಇಲ್ಲಿಯೆ ಬಿಟ್ಟಿರುವೆವು; ಈ ನಮ್ಮ ದೊಡ್ಡ ಅಪರಾಧವಂ ಮನ್ನಿಸಿ ದಯಾಳುಗಳಾದ ತಾವು ನಮ್ಮನ್ನು ರಕ್ಷಿಸಬೇಕು; ನೀವು ಮಹಾಭಾಗವತರು; ಪರಮೋದಾರರು; ರಾತ್ರಿಯಲ್ಲಿ ಬಾಗಿಲನ್ನು ತೆರೆದಿರುವಿರಿ—ಎಂದು ನಾವು ನಿರ್ಭಯರಾಗಿ ಬಂದೆವು—ಎನಲು, ತುಲಸೀದಾಸನು ಹತ್ತಿರಿದ್ದ ಶಿಷ್ಯರನ್ನು ಕುರಿತು—ನನಗೆ ತಿಳಿಯದಂತೆ ಬಾಗಿಲಲ್ಲಿ ಕಾವಲುಗಾರರನ್ನು ಇಟ್ಟವರು ಯಾರು? ಯಾರಾದರೂ ತಂದಿಡಲಿ ಅಥವಾ ತೆಗೆದುಕೊಂಡು ಹೋಗಲಿ; ಎರಡನ್ನೂ ಸಮವಾಗಿ ತಿಳಿದು ಶ್ರೀರಾಮಭಜನೆಯಲ್ಲಿಯೇ ನಿರತರಾಗಿರಬೇಕು—ಎಂದು ನಾನು ಹೇಳಿರಲಿಲ್ಲವೇ?—ಎಂದು ಕೇಳಿದನು. ಆ ಶಿಷ್ಯರು ಆಣೆಯನ್ನು ಇಟ್ಟುಕೊಂಡು—ನಿಮ್ಮ ಪಾದಗಳೇ ಸಾಕ್ಷಿಯಾಗೆಯೂ, ಬಾಗಿಲ ಬಳಿಯಲ್ಲಿ ಕಾವಲು ಎಂಬುದನ್ನು ನಾವು ಅರಿಯೆವು—ಎಂದರು. ಬಳಿಕ ಕಳ್ಳರು—ಶ್ಯಾಮವರ್ಣರಾದ ಇಬ್ಬರು ಕಿರೀಟಕುಂಡಲಾದಿಗಳಿಂದ ವಿರಾಜಮಾನರಾಗಿ ಪೀತಾಂಬರಧಾರಿಗಳಾಗಿ ಇನ್ನೂ ಬಾಗಿಲಲ್ಲಿ ಕುಳಿತೇ ಇರುವರು—ಎಂದರು. ಸಕಲರೂ ಆಶ್ಚರ್ಯಪಡುತ್ತ ಬಂದುನೋಡಲು ಯಾರಿಗೂ ಕಾಣಲಿಲ್ಲ; ಶ್ರೀರಾಮಲಕ್ಷ್ಮಣರೇ ಬಾಗಿಲಂ ಕಾಯುತ್ತಿದ್ದವರೆಂದು ತುಳಸೀದಾಸನಿಗೆ ತೋರಲು, ಗಳಗಳನೆ ಕಂಬನಿ ಸುರಿಯಿತು. ಬಳಿಕ ತುಳಸೀದಾಸನು ಶ್ರೀರಾಮಚಂದ್ರನನ್ನು ಧ್ಯಾನಿಸಿ—

ಇರುಳುಂ ಪಗಲುಂ ದುಷ್ಕರ |
ತರವಾದಷ್ಟಾಂಗಯೋಗನಿಷ್ಠೆಯೊಳಿರುತುಂ ||
ನೆರೆ ನೆನೆವಗ್ಗರ್ಗಂ ದೊರೆಯದ |
ಹರಿ ಯೆನ್ನೀಕುಟಿಯ ಬಾಗಿಲಂ ಕಾದಪನೇ ||

ಚರಣದ ಧೂಳಿಯು ಸೋಂಕಿಂ |
ದರರೇ ನಿಂದಿದ್ದರ್ ಶಿಲೆಯು ಪೆಣ್ಣಾಗಿಸಿದಾ ||
ಪರಮೋದಾರಂ ಶ್ರೀರಘು |
ವರನೆನ್ನೀಕುಟಿಯ ಬಾಗಿಲಂ ಕಾದಪನೇ ||

ಕ್ಷಿತಿತಲದೊಳೇಕಪತ್ನೀ |
ವ್ರತಧರ ನೇಕಶರ ನೇಕವಚನ ನೆನುತ್ತುಂ ||
ಅತಿಶಯದಿಂ ನೆಗಳ್ದ ರಘು ||
ಪತಿಯೆನ್ನೀ ಕುಟಿಯ ಬಾಗಿಲಂ ಕಾದವನೇ ||

—ಎಂದು ಹಲವುಬಗೆಯಿಂದ ಹಂಬಲಿಸುತ್ತ—ಎಲೈ ಶ್ರೀರಘುವೀರನೆ! ಪರಮಪುರುಷನೆ! ಶಂಭುಪ್ರಿಯನೆ! ವಿಶ್ವೋದ್ಧಾರನೆ! ನೀನು ಲಕ್ಷ್ಮೀಕಾಂತನು; ಪರಮೋದಾರನು; ಹಾಲನ್ನು ಬೇಡಿದ ಉಪಮನ್ಯುವಿಗೆ ಕ್ಷೀರಸಾಗರವನ್ನೇ ಕೊಟ್ಟೆ; ಧ್ರುವನಿಗೆ ಧ್ರುವವಾದ ಸ್ಥಾನವನ್ನೇ ಕೊಟ್ಟೆ; ಶ್ರೀರಾಮಚಂದ್ರನೆ!

ಕಡುನಲವಿಂ ಕರುಣಿಸಿದೈ |
ಗಡ ಮುನ್ನ ವಿಭೀಷಣಂಗೆ ಪೊಂಬೊಳಲನೆ ಪೊ ||
ನ್ನೊಡಮೆಗಳಂ ಕಳ್ಳರ್ ಕೊ |
ಳ್ವೆಡೆಯೊಳದೇತಕ್ಕೆ ಪರಮಲೋಭಿಯೆ ಆದೈ ||

—ಎಂದು ನಾನಾವಿಧವಾಗಿ ಸ್ತೋತ್ರಮಾಡಿ ಕಳ್ಳರನ್ನು ಕುರಿತು—ನಿಮಗೆ ಇಷ್ಟವಾದುದು ಯಾವಯಾವುದೋ ಅದನೆಲ್ಲವಂ ನೀವು ತೆಗೆದುಕೊಂಡುಹೋಗಿ; ಸಂಕೋಚ ಪಡಬೇಡಿ—ಎಂದನು.

ಆ ಕಳ್ಳರು ತುಳಸೀದಾಸನ ಮಾತಂ ಕೇಳಿ ವಿಸ್ಮಿತರಾಗಿ ಆತನ ಕಾಲಿಗೆ ಬಿದ್ದು —ಅಭಯವಂ ಕೊಟ್ಟು ನಮ್ಮನ್ನು ಕಾಪಾಡಬೇಕು; ನಾವು ಪತಿತರು; ದುರ್ಜನರು; ಅವಿದ್ಯೆಯಿಂದ ಪರಿವೇಷ್ಟಿತರಾಗಿ ಇದ್ದೆವು; ನಿನ್ನ ಸಂಗದಮಹಿಮೆಯಿಂದ ಶ್ರೀರಾಮಸಂದರ್ಶನವು ನಮಗೆ ಆಯಿತು; ಸೂರ್ಯನು ಉದಯಿಸಲು, ಕತ್ತಲೆಯು ಹೋಗುವಂತೆ, ನಿನ್ನ ದರ್ಶನವಾಗಲು, ನಮ್ಮ ದುರ್ಬುದ್ಧಿಯು ಹೋಯಿತು—ಎನಲು, ತುಳಸೀದಾಸನು ಅವರ ಮಾತಂ ಕೇಳಿ—ನಿಮ್ಮ ಪುಣ್ಯವು ಅತಿಶಯಿತವಾದುದು; ಜಗನ್ನಿವಾಸನು ಪ್ರಯತ್ನಸಾಹಸವೇನೂ ಇಲ್ಲದೆಯೇ ನಿಮಗೆ ದರ್ಶನವಂ ಕೊಟ್ಟನು. ಅಡವಿಯಲ್ಲಿ ಸೊಪ್ಪಂ ಕೊಯ್ಯುತ್ತ ಇರುವಾಗ ಸಿದ್ಧವಲ್ಲಿಯು ಕೈಗೆ ದೊರೆತಂತೆ, ಊರಲ್ಲಿ ಕಲ್ಲುಗಳಂ ಆಯುತ್ತಿರಲು, ಸ್ಪರ್ಶವೇಧಿಶಿಲೆಯು ಆಕಸ್ಮಿಕವಾಗಿ ಸಿಕ್ಕಿದಂತೆ, ಮನೆಮನೆಗೂ ಹೋಗಿ ಗಂಜಿಯಂ ಭಿಕ್ಷೆಬೇಡುತ್ತಿರಲು, ಅಮೃತವೇ ಕೈಸೇರಿದಂತೆ; ಕಾಮಶಾಸ್ತ್ರವಂ ನೋಡುತ್ತಿರಲು, ವೇದಾಂತಸಾರವು ಸಂಗಳಿಸಿದಂತೆ; ಅರಣ್ಯದಲ್ಲಿ ಗೊಬ್ಬಳಿಯ ಮರವನ್ನು ಹುಡುಕುತ್ತಿರುವಾಗ, ಮಲಯಗಿರಿಚಂದನವು ಮುಂದುಗಡೆ ಗೋಚರವಾದಂತೆ; ಯಮಪುರವಂ ನೋಡುವುದಕ್ಕೆ ಹೋಗಲು, ವೈಕುಂಠಪುರವು ಕಾಣಿಸಿದಂತೆ ನಿಮಗೆ ಭಗವದ್ದರ್ಶನವಾಯಿತು—ಎಂದನು.

ಕಳ್ಳರು ಈ ಮಾತಂ ಕೇಳಿ ಮತ್ತೆ ನಮಸ್ಕರಿಸಿ ದುರ್ಬುದ್ಧಿಯಂ ಬಿಟ್ಟು ಸಂತೋಷದಿಂದ ಆತನ ಆಶ್ರಮದಲ್ಲಿಯೇ ನೆಲಸಿನಿಂದರು.

ಯಾರಿಗೆ ಸದ್ಗತಿಯುಂಟಾಗಬೇಕೆಂಬ ಅಪೇಕ್ಷೆಯಿರುವುದೋ ಅವರು ಅವಶ್ಯವಾಗಿ ಸತ್ಸಹವಾಸವನ್ನು ಮಾಡಬೇಕು; ಸತ್ಸಹವಾಸಕ್ಕಿಂತಲೂ ಪರಮಸಾಧನವಾವುದೂ ಇಲ್ಲ; ಈ ವಿಷಯದಲ್ಲಿ ಶ್ರೀಮದ್ಭಾಗವತದ ಏಕಾದಶಸ್ಕಂಧದೊಳಗೆ ಶ್ರೀಕೃಷ್ಣಸ್ವಾಮಿಯು ಉದ್ಧವನಂ ಕುರಿತು—

ಶ್ಲೋ॥ ತತೋದುಸ್ಸಂಗಮುತ್ಸೃಜ್ಯ ಸತ್ಸು ಸಜ್ಜೇತ ಬುದ್ಧಿಮಾನ್ |
ಸಂತಏತಸ್ಯ ಛಿಂದಂತಿ ಮನೋವ್ಯಾಸಂಗಮುಕ್ತಿಭಿಃ ||

ಟೀ॥ ಆದಕಾರಣ ದುಸ್ಸಹವಾಸವನ್ನು ಬಿಟ್ಟು ಸತ್ಸಹವಾಸವನ್ನು ಮಾಡಬೇಕು; ಸತ್ಪುರುಷರು ತಮ್ಮ ಹಿತೋಕ್ತಿಗಳಿಂದ ಮನಸ್ಸಿನ ದುಷ್ಪ್ರವರ್ತನೆಯನ್ನು ತಪ್ಪಿಸುವರು.

ಯಥೋಪಶ್ರಯಮಾಣಸ್ಯ ಭಗವಂತಂ ವಿಭಾವಸುಂ |
ಶೀತಂ ಭಯಂ ತಮೋಪ್ಯೇತಿ ಸಾಧೂನ್ ಸಂಸೇವತಸ್ತಥಾ ||

ಟೀ॥ ಪೂಜ್ಯನಾದ ಯಜ್ಞೇಶ್ವರನನ್ನು ಆಶ್ರಯಿಸಿದವನ ಶೀತಬಾಧೆಯಂತು ನಶಿಸಿಹೋಗುವುದೋ; ಅಂತು ಸಾಧುಗಳನ್ನು ಸೇವಿಸುವವನ ಭಯವೂ ಅಜ್ಞಾನವೂ ನಾಶವನ್ನೈದುವುದು.

- ನಿಮಜ್ಯೋನ್ಮಜ್ಜತಾಂ ಘೋರೇ ಭವಾಬ್ಧೌ ಪರಮಾಯಣಂ |
ಸಂತೋ ಬ್ರಹ್ಮವಿದಶ್ಶಾಂತಾಃ ನೌರ್ದೃಢೇವಾಪ್ಸು ಮಜ್ಜತಾಂ ||

ಟೀ॥ ಸಮುದ್ರದಂತಿರುವ ದಾರುಣವಾದ ಸಂಸಾರದಲ್ಲಿ ಮುಳುಗಿ ತೇಲಾಡುತ್ತಿರುವ ಜೀವಿಗಳಿಗೆ ಬ್ರಹ್ಮಜ್ಞರೂ ಉಪಶಾಂತರೂ ಆಗಿರುವ ಸತ್ಪುರುಷರು ನೀರಲ್ಲಿ ಮುಳುಗುತ್ತಿರುವವರಿಗೆ ಗಟ್ಟಿಯಾದ ಹಡಗಿನಂತೆ ದೊಡ್ಡ ಅವಲಂಬನವಾಗಿರುವರು.)

ಅನ್ನಂ ಹಿ ಪ್ರಾಣಿನಾಂ ಪ್ರಾಣ ಆರ್ತಾನಾಂ ಶರಣಂ ತ್ವಹಂ ||
ಧರ್ಮೋ ವಿತ್ತಂ ನೃಣಾಂ ಪ್ರೇತ್ಯ ಸಂತೋಽಸ್ಮಾದ್ಬಿಭ್ಯತೋಽರಣಂ ||

(ಟೀ॥ ಪ್ರಾಣಿಗಳಿಗೆ ಅನ್ನವೇ ಜೀವನ. ದುಃಖಿತರಾದವರಿಗೆ ನಾನೇ ರಕ್ಷಕ. ಪರಲೋಕವನ್ನು ಸೇರಿದವರಿಗೆ ಧರ್ಮವೇ ಹಣ. ಈ ಸಂಸಾರದದೆಸೆಯಿಂದ ಭೀತನಾದವನಿಗೆ ಸತ್ಪುರುಷರೇ ರಕ್ಷಕರು.)

ಸಂತೋ ದಿಶಂತಿ ಚಕ್ಷೂಂಷಿ ಬಹಿರರ್ಕಸ್ಸಮುತ್ಥಿತಃ |
ದೇವತಾ ಬಾಂಧವಾಸ್ಸಂತ ಸ್ಸಂತಆತ್ಮಾಹಮೇವ ಚ ||

(ಟೀ|| ಸತ್ಪುರುಷರು ಜ್ಞಾನದೃಷ್ಟಿಗಳನ್ನು ಕೊಡುವರು. ಉದಯಿಸಿದ ಸೂರ್ಯನಾದರೋ ಈ ಹೊರಗಣ ವಸ್ತುಗಳನ್ನು ಮಾತ್ರ ಕಾಣಬಹುದಾದ ದೃಷ್ಟಿಯನ್ನು ಕೊಡುವನು. ಸತ್ಪುರುಷರೇ ದೇವರು ಮತ್ತು ನೆಂಟರು. ಸತ್ಪುರುಷರೇ ಆತ್ಮನು ಮತ್ತು ನಾನು.)

ಎಂಬಿವೆ ಮೊದಲಾದ ವಚನಗಳಿಂದ ವಿಸ್ತರವಾಗಿ ಸತ್ಸಂಗಮಹಿಮೆಯನ್ನು ಉಪದೇಶಿಸಿರುವನು.

ಸತ್ಸಹವಾಸವಮಾಡಿದವರಿಗೆ ಭಗವನ್ನಾಮಂಗಳ ಕೀರ್ತನೆಯೂ ಶ್ರವಣವೂ ಸ್ಮರಣೆಯೂ ನಿತ್ಯವೂ ಘಟಿಸುವುದು. ಅದರಿಂದ ಜಾರಚೋರದುರ್ಜನರೆನಿಸಿದವರೂ ಸಾಧುಸಜ್ಜನರಾಗುವರು. ತುಲಸೀದಾಸನ ಆಶ್ರಮದಲ್ಲಿ ಭಗವನ್ನಾಮಕೀರ್ತನಾದಿಗಳು ಅವಿಚ್ಛಿನ್ನವಾಗಿ ಬಹುಕಾಲ ನಡೆಯುತ್ತಿರಲು, ಒಂದು ಆಶ್ಚರ್ಯವು ನಡೆಯಿತು. ಅದೇನೆಂದರೆ:—ಆಶ್ರಮದಲ್ಲಿ ಬ್ರಾಹ್ಮಣರು ಭೋಜನಕ್ಕೆ ಕುಳಿತಿದ್ದರು; ನಾನಾಭಕ್ಷ್ಯಭೋಜ್ಯಾದಿಗಳೂ ಬಡಿಸಲ್ಪಟ್ಟಿದ್ದುವು; ತುಳಸೀದಾಸನು ಸಂಕಲ್ಪವಂ ಮಾಡಿದನು; ಬ್ರಾಹ್ಮಣರು ಬ್ರಹ್ಮಾರ್ಪಣವೆಂದರು. ಆ ಸಮಯಕ್ಕೆ ಒಬ್ಬ ಬ್ರಾಹ್ಮಣನು ಹೊರಬಾಗಿಲಬಳಿಯಲ್ಲಿ ನಿಂತುಕೊಂಡು, 'ಶ್ರೀರಾಮ' ಎಂದು ಮೊದಲು ಉಚ್ಚರಿಸಿ, ಬಳಿಕ ನಾನು ಬ್ರಹ್ಮಹತ್ಯೆಯಂ ಮಾಡಿದವನು; ನನಗೆ ಏನಾದರೂ ಭಿಕ್ಷವಂ ಕೊಡಬೇಕು—ಎಂದನು. ಆ ಮಾತಂ ಕೇಳಿ ಬ್ರಾಹ್ಮಣರೆಲ್ಲರೂ ತಟಸ್ಥರಾಗಿ ಇದ್ದರು. ತುಳಸೀದಾಸನು ಹೊರಗೆ ಬಂದು ಆ ಬ್ರಾಹ್ಮಣನನ್ನು ಆಲಿಂಗಿಸಿಕೊಂಡು, ಕೈಹಿಡಿದು ಕರೆದುತಂದು ತನ್ನ ಪಙ್ಕ್ತಿಯಲ್ಲಿ ಕುಳ್ಳಿರಿಸಿ ಉಪಚರಿಸಿ—ನನ್ನ ಮಾತನಾಲಿಸುವುದು; ತಾವು ಮೊದಲು 'ಶ್ರೀರಾಮ' ಎಂದು ಉಚ್ಚರಿಸಿದಿರಿ; ಬ್ರಹ್ಮಹತ್ಯೆ ಮೊದಲಾದ ಪಾಪಗಳು ಆಗಲೆ ದಗ್ಧವಾಗಿ ಹೋದುವು—ಎನಲು, ಆ ಬ್ರಾಹ್ಮಣನು—ಆದರೆ ನನಗೆ ಅನ್ನವಂ ಬಡಿಸಿ—ಎಂದನು. ಆ ಮಾತಂ ಕೇಳಿ ಬ್ರಾಹ್ಮಣರೆಲ್ಲರೂ ತುಳಸೀದಾಸನನ್ನು ಕುರಿತು-ಬ್ರಹ್ಮಹತ್ಯೆಮಾಡಿದವನನ್ನು ಪಙ್ಕ್ತಿಯಲ್ಲಿ ಯಾವ ಶಾಸ್ತ್ರದಿಂದ ಕುಳ್ಳಿರಿಸುವಿರಿ? —ಎನಲು, ತುಳಸೀದಾಸನು ಅವರನ್ನು ಕುರಿತು—ಇದಕ್ಕೆ ತಕ್ಕ ಶಾಸ್ತ್ರಾಧಾರವುಂಟು; ಶ್ರೀರಾಮನಾಮವನ್ನು ಮುಖದಿಂದ ಉಚ್ಚರಿಸಲು, ಬ್ರಹ್ಮಹತ್ಯೆ ಸಿಲ್ಲದು; ಶ್ರೀಭಾಗವತದಲ್ಲಿ ಭಗವಂತನು ಉದ್ಧವನಂ ಕುರಿತು, ಸ್ವನಾಮಮಹಿಮೆಯನ್ನು ಕಲಿಯುಗದಲ್ಲಿ ಬಹುವಾಗಿ ಪ್ರಶಂಸಿಸಿ ಉಪದೇಶಿಸಿರುವನು. ಸ್ನಾನಸಂಧ್ಯಾವಂದನಾದಿಗಳಲ್ಲಿಯೂ ಮೊದಲು ಕೇಶವಾದಿನಾಮಸ್ಮರಣೆಯಂ ಮಾಡುವರು. ಕರ್ಮಗಳಲ್ಲಿ ನ್ಯೂನವಾದುದು ವಿಷ್ಣುಸ್ಮರಣೆಯಿಂದ ಪೂರ್ಣವಾಗುವುದು; ಪಿತೃಶ್ರಾದ್ಧವನ್ನು ಸಾಂಗವಾಗಿ ಮಾಡಿ,

ಕಡೆಗೆ ಜನಾರ್ದನಸ್ವರೂಪದಲ್ಲಿ ಅರ್ಪಣೆಯಂ ಮಾಡುವರು ; ಹರಿನಾಮವಿಲ್ಲದೆ ಯಾವ ಕರ್ಮವೂ ವ್ಯರ್ಥ ; ಘಟಿತಾರ್ಥದಲ್ಲಿ ಮೂವತ್ತಾರು ಗುಣಗಳು ಬಂದರೂ ಲಗ್ನವು ನಿರ್ದೋಷವಾಗಿದ್ದರೂ ಕಡೆಗೆ "ತದೇವ ಲಗ್ನಂ ಸುದಿನಂ ತದೇವ ತಾರಾಬಲಂ ಚಂದ್ರಬಲಂ ತದೇವ | ವಿದ್ಯಾಬಲಂ ದೈವಬಲಂ ತದೇವ ಲಕ್ಷ್ಮೀಪತೇ ತೇಂಘ್ರಿಯುಗಂ ಸ್ಮರಾಮಿ ||" ಎಂದು ಲಕ್ಷ್ಮೀಪತಿಯ ಚರಣಾರವಿಂದದ ಸ್ಮರಣೆಯಿಲ್ಲದೆ ನಡೆಯದು. ಅಂತಕಾಲಗಳಲ್ಲಿಯೂ ಪ್ರಾಯಶ್ಚಿತ್ತಗಳಲ್ಲಿಯೂ ಹರಿನಾಮೋಚ್ಚಾರಣೆಯಂ ಮಾಡುವರು. ಕೈಲಾಸಪತಿಯಾದ ಪಾರ್ವತೀರಮಣನೂ ಶ್ರೀರಾಮನಾಮವನ್ನೇ ಜಪಿಸುತ್ತಿರುವನು. ಮಹಾಪಾತಕಿನಿಯಾದ ಗಣಿಕೆಯೊಬ್ಬಳು ಗಿಣಿಗೆ ರಾಮನಾಮವನ್ನಿಟ್ಟು ಆಡಿಸುತ್ತಿದ್ದುದರಿಂದ ಆ ನಾಮದ ಮಹಿಮೆಯಿಂದ ಅವಳ ಪಾತಕಂಗಳೆಲ್ಲವೂ ಸುಡಲ್ಪಡಲಿಲ್ಲವೆ? ಭ್ರಷ್ಟನಾದ ಅಜಾಮಿಳನು ಅಂತಕಾಲದಲ್ಲಿ ನಾರಾಯಣಸ್ಮರಣೆಯಂ ಮಾಡಲು, ಅವನ ಪಾಪಗಳೆಲ್ಲವೂ ನಶಿಸಿ ಹೋಗಲಿಲ್ಲವೇ ? ಈ ವಿಷಯದಲ್ಲಿ ಪ್ರಸಿದ್ಧವಾದ ಅನೇಕ ವಚನಂಗಳು ಇವೆ. ಕೆಲವನ್ನು ಉದಾಹರಿಸುವೆನು:—

ರಾಮೇತಿ ರಾಮಭದ್ರೇತಿ ರಾಮಚಂದ್ರೇತಿ ಯಃ ಪಠೇತ್ |
ವಿಮುಕ್ತೋ ಹಿ ನರಃ ಪಾಪಾತ್ ಮುಕ್ತಿಂ ಪ್ರಾಪ್ನೋತಿ ಶಾಶ್ವತೀಂ ||

ಯಜ್ಞವ್ರತತಪೋದಾನಂ ಸಾಂಗಂ ನೈವ ಕಲೌ ಯುಗೇ |
ಗಂಗಾಸ್ನಾನಂ ಹರೇರ್ನಾಮ ನಿರಪಾಯಮಿದಂ ದ್ವಯಂ ||

ಗೋವಿಂದೇತಿ ಸದಾ ಧ್ಯಾನಂ ಗೋವಿಂದೇತಿ ಸದಾ ಜಪಃ |
ಗೋವಿಂದೇತಿ ಸದಾ ಧ್ಯಾನಂ ಸದಾ ಗೋವಿಂದಕೀರ್ತನಂ ||

ಹರೇರ್ನಾಮೈವ ನಾಮೈವ ನಾಮೈವ ಖಲು ಜೀವನಂ |
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ||

ಮಹಾದೇವ ಮಹಾದೇವ ಮಹಾದೇವೇತಿ ಕೀರ್ತನಾತ್ |
ಸದ್ಯಃ ಪ್ರಳಯಮಾಯಾಂತಿ ಮಹಾಪಾತಕಕೋಟಯಃ ||

ರಾಶಬ್ದೋಚ್ಚಾರಣಾದೇವ ಮುಖಾನ್ನಿರ್ಯಾತಿ ಪಾತಕಂ |
ಪುನಃಪ್ರವೇಶಭೀತ್ಯಾ ಚ ಮಕಾರಸ್ತು ಕವಾಟವತ್ ||

ರಾಮೇತಿ ವರ್ಣದ್ವಯಮಾದರೇಣ ಸದಾ ಸ್ಮರನ್ ಮುಕ್ತಿಮುಪೈತಿ ಜಂತುಃ|
ಕಲೌ ಯುಗೇ ಕಲ್ಮಷಮಾನಸಾನಾಮನ್ಯತ್ರ ಧರ್ಮೇ ಖಲು ನಾಧಿಕಾರಃ ||

ಅಲಂ ಶಾಸ್ತ್ರಾಭ್ಯಾಸೈರಲಮಸಕೃದಾಮ್ನಾಯಪಠನೈಃ |
ಅಲಂ ತೀರ್ಥಸ್ನಾನೈರಲಮಖಿಲಯಾಗವ್ರತಜಪೈಃ ||

ಅಲಂ ಯೋಗಾಭ್ಯಾಸೈರಲಮಪಿ ಮಹಾಪಾತಕಭಿಯಾ |
ಯದಸ್ಮಾಕಂ ರಾಮಸ್ಮರಣಮಹಿಮಾಽಸೌ ವಿಜಯತೇ ||

ಶ್ರೀರಾಮೇತ್ಯೇಕದಾ ವಕ್ತುಂ ಮನೋ ಯಸ್ಯ ಪ್ರವರ್ತತೇ |
ವೈಕುಂಠವಾಸಿನಸ್ತಸ್ಯ ಕುಲಮೇಕೋತ್ತರಂ ಶತಂ ||

ನಾರಾಯಣೋನಾಮ ನರೋನರಾಣಾಂ ಪ್ರಸಿದ್ಧಚೋರಃ ಕಥಿತಃ ಪೃಥಿವ್ಯಾಂ
ಅನೇಕಜನ್ಮಾರ್ಜಿತಪಾಪಸಂಚಯಂ ಹರತ್ಯಶೇಷಂ ಸ್ಮರತಾಂ ಸದೈವ ||

ಅಕ್ಷರಂ ಹಿ ಪರಬ್ರಹ್ಮ ಗೋವಿಂದೇತ್ಯಕ್ಷರತ್ರಯಂ |
ತಸ್ಮಾದುಚ್ಚರಿತಂ ಯೇನ ಬ್ರಹ್ಮಭೂಯಾಯ ಕಲ್ಪತೇ ||

ಕೃಷ್ಣೇತಿ ಮಂಗಳಂ ನಾಮ ಯಸ್ಯ ವಾಚಿ ಪ್ರವರ್ತತೇ |
ಭಸ್ಮೀಭವಂತಿ ತಸ್ಯಾಶು ಮಹಾಪಾತಕಕೋಟಯಃ ||

ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃಕರ್ಮಾತ್ಮಕಾನಿ ವೈ |
ಯಾನಿ ತೇಷಾಮಶೇಷಾಣಾಂ ಕೃಷ್ಣಾನುಸ್ಮರಣಂ ಪರಂ ||

ಅಚ್ಯುತಾನಂತಗೋವಿಂದನಾಮೋಚ್ಚಾರಣಭೇಷಜಾತ್ |
ನಶ್ಯಂತಿ ಸಕಲಾ ರೋಗಾಸ್ಸತ್ಯಂ ಸತ್ಯಂ ವದಾಮ್ಯಹಂ ||

ಇಂತು ಧರ್ಮಶಾಸ್ತ್ರಂಗಳಲ್ಲಿಯೂ ಪುರಾಣಗಳಲ್ಲಿಯೂ ಪ್ರತಿಪಾದಿತವಾದ ಪರಶ್ಶತವಚನಗಳಿಂದ ಮಹಾಪಾತಕನಾಶಕವೂ ಮಹಾಪ್ರಾಯಶ್ಚಿತ್ತರೂಪವೂ ಸದ್ಗತಿಪ್ರದವೂ ಕಲಿಯುಗದಲ್ಲಿ ಪರಮಸಾಧನವೂ ಎನಿಸಿರುವ ಭಗವನ್ನಾಮಸಂಕೀರ್ತನದ ಮಹಿಮೆಯು ವಿವರಿಸಲಸದಳವಾಗಿರುವುದು_ಎಂದನು.

ಈ ಮಾತಂ ಕೇಳಿ ಬ್ರಾಹ್ಮಣರು ಆತನನ್ನು ಕುರಿತು_ಎಲೈ ವಿಚಕ್ಷಣನೆ! ನೀನು ನುಡಿದುದೆಲ್ಲವೂ ಉಂಟು. ಆದರೂ ನಮಗೆ ಸತ್ಯ ತೋರುವುದಿಲ್ಲ. ನಮಗೆ ನಿದರ್ಶನವನೇನಾದರೂ ನೀನು ತೋರಿದರೆ,_ನಮ್ಮ ಸಂಶಯವು ಖಂಡಿಸಿ ಹೋದೀತು_ ಎನಲು; ತುಳಸೀದಾಸನು ಮತ್ತೆ ಅವರನ್ನು ಕುರಿತು_ಯಾವ ನಿದರ್ಶನವನ್ನು ನಿಮಗೆ ತೋರಬೇಕು?_ಎಂದನು. ಅದಕ್ಕೆ ಅವರು_ಕಾಶೀಪತಿಯಾದ ವಿಶ್ವೇಶ್ವರನ ಮುಂದೆ ಇರುವ ನಂದೀಶ್ವರನಿಗೆ ಪಾತ್ರೆಯಲ್ಲಿ ನೈವೇದ್ಯವಂ ತೆಗೆದುಕೊಂಡುಹೋಗಿ ಸಮರ್ಪಣೆ ಮಾಡು. ಪಾಷಾಣಮೂರ್ತಿಯಾದ ಆ ನಂದೀಶ್ವರನು ನೈವೇದ್ಯವಂ ಭಕ್ಷಿಸಿದರೆ, ಬ್ರಹ್ಮಹತ್ಯೆಮಾಡಿದವನನ್ನು ನಾವು ಪಙ್ಕ್ತಿಯಲ್ಲಿ ಕೂಡಿಸಿಕೊಳ್ಳುವೆವು. ಸುಮ್ಮನೆ ಹಿಂದಣನಾನಾದೃಷ್ಟಾಂತಗಳಿಂದ ನಾಮಮಹಿಮೆಯನ್ನು ಉದ್ಘೋಷಿಸುವುದರಿಂ ಪ್ರಯೋಜನವೇನು? ಪ್ರತ್ಯಕ್ಷವಾದ ನಿದರ್ಶನವಂ ನಮಗೆ ತೋರಿಸಿದರೆ, ಆಗ ನಮಗೆ

ಸತ್ಯ ತೋರೀತು; ಸಕ್ಕರೆಯ ಸವಿಯಂ ಬಾಯಿಂದ ಹೇಳಲು, ನಾಲಗೆಗೆ ರುಚಿಯು ಎಂತು ತೋರುವುದಿಲ್ಲವೋ; ಅಂತು ನೀನು ನಾಮಮಹಿಮೆಯನ್ನು ಸುಮ್ಮನೆ ಹೊಗಳುವುದರಿಂದ ನಮಗೆ ಹೃದಯಂಗಮವಾಗಲಾರದು; ನಾಣ್ಯವಂ ಹೊಡೆದು ಸದ್ದು ಮಾಡಿ ಪರೀಕ್ಷಿಸಿ, ಒಳ್ಳೆಯದು—ಎಂದು ತೋರಿಸುವಂತೆ, ಚಿನ್ನವಂ ಒರೆಯಿಟ್ಟು ಶ್ರೇಷ್ಠವಾದುದೆಂಬುದಂ ನಿದರ್ಶಿಸಿ ತೋರುವಂತೆ, ನಾಮಮಹಿಮೆಯನ್ನು ತಕ್ಕ ನಿದರ್ಶನದಿಂದ ನಮಗೆ ತೋರಿಸಬೇಕು—ಎಂದನು.

ಇಂತು ನುಡಿದ ಬ್ರಾಹ್ಮಣರ ನುಡಿಯಂ ಕೇಳಿ, ತುಳಸೀದಾಸನು ಸಂತೋಷಿಸಿ ಒಪ್ಪಿ ಪಾತ್ರೆಯಲ್ಲಿ ಅನ್ನವಂ ತೆಗೆದುಕೊಂಡು ಶ್ರೀವಿಶ್ವೇಶ್ವರನ ದೇವಸ್ಥಾನಕ್ಕೆ ತೆರಳಿದನು. ಬ್ರಾಹ್ಮಣರೂ ಸಂಗಡವೇ ಹೊರಟು ದೇವಸ್ಥಾನವನ್ನು ಸೇರಿ ಮಧ್ಯಮಂಟಪದಲ್ಲಿ ನಿಂತು ಆಶ್ಚರ್ಯವಂ ನೋಡುತ್ತಿದ್ದರು. ತುಳಸೀದಾಸನು ವಿಶ್ವೇಶ್ವರನ ಸನ್ನಿಧಿಯಂ ಸೇರಿ ನೈವೇದ್ಯವಂ ಮುಂದಿಟ್ಟು ಸಾಷ್ಟಾಂಗನಮಸ್ಕಾರ ಮಾಡಿ ಪರಮೇಶ್ವರನನ್ನು ಕುರಿತು—

ಜಯ ಜಯ ಗಿರಿವರಶರಣಾ |
ಜಯ ಜಯ ಸುರವಿನುತಚರಣ ಸಜ್ಜನಶರಣಾ ||
ಜಯ ಜಯ ವಿಪದುತ್ತಾರಣ |
ಜಯ ಜಯ ನತಭರಣನಿಪುಣ ಕರುಣಾಭರಣಾ ||

ಜಯ ಜಯ ಶಂಕರಾ ಜಯಕರಾ ಪರಿಪಾಲಿತಪಾದಕಿಂಕರಾ |
ಜಯ ಜಯ ಭೀಹರಾ ಭವ ಹರಾ ಗಿರಿರಾಜಸುತಾಮನೋಹರಾ ||
ಜಯಜಯ ಸಂಹಿತಾಶ್ರಿತಹಿತಾ ಮಹಿತೇಹಿತ ನೀಲಲೋಹಿತಾ |
ಜಯ ಜಯ ಮೋಹಿತಾವಿರಹಿತಾ ಘನಯೋಗಸಮಾಗಮೋಹಿತಾ ||

ಜಯ ಜಯ ಜಯ ಗಂಗಾನಾಟ್ಯರಂಗೋತ್ತಮಾಂಗಾ |
ಜಯ ಜಯ ಜಯ ಲಿಂಗಾಕಾರವಿಭ್ರಾಜಿತಾಂಗಾ ||
ಜಯ ಜಯ ಜಯ ತುಂಗಾನಂದಸಂಪಾದ್ಯಪಾಂಗಾ |
ಜಯ ಜಯ ಜಯ ಸಾಂಗಾಮ್ನಾಯಸಾರೈಕಸಂಗಾ |

ದೊರೆವಡೆದ ನಿನ್ನ ಪೆಸರೇ |
ಕರಮುದ್ಬೋಧಿಸುವುದೆಲ್ಲ ವಿಶ್ವಂಗಳ್ಗೀ ||
ಶ್ವರನೆಂಬುದನೆಲೆವಿಶ್ವೇ |
ಶ್ವರನೇ ನಿನ್ನೆಸೆವ ಮಹಿಮೆಯೇಂ ಕೇವಳಮೇ ||

ಮಾನಾಗಂಗಳ್ ತೊಡಂಗಳ್ ಘನಸಿತಭಸಿತೋದ್ಧೂಳನಂ ಮೆಯ್ಯೊಳಿಲ್ಲಂ |
ನೀನೆಂದುಂ ಕೃತ್ತಿವಾಸಂ ಬಗೆವೊಡೆ ವಿಕೃತಂ ನಿನ್ನ ರೂಪಾದೊಡಂ ನಾಂ ||

ತಾನೇ ಸುಪ್ರೀತಿಯಿಂದಂ ಪರಿಸಿದಳವಮಾ ನಿನ್ನ ನೀಗೌರಿ ದೇವಾ |
ಧ್ಯಾನಾತೀತಂ ಗಡಾ ನಿನ್ನಿರವು ಜಗದೆ ತಾಂ ಭಾವಿಸಲ್ ಬಲ್ಲನಾವೋ ||

ನೀನೇ ಗಡ ನಿಚ್ಚಂ ಮ |
ನ್ಮಾನಸಮಂದಿರದೊಳಿನೆ ರಘುಕುಲತಿಲಕಂ ||
ಆನಾಮದ ಮ್ಹಿಮೆಯ ಮೆರೆ |
ಯಾನತನಂ ನನ್ನನಿಂದು ಪೊರೆ ಪರಮೇಶಾ ||

ಎಂದು ಕೆಲವುತೆರದಿಂದ ಸ್ತೋತ್ರಮಾಡಿ—ಮಹಾದಾರುಣವಾದ ಕಾಲಕೂಟವಂ ಪಾನಮಾಡಿ ಲೋಕವನ್ನೆಲ್ಲ ರಕ್ಷಿಸಿದ ಎಲೆಮಹಾದೇವನೇ ! ಶ್ರೀರಾಮನಾಮವಂ ನಿತ್ಯವೂ ನೀನು ಜಪಿಸುತ್ತ ಇರುವೆ, ಆ ರಾಮನಾಮದಲ್ಲಿ ಅಂತಹ ಮಹಿಮೆಯಿರುವುದು. ಯಥಾರ್ಥವಾಗಿದ್ದರೆ, ಈಗ ನಂದಿಯು ಈ ನೈವೇದ್ಯವಂ ಭಕ್ಷಿಸಲಿ—ಎನಲು, ಒಡನೆಯೆ ಪಾಷಾಣನಂದಿಯು ಉಸಿರಿಂದ ಕೂಡಿ ಥಟ್ಟನೆ ಎದ್ದುಬಂದು ನೈವೇದ್ಯವಂ ಬಳಿಕ ಎಲೆಯನ್ನೂ ಭಕ್ಷಿಸಿದನು. ಎಲ್ಲರೂ ನೋಡಿ ಆಶ್ಚರ್ಯಪಟ್ಟರು. ಇಂತಹ ಚಮತ್ಕಾರವಂ ತೋರಿಸಿ ಬಳಿಕ ನಂದಿಯು ಯಥಾರೂಪವಾಗಿ ಕುಳಿತನು. ಭಕ್ತರ ಮಹಿಮೆಯು ಅತ್ಯದ್ಭುತವು !! ಶ್ರುತಿಶಾಸ್ತ್ರಗಳಿಂದಲೂ ಪಾರವಂ ತಿಳಿಯಲಾಗದು. ಆಗ ಎಲ್ಲರೂ ಮಹಾಜಯಜಯಧ್ವನಿಯೊಡನೆ ಭಗವನ್ನಾಮಕೀರ್ತನೆಯಂ ಮಾಡಿದರು. ಬ್ರಾಹ್ಮಣರೆಲ್ಲರೂ ತುಳಸೀದಾಸನಿಗೆ ನಮಸ್ಕಾರವಂ ಮಾಡಿ ನೀನು ಧನ್ಯನು ; ಮಹಾಭಾಗವತನು; ವಾಲ್ಮೀಕಿಯ ಪೂರ್ಣಾವತಾರವೆಂದು ಈಗ ನಮಗೆ ನಿಶ್ಚಯವಾಯಿತು. ನಕ್ಷತ್ರಗಳಲ್ಲಿ ಚಂದ್ರನಂತೆಯೂ,ಪಕ್ಷಿಗಳಲ್ಲಿ ಗರುಡನಂತೆಯೂ,ದೇವತೆಗಳಲ್ಲಿ ವೈಕುಂಠಪತಿಯಂತೆಯೂ, ತಪಸ್ವಿಗಳಲ್ಲಿ ವ್ಯಾಸಮುನಿಯಂತೆಯೂ, ಕಪಿಗಳಲ್ಲಿ ಮಾರುತಿಯಂತೆಯೂ,ಚತುರ್ವಿಧವಾದ ಮುಕ್ತಿಗಳಲ್ಲಿ ಸಾಯುಜ್ಯದಂತೆಯೂ, ಪಂಡಿತರಲ್ಲಿ ವೇದಾಂತವಕ್ತೃವಿನಂತೆಯೂ, ಸಿದ್ಧರಲ್ಲಿ ದತ್ತಾತ್ರೇಯನಂತೆಯೂ ನವಗ್ರಹಗಳಲ್ಲಿ ಸೂರ್ಯನಂತೆಯೂ, ಕವಿಗಳಲ್ಲಿ ಭಾರ್ಗವನಂತೆಯೂ ಪರ್ವತಗಳಲ್ಲಿ ಮೇರುವಿನಂತೆಯೂ ಭಗವದ್ಭಕ್ತರಲ್ಲಿ ನೀನು ದೊಡ್ಡವನು—ಎಂದುಸ್ತುತಿಯಿಸಿ ಆತನೊಡನೆ ಆಶ್ರಮಕ್ಕೆ ಬಂದು ಬ್ರಹ್ಮಹತ್ಯೆಮಾಡಿದವನನ್ನು ಪಂಕ್ತಿಯಲ್ಲಿ ಕುಳ್ಳಿರಿಸಿಕೊಂಡು ಸಂತೋಷದಿಂದ ಭೋಜನವಂ ಮಾಡಿದರು. ಕಾಶೀಪಟ್ಟಣದ ಸಕಲಜನಗಳೂ ದೇಹಾಭಿಮಾನವಂ ಬಿಟ್ಟು ಭಗವನ್ನಾಮಸಂಕೀರ್ತನೆಯಂ ಮಾಡುತ್ತ ಭಗವಂತನ ಲೀಲೆಗಳನ್ನು ಶ್ರವಣ ಮಾಡುತ್ತ ಇದ್ದರು. ಈ ಪ್ರಕಾರ ಕೆಲವುಕಾಲ ಕಳೆದಬಳಿಕ ಮತ್ತೊಂದು ಆಶ್ಚರ್ಯ ನಡೆಯಿತು:—

ಆ ಕಾಶೀಪಟ್ಟಣದಲ್ಲಿ ಜಯತ್ಪಾಳನೆಂಬ ಒಬ್ಬ ಸಾಧುಕಾರನಿದ್ದನು. ಆತನು ದೈವವಶದಿಂದ ಕಾಲಧರ್ಮವನ್ನು ಐದಿದನು. ಪತಿವ್ರತೆಯಾದ ಆತನ ಮಡದಿಯು

ಮಮತೆಯಂ ಬಿಟ್ಟು, ತನ್ನ ಪ್ರಾಣನಾಥನನ್ನೇ ಸ್ಮರಿಸುತ್ತ, ಸಹಗಮನಕ್ಕೋಸ್ಕರ ಗಂಗಾತೀರದಲ್ಲಿ ನಿರ್ಮಳವಾದ ಸ್ಥಳದಲ್ಲಿ ಅಗ್ನಿಯಂ ಪ್ರಜ್ವಲಿಸುವಂತೆ ಮಾಡಿಸಿ ಸೌಭಾಗ್ಯಚಿಹ್ನೆಯಂ ಧರಿಸಿಕೊಂಡು ತುಳಸೀದಾಸನ ಆಶ್ರಮದ ಮುಂದೆ ಹೊರಟು ಒಳಗೆ ಪ್ರವೇಶಿಸಿ, ಭಗವನ್ನಾಮಸ್ಮರಣೆಯಂ ಮಾಡುತ್ತ ಕುಳಿತಿದ್ದ ತುಳಸೀದಾಸನ ಸಮೀಪಕ್ಕೆ ಬಂದು ಭಕ್ತಿಯಿಂದ ಆತನಿಗೆ ಸಾಷ್ಟಾಂಗನಮಸ್ಕಾರವಂ ಮಾಡಿದಳು.

ತುಳಸೀದಾಸನು ಅವಳನ್ನು ಕುರಿತು—ಅಷ್ಟಪುತ್ರಸೌಭಾಗ್ಯವತಿಯಾಗು—ಎಂದು ಹರಸಿದನು. ಅದಕ್ಕೆ ಆಕೆಯು—ಸ್ವಾಮಿಯೇ! ನನ್ನ ಪತಿಯು ಕಾಲಧರ್ಮವನ್ನೈದಿರುವನು; ಸಹಗಮನಕ್ಕೋಸ್ಕರ ನಾನು ಹೊರಟಿರುವೆನು. ತಾವು ಅಷ್ಟಪುತ್ರಸೌಭಾಗ್ಯವತಿಯಾಗು—ಎಂದು ಹರಸಿದಿರಿ; ಸಿದ್ಧರಾದ ತಮ್ಮ ಮಾತು ಅಸಿದ್ಧವಾಗುವುದಿಲ್ಲ; ಆದರೆ ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ—ಎನಲು, ತುಳಸೀದಾಸನು—ತಿಳಿಯದೆ ನಾನು ಹರಸಿದೆನು; ಶ್ರೀರಘುನಂದನನು ಇದಂ ಸತ್ಯವನ್ನೇ ಮಾಡಾನು—ಎಂದನು. ಆಕೆಯು ಮತ್ತೆ ಸಾಷ್ಟಾಂಗನಮಸ್ಕಾರಮಾಡಿ ಅಲ್ಲಿಂದ ಹಿಂತಿರುಗಿ ಶವದ ಸಮೀಪಕ್ಕೆ ಹೋಗುವಹೊತ್ತಿಗೆ ಆಕೆಯ ಪತಿಯು ಎದ್ದು ಕುಳಿತಿದ್ದನು. ಸರ್ವರಿಗೂ ಸಂತೋಷವಾಯಿತು. ಎಲ್ಲರೂ ಜಯಜಯಧ್ವನಿಯನ್ನು ಮಾಡಿದರು. ಆಗ ಆಕೆ ಆನಂದಭರಿತೆಯಾಗಿ ತನ್ನ ಪತಿಯ ಕರವಂ ಹಿಡಿದುಕೊಂಡು ನೆಟ್ಟನೆ ತುಳಸೀದಾಸನ ಆಶ್ರಮಕ್ಕೆ ಮತ್ತೆ ಬಂದು ಆತನಿಗೆ ಪತಿಯೊಡನೆ ಅಡಿಗಡಿಗೆ ನಮಸ್ಕಾರವಂ ಮಾಡಿ ಆತನ ಅನುಜ್ಞೆಯಂ ಪಡೆದು ತನ್ನ ಮನೆಗೆ ಪರಮಸಂತೋಷದಿಂದ ತೆರಳಿದಳು.

ವಾರಾಣಸಿಯ ಸಕಲರೂ ತುಳಸೀದಾಸನನ್ನು ಕುರಿತು—ನೀನು ಪರಮಭಾಗವತನು; ಜಡಜೀವರಿಗೆ ತಾರಕನು; ಪಾಷಾಣದ ಬಸವನಿಗೆ ಅನ್ನವನ್ನು ತಿನಿಸಿದೆ; ಆಶೀರ್ವಾದವಂ ಮಾಡಿ ಶವವನ್ನು ಬದುಕಿಸಿದೆ—ಎಂದು ಪಲವುಬಗೆಯಿಂದ ಹೊಗಳಿ ಪಾಡಿದರು.

ಈ ಸುದ್ದಿಯು ಹಸ್ತಿನಾಪುರದಲ್ಲಿ ಅಕಬರ್‌ಧೊರೆಗೆ ತಿಳಿಯಿತು. ಈ ವಿಚಿತ್ರವನ್ನು ಪರೀಕ್ಷಿಸಬೇಕೆಂದು ಆಲೋಚಿಸಿ ಆತನು ತನ್ನ ಬುದ್ಧಿವಂತರಾದ ಪ್ರಧಾನರಂ ಕರೆಯಿಸಿ ಅವರಂ ಕುರಿತು—ತುಳಸೀದಾಸನು ಪರಮಭಾಗವತನು; ಬ್ರಹ್ಮಜ್ಞಾನಸಂಪನ್ನನು; ನುಡಿಯಲ್ಲಿ ಚತುರನು; ನಡೆಯಲ್ಲಿ ಅಸಮಾನನು; ಪರಮಸಿದ್ಧಿಯುಳ್ಳವನು; ಕೇವಲವಿರಕ್ತನು; ಅತ್ಯದ್ಭುತವಾದ ಕಾರ್ಯಗಳನ್ನು ನಡೆಯಿಸಿರುವನು. ಆತನಲ್ಲಿ ನನ್ನ ಮನಸ್ಸು ನಿಂದಿರುವುದು. ಆತನನ್ನು ಅವಶ್ಯವಾಗಿ ನಾನು ನೋಡಬೇಕು; ಏನಾದರೂ ಉಪಾಯದಿಂದ ಆತನನ್ನು ಇಲ್ಲಿಗೆ ಬರಮಾಡಬೇಕು. ಕಿವಿಯಿಂದ ಕೇಳಿದ ವಿಚಿತ್ರವನ್ನು ಪ್ರತ್ಯಕ್ಷವಾಗಿ ಕಣ್ಣಿನಿಂದ ನೋಡಿ ಪರೀಕ್ಷಿಸಬೇಕು. ಅನೇಕಾನೇ

ಆವಶ್ಯಕವಾದ ಸನ್ನಾಹಗಳನ್ನು ಸಿದ್ಧಪಡಿಸಿಕೊಂಡು ಆತನನ್ನು ಕರೆದುಕೊಂಡು ಬರುವುದಕ್ಕೋಸ್ಕರ ಈಗಲೇ ನೀವು ಹೊರಡುವುದು—ಎಂದನು. ಚತುರರಾದ ಆ ಪ್ರಧಾನರು—ಅಪ್ಪಣೆಯಪ್ರಕಾರ ನಡೆದುಕೊಳ್ಳುವೆವು—ಎಂದು, ತಕ್ಕ ಸನ್ನಾಹದೊಡನೆ ಹೊರಟು ತುಳಸೀದಾಸನ ಆಶ್ರಮವನ್ನು ಸೇರಿ ಒಂದುದಿವಸ ಸಮಯವನ್ನು ನಿರೀಕ್ಷಿಸಿ ಮರುದಿವಸ ಆತನಬಳಿಗೆ ಹೋಗಿ—ಸ್ವಾಮಿ! ತಾವು ವಿಷ್ಣುಭಕ್ತರು; ಅಭಿಜ್ಞರು. ಅತ್ಯದ್ಭುತವಾದ ನಿಮ್ಮ ಚರಿತ್ರೆಯನ್ನು ನಮ್ಮ ಮಹಾರಾಜರು ಕೇಳಿ ಸಂತೋಷಗೊಂಡು ನಿಮ್ಮ ದರ್ಶನವನ್ನು ಅಪೇಕ್ಷಿಸಿ ನಿಮ್ಮನ್ನು ಕರೆತರುವುದಕ್ಕೋಸ್ಕರ ನಮ್ಮನ್ನು ಕಳುಹಿಸಿರುವರು—ಎಂದನು.

ತುಳಸೀದಾಸನು ಆ ಮಾತಂ ಕೇಳಿ “ಆ ದೇಶದ ಜನಗಳನ್ನೂ ಭಗವನ್ನಾಮಸಂಕೀರ್ತನೆಯಲ್ಲಿ ನೆಲೆಗೊಳಿಸಬೇಕು” ಎಂದು ತನ್ನ ಮನದಲ್ಲಿ ಆಲೋಚಿಸಿ ಸಂಗಡವೇ ಹೊರಡಲು ಅಂಗೀಕಾರಪಟ್ಟನು. ವಿರಕ್ತರಾದ ಭಾಗವತಶಿರೋಮಣಿಗಳು ದೇಶದೇಶದಲ್ಲಿ ಸಂಚರಿಸುವುದು ಸ್ವಾರ್ಥಪರತೆಗೋಸ್ಕರವಲ್ಲ; ಅಜ್ಞಾನಿಗಳೂ ದುರಾಚಾರರೂ ಅವಿದ್ಯೆಯಿಂದ ಪರಿವೇಷ್ಟಿತರೂ ಆದ ಜನಗಳನ್ನು ಉದ್ಧರಿಸುವುದಕ್ಕೋಸ್ಕರವೇ. ಅಂತು ಕೇವಲವಿರಕ್ತನಾದ ತುಳಸೀದಾಸನೂ ಶ್ರೀಹರಿಯ ಆಜ್ಞೆಯಿಂದ ಜನಗಳನ್ನು ಉದ್ಧರಿಸುವುದಕ್ಕೋಸ್ಕರ ರಾಜನ ಮಾತನ್ನು ನಡೆಯಿಸುವ ನಿಮಿತ್ತದಿಂದ ಆಕ್ಷಣವೇ ಅಲ್ಲಿಂದ ಹೊರಟು ಭಗವನ್ನಾಮಕೀರ್ತನೆಯಂ ಮಾಡುತ್ತ ತ್ವರೆಯಿಂದ ಹಸ್ತಿನಾಪುರವಂ ಸೇರಿ ಅರಮನೆಯಂ ಹೊಕ್ಕನು. ರಾಜನು ಎದುರಿಗೆ ಬಂದು ಪಾದಗಳಿಗೆ ಎರಗಿ ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕುಳ್ಳಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ—ಸ್ವಾಮಿ! ತಮ್ಮ ಮಹಾಪ್ರಭಾವವನ್ನು ಕೇಳಿದೆನು. ತಾವೇ ಈಶ್ವರನು. ಕಲ್ಲಿನ ಬಸವನಿಗೆ ಭೋಜನವಂ ಮಾಡಿಸಿದಿರಿ. ಅಶೀರ್ವಾದವನ್ನು ಮಾಡಿ ಪ್ರೇತವನ್ನು ಎಬ್ಬಿಸಿದಿರಿ. ನಿಮ್ಮ ಇಂತಹ ಅಘಟಿತವ್ಯಾಪಾರವನ್ನು ಕೇಳಿ ನಾನು ಪರಮಾನಂದಭರಿತನಾದೆನು. ತಮ್ಮ ಮಹಿಮೆಯು ಅಸಾಧಾರಣವಾದುದು—ಎನಲು, ತುಳಸೀದಾಸನು ಆತನಂ ಕುರಿತು—ಅದೆಲ್ಲವೂ ಶ್ರೀರಾಮನ ವ್ಯಾಪಾರವು, ನಾನು ಅಲ್ಪನು; ಶ್ರೀರಾಮನ ಪಾದಸೇವಕನು. ನನಗೆ ಅಂತಹ ಮಹಿಮೆಯೆಲ್ಲಿಯದು?—ಎಂದನು.

ಆಮಾತಂ ಕೇಳಿ, ರಾಜನು—ಆ ಶ್ರೀರಾಮನ ಸಂದರ್ಶನವಂ ನನಗೆ ಮಾಡಿಸಬೇಕು; ಇಲ್ಲದಿದ್ದರೆ ನಿಮ್ಮನ್ನು ಸರ್ವಥಾ ಬಿಡುವುದಿಲ್ಲ. ನನಗೆ ನಿದರ್ಶನವಂ ತೋರಿದರೆ ನೀವು ಪರಮಭಾಗವತರೆಂಬುದು ಸತ್ಯವೆಂದು ತಿಳಿಯುವೆನು—ಎಂದು ಸೇವಕನಂ ಕುರಿತು—ಇವರಂ ಹೊರಗೆ ಬಿಡಕೂಡದು—ಎಂದು ಸನ್ನೆಯಂ ಮಾಡಿ ತನ್ನ ಕಾರ್ಯಕ್ಕೆ ಹೊರಟುಹೋದನು.

ಸೇವಕರು ತುಳಸೀದಾಸನನ್ನು—ನೀವು ಇಲ್ಲಿಂದ ಹೊರಗೆ ಹೋಗಕೂಡದು ; ರಾಜಾಜ್ಞೆಯಾಗಿರುವುದು—ಎಂದರು. ಈಮಾತಂ ಕೇಳಿ ತುಳಸೀದಾಸನು:—

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಂ |
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಂ ||

ಅಂಜನಾನಂದನಂ ವೀರಂ ಜಾನಕೀಶೋಕನಾಶನಂ |
ಕಪೀಶಮಕ್ಷಹಂತಾರಂ ವಂದೇ ಲಂಕಾಭಯಂಕರಂ ||

ಉಲ್ಲಂಘ್ಯ ಸಿಂಧೋಸ್ಸಲಿಲಂ ಸಲೀಲಂ ಯಶ್ಶೋಕವಹ್ನಿಂ ಜನಕಾತ್ಮಜಾಯಾಃ
ಆದಾಯ ತೇನೈವ ದದಾಹ ಲಂಕಾಂ ನಮಾಮಿ ತಂ ಪ್ರಾಂಜಲಿರಾಂಜನೇಯಂ||

ಮನೋಜವಂ ಮಾರುತತುಲ್ಯವೇಗಂ ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ||

ಯತ್ರಯತ್ರ ರಘುನಾಥಕೀರ್ತನಂ ತತ್ರತತ್ರ ಕೃತಮಸ್ತಕಾಂಜಲಿಂ |
ಬಾಷ್ಪವಾರಿಪರಿಪೂರ್ಣಲೋಚನಂ ಮಾರುತಿಂ ನಮತ ರಾಕ್ಷಸಾಂತಕಂ ||

ಆಂಜನೇಯಮತಿಪಾಟಲಾನನಂ ಕಾಂಚನಾದ್ರಿಕಮನೀಯವಿಗ್ರಹಂ |
ಪಾರಿಜಾತತರುಮೂಲವಾಸಿನಂ ಭಾವಯಾಮಿ ಪವಮಾನನಂದನಂ ||

ಎಂದು ಆಂಜನೇಯನನ್ನು ಹೃದಯದಲ್ಲಿ ನೆನೆದು ಸ್ತುತಿಯಿಸಲು, ಆಕ್ಷಣದಲ್ಲಿ ಆಂಜನೇಯನು ಎದುರಿಗೆ ಬಂದು—ತುಳಸೀದಾಸನೇ! ಅದೇಕೆ ನನ್ನನ್ನು ನೆನೆದೆ; ನನ್ನಿಂದ ಕಾರ್ಯವೇನಾಗಬೇಕು—ಎನಲು, ತುಳಸೀದಾಸನು—ಆಂಜನೇಯನೆ! ನಾನು ಇಲ್ಲಿಂದ ಹೊರಗೆ ಹೋಗಕೂಡದೆಂದು ರಾಜಾಜ್ಞೆಯಾಗಿರುವುದು. ನನಗೆ ಇಂತಹ ಸಂಕಟವು ಬಂದೊದಗಿರುವುದು. ಇದಂ ಪರಿಹರಿಸಿ ಭಗವನ್ನಾಮಮಹಿಮೆಯಂ ಬೆಳಗಿಸಬೇಕು—ಎಂದನು. ಹನುಮಂತನು ಆಮಾತಂ ಕೇಳಿ ಕೌತುಕವಂ ನಡೆಯಿಸಿದನು:—

ವಾನರರನ್ನು ನೆನೆಯುವುದೂ, ಮಳೆಗಾಲವು ಬರಲು ಆಕಾಶದಲ್ಲಿ ಮೇಘಗಳು ಎಂತು ಕಟ್ಟಿಕೊಳುವುವೋ ; ವರ್ಷವು ಬೀಳಲು, ತೃಣಗಳು ಎಂತು ಅಂಕುರಿಸುವುವೋ ; ಅಂತು ಮಹಾವೀರರಾದ ಹತ್ತುಸಾವಿರಮಂದಿ ವಾನರರು ಆಕಸ್ಮಿಕವಾಗಿ ಅಂತರಿಕ್ಷದಲ್ಲಿ ಬಂದುನಿಂತು ಹನುಮಂತನನ್ನು ಕುರಿತು—ನಮಗೆ ಏನಪ್ಪಣೆ?—ಎಂದರು. ಹನುಮಂತನು ಅವರನ್ನು ಕುರಿತು—ಎಲೈ ವಾನರರಿರಾ! ನಿಮ್ಮ ಸ್ವಾಭಾವಿಕವಾದ ಶಕ್ತಿಯನ್ನು ಈ ರಾಜನಿಗೆ ತೋರಿಸಿ. ಇದಕ್ಕೋಸ್ಕರವೇ ನಿಮ್ಮನ್ನು ನಾನು ಇಲ್ಲಿಗೆ ಬರಮಾಡಿದೆನು—ಎನಲು, ಅವರು—ಅಪ್ಪಣೆಯಾದಂತೆ ನಡೆಯುವೆವು—ಎಂದು ಅತ್ಯದ್ಭುತವಾಗಿ ವಿಜೃಂಭಿಸಿ ತಮ್ಮ ಶಕ್ತಿಯನ್ನು ತೋರಿಸಲು ಆರಂಭಿಸಿದರು ;—

ಉಪ್ಪರಿಗೆಗಳ ಮೇಲೆ ಹತ್ತಿ ಗೋಡೆಗಳನ್ನು ದುಡುಮ್ಮನೆ ಉರುಳಿಸಿದರು. ಮಹಾವೃಕ್ಷಂಗಳಂ ಕಿತ್ತು ಮನುಷ್ಯರಮೇಲೆ ಎತ್ತಿಹಾಕಿದರು. ಕೆಲವರ ಕಿವಿ ಮೂಗುಗಳನ್ನು ಕೊಯ್ದರು. ಕೆಲವರ ಕುತ್ತಿಗೆಗಳನ್ನು ನುಲುಚಿಬಿಟ್ಟರು. ಕೆಲವರ ಕಾಲುಗಳಂ ಹಿಡಿದು ಎತ್ತಿಕೊಂಡು ಅಂತರಿಕ್ಷಕ್ಕೆ ಹೋಗುತ್ತಿದ್ದರು. ಹೆಂಗಸರು ಕೊಡಗಳಂ ತೆಗೆದುಕೊಂಡು ಗಂಗಾತೀರಕ್ಕೆ ಹೋಗುತ್ತಿರಲು, ಅವರ ವಸ್ತ್ರಗಳಂ ಕಿತ್ತು ಹೊಳೆಯಲ್ಲಿ ಬಿಸುಡಿದರು. ಸ್ತ್ರೀಪುರುಷರು ಬರುತ್ತಿರಲು, ಅವರಂ ಹಿಡಿದು ಜಡೆಗೂ ಗಡ್ಡಕ್ಕೂ ಗಂಟುಹಾಕಿ ಓಡಿಹೋಗುತ ಇದ್ದರು. ಯಾರು ಶ್ರೀರಾಮಭಜನೆಯಲ್ಲಿ ವಿಮುಖರೋ ; ಯಾರು ವಿಷ್ಣುಭಕ್ತರಂ ಕೆಣಕುವರೋ ; ಅವರಂ ಥಟ್ಟನೆ ಎತ್ತಿ ನೆಲದಮೇಲೆ ಕುಕ್ಕಿದರು. ದುಷ್ಟರಾದ ಶೆಟ್ಟಿಸಾಹುಕಾರರನ್ನೂ, ಎಂದಿಗೂ ಅನ್ನದಾನವಮಾಡದ ಲೋಭಿಗಳನ್ನೂ ಹಿಂಸಿಸಿ ಅವರ ಬೊಕ್ಕಸಭಂಡಾರಗಳನ್ನು ಒಡೆದು ಧನಕನಕವಸ್ತುಗಳನ್ನು ತೆಗೆದುಕೊಂಡು ಹೋದರು. ಈ ತರದ ಕೋಟಲೆಗಳಿಂದ ಹಸ್ತಿನಾವತಿಯು ಮಹತ್ತಾದ ಕ್ಷೋಭೆಯನ್ನು ಹೊಂದಿತು. ಬಳಿಕ ವಾನರರು ರಾಜಮಂದಿರವಂ ಪ್ರವೇಶಿಸಿ ಸ್ತ್ರೀಯರ ಕಿವಿಮೂಗುಗಳನ್ನು ಹರಿಯುಬಿಡಲಾರಂಭಿಸಿದರು. ಚಂದ್ರಶಾಲೆಯಲ್ಲಿ ಕುಳಿತಿದ್ದ ಸ್ತ್ರೀಯರ ತಲೆಯಮೇಲೆ ಅಂತರಿಕ್ಷದಿಂದ ಮೂತ್ರವಂ ಸುರಿಸಿದರು. ಜಾರರನ್ನೂ, ಚೋರರನ್ನೂ ದುರ್ಜನರನ್ನೂ ಗಗನಕ್ಕೆ ಎಸೆದರು. ವಸ್ತ್ರಭೂಷಣಂಗಳಂ ಸೂರೆಗೊಂಡು ಹಾರಿಹೋಗಿ ದೀನರೂ ಬಡವರೂ ಆದ ಸಜ್ಜನರ ಮನೆಗಳಿಗೆ ಸಂತೋಷದಿಂದ ಹಾಕಿದರು. ದರಿದ್ರರನ್ನು ಭಾಗ್ಯವಂತರಂ ಮಾಡಿದರು. ಅನ್ಯಾಯ ವ್ಯವಹಾರಿಗಳಂ ಕ್ಷೋಭೆಗೊಳಿಸಿದರು. ಸುಳ್ಳುಮಾತನಾಡುವವರನ್ನು ಹಿಂಸೆಪಡಿಸಿದರು. ಇಂತು ಕಪಿಗಳಿಂದ ಆದ ಮಹೋಪದ್ರವಗಳನ್ನು ಸೇವಕರು ರಾಜನಬಳಿಗೆ ಬಂದು ಬಿನ್ನವಿಸಿದರು. ಹಸ್ತಿನಾವತಿಯು ವಾನರರಿಂದ ಮಹಾಕ್ಷೋಭದಶೆಗೆ ಒಳಗಾದುದನ್ನು ತಿಳಿದು, ರಾಜನು ಚಿಂತಾಕ್ರಾಂತನಾಗಿರಲು, ಸುಜ್ಞಾನಿಗಳು ಕೆಲವರು ಬಂದು—ಅಯ್ಯಾ ಮಹಾರಾಜನೆ! ತುಳಸೀದಾಸನು ಮಹಾಭಾಗವತನು. ಆತನಂ ಕೆಣಕಬಾರದಾಗಿದ್ದಿತು. ವಾನರರು ಮಹಾಕೋಪದಿಂದ ವಿಜೃಂಭಿಸಿರುವರು. ಹಸ್ತಿನಾವತಿಯನ್ನು ಧ್ವಂಸಮಾಡುತ್ತಿರುವರು. ಎಂತಾದರೂ ತುಳಸೀದಾಸನನ್ನು ಪ್ರಸನ್ನನಂ ಮಾಡು—ಎಂದರು. ರಾಜನು ಆಶ್ಚರ್ಯಗೊಂಡು ತನ್ನ ಅನ್ಯಾಯವಂ ಮನದಲ್ಲಿ ಎಣಿಸಿ ತುಳಸೀದಾಸನ ಬಳಿಗೆ ಬಂದು ಬದ್ಧಾಂಜಲಿಪುಟನಾಗಿ—ಎಲೈ ಮಹಾಭಾಗವತನೆ! ಸಮುದ್ರದಂತೆ ಮುಸುಗಿರುವ ಕಪಿಸೈನ್ಯವನ್ನು ನಿಗ್ರಹಿಸು. ನಾನು ಅಜ್ಞಾನದಿಂದ ನಿನ್ನನ್ನು ಕೆಣಕಿದೆನು. ದ್ರೌಪದಿಯಂ ಕೆಣಕಿದ ದುರ್ಯೋಧನನಂತೆ ನಿನ್ನಂ ಕೆಣಕಿದ ನಾನು ಮಹಾಪರಿಭವಕ್ಕೆ ಒಳಗಾದೆನು—ಎನಲು, ತುಳಸೀದಾಸನು ಈ ಮಾತಂ ಕೇಳಿ ಅವನನ್ನು ಕುರಿತು—ಎಲೈ ರಾಜನೆ! ನೀನು ರಾಮಸಂದರ್ಶನವನ್ನು ಅಪೇಕ್ಷಿಸಿದುದರಿಂದ ಆತನ ಸೈನ್ಯವಿದು ಬಂದುದು. ಸೂರ್ಯನು ಉದಯಿಸು

ವುದಕ್ಕೆ ಮುಂಚೆ ಆತನ ಕಿರಣಗಳು ಮೊದಲು ಎಂತು ಪ್ರಸರಿಸುವುವೋ; ಅಂತು ಕಪಿವೀರರು ಮೊದಲು ಬಂದಿರುವರು. ಶ್ರವಣಕ್ಕೆ ಮುಂಚೆ ಅಪೇಕ್ಷೆಯೂ, ಮನನಕ್ಕೆ ಮುಂಚೆ ಶ್ರವಣವೂ, ಸಾಕ್ಷಾತ್ಕಾರಕ್ಕೆ ಮುಂಚೆ ನಿದಿಧ್ಯಾಸೆಯೂ ಎಂತು ಪ್ರಕಟವಾಗುವುದೋ; ಅಂತು ಶ್ರೀರಾಮನು ಬರುವುದಕ್ಕೆ ಮುಂಚೆ ಕಪಿಸೇನೆಯು ತಲೆದೋರಿರುವುದು. ಇನ್ನೂ ಹದಿನೆಂಟು ಪದ್ಮದ ಸಂಖ್ಯೆಯುಳ್ಳ ಸೈನ್ಯವು ಹಿಂದುಗಡೆ ಬರುತ್ತಿರುವುದು. ಹದಿನೆಂಟು ಮಂದಿ ಸೇನಾನಾಯಕರೊಡನೆ ಶ್ರೀರಘುಪತಿಯು ನಿನ್ನ ದರ್ಶನಕ್ಕೆ ಬರುತ್ತಿರುವನು. ನಿನ್ನ ಪುಣ್ಯಕ್ಕೆ ಎಣೆಯೇ ಇಲ್ಲ-ಎಂದನು. ಆಮಾತಂ ಕೇಳಿ ರಾಜನು ಆತನ ಎರಡು ಪಾದಗಳನ್ನೂ ಹಿಡಿದು ನನಗೆ ಶ್ರೀರಾಮನ ಸಂದರ್ಶನವು ಆಯಿತು; ಈಗ ಬಂದಿರುವ ವಾನರಸೈನ್ಯವೇ ಮಹತ್ತಾದ ಕ್ಷೋಭೆಯನ್ನುಂಟುಮಾಡುತ್ತಿರುವುದು. ಇನ್ನು ಹದಿನೆಂಟು ಪದ್ಮಗಳು ಬಂದರೆ ಪ್ರಳಯವೇ ಆಗುವುದರಲ್ಲಿ ಸಂಶಯವಿಲ್ಲ. ಕಪಿಸೈನ್ಯವಂ ನಿಗ್ರಹಿಸಿ ನನ್ನನ್ನು ರಕ್ಷಿಸಬೇಕು-ಎನಲು, ಕರುಣಾರ್ದ್ರಹೃದಯನಾದ ತುಳಸೀದಾಸನು ರಾಜನ ಕರುಣವಚನವಂ ಕೇಳಿ ವಾನರಸೈನ್ಯವಂ ಅದೃಶ್ಯವಾಗಿಸಿದನು. ತುಳಸೀದಾಸನನ್ನು ಎಲ್ಲರೂ ವಂದಿಸಿ ಕೊಂಡಾಡುತಿದ್ದರು. ಒಂದು ವರ್ಷದವರೆಗೂ ತುಳಸೀದಾಸನು ಅಲ್ಲಿಯೇ ನಿಂತು ನಿತ್ಯದಲ್ಲೂ ಪ್ರೇಮದಿಂದ ಶ್ರೀರಾಮಚರಿತ್ರೆಯಂ ವರ್ಣಿಸುತ ಇದ್ದನು. ಹಸ್ತಿನಾಪುರದ ಸಕಲರೂ ಸರ್ವಕಾಲದಲ್ಲಿಯೂ ಭಗವನ್ನಾಮಸ್ಮರಣೆಯಂ ಮಾಡುತಿದ್ದರು. ಜತರೂ ಅಜ್ಞಾನಿಗಳೂ ಸುಜ್ಞಾನಿಗಳೆನಿಸಿದರು. ಬಳಿಕ ತುಳಸೀದಾಸನು ಅಕ್ಬರ್ ಧೊರೆಯ ಅನುಜ್ಞೆಯಂ ಬೆಸಗೊಂಡು ಮಧುರಾವಾಸಿಯಾದ ಶ್ರೀಕೃಷ್ಣನ ಸಂದರ್ಶನಕ್ಕೋಸ್ಕರ ಅಲ್ಲಿಂದ ಹೊರಟು ಮೊದಲು ಗೋಕುಲವನ್ನು ಸೇರಿ ಯಮುನಾನದಿಯಲ್ಲಿ ಸ್ನಾನವಂಮಾಡಿ ಶ್ರೀಕೃಷ್ಣನ ಸಂದರ್ಶನವಂ ಪಡೆದು ಅಲ್ಲಿಂದ ಬೃಂದಾವನಕ್ಕೆ ಹೋಗಿ ಶಾರ್ಙ್ಗಪಾಣಿಯನ್ನು ಅಭಿವಂದಿಸಿ ಒಂದುತಿಂಗಳು ಅಲ್ಲಿನಿಂತು ಶ್ರೀಹರಿನಾಮವನ್ನು ಸಂಕೀರ್ತಿಸುತ್ತ ನರ್ತನರಂಗದಲ್ಲಿ ನೃತ್ಯವಂ ಮಾಡುತಿದ್ದನು. ಅಲ್ಲಿಂದ ಬಳಿಕ ಮಧುರೆಯಂ ಹೊಕ್ಕು ಯಮುನೆಯಲ್ಲಿ ಸ್ನಾನವಂ ಮಾಡಿ ನಿತ್ಯಕರ್ಮಂಗಳಂ ನೆರವೇರಿಸಿಕೊಂಡು ಶ್ರೀಕೃಷ್ಣನ ಸಂದರ್ಶನವಂ ಕೈಕೊಂಡು ಮಹನೀಯರಾದ ಸಮಸ್ತಭಾಗವತರನ್ನೂ ಕಂಡನು.

ಮಧುರಾಗೋಕುಲಬೃಂದಾವನಸ್ಥಳದಲ್ಲಿರುವ ಭಗವದ್ಭಕ್ತರೆಲ್ಲರೂ ಎಲ್ಲಾ ಕಾಲದಲ್ಲಿಯೂ ಭಗವನ್ನಾಮಸ್ಮರಣೆಯಲ್ಲಿಯೇ ನಿರತರಾದರು. ಅಲ್ಲಿ ಪ್ರಿಯದಾಸನೆಂಬ ನಾಗರಬ್ರಾಹ್ಮಣನೊಬ್ಬನು ಇದ್ದನು; ಆತನು ಪರಮಭಾವುಕನು. ಭಕ್ತಿಜ್ಞಾನವೈರಾಗ್ಯಗಳು ಆತನಲ್ಲಿ ನೆಲೆಗೊಂಡಿದ್ದುವು. ಆತನು ಎಲ್ಲಾ ಭಗವದ್ಭಕ್ತರ ಚರಿತ್ರೆಯನ್ನೂ ಸಂಸ್ಕೃತದಲ್ಲಿ ಅತ್ಯದ್ಭುತವಾಗಿ ಗ್ರಂಥರೂಪದಿಂದ ರಚಿಸಿರುವನೆಂಬುದನ್ನು ಕೇಳಿ-ತುಳಸೀದಾಸನು ಒಂದುದಿನ ಆತನ ಮನೆಗೆ ಹೋಗಿ ಆತನಂ ಕಂಡು—

ಸ್ವಾಮಿ ! ನೀವು ಸಂತರ ಚರಿತ್ರೆಯನ್ನು ಅಧಿಕರಿಸಿ ರಚಿಸಿರುವ ಗ್ರಂಥವನ್ನು ನಾನು ಶ್ರವಣಮಾಡಬೇಕು. ಈಗ ಅದಂ ದಯೆಯಿಟ್ಟು ಓದಬೇಕು—ಎಂದು ನುಡಿಯಲು, ಪ್ರಿಯದಾಸನು ತನ್ನ ಮನದಲ್ಲಿ ನಾನು ರಚಿಸಿರುವ ಗ್ರಂಥದಲ್ಲಿ ಎಲ್ಲಾ ಭಗವದ್ಭಕ್ತರ ಚರಿತ್ರೆಯೂ ವರ್ಣಿಸಲ್ಪಟ್ಟದೆ. ಈ ತುಳಸೀದಾಸನ ಚರಿತ್ರೆಯನ್ನು ನಾನು ಬರೆಯದೆ ಹೋದೆನಲ್ಲಾ !-ಎಂದು ಚಿಂತಿಸಿ, ತುಳಸೀದಾಸನನ್ನು ಕುರಿತು—ಅವಶ್ಯವಾಗಿ ಓದುವೆನು ; ತಾವು ಕೇಳತಕ್ಕದು-ಎಂದನು. ಅಷ್ಟರಲ್ಲಿ ಭಕ್ತವತ್ಸಲನಾದ ಶ್ರೀರಾಮಚಂದ್ರನು ಯಾರಿಗೂ ತಿಳಿಯದಂತೆ ತುಳಸೀದಾಸನ ಚರಿತ್ರೆಯನ್ನು ಸ್ವಹಸ್ತಾಕ್ಷರದಿಂದ ಆ ಗ್ರಂಥದಲ್ಲಿ ಬರೆದಿಟ್ಟು ವಿಸ್ಮಯವನ್ನುಂಟುಮಾಡಿದನು. ಗ್ರಂಥವಂ ಶ್ರವಣಮಾಡುವುದಕ್ಕೆ ಅನೇಕರು ಬಂದು ಸೇರಿದರು. ಪಂಡಿತೋತ್ತಮರೂ ಆದರದಿಂದ ಕೂಡಿದರು. ಪ್ರಿಯದಾಸನು ಗ್ರಂಥವೆಲ್ಲವಂ ಓದಿದನು. ಅದರಲ್ಲಿ ತುಳಸೀದಾಸನ ಚರಿತ್ರೆಯೂ ಇದ್ದುದನ್ನು ನೋಡಿ ಆಶ್ಚರ್ಯಪಟ್ಟನು. ಎಲ್ಲರೂ ಗ್ರಂಥವನ್ನು ಕೇಳಿ—ಅಭಿನಂದಿಸಿದರು. ತುಳಸೀದಾಸನು ಪ್ರಿಯದಾಸನಂ ಕುರಿತು—ಶ್ಲಾಘ್ಯವಾದ ಈ ಗ್ರಂಥವನ್ನು ಶ್ರೀರಾಮಚಂದ್ರನೇ ನಿಮ್ಮ ಮುಖದಿಂದ ನುಡಿದಿರುವನು—ಎಂದನು. ಎಲ್ಲರೂ ಅಮಾನುಷವಾದ ಆ ಅಕ್ಷರಾವಳಿಯನ್ನು ನೋಡಿ-ವಿಸ್ಮಿತರಾಗಿ—ಭಕ್ತರಮಹಿಮೆಯು ಅಮೇಯವಾದುದು. ಯಾರಿಂದಲೂ ತಿಳಿಯಲು ಶಕ್ಯವಲ್ಲ. ಈ ಗ್ರಂಥವು ಅತ್ಯಂತಶ್ಲಾಘ್ಯವಾದುದು; ಇದಂ ನಿತ್ಯವೂ ಭಕ್ತಿಯಿಂದ ಶ್ರವಣಮಾಡುವವರಿಗೆ ಶ್ರೀರಾಮನ ಸಾಕ್ಷಾತ್ಸಂದರ್ಶನವು ತಪ್ಪದೆ ಆಗುವುದು. ಯಾವನು ಶ್ರೀರಾಮಚಂದ್ರನಿಗೆ ಅತ್ಯಂತಪ್ರಿಯನಾದ ವಾಲ್ಮೀಕಿಯ ಅವತಾರವೋ; ಈ ತುಳಸೀದಾಸನ ಚರಿತ್ರೆಯನ್ನು ಶ್ರೀರಾಮನೇ ಸ್ವಹಸ್ತದಿಂದ ಬರೆದಿರುವನಲ್ಲಾ !—ಎಂದು ನುಡಿದನು. ಇದಕ್ಕೆ ಮೂಲ ಪ್ರಿಯದಾಸನ ಸಂಸ್ಕೃತಗ್ರಂಥವು. ಅದರ ಆಧಾರದಿಂದ ನಾಭಾಜಿಯು ಗ್ವಾಲೇರಿಯ ಭಾಷೆಯಲ್ಲಿ ರಚಿಸಿರುವನು. ಅದರರ್ಥವಂ ಕೇಳಿ ನಾನು ಹಾಲಿನಲ್ಲಿ ಸ್ವಲ್ಪ ನೀರನ್ನು ಬೆರಸಿದಂತೆ ಮಹಾರಾಷ್ಟ್ರದಿಂದ ಬರೆದಿರುವೆನು. ಕುಂದಣದ ಆಭರಣದಲ್ಲಿ ಸ್ವಲ್ಪ ಸಾಲದೆ ಇರಲು, ಸೇರಿಸಿದ ಅರಗಿಗೆ ಸಮಾನವಾದ ನನ್ನೀವಾಣಿಯನ್ನು ಸಾಧುಸಜ್ಜನರು ಆದರದಿಂದ ಆಲಿಸಬೇಕು. ಶ್ರೀಭೀಮಾತೀರವಿಹಾರಿಯಾದ ರುಕ್ಮಿಣೀಪತಿಯೇ ಈ ಗ್ರಂಥದ ವಕ್ತೃವು. ಸುಮ್ಮನೆ ಮಹೀಪತಿಯ ಹೆಸರು. ಈ ಭಕ್ತವಿಜಯವನ್ನು ಕೇಳಲು, ಶ್ರೀಜಗನ್ನಾಥನು ಸಂತುಷ್ಟನಾಗುವನು.

ಇಂತು ಶ್ರೀಭಕ್ತವಿಜಯದಲ್ಲಿ ಮೂರನೆಯ ಅಧ್ಯಾಯಂ

ಸಂಪೂರ್ಣಂ.

ಮಂಗಳಮಸ್ತು.

ನಾಲ್ಕನೆಯ ಅಧ್ಯಾಯ

ನಾಮದೇವನ ಚರಿತ್ರೆ.

ವೃ॥ ಆವಂ ವ್ಯಾಪ್ತನೆನಿಪ್ಪನೆಲ್ಲೆಡೆಯೊಳಂ ತಾನೊರ್ವನಾಗಿರ್ದೊಡಂ ।
ಕಾವಂ ದೇವನದಾವನೆಲ್ಲಜಗಮಂ ಲೀಲಾವಿನೋದಂಗಳಿಂ ॥
ಶ್ರೀವೃಂದಾರಕವೃಂದವಂದಿತಪದಂ ಮಂದಾರುಮಂದಾರನಾ ।
ಗೋವಿಂದಂ ನಲವಿಂದನೊಂದು ನೊದವಿಶ್ವಾನಂದಸಂದೋಹಮಂ ॥

ಶ್ಲೋ॥ ಶ್ರೋತನಾನಾಕಥಾಶ್ರೇಯ
ಶ್ರೋತನಾನಾಗುಣಾಶ್ರಯ ॥
ಕಲನಾದಲಸದ್ವೇಣು
ಕಲನಾದರ ಪಾಲಯ ॥

ಕಂ॥ ಜಯ ನಂದಗೋಪಬಾಲಾ ।
ಜಯಜಯ ಕರುಣಾಲವಾಲ ಜಯ ಗೋಪಾಲಾ ॥
ಜಯ ಜಗದೀಡಿತಶೀಲಾ ।
ಜಯ ಜಯ ರಾಧಾಮನೋವಿನೋದನಲೀಲಾ ॥

ಜಯ ಸದನನಿಭಾರೀಣಾ ।
ಜಯ ಜಯ ಕಾಳೀಯದರ್ಪದಳನಧುರೀಣಾ ॥
ಜಯ ಸಕಲಸುಪ್ರವೀಣಾ ।
ಜಯ ಜಯ ರುಕ್ಮಿಣಿಯ ರಮಣ ಗೋಪೀಪ್ರಾಣಾ ॥

ಜಯ ನಿಗಮಾಗಮದುರ್ಲಭ ।
ಜಯ ಜಯ ಪರಭಕ್ತಿಭರಿತನತಜನಸುಲಭಾ ॥
ಜಯ ಸರ್ವಲೋಕವಲ್ಲಭ ।
ಜಯ ಜಯ ನರಸಿಂಹ ದಳಿತದಾನವಕಲಭಾ ॥

ಎಲೈ ಶ್ರೋತೃಗಳಿರಾ! ಶ್ರೀಮನ್ನಾರಾಯಣನು "ನೀವು ಮರ್ತ್ಯಲೋಕದಲ್ಲಿ ಅವತರಿಸಿ-ಎಂದು ಉದ್ಧವಶುಕರಿಗೆ ಅಪ್ಪಣೆ ಮಾಡಿರಲು, ಅವರು—ಹೃಷೀಕೇಶನೆ! ನಾವು ಗರ್ಭವಾಸವಂ ಸಹಿಸಲಾರೆವು. ನಮಗೆ ಅಯೋನಿಜನ್ಮವಂ ದಯಪಾಲಿಸಿ

ಬೇಕು-ಎಂದು ಪ್ರಾರ್ಥಿಸಿ, ಆ ಭಗವಂತನ ಅನುಗ್ರಹದಿಂದ ಬಂದಾಸೊಂದು ಕಾಲದಲ್ಲಿ ಗಗನದಿಂದ ಬೀಳುತ್ತಿರುವ ವೃಷ್ಟಿಯೊಡನೆ-ಶುಕ್ತಿಯಲ್ಲಿ ಬಾಲರೂಪದಿಂದ ಅಂತರ್ಹಿತರಾಗಿ ಬಿಡಲ್ಪಟ್ಟರು. ಅವರಲ್ಲಿ ಒಬ್ಬನು ಭಾಗೀರಥಿಯಲ್ಲಿ ಬಿದ್ದನು. ಇನ್ನೊಬ್ಬನು ಭೀಮರಥಿಯಲ್ಲಿ ಬಿದ್ದನು. ಪ್ರವಾಹದೊಡನೆ ಹರಿದುಬರುತ್ತ ಭಗವನ್ನಾಮಸ್ಮರಣೆಯಂ ಮಾಡುತಿದ್ದರು. ಭಾಗೀರಥಿಯಲ್ಲಿ ಬಿದ್ದವನು ಶುಕನು; ರಾಮನಾಮಸ್ಮರಣೆಯಂ ಮಾಡುತಿದ್ದನು. ಭೀಮರಥಿಯಲ್ಲಿ ಬಿದ್ದವನು ಉದ್ಧವನು; ವಿಟ್ಠಲನ ಸ್ಮರಣೆಯಂ ಮಾಡುತಿದ್ದನು. ಇಂತಿರಲು, ಆಶ್ಚರ್ಯವು ನಡೆಯಿತು:—

ಆ ಪಂಡರಪುರದಲ್ಲಿ ದಾಮಶೆಟ್ಟಿಯೆಂಬ ವಿಷ್ಣುಭಕ್ತನೊಬ್ಬನು ಇದ್ದನು. ಆತನು ಪರಮಭಾವುಕನು; ಪುಣ್ಯಪರಾಯಣನು; ಜ್ಞಾನವೈರಾಗ್ಯಪರಿಪೂರ್ಣನು. ಆತನು ಪ್ರತಿದಿನದಲ್ಲಿಯೂ ಚಂದ್ರಭಾಗೆಯಲ್ಲಿ ಸ್ನಾನಮಂಮಾಡಿ—ಶ್ರೀಪಾಂಡುರಂಗಸ್ವಾಮಿಯ ಪೂಜೆಯಂ ನಿಯಮದಿಂ ವಿರಚಿಸಿ ಬಳಿಕ ಭೋಜನಮಂಮಾಡುತಿದ್ದನು. ಆತನ ಮಡದಿ ಗೋಣಾಯಿಯೆಂಬವಳು ಸುಶೀಲೆ; ಪತಿವ್ರತಾಶಿರೋಮಣಿ; ದಂಪತಿಗಳಿಬ್ಬರೂ ಸರ್ವಕಾಲದಲ್ಲಿಯೂ ಶ್ರೀಹರಿಸ್ಮರಣೆಯಲ್ಲಿ ನಿರತರಾಗಿದ್ದರು. ಅವರಿಗೆ ಸಂತಾನವಿರಲಿಲ್ಲ. ಕಾಂತೆ ಪತಿಯನ್ನು ಕುರಿತು—ದೇವರಸನ್ನಿಧಿಯಲ್ಲಿ ಪುತ್ರನಂ ಬೇಡಿರಿ—ಎಂದಳು. ಅದಕ್ಕೆ ದಾಮಶೆಟ್ಟಿಯು-ನಾವು ಇಬ್ಬರೂ ವೃದ್ಧರು; ನಮಗೆ ದೇವರು ಸಂತಾನವನ್ನು ಎಂತು ಕೊಟ್ಟಾನು? ಹುಳಿತ ಬೀಜದಲ್ಲಿ ಮೊಳಕೆ ಆಗುವುದೇ? ವರ್ಷರ್ತು ಕಳೆದು ಹೋದಮೇಲೆ ಬಯಸಿದರೆ ಮಳೆ ಬರುವುದೆ! ಈಗ ಸಂತಾನವನ್ನು ಬೇಡುವುದಕ್ಕೆ ನಿನಗೆ ಲಜ್ಜೆಯಾಗುವುದಿಲ್ಲವೆ? ಶ್ರಾವಣಮಾಸದಲ್ಲಿ ಮಾವಿನಮರಕ್ಕೆ ಫಲವು ಎಂತು ಹತ್ತುವುದು? ಎಣ್ಣೆಯೂ ಬತ್ತಿಯೂ ಮುಗಿದು ಹೋಗಿರಲು, ದೀಪವನ್ನು ಪ್ರಕಾಶಗೊಳಿಸುವುದಕ್ಕೆ ಪ್ರವರ್ತಿಸುವ ಅಜ್ಞಾನಿಯಂತೆ ಈಗ ಸಂತಾನವನ್ನು ಬಯಸುವ ನೀನು ಅಪಹಾಸಕ್ಕೆ ಗುರಿಯಾಗುವೆ-ಎಂದನು. ಅದನ್ನು ಕೇಳಿ ಆ ಕಾಂತೆಯು ಪ್ರಾಣನಾಥನೆ! ನನ್ನಲ್ಲಿ ಸುಮ್ಮನೆ ಬುದ್ಧಿದೋಷವಂ ನುಡಿಯುವಿರಿ. ಈಶ್ವರನು ಸರ್ವಶ್ರೇಷ್ಠನು; ಸರ್ವತಂತ್ರಸ್ವತಂತ್ರನು; ಅಘಟನಘಟನಾಸಾಮರ್ಥ್ಯವುಳ್ಳವನು. ಆತನ ಮಹಿಮೆಯನ್ನು ನೀವು ತಿಳಿದುದನ್ನು ನಾನು ಬಲ್ಲೆನೇ? ಶ್ರೀರಾಮಾವತಾರದಲ್ಲಿ ಸಮುದ್ರದಲ್ಲಿ ಪಾಷಾಣಂಗಳಂ ತೇಲಿಸಲಿಲ್ಲವೇ? ಶ್ರೀಕೃಷ್ಣಾವತಾರದಲ್ಲಿ ಬ್ರಹ್ಮನು ವತ್ಸಾಹರಣವಂ ಮಾಡಲು, ಆಗ ದೇವನು ತಾನೇ ವತ್ಸಂಗಳೂ ವತ್ಸಪಾಲರೂ ಆಗಲಿಲ್ಲವೇ? ಅಂತಹ ಮಹಿಮೆಯುಳ್ಳವನು ವೃದ್ಧರಿಗೆ ಸಂತಾನವಂ ಕೊಡಲು ಆಗುವುದಿಲ್ಲವೇ?-ಎಂದಳು. ಬಳಿಕ ದಾಮಶೆಟ್ಟಿಯು-ನಿನ್ನ ಇಚ್ಛಾನುಸಾರದಿಂದ ಇಂದು ದೇವರ ಸನ್ನಿಧಿಗೆ ಹೋಗಿ ಬಿನ್ನವಿಸುವೆನು-ಎಂದು ಸತ್ವರನಾಗಿ ದೇವಸ್ಥಾನದ ಮಹಾದ್ವಾರಕ್ಕೆ ಬಂದು-ದೇವರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಸ್ವಾಮಿಯೇ! ನನ್ನ ಕಾಂತೆಯು ಪುತ್ರಸಂತಾನವನ್ನು ಅಪೇಕ್ಷಿಸುವಳು.

ನೀನು ಪ್ರಸನ್ನನಾಗು-ಎಂದು ಪ್ರಾರ್ಥಿಸಿ ಅಲ್ಲಿಯೇ ಪ್ರಾಯೋಪವೇಶವಂ ಮಾಡಲು, ಸ್ವಲ್ಪಕಾಲದಲ್ಲಿಯೇ ನಿದ್ರೆಯು ಹತ್ತಿತು. ಸ್ವಪ್ನದಲ್ಲಿ ಜಗಜ್ಜೀವನನು ಎದುರಿಗೆ ಬಂದು-ನಿನಗೆ ಪುತ್ರದಾನವಂ ಮಾಡಿರುವೆನು. ನಾಳೆಯುಷಯದಲ್ಲಿ ಭೀಮಾತೀರದಲ್ಲಿ ನೀನು ಸ್ನಾನವಂ ಮಾಡುತ್ತಿರುವಾಗ ಪುತ್ರನು ಪ್ರವಾಹದಲ್ಲಿ ಹರಿದು ಬರುವನು. ತವಕದಿಂದವನನ್ನು ಹಿಡಿದುಕೊಳ್ಳುವನಾಗು. ಅವನು ಉದ್ಧವನ ಅವತಾರವು. ಮೂರುಲೋಕದಲ್ಲಿಯೂ ಅವನ ಕೀರ್ತಿಯು ವ್ಯಾಪಿಸುವುದು. ಅವನು ವಿಶ್ವೋದ್ಧಾರಕನು; ಪರಮಭಾಗವತನು-ಎಂದು ಹೇಳಿದನು. ದಾಮಶೆಟ್ಟಿಯು ಇಂತಹ ಸ್ವಪ್ನವಂ ಕಂಡು ವಿಸ್ಮಿತನಾಗಿ ತ್ವರೆಯಿಂದ ಮನೆಯನ್ನು ಸೇರಿ-ನಡೆದವೃತ್ತಾಂತವೆಲ್ಲವಂ ಕಾಂತೆಗೆ ನಿರವಿಸಿದನು. ಆಕೆ ಬಹೊಲ್ಲಾಸವನ್ನು ಹೊಂದಿದಳು. ಮರುದಿನ ಆತನು ಹೊತ್ತಿಗೆ ಮುಂಚೆ ಎದ್ದು ಭೀಮಾತೀರಕ್ಕೆ ಹೋಗಿ ಸ್ನಾನಮಾಡಿ ನಿತ್ಯನಿಯಮಗಳನ್ನು ಆಚರಿಸುತ್ತ ಇದ್ದನು. ಆಗ ಪ್ರವಾಹದಲ್ಲಿ ಒಂದು ಶುಕ್ತಿಯು ಸಮೀಪಕ್ಕೆ ಹರಿದು ಬರುತ್ತ ಇದ್ದಿತು. ಆ ಶುಕ್ತಿಯನ್ನು ಕಂಡು ತ್ವರೆಯಿಂದ ಹೋಗಿ ಕೈಯಿಂದ ಹಿಡಿದುಕೊಂಡನು. ಅದಂ ತೆಗೆದು ನೋಡಲು, ಮಾತೃಗರ್ಭದಿಂದ ಬಂದಂತೆ ಸುಂದರನಾದೊಬ್ಬ ಬಾಲಕನು ಈಚೆಗೆ ಬಂದನು. ಅವನಂ ಕೈಯಲ್ಲಿ ಎತ್ತಿಕೊಂಡು ಈ ಮಗುವಿಗೆ ಇನ್ನು ಸ್ತನ್ಯಪಾನವಂ ಮಾಡಿಸುವವರಾರು ?-ಎಂದು ಚಿಂತಿಸುತ್ತ ವಸ್ತ್ರವನ್ನು ಹೊದಿಸಿಕೊಂಡು ಮನೆಗೆ ಬಂದು ಕಾಂತೆಯನ್ನು ಕುರಿತು, ಸಂತೋಷದಿಂದ ದೇವರು ನನಗೆ ಈ ಪುತ್ರನಂ ಕೊಟ್ಟನು-ಎನಲು, ಗೋಣಾಯಿಯು ಉಲ್ಲಾಸದಿಂದ ಎತ್ತಿಕೊಂಡಳು. ಆಕೆಗೆ ಆಕ್ಷಣವೇ ಸ್ತನ್ಯವು ಒದವಿತು. ಮುಪ್ಪಿನಲ್ಲಿ ಸ್ತನ್ಯವೊದವಿದುದಕ್ಕೆ ಇಬ್ಬರಿಗೂ ಆಶ್ಚರ್ಯವುಂಟಾಯಿತು. ಗೋಣಾಯಿಯು ಮಗುವಿಗೆ ಸ್ತನ್ಯವನಿತ್ತಳು. ದೇವನಾಮವಂ ಸಂಕೀರ್ತಿಸುತ್ತ ಅವನ ಪ್ರಸಾದದಿಂ ಪಡೆದುದರಿಂದ ಪುತ್ರನಿಗೆ 'ನಾಮ' ಎಂದು ನಾಮವನಿಟ್ಟರು. ಆ ಪುತ್ರನ ವಿಷಯದಲ್ಲಿ ಇಬ್ಬರಿಗೂ ಪ್ರೇಮವು ಹೆಚ್ಚಿತು. ಆ ಪುತ್ರನು ದಿನದಿನಕ್ಕೆ ಬೆಳೆದನು.

ಒಂದು ದಿವಸ ದಾಮಶೆಟ್ಟಿಯು ಸಂತೆಗೆ ಹೋಗಿರಲು ಆತನ ಕಾಂತೆಯು ನಾಮನಂ ಕುರಿತು-ಮಗು ! ದೇವರಂ ಪೂಜಿಸಿ ದೇವರಿಗೆ ಈ ನೈವೇದ್ಯವಂ ಸಮರ್ಪಣೆಮಾಡಿ ಬಾ-ಎಂದು ನೈವೇದ್ಯವಂ ಕೊಟ್ಟು ದೇವಸ್ಥಾನಕ್ಕೆ ಕಳುಹಿಸಿದಳು. ಅವನು ಗುಡಿಗೆ ಹೋಗಿ ಬಾಗಿಲನ್ನು ಮುಚ್ಚಿ ದೇವರಿಗೆ ಪೀತಾಂಬರವನ್ನುಡಿಸಿ ಗಂಧಪುಷ್ಪಧೂಪದೀಪಂಗಳಂ ಸಮರ್ಪಿಸಿ ನೈವೇದ್ಯದ ತಳಿಗೆಯಂ ದೇವರ ಮುಂದಿಟ್ಟು ಕೈಗಳಂ ಜೋಡಿಸಿಕೊಂಡು :—

ಪರಿಪರಿಯ ಪಾತಕಕ್ಕಾ |
ಕರನೆಂದೆನಿಸಿರ್ಪ ನನಗೆ ಗತಿ ನೀನೊರ್ವ್ವಂ ||

ಶರಣಾಗತಪರಿಪಾಲನೆ |
ಪರಮದಯಾಕರನೆ ಬಿಡದೆ ದಯೆಗೆಯ್ಯೆನ್ನೊಳ್ ||
ಅರಿಯೆಂ ಕೃತ್ಯಾಕೃತ್ಯದ |
ಪರಿಯಂ ನಾಂ ಬಾಲಭಾವನೊಂದಿರ್ಪುದರಿಂ ||
ಕರುಣಾನಿಧಿನೆನ್ನಂ ಪೊರೆಯೈ ||
ದೊರೆಯಿಸಿ ನಿನ್ನಡಿಯೊಳೆನಗೆ ಭಕ್ತಿಯನೆಂದುಂ ||

ಸಚ್ಚರಿತ ಸಚ್ಚಿದಾತ್ಮಕ |
ನಿಚ್ಚಂ ನಾಂ ಮಾಳ್ಪನಿರದೆ ಪಲವುಂ ತಪ್ಪಂ ||
ಮುಚ್ಚರಣಾಶ್ರಿತನೆನುತುಂ |
ಮೆಚ್ಚುತೆ ನೀಂ ಬೇಸರುಳಿದು ಮನ್ನಿಸು ದೇವಾ ||

ಎಂದು ಪ್ರಾರ್ಥಿಸಿ—ಸ್ವಾಮಿಯೇ! ಅನ್ನ ಭೋಜನವಂ ಮಾಡಬೇಕು—ಎಂದನು. ನಾಮದೇವನು ಮನಸ್ಸಿನಲ್ಲಿ ದೇವನು ನಿತ್ಯದಲ್ಲಿಯೂ ನೈವೇದ್ಯವಂ ಪ್ರತ್ಯಕ್ಷನಾಗಿ ಭುಂಜಿಸುತ್ತಿರುವನೆಂದೇ ತಿಳಿದಿದ್ದನು. ಅಂತು ದೇವರು ತನ್ನ ಎದುರಿಗೆ ಭೋಜನವಮಾಡದೆ ಇರಲು, ಸ್ವಾಮಿಯನ್ನು ಕುರಿತು—ಎಲೈ ದೇವಾದಿದೇವನೆ! ಭಕ್ತವತ್ಸಲನೆ! ಕೃಪಾಸಮುದ್ರನೇ! ಪೂಜೆಗೆ ಹೊತ್ತಾಯಿತು—ಎಂದು ಚಿತ್ತದಲ್ಲಿ ಕೋಪವುಂಟಾಗಿರುವುದೋ? ಶ್ರೀಹರಿಯೆ! ನಿನ್ನ ಪರಮಭಕ್ತನಾದ ದಾಮಶೆಟ್ಟಿಯು ಇಂದು ಸಂತೆಗೆ ಹೋಗಿರುವುದರಿಂದ ನೈವೇದ್ಯಸಮರ್ಪಣೆಗೆ ನನ್ನನ್ನು ಕಳುಹಿಸಿರುವನು. ನೀನು ನೈವೇದ್ಯವಂ ಪರಿಗ್ರಹಿಸದಿದ್ದರೆ, ತಾಯಿಯು ನನ್ನ ಮೇಲೆ ಕೋಪಿಸಿಕೊಳ್ಳುವಳು. ನನ್ನಿಂದ ಏನಪರಾಧವು ನಡೆದಿದ್ದರೂ ಕ್ಷಮಿಸು—ಎಂದು ಪ್ರಾರ್ಥಿಸಿದನು. ಪಾಷಾಣಮೂರ್ತಿಯು ಕಾಣುವಂತೆ ಎಂತು ಭೋಜನವಂ ಮಾಡೀತು?—ಎಂಬ ವಿಕಲ್ಪವು ನಾಮದೇವನಿಗೆ ಮನದಲ್ಲಿರಲಿಲ್ಲ. ನಾಮದೇವನು ಬಿಕ್ಕಿಬಿಕ್ಕಿ ಅಳುತ್ತ ಮತ್ತೆ ದೇವರನ್ನು ಕುರಿತು—ಹೃಷೀಕೇಶನೇ! ಊಟಮಾಡು—ಎಂದು ಬೇಡಿದನು.

ಆಶ್ರಿತವತ್ಸಲನೂ ಕೃಪಾಸಾಗರನೂ ಆದ ದೇವಾದಿದೇವನು ಪ್ರಸನ್ನನಾಗಿ ನಾಮದೇವನಂ ಆಲಿಂಗಿಸಿಕೊಂಡು ಸಮಾಧಾನಗೊಳಿಸಿ ತಂದ ನೈವೇದ್ಯವಂ ಪ್ರೀತಿಯಿಂದ ಭೋಜನಮಾಡಿ ಈ ಸಂಗತಿಯಂ ಯಾರಲ್ಲಿಯೂ ಹೇಳಬೇಡ—ಎಂದನು. ನಾಮದೇವನು ದೇವರಿಗೆ ವಂದನೆಮಾಡಿ ಅಲ್ಲಿಂದ ಹೊರಟು ಮನೆಯಂ ಸೇರಿದನು. ಬರಿಯ ತಳಿಗೆಯನ್ನು ತಂದ ಮಗನನ್ನು ನೋಡಿ—ತಾಯಿ ನೈವೇದ್ಯವಂ ಯಾರಿಗೆ ಕೊಟ್ಟೆ?—ಎಂದು ಬೆಸಗೊಂಡಳು. ನಾಮದೇವನು—ಯಾರಿಗೆ ಕೊಡುವುದು? ದೇವರಿಗೆ ಕೊಟ್ಟೆ—ಎಂದನು. ಅದಕ್ಕೆ ಆಕೆ—ದೇವರಿಗೆ ಕೊಟ್ಟರೆ ದೇವರು ಭೋಜನಮಾಡಿಬಿಟ್ಟನೇ—

ಎನಲು, ನಾಮದೇವನು–ಭೋಜನಮಾಡದಿದ್ದರೆ ದೇವರಿಗೆ ನೈವೇದ್ಯವನ್ನೇಕೆ ಮಾಡಬೇಕು ? ಎಂದನು. ಈ ಮಾತಂ ಕೇಳಿ ಆಕೆ ಸುಮ್ಮನಾದಳು.

ಮರುದಿವಸ ದಾಮಶೆಟ್ಟಿಯು ಸಂತೆಯಿಂ ಮನೆಗೆ ಬಂದನು. ಹೆಂಡತಿಯು ನಡೆದ ವೃತ್ತಾಂತವನೆಲ್ಲವಂ ಹೇಳಿದಳು. ಆತನು ಕೇಳಿ ಆಶ್ಚರ್ಯಪಟ್ಟು ಮಗನಂ ಕರೆದು–ಚಕ್ರಪಾಣಿಯು ಭೋಜನವನ್ನೆಂತು ಮಾಡಿದನು ?–ಎನಲು, ಅದಕ್ಕೆ ಅವನು –ನಾವೆಲ್ಲರೂ ಮಾಡುವಂತೆಯೇ ಮಾಡಿದನು–ಎಂದನು. ನನಗೆ ಇದನ್ನು ತೋರಿಸು; ದೇವಸ್ಥಾನಕ್ಕೆ ಬಾ–ಎಂದು ಪೂಜಾಸಾಮಗ್ರಿಗಳನ್ನೂ ನೈವೇದ್ಯವನ್ನೂ ಸಿದ್ಧಪಡಿಸಿಕೊಂಡು ಮಗನೊಡನೆ ಗುಡಿಗೆ ಹೋದನು.

ನಾಮದೇವನು ಚಕ್ರಪಾಣಿಗೆ ನಮಸ್ಕಾರವಂಮಾಡಿ ಪೂಜೆಯಂ ಆರಂಭಿಸಿ ಧೂಪದೀಪಂಗಳಂ ಸಮರ್ಪಿಸಿ ನೈವೇದ್ಯವಂ ಮುಂದಿಟ್ಟು–ಸ್ವಾಮಿಯೇ ! ಭೋಜನವಂ ಮಾಡಬೇಕು–ಎಂದನು.

ಬಳಿಕ ಜಗದೀಶನು ನಾಮದೇವನನ್ನು ಕುರಿತು-ದಾಮಶೆಟ್ಟಿಯು ಬಂದಿರುವನು. ಅವನ ದೃಷ್ಟಿಗೆ ಬೀಳೆನು. ನಿನಗೆ ಮಾತ್ರ ದರ್ಶನವಂ ಕೊಡುವೆನು-ಎನಲು, ನಾಮದೇವನು-ಸ್ವಾಮಿಯೇ ! ನೀನು ಕಪಟಿ. ನಮ್ಮ ತಂದೆಗೆ ದರ್ಶನವಂ ಕೊಡದೆ ನನಗೆ ಮಾತ್ರ ಲೀಲೆಯಂ ತೋರಿಸುವೆನು-ಎಂದು ಹೇಳುವೆ. ಈ ಪಕ್ಷಪಾತವು ಸರ್ವಸಮನಾದ ನಿನಗೆ ಉಚಿತವೇ ?-ಎಂದನು. ಕಪಟಲೀಲಾವಿನೋದನಾದ ಸ್ವಾಮಿಯು ನಾಮದೇವನ ಮಾತಂ ಕೇಳಿ ನಕ್ಕು ಬಳಿಕ ದಾಮಶೆಟ್ಟಿಗೂ ಪ್ರಸನ್ನನಾಗಿ ದರ್ಶನವಂ ಕೊಟ್ಟು ಭೋಜನವಂ ಮಾಡಿದನು. ದಾಮಶೆಟ್ಟಿಯು ಪರಮಾನಂದಭರಿತನಾಗಿ ಶ್ರೀಹರಿಗೆ ಸಾಷ್ಟಾಂಗನಮಸ್ಕಾರಮಾಡಿ ನಾಮದೇವನನ್ನು ಕುರಿತು-ಬಾಲನೆ ! ನೀನು ನಮ್ಮ ವಂಶದಲ್ಲಿ ಹುಟ್ಟಿದುದರಿಂದ ಸ್ವಾಮಿಯು ನನಗೆ ದರ್ಶನವಂ ಕೊಟ್ಟನು ; ನಾನು ಧನ್ಯನು. ನಮ್ಮ ವಂಶವು ಪವಿತ್ರವಾದುದು-ಎಂದು ಸಂತೋಷದಿಂ ಅವನೊಡನೆ ಹೊರಟು ಮನೆಯಂ ಪೊಕ್ಕು ಕಾಂತೆಯಂ ಕರೆದು-ಸ್ವಾಮಿಯು ಭೋಜನವನ್ನು ಯಥಾರ್ಥವಾಗಿ ಮಾಡಿದನು. ನಾಮದೇವನನ್ನು ನಮ್ಮ ಮಗನೆಂದು ತಿಳಿಯಬಾರದು. ಪರಮಾತ್ಮನ ಪರಮಭಕ್ತನು-ಎನಲು, ಆಕೆ-ಅವನು ಅಯೋನಿಸಂಭವನು ; ಭಗವಂತನು ಅನುಗ್ರಹಿಸಿ ನಮಗೆ ಕೊಟ್ಟಿರುವನು-ಎಂದಳು. ಇಂತು ಆ ದಂಪತಿಗಳು ಸದ್ಭಾವದಿಂದ ಮಗನನ್ನು ಕಾಣುತ್ತ ಪ್ರೀತಿವಿಶೇಷದಿಂದ ಪೋಷಣೆಮಾಡುತ್ತಿದ್ದರು. ನಾಮದೇವನು ಯೌವನದಿಂದ ಕಂಗೊಳಿಸಿದನು. ದಂಪತಿಗಳು ಸಮುಚಿತವಾದ ನಂಟತನವನ್ನು ವಿಚಾರಮಾಡಿ, 'ರಾಜಾಯಿ' ಎಂಬ ಕನ್ಯೆಯಂ ತಂದು ಅವನಿಗೆ ಮದುವೆಯಂ ಮಾಡಿದರು. ಕೆಲವು ದಿನಗಳು ಕಳೆದ ಬಳಿಕ ನಾಮದೇವನಿಗೆ ಒಬ್ಬ ಮಗನು ಹುಟ್ಟಿದನು. ಅವನಿಗೆ 'ನಾರಾಯಣ' ಎಂಬ ಹೆಸರನ್ನು ಇಟ್ಟು ಪ್ರೀತಿಯಿಂದ ಆಡಿಸುತ್ತ ಇದ್ದರು. ನಾಮದೇವನಿಗೆ ಸಂಸಾರದಲ್ಲಿ ಸ್ವಲ್ಪವೂ

ಮಮತೆಯಿರಲಿಲ್ಲ. ಹೃದಯದಲ್ಲಿ ಕೇವಲವಿರಕ್ತನಾಗಿ ಸರ್ವಕಾಲದಲ್ಲಿಯೂ ದೇವರ ಸನ್ನಿಧಿಯಲ್ಲಿಯೇ ನೆಲಸಿ ಆನಂದದಿಂದ ಭಜಿಸುತ್ತಿದ್ದನು. ಒಂದುದಿನ ಗೋಣಾಯಿಯು ನಾಮದೇವನಂ ಕುರಿತು-ನಾವಿಬ್ಬರೂ ಮುದುಕರು; ಗೃಹಕೃತ್ಯವನ್ನು ನಿರ್ವಹಿಸಲಾರೆವು; ನೀನು ಹಗಲೂ ರಾತ್ರಿಯೂ ಭಗವಂತನ ಧ್ಯಾನದಲ್ಲಿಯೂ ನಾಮಸ್ಮರಣೆಯಲ್ಲಿಯೂ ನಿರತನಾಗಿಬಿಟ್ಟೆ. ನಿನ್ನ ಮನಸ್ಸು ಆತನಲ್ಲಿ ಅಂಟಿಬಿಟ್ಟಿತು ಕ್ಷಣಮಾತ್ರವಾದರೂ ಮನೆಯಂ ಸೇರುವುದಿಲ್ಲ. ನೀನು ಪಂಢರೀನಾಥನ ಸಹವಾಸವಂ ಮಾಡಿದೆ. ಅವನು ನಿನ್ನನ್ನು ಕೊನೆಗೂ ಪೂರೈಸಿದನು. ಸಂಸಾರಕ್ಕೆ ಸರ್ವವೂ ಬೇಕಾಗುವುದು. ಯಾರು ತಂದು ಕೊಡುವರು? ನೀನು ಒಬ್ಬನೇ ಮಗನು. ನೀನೂ ವಿರಾಗಿಯಾದರೆ ನಾನೇನಮಾಡಬೇಕು? ಇನ್ನೂ ಎಷ್ಟೋಮಂದಿ ಭಗವದ್ಭಕ್ತರು ಇರುವರು. ಅವರು ಸಂಸಾರದಲ್ಲಿಯೂ ವ್ಯಾಪೃತರಾಗಿ ಭಗವಂತನನ್ನು ಧ್ಯಾನಮಾಡುತ್ತಿರುವರು. ನೀನು ಸಂಸಾರದ ಆಶೆಯನ್ನೇ ತೊರೆದಿರುವೆ? ನಿನ್ನ ಸ್ಥಿತಿಯು ಲೋಕಕ್ಕೆ ಚೆನ್ನಾಗಿಲ್ಲ. ಮನೆಯಲ್ಲಿ ಅನ್ನವಸ್ತ್ರಗಳಿಗೆ ಕಷ್ಟ. ಈ ನಮ್ಮ ಸಂಸಾರವನ್ನು ನೋಡಿ ನಂಟರೆಲ್ಲರೂ ನಗುವರು. ಯಾವ ಪರಿಯಂ ಮಾಡಬೇಕು?—ಎಂದು ನಾನಾವಿಧವಾಗಿ ನುಡಿದಳು. ಈ ನುಡಿಯನ್ನು ಕೇಳಿ ನಾಮದೇವನು ಯಾವ ಉತ್ತರವನ್ನೂ ನುಡಿಯದೆ ಮನದಲ್ಲಿ ಅನುತಾಪಗೊಂಡು ದೇವಸ್ಥಾನದ ಮಹಾದ್ವಾರದ ಬಳಿಗೆ ಹೋಗಿ ಸಾಷ್ಟಾಂಗನಮಸ್ಕಾರವಂ ಮಾಡಿ ಸನ್ನಿಧಿಯಲ್ಲಿ ಭಕ್ತಿಯಿಂದ ನಿಂತು—ಶ್ರೀಹರಿಯೇ! ಪಂಢರೀನಾಥನೆ! ವಿಟ್ಠಲನೆ! ನನ್ನನ್ನು ಸಂಸಾರದಲ್ಲಿ ಏಕೆ ಹಾಕಿದೆ? ದುಃಖಮಯವಾದ ಸಂಸಾರದ ಹೊಡೆತವನ್ನು ನಾನು ಸಹಿಸಲಾರೆನು. ನನ್ನನ್ನು ರಕ್ಷಿಸು—ಎಂದು ಮೊರೆಯಿಡಲು, ಸ್ವಾಮಿಯು ಈ ಕರುಣವಚನವಂ ಕೇಳಿ ಅವನಿಗೆ ಆಲಿಂಗನವಂ ಕೊಟ್ಟು-ಇಂದು ನಿನ್ನನ್ನು ಯಾರು ಸಂಕಟಪಡಿಸಿದರು?—ಎಂದು ಬೆಸಗೊಂಡು ಕಣ್ಣೀರನ್ನೊರಸಿದನು. ನಾಮದೇವನು-ದೇವದೇವನೆ! ತಾಯಿ ಗೋಣಾಯಿಯು ಸಂಕಟಪಡಿಸುತ್ತಿರುವಳು, ನಾನು ನಿನ್ನ ಪಾದಗಳನ್ನು ನೆನೆಯುತ್ತಿರುವೆನು. ನಿನ್ನ ಕೃಪಾಛಾಯೆಯ ಆಶ್ರಯವನ್ನಿತ್ತು ನನ್ನನ್ನು ರಕ್ಷಿಸಬೇಕು-ಎಂದು ಬಿನ್ನವಿಸಲು, ಸ್ವಾಮಿಯು—ನಾಮದೇವನೆ! ನೀನು ನನ್ನ ಸನ್ನಿಧಿಯಲ್ಲಿಯೇ ಇರು. ಮೋಹಮಮತೆಗಳು ನಿನ್ನನ್ನು ಬಾಧಿಸವು. ನೀನು ನನ್ನ ಪೂರ್ಣಾಂಶವು. ನಾನು ನಿನ್ನ ಸ್ವರೂಪನು, ನನಗೂ ನಿನಗೂ ಭೇದವಿಲ್ಲ. ಸೂರ್ಯನೂ ಆತನ ತೇಜಸ್ಸೂ ಬೇರೆಬೇರೆ ತೋರಿದರೂ, ಪರಿಕಿಸಿ ನೋಡಲು ಭೇದವಿಲ್ಲ. ದೀಪವೂ ಪ್ರಕಾಶವೂ ಒಂದೇ ಆದರೂ ಬೇರೆಬೇರೆ ಸುಮ್ಮನೆ ತೋರುವಂತೆ, ನಿನ್ನ ನನ್ನ ಆತ್ಮಗಳು ಲೋಕಕ್ಕೆ ಬೇರೆಯಾಗಿ ಕಾಣುವುವು. ಸಕ್ಕರೆಯನ್ನೂ ಅದರ ಸವಿಯನ್ನೂ ಬೇರ್ಪಡಿಸಲು ಎಂತು ಆಗುವುದಿಲ್ಲವೋ; ಅಂತು ನಿನಗೂ ನನಗೂ ಭೇದವನ್ನು ಕಲ್ಪಿಸಲು ಆಗುವುದಿಲ್ಲ. ರತ್ನವೂ ಅದರಕಾಂತಿಯೂ, ಸುವರ್ಣವೂ ಭೂಷಣವೂ, ಅಭಿನ್ನವಾ

ಗಿರುವಂತೆ, ನಾವಿಬ್ಬರೂ ಅಭಿನ್ನರೆಂದು ತಿಳಿ. ಘಂಟೆಯೊಳಗಣಿಂದ ಹೊರಟ ನಾದವು ಅದರಲ್ಲಿಯೇ ಸೇರುವಂತೆ, ನೀನು ನನ್ನಲ್ಲಿ ಕೂಡಿ ಭೇದವನ್ನು ಖಂಡಿಸಬೇಕು—ಎಂದನು. ನಾಮದೇವನು ಭಗವಂತನ ಈ ಮಾತಂ ಕೇಳಿ, ಹೃಷೀಕೇಶನೆ! ಈ ಅದ್ವೈತಜ್ಞಾನವಂ ನನಗೆ ಉಪದೇಶಿಸುವುದೇಕೆ? ನಿನ್ನ ನಾಮಾಮೃತವೊಂದು ನಾಲಗೆಯಲ್ಲಿರಲು, ಸಂಸಾರದುಃಖವನ್ನು ಯಾವನೂ ಎಣಿಸುವುದಿಲ್ಲ. ನಿನ್ನ ಸ್ವರೂಪವು ಹೃದಯದಲ್ಲಿ ನಿಲ್ಲಲು, ಭವತಾಪವೆಲ್ಲಿ ನಿಲ್ಲುವುದು? ನೀನು ತಾಯಿತಂದೆಯಾಗಿ ಯೋಗಕ್ಷೇಮವನ್ನು ವಿಚಾರಿಸುವಲ್ಲಿ ಕೊರತೆಯೇನು ಉಂಟಾಗುವುದು? ನೀನು ಪರಮಾತ್ಮನು. ನಾನು ನಿನ್ನ ಚರಣಕಿಂಕರನು. ಬಾಯಿಂದ ನಿನ್ನ ನಾಮವಂ ಕೀರ್ತಿಸುವೆನು. ಜನ್ಮಜನ್ಮದಲ್ಲಿಯೂ ನಾನು ಇದನ್ನೇ ಬೇಡಿಕೊಳ್ಳುವೆನು. ಈ ವಿಷಯದಲ್ಲಿ ನೀನು ಅನುಗ್ರಹವಂ ಮಾಡಬೇಕು. ಮೋಕ್ಷಸುಖವಂ ದೊಡ್ಡದೆಂದು ಹೇಳುವೆ. ಅದು ನನ್ನ ಮನಸ್ಸಿಗೆ ಬಾರದು. ನಿನ್ನ ನಾಮಸಂಕೀರ್ತನಸುಖವೊಂದು ನನಗೆ ಇರಲಿ—ಎಂದನು. ಜಗನ್ನಾಥನು ಈಮಾತಂ ಕೇಳಿ ನಕ್ಕು, ರುಕ್ಮಿಣಿಯಂ ಕುರಿತು—ಪ್ರಿಯೆ! ಈನಾಮದೇವನಿಗೆ ಸಗುಣರೂಪದಲ್ಲಿಯೇ ಪ್ರೀತಿ. ಆತ್ಮಜ್ಞಾನವಂ ನುಡಿದರೆ ಇವನಿಗೆ ಸಮಾಧಾನವಾಗದು—ಎಂದು, ಮತ್ತೆ ನಾಮದೇವನಂ ಪ್ರೀತಿಯಿಂದ ಆಲಿಂಗಿಸಿಕೊಂಡು—ಎಲೆನಾಮದೇವನೆ! ನಿನ್ನ ಮನೆಯ ಯೋಗಕ್ಷೇಮವೆಂತಿರುವುದು? ಸಂಕೋಚಪಡದೆ ಅದನ್ನು ಹೇಳು? ಎನಲು, ಅದಕ್ಕೆ ನಾಮದೇವನು—ನಿನ್ನ ಅನುಗ್ರಹದಿಂದ ನಮಗೇನೂ ಕಡಿಮೆಯಿಲ್ಲ. ನಾವು ನಿನಗಿಂತಲೂ ಅತಿಶಯವನ್ನು ಹೊಂದಿರುವೆವು.

ಜಲಧಿನಿವಾಸನೆ ನಿನ್ನಯ |
ನೆಲೆದಾಣಂ ಶೈತ್ಯಬಾಧೆಯಿಂ ಕೂಡಿರ್ಕುಂ |
ಜಲರುಹನಾಭನೆ ಯೆಮ್ಮಯ |
ನಿಲಯಂ ರವಿಕಿರಣಚಯದೆ ಬೆಚ್ಚನೆಯಿರ್ಕುಂ ||

ಸಿರಿಯುರಸ ಸಹಸ್ರಫಣಾ |
ಪರಿವೃತನಾಗಿರ್ಪ ಸರ್ಪರಾಜನೊಳೆ ಮಹಾ ||
ದರದಿಂ ನೀಂ ಪವಡಿಪೆ ನಾಂ |
ಧರೆಯೊಳ್ ಮಲಗಿದಪೆವಿನಿತುಮಾದರವಿಲ್ಲಂ ||

ಒಡೆಯನೆ ಕೇಳ್ವೈ ನಿನ್ನಯ |
ಮಡದಿಯಿವಳ್ ನೋಡಲಹಹ ಚಂಚಲೆಯೆನಿಕುಂ ||
ನುಡಿದೇನೆನ್ನಯ ಕೈಯುಂ ||
ಪಿಡಿಪಂಗನೆ ಯಚಲಹೃದಯೆ ಯೆನಿಸುವಳಲ್ತೇ ||

8

ಸರಸಿಜನೇತ್ರನೆ ನಿನ್ನಯ |
ದೊರೆವಡೆದೊರ್ವಂ ಕುಮಾರನಾತ ನನಂಗಂ ||
ಚರಚರಣಾದಿಗಳಿಂದಂ |
ಪರಿಶೋಭಿಸುತಿರ್ಪನಲ್ತೆ ನನ್ನ ಕುಮಾರಂ |

ದೊರೆಕುದದೊಂದುಂ ಪೀತಾಂ |
ಬರಮಂ ಬಹುಕಾಲದಿಂದೆ ನೀಂ ಧರಿಸಿದಪೈ ||
ಧರಿಸುತುಮಿರ್ಪೆವು ನಾಂ ಪಲ |
ತೆರದತಿದುರ್ಲಭ ಮಮೂಲ್ಯ ಮೆನಿಸಂಬರಮಂ ||

ಪರಿಣತಭಕ್ತಾಧೀನಂ
ಸ್ಮರಿಪವರೆರ್ದೆಮನೆಯೊಳ್ಸೈದೆ ನೀಂ ನಿಲ್ಕಿರ್ಪೈ ||
ಇರದೆಲ್ಲ ಬೀದಿಯೊಳ್ ನಂ |
ಚರಿಸಿದೊಡಂ ನಮ್ಮ ಮಾತನಾಡಿಸರಾರುಂ |

ಎಲೈ ಪುರುಷೋತ್ತಮನೆ! ನಾನು ಆವಿಷಯದಲ್ಲಿ ಸ್ವಲ್ಪವೂ ಚಿಂತೆಯಂ ಮಾಡುವನಲ್ಲ. ದುಃಖಮಯವಾದ ಸಂಸಾರದಲ್ಲಿ ನಿನ್ನ ಧ್ಯಾನದಿಂದಲೂ ನಾಮಸಂಕೀರ್ತನೆಯಿಂದಲೂ ನನ್ನ ಮನಸ್ಸಿಗೆ ವಿಶ್ರಾಂತಿಯು. ಇದಕ್ಕೆ ಎಂದಿಗೂ ಕೊರತೆ ಬಾರದಂತೆ ನೀನು ಅನುಗ್ರಹಿಸಿ ರಕ್ಷಿಸಬೇಕು. ನಾನು ಮತ್ತೇನನ್ನೂ ಬೇಡುವುದಿಲ್ಲ—ಎಂದು ಅಭಿವಂದಿಸಿ ಭಕ್ತಿಯಿಂದ ಸ್ವಾಮಿಯನ್ನು ಸೇವಿಸುತ್ತಿದ್ದನು.

ಇತ್ತಕಡೆ ನಾಮದೇವನ ಹೆಂಡತಿಯು ಮನೆಯಲ್ಲಿ ಚಿಂತೆಯಂ ಮಾಡುತ್ತ ಅತ್ತೆಯಂ ಕುರಿತು—ನನಗೋಸ್ಕರವೇ ಬ್ರಹ್ಮನು ನಿಮ್ಮ ಮನೆಯನ್ನು ನಿರ್ಮಿಸಿದ್ದನೇ? ಉಡುವುದಕ್ಕೆ ಬಟ್ಟೆಯಿಲ್ಲ. ತೊಡುವುದಕ್ಕೆ ಒಡವೆಯಿಲ್ಲ. ತಿನ್ನುವುದಕ್ಕೆ ಅನ್ನವಿಲ್ಲ. ಮಲಗುವುದಕ್ಕೆ ಹಾಸಿಗೆಯಿಲ್ಲ. ಈಸೌಖ್ಯವನ್ನು ಅನುಭವಿಸುವುದಕ್ಕೆ ನಿಮ್ಮಮನೆಗೆ ನಾನು ಬಂದು ಸೇರಿದೆನು. ನಾವು ಪರದೇವನೆಂದು ಆವನನ್ನು ನಂಬಿ ಭಕ್ತಿಯಿಂದ ಸೇವಿಸುತ್ತಿರುವೆವೋ ಆತನೇ ನಮ್ಮನ್ನು ಸಂಕಟಗೊಳಿಸುತ್ತಿರುವನು. ಅವರನ್ನು ಸಂಸಾರಕ್ಕೆ ಬರಗೊಡಿಸುವುದಿಲ್ಲ. ಎಂದು ನೋಡಿದರೂ ಅವರು ದೇವಸ್ಥಾನದಲ್ಲಿಯೇ ಲೀನರಾಗುವರು—ಎಂದು ಹೇಳಿಕೊಂಡು ಗೋಳಾಡುತ್ತಿದ್ದಳು.

ಸರ್ವಚೈತನ್ಯಸ್ವರೂಪನಾದ ಪಂಡರೀನಾಥನಿಗೆ ದಯೆಯುಂಟಾಯಿತು. ಆಸ್ವಾಮಿಯು ನಿಜಭಕ್ತನಿಗೆ ಕಷ್ಟಕಾಲದಲ್ಲಿ ಒಲಿದನು. ತನ್ನ ಅಪ್ಪಣೆಯಿಂದ ವೃಷಭರೂಪವನ್ನು ಧರಿಸಿದ ಗರುಡನ ಮೇಲೆ ದ್ರವ್ಯದ ಹೇರುಗಳನ್ನು ಹೊರಿಸಿಕೊಂಡು ಪಟ್ಟಣದ ಜನಗಳನ್ನು 'ನಾಮದೇವನಮನೆಯೆಲ್ಲಿದೆ' ಎಂದು ವಿಚಾರಿಸುತ್ತ ಬಂದನು. ಗ್ರಾಮವಾಸಿಗಳು—ನಾಮದೇವನ ಮನೆಯಲ್ಲಿ ಅನ್ನಕ್ಕೆ ಗತಿಯಿಲ್ಲದೆ ಇರುವಾಗ, ಈ

ನಂಟನೆಲ್ಲಿ ಬಂದನು?—ಎನುತ್ತ, ಅತ್ತಕಡೆ ಬೃಂದಾವನದಿಂದಲೂ ದಟ್ಟವಾದ ತುಳಸೀವನದಿಂದಲೂ ಪತಾಕೆಗಳಿಂದಲೂ ಶೋಭಿಸುತ್ತಿರುವುದೇ ನಾಮದೇವನ ಮನೆ—ಎಂದು ಗುರುತನ್ನು ಹೇಳಿದರು. ಇದಂ ಕೇಳಿ, ಶ್ರೀಹರಿಯು ಸತ್ವರನಾಗಿ ವೃಷಭ ರೂಪದ ಗರುಡನನ್ನು ನಡೆಯಿಸಿಕೊಂಡು ನಾಮದೇವನ ಮನೆಯನ್ನು ಸೇರಿ ಅಂಗಳದಲ್ಲಿ ನಿಂತು ನಾಮದೇವನ ಹೆಂಡತಿಯನ್ನು ಕುರಿತು—ನಿಮ್ಮ ಮನೆಗೆ ನಂಟರು ನಾವು ಬಂದಿರುವೆವು. ಬೇಗ ನಮಗೆ ಆಸನವನ್ನು ತಂದುಕೊಡಬೇಕು—ಎನಲು, ಆಕೆ ಈಮಾತಂ ಕೇಳಿ—ಮನೆಯಲ್ಲಿ ಯಜಮಾನರು ಇಲ್ಲ. ಬಂದಮಾರ್ಗವಂ ಹಿಡಿದುಕೊಂಡು ಹೋಗಬೇಕು—ಎಂದು, ಅಷ್ಟುಹೊತ್ತಿಗೆ ನೆರೆಮನೆಯಿಂದ ಬಂದಿದ್ದ ಹೆಂಗಸನ್ನು ನೋಡಿ, ಎಲೆ ಸಖಿಯರಿರಾ! ನಿತ್ಯವೂ ನಂಟರು ಬಂದು ಪ್ರಾಣವನ್ನು ತೆಗೆದುಕೊಳ್ಳುವರು. ಅಲ್ಲದೆ ಅನೇಕರಾದ ಸಾಧುಗಳು ತಾಳವಂ ಹಾಕುತ್ತ ತಂಬೂರಿಯಂ ಮೀಟುತ್ತ ಮನೆಗೆ ಬಂದು ಲಜ್ಜೆಯಿಲ್ಲದೆ ಮಾನಾಪಮಾನವಂ ಬಿಟ್ಟು ಅವಿವೇಕದಿಂದ ಮನಸ್ಸಿಗೆ ಬಂದಂತೆ ಕುಣಿಯುತ್ತಿರುವರು. ಇವರಿಗೆಲ್ಲರಿಗೂ, ಪ್ರೀತಿಯಿಂದ ಭೋಜನವಂ ಮಾಡಿಸಬೇಕು-ಎಂದು ಯಜಮಾನರು ಹೇಳುವರು. ಮನೆಯಲ್ಲಿ ಒಂದು ಕಾಳು ಅಕ್ಕಿಯಿರುವುದಿಲ್ಲ. ಅವರಿಗೆ ತಿಳಿಯುವುದಿಲ್ಲ. ಸಾಮಗ್ರಿಯೇನಿದೆ? ಏನಿಲ್ಲ?-ಎಂದು ವಿಚಾರಿಸುವುದಿಲ್ಲ. ಸುಮ್ಮನೆ ಬಾಯಲ್ಲಿ—ಇವರಿಗೆ ಅನ್ನವನ್ನು ಹಾಕು-ಎಂದರೆ, ನಾನು ಎಲ್ಲಿಂದ ತಂದು ಮಾಡಬೇಕು?—ಎಂದಳು. ಶ್ರೀಹರಿಯು ಅಂಗಳದಲ್ಲಿಯೇ ನಿಂತು ಈಮಾತಂ ಕೇಳಿ-ಅಮ್ಮಾ! ಬೇಗಬಂದು ನಮಗೆ ಸ್ವಲ್ಪಸ್ಥಳವನ್ನು ತೋರಿದರೆ ಬಂದು ಕುಳಿತುಕೊಳ್ಳುವೆವು-ಎನಲು, ರಾಜಾಯಿಯು ಒಳಗೆ ನಿಂತುಕೊಂಡು ನೀವು ಯಾರು? ಎಲ್ಲಿರತಕ್ಕವರು? ನಿಮ್ಮ ಹೆಸರೇನು? ಹೇಳಿ-ಎಂದು ಬೆಸಗೊಳ್ಳಲು,—ಶ್ರೀಪತಿಯು ಆಮಾತಂ ಕೇಳಿ ನನ್ನ ಹೆಸರು ಕೇಶವಶೆಟ್ಟಿ ಎಂದು. ನಾಮದೇವನಲ್ಲಿ ನಮಗೆ ಬಹುಪ್ರೀತಿ. ಆದಕಾರಣ ಆತನನ್ನು ಕಾಣುವುದಕ್ಕೆ ಬಂದೆವು. ನಿಮ್ಮ ಮನೆಯಲ್ಲಿ ' ಅನ್ನಕ್ಕೆ ತೊಂದರೆಯಾಗಿದೆ; ಕಷ್ಟಪಡುತ್ತಿರುವರು, ಎಂದು ಸಮಾಚಾರವನ್ನುಕೇಳಿ, ಮಿತ್ರನಾದ ನಾಮದೇವನಿಗೋಸ್ಕರ ದ್ರವ್ಯದ ಚೀಲವನ್ನು ತಂದಿರುವೆವು—ಎಂದನು.

ರಾಜಾಯಿಯೂ ಈ ನುಡಿಯನಾಲಿಸಿ ದ್ರವ್ಯದ ಹೇರನ್ನೂ ನೋಡಿ ಪರಮಾನಂದಭರಿತೆಯಾಗಿ ಒಳಗೆಬನ್ನಿ—ಎಂದು ಕರೆದುಕೊಂಡುಹೋಗಿ ಆಸನವಂಕೊಟ್ಟು, ಇಲ್ಲಿ ಕುಳಿತುಕೊಳ್ಳಬೇಕು—ಎಂದು ಸ್ಥಳವನ್ನು ತೋರಿಸಿದಳು. ಆಕೆ ಮೊದಲು ನಿಷ್ಠುರವಾಗಿ ಮಾತನಾಡುವಳು. ಬಳಿಕ ಸನ್ಮಾನವನ್ನು ಮಾಡಿದಳು. ದ್ರವ್ಯವನ್ನು ನೋಡಿದಮಾತ್ರಕ್ಕೆ ಆಕೆಗೆ ಪರಮಪ್ರೀತಿಯುಂಟಾಯಿತು. ಬರಿಯ ಕೈಯಿಂದ ಎಲ್ಲಿಗೂ ಹೋಗಬಾರದು. ಉಡುಗೊರೆಯಂ ತೆಗೆದುಕೊಳ್ಳದೆ ಯಾರ ಮನೆಗೂ ಪ್ರಸ್ತುತಕ್ಕೆ ಹೋಗಬಾರದು. ರಾಜದರ್ಶನಕ್ಕೂ ದೇವರ ದರ್ಶನಕ್ಕೂ ರಿಕ್ತಹಸ್ತ

ನಾಗಿ ಹೋಗಬಾರದು. ನಂಟರ ಮನೆಗೆ ವಿಷಮಕಾಲದಲ್ಲಿ ಹೋಗಿ ಕೂಡಬಾರದು. ಏನನ್ನೂ ತೆಗೆದುಕೊಳ್ಳದೆ ಅಕ್ಕತಂಗಿಯರನ್ನೂ ಪುತ್ರಿಯರನ್ನೂ ನೋಡಲು ಹೋಗಬಾರದು. ಪರ್ವಕಾಲದಲ್ಲಿ ತೀರ್ಥವನ್ನು ಕುರಿತು ದ್ರವ್ಯಹೀನನಾಗಿ ಹೊರಡಬಾರದು. ಗುರುಗಳ ಮತ್ತು ಸಾಧುಗಳ ಸಂದರ್ಶನಕ್ಕೆ ತುಳಸೀದಳವನ್ನಾದರೂ ತೆಗೆದುಕೊಂಡು ಹೋಗಬೇಕು. ಕುಚೇಲನು ಪರಮಾತ್ಮನ ಸಂದರ್ಶನಕ್ಕೋಸ್ಕರ ಮುಷ್ಟಿಯವಲಕ್ಕಿಯನ್ನು ತೆಗೆದುಕೊಂಡು ಹೋದನು. ಸರ್ವರೂ ಆಶಾಬದ್ಧರು. ದ್ರವ್ಯವಿಲ್ಲದೆ ಎಲ್ಲಿಯೂ ನಡೆಯುವುದಿಲ್ಲ. ಮಹಾಮಹಿಮನಾದ ಭಗವಂತನೂ ಸುಮ್ಮನೆ ಒಲಿಯುವುದಿಲ್ಲ. "ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ। ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ॥" ಎಂದು ಸ್ವಾಮಿಯು ಹೇಳಿರುವಂತೆ, ಆತನಿಗೆ ಪತ್ರಪುಷ್ಪಗಳನ್ನಾದರೂ ಭಕ್ತಿಯಿಂದ ಸಮರ್ಪಿಸಬೇಕು. ಇಂತಿರಲು ಕೇವಲಾಶಾಬದ್ಧರಾದ ಮಾನವರ ವಿಷಯದಲ್ಲಿ ಹೇಳತಕ್ಕದೇನು? ಬಳಿಕ ಶ್ರೀಹರಿಯು ಭಕ್ತಿಯಿಂದ ಸತ್ಕೃತನಾಗಿ ನಿಮಿಷದಲ್ಲಿ ಭಿನ್ನವಾದ ಆಕೆಯ ಮನೋಭಾವಕ್ಕೆ ವಿಸ್ಮಯಗೊಂಡು ಆಕೆಯನ್ನು ಕುರಿತು—ಇನ್ನುಮೇಲೆ ಸಂಸಾರದಲ್ಲಿ ನಮ್ಮ ನಾಮದೇವನಿಗೆ ಯಾವ ರೀತಿಯಲ್ಲಿಯೂ ಉಪದ್ರವಗೊಳಿಸಬಾರದು. ತಂದಿರುವ ಈ ಹಣದ ಚೀಲಗಳನ್ನು ಮನೆಯೊಳಗೆ ತೆಗೆದಿಡುವುದು. ಅದು ವೆಚ್ಚವಾದ ಬಳಿಕ ನನಗೆ ತಿಳಿಯಿಸಿದರೆ ಮತ್ತೆ ತಂದುಕೊಡುವೆನು. ನಾಮದೇವನಿಗೆ 'ನಿನ್ನ ಮಿತ್ರನು ಬಂದಿದ್ದನು' ಎಂದು ಹೇಳಬೇಕು—ಎಂದನು. ಆಕೆ ಆ ಮಾತಂ ಕೇಳಿ ಲಜ್ಜಾವನತಮುಖಿಯಾಗಿ ಶ್ರೀಕೇಶವನನ್ನು ಕುರಿತು-ನೀವು ಯಾರೋ-ಎಂದು ನಾನು ತಿಳಿದಿದ್ದೆನು. ನಾನು ನಿಮ್ಮಲ್ಲಿ ನಿಷ್ಠುರವಾಗಿ ಮಾತನಾಡಿದೆ. ಚಿತ್ತದಲ್ಲಿ ಕೋಪವಂ ಮಾಡಲಾಗದು. ನಮ್ಮ ಯಜಮಾನರಿಗೂ ನಿಮಗೂ ಪ್ರೀತಿಯಿರುವುದನ್ನು ನಾನು ಅರಿಯೆನು. ನೀವು ಭೋಜನವಂ ಮಾಡಿಕೊಂಡು ಹೋಗಬೇಕು. ನಿಮಿಷದಲ್ಲಿ ಅಡಿಗೆಯಂಮಾಡಿ ಬಡಿಸುವೆನು—ಎನಲು, ಹರಿಯು-ನಾಮದೇವನನ್ನು ಬಿಟ್ಟು ನಾನು ಭೋಜನವಂ ಮಾಡುವವನಲ್ಲ. ಇನ್ನೊಂದುವೇಳೆ ಬಂದಾಗ ಅವಶ್ಯವಾಗಿ ಭೋಜನವಂ ಮಾಡುವೆನು—ಎಂದು ನುಡಿದು, ಸತ್ವರನಾಗಿ ಹೊರಟು ತನ್ನ ತಾಣವನ್ನು ಸೇರಿ ನಡೆದ ಸಂಗತಿಯಂ ವಿನೋದದಿಂದ ರುಕ್ಮಿಣಿಗೆ ಹೇಳಿದನು.

ಬಳಿಕ ರಾಜಾಯಿಯು ಮನದಲ್ಲಿ ಮಹೋಲ್ಲಾಸವನ್ನು ಹೊಂದಿ-ಯಜಮಾನರು ಯಾವದೇವನನ್ನು ನಿತ್ಯವೂ ಎಡೆಬಿಡದೆ ಸೇವಿಸುತ ಇರುವರೋ ಆತನು ಇಂದು ಪ್ರಸನ್ನನಾದನು—ಎನುತ್ತ, ದ್ರವ್ಯದ ಹೇರುಗಳನ್ನು ಒಳಗೆ ಸೇರಿಸಿ ಅಧಿಕವಾದ ದ್ರವ್ಯವನ್ನು ಅಂಗಡಿಗೆ ಕಳುಹಿಸಿಕೊಟ್ಟು ಮನೆಗೆ ಆವಶ್ಯಕವಾದ ಎಲ್ಲಾ ಸಾಮಗ್ರಿಗಳನ್ನೂ ನಿಮಿಷದಲ್ಲಿ ತರಿಸಿದಳು. ಅಮೂಲ್ಯವಾದ ವಸ್ತ್ರಾಭರಣಾದಿಗಳನ್ನೂ ಬರಮಾಡಿದಳು. ಮನೆಗೆ ಬಂದೊದವಿದ ಅಪಾರವಸ್ತುಗಳನ್ನೂ ನೋಡಿ ಮನದಲ್ಲಿ ಹಿಗ್ಗುತಿದ್ದಳು.

ವರ್ತಕರೆಲ್ಲರೂ 'ನಾಮದೇವನಿಗೆ ಶ್ರೀಹರಿಯು ಪ್ರಸನ್ನನಾದನು' ಎಂದು ಆಶ್ಚರ್ಯಪಡುತ್ತಿದ್ದರು. ಗೋಸಾಯಿಯು ಮನೆಯಲ್ಲಿ ಇರಲಿಲ್ಲ. ಮನೆಗೆ ದ್ರವ್ಯವು ಬಂದೊದವಿದ ಸಂಗತಿ ಆಕೆಗೆ ತಿಳಿಯಲಿಲ್ಲ. ಎಲ್ಲಿಯೋ ಸ್ವಲ್ಪ ಧಾನ್ಯವನ್ನು ಸಂಪಾದಿಸಿಕೊಂಡು ಮನೆಗೆ ಬಂದು ತಂದಿಟ್ಟು ನಾಮದೇವನು ಮುನಿದುಕೊಂಡು ಹೋಗಿರುವನೆಂದು ತಿಳಿದು, ದೇವಸ್ಥಾನಕ್ಕೆ ಹೋಗಿ ಸಮಾಧಾನವಂ ಮಾಡಿ ಅವನನ್ನು ಕರೆದು ತರಬೇಕು—ಎಂದು ಆಲೋಚಿಸಿ, ಥಟ್ಟನೆ ದೇವಸ್ಥಾನದ ಮಹಾದ್ವಾರಕ್ಕೆ ಬಂದು ನಮಸ್ಕಾರವಂ ಮಾಡಿ ಮಂಟಪದ ಒಳಗೆ ಬಂದಳು. ನಾಮದೇವನು ಹಿಂದೆ ಇದ್ದನು. ಸ್ವಾಮಿಯನ್ನು ನೋಡಿ—ಎಲೈ ದೇವನೆ! ನಾಮದೇವನಿಗೆ ನಿನ್ನಲ್ಲಿ ಪ್ರೀತಿಯು ಹೆಚ್ಚಿತು. ಸಂಸಾರದಲ್ಲಿ ಅಪೇಕ್ಷೆಯು ಹೋಯಿತು. ನಿನ್ನ ಸಂಬಂಧದಿಂದ ಗೃಹಕೃತ್ಯಗಳನ್ನು ಮರೆತನು. ವಿಷಯಸುಖವನ್ನು ಬಿಟ್ಟನು. ಸಂಸಾರದಲ್ಲಿ ನಿತ್ಯವೂ ನಾವು ಕಷ್ಟವನ್ನು ಅನುಭವಿಸುತ್ತಿರುವೆವು. ನಾಮದೇವನು ಸಂಸಾರದಲ್ಲಿ ವಿರಕ್ತನಾಗಿ ನಿನ್ನ ಪಾದಗಳನ್ನು ದೃಢವಾಗಿ ಹಿಡಿದನು. ಗೃಹಕೃತ್ಯದಲ್ಲಿ ಉಂಟಾದ ನಮ್ಮ ಕಷ್ಟವನ್ನು ನೋಡಿ ನಂಟರಿಷ್ಟರೆಲ್ಲರೂ ನಗುತ್ತಿರುವರು. ದೇಹಜ್ಞಾನವಂಬಿಟ್ಟು ನಾಮದೇವನು ಅಖಂಡಸಮಾಧಿಯನ್ನನುಭವಿಸುತ್ತಿರುವನು. ನೀನು ಅವನಿಗೆ ಅದ್ವೈತಬೋಧನೆಯಂ ಮಾಡಿದೆ. ಗೃಹಕೃತ್ಯದ ಸಂಗತಿ ಅವನ ಮನಸ್ಸಿಗೆ ಏನೂ ಹತ್ತುವದಿಲ್ಲ. ನಿನ್ನ ಸಂಗವಂ ಯಾರುಮಾಡುವರೋ ಅವರನ್ನು ನೀನು ನಿನ್ನಂತೆ ಮಾಡಿಕೊಳ್ಳುವೆ; ಮತ್ತೆ ಅವರು ಸಂಸಾರದಲ್ಲಿ ನಿಲ್ಲುವುದನ್ನು ನಾನು ಕಂಡು ಕೇಳಿಯೇ ಇಲ್ಲ. ನನ್ನ ಸಂಬಂಧವಂ ತಪ್ಪಿಸಿ, ನಾಮದೇವನನ್ನು ನಿನ್ನ ಬೆನ್ನಿಗೆ ಹಾಕಿಕೊಂಡೆ! ಇವನ ಕಾಂತೆಯು ಮನೆಯಲ್ಲಿ ಸಂಕಟಪಡುತ್ತಿರುವಳು. ನಿನಗೆ ಕರುಣೆ ಬಾರದು. ನಮಗೆ ಘಾತವಂ ಮಾಡಿ ಇವನಲ್ಲಿ ಪ್ರೀತಿಯಂ ಮಾಡುವೆ. ರುಕ್ಮಿಣೀರಮಣನೆ! ಇನ್ನು ನಾನು ನಿನ್ನ ದಾಕ್ಷಿಣ್ಯವನ್ನುನೋಡುವುದಿಲ್ಲ. ಮಮತೆಯಿಂದ ನಾನು ಪರಿಶೋಕ್ಷಿಸಿದೆನು. ನನಗೆ ನಿರಾಶತೆಯನ್ನೇ ಮಾಡಿದೆ. ಸಂಸಾರದಲ್ಲಿ ಕಷ್ಟವು ಹೆಚ್ಚಿತು. ನೀನು ಉದಾರನು—ಎನಿಸುವೆ. ಯಾರಿಗೆ ಏನನ್ನು ಕೊಟ್ಟೆ? ಎಲ್ಲಿ? ಬೆರಲುಮಡಿಸು. ನಿನ್ನ ಕೀರ್ತಿಯು ನನ್ನಮನಸ್ಸಿಗೆ ಹತ್ತುವದಿಲ್ಲ. ಯಾರಿಗಾದರೂ ಏನನ್ನಾದರೂ ನೀನು ಕೊಟ್ಟಿದ್ದರೆ ಉಪಕೃತನಾಗಿಯೇ ಕೊಟ್ಟಿರುವೆ. ಅವಲಕ್ಕಿಯನ್ನು ತಗೆದುಕೊಂಡು ಕುಚೇಲನಿಗೆ ಸಂಪತ್ತನ್ನು ಕೊಟ್ಟೆ; ನಾನು ಇದನ್ನು ಕೇಳಿಲ್ಲವೇ? ದುರ್ಜಯನಾದ ರಾವಣನ ಮರ್ಮವೆಲ್ಲವಂ ತಿಳಿಯಿಸಿ ಉಪಕಾರಮಾಡಿದ ವಿಭೀಷಣನಿಗೆ ಲಂಕಾರಾಜ್ಯವನ್ನು ಕೊಟ್ಟೆ. ಆರಾಜ್ಯವು ಆತನ ತಂದೆಯದಲ್ಲದೆ ನಿನ್ನದಲ್ಲ. ಅವನಿಗೆ ಸೇರತಕ್ಕುದನ್ನು ಅವನಿಗೆ ಕೊಟ್ಟೆ. ಅತಿಶಯವೇನು? ಫಲವನ್ನು ಕೊಟ್ಟುದರಿಂದ ಶಬರಿಗೆ ಒಲಿದೆ. ವಿವರಿಸಲದಳವಾದ ಸಾಹಸದಿಂದ ಉಪಕಾರಮಾಡಿದ ಆಂಜನೇಯನಿಗೆ ಗಣನೆಗೆ ಬಾರದ ಆಲಿಂಗನೆಯನ್ನು ಕೊಟ್ಟೆ. ದ್ರೌಪದಿಯು

ಕಷ್ಟದಶೆಯಲ್ಲಿರಲು, ಮೊದಲು ಪಲ್ಯದ ಸೊಪ್ಪನ್ನು ನೀನು ತೆಗೆದುಕೊಂಡು ಬಳಿಕ ಋಷಿಗಳಿಗೆ ಭೋಜನವಂ ಮಾಡಿಸಿದೆ. ನಿನ್ನಲ್ಲಿ ಇಂತಹ ಉದಾರಗುಣಗಳೇ ಇರುವುವು. ಇವುಗಳನ್ನು ವರ್ಣಿಸಲು ಆದಿಶೇಷನಿಗೂ ಅಸದಳವು. ನಾನು ದಾಕ್ಷಿಣ್ಯಕ್ಕೆ ಒಳಪಟ್ಟುದರಿಂದ ನಿನ್ನ ದೇವತ್ವವು ನಿಂತಿರುವುದು—ಎಂದು ಬಗೆಬಗೆಯಿಂದ ಮಾತನಾಡಲು, ಸ್ವಾಮಿಯು ಈಮಾತಂ ಕೇಳಿ ನಕ್ಕು ಪ್ರಸನ್ನನಾಗಿ ಗೋಸ್ವಾಮಿಯನ್ನು ಕುರಿತು—ನೀನು ವ್ಯರ್ಥವಾಗಿ ಏತಕ್ಕೆ ಕೋಪವಂ ಮಾಡುವೆ? ಬುದ್ಧಿಯಿಲ್ಲದ ನಿನ್ನ ಮಗನು ತಾನೇ ಬಂದು ನನ್ನ ಕಾಲುಗಳನ್ನು ಹಿಡಿದನು. ತನ್ನ ನಾಣ್ಯವು ಸಲ್ಲದುದಾದರೆ, ಪರರೊಡನೆ ಕಲಹವೇಕೆ? ನಾಮದೇವನಲ್ಲಿ ಮಗನೆಂಬ ಮಮತೆ ನಿನಗೆ ಹೆಚ್ಚಾಗಿರುವುದು. ಇದರಿಂದ ಮನಸ್ಸಿಗೆ ಬಂದಂತೆ ಮಾತನಾಡುವೆ. ಅಷ್ಟುಮಮತೆ ನಿನಗಿದ್ದರೆ ನಿನ್ನ ಮಗನನ್ನು ನೀನು ಕರೆದುಕೊಂಡು ಹೋಗು. ನನ್ನ ಮೇಲೆ ವ್ಯರ್ಥವಾಗಿ ನಿಮಿತ್ತವನ್ನಿಡಬೇಡ. ತೊಟ್ಟುವಾಗಿದ ಹಣ್ಣು ಗಾಳಿಯ ಸೋಂಕಿನಿಂದ ಥಟ್ಟನೆ ಮರವನ್ನು ಬಿಟ್ಟು ಕೆಳಗೆ ಬೀಳುವಂತೆ, ಪರಿಪಕ್ವವಾದ ನಾಮದೇವನ ಮನಸ್ಸು ಕಾಲಯೋಗದಿಂದ ಮಮತೆಯನ್ನು ಬಿಟ್ಟು ನನ್ನ ಪಾದದಲ್ಲಿ ಸಂಬಂಧಿಸಿರುವುದು. ನಾನು ಅದಕ್ಕೆ ನಿಮಿತ್ತವಲ್ಲ. ನಾನು ಅಜನು; ಅಜಿತನು; ಅವ್ಯಯನು; ಪೂರ್ಣನು; ಅನಾದಿರಹಿತನು; ನಿರಾಕಾರನು; ನಿರ್ಗುಣನು. ಆದರೂ ಪ್ರಪನ್ನರಾದ ಭಕ್ತರಿಗೋಸ್ಕರ ಸಾಕಾರನೂ ಸಗುಣನೂ ಆಗಿರುವೆನು. ನನ್ನನ್ನು ವ್ಯರ್ಥವಾಗಿ ಏಕೆ ದೂರುವೆ? ಪರಿಪಾಕವಿಶೇಷದಿಂದ ವೃಕ್ಷಕ್ಕೆ ಉಂಟಾದ ಫಲಗಳನ್ನು ಯಾವನೋ ಬಂದು ತೆಗೆದುಕೊಂಡು ಹೋಗಿ ಅನುಭವಿಸುವುದು ಉಚಿತವಲ್ಲ. ಅಂತು ಜಗತ್ತಿನ ಮಹಾವೃಕ್ಷಸ್ವರೂಪನಾದ ನನಗೆ, ತನಗೆತಾನೇ ಸೇರಿದ ಅಮೃತಫಲರೂಪನಾದ ನಾಮದೇವನನ್ನು ನೀನು ಬಯಸುವುದು ನ್ಯಾಯವೆ? ಸ್ವಕರ್ಮಕ್ಕೆ ಪ್ರತಿಫಲವನ್ನು ಅಪೇಕ್ಷಿಸುವುದು ಯಾರಿಗೂತಕ್ಕುದಲ್ಲ—ಎಂದನು. ಅದಕ್ಕೆ ಗೋಸ್ವಾಮಿಯು ಸ್ವಾಮಿಯನ್ನು ಕುರಿತು—ನೀನು ಮೀರಿದ ದೊಡ್ಡಮಾತನಾಡುವೆ. ವೃಕ್ಷವು ಫಲವನ್ನು ಹೊಂದಿರುವುದು ತನಗೋಸ್ಕರವಲ್ಲ; ಪರಾರ್ಥವಾಗಿಯೇ. ಲೋಕದಲ್ಲಿ ನೀನು ಅವತರಿಸಿರುವುದೂ ಪರರಿಗೋಸ್ಕರವೇ. ನೀನೇ ಈಗ ಹೇಳಲಿಲ್ಲವೇ? "ಪ್ರಪನ್ನರಾದ ಭಕ್ತರಿಗೋಸ್ಕರವೆ ಸಾಕಾರನೂ ಸಗುಣನೂ ಆಗಿರುವೆನು." ಎಂದು. ನೀನು ನನ್ನ ಎದೆಗೆ ಕಲ್ಲನ್ನು ಹಾಕಿ ಇಷ್ಟಜನವಿಯೋಗವಂ ಮಾಡುವೆ. ನಾನಾವಿಧವಾದ ಕಷ್ಟಗಳಿಂದ ಒಕ್ಕಲಿಗನು ಭೂಮಿಯಲ್ಲಿ ಬೇಸಾಯಮಾಡಿ ಸಿದ್ಧಪಡಿಸಿದ ಬೆಳೆಗೆ ಭಾಗಿಯಾಗಿ ಬರುವ ರಾಜನಂತೆ, ನಾನು ಬಹುಕಷ್ಟದಿಂದ ಪೋಷಿಸಿ ಬೆಳೆಯಿಸಿದ ನಾಮದೇವನಿಗೆ ನಾನು ಒಡೆಯನು—ಎನ್ನುವೆ. ನಿನ್ನ ದುರುಳತನವನ್ನು ನಿಲ್ಲಿಸು—ಎನಲು, ಶ್ರೀಹರಿಯು—ಇವಳಿಗೆ ಸಾಂತ್ವವಚನದಿಂದ ಸಮಾಧಾನವಂ ಮಾಡಬೇಕು. ಇಲ್ಲದಿದ್ದರೆ ನನಗೆ ಅಪಕೀರ್ತಿ ಬರುವುದು—ಎಂದು ಚಿಂತಿಸಿ, ಮಂದಹಾಸದಿಂದ ಕೂಡಿ—ಎಲೆ ಗೋಸ್ವಾಮಿಯೆ! ಕೋಪ

ವನ್ನು ಮಾಡಬೇಡ. ನಿನ್ನ ಸುಕೃತವು ಅತಿಶಯಿತವಾದುದು. ಅದರಿಂದಲೇ ಇಂತಹ ಮಗನು ನಿನಗೆ ದೊರೆತನು. ನಾರದಮಹರ್ಷಿಯಿಂದ ಸರಸ್ವತೀಬ್ರಹ್ಮರು ಧನ್ಯರಾದಂತೆ, ನಾಮದೇವನಿಂದ ನೀನೂ ದಾಮಶೆಟ್ಟಿಯೂ ಧನ್ಯರಾದಿರಿ. ದೈತ್ಯರಾಜನ ಕುಲದಲ್ಲಿ ಪ್ರಹ್ಲಾದನು ಅವತರಿಸಿದಂತೆ ನಿಮ್ಮ ವಂಶದಲ್ಲಿ ನಾಮದೇವನು ವಿಶ್ವವನ್ನುದ್ಧರಿಸುವುದಕೋಸ್ಕರ ಅವತರಿಸಿರುವನು. ಐವತ್ತಾರು ಕೋಟಿಯಾದವರೊಳಗೆ ಉದ್ಧವನು ಎಂತು ಶ್ರೇಷ್ಠನೋ ಅಂತು ಸಿಂಪಿಗರವಂಶದಲ್ಲಿ ನಾಮನು ಶ್ರೇಷ್ಠನೆನಿಸಿರುವನು. ಸಿದ್ಧರಲ್ಲಿಯೂ ಸಾಧುಗಳಲ್ಲಿಯೂ ಯೋಗಿಗಳಲ್ಲಿಯೂ ದತ್ತಾತ್ರೇಯಮುನಿಯಂತೆ ನಿನ್ನ ಮಗನು ಶ್ಲಾಘ್ಯನೆನಿಸಿರುವನು. ಧ್ರುವಕುಮಾರನನ್ನು ಪಡೆದ ಉತ್ತಾನಪಾದನ ಹಿರಿಯ ಹೆಂಡತಿಯಾದ ಸುಮತಿಯಂತೆ ಚಿದಾನಂದಮಯನಾದ ನಾಮದೇವನನ್ನು ಪಡೆದ ನೀನು ಧನ್ಯೆ. ಅಂಜನಾದೇವಿಯು ಹನುಮಂತನಿಂದ ಪುತ್ರವತಿಯೆನಿಸಿದಂತೆ, ನೀನು ನಾಮನಿಂದ ಪುತ್ರವತಿಯಾಗಿರುವೆ. ನಿನ್ನ ಜನ್ಮಾಂತರಕರ್ಮವಿಶೇಷವು ದೊಡ್ಡದು. ಮಹಾಭಾಗವತನು ನಿನಗೆ ಪುತ್ರನಾಗಿರುವನು. ಅವನಿಗೆ ಸ್ತನ್ಯವನೂಡಿಸಿದ ನಿನ್ನ ಭಾಗ್ಯವು ಯಾರಿಗೂ ವರ್ಣಿಸಲಸದಳವು. ನಾಮದೇವನನ್ನು ಹಲವುಬಗೆಯಿಂದ ಆದರಿಸಿ ಪರಿಪೋಷಿಸಿದ ನಿನ್ನಪುಣ್ಯವನ್ನು ನಾನೂ ವಿವರಿಸಲಾರೆನು. ಸರ್ವಶ್ರೇಷ್ಠನೂ ನಿಷ್ಕಾಮನೂ ಆದ ನಾನು ನಿನ್ನ ಗುಣಗಳನ್ನು ವರ್ಣಿಸುವೆನು. ನೀನೆ ಧನ್ಯೆ. ನಿನ್ನ ಮಗನೇ ಧನ್ಯನು—ಎನಲು, ಆದಕ್ಕೆ ಗೋಣಾಯಿಯು—ಎಲೆ ವಿಶ್ವವ್ಯಾಪಕನೆ! ಮೊದಲು ನನ್ನ ಮಗನನ್ನು ನನಗೆಕೊಟ್ಟು, ಬಳಿಕ ಭಜನದಲ್ಲಿ ಪ್ರೇಮವನ್ನು ಹೆಚ್ಚಿಸು—ಎಂದಳು. ಇದಂ ಕೇಳಿ ಲಕ್ಷ್ಮೀಪತಿಯು ಮತ್ತೆ ನಾಮದೇವನನ್ನು ಸಂಸಾರಕ್ಲೇಶಕ್ಕೆ ಸಿಕ್ಕಿಸಬೇಕಾಯಿತಲ್ಲಾ!—ಎಂದು ಚಿಂತಿಸುತ್ತಿದ್ದನು. ಬುದ್ಧಿಮತಿಯಾದ ಗೋಣಾಯಿಯು ಭಗವಂತನ ಅಭಿಪ್ರಾಯವನ್ನು ಥಟ್ಟನೆ ತಿಳಿದಳು. ಲೋಕದಲ್ಲಿ ಎಲ್ಲವುಗಳಿಗಿಂತಲೂ ಇಂಗಿತಜ್ಞಾನವು ದೊಡ್ಡದು. ಹದಿನಾಲ್ಕು ವಿದ್ಯೆಗಳಂ ಅಭ್ಯಸಿಸಿ ಚತುರನೆನಿಸಿದರೂ, ಪರೇಂಗಿತಜ್ಞಾನವಿಲ್ಲದಿದ್ದರೆ ವ್ಯರ್ಥ. ರಾಜಸಭೆಯಲ್ಲಿ ಸೇರಿದ ಪಂಡಿತರಿಗೂ ನ್ಯಾಯವಿಚಾರಕರಿಗೂ ಪ್ರಶ್ನೋತ್ತರಗಳನ್ನು ನಡೆಯಿಸುವವರಿಗೂ ಇಂಗಿತಜ್ಞಾನ ವಾವಶ್ಯಕವು. ನಂಟತನವನ್ನು ಮಾಡಲೂ ಗ್ರಂಥವನ್ನು ಓದಲೂ ಇಂಗಿಜ್ಞತೆಯಿರಬೇಕು. ಇನ್ನೊಬ್ಬರೊಡನೆ ಸ್ನೇಹವನ್ನು ಮಾಡುವುದಕ್ಕೂ ರೋಗಿಗೆ ಔಷಧವಂ ಕೊಡುವುದಕ್ಕೂ ಸಭೆಯಲ್ಲಿ ಕೀರ್ತನೆಮಾಡುವುದಕ್ಕೂ ಪರೇಂಗಿತಜ್ಞಾನವಿರಬೇಕು. ಗೋಣಾಯಿಯು ಚಕ್ರಪಾಣಿಯ ಉದಾಸೀನಭಾವವನ್ನರಿತು ರುಕ್ಮಿಣೀಸತ್ಯಭಾಮಾಕಾಳಿಂದಿಯರ ಸನ್ನಿಧಿಯಂ ಸೇರಿ—ತಾಯ್ಗಳಿರಾ! ನೀವು ಪ್ರೀತಿಯಿಂದ ನನ್ನ ಮಾತನ್ನು ಕೇಳಬೇಕು. ಯಾವನನ್ನು ದೀನದಯಾಳುವೆಂದು ಶ್ರುತಿಶಾಸ್ತ್ರಗಳು ಹೊಗಳುವುವೋ ಆ ನಿಮ್ಮಪತಿಯು ನಮ್ಮ ಹುಡುಗನಿಗೆ ಭಜನದಲ್ಲಿ ಪ್ರೀತಿಯನ್ನು ಹೆಚ್ಚಿಸಿ ಸಂಸಾರದಲ್ಲಿ ಏಕೆ ವಿರಕ್ತಿಯನ್ನುಂಟುಮಾಡಿ

ದನು ? ನನಗೆ ಇರುವ ಒಬ್ಬ ಮಗನನ್ನು ಈ ಮೋಘಶ್ಯಾಮನು ಸರ್ವಕಾಲದಲ್ಲಿಯೂ
ಭಜನಮಾರ್ಗದಲ್ಲಿ ನೆಲೆಗೊಳಿಸಬಹುದೆ ? ಇದಂ ನೀವೆಲ್ಲರೂ ಬಲ್ಲಿರಷ್ಟೆ ? ಸನಕಸ
ನಂದನಶುಕಪರಾಶರಾದಿಯೋಗೀಂದ್ರರಿಗೂ ಅನೇಕಸಾಧುಸಜ್ಜನರಿಗೂ ಈತನವಿಚಾ
ರವು ವಿದಿತವಾಗಿರುವುದು. ಇಂತಹಯೋಗ್ಯತೆಯುಳ್ಳ ಈತನು ಅನ್ಯಾಯವಾಗಿ ನಮ್ಮ
ಮನೆಯ ಬಾಳಿಕೆಯಂ ಮುರಿದನು. ನಾವು ದುರ್ಬಲರು : ಅನಾಥರು ; ದೀನರು!
ಮನೆಯಲ್ಲಿ ಅನ್ನವಸ್ತ್ರಕ್ಕಿಲ್ಲ. ನಾಮದೇವನಿಗೆ ತನ್ನ ನಾಮಕೀರ್ತನೆಯಲ್ಲಿಯೇ ಆಸಕ್ತಿ
ಯನ್ನು ಹೆಚ್ಚಿಸಿದನು. ಇದನ್ನು ನೀವು ಕಂಡಿರಿ. ಅನೇಕರಾದ ದೇವರನ್ನು ಕಂಡು
ಕೇಳಿ ಇರುವೆವು. ಆದರೆ ಇಂತಹನನ್ನು ನಾವು ಎಲ್ಲಿಯೂ ಕಂಡು ಕೇಳಲಿಲ್ಲ. ನಮಗೆ
ಕುಲದೇವನೆನಿಸಿರುವನು. ನಾವು ನಿತ್ಯವೂ ಬಿಡದೆ ಈತನ ಪಾದಗಳಿಗೆ ಎರಗುವೆವು.
ಆದರೂ ಬಹುಕಪಟಿ. ಕರುಣೆಯಂ ತೋರದೆ ನಮ್ಮನ್ನು ಛಳಿಸುವನು. ನಾನು
ಎಲ್ಲಿಯವರಿಗೆ ದಾಕ್ಷಿಣ್ಯವಂ ನೋಡುವೆನೋ ಅಲ್ಲಿಯವರೆಗೂ ಇವನ ದೊಡ್ಡತನವು
ನಿಂತಿರುವುದು. ಮರ್ಯಾದೆ ತಪ್ಪಿದಬಳಿಕ ನಾನು ಸುಮ್ಮನಿರುವುದಿಲ್ಲ. ನಾಲ್ಕುಜನ
ದಲ್ಲಿ ಮಾನವಂ ತೆಗೆದುಬಿಡುವೆನು. ಈತನು ತನ್ನದರ್ಶನವಾದ ಉತ್ತರಕ್ಷಣದಲ್ಲಿಯೇ
ಜೀವತ್ವಕ್ಕೆ ಹಾನಿಯನ್ನುಂಟುಮಾಡುವನು. ಅಯ್ಯೋ ! ನನಗೆ ಒಬ್ಬನೇಮಗನು
ಅವನನ್ನು ತನ್ನಧ್ಯಾನದಲ್ಲಿ ನೆಲಸಿ ನಿಲ್ಲುವಂತೆ ಮಾಡಿದನು. ನಾನೇನಮಾಡಬೇಕು ?
ತಾಯ್ಗಳಿರಾ ! ನೀವು ಇದನೆಲ್ಲವಂ ಕೇಳದಿರಲ್ಲವೆ ? ಇನ್ನು ಈ ಕಮಲಾಕ್ಷನಿಗೆ ತಿಳಿ
ಯಪಡಿಸಿ, ನನ್ನ ಕಷ್ಟವಂ ಪರಿಹರಿಸಿ. "ನಿನ್ನ ಮನಸ್ಸಿನಲ್ಲಿ ಏನಿದೆ ?" ಎಂದು
ನೀವೆಲ್ಲರೂ ಈ ದೇವರನ್ನು ಬೆಸಗೊಳ್ಳಿರಿ—ಎಂದು ನುಡಿದು ಮತ್ತೆ ಸ್ವಾಮಿಯ ಸನ್ನಿ
ಧಿಗೆಬಂದು ಹಿಂದೆ ನಿಂತಿದ್ದ ನಾಮದೇವನನ್ನು ಕುರಿತು—ಎಲೆ ನಾಮನೆ ! ಇಲ್ಲಿ ಏಕೆ ನೆಲ
ಸಿನಿಂದಿರುವೆ ? ಹೃಷೀಕೇಶನು ನೋಡುತ್ತಿರುವಾಗಲೇ ನಿನ್ನನ್ನುನಾನು ಬಲಾತ್ಕಾರ
ದಿಂದ ಎಳೆದುಕೊಂಡುಹೋಗುವೆನು. ನೀನು ಸಂಸಾರದಲ್ಲಿ ಕಳ್ಳನು. ಸರಿಯಾಗಿ
ಮನೆಗೆಬರುವುದಿಲ್ಲ. ಈ ವೈಕುಂಠನಿವಾಸನು ಜಗನ್ಮೋಹನನು. ತಾನು ಇಟ್ಟಿಗೆ
ಯಮೇಲೆ ನಿಂತುಕೊಂಡು ಜನಗಳ ಮನಸ್ಸನ್ನು ಆಕರ್ಷಿಸುತ್ತ ತನ್ನ ಹತ್ತಿರಕ್ಕೆ
ಬಂದವರನ್ನು ಪ್ರಪಂಚಕ್ಕೆ ದೂರಮಾಡುವನು—ಎಂದು, ಬಳಿಕ ಸ್ವಾಮಿಯನ್ನು
ನೋಡಿ—ಎಲೆ ಮಾಯೆಗಾರನೆ ! ಜಗದುದ್ಧಾರಕನೆ ! ಪುಂಡರೀಕನಿಂದ ಸ್ಥಳವು ಕೊಡ
ಲ್ಪಟ್ಟಿತ್ತೆಂದು ಇಲ್ಲಿಯೆ ನೀನು ನೆಲಸಿನಿಂದು ಪ್ರಪಂಚವನ್ನು ಕೆಡಿಸುತ್ತಿರುವೆ.
ನಿನ್ನನ್ನು ಇಲ್ಲಿಂದ ಬಯ್ಯದೆ ನಾನು ಹೋಗುವುದಿಲ್ಲ. ಅಭಿಮಾನವಂ ತಾಳಿ ಫಂಡರ
ಪುರವೆಲ್ಲವಂ ಲೀನಮಾಡಿದೆ. ಎಲೆ ಯದುನಾಯಕನೇ ! ಏಕೆ ಪ್ರತ್ಯುತ್ತರವನ್ನೀಯದೆ
ಸುಮ್ಮನೆ ನಿಂದಿರುವೆ ? ಜಗಜ್ಜೀವನನೆ ! ವಿಶ್ವವ್ಯಾಪಕನೆ ! ಭಕ್ತಭೂಷಣನೆ ! ಕರು
ಣಾನಿಧಿಯೆ ! ನನ್ನ ಮಾತು ನಿನ್ನ ಮನಸ್ಸಿಗೆ ಏಕೆ ಹತ್ತುವುದಿಲ್ಲ ? ಎಲೆ ವಿಟ್ಠಲನೆ !
ಸಂಸಾರನಾಶಕನೆ ! ಮಾತನಾಡು—ಎಂದು ನುಡಿದಳು,

ಶ್ರೀಪತಿಯು ಆಕೆಯ ಮಾತಂಕೇಳಿ—ಎಲೆ ಗೋಸಾಯಿಯೆ! ನಿನ್ನ ಮಗನನ್ನು ನೀನು ಕರೆದುಕೊಂಡು ಹೋಗಬಹುದು. ನನ್ನಮೇಲೆ ಏಕೆ ಅಪಶಬ್ದವನ್ನಿಡುವೆ?— ಎಂದು ನಾಮದೇವನನ್ನು ಕೈಯಲ್ಲಿ ಹಿಡಿದು—ಇದೋ ಈಕ್ಷಣ ಕರೆದುಕೊಂಡು ಹೋಗ. ಇವನು ಸತ್ಕರ್ಮಪರಿಪಾಕದಿಂದ ಮಾಯಾಮಮತೆಗಳನ್ನು ತೊರೆದನು. ಇದಕ್ಕೆ ನಾನೇನಮಾಡಲಿ? ವ್ಯರ್ಥವಾಗಿ ನಿನ್ನಿಂದ ನನಗೆ ಅಪವಾದವು ಬಂದಿತು. ಇನ್ನು ಸುಮ್ಮನೆ ನನ್ನನ್ನು ದೂರಬೇಡೆಂದು ಅವನನ್ನು ಅವಳ ವಶಕ್ಕೆ ಕೊಟ್ಟು ಕಳುಹಿದನು.

ಗೋಸಾಯಿಯು ನಾಮದೇವನ ಕೈಯಂ ಹಿಡಿದುಕೊಂಡು ತ್ವರೆಯಿಂದ ನಡೆಯುತ್ತ ಅವನನ್ನು ಕುರಿತು—ಎಲೆ ನಾಮದೇವನೆ! ನೀನು ಪ್ರಪಂಚವ್ಯಾಪಾರವಂ ಬಿಟ್ಟು ಪಂಡರೀನಾಥನನ್ನು ಶರಣುಹೊಕ್ಕೆಯಲ್ಲಾ! ಎನಲು, ಆಮಾತಂಕೇಳಿ ನಾಮದೇವನು ಹೃದಯದಲ್ಲಿ ಅನುತಪ್ತನಾಗಿ ಜಳಜಳನೆ ಕಣ್ಣುಗಳಿಂದ ನೀರನ್ನು ಸುರಿಯಿಸುತ್ತ ಕೆಳಗನೋಡುತ್ತಲೇ ಹೊರಟು ಆಕೆಯ ಸಂಗಡ ಮನೆಯನ್ನು ಸೇರಿದನು.

ಅತ್ತೆಯೂ ತನ್ನಪತಿಯೂ ಮನೆಗೆಬಂದುದನ್ನು ನೋಡಿ ರಾಜಾಯಿಯು ಸಂತುಷ್ಟೆಯಾಗಿ ತ್ವರೆಯಿಂದ ಸ್ವಯಂಪಾಕಕ್ಕೆ ಹೊರಟಳು. ತನಗೆ ಭಗವಂತನು ದಯೆಮಾಡಿದನೆಂದು ತುಂಬಿತುಳುಕುವ ಸಂತೋಷದಿಂದ ಸಂಭ್ರಮಗೊಂಡು ವಿವಿಧಭಕ್ಷ್ಯಗಳನ್ನೂ ನಾನಾವಿಧಪಕ್ವಾನ್ನಗಳನ್ನೂ ಸಜ್ಜುಗೊಳಿಸಿದಳು.

ಮನೆಯಲ್ಲಿ ಇದ್ದ ಹಂಡೆಮುಂತಾದ ದೊಡ್ಡದೊಡ್ಡ ಪಾತ್ರೆಗಳನ್ನೂ ದ್ರವ್ಯದ ರಾಶಿಯನ್ನೂ, ನಿಜಕಾಂತೆಯ ವಸ್ತ್ರಾಭರಣಗಳನ್ನೂ ನೋಡಿದ ನಾಮದೇವನ ಮನಸ್ಸಿನಲ್ಲಿ ಥಟ್ಟನೆ ಸಂತಾಪವುಂಟಾಯಿತು:—

ತೊಟ್ಟನೆ ಬೀಸಿದ ಬಲೆಯಂ |
ನಿಟ್ಟಿಸಿ ಸಂಭ್ರಾಂತವಪ್ಪ ಹರಿಣದ ತೆರದಿಂ ||
ಕಟ್ಟೈಸಿರಿ ಕಟ್ಟಿದಿರೊಳ್ |
ದಿಟ್ಟಿಗೆ ಬರೆ ಚಕಿತಮಾಯ್ತು ಗಡ ಮನಮವನಾ ||

ಚೆಂದದ ರೂಪಿನ ಪುರುಷಂ |
ಬಂದೊದವಿದ ಕುಷ್ಠರೋಗಮಂ ಕಂಡಕಟಾ ||
ದಂದುಗನೊಂದುವತೆರದಿಂ |
ಸಂದಣಿಸಿದ ಸಿರಿಯ ಕಂಡು ದುಃಖಿತನಾದಂ ||

ವ್ಯಾಪಿಸಿದ ಗಾಳಿಯಿಂದಂ |
ದೀಪಂ ತೇಜೋವಿಹೀನಮಾಗುವತೆರದಿ ||
ಆಪರಿಯೈಸಿರಿಯಿಂದಂ |
ಚೋಪಮನೊಂದಿತ್ತು ಮುಖದ ಕಳೆ ಸುಚರಿತನಾ ||

ಉಪರಾಗವುಂಟಾಗಲು, ಎಂತು ಸೂರ್ಯನು ಆಕ್ಷಣದಲ್ಲಿಯೇ ತೇಜೋಹೀನನಾಗುವನೋ, ಅಂತು ಆ ಮಹಾಸಂಪತ್ತಿಯು ಗೋಚರವಾಗಲು, ನಾಮದೇವನ ಮುಖವು ಥಟ್ಟನೆ ಕಂದಿಕುಂದಿತು. ಬಿರುಗಾಳಿಯು ಬೀಸಲು, ಮೇಘಸಂಕಲಿತವಾದ ಗಗನದಲ್ಲಿ ವಿಕ್ಷೇಪಂಗಳುಂಟಾಗುವಂತೆ, ಧನಕನಕರಾಶಿಯು ಕಣ್ಣಿಗೆಬೀಳಲು ಆನಂದಭರಿತನಾಗಿದ್ದನಾಮದೇವನ ಹೃದಯದಲ್ಲಿ ವಿಕ್ಷೋಭಂಗಳುಂಟಾದುವು. ಬಳಿಕ ಮಾತೆಯಂ ಕುರಿತು—ಇದೇನು ಈ ಧನಸಂಪತ್ತಿಯಾವುದು? ಎಲ್ಲಿಂದ ತಂದಿರಿ?—ಎಂದು ಬೆಸಗೊಳ್ಳಲು, ಆಕೆ-ನಾನು ಕಾಣೆನೆಂದಳು.

ರಾಜಾಯಿಯು ಒಳಗಣಿಂದ ಬಂದು ವಿನಯದಿಂದ ಕೂಡಿ ಪತಿಯಂ ಕುರಿತು—ಭೋಜನಕ್ಕೆ ಹೊತ್ತಾಯಿತು; ಬೇಗನೆ ಸ್ನಾನಕ್ಕೆ ಏಳಬೇಕು; ಅಡಿಗೆಯು ಸಿದ್ಧವಾಗಿದೆ; ಸ್ವಾಮಿಗೆ ನೈವೇದ್ಯವಂಮಾಡಿ ಪ್ರಸಾದವಂ ಸ್ವೀಕರಿಸಬೇಕು-ಎಂದಳು. ಈಮಾತಂಕೇಳಿ ನಾಮದೇವನು ಆಶ್ಚರ್ಯಯುಕ್ತನಾಗಿ, ಇದೇನು ಇವಳು ಇಂದು ಇಷ್ಟುವಿನಯದಿಂದ ಮಾತನಾಡುವಳು? ಧನಕನಕವಸ್ತುಗಳನ್ನು ಕಂಡುದರಿಂದ ಇವಳ ಮನಸ್ಸಿಗೆ ಸಮಾಧಾನವುಂಟಾಗಿರಬಹುದು. ಅಹಹ! ಲೋಕದಲ್ಲಿ ದ್ರವ್ಯವಿಲ್ಲದಿರಲು, ನಂಟರು ತನಗೆ ಹಗೆಗಳಾಗುವರು. ದುರಾಚಾರರು ನಗುವರು. ಧನವು ಇಂತಹ ಮಾಯಾಚರಿತವುಳ್ಳುದು. ಧನಸಂಪಾದನೆಯಂ ಮಾಡದ ಮಗನನ್ನುಕುರಿತು ತಂದೆ-ನೀನು ನಮ್ಮ ಹೊಟ್ಟೆಯಲ್ಲಿ ಹುಟ್ಟಿ ವಂಶಕ್ಕೆ ಅಪಕೀರ್ತಿಯನ್ನುತಂದೆ—ಎನ್ನುವನು. ನೆರೆಹೊರೆಯುವರು ಜುಗುಪ್ಸೆಪಡುವರು. ಅಕ್ಕತಂಗಿಯರನ್ನು ಮತ್ತು ಹೆಣ್ಣುಮಕ್ಕಳನ್ನು ನೋಡುವುದಕ್ಕೆ ಹೋಗಲು, ಅವರು ಲಜ್ಜಿತೆಯರಾಗುವರು. ದರಿದ್ರನಾದ ಪತಿಯನ್ನು ಹೆಂಡತಿಯು ನಿರಾಕರಿಸುವಳು. ಮಕ್ಕಳು-ನಮ್ಮ ತಂದೆ ಸಾಲವಂ ಮಾಡಿಟ್ಟನು—ಎನ್ನುವರು. ದಾರಿದ್ರ್ಯವು ಬರಲು, ಎಲ್ಲರೂ ಉಪೇಕ್ಷಿಸುವರು. ಧನವೇ ಮನುಷ್ಯನಿಗೆ ಬಂಧು. ಧನದಿಂದಲೇ ಸಮಸ್ತಸುಗುಣಂಗಳೂ ಕಲ್ಪಿತವಾಗುವುವು.

ಶ್ಲೋ॥ ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ ಸ ಪಣ್ಡಿತಸ್ಸ ಶ್ರುತವಾನ್ ಗುಣಜ್ಞಃ ।
ಸಏವ ವಕ್ತಾ ಸ ಚ ದರ್ಶನೀಯಃ ಸರ್ವೇ ಗುಣಾಃ ಕಾಞ್ಚನಮಾಶ್ರಯನ್ತಿ ॥

ತ್ಯಜನ್ತಿ ಮಿತ್ರಾಣಿ ಧನೈರ್ವಿಹೀನಂ ಪುತ್ರಾಶ್ಚ ದಾರಾಶ್ಚ ಸುಹೃಜ್ಜನಾಶ್ಚ ।
ತಮರ್ಥವನ್ತಂ ಪುನರಾಶ್ರಯನ್ತಿ ಹ್ಯರ್ಥೋಹಿ ಲೋಕೇ ಪುರುಷಸ್ಯ ಬನ್ಧುಃ ॥

ಮಾತಾ ನಿನ್ದತಿ ನಾಭಿನನ್ದತಿ ಪಿತಾ ಭ್ರಾತಾ ನ ಸಂಭಾಷತೇ
ಭೃತ್ಯಃ ಕುಪ್ಯತಿ ನಾನುಗಚ್ಛತಿ ಸುತಃ ಕಾನ್ತಾ ಚ ನಾಲಿಙ್ಗತಿ ॥
ಅರ್ಥಪ್ರಾರ್ಥನಶಙ್ಕಯಾ ನ ಕುರುತೇ ಸಲ್ಲಾಪಮಾತ್ರಂ ಸುಹೃತ್
ತಸ್ಮಾದರ್ಥಮುಪಾರ್ಜಯ ಪ್ರಿಯ ಸಖೇ ಹ್ಯರ್ಥೇನ ಸರ್ವೇ ವಶಾಃ ॥

ಎಂಬಿವೇ ಮೊದಲಾದ ಸುಭಾಷಿತಂಗಳಿಂದ ಕೀರ್ತಿಸಲ್ಪಡುವ ಗುಣವಿಶೇಷವುಳ್ಳ ಧನವು ವಿಚಿತ್ರಮಹಿಮೆಯುಳ್ಳುದು—ಎಂದು ತನ್ನಲ್ಲಿ ಚಿಂತಿಸಿ, ಅದನ್ನು ಮನದಲ್ಲಿ ಸ್ವಲ್ಪವೂ ಇಚ್ಛಿಸದೆ, ಬಳಿಕ ಕಾಂತೆಯನ್ನು ಕುರಿತು-ಈ ಹಣದ ಚೀಲಗಳನ್ನು ಎಲ್ಲಿಂದ ತಂದಿರಿ? ಯಾರು ಕೊಟ್ಟರು?-ಎಂದು ಬೆಸಗೊಂಡನು. ಆಕೆ, ಈತನ ಸಂಗಡ ಹೇಳಿದರೆ ಈಗಲೇ ಎಲ್ಲರಿಗೂ ಹಂಚಿಬಿಡುವನು-ಎಂದು ಎಣಿಸಿ, ಪ್ರತ್ಯುತ್ತರವನ್ನು ಕೊಡದೆ ಸುಮ್ಮನಿದ್ದಳು. ಆಗ ಜನಿಯೆಂಬ ದಾಸಿಯು ಸಮೀಪಕ್ಕೆ ಬಂದು ಪಾದಗಳಿಗೆ ನಮಸ್ಕರಿಸಿ—ನಾಮದೇವನೆ! ಕೇಳಬೇಕು. ಕೇಶವಶೆಟ್ಟಿಯೆಂಬ ನಿಮ್ಮ ಮಿತ್ರನೊಬ್ಬನು ಮನೆಗೆ ಬಂದು ಹಣದ ಹೇರುಗಳನ್ನು ಹಾಕಿಬಿಟ್ಟು—ನಾಮದೇವನು ನನ್ನ ಪರಮಮಿತ್ರನು. ಮನೆಯಲ್ಲಿ ಅನ್ನವಸ್ತ್ರಕ್ಕೆ ಕಷ್ಟನಾಗಿರುವುದನ್ನು ಕೇಳಿ ಈ ಹಣವನ್ನು ನಾನು ತೆಗೆದುಕೊಂಡುಬಂದೆನು. ಇನ್ನು ನಾಮದೇವನನ್ನು ಸಂಸಾರದಲ್ಲಿ ಹಿಂಸೆಪಡಿಸಬೇಡಿ. ಇದು ಮುಗಿದಬಳಿಕ ಹೇಳಿ ಕಳುಹಿಸಿದರೆ ಮತ್ತೆ ತಂದುಕೊಡುವೆನು—ಎಂದು ಹೇಳಿ ಹೋದನು—ಎನಲು, ಈ ಮಾತಂ ಕೇಳಿ ನಾಮದೇವನು ಭಗವದ್ವಿಲಾಸವನ್ನು ಬಗೆದು ಕಣ್ಣುಗಳಲ್ಲಿ ನೀರು ತುಂಬಿತುಳುಕಾಡುತ್ತಿರಲು—ಪತಿತಪಾವನನೆ! ಭಕ್ತವತ್ಸಲನೆ! ರಾಜೀವನೇತ್ರನೆ! ಕರುಣಾಸಿಂಧುವೆ! ಜಗಜ್ಜೀವನನೇ! ನೀನು ಅಜನು; ಅಜಿತನು; ಅವ್ಯಯನು; ಮಾಯಾತೀತನು; ನಿರಾಮಯನು; ನೀನು ನನಗೋಸ್ಕರ ಏಕೆ ಶ್ರಮಪಟ್ಟೆ? ಸ್ವಾಮಿಯೆ! ಹಠಯೋಗವುಳ್ಳವರಿಗೂ ದೃಗ್ಗೋಚರನಾಗದ ನೀನು ನನಗೋಸ್ಕರ ಏಕೆ ಕೇಶವಶೆಟ್ಟಿಯಾದೆ? ಕೇಶವನೇ! ನಾನು ನಿನ್ನನ್ನು ಹಿಂಸೆಪಡಿಸಿದವನಲ್ಲ. ಆದರೂ ಏಕೆ ಪಲ್ಲವಕೋಮಲವಾದ ಪಾದಂಗಳಿಂದ ನಡೆದುಕೊಂಡುಬಂದೆ?

  ವನಜಾಕ್ಷನೆ ಕಾಮ್ಯಾರ್ಥಿಗ |
ಳೆನಿಸುವ ಭಜಕರ್ಗೆ ಧನಮನೀಯೆಗಡಾ ನೀಂ ||
ಇನಿಸುಂ ಬಯಕೆಯದಿಲ್ಲದ |
ನನಗೀ ಧನಕನಕವಸ್ತುಜಾಲಮನಿತ್ತೈ ||
  ಜಗದೀಶನೆ ಬಯಸದ ನನ |
ಗೊಗುಮಿಗೆಯಿಂ ಧನಮನೇಕೆ ನೀನೊದವಿಸಿದೈ ||
ಮುಗಿಲಿರದಂಭೋನಿಧಿಯೊಳ್ |
ಮಿಗೆ ಮಳೆಯಂ ಕರೆವೊಡೇನೊ ಫಲವದರಿಂದಂ ||
  ಒಲ್ಲೆಂ ಸಿರಿಯಂ ಭೋಗಮ |
ನೊಲ್ಲೆಂ ನಾಂ ನಾಲ್ಕುತೆರದ ಮೋಕ್ಷಂಗಳುಮಂ ||
ಇಲ್ಲಿಯೆ ನಿನ್ನ ಪದಂಗಳ |
ನುಲ್ಲಾಸದೆ ಸೇವೆಗೆಯ್ವುದೊಂದನೆ ಒಲ್ವೆಂ ||

ಅರಿಯೆಂ ತೀರ್ಥಾಟನೆಗಳ |
ನರಿಯೆಂ ವ್ರತಮಂ ಸಮಂತು ಜಪಮಂ ತಪಮಂ ||
ಅರಿಯೆಂ ತತ್ತ್ವವಿಚಾರಮ |
ನರಿಪೆಂ ನಾಂ ನಿನ್ನ ನಾಮಕೀರ್ತನೆಯೊಂದಂ ||

ಎಂದು ಪರಮಾತ್ಮನನ್ನು ಹಲವುತೆರದಿಂದ ಪ್ರಾರ್ಥಿಸಿ, ಆಕ್ಷಣದಲ್ಲಿ ಊರೊಳಗಿರುವ ಬ್ರಾಹ್ಮಣರೆಲ್ಲರಂ ಕರೆಯಿಸಿ ದ್ರವ್ಯವನ್ನೂ ವಸ್ತ್ರಭೂಷಣಂಗಳನ್ನೂ ಸಾಮಗ್ರಿಗಳನ್ನೂ ಅವರಿಗೆ ಸಮರ್ಪಿಸಿ, ನಿರಾಂತಕತೆಯಿಂದ ಪುರುಷೋತ್ತಮನನ್ನು ಭಜಿಸುತ್ತಿದ್ದನು.

ಅಮೇಯವಾದ ಲೀಲಾವಿಭವವುಳ್ಳ ಆಪುರುಷೋತ್ತಮನಿಗೆ ವಿಹಾರಸ್ಥಾನವಾಗಿರುವುದೇ ಪುರಾತನವಾದ ಪಂಡರೀಪುರಕ್ಷೇತ್ರವು. ಸಾತ್ವಿಕರಾದ ಭಾಗವತರು ಅತ್ಯಾಸಕ್ತಿಯಿಂದ ಈ ಕ್ಷೇತ್ರದ ಸಂದರ್ಶನವಂ ಮಾಡುವರು. ಯಾರು ವಿರಕ್ತರಾದ ಮಹನೀಯರೋ ಅವರಿಗೆ ಸಚ್ಚರಿತ್ರೋಜ್ಜ್ವಲವಾದ ಈಗ್ರಂಥವು ಸಮಂಜಸವಾಗಿ ತೋರುವುದು. ರೋಗಿಗಳಿಗೆ ದಿವ್ಯಾನ್ನವು ರುಚಿಸದಂತೆ ತಮೋಭೂಯಿಷ್ಠರಾದ ಅಭಕ್ತರಿಗೆ ಇದು ರುಚಿಸುವುದಿಲ್ಲ. ಅಭಕ್ತನಿಗೆ ದಾರಧನಾದಿಯಲ್ಲಿಯೇ ಕೇವಲಪ್ರೀತಿ. ಕಾಗೆಗೆ ಕೆಸರುಗುಂಡಿಯಲ್ಲಿಯೇ ಅತ್ಯಾದರವು. ರಾಜಹಂಸವು ದಿವ್ಯಸರೋವರದಲ್ಲಿ ವಿಹರಿಸುವಂತೆ, ಸಾತ್ವಿಕನಾದ ಭಕ್ತನು ಭಗವತ್ಕಥಾಮೃತರಸದಲ್ಲಿ ರಮಿಸುತ್ತಿರುವನು. ಅಂತಹ ಭಾಗವತನ ಆನಂದಮಯವಾದ ಹೃದಯದಲ್ಲಿ ವಿಕಲ್ಪಂಗಳು ಸೇರವು.

ಮುಂದಣ ಅಧ್ಯಾಯದಲ್ಲಿ ಶುಕಯೋಗಿಯ ಅವತಾರವಾದ ಕಬೀರದಾಸನ ಚರಿತ್ರೆಯು ಬಹುರಸಭರಿತವಾಗಿರುವುದು. ಭಾವುಕರು ಆದರದಿಂದ ಅವಧರಿಸಬೇಕು.

ಇಂತು ಶ್ರೀ ಭಕ್ತವಿಜಯದಲ್ಲಿ ನಾಲ್ಕನೆಯ ಅಧ್ಯಾಯಂ
ಸಂಪೂರ್ಣಂ.

ಐದನೆಯ ಅಧ್ಯಾಯ

ಕಬೀರದಾಸನ ಚರಿತ್ರೆ.

ಜಯ ದಶರಥಸುಕುಮಾರಾ |
ಜಯ ರಘುವರವೀರ ದುಷ್ಟನಿಶಿಚರಮಾರಾ ||
ಜಯ ಜಯ ಶುಭಸುಕುಮಾರಾ |
ಮಯನಲಸದ್ರೂಪವಿಭವನಿರ್ಜಿತಮಾರಾ ||

ಎಲೈ ಶ್ರೋತೃಗಳಿರಾ! ಸುರಸವೂ ಪಾವನವೂ ಆದ ಕಥೆಯಂ ಕೇಳಿರಿ. ಮಾಧುರ್ಯದಲ್ಲಿ ಅಮೃತಕ್ಕೆ ಸಮಾನನೆನಲು. ಉಪಮಾನವು ಗೌಣವಾಗಿ ತೋರುವುದು. ಪವಿತ್ರತೆಯಲ್ಲಿಯೂ ಶ್ರೇಷ್ಠತ್ವದಲ್ಲಿಯೂ, ಗಂಗೆಗಿಂತಲೂ ಅಧಿಕವೆಂದೇ ಹೇಳಬೇಕು. ವಿಸ್ತರದಲ್ಲಿ ಇದರಸಾಮ್ಯವು ದೊರೆಯುವುದಿಲ್ಲ. ಗಾಂಭೀರ್ಯದಲ್ಲಿ ಸಮುದ್ರಕ್ಕಿಂತಲೂ ಆಳವು. ಉದಾರತ್ವದಲ್ಲಿ ಪಾತ್ರಭೇದವಿಲ್ಲ; ಇದಕ್ಕೆ ಭಿಕ್ಷುಕನೂ ರಾಜನೂ ಸಮಾನರು. ಶೀತಲತ್ವದಲ್ಲಿ ಚಂದ್ರನ ಉಪಮಾನವು ಮುಖ್ಯವಾಗಿ ತೋರುವುದಿಲ್ಲ. ಅಮೂಲ್ಯವಾದ ರತ್ನಕಾಂತಿಯು ಇದರ ತೇಜಸ್ಸಿನಿಂದ ಮುಚ್ಚಲ್ಪಡುವುದು. ಮಾನ್ಯತೆಯಂ ನೋಡಲು, ಪರಮೇಶ್ವರನೂ ತನ್ನ ಮುಖದಿಂದ ಪಾಡುತ್ತಿರುವನು. ಈ ಅಮೃತರಸವು ಇಂದ್ರಾದಿಗಳಿಗೂ ದುರ್ಲಭವು. ಇಂತಹ ಮಹಿಮೆಯುಳ್ಳ ಭಕ್ತಕಥೆಯನ್ನು ಭಾವುಕರಾದ ನೀವು ಆದರದಿಂದ ಆಲಿಸುವುದು.

ಪೂರ್ವಾಧ್ಯಾಯದಲ್ಲಿ, ಭೀಮರಥಿಯಲ್ಲಿ ಹರಿದು ಬಂದು, ಗೋಣಾಯಿಗೆ ಪ್ರಾಪ್ತನಾದ ನಾಮದೇವನ ಚರಿತ್ರೆಯನ್ನು ಕೇಳಿದಿರಲ್ಲವೆ? ಎರಡನೆಯವನಾದ ಶುಕಮಹರ್ಷಿಯು ಮಾತೃಗರ್ಭವಾಸವನ್ನು ಬಲ್ಲದೆ ಭಾಗೀರಥಿಯಲ್ಲಿಯೇ ಶುಕ್ತಿಯೊಳಗಿದ್ದುಕೊಂಡು ರಾತ್ರಿಯೂ ಹಗಲೂ ಹೊರಗೆ ಕೇಳಿಸುವಂತೆ ಭಗವನ್ನಾಮಕೀರ್ತನೆಯಂ ಉಪಶ್ಲೇಷದಿಂದ ಮಾಡುತ್ತ ಹರಿದು ಬಂದು ವಾರಾಣಸಿಯ ಮಣಿಕರ್ಣಿಕಾಘಟ್ಟದ ಸೋಪಾನಕ್ಕೆ ತಾಕಿದನು. ಆಗ ತಮಾಲಮೋಮಿನನೆಂಬವನು ನೂಲನ್ನು ತೊಳೆಯುವುದಕ್ಕೋಸ್ಕರ ಅಲ್ಲಿಗೆ ಬಂದು ಮುಂದುಗಡೆ ಆಶುಕ್ತಿಯಂ ಕಂಡು-ಅದನ್ನು ನೀರಿನಿಂದ ಈಚೆಗೆ ತೆಗೆದುಕೊಂಡು ಬಿಚ್ಚಿ ನೋಡಿ ಅದರಲ್ಲಿ ಇದ್ದ ಬಾಲಕನನ್ನು ಸಂತೋಷದಿಂದ ಗ್ರಹಿಸಿದನು. ಪ್ರಯತ್ನಸಾಧನವೇನೂ ಇಲ್ಲದೆ ನಿಧಿಯು ದೊರೆತಂತೆ, ಕೆಸರುಗುಂಡಿಯ ನೀರಂ ಹುಡುಕುತ್ತಿರಲು ಕ್ಷೀರಸಮುದ್ರವು ಗೋಚರವಾದಂತೆ,

ಕಪ್ಪೆಚಿಪ್ಪುಗಳನ್ನಾಯುತಿರಲು ರತ್ನರಾಜಿಯು ಕೈಸೇರಿದಂತೆ, ಇಳಿಯುವುದಕ್ಕೆ ಗುಡಿಸಲನ್ನು ವಿಚಾರಿಸುತ್ತ ಹೋಗುತ್ತಿರಲು ಹೇಮಮಂದಿರವು ಪ್ರಾಪ್ತವಾದಂತೆ, ದುಷ್ಟಗಾನವಂ ಕೇಳುವುದಕ್ಕೆ ಹೋಗಲು ಹರಿಕೀರ್ತನವು ಕಿವಿಗೆ ಬಿದ್ದಂತೆ, ಜಾರಚೋರರ ಸಂಗವನ್ನು ಅಪೇಕ್ಷಿಸಲು ಸದ್ಗುರುಸಂದರ್ಶನವು ಲಭಿಸಿದಂತೆ, ಆತಮಾಲಮೋಮಿನನು ಲೌಕಿಕವ್ಯಾಪಾರದಲ್ಲಿ ವ್ಯಾಪೃತನಾಗಿರಲು, ಜಗದ್ಗುರುವೂ ವಿಶ್ವೋದ್ಧಾರಕನೂ ಆದ ಶ್ರೀಶುಕನು ಬಾಲರೂಪದಿಂದ ಆತನಿಗೆ ದೊರೆತನು. ದೊರೆತ ಬಾಲಕನನ್ನು ಆತನು ಅತ್ಯಾನಂದದಿಂದ ಉಡಿಯಲ್ಲಿ ಧರಿಸಿ ಮನೆಗೆ ಬಂದು ಪತ್ನಿಯನ್ನು ಕುರಿತು- ಪ್ರಿಯೆ! ಮೂವತ್ತೆರಡು ಲಕ್ಷಣಂಗಳಿಂದ ಸುಂದರನಾದ ಈ ಬಾಲಕನು ನಮ್ಮ ಪುಣ್ಯವಿಶೇಷದಿಂದ ಗಂಗೆಯಲ್ಲಿ ದೊರೆತನು. ನೀನು ಪ್ರೀತಿಯಿಂದ ಸಂರಕ್ಷಿಸು- ಎನಲು, ಆಕೆ ಅತ್ಯಾನಂದದಿಂದ ಭರಿತೆಯಾಗಿ ಬಾಲಕನನ್ನು ಎತ್ತಿಕೊಂಡಳು. ಒಡನೆಯೆ ಆಕೆಗೆ ಸ್ತನ್ಯವು ಒದವಿತು. ಪ್ರೇಮದಿಂದ ಬಾಲಕನಿಗೆ ಸ್ತನ್ಯಪಾನವಂ ಮಾಡಿಸಿದಳು. ತಮ್ಮ ಯವನಕುಲದಲ್ಲಿ ಮಹಾಭಾಗವತನು ಅವತರಿಸಿದನೆಂದು ಸಂತೋಷಿಸಿ, ಆ ದಂಪತಿಗಳು ಬಾಲಕನಿಗೆ ಕಬೀರನೆಂದು ಹೆಸರಿಟ್ಟು ಬಹುಪ್ರೀತಿಯಿಂದ ಪರಿಪೋಷಿಸುತ್ತಿದ್ದರು. ಬಾಲಕನು ಸರ್ವಕಾಲದಲ್ಲಿಯೂ ಭಗವನ್ನಾಮಸಂಕೀರ್ತನೆಮಾಡುತ್ತಿರುವುದಂ ಕೇಳಿ ಜನಗಳು ಆಶ್ಚರ್ಯಪಟ್ಟು, "ತಮಾಲಮೋಮಿನನು ಜನ್ಮಾಂತರದಲ್ಲಿ ಏನು ಪುಣ್ಯವಂ ಮಾಡಿದ್ದನೋ! ಮಹಾಭಾಗವತನು ಪುತ್ರನಾದನು" ಎಂದರು. ಕೆಲವರು "ಈತನಿಗೆ ದೈವವು ಅನುಕೂಲವಾಯಿತು. ದೈವಾನುಕೂಲ್ಯವೊಂದಿದ್ದರೆ, ಅಲಭ್ಯವಾದುದೂ ಲಬ್ಧವಾಗುವುದು" ಎಂದರು. ಆತನ ಜನ್ಮಾಂತರಪುಣ್ಯವಿಶೇಷದಿಂದ ಪುತ್ರನಾದ ಕಬೀರನು ಭಗವದ್ಭಜನನಿರತನಾಗಿ ದಿನದಿನಕ್ಕೆ ಬೆಳೆಯುತ್ತ ಬಂದನು. ಯೌವನವಶೆಯುಂಟಾಗಲು ಮದುವೆಯಂ ಮಾಡಿದರು.

ಅನಂತರದಲ್ಲಿ ಕಬೀರನಿಗೆ ಆತನ ತಾಯ್ತಂದೆಗಳು ಪ್ರಪಂಚವ್ಯವಹಾರವನ್ನು ಎಷ್ಟು ಬೋಧಿಸಿದರೂ ಆತನ ಮನಸ್ಸಿಗೆ ಹತ್ತದು. ಆತನು "ತನ್ನದು ಪರರದು" ಎನ್ನನು. ಸಮವಿಷಮಭೇದವನ್ನೆಣಿಸನು. ಭಿಕ್ಷುಕನನ್ನೂ, ರಾಜನನ್ನೂ, ಬ್ರಹ್ಮಾದಿಗಳನ್ನೂ ಸಮತೆಯಿಂದ ಭಾವಿಸುತ್ತಿರುವನು. ಮುಂದುಗಡೆಯಲ್ಲಿ ದ್ರವ್ಯದ ರಾಶಿ ಬಿದ್ದಿದ್ದರೂ ತೆಗೆದುಕೊಳ್ಳಲಿಚ್ಛಿಸನು. ವಸ್ತುಗಳನ್ನು ಕಳ್ಳರು ಕದ್ದುಕೊಂಡುಹೋದರೂ ಉದಾಸೀನನಾಗಿರುವನು. ಈತೆರದಲ್ಲಿರುತ್ತ ಸರ್ವಕಾಲದಲ್ಲಿಯೂ ಭಜನೆ ಮಾಡುತ್ತಿರುವನು. ಇವನ ನಡೆವಳಿಕೆಯಂ ನೋಡಿ ನಂಟರೆಲ್ಲರೂ ನಗುವರು. ಕಬೀರನ ನಡತೆಗೂ ಪ್ರಪಂಚದ ವ್ಯವಹಾರಕ್ಕೂ ಪರಸ್ಪರಾನುಬಂಧವು ಎಲ್ಲಿ ಸಂಘಟಿಸುವುದು? ಬಾಳೆಬೋರೆಗಿಡಗಳು ಒಂದುಕಡೆ ಇರತಕ್ಕುವೇ? ಅಗ್ನ್ಯುದಕಗಳಿಗೆ ಮಿತ್ರತ್ವವುಂಟೆ? ಸತಿಗೂ ಅಸತಿಗೂ, ಉದಾರನಿಗೂ ಲೋಭಿಗೂ, ಪಂಡಿತನಿಗೂ ಕುರುಬನಿಗೂ, ಪರಸ್ಪರತಾರತಮ್ಯವಿರುವಂತೆ, ಕಬೀರನಿಗೂ ಲೋಕವ್ಯವಹಾರಿಗೂ

ತಾರತಮ್ಯವಿರುವುದು. ಶ್ರೀಕೃಷ್ಣಚರಿತ್ರೆಯು ಶಿಶುಪಾಲನ ಮನಸ್ಸಿಗೆ ಬೇಸರಿಕೆಯನ್ನುಂಟುಮಾಡಿದಂತೆ, ಶ್ರೀರಾಮನ ಕೀರ್ತಿಯು ರಾವಣನ ಮನಸ್ಸಿಗೆ ಆತಂಕವನ್ನುಮಾಡಿದಂತೆ, ಕಬೀರನ ನಡೆವಳಿಕೆಯು ಲೌಕಿಕವ್ಯಾಪಾರಿಗೆ ಅಸಹ್ಯತೆಯನ್ನುಂಟುಮಾಡುತ್ತಿರುವುದು. ವಿಷಕ್ಕೂ ಅಮೃತಕ್ಕೂ ಎಂತೋ ಅಂತು ಪ್ರಾಪಂಚಿಕವಿಷಯಕ್ಕೂ ಪರಮಾರ್ಥಕ್ಕೂ ನಿರಂತರವೈರವಿರುವುದು. ಅದಂತಿರಲಿ. ಹಲವುಮಾತುಗಳಿಂದೇನು ? ಕಬೀರನು ಸರ್ವಕಾಲದಲ್ಲಿಯೂ ಶ್ರೀಹರಿಭಜನೆಯಲ್ಲಿಯೇ ವ್ಯಾಪೃತನಾಗಿದ್ದುದರಿಂದ ಪ್ರಪಂಚಕ್ಕೆ ಲಘುವಾಗಿ ತೋರುತ್ತಿದ್ದನು. ನಂಟರಿಷ್ಟರು ಪರಿಹಾಸಮಾಡುತ್ತಿರುವರು. ಒಂದುದಿವಸ ತಾಯಿಯು ಆತನಂ ಕುರಿತು-ನಿನ್ನದು ಇಂತಹ ವಿರಾಗಸ್ಥಿತಿಯು. ಪ್ರಪಂಚವ್ಯವಹಾರವು ಎಂತು ನಡೆಯಬೇಕು ?-ಎಂದು ಜರಿದು, ನೆಯ್ಯುವುದಕ್ಕೆ ಸಿದ್ಧಮಾಡಿ ಮಗ್ಗದಮುಂದೆ ಆತನಂ ಕುಳ್ಳಿರಿಸಿದಳು. ಶ್ರೀರಾಮಭಜನೆಯಲ್ಲಿಯೇ ಆತನ ಬುದ್ಧಿಯು ಪ್ರವರ್ತಿಸಿತು. ಇತರವಿಷಯವು ತೋರಲೇ ಇಲ್ಲ. ಶ್ರೀರಾಮಮೂರ್ತಿಯಂ ಧ್ಯಾನದಲ್ಲಿತಂದು ದೃಷ್ಟಿಯಂ ಅಲ್ಲಿಯೇ ನೆಲೆಗೊಳಿಸಿ, ಆಸ್ವಾಮಿಯ ನಾಮರೂಪಗಳಲ್ಲಿ ಮನೋವೃತ್ತಿಯಂ ನಿಲಿಸಿ, ದೇಹಸ್ಫೂರ್ತಿಯಂ ಮರೆತಿರಲು, ಆತನ ತಾಯಿಯು ಸಮೀಪಕ್ಕೆ ಬಂದುನೋಡಿ ಎಚ್ಚರವನ್ನುಂಟುಮಾಡಿ ಕಬೀರಾ! ಈಗ ನಿನಗೆ ಏನಾಗಿದ್ದಿತೋ ತಿಳಿಯನಲ್ಲಾ ! ಎನಲು; ಕಬೀರನು ತಾಯಿಯು ಹೊಡೆವಾಳು-ಎಂದು ಬಾಹ್ಯಭಯದಿಂದ ಥಟ್ಟನೆ ದೇಹಸ್ಮೃತಿಯಂ ತಂದುಕೊಂಡು ಬಂದು ಮೊಳವಂ ನೆಯ್ದನು. ಬಳಿಕನೆಯೇ ದೇಹಸ್ಮೃತಿಯನ್ನುಳಿದು ಶ್ರೀರಾಮಮೂರ್ತಿಯಂ ಏಕಾಗ್ರತೆಯಿಂದ ಧ್ಯಾನಿಸುತ್ತಿದ್ದನು. ಈತನು ತನ್ನಧ್ಯಾನದಲ್ಲಿ ನಿರತನಾಗಿರುವನು ; ತಾಯಿಯು ಬಂದು ಹೊಡೆದು ಹಿಂಸೆಮಾಡಾಳು-ಎಂದು, ಅಯೋಧ್ಯಾಧೀಶನಾದ ಶ್ರೀರಾಮಚಂದ್ರನು ಭಕ್ತವಾತ್ಸಲ್ಯದಿಂದ ತಾನೇ ವಸ್ತ್ರವಂ ನೆಯ್ಯುವುದಕ್ಕೆ ಕುಳಿತನು. ಯಾವನು ಕ್ಷೀರಸಾಗರವಿಹಾರಿಯೂ ವೈಕುಂಠವಾಸಿಯೂ ಬ್ರಹ್ಮಾಂಡನಾಯಕನೂ ಎನಿಸಿರುವನೋ ; ಯಾವನು, ಯೋಗೀಂದ್ರರು ವಜ್ರಾಸನದಲ್ಲಿ ಕುಳಿತು ಧ್ಯಾನಿಸಿದರೂ ಅವರ ಧ್ಯಾನಕ್ಕೆ ಥಟ್ಟನೆ ಸಿಕ್ಕನೋ ; ಯಾವನು ವೇದಶಾಸ್ತ್ರಂಗಳಂ ಪಾಠಮಾಡಿದರೂ, ಅನೇಕತೀರ್ಥಯಾತ್ರೆಗಳಂ ಮಾಡಿದರೂ ದೊರೆಯನೋ ; ಸನಕಸನಂದನಾದಿಗಳು ಯಾವನನ್ನು ಸರ್ವಕಾಲದಲ್ಲಿಯೂ ಭಜಿಸುತ್ತಿರುವರೋ ; ಶ್ರೀಮಹಾಲಕ್ಷ್ಮಿಯು ಯಾವನ ಚರಣಕಮಲಂಗಳನ್ನು ತನ್ನ ಹೃದಯದಲ್ಲಿ ಧರಿಸಿ ಸೇವೆಮಾಡುತ್ತಿರುವಳೋ ; ಆಮಹಾಮಹಿಮನಾದ ಭಗವಂತನು ಕಬೀರನ ಮಗ್ಗದಮುಂದೆ ಕುಳಿತುಕೊಂಡು ವಸ್ತ್ರವಂ ನೆಯ್ಯುತ್ತ, ಆಗಾಗ ಕಬೀರನು ಎಚ್ಚರಗೊಂಡು ನೆಯ್ಯುವುದಕ್ಕೆ ತೊಡಗಲು, ಆವೇಳೆಯಲ್ಲಿ ತಾನು ದೂರದಲ್ಲಿದ್ದುಕೊಂಡು ವಿನೋದವಂ ನೋಡುತ್ತಿರುವನು. ಇಂತು ಕಬೀರನು ಮತ್ತು ಶಾಜೀರ್ಧರನು ತಾನಿಬ್ಬರೂ ನೆಯ್ದ ಆವಸ್ತ್ರವು ಗಂಗಾಸರಸ್ವತಿಯರ ಉದಕದಂತೆ ಅಭಿನ್ನ

ವಾಗಿದ್ದುದು. ಬಳಿಕ ಕಬೀರನು ಭಗವಂತನ ಸಾಹ್ಯದಿಂದ ನೆಯ್ದ ಆವಸ್ತ್ರವನ್ನು ಗಳಿಗೆಹಾಕಿ ತಾಯಿಯ ವಶಕ್ಕೆ ಕೊಟ್ಟನು. ಆಕೆ ವಸ್ತ್ರವಂ ಆತನ ಕೈಗೇ ಕೊಟ್ಟು- ಸಂತೆಗೆ ತೆಗೆದುಕೊಂಡುಹೋಗಿ ಮಾರಿ, ಹಣವನ್ನು ತೆಗೆದುಕೊಂಡು ಬಾ. ಎಂದಳು. ಕಬೀರನು—ಅವಶ್ಯವಾಗಿ ಅಂತು ಮಾಡುವೆನು-ಎಂದು ಅದಂ ತೆಗೆದುಕೊಂಡು ಸಂತೆಗೆ ಹೋಗಿ ಬಂದೆಡೆಯಲ್ಲಿ ಕುಳಿತು ಕಣ್ಣುಗಳಂ ಮುಚ್ಚಿಕೊಂಡು ಹೃದಯದಲ್ಲಿ ಶ್ರೀರಾಮಮೂರ್ತಿಯಂ ಧ್ಯಾನಿಸುತ್ತ ಮುಖದಿಂದ ಶ್ರೀರಾಮನಾಮವಂ ಕೀರ್ತಿಸುತ್ತ ಪರವಶನಾಗಿದ್ದನು. ವಸ್ತ್ರವಂ ಮಾರುವುದಕ್ಕೆ ಬಂದಿರುವೆನು-ಎಂಬ ನೆನಪೇ ಆತನಿಗೆ ಇರಲಿಲ್ಲ. ಮಾರುವುದಕ್ಕೆ ಬಂದಿದ್ದ ಇತರರ ನೆರೆಯಲ್ಲಿ ಸುಮ್ಮನೆ ಕುಳಿತಿದ್ದನು. ದೇವಾದಿದೇವನಾದ ಶ್ರೀವೈಕುಂಠನಾಥನ ಹಸ್ತದ ಸ್ಪರ್ಶದಿಂದ ಆ ವಸ್ತ್ರವು ನೋಡುವರಿಗೆ ಅನೂಲ್ಯವಾಗಿ ತೋರುತ್ತಿದ್ದಿತು. ಹತ್ತರ ಬೆಲೆಯಲ್ಲಿ ಕೊಂಡುಕೊಳ್ಳುವನಿಗೆ ಇಪ್ಪತ್ತುನಾಲ್ಕರ ತಾಳಿಕೆ ಕಾಣುವುದು. ಇಪ್ಪತ್ತೈದರ ಬೆಲೆಯಲ್ಲಿ ಕೊಳ್ಳುವನಿಗೆ ಐವತ್ತರ ಮೇಲೆ ತಾಳಿಕೆಯಿರುವುದು. ಐವತ್ತರಲ್ಲಿ ತೆಗೆದುಕೊಳ್ಳುವನಿಗೆ ಅದರ ದ್ವಿಗುಣವಾದ ಬೆಲೆಯು ತೋರುವುದು. ಐನೂರರಲ್ಲಿ ಕೊಳ್ಳುವನಿಗೆ ಸಹಸ್ರದಮೇಲೆ ಬೆಲೆ ಹೊಳೆಯುತಿರುವುದು. ಇಂತಿರಲು, "ಇದು ಅಮೂಲ್ಯವು" ಎಂದು ಕೆಲವರು ಸುಮ್ಮನೆ ನೋಡಿಕೊಂಡು ಹೋಗುವರು. ಕೆಲವರು "ಕೈಯಲ್ಲಿ ಹಣವಿಲ್ಲ" ಎಂದು ಹೋಗುವರು. ಧನಿಕನಾದವನು ಬಂದು ನೋಡಲು, ಅವನಿಗೆ "ಅಮೂಲ್ಯವಾದಿದರ ಬೆಲೆ ಲಕ್ಷವೋ ಕೋಟಿಯೋ ಆಗುವುದು" ಎಂದು ತೋರುತಿರುವುದು. ಸಂತೆಯಲ್ಲಿ ಕೆಲವರು ಒಬ್ಬರನೊಬ್ಬರು ನೋಡುತ್ತ ಈ ಕಬೀರದಾಸನು ಅಮೂಲ್ಯವಾದ ವಸ್ತ್ರವನ್ನು ನೆಯ್ದವನು—ಎಂದುಕೊಂಡು ಸುಮ್ಮನೆ ಹೊರಟು ಹೋಗುವರು. ಮತ್ತೆ ಕೆಲವರು ತಮ್ಮ ಶಕ್ತಿಗೆ ಇಮ್ಮಡಿಯಾಗಿ ಕಾಣಿಸಿದುದರಿಂದ ಯಾವ ಮಾತನ್ನೂ ಆಡದೆ ಹೊರಟುಹೋಗುವರು. ಜೀವವಾನಕ್ಕೆ ಅದರದರ ಯೋಗ್ಯತಾನುಸಾರದಿಂದ ಚೈತನ್ಯವಿರುವಂತೆ ಕಬೀರನ ವಸ್ತ್ರವು ಜನಗಳಿಗೆ ತಂತಮ್ಮ ಶಕ್ತ್ಯನುಸಾರದಿಂದ ಕಾಣುವುದು. ನೀರಾಳ್ಳಿಯನ್ನೂ ಕಬ್ಬನ್ನೂ ಬಿತ್ತಿ ನೀರನ್ನು ಹಾಕಲು, ಆ ನೀರು ಅದರದರ ಗುಣವನ್ನನುಸರಿಸಿ ಎಂತು ಪರಿಣತವಾಗುವುದೋ ; ಅನೇಕವಾದ್ಯಂಗಳಿಂದ ಧ್ವನಿಗಳು ಹೊರಡಲು. ಆಕಾಶವು ಅವುಗಳಿಗೆ ಎಂತು ತಕ್ಕಂತೆ ಇರುವುದೋ ; ಅಂತು ಕಬೀರನ ವಸ್ತ್ರವು ಜನಗಳಿಗೆ ಅವರವರ ಯೋಗ್ಯತೆಯನನುಸರಿಸಿ ಅಮೂಲ್ಯವಾಗಿ ಕಾಣುವುದು. ಒಂದೇ ಸುವರ್ಣವು ಅಲಂಕಾರಭೇದದಿಂ ಬೇರಬೇರೆ ಕಾಣುವಂತೆ ಆ ವಸ್ತ್ರವು ಜನಗಳಿಗೆ ಹಲವುಬಗೆಯಾಗಿ ತೋರುವುದು. ಹಾಕಿದ ಆಜ್ಯದಷ್ಟು ಅಗ್ನಿ ಪ್ರಕಾಶವುಳ್ಳುದಾಗಿ ಕಾಣುವಂತೆ, ಜನಗಳ ಮನದ ಔದಾರ್ಯವಿದ್ದಷ್ಟು ಆವಸ್ತ್ರವು ಬೆಲೆಯುಳ್ಳುದಾಗಿ ತೋರುತಿರುವುದು. ಕಡೆಗೆ ಸಂತೆಗೆ ಬಂದವರೆಲ್ಲರೂ ಕೊಳ್ಳಲು ತಮಗೆಶಕ್ತಿಯಿಲ್ಲವೆಂದು ನುಡಿಯುತ್ತ ಸುಮ್ಮನೆ ಹೊರಟುಹೋದರು.

ಕಬೀರನು ಸಮಚಿತ್ತನಾಗಿ ಶ್ರೀರಾಮಭಜನೆಯಂ ಮಾಡುತ್ತಿರಲು ಸೂರ್ಯನೂ ಅಸ್ತಂಗತನಾದನು. ಸಂತೆಯೂ ಅಲ್ಲಲ್ಲಿಗೆ ತೀರಿಬಂದಿತು. ಆಗ ಕಬೀರನು ಕಣ್ಣುಗಳಂ ತೆರೆದು ಸುತ್ತಲೂನೋಡಿ,—ಜನಗಳೆಲ್ಲರೂ ತಮ್ಮ ಮನೆಗಳಿಗೆ ಹೊರಟುಹೋದರು ; ವಸ್ತ್ರವನ್ನು ಕೊಂಡುಕೊಳ್ಳುವರು ಯಾರೂ ದೊರೆಯಲಿಲ್ಲ. ಇನ್ನು ಮನೆಗೆ ಹೋದರೆ ತಾಯಿಯು ಸುಮ್ಮನೆಬಿಡಳು ; ಏನಮಾಡಲಿ ?—ಎಂದು ಚಿಂತಿಸಿ ಥಟ್ಟನೆ ಅಲ್ಲಿಂದ ಹೊರಟು, ಯಾರೂ ಇಲ್ಲದ ಒಂದು ಪಾಳುಮನೆಯಂ ಸೇರಿ ಅಲ್ಲಿ ರಹಸ್ಯವಾಗಿ ಕುಳಿತು ಶ್ರೀರಾಮಭಜನೆಯಂ ಮಾಡುತ್ತಿದ್ದನು.

ಧ್ರುವನು ತಾಯಿಯಿಂದ ತಿರಸ್ಕೃತನಾಗಿ ದುಗುಡಗೊಂಡು ಅರಣ್ಯದಲ್ಲಿ ಹೋಗಿ ಕುಳಿತಂತೆ; ಸಂನ್ಯಾಸಿಯು ಸಕಲಕರ್ಮಂಗಳನ್ನೂ ಬಿಟ್ಟು ಪರಮಹಂಸನಾಗಿ ಏಕಾಂತದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುವಂತೆ, ಅತ್ತೆಯ ಕೋಟಲೆಯಂ ಸೈರಿಸಲಾರದೆ ಸೊಸೆಯು ಅಡಗಿಕುಳಿತುಕೊಳ್ಳುವಂತೆ, ಸಂಸಾರದಲ್ಲಿ ತಾಯಿಯ ಹಿಂಸೆಯಂ ಸೈರಿಸಲಾರದೆ ಬೇಸರಗೊಂಡು ಏಕಾಂತದಲ್ಲಿ ಶ್ರೀರಾಮಭಜನೆಯಂ ಮಾಡುತ್ತ ಕುಳಿತಿದ್ದ ಆಕಬೀರನ ಸತ್ತ್ವವನ್ನು ಪರೀಕ್ಷಿಸುವುದಕ್ಕೋಸ್ಕರ ಸರ್ವಚೈತನ್ಯಸ್ವರೂಪನಾದ ಶ್ರೀಹರಿಯು ವೃದ್ಧಬ್ರಾಹ್ಮಣರೂಪಮಂ ತಾಳಿ ಜೀರ್ಣವಸ್ತ್ರಮಂಧರಿಸಿ ಶಿಶಿರಋತುವಿನ ಅತ್ಯಧಿಕವಾದ ಚಳಿಯಂ ಕಲ್ಪಿಸಿ ನಡುನಡುಗುತ್ತ, ಹರಿಶ್ಚಂದ್ರಮಹಾರಾಜನ ಸತ್ಯವನ್ನು ಪರೀಕ್ಷಿಸುವುದಕ್ಕೆ ವಿಶ್ವಾಮಿತ್ರಮಹರ್ಷಿಯು ಬಳಸಾರಿದಂತೆ, ಸಿರಿಯಾಳನ ಭಕ್ತಿಯನ್ನು ನೋಡುವುದಕ್ಕೆ ಕೈಲಾಸನಾಥನು ಸಂನಿಹಿತನಾದಂತೆ, ಅಂಬರೀಷನ ಸತ್ತ್ವವನ್ನು ಪರೀಕ್ಷಿಸಲು ದುರ್ವಾಸನು ನಡೆತಂದಂತೆ, ಬಲಿಚಕ್ರವರ್ತಿಯ ಔದಾರ್ಯವನ್ನು ಪರೀಕ್ಷಿಸುವುದಕ್ಕೆ ಹಿಂದೆ ತಾನು ವಾಮನನಾಗಿ ಐದಿದಂತೆ, ಆತನ ಬಳಿಗೆ ಬಂದು, ದೀನವದನನಾಗಿ ಆತನನ್ನು ಕುರಿತು—ಅಯ್ಯಾ! ನಾನು ಅನಾಥನು, ವಸ್ತ್ರವಿಲ್ಲದೆ ಶ್ರಮಪಡುತ್ತಿರುವೆನು. ಬಲುಚಳಿಯಾಗುತ್ತಿರುವುದು. ನೀನು ಮಹಾಭಾಗವತನು. ವದಾನ್ಯನು. ವಸ್ತ್ರವೇನಾದರೂ ಇದ್ದರೆ ನನಗೆ ಕೊಡಬೇಕು—ಎನಲು, ಕಬೀರನು ಆ ವೃದ್ಧಬ್ರಾಹ್ಮಣನನ್ನು ನೋಡಿ,-ಈಬ್ರಾಹ್ಮಣನಿಗೆ ಇಲ್ಲವೆಂದು ಹೇಳಿದರೆ ತನ್ನ ಸತ್ತ್ವಕ್ಕೆ ಹಾನಿಯುಂಟಾದೀತು—ಎಂದು ಆಲೋಚಿಸಿ ವಸ್ತ್ರದಲ್ಲಿ ಅರ್ಧವನ್ನು ಹರಿದು ಆತನಿಗೆ ಕೊಟ್ಟು ನಿರಾತಂಕನಾಗಿ ಭಗವದ್ಭಜನೆಯಂ ಮಾಡಲು ತೊಡಗಿದನು.

ಚಕ್ರಪಾಣಿಯು ವಸ್ತ್ರವನ್ನು ಹೊದೆದುಕೊಂಡು ಹೊರಗೆ ಬಂದು ಮತ್ತೆ ಈತನ ಭಾವಮಂ ಪರೀಕ್ಷಿಸಿ ನೋಡಬೇಕು—ಎಂದು ಆಲೋಚಿಸಿ, ಆಕ್ಷಣದಲ್ಲಿ ಒಬ್ಬ ಫಕೀರನಾಗಿ ತಲೆಯಲ್ಲಿ ಜಟೆಯನ್ನು ಬೆಳೆಯಿಸಿಕೊಂಡು ಕಾಲುಗಳಲ್ಲಿ ತೊಡರನ್ನೂ ಗಾರಮಣಿಯನ್ನೂ ಧರಿಸಿ, ಕೈಯಲ್ಲಿ ಜಪಸರಮಂ ಹಿಡಿದು ವಿಶಾಲವಾದ ನಯನಗಳಲ್ಲಿ ಆರುಣ್ಯಮಂ ತಾಳಿ ಕಬೀರನ ಸಮೀಪವನ್ನು ಸೇರಿ ಅಟ್ಟಹಾಸದಿಂದ ಕೂಗುತ್ತ ನನಗೊಂದು ವಸ್ತ್ರಮಂ ಕೊಡಬೇಕು—ಎಂದು ಪ್ರಾರ್ಥಿಸುತ್ತಿರಲು, ನಿರಾಕಾರನು ; ನಿರ್ಗು

ಣನು. ಇದಂ ನೀನು ತಿಳಿಯದೆ ಆ ದೇವನಂ ಬಿಟ್ಟು ಸಗುಣನಾದ ರಾಮನ ಭಜನೆಯನ್ನು ಏಕೆ ಮಾಡುವೆ ?-ಎಂದು ಬೆಸಗೊಳಲು, ಕಬೀರನು ಆ ಮಾತಂ ಕೇಳಿ-ನಿರ್ಗುಣ ಸಗುಣಭಾವವೆರಡೂ ಅಭಿನ್ನವಾಗಿರುವುದು. ತುಪ್ಪವು ಹೆತ್ತರೂ ಕರಗಿದರೂ ಎಂತು ಬೇರೆಯಲ್ಲವೋ, ಚಿನ್ನವು ಅನೇಕಾಲಂಕಾರಮಯವಾಗಿದ್ದರೂ ಅದು ಎಂತು ಭಿನ್ನವಲ್ಲವೋ, ಅಂತು ನಿರ್ಗುಣನೂ ನಿರಾಕಾರನೂ ಆದ ಪರಬ್ರಹ್ಮನು ಭಕ್ತರ ಕಾರ್ಯಕ್ಕೋಸ್ಕರ ಸಗುಣನೂ ಸಾಕಾರನೂ ಆಗಿರುವನು_ಎನಲು, ಫಕೀರನು_ಅದಿರಲಿ; ನನಗೆ ಆವುದಾದರೂ ಒಂದು ವಸ್ತ್ರವಂ ಕೊಡಬೇಕು-ಎಂದನು. ಕಬೀರನು ಮಿಕ್ಕ ಅರ್ಧವಸ್ತ್ರವಂ ಆ ಫಕೀರನಿಗೆ ಕೊಟ್ಟು, ವರ್ಷಾಕಾಲವು ತೀರಿದ ಬಳಿಕ ನಿರ್ಮಲವೆನಿಸುವ ಆಕಾಶದಂತೆಯೂ, ಟಂಕವು ಹೋದ ಬಳಿಕ ಪ್ರಕಾಶಿಸುವ ಚಿನ್ನದಂತೆಯೂ, ಸರ್ಪದಿಂದ ಬಿಡಲ್ಪಟ್ಟ ಮಲಯಗಿರಿಚಂದನತರುವಿನಂತೆಯೂ, ರಾಹುವಿನಿಂದ ಬಿಡಲ್ಪಟ್ಟ ಚಂದ್ರನಂತೆಯೂ, ಪ್ರವಾಹವು ಇಳಿದುಹೋದ ಬಳಿಕ ಶುದ್ಧವೆನಿಸುವ ನದಿಯ ಸಲಿಲದಂತೆಯೂ ಉಪಾಧಿರಹಿತನಾಗಿ, ವಸ್ತ್ರವನ್ನು ಕೊಂಡುಕೊಳ್ಳುವರು ಯಾರೂ ದೊರೆಯಲಿಲ್ಲವಲ್ಲಾ ?_ಎಂಬ ಚಿಂತೆಯಿಲ್ಲದೆ ನಿರ್ಮಲಭಾವವನ್ನು ಹೊಂದಿ ಆನಂದದಿಂದ ಶ್ರೀರಾಮನಂ ಭಜಿಸುತ್ತ ಕುಳಿತಿದ್ದನು.

ಜಗಜ್ಜೀವನನು ಮತ್ತೆ ಸುಮ್ಮನಿರದೆ ಬಳಿಕ ಬ್ರಾಹ್ಮಣವೇಷವಂ ಧರಿಸಿ, ಕಬೀರನ ಮನೆಗೆ ಹೋಗಿ ಅವನ ತಾಯಿಯಂ ಕುರಿತು_ಏನಮ್ಮ ! ನೀನು ಸಂಸಾರಕ್ಕೆ ಅನುಕೂಲನಾದ ಒಳ್ಳೆಯ ಮಗನನ್ನು ಪಡೆದಿರುವೆ; ನಾನೇನ ಹೇಳಲಿ ? ಸಂತೆಗೆ ಹೋದ ಆ ನಿನ್ನ ಮಗನಾದ ಕಬೀರನು ಯಾರಾದರೂ ವಸ್ತ್ರವಂ ಕೊಂಡುಕೊಳ್ಳುವರು ಬಂದರೆ ಅವರಿಗೆ ವಸ್ತ್ರದ ಕ್ರಯವನ್ನು ಹೇಳದೆ ಮೌನದಿಂದ ಶ್ರೀರಾಮಭಜನೆಯಂ ಮಾಡುತ್ತ ಕುಳಿತಿದ್ದನು. ಸಂತೆಯೆಲ್ಲವೂ ತೀರಿತು. ಬಳಿಕ ಒಬ್ಬ ಬ್ರಾಹ್ಮಣನನ್ನು ಕರೆದು ಅವನಿಗೆ ಅರ್ಧವಸ್ತ್ರವನ್ನೂ ಇನ್ನೊಬ್ಬ ಫಕೀರನಿಗೆ ಅರ್ಧವಸ್ತ್ರವನ್ನೂ ಹರಿದು ಕೊಟ್ಟು ಅಲ್ಲಿಂದ ಹೊರಟು ಒಂದು ಪಾಳ್ಮನೆಯಲ್ಲಿ ಕುಳಿತು ಭಜನೆಯಂ ಮಾಡುತ್ತಿರುವನು. ಇದಂ ನಾನು ದೂರದಿಂದ ಕಂಡೆನು. ನಿಮಗೆ ಕ್ಷೇಮವಾಗಬೇಕೆಂಬ ಅಭಿಪ್ರಾಯವು ನನಗೆ ಪರಿಪೂರ್ಣವಾಗಿದೆ. ಕಬೀರನು ಗೃಹಕೃತ್ಯವನ್ನು ಮನಸ್ಸಿಗೆ ಹತ್ತಿಸಿಕೊಳ್ಳುವುದಿಲ್ಲ. ಇಂತಿರಲು, ಅಯ್ಯೋ ! ಮನೆಯ ಸಂಸಾರವು ಎಂತು ನಡೆಯಬೇಕು ? ನಾನು ನಿಮಗೆ ಹಿತೈಷಿಯಾಗಿ ಇದಂ ತಿಳಿಯಿಸುವುದಕ್ಕೋಸ್ಕರ ಬಂದೆನು_ಎನಲು, ಆಕೆ ಆ ಮಾತಂ ಕೇಳಿ ಕೋಪಗೊಂಡು, ಇರಲಿ ; ಅವನು ಮನೆಗೆ ಬಂದರೆ ಹೊಡೆಯುವೆನು_ಎಂದಳು. ಅದಕ್ಕೆ ಶ್ರೀಹರಿಯು ತೃಪ್ತನಾಗದೆ, ಅನ್ಯಾಯಮಾಡಿ ಅಡಗಿಕೊಳ್ಳುವ ಚೋರನಂತೆ ಅವನು ಏಕಾಂತದಲ್ಲಿ ಅಡಗಿ ಕುಳಿತಿರುವನು. ಮನೆಗೆ ಈಗಲೇ ಬಾರನು. ನನ್ನೊಡನೆ ಬಾ; ಆ ಸ್ಥಳವಂ ನಿನಗೆ ತೋರಿಸುವೆನು-ಎಂದು ನುಡಿದು ಆ ಮುದುಕಿಯಂ ಕರೆದುಕೊಂಡು ತ್ವರೆಯಿಂದ ಹೊರಟು ಕಬೀರನು ಭಗವದ್ಭಜನೆಯಂ

ಮಾಡುತ್ತ ಕುಳಿತಿದ್ದ ಪಾಳ್ಮನೆಯನ್ನು ದೂರದಿಂದ ತೋರಿಸಿದನು. ವಾಲ್ಮೀಕಿಯು ಧ್ಯಾನನಿಷ್ಠೆಯೊಳಿದ್ದ ತಾಣದಲ್ಲಿ ಎಂತೋ ಅಂತು ಶ್ರೀರಾಮನಾಮಘೋಷವು ಅಲ್ಲಿ ಆಗುತಿದ್ದಿತು. ಕಬೀರನು ಮಾನಾವಮಾನಗಳನ್ನು ತೊರೆದು ದೇಹಾಭಿಮಾನವಿಲ್ಲದೆ ಕೇವಲಲೀನನಾಗಿ ಶ್ರೀರಾಮಮೂರ್ತಿಯಂ ಧ್ಯಾನಿಸುತ್ತ ರಾವಣನಿಂದ ಬಾಧಿಸಲ್ಪಟ್ಟ ಜಟಾಯುವಿನಂತೆಯೂ, ಅಶೋಕವನದಲ್ಲಿದ್ದ ಸೀತೆಯಂತೆಯೂ ಮುಖದಿಂದ ರಾಮನಾಮಸಂಕೀರ್ತನೆಯಂ ಮಾಡುತ್ತಿರಲು, ಆತನ ತಾಯಿಯು ಒಳಹೊಕ್ಕಳು, ಶ್ರೀಹರಿಯು ಹೊರಗೆ ನಿಂತು ವಿನೋದವಂ ನೋಡುತಿದ್ದನು. ಆಕೆ ಮಗನನ್ನು ಕುರಿತು—ಎಲವೊ ಎಲ್ಲಿ ! ವಸ್ತ್ರವನ್ನು ನೊದಲು ತೋರಿಸು. ಅಲ್ಲದಿದ್ದರೆ ಈಗಲೇ ನಿನಗೆ ಶಿಕ್ಷೆಯಂಮಾಡುವೆನು—ಎಂದಳು. ಆತನು ಪ್ರತ್ಯುತ್ತರವನ್ನೀಯದೆ ಚಿತ್ತೈಕಾಗ್ರತೆಯಿಂದ ಭಜನೆಯಂ ಮಾಡುತ್ತಿದ್ದನು. ಆಕೆ—ಎಲವೊ ! ಛೀ ! ನೀನು ದೇಹಸ್ಮರಣೆಯಿಲ್ಲದೆ ಭಜನೆಯಂಮಾಡುತ್ತ ಕುಳಿತಿರುವೆ—ಎನಲು; ಶ್ರೀಹರಿಯು ಆಕೆಯನ್ನು ಕುರಿತು—ಅಮ್ಮಾ ! ನಿನಗೆ ಮನಸ್ಸಿನಲ್ಲಿ ವಾತ್ಸಲ್ಯವು ತುಂಬಿರುವುದು. ಬಾಯಿಂದ ಸುಮ್ಮನೆ ನಿಷ್ಠುರವಾದ ಮಾತನ್ನು ಆಡುವೆ. ಇದರಿಂದೇನು ? ಬೆತ್ತವನ್ನು ತೆಗೆದುಕೊಂಡು ಚೆನ್ನಾಗಿ ಹೊಡೆ—ಎಂದನು. ಅದಕ್ಕೆ ಆಕೆ—ಏನಮಾಡಲಿ ? ಹೊಡೆಯುವುದಕ್ಕೆ ಏನೂ ಸಿಕ್ಕದಲ್ಲಾ ?—ಎನಲು, ಜಗನ್ನಿವಾಸನು ಆಕೆಯ ಕೈಗೆ ಬೆತ್ತವಂಕೊಟ್ಟು—ಇದೋ ಇದರಿಂದ ಹೊಡೆ—ಎಂದನು. ಆಕೆ ಕ್ರೋಧಾವಿಷ್ಟೆಯಾಗಿ ಆಬೆತ್ತವನ್ನು ತೆಗೆದುಕೊಂಡು ಮಗನ ಬೆನ್ನಿನ ಮೇಲೆ ಬಿರುಸಿನಿಂದ ಹೊಡೆದಳು. ಅವನು ದೇಹಸ್ಮೃತಿಯಿಲ್ಲದೆ ಧ್ಯಾನದಲ್ಲಿಯೇ ಇದ್ದನು. ಆಗ ಆಶ್ಚರ್ಯವು ನಡೆದುದು; ಅದಂ ಭಕ್ತರು ಅವಧರಿಸಬೇಕು. ಆಕೆ ಕಬೀರನ ಬೆನ್ನಿನ ಮೇಲೆ ಹೊಡೆಯುವುದೂ, ಶ್ರೀಪತಿಯು ನಡುಗುತ್ತ ಆಕೆಯನ್ನು ಕುರಿತು—ನೀನು ಬಿರುಸಿನಿಂದ ಹೊಡೆಯುತ್ತಿರುವೆ. ನನ್ನ ಬೆನ್ನಿನಮೇಲೆ ಹೊಡೆತದಿಂದ ನೋವಾಗುತ್ತಿರುವುದು. ಇನ್ನು ನಿಲ್ಲಿಸು—ಎಂದು ನುಡಿದನು. ಬುಡವನ್ನು ಕೊಡಲಿಯಿಂದ ಕಡಿಯಲು, ಮರವೆಲ್ಲವೂ ಎಂತು ನಡುಗುವುದೋ; ಮಕ್ಕಳಿಗೆ ಉಪದ್ರವವಾಗಲು, ತಾಯಿಯು ದುಗುಡದಿಂದ ಎಂತು ಕಂಪಿಸುವಳೋ; ಅಂತು ಆಕೆ ಕಬೀರನನ್ನು ಬೆತ್ತದಿಂದ ಹೊಡೆಯಲು, ಹೃಷೀಕೇಶನು ನಡುಗುತ್ತಿದ್ದನು. ಪ್ರಜಾನಾಶವಾಗಲು, ಕಂಡು ರಾಜನು ಎಂತು ವ್ಯಾಕುಲನಾಗುವನೋ ; ಅಗಸ್ತ್ಯಮಹರ್ಷಿಯ ದರ್ಶನದಿಂದ ಸಮುದ್ರವು ಎಂತು ನಡುಗುವುದೋ ; ತನ್ನ ಪಿಳ್ಳೆಗಳು ಬಲೆಯಲ್ಲಿ ಸಿಕ್ಕಲು, ಹರಿಣಿಯು ನೋಡಿ ಎಂತು ಸಂಕಟಗೊಳ್ಳುವುದೋ ; ಅಂತು ದೀನದಯಾಳುವು ತನ್ನ ಭಕ್ತನ ಹಿಂಸೆಯನ್ನು ಕಂಡು ಸಂಭ್ರಾಂತನಾಗಿ—ಅಮ್ಮಾ ! ಸಾಕು ; ಇನ್ನು ಹೊಡೆಯಬೇಡ—ಎಂದು ಅಡಿಗಡಿಗೆ ನುಡಿಯುತ್ತಿದ್ದನು. ಮತ್ತು ನಾನು ಬಲಿಚಕ್ರವರ್ತಿಯನ್ನು ಛಳಿಸುವುದಕ್ಕೆ ಹೋಗಿ ಅಲ್ಲಿ ದ್ವಾರಪಾಲಕನಾದೆನು ; ನನ್ನ ಕಪಟವೇ ನನಗೆ ಫಲಿಸಿತು. ಭಾವುಕಭಕ್ತರು ಅನೇಕ

ರುಂಟು. ಯಾರಿಂದಲೂ ನನಗೆ ಹೊಡೆತವುಂಟಾಗಲಿಲ್ಲ. ಈ ಕಬೀರನು ನನಗಿಂತಲೂ ಬಲಿಷ್ಠನು. ನೋವಿಗೆ ಹೆದರನು. ಅದೀಗ ನನಗೆ ದೃಢವಾಗಿ ತಿಳಿಯಿತು. ಇನ್ನು ಇವನಿಗೆ ಸಗುಣರೂಪವನ್ನು ತೋರಿಸಬೇಕು. ಬ್ರಾಹ್ಮಣವೇಷದಿಂದಿರುವ ನನ್ನನ್ನು ಇವನು ತಿಳಿಯನು. ಎಂದು ತನ್ನಲ್ಲಿ ಆಲೋಚಿಸಿ ಆಕ್ಷಣ ಬ್ರಾಹ್ಮಣವೇಷವನ್ನು ಬಿಟ್ಟು ಕೈಗಳಲ್ಲಿ ಧನುರ್ಬಾಣಗಳನ್ನು ಪಿಡಿದು ದಿವ್ಯಕಿರೀಟದಿಂದ ದೇದೀಪ್ಯಮಾನನಾಗಿ ಆಕರ್ಣಾಂತನಯನಗಳಿಂದ ಪ್ರಕಾಶಿಸುತ್ತ ಕಿವಿಗಳಲ್ಲಿ ಅತ್ಯಂತಶೋಭಾಯಮಾನವಾದ ಕುಂಡಲಗಳಿಂದ ಒಪ್ಪುತ್ತ ವಿಶಾಲವಾದ ವಕ್ಷಸ್ಸ್ಥಳದಲ್ಲಿ ಕೌಸ್ತುಭದಿಂದಲೂ ಕಂಠದಲ್ಲಿ ವನಮಾಲೆಯಿಂದಲೂ ಕಂಗೊಳಿಸುತ್ತ ಪೀತಾಂಬರವನ್ನುಟ್ಟು ಪಾದದಲ್ಲಿ ಅಂದುಗೆ ಮೊದಲಾದುದಂ ಅಳವಡಿಸಿಕೊಂಡು ಸೀತಾಸಮೇತನಾಗಿ ಗೋಚರನಾಗಲು, ಕಬೀರನು ಕಣ್ಣುಗಳಂ ತೆರೆದು ಕೋಟಿಸೂರ್ಯಪ್ರಕಾಶಮಾನನಾದ ಸ್ವಾಮಿಯ ರೂಪವನ್ನು ಕಂಡು ಆತನ ಪಾದಾರವಿಂದಗಳನ್ನು ದೃಢವಾಗಿ ಹಿಡಿದನು. ಬಳಿಕ ವೈಕುಂಠವಾಸಿಯು ಅವನನ್ನು ಕುರಿತು—ನಿನ್ನ ಭಕ್ತಿಗೆ ನಾನು ಪ್ರಸನ್ನನಾದೆನು. ತಾಯಿಯು ಎಂತು ಮಗುಳೆಯಂ ಬಿಟ್ಟಿರಳೋ; ಅಂತು ಇನ್ನುಮೇಲೆ ನಾನು ನಿನ್ನನ್ನು ಒಂದು ಕ್ಷಣವಾದರೂ ಬಿಟ್ಟಿರೆನು. ನಿನ್ನ ಸತ್ತ್ವವನ್ನು ಪರೀಕ್ಷಿಸುವುದಕ್ಕೋಸ್ಕರ ನಾನು ಇಂತು ಮಾಡಿದೆನು. ಇನ್ನು ನಿನ್ನನ್ನು ಕೃಪಾದೃಷ್ಟಿಯಿಂದ ನೋಡುವೆನು-ಎಂದು ಕಬೀರನನ್ನು ಆಲಿಂಗಿಸಿಕೊಂಡು ಆತನ ತಾಯಿಯನ್ನು ಕುರಿತು—ನಿನ್ನ ಭಾಗ್ಯವನ್ನು ನಾನು ವರ್ಣಿಸಲಾರೆನು. ಮಹಾಭಾಗವತನಾದ ಪುತ್ರನನ್ನು ನೀನು ಪಡೆದಿರುವೆ-ಎಂದು—ಆಕೆಯಂ ಸಂತವಿಟ್ಟು ಮನಸ್ಸಂತೋಷಗೊಳಿಸಿ-ನನ್ನನ್ನು ಸರ್ವಕಾಲದಲ್ಲಿಯೂ ಹೃದಯದಲ್ಲಿ ಧ್ಯಾನಿಸುತ್ತಿರಬೇಕು—ಎಂದು ಹೇಳಿ ಆಕ್ಷಣವೇ ಅದೃಶ್ಯನಾದನು.

ಆಕೆ ಕಬೀರನನ್ನು ಕುರಿತು—ನೀನು ನನಗೆ ಪುತ್ರನಾದುದರಿಂದ ನನಗೆ ಶ್ರೀರಾಮಸಂದರ್ಶನವಾಯಿತು-ಎಂದು ನುಡಿದು ಸಂತೋಷದಿಂದ ಮಗನನ್ನು ಕೈಹಿಡಿದು ಮನೆಗೆ ಕರೆದುಕೊಂಡು ಹೋದಳು.

ಕೇಳಿರೈ ಸಾಧುಗಳಿರಾ! ಸಾರವತ್ತರವಾದ ಈ ಸಂತರ ಚರಿತ್ರೆಯೆಂಬುದೇ ಮಾನಸಸರೋವರವು. ರಸಗಳೆಂಬುವೇ ಮುತ್ತುಗಳು. ಭಕ್ತಿಯುಳ್ಳ ಭಾಗ್ಯಶಾಲಿಯಾದ ಶ್ರೋತೃಜನವೆಂಬ ರಾಜಹಂಸಕುಲವು ರಸಂಗಳೆಂಬ ಮುತ್ತುಗಳನ್ನು ಸವಿಯುವುದಕ್ಕೆ ಅಲ್ಲಿ ನಿರಂತರವೂ ಬಂದು ರಮಿಸುತ್ತಿರುವುದು. ಮನೋವಿಕಲ್ಪಂಗಳೆಂಬ ಕಲ್ಲುಗಳಲ್ಲಿಯೇ ಅಭಿರುಚಿಯುಳ್ಳ ಅಭಕ್ತಜನರೆಂಬ ತಿತ್ತಿರಿಪಕ್ಷಿಕುಲವು ಅಲ್ಲಿಗೆ ಬಂದು ಸೇರದು. ಅದಂತಿರಲಿ. ಎಲೆ ಸಜ್ಜನರಿರಾ! ನೀವು ನನ್ನ ಕಡೆಗೆ ಅವಧಾನವಿತ್ತು, ತಾಯಿಯು ತನ್ನ ಮಗುಳೆಯ ಮಾತಂ ಸಂತೋಷದಿಂದ ಕೇಳುವಂತೆ ನನ್ನ ನುಡಿಯನ್ನು ಆಲಿಸಬೇಕು. ಕಣ್ಣುಳ್ಳವರ ಸಹಾಯ್ಯದಿಂದ ಮಾರ್ಗವಂ ತಿಳಿದು ಕುರುಡನು ಎಂತು ತಡವರಿಸಿಕೊಂಡು ನಡೆಯುವನೋ ಅಂತು ನಾನು ನಿಮ್ಮ ಕೃಪೆ

ಯಿಂದ ಕವಿತ್ವಸರಣಿಯನ್ನರಿತು ತೊದಲುಮಾತುಗಳನ್ನಾಡುವೆನು. ನೀವೇ ನನ್ನ ಬುದ್ಧಿಗೆ ತೇಜಸ್ಸನುಂಟುಮಾಡಿ ಚಮತ್ಕಾರದಿಂದ ಗ್ರಂಥವನ್ನು ನುಡಿಯಿಸುವಿರಿ. ಮಹೀಪತಿಯ ಹೆಸರು ಈಗ್ರಂಥದಲ್ಲಿ ಸುಮ್ಮನೆ ಬರೆಯಲ್ಪಟ್ಟಿದೆ.

ಸ್ವಸ್ತಿಶ್ರೀಭಕ್ತವಿಜಯಗ್ರಂಥವು ಶ್ರವಣಮಾತ್ರದಿಂದಲೇ ಮನೋರಥಂಗಳಂ ಪೂರಯಿಸುವುದು.

ಇಂತು ಶ್ರೀಭಕ್ತವಿಜಯದಲ್ಲಿ ಐದನೆಯಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಆರನೆಯ ಅಧ್ಯಾಯ.

ಇಂದು ಅಪೂರ್ವವಾದ ದೀಪಾವಳಿಯ ಹಬ್ಬವು ಪ್ರಾಪ್ತವಾಗಿರುವುದು. ಇದು ಸರ್ವೇಂದ್ರಿಯಂಗಳ ಸುಖಕ್ಕೂ ಕಾರಣಭೂತವು. ಅವುಗಳಲ್ಲಿ ಶ್ರವಣೇಂದ್ರಿಯದ ಸುಖವನ್ನು ಅನುಭವಿಸುವ ಶ್ರೋತೃಗಳು ಪರಮಭಾಗ್ಯಶಾಲಿಗಳು. ಬೆಳದಿಂಗಳು ಸರ್ವರಿಗೂ ಸಮವು. ಆದರೂ ಆದರಿಂದ ಮೊದಲು ಚಕೋರಂಗಳು ತೃಪ್ತಿಯಂ ಪಡೆಯುವುವು. ಅಂತು ಭಕ್ತಕಥೆಯು ಪಾಠಕಲೇಖಕಾದಿಗಳೆಲ್ಲರಿಗೂ ಸಮಾನವು. ಆದರೂ ಶ್ರೋತೃಮಹಾಜನಂಗಳೇ ಮೊದಲು ತೃಪ್ತಿಯಂ ಪಡೆಯುವರು. ನಿಬ್ಬಣ ತೆರಳುವಂದು ಅನೇಕರು ಕೂಡಿದ್ದರೂ ಅವರಲ್ಲಿ ವರನ ತಾಯಿಗೇ ಎಂತು ಮಾನ್ಯತೆಯೋ, ಅಂತು ಪಾಠಕಾದಿಗಳಲ್ಲಿ ಭಾಗ್ಯವಂತರಾದ ಶ್ರೋತೃಗಳಿಗೇ ಮಾನ್ಯತೆಯು. ಸೂರ್ಯನು ಉದಯಿಸುವುದೂ ಮೊದಲು ತಾವರೆಗಳು ಎಂತು ಉಲ್ಲಾಸಗೊಳ್ಳುವುವೋ; ಮೇಘೋದಯವಾಗುವುದೂ ಮೊದಲು ಚಾತಕಂಗಳು ಎಂತು ಸಂತೋಷವಂ ತಾಳುವುವೋ; ಪುಷ್ಪಂಗಳಲ್ಲಿ ಮಕರಂದೋದಯವಾಗುವುದೂ ಮೊದಲು ತುಂಬಿಗಳೆಂತು ಆಮೋದಂಗೊಳ್ಳುವುವೋ ; ಅಂತು ಭಕ್ತಕಥೋದಯವಾಗುವುದೂ ಮೊದಲು ಶ್ರೋತೃಗಳು ಪರಮಾನಂದಭರಿತರಾಗುವರು. ಸ್ವಸ್ತಿಪುಣ್ಯಾಹವಚನದಲ್ಲಿ ಮೊದಲು ಶ್ರೀಮಹಾಗಣಪತಿಯು ಪೂಜ್ಯನೆನಿಸುವಂತೆ ಸತ್ಕಥಾನಿರೂಪಣದಲ್ಲಿ ಮೊದಲು ಮಹಾಶಯರಾದ ಶ್ರೋತೃಗಳು ಪೂಜ್ಯರೆನಿಸುವರು. ಭಕ್ತಕಥಾರಸವಂ ಪಂಕ್ತಿಯಲ್ಲಿ ಹಂಚುವಂದು ತೃಪ್ತಿಪಡುವ ಭಾಗ್ಯಶಾಲಿಗಳಾದ ಶ್ರೋತೃಗಳೇ ಮುಖ್ಯರು. ಮೊದಲು ಶ್ರವಣವು; ಅನಂತರ ಮನನವು; ಬಳಿಕ ನಿದಿಧ್ಯಾಸೆಯು; ಆ ಬಳಿಕ ಸಾಕ್ಷಾತ್ಕಾರವು. ಸರ್ವೇಂದ್ರಿಯಗಳಲ್ಲಿ ಶ್ರವಣೇಂದ್ರಿಯವೇ ಶ್ರೇಷ್ಠವು. ಅದನ್ನು ಸುಜ್ಞಾನಿಗಳು ಭಕ್ತಕಥಾರಸವೆಂಬ ಅಮೂಲ್ಯರತ್ನಕುಂಡಲದಿಂದಲಂಕಾರಗೊಳಿಸಬೇಕು.

ಎಲೈ ಪೂಜ್ಯರಾದ ಶ್ರೋತೃಗಳಿರಾ! ಮುಂದಣಕಥೆಯು ಬಹುರಸಭರಿತವಾದುದು. ಅವಧಾನವಂ ಕೊಟ್ಟು ಆಲಿಸುವುದು:—

ಶ್ರೀಹರಿಯು ಶ್ರೀರಾಮರೂಪದಿಂದ ಕಬೀರನಿಗೆ ಸಂದರ್ಶನವಂ ಕೊಟ್ಟು ಆತನ ತಾಯಿಯನ್ನೂ ಸಂತವಿಟ್ಟು ಅದೃಶ್ಯನಾದನಷ್ಟೆ. ಆ ಕಬೀರನ ತಾಯಿಯು ಭಗವದ್ದರ್ಶನವಾಗುವುದೂ ಸುಜ್ಞಾನವನ್ನು ಪಡೆದು ದೈವಾನುಕೂಲ್ಯದಿಂದ ಅತ್ತೆಯು ವೈರಸ್ಯವಂ ಬಿಟ್ಟು ಸೊಸೆಯಲ್ಲಿ ಅನುರಕ್ತೆಯಾಗಿರುವಂತೆ, ಆತನಲ್ಲಿ ಅಸಮಾಧಾನವಂ ಬಿಟ್ಟು ಪ್ರೀತಿಯಂ ಮಾಡುತ್ತಿದ್ದಳು. ಪರಸ್ಪರಾನುರಾಗದಿಂದಿರುವ ಆ ತಾಯಿಮಕ್ಕಳನ್ನು ಎಲ್ಲರೂ ಶ್ಲಾಘಿಸುತ್ತಿದ್ದರು. ಶ್ರೀಗುರುಕೃಪೆಯುಂಟಾಗಲು ಜನನಮರಣಂಗಳೆಂತು ತಪ್ಪುವುವೋ; ಸರಸ್ವತಿಯು ಪ್ರಸನ್ನೆಯಾಗಲು ಅಜ್ಞಾನಂಗಳೆಂತು ತೊಲಗುವುವೋ; ಅಮೃತವು ಸೇರಲು ರೋಗಗಳೆಂತು ನಶಿಸಿ ಹೋಗುವುವೋ: ಅಂತು ಶ್ರೀರಾಮನು ಕರುಣಿಸಲು, ಕಬೀರನಿಗೆ ಆತನ ತಾಯಿಯ ಕೋಟಲೆಗಳು ತಪ್ಪಿಹೋದುವು. ಕಬೀರನ ತಾಯಿಯೂ ವಿವೇಕಿನಿಯಾಗಿ ಸರ್ವಕಾಲದಲ್ಲಿಯೂ ಶ್ರೀಹರಿಯ ಭಜನೆಯಲ್ಲಿದ್ದಳು. ಕಬೀರನು ಮನದಲ್ಲಿ ಔದಾಸೀನ್ಯವನ್ನು ವಹಿಸಿ ಲೋಕಸ್ಥಿತಿಗೆ ಸಂಸಾರದಲ್ಲಿದ್ದುಕೊಂಡು ನಿರಂತರವೂ ಭಗವನ್ನಾಮಕೀರ್ತನೆಯಂ ಮಾಡುತಿದ್ದನು. ಮನೆಯಲ್ಲಿ ಅನ್ನವಸ್ತ್ರವಿಲ್ಲದಿದ್ದರೂ ಮನಕ್ಕೆ ಆಚಿಂತೆಯಂ ಹತ್ತಿಸಿಕೊಳ್ಳನು. ಆತನ ಮಡದಿಯೋ ಮಹಾಪತಿವ್ರತೆ. ಅನಸೂಯೆಗೆ ಸಮಾನೆ. ದೀಪಪ್ರಭೆಗಳಂತೆಯೂ, ಶಬ್ದಾರ್ಥಂಗಳಂತೆಯೂ, ಮೇಘವಿದ್ಯುತ್ತುಗಳಂತೆಯೂ ಆ ಕಬೀರನೂ ಆತನ ಮಡದಿಯೂ ಏಕಭಾವದಿಂದಿರುತಿದ್ದರು. ಸಕ್ಕರೆಯೂ ಅದರ ಸವಿಯೂ ಎಂತು ಭಿನ್ನವಲ್ಲವೋ; ಅಂತು ಅವರಿಬ್ಬರೂ ಸಂಸಾರದಲ್ಲಿ ಅಭಿನ್ನರಾಗಿದ್ದರು. ಕಬೀರನು ಸಂಸಾರದಲ್ಲಿ ಸುಖದುಃಖಗಳಂ ಸಮತೆಯಿಂದ ತಿಳಿಯುತಿದ್ದನು. ಅವನಂತೆ ಅವನ ಮಡದಿಯೂ ಮನವನ್ನು ನಿಗ್ರಹಿಸಿಕೊಂಡು ಇರುತ್ತಿದ್ದಳು. ಕೆಲವುಕಾಲವಾಗುವುದೂ ಆಕೆ ಗರ್ಭಿಣಿಯಾದಳು. ನವಮಾಸಂಗಳು ಪೂರ್ಣವಾದುವು. ಭಕ್ತಿಜ್ಞಾನವೈರಾಗ್ಯಸಂಪತ್ತಿಯೇ ಮೂರ್ತವಾದಂತೆ ಪುತ್ರನೊಬ್ಬನು ಆಕೆಯ ಗರ್ಭದಲ್ಲಿ ಅವತರಿಸಿದನು.

ಅವನು ಹುಟ್ಟಿದೊಡನೆಯೇ ವೈರಾಗ್ಯಶೀಲನಾಗಿ ಕಾಣಿಸಿದನು. ತೇಜೋವಂತನಾಗಿದ್ದನು. ತೊಳಲಿಲ್ಲದೆ ಸದ್ಭಾವದಿಂದ ಕಂಗೊಳಿಸಿದನು. ಹನ್ನೆರಡುದಿವಸವಾಗಲು ಆ ಕುಮಾರನಿಗೆ ಕಮಾಲನೆಂದು ಹೆಸರಿಟ್ಟರು. ಆ ಬಾಲಕನು ತಂದೆಮಾಡುವ ಭಗವನ್ನಾಮಕೀರ್ತನೆಯಂ ಕೇಳಿ ತಾನೂ ಅದೇರೀತಿಯಲ್ಲಿ ಕೀರ್ತನೆಯಂ ಮಾಡುತ್ತಿರುವನು. ಏಳುವರ್ಷಗಳು ತುಂಬಲು, ಅವನು—ದ್ವಾರಕೆಗೆ ಹೋಗುವುದಕ್ಕೆ ನನಗೆ ಅಪ್ಪಣೆಯಂ ಕೊಡಬೇಕು—ಎಂದು ತಂದೆಯಂ ವಿನಯದಿಂದ ಬೇಡಿಕೊಂಡನು. ಅವನು ಮಗನ ಮಾತಂ ಕೇಳಿ—ನಿನ್ನ ಮನೋರಥವಂ ಪೂರ್ಣಮಾಡಿಕೊಂಡು ಶೀಘ್ರದಲ್ಲಿ ಬಾ—ಎಂದು ಉತ್ತರವನ್ನಿತ್ತನು.

ಭೂಮಂಡಲವಂ ಜಯಿಸಲಿಚ್ಛೆಯಿಂದ ಜೈತ್ರಯಾತ್ರೆ ಹೊರಟ ತನ್ನ ಮಗನನ್ನು ನೋಡಿ ಮಹಾರಾಜನು ಎಂತು ಸಂತೋಷಪಡುವನೋ, ಕಳಾಪೂರ್ಣನಾದ ಚಂದ್ರನನ್ನು ನೋಡಿ ಸಮುದ್ರನು ಎಂತು ಉಲ್ಲಾಸಗೊಳ್ಳುವನೋ ; ತಾಂಡವವಂಮಾಡುವ ಮಹಾಗಣಪತಿಯನ್ನು ನೋಡಿ ಪರಮೇಶ್ವರನು ಎಂತು ಆನಂದಿಸುವನೋ ; ಅಂತು ವಯಸ್ಸಿನಲ್ಲಿ ಚಿಕ್ಕವನಾದರೂ ವೈರಾಗ್ಯಭರಿತನಾಗಿ ತೀರ್ಥಯಾತ್ರೆಮಾಡಬೇಕೆಂದು ಹೊರಟ ತನ್ನ ಕುಮಾರನನ್ನು ನೋಡಿ ಕಬೀರನು ಮನದಲ್ಲಿ ಸಂತೋಷಗೊಂಡನು.

ಕಮಾಲನು ತಾಯಿತಂದೆಗಳಿರ್ವರಿಗೂ ಅಭಿವಂದಿಸಿ ಅವರ ಅನುಜ್ಞೆಯಂ ಪಡೆದು ಹೊರಟು ಮಾರ್ಗದಲ್ಲಿ ನಡೆಯುತ್ತ ಆನಂದಭರಿತನಾಗಿ ಮುಖದಿಂದ ಭಗವನ್ನಾಮಕೀರ್ತನೆಯಂ ಮಾಡುತಿರುವನು. ಆತನ ಮನಸ್ಸಿಗೆ ಲಜ್ಜೆಯೂ ಮಾನಾಪಮಾನವೂ ತೋರಲಿಲ್ಲ. ಅವನು ಲೌಕಿಕಸ್ಥಿತಿಯನ್ನು ಅರಿಯನು. ವಸ್ತ್ರಭೂಷಣಂಗಳನ್ನು ಅವನು ಒಲ್ಲನು. ಅವನ ರಸನೆಯು ರಸವತ್ತರವಾದ ರಾಮನಾಮಾಮೃತವನಲ್ಲದೆ ರುಚಿಕರವಾದ ಅನ್ನವನ್ನು ಅಪೇಕ್ಷಿಸದು. ದಂಭವು ಅವನಿಗೆ ಆಗದು. ಶ್ರೀರಾಮಭಜನೆಯಲ್ಲಿ ನಿರತನಾದ ಅವನು ರಾಜದರ್ಶನವನ್ನು ಬಯಸನು. ಅಂತು ಭಗವದ್ಭಜನದಲ್ಲಿ ಅತ್ಯಾಸಕ್ತನಾದ ಅವನನ್ನು ನೋಡಿದವರೆಲ್ಲರೂ ಕಬೀರನ ಮಗನೆಂದು ತಿಳಿಯುತಿದ್ದರು. ಅಲ್ಲಲ್ಲಿ ಗ್ರಾಮವಾಸಿಗಳಾದ ಜನಗಳು ಕಮಾಲನ ಆಗಮನವನ್ನು ಕೇಳಿ ದರ್ಶನಕ್ಕೆ ಬರುತ್ತಿರುವರು. ಬ್ರಹ್ಮಪುತ್ರನಾದ ನಾರದಮಹರ್ಷಿಯಂತೆ, ಕಬೀರನ ಪುತ್ರನಾದ ಕಮಾಲನು ಅಹರ್ನಿಶದಲ್ಲಿಯೂ ಶ್ರೀಹರಿನಾಮಕೀರ್ತನೆಯ ಮಾಡುತಿರುವನು. ಗ್ರಾಮಸ್ಥರು ಅವನನ್ನು ಕಂಡು ಸಂತೋಷಿಸಿ, ತಮ್ಮ ಊರಿಗೆ ಕರೆದುಕೊಂಡು ಹೋಗಿ ಸತ್ಕರಿಸುತಿದ್ದರು. ಅವನು ಅಲ್ಲಲ್ಲಿ ಒಂದೊಂದುದಿನ ಇದ್ದುಕೊಂಡು, ಶ್ರೀರಾಮನಾಮಾಮೃತರಸಸೇಚನೆಯಿಂದ ಜನಗಳನ್ನು ಕೃತಾರ್ಥರಂ ಮಾಡುತ್ತ, ಕೆಲವುದಿನಗಳಲ್ಲಿ ದ್ವಾರಕೆಯಂ ಸೇರಿದನು.

ಅಲ್ಲಿ ಅವನು ಪುಣ್ಯತಮವಾದ ಗೋಮತೀತೀರ್ಥದ ಬಳಿಗೆ ಬಂದು, ಕರ್ಮವಿಶೇಷದಿಂದ ಉಂಟಾದ ಜನನಮರಣಾತ್ಮಕವಾದ ಸಂಸಾರವನ್ನು ನೆನೆದು ಮನದಲ್ಲಿ ಪಶ್ಚಾತ್ತಾಪಗೊಂಡನು. ಪಶ್ಚಾತ್ತಾಪವಿಲ್ಲದ ತೀರ್ಥಯಾತ್ರೆಯಂ ವ್ಯರ್ಥಸಂಚಾರವೆಂದು ತಿಳಿಯಬೇಕು. ಪುತ್ರಸಂತಾನವಿಲ್ಲದಿರಲು, ವೃತ್ತಿಮಾನ್ಯಗಳನ್ನು ಏತಕ್ಕೆ ಸಂಪಾದಿಸಬೇಕು ? ಕೈಯಲ್ಲಿ ದ್ರವ್ಯವಿಲ್ಲದಿರಲು, ವ್ಯರ್ಥವಾಗಿ ಸಂತೆಗೆ ಏಕೆ ಹೋಗಬೇಕು ? ಚಿತ್ತದಲ್ಲಿ ಪ್ರೇಮವಿಲ್ಲದಿರಲು, ಹರಿಕೀರ್ತನೆಯನ್ನೇಕೆ ಮಾಡಬೇಕು ? ಲವಣವಿಲ್ಲದಿರಲು, ಅಡಿಗೆಯರುಚಿಯಿಂದೇನು ? ಔದಾರ್ಯವಿಲ್ಲದಿರಲು, ಧನಸಂಪತ್ತಿಯಿಂದೇನು ? ಶೌರ್ಯವಿಲ್ಲದಿರಲು, ಶಸ್ತ್ರಗ್ರಹಣದಿಂದೇನು ? ಉಪಕಾರವಿಲ್ಲದಿರಲು, ಮೈತ್ರಿಯಿಂದೇನು ? ಮಂತ್ರಜಪವಿಲ್ಲದಿರಲು, ಬ್ರಾಹ್ಮಣ್ಯದಿಂದೇನು ? ಮಂಗಳಸೂತ್ರವಿಲ್ಲದಿರಲು, ಅಲಂಕಾರರಚನೆಯಿಂದೇನು ? ಹೃದಯದಲ್ಲಿ ಸರ್ವಜ್ಞಾನವಿಲ್ಲ

ದಿರಲು, ಚತುಷ್ಷಷ್ಟಿಕಳೆಗಳ ಅಭ್ಯಾಸದಿಂದೇನು ? ಭೂತದಯೆಯಿಲ್ಲದಿರಲು, ಜ್ಞಾನದ ಮಾತುಗಳಿಂದೇನು ? ಈಶ್ವರಾನುಗ್ರಹವಿಲ್ಲದಿರಲು, ಕವಿತ್ವರಚನೆಯಿಂದೇನು ? ಅಂತು ಪಶ್ಚಾತ್ತಾಪವು ಮನದಲ್ಲಿ ಹುಟ್ಟದಿರಲು, ತೀರ್ಥಯಾತ್ರೆಯಿಂದೇನು ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳೆಂಬುವು ದುರ್ನಿವಾರವಾದ ದೇಹ ದೋಷಂಗಳು. ಅವು ಪಶ್ಚಾತ್ತಾಪವಿಲ್ಲದೆ, ಕೇವಲತೀರ್ಥಸ್ನಾನದಿಂದ ಹೋಗತಕ್ಕುವುಗಳಲ್ಲ. ಸುಜ್ಞಾನಶೀಲನಾದ ಕಮಾಲನು ಪಶ್ಚಾತ್ತಾಪಗೊಂಡು, ಗೋಮತಿಯನ್ನು ವಂದಿಸಿ, ಸ್ತುತಿಯಿಸಿ, ಸದ್ಭಾವದಿಂದ ಆತೀರ್ಥದಲ್ಲಿಪ್ರವೇಶಿಸಿ, 'ನನ್ನದೋಷವಂ ಪರಿಹರಿಸಿ, ಜನ್ಮಮರಣಂಗಳನ್ನು ಖಂಡಿಸು' ಎಂದು ಪ್ರಾರ್ಥಿಸಿ, ಶ್ರೀಹರಿನಾಮಂಗಳನ್ನುಚ್ಚರಿಸುತ್ತ ಸ್ನಾನಮಾಡಿದನು. ಬಳಿಕ ಗೋಪೀಚಂದನದಿಂದ ದ್ವಾದಶನಾಮಂಗಳಂ ಹಚ್ಚಿಕೊಂಡು, ಕಂಠದಲ್ಲಿ ತುಳಸೀಮಾಲೆಯಂ ಧರಿಸಿ, ದ್ವಾರಕಾಧೀಶನಂ ಧ್ಯಾನಿಸಿ, ಮಾನಸಪೂಜೆಯಂ ಮಾಡಿ, ಅನಂತರ ಭಗವಂತನ ಸಂದರ್ಶನಕ್ಕೋಸ್ಕರ ದೇವಾಲಯವಂ ಕುರಿತು ಪೊರಟು, ಮಹಾದ್ವಾರದಬಳಿಗೆ ಬಂದು, ಸಾಷ್ಟಾಂಗವೆರಗಿ, ಬಳಿಕ ಒಳಹೊಕ್ಕು, ಶ್ರೀಕೃಷ್ಣಸ್ವಾಮಿಯ ಚರಣಾರವಿಂದಗಳಿಗೆ ಅಭಿವಂದಿಸಿ, ಸ್ವಾಮಿಯನ್ನು ಹೃದಯದಲ್ಲಿ ಧ್ಯಾನಿಸುತ್ತ, ಮುಖದಿಂದ ನಾಮಕೀರ್ತನವಂ ಮಾಡುತ್ತ, ಮಂಗಳನೀರಾಜನವನ್ನು ಎತ್ತಿದನು.

ಇಂತು ಕಮಾಲನು ದ್ವಾರಕೆಯಲ್ಲಿ ನಾಲ್ಕುತಿಂಗಳು ನಿತ್ಯದಲ್ಲಿಯೂ ಶ್ರೀಹರಿಯಂ ಸೇವಿಸುತ್ತ, ಆ ಸ್ವಾಮಿಯ ಗುಣಂಗಳಂ ವರ್ಣಿಸಿ ಕವಿತ್ವರಚನೆಯಂ ಮಾಡಿ, ಪಾಡಿಕೊಳ್ಳುತ್ತಿದ್ದನು.

ಸದ್ವಿಚಾರದಿಂದಲೂ, ಸತ್ಸಮಾಗಮದಿಂದಲೂ, ಭಗವತ್ಸೇವೆಯಿಂದಲೂ ತ್ರಿಕಾಲಂಗಳಂ ಕಳೆಯುತ್ತ, ನಾಲ್ಕುತಿಂಗಳು ಆದ ಬಳಿಕ, ಸ್ವಾಮಿಗೆ ಸಾಷ್ಟಾಂಗವಂದನೆಯಂ ಮಾಡಿ 'ಎಲೆ ದೇವಾದಿದೇವನೆ ! ಮತ್ತೆ ನನಗೆ ನಿನ್ನ ಈ ಚರಣಾರವಿಂದಗಳ ಸಂದರ್ಶನವಂ ಕರುಣಿಸು' ಎಂದು ಪ್ರಾರ್ಥಿಸಿ, ಅಲ್ಲಿಂದ ಹೊರಟು, ಮಾರ್ಗದಲ್ಲಿ ಪ್ರಾಪ್ತವಾದ ಚಿತ್ರಕೂಟನಗರವಂ ಕಂಡು ಪ್ರವೇಶಿಸಿದನು.

ಅಲ್ಲಿ ಪರಮಭಾವುಕನಾದ ವಿಷ್ಣುದಾಸನೆಂಬ ಸಾಧುಕಾರನು ಕಮಾಲನನ್ನು ಕಂಡು, ಸಂತೋಷಿಸಿ, ಅಭಿವಂದಿಸಿ, ದೈನ್ಯದಿಂದ ಪ್ರಾರ್ಥಿಸಿ, ತನ್ನಮನೆಗೆ ಕರೆದುಕೊಂಡು ಹೋಗಿ, ಭಕ್ತಿಯಿಂದ ಉಪಚರಿಸಿ ಭೋಜನವಂ ಮಾಡಿಸಿ, ಸತ್ಕರಿಸಿದನು.

ಕಮಾಲನು ರಾತ್ರಿಯಲ್ಲಿ ಆನಂದದಿಂದ ಶ್ರೀಹರಿಭಜನೆಯಂ ಮಾಡಿದನು. ಊರಿನವರೆಲ್ಲರೂ ಪ್ರೇಮಯುಕ್ತರಾಗಿ ಬಂದುಸೇರಿದರು. ಕೀರ್ತನೆಯಂ ಕೇಳಿ ಸಕಲರೂ ಪರವಶರಾದರು. ವಿಷ್ಣುದಾಸನಿಗೆ ಪರಮಾನಂದವುಂಟಾಯಿತು. 'ಈತನಿಗೆ ಏನುಕೊಡತಕ್ಕುದು ?' ಎಂದು ಚಿಂತಿಸಿ, ಅಪರಿಮಿತವಾದ ದ್ರವ್ಯವನ್ನು ತರಿಸಿ ಆತನಮುಂದೆ ಇರಿಸಿದನು. ಆತನು ಕಣ್ಣೆತ್ತಿಯೂ ನೋಡಲಿಲ್ಲ. ಬಳಿಕ ದಿವ್ಯವಾದ ರತ್ನವನ್ನು

ಆತನ ಮುಂದಿಟ್ಟು—ಸ್ವಾಮಿ ! ಈ ಮಾಣಿಕ್ಯವು ತನ್ನ ಪ್ರಕಾಶದಿಂದ ದೀಪಕಾಂತಿಯನ್ನು ಜರಿಯುತ್ತಿರುವುದು. ರಾತ್ರಿಯಲ್ಲಿ ಇದನ್ನು ಮುಂದಿಟ್ಟರೆ, ಕತ್ತಲೆಯು ಆವರಿಸುವುದಿಲ್ಲ. ಅಮೂಲ್ಯವಾದ ಈ ರತ್ನವನ್ನು ತಾವು ಸ್ವೀಕರಿಸಿ ನನ್ನನ್ನು ಕೃತಾರ್ಥನಂ ಮಾಡಬೇಕು—ಎಂದು ಪ್ರಾರ್ಥಿಸಿದನು. ಕಮಾಲನು ಅವನ ಮಾತನ್ನು ಕೇಳಿ—ಅಯ್ಯಾ ! ನಾನು ನಿನ್ನ ಭಕ್ತಿಗೆ ಸಂತುಷ್ಟನಾದೆನು. ಈ ಧನರಾಶಿಯಿಂದ ನಮಗೆ ಏನು ಪ್ರಯೋಜನ ? ನಮಗೆ ರತ್ನವೂ ಪಾಷಾಣವೂ ಸಮಾನವಾಗಿ ಕಾಣುವುದು. ನಮಗೆ ಇದರಲ್ಲಿ ಸ್ವಲ್ಪವೂ ಆಶೆಯಿಲ್ಲ. ನಾವು ತೆಗೆದುಕೊಳ್ಳೆವು. ನನ್ನ ತಂದೆಗೆ ಈ ವಿಷಯವು ತಿಳಿದರೆ, ನನ್ನ ಮೇಲೆ ಬಹುವಾಗಿ ಕೋಪಿಸಿಕೊಳ್ಳುವನು—ಎಂದನು. ಆ ಸಾಹುಕಾರನು ಬಲಾತ್ಕಾರದಿಂದ ಕೊಡುವುದಕ್ಕೆ ಬರಲು, ಅದಕ್ಕವನು—ಅಯ್ಯಾ ಆಸ್ತಿಕಶಿರೋಮಣಿಯೇ ! ಈ ರತ್ನವನ್ನು ಬಲಾತ್ಕಾರದಿಂದ ನನಗೆ ಏಕೆ ಕೊಡುವೆ ? ನಾನು ಎಂದಿಗೂ ಪರಿಗ್ರಹಿಸಲಾರೆನು! ಎಲೈ ವಿಚಕ್ಷಣನೆ ! ದ್ರವ್ಯ ದಕ್ಷಿಣೆಯನ್ನು ಬ್ರಾಹ್ಮಣರಿಗೆ ಸಮರ್ಪಿಸಬೇಕು. ರತ್ನಗಳಂ ರಾಜರಿಗೆ ಕೊಡಬೇಕು. ಪ್ರಾಣಿಮಾತ್ರಕ್ಕೆ ಅನ್ನವನ್ನಿಡಬೇಕು. ಯತಿಗಳಿಗೆ ಭಿಕ್ಷೆಯಂ ಸಲಿಸಿ, ಕಾಷಾಯವಸ್ತ್ರವನ್ನೂ, ಕೌಪೀನವನ್ನೂ ಕೊಡಬೇಕು. ನಾವು ವಿರಕ್ತರು ; ವಿಷ್ಣು ಭಕ್ತರು; ಸರ್ವಕಾಲದಲ್ಲಿಯೂ ಮನದಲ್ಲಿ ಸಂತುಷ್ಟರಾಗಿರುವೆವು. ನಮಗೆ ಮನದಲ್ಲಿ ಅಪೇಕ್ಷೆಯೇನೂ ಇಲ್ಲ. ನಿನ್ನ ರತ್ನವನ್ನು ಕಟ್ಟಿಕೊಂಡು ನಾವೇನಮಾಡುವೆವು ? ಬಲಾತ್ಕಾರದಿಂದ ನನಗೆ ಏಕೆ ಕೊಡುವೆ ? ತೃಪ್ತನಾದವನಿಗೆ ಮೃಷ್ಟಾನ್ನವನ್ನು ಬಡಿಸುವುದಕ್ಕಿಂತ ಹಸಿದವನಿಗೆ ಏಕೆ ಬಡಿಸಬಾರದು ? ಮೇಘವು ಸಮುದ್ರದಲ್ಲಿ ವರ್ಷಿಸುವುದರಿಂದ ಸಾರ್ಥಕತೆಯೇನು ? ಸಮುದ್ರಕ್ಕೆ ' ಮೇಘವು ವರ್ಷಿಸಲಿ ' ಎಂಬ ಅಪೇಕ್ಷೆಯೇನಾದರೂ ಉಂಟೇ ? ನನಗೆ ನೀನು ರತ್ನವನ್ನು ಕೊಡುವುದೂ ವ್ಯರ್ಥವು—ಎಂದನು. ಆಮಾತಂ ಕೇಳಿ ಸಾಹುಕಾರನು ಆಗ ಸುಮ್ಮನಿದ್ದು ' ಆತನು ಹೊರಡುವಾಗ ಸಾಷ್ಟಾಂಗನಮಸ್ಕಾರಮಾಡಿ ಆತನು ತಿಳಿಯದಂತೆ ಆತನ ವಸ್ತ್ರದಲ್ಲಿ ರತ್ನವಂ ಕಟ್ಟಿ ಆತನನ್ನು ಕಳುಹಿಸಿಕೊಟ್ಟನು.

ಕಮಾಲನು ಅಲ್ಲಿಂದ ಹೊರಟು ಕೆಲವುದಿನಗಳಲ್ಲಿ ಕಾಶೀಕ್ಷೇತ್ರವನ್ನು ಸೇರಿ ತನ್ನಮನೆಗೆ ಬಂದು ತಂದೆಗೆ ನಮಸ್ಕಾರವಂ ಮಾಡಿ, ತನ್ನ ವಸ್ತ್ರದಲ್ಲಿ ಗುಪ್ತವಾಗಿ ಇಟ್ಟಿದ್ದ ಆ ರತ್ನವನ್ನು ನೋಡಿಕೊಂಡು ಆತನ ಮುಂದೆ ಇಟ್ಟು ನಡೆದ ಸಂಗತಿಯನ್ನೆಲ್ಲವಂ ಬಿನ್ನವಿಸಿದನು.

ಕಬೀರನು ಅದಂ ಕೇಳಿ, ವ್ಯಾಕುಲತೆಯಿಂದ ಥಟ್ಟನೆ ಮೂರ್ಛಿತನಾಗಿ, ಸ್ವಲ್ಪ ಕಾಲದನಂತರ ಎಚ್ಚತ್ತು, ಚಿತ್ತದಲ್ಲಿ ಅನುತಾಪಗೊಂಡು, ದೀರ್ಘಸ್ವರದಿಂದ ವ್ಯಸನಪಡುತ್ತಿರಲು, ಆತನ ಮಡದಿಯು ಸಮೀಪಕ್ಕೆ ಬಂದು, ಪಾದಂಗಳಂ ಪಿಡಿದು ಅಭಿವಂದಿಸಿ—ಇಂದು ಇಷ್ಟುದೀರ್ಘಸ್ವರದಿಂದ ವ್ಯಸನಪಡುವುದಕ್ಕೆ ಕಾರಣವೇನು ? ಏನು

ವ್ಯತ್ಯಾಸವನ್ನು ಕಂಡುದರಿಂದ ಚಿತ್ತಕ್ಕೆ ವ್ಯಾಕುಲತೆಯುಂಟಾಗಿರುವುದು ?—ಎಂದು ಕೇಳಿಕೊಳ್ಳಲು, ಕಬೀರನು ಮಗನಕಡೆಗೆ ಬೆನ್ನನ್ನು ಮಾಡಿ, ತನ್ನ ಆ ಸತಿಯನ್ನು ಕುರಿತು—ಪ್ರಿಯೆ ! ನಾನೇನಹೇಳಲಿ? ಇಂದು ನಮ್ಮವಂಶವು ಮುಳುಗಿಹೋದಂತೆ ನನಗೆ ತೋರುವುದು. ಈ ಕಮಾಲನು ಭಗವನ್ನಾಮವನ್ನು ಮಾರಿ ರತ್ನವನ್ನು ತಂದಿರುವನು. ಇದರಿಂದ—ನನ್ನಮನಸ್ಸಿಗೆ ಮಹತ್ತರವಾದ ಸಂಕಟವಾಗಿರುವುದು. ಕಸ್ತೂರಿಯಂ ಬೀದಿಯಲ್ಲಿ ಎರಚಾಡಿ, ಬೂದಿಯಂ ಸೆರಗಿನಲ್ಲಿ ಕಟ್ಟಿಕೊಂಡಂತೆ, ಶಾಸ್ತ್ರಜ್ಞನಾದ ಶಿಷ್ಟನನ್ನು ದೂರಮಾಡಿ, ಚಂಡಾಲನಂ ಮನೆಗೆ ಕರೆದುಕೊಂಡು ಬಂದಂತೆ, ಕುಪ್ಪಿಗೆಯೊಳಗಣ ಗಂಗೆಯಂ ಚೆಲ್ಲಿ, ಅಗಸನೊಗೆಯುವ ಚೆಲುಮೆಯ ನೀರಂ ತುಂಬಿಕೊಂಡಂತೆ, ತೀರ್ಥವಾಸಿಯಂ ಮನೆಯಿಂದ ಹೊರಡಿಸಿ ಕಳ್ಳನನ್ನು ಬರಮಾಡಿದಂತೆ, ವೇದಾಂತಶಾಸ್ತ್ರದ ಪುಸ್ತಕವಂ ಕೊಟ್ಟು, ಕಳಾಶಾಸ್ತ್ರಪುಸ್ತಕವಂ ಕೈಕೊಂಡಂತೆ, ತಪೋಧನನನ್ನು ದೂರಮಾಡಿ, ಕುಟಿಲನನ್ನು ಮನೆಯಲ್ಲಿ ಇಟ್ಟುಕೊಂಡಂತೆ, ಶ್ರೀರಾಮನಾಮವಂ ವಿಕ್ರಯಿಸಿ ರತ್ನವಂ ತೆಗೆದುಕೊಂಡು ಬರಬಹುದೇ ! ಇಂತಹ ವಿಪರೀತಕಾರ್ಯವನ್ನು ಇವನು ಮಾಡಿದನಲ್ಲಾ !!—ಎಂದು ನುಡಿದು, ಮತ್ತೆ ಮನದಲ್ಲಿ ಸಂತಪಿಸುತ್ತ ಮೂರ್ಛೆಗೊಂಡು ಬಿದ್ದನು. ಕಾಂತೆಯು ಉಪಚರಿಸಿ ಸಮಾಧಾನಗೊಳಿಸಿದಳು.

ಕಮಾಲನು ತಂದೆಯ ಮಾತಂ ಕೇಳಿ ಅನುತಾಪಗೊಂಡು, ಆ ರತ್ನವನ್ನು ತೆಗೆದುಕೊಂಡು, ಥಟ್ಟನೆ ಅಲ್ಲಿಂದ ಹೊರಟು, ಆ ಸಾಹುಕಾರನಿದ್ದ ಸ್ಥಳವಂ ಸೇರಿ ಅವನ ಮನೆಯಂ ಹೊಕ್ಕು ಆ ರತ್ನವಂ ಅವನ ಮುಂದಿಟ್ಟು, ಅಲ್ಲಿಂದ ಹಿಂತಿರುಗಿ ಸತ್ವರನಾಗಿ ತನ್ನೂರಿಗೆ ನಡೆತಂದು ಮನೆಯಂ ಸೇರಿ ತಾಯ್ತಂದೆಗಳಿಗೆ ಅಭಿವಾದಿಸಿ ರತ್ನವನ್ನು ಕೊಟ್ಟುಬಿಟ್ಟುಬಂದ ಸಂಗತಿಯಂ ತಿಳಿಯಿಸಿದನು.

ಸದ್ಗುರುವು ಶಿಷ್ಯನ ವಿರಕ್ತಭಾವವನ್ನಾಲಿಸಿ, ಸಂತುಷ್ಟನಾಗುವಂತೆ, ಜನನಿಯು ಮಗನ ಆರೋಗ್ಯಸ್ಥಿತಿಯಂ ತಿಳಿದು ಹರ್ಷಗೊಳ್ಳುವಂತೆ, ಲವಕುಶರ ಪ್ರತಾಪವಂ ಕೇಳಿ, ಶ್ರೀರಾಮಚಂದ್ರನು ಮನದಲ್ಲಿ ಉಲ್ಲಾಸಗೊಂಡಂತೆ, ಕಬೀರನು ಮಗನ ನಿಸ್ಪೃಹತೆಯಂ ಕೇಳಿ ಉಲ್ಲಾಸವಂ ತಾಳಿ ಅವನನ್ನು ಆಲಿಂಗಿಸಿಕೊಂಡನು. ಕಮಾಲನು ತಾಯ್ತಂದೆಗಳನ್ನು ಸೇವಿಸುತ್ತ ಸರ್ವಕಾಲದಲ್ಲಿಯೂ ಬಿಡದೆ ಶ್ರೀಹರಿಭಜನೆಯಂ ಮಾಡುತ್ತಿದ್ದನು.

ಒಂದುದಿವಸ ತೀರ್ಥವಾಸಿಗಳಾದ ಸಾಧುಗಳನೇಕರು ಗುಂಪಾಗಿ ಮನೆಗೆ ಬಂದು ಇಳಿದರು. ಆಗ ರಾತ್ರಿವೇಳೆ ಒಂದುಜಾವಹೊತ್ತಾಗಿದ್ದಿತು. ಮಾಹಸರೂ ಅವರನ್ನು ಕಂಡು ಸಾಷ್ಟಾಂಗನೆರಗಿದರು. ಕುಳಿತುಕೊಳ್ಳುವುದಕ್ಕೆ ಸ್ಥಳವನ್ನು ತೋರಿಸಿ ಆಸನವನ್ನು ಕೊಟ್ಟರು. ಸನಕಾದಿಗಳನ್ನು ಕಂಡು ದೇವೇಂದ್ರನು ಸಂತುಷ್ಟನಾಗುವಂತೆ, ಅನಾವೃಷ್ಟಿಯಿಂದ ಸಂತಪಿಸುವ ಪ್ರಜೆಗಳು ಮಳೆಗರೆವ ಮೇಘಮಾಲ

ವನ್ನು ಕಂಡು ಉಲ್ಲಾಸಗೊಳ್ಳುವಂತೆ, ಆ ಸಾಧುಗಳಂ ಕಂಡು ಕಬೀರನೂ ಅವರಿರ್ವರೂ ಮನದಲ್ಲಿ ಸಂತೋಷವಂ ತಾಳಿದರು. ಅಮೃತವಂ ಕುಡಿದ ರೋಗಿಯಂತೆಯೂ, ಚಂದ್ರಿಕೆಯಂ ಸವಿದ ಚಕೋರದಂತೆಯೂ, ಎಣ್ಣೆಯಂ ತಾಳಿದ ದೀಪದಬತ್ತಿಯಂತೆಯೂ, ಕೀರ್ತನವಂ ಕೇಳಿದ ಆಸ್ತಿಕನಂತೆಯೂ, ಅಶೋಕವನದಲ್ಲಿ ಸೀತೆಯಂ ಕಂಡ ಹನುಮಂತನಂತೆಯೂ, ಸಾಧುಗಳ ಸಂದರ್ಶನದಿಂದ ಉಲ್ಲಾಸಗೊಂಡಿರುವ ಕಬೀರನು ಏಕಾಂತದಲ್ಲಿ ಕಾಂತೆಯನ್ನು ಕುರಿತು—ಇವರು ವಿಷ್ಣುಭಕ್ತರು; ತೀರ್ಥವಾಸಿಗಳು; ನಮ್ಮ ಮನೆಗೆ ಬಂದಿರುವರು. ಉಪವಾಸದಿಂದ ಮಲಗಿಕೊಂಡರೆ ನನ್ನ ಸತ್ತ್ವಕ್ಕೆ ಹಾನಿಯುಂಟಾಗುವುದು ; ಆದರಿಂದ ಬೇಗ ಅಡಿಗೆಯಂ ಮಾಡಿ ಭೋಜನಕ್ಕೆ ಬಡಿಸು—ಎನಲು, ಆಕೆ ಮನೆಯಲ್ಲಿ ಸಾಮಗ್ರಿಯೇನೂ ಇರಲಿಲ್ಲವಾದುದರಿಂದ ಮನದಲ್ಲಿ ಸಂಕಟಪಟ್ಟು ಆತನನ್ನು ಕುರಿತು-ಪ್ರಾಣನಾಥನೆ-ಮನೆಯಲ್ಲಿ ಸಾಮಗ್ರಿಯೇನೂ ಇಲ್ಲ. ನೆರೆಯಲ್ಲಿ ಸಾಲಕ್ಕೆಹೋದರೆ ಅವರು ಕೊಡುವುದಿಲ್ಲ. ಅಂಗಡಿಯಲ್ಲಿ ಕ್ರಯಕ್ಕೆ ತರಬೇಕೆಂದರೆ ಕೈಯಲ್ಲಿ ದ್ರವ್ಯವಿಲ್ಲ. ಈಗ ಇನ್ನೇನುಪಾಯವೂ ತೋರುವುದಿಲ್ಲ. ಮಗನನ್ನೂ ಸಂಗಡ ಕರೆದುಕೊಂಡುಹೋಗಿ ಸಾಮಗ್ರಿಗಳನ್ನು ತುಂಬಿರುವ ಯಾವನಾದರೂ ಒಬ್ಬ ವರ್ತಕನ ಅಂಗಡಿಯನ್ನು ನುಗ್ಗಿ, ಸಾಧುಗಳ ಭೋಜನಕ್ಕೆ ಬೇಕಾದಷ್ಟು ಅಕ್ಕಿ ಬೇಳೆ ಮುಂತಾದ ಸಾಮಗ್ರಿಗಳನ್ನು ಕದ್ದುಕೊಂಡು ಬರಬೇಕು—ಎಂದಳು.

ಕಬೀರನು ಅದಕ್ಕೆ ಅಂಗೀಕಾರಪಟ್ಟು, ಕೈಯಲ್ಲಿ ಕತ್ತಿಯಂ ತೆಗೆದುಕೊಂಡು ಮಗನನ್ನೂ ಸಂಗಡಕರೆದುಕೊಂಡು ತ್ವರೆಯಿಂದ ಹೊರಟು ಅಂಗಡಿಬೀದಿಯಂ ಸೇರಿ ಒಬ್ಬ ದೊಡ್ಡ ವರ್ತಕನ ಅಂಗಡಿಯನ್ನು ನೋಡಿ ಬಾಗಿಲನ್ನು ಒಡೆದು ಮಗನನ್ನು ಒಳಗೆ ಕಳುಹಿಸಿ ತಾನು ಹೊರಗೆ ನಿಂತನು. ಅಷ್ಟುಹೊತ್ತಿಗೆ ರಾತ್ರಿಯೆರಡುಜಾವವಾಗಿದ್ದಿತು. ವರ್ತಕನು ಮುಂದುಗಡೆ ನಿದ್ರೆಮಾಡುತ್ತಿದ್ದನು. ಹೊರಗೆ ನಿಂತಿದ್ದ ಕಬೀರನು ಮಗನನ್ನು ಕುರಿತು—ಬೇಗನೆ ಕಾರ್ಯವಂ ಸಾಧಿಸಬೇಕು—ಎಂದನು.

ಕಮಾಲನು ಅಂಗಡಿಯೊಳಗೆ ನುಗ್ಗಲು, ದ್ರವ್ಯದರಾಶಿಯೂ, ವಸ್ತ್ರಭೂಷಣಂಗಳೂ ದೃಗ್ಗೋಚರವಾದುವು. ಅವುಗಳನ್ನು ಕಂಡು ಮನದಲ್ಲಿ ಬೇಸರಗೊಂಡನು. ಅಕ್ಕಿ ಗೋಧಿ ಹಿಟ್ಟು ಬೇಳೆ ಸಕ್ಕರೆ ತುಪ್ಪ ಉಪ್ಪು ಅರಿಸಿನ ಇಂಗು ಜೀರಿಗೆ ಶಾಕ ಮುಂತಾದ ಸಾಮಗ್ರಿಗಳನ್ನು ಸಾಧುಗಳ ಭೋಜನಕ್ಕೆ ಬೇಕಾದಷ್ಟು ಮಿತವಾಗಿ ಸಂಗ್ರಹಿಸಿ, ಹೊರಗಿದ್ದ ಕಬೀರನ ವಶಕ್ಕೆ ಕೊಟ್ಟನು. ಗಂಗೆಯಲ್ಲಿ ಉದಕವು ಬಹುವಾಗಿದ್ದರೂ, ತೃಷಾರ್ತನು ಬಾಯಾರಿಕೆಯಿಂಗುವಷ್ಟನ್ನೇ ಎಂತು ಗ್ರಹಿಸುವನೋ, ಎಲೆಯಲ್ಲಿ ಅನ್ನವನ್ನು ಬಹುಳವಾಗಿ ಬಡಿಸಿದರೂ, ಕ್ಷುಧಿತನು ಉದರಪೂರ್ತಿಯಾಗುವಷ್ಟನ್ನೇ ಎಂತು ತೆಗೆದುಕೊಳ್ಳುವನೋ, ಕರತಲಭಿಕ್ಷನಾದ ಸಂನ್ಯಾಸಿಯು

ಎಲ್ಲವನ್ನೂ ಬಿಟ್ಟು ಗ್ರಾಸಮಾತ್ರವನ್ನೇ ಎಂತು ಸ್ವೀಕರಿಸುವನೋ, ಅಂತು ಎದು ರಿಗೆ ಇದ್ದ ದ್ರವ್ಯರಾಶಿಯನ್ನೂ ವಸ್ತ್ರಭೂಷಣಂಗಳನ್ನೂ ಬಿಟ್ಟು, ಮಿತವಾದ ಭೋಜನ ಸಾಮಗ್ರಿಯನ್ನು ಮಾತ್ರ ಅವನು ಗ್ರಹಿಸಿದನು. ಬಳಿಕ ಹೊರಗೆ ಬಂದು—ಈ ವರ್ತಕನು ನಿದ್ರೆಮಾಡುತ್ತಿರುವನು; ಇವನಿಗೆ ಎಚ್ಚರಿಕೆಯನ್ನುಂಟುಮಾಡಬೇಕು. ಮೈಮರೆತು ಮಲಗಿರುವ ವೈರಿಯನ್ನು ಹೊಡೆಯಬಾರದು. ಪರೋಕ್ಷದಲ್ಲಿ ಯಾರನ್ನೂ ನಿಂದಿಸಬಾರದು. ರಣದಲ್ಲಿ ಓಡುವವನನ್ನು ಬೆನ್ನಟ್ಟಬಾರದು. ದೌಷ್ಟ್ಯ ದಿಂದ ಕಳ್ಳತನವನ್ನು ಮಾಡಬಾರದು. ಬಾಳುವಮನೆಗೆ ಬೆಂಕಿಯನ್ನಿಡಬಾರದು. ಇಂತು ಮಾಡಲು, ಘೋರತರವಾದ ನರಕದಲ್ಲಿ ಬೀಳದಿರರು. ನಾನು ತಿಳವಳಿಕೆಯು ಳ್ಳವನು; ಭಕ್ತನು; ಪಾಪಪುಣ್ಯಗಳನ್ನು ಬಲ್ಲೆನು. ವರ್ತಕನಿಗೆ ತಿಳಿಯಿಸದೆ ಹೋಗುವುದು ಉಚಿತವಲ್ಲ. ಆದಕಾರಣ ಈತನನ್ನು ಎಚ್ಚರಗೊಳಿಸಿ ವಿಷಯ ವನ್ನು ತಿಳಿಯಿಸಿಬಿಡುವೆನು—ಎಂದು ತನ್ನ ಮನದಲ್ಲಿ ಆಲೋಚಿಸಿ, ನಿದ್ರೆಮಾ ಡುತ್ತಿದ್ದ ವರ್ತಕನ ಸಮೀಪಕ್ಕೆ ಹೋಗಿ, ಬೆನ್ನತಟ್ಟಿ—ಸೆಟ್ಟಿಯೇ! ಎಚ್ಚರವನ್ನು ಹೊಂದು. ನಾವಿಬ್ಬರೂ ಕಳ್ಳರು; ನಿನ್ನ ಅಂಗಡಿಯ ಬಾಗಿಲನ್ನು ಒಡೆದು ಒಳನುಗ್ಗಿ ಮಿತವಾದ ಭೋಜನಸಾಮಗ್ರಿಗಳಂ ತೆಗೆದುಕೊಂಡುಹೋಗುವೆವು. ನಿನಗೆ ಈ ಸಂಗತಿ ತಿಳಿದಿರಲಿ—ಎಂದುನುಡಿದು ತ್ವರೆಯಿಂದ ಹೊರಟನು.

ಆವರ್ತಕನು ಎಚ್ಚರಗೊಂಡು ಥಟ್ಟನೆ ಎದ್ದು ಓಡುತ್ತ ಕಮಾಲನನ್ನು ಬೆನ್ನ ಟ್ಟಿದನು. ಕಮಾಲನೂ ವೇಗದಿಂದ ಓಡಲು ತೊಡಗಿ ಕೊನೆಗೆ ವನದಲ್ಲಿ ಬೇಟೆ ಗಾರನ ಬಲೆಗೆ ಸಿಕ್ಕಿದ ಜಿಂಕೆಯಂತೆಯೂ, ಗಿಡಗನಿಂದ ಹಿಡಿಯಲ್ಪಟ್ಟ ರಾಜಹಂಸ ದಂತೆಯೂ, ಭ್ರಾಂತಿಯಿಂದ ಯಂತ್ರದೊಳಗೆ ಸಿಕ್ಕಿಬಿದ್ದ ಅರಗಿಳಿಯಂತೆಯೂ, ಕೌರವನ ಚಕ್ರವ್ಯೂಹದಲ್ಲಿ ಸಿಕ್ಕಿದ ಸುಭದ್ರಾಕುಮಾರನಂತೆಯೂ, ಉಪವನದಲ್ಲಿ ವ್ಯಾಧನಿಂದ ಹಿಡಿಯಲ್ಪಟ್ಟ ಕೋಕಿಲದಂತೆಯೂ, ದುರಾಗ್ರಹಾವಿಷ್ಟನಾದ ಆ ವರ್ತ ಕನ ಕೈಗೆ ಸಿಕ್ಕಿ ಅವನಿಂದ ಎಳೆಯಲ್ಪಟ್ಟು ಸಂಭ್ರಾಂತನಾಗಿ ತಂದೆಯನ್ನು ಕುರಿತು- ಈ ವರ್ತಕನು ನನ್ನನ್ನು ಹಿಡಿದು ಹಿಂಸಿಸುತ್ತಿರುವನು; ಈ ರಾಜಬೀದಿಯಲ್ಲಿ ಶಂಖಧ್ವನಿಯನ್ನು ಮಾಡುವನು. ಇನ್ನು ನಗರವಾಸಿಗಳು ಕೇಳಿ, ನೋಡುವುದಕ್ಕೆ ಓಡಿಬರುವರು. ಗಲಭೆ ಹೆಚ್ಚುವುದು. ನಮ್ಮ ಕಳ್ಳತನವು ಇನ್ನು ಪ್ರಕಟವಾಗು ವುದು. ಆದಕಾರಣ ಬೇಗದಿಂ ನನ್ನ ಶಿರಸ್ಸನ್ನು ಛೇದಿಸಿಕೊಂಡು ಹೋಗುವುದು. ಮನಸ್ಸಿನಲ್ಲಿ ಮಮತೆಯಂ ಹಿಡಿದರೆ ಸತ್ತ್ವಕ್ಕೆ ಹಾನಿಬಂದೀತು. ಕಳ್ಳತನದ ಮಾತನ್ನು ಕಿವಿಯಿಂದ ಕೇಳಿದರೆ, ಸಾಧುಗಳು ಮನೆಯಲ್ಲಿ ನಿಲ್ಲಲಾರರು. ಜಾರೆಯ ಮಾತು ಕಿವಿಗೆ ಬಿದ್ದರೆ ಪತಿವ್ರತೆ ಥಟ್ಟನೆ ಎಂತು ಎದ್ದು ಹೋಗುವಳೋ; ಪಂಚಮನು ಬಳಿಗೆ ಬಂದರೆ ಶ್ರೋತ್ರಿಯನು ಎಂತು ಎದ್ದು ಹೊರಗೆಹೋಗುವನೋ; ಸದ್ಗುರುನಿಂದೆಯು ಕಿವಿಗೆ ಬೀಳಲು, ಜ್ಞಾನಿಗಳೆಂತು ನಿಲ್ಲದೆ ಹೋಗುವರೋ; ಅಂತು

ಕಳ್ಳತನದ ಮಾತು ಕರ್ಣದಲ್ಲಿ ಬೀಳಲು, ಸಾಧುಗಳು ಮನೆಯಲ್ಲಿ ನಿಲ್ಲದೆ ಹೊರಟು ಹೋಗುವರು. ಅದುದರಿಂದ ಭೂಜ್ಯನೆ! ಶಾಂತಿಸಾಗರನೆ! ಮಾಯಾಮಮತೆಗಳಂ ಬಿಟ್ಟು ನಿಜಹಸ್ತದಿಂದ ಶಿರಸ್ಸಂ ಛೇದಿಸುವನಾಗು.—ಎನಲು, ಕಬೀರನು ಪುತ್ರನ ವಚನವಂ ಕೇಳಿ ಸಂತೋಷಗೊಂಡು, ಕತ್ತಿಯಂ ಹಿರಿದು ಅವನ ಶಿರವಂ ಚಾಕಚಕ್ಯದಿಂದ ಛೇದಿಸಿ ತೆಗೆದುಕೊಂಡು ಸಾಮಗ್ರೀಸಮೇತನಾಗಿ ತ್ವರೆಯಿಂದ ಹೊರಟು ನಿಜಗೃಹವಂ ಸೇರಿ ಕಾಂತೆಯಂ ಕರೆದು ನಡೆದ ಸಂಗತಿಯನ್ನೆಲ್ಲವಂ ತಿಳಿಯಿಸಿದನು.

ಎಲೈ ಶ್ರೋತೃಗಳಿರಾ! ಅಹಹ!! ಕಬೀರನ ಧೈರ್ಯವನ್ನೂ ಸತ್ತ್ವವನ್ನೂ ಬಣ್ಣಿಸಲು ನನಗೆ ಶಕ್ತಿಯಿಲ್ಲ. ಆ ವಿಷಯದಲ್ಲಿ ನನ್ನ ಬುದ್ಧಿಯೆಲ್ಲವೂ ಕುಂಠಿತವಾಗಿರುವುದು. ಆದರೆ ಒಂದು ದೃಷ್ಟಾಂತವನ್ನು ಮಾತ್ರ ಇಲ್ಲಿ ಹೇಳುವೆನು:—ಪೂರ್ವದಲ್ಲಿ ಕೈಲಾಸಪತಿಯು ಅತಿಥಿಯಾಗಿ ತನ್ನ ಮನೆಗೆ ಬಂದು ನರಮಾಂಸವನ್ನು ಅಪೇಕ್ಷಿಸಲು, ಸಿರಿಯಾಳನು ತನ್ನ ಮಗನ ಶಿರವಂ ಎಂತು ತಾನೆ ಕಡಿದನೋ, ಅಂತು ಕಬೀರನು ತನ್ನ ಮಗನ ಮಸ್ತಕವನ್ನು ಕಡಿದನು. ಆದರೆ, ಈ ದೃಷ್ಟಾಂತವು ಇಲ್ಲಿಗೆ ಸಾಲದು. ಏಕೆಂದರೆ, ಪಾರ್ವತೀಪತಿಯು ಸಿರಿಯಾಳನನ್ನು ಧರ್ಮಸಂಕಟದಲ್ಲಿ ಸಿಕ್ಕಿಸಿದನು. ಅದಕ್ಕೋಸ್ಕರ ಆತನು ತನ್ನ ಮಗನನ್ನು ಸಂಹರಿಸಬೇಕಾಯಿತು. ಸಾಧುಗಳು ಭೋಜನವನ್ನು ಅಪೇಕ್ಷಿಸದಿದ್ದರೂ, ಕಬೀರನು ಅದಕ್ಕೋಸ್ಕರ ಮಗನನ್ನು ವಧಿಸಿದನೆಂಬುದು ವಿಶೇಷವಲ್ಲವೆ? ಆದುದರಿಂದ ಉಪಮಾನವು ಗೌಣವಾಗಿ ತೋರುವುದು. ಅಭಿಜ್ಞರಾದ ಮಹನೀಯರು ಇದನ್ನು ಬಲ್ಲರು. ಪೃಥ್ವಿಗಿಂತಲೂ ಘನೀಭೂತವಾದುದಾವುದು? ಆಕಾಶಕ್ಕಿಂತಲೂ ದೊಡ್ಡದು ಬೇರೆಯಾವುದು? ಅಶ್ವತ್ಥಕ್ಕಿಂತಲೂ ಪೂಜ್ಯವಾದ ವೃಕ್ಷವಾವುದು? ಗರುಡನಿಗಿಂತಲೂ ಶ್ರೇಷ್ಠವಾದ ಪಕ್ಷಿಯಾವುದು? ಗಂಗೆಗಿಂತಲೂ ಪಾವನವಾದ ನದಿಯಾವುದು? ಸಮುದ್ರಕ್ಕಿಂತಲೂ ಆಳವಾದ ಜಲಾಶಯವಿನ್ನಾವುದು? ಕಲ್ಪವೃಕ್ಷಕ್ಕಿಂತಲೂ ಉದಾರವಾದ ವೃಕ್ಷವಾವುದು? ಕಾಮಧೇನುವಿಗಿಂತಲೂ ಶ್ರೇಷ್ಠವಾದ ಪಸುವಾವುದು? ಅನಸೂಯೆಗಿಂತಲೂ ಉತ್ತಮೆಯೆನಿಸುವ ತಾಯಿಯಿನ್ನಾವಳು? ಚಂದ್ರನಿಗಿಂತಲೂ ಕಳಾವಂತನಿನ್ನಾರು? ದೈತ್ಯರಲ್ಲಿ ಬಲಿಗಿಂತಲೂ ದಾತೃವಾವನು? ಕಪಿಗಳಲ್ಲಿ ಮಾರುತಿಗಿಂತಲೂ ಶಕ್ತನಾರು? ಪಲವುನುಡಿಗಳಿಂದೇನು? ಕಬೀರನಿಗಿಂತಲೂ ಮಹನೀಯನಾದ ಭಾಗವತನು ಎಲ್ಲಿ ಹುಡುಕಿದರೂ ದೊರೆಯಲಾರನು.

ಅನಂತರ ಆ ಕಬೀರನು ಸಾಮಗ್ರಿಯೆಲ್ಲವನ್ನೂ ಕೆಳಗೆ ಇಟ್ಟು ಛಿನ್ನವಾದ ಮಗನ ಮಸ್ತಕವನ್ನು ಕಾಂತೆಯ ಕೈಯಲ್ಲಿ ಕೊಟ್ಟನು. ಆಕೆ ಆ ಶಿರವಂ ಕೈಯಲ್ಲಿ ಹಿಡಿದುಕೊಂಡು ಮನದಲ್ಲಿ ಮೋಹವೇರಿ, ಕಣ್ಣುಗಳಲ್ಲಿ ಜಳಜಳನೆ ನೀರನ್ನು ಸುರಿಯಿಸುತ್ತ ಗದ್ಗದಸ್ವರದಿಂದ—ಎಲೊ ಮಗು! ನೀನು ಭಾಗ್ಯಶಾಲಿ; ಸಾಧುಗಳಿಗೋಸ್ಕರ ದೇಹವಂ ಒಪ್ಪಿಸಿದೆ. ಮಹಾಭಾಗವತನೆನಿಸಿಕೊಂಡು ನಮ್ಮ ವಂಶ

ವನ್ನುದ್ಧರಿಸಿದೆ—ಎಂದು ನುಡಿದು, ಅದಂ ಬಂದೆಡೆ ಗುಪ್ತವಾಗಿ ಇರಿಸಿ, ಧೈರ್ಯದಿಂ ಮನವಂ ನಿಗ್ರಹಿಸಿಕೊಂಡು, ತಂದ ಸಾಹಿತ್ಯಗಳನ್ನು ತೆಗೆದಿಟ್ಟುಕೊಂಡು ಥಟ್ಟನೆ ಅಡಿಗೆಮಾಡಿ ಸಾಧುಗಳಿಗೆ ಬಡಿಸಿದಳು. ಸಾಧುಗಳು ಭೋಜನಮಾಡಿ ತೃಪ್ತರಾದರು. ಆಕೆ "ಇಂದು ಸುದಿನವು; ಸಾಧುಗಳ ಚರಣಸಂದರ್ಶನದಿಂದ ನಾನು ಧನ್ಯೆಯಾದೆನು" ಎಂದುಕೊಂಡಳು. ಕಬೀರನು ಆ ಸಾಧುಗಳಿಗೆ ಮಲಗಲು ತೃಣಾಸ್ತರಣವನ್ನು ಹಾಸಿ ಭಕ್ತಿಯಿಂದ ಉಪಚರಿಸುತ್ತಿದ್ದನು. ಸೂರ್ಯೋದಯಸಮಯವಾಯಿತು. ಆ ಸಾಧುಗಳು ತ್ವರೆಯಿಂದ ಎದ್ದು ಪ್ರಾತಸ್ಸ್ಮರಣೆಯಂ ಮಾಡುತ್ತ ಸ್ನಾನಕ್ಕೆ ನದಿಗೆ ಹೋದರು.

ಅತ್ತಕಡೆ ವರ್ತಕನು ಬೀದಿಯಲ್ಲಿ ಗೋಳಿಡುವುದಕ್ಕೆ ಪ್ರಾರಂಭಿಸಿದನು. ಅನೇಕರು ಅಲ್ಲಿಗೆ ನೋಡುವುದಕ್ಕೆ ಬಂದು ಸೇರಿದರು. ನಡೆದ ಸಂಗತಿಯೆಲ್ಲವಂ ಕೇಳಿದರು. ಎಲ್ಲರೂ ಆ ವರ್ತಕನನ್ನು ನೋಡಿ-ಶಿರಸ್ಸನ್ನು ಛೇದಿಸಿಕೊಂಡು ಹೋದವನು ಯಾರೋ ? ರಾತ್ರಿವೇಳೆ; ಅವನ ಗುರುತನ್ನು ನೀನು ಹಿಡಿಯದೆ ಹೋದೆ. ನಿನ್ನ ಅದೃಷ್ಟವು ಒಳ್ಳೆಯದು. ಕಳ್ಳನಿಂದ ಕಳ್ಳನು ಹೊಡೆಯಲ್ಪಟ್ಟನು. ನಿನಗೆ ಮಹಾನರ್ಥಪ್ರಾಪ್ತವಿದ್ದಿತು. ಈಶ್ವರನು ನಿನ್ನನ್ನು ರಕ್ಷಿಸಿದನು. ದ್ರವ್ಯವು ಬಳಿಯಲ್ಲಿರಲು ಒಬ್ಬನೇ ಮಲಗಬಾರದು. ದ್ರವ್ಯದ ಎಡೆಯಲ್ಲಿ ಮಹಾಭಯವುಂಟು. ದ್ರವ್ಯದ ಆಶೆಯು ಇರಲು, ನಂಟರಿಷ್ಟರೆಲ್ಲರೂ ವೈರಿಗಳಾಗುವರು. ದ್ರವ್ಯವೇ ರಕ್ಷಿಸುವುದು; ಕೊಲ್ಲುವುದು. ರಾಜದ್ವಾರದಲ್ಲಿ ನಿರ್ಬಂಧವುಂಟಾಗಲು, ಅದನ್ನು ದ್ರವ್ಯವು ತಪ್ಪಿಸುವುದು. ಕಳ್ಳನ ಶಿರಶ್ಛೇದನವೂ ದ್ರವ್ಯಕ್ಕೋಸ್ಕರವೇ ಆಯಿತಲ್ಲಾ ! ದ್ರವ್ಯವು ಮಹಾದುಃಖಕ್ಕೆ ಆಕರವಾದುದು. ಆದುದರಿಂದಲೇ ಅಭಿಜ್ಞರು ಇಂತು ಹೇಳುವರು:—

ಶ್ಲೋ॥ ಅರ್ಥಾನಾಮಾರ್ಜನೇ ದುಃಖಮಾರ್ಜಿತಾನಾಂ ಚ ರಕ್ಷಣೇ ।
ನಾಶೇ ದುಃಖಂ ವ್ಯಯೇ ದುಃಖಮರ್ಥೋ ದುಃಖಸ್ಯ ಭಾಜನಮ್ ॥

ಅರ್ಥಮನರ್ಥಂ ಭಾವಯ ನಿತ್ಯಂ ನಾಸ್ತಿ ತತಸ್ಸುಖಲೇಶಸ್ಸತ್ಯಮ್ ।
ಪುತ್ರಾದಪಿ ಧನಭಾಜಾಂ ಭೀತಿಃ ಸರ್ವತ್ರೈಷಾ ವಿಹಿತಾ ರೀತಿಃ ॥

ಧನಂ ತಾವದಸುಲಭಂ ಲಬ್ಧಂ ಕೃಚ್ಛ್ರೇಣ ರಕ್ಷ್ಯತೇ ।
ಲಬ್ಧನಾಶೋ ಯಥಾಮೃತ್ಯುಸ್ತಸ್ಮಾದೇತನ್ನ ಚಿನ್ತಯೇತ್ ॥

ಜನಯತ್ಯಾರ್ಜನೇ ದುಃಖಂ ತಾಪಯನ್ತಿ ವಿಪತ್ತಿಷು ।
ಮೋಹಯನ್ತಿ ಚ ಸಂಪತ್ತೌ ಕಥಮರ್ಥಾಃ ಸುಖಾವಹಾಃ ॥

ಯಥಾಮಿಷಂ ಜಲೇ ಮತ್ಸ್ಯೈರ್ಭಕ್ಷ್ಯತೇ ಶ್ವಾಪದೈರ್ಭುವಿ ।
ಆಕಾಶೇ ಪಕ್ಷಿಭಿಶ್ಚೈವ ತಥಾ ಸರ್ವತ್ರ ವಿತ್ತವಾನ್ ॥

ರಾಜತಃ ಸಲಿಲಾದಗ್ನೇಶ್ಚೋರತಃ ಸ್ವಜನಾದಪಿ |
ಭಯಮರ್ಥವತಾಂ ನಿತ್ಯಂ ಮೃತ್ಯೋಃ ಪ್ರಾಣಭೃತಾಮಿವ ||

ದಾಯಾದಾಃ ಸ್ಪೃಹಯನ್ತಿ ತಸ್ಕರಗಣಾ ಮುಷ್ಣಂತಿ ಭೂಮೀಭುಜಃ |
ದೂರೇಣ ಛಲಮಾಕಲಯ್ಯ ಹುತಭುಗ್ಭಸ್ಮೀಕರೋತಿ ಕ್ಷಣಾತ್ ||
ಅಮ್ಭಃ ಪ್ಲಾವಯತೇ ಕ್ಷಿತೌ ವಿನಿಹಿತಂ ಯಕ್ಷಾ ಹರನ್ತಿ ಧ್ರುವಂ |
ದುರ್ವೃತ್ತಾಸ್ತನಯಾ ನಯನ್ತಿ ನಿಧನಂ ಧಿಗ್ಧಿಗ್ಧನಂ ತದ್ಬಹು ||

ಅಯ್ಯಾ ವರ್ತಕನೇ! ನಿನ್ನ ಸುಕೃತವೇನೋ ಇದ್ದಿತು. ನೀನು ಬದುಕಿಕೊಂಡೆ. ಆಲೋಚಿಸಿದರೆ ಬಂದವರಿಬ್ಬರೂ; ಕಳ್ಳರಲ್ಲ; ಸಜ್ಜನರಾಗಿ ತೋರುವರು. ಅಂಗಡಿಯಲ್ಲಿ ರಾಶಿಯಾಗಿ ಬಿದ್ದಿದ್ದ ದ್ರವ್ಯವನ್ನೂ ವಸ್ತ್ರಭೂಷಣಗಳನ್ನೂ ಬಿಟ್ಟು ಮಿತವಾದ ಸಾಮಗ್ರಿಗಳಂ ತೆಗೆದುಕೊಂಡು ಹೋಗಿರುವರು. ಇದಾಶ್ಚರ್ಯವು!—ಎಂದು ಸಮಾಧಾನಗೊಳಿಸಿದರು.

ಆ ಶೆಟ್ಟಿಯು ಸುಮ್ಮನಿರದೆ ರಾಜನ ಬಳಿಗೆಹೋಗಿ, ನಡೆದೆಲ್ಲಾ ಸಂಗತಿಯನ್ನೂ ಹೇಳಿಕೊಂಡನು. ರಾಜನು ಅದನೆಲ್ಲವಂ ಕೇಳಿ—ಆ ಕಬಂಧವನ್ನು ಈಗಲೇ ಶೂಲಕ್ಕೇರಿಸುವುದು—ಎಂದು ಸೇವಕರಿಗೆ ಆಜ್ಞಾಪಿಸಿದನು. ಅವರು ಅಪ್ಪಣೆ ಎಂದು ಆಕ್ಷಣ ಹೊರಟು ಬೀದಿಯಲ್ಲಿದ್ದ ಕಬಂಧವನ್ನು ತೆಗೆದುಕೊಂಡುಹೋಗಿ ಶೂಲಕ್ಕೆ ಹಾಕಿದರು. ಅಹಹ! ಹಣಕ್ಕೆ ದಂಡನೆಮಾಡುವುದೆಲ್ಲಿಯಾದರೂ ಉಂಟೆ?

ಆ ತೀರ್ಥವಾಸಿಗಳಾದ ಸಾಧುಗಳು ಗಂಗಾನದಿಯಲ್ಲಿ ಸ್ನಾನಮಾಡಿ ದೇವತಾರ್ಚನೆಯಂ ಮಾಡಿಕೊಂಡು ಅಲ್ಲಿಂದ ಕಬೀರನ ಆಶ್ರಮಕ್ಕೆ ಬಂದು ಆತನ ಅನುಜ್ಞೆಯಂ ಪಡೆದು ಮುಂದಣೂರಿಗೆ ಹೊರಟರು. ಕಬೀರನು ಸಪತ್ನೀಕನಾಗಿ ಅವರಿಗೆ ನಮಸ್ಕಾರವಂ ಮಾಡಿದನು. ಆಕೆ ಗದ್ಗದಸ್ವರದಿಂದ ಕೂಡಿ—ಮತ್ತೆ ಪೂಜ್ಯರ ಚರಣಸಂದರ್ಶನವೆಂದಿಗಾಗುವುದೋ—ಎಂದು ವಿನಯದಿಂದ ನುಡಿದಳು. ಆ ದಂಪತಿಗಳು ಸಾಧುಗಳನ್ನು ಸ್ವಲ್ಪದೂರದವರೆಗೆ ಸಾಗಕಳುಹಿಸುತ್ತ ಬಂದರು.

ಪಟ್ಟಣದ ಹೊರಭಾಗಕ್ಕೆ ಬರುವುದೂ, ಒಂದಾಶ್ಚರ್ಯವು ನಡೆದುದು:—ವಧ್ಯಸ್ಥಾನದ ಶೂಲವು ಆಕಸ್ಮಿಕವಾಗಿ ದೃಗ್ಗೋಚರವಾಯಿತು. ಆ ಶೂಲವನ್ನು ಏರಿಸಿದ್ದ ಶಿರವಿಲ್ಲದ ಶರೀರವನ್ನು ಕಂಡರು. ಸಾಧುಗಳು ಒಂದುಕ್ಷಣ ಅಲ್ಲಿ ವಿಸ್ಮಿತರಾಗಿ ನೋಡುತ್ತ ನಿಂತರು. ಕಬಂಧವು ಕರಯುಗ್ಮಗಳನ್ನೂ ಜೋಡಿಸಿಕೊಂಡು ಸಾಧುಗಳಿಗೆ ನಮಸ್ಕರಿಸಿತು. ಆ ವಿಪರೀತವನ್ನು ಕಂಡು ಸರ್ವರೂ ಪರಮಾಶ್ಚರ್ಯವನ್ನು ಹೊಂದಿದರು. ಸಾಧುಗಳು ಕಬೀರನನ್ನು ಕುರಿತು—ಇದೇನು ಕಬಂಧವು ನಮಗೆ ನಮಸ್ಕಾರಮಾಡುವುದು? ಶಿರವಿಲ್ಲದ ಶರೀರದಲ್ಲಿ ಪ್ರಾಣಗಳು ಎಂತು ನಿಂತಿವೆ?

ವೃಕ್ಷವಂ ಕಡಿಯುಲು, ಅದರ ಶಾಖೆಗಳು ಎಂತು ನಿಲ್ಲುವುವು? ರೆಕ್ಕೆಗಳಂ ಕೀಳಲು, ಪಕ್ಷಿಗಳೆಂತು ಆಕಾಶದಲ್ಲಿ ಹಾರುವುವು? ತಂತಿಯು ಹರಿದುಹೋದ ಬಳಿಕ ವೀಣೆಯೆಂತು ನುಡಿಯುವುದು? ಅಂತು ಶಿರವಿಲ್ಲದ ಶರೀರವು ಚೈತನ್ಯವನ್ನು ಹೊಂದಿರುವುದು ಆಶ್ಚರ್ಯವಲ್ಲವೆ? ಇದೇನೋ ಮನಸ್ಸಿಗೆ ವಿಪರೀತವಾಗಿ ತೋರುವುದು—ಎಂದರು.

ಕಬೀರನು ಆಸಾಧುಗಳಂ ಕುರಿತು-ಪೂಜ್ಯರಿರ! ಭೀಷ್ಮನು ಶರಪಂಜರದಲ್ಲಿ ಇದ್ದುಕೊಂಡು ದೇಹದಲ್ಲಿ ಪ್ರಾಣವಂ ರಕ್ಷಿಸಿರಲಿಲ್ಲವೆ? ಅಭಿಮನ್ಯುವು ರಣಮಂಡಲದಲ್ಲಿ ಹತನಾಗಿ ದುಃಖವನ್ನು ಅರ್ಜುನನಿಗೆ ಹೇಳುವುದಕ್ಕೋಸ್ಕರ ಶಕ್ತಿಯಿಂದ ಪ್ರಾಣವನ್ನು ಹಿಡಿದಿರಲಿಲ್ಲವೆ? ರಾವಣನಿಂದ ಹೊಡೆಯಲ್ಪಟ್ಟ ಜಟಾಯುವು ಶ್ರೀರಾಮನ ಸಂದರ್ಶನಕ್ಕೋಸ್ಕರ ಜೀವವನ್ನು ಹಿಡಿದುಕೊಂಡಿರಲಿಲ್ಲವೆ? ಆಶ್ಚರ್ಯವೇನು! ಅಂತು ಭಾಗವತನಾದ ಈ ಕಳ್ಳನು ತಮ್ಮ ಚರಣಗಳಲ್ಲಿ ದೃಢವಾದ ಭಕ್ತಿಯಿಂದ ತಮಗೊಂದುನಮಸ್ಕಾರವಮಾಡುವುದಕ್ಕೋಸ್ಕರ ತನ್ನ ಪ್ರಾಣವನ್ನು ಹಿಡಿದಿದ್ದನು. ಆಮನೋರಥವು ಪೂರ್ಣವಾಯಿತು. ಇವನಿಗೆ ತಮ್ಮ ಚರಣಸಂದರ್ಶನವು ಲಭಿಸಿತು. ಇನ್ನು ಈನಶ್ವರದೇಹವಂ ಬಿಟ್ಟು ಪರಮಪದವಂ ಪಡೆಯುವನು-ಎಂದನು.

ಅದಂ ಕೇಳಿ ಅವರು ಈಕಳ್ಳನು ಯಾರು?—ಎನಲು, ಬಳಿಕ ಕಬೀರನು ಎಲ್ಲಾ ಸಂಗತಿಯನ್ನೂ ತಿಳಿಯಿಸಿದನು. ಅದಕ್ಕವರು—ಎಲೈ ಮಹಸೀಯನೇ! ನಾವು ಭೋಜನವನ್ನು ಅಪೇಕ್ಷಿಸದಿದ್ದರೂ, ನಮಗೋಸ್ಕರ ಇಂತಹ ಸುಗುಣಕುಮಾರನನ್ನು ನೀನು ಸಂಹರಿಸಬಹುದೇ?—ಎಂದರು. ಕಬೀರನು—ಸಾಧುಗಳಿರಾ! ನಿಮಗೆ ನಾನು ತಿಳಿಯಿಸಬೇಕಾದುದೇನು? ಸರ್ವವೂ ನಶ್ವರವಾದುದು. ಈ ಮಾಯಾಪ್ರಪಂಚವೆಲ್ಲವೂ ಹೋಗತಕ್ಕದ್ದೇಸರಿ. ಇವನನ್ನು ನಾನು ಸಂಹರಿಸದಿದ್ದರೆ ಇವನೇನು ಅಮರನಾಗುತ್ತಿದ್ದನೇ?—ಎನಲು, ಆಸಾಧುಗಳು ಈ ಮಾತಂ ಕೇಳಿ ಮನದಲ್ಲಿ ಕನಿಕರಗೊಂಡು, ಆಕಬೀರನ ಕಾಂತೆಯಂ ಕುರಿತು—ನಿನ್ನ ಮಗನ ಮಸ್ತಕವನ್ನು ನಮಗೆ ತಂದು ತೋರಿಸು-ಎಂದರು. ಆಕೆ—ಈಸಂತರ ಮಹಿಮೆಯೇನಿರಬಹುದೋ-ಎಂದು ಮನದಲ್ಲಿ ಎಣಿಸಿ ತ್ವರೆಯಿಂದ ಮನೆಗೆಹೋಗಿ ಮಗನ ಸಿರವನ್ನು ತೆಗೆದುಕೊಂಡು ಬಂದು ಸಾಧುಗಳ ಮುಂದೆ ಇಟ್ಟಳು. ಅವರು ಆಸಿರವನ್ನು ಆಕಬಂಧಕ್ಕೆ ಕೂಡಿಸಿ ತಮ್ಮ ಹಸ್ತವನ್ನು ಅದರಮೇಲೆ ಇಟ್ಟರು. ಅಲ್ಲಿ ನೆರೆದಿದ್ದವರೆಲ್ಲರೂ ಆಶ್ಚರ್ಯವಂ ನೋಡುತ್ತಿದ್ದರು. ಮಹಾಪ್ರಭಾವರಾದ ಆ ಸಾಧುಗಳ ಹಸ್ತಸ್ಪರ್ಶದಿಂದ ಕಮಾಲನು ತಟ್ಟನೆ ಸಜೀವನಾಗಿ ನಡೆತಂದು ಸಾಧುಗಳಿಗೆ ನಮಸ್ಕಾರವಂ ಮಾಡಿದನು. ಸಾಧುಗಳು ಇಂತು ತಮ್ಮ ಮಹಿಮೆಯನ್ನು ತೋರಿ ಅಲ್ಲಿಂದ ಹೊರಟರು.

ಕಾಶೀಪಟ್ಟಣದಲ್ಲಿ ಸಕಲರೂ ಕಬೀರನನ್ನು ನಮಸ್ಕರಿಸಿ "ನೀನು ಪರಮ ಭಾಗವತನು; ಧನ್ಯನು." ಎಂದು ಶ್ಲಾಘಿಸಿದರು.

ಎಲೈ ಶ್ರೋತೃಗಳಿರಾ! ಪುಣ್ಯಕರವಾದ ಸಾಧುಚರಿತ್ರೆಗಳಿಂದ ಬಹುಮನೋಹರವಾದ ಗ್ರಂಥವೇ ಪಂಢರೀಪುರಕ್ಷೇತ್ರದ ದೇವಾಲಯವು. ನೀಲಮೇಘಶ್ಯಾಮನಾದ ಶ್ರೀವಿಟ್ಠಲನು ಇಲ್ಲಿ ನಿರಂತರವೂ ರಮಿಸುತ್ತಿರುವನು. ಪರಮಭಾಗವತರು ವಿವಿಧವಾದ ಕೀರ್ತನಂಗಳಂ ಮಾಡುವರು. ಅಜ್ಞನೂ ಪತಿತನೂ ಆದ ನಾನು ಭಕ್ತಿಪುರಸ್ಸರವಾಗಿ ಒಂದೆರಡು ಮಾತುಗಳೆಂಬ ತುಳಸೀಪುಷ್ಪಗಳಿಂದ ಸೇವಿಸಬೇಕೆಂದಿರುವೆನು. ಮುಂದಣ ಅಧ್ಯಾಯದಲ್ಲಿ ಕಥೆಯು ಬಹುಸರಸವಾಗಿರುವುದು. ಸಾವಧಾನತೆಯಿಂದ ಆಲಿಸುವುದು.

ಇಂತು ಶ್ರೀಭಕ್ತವಿಜಯದಲ್ಲಿ ಆರನೆಯ ಅಧ್ಯಾಯಂ
ಸಂಪೂರ್ಣಂ

ಏಳನೆಯ ಅಧ್ಯಾಯ.

ಎಲೈ ಶ್ರೋತೃಗಳಿರಾ! ಸಾರತರವಾದ ಸಚ್ಚರಿತ್ರಗ್ರಂಥವೇ ಕ್ಷೀರಸಾಗರವು. ನಾನಾದೃಷ್ಟಾಂತಂಗಳೆಂಬುವೇ ಜಲಚರಂಗಳು. ಕಥಾರಸವೇ ಪಯಸ್ಸು. ಪ್ರೀತಿಯೆಂಬ ತೆರೆಗಳು ಹಾರಿ ಜ್ಞಾನವೆಂಬ ಆಕಾಶವಂ ಮುಟ್ಟಲು ಇಚ್ಛಿಸುವುವು. ಆಸ್ತಿಕರೆಂಬ ಮುಗಿಲ್ಗಳು ಓಡಿಬಂದು ರಸವಂ ವರ್ಷಿಸುವುವು. ಅವು ಸಂಸಾರತಾಪದಿಂದ ಸಂತಪ್ತರಾಗಿರುವರ ಮೇಲೆ ವರ್ಷಿಸುವುವು. ಆನಂದವೆಂಬುದೇ ಲಹರಿ. ಶ್ರೀಪಾಂಡುರಂಗನ ಕೃಪೆಯೆಂಬ ಚಂದ್ರಿಕೆಯಿಂದ ಈ ಸಮುದ್ರವು ಅಭಿವೃದ್ಧಿಗೊಂಡು ಪರಿಶೋಭಿಸುವುದು. ಈ ಸಚ್ಚರಿತ್ರಗ್ರಂಥಸಾಗರದಲ್ಲಿ ಯಾವನು ಅವಗಾಹನವಂ ಮಾಡುವನೋ ಅವನ ಅತಿದಾರುಣವಾದ ಭವರೋಗವು ನಶಿಸಿ ಹೋಗುವುದು.

ಪೂರ್ವಾಧ್ಯಾಯದಲ್ಲಿ ಸಾಧುಗಳಿಂದ ಬದುಕಿಸಲ್ಪಟ್ಟ ಕಬೀರಪುತ್ರನ ಪಾವನಕಥೆಯು ತಮ್ಮಿಂದ ಕೇಳಲ್ಪಟ್ಟಿತು. ಸಾರತರವಾದ ಮುಂದಣಕಥೆಯನ್ನು ಈಗ ಆಲಿಸಬೇಕು.

ಒಂದುದಿವಸ ಕಬೀರನು ರಾತ್ರಿವೇಳೆಯಲ್ಲಿ ಅಂಗಡಿಬೀದಿಯಲ್ಲಿ ಪರಮಾನಂದಭರಿತನಾಗಿ ಕೈಯಿಂದ ತಂಬೂರಿಯಂ ಮಿಡಿಯುತ್ತ ಮಂಜುಳಸ್ವರದಿಂ ಕೀರ್ತನವಂ ಮಾಡುತ್ತ ಶ್ರೀರಾಮನ ಸ್ವರೂಪವಂ ಮನದಲ್ಲಿ ಧ್ಯಾನಿಸುತ್ತ ಪ್ರೇಮಾತಿಶಯದಿಂದ ಶ್ರೀರಾಮಭಜನೆಮಾಡುತ್ತ ಹೊರಟನು. ಅವನ ಮನದಲ್ಲಿ ಲಜ್ಜೆಯೂ ಮೋಹಮಮತೆಯೂ ಮಾನಾಪಮಾನಗಳೂ ಯಾವುದೂ ತೋರಲಿಲ್ಲ. ಶ್ರೀರಾಮಧ್ಯಾನದಲ್ಲಿಯೇ ಲೀನನಾಗಿದ್ದನು. ಆಗ ಅಲ್ಲಿ ಒಂದೆಡೆಯಲ್ಲಿ ಒಬ್ಬ ವೈಶ್ಯಸ್ತ್ರೀಯು ಬೀದಿ

ತಿದ್ದುದಂ ಕಂಡನು. ಒಡನೆಯೆ ಕಬೀರನ ಚಿತ್ತವು ಮಹತ್ತಾದ ಅನುತಾಪದಿಂದ ವ್ಯಾಕುಲವಾಯಿತು. ದೀರ್ಘಸ್ವರದಿಂದ ರೋದನವಂ ಮಾಡಲು ತೊಡಗಿದನು. ಅದಂ ಕಂಡು ಕೆಲವರು ನಕ್ಕರು. ಕೆಲವರು ಆಶ್ಚರ್ಯಪಟ್ಟರು. ಕೆಲವರು—ಏಕೆ ರೋದನವಂ ಮಾಡುವೆ ? ಯಾರು ನಿನ್ನನ್ನು ಸಂಕಟಪಡಿಸಿದರು ? ನಮ್ಮಲ್ಲಿಹೇಳು—ಎಂದು ಕೇಳಿದರು. ಯಾರು ಎಷ್ಟು ಬಗೆಯಿಂದ ಕೇಳಿದರೂ ಇವರಿಂದ ತನ್ನ ದುಃಖಪರಿಹಾರವಾಗುವುದಿಲ್ಲವೆಂದು ಒಬ್ಬನಿಗೂ ಕಬೀರನು ಪ್ರತ್ಯುತ್ತರವನ್ನು ಕೊಡಲಿಲ್ಲ. ಆಗದವನೊಡನೆ ದುಃಖವಂ ಹೇಳಿಕೊಳ್ಳಲು ಮತ್ತೂ ಸಂತಾಪಹೆಚ್ಚುವುದು. ಕಪ್ಪೆಯು ಸರ್ಪದೊಡನೆ ಸುಖದುಃಖವಂ ಹೇಳಿಕೊಳ್ಳಬಹುದೇ ? ಅತ್ಯಧಿಕವಾದ ಪಿಪಾಸೆಯಿದ್ದರೂ ಚಾತಕಗಳು ಭೂಜಲವನ್ನು ಎಂತು ಮುಟ್ಟುವುದಿಲ್ಲವೋ ಅಂತು ಎಂತಹಸಂಕಟವೊದವಿದರೂ ಸಂತರು ಕುಜನರ ನುಡಿಯನ್ನು ಗ್ರಹಿಸರು. ಅಭಿಜ್ಞರು ಎಂತು ಮದ್ಯಪಾಯಿಗಳಿಗೆ ನಿಯಮನೀತಿಗಳನ್ನು ಬೋಧಿಸರೋ, ವಕ್ತೃವು ಎಂತು ದುಷ್ಟನಾದ ಶ್ರೋತೃವಿಗೆ ವಿಷಯವನ್ನು ಉಲ್ಲಾಸದಿಂದ ಬೋಧಿಸನೋ, ಚತುರರು ಪಿಸುಣನಿಗೆ ಎಂತು ಏಕಾಂತದ ಮಾತುಗಳನ್ನು ಹೇಳರೋ, ಅಂತು ಕಬೀರನು ತಮೋಗುಣಭೂಯಿಷ್ಠರಾದ ಆಕುಜನರಿಗೆ ತನ್ನ ಮನದ ವಿಚಾರವನ್ನು ತಿಳಿಯಿಸಲಿಲ್ಲ. ಅನುತಾಪದಿಂದ ತನ್ನಲ್ಲಿಯೇ ದುಃಖಿಸುತ್ತಿದ್ದನು. ಜನಗಳು ಪರಸ್ಪರವಾಗಿ—ಇವನೇಕೋ ಉನ್ಮತ್ತನಾಗಿ ಸುಮ್ಮನೆ ರೋದನವಂ ಮಾಡುತ್ತಿರುವನು. ಮಾತನಾಡಿಸಿದರೂ ಆಡುವುದಿಲ್ಲ—ಎಂದು ನುಡಿದುಕೊಳ್ಳುತ ಹೋದರು. ಅಷ್ಟುಹೊತ್ತಿಗೆ ಅಲ್ಲಿಗೆ ಒಬ್ಬ ನಿರಂಜನನು ಆಕಸ್ಮಿಕವಾಗಿ ಬಂದು ಸೇರಿದನು. ಕಬೀರನನ್ನು ನೋಡಿ—ಏಕೆ ಅಳುವೆ ?—ಎಂದು ಬೆಸಗೊಂಡನು. ಅವನು ಕಣ್ಣುತೆರೆದು ನೋಡಿ ಈತನು ಸುಜ್ಞಾನಪರಿಪೂರ್ಣನೆಂದು ತಿಳಿದು "ಈತನಲ್ಲಿ ಯಾಥಾರ್ಥ್ಯವಂ ಹೇಳಲು ಏನಾದರೂ ಪರಿಹಾರವನ್ನು ಹೇಳುವನು" ಎಂದು ಬಗೆದು, ರೋಗಿಯು ತನ್ನ ಸಂಕಟವನ್ನು ಮರೆಮಾಚದೆ ಸದ್ವೈದ್ಯನಲ್ಲಿ ಹೇಳಿಕೊಳ್ಳುವಂತೆ, ಬಾಲೆಯು ಅತ್ತೆಯಮನೆಯ ಕೋಟಲೆಯನ್ನು ವಂಚಿಸದೆ ತನ್ನ ತಾಯಿಯಲ್ಲಿ ಉಲ್ಲಾಸದಿಂದ ಹೇಳಿಕೊಳ್ಳುವಂತೆ, ಸಚ್ಛಿಷ್ಯನು ಮನದಲ್ಲಿ ಉಂಟಾದ ಸಂಶಯವನ್ನು ಸದ್ಗುರುವಿನಲ್ಲಿ ತಿಳಿಯಿಸುವಂತೆ, ತನ್ನ ಮನದ ಸಂಕಟವನ್ನು ಆತನಲ್ಲಿ ಸದ್ಭಾವದಿಂದ ತಿಳಿಯಿಸಿದನು:—ಎಂತೆನೆ, ಎಲೈ ಸುಜ್ಞಾನಿಯೆ ! ತಾವು ನನ್ನಮನದ ಅನುತಾಪದ ಪರಿಯನ್ನು ದಯೆಯಿಟ್ಟು ಬೆಸಗೊಳ್ಳುವಿರಿ. ಅದರಿಂದ ತಮ್ಮಲ್ಲಿ ಬಿನ್ನವಿಸಿಕೊಳ್ಳುವೆನು. ಆಲಿಸಬೇಕು. ಇಲ್ಲಿ ಬೀಸುವ ಕಲ್ಲನ್ನು ಕಂಡೆನು. ಕಾಳೆಲ್ಲವೂ ಇದರಲ್ಲಿ ಹಿಟ್ಟಾಗುವುದು; ಭವಚಕ್ರದಲ್ಲಿ ಬೀಳುವುದರಿಂದ ತನಗೂ ಇದೇಗತಿಯಾಗುವುದು-ಎಂಬ ಭೀತಿಯು ನನಗುಂಟಾಗಿರುವುದು. ಇದರಿಂದ ವ್ಯಾಕುಲನಾಗಿ ಶೋಕಿಸುತ್ತಿರುವೆನು. ತಾವಲ್ಲದೆ ನನ್ನದುಃಖವನ್ನು ಪರಿಹರಿಸುವರಿನ್ನಾರೂ ಇಲ್ಲ-ಎಂದು.

ಆ ನಿರಂಜನನು ಆತನ ಮಾತನ್ನು ಕೇಳಿ-ಅಯ್ಯಾ! ಅದಕ್ಕೆ ನೀನು ವ್ಯಸನ ಪಡುವುದೇತಕ್ಕೆ? ಬೀಸುವ ಕಲ್ಲನ್ನು ನೋಡಿದುದರಿಂದ ಮನದಲ್ಲಿ ಇಷ್ಟು ಅನುತಾಪ ವುಂಟಾಯಿತೇ? ಎಲೈ ಭಾಗವತನೆ! ಈ ವಿಷಯದಲ್ಲಿ ಉಂಟಾದ ನಿನ್ನ ಸಂಶಯ ವನ್ನು ನಾನು ಪರಿಹರಿಸುವೆನು; ಕೇಳು. ಈಬೀಸುವ ಕಲ್ಲಿಗೆ ಆಧಾರವಾದ ತಳದ ಗೂಟವನ್ನು ಆಶ್ರಯಿಸಿ ನಿಂತ ಕಾಳು ಯಾವುದೋ ಅದು ಈ ಚಕ್ರದಲ್ಲಿ ಚೂರ್ಣ ವಾಗುವುದಿಲ್ಲ. ಅಂತು ಜಗದಾಧಾರವಾದ ಪರಬ್ರಹ್ಮವಸ್ತುವನ್ನು ಅವಲಂಬಿಸಿ ಆ ಧ್ಯಾನದಲ್ಲಿರುವವರು ಮೃತ್ಯುಸಂಸಾರಚಕ್ರದಲ್ಲಿ ಎಂದಿಗೂ ಚೂರ್ಣರಾಗಲಾರರು. ನೀನು ಸಾತ್ತ್ವಿಕನು; ಧೀರನು; ವೈರಾಗ್ಯಶೀಲನು; ಶಾಂತಿಕ್ಷಮೆಗಳುಳ್ಳವನು; ಅಚಲನು. ಈ ಭಯದಿಂದ ಮನದಲ್ಲಿ ಏಕೆ ವ್ಯರ್ಥವಾಗಿ ತಲ್ಲಣಗೊಳ್ಳುವೆ?—ಎಂದು ನುಡಿದು ಪ್ರೇಮದಿಂದ ಆಲಿಂಗಿಸಿಕೊಂಡು ಸಮಾಧಾನಗೊಳಿಸಿ ಹೊರಟುಹೋದನು.

ಕಬೀರನು ಆತನ ಸದ್ಬೋಧನೆಯಿಂದ ಅನಾಕುಲನಾಗಿ ಅಲ್ಲಿಂದ ಹೊರಟು ತನ್ನ ಆಶ್ರಮವನ್ನು ಸೇರಿದನು. ನಿತ್ಯವೂ ಶ್ರೀಹರಿಯ ಗುಣಂಗಳಂವರ್ಣಿಸುತ್ತ, ಬಗೆಬಗೆಯ ಗೀತಪ್ರಬಂಧಗಳಂ ರಚಿಸಿ ಆನಂದದಿಂದ ಕೀರ್ತನವಂಮಾಡುತ್ತಿದ್ದನು.

ಒಂದು ದಿವಸ ತನ್ನ ಮನದಲ್ಲಿ ವಿಚಾರಮಾಡಿ "ಈ ಸಂಸಾರದಲ್ಲಿ ಸದ್ಗುರು ವನ್ನು ಆಶ್ರಯಿಸದವನು ಜೀವಚ್ಛವವು; ಕಾಂತೆಯಿಲ್ಲದ ಮನೆಯಂತೆಯೂ, ಬಾಲಕ ನಿಲ್ಲದ ವಿನೋದದಂತೆಯೂ, ಕುಂಕುಮವಿಲ್ಲದ ಅಲಂಕಾರರಚನೆಯಂತೆಯೂ, ಸದ್ಗು ರುವಿಲ್ಲದವನ ಬಾಳಿಕೆ ವ್ಯರ್ಥವು. ಫಲವಿಲ್ಲದೆ ವೃಕ್ಷವು ಬೆಳೆಯುವುದರಿಂದೇನು? ಶೌರ್ಯವಿಲ್ಲದೆ ರಾಜನು ಆಳುವುದರಿಂದೇನು? ಅಂತು ಸದ್ಗುರುಬೋಧವಿಲ್ಲದೆ ಮನು ಷ್ಯನು ಜೀವಿಸುವುದರಿಂದೇನು? ಉಪ್ಪಿಲ್ಲದ ಪಾಕದಂತೆಯೂ, ನೀರಿಲ್ಲದಕೆರೆಯಂ ತೆಯೂ, ಕಾಳಿಲ್ಲದ ತೆನೆಯಂತೆಯೂ, ಪ್ರೇಮವಿಲ್ಲದ ಕೀರ್ತನೆಯಂತೆಯೂ, ವಿಶ್ವಾ ಸವಿಲ್ಲದ ಸ್ನೇಹದಂತೆಯೂ, ಭೂತದಯೆಯಿಲ್ಲದ ಜ್ಞಾನದಂತೆಯೂ, ಅನುತಾಪವಿಲ್ಲದ ಸಂನ್ಯಾಸದಂತೆಯೂ, ದ್ರವ್ಯವಿಲ್ಲದ ಭೋಗವಿಲಾಸದಂತೆಯೂ, ನಿಯಮವಿಲ್ಲದ ವ್ರತ ದಂತೆಯೂ, ದುರ್ಲಭವಾದ ಈ ಮಾನುಷಜನ್ಮವನ್ನು ಪಡೆದೂ ಸದ್ಗುರುವಿನಾಶ್ರಯ ವಿಲ್ಲದವನ ಬದುಕು ಶೋಭಿಸುವುದಿಲ್ಲ. ಆದುದರಿಂದ ಮಹನೀಯರಾದ ಶ್ರೀರಾ ಮಾನಂದಸ್ವಾಮಿಗಳನ್ನು ಸದ್ಭಾವದಿಂದ ಶರಣುಹೊಕ್ಕು ಆಶ್ರಯಿಸಬೇಕು" ಎಂದು ಮನದಲ್ಲಿ ನಿಶ್ಚಯಮಾಡಿದನು. ಅನೇಕರಾಜಕುಮಾರರಿದ್ದರೂ ಅವರನ್ನು ಬಿಟ್ಟು ಜಾನಕಿಯು ಶ್ರೀರಾಮಚಂದ್ರನಲ್ಲಿಯೇ ಮನವಿಟ್ಟಂತೆ, ಶ್ರೀಕೃಷ್ಣನ ಸಚ್ಚರಿತ್ರವಂ ಕೇಳಿ ರುಕ್ಮಿಣಿಯು ಆತನಲ್ಲಿಯೇ ಪ್ರೇಮವನ್ನು ಮಾಡಿದಂತೆ, ಅನೇಕರಿದ್ದರೂ ಅವ ರೆಲ್ಲರನ್ನೂ ಬಿಟ್ಟು ಕಬೀರನು ಶ್ರೀರಾಮಾನಂದರಲ್ಲಿಯೇ ಪ್ರೀತಿಯನ್ನು ಮಾಡಿ ಅವರ ಚರಣಧೂಳಿಯನ್ನು ಬಯಸುತಿದ್ದನು. ಒಂದು ದಿವಸ ಏಕಾಂತಸಮಯ ವನ್ನು ತಿಳಿದು ರಾಮಾನಂದರ ಆಶ್ರಮವನ್ನು ಸೇರಿ ದೂರದಲ್ಲಿ ನಿಂತು—ಸ್ವಾಮಿಯೆ!

ನನ್ನಮೇಲೆ ಕೃಪೆಯಂ ಮಾಡಬೇಕು—ಎಂದು ಬಿನ್ನವಿಸಿಕೊಂಡನು. ಅವರು ಈ ಮಾತಂ ಕೇಳಿ ಕಿವಿಯಲ್ಲಿ ಬೆರಲನ್ನು ಇಟ್ಟುಕೊಂಡು ಏಕಾಂತಾಸನದಲ್ಲಿ ಹೋಗಿ ಕುಳಿತುಕೊಂಡರು. ಕಬೀರನು ಹೊರಗೇ ನಿಂತುಕೊಂಡು ಮಧುರಸ್ವರದಿಂದ "ನಾನು ದೀನನು; ಅನಾಥನು. ಬಾಗಿಲಲ್ಲಿ ನಿಂತಿರುವೆನು. ಅಭಯವಂಕೊಟ್ಟು ಅನುಗ್ರಹಿಸಬೇಕು—ಎಂದು ಮತ್ತೆ ಅರಿಕೆಮಾಡಿದನು. ಅದಕ್ಕೆ ಅವರು ನೀನು ಮ್ಲೇಚ್ಛಜಾತಿಯಲ್ಲಿ ಹುಟ್ಟಿದವನು. ನಿನಗೆ ಉಪದೇಶಮಾಡಲು ನಮಗೆ ಅಧಿಕಾರ ವಿಲ್ಲ. "ಭೂಮಿಯನ್ನು ನೋಡಿ ಬೀಜವಂ ಬಿತ್ತಬೇಕು. ಪಾತ್ರವಂನೋಡಿ ದಾನವಂ ಮಾಡಬೇಕು. ವರನಂ ನೋಡಿ ಕನ್ಯಕೆಯಂ ಕೊಡಬೇಕು. ಯೋಗ್ಯನಂ ನೋಡಿ ಉಪದೇಶವಂ ಮಾಡಬೇಕು" ಎಂದು ಅಭಿಜ್ಞರು ಹೇಳುವರು. ಅನಧಿಕಾರಿಯಾದ ನಿನಗೆ ಉಪದೇಶಮಾಡುವುದೇನಿದೆ ?—ಎಂದರು. ಆಗ ಕಬೀರನು ಮತ್ತೆ ಅವರನ್ನು ಕುರಿತು-ಸ್ವಾಮಿ! ತಮ್ಮ ಚರಣವನ್ನು ಮನೋವಾಕ್ಕಾಯಗಳಿಂದಲೂ ನಂಬಿರುವೆನು. ಈ ವಿಷಯದಲ್ಲಿ ವಂಚನೆಯಿಲ್ಲ. ಸೂರ್ಯನು ಉದಯಿಸಿದೊಡನೆಯೆ ಕಮಲಂಗಳಲ್ಲಿ ತಾನು ಪ್ರೀತಿಯನ್ನಿಡುವುದಿಲ್ಲ. ಆದರೂ ಅವುಗಳು ಆತನಲ್ಲಿ ಪ್ರೀತಿಯನ್ನಿಟ್ಟು ಉಲ್ಲಾಸದಿಂದ ಅರಲುವುವು. ಅದರಂತೆ ತಾವು ನನ್ನಲ್ಲಿ ಸದ್ಯಃ ಪ್ರೀತಿಯನ್ನು ಮಾಡದಿದ್ದರೂ, ನಾನು ತಮ್ಮ ಚರಣದಲ್ಲಿ ಅನನ್ಯಭಾವದಿಂದ ಪ್ರೀತಿಯನ್ನು ಇಟ್ಟಿರುವೆನು. ಒಬ್ಬ ಬೇಟೆಗಾರನು ಮಣ್ಣಿನ ದ್ರೋಣಾಚಾರ್ಯರನ್ನು ಮಾಡಿ ಪೂಜಿಸಿ ಸಿದ್ಧಿಯನ್ನು ಹೊಂದಲಿಲ್ಲವೆ ? ಅಂತು ಮನದಲ್ಲಿ ತಮ್ಮ ಪಾದವಂ ದೃಢವಾಗಿ ನಂಬಿರುವ ನನಗೆ ಸಿದ್ಧಿಯಾಗದೆ ಇರುವುದಿಲ್ಲ—ಎಂದು ನುಡಿದು ಭಕ್ತಿವಿಶೇಷದಿಂದ ಸಾಷ್ಟಾಂಗವಂದನೆಯಂ ಮಾಡಿ ಅವರ ಚರಣವನ್ನೇ ಮನದಲ್ಲಿ ಧ್ಯಾನಿಸುತ್ತ ತನ್ನ ಮನೆಯಂ ಸೇರಿದನು.

ಒಂದು ದಿನ ಏಕಾಂತದಲ್ಲಿ ಕುಳಿತು ತನ್ನ ಮನದಲ್ಲಿ "ಗುರುಗಳ ಮುಖದಿಂದ ರಾಮನಾಮವಂ ನಾನು ಕೇಳಬೇಕು. ಮತ್ತು ಅವರ ಪಾದಸ್ಪರ್ಶವು ನನಗೆ ಆಗಬೇಕು. ಇದಕ್ಕೆ ಏನುಪಾಯವಂ ಮಾಡಬೇಕು ?" ಎಂದು ಚಿಂತಿಸಿ ಬಳಿಕ ಅದೊಂದುಪರಿಯಂ ನಿಶ್ಚಯಿಸಿಕೊಂಡು, ಗಂಗಾನದಿಗೆ ಹೋಗುವ ದಾರಿಯಲ್ಲಿ ಒಂದೆಡೆಯೊಳ್ ಭೂಮಿಯಂ ಅಗೆದು ಹಳ್ಳವನ್ನು ಮಾಡಿ ಅದರಲ್ಲಿ ಮಲಗಿಕೊಂಡು, ಸೂರ್ಯೋದಯವನ್ನು ಬಯಸುತ್ತಿರುವ ಮುಕುಳಿತವಾದ ತಾವರೆಯಂತೆಯೂ, ಮೇಘೋದಯವನ್ನು ಪ್ರತಿಪಾಲಿಸುತ್ತಿರುವ ತೃಷಾರ್ತವಾದ ಚಾತಕದಂತೆಯೂ, ಪೂರ್ಣಚಂದ್ರನ ಸಂದರ್ಶನವನ್ನು ಅಪೇಕ್ಷಿಸುತ್ತಿರುವ ಚಕೋರದಂತೆಯೂ, ತಾಯ ಆಗಮನವನ್ನು ಹಾರೈಸುತ್ತಿರುವ ಹಸಿವುಗೊಂಡ ಬಾಲಕನಂತೆಯೂ, ಪರ್ಜನ್ಯನ ದರ್ಶನವನ್ನು ನಿರೀಕ್ಷಿಸುತ್ತಿರುವ ಅನಾವೃಷ್ಟಿತಪ್ತವಾದ ಜನದಂತೆಯೂ, ಚಿಂತಾಕುಲನಾಗಿ ರಾಮಾನಂದಗುರುಗಳ ಆಗಮನವನ್ನು ತವಕದಿಂದ ಇದಿರುನೋಡುತ್ತಿದ್ದನು.

ರಾತ್ರಿ ಕಳೆಯಿತು. ಬೆಳಗಿನಜಾವವಾಯಿತು. ಉಷಃಕಾಲದಲ್ಲಿ ರಾಮಾನಂದಸ್ವಾಮಿಗಳವರು ಸ್ನಾನಕ್ಕೆ ಗಂಗಾನದಿಯನ್ನು ಕುರಿತು ತ್ವರೆಯಿಂದ ಆ ದಾರಿಯಲ್ಲಿ ಬಂದು ಕಬೀರನನ್ನು ಎಡಹಿದರು. ಅವರ ಪಾದವು ಆತನಿಗೆ ತಗಲಿತು. ಅವರು ಎಡಹಿ ಮುಖದಿಂದ "ರಾಮರಾಮ" ಎಂದರು. ಆ ನುಡಿಯಂ ಕೇಳಿದೊಡನೆಯೆ ಕಬೀರನು ಎದ್ದು ನಿಂತುಕೊಂಡು—ಸ್ವಾಮಿ ! ನನ್ನಲ್ಲಿ ಇಂದು ಅಪರಿಮಿತವಾದ ಅನುಗ್ರಹವಂ ಮಾಡಿದಿರಿ. ಚೆನ್ನಾಗಿಯೂ ನಿಮ್ಮ ಪಾದಗಳು ನನ್ನ ಹಣೆಗೆ ಸೋಂಕಿದುವು. ತಮ್ಮ ಮುಖದಿಂದ ಉಚ್ಚರಿತವಾದ "ರಾಮರಾಮ" ಎಂಬ ಮಂತ್ರದ ಶ್ರವಣವೂ ನನಗಾಯಿತು. ಮೂರುಲೋಕದಲ್ಲಿಯೂ ನನ್ನಂತಹ ಭಾಗ್ಯವಂತನು ಯಾರೂಇಲ್ಲ. ಅನೇಕಜನ್ಮಗಳ ಸುಕೃತದ ಫಲದಿಂದು ಪ್ರಾಪ್ತವಾಯಿತು. ಇಂದಿಗೆ ನನ್ನ ಜನನ ಮರಣಂಗಳು ದೂರವಾದುವು. ಸದ್ಗುರುಪಾದವಂ ಪಡೆದೆನು. ಅದೃಷ್ಟವು ಕೂಡಿಬರಲು, ಮಳಲೂ ದಿವ್ಯಮಣಿಗಳಾಗುವುವು. ಬಾವಿಯಲ್ಲಿರುವ ಉಪ್ಪುನೀರೂ ಅಮೃತದಂತಾಗುವುದು—ಎಂದು ಪರಮಾನಂದಭರಿತನಾಗಿ ಅವರ ಇದಿರಿಗೆ ಕುಣಿಯಲು ಪ್ರಾರಂಭಿಸಿದನು.

ಮೃಷ್ಟಾನ್ನವಂ ಪಡೆದ ಕ್ಷುಧಿತನಂತೆಯೂ, ನಿಧಿಯಂ ಪಡೆದ ಬಡವನಂತೆಯೂ, ದಿವ್ಯರಸವಂ ಸೇವಿಸಿದ ರೋಗಿಯಂತೆಯೂ, ಸತ್ಸಂಗತಿಯಂ ಪಡೆದ ಭಾವುಕನಂತೆಯೂ, ತಾಯಿಯಂ ಕಂಡ ಅತ್ತೆಮನೆಯ ಸೊಸೆಯಂತೆಯೂ, ಭುಜಬಲದಿಂದ ಸಿಂಹಾಸನವೇರುವ ರಾಜನಂತೆಯೂ, ಗೋದಾವರಿಯಂ ಪಡೆದ ಗೌತಮನಂತೆಯೂ, ಗಂಗೆಯಂ ತಂದ ಭಗೀರಥನಂತೆಯೂ, ಅರಣ್ಯದಲ್ಲಿ ಆಕಸ್ಮಿಕವಾಗಿ ಶ್ರೀರಾಮಸಂದರ್ಶನವಂ ಪಡೆದ ಆಂಜನೇಯನಂತೆಯೂ, ಉಲ್ಲಾಸಗೊಂಡು ಮನಸ್ಸಮಾಧಾನದಿಂದ ಇರುವ ಆ ಕಬೀರನನ್ನು ನೋಡಿ ಅವರು ಸಕ್ಕು ಮನದಲ್ಲಿ ಆಶ್ಚರ್ಯಮಂತಾಳಿ ಯಾವ ಮಾತನ್ನೂ ಆಡದೆ ಮೌನದಿಂದ ಸ್ನಾನಕ್ಕೆ ತೆರಳಿದರು. ಬಳಿಕ ಮನದಲ್ಲಿ "ಈ ಕಬೀರನಂತಹ ಮನೋನಿಶ್ಚಯವುಳ್ಳವನು ಎಲ್ಲಿಯೂ ಕಾಣುವುದಿಲ್ಲ. ಆದರೆ ಇವನಂ ಕೆಣಕಿ ಇವನ ಮನಸ್ಸನ್ನು ಪರೀಕ್ಷಿಸಿನೋಡಬೇಕು. ಚಿನ್ನವನ್ನು ಬೆಂಕಿಯಲ್ಲಿ ಹಾಕಿ ಕಾಸಿದಹೊರತು ಅದು ಒಳ್ಳೆಯದೆಂಬುದು ಸ್ಪಷ್ಟವಾಗುವುದಿಲ್ಲ. ವಿಶ್ವಾಮಿತ್ರಮಹರ್ಷಿಯು ಛಲದಿಂದ ಹರಿಶ್ಚಂದ್ರನ ಮನೋದಾರ್ಢ್ಯವನ್ನೂ, ಪಾರ್ವತೀಪತಿಯು ಸಿರಿಯಾಳನ ಧರ್ಮಬುದ್ಧಿಯನ್ನೂ, ಶ್ರೀಕೃಷ್ಣನು ದಾನಾರ್ಥಿಯಾಗಿ ಶರಪಂಜರದಲ್ಲಿ ಬಿದ್ದಿದ್ದ ಕರ್ಣನ ಔದಾರ್ಯವನ್ನೂ ಪರೀಕ್ಷಿಸಿದಂತೆ, ಬಾಹ್ಯಕೋಪವಂ ತೋರಿ ಕಬೀರನ ಮನೋನಿಶ್ಚಯವಂ ಪರೀಕ್ಷಿಸುವೆನು" ಎಂದು ಆಲೋಚಿಸಿದರು.

ಒಂದು ದಿನ ಕಬೀರನು ಅಂಗಡಿಬೀದಿಯಲ್ಲಿ ಪರಮಾನಂದಭರಿತನಾಗಿ ಸ್ವೇಚ್ಛೆಯಿಂದ ಕುಣಿಯುತ್ತ ನೇತ್ರಗಳಿಂದ ಆನಂದಬಾಷ್ಪವಂ ಸುರಿಯಿಸುತ್ತ "ಗುರುಗಳಾದ

ರಾಮಾನಂದರ ಪಾದಂಗಳಂ ಹೃದಯದಲ್ಲಿ ಧ್ಯಾನಿಸಲು ಸ್ವಾನಂದವಾಗುವುದು" ಎನ್ನುತ್ತ ಭಗವನ್ನಾಮಕೀರ್ತನೆಯಂ ಮಾಡುತ್ತಿದ್ದನು.

ರಾಮಾನಂದರು ದೂರದಿಂದ ಕಬೀರನು ನುಡಿಯುತ್ತಿದ್ದುದನ್ನು ಕೇಳಿ ಸಮೀಪಕ್ಕೆ ಬಂದು ಕೋಪವನ್ನು ಅಭಿನಯಿಸಿ—ಎಲವೋ! ನೀನು ನಮ್ಮ ಶಿಷ್ಯನೆಂದು ಹೇಳಿ ಕೊಳ್ಳುತ್ತಿರುವೆ. ನಾವು ನಿನಗೆ ಎಂದು ಉಪದೇಶವಂ ಕೊಟ್ಟಿರುವೆವು? ಅದಕ್ಕೆ ಯಾರನ್ನು ಸಾಕ್ಷಿಯಿಟ್ಟು ಇರುವೆ? ಅದನ್ನು ನಮಗೆ ಹೇಳು—ಎಂದು ತಮ್ಮ ಪಾದ ದಲ್ಲಿದ್ದ ಪಾದುಕೆಯಂ ತೆಗೆದುಕೊಂಡು ಆತನ ತಲೆಯಮೇಲೆ ಹೊಡೆದರು. ತಂದೆಯು ಮಗನ ವಿಷಯದಲ್ಲಿಯೂ, ತಾಯಿಯು ಮಗಳ ವಿಷಯದಲ್ಲಿಯೂ, ಗುರುವು ಶಿಷ್ಯನ ವಿಷಯದಲ್ಲಿಯೂ ಕೋಪಿಸಿಕೊಳ್ಳುವಂತೆ ಕೋಪಗೊಂಡು, ರಾಮನಂದರು ಅಂತು ಕಬೀರನನ್ನು ಹೊಡೆಯುವುದೂ, ಆತನ ತಲೆಯಲ್ಲಿ ರಕ್ತವು ಜಳಜಳನೆ ಸುರಿಯಿತು. ಅದಕ್ಕೆ ಕಬೀರನು ಬಹುವಾಗಿ ಸಂತೋಷಿಸಿದನು. ಅವರನ್ನು ಕುರಿತು—ಚಿತ್ತ ವಿಟ್ಟು ಆಲಿಸಬೇಕು. ನನಗೆ ಆಗ ತಾವು ಉಪದೇಶವಂ ಕೊಟ್ಟುದಕ್ಕೆ ಸಾಕ್ಷಿಯಾರೂ ಇರಲಿಲ್ಲವೆಂದು ನಿರಾಕರಿಸಿದಿರಲ್ಲಾ! ಈಗ ಸರ್ವರೂ ನೋಡುತ್ತಿರಲಾಗಿ ನನ್ನ ಶಿರ ಸ್ಸಿನಲ್ಲಿ ಪಾದುಕೆಯನ್ನಿರಿಸಿದಿರಿ. ಇದನೆಲ್ಲರೂ ತಿಳಿದಿರಲಿ; ಪೃಥಿವ್ಯಾದಿಪಂಚಮಹಾ ಭೂತಗಳನ್ನು ಸಾಕ್ಷಿಗಳಾಗಿಟ್ಟುಕೊಂಡೇ ಈಗ ನಿಮ್ಮ ಪಾದುಕೆಯನ್ನು ಶಿರದಲ್ಲಿ ಧರಿಸಿರುವೆನು—ಎಂದು ನುಡಿಯಲು, ಗುರುಗಳು ಬಹುವಾಗಿ ಉಲ್ಲಾಸಗೊಂಡು ಆತನ ತಲೆಯಮೇಲೆ ಹಸ್ತವನ್ನಿರಿಸಿ—ಎಲೈ ಕಬೀರನೆ! ನಿನ್ನ ಮನೋನಿಶ್ಚಯಕ್ಕೆ ನಾವು ಸಂತೋಷಿಸಿದೆವು. ಇನ್ನು ಸರ್ವಕಾಲದಲ್ಲಿಯೂ 'ರಾಮ ಕೃಷ್ಣ' ಎಂಬ ಮಂ ತ್ರವಂ ಜಪಿಸುತ್ತ ಭಜನೆಯಂ ಮಾಡುತ್ತಿರು—ಎಂದುಪದೇಶಿಸಿ ತಮ್ಮ ಎಡೆಗೆ ಹೊರಟುಹೋದರು.

ಕಬೀರನು ಸದ್ಗುರುಗಳ ಉಪದೇಶವಂ ಭಕ್ತಿಯಿಂದ ಕೈಕೊಂಡು ಸರ್ವಕಾಲ ದಲ್ಲಿಯೂ ಸಂತುಷ್ಟಚಿತ್ತನಾಗಿ ಶ್ರೀರಾಮನ ಗುಣಗಳಂ ವರ್ಣಿಸಿ ಬಗೆವಗೆಯ ಪ್ರಬಂಧಂಗಳಂ ರಚಿಸುತ್ತ, ದುರಾಶೆಯನ್ನೂ ಲೌಕಿಕಮಾನವನ್ನೂ ವಿಷಯಾಸಕ್ತಿ ಯನ್ನೂ ಮಮತೆಯನ್ನೂ ಬಿಟ್ಟು ಅಹರ್ನಿಶದಲ್ಲಿಯೂ ಕೀರ್ತನೆಯಂ ಮಾಡುತ್ತಿದ್ದನು.

ಕಾಶೀಪಟ್ಟಣದ ಸಕಲರೂ ಕಬೀರನನ್ನು ಧನ್ಯನೆಂದು ಹೊಗಳಿದರು. ಕಬೀ ರನು ಇಂತಹ ಸ್ಥಿತಿಯನ್ನು ಹೊಂದಿರಲು, ದುರ್ಜನರು ಸೈರಿಸಲಿಲ್ಲ. ಸಜ್ಜನರ ಕೀರ್ತಿಯಂ ಕೇಳಿ ದುರ್ಜನರು ಸಂತಾಪಪಡುವುದು ಸ್ವಭಾವಸಿದ್ಧವು. ಸೂರ್ಯನು ಉದಯಿಸಲು ದಿವಾಭೀತಂಗಳು ಸಂಕಟಪಡುವಂತೆ, ಚಂದ್ರೋದಯಮಂ ಕಂಡು ಕಳ್ಳರು ವ್ಯಾಕುಲಗೊಳ್ಳುವಂತೆ, ಉದಾರನ ಕೀರ್ತಿಯಂ ಕೇಳಿ ಲೋಭಿಗಳು ತಪ ತಪಪಡುವಂತೆ, ಪತಿವ್ರತೆಯ ನಡೆವಳಿಯಂ ನೋಡಿ ಜಾರೆಯು ಸಂತಾಪಪಡುವಂತೆ, ಕಬೀರನ ನಡೆವಳಿಯಂ ಕಂಡು ಪಿಶುನರು ಸೈರಿಸಲಾರದೆ ಸಂಕಟಗೊಂಡು ಬಂದು

ದಿನ ಏಕಾಂತದಲ್ಲಿ ಎಲ್ಲರೂ ಸೇರಿ “ ಕಬೀರನು ಸಾಧುಗಳ ಸೇವೆಯಂ ಮಾಡಿ ದೊಡ್ಡವನೆನಿಸಿಕೊಂಡಿರುವನು. ಮಮತೆಯನ್ನು ಬಿಟ್ಟು ತನ್ನ ಮಗನನ್ನೂ ವಧಿಸಿದನು. ಅಂದು ಮೊದಲುಗೊಂಡು ಇವನನ್ನು ಎಲ್ಲರೂ ಬಹುಮಾನಿಸುವರು. ಯಾವುದಾದರೂ ಒಂದು ರೀತಿಯಿಂದ ಇವನಿಗೆ ಅಪಮಾನವಂ ಮಾಡಬೇಕು. ಇದಕ್ಕೆ ಈ ಕಬೀರನಿಗೆ ತಿಳಿಯದಂತೆ ಇವನ ಹೆಸರಿಂದಲೇ ಪತ್ರಿಕೆಯನ್ನು ಬರೆದು ದೇಶಾಂತರಗಳಿಂದ ಅನೇಕಸಾಧುಗಳನ್ನು ಬರಮಾಡಬೇಕು. ಎಲ್ಲರೂ ಒಟ್ಟಾಗಿ ಒಂದೇದಿನ ಇಲ್ಲಿಗೆ ಬಂದು ಸೇರುವಂತೆ ಪತ್ರಿಕೆಯಲ್ಲಿ ಬರೆಯಬೇಕು. ಪತ್ರಿಕೆಯನ್ನು ನೋಡಿಕೊಂಡು ಕಬೀರನಲ್ಲಿ ತಮಗಿರುವ ಪ್ರೀತಿವಿಶೇಷದಿಂದ ತಪ್ಪದೆ ಎಲ್ಲರೂ ಬಂದುಸೇರುವರು. ಆಗ ಕಬೀರನು ಅಷ್ಟುಮಂದಿಗಳನ್ನೂ ಸತ್ಕರಿಸುವುದಕ್ಕೆ ಶಕ್ತಿಯಿಲ್ಲದೆ ಚಿಂತಾಕ್ರಾಂತನಾಗಿ ದೇಶಾಂತರಕ್ಕೆ ಓಡಿಹೋಗುವನು. ಅಥವಾ ಅಸಂಖ್ಯಾಕರಾದ ಸಾಧುಗಳ ಗುಂಪನ್ನು ನೋಡಿ ಬೇಸರಪಡುವನು. ಕಡೆಗೆ ಸಾಧುಗಳು ಅವಮಾನಿತರಾಗಿ ಅವನಿಗೆ ಶಾಪವಂ ಕೊಡದೆ ಇರರು. ನಾವು ಇಂತು ಮಾಡಲು, ನಮ್ಮಮೇಲೆ ದೂರೇನೂ ಬರಲಾರದು. ಅನೇಕಸಂದರ್ಭದಲ್ಲಿ ನಾರದಮಹರ್ಷಿಯು ದೇವತೆಗಳಿಗೂ ದೈತ್ಯರಿಗೂ ಕಲಹವನ್ನುಂಟುಮಾಡಿ ವಿನೋದಗೊಂಡು ನೋಡಲಿಲ್ಲವೇ ! ಶಕುನಿ ಪಾಂಡವರಿಗೂ ಕೌರವರಿಗೂ ವಿರೋಧವನ್ನೆಸಗಿ ತಾನು ಸುಮ್ಮನೆ ನೋಡುತ್ತಿರಲಿಲ್ಲವೇ ? ಈಗ ನಾವು ಸಾಧುಮಹಾಜನಂಗಳಿಗೂ ಕಬೀರನಿಗೂ ಎಂತಾದರೂ ವೈಮನಸ್ಯವನ್ನುಂಟುಮಾಡಿ ವಿನೋದವಂ ನೋಡಬೇಕು ” ಎಂದು ಆಲೋಚಿಸಿ ಒಡನೆಯೆ ಕಬೀರನ ಹೆಸರಿಂದ ಅನೇಕಪತ್ರಿಕೆಗಳನ್ನು ಬರೆದು ಮಥುರ ಗೋಕುಲ ಬೃಂದಾವನ ಹರಿದ್ವಾರ ಮುಂತಾದ ಪುಣ್ಯಕ್ಷೇತ್ರಗಳಲ್ಲಿರುವ ಸಾಧುಮಂಡಲಿಯ ಬಳಿಗೆ ಕಳುಹಿಸಿದರು. ಅಹಹ ದುರ್ಜನರ ಸ್ವಭಾವವು ಎಂತಹುದು !! ಏನೆಂದು ಹೇಳೋಣ:—

ಶ್ಲೋ॥ ಊರ್ಜಿತಂ ಸಜ್ಜನಂ ದೃಷ್ಟ್ವಾ ದ್ವೇಷ್ಟಿ ನೀಚಃ ಪುನಃ ಪುನಃ ।
ಕಬಳೀಕುರುತೇ ಸ್ವಸ್ಥಂ ವಿಧುಂ ದಿವಿ ವಿಧುಂತುದಃ ॥

(ಟೀಕು॥ ನೀಚನು ಪ್ರಬಲನಾದ ಸತ್ಪುರುಷನನ್ನು ನೋಡಿ ಮತ್ತೆ ಮತ್ತೆ ದ್ವೇಷಿಸುವನು. ಎಂತೆಂದರೆ, ರಾಹು ಗಗನದಲ್ಲಿ ವಿರಾಜಿಸುವ ಚಂದ್ರನನ್ನು ಆಗಾಗ ನುಂಗುವನು.)

ಅಕರುಣತ್ವಮಕಾರಣವಿಗ್ರಹಃ ಪರಧನೇ ಪರಯೋಷಿತಿ ಚ ಸ್ಪೃಹಾ ॥
ಸುಜನಬಂಧುಜನೇಷ್ವಸಹಿಷ್ಣುತಾ ಪ್ರಕೃತಿಸಿದ್ಧಮಿದಂ ದುರಾತ್ಮನಾಮ್ ॥

(ಟೀ॥ ನಿರ್ದಯತ್ವವೂ, ನಿಷ್ಕಾರಣವಾದ ಕಲಹವೂ, ಪರಧನದಲ್ಲಿ ಮತ್ತು ಪರಸ್ತ್ರೀಯರಲ್ಲಿ ಆಸೆಯೂ, ಸಜ್ಜನರಲ್ಲಿ ಮತ್ತು ನಂಟರಿಷ್ಟರಲ್ಲಿ ಅಸಹನೆಯೂ ದುರಾತ್ಮರಿಗೆ ಸಹಜವಾದುದಲ್ಲವೇ ?)

ಬಹುನಿಷ್ಕಪಟದ್ರೋಹೀ ಬಹುಧಾನ್ಯೋಪಘಾತಕಃ ॥
ರಂಧ್ರಾನ್ವೇಷೀ ಚ ಸರ್ವತ್ರ ದೂಷಕೋ ಮೂಷಕೋ ಯಥಾ ॥

(ಟೀ॥ ದೂಷಕನಾದ ದುಷ್ಟನು ಮೂಷಕದಂತಿರುವನು. ಎಂತೆಂದರೆ:– ಬಹುನಿಷ್ಕಪಟದ್ರೋಹೀ, ಬಹುಧಾನ್ಯೋಪಘಾತಕಃ, ಸರ್ವತ್ರ ರಂಧ್ರಾನ್ವೇಷೀ– ಎಂಬ ಮೂರು ವಿಶೇಷಣಗಳು ದೂಷಕನಿಗೂ ಮೂಷಕಕ್ಕೂ ಸರಿಹೋಗುವುವು. ಮೂಷಕವು (ಇಲಿ) ಬಹುನಿಷ್ಕಪಟದ್ರೋಹೀ, ಬಹುನಿಷ್ಕ-ಬಹುದ್ರವ್ಯವು ಬೆಲೆಯಾಗುಳ್ಳ, ಪಟ-ವಸ್ತ್ರಕ್ಕೆ, ದ್ರೋಹೀ–ದ್ರೋಹವಮಾಡುವುದು. ಅಮೂಲ್ಯವಾದ ವಸ್ತ್ರವನ್ನು ಕಡಿದು ಹಾಳುಮಾಡುವುದೆಂದಭಿಪ್ರಾಯ. ಬಹುಧಾನ್ಯೋಪಘಾತಕಃ– ಬಹುವಾದ ಧಾನ್ಯವನ್ನು ನಾಶಮಾಡುವುದು. ಸರ್ವತ್ರ ರಂಧ್ರಾನ್ವೇಷೀ ಚ–ಮತ್ತು ಎಲ್ಲಾ ಕಡೆಯಲ್ಲಿಯೂ ಬಿಲವನ್ನು ಮಾಡಲು ಹುಡುಕುತ್ತಿರುವುದು. ದೂಷಕನೂ, ಬಹುನಿಷ್ಕಪಟದ್ರೋಹೀ-ಸ್ವಲ್ಪವೂ ಕಪಟವಿಲ್ಲದ ಸಜ್ಜನರಿಗೆ ದ್ರೋಹವಮಾಡುವನು. ಬಹುಧಾ+ಅನ್ಯೋಪಘಾತಕಃ–ಬಹುಪ್ರಕಾರವಾಗಿ ಅನ್ಯರಿಗೆ ಉಪಘಾತವನ್ನುಂಟುಮಾಡುವನು. ಸರ್ವತ್ರ ರಂಧ್ರಾನ್ವೇಷೀ ಚ–ಎಲ್ಲರಲ್ಲಿಯೂ ಅಥವಾ ಎಲ್ಲಾ ವಿಷಯಗಳಲ್ಲಿಯೂ ರಂಧ್ರಾನ್ವೇಷಣವನ್ನು ಮಾಡುವನು.)

ಅಯಃಪಿಂಡ ಇವೋತ್ತಪ್ತೇ ಖಲಾನಾಂ ಹೃದಯೇ ಕ್ಷಣಾತ್ |
ಪತಿತಾ ಅಪಿ ನೇಕ್ಷ್ಯಂತೇ ಗುಣಾಸ್ತೋಯಕಣಾ ಇವ ॥

(ಟೀ॥ ಕಾಯ್ದು ಕಬ್ಬಿಣದ ಗಟ್ಟಿಯಲ್ಲಿ ಜಲಬಿಂದುಗಳು ಬಿದ್ದರೂ ಎಂತು ಥಟ್ಟನೆ ಕಾಣದೆಹೋಗುವುವೋ, ಅಂತು ದ್ವೇಷಾಸೂಯೆಗಳಿಂದ ತಪ್ತವಾದ ದುಷ್ಟರ ಹೃದಯದಲ್ಲಿ ಸಜ್ಜನರ ಗುಣಂಗಳು ಸಂಬಂಧಿಸಿದರೂ ಕ್ಷಣದಲ್ಲಿ ಅಲ್ಲಿಯೇ ಅಡಗಿ ಕಾಣದೆ ಹೋಗುವುವು.)

ಆಜನ್ಮಸಿದ್ಧಂ ಕೌಟಿಲ್ಯಂ ಖಲಸ್ಯ ಚ ಹಲಸ್ಯ ಚ |
ಸೋಢುಂ ತಯೋರ್ಮುಖಾಕ್ಷೇಪಮಲಮೇಕೈವ ಸಾ ಕ್ಷಮಾ ॥

(ಟೀ॥ ದುಷ್ಟನಿಗೂ, (ಹಲಸ್ಯ) ನೇಗಿಲಿಗೂ ಕೌಟಿಲ್ಯವು ಹುಟ್ಟಿದಂದಿನಿಂದ ಉಂಟು. ಆದುಷ್ಟನ ಮತ್ತು ಆ ನೇಗಲ ಮುಖಾಕ್ಷೇಪವನ್ನು ಸೈರಿಸಲು ಕ್ಷಮೆಯೊಂದೇ ಸಮರ್ಥವಾದುದು.

ಕೌಟಿಲ್ಯ–ಕಪಟವುಳ್ಳತನ ಮತ್ತು ಸೊಟ್ಟಗಿರುವಿಕೆ. ಮುಖಾಕ್ಷೇಪ-ಬಾಯಿಂದ ಆಕ್ಷೇಪಿಸುವಿಕೆ ಮತ್ತು ಸುತ್ತಲೂ ಗೀಚುವಿಕೆ. ಕ್ಷಮೆ–ತಾಳ್ಮೆ ಮತ್ತು ಭೂಮಿ- ಎಂದು ಇಲ್ಲಿ ಅರ್ಥದ್ವಯವುಂಟು. ಸಹಜವಾದ ವಕ್ರತೆಯುಳ್ಳ ನೇಗಿಲ ಬಾಯಗೀಚನ್ನು ಸಹಿಸಲು ಭೂಮಿಯೊಂದೇ ಎಂತು ಸಮರ್ಥವೋ, ಅಂತು ಸ್ವಭಾವಸಿದ್ಧವಾದ ಕಪಟವುಳ್ಳ ದುಷ್ಟನ ಬಾಯ ಆಕ್ಷೇಪಣೆಯನ್ನು ಸೈರಿಸಲು ತಾಳ್ಮೆಯೊಂದೇ ಸಮರ್ಥವೆಂದು ತಾತ್ಪರ್ಯವು.)

ಸರ್ಪಃ ಕ್ರೂರಃ ಖಲಃ ಕ್ರೂರಃ ಸರ್ಪಾತ್ಕ್ರೂರತರಃ ಖಲಃ |
ಮಂತ್ರೇಣ ಶಾಮ್ಯತೇ ಸರ್ಪಃ ನ ಕೈಶ್ಚಿಚ್ಛಾಮ್ಯತೇ ಖಲಃ ||

(ಟೀ|| ಸರ್ಪವನ್ನೂ ಕ್ರೂರನೆನ್ನುವರು; ದುಷ್ಟನನ್ನೂ ಕ್ರೂರನೆನ್ನುವರು. ಆದರೆ ದುಷ್ಟನನ್ನು ಸರ್ಪಕ್ಕಿಂತಲೂ ಅತ್ಯಂತಕ್ರೂರನೆಂದು ಹೇಳಬೇಕು. ಏಕೆಂದರೆ:- ಸರ್ಪವನ್ನು ಮಂತ್ರದಿಂದ ಅಡಗಿಸಬಹುದು ; ಆದರೆ ದುಷ್ಟನನ್ನು ಯಾವುಗಳಿಂದಲೂ ಅಡಗಿಸಲು ಆಗುವುದಿಲ್ಲ.)

ಅಹೋ ಬತ ಮಹತ್ಕಷ್ಟಂ ವಿಪರೀತಮಿದಂ ಜಗತ್ |
ಯೇನಾಪತ್ರಪತೇ ಸಾಧುಃ ತೇನ ತುಷ್ಯತಿ ದುರ್ಜನಃ ||

(ಟೀ|| ಅಹಹ! ಲೋಕದಲ್ಲಿ ವ್ಯತ್ಯಾಸವಿದೆ. ಇದು ಅತ್ಯಂತಕಷ್ಟಾವಹವಾದುದು. ಏನೆಂದರೆ:—ಸತ್ಪುರುಷನು ಯಾವಕಾರ್ಯವನ್ನು ಮಾಡಲು ಲಜ್ಜಿಸಡುವನೋ; ದುರ್ಜನನು ಆ ಕಾರ್ಯವನ್ನು ಮಾಡಲು ಸಂತೋಷಪಡುವನು.)

ಯಶಸ್ಸೌರಭ್ಯಲಶುನಃ ಶಾಂತಿಶೈತ್ಯಹುತಾಶನಃ |
ಕಾರುಣ್ಯಕುಸುಮಾಕಾಶಃ ಖಲಸ್ಸಜ್ಜನದುಃಖದಃ ||

(ಟೀ|| ಕೀರ್ತಿಯೆಂಬ ಸುಗಂಧಕ್ಕೆ ಬೆಳ್ಳುಳ್ಳಿ ; ಬೆಳ್ಳುಳ್ಳಿಯು ಸುಗಂಧವುಳ್ಳ ವಸ್ತುವನ್ನು ಎಂತು ಕಿಡಿಸುವುದೋ ಅಂತು ಸತ್ಕೀರ್ತಿಯನ್ನು ಕಿಡಿಸುವನು. ಶಮಗುಣವೆಂಬ ಶೈತ್ಯಕ್ಕೆ ಅಗ್ನಿ ; ಅಗ್ನಿಯು ಶೈತ್ಯವನ್ನು ಹೋಗಲಾಡಿಸುವಂತೆ ಉಪಶಾಂತಿಯನ್ನು ಹೋಗಿಸಿ ಕೋಪಬರುವಂತೆ ಮಾಡುವನು. ದಯೆಯೆಂಬ ಪುಷ್ಪಕ್ಕೆ ಆಕಾಶವು ; ಆಕಾಶದಲ್ಲಿ ಪುಷ್ಪವುಂಟೆಂಬುದು ಎಂತು ಅಸಂಭಾವ್ಯವೋ ; ಇವನಲ್ಲಿ ದಯೆಯಿರುವುದೂ ಅಂತು ಅಸಂಭಾವಿತವು. ಇಂತಹ ದುಷ್ಟನು ಸಜ್ಜನರಿಗೆ ದುಃಖವನ್ನುಂಟುಮಾಡುವನಾಗಿರುವನು.)

ದುರ್ಜನೋ ದೂಷಯತ್ಯೇವ ಸತಾಂ ಗುಣಗಣಂ ಕ್ಷಣಾತ್ |
ಮಲಿನೀಕುರುತೇ ಧೂಮಃ ಸರ್ವಥಾ ವಿಮಲಾಂಬರಮ್ ||

(ಟೀ|| ದುರ್ಜನನು ಸಂತರ ಗುಣಗಣವನ್ನು ಪ್ರಕಾಶಿಸದಂತೆ ಮಾಡಿಯೇ ಮಾಡುವನು. ಎಂತೆಂದರೆ:—ಹೊಗೆಯು ನಿರ್ಮಲವಾದ ಆಕಾಶವನ್ನು ಕ್ಷಣದಲ್ಲಿ ಮಲಿನವಾಗುವಂತೆ ಮಾಡುವುದು.)

ನಿರ್ಮಾಯ ಖಲಜಿಹ್ವಾಗ್ರಂ ಸರ್ವಪ್ರಾಣಹರಂ ನೃಣಾಮ್ |
ಚಕಾರ ಕಿಂ ವೃಥಾ ಶಸ್ತ್ರವಿಷವಹ್ನೀನ್ ಪಿತಾಮಹಃ ||

(ಟೀ|| ಬ್ರಹ್ಮನು ಸಕಲಪ್ರಾಣಪರಿಹಾರಕವಾದ ದುಷ್ಟರ ನಾಲಗೆಯ ಮುಂಗಡೆಯನ್ನು ನಿರ್ಮಿಸಿ, ಶಸ್ತ್ರವನ್ನೂ ವಿಷವನ್ನೂ ಬೆಂಕಿಯನ್ನೂ ಏಕೆ ವ್ಯರ್ಥ

ವಾಗಿ ನಿರ್ಮಿಸಿದನೋ ? ದುಷ್ಟರ ನಾಲಗೆಯಿಂದಲೇ ಪ್ರಾಣಘಾತವಾಗುವಲ್ಲಿ ಮತ್ತೆ ಅದಕ್ಕೋಸ್ಕರ ಬ್ರಹ್ಮನು ಶಸ್ತ್ರವಿಷಾಗ್ನಿಗಳನ್ನು ನಿರ್ಮಿಸಿದುದು ವ್ಯರ್ಥವೆಂದು ತಾತ್ಪರ್ಯವು. ದುರುಕ್ತಿಗಳನ್ನು ನುಡಿಯುವ ದುಷ್ಟರ ನಾಲಗೆಯು ಶಸ್ತ್ರವಿಷಾಗ್ನಿಗಳಂತೆ ದಾರುಣತರವೆಂದು ಭಾವವು.)

ಯಥಾ ಪರೋಪಕಾರೇಷು ನಿತ್ಯಂ ಜಾಗರ್ತಿ ಸಜ್ಜನಃ |
ತಥಾ ಪರಾಪಕಾರೇಷು ಜಾಗರ್ತಿ ಸತತಂ ಖಲಃ ||

(ಟೀ|| ಸತ್ಪುರುಷನು ಪರೋಪಕಾರಮಾಡುವುದರಲ್ಲಿ ನಿತ್ಯವೂ ಎಂತು ಜಾಗರೂಕನಾಗಿರುವನೋ ಅಂತು ದುರ್ಜನನು ಪರರಿಗೆ ಅಪಕಾರಮಾಡುವುದರಲ್ಲಿ ಎಂದೂ ಜಾಗರೂಕನೆನಿಸಿರುವನು.)

ವೃಥಾಜ್ವಲಿತಕೋಪಾಗ್ನೇಃ ಪರುಷಾಕ್ಷರವಾದಿನಃ |
ದುರ್ಜನಸ್ಯೌಷಧಂ ನಾಸ್ತಿ ಕಿಂಚಿದನ್ಯದನುತ್ತರಾತ್ ||

(ಟೀ|| ವ್ಯರ್ಥವಾಗಿ ಉಗಿಬಗಿಯಾದ ಕ್ರೋಧಾಗ್ನಿಯಿಂದ ಕನಲಿ ಬಿರುನುಡಿಗಳನ್ನು ನುಡಿಯುತ್ತಿರುವ ದುರ್ಜನನ ವಿಷಯದಲ್ಲಿ ಉತ್ತರವನ್ನಾಡದೆ ಇರುವುದಕ್ಕಿಂತಲೂ ಬೇರೆಯಾವುದೊಂದೌಷಧವೂ ಇಲ್ಲ. ದುರ್ಜನನ ಬಿರುನುಡಿಗೆ ಮರುನುಡಿಯನ್ನು ನುಡಿಯದಿರುವುದು ಉತ್ತಮವೆಂದಭಿಪ್ರಾಯವು.)

ಅತಿಮಲಿನೇ ಕರ್ತವ್ಯೇ ಭವತಿ ಖಲಾನಾಮತೀವನಿಪುಣಾ ಧೀಃ |
ತಿಮಿರೇ ಹಿ ಕೌಶಿಕಾನಾಂ ರೂಪಂ ಪ್ರತಿಪದ್ಯತೇ ದೃಷ್ಟಿಃ ||

(ಟೀ|| ದುಷ್ಟರಿಗೆ ಅತಿನೀಚವಾದ ಕಾರ್ಯವನ್ನು ಮಾಡುವ ಸಂದರ್ಭದಲ್ಲಿಯೇ ಬುದ್ಧಿಯು ಚೆನ್ನಾಗಿ ಓಡುವುದು ; ಗೂಗೆಗಳಿಗೆ ಕತ್ತಲೆಯಲ್ಲಿಯೇ ಅಲ್ಲವೆ ಕಣ್ಣು ಚೆನ್ನಾಗಿ ಕಾಣುವುದು.)

ಪ್ರೇರಯತಿ ಪರಮನಾರ್ಯಃ ಶಕ್ತಿವಿಹೀನೋಽಪಿ ಜಗದಭಿದ್ರೋಹೇ |
ತೇಜಯತಿ ಶಸ್ತ್ರಧಾರಾಂ ಸ್ವಯಮಸಮರ್ಥಾ ಶಿಲಾ ಛೇತ್ತುಮ್ ||

(ಟೀ|| ನೀಚನು ಲೋಕಕ್ಕೆ ದ್ರೋಹಮಾಡುವ ವಿಷಯದಲ್ಲಿ ತನಗೆ ಶಕ್ತಿಯಿಲ್ಲದಿದ್ದರೂ ಇತರರನ್ನು ಪ್ರೇರಿಸುವನು. ಎಂತೆಂದರೆ:—ಶಿಲೆಯು ಛೇದಿಸುವುದಕ್ಕೆ ತಾನು ಅಸಮರ್ಥವಾಗಿದ್ದರೂ ಶಸ್ತ್ರದ ಅಲಗನ್ನು ಹರಿತಗೊಳಿಸುವುದು.)

ಪಿಶುನತ್ವಮೇವ ವಿದ್ಯಾ ಪರದೂಷಣಮೇವ ಭೂಷಣಂ ಯೇಷಾಮ್ |
ಪರದುಃಖಮೇವ ಸೌಖ್ಯಂ ಶಿವಶಿವ ತೇ ಕೇನ ನಿರ್ಮಿತಾ ಸೃಷ್ಟೌ ||

(ಟೀ॥ ಯಾರಿಗೆ ಚಾಡಿಹೇಳುವುದೇ ವಿದ್ಯೆಯೋ ; ಪರರನ್ನು ದೂಷಿಸುವುದೇ ಭೂಷಣವೋ ; ಪರರಿಗೆ ದುಃಖವನ್ನುಂಟುಮಾಡುವುದೇ ತಮ್ಮ ಸೌಖ್ಯವೋ ; ಅಹಹ ಅವರನ್ನು ಯಾವಬ್ರಹ್ಮನು ನಿರ್ಮಿಸಿದನೋ ! ಅವರನ್ನು ನಿರ್ಮಿಸಿದುದು ಬ್ರಹ್ಮನಿಗೆ ತಕ್ಕುದಲ್ಲವೆಂದಭಿಪ್ರಾಯವು.)

ಮೃಗಮೀನಸಜ್ಜನಾನಾಂ ತೃಣಜಲಸಂತೋಷವಿಹಿತವೃತ್ತೀನಾಂ ।
ಲುಬ್ಧಕಧೀವರಪಿಶುನಾಃ ನಿಷ್ಕಾರಣವೈರಿಣೋ ಜಗತಿ ॥

(ಟೀ॥ ಲೋಕದಲ್ಲಿ ಹುಲ್ಲಿನಿಂದ ಜೀವಿಸುವ ಜಿಂಕೆಗಳಿಗೆ ಬೇಡರೂ, ನೀರಿಂದ ಜೀವಿಸುವ ಮೀನುಗಳಿಗೆ ಬೆಸ್ತರೂ, ತೃಪ್ತಿಯಿಂದ ಸಂತೋಷಿಸುತ್ತಿರುವ ಸಂತರಿಗೆ ದುರ್ಜನರೂ ಕಾರಣವಿಲ್ಲದೆ ವೈರಿಗಳೆನಿಸಿರುವರು.)

ಇಂತಹ ಗುಣವಿಶೇಷವುಳ್ಳ ಆ ದುರ್ಜನರು ಎಂತಾದರೂ ಕಬೀರನಿಗೆ ಅಪಮಾನವನ್ನು ಮಾಡಬೇಕೆಂಬ ಅಭಿಪ್ರಾಯದಿಂದ ಬಹುದ್ರವ್ಯವನ್ನೂ ಲಕ್ಷ್ಯಮಾಡದೆ, ಅನೇಕಪತ್ರಿಕೆಗಳನ್ನು ಬರೆದು ಕಳುಹಿಸಿ, ಬಳಿಕ ತಮ್ಮಲ್ಲಿ ತಾವು—ಕಬೀರನಿಗೆ ಈ ಸಂಗತಿಯನ್ನು ಯಾರೂ ತಿಳಿಯಿಸಬಾರದು. ಇವನು ಮೈಮರೆತಿರುವಾಗ ಸಾಧುಗಳ ಗುಂಪು ಬಂದರೆ ಏನಮಾಡಬಲ್ಲನು ? ಅನೇಕಲಕ್ಷಸಂಖ್ಯೆಯುಳ್ಳ ಸಾಧುಗಳಿಗೆ ಇಲ್ಲಿ ಯಾರು ತಾನೇ ಅನ್ನವನ್ನು ಉಣಿಸಲು ಸತ್ತ್ವವುಳ್ಳವರಾಗಿರುವರು—ಎಂದು ಇದೇ ಚಿಂತೆಯಲ್ಲಿ ಕಾಲವನ್ನು ಕಳೆಯುತ್ತ ಸಂಕೇತದಿನವನ್ನು ನಿರೀಕ್ಷಿಸುತ್ತಿದ್ದರು.

ಪರಕ್ಷೇತ್ರಗಳಲ್ಲಿದ್ದ ಆಯಾಸಾಧುಗಳೆಲ್ಲರೂ ತಮ್ಮ ಬಳಿಗೆ ಬಂದ ಪತ್ರಿಕೆಗಳನ್ನು ನೋಡಿಕೊಂಡು ಕಬೀರನ ಲೇಖನವೆಂದೇ ಬಗೆದು ಅದರಲ್ಲಿದ್ದ ಅಭಿಪ್ರಾಯಕ್ಕೆ ಸಂತೋಷಗೊಂಡು ಥಟ್ಟನೆ ಅಲ್ಲಿಂದ ಹೊರಟು ಯಾವದಿವಸ ಬರಬೇಕೆಂದು ಪತ್ರಿಕೆಯಲ್ಲಿ ಬರೆದಿದ್ದಿತೋ ಆ ದಿವಸವೇ ಕಾಶೀಕ್ಷೇತ್ರಕ್ಕೆ ಬಂದುಸೇರಿ, ಕಬೀರನನ್ನು ಕಂಡರು.

ಕಬೀರನು ಆಕಸ್ಮಿಕವಾಗಿ ತನ್ನ ಬಳಿಗೆ ಬರುತ್ತಿರುವ ಅಸಂಖ್ಯಾಕರಾದ ಸಾಧುಮಹಾಜನಂಗಳ ಗುಂಪನ್ನು ಕಂಡು ಸಂತೋಷಭರಿತನಾಗಿ,

ಇಂದಿನ ದಿವಸವೆ ಸುದಿವಸ ।
ಇಂದಿನಯೋಗವೆ ಸುಯೋಗವಾರಯ್ಯಲೊಡಂ ॥
ಇಂದಿನಿಬರ ಮಹನೀಯರ ।
ಸಂದರ್ಶನವೆನಗದೆಂತು ದೊರೆದತ್ತಮವಾ ॥

ಎಂದು ಮನದಲ್ಲಿ ವಿಸ್ಮಿತನಾಗಿ ಉಲ್ಲಾಸಗೊಂಡು ಅಭಿವಂದಿಸಿ ಸವಿನುಡಿಗಳಿಂದ ಸತ್ಕರಿಸಿ ಎಲ್ಲರನ್ನೂ ಗಂಗಾತೀರದಲ್ಲಿ ಇಳಿಯಿಸಿ ಅನನ್ಯಭಾವನಾಗಿ ಶ್ರೀರಾಮನನ್ನು ಹೃದಯದಲ್ಲಿ ಧ್ಯಾನಿಸುತ್ತಿದ್ದನು.

ದುರ್ಜನರೆಲ್ಲರೂ ಈಗ ಕಬೀರನು ಏನಮಾಡಬಲ್ಲನು? ಏನುಗತಿ? ಆಹಹ! ಇವನಿಗೆ ಇಂತಹ ಸಂಕಟವೊದವಿದುದು ನ್ಯಾಯ್ಯವೆನ್ನುವರು; ಸಂತೋಷದಿಂದ ತಲೆಯಂ ತೂಗುವರು; ಕೈಚಪ್ಪಳೆಯಂ ಬಾರಿಸುವರು; ನಗುವರು.

ಸರ್ವಚೈತನ್ಯಸ್ವರೂಪನೂ ಭಕ್ತವತ್ಸಲನೂ ಆದ ಜಾನಕೀಪತಿಯು ತನ್ನನ್ನು ನಂಬಿದ ಭಕ್ತನಿಗೆ ಕೊರತೆಯುಂಟಾದರೆ ತನಗೆ ಅಪಕೀರ್ತಿಬರುವುದೆಂದು ಭಾವಿಸಿ–ಕಬೀರನು ನಿಸ್ಸಂಗನು; ನಿರ್ಲಿಪ್ತನು. ಅಸಂಖ್ಯಾಕರಾದ ಸಂತರು ಬಂದು ಕೂಡಿರುವರು. ಈ ಸಂದರ್ಭದಲ್ಲಿ ನಾನು ಸಹಾಯನಾಗಿ ಕಬೀರನನ್ನು ಸಂರಕ್ಷಿಸ ಬೇಕು–ಎಂದು ಆಕ್ಷಣದಲ್ಲಿ ಪ್ರಸನ್ನನಾಗಿ, ಆಗ ಅಲ್ಲಿಗೆ ಎಷ್ಟುಮಂದಿ ಭಗವದ್ಭಕ್ತರಾದ ಸಾಧುಗಳು ಬಂದು ಸೇರಿದ್ದರೋ, ತಾನು ಅಷ್ಟುಮಂದಿಯ ಸಂಖ್ಯೆಯುಳ್ಳ ಕಬೀರನ ಸ್ವರೂಪವನ್ನು ತಾಳಿ, ಅತಿಶಯದಿಂದ ಅವರನ್ನು ಸೇವಿಸಲು ತೊಡಗಿದನು.

ದುರ್ಜನರು ಒಬ್ಬರಕೈಯನೊಬ್ಬರು ಹಿಡಿದುಕೊಂಡು ಸಾಧುಗಳ ಗುಂಪಿನಲ್ಲಿ ತಿರುಗಾಡುತ್ತ ವಿಸ್ಮಯವಂ ಕಂಡು ಸಂಭ್ರಾಂತರಾದರು.

ಸತ್ಸೇವೆಯಂ ಮಾಡುವ ವಿಷಯದಲ್ಲಿ ಶ್ರೀಹರಿಗೆ ಪರಮೋಲ್ಲಾಸವುಂಟಾಗಿರುವುದು. ಅಭಿನ್ನವಾದ ಅನಂತರೂಪಗಳನ್ನು ಧರಿಸಿರುವನು. ಅವನ ಮಾಯೆಯನ್ನು ಯಾರು ಬಲ್ಲರು? ದುರ್ಜನರೆಲ್ಲರೂ ಕೌತುಕವಂ ನೋಡುತ್ತಿರುವರು. ಎಲ್ಲೆಲ್ಲಿ ಯಾರಯಾರಮುಂದೆ ನೋಡಿದರೂ, ಆದರದಿಂದ ಸೇವೆಮಾಡುತ್ತಿರುವ ಕಬೀರನೇ ಕಾಣಲ್ಪಡುತ್ತಿರುವನು. ಒಂದುಕಡೆಯಲ್ಲಿ ಸಂತರ ಕಾಲುಗಳನ್ನು ತೊಳೆಯುತ್ತಿರುವನು. ಒಂದೆಡೆಯಲ್ಲಿ ಸ್ನಾನವಂ ಮಾಡಿಸುತ್ತಿರುವನು. ಒಂದೆಡೆಯಲ್ಲಿ ದೇವರ ಪೂಜೆಗೆ ಗಂಧವಂ ತೇದುಕೊಡುತ್ತಿರುವನು. ಒಂದೆಡೆ ಕೈಗಳಂ ಜೋಡಿಸಿಕೊಂಡು ನಿಂತಿರುವನು. ಒಂದೆಡೆ ಪಾದುಕೆಗಳಂ ಕೈಗಳಲ್ಲಿ ಹಿಡಿದುಕೊಂಡಿರುವನು. ಒಂದೆಡೆ ಆನಂದದಿಂದ ಗಾನವಂ ಮಾಡುತ್ತಿರುವನು. ಒಂದೆಡೆ ಭೋಜನಕ್ಕೆ ಬಡಿಸುತ್ತಿರುವನು. ಒಂದೆಡೆ ವೀಳೆಯವಂ ಮಡಿಸಿಕೊಡುತ್ತಿರುವನು. ಒಂದೆಡೆ ಗಂಧವಂ ತೊಡೆಯುತ್ತಿರುವನು. ಒಂದೆಡೆ ಮಂಚದಲ್ಲಿ ಮಲಗಿಕೊಳ್ಳುವುದಕ್ಕೆ ಸಿದ್ಧಪಡಿಸುತ್ತಿರುವನು. ಒಂದೆಡೆ ಬಳಿಯಲ್ಲಿ ಕುಳಿತುಕೊಂಡು ಆದರದಿಂದ ಮಾತನಾಡುತ್ತಿರುವನು. ಒಂದೆಡೆ ಕನ್ನಡಿಯಂ ಹಿಡಿದು ತೋರಿಸುತ್ತಿರುವನು. ಒಂದೆಡೆ ತುಳಸೀಸರವಂ ಮಾಡಿ ಕಂಠದಲ್ಲಿ ಹಾಕುತ್ತಿರುವನು. ಒಂದೆಡೆ ವಸ್ತ್ರಗಳನ್ನು ಉಡಿಸುತ್ತಿರುವನು; ಭೂಷಣಗಳನ್ನು ತೊಡಿಸುತ್ತಿರುವನು. ಇನ್ನೊಂದೆಡೆ ಏಕಾಂತದಲ್ಲಿ ಕುಳಿತುಕೊಂಡು ಆತ್ಮವಿಚಾರವಂ ಮಾಡುತ್ತಿರುವನು. ಮತ್ತೊಂದೆಡೆ ಕೆಲವರ ಹಣೆಯಲ್ಲಿ ಕಸ್ತೂರೀ

ತಿಲಕವಂ ತಿದ್ದುತ್ತಿರುವನು. ಒಂದೆಡೆ ತೃಣಾಸ್ತರಣವಂ ಹಾಸುತ್ತಿರುವನು. ಒಂದೆಡೆ ಸ್ವೇಚ್ಛೆಯಿಂದ ವಿನೋದವಂ ನೋಡುತ್ತಿರುವನು. ಒಂದೆಡೆ ಬೀಸಣಿಗೆಯಿಂದ ಬೀಸುತ್ತಿರುವನು. ಒಂದೆಡೆ ಮಲಗಿದ್ದವರ ಮೈಯನ್ನು ಒತ್ತುತ್ತಿರುವನು. ಒಂದೆಡೆ ಕಾಲುಗಳನ್ನು ಹಿಸುಕುತ್ತಿರುವನು. ಒಂದೆಡೆ ಸದ್ಗ್ರಂಥವನ್ನೋದುತ್ತಿರುವನು. ಒಂದೆಡೆ ಚಾಮರಬೀಸುತ್ತಿರುವನು. ಒಂದೆಡೆ ಫಲಾಹಾರಕ್ಕೆ ಸಿದ್ಧಮಾಡುತ್ತಿರುವನು. ಇಂತು ತಾನೊಬ್ಬನೇ ಎಲ್ಲರಲ್ಲಿಯೂ ಬೇರೆಬೇರೆ ಇದ್ದುಕೊಂಡು ಅವರವರ ಇಷ್ಟವನ್ನರಿತು ಸೇವೆಮಾಡುತ್ತಿದ್ದನು. ಸೂರ್ಯನೊಬ್ಬನೇ ಅನೇಕಘಟಗಳಲ್ಲಿ ಎಂತು ಪ್ರತಿಫಲಿಸುವನೋ ಅಂತು ಶ್ರೀಚಕ್ರಪಾಣಿಯು ಸರ್ವವ್ಯಾಪಕನಾಗಿ ಎಲ್ಲರ ಮುಂದೆಯೂ ಬೇರೆಬೇರೆ ಕಬೀರನ ರೂಪದಿಂದ ಇದ್ದನು. ಹಿಂದೆ ಕೃಷ್ಣಾವತಾರದಲ್ಲಿ ಬಾಲಲೀಲಾಭಿರಾಮನಾದ ತನ್ನನ್ನು ಗೋಪಿಯು ಹಿಡಿದುಕೊಂಡು ಯಶೋದೆಯ ಬಳಿಗೆ ಕರೆದು ತರುವಾಗ ಎಂತು ಅನಂತರೂಪನಾದನೋ; ಕೌರವರು ತನ್ನ ಪಂಕ್ತಿಯಲ್ಲಿ ಬಡಿಸುತ್ತಿರುವ ದ್ರೌಪದಿಯನ್ನು ಅವಮಾನಗೊಳಿಸಲು ಪ್ರವರ್ತಿಸಿದಂದು ಎಡೆಯೆಡೆಗೂ ದ್ರೌಪದಿಯಾಗಿ ಎಂತು ಅನಂತದ್ರೌಪದೀರೂಪವಂ ತಾಳಿದನೋ ಅಂತು ಅನಂತಕಬೀರರೂಪವನ್ನು ತಾಳಿ ಸರ್ವರಿಗೂ ಅತ್ಯಾಶ್ಚರ್ಯವನ್ನುಂಟುಮಾಡಿದನು.

ಸದ್ಭಾಗವತರು ಆ ವಾರಾಣಸೀಕ್ಷೇತ್ರದಲ್ಲಿ ಮೂರುದಿನಗಳವರೆಗೆ ನಿಂತರು. ಅದುವರೆಗೂ ಭಗವಂತನು ಅವರನ್ನು ಅವರವರ ಹೃದಯವನ್ನರಿತು ತಕ್ಕತೆರದಲ್ಲಿ ಸತ್ಕರಿಸಿ ವಸ್ತ್ರಭೂಷಣತಾಂಬೂಲಗಳನ್ನು ಕೊಟ್ಟು ಸವಿನುಡಿಗಳಿಂದ ಉಪಚರಿಸಿ ಸಂತೋಷಗೊಳಿಸಿ ಬಳಿಕ ಸಾಗಕಳುಹಿಸಿ ತಾನು ಅದೃಶ್ಯನಾದನು.

ದುರ್ಜನರೆವರೆಲ್ಲರೂ ಕಬೀರನ ಬಳಿಗೆ ಬಂದು ಕಾಲ್ಗೆರಗಿ ನೀನು ಪರಮಭಾಗವತನು. ನಾವು ಅಜ್ಞಾನದಿಂದ ನಿನ್ನನ್ನು ಅಪಮಾನಗೊಳಿಸಲು ಪ್ರಯತ್ನಿಸಿದೆವು. ಆದರೆ ಪರಮಕಾರುಣಿಕನಾದ ಶ್ರೀರಘುನಾಥನು ನಿನಗೆ ಸಹಾಯನಾಗಿ ಘನತರವಾದ ಕೀರ್ತಿಯನ್ನು ನಿನಗುಂಟುಮಾಡಿದನು. ನಾವು ಅಪಕೀರ್ತಿಗೆ ಒಳಗಾದೆವು. ಪತಂಗವು ಬಡಿಯಲು, ಮಹಾತೇಜಸ್ಸುಳ್ಳ ದೀಪವು ಆರಲಾರದು. ಖದ್ಯೋತವು ಸೂರ್ಯನೊಡನೆ ದ್ವೇಷಮಾಡಿ ಏನಮಾಡಬಲ್ಲುದು ? ಕೌರವರು ಅರಗಿನಮನೆಯಲ್ಲಿ ಪಾಂಡವರಂ ಸುಡುವುದಕ್ಕೆ ಪ್ರಯತ್ನಿಸಲು, ಏನಾಯಿತು ? ಬಡಬಾನಲವು ಸಮುದ್ರವನ್ನು ಸುಡಲು ಪ್ರಯತ್ನಿಸಿದರೆ ಏನಾಗುವುದು ? ದುರಾತ್ಮರಾದ ನಾವು ಮಹನೀಯನಾದ ನಿನಗೆ ಸಂಕಟವನ್ನುಂಟುಮಾಡಬೇಕೆಂದರೆ ಆಗುವುದೆ ? ಭಗವದನುಗ್ರಹಕ್ಕೆ ಭಾಜನವೆನಿಸಿದ ನಿನಗೆ ಕೊರತೆಯೆಂದಿಗೂ ಉಂಟಾಗಲಾರದು. ನೀನು ಧನ್ಯನು—ಎಂದು ಅನೇಕರೀತಿಯಲ್ಲಿ ಆತನನ್ನು ಹೊಗಳಿ ಆತನಲ್ಲಿ ದ್ವೇಷವನ್ನುಬಿಟ್ಟು ಪ್ರೀತಿಯಿಂದ ನಿತ್ಯವೂ ಆತನ ಗುಣಗಳನ್ನೇ ಪಾಡುತಿದ್ದರು.

ಮುಂದಣ ಅಧ್ಯಾಯದಲ್ಲಿ ಕಥೆಯು ಬಹುರಸಭರಿತವಾಗಿರುವುದು. ಪಿಪಾಸೆಯುಳ್ಳ ಭಾಗ್ಯವಂತರಾದ ಶ್ರೋತೃಗಳು ವಿಕಲ್ಪಂಗಳೆಂಬ ನೊಣಗಳನ್ನು ಪರಿಹರಿಸಿಕೊಂಡು ಆದರದಿಂದ ರಸಾಸ್ವಾದನವಂ ಮಾಡಬೇಕು. ಮಹೀಪತಿಯು ಇಂತು ಸಂತರ ಅಡಿಗೆರಗಿ ಪ್ರಾರ್ಥಿಸಿಕೊಳ್ಳುವನು.

ಇಂತು ಶ್ರೀಭಕ್ತವಿಜಯದಲ್ಲಿ ಏಳನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಎಂಟನೆಯ ಅಧ್ಯಾಯ.

ವಿಟ್ಠಲನ ಚರಿತ್ರೆ.

ಶ್ರೀಭೀಮಾತೀರವಿಲಸತ್ಪುಣ್ಡರೀಪುರವಲ್ಲಭಃ !
ಪಾತು ವಃ ಪಾಣ್ಡುರಂಗೇಶೋ ಭಗವಾನ್ ವಿಟ್ಠಲೋ ಹರಿಃ ‖

ಇಂದಿನದಿನವು ಸುದಿನವು; ಭಕ್ತಚರಿತ್ರಸುಧಾರಸವು ವಕ್ತೃಶ್ರೋತೃಗಳಿಗೆ ದೊರೆತಿರುವುದು. ಭಕ್ತಚರಿತ್ರಕ್ಕೆ ಸುಧಾರಸದ ದೃಷ್ಟಾಂತವು ಗೌಣವೆನಿಸುವುದು. ಏಕೆಂದರೆ:—ಸುಧಾಪಾನವನ್ನು ಮಾಡಿದ ದೇವತೆಗಳಿಗೆ ಕಲ್ಪಾಂತದಲ್ಲಿ ಅಪಾಯವುಂಟು. ಭಕ್ತಕಥಾರಸವನ್ನು ಸೇವಿಸಿದವರು ಎಂದಿಗೂನಾಶವಿಲ್ಲದ ಪದವನ್ನು ಪಡೆಯುವರು. ಸತ್ಕಥಾಶ್ರವಣದಿಂದ ಜನ್ಮಮರಣಂಗಳು ತೊಲಗುವುವು. ಗಂಗೋಪಮಾನವೂ ಇದಕ್ಕೆ ಸರಿಯಲ್ಲ. ಗಂಗೆಯಲ್ಲಿ ಶರೀರವನ್ನುಬಿಟ್ಟವನು ಮುಕ್ತನಾಗುವನು. ಭಾಗವತರ ಚರಿತ್ರೆಯು ಅಂತಹುದಲ್ಲ; ಶ್ರವಣಮಾತ್ರದಿಂದಲೇ ಪತಿತರನ್ನೂ ಪಾವನರನ್ನಾಗಿ ಮಾಡುವುದು. ಸೂರ್ಯನಿಗಿಂತಲೂ ಪ್ರಕಾಶಮಾನವು; ಚಂದ್ರನಿಗಿಂತಲೂ ಶೀತಲವು; ಆಕಾಶಕ್ಕಿಂತಲೂ ಅತಿನಿರ್ಮಲವು; ಸಮುದ್ರಕ್ಕಿಂತಲೂ ಗಂಭೀರವು. ಶ್ರೋತೃಗಳು ಇದನ್ನು ಆದರದಿಂದ ಅವಧರಿಸಬೇಕು.

ಗಂಗಾತೀರದಲ್ಲಿ ಆಪಗಾವ ಎಂದು ಪ್ರಸಿದ್ಧವಾದ ಪುಣ್ಯಕ್ಷೇತ್ರವೊಂದುಂಟು. ಅಲ್ಲಿ ಕರಣಿಕನಾದ ಗೋವಿಂದಪಂತನೆಂಬ ಹರಿಭಕ್ತನು ಇದ್ದನು. ಆಬ್ರಾಹ್ಮಣನ ಮಡದಿಯ ಹೆಸರು ನೀರಬಾಯಿಯೆಂದು. ಆಕೆ ಪರಮಭಾವುಕೆ; ಪತಿವ್ರತಾಶಿರೋಮಣಿ; ತನಗೆ ಪುತ್ರನುಂಟಾಗಬೇಕೆಂದು ದೇವರನ್ನು ಪ್ರಾರ್ಥಿಸುತ್ತಿದ್ದಳು. ಭಗವದನುಗ್ರಹದಿಂದ ವೈರಾಗ್ಯಶೀಲನಾದ ಒಬ್ಬ ಮಗನು ಆಕೆಯ ಗರ್ಭವನ್ನಲಂಕರಿಸಿದನು. ನವವಿಧಭಕ್ತಿಗಳಂತೆ ನವಮಾಸಗಳು ಆಕೆಗೆ ತುಂಬಿದುವು. ಮೂರ್ತವಾದ ವೈರಾಗ್ಯದಂತೆ ಕುಮಾರನು ಉದಯಿಸಿದನು. ಉದಯಿಸಿದ ಕುಮಾರನನ್ನುಕಂಡು ಮಾತಾ

ಪಿತೃಗಳು ಪರಮಾನಂದಭರಿತರಾದರು. ಹನ್ನೆರಡನೆಯದಿನ 'ವಿಟ್ಠಲ' ಎಂದು ನಾಮಕರಣವನ್ನು ನೆರವೇರಿಸಿದರು. ಎಂಟುವರ್ಷಗಳು ತುಂಬುವುದೂ ಉಪನಯನವಂ ಮಾಡಿದರು. ಬಳಿಕ ವೇದಶಾಸ್ತ್ರಾಧ್ಯಯನವಂ ಮಾಡಿಸಿದರು. ಆತನು ಸಕಲವಿದ್ಯಾಪಾರಂಗತನಾದನು. ಕೆಲವುದಿನಗಳಾದ ಬಳಿಕ ಅನುತಾಪಗೊಂಡು ತೀರ್ಥಾಟನೆಯಂ ಮಾಡಬೇಕೆಂದು ಮನಸ್ಸಿನಲ್ಲಿ ಅಪೇಕ್ಷೆಯುಳ್ಳವನಾಗಿ–ಪುಷ್ಕರಕ್ಷೇತ್ರಕ್ಕೆ ಹೋಗಿ ಬರಲು ನನಗೆ ಅಪ್ಪಣೆಯಂಕೊಡಬೇಕು–ಎಂದು ತಾಯ್ತಂದೆಗಳನ್ನು ಪ್ರಾರ್ಥಿಸಿದನು. ಅವರು ಆಮಾತಂ ಕೇಳಿ ಹೋಗಿಬಾರೆಂದು ಅನುಜ್ಞೆಯಂ ಕೊಟ್ಟರು. ವಿಟ್ಠಲನು ಪ್ರಯಾಣವಮಾಡಿದನು. ಚಿತ್ತದಲ್ಲಿ ವೈರಾಗ್ಯಹುಟ್ಟದಿದ್ದರೆ ಶಾಸ್ತ್ರಾಭ್ಯಾಸವನ್ನು ಮಾಡಲು ಫಲವೇನು? ಕಿವುಡನಿಗೆ ದೊಡ್ಡಕಿವಿಗಳಿದ್ದೇನು? ನವಿಲಿಗೆ ಸರ್ವಾಂಗಗಳಲ್ಲಿಯೂ ಕಣ್ಣುಗಳಿರುವುವು. ದೃಷ್ಟಿಯಿಲ್ಲದಅವುಗಳಿಂದ ಏನು ಪ್ರಯೋಜನ? ಆಡಿನ ಕೊರಲಲ್ಲಿರುವ ಸ್ತನಂಗಳಂತೆಯೂ, ವಿಧವೆಯ ತಾರುಣ್ಯದಂತೆಯೂ, ನಾಸಿಕೆಯಿಲ್ಲದವಳ ಅಲಂಕಾರದಂತೆಯೂ, ವೈರಾಗ್ಯವಿಲ್ಲದವನ ವೈದುಷ್ಯವು ವ್ಯರ್ಥವೇ ಸರಿ. ವಿಟ್ಠಲನು ಕೇವಲವಿರಕ್ತನಾಗಿ ತೀರ್ಥಯಾತ್ರೆಹೊರಟು ಮೊದಲು ದ್ವಾರಾವತಿಗೆ ಹೋಗಿ ಗೋಮತಿಯಲ್ಲಿ ಸ್ನಾನವಂಮಾಡಿ ಶ್ರೀಕೃಷ್ಣಸ್ವಾಮಿಯ ಸಂದರ್ಶನವಂ ಪಡೆದು ನಮಿಸಿ ನುತಿಸಿ ಜಪಿಸಿ ಸೇವಿಸಿ, ಅಲ್ಲಿಂದ ಮುಕ್ತಿಗೆ ತವರ್ಮನೆಯೆನಿಸಿದ ಮತ್ಸ್ಯಮೂರ್ತಿಯಾದ ಶ್ರೀಹರಿಯ ವಿಹಾರಸ್ಥಾನವನ್ನು ಸೇರಿ ಅಲ್ಲಿಂದ ಸಂಚರಿಸುತ್ತ ಮಂಗಳಶೋಭೆಯನ್ನು ಕಂಡು ಬಳಿಕ ದ್ವಾರಕೆಯ ಕಲಶವಂ ನೋಡಿ ಅಲ್ಲಿಂದ ಮುಂದೆಹೊರಟು ಸುಧಾಪುರಿಯಂಸೇರಿ, ಅಲ್ಲಿಂದ ಭೀಮಕಮಹೀಂದ್ರನು ಬಳಯಿಸಿದ ರುಕ್ಮಿಣೀಕಲ್ಯಾಣಕ್ಕೆ ಎಡೆಯಾದ ಮೂಲಮಾಧವಕ್ಕೆ ಬಂದು, ಅಲ್ಲಿಂದ ಪಾಲುಕಾತೀರ್ಥವಂ ಕಂಡು ವಂದಿಸಿ ಬಳಿಕ ಪ್ರಭಾಸಕ್ಷೇತ್ರವನ್ನು ಕುರಿತು ಹೊರಟು, ಅಲ್ಲಿಂದ ಸೊರಟಿ ಸೋಮನಾಥಕ್ಷೇತ್ರವನ್ನು ಸೇರಿ ಅಲ್ಲಿಂದ ಮುಚುಕುಂದಸ್ಥಾನಕ್ಕೆ ಬಂದು, ಅಲ್ಲಿ ಕಾಲಯವನನನ್ನು ಭಸ್ಮಮಾಡಿದ ಸ್ಥಳವಂ ಕಂಡು, ಅಲ್ಲಿಂದ ಧವಳಪುರಿಗೆ ಬಂದು ವಿಶ್ರಾಂತಿಸ್ಥಾನವಂ ನೋಡಿ, ಅಲ್ಲಿಂದ ಮಾರ್ಗದಲ್ಲಿ ಅನೇಕವಾದ ಪುಣ್ಯಕ್ಷೇತ್ರತೀರ್ಥಗಳನ್ನು ಕಂಡು ಸೇವಿಸಿ, ಅಲ್ಲಿಂದ ಸಪ್ತಶೃಂಗಕ್ಕೆ ಬಂದು ಆದಿಮಾಯೆಯಂಕಂಡು ವಂದಿಸಿ ಅರುಣಾವರಣೆಯಲ್ಲಿ ಸ್ನಾನವಂಮಾಡಿ, ಅಲ್ಲಿಂದ ಪ್ರಾಚೀಗೋದಾವರಿಗೆ ಬಂದು ಕಪಾಲೇಶ್ವರನ ದರ್ಶನವಂ ಮಾಡಿ, ತ್ರ್ಯಂಬಕಕ್ಕೆ ಬಂದು ಕುಶಾವರ್ತದೊಳ್ ಸ್ನಾನವಮಾಡಿ, ಬಳಿಕ ಗಂಗಾದ್ವಾರವನ್ನು ಸೇರಿ ನಮಿಸಿ, ಬ್ರಹ್ಮಗಿರಿಯನ್ನು ಎಡಕ್ಕೆ ಬಿಟ್ಟುಕೊಂಡು ಆನಂದಭರಿತನಾಗಿ ಭೀಮಾಶಂಕರಕ್ಕೆ ಬಂದು ಅಲ್ಲಿ ಸುಸ್ನಾತನಾಗಿ, ಮುಂದೆ ಮಾರ್ಗವಂನಡೆಯುತ್ತ ಸರ್ವಕಾಲದಲ್ಲಿಯೂ ಭಗವನ್ನಾಮಕೀರ್ತನೆಯಂ ಮಾಡುತ್ತ ಅಲಕಾವತೀಕ್ಷೇತ್ರಕ್ಕೆ ಬಂದು ಅಲ್ಲಿ ಚಕ್ರತೀರ್ಥದಲ್ಲಿ ಸ್ನಾನವಂ ಮಾಡಿ ದೇವತಾರ್ಚನೆಯಂ ಮಾಡುತ್ತ ಕುಳಿತಿದ್ದನು.

ಅಲ್ಲಿ ಸಿಂಧುಪಂತನೆಂಬ ಒಬ್ಬ ಬ್ರಾಹ್ಮಣನು ಸ್ನಾನಕ್ಕೆ ಬಂದು, ಬ್ರಹ್ಮಚಾರಿಯಾಗಿ ತೇಜಸ್ಸಂಪನ್ನನಾಗಿರುವ ಆ ವಿಟ್ಠಲನನ್ನು ನೋಡಿ ಸಾಷ್ಟಾಂಗನಮಸ್ಕಾರ ಮಾಡಿ—ನೀವ್ಯಾರು? ನಿಮ್ಮ ನಾಮಧೇಯವೇನು? ಎಲ್ಲಿಂದಬಂದಿರಿ?—ಎಂದು ಬೆಸಗೊಂಡನು.

ಅದಕ್ಕೆ ಅವನು—ಗಂಗಾತೀರದಲ್ಲಿ ಆಪೆಗಾವ—ಎಂಬ ಊರಿರುವುದು. ನಾನು ಅಲ್ಲಿಂದ ಬಂದೆನು. ನನ್ನ ಹೆಸರು ವಿಟ್ಠಲನೆಂದು. ನನ್ನ ತಾಯಿತಂದೆಗಳು ಅಲ್ಲಿಯೇ ಇರುವರು. ದ್ವಾರಾವತೀಯಾತ್ರೆಗೋಸ್ಕರ ಹೊರಟು, ಅಲ್ಲಿಂದ ಮಾರ್ಗವನ್ನು ನಡೆಯುತ್ತ ಇದ್ದು ಇಲ್ಲಿಗೆಬಂದು ಸೇರಿದೆನು-ಎನಲು, ಆಮಾತನ್ನು ಕೇಳಿ ಆತನು—ಇಂದಿನ ದಿನವು ಸುದಿನವು. ನನಗೆ ತಮ್ಮದರ್ಶನವಾಯಿತು. ನಾನು ಧನ್ಯನು. ತಾವು ನಮ್ಮ ಮನೆಗೆ ಬಂದು ಮನೆಯನ್ನು ಪವಿತ್ರಮಾಡಬೇಕು—ಎಂದು ಹಲವುಬಗೆಯಿಂದ ಪ್ರಾರ್ಥಿಸಿ ವಿಟ್ಠಲನನ್ನು ತನ್ನಮನೆಗೆ ಕರೆದುಕೊಂಡುಹೋಗಿ ಆದರದಿಂದ ಮೃಷ್ಟಾನ್ನಭೋಜನಮಾಡಿಸಿ ಸತ್ಕರಿಸಿದನು. ಆರಾತ್ರಿಯೂ ವಿಟ್ಠಲನು ಅಲ್ಲಿಯೇ ಇದ್ದನು.

ಪಂಢರೀನಾಥನಾದ ಶ್ರೀವಿಟ್ಠಲನು ಸಿಂಧುಪಂತನ ಸ್ವಪ್ನದಲ್ಲಿ ಕಾಣಿಸಿಕೊಂಡು ನೀನು ಈ ಬ್ರಹ್ಮಚಾರಿಗೆ ಸಾಲಂಕೃತಕನ್ಯಾದಾನವಂ ಮಾಡು—ಎಂದು ಅಪ್ಪಣೆಮಾಡಿದನು. ಆತನು ಆ ಸ್ವಪ್ನವಂ ಕಂಡು ಸಂತೋಷಗೊಂಡು ಹೊತ್ತಿಗೆ ಮುಂಚೆ ಎದ್ದು ಸ್ನಾನಸಂಧ್ಯಾವಂದನೆಗಳಂ ಮಾಡಿ ಸ್ವಪ್ನವಿಚಾರವಂ ವಿಟ್ಠಲನಿಗೆ ತಿಳಿಸಿದನು. ಆತನು ಸಿಂಧುಪಂತನನ್ನು ಕುರಿತು—ನೀವು ಹೇಳುವುದು ಯಥಾರ್ಥವೇ ಸರಿ; ಆದರೆ ಪಂಢರೀನಾಥನು ನನಗೆ ಹೇಳಲಿಲ್ಲ; ಆದರಿಂದ ಈ ವಿಷಯದಲ್ಲಿ ನಾನು ಅಂಗೀಕಾರ ಪಡುವುದು ಎಂತು?—ಎಂದು ಹೇಳಲು, ಸಿಂಧುಪಂತನು—ಇಂದು ನೀವು ಇಲ್ಲಿಯೇ ನಿಲ್ಲಬೇಕು. ಸತ್ಯವಾಗಿದ್ದರೆ ನಿಮಗೂ ಸ್ವಪ್ನವಾಗುವುದು—ಎಂದನು. ವಿಟ್ಠಲನು ಆ ಅರ್ಥಕ್ಕೆ ಅಂಗೀಕಾರಗೊಂಡು ಆದಿವಸರಾತ್ರಿ ಬೃಂದಾವನದ ಸಮೀಪದಲ್ಲಿ ಹಾಸಿಗೆಯನ್ನು ಹಾಸಿಕೊಂಡು ಮಲಗಿದನು. ನಿದ್ರೆಹತ್ತಿತು. ವಿಶ್ವವ್ಯಾಪಕನಾದ ಪಂಢರೀನಾಥನು ಕನಸಿನಲ್ಲಿ ಗೋಚರನಾದನು. ಆತನಂ ಕುರಿತು-ಈ ಕನ್ಯೆ ಪುಣ್ಯವತಿ; ಮುಂದೆ ಈಕೆಯ ಗರ್ಭದಲ್ಲಿ ನಾಲ್ವರವತಾರಮೂರ್ತಿಗಳು ಹುಟ್ಟುವರು. ನನ್ನಾಜ್ಞೆಯಿಂದ ನೀನು ಈಕೆಯ ಪ್ರತಿಗ್ರಹವಂ ಮಾಡು; ನಿನಗೆ ಮೇಲಾಗುವುದು-ಎಂದು ನುಡಿದನು.

ಬೆಳಗಾಯಿತು. ಸಿಂಧುಪಂತನು ಕನಸಿನ ವಿಚಾರವೇನೆಂದು ಬೆಸಗೊಂಡನು. ವಿಟ್ಠಲನು—ಸತ್ಯ; ಸ್ವಾಮಿಯು ನನಗೂ ಕನಸಿನಲ್ಲಿ ಗೋಚರನಾಗಿ ಅಪ್ಪಣೆಮಾಡಿರುವನು. ಆತನ ಅಪ್ಪಣೆಯನ್ನು ಉಲ್ಲಂಘಿಸುವುದೆಂತು? ಎಂದನು.

ಸಿಂಧುಪಂತನು ಘಟಿತಾರ್ಥವನ್ನೂ ನೋಡಿಸಿದನು. ಮೂವತ್ತಾರುಗುಣಂಗಳೂ ಕೂಡಿಬಂದುವು. ಸಂತೋಷದಿಂದ ಲಗ್ನವಂ ನಿಶ್ಚಯಿಸಿ ಸಕಲಸಾಹಿತ್ಯಗಳನ್ನೂ ಸಿದ್ಧಪಡಿಸಿ ಶ್ರೀಮಹಾಗಣಪತಿಯ ಪ್ರಾರ್ಥನೆಯಂ ಮಾಡಿ ಮಂಗಳವಾದ್ಯಪುರಸ್ಸರವಾಗ ಪುಣ್ಯಾಹವಾಚನವಂ ನೆರವೇರಿಸಿ ನಾಂದೀಸ್ಥಾಪನವನ್ನೆಸಗಿ ಬ್ರಾಹ್ಮಣಸಂತರ್ಪಣೆಯಂ ಮಾಡಿ ಮಹಾಸಂಕಲ್ಪಪೂರ್ವಕವಾಗಿ ಕನ್ಯಾದಾನವಂ ಮಾಡಿದನು. ಬ್ರಾಹ್ಮಣರು ಇಂತು ಮಂಗಳಾಷ್ಟಕವಂ ಪಾಡಿದರು:—

(ಪಜ್ಝಟಿಕಾವೃತ್ತ; ಭಜಗೋವಿಂದಂ ಎಂಬಂತೆ.)

ನಿಗಮೋದ್ಧಾರಂ ಮತ್ಸ್ಯಾಕಾರಂ |
ಜಗದಾಳಿಪಮಂ ಕೌರ್ಮಶರೀರಂ ||
ಜಗತೀಪಾಲಂ ಕಿರಿರೂಪಧರಂ |
ಮಿಗೆ ಹರಿ ರಕ್ಷಿಕ್ಕೆ ವಧೂವರರಂ ||೧||

ಸ್ಫುರದನುಭಾವಂ ಸ್ತಂಭಪ್ರಭವಂ |
ಸುರಪರಸಂನುತಲೀಲಾವಿಭವಂ ||
ಕರುಣದೆ ಲಕ್ಷ್ಮೀನರಹರಿ ದೇವಂ |
ದೊರೆಯಿಕೆ ದಂಪತಿಗಳ್ಗತಿಶುಭವಂ ||೨||

ವಿಲಸಿತಪದಮಿತಲೋಕತ್ರಿತಯಂ |
ಬಲಿದಮನಂ ಶ್ರೀಕಶ್ಯಪತನಯಂ ||
ಸುಲಲಿತಪಾವನವಾಮನಕಾಯಂ |
ಸಲಹುಗೆ ದಂಪತಿಗಳನನಪಾಯಂ ||೩||

ಸ್ಫುರಿತಮಹಾಧನುರಾಗಮಜಾಲಂ |
ಪರಶುವಿದಾರಿತಬಾಹುಜಸಾಲಂ ||
ಸುರುಚಿರಶೀಲಂ ಭೃಗುಮುನಿಬಾಲಂ |
ಪೊರೆಗೀದಂಪತಿಗಳನನುಕೂಲಂ ||೪||

ಪರಮೋದಾರಂ ಶ್ರೀರಘುವೀರಂ |
ಧರಣಿಸುತಾಮುಖಚಂದ್ರಚಕೋರಂ ||
ವರದಂ ಕರುಣಾಪಾರಾವಾರಂ |
ಪರಿಪಾಲಿಕೆ ದಂಪತಿಗಳನಿವರಂ ||೫||

ಬಲನುಪಚಿತಯದುಹೃದಯೋಲ್ಲಸನಂ |
ಬಲವದರಿಘ್ನಂ ಯಮುನಾದಲನಂ ||
ಜಲಧರಭಾಸುರಮಂಗಲವಸನಂ |
ಹಲಧರನೊಪ್ಪುಗೆ ವಧುವಂ ವರನಂ ||೬||

ವರಬೌದ್ಧಾತ್ಮಂ ಹತಜಗದಹಿತಂ |
ಪರಿಧೃತಘನಕಲ್ಯಾಣಕೃತಿಮಹಿತಂ ||
ಹರಿ ಮಂಗಲತತಿವಿತರಣನಿರತಂ |
ಪೊರೆಗೀ ದಂಪತಿಗಳನನವರತಂ ||೭||

ವಿದಳಿತದುರ್ಮದದಾನವವೃಂದಂ |
ಸದವನಧೌರೇಯಂ ಗೋವಿಂದಂ ||
ಯದುಕುಲತಿಲಕಂ ಪರಮಾನಂದಂ |
ವಧುವಂ ವರನಂ ಪೊರೆಗೊಲವಿಂದಂ ||೮||

ಮಂಗಳವಾದ್ಯಗಳು ಮೊಳಗಿದುವು. ಮುತ್ತೈದೆಯರು ಆರತಿಯನ್ನೆತ್ತಿದರು. ನೆರೆದ ವೃದ್ಧರೆಲ್ಲರೂ ವಧೂವರರಿಗೆ ಆಶೀರ್ವಾದವಂ ಮಾಡಿದರು. ಬಂದವರೆಲ್ಲರೂ ಸತ್ಕರಿಸಲ್ಪಟ್ಟರು. ಪರಿಣಯಮಹೋತ್ಸವವು ಸಾಂಗವಾಗಿ ವಿಜೃಂಭಣೆಯಿಂದ ಬೆಳೆಯಿತು.

ಸಿಂಧುಪಂತನು ಆಷಾಢಮಾಸದಲ್ಲಿ ಶ್ರೀಪಾಂಡುರಂಗಸ್ವಾಮಿಯ ಸಂದರ್ಶನಕ್ಕೆ ಹೋಗಬೇಕೆಂದು ಇಚ್ಛಿಸಿ, ವಧೂವರರನ್ನು ಕರೆದುಕೊಂಡು ಸಕಳತ್ರನಾಗಿ ಹೊರಟು ಪಂಢರಪುರವನ್ನು ಸೇರಿ ಚಂದ್ರಭಾಗೆಯಲ್ಲಿ ಸ್ನಾನವಂಮಾಡಿ ಪುಂಡರೀಕನಿಗೆ ವಂದಿಸಿದನು. ಎಲೈ ಸಂತರಿರಾ! ಲೋಕದಲ್ಲಿ ಅನೇಕಪುಣ್ಯಕ್ಷೇತ್ರಗಳಿವೆ. ಯಾವುದನ್ನು ಪಂಢರಪುರಕ್ಕೆ ಹೋಲಿಸಿದರೂ ಗೌಣವಾಗಿ ತೋರುವುದು. ಜ್ಯೋತಿಗಳಲ್ಲಿ ಚಂದ್ರನಿಗೆ ಸಮಾನವಾದ ತಣ್ಣಿದಿರುಳ್ಳುದಾವುದು? ಧಾತುಗಳಲ್ಲಿ ಸುವರ್ಣಕ್ಕೆ ಸರಿಯಾದುದು ಆವುದು? ಯಶಸ್ವಿಗಳಲ್ಲಿ ವಿಷ್ಣುವಿಗಿಂತಲೂ ಯಾವನು ದೊಡ್ಡವನು? ರತ್ನಗಳಲ್ಲಿ ಕೌಸ್ತುಭಕಿಂತಲೂ ಪ್ರಕಾಶಮಾನವಾದುದು ಆವುದು? ವೃಷಭಗಳಲ್ಲಿ ನಂದಿಗಿಂತಲೂ ಶ್ರೇಷ್ಠವಾವುದು? ತಪಸ್ವಿಗಳಲ್ಲಿ ಶಂಕರನಿಗಿಂತಲೂ ಉತ್ಕೃಷ್ಟನಾವನು? ಶಾಸ್ತ್ರಗಳಲ್ಲಿ ಗೀತೆಗಿಂತಲೂ ಸಾರವಾದುದು ಇನ್ನಾವುದು? ಅಂತು ಕ್ಷೇತ್ರಗಳಲ್ಲಿ ಪಂಢರಪುರಕ್ಕಿಂತಲೂ ಪಾವನವಾದುದು ಭೂಮಂಡಲದಲ್ಲಿ ಮತ್ತಾವುದೂ ಇಲ್ಲ. ದರ್ಶನಮಾತ್ರದಿಂದಲೇ ಪಾಪಪರ್ವತವನ್ನು ದಹಿಸಿಬಿಡುವುದು. ಮೋಕ್ಷದಾಯಕಗಳಾದ ಸಪ್ತಪುರಿಗಳು ಇರುವಲ್ಲಿ ಅವುಗಳಿಗಿಂತಲೂ ಪಂಢರಪುರವು ಎಂತು ಶ್ರೇಷ್ಠವೆನಬಹುದು. ಇಲ್ಲಿ ಚಂದ್ರಭಾಗೆಯಲ್ಲಿ ಸ್ನಾನವಂಮಾಡಿ ಶ್ರೀವಿಟ್ಠಲನ

ಸಂದರ್ಶನವಂ ಕೈಕೊಂಡವರ ಅಹಂಕಾರವೂ ಅಭಿಮಾನವೂ ಆಕ್ಷಣದಲ್ಲಿ ಗಳಿತವಾಗಿ ಹೋಗುವುದು. ಮುಕ್ತತೀರ್ಥಗಳಲ್ಲಿ ಸ್ನಾನಮಾಡಲು, ಅಭಿಮಾನವು ಹೆಚ್ಚುವುದು. ಪಂಢರಪುರವನ್ನು ದರ್ಶನಮಾಡಿದ ದುರ್ಜನರ ಮನಸ್ಸೂ ದ್ರವಿಸುವುದು. ಇದರ ಮಹಿಮೆಯನ್ನು ಈಗ ವಿಶೇಷವಾಗಿ ವರ್ಣಿಸಲು ತೊಡಗಿದರೆ ಗ್ರಂಥವಿಸ್ತರವಾಗುವುದು. ಅದಂತಿರಲಿ.

ಆ ಪಾಂಡುರಂಗದೇವಾಲಯದಲ್ಲಿ ನಿತ್ಯದಂತೆ ಭಾಗವತರನೇಕರು ಭಕ್ತಿಯಿಂದ ತಾಳವನ್ನು ಹಾಕುತ್ತ ಮೃದಂಗವನ್ನು ಬಾಜಿಸುತ್ತ ತಂಬೂರಿಯನ್ನು ಮಿಾಟುತ್ತ ಕೀರ್ತನೆಯಂ ಪಾಡುತ್ತಿದ್ದರು. ಸಿಂಧುಪಂತನು ಮೊದಲು ಕ್ಷೇತ್ರಪ್ರದಕ್ಷಿಣವಂ ಮಾಡಿಕೊಂಡು ದೇವಸ್ಥಾನದ ಮಹಾದ್ವಾರದ ಬಳಿಗೆ ಬಂದು ಗರುಡಗಂಬದ ಬಳಿಯಲ್ಲಿ ಎಲ್ಲರೊಡನೆ ಸಾಷ್ಟಾಂಗನಮಸ್ಕಾರಮಾಡಿದನು. ಶ್ರೀಹರಿಕೀರ್ತನೆಗಳನ್ನು ಕೇಳಿ ಪರಮಾನಂದಭರಿತನಾದನು. ಮಗಳನ್ನೂ ಅಳಿಯನನ್ನೂ ಸನ್ನಿಧಿಗೆ ಕರೆದುಕೊಂಡುಹೋಗಿ ಸ್ವಾಮಿಯ ಸಂದರ್ಶನವಂ ಮಾಡಿಸಿದನು. ಸ್ವಾಮಿಗೆ ಅನೇಕವಾದ ಉತ್ಸವಗಳನ್ನು ಬಳೆಯಿಸಿ ಭಕ್ತಿಯಿಂದ ಅತಿಶಯಿತವಾಗಿ ಸೇವೆಮಾಡಿದನು. ಕೆಲವು ದಿವಸ ಅಲ್ಲಿ ಇದ್ದುಕೊಂಡು ಬಳಿಕ ಎಲ್ಲರೊಡನೆ ಅಲ್ಲಿಂದ ಹೊರಟು ಅಲಕಾಪುರಕ್ಕೆ ಬಂದು ಸೇರಿದನು.

ಅನಂತರ ವಿಟ್ಠಲನು ರಾಮೇಶ್ವರಯಾತ್ರೆಯಂ ಮಾಡಿಕೊಂಡು ಬರುವೆನೆಂದು ಹೇಳಲು, ಸಿಂಧುಪಂತನು ಕ್ಷಿಪ್ರದಲ್ಲಿಯೇ ಬರಬೇಕೆಂದು ತಿಳಿಯಿಸಿ ಅನುಜ್ಞೆಯಂ ಕೊಟ್ಟನು. ವಿಟ್ಠಲನು ಶ್ರೀವಿಟ್ಠಲನಿಗೆ ಭಕ್ತಿಯಿಂದ ವಂದಿಸಿ ಅಲ್ಲಿಂದ ಹೊರಟು ಪುರಾಣಪ್ರಸಿದ್ಧವಾದ ಮುಖ್ಯತಮವೆನಿಸಿದ ಅನೇಕಪುಣ್ಯಸ್ಥಾನಗಳನ್ನು ಅನುಕ್ರಮದಿಂದ ನೋಡುತ್ತ ಶ್ರೀಶೈಲಪರ್ವತಕ್ಕೆ ಬಂದು ಮಲ್ಲಿಕಾರ್ಜುನಸ್ವಾಮಿಯಂಕಂಡು ಪಾಪರಾಶಿಗಳನ್ನು ಭಸ್ಮೀಕರಿಸುವ ಅಪಾರಮಹಿಮೆಯುಳ್ಳ ನಿವೃತ್ತಿಸಂಗಮವಂ ನೋಡಿ ಮಾರ್ಗವನ್ನು ದಾಟುತ್ತ ಹೃದಯದಲ್ಲಿ ಶ್ರೀವಿಟ್ಠಲನಂ ಧ್ಯಾನಿಸುತ್ತ ಪ್ರೇಮಯುಕ್ತನಾಗಿ ಮುಖದಿಂದ ಆ ಭಗವಂತನ ನಾಮಂಗಳಂ ಸಂಕೀರ್ತಿಸುತ್ತ ಅಹೋಬಲನರಸಿಂಹಗಿರಿಯಂ ಸೇರಿ ಅರುಣಾಚಲ ಮೊದಲಾದುದಂ ನೋಡಿಕೊಂಡು ಚಿದಂಬರಕ್ಕೆ ಬಂದು ಅಲ್ಲಿದ್ದು ಬಳಿಕ ಗೋಕರ್ಣಕ್ಷೇತ್ರವನ್ನು ಸೇರಿ ಪಾಟಕೇಶ್ವರದಲ್ಲಿ ಸ್ನಾನವಂಮಾಡಿ ಅಲ್ಲಿಂದ ಆಂಜನೇಯನು ಸೀತಾವೃತ್ತಾಂತವನ್ನು ತಿಳಿಯುವುದಕ್ಕೋಸ್ಕರ ಯಾವಪರ್ವತದ ಮೇಲಿಂದ ಹಾರಿದನೋ ಆ ಸ್ಥಾನವನ್ನೂ ಜನಾರ್ದನವನ್ನೂ ನೋಡಿಕೊಂಡು ರಾಮೇಶ್ವರಕ್ಕೆ ಬಂದನು. ಅಲ್ಲಿ ಸೇತುಸ್ನಾನವನ್ನೂ ರಾಮೇಶ್ವರನ ಸಂದರ್ಶನವನ್ನೂ ಮಾಡಿ ಅನೇಕಪುಣ್ಯತೀರ್ಥಗಳಲ್ಲಿ ಮಿಂದು ಅಲ್ಲಿ ಕೆಲವುದಿನವಿದ್ದು ಬಳಿಕ ಅಲ್ಲಿಂದ ಹೊರಟು ಕೊಲ್ಹಾಪುರಕ್ಕೆ ನಡೆತಂದು ಪಂಚಗಂಗೆಯಲ್ಲಿ ಸ್ನಾನವಂ ಮಾಡಿ ಶ್ರೀಮಹಾಲಕ್ಷ್ಮಿಯ ದರ್ಶನವಂ ಮಾಡಿಕೊಂಡು ಅಲ್ಲಿಂದ ಪ್ರಯಾಣಮಾಡಿ

ಕೃಷ್ಣಾತೀರಕ್ಕೆ ಬಂದು ಮಾಹುಲೀಸಂಗವುದಲ್ಲಿ ಸ್ನಾನವಂಮಾಡಿ ಅಲ್ಲಿಂದ ಸಂಚಾರ ಮಾಡಿಕೊಂಡು ಅಲಕಾಪುರವನ್ನು ಐದಿದನು.

ಬಳಿಕ ಸಿಂಧುಪಂತನು ತೀರ್ಥಯಾತ್ರೆಯಂ ಮಾಡಿಕೊಂಡು ಬಂದ ಅಳಿಯನನ್ನು ಕಂಡು ಸಂತೋಷದಿಂದ ಆಲಿಂಗಿಸಿಕೊಂಡು ಬಹುವಿಧವಾಗಿ ಉಪಚರಿಸಿದನು. ವಿಟ್ಠಲನು ಅತ್ತೆಮಾವಂದಿರಿಗೆ ಸಾಷ್ಟಾಂಗವಂದನೆಯಂಮಾಡಿ ಕೆಲವುದಿನ ಅಲ್ಲಿಯೇ ಇದ್ದು ಅವರ ಮನಸ್ಸನ್ನು ಸಮಾಧಾನಗೊಳಿಸಿ, ಬಳಿಕ ಮಾತಾಪಿತೃಗಳ ದರ್ಶನವಂ ಮಾಡಬೇಕೆಂದು ಅಪೇಕ್ಷೆಯುಳ್ಳವನಾಗಿರುವೆನು; ಅಪ್ಪಣೆಯಂ ಕೊಡಬೇಕು— ಎಂದು ಕೇಳಲು, ಸಿಂಧುಪಂತನು—ಅವಶ್ಯವಾಗಿ ಹೋಗಿ ಬರಬಹುದು. ನಿಮ್ಮ ಕಾಂತೆಯನ್ನು ಕರೆದುಕೊಂಡು ನಾವೂ ಬರುವೆವು. ನಿಮ್ಮ ಮಾತಾಪಿತೃಗಳ ದರ್ಶನವಂ ನಾವು ಮಾಡಬೇಕಲ್ಲವೇ ?—ಎಂದು ಹೇಳಿ ಸಕುಟುಂಬನಾಗಿ ಅಳಿಯನೊಡನೆ ಹೊರಟು ಆಪೆಗಾವವನ್ನು ಸೇರಿ ಬೇಗನಾದ ಗೋವಿಂದಪಂತನನ್ನು ಕಂಡನು. ವಿಟ್ಠಲನು ಪತ್ನಿಯೊಡನೆ ಮಾತಾಪಿತೃಗಳಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ನಡೆದ ನಡೆವಳಿಯನೆಲ್ಲವನ್ನೂ ತಿಳಿಯಿಸಿದನು.

ಗೋವಿಂದಪಂತನು ಎಲ್ಲವನ್ನೂ ಕೇಳಿ ಸಂತೋಷಗೊಂಡು ಬೇಗನಾದ ಸಿಂಧುಪಂತನನ್ನು ಸನ್ಮಾನಿಸಿದನು. ಶ್ರೀರಾಮಚಂದ್ರನು ಸೀತೆಯಂ ಮದುವೆಯಾಗಿ ಅಯೋಧ್ಯೆಗೆ ಬರಲು ಕೌಸಲ್ಯೆ ನೋಡಿ ಎಂತು ಸಂತೋಷಗೊಂಡಳೋ; ಅರ್ಜುನನು ಪ್ರತಾಪದಿಂದ ದ್ರೌಪದಿಯಂ ಗೆದ್ದುತರಲು, ಕುಂತಿಯೆಂತು ಹರ್ಷವನ್ನೈದಿದಳೋ ಅಂತು ನೀರೆಯು ಸಕಳತ್ರನಾಗಿ ಬಂದ ಮಗನನ್ನು ಕಂಡು ಆನಂದಗೊಂಡಳು.

ಸಿಂಧುಪಂತನು ಕೆಲದಿನವಿದ್ದು ಸತ್ಕೃತನಾಗಿ ಅನುಜ್ಞೆಯಂ ಪಡೆದು ಅಲ್ಲಿಂದ ಹೊರಟು ತನ್ನ ಊರನ್ನು ಸೇರಿದನು.

ಕೆಲವುಕಾಲ ಕಳೆದ ಬಳಿಕ ವಿಟ್ಠಲನ ತಾಯಿತಂದೆಗಳು ಕಾಲಧರ್ಮವನ್ನೈದಿದರು. ಸಂಸಾರಭಾರವು ತನ್ನಮೇಲೆಬಿದ್ದರೂ ಆತನು ಆ ಚಿಂತೆಯನ್ನು ಮನಸ್ಸಿಗೆ ಹತ್ತಿಸಿಕೊಳ್ಳದೆ ನಿರ್ಮಲವಾದ ಆಕಾಶದಂತೆ ನಿರ್ಲಿಪ್ತನಾಗಿದ್ದನು. ನದಿಗಳ ಪ್ರವಾಹವು ವರ್ಷಾಕಾಲದಲ್ಲಿ ಅತ್ಯಧಿಕವಾಗಿ ಬಂದು ಸೇರಿದರೂ ಬೇಸಗೆಯಲ್ಲಿ ಕಡಿಮೆಯಾದರೂ ಸಮುದ್ರನು ಹೆಚ್ಚದೆಯೂ ತಗ್ಗದೆಯೂ ಇರುವಂತೆ, ಸುಖದುಃಖಗಳನ್ನು ಎಣಿಸದೆ ಸಮಭಾವದಿಂದಲೇ ಇರುತ್ತ ಕೇವಲವಿರಕ್ತನಾಗಿದ್ದನು.

ಸಿಂಧುಪಂತನು ಅಳಿಯನ ನಡೆವಳಿಯನ್ನು ಕೇಳಿ ಮನಸ್ಸಿನಲ್ಲಿ ಖೇದಪಟ್ಟು, ಹೋಗಿ ನೋಡಿಕೊಂಡುಬರಬೇಕೆಂದು ಆಲೋಚಿಸಿ ಮತ್ತೆ ಆಪೆಗಾವಕ್ಕೆ ಬಂದು ಅಳಿಯನನ್ನು ಕಂಡು ಯೋಗಕ್ಷೇಮವನ್ನು ವಿಚಾರಿಸಿ ಬಳಿಕ ಆತನನ್ನು ಕುರಿತು- ಸಂಸಾರಭಾರವು ನಿಮ್ಮಮೇಲೆ ಬಿದ್ದಿರುವುದು. ಆದರೂ ಈ ವಿಷಯವನ್ನು ನೀವು

ಮನಸ್ಸಿಗೆ ಹತ್ತಿಸಿಕೊಳ್ಳುವುದಿಲ್ಲ. ಕೇವಲವಿರಕ್ತರಾಗಿರುವಿರಿ. ಇಂತು ಉದಾಸೀನಭಾವದಿಂದಿದ್ದರೆ ಸಂಸಾರವು ಎಂತು ನಡೆಯಬೇಕು ? ಯಾವ ಸಾಮಗ್ರಿಯಿಲ್ಲದಿದ್ದರೆ ತಾನೇ ಆಗುವುದು ? ಆದುದರಿಂದ ನೀವು ನನ್ನಮೇಲೆ ದಯೆಯಿಟ್ಟು ನಮ್ಮ ಊರಿಗೆ ಬರಬೇಕು. ಶ್ರೀಹರಿಯು ನಿಮ್ಮವರನ್ನು ಎಂತಾದರೂ ಸಂರಕ್ಷಿಸುವನು-ಎಂದು ಹಿತವಾಗಿ ಮಾತನಾಡಿದನು. ಅದಕ್ಕೆ ಅವನು ಅಂಗೀಕಾರಗೊಂಡನು. ಸಿಂಧುಪಂತನು ಮಗಳನ್ನೂ ಅಳಿಯನನ್ನೂ ಕರೆದುಕೊಂಡು ಹೊರಟು ತನ್ನ ಊರನ್ನು ಸೇರಿದನು.

ವಿಟ್ಠಲನು ಆಷಾಢಮಾಸದ ಮತ್ತು ಕಾರ್ತಿಕಮಾಸದ ಏಕಾದಶಿಗಳಲ್ಲಿ ಪಂಢರಪುರದ ಯಾತ್ರೆಗೆ ತಪ್ಪದೆ ಹೋಗುತ್ತಿದ್ದನು. ಬಹುಕಾಲಕಳೆದರೂ ಸಂತಾನವಾಗಲಿಲ್ಲ. ಬಹುದಿವಸ ಪಂಢರಪುರಕ್ಷೇತ್ರದಲ್ಲಿ ವಾಸಮಾಡುತ್ತ ಹಗಲೂ ರಾತ್ರಿಯೂ ಹರಿನಾಮಂಗಳಂ ಸಂಕೀರ್ತಿಸುತ್ತ ಇದ್ದನು. ಬಳಿಕ ಒಂದುದಿವಸ ತನ್ನ ಕಾಂತೆಯನ್ನು ಕುರಿತು_ವಾರಾಣಸಿಗೆ ಹೋಗಿ ಸಂನ್ಯಾಸಗ್ರಹಣವಂ ಮಾಡಬೇಕೆಂದಿರುವೆನು_ಎನಲು, ಆಮಾತಂ ಕೇಳಿ ಚಿಂತಾಕ್ರಾಂತೆಯಾದ ಆ ರುಕ್ಮಿಣೀಬಾಯಿಯು ಏನುತ್ತರವನ್ನೂ ಕೊಡದೆ ಸುಮ್ಮನಿದ್ದು ಬಳಿಕ ತನ್ನ ತಂದೆಗೆ ಈ ವೃತ್ತಾಂತವನ್ನು ತಿಳಿಯಿಸಿದಳು. ಅದಕ್ಕೆ ಆತನು_ಸಂತಾನವಿಲ್ಲದಿರುವಾಗ ಸರ್ವಥಾ ಸಂನ್ಯಾಸಗ್ರಹಣವಂ ಮಾಡಬಾರದು; ಆದುದರಿಂದ ಆವಿಷಯದಲ್ಲಿ ಪತಿಗೆ ಅನುಜ್ಞೆಯಂ ಕೊಡಬೇಡ_ಎಂದನು.

ವಿಟ್ಠಲನು ತನ್ನ ಇಷ್ಟವನ್ನು ಮಡದಿಯು ಒಪ್ಪದಿರಲು, ಒಂದುದಿವಸ ಆಕೆಯನ್ನು ಕುರಿತು_ಸ್ನಾನಕ್ಕೆ ಹೋಗಿಬರುವೆನು; ಅನುಜ್ಞೆಯಂಕೊಡು_ಎಂದನು. ಅದಕ್ಕೆ ಆಕೆ ಸ್ನಾನಕ್ಕೆಹೋಗಲು ನನ್ನ ಅನುಜ್ಞೆಯನ್ನೇಕೆ ಕೇಳಬೇಕು ? ಅವಶ್ಯವಾಗಿ ಹೋಗಬಹುದು_ಎಂದಳು. ಅಷ್ಟು ಹೇಳಿದುದೇ ಸಾಕೆಂದು ಆತನು ತ್ವರೆಗೊಂಡು ಪಂಜರದಿಂದ ಬಿಡಲ್ಪಟ್ಟ ಗಿಳಿಯು ಥಟ್ಟನೆ ವೃಕ್ಷಾಗ್ರವನ್ನು ಕುರಿತು ಹೋಗುವಂತೆ, ಬೇಟೆಗಾರನ ಬಲೆಯಿಂದ ಬಿಡಲ್ಪಟ್ಟ ಹುಲ್ಲೆಯು ತನ್ನ ತಾಣವನ್ನುಕುರಿತು ಓಡಿಹೋಗುವಂತೆ, ಹೊರಟು ಕೆಲವುದಿನಗಳಲ್ಲಿ ವಾರಾಣಸಿಯನ್ನು ಸೇರಿದನು. ಅಲ್ಲಿ ನಿತ್ಯವೂ ಗಂಗಾಸ್ನಾನವನ್ನು ಮಾಡಿ ವಿಶ್ವೇಶ್ವರನನ್ನು ಸೇವಿಸುತ್ತಿದ್ದು ಬಳಿಕ ಪ್ರಯಾಗಕ್ಕೆ ಬಂದು ತ್ರಿವೇಣಿಯಲ್ಲಿ ಸ್ನಾನಮಾಡಿ ಮಾಧವನಂ ಆರಾಧಿಸಿ ಅಲ್ಲಿಂದ ಪುಷ್ಕರನಿವಾಸವಂ ಸೇರಿದನು. ಅಲ್ಲಿ ಅನೇಕರಾದ ಸಾಧುಮಹನೀಯರು ಇರುತ್ತಿದ್ದರು. ಗೀತಾವ್ಯಾಖ್ಯಾನವಿಚಾರವು ನಡೆಯುತಿದ್ದಿತು. ಅವರಲ್ಲಿ ಸಂನ್ಯಾಸಯೋಗವು ಚೆನ್ನಾಗಿ ಶ್ರುತಿಪಥವನ್ನು ಅಡರಿತು. ಈ ಸಂಸಾರವು ದುಸ್ತರವಾದುದು. ಮಾಯೆಯು ಅನಿವಾರ್ಯವಾದುದು. ಇದರ ಸಂಬಂಧಿಯಾದ ಸುಖದುಃಖವೂ ಜನನಮರಣವೂ ಯಾವುದರ ದೆಸೆಯಿಂ ತಪ್ಪಿಹೋಗುವುದೋ ಅದನ್ನವಲಂಬಿಸಬೇಕು_ಎಂದು ದೃಢವಾಗಿ ನಿಶ್ಚಯಗೊಂಡು ವಿಚಾರಮಾಡಿ ಅಲ್ಲಿಂದ ಶ್ರೀರಾಮಾಶ್ರಮರೆಂಬ ಯತಿಗಳನ್ನು ಸೇರಿ ಅವರನ್ನು ಶರಣು

ಹೊಕ್ಕು ಸದ್ಭಾವದಿಂದ ಸಂನ್ಯಾಸವಂ ಕೊಡಬೇಕೆಂದು ಸಾಷ್ಟಾಂಗವಂದನೆಯಂ ಮಾಡಿ ಕೇಳಿಕೊಂಡನು.

ಅವರು—ನಿನಗೆ ಮಡದಿಮಕ್ಕಳು ಅಣ್ಣತಮ್ಮಂದಿರು ನಂಟರಿಷ್ಟರು ಯಾರು ಇರುವರು ?—ಎಂದು ಬೆಸಗೊಳ್ಳಲು, ಅದಕ್ಕೆ ಅವನು-ನನಗೆಯಾರೂ ಇಲ್ಲ. ನಾನು ಒಬ್ಬನೇ ಇರುವೆನು. ಅವರಿಂದಲೇ ಅನುತಪ್ತನಾಗಿ ತಮ್ಮನ್ನು ಶರಣುಹೊಕ್ಕೆನು—ಎಂದನು. ಅವರು ವಿಟ್ಠಲನ ಸಂಸಾರವಿರಕ್ತತೆಯನ್ನು ಕಂಡು, ಅವಶ್ಯವಾಗಲಿ—ಎಂದು ಸಂನ್ಯಾಸವಂಕೊಟ್ಟರು. ಆತನು ತುರೀಯಾಶ್ರಮವನ್ನು ಸ್ವೀಕರಿಸಿ ಕಾಶಿಯಲ್ಲಿ ಆನಂದದಿಂದ ಇರುತಿದ್ದನು.

ರುಕ್ಮಿಣೀಬಾಯಿಯು ಈ ವೃತ್ತಾಂತವನ್ನು ತಿಳಿದು ಅತ್ಯಂತಚಿತಾಕ್ರಾಂತೆಯಾಗಿ—ಪ್ರಾಣಕಾಂತನೆ ! ಈ ಯೌವನದಲ್ಲಿ ನನ್ನನ್ನು ನೀನು ತ್ಯಾಗಮಾಡಬಹುದೇ?—ಎಂದು ಹಂಬಲಿಸುತ್ತ, ಶ್ರೀರಾಮನ ವಿಯೋಗದಿಂದ ಜಾನಕಿಯೂ, ನಳಮಹಾರಾಜನ ವಿರಹದಿಂದ ದಮಯಂತಿಯೂ, ಹರಿಶ್ಚಂದ್ರನ ವಿಯೋಗದಿಂದ ಚಂದ್ರಮತಿಯೂ, ಸತ್ಯವಂತನ ಅಗಲಿಕೆಯಿಂದ ಸಾವಿತ್ರಿಯೂ, ಜಯದೇವನ ವಿಶ್ಲೇಷದಿಂದ ಪದ್ಮಾವತಿಯೂ, ಸಂಕಟಪಟ್ಟಂತೆ, ಹಗಲೂ ರಾತ್ರಿಯೂ ಸಂಕಟಪಡುತ್ತ ಅತ್ಯಂತದುಃಖಕ್ಕೊಳಗಾದಳು. ತಾಯ್ತಂದೆಗಳು ಹಲವುಬಗೆಯಿಂದ ಧೈರ್ಯವನ್ನು ಹೇಳಿ ಸಮಾಧಾನಗೊಳಿಸಿದರು. ಆಕೆ ಎಂತಾದರೂ ದೇಹವು ಸಾರ್ಥಕವಾಗಲೆಂದು ನಿತ್ಯವೂ ಅಶ್ವತ್ಥಸೇವೆಯಂಮಾಡುತಿದ್ದಳು. ಆ ಸೇವೆಯು ಅತಿಶಯಿತವಾಗಿ ನಡೆದುದರಿಂದ ಆಕೆಯ ಜನ್ಮಾಂತರಕರ್ಮದೋಷಂಗಳು ದಹಿಸಿಹೋದುವು.

ಇಂತಿರಲು, ಒಂದುದಿವಸ ವಿಟ್ಠಲನಿಗೆ ಸಂನ್ಯಾಸೋಪದೇಶವಂ ಮಾಡಿದ ಆ ಪರಮಹಂಸರು ಮಾರ್ಗವಶದಿಂದ ಅಲಕಾವತಿಗೆಬಂದು, ಆಕೆ ಅಶ್ವತ್ಥಸೇವೆಯಂ ಮಾಡುತಿದ್ದೆಡೆಯಂ ಸೇರಿ, ಅಲ್ಲಿಯ ಕಟ್ಟೆಯ ಮೇಲೆ ವಿಶ್ರಮಿಸಿಕೊಳ್ಳುವುದಕ್ಕೆ ಕುಳಿತುಕೊಂಡರು. ಆಕೆ ಆಮಹನೀಯರನ್ನು ಕಂಡು ಥಟ್ಟನೆ ಅಭಿವಂದಿಸಿದಳು. ಅವರು ಆಕೆಯನ್ನುನೋಡಿ, ಪುತ್ರವತಿಯೂ ಸೌಭಾಗ್ಯವತಿಯೂ ಆಗು—ಎಂದು ಹರಸಿದರು. ಅದಂ ಕೇಳಿ ಆಕೆ ಆಶ್ಚರ್ಯಗೊಂಡು ನಕ್ಕಳು. ಅದಕ್ಕೆ ಅವರು—ಅಮ್ಮಾ ! ನಿನಗೆ ಏನಾಶ್ಚರ್ಯವು ತೋರಿತು ? ಏಕೆ ನಗುವೆ ?—ಎಂದು ಬೆಸಗೊಂಡರು. ಆಕೆ-ಪೂಜ್ಯರೆ ! ಏನಹೇಳಲಿ ? ನನ್ನ ಪತಿಯು ಸಂನ್ಯಾಸಗ್ರಹಣವಂ ಮಾಡಿರುವನು. ಅಗ್ನಿಕುಂಡದಲ್ಲಿ ಬಿತ್ತಿದ ಬೀಜದಂತೆಯೂ, ಊಷರಕ್ಷೇತ್ರದಲ್ಲಿ ವರ್ಷಿಸಲ್ಪಟ್ಟ ವೃಷ್ಟಿಯಂತೆಯೂ, ತಾವು ನನ್ನಲ್ಲಿ ಮಾಡಿದ ಆಶೀರ್ವಾದವು ನಿರರ್ಥಕವು. ಪತಿಯ ಸಂಗವಿಲ್ಲದ ನನಗೆ ಸಂತಾನವೆಂತು ಲಭಿಸುವುದೆಂದು ಆಶ್ಚರ್ಯವುಂಟಾಗಿರುವುದು. ಕಣ್ಣು ಕಾಣದಿರಲು, ಕನ್ನಡಿಯಂ ತೋರಿಸುವುದರಿಂದೇನು ? ಆರೋಗ್ಯವಿಲ್ಲದಿರಲು, ಮೃಷ್ಟಾನ್ನವನ್ನುಬಡಿಸುವುದರಿಂದೇನು ? ಸಾದೆಯಿಲ್ಲದಿರಲು, ಅಗ್ನಿಯನೂದುವುದ

ರಿಂದೇನು ? ಎಣ್ಣೆಯಿಲ್ಲದಿರಲು, ಬತ್ತಿಯಂ ಮಿಾಟುವುದರಿಂದೇನು ? ವೃಷ್ಟಿಯಿಲ್ಲದಿರಲು, ಭೂಮಿಯಲ್ಲಿ ಬೀಜವನ್ನು ಬಿತ್ತುವುದರಿಂದೇನು ? ಆಯುಸ್ಸಿಲ್ಲದಿರಲು, ವೈದ್ಯನು ದಿವ್ಯೌಷಧವನ್ನು ಕುಡಿಸುವುದರಿಂದೇನು ? ದೈವಬಲವಿಲ್ಲದಿರಲು, ಜೋಯಿಸನು ವಧೂವರರಿಗೆ ಲಗ್ನವನ್ನು ಕಟ್ಟಿಕೊಡುವುದರಿಂದೇನು ? ಅಂತು ಪ್ರಾಪ್ತಿಯಿಲ್ಲದ ನನಗೆ ನೀವು ಆಶೀರ್ವಾದವಮಾಡಿದುದರಿಂದೇನು ? ನಿಮ್ಮ ಆಶೀರ್ವಚನವು ವ್ಯರ್ಥವಾಗುವುದಲ್ಲಾ !–ಎಂದು ಮನದಲ್ಲಿ ವಿಕಲ್ಪದಿಂದ ಸಂಕಟಪಡುತ್ತಿರುವೆನು-ಎನಲು, ಆ ಯತಿವರ್ಯರು ಮನದಲ್ಲಿ ವಿಸ್ಮಿತರಾಗಿ ನಿನ್ನ ಪತಿಗೆ ಸಂನ್ಯಾಸವಂ ಕೊಟ್ಟವನು ಯಾವನು? ಅವನಿಗೆ ಪ್ರಾಯಶ್ಚಿತ್ತವಂ ಮಾಡಿಸಬೇಕು. ಸಂತಾನವಿಲ್ಲದ ತರುಣಿಯನ್ನು ಬಿಟ್ಟು ಸಂನ್ಯಾಸವಂ ಗ್ರಹಿಸಿದವನಿಗೂ, ಅಂತಹನಿಗೆ ಸಂನ್ಯಾಸವನ್ನು ಕೊಟ್ಟವನಿಗೂ ಶಾಸ್ತ್ರದಲ್ಲಿ ಶಿಕ್ಷೆಯು ಹೇಳಲ್ಪಟ್ಟಿದೆ. ನಿನ್ನ ಪತಿಯು ಯಾರು ? ಆತನು ಎಲ್ಲಿರುವನು ?-ಎಂದು ಬೆಸಗೊಂಡರು. ಆಕೆ ತನ್ನ ಪತಿಯ ಗುರುತನೆಲ್ಲವನ್ನೂ ತಿಳಿಯಿಸಿದಳು. ಅವರು ಎಲ್ಲವನ್ನೂ ಕೇಳಿ ಆತನಿಗೆ ಸಂನ್ಯಾಸವಂ ಕೊಟ್ಟವರು ತಾವೇ ಎಂದು ನಿರ್ಧರಿಸಿಕೊಂಡು ತಮ್ಮಲ್ಲಿಯೇ ದೋಷವು ಸಂಬಂಧಿಸಿದುದರಿಂದ ಇತರರನ್ನು ಆಕ್ಷೇಪಿಸುವುದನುಚಿತವೆಂದು ಸುಮ್ಮನಾದರು: ಚಂದ್ರನು ತನ್ನಲ್ಲಿ ಕಳಂಕವನ್ನು ಇಟ್ಟುಕೊಂಡು ನಕ್ಷತ್ರಗಳನ್ನು ಹಾಸ್ಯಮಾಡಬಹುದೇ ? ತನ್ನಲ್ಲಿ ಕ್ಷಾರತ್ವವಿರಲು, ಸಮುದ್ರನು ಗಂಗೆಯಮೇಲೆ ಕೋಪಿಸಿಕೊಳ್ಳಬಹುದೇ ? ತನ್ನ ಬಾಯಿಯು ಕಹಿಯಾಗಿರಲು, ದಿವ್ಯವಾದ ಅನ್ನದಮೇಲೆ ದೋಷವನ್ನು ಹೇಳಬಹುದೇ ? ತಾನು ಜಾತ್ಯಂಧನಾಗಿದ್ದು ಸೂರ್ಯನನ್ನು ಅಧಿಕ್ಷೇಪಿಸಬಹುದೇ ? ತನ್ನ ಮೂಗು ವಕ್ರವಾಗಿರಲು, ಕನ್ನಡಿಯನ್ನು ಕೆಟ್ಟದೆನಬಹುದೇ ? ಆಯತಿವರ್ಯರು ಅನುಚಿತವಾದ ಕಾರ್ಯವು ತಮ್ಮಿಂದ ನಡೆದುದೆಂದು ಮನದಲ್ಲಿ ಕಳವಳಗೊಂಡು, ಆಕೆಯನ್ನು ತಕ್ಕನುಡಿಗಳಿಂದ ಸಮಾಧಾನಗೊಳಿಸಿ, ನಿನ್ನ ಆಪ್ತರು ಯಾರು ಇರುವರು ?–ಎಂದು ಕೇಳಲು, ಆಕೆಯು ಕೈಗಳಂ ಜೋಡಿಸಿಕೊಂಡು ನಮ್ರಮುಖಿಯಾಗಿ-ಪೂಜ್ಯರೆ! ನನಗೆ ತಾಯಿತಂದೆಗಳೂ ಅಣ್ಣತಮ್ಮಂದಿರೂ ಎಲ್ಲರೂ ಇರುವರು. ಪತಿಯೊಬ್ಬನು ಬಳಿಯಲ್ಲಿ ಇಲ್ಲದಿರುವುದರಿಂದ ಯಾರೂ ಇಲ್ಲದಂತೆಯೇ ಇದೆ-ಎಂದಳು. ಅದಕ್ಕೆ ಅವರು ನಿನ್ನತಂದೆಯನ್ನು ಇಲ್ಲಿಗೆ ಕರೆದುಕೊಂಡು ಬಾ-ಎನಲು, ಆಕೆ ಶೀಘ್ರದಲ್ಲಿ ಮನೆಗೆಹೋಗಿ ತಂದೆಯಂ ಕರೆದುಕೊಂಡು ಬಂದಳು. ಸಿಂಧುಪಂತನು ಆಯತೀಶ್ವರರನ್ನು ಕಂಡು ಸಾಷ್ಟಾಂಗನಮಸ್ಕಾರವಮಾಡಿ ಪ್ರಾರ್ಥಿಸಿ ಮನೆಗೆ ಕರೆದುಕೊಂಡುಬಂದು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ ಭಿಕ್ಷೆಯಂ ಮಾಡಿಸಿ ವಿನೀತನಾಗಿ–ಪೂಜ್ಯರ ಆಗಮನವು ಎಲ್ಲಿಂದ ? ಮುಂದೆ ಎಲ್ಲಿಗೆ ಪ್ರಯಾಣಮಾಡಬೇಕು ?–ಎಂದು ಯೋಗಕ್ಷೇಮವನ್ನು ವಿಚಾರಿಸಿದನು. ಅದಕ್ಕೆ ಅವರು–ನಮ್ಮ ಆಶ್ರಮವು ಕಾಶೀಪಟ್ಟಣದಲ್ಲಿರುವುದು. ರಾಮೇಶ್ವರಕ್ಕೆ ಹೋಗಬೇಕೆಂದು ದಕ್ಷಿಣದೇಶಕ್ಕೆ ಬಂದೆವು. ಈ ವೂರಿಗೆ ಬರುವುದೂ

ಅಶ್ವತ್ಥಸೇವೆಯಂ ಮಾಡುತ್ತಿದ್ದ ನಿಮ್ಮ ಮಗಳನ್ನು ಮೊದಲು ಕಂಡೆವು. ಈಕೆ ತನ್ನ ಯೋಗಕ್ಷೇಮವೆಲ್ಲವನ್ನೂ ತಿಳಿಯಿಸಿದಳು. ಇದನ್ನು ಕೇಳುವುದೂ ಮತ್ತೆ ಕಾಶಿಗೇ ಹಿಂತಿರುಗಬೇಕಾಯಿತು. ಈಕೆಯ ಸ್ಥಿತಿಯನ್ನು ನೇರ್ಪಡಿಸದಿದ್ದರೆ, ನಮ್ಮ ಸುಕೃತವೆಲ್ಲವೂ ನಾಶವನ್ನೈದುವುದು. ನೀವು ನಿಮ್ಮ ಈ ಮಗಳನ್ನು ಸಂಗಡ ಕರೆದುಕೊಂಡು ಕಾಶಿಗೆ ಹೊರಡಬೇಕು—ಎಂದು ಉಚಿತವಾಗಿ ಮಾತನಾಡಿದರು. ಸಿಂಧುಪಂತನು ಸಂತೋಷಗೊಂಡು, ಅವರನ್ನು ಕುರಿತು—ಪೂಜ್ಯರೆ! ನೀವು ದಯಾವಂತರು. ಎಂತಾದರೂ ಇವಳನ್ನು ಸಂರಕ್ಷಿಸಬೇಕು—ಎಂದು ಸಾಷ್ಟಾಂಗನಮಸ್ಕಾರವಮಾಡಿ ಮಗಳನ್ನೂ ಕರೆದುಕೊಂಡು ಆಯತಿವರ್ಯರೊಡನೆ ಹೊರಟನು.

ಕೆಲವುದಿನಗಳಲ್ಲಿ ಕಾಶೀಪಟ್ಟಣವನ್ನು ಸೇರಿದರು. ಆ ಯತಿವರ್ಯರು ತಮ್ಮ ಆಶ್ರಮವನ್ನು ಹೊಕ್ಕು ಶಿಷ್ಯನಾದ ಚೈತನ್ಯನಂ ಕರೆದು—ಅಯ್ಯಾ! ಗೃಹಸ್ಥಾಶ್ರಮದಲ್ಲಿ ನಿನಗೆ ಹೆಂಡತಿಯಿದ್ದಳೋ? ಇರಲಿಲ್ಲವೋ? ಈಗಲಾದರೂ ಯಥಾರ್ಥವನ್ನು ಹೇಳು—ಎಂದು ಪೂರ್ವವೃತ್ತಾಂತವಂ ಬೆಸಗೊಂಡರು. ಅದಕ್ಕಾತನು ಗುರುಗಳನ್ನು ಅಭಿವಂದಿಸಿ ಅಭಯವಂ ಬೇಡಿ, ತಂದೆಯು ಕೋಪಯುಕ್ತನಾಗಿ ಕೇಳಲು, ಅಪರಾಧಿಯಾದ ಬಾಲಕನು ಎಂತು ಅಂಜುತ ಉತ್ತರವನ್ನು ಕೊಡುವನೋ, ರಾಜನು ಶಿಕ್ಷೆಯ ಮಾಡುವೆನೆಂದು ತರ್ಜಿಸಲು, ಅನುಚಿತಕಾರ್ಯವನ್ನು ಮಾಡಿದ ಪ್ರಜೆಗಳು ಎಂತು ಭೀತರಾಗಿ ನುಡಿಯುವರೋ; ವೈದ್ಯನು ಕೋಪದಿಂದ ಬೆಸಗೊಳ್ಳಲು, ಅಪಥ್ಯವಂ ಮಾಡಿದ ರೋಗಿಯು ವ್ಯಾಧಿಭಯದಿಂದ ಎಂತು ಯಥಾರ್ಥವನ್ನು ಹೇಳುವನೋ; ಅತ್ತೆಯು ಕ್ರೋಧಾವಿಷ್ಟೆಯಾಗಿ ವಿಚಾರವಮಾಡಲು, ಮನೆಗೆಲಸದಲ್ಲಿ ವ್ಯತ್ಯಾಸವುಳ್ಳ ಹೊಸಸೊಸೆಯು ಎಂತು ನಡುಗುತ್ತ ನಡೆದುದನ್ನು ನುಡಿವಳೋ; ಅಂತು ಗುರುಗಳು ಎಲ್ಲಿ ಶಾಪವಂ ಕೊಡುವರೋ—ಎಂದು ಶಂಕೆಗೊಂಡು ಗಡಗಡನೆ ನಡುಗುತ್ತ ಪೂರ್ವವೃತ್ತಾಂತವೆಲ್ಲವನ್ನೂ ಯಥಾಸ್ಥಿತವಾಗಿ ನುಡಿದನು.

ಆಯತಿವರರು ಎಲ್ಲವನ್ನೂ ಕೇಳಿ ಅನುತಾಪಗೊಂಡು ದೂರವಾಗಿ ನಿಂತಿದ್ದ ರುಕ್ಮಿಣೀಬಾಯಿಯನ್ನು ಕರೆದು ಚೈತನ್ಯನಂ ಕುರಿತು—ನಿನ್ನ ಈ ಕಾಂತೆಯನ್ನು ಅಂಗೀಕರಿಸಿ ಸ್ವದೇಶಕ್ಕೆ ಹೋಗಿ ಸ್ವಧರ್ಮಾಚರಣೆಯಂ ಮಾಡುವನಾಗು. ಇದು ಅವಿಧಿಕರ್ಮವೆಂದು ಮನದಲ್ಲಿ ವಿಕಲ್ಪಗೊಂಡೀಯೆ; ನನ್ನ ಆಜ್ಞೆಯೇ ನಿನಗೆ ಪ್ರಮಾಣವು. ಹೃಷೀಕೇಶನು ನಿನ್ನನ್ನು ಉದ್ಧಾರವಮಾಡುವನು-ಎಂದು ಆಶೀರ್ವಚನಪುರಸ್ಸರವಾಗಿ ಅಪ್ಪಣೆಯಿತ್ತರು. ಆತನು ಗುರುಗಳ ಪಾದಕ್ಕೆ ಅಭಿವಂದಿಸಿ, ಅಗಸ್ತ್ಯರ ಆಜ್ಞೆಯನ್ನು ಸಿರದಿಂದ ವಹಿಸಿದ ವಿಂಧ್ಯಗಿರಿಯಂತೆ ಅವರ ಆಜ್ಞೆಯನ್ನು ಮಹಾಪ್ರಸಾದವೆಂದು ಮಸ್ತಕದಲ್ಲಿ ತಾಳಿ ಲಜ್ಜಿತನಾಗಿ ನಿಜಕಾಂತೆಯ ಕೈಯಂ ಪಿಡಿದು ಸ್ವದೇಶಕ್ಕೆ ಹೊರಟನು. ಸಿಂಧುಪಂತನು ಮಗಳನ್ನೂ ಅಳಿಯನನ್ನೂ ಕರೆದುಕೊಂಡು ಸಂತೋಷದಿಂದ ತನ್ನ ಊರಿಗೆ ಬಂದು ಮನೆಯನ್ನು ಸೇರಿದನು.

ನೆಂಟರಿಷ್ಟರೆಲ್ಲರೂ ಈ ವೃತ್ತಾಂತವಂ ಕೇಳಿ ನಗುತ್ತಿದ್ದರು. ಸಂನ್ಯಾಸವನ್ನು ತೆಗೆದುಕೊಂಡು ಬಳಿಕ ಅವನು ಮತ್ತೆ ಗೃಹಸ್ಥನು ಎಂತಾದನು ? ಇದು ಸಂಚಿತವಾದ ದುಷ್ಕರ್ಮದ ಫಲವೆಂದು ಕೆಲವರು ನುಡಿಯುತ್ತಿದ್ದರು. ಕೆಲವರು ವಿಷಯಲಂಪಟನೆನ್ನುವರು. ಪತಿತನು ; ನೀಚನು—ಎಂದು ಕೆಲವರು ದೂಷಿಸುವರು. ಕೆಲವರು ಇವನ ಮುಖವನ್ನು ಅವಲೋಕಿಸಬಾರದೆನ್ನುವರು. ಸಂನ್ಯಾಸಾಶ್ರಮವನ್ನು ವಹಿಸಿ ಮತ್ತೆ ಗೃಹಸ್ಥಾಶ್ರಮವನ್ನು ವಹಿಸಿದುದು, ಮೊದಲು ಅಮೃತವಂ ಸೇವಿಸಿ ಬಳಿಕ ಮದ್ಯಪಾನವಂ ಮಾಡಿದಂತಾಯಿತು. ಮೊದಲು ವೇದಾಂತವನ್ನು ಅಭ್ಯಸಿಸಿ ಬಳಿಕ ಅದನ್ನು ಬಿಟ್ಟು ಕಳಾಶಾಸ್ತ್ರವನ್ನು ಹಿಡಿದಂತೆ, ಉತ್ತಮವಾದ ವೈರಾಗ್ಯಸಂಪತ್ತಿಯನ್ನು ಬಿಟ್ಟು ಲೌಕಿಕಸ್ಥಿತಿಯನ್ನು ಹಿಡಿದನು—ಎಂದು ಸಕಲರೂ ನಿಂದಿಸುತ್ತಿದ್ದರು. ಚೈತನ್ಯನ ಚಿತ್ತದಲ್ಲಿ ವಿಕಲ್ಪವುಂಟಾಗಲಿಲ್ಲ. (ಚೈತನ್ಯನೆಂಬ ಹೆಸರು ವಿಟ್ಠಲನಿಗೆ ಸಂನ್ಯಾಸಾಶ್ರಮದಲ್ಲಿ ಬಂದುದು.) ಪರ್ವತದ ಮೇಲೆ ಅತಿವೃಷ್ಟಿಯಾದರೂ ಅದು ಪ್ರವಾಹದಲ್ಲಿ ಕೊಚ್ಚಿಹೋಗುವುದೇ ? ಪನ್ನಗಭಯದಿಂದ ಗರುಡನು ಹಾರಿಹೋಗುವನೇ ? ನಾಯಿಯ ಬೊಗಳಾಟಕ್ಕೆ ಸಿಂಹವು ಹೆದರುವುದೇ ? ಸಮುದ್ರದ ಗರ್ಜನೆಗೆ ಅಗಸ್ತ್ಯಮುನಿಯು ಅಂಜುವನೇ ? ಖದ್ಯೋತದ ತೇಜಸ್ಸಿಗೆ ಸೂರ್ಯನು ಚಿಂತೆಗೊಳ್ಳುವನೇ ? ಅಂತು ಜನಗಳ ನಿಂದೆಗೆ ಚೈತನ್ಯನು ಧೃತಿಗೆಡಲಿಲ್ಲ. ದೂಷಕರ ಕುನ್ನುಡಿಗಳೆಂಬ ಬಾಣಗಳ ಹೊಡೆತವು ತನಗುಂಟಾದರೂ ಕ್ರೋಧವಿಲ್ಲದೆ ಉಪಶಾಂತನಾಗಿಯೇ ಇದ್ದನು. ಬ್ರಾಹ್ಮಣರು ಬಹಿಷ್ಕಾರವಂ ಹಾಕಿದರು. ಆಪ್ತರೆಲ್ಲರೂ ಬಿಟ್ಟುಬಿಟ್ಟರು. ಆದರೂ ಚಿಂತಿಸದೆ ಭಕ್ತಚಿಂತಾಮಣಿಯಾದ ಭಗವಂತನನ್ನು ಚಿತ್ತದಲ್ಲಿ ಬಿಡದೆ ಚಿಂತಿಸುತ, ಅರಣ್ಯದಲ್ಲಿ ಒಂದುಕಡೆ ಕುಟೀರವನ್ನು ಹಾಕಿಕೊಂಡು-ಅಲ್ಲಿಯೇ ಪತ್ನೀಸಹಿತನಾಗಿ ನಿಂತನು. ಆಹಾರಕ್ಕೆ ಭಿಕ್ಷಾಟನೆಯಂ ಮಾಡುತ್ತಿದ್ದನು. ನಿರಂತರವೂ ಭಗವದ್ಗೀತೆಯ ಮತ್ತು ಭಾಗವತದ ಶ್ರವಣಮನನಾದಿಗಳಿಂದ ಮನಸ್ಸಮಾಧಾನವನ್ನು ಪಡೆಯುತ್ತ ಹನ್ನೆರಡುವರ್ಷದವರೆಗೆ ಕಾಲಕ್ರಮಣವನ್ನು ಮಾಡುತ್ತಿರಲು, ಆತನ ಮಡದಿಯ ಗರ್ಭದಲ್ಲಿ ಮೂವರು ಕುಮಾರರೂ ಒಬ್ಬ ಕುಮಾರಿಯೂ ಅನುಕ್ರಮದಿಂದ ಉದ್ಭವಿಸಿದರು. ಸಂತಾನಪ್ರಾಪ್ತಿಯಿಂದ ಆ ದಂಪತಿಗಳು ಸಂತತವಾದ ಸಂತಸವನ್ನು ಪಡೆದರು. ಉಮಾಪತಿಯ ಅವತಾರವಾದ ಮೊದಲನೆಯವನಿಗೆ ನಿವೃತ್ತಿದೇವನೆಂದೂ, ವಿಷ್ಣುವಿನ ಅವತಾರವಾದ ಎರಡನೆಯವನಿಗೆ ಜ್ಞಾನದೇವನೆಂದೂ, ಬ್ರಹ್ಮನ ಅವತಾರವಾದ ಮೂರನೆಯವನಿಗೆ ಸೋಪಾನದೇವನೆಂದೂ, ಆದಿಮಾಯೆಯ ಅವತಾರವಾದ ನಾಲ್ಕನೆಯವಳಿಗೆ ಮುಕ್ತಾಬಾಯಿಯೆಂದೂ, ನಾಮಕರಣವಾಯಿತು.

ಮುಂದಣ ಅಧ್ಯಾಯದಲ್ಲಿ ಸುರಸವಾದ ಕಥೆಯು. ಚಕೋರಗಳು ಚಂದ್ರಾಮೃತವನ್ನು ಏಕಾಗ್ರತೆಯಿಂದ ಗ್ರಹಿಸುವಂತೆ, ಭಾಗ್ಯವಂತರಾದ ಶ್ರೋತೃಗಳು

ಅದಂ ಗ್ರಹಿಸಿ, ನಾದದಲ್ಲಿ ಲುಬ್ಧಗಳಾಗಿ ದೇಹಭಾವವನ್ನು ಮರೆತುಬಿಡುವ ಮೃಗಗಳಂತೆ, ಕಥಾರಸದಲ್ಲಿ ಲೋಲರಾಗಿರಬೇಕು. ಭಕ್ತರ ಸತ್ಕಥೆಯು ಗಹನವಾದುದು. ಮೃದಂಗವನ್ನು ಬಾಜಿಸದಿದ್ದರೆ ಅದರಿಂದ ನಾದವು ಎಂತು ಹೊರಡುವುದು? ಅಂತು ರುಕ್ಮಿಣೀರಮಣನು ನುಡಿಯಿಸದಿದ್ದರೆ ಚರ್ಮರೂಪವಾದ ನನ್ನ ಮುಖದಿಂದ ಕವಿತ್ವವು ಎಂತು ಹೊರಡುವುದು? ನಿಮಿತ್ತಮಾತ್ರಕ್ಕೆ ಮಹೀಪತಿಯೆಂದು ಸುಜ್ಞಾನಿಗಳು ಬಲ್ಲರು.

ಇಂತು ಶ್ರೀ ಭಕ್ತವಿಜಯದಲ್ಲಿ ಎಂಟನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಒಂಬತ್ತನೆಯ ಅಧ್ಯಾಯ.

ನಿವೃತ್ತಿದೇವಜ್ಞಾನದೇವಾದಿಗಳ ಚರಿತ್ರೆ.

ಪರಿಹೃತಸಮಸ್ತದುರಿತಂ |
ಸರಸಿಜಭವಮುಖ್ಯವಿನುತಮಂಗಳಚರಿತಂ ||
ಪರಮದಯಾರಸಭರಿತಂ |
ಹರಿ ಪೊರೆಗೆಮ್ಮಂ ಯಮೀಂದ್ರಹೃದಯಸ್ಫುರಿತಂ ||

ಧನ್ಯಕಾಲವಿಂದು. ಭಕ್ತರ ಚರಿತ್ರೆಯು ಪ್ರಸ್ತಾವವುಂಟಾಗಿರುವುದು. ಯಾರು ಭಕ್ತರ ಚರಿತ್ರೆಯನ್ನು ಬಾಯಿಂದ ಉಚ್ಚರಿಸುವರೋ, ಯಾರು ಕಿವಿಯಿಂದ ಕೇಳುವರೋ ಅವರು ಭಾಗ್ಯವಂತರು. ಸಾಧುಗಳ ಕಥೆಯ ಅಕ್ಷರಗಳು ಕರ್ಣದ್ವಾರದಿಂದ ಹೃದಯದಲ್ಲಿ ಪ್ರವೇಶಿಸಲು, ವೈರಾಗ್ಯಭರದಿಂದ ಶಾಂತಿಯೂ ಕ್ಷಮೆಯೂ ಒಳಗೆ ವ್ಯಾಪಿಸುವುದು. ಸತ್ಕಥಾಶ್ರವಣದಿಂದ ಭೂತದಯೆಯುಂಟಾಗುವುದು. ಜ್ಞಾನವಿಶೇಷದಿಂದ ವಿಕಲ್ಪಗಳೆಲ್ಲವೂ ಛಿನ್ನಭಿನ್ನವಾಗಿ ಓಡಿಹೋಗುವುವು. ಈ ಗ್ರಂಥವನ್ನು ಮನೆಯಲ್ಲಿ ಸಂಪಾದಿಸಿ ಇರಿಸಿರಲು, ವಿಘ್ನಗಳು ಪಲಾಯನಮಾಡುವುವು. ಶ್ರೀಹರಿಯು ಸುದರ್ಶನವನ್ನು ಹಿಡಿದು ಸರ್ವಕಾಲದಲ್ಲಿಯೂ ರಕ್ಷಿಸುತ್ತಿರುವನು. ಯಾರು ಭಕ್ತಕಥೆಯನ್ನು ಭಕ್ತಿಯಿಂದ ಪಠನಮಾಡುವರೋ ಅವರಿಗೆ ಭಕ್ತವರದನಾದ ರುಕ್ಮಿಣೀರಮಣನು ಪ್ರಸನ್ನನಾಗುವನು. ಯಾರು ಆದರದಿಂದ ಶ್ರವಣಮಾಡುವರೋ ಅವರ ಇಷ್ಟಾರ್ಥಗಳು ಕೈಗೂಡುವುವು.

ಪೂರ್ವಾಧ್ಯಾಯದಲ್ಲಿ ನಿವೃತ್ತಿದೇವಾದಿಗಳ ಉತ್ಪತ್ತಿಯನ್ನು ಕೇಳಿದಿರಷ್ಟೆ? ಆ ಮಕ್ಕಳು ದೊಡ್ಡವರಾಗುತ್ತ ಬಂದರು. ಪ್ರಯತ್ನವಿಶೇಷವಿಲ್ಲದೆಯೇ ಜ್ಞಾನವಂತರಾದರು. ಅವರ ಮುಖವನ್ನೂ ಅವಲೋಕಿಸಬಾರದೆಂದು ಸಕಲರೂ ನಿಂದಿಸುತ್ತಿರುವರು. ಅವರ ಬ್ರಾಹ್ಮಣಕರ್ಮವಿಷಯದಲ್ಲಿ ಕಳಂಕವು ತಲೆದೋರಿತು. ತಾಯ್ತಂದೆಗಳಿಗೆ ಮನದಲ್ಲಿ ಚಿಂತೆಯು ಬಹುವಾಗಿ ಹತ್ತಿತು. ರುಕ್ಮಿಣೀಬಾಯಿಯು ಚಿಂತೆಯಿಂದ ಸಂಕಟಗೊಂಡು ಪತಿಯನ್ನು ಕುರಿತು—ನಮ್ಮ ಸ್ಥಿತಿಯು ಇಂತಿರಬಹುದೇ? ಬ್ರಾಹ್ಮಣರನ್ನು ಪ್ರಾರ್ಥಿಸಿ ಅವರ ಅನುಜ್ಞೆಯಿಂದ ಯಾವುದಾದರೂ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಶುದ್ಧರಾಗಬೇಕು. ಇಲ್ಲದಿದ್ದರೆ ನಮ್ಮ ಕರ್ಮವೆಲ್ಲವೂ ಸಕಳಂಕವಾಗಿಯೇ ಪರಿಣಮಿಸುವುದು—ಎಂದು ನುಡಿದರು. ಚೈತನ್ಯನು ಕಾಂತೆಯ ಮಾತನ್ನು ಕೇಳಿ, ಅಂತಾಗಲಿ—ಎಂದು ಬ್ರಾಹ್ಮಣರ ಸಭೆಯಂ ಸೇರಿಸಿ, ಸಾಷ್ಟಾಂಗನಮಸ್ಕಾರವಮಾಡಿ ಕೈಗಳಂ ಜೋಡಿಸಿಕೊಂಡು—ಮಹನೀಯರಿರಾ! ನಮ್ಮ ಅಪರಾಧವೇನಿದ್ದರೂ ಅದನ್ನು ಕ್ಷಮಿಸಿ, ಧರ್ಮಶಾಸ್ತ್ರವನ್ನು ನೋಡಿ ವಿಚಾರದಿಂದ ನಮಗೆ ಆವುದಾದರೂ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಿ—ಎಂದು ಬಹುವಿಧವಾಗಿ ಪ್ರಾರ್ಥಿಸಿದನು.

ಜ್ಯೇಷ್ಠಪುತ್ರನಾದ ನಿವೃತ್ತಿದೇವನು ಆ ಬ್ರಾಹ್ಮಣರನ್ನು ಕುರಿತು-ಪೂಜ್ಯರಿರ! ಮಹನೀಯರಾದ ತಮ್ಮ ಸಂದರ್ಶನವು ಸಾಧಾರಣವಾದುದಲ್ಲ. ಆಧಿವ್ಯಾಧಿಗಳನೆಲ್ಲವಂ ಪರಿಹರಿಸುವಂತಹುದು. ಸಮಸ್ತಪಾಪರಾಶಿಗಳನ್ನೂ ನಾಶಮಾಡುವಂತಹುದು. ನಿಮ್ಮ ಚರಣಾರವಿಂದಸಂದರ್ಶನದಿಂದಲೇ ನಾವು ಶುದ್ಧರಾಗಿರುವೆವು. ಆದರೂ ತಾವು ಲೋಕರೀತಿಯಿಂದ ನಮಗೆ ಧರ್ಮಶಾಸ್ತ್ರವಿಹಿತವಾದ ಪ್ರಾಯಶ್ಚಿತ್ತವನ್ನು ಅಪ್ಪಣೆಕೊಡಿಸಬೇಕು-ಎಂದು ನುಡಿದನು.

ಆಬಳಿಕ ಶಾಸ್ತ್ರಜ್ಞರಾದ ಬ್ರಾಹ್ಮಣೋತ್ತಮರು ಅನೇಕಗ್ರಂಥಗಳನ್ನು ನೋಡಿ ಇದಕ್ಕೆ ದೇಹಾಂತವೇ ಪ್ರಾಯಶ್ಚಿತ್ತವಲ್ಲದೆ ಮತ್ತಾವುದೂ ತೋರುವುದಿಲ್ಲ. ಗಂಡುಗತ್ತರಿಯಲ್ಲಿ ಶಿರಸ್ಸನ್ನು ಕೊಡಬೇಕು. ಇಲ್ಲದಿದ್ದರೆ ಅನುತಾಪದಿಂದ ವಿಷವನ್ನಾದರೂ ತೆಗೆದುಕೊಳ್ಳಬೇಕು. ಇದನುಳಿದು ನಿಮಗೆ ಬೇರೆ ಪ್ರಾಯಶ್ಚಿತ್ತವಿಲ್ಲ—ಎಂದರು.

ಚೈತನ್ಯನು ಈ ಮಾತಂ ಕೇಳಿ ಬಹುಪಶ್ಚಾತ್ತಾಪಯುಕ್ತನಾಗಿ ಬ್ರಾಹ್ಮಣರಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ದಾರಪುತ್ರರನ್ನು ತೊರೆದು ಅಲ್ಲಿಂದ ಹೊರಟು ಹೋದನು. ಹಿಂದಿರುಗಿ ನೋಡದೆಯೇ ಹೊರಟುಹೋಗುತ್ತಿರುವ ಆ ಚೈತನ್ಯನಂ ಕಂಡು ಬ್ರಾಹ್ಮಣರೆಲ್ಲರೂ ಆಶ್ಚರ್ಯಗೊಂಡು, ಈತನು ಪಶ್ಚಾತ್ತಾಪವೆಂಬ ದಿವ್ಯತೀರ್ಥದಲ್ಲಿ ಮುಳುಗಿ ದುರಿತಗಳನ್ನು ಸುಟ್ಟನು. ಪಶ್ಚಾತ್ತಾಪಕ್ಕಿಂತ ಬೇರೆ ಪ್ರಾಯಶ್ಚಿತ್ತ ಶಾಸ್ತ್ರದಲ್ಲಿ ಉಕ್ತವಾಗಿಲ್ಲ. ಸದ್ಗುರುಕೃಪೆಯಿಂದ ಪರಿಶುದ್ಧನಾದನು—ಎಂದರು.

ಬಳಿಕ ನಿವೃತ್ತಿದೇವನು ಬ್ರಾಹ್ಮಣರನ್ನು ಕುರಿತು ನಮಗೆ ಏನುಗತಿ—ಎಂದು ಬೆಸಗೊಂಡನು. ಅದಕ್ಕೆ ಬ್ರಾಹ್ಮಣರು—ನೀವು ಪ್ರತಿಷ್ಠಾನಪುರಕ್ಕೆ ಹೋಗಿ ಅಲ್ಲಿಯ

ಸಭೆಯವರಿಂದ ಶುದ್ಧಿಪತ್ರಿಕೆಯನ್ನು ತರಬೇಕು-ಎನಲು, ನಿವೃತ್ತಿದೇವನು ಮತ್ತೆ ಅವರನ್ನು ಕುರಿತು—ನಾವು ಅಲ್ಲಿಗೆ ಹೋಗಿ ಅವರಿಗೆ ಏನನ್ನು ಹೇಳಬೇಕು. ಜಾತಿಯನ್ನೂ ಕುಲವನ್ನೂ ಹೇಳಿಕೊಳ್ಳುವುದಕ್ಕೆ ನಮಗೆ ಅವಕಾಶವೇಇಲ್ಲ. ಬ್ರಾಹ್ಮಣಕ್ಷತ್ರಿಯಾದಿಯಾದ ಯಾವ ವರ್ಣಕ್ಕೂ ನಾವು ಸೇರಲಿಲ್ಲ. ಪೃಥಿವ್ಯಾದಿಪಂಚಭೂತಗಳೂ ನಾವಲ್ಲ. ಯಕ್ಷರೂ ಕಿನ್ನರರೂ ದೇವತೆಗಳೂ ಋಷಿಗಳೂ ರಾಕ್ಷಸರೂ ಯಾರೂ ಅಲ್ಲ. ಸಗುಣರೂ ಸಾಕಾರರೂ ಅಲ್ಲ. ನಿರ್ಗುಣರು ನಿರಾಕಾರರು-ಎಂದು ಹೇಳುವುದಕ್ಕೂ ಇಲ್ಲ. ನಮ್ಮ ಸ್ಥಿತಿಯಿಂತಹುದು—ಎಂದು ನುಡಿದು, ಬಳಿಕ ಜ್ಞಾನದೇವನನ್ನು ಕುರಿತು—ನಾವು ಪ್ರತಿಷ್ಠಾನಕ್ಕೆ ಹೋಗಿ ನಮ್ಮ ಪರಂಪರೆಯನ್ನು ಅಲ್ಲಿಯ ಬ್ರಾಹ್ಮಣರಿಗೆ ಏನೆಂದುಹೇಳಿಕೊಳ್ಳುವುದು ?—ಎನಲು, ಅದಕ್ಕೆ ಜ್ಞಾನದೇವನು—ಆರ್ಯನೆ! ನಿನ್ನ ವೇದಾಂತದ ಮಾತಿನಿಂದೇನು? ನಮ್ಮ ಕುಲಸ್ಥಿತಿಯನ್ನು ನಾವು ಇದ್ದಂತೆ ಹೇಳಿಕೊಳ್ಳಬೇಕು. ವಿಧಿವಿರುದ್ಧವಾಗಿ ಯಾವನು ನಡೆಯುವನೋ ಅವನಿಗೆ ಶಾಸ್ತ್ರದಲ್ಲಿ ದೂಷಣವು ಹೇಳಲ್ಪಟ್ಟಿದೆ. ಜೀವನ್ಮುಕ್ತಿಜ್ಞಾನಿಯಾದವನೂ ವಿಧಿವಿಹಿತವಾದ ಕರ್ಮವಂ ಬಿಡಕೂಡದು. ಸಾಧುಗಳು ತಾವು ವಿಹಿತವಾದಂತೆ ನಡೆದು ಇತರರಿಗೆ ತೋರಿಸಬೇಕು. ಅವಿಧಿಯಾದ ಆಚರಣವು ಅತ್ಯಂತದೂಷಿತವೆಂದು ತಿಳಿಯಬೇಕು. ಮನುಷ್ಯನಿಗೆ ತನ್ನ ಕುಲಧರ್ಮವು ಯಾವುದೋ ಅದೇ ಅತ್ಯಂತಶ್ರೇಯಸ್ಕರವಾದುದು. ಅನ್ಯಧರ್ಮಾಚರಣೆಯಿಂದ ಕುಲವೇ ಕಳಂಕಿತವಾಗುವುದು. ಈಗ ನಾವು ಈ ವಿಚಾರವನ್ನು ಮಾಡುವುದರಿಂದೇನು ? ಅಭಿಜ್ಞರಾದ ಮಹನೀಯರು ನಮ್ಮ ವಿಷಯದಲ್ಲಿ ಎಂತು ಆದೇಶಿಸುವರೋ ನಾವು ಅಂತು ನಡೆದುಕೊಳ್ಳಬೇಕು—ಎಂದನು.

ಬಳಿಕ ಸೋಪಾನದೇವನು-ಜಾತಿಯೂ ಕುಲವೂ ಏನು ಪ್ರಮಾಣ? ಭಕ್ತಿಯಿಲ್ಲದೆ ಶ್ರೀಹರಿಯ ಚರಣವು ಎಂದಿಗೂ ಪ್ರಾಪ್ತವಾಗಲಾರದು. ವ್ಯಾಸವಾಲ್ಮೀಕಿಪ್ರಭೃತಿಗಳಾದ ಮುನಿಗಳ ಮತ್ತು ಪಾಂಡವಾದಿಮಹೀಪಾಲರ ಕುಲವು ಅಕಳಂಕಿತವಾದುದೆಂದು ಯಾವ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಉತ್ತಮಕುಲದಲ್ಲಿ ಹುಟ್ಟಿ ವೇದಶಾಸ್ತ್ರಗಳನ್ನು ಅಭ್ಯಸಿಸಿದರೂ, ಭಕ್ತಿಜ್ಞಾನವಿಲ್ಲದಿದ್ದರೆ ಅವನ ಜನ್ಮವು ವ್ಯರ್ಥವೇ ಸರಿ. ಭಗವದ್ಭಕ್ತಿಯುಳ್ಳವನಾಗಿರಲು, ಜಾತಿಯೂ ಕುಲವೂ ಎಂತಿದ್ದರೆ ಏನು ?—ಎನಲು, ಜ್ಞಾನದೇವನು—ವತ್ಸನೆ ! ಇದೆಲ್ಲವೂ ಅಜ್ಞರು ಆಡುವಮಾತು. ಅನಾದಿಯಾಗಿ ಭಗವಂತನಿಂದ ನಿಯಮಿತವಾಗಿರುವ ಕುಲಧರ್ಮಗಳನ್ನು ಯಾರೂ ಮೀರಲಾಗದು. ಭಕ್ತಿಯಿದ್ದಮಾತ್ರದಿಂದ ಜಾತಿಕುಲಗಳನ್ನು ಅತಿಕ್ರಮಿಸಬಹುದೇ ? ಅಂತಹನು ಭಗವಂತನ ಆಜ್ಞೆಗೆ ವಿರೋಧಿಯಾಗಿರುವನು. ಅವನನ್ನು ಭ್ರಷ್ಟನೆಂದು ತಿಳಿಯಬೇಕು. ಸತ್ಕುಲಾಚಾರದಲ್ಲಿ ಇದ್ದುಕೊಂಡು ಭಗವಂತನಲ್ಲಿ ಭಕ್ತಿಯುಳ್ಳವನೇ ಧನ್ಯನು. ಮಹಾಪ್ರಭಾವರಾದ ಆ ಮಹರ್ಷಿಗಳ ಮತ್ತು ಮಹಾರಾಜರ

ಪ್ರಸ್ತಾವವು ಸಾಮಾನ್ಯರ ವರ್ಗದಲ್ಲಿ ದುರಭಿಪ್ರಾಯದಿಂದ ಆಡತಕ್ಕದಲ್ಲ—ಎಂದನು. ಇಂತು ಪರಸ್ಪರಸಂವಾದವಂ ಮಾಡುತ್ತ ನೆರೆದಿದ್ದ ಬ್ರಾಹ್ಮಣರ ಅನುಜ್ಞೆಯಂ ತೆಗೆದು ಕೊಂಡು ಅಲ್ಲಿಂದ ತ್ವರೆಗೊಂಡು ಹೊರಟು ಗೋದಾವರೀತೀರಕ್ಕೆ ಹೋಗಿ ತೀರ್ಥ ನಿಷೇವಣವಂ ಮಾಡಿ ಬ್ರಹ್ಮಪುರವಂ ಪೊಕ್ಕು ಅಲ್ಲಿಯ ಬ್ರಾಹ್ಮಣರಂ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ ತಮ್ಮ ಕೈಯಲ್ಲಿದ್ದ ಪತ್ರಿಕೆಯಂ ಆಬ್ರಾಹ್ಮಣರಿಗೆ ಕೊಟ್ಟು ತಮ್ಮ ವೃತ್ತಾಂತನೆಲ್ಲವನ್ನೂ ತಿಳಿಯಿಸಿದರು.

ಆಗ ಬ್ರಾಹ್ಮಣರು ಸಭೆಯಲ್ಲಿ ಎಲ್ಲರೂ ಸೇರಿ ವಿಚಾರಮಾಡಿ—ಇವರು ಭ್ರಷ್ಟ ನಾದ ಸಂನ್ಯಾಸಿಯ ಪುತ್ರರು. ಇವರಿಗೆ ಪ್ರಾಯಶ್ಚಿತ್ತವು ಎಂತು ಸಂಘಟಿಸುವುದು ? ಅಂತ್ಯಜನಿಗೆ ಗಂಗಾಸ್ನಾನವಂ ಮಾಡಿಸಿದರೆ, ಅವನು ಶುದ್ಧನಾಗಿ ಬ್ರಾಹ್ಮಣನೆನಿಸು ವನೇ ? ಭಿಂಡಶಕಲಕ್ಕೆ ಸ್ಪರ್ಶವೇಧಿಶಿಲೆಯಂ ಮುಟ್ಟಿಸಿದರೆ ಅದು ಚಿನ್ನವಾಗು ವುದೇ ? ಹುರಿದ ಬೀಜವನ್ನು ಬಿತ್ತಿ ಅದಕ್ಕೆ ನೀರನ್ನು ಹಾಕಿದರೆ, ಅದು ಮೊಳೆಯು ವುದೇ ? ಆಯುಸ್ಸಿಲ್ಲದ ದುರದೃಷ್ಟನಿಗೆ ದಿವ್ಯೌಷಧವನ್ನು ಕೊಟ್ಟರೂ ಅವನು ಬದು ಕುವನೇ ? ಅದೆಲ್ಲವೂ ಎಂತು ವ್ಯರ್ಥವೋ ಅಂತು ಇವರಿಗೆ ವಿಧಿಸುವ ತೀರ್ಥವ್ರತ ಪ್ರಾಯಶ್ಚಿತ್ತವೂ ವ್ಯರ್ಥವೇಸರಿ. ಇವರು ಎಂದಿಗೂ ಶುದ್ಧರಾಗಲಾರರು—ಎಂದು ನುಡಿದು ಮತ್ತೆ ಆಲೋಚಿಸಿ—ನಿಮಗೊಂದುಪಾಯವು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಅಂತು ನೀವು ನಡೆಯುವುದಾದರೆ, ಪ್ರಾಯಶ್ಚಿತ್ತವಿನ್ನೇನೂ ಆವಶ್ಯಕವಿಲ್ಲ. ಅದೇ ನೆಂದರೆ:—ಶ್ರೀಹರಿಯಂ ಶರಣುಹೊಕ್ಕು ಸರ್ವಭೂತಂಗಳಲ್ಲಿಯೂ ಸಮಬುದ್ಧಿಯಿಂದಿ ರುತ್ತ ಗೋವು ಕತ್ತೆ ನಾಯಿ ಆಡು ಹಂದಿ ಅಂತ್ಯಜನು ಮುಂತಾಗಿ ಸಮಸ್ತವನ್ನೂ ಬ್ರಹ್ಮವೆಂದೇ ಚಿತ್ತದಲ್ಲಿ ಭಾವಿಸಿ—ಪ್ರೀತಿಯಿಂದ ನಮಸ್ಕರಿಸಬೇಕು. ಇಂತು ನೀವು ನಡೆದರೆ ಧನ್ಯರಾಗುವಿರಿ.

ಅದಂ ಕೇಳಿ ನಿವೃತ್ತಿದೇವನು ಸಂತೋಷಗೊಂಡನು. ಜ್ಞಾನದೇವಸೋಪಾನ ದೇವರಿಗೂ ಪರಮಾನಂದವಾಯಿತು. ನಮ್ಮ ಮನಸ್ಸಿನಲ್ಲಿ ಎಂತು ಇದ್ದಿತೋ ಅಂತು ಧರ್ಮನೀತಿಯು ಇವರ ಬಾಯಿಂದ ಹೊರಟಿತು—ಎಂದುಕೊಂಡರು. ಮುಕ್ತಾಬಾ ಯಿಗೂ ಅದೇಮಾತು ಸಮ್ಮತವಾಯಿತು.

ಅನಂತರ ಬ್ರಾಹ್ಮಣರು ಇವರ ನಾಮಧೇಯಂಗಳಂ ಕೇಳಿ ವಿಸ್ಮಿತರಾದರು. ಜ್ಞಾನದೇವನನ್ನು ಕುರಿತು—ಅಯ್ಯಾ! ನಿನ್ನನ್ನು ಜ್ಞಾನದೇವನೆಂದು ಏಕೆ ಕರೆಯ ಬೇಕು. ಆಹೆಸರಿಗೆ ತಕ್ಕ ಯೋಗ್ಯತೆ ನಿನ್ನಲ್ಲಿ ಇರುವುದೇ ? ವೇದಾಭ್ಯಾಸವನ್ನು ಮಾಡಿರುವೆಯಾ ? ಶಾಸ್ತ್ರಜ್ಞಾನವೇನಾದರೂ ಇದೆಯೋ ? ಪುರಾಣವ್ಯುತ್ಪತ್ತಿಯಾದರೂ ಉಂಟೇ ? ಬರಿದೆ ನಾಮಾಡಂಬರವು ಏತಕ್ಕೆ ? ಕ್ಷೀರವಿಲ್ಲದ ಆಕಳ ಸ್ತನದಿಂದೇನು ? ನೋಟವಿಲ್ಲದ ದೊಡ್ಡಕಣ್ಣುಗಳಿದ್ದೇನು ? ಮಾನ್ಯತೆಯಿಲ್ಲದೆ ಕಾರ್ಯಭಾರವನ್ನು

ವಹಿಸುವುದರಿಂದೇನು ? ಪುರುಷಾರ್ಥವಿಲ್ಲದೆ ಜೀವಿಸುವುದರಿಂದೇನು ? ಭೂತದಯೆಯಿಲ್ಲದೆ ಅಧ್ಯಾತ್ಮವಿದ್ಯೆಯಿಂದೇನು ? ಪ್ರೇಮವಿಲ್ಲದೆ ಭಜನೆಮಾಡುವುದರಿಂದೇನು ? ಶೌರ್ಯವಿಲ್ಲದೆ ರಣದಲ್ಲಿ ಹೋರಾಡುವುದರಿಂದೇನು ? ನಿಷ್ಕಾಮನಾಗದೆ ವಿರಕ್ತನೆನಿಸಿಕೊಳ್ಳುವುದರಿಂದೇನು ? ಅಂತು ತಕ್ಕ ಯೋಗ್ಯತೆಯಿಲ್ಲದೆ ಸುಮ್ಮನೆ ಹೆಸರ ಗೌರವವನ್ನು ವಹಿಸುವುದರಿಂದೇನು ?–ಎಂದು ತಿರಸ್ಕರಿಸುತ್ತ ಅಷ್ಟರಲ್ಲಿ ಅಲ್ಲಿಗೆ ಚರ್ಮದ ಚೀಲದಲ್ಲಿ ನೀರನ್ನು ಹೊತ್ತುಕೊಂಡು ಬಳಿಗೆ ಬಂದ ಕೋಣವನ್ನು ನೋಡಿ–ಇದರ ಹೆಸರೂ ವಿಜ್ಞಾನವೆಂದು ಹಾಸ್ಯಮಾಡಿದರು.

ಜ್ಞಾನದೇವನು ಆಮಾತಂ ಕೇಳಿ ಬದ್ಧಾಂಜಲಿಪುಟನಾಗಿ ಆಬ್ರಾಹ್ಮಣರನ್ನು ಕುರಿತು–ಪೂಜ್ಯರೆ ! ಈ ಕೋಣಕ್ಕೂ ನನಗೂ ಭೇದವಿಲ್ಲ, ಆತ್ಮನು ಸರ್ವದೇಹಗಳಲ್ಲಿಯೂ ವ್ಯಾಪಕನಾಗಿರುವನು. ಅನಂತಘಟಗಳಲ್ಲಿರುವ ಜಲದಲ್ಲಿಯೂ ಸೂರ್ಯನು ಎಂತು ಪ್ರತಿಫಲಿಸುವನೋ, ಸಮಸ್ತವೃಕ್ಷಗಳ ಬೇರಿನಲ್ಲಿ ನೀರೊಂದೇ ಎಂತು ವ್ಯಾಪಿಸುವುದೋ, ಒಂದೇ ಸುವರ್ಣವು ಅನೇಕಾಲಂಕಾರಗಳಲ್ಲಿಯೂ ಎಂತಿರುವುದೋ, ತಂತುಮಾತ್ರವು ಬಗೆಬಗೆಯ ವಸ್ತ್ರಗಳಲ್ಲಿಯೂ ಎಂತಿರುವುದೋ ಅಂತು ಶ್ರೀಹರಿಯು ಸಮಸ್ತಭೂತಂಗಳಲ್ಲಿಯೂ ಸಮನಾಗಿ ವ್ಯಾಪಿಸಿರುವನು–ಎಂದನು. ಬ್ರಾಹ್ಮಣರು ಬೆತ್ತಮಂ ತೆಗೆದುಕೊಂಡು ಭೇದವನ್ನು ತೋರಿಸುವುದಕ್ಕೋಸ್ಕರ ಕೋಣನಂ ಹೊಡೆದು, ವ್ಯರ್ಥವಾಗಿ ನಮ್ಮಲ್ಲಿಯೇ ವಾಚಾಳತ್ವವನ್ನು ತೋರಿಸುವೆ–ಎಂದು ಜ್ಞಾನದೇವನನ್ನು ತಿರಸ್ಕರಿಸುವಷ್ಟರಲ್ಲಿ, ಜ್ಞಾನದೇವನು ಗಡಗಡನೆ ನಡುಗಿದನು. ಬೆನ್ನಿನ ಮೇಲೆ ಬಾಸುಳುಂಟಾಯಿತು. ಈ ಕೋಣಕ್ಕೂ ನಿನಗೂ ಭೇದವಿಲ್ಲವಷ್ಟೆ ? ಇದರ ಬಾಯಿಂದ ನೀನು ವೇದವನ್ನು ಹೇಳಿಸು ; ನೋಡೋಣ–ಎಂದು ಮತ್ತೆ ಅವರು ತರ್ಜಿಸಿದರು.

ಜ್ಞಾನದೇವನು–ಅಂತಾಗಲಿ–ಎಂದು ಕೋಣನ ಮುಂದೆ ಬಂದು ತನ್ನ ಕೈಯನ್ನು ಅದರ ಮಸ್ತಕದಲ್ಲಿ ಇರಿಸಿ–ಎಲೆ ಕೋಣನೆ ! ಋಗ್ಯಜುಸ್ಸಾಮಾಥರ್ವವೇದಗಳನ್ನು ಹೇಳಿ ಈ ಬ್ರಾಹ್ಮಣರನ್ನು ಸಂತೋಷಗೊಳಿಸು–ಎಂದನು. ಆಮಾತಂ ಕೇಳಿ ಕೋಣವು ಕ್ರಮದಿಂದ ನ್ಯಾಸಪೂರ್ವಕವಾಗಿ ನಾಲ್ಕುವೇದಗಳನ್ನೂ ಹೇಳಲು ತೊಡಗಿತು. ಅಮೃತಸೇವನೆಯಿಂದ ರೋಗಿಗೆ ಆರೋಗ್ಯಭಾಗ್ಯವೆಂತು ಉಂಟಾಗುವುದೋ, ಕಾಮಧೇನುವಿನ ಕೃಪಾದೃಷ್ಟಿಯಿಂದ ಐಶ್ವರ್ಯವು ಎಂತು ತಲೆದೋರುವುದೋ ; ಸರಸ್ವತಿಯ ಪ್ರಸಾದದಿಂದ ಸಕಲವಿದ್ಯೆಗಳೂ ಎಂತು ಸಮನಿಸುವುವೋ ; ವಿಘ್ನೇಶ್ವರನ ಅನುಗ್ರಹದಿಂದ ಸಕಲಕಾರ್ಯಸಿದ್ಧಿಯೂ ಎಂತು ಉಂಟಾಗುವುದೋ ; ಪರಮೇಶ್ವರನ ಕಟಾಕ್ಷದಿಂದ ಅಷ್ಟಭೂತಿಗಳೂ ಎಂತು ಸಿದ್ಧಿಸುವುವೋ, ಅಂತು ಜ್ಞಾನದೇವನ ಹಸ್ತಸ್ಪರ್ಶದಿಂದ ಕೋಣನ ಮುಖದಲ್ಲಿಯೂ ವೇದಸಂಪತ್ತಿಯುಂಟಾಯಿತು. ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಆಶ್ಚರ್ಯಗೊಂಡರು. ನಾವೂ ವೇದವೇದಾಂತ

ಪ್ರವೀಣರೆನ್ನಿಸಿಕೊಂಡಿರುವೆವು. ಆದರೂ ನಮ್ಮಲ್ಲಿ ಈಶ್ವರನು ಇಂತಹ ಶಕ್ತಿ
ಯನ್ನು ಉಂಟುಮಾಡಿಲ್ಲ. ದೃಷ್ಟಪೂರ್ವವೂ ಶ್ರುತಪೂರ್ವವೂ ಅಲ್ಲದ ಇಂತಹ
ಆಶ್ಚರ್ಯವನ್ನು ಈತನು ತೋರಿದನು. ಸೃಷ್ಟಿಯಲ್ಲಿ ಬ್ರಹ್ಮದೇವನಿಂದಲೂ
ಇಂತಹ ಕಾರ್ಯವು ಆಗದು. ಇವರು ಮೂವರೂ ಭಗವದವತಾರಪುರುಷರು.
ತೇಜಸ್ವಿನಿಯಾದ ಈಕೆ ಆದಿಮಾಯೆಯೇಸರಿ. ಇವರಿಗೆ ಪ್ರಾಯಶ್ಚಿತ್ತವೇನೂ ಇರದು.
ಇವರು ಗಂಗೆಯಂತೆ ಅತಿಪರಿಶುದ್ಧರು. ನಾವು ಇತರರಿಗೆ ಹೇಳಬಲ್ಲೆವು. ತಾವಾ
ಚರಿಸಲಾರೆವು. ಧನವನ್ನೂ ಮಾನವನ್ನೂ ಬಯಸುತ್ತ ಜನ್ಮವಂ ವ್ಯರ್ಥವನ್ನಾಗಿ
ಮಾಡಿಕೊಂಡೆವು. ಸೃಷ್ಟಿಯಲ್ಲಿ ಇವರಂತಹ ಉತ್ತಮಬ್ರಾಹ್ಮಣರನ್ನು ಯಾರನ್ನೂ
ಕಾಣೆವು. ಇಂತಹ ಮಕ್ಕಳಂ ಪಡೆದ ಇವರ ತಾಯ್ತಂದೆಗಳು ಅತ್ಯಂತ ಧನ್ಯರು;
ಏನುಸುಕೃತವಿಶೇಷವಂ ಮಾಡಿ ಇದ್ದರೋ?-ಎಂದು ಆಶ್ಚರ್ಯಗೊಂಡು ಅಭಿನಂದಿಸಿ
ದರು. ಜ್ಞಾನದೇವನು ಅವರನ್ನು ಕುರಿತು-ಪೂಜ್ಯರೆ! ಇದು ನಿಮ್ಮಸಾಮರ್ಥ್ಯವೇ.
ನಿಮ್ಮ ಚರಣಪ್ರಭಾವವೇ. ವಾಸ್ತವವಾಗಿಯೂ ನಾವು ಅಜ್ಞಾನಿಗಳು-ಎಂದು
ವಿನಯದಿಂದ ನುಡಿದನು. ಪ್ರತಿಷ್ಠಾನಪುರದ ಸಕಲರೂ—ಇವರು ಮಹಾನುಭಾವರು;
ಧನ್ಯರು; ಸಂಸಾರದಲ್ಲಿ ವಿರಕ್ತರು-ಎಂದು ಆ ಜ್ಞಾನದೇವಾದಿಗಳನ್ನು ಪೊಗಳುತಿ
ದ್ದರು. ಅವರು ಆ ಪ್ರತಿಷ್ಠಾನನಗರದಲ್ಲಿಯೇ ಇದ್ದುಕೊಂಡು ನಿತ್ಯವೂ ಗಂಗೆಯಲ್ಲಿ
ಸ್ನಾನವಂಮಾಡಿ ವೇದಾಂತವಿಚಾರವಂ ಮಾಡುತ್ತ ಪುರಾಣಪಠನವನೆಸಗುತ್ತ ರಾತ್ರಿ
ಯಾಗುವುದೂ ಹರಿಕೀರ್ತನೆಯನಾರಂಭಿಸುತ್ತಿದ್ದರು. ಅನೇಕರು ಬಂದು ಶ್ರವಣ
ಮಾಡುತಿದ್ದರು. ಅವರ ಕ್ರಮವಂ ಕಂಡು ಎಲ್ಲರೂ ಸನ್ಮಾನಗೈಯುತ್ತಿದ್ದರು.
ಇಂತು ಕೆಲವುಕಾಲ ಕಳೆದುದು.

ನಿವೃತ್ತಿದೇವಾದಿಗಳು ಒಬ್ಬಬ್ರಾಹ್ಮಣನ ಮನೆಯಲ್ಲಿ ವಾಸಮಾಡುತ್ತಿದ್ದರು.
ಆತನ ಮನೆಯಲ್ಲಿ ಪಿತೃದಿವಸವು ಪ್ರಾಪ್ತವಾಯಿತು. ದ್ವಿಜರಿಗೆ ನಿಮಂತ್ರಣಕ್ಕೆ
ಹೇಳಲು, ಅವರು—ಸಂನ್ಯಾಸಿಯ ಮಕ್ಕಳನ್ನು ನೀನು ಮನೆಯಲ್ಲಿ ಇರಿಸಿಕೊಂಡಿರುವೆ.
ಆದಕಾರಣ ನಿನ್ನ ಮನೆಗೆ ನಾವು ಭೋಜನಕ್ಕೆ ಬಾರೆವು—ಎಂದು ನಿರಾಕರಿಸಿದರು.
ಆಬ್ರಾಹ್ಮಣನು ಅತ್ಯಂತಖಿನ್ನನಾಗಿ ಮನೆಗೆ ಬಂದು ಸುಮ್ಮನೆ ಕುಳಿತನು. ಜ್ಞಾನ
ದೇವನು ಆತನನ್ನು ಕಂಡು—ಸ್ವಾಮಿ! ಏತಕ್ಕೆ ಇಂತು ಚಿಂತಾಕ್ರಾಂತರಾಗಿ ವ್ಯಾಕು
ಲತೆಗೊಂಡಿರುವಿರಿ?—ಎಂದು ಬೆಸಗೊಳ್ಳಲು, ಆತನು-ಇಂದು ಮನೆಯಲ್ಲಿ ಪಿತೃದಿವ
ಸವು ಪ್ರಾಪ್ತವಾಗಿರುವುದು. ಯಾರೂ ಭೋಜನಕ್ಕೆ ಬಾರರು. ಇದರಿಂದ ವ್ಯಾಕು
ಲತೆಯುಂಟಾಗಿದೆ-ಎಂದನು. ಅದಂ ಕೇಳಿ ಜ್ಞಾನದೇವನು—ಇದಕ್ಕೆ ವ್ಯಾಕುಲತೆ
ಯೇಕೆ? ಚಿಂತಿಸಲಾಗದು; ಪಿತೃಗಳೇ ಪ್ರತ್ಯಕ್ಷರಾಗಿ ಭೋಜನಕ್ಕೆ ಬರುವರು.
ಸ್ವಸ್ಥಚಿತ್ತತೆಯಿಂದ ಮನೆಯಲ್ಲಿ ಪಾಕವನ್ನು ಮಾಡಿಸಿ—ಎಂದನು. ಬಳಿಕ ಆಬ್ರಾಹ್ಮ
ಣನು ಮನದಲ್ಲಿ ಧೈರ್ಯವನ್ನು ತಾಳಿ ಪಾಕಪ್ರಯತ್ನವನ್ನು ಮಾಡಿಸಿ ಸ್ನಾನಸಂಧ್ಯಾ

ವಂದನಾದಿನಿತ್ಯನಿಯಮಂಗಳನ್ನು ನೆರವೇರಿಸಿಕೊಂಡು ಶ್ರಾದ್ಧವನ್ನಾರಂಭಿಸಿದನು. ಜ್ಞಾನದೇವನು ಅಕ್ಷತೆಯಂ ಹಾಕಿ ಪಿತೃಗಳನ್ನು ಕರೆದನು. ಪಿತೃಗಳು ಬಂದಿಳಿದರು. ಆಬ್ರಾಹ್ಮಣನು ಪಿತೃಗಳನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಮುಖ್ಯಾಸನದಲ್ಲಿ ಕುಳ್ಳಿರಿಸಿ ವಸ್ತ್ರಭೂಷಣಗಳನ್ನೂ ತುಳಸೀಪತ್ರವನ್ನೂ ಹೂವಿನಹಾರವನ್ನೂ ಯಜ್ಞೋಪವೀತಗೋಪೀಚಂದನಗಳನ್ನೂ ಧೂಪದೀಪಂಗಳನ್ನೂ ಸಮರ್ಪಿಸಿ ಎಲೆಗಳನ್ನು ಹಾಕಿ ಭಕ್ಷ್ಯಭೋಜ್ಯಗಳನ್ನು ಬಡಿಸಿ ಪಿತೃರೂಪಿಯಾದ ಶ್ರೀಜನಾರ್ದನನು ಪ್ರೀತನಾಗಲಿ-ಎಂದು ಉದಕಧಾರೆಯಂ ಬಿಡಲು, ಅವರು ಭೋಜನವಂ ಮಾಡಿ ಸಂತುಷ್ಟರಾದರು. ಬಳಿಕ ಹಿರಣ್ಯದಕ್ಷಿಣೆಯನ್ನೂ ತಾಂಬೂಲವನ್ನೂ ಕೊಟ್ಟು ಸ್ವಸ್ಥಾನಕ್ಕೆ ತೆರಳಬಹುದೆನಲು; ಪಿತೃಗಳು ಅದೃಶ್ಯರಾದರು. ಜ್ಞಾನದೇವನ ಮಹಿಮೆಯಿಂದ ಇಂತು ಆಶ್ಚರ್ಯವು ನಡೆದುದು.

ಬಳಿಕ ಪ್ರತಿಷ್ಠಾನಪುರದ ಆಬ್ರಾಹ್ಮಣರು ಈ ಸಂಗತಿಯನ್ನು ಕೇಳಿ ಅತ್ಯಂತ ವಿಸ್ಮಿತರಾಗಿ-ಜ್ಞಾನದೇವನು ಎಂತಹ ಅದ್ಭುತವಾದ ಕಾರ್ಯವನ್ನು ನಡೆಯಿಸಿದನು! ಇಂತಹ ಸಂಗತಿಯನ್ನು ಲೋಕದಲ್ಲಿ ನಾವು ಕೇಳಿರಲಿಲ್ಲ. ಅಭಿಮಾನದಿಂದ ನಾವು ಕೆಟ್ಟೆವು; ಪಿತೃಗಳೇ ಪ್ರತ್ಯಕ್ಷರಾಗಿ ಬಂದು ಭುಂಜಿಸಿ ದಕ್ಷಿಣೆಯಂ ತೆಗೆದುಕೊಂಡು ಹೋದರು. ಯಜ್ಞದ ಬಳಿಯಲ್ಲಿ ಹಾಕಿದ ಬಲಿಯನ್ನು ಕ್ಷೇತ್ರಪಾಲಕನೇ ಪ್ರತ್ಯಕ್ಷನಾಗಿ ಬಂದು ತೆಗೆದುಕೊಂಡುಹೋಗಲು, ನೋಡಿ ಮನದಲ್ಲಿ ತಲ್ಲಣಿಸುವ ಬಲಿಗ್ರಾಹಕನಂತೆ ನಾವು ಬರಿದೆ ಮನದಲ್ಲಿ ಸಂಕಟಗೊಳ್ಳುವುದಾಯ್ತು. ದುರಭಿಮಾನದಿಂದ ಗ್ರಸ್ತರಾಗಿ ಪ್ರಶಸ್ತವಾಗಿದ್ದ ವಿಶೇಷದ ಭೋಜನದಕ್ಷಿಣೆಗಳಂ ವ್ಯರ್ಥವಾಗಿ ಕಳೆದುಕೊಂಡೆವು-ಎಂದು ಪಶ್ಚಾತ್ತಾಪಗೊಂಡು, “ಈನಿವೃತ್ತಿದೇವಾದಿಗಳು ಧನ್ಯರು. ಇವರು ದೇವತೆಗಳ ಅವತಾರವು. ಇವರಿಗೆ ಪ್ರಾಯಶ್ಚಿತ್ತವು ಸಲ್ಲದು. ಇವರು ಜಗದ್ಗುರುಗಳು; ಜೀವನ್ಮುಕ್ತರು; ದೇಹಾತೀತರು—ಎಂದು ಪತ್ರಿಕೆಯಲ್ಲಿ ಬರೆದು ಅದನ್ನು ಅವರ ಕೈಯಲ್ಲಿ ಕೊಟ್ಟರು. ವೇದವನ್ನು ಹೇಳುತಿದ್ದ ಕೋಣವು ಯಥಾಪ್ರಕಾರವಾಗಿ ಹೇಳುತ್ತಲೇ ಇದ್ದಿತು. ಪರುಸದ ಸೋಂಕಿನಿಂದ ಲೋಹವು ಅಕ್ಷಯಸುವರ್ಣವೆನಿಸುವಂತೆ, ಜ್ಞಾನದೇವನ ಹಸ್ತಸ್ಪರ್ಶದಿಂದ ಕೋಣವು ಅಕ್ಷಯಜ್ಞಾನವುಳ್ಳುದೆನಿಸಿ ನಿಗಮಪಠನವನ್ನು ಮಾಡುತಿದ್ದಿತು. ಜ್ಞಾನದೇವನು ನೋಡಿ ನಿವೃತ್ತಿದೇವನಂ ಕುರಿತು—ಈ ಕೋಣನ ಜ್ಞಾನವು ಅನಿವಾರ್ಯವಾದುದು. ಶ್ರುತಿಗಳ ಗರ್ಭವು ಗೂಢವಾದುದು. ಅದನ್ನು ಜನಗಳಿಗೆ ಸ್ಪಷ್ಟವಾಗಿ ತಿಳಿಯಪಡಿಸೀತು. ಕರ್ಮಗಳಲ್ಲಿ ಜನಗಳಿಗೆ ಆದರವು ತಪ್ಪಿಹೋದೀತು. ಯಜ್ಞಾದಿಗಳು ನಿಂತುಹೋದಾವು—ಎಂದು ನುಡಿದು ಆಬ್ರಾಹ್ಮಣರ ಅನುಮತಿಯಿಂದ ಕೋಣನನ್ನು ಸಂಗಡ ಕರೆದುಕೊಂಡು ಎಲ್ಲರೊಡನೆ ಬ್ರಾಹ್ಮಣರಿಗೆ ಸಾಷ್ಟಾಂಗವಂದನೆಯಂಮಾಡಿ ಅವರ ಅಪ್ಪಣೆಯಂ ಪಡೆದು ಹೊರಟನು.

ಬ್ರಾಹ್ಮಣರೆಲ್ಲರೂ ಬಹುದೂರದವರೆಗೆ ಸಾಗಕಳುಹುತ್ತಬಂದು ಅವರ ವಿರಹವನ್ನು ಸೈರಿಸಲಾರದೆ ಕಣ್ಣುಗಳಲ್ಲಿ ನೀರನ್ನು ತುಂಬುತ್ತ ಅವರನ್ನುಕುರಿತು—ನಿಮ್ಮ ಸಂಗದಿಂದ ಉತ್ತಮವಾಗಿ ಕಾಲಕ್ರಮಣವಾಯಿತು. ಸತ್ಸಂಗಕ್ಕಿಂತಲೂ ದೊಡ್ಡದಾವುದೂ ಇಲ್ಲ; ನೀವು ಮಹನೀಯರು—ಎಂದು ಆದರದಿಂದ ನುಡಿದರು.

ಜ್ಞಾನದೇವಾದಿಗಳು ಅವರನ್ನು ಕುರಿತು—ಪೂಜ್ಯರೆ! ನೀವು ನಮಗೋಸ್ಕರ ಬಹುದೂರ ನಡೆದು ಬಂದಿರಿ; ನೀವು ಇನ್ನು ಹಿಂದಿರುಗಿ. ಮುಖ್ಯವಾಗಿ ನಿಮ್ಮ ಅನುಗ್ರಹವಿರಬೇಕು-ಎಂದು ತಕ್ಕ ನುಡಿಗಳಿಂದ ಸಂತೋಷಗೊಳಿಸಿ ಅಲ್ಲಿಂದಹೊರಟು ಮಾರ್ಗಮಂ ನಡೆಯುತ್ತ ಆನಂದದಿಂದ ಭಗವನ್ನಾಮಂಗಳಂ ಸಂಕೀರ್ತಿಸುತ್ತ ರಸಭರಿತವಾದ ಕವಿತ್ವವನ್ನು ಮಾಡಿ ಶ್ರೀಹರಿಯ ಗುಣಂಗಳಂ ಪಾಡಿಪೊಗಳುತ್ತ ಮಹಾಲಸಕ್ಷೇತ್ರವನ್ನು ಸೇರಿದರು.

ಅಲ್ಲಿ ಪ್ರವರಾತೀರ್ಥದಲ್ಲಿ ಸ್ನಾನವಂಮಾಡಿ ಮಹನೀಯರ ಸಂದರ್ಶನದಿಂದ ಸಂತೋಷಗೊಂಡರು. ಗಹನವಾದ ಭಗವದ್ಗೀತೆಯ ಅರ್ಥವು ಜಡರಾದ ಅಜ್ಞಾನಿಗಳಿಗೆ ಸುಲಭವಾಗಿ ತಿಳಿಯುವುದಕ್ಕೋಸ್ಕರ ಮಹಾರಾಷ್ಟ್ರಭಾಷೆಯಲ್ಲಿ ಜ್ಞಾನೇಶ್ವರಿಯೆಂಬ ಟೀಕೆಯು ಅವರಿಂದ ರಚಿಸಲ್ಪಟ್ಟಿತು. ಬಳಿಕ ಗುರುವಾದ ನಿವೃತ್ತಿದೇವನ ಪ್ರೇರಣೆಯಿಂದ ಜ್ಞಾನದೇವನು ಸ್ವಬುದ್ಧಿಯಿಂದ ಅನುಭವಾಮೃತವೆಂಬ ಗ್ರಂಥವನ್ನು ನಿರ್ಮಿಸಿ ಪಾಷಂಡವಾದಿಗಳ ಅಹಂಕಾರವನ್ನು ನಿರ್ಮೂಲಮಾಡಿದನು.

ಬಳಿಕ ನಾಲ್ವರೂ ಮಹಾಲಸಕ್ಷೇತ್ರದಲ್ಲಿರುವ ಆದಿಶಕ್ತಿಗೂ ಮಲ್ಲಹಾರಿಸ್ವಾಮಿಗೂ ನಮಸ್ಕಾರಮಾಡಿ ಅಲ್ಲಿಂದ ಸ್ವದೇಶಕ್ಕೆ ಹೊರಟು ಮಾರ್ಗದಲ್ಲಿ ಭಗವನ್ನಾಮಸಂಕೀರ್ತನೆಯಂ ಮಾಡುತ್ತ ರಾತ್ರಿಕಾಲದಲ್ಲಿ ಅಲ್ಲಲ್ಲಿ ಪ್ರಾಪ್ತವಾಗುವ ಊರುಗಳಲ್ಲಿ ನಿಂತು ಹರಿಭಜನೆಯಂ ಮಾಡುತ್ತ ಜನಗಳಿಗೆ ಭಕ್ತಿಯನ್ನು ಹೆಚ್ಚಿಸಿ ಮೋಹಮಮತೆಗಳಂ ಬಿಟ್ಟು ಬ್ರಹ್ಮಾದಿಪಿಪೀಲಿಕಾಪರ್ಯಂತವಾಗಿ ಸಮಸ್ತವನ್ನೂ ಸಮವಾಗಿ ಎಣಿಸುತ್ತ ಆನಂದಭರಿತರಾಗಿದ್ದರು. ಮಾರ್ಗದಲ್ಲಿ ಬರುತ್ತಿರುವಾಗ ಅಲಕಾವತಿಯ ಸಮೀಪದ ಒಂದು ವನದಲ್ಲಿ, ವೇದವನ್ನು ಪಠಿಸುತಿದ್ದ ಆ ಕೋಣವು ಶಾಂತವಾಯಿತು. ಸಮಾಧಿಯಲ್ಲಿಟ್ಟು ಸಂಸ್ಕಾರವನ್ನು ಮಾಡಿ ಅದಕ್ಕೆ ಸದ್ಗತಿಯನ್ನುಂಟುಮಾಡಿದರು. ಆ ಸಮಾಧಿಗೆ ಚಂದ್ರುವಂ ಬಳಿದು ಅದನ್ನು ಪೂಜಿಸಿದರು. ನೋಬಾ ಎಂಬ ಹೆಸರುಳ್ಳ ಆ ಸಮಾಧಿಯ ಸ್ಥಾನವು ಈಗಲೂ ಅಲ್ಲಿ ಇರುವುದು. ಅಲ್ಲಿಂದ ಹೊರಟು ಅಲಕಾಪುರವನ್ನು ಹೊಕ್ಕರು. ಪ್ರತಿಷ್ಠಾನದಲ್ಲಿ ನಡೆದ ಸಂಗತಿಯು ಅಲಕಾಪುರದ ಸಮಸ್ತರಿಗೂ ಮೊದಲೇ ವಿದಿತವಾಗಿದ್ದಿತು. ಇವರು ತಮ್ಮಲ್ಲಿದ್ದ ಪತ್ರಿಕೆಯಂ ಮಹಾಜನಂಗಳಿಗೆ ಕೊಟ್ಟರು. ಇವರು ಧನ್ಯರು; ಮಹಾನುಭಾವರು. ದೇವರ ಅವತಾರವು—ಎಂದು ಆ ಪತ್ರಿಕೆಯಲ್ಲಿದ್ದ ಅರ್ಥವಂ ತಿಳಿದು ಸಕಲರೂ ಸನ್ಮಾನಿಸಿದರು. ಬೃಹಸ್ಪತಿಯ ಆಜ್ಞೆಯನ್ನು ಇಂದ್ರಾದಿಗಳು ಎಂತು ಗೌರವಿಸುವರೋ, ವ್ಯಾಸನು

ಖದಿಂದ ಹೊರಟ ಪುರಾಣವನ್ನು ಪಂಡಿತರು ಎಂತು ಪ್ರಮಾಣವೆನ್ನುವರೋ, ಸಚ್ಛಿಷ್ಯನು ಗುರುಗಳ ಆದೇಶವನ್ನು ಎಂತು ಅನುವರ್ತಿಸುವನೋ, ಗಾಳಿಯು ಹೋಗುವ ದಿಕ್ಕನ್ನು ಮೇಘವೃಂದವು ಎಂತು ಅನುಸರಿಸುವುದೋ, ಸೂರ್ಯನ ಗತಿಯನ್ನು ಛಾಯೆಯು ಎಂತು ಅನುಸರಿಸುವುದೋ, ಪ್ರವಾಹದ ಮುಖವನ್ನು ಜಲವು ಎಂತು ಅನುಗಮಿಸುವುದೋ, ಗಾಳಿಯು ಚಲಿಸುವ ದೆಸೆಯನ್ನು ಪತಾಕೆ ಎಂತು ಅನುವರ್ತಿಸುವುದೋ, ಗಾನದ ಗತಿಯನ್ನು ವಾದ್ಯಗಳು ಎಂತು ಅನುಸರಿಸುವುವೋ ಅಂತು ಪ್ರತಿಷ್ಠಾನನಗರದ ಮಹಾಜನಂಗಳ ಅಭಿಪ್ರಾಯವನ್ನು ಅಲಕಾಪುರದ ಬ್ರಾಹ್ಮಣರೆಲ್ಲರೂ ಪ್ರಮಾಣವೆಂದು ಗೌರವಿಸಿ ಅನುವರ್ತಿಸಿದರು.

ಅಲ್ಲಿ ವಿಷ್ಟೋಭನೆಂಬ ಧನಿಕನೊಬ್ಬನಿದ್ದನು. ಅವನು ಅತ್ಯಂತಕುಟಿಲನು ; ಅವನು ನಿವೃತ್ತಿದೇವಾದಿಗಳಂ ನಾಲ್ವರನ್ನೂ "ಇವರು ಭ್ರಷ್ಟನಾದ ಸಂನ್ಯಾಸಿಯ ಮಕ್ಕಳು ; ಇವರ ಮುಖವನ್ನವಲೋಕಿಸಬಾರದು" ಎಂದು ನಿಂದಿಸುತ್ತಿರುವನು. ಹಿರಣ್ಯಕಶಿಪುವು ಪ್ರಹ್ಲಾದನ ಹರಿಭಕ್ತಿಯನ್ನು ಕಂಡು ಎಂತು ಬೇಸರಗೊಳ್ಳುತ್ತಿದ್ದನೋ, ಧರ್ಮರಾಯನ ಕೀರ್ತಿಯನ್ನು ಕೇಳಿ ದುರ್ಯೋಧನನು ಎಂತು ಸಂತಾಪಪಡುತ್ತಿದ್ದನೋ, ಶ್ರೀರಘುನಂದನನ ಪ್ರತಾಪವನ್ನು ಕೇಳಿ ರಾವಣನು ಎಂತು ಸಂತಪಿಸುತ್ತಿದ್ದನೋ, ಪೂರ್ಣಚಂದ್ರನ ಕಾಂತಿಯನ್ನು ಕಂಡು ಕಳ್ಳರು ಎಂತು ಸಂಕಟಪಡುವರೋ ಅಂತು ಆ ವಿಷ್ಟೋಭನು ನಿವೃತ್ತಿದೇವಾದಿಗಳ ಪ್ರಶಸ್ತಿಯನ್ನು ಕೇಳಿ ನಿತ್ಯವೂ ಸಂಕಟಪಡುತ್ತಿದ್ದನು.

ಬಳಿಕ ವಿಜಯದಶಮಿ ಪ್ರಾಪ್ತವಾಯಿತು. ನಿವೃತ್ತಿದೇವನು ಮುಕ್ತಾಬಾಯಿಯನ್ನು ಕುರಿತು—ಇಂದು ಹಬ್ಬವು. ಚೆನ್ನಾಗಿ ಮಂಡಿಗೆಯನ್ನು ಮಾಡಿ ನಮ್ಮ ಭೋಜನಕ್ಕೆ ಬಡಿಸು-ಎಂದು ಹೇಳಲು, ಆಕೆ ಅವಶ್ಯವಾಗಿ ಮಾಡಿ ಬಡಿಸುವೆನು—ಎಂದು ಸಕಲಸಾಹಿತ್ಯಗಳನ್ನೂ ಸಿದ್ಧಪಡಿಸಿಕೊಂಡು, ಗುಡಾಣವನ್ನು ಮಾತ್ರ ತರುವುದಕ್ಕೋಸ್ಕರ ಕುಂಬಾರಗೇರಿಗೆ ಹೊರಟಳು. ಮಾರ್ಗದಲ್ಲಿ ವಿಷ್ಟೋಭನು ಕಂಡನು. ಅವನ ಭಯದಿಂದ ಆಕೆ ಮರೆಯಾಗುವುದಕ್ಕೆ ಓಡಿಹೋದಳು. ವಿಷ್ಟೋಭನೂ ಹಿಂದಟ್ಟಿಕೊಂಡು ಹೋಗಿ, ಯಾವಕಾರ್ಯಕ್ಕೋಸ್ಕರ ಓಡಿಹೋಗುತ್ತ ಇರುವೆ?—ಎಂದು ಗದರಿಗರ್ಜಿಸಿದನು. ಆಕೆ ಅಟ್ಟಿಕೊಂಡುಬಂದು ಗರ್ಜಿಸಿದ ಆ ದುಷ್ಟನನ್ನು ಕಂಡು, ಗಿಡುಗನನ್ನು ಕಂಡ ಕೋಗಿಲೆಯಂತೆಯೂ, ಹುಲಿಯಂ ಕಂಡ ಹುಲ್ಲೆಯಂತೆಯೂ, ಸಿಂಹನಂ ಕಂಡ ನರಿಯಂತೆಯೂ, ಚಕಿತಚಕಿತೆಯಾಗಿ-ಗುಡಾಣವಂತರುವುದಕ್ಕೆ ಹೋಗುತ್ತಿರುವೆನು—ಎಂದು ಗದ್ಗದಸ್ವರದಿಂದ ಪ್ರತ್ಯುತ್ತರವನ್ನಿತ್ತಳು. ಆಮಾತಿಗೆ ವಿಷ್ಟೋಭನು ನಕ್ಕು ಮುಕ್ತಾಬಾಯಿಯನ್ನು ಹೊಡೆದು, ಮುಖ್ಯನಾದ ಕುಂಬಾರನನ್ನು ಕರೆದು-ಇವಳಿಗೆ ಗುಡಾಣವಂ ಯಾರೂ ಕೊಡಕೂಡದು. ಕೊಟ್ಟರೆ ಶಿಕ್ಷೆಯಂ ಮಾಡುವೆನು. ನಿಮ್ಮಮೇಲೆ ಇರುವ ಸನ್ನ ಹಣವನ್ನು ಈಕ್ಷಣವೇ ತೆಗೆದುಕೊಂಡುಬಿಡುವೆನು—

ಎಂದು ನುಡಿಯಲು, ಕುಂಬಾರನು ಅಂಜಿಕೊಂಡು ಹಣಕ್ಕೆ ಎಲ್ಲಿ ಹಿಂಸೆಯಾಗುವುದೋ ಎಂದು ಮನದಲ್ಲಿ ಎಣಿಸಿ ಗುಡಾಣವನ್ನು ಕೊಡುವುದಿಲ್ಲವೆಂದು ದೃಢವಾಗಿ ಹೇಳಿದನು. ಸಂಸಾರಿಗಳು ನಿರಂತರವಾದ ಋಣಬಾಧೆಯಿಂದ ಪೀಡಿತರಾಗಿರುವುದೂ, ಶರೀರದಲ್ಲಿ ದಾರುಣವಾದ ರೋಗವುಂಟಾಗುವುದೂ, ವಾರ್ಧಕದಲ್ಲಿ ಪುತ್ರಶೋಕವುಂಟಾಗುವುದೂ, ಪೂಜ್ಯನಾಗುವಸ್ಥಳದಲ್ಲಿ ನಿಂದೆಸಂಭವಿಸುವುದೂ, ಬಾಲ್ಯದಿಂದ ಶಾಸ್ತ್ರಾಭ್ಯಾಸವನ್ನು ಮಾಡಿದ್ದರೂ ಸಮಯಕ್ಕೆ ಏನೂ ತೋರದೆಹೋಗುವುದೂ, ಸದ್ವಿಷಯದಲ್ಲಿ ವಿಕಲ್ಪವುಂಟಾಗುವುದೂ, ಶತ್ರುವಿಗೆ ತನ್ನ ಮರ್ಮವು ಗೊತ್ತಾಗುವುದೂ, ಸಪಕ್ಷರೆಲ್ಲರೂ ವಿಪಕ್ಷರಾಗುವುದೂ, ಬಹುಕುಟುಂಬನಾದ ಮಾನವಂತನಿಗೆ ಅನ್ನವಸ್ತ್ರಾಭಾವದಿಂದ ಮನೆಯಲ್ಲಿ ಹೆಂಡತಿಯ ಹಿಂಸೆ ಹೆಚ್ಚುವುದೂ, ವಾರ್ಧಕದಲ್ಲಿ ಅಂಗಹೀನತೆಯುಂಟಾಗಿ ಮಕ್ಕಳು ಪರಾಮರ್ಶಿಸದೆಹೋಗುವುದೂ, ಕಾಂತೆಯು ಕಠಿನವಾಗಿ ಮಾತನಾಡುವುದೂ, ಇವೆಲ್ಲವೂ ಜನ್ಮಾಂತರದಲ್ಲಿ ಈಶ್ವರನ ಪೂಜೆಯಂ ಮಾಡದಿರುವುದರಿಂದ ಉಂಟಾಗುವ ಕ್ಷೋಭೆಯು. ಅದಂತಿರಲಿ. ಮುಕ್ತಾಬಾಯಿಯು ಎಲ್ಲಾ ಕುಂಬಾರರನ್ನೂ ಗುಡಾಣವನ್ನು ಕೇಳಿದಳು. ಎಲ್ಲರೂ ಇನ್ನೂ ಸಿದ್ಧವಾಗಿಲ್ಲವೆಂದು ಹೇಳಿಬಿಟ್ಟರು. ಅದಂ ಕೇಳಿ ಆಕೆ ಬಿನ್ನಹೃದಯೆಯಾಗಿ ಮನೆಗೆಬಂದು ದೀನಸ್ವರದಿಂದ ರೋದನವಂ ಮಾಡುತಿದ್ದಳು. ಅಷ್ಟುಹೊತ್ತಿಗೆ ಜ್ಞಾನದೇವನು ಸ್ನಾನವನ್ನು ಮಾಡಿಕೊಂಡು ಮನೆಗೆ ಬಂದು, ಅಳುತಿದ್ದ ತಂಗಿಯಂ ಕಂಡು–ಏತಕ್ಕೆ ವ್ಯಸನಪಡುತ್ತಿರುವೆ ?-ಎಂದು ಅನುನಯದಿಂದ ಬೆಸಗೊಂಡನು. ಅದಕ್ಕೆ ಆಕೆ–ಅಣ್ಣಾ ! ಆರ್ಯನಾದ ಅಣ್ಣಯ್ಯನು ಈದಿವಸ ಮಂಡಿಗೆಯಂ ಮಾಡುವಂತೆ ಹೇಳಿದನು. ಅದಕ್ಕೆ ಗುಡಾಣವಂ ತರಬೇಕೆಂದು ಕುಂಬಾರಗೇರಿಗೆ ಹೋಗಿದ್ದೆನು. ದಾರಿಯಲ್ಲಿ ದುಷ್ಟನಾದ ವಿಷ್ಟೋಬನು ಕಂಡು ನನ್ನನ್ನು ಹೊಡೆದು ಗದರಿ ಗರ್ಜಿಸಿ, ಗುಡಾಣವನ್ನು ಕೊಡಲಾಗದೆಂದು ಮುಖ್ಯನಾದ ಕುಂಬಾರನಿಗೆ ಹೇಳಿದನು. ನಾನು ಎಲ್ಲೆಲ್ಲಿ ವಿಚಾರಿಸಿದರೂ ಯಾರೂ ಕೊಡಲಿಲ್ಲ. ಏನುಮಾಡುವುದೆಂದು ಚಿಂತಿಸುತಿರುವೆನು–ಎಂದು ನುಡಿದಳು. ಆಸಮಯದಲ್ಲಿ ವಿಷ್ಟೋಬನು ಮನೆಯಹಿಂದೆ ನಿಂತು ಎಲ್ಲವನ್ನೂ ಕೇಳುತಿದ್ದನು.

ಬಳಿಕ ಜ್ಞಾನದೇವನು ತಂಗಿಯ ಮಾತನ್ನು ಕೇಳಿ, ಅಮ್ಮಾ ! ಅದಕ್ಕೇಕೆ ವ್ಯಸನಪಡುವೆ ? ದುಷ್ಟನ ಸ್ವಭಾವಕ್ಕೆ ನಾವು ಮಾಡತಕ್ಕುದೇನು ? ಮಂಡಿಗೆಯಂ ಮಾಡುವುದಕ್ಕೆ ತಕ್ಕ ಗುಡಾಣವಂ ನಾನು ಸಿದ್ಧಮಾಡಿಕೊಡುವೆನು. ಬೇಗನೆ ಸಾಹಿತ್ಯವಂ ತೆಗೆದುಕೊಂಡುಬಾ-ಎಂದು ಹೇಳಿ, ಒಡನೆಯೆ ಯೋಗಧಾರಣೆಯಂ ಮಾಡಿ ಜಠರಾಗ್ನಿಯನ್ನು ಪ್ರದೀಪ್ತವಾಗುವಂತೆ ಎಸಗಿ, ಮುಖದೊಳಗಣಿಂದ ಜ್ವಾಲೆಗಳು ಹೊರಡುತ್ತಿರಲು, ಕಂಣುಗಳು ಕೆಂಡಗಳಾಗಿ ಕೆಚ್ಚನೆ ಕಾಣುತ್ತಿರಲು, ಕಾಯಿಸಿದ ಸುವರ್ಣದಂತೆ ಬೆನ್ನು ಕೆಂಬಣ್ಣದಿಂ ಕೂಡಿರಲು, ತಂಗಿಯಂ ಕರೆದು-ನನ್ನ ಬೆನ್ನಮೇಲೆ ಮಂಡಿಗೆಯಂ ಮಾಡು–ಎಂದನು. ವಿಷ್ಟೋಬನು ಹೊರಗೆ ನಿಂತು ಗವಾಕ್ಷದಿಂದ

ದೃಷ್ಟಿಸಿ ನೋಡುತ್ತಲೇ ಇದ್ದನು. ಆಕೆ ಸಾಮಗ್ರಿಗಳಂ ಸಿದ್ಧಮಾಡಿಕೊಂಡು ನಿಮಿಷದಲ್ಲಿ ಹದನಾಗಿರುವಂತೆ ಮಂಡಿಗೆಗಳಂ ಮಾಡಿದಳು. ಬಳಿಕ ಜ್ಞಾನದೇವನು ತನ್ನ ಜಠರಾಗ್ನಿಯನ್ನು ಶಾಂತಿಗೊಳಿಸಿದನು. ನಿತ್ಯವೂ ಆನಂದಭರಿತವಾದ ಹೃದಯವೆಂಬ ಚಿನ್ನದ ಹರಿವಾಣದಲ್ಲಿ ಭಕ್ತಿಯೆಂಬ ಹಾಲನ್ನೂ ಶಾಂತಿಯೆಂಬಸಕ್ಕರೆಯನ್ನೂ ಬೆರಸಿ ಬ್ರಹ್ಮರಸವೆಂಬ ಮಂಡಿಗೆಯಂ ಆಸ್ವಾದಿಸುತ್ತಿರುವ ಆ ಮಹನೀಯರು ಈ ದಿವಸ ಸರ್ವಸಾಧಾರಣವಾದ ಮಂಡಿಗೆಗಳನ್ನು ಪ್ರತ್ಯಕ್ಷವಾಗಿ ಹರಿವಾಣದಲ್ಲಿ ಬಡಿಸಿಕೊಂಡು ಶ್ರೀಹರಿಯೆ ಭೋಕ್ತೃವೆಂದು ಭಾವಿಸಿ ಆನಂದದಿಂದ ಭುಂಜಿಸಿದರು.

ಹೊರಗೆ ನಿಂತು ಎಲ್ಲವನ್ನೂ ಪ್ರತ್ಯಕ್ಷವಾಗಿ ಕಂಡ ವಿಷ್ಟೋಭನು ಮನದಲ್ಲಿ ಅನುತಾಪಗೊಂಡು, ಇವರು ಮಹನೀಯರು ; ಮಹಾಮಹಿಮರು ; ಪ್ರತ್ಯಕ್ಷರಾದ ದೇವತೆಗಳು; ನಾನು ವಿಚಾರಮಾಡದೆ ಇವರನ್ನು ಅನ್ಯಾಯವಾಗಿ ನಿಂದಿಸಿದೆನು. ದಿವ್ಯವಾದ ವಜ್ರವನ್ನು ಗಾಜೆಂದು ಭಾವಿಸಿ ಬಿಸುಟಂತೆ, ಕಲ್ಪವೃಕ್ಷವನ್ನು ಯಾವುದೋ ಕಾಡುಮರವೆಂದು ತಿಳಿದು ಕಡಿಯಲು ಕೊಡಲಿಯಂ ಹಾಕಿದಂತೆ, ಕುಪ್ಪಿಗೆಯಲ್ಲಿರುವ ಗಂಗೋದಕವಂ ಮದ್ಯವೆಂದು ಸುರಿದಂತೆ, ಭಾಗ್ಯಹೀನನು ಪ್ರಾಪ್ತವಾದ ನಿಧಿಯನ್ನು ಬೆಂಕಿಯೆಂದು ತಿಳಿದಂತೆ, ನಾನು ಈ ಮಹನೀಯರನ್ನು ಪತಿತರೆಂದು ತಿಳಿದು ನಿರಾಕರಿಸಿದೆನಲ್ಲಾ ! ಎಂದು ಸಂಕಟಗೊಂಡು, ಈಗ ಇವರನ್ನು ಎಂತಾದರೂ ಕ್ಷಮೆಬೇಡಿ ಪ್ರಸನ್ನರಂ ಮಾಡಿಕೊಳ್ಳಬೇಕು-ಎಂದು ಒಳಪೊಕ್ಕು ಅವರಿಗೆ ದೂರದಲ್ಲಿಯೇ ವಂದನೆಯಂಮಾಡಿ ಅವರ ಉಚ್ಛಿಷ್ಟವಂಭಕ್ಷಿಸಬೇಕೆಂದು ಆಲೋಚಿಸಿ ಜ್ಞಾನದೇವನ ಬಳಿಗೆ ಬರಲು, ಆತನು ಇದನ್ನು ತಿಳಿದು ಹರಿವಾಣವನ್ನು ಮರೆಮಾಡಿದನು. ವಿಷ್ಟೋಭನು ಬಲಾತ್ಕಾರದಿಂದ ಹರಿವಾಣದಲ್ಲಿ ಒಂದು ಗ್ರಾಸವನ್ನು ತೆಗೆದುಕೊಂಡು ತನ್ನ ಬಾಯಿಯಲ್ಲಿ ಹಾಕಿಕೊಂಡನು. ಅದಂ ಕಂಡು ಜ್ಞಾನನಾಥನು-ಏನು ? ನೀನು ಖೇಚರನಾಗಿರುವೆ ; ದೂರ ಸರಿವುದು-ಎನಲು, ಇದೆ ತನಗೆ ಉಪದೇಶವಾಯಿತೆಂದು ಬಗೆದು, ಪರಾಪಶ್ಯಂತೀಮಧ್ಯಮೆಗಳಿಗಿಂತಲೂ ವೈಖರಿಯು ದೂರಸರಿವುದು-ಎಂಬ ಅರ್ಥವಂ ಭಾವಿಸಿ, ವಾಗತೀತವಾದ ಪರವಸ್ತುವಿನಲ್ಲಿ ಸಮರಸತೆಯಿಂದ ಬೆರೆದನು. ಥಟ್ಟನೆ ಅವನ ಅವಿದ್ಯೆಯ ಬೇರು ನಾಶವನ್ನು ಹೊಂದಿತು. ಘಂಟೆಯೊಳಗಣಿಂದ ಹೊರಟ ನಾದವು ಅದೇ ಸ್ಥಾನದಲ್ಲಿ ಎಂತು ಲೀನವಾಗುವುದೋ, ಅಂತು ಸ್ವರೂಪದಲ್ಲಿ ಸಮರಸನಾಗಿ ಅಭೇದದಿಂದ ನಿಂತನು. ಎರಡು ಕೈಗಳನ್ನೂ ಜೋಡಿಸಿಕೊಂಡು ನನ್ನ ಅಪರಾಧವನ್ನು ಕ್ಷಮಿಸಿ ತಾವು ನನ್ನನ್ನು ಉದ್ಧರಿಸಬೇಕು-ಎಂದು ಪ್ರಾರ್ಥಿಸಿ ಅವರ ಪಾದಗಳಲ್ಲಿ ಮಸ್ತಕವನ್ನು ಇರಿಸಿದನು.

ಜ್ಞಾನನಾಥನು ಅವನಿಗೆ ಅಭಯವನ್ನು ಕೊಟ್ಟು ಮಸ್ತಕದಲ್ಲಿ ಹಸ್ತವನ್ನು ಇಟ್ಟನು. ನಾರದಮಹರ್ಷಿಗಳ ಸಂದರ್ಶನದಿಂದ ವಾಲ್ಮೀಕಿಯು ಎಂತು ತಾಮಸಗುಣಗಳಂ ಬಿಟ್ಟನೋ, ಅಂತು ವಿಷ್ಟೋಭನು ಜ್ಞಾನದೇವನ ಸಂಗದಿಂದ ಪರಮ

ಸಾತ್ವಿಕನಾದನು. ಏನು ? ಖೇಚರನಾಗಿರುವೆ ; ದೂರಸರಿವುದು—ಎಂದು ಜ್ಞಾನನಾಥನು ನುಡಿಯಲು, ಅಂದಿನಿಂದ ಅವನಿಗೆ ವಿಸ್ಫೋಭಖೇಚರನೆಂಬ ಹೆಸರಾಯಿತು.

ಮುಂದಣ ಕಥೆಯು ಅತಿಸುರಸವು. ಶ್ರೋತೃಗಳು ಅದಂ ಸಾವಧಾನತೆಯಿಂದ ಕೇಳಬೇಕು ; ಶ್ರವಣಮಾತ್ರದಿಂದಲೇ ಸಕಲಪಾಪಂಗಳೂ ಪರಿಹಾರವನ್ನು ಹೊಂದುವುವು. ಸೂರ್ಯನ ತೇಜಸ್ಸು ಪಸರಿಸುವುದೂ ಅಂಧಕಾರವು ಎಂತು ತೊಲಗುವುದೋ, ಅಂತು ಭಕ್ತರ ಚರಿತ್ರೆಯು ಶ್ರುತಿವಿಷಯವಾಗಲು, ಅವಿದ್ಯೆಯು ತೊಲಗುವುದು. ಸ್ಪರ್ಶದ ಸೋಂಕಿನಿಂದ ಕ್ಷಣಮಾತ್ರದಲ್ಲಿ ಕಬ್ಬಿಣದ ನಾಮರೂಪಂಗಳು ಎಂತು ನಶಿಸಿ ಹೋಗುವುವೋ, ಅಂತು ಭಕ್ತಕಥಾಶ್ರವಣದಿಂದ ಈ ಮಾಯಾಪ್ರಪಂಚದ ವಾಸನೆಗಳು ಧ್ವಸ್ತವಾಗಿ ಹೋಗುವುವು. ಅಂತಹ ಭಕ್ತರ ಚರಿತ್ರೆಗಳು ಅನಿರ್ವಚನೀಯಗಳಾದರೂ, ಶ್ರೀರುಕ್ಮಿಣೀರಮಣನು ತಾನು ನುಡಿಯಿಸುವನು, ನಿಮಿತ್ತಮಾತ್ರದಿಂದ ಈ ಮಹೀಪತಿಗೆ ಯೋಗವುಂಟಾಗಿರುವುದು.

ಇಂತು ಶ್ರೀಭಕ್ತವಿಜಯದಲ್ಲಿ ಒಂಬತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹತ್ತನೆಯ ಅಧ್ಯಾಯ.

ಜ್ಞಾನದೇವನಾಮದೇವರ ಸಂಮೇಳವು

ಭಾಸ್ವನ್ಮಂಗಳಮೂರ್ತಿರಿಷ್ಟಕಟಿತೇ ಪೀಠೇ ಪದಾಭ್ಯಾಂ ಸ್ಥಿತಃ |
ಪಾಣಿದ್ವಂದ್ವಸಮುಲ್ಲಸತ್ಕಟಿತಟಃ ಶ್ರೀಪುಂಡರೀಕೇಕ್ಷಣಃ ||
ಭೀಮಾತೀರವಿಭಾಸಿಪಂಡರಪುರಾವಾಸೀ ಹರಿರ್ವಿಟ್ಠಲಃ |
ಚಿತ್ತೇ ಖೇಲತು ಪುಂಡರೀಕವರದಃ ಶ್ರೀಪಾಂಡುರಂಗೋ ವಿಭುಃ ||

ಇಂದು ಶುಭದಶೆಗೆ ಮೊದಲಾಯಿತು. ಕಿವಿಗಳಿಂ ಭಕ್ತವಿಜಯವಂ ಕೇಳುವುದರಿಂದ ಪಾಗಾನಂದವು ಅತಿಶಯಿತವಾಗಿರುವುದು. ನನ್ನ ಮುಖದಿಂದ ಏನೆಂದು ವರ್ಣಿಸಲಿ ? ಈಗ, ಅಂಗಳದಲ್ಲಿ ಕಲ್ಪವೃಕ್ಷವು ಹುಟ್ಟಿದಂತಾಗಿರುವುದು. ಚಿಂತಾಮಣಿಯು ಕೈಸೇರಿದಂತಿರುವುದು. ಸ್ವಾನಂದವೆಂಬ ಮೇಘವು ಎಲ್ಲಿಯೂ ಹರಡಿಕೊಂಡಿರುವುದು. ಸುಧಾರಸವು ಮೇದಿನಿಯಲ್ಲಿ ವಿಶೇಷದಿಂ ವರ್ಷಿಸಲ್ಪಟ್ಟಿರುವುದು. ಅನೇಕಚಂದ್ರರು ಒಂದೇಕಾಲದಲ್ಲಿ ಉದಯಿಸಿದಷ್ಟು ಶೀತಲತ್ವವುಂಟಾಗಿರುವುದು.

ಸಕಲನದಿಗಳೂ ಪರಮಾಮೃತವನ್ನೇ ಸ್ರವಿಸಿ ಪ್ರವಹಿಸುವಂತಿದೆ. ಮಳಲೆಲ್ಲವೂ ಸುವರ್ಣವಾದಂತೆ ತೋರುತ್ತಲಿದೆ. ಕಾಡುಕಲ್ಲುಗಳೆಲ್ಲವೂ ದಿವ್ಯರತ್ನಗಳಾದಂತಿದೆ. ಬಗೆಬಗೆಯ. ವಿಕಲ್ಪಂಗಳು ಪರಮಾಮೃತಪ್ರಾಪ್ತಿಯಿಂದ ದೂರವಾಗುತಿರುವುವು. ಅಮೃತಕ್ಕಿಂತಲೂ ಈಪರಮಾಮೃತವು ಅತಿಶಯವುಳ್ಳುದಾಗಿರುವುದು. ಅಮೃತಪಾನವಂ ಮಾಡಿದ ದೇವತೆಗಳೂ ಈ ಪರಮಾಮೃತವನ್ನು ಬಯಸುತ್ತಿರುವರು. ಈಪರಮಾಮೃತವನ್ನು ಸೇವಿಸಿದವರು ಚಿರಂಜೀವಿಗಳಾಗಿ ಅಕ್ಷಯಪದವಂ ಪಡೆಯುವರು. ಅದರಿಂದ ಭಾವುಕರೆಲ್ಲರೂ ಚಿತ್ತವಿಟ್ಟು ಆಲಿಸಬೇಕು. ಶ್ರವಣಮಾತ್ರದಿಂದ ದೋಷಂಗಳೆಂಬ ಉಲ್ಲೋಲಂಗಳು ಲಯವನ್ನು ಹೊಂದುವುವು.

ಒಂದು ದಿವಸ ಜ್ಞಾನದೇವನು ಭಾಗವತಶಿರೋಮಣಿಯಾದ ನಾಮದೇವನನ್ನು ಕಾಣಬೇಕೆಂದು ಮನದಲ್ಲಿ ಇಚ್ಛೈಸಿ ಆತನಿದ್ದೆಡೆಯಂ ಸೇರಿ ಆತನ ಮನೆಯಂ ಪೊಕ್ಕು ದೂರದಿಂದ ಆತನಂ ಕಂಡು ವಂದಿಸಿದನು. ನಾಮದೇವನು ಕಂಡು ಥಟ್ಟನೆ ಎದ್ದು ತಕ್ಕಂತೆ ಉಪಚರಿಸಿ—ಸುಜ್ಞಾನಿಗಳು ನನ್ನ ಕುಟೀರಕ್ಕೆ ಬಿಜಯಂಗೈದುದರಿಂದ ನನ್ನ ಭಾಗ್ಯವು ಅನಿರ್ವಚನೀಯವಾದುದು. ನಾನು ಧನ್ಯನಾದೆನು. ನನ್ನ ಪುಣ್ಯವಿಶೇಷದಿಂದ ಶ್ರೀ ಪಾಂಡುರಂಗಸ್ವಾಮಿಯೇ ಮನೆಗೆ ಬಂದಂತಾಯಿತು. ಸಂಸಾರವೆಂಬ ಮಹಾಪಂಕದಲ್ಲಿ ಸಿಕ್ಕಿ ನರಳುತ್ತಿರುವ ಜಡಜೀವರನ್ನು ಉದ್ಧರಿಸುವುದಕ್ಕೋಸ್ಕರ ತಾವು ಭೂಮಿಯಲ್ಲಿ ಅವತರಿಸಿರುವಿರಿ; ನನ್ನಲ್ಲಿ ಅನುಗ್ರಹವಂ ಮಾಡಿ ಇಲ್ಲಿಗೆ ದಯೆಮಾಡಿದಿರಿ—ಎನಲು, ಆ ಮಾತಂ ಕೇಳಿ, ಜ್ಞಾನನಾಥನು ನಾಮದೇವನಂ ಕುರಿತು—ನಾಮದೇವನೆ! ನಿನ್ನ ಭಾಗ್ಯವು ಅಸಾಧಾರಣವಾದುದು. ಅದರಿಂದಲೇ ಶ್ರೀಹೃಷೀಕೇಶನ ಸನ್ನಿಧಿಯು ನಿನಗೆ ನಿರಂತರವೂ ಲಭಿಸಿರುವುದು. ಭಗವದ್ಧ್ಯಾನರಸದ ಸವಿಯು ನಿನಗೆ ಹತ್ತಿರುವುದು. ತೃಷ್ಣಾರಾಗಾದಿಗಳು ಶಾಂತವಾದುವು. ನೀನು ಪುಟ್ಟಿದ ವಂಶವು ಪವಿತ್ರವಾಯಿತು. ನೀನು ಧನ್ಯನು. ನಿನ್ನಲ್ಲಿ ಇಂದು ಒಂದು ರಹಸ್ಯವಂ ಹೇಳಬೇಕೆಂದಿರುವೆನು—ಎಂದು ನಾಮದೇವನ ಕೈಯಂ ಹಿಡಿದುಕೊಂಡು ಏಕಾಂತಸ್ಥಳವಂ ಸೇರಿ, ನಿನ್ನೊಡನೆ ಕೂಡಿ ಭೂತಳದಲ್ಲಿರುವ ಸಮಸ್ತತೀರ್ಥಗಳನ್ನೂ ನೋಡಿಕೊಂಡು ಬರಬೇಕೆಂಬ ಅಭಿಪ್ರಾಯವು ನನಗುಂಟಾಗಿರುವುದು. ಮಹಾಜ್ಞಾನಿಯಾಗಿ ಪಾವನನೆನಿಸಿದರೂ ತೀರ್ಥಯಾತ್ರೆಯನ್ನು ಉಪೇಕ್ಷಿಸಬಾರದು. ದೇವತಾಭಜನೆಯನ್ನು ಬಿಡಬಾರದು. ಅದರಿಂದ ನಾನು ಹೇಳುವೆನು. ನನ್ನ ಮನೋರಥವಿದು ಪೂರ್ಣವಾಗುವುದೋ ? ಅಥವಾ ಆಗದೋ ? ಹೇಳು—ಎನಲು, ಈಮಾತಂ ಕೇಳಿ ನಾಮದೇವನು- ಈ ಪಂಡರಕ್ಷೇತ್ರವನ್ನು ಬಿಟ್ಟು ತೀರ್ಥಯಾತ್ರೆಯನ್ನೇಕೆ ಮಾಡಬೇಕು ? ಅಮೃತರಸವಂ ಚೆಲ್ಲಿ ಗಂಜಿಯನ್ನೇಕೆ ಬೇಡಬೇಕು ? ಅಮೂಲ್ಯವಾದ ಕಸ್ತೂರಿಯಂ ಬಿಸುಟು ಬೂದಿಯನ್ನೇಕೆ ತೆಗೆದುಕೊಳ್ಳಬೇಕು ? ಕಲ್ಪವೃಕ್ಷವನ್ನುಪೇಕ್ಷಿಸಿ ಕಾಚಲು ಮರವನ್ನು ಏಕೆ ಅಪೇಕ್ಷಿಸಬೇಕು ?- ಎಡೆಯಲ್ಲಿರುವ ಮೃಷ್ಟಾನ್ನವನ್ನು ಬಿಟ್ಟು ಉದ

ರಿದೆಳೆಗಳನ್ನೇಕೆ ಭಕ್ಷಿಸಬೇಕು? ರಾಜಹಂಸವನ್ನು ನಿರಾಕರಿಸಿ ಬಕವನ್ನು ಏಕೆ ಹಿಡಿಯಬೇಕು? ರತ್ನರಾಜಿಯನ್ನು ಬಿಸುಟು ಮಳಲುಗಳನ್ನು ಏಕೆ ಸೆರಗಿನಲ್ಲಿ ಕಟ್ಟಿ ಕೊಳ್ಳಬೇಕು? ಸಾಮಗಾನವನ್ನು ಬಿಟ್ಟು ಕಲಹೋಕ್ತಿಯನ್ನು ಏಕೆ ಶ್ರವಣಮಾಡ ಬೇಕು? ಕಾಮಧೇನುವಂ ತೊರೆದು ಆಡನ್ನು ಏಕೆ ಹುಡುಕಬೇಕು? ಶ್ರೀರುಕ್ಮಿಣೀ ಪ್ರಾಣವಲ್ಲಭನೂ ಪುಂಡರೀಕವರದನೂ ಆದ ಶ್ರೀಹರಿಯಿಂದ ನಾನು ಸಂರಕ್ಷಿತನಾಗಿ ಇರುವೆನು. ಮನೋವಾಕ್ಕಾಯಕರ್ಮಂಗಳಿಂದಲೂ ನಾನು ಅವನಿಗೆ ಅಧೀನನಾಗಿ ಇರುವೆನು. ನಾನು ಇಲ್ಲಿಂದ ಹೊರಡುವ ವಿಷಯದಲ್ಲಿ ಆ ಸ್ವಾಮಿಯನ್ನು ನೀವು ಕೇಳಬೇಕು. ಆತನು ಅಪ್ಪಣೆಯಂ ಕೊಟ್ಟರೆ, ಸಿರದಿಂದ ವಹಿಸಿ ನಡೆಯುವೆನು— ಎಂದು ಅಭಿವಂದಿಸಿ ನುಡಿಯಲು, ಜ್ಞಾನದೇವನು ಆತನನ್ನು ಕುರಿತು—ನಿನ್ನ ಮನೋ ಭಾವವು ನನಗೆ ವಿದಿತವಾಗಿರುವುದು; ಆಗಲಿ, ನಿನ್ನ ಇಷ್ಟದಂತೆ ಸ್ವಾಮಿಯ ಅನುಜ್ಞೆ ಯನ್ನೇ ಕೇಳೋಣ ಬಾ—ಎಂದು ನಾಮದೇವನನ್ನೂ ಸಂಗಡ ಕರೆದುಕೊಂಡು ಹೊರಟನು.

ಇಬ್ಬರೂ ದೇವಾಲಯವನ್ನು ಸೇರಿ, ಮಹಾದ್ವಾರದ ಗರುಡಗಂಬದ ಬಳಿಯಲ್ಲಿ ಸಾಷ್ಟಾಂಗನಮಸ್ಕಾರವಂ ಮಾಡಿ ಗರ್ಭಗೃಹವಂ ಪ್ರೊಕ್ಕು ಇಟ್ಟಿಗೆಯಮೇಲೆ ಆನಂದ ದಿಂದ ನಿಂತಿರುವ ವಿಟ್ಠಲಮೂರ್ತಿಯನ್ನು ಕಂಡು ವಂದಿಸಿ ಪಾಡಿ ಪೊಗಳಿದರು.

ಜ್ಞಾನದೇವನು ತನ್ನ ಮನದರ್ಥವನ್ನು ಸ್ವಾಮಿಗೆ ಬಿನ್ನವಿಸಿದನು. ಸ್ವಾಮಿಯು ಜ್ಞಾನದೇವನ ನುಡಿಯನಾಲಿಸಿ ಆತನನ್ನು ಕುರಿತು—ಜ್ಞಾನದೇವನೆ! ನೀನೆ ಕೇವಲ ಚಿದ್ರೂಪನಾಗಿರುವೆ. ಸರ್ವಸಂಗಗಳಿಂದ ನಿರ್ಲಿಪ್ತನಾಗಿ ಸ್ಫಟಿಕದಂತೆ ನಿರ್ಮಲ ನಾಗಿ ಸಾಕ್ಷಾದಾತ್ಮಸ್ವರೂಪನಾಗಿರುವೆ. ನಿನಗೇಕೆ ತೀರ್ಥಾಟನವು? ಸೂರ್ಯನು ಮೈಯನ್ನು ಏತಕ್ಕೆ ಬೆಳಗಿಕೊಳ್ಳಬೇಕು? ಚಂದ್ರನು ಶೀತಲೋಪಚಾರಂಗಳಂ ಅಡಿ ಗಡಿಗೆ ಏಕೆ ಬಯಸಬೇಕು? ಗಜವದನನು ಆಯಾಸದಿಂದ ವಿದ್ಯಾಭ್ಯಾಸವನ್ನೇಕೆ ಮಾಡಬೇಕು? ಸರಸ್ವತಿಯು ಚತುಷ್ಷಷ್ಟಿಕಲೆಗಳನ್ನು ಕಷ್ಟದಿಂದ ಏಕೆ ಕಲಿಯ ಬೇಕು? ಇದೆಲ್ಲವೂ ಎಂತು ಅನಾವಶ್ಯಕವೋ ಅಂತು ನಿನಗೆ ತೀರ್ಥಯಾತ್ರೆಯೂ ಅನಾವಶ್ಯಕವು. ಮನದಲ್ಲಿ ವಿಚಾರಮಾಡಿ ನೋಡು. ವ್ಯರ್ಥವಾಗಿ ಏಕೆ ಅಲೆಯುವೆ?— ಎನಲು, ಅದಕ್ಕೆ ಜ್ಞಾನದೇವನು—ಭಗವಂತನೆ! ನೀನು ನುಡಿದುದು ಯಥಾರ್ಥವೇಸರಿ; ಆದರೆ ನಾಮದೇವನ ಸಂಗವು ಸಂಘಟಿಸಬೇಕು; ಸಾಧುವರೇಣ್ಯನಾದ ಈತನ ಸಂಗಡ ಸುಖವನ್ನನುಭವಿಸುತ್ತ ದೇಹದ ಸಾರ್ಥಕತೆಯಂ ಮಾಡಿಕೊಳ್ಳಬೇಕೆಂದಿರುವೆನು; ಎಂತಾದರೂ ನನ್ನ ಮನೋರಥದ ಪೂರಣವಂ ಮಾಡಬೇಕು—ಎಂದು ಪ್ರೀತಿಯಿಂದ ಸ್ವಾಮಿಯ ಪಾದಗಳಮೇಲೆ ಮಸ್ತಕವನ್ನಿರಿಸಿದನು.

ಬಳಿಕ ಪಂಢರೀನಾಥನು ಮಂದಸ್ಮಿತದಿಂದ ಕೂಡಿದವನಾಗಿ ನಾಮದೇವನಕಡೆಗೆ ಕಟಾಕ್ಷವಂ ಪ್ರಸಾರಿಸಿ—ನಾಮದೇವನೆ! ಈ ಜ್ಞಾನದೇವನು ಪರಬ್ರಹ್ಮಮೂರ್ತಿಯು;

ನಿನ್ನ ಸಂಗವನ್ನಪೇಕ್ಷಿಸುವನು ; ಆದುದರಿಂದ ನೀನು ಈತನ ಸಂಗಡಹೋಗಿ, ಬೇಗದಿಂ ಹಿಂದಿರುಗಿ ಬಂದುಬಿಡಬೇಕು. ಈತನ ಕೋರಿಕೆಯಂ ಸಾರ್ಥಕವಮಾಡಬೇಕು. ನೀನು ಕುಳಿತಾಗಲೂ ನಿಂತಾಗಲೂ ನಡೆಯುವಾಗಲೂ ಮಲಗುವಾಗಲೂ ನನ್ನ ಸ್ಮರಣೆಯಂ ಬಿಡದಿರು. ನೀನು ನನ್ನ ಜೀವವು. ನನ್ನಲ್ಲಿ ಎಂದೂ ಪ್ರೀತಿಯನ್ನಿಟ್ಟಿರು—ಎಂದು ನುಡಿದು, ಜ್ಞಾನದೇವನಂ ಕುರಿತು-ನೀನು ಸರ್ವಜ್ಞನು ; ಆದರೂ ನಿನಗೆ ಒಂದು ಹೇಳತಕ್ಕುದಿದೆ. ಅದನ್ನು ನೀನು ಚಿತ್ತದಲ್ಲಿ ಜ್ಞಾಪ್ತಿಯೊಳಟ್ಟಿರಬೇಕು. ಅತ್ಯಂತಾನುಗ್ರಹದಿಂದ ಇವನನ್ನು ಬಳೆಯಿಸಿರುವೆನು. ಇವನಲ್ಲಿ ನನಗೆ ಅತ್ಯಂತ ಪ್ರೀತಿಯಿರುವುದು. ಒಂದುವೇಳೆ ರಮೆಯಾದರೂ ಅಗಲಿರುವಳು. ಇವನ ಅಗಲಿಕೆಯಂ ಹಿಗೂ ನನಗುಂಟಾಗಲಿಲ್ಲ. ನೀನು ನನ್ನನ್ನು ಸಂಕಟದಲ್ಲಿ ಸಿಕ್ಕಿಸಿದೆ. ನಿನ್ನ ಮಾತನ್ನು ತೆಗೆಯಲಾರೆನು. ಇವನನ್ನು ನಿನ್ನಜೀವಕ್ಕಿಂತಲೂ ಬೇರೆ ಎಣಿಸಬೇಡ. ಹಗಲೂ ಇರುಳೂ ಇವನನ್ನು ಪ್ರೀತಿಯಿಂದ ರಕ್ಷಿಸಬೇಕು. ನನ್ನ ಹೃದಯದ ದಿವ್ಯ ರತ್ನಮಾಲೆಯನ್ನು ನೀನು ಒತ್ತೆಯಿಡಲು ಕೇಳುವೆ. ಏನಮಾಡಲಿ? ನನ್ನ ಮುದ್ದಿನ ಕಣಿಯಾದ ಈ ಮರುಳನಾಮನನ್ನು ನೀನು ಎಡೆಬಿಡದೆ ನೋಡಿಕೊಳ್ಳುತಿರಬೇಕು. ಪುಟ್ಟಿದಂದಿನಿಂದಲೂ ಇವನನ್ನು ನಾನು ಅಗಲಲಿಲ್ಲ. ನಿನ್ನ ದಾಕ್ಷಿಣ್ಯಕ್ಕೋಸ್ಕರ ಇಂದು ಬಿಟ್ಟುಕೊಡುವೆನು—ಎಂದು ಗದ್ಗದಕಂಠನಾಗಿ ನುಡಿದನು.

ಬಳಿಕ ಜ್ಞಾನದೇವನು ಶ್ರೀಹರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಅನುಜ್ಞೆಯಂ ಪಡೆದು ನಾಮದೇವನ ಕೈಯಂ ಪಿಡಿದುಕೊಂಡು ಹೊರಟು ಚಂದ್ರಭಾಗೆಯ ತೀರಕ್ಕೆ ಬಂದು, ಅಲ್ಲಿ ನಾಮದೇವನೊಡನೆ ಸ್ನಾನವಂ ಮಾಡಿ, ಪುಂಡರೀಕನಿಗೆ ಪ್ರದಕ್ಷಿಣನಮಸ್ಕಾರಂಗಳಂ ಮಾಡಿ ಅಲ್ಲಿಂದ ಆಚೆಯ ತೀರಕ್ಕೆ ಹೊರಟನು.

ಶ್ರೀಹರಿಯು ನಾಮದೇವನನ್ನು ಸ್ವಲ್ಪದೂರದವರೆಗೆ ಸಾಗಕಳುಹಿ ದೇವಸ್ಥಾನಕ್ಕೆ ಹೋಗಿ ಸೇರಿದನು.

ರುಕ್ಮಿಣಿಯು ಶ್ರೀಹರಿಯ ಪಾದಂಗಳಂ ತೊಳೆಯುವುದಕ್ಕೋಸ್ಕರ ಚಿನ್ನದ ಪಾತ್ರೆಯಲ್ಲಿ ನೀರನ್ನು ತೆಗೆದುಕೊಂಡು ಬಳಿಗೆ ಬಂದು, ದೀನವದನನಾಗಿ ಚಿಂತಿಸುತ್ತಿರುವ ಸ್ವಾಮಿಯನ್ನು ನೋಡಿ, ವಿಸ್ಮಯಗೊಂಡು ಅವನತೆಯಾಗಿ—ಸ್ವಾಮಿಯೆ! ಇಂದದೇಕೆ ಮುಖವು ಕಳೆಗೆಟ್ಟಿರುವುದು? ಮನದ ಚಿಂತೆಯೇನು?—ಎನಲು, ಆಮಾತಂ ಕೇಳಿ ಸ್ವಾಮಿಯು-ಎಲೆ ಪ್ರಿಯೆ! ನಾಮದೇವನ ವಿಯೋಗದಿಂದ ನನ್ನಮನಸ್ಸು ತಲ್ಲಣಿಸುತ್ತಿರುವುದು. ಅವನಲ್ಲಿ ನನಗೆ ಬಹುಪ್ರೀತಿಯಿರುವುದು. ಯಾವಸುಖದಿಂದಲೂ ನನ್ನ ಮನಸ್ಸು ಸ್ಥಿರವಾಗಲಾರದು. ನಂಟರು ಇಷ್ಟರು ನಾನಲ್ಲದೆ ನಾಮದೇವನಿಗೆ ಮತ್ತಾರೂ ಇಲ್ಲ. ಅವನು ನನ್ನನ್ನು ಬಿಟ್ಟು ಪ್ರಾಣವನ್ನು ಎಂತು ರಕ್ಷಿಸಬಲ್ಲನು? ಜ್ಞಾನದೇವನೆಂಬ ಯಾಚಕನು ನನ್ನ ಪ್ರಿಯಭಕ್ತನಾದ ನಾಮದೇವನೆಂಬ ನಿಧಿಯನ್ನು ತೆಗೆದುಕೊಂಡು ಹೋದನು. ಕೈಯಲ್ಲಿದ್ದ ಹಣವನ್ನು ಕಳೆದುಕೊಂಡ ಲೋಭಿಯಂತೆ

ನಾನು ಕೊರಗುತ್ತಿರುವೆನು. ವಾರ್ಧಕದಲ್ಲಿ ಹುಟ್ಟಿದ ಮಗನಂತೆ ನಾಮದೇವನು ನನಗೆ ಸರ್ವಕಾಲದಲ್ಲಿಯೂ ಅತ್ಯಂತಪ್ರಿಯನಾಗಿರುವನು. ಜ್ಞಾನದೇವನು ಬಂದು ಬಲಾತ್ಕಾರದಿಂ ಉಯ್ದನಲ್ಲಾ ! ನಾನು ಜಗದಾಕಾರವಾದ ವೃಕ್ಷವು ; ನಾಮದೇವನು ನನ್ನ ಬೇರಿನ ಉದಕವು. ಜ್ಞಾನದೇವನೆಂಬ ಜಲದೇವತೆ ಬಂದು ಶೋಷಿಸಿ ಎಂತು ತೆಗೆದುಕೊಂಡು ಹೋಯಿತು ? ನಾನೆಂಬ ಬೆಳೆಗುವ ಪುರಕ್ಕೆ ನಾಮದೇವನು ಆನಂದಪ್ರದವಾದ ಜಲಧರವು. ಜ್ಞಾನದೇವನೆಂಬ ಪ್ರಬಲವಾಯು ಬಂದು ಅದಂ ದೂರವಾಗಿ ತೆಗೆದುಕೊಂಡು ಹೋಯಿತಲ್ಲಾ !—ಎಂದನು.

ರುಕ್ಮಿಣಿಯು ಆ ಮಾತಂ ಕೇಳಿ ಸ್ವಾಮಿಯಂ ಕುರಿತು—ದಿವ್ಯವಾದ ನಿನ್ನ ನಾಮಾಮೃತವು ಅವನ ಮುಖದಲ್ಲಿರುವಾಗ ದುಃಖಮೋಹಗಳು ಅವನನ್ನು ಬಾಧಿಸವು. ಸ್ವಾಮಿಯೆ ! ಇದಕ್ಕೆ ನೀನು ಚಿಂತಿಸುವುದೇಕೆ ?—ಎನಲು, ಅದಕ್ಕೆ ಲಕ್ಷ್ಮೀಪತಿಯು-ಪ್ರಿಯೆ ! ನೀನು ಹೇಳಿದುದು ಸತ್ಯ ; ಆದರೆ ನಾನು ಭಕ್ತರನ್ನು ಬಿಟ್ಟು ಕ್ಷಣಮಾತ್ರವೂ ಕಾಲಹರಣಮಾಡಲಾರೆನು. ನಾನು ಅವ್ಯಕ್ತನು ; ನಿರಾಕಾರನು. ಭಕ್ತರಿಗೋಸ್ಕರ ವ್ಯಕ್ತನಾಗಿ ಸಾಕಾರನಾಗಿರುವೆನು. ಭಕ್ತರು ಇರುವುದಕ್ಕೋಸ್ಕರವೇ ವೈಕುಂಠವನ್ನು ನಿರ್ಮಿಸಿದೆನು. ನನ್ನ ಭಾಗ್ಯದ ಭಾಗಿಗಳು ನಿಜಭಕ್ತರೇ ಸರಿ. ಅವರ ಮನೋಭಾವವನ್ನು ನಾನು ಬಲ್ಲೆ. ನನ್ನ ಭಾವವನ್ನು ಭಕ್ತರಲ್ಲದೆ ಇನ್ನಾರೂ ತಿಳಿಯರು. ದೀಪಪ್ರಕಾಶಗಳಂತೆಯೂ, ಸೂರ್ಯತತ್ಕಿರಣಗಳಂತೆಯೂ ನನ್ನಲ್ಲಿ ಅಭೇದಗೊಂಡು ಸಮರಸವಾಗಿ ಬೆರೆದಿರುವ ನಾಮದೇವನ ಅಗಲಿಕೆಯು ನನಗೆ ದುಸ್ಸಹವಾಗಿ ಇರುವುದು-ಎಂದು ನುಡಿಯುತ್ತಲೇ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು. ರುಕ್ಮಿಣಿ ಥಟ್ಟನೆ ತಲ್ಲಣಿಸಿ ಸಂಭ್ರಾಂತೆಯಾಗಿ ಮೆಲ್ಲಗೆ ಧೈರ್ಯಗೊಂಡು ಹೊರಗಿದ್ದ ಭಕ್ತರಂ ಕರೆದು ಅವರನ್ನು ಕುರಿತು-ಸ್ವಾಮಿಯು ಆಕಸ್ಮಿಕವಾಗಿ ಮೂರ್ಛೆಗೊಂಡು ನೆಲದಲ್ಲಿ ಬಿದ್ದಿರುವನು. ನೀವು ಸಮೀಪಕ್ಕೆ ಬಂದು ಏನಾದರೂ ಉಪಚಾರವಂ ಮಾಡಿ—ಎನಲು, ಭಕ್ತರು ಗಾಳಿಯನ್ನು ಬೀಸಿ—ಸ್ವಾಮಿಯೇ ! ಕೃಪಾಸಾಗರನೇ ! ಇಂದದೇಕೆ ನಿನಗೆ ಆಯಾಸವುಂಟಾಯಿತು—ಎಂದು ಕೇಳಿದರು. ಭಕ್ತರ ನುಡಿಯು ಕಿವಿಯಲ್ಲಿ ಬಿದ್ದ ಮಾತ್ರಕ್ಕೆ ಸ್ವಾಮಿಯು ಎಚ್ಚರಗೊಂಡು ಸಮಾಧಾನಸ್ಥಿತಿಯನ್ನು ಪಡೆದು, ಅವರನ್ನು ಕುರಿತು ಗದ್ಗದಸ್ವರದಿಂದ—ನನಗೆ ನಾಮದೇವನಲ್ಲದೆ ಮತ್ತೊಂದು ಪ್ರಿಯವಾದ ವಸ್ತುವಿಲ್ಲ. ಅದರಿಂದ ಅವನನ್ನು ಈಗ ಆಲಿಂಗಿಸಿಕೊಳ್ಳಬೇಕೆಂದು ಮನದಲ್ಲಿ ಇಚ್ಛೆಯುಂಟಾಗಿರುವುದು. ನಾನು ಸರ್ವಕಾಲದಲ್ಲಿಯೂ ಭಕ್ತರ ಯೋಗಕ್ಷೇಮವಿಚಾರದಲ್ಲಿಯೇ ಇರುವೆನು. ಅದನ್ನು ಹೇಳಲು ಸಂಕೋಚವಾಗುವುದು. ಆದರೂ ನಾಮದೇವನು ನನಗೆ ಯಾವವಿಷಯದಲ್ಲಿಯೂ ಶ್ರಮವನ್ನು ಕೊಡಲಿಲ್ಲ. ನಾನು ಅವನಿಗೆ ಯಾವ ಪುರುಷಾರ್ಥಗಳನ್ನೂ ಕೊಡಲಿಲ್ಲ. ಅವನು ಪುಟ್ಟಿದಂದಿನಿಂದಲೂ ನನ್ನ ಸೇವೆಯಂಮಾಡಿ ನನ್ನಮೇಲೆ ಋಣಭಾರವಂ ಹೊರಿಸಿರುವನು. ಅಭಿಜ್ಞನಾದ ಅವನು ತನ್ನ ವಿವೇಕ

ಬಲದಿಂದ ಕಾಮಕ್ರೋಧಾದ್ಯರಿಷಡ್ವರ್ಗವನ್ನು ಧ್ವಂಸಗೊಳಿಸಿ ಸಂಸಾರವನ್ನು ಗೆದ್ದು ಇರುವವನು. ಮಮತೆಯೆಂಬುದಂ ದೂರಮಾಡಿರುವವನು. ನನ್ನುಳಿದು ಇತರ ದೇವರಿಗೆ ನಮಸ್ಕಾರವಂ ಮಾಡನು. ಅವನು ಅನನ್ಯಭಾವದಿಂದ ನನ್ನನ್ನು ನೆನೆಯುತ್ತಿರುವನು. ನನ್ನಿಂದಲೇ ಅವನ ಜೀವಕ್ಕೆ ವಿಶ್ರಾಂತಿ. ಅವನಿಗೆ ಮಾರ್ಗಸಂಚಾರದಿಂದ ಎಲ್ಲಿ ಬಳಲಿಕೆಯುಂಟಾಗುವುದೋ, ಅವನ ಕ್ಷುತ್ಪಿಪಾಸೆಗಳನ್ನು ಯಾರು ವಿಚಾರಿಸಿ ಪರಿಹರಿಸುವರೋ-ಎಂದು ನನಗೆ ದಾರುಣವಾದ ಚಿಂತೆಯುಂಟಾಗಿರುವುದು_ಎಂದನು. ಭಕ್ತವತ್ಸಲನಾದ ಆ ಸ್ವಾಮಿಯ ನುಡಿಗಳನ್ನು ಕೇಳಿ ಎಲ್ಲರೂ ಆನಂದಭರಿತರಾಗಿ 'ಜಯ ಜಯ' ಎಂದು ಪಾಡಿ ಪೊಗಳಿದರು.

ಪರಿಷದ್ಭಾಗವತನೆಂಬ ಭಕ್ತನೊಬ್ಬನು ಗರುಡಸ್ತಂಭದ ಬಳಿಯಲ್ಲಿ ಭಗವಂತನಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಆನಂದದಿಂದ ಸ್ತೋತ್ರಮಾಡುತ್ತ ನರ್ತನವಂ ಮಾಡುತ್ತಿರಲು, ಅದರಿಂದ ಸ್ವಾಮಿಯ ಮನಸ್ಸಿಗೆ ಸ್ವಲ್ಪಸಮಾಧಾನವುಂಟಾಯಿತು.

ಅತ್ತಲಾ ನಾಮದೇವನು ಅಡಿಗಡಿಗೆ ಹಿಂದಿರುಗಿ ನೋಡುತ್ತ-ಸ್ವಾಮಿಯೇ! ನನ್ನನ್ನು ಸಾಗಕಳುಹುತ್ತ ಹಿಂದೆಯೇ ಬಾರದೆ ನನ್ನನ್ನು ಬಿಟ್ಟು ಹೊರಟುಹೋದೆಯಾ! ನನಗೆ ಜೀವಸಂಬಂಧಿಗಳು ಇನ್ನಾರೂ ಇಲ್ಲ.

ಜನನೀಜನಕರ್ ನೀನೇ |
ನನಗೆಲ್ಲಾನಂಟರಿಷ್ಟರುಂ ಸದ್ಗುರುವುಂ ||
ಘನಸಂಪದಮುಂ ನೀನೇ |
ವನಜಾಕ್ಷನೆ! ನೀನೆ ಸಕಲಮುಂ ಜಗದೀಶಾ ||

ಮನ್ನಿಯನೆಡಕೋರೆಂದುವೆ! |
ಮನ್ನಾಥನೆ! ಮನ್ಮನೋಬ್ಜಮಾರ್ತಾಂಡನೆ ನಾಂ! ||
ನಿನ್ನಡಿದಾವರೆಗಳ ಘನ |
ಸನ್ನಿಧಿಯಂ ಬಿಟ್ಟು ಪೊರಗೆ ಜೀವಿಸಲಾರೆಂ ||

ಆವಗಮುತ್ಕಾಸೆಂದದೆ |
ತಾವಕಚರಣಾರವಿಂದಕಾಸಾರದೊಳೀ ||
ಆವಸಿಪೆನ್ನಯ ಕಣ್ಮೀನ್ |
ದೇವನೆ! ತಾಂ ಪೊರಗೆ ಸಂತಮಿರ್ಪುದದೆಂತೋ ||

ಎಂದು ಪಲತೆರದಿ ಪಲುಂಬಿ, ಜನನಿಯು ವಿಯೋಗದಿಂದ ರೋದನಂಮಾಡುವ ಶಿಶುವಿನಂತೆಯೂ, ತಾಯನ್ನಗಲಿ ಹುಡುಕುತ್ತ ದಿಕ್ಕುದಿಕ್ಕಿಗೆ ಓಡಿಹೋಗುವ ಜಿಂಕೆಮರಿಯಂತೆಯೂ, ಅನ್ನವಿಲ್ಲದೆ ತಲ್ಲಣಿಸುತ್ತಿರುವ ಕ್ಷುಧಿತನಂತೆಯೂ, ಬೇಸಗೆಯಲ್ಲಿ ಬಣಗಿ

ಹೋದ ಕೊಳದಲ್ಲಿ ವಸಿಸಿ ತೊಳಲುತ್ತಿರುವ ಮೀನಂತೆಯೂ, ಅಮಾವಾಸ್ಯೆಯಲ್ಲಿ ಚಂದ್ರನನ್ನು ಕಾಣದೆ ಸಂಕಟಪಡುತ್ತಿರುವ ಚಕೋರದಂತೆಯೂ, ಮೇಘೋದಯ ವನ್ನು ಕಾಣದೆ ತತ್ತರಗೊಳ್ಳುತ್ತಿರುವ ಪಿಪಾಸಿತವಾದ ಚಾತಕದಂತೆಯೂ, ಪಂಢರೀ ನಾಥನಾದ ಶ್ರೀಹರಿಯನ್ನು ಕಾಣದೆ ಸಂಭ್ರಾಂತನಾಗಿ ತೊಳಲುತ್ತ ವ್ಯಾಕುಲತೆ. ಗೊಂಡನು.

ಈ ಪ್ರಕಾರ ನಾಮದೇವನು ವ್ಯಾಕುಲತೆಗೊಂಡಿರುವುದನ್ನು ಕಂಡು ಜ್ಞಾನ ದೇವನು—ಅಯ್ಯಾ ನಾಮದೇವನೆ! ಪ್ರೀತಿವಿಶೇಷದಿಂದ ಇಂತು ನೀನು ಏಕೆ ಸಂಕಟ ಪಡುತ್ತಿರುವೆ? ಜಗನ್ನಾಥನಾದ ಶ್ರೀಹರಿಯು ನಿನ್ನ ಹೃದಯದಲ್ಲಿ ಆನಂದಸ್ವರೂಪ ನಾಗಿರುವನು. ವಿಚಾರಮಾಡಿ ನೋಡಿದರೆ ನೀನೇ ಸಾಕ್ಷಾತ್ಪರಬ್ರಹ್ಮಮೂರ್ತಿಯೆನಿ ಸುವೆ; ಸಂಶಯವಿಲ್ಲ. ತನ್ನ ನಾಭಿಯಲ್ಲಿ ಕಸ್ತೂರಿಯಿದ್ದರೂ ಅದನರಿಯದೆ ಮೃಗವು ವನದೊಳಗೆ ಎಲ್ಲಾ ಕಡೆಯಲ್ಲಿಯೂ ಹುಡುಕಿ ಆಯಾಸಪಡುವಂತೆ, ಹೃದಯದಲ್ಲಿ ಪರಮಾತ್ಮನು ನೆಲಸಿದ್ದರೂ ಅರಿಯದೆ ನೀನು ಸುಮ್ಮನೆ ಆಯಾಸಪಡುವೆ. ಅಗಣಿತ ವಾದ ದ್ರವ್ಯವು ತನ್ನ ಮನೆಯಲ್ಲಿ ನೆಲದೊಳಗೆ ಬೈತಿಟ್ಟದ್ದರೂ ಅದನರಿಯದೆ ಭಾಗ್ಯ ಹೀನನು ದಾರಿದ್ರ್ಯದಿಂದ ಸಂಕಟಪಡುವಂತೆ, ನೀನು ನಿನ್ನಲ್ಲಿ ಗುಪ್ತನಾಗಿರುವ ಪರ ಮಾತ್ಮನನ್ನು ಅರಿಯದೆ ವಿಯೋಗದಿಂದ ಸಂಕಟಪಡುತ್ತಿರುವೆ. ಇನ್ನಾದರೂ ಸಮಾ ಧಾನಸ್ಥಿತಿಯನ್ನು ತಾಳು—ಎಂದು ಸಂತೈಸಿದನು.

ನಾಮದೇವನು ಈ ಮಾತಂ ಕೇಳಿ ಜ್ಞಾನದೇವನಂ ಕುರಿತು—ಇಟ್ಟಿಗೆಯ ಮೇಲೆ ಪಾದಾರವಿಂದಗಳನ್ನು ಸಮವಾಗಿಟ್ಟು ನಿಂತಿರುವ ಸಾಕ್ಷಾತ್ಪರಬ್ರಹ್ಮಮೂರ್ತಿ ಯನ್ನು ನನಗೆ ತೋರಿಸಿ. ಪೀತಾಂಬರವನ್ನುಟ್ಟು ಸೊಂಟದಮೇಲೆ ಎರಡು ಕೈಗಳನ್ನು ಇರಿಸಿಕೊಂಡು, ಭಕ್ತಪಕ್ಷಪಾತಿಯೆನಿಸಿ ಜಗವನುದ್ಧರಿಸುತ್ತಿರುವ ಸ್ವಾಮಿಯನ್ನು ನನಗೆ ತೋರಿಸಿ. ಯಾವ ಪರವಸ್ತುವನ್ನು ಸನಕಾದಿಗಳು ನಿತ್ಯವೂ ಧ್ಯಾನಿಸುತ್ತಿರುವರೋ, ಯಾವನು ನೀಲಗ್ರೀವನ ಪ್ರಿಯತಮನೋ ಆ ರುಕ್ಮಿಣೀಕಾಂತನಂ ನನಗೆ ತೋರಿಸಿ. ಯಾವನಂ ನಾರದಾದಿಗಳು ನಿತ್ಯವೂ ಪಾಡಿ ಪೊಗಳುತ್ತಿರುವರೋ ಆ ಪುಂಡರೀಕ ವರದನನ್ನು ನನಗೆ ತೋರಿಸಿ. ನಾನು ಜ್ಞಾನವನ್ನೂ ಯೋಗವನ್ನೂ ಇತರಸಾಧನ ವನ್ನೂ ಅರಿಯೆನು. ಆ ಸ್ವಾಮಿಯಿಂದಲೇ ವಿಶ್ರಾಂತಿಯು. ಅವನಂ ಕಾಣದಿರಲು, ನನ್ನ ಪ್ರಾಣಗಳು ತಲ್ಲಣಿಸುವುವು—ಎನಲು, ಜ್ಞಾನದೇವನು—ಅಯ್ಯಾ ಭಾಗವತಶಿರೋ ಮಣಿಯೇ! ಅಂತಹ ಸಗುಣಮೂರ್ತಿಯೇ ನಿನ್ನ ಹೃದಯದಲ್ಲಿರುವನು. ಆ ಸ್ವಾಮಿ ಯು ಇಲ್ಲದ ಸ್ಥಳವೇ ಇಲ್ಲ. ಭೇದಭಾವವನ್ನು ಬಿಟ್ಟು ಹೃದಯದಲ್ಲಿ ಅದ್ವೈತಸಿದ್ಧಿ ಯನ್ನು ಪಡೆ-ಎಂದನು.

ಅದಕ್ಕೆ ನಾಮದೇವನು—ಉದಕವೆಲ್ಲವೂ ಒಂದೇ ಆದರೂ ಚಾತಕವು ಮೇಘ ದಿಂದ ವರ್ಷಿಸಲ್ಪಡುವ ಧಾರೆಯನ್ನೇ ಎಂತು ಸೇವಿಸುವುದೋ, ಅಂತು ಪರಮಾತ್ಮನು

ಒಬ್ಬನೇ ಆಗಿದ್ದರೂ ನನ್ನ ಹೃದಯವು ಪಂಡರೀನಾಥನನ್ನೇ ಅಪೇಕ್ಷಿಸುತ್ತಿರುವುದು. ಪತಿವ್ರತೆಯು ತನ್ನ ಪತಿಯ ಕಥೆಯನಲ್ಲದೆ ಅನ್ಯರ ಕಥೆಯನ್ನು ಎಂತು ಕೇಳಳೋ ಅಂತು ಶ್ರೀವಿಟ್ಠಲನ ಸಂಗತಿಯನಲ್ಲದೆ ಮತ್ತಾವದೇವರ ಸಂಗತಿಯನ್ನೂ ನಾನು ಒಲ್ಲೆನು—ಎನಲು, ಜ್ಞಾನದೇವನು—ಜ್ಞಾನಿಗಳಿಂದ ಉಪಾಸಿತವಾದ ಅದ್ವೈತವಸ್ತುವು ಯಾವುದೋ ಅದೇ ನಿನ್ನ ಹೃದಯದಲ್ಲಿಯೂ ಇರುವುದು. ಯಾವುದನ್ನು ಕಣ್ಣಿನಿಂದ ಕಾಣಲು ಆನಂದವಾಗುವುದೋ, ಯಾವುದರ ಕೀರ್ತನೆಯನ್ನು ಕೇಳಲು, ಮತ್ತೂ ಕೇಳಬೇಕೆನಿಸುವುದೋ ಆ ಸಗುಣಪರಬ್ರಹ್ಮಮೂರ್ತಿಯೇ ನಿನಗೆ ಇಷ್ಟವಾಗಿರುವುದು. ತದ್ವ್ಯತಿರಿಕ್ತವಾದ ವಸ್ತುವಾವುದೂ ಇಲ್ಲ. ನಿನ್ನ ಮನೋದಾರ್ಢ್ಯಕ್ಕೆ ಸಂತೋಷಿಸುವೆನು. ಸಗುಣಮೂರ್ತಿಯಾದ ಪಂಡರೀನಾಥನಲ್ಲಿ ನಿನಗಿರುವ ಭಾವವು ಅತಿಶಯಿತವಾದುದು ; ನೀನು ಧನ್ಯನು. ಆ ಸ್ವಾಮಿಯನ್ನು ನೀನು ಯಾವುದರಿಂದ ಸ್ವಾಧೀನನಂ ಮಾಡಿಕೊಂಡಿರುವೆಯೋ, ಅಸಾಧಾರಣವಾದ ಆ ಭಕ್ತಿಯ ಮಾರ್ಗವನ್ನು ನನಗೆ ವಿಸ್ತರದಿಂದ ಹೇಳುವವನಾಗು. ಭಜನದ ಪರಿಯು ಯಾವುದು ? ಶ್ರವಣಮನನನಿದಿಧ್ಯಾಸಾದಿಗಳನೆಂತು ಮಾಡಬೇಕು ? ಯಾವುದನ್ನು ವಿಶ್ರಾಂತಿಯೆಂದು ಹೇಳಬೇಕು ? ಇದನೆಲ್ಲವಂ ಬಹುದಿವಸಗಳಿಂದ ನಿನ್ನನ್ನು ಬೆಸಗೊಳ್ಳಬೇಕೆಂದು ಇದ್ದೆನು. ನಿನ್ನ ಅನುಭವವೆಂತಾಗಿರುವುದೋ ಅಂತು ಆ ಸಾಧನೋಪಾಯವಂ ನನಗೆ ವಿಸ್ತರದಿಂದ ಪೇಳು—ಎಂದು ಬದ್ಧಾಂಜಲಿಪುಟನಾಗಿ ಕೇಳಿದನು.

ನಾಮದೇವನು ಜ್ಞಾನದೇವನ ಪಾದಗಳಿಗೆ ಎರಗಿ ಗದ್ಗದಕಂಠನಾಗಿ—ಮಹನೀಯರೆ ! ನಾನು ವ್ಯುತ್ಪತ್ತಿಯನ್ನರಿಯದವನು. ನನಗೆ ಅವುದು ವಿದಿತವಾಗಿರುವುದು ? ಶ್ರೀ ರುಕ್ಮಿಣೀಪತಿಯೂ ಅಜ್ಞನಾದ ನನ್ನನ್ನು ರಕ್ಷಿಸಬೇಕೆಂದು ನಿಮ್ಮ ವಶದಲ್ಲಿ ಕೊಟ್ಟಿರುವನು. ಇಂತಹ ನನ್ನನ್ನು ಸರ್ವಜ್ಞರಾದ ನೀವು ಅಧ್ಯಾತ್ಮಜ್ಞಾನವಂ ಬೆಸಗೊಳ್ಳುವಿರಿ. ಕಲ್ಪವೃಕ್ಷವು ಉಬ್ಧನನ್ನು ಯಾಚಿಸಿದಂತಾಯಿತು. ಹಿಮಾಚಲವು 'ತನಗೆ ತಾಪವುಂಟಾಗಿದೆ ಗಾಳಿಯಂ ಬೀಸು' ಎಂದಂತಾಯಿತು. ಸೂರ್ಯನು ತನ್ನ ಮನೆಗೆ ದೀಪವಂ ಹತ್ತಿಸಬೇಕೆಂದು ಅಪೇಕ್ಷಿಸಿದಂತಾಯಿತು. ಆಕಾಶವು ತನ್ನ ವಾಸಕ್ಕೆ ವಿಶಾಲವಾದ ಸ್ಥಳವಂ ಬೇಡಿದಂತಾಯಿತು. ಸಮುದ್ರವು ಪಲ್ವಲದಲ್ಲಿ ಸ್ನಾನ ಮಾಡಬೇಕೆಂದು ಬಯಸಿದಂತಾಯಿತು. ಕಾಮಧೇನುವು ಬಂಜೆಯಾದ ಧೇನುವನ್ನು ಕ್ಷೀರವಂ ಬೇಡಿದಂತಾಯಿತು. ದೊಡ್ಡವರಾದ ನೀವು ಸಲ್ಲದ ಅಲ್ಪಭಾವವನ್ನು ಹೊಂದಿ ನನ್ನನ್ನು ಅಧ್ಯಾತ್ಮಜ್ಞಾನವಂ ಬೆಸಗೊಳ್ಳಬಹುದೇ ?—ಎಂದನು.

ಜ್ಞಾನದೇವನು ಅದಕ್ಕೆ—ಮನದಲ್ಲಿ ಶಂಕೆಯನ್ನು ಮಾಡದೆ, ಭೇದಭಾವವನ್ನು ಬಿಟ್ಟು, ನಿನ್ನ ಅನುಭವವನ್ನು ನನಗೆ ತಿಳಿಯಿಸುವವನಾಗು. ನಿನ್ನ ನುಡಿ ರಸವಿಶಿಷ್ಟವಾಗಿರುವುದು. ಸಮುದ್ರಕ್ಕಿಂತಲೂ ಬಹುಗಂಭೀರವಾದುದು. ನವನವೋನ್ಮೇಷದಿಂದ ಆನಂದಪ್ರದವಾದುದು. ಸೌಶೀಲ್ಯಸಂಪಾದಕವಾದುದು. ಆ ನಿನ್ನ ನುಡಿಯೆಂಬ ಅಮೃತ

ವನ್ನು ಪಾನಮಾಡಲು ನನ್ನ ಕಿವಿಗಳು ಕ್ಷುಧಿತವಾಗಿರುವುವು. ಅಮೃತಸಾರವನ್ನು
ವರ್ಷಿಸಿ ಆನಂದವನ್ನುಂಟುಮಾಡುವವನಾಗು. ನೀನು ವಿಶ್ರಾಂತಿಗೆಡೆಯೆಂದು ನಿನ್ನ
ಸಂಗವಂ ಮಾಡಿದೆನು. ನೀನು ಪರಮಾತ್ಮನಿಗೆ ಅಂತರಂಗಭಕ್ತನು; ಆ ಶ್ರೀಹರಿ
ಯನ್ನು ಸ್ವಾಧೀನಮಾಡಿಕೊಂಡಿರುವವನು. ಭಕ್ತಿರಸವೊಂದಿಲ್ಲದಿರಲು, ಮಿಕ್ಕ ಸಾಧ
ನಂಗಳಿಂದ ಫಲವೇನು? ಬರಿಯ ಜ್ಞಾನವೇತಕ್ಕೆ? ನಕ್ಷತ್ರಪದವು ದೊಡ್ಡದು;
ಆದರೂ ಸರ್ವಕಾಲದಲ್ಲಿಯೂ ಆ ನಕ್ಷತ್ರಗಳು ಸಂಚಲಿಸುತ್ತಲಿರುವುವು; ಅವುಗಳಲ್ಲಿ
ಧ್ರುವನಕ್ಷತ್ರವು ಸಣ್ಣದು; ಅದು ಎಂದಿಗೂ ಚಲನೆಯಿಲ್ಲದೆ ಕುಳಿತಿರುವುದು.
ಸುಮ್ಮನೆ "ದೊಡ್ಡದು ಸಣ್ಣದು" ಎಂಬ ವಿಚಾರದಿಂದೇನು? ನಿನ್ನದು ಅಲ್ಪಜ್ಞಾನ
ವೆನಲಾಗದು. ಮಹಾಜ್ಞಾನಿಗಳೂ ನಿನಗೆ ಸಮಾನರೆನಿಸರು. ಬೆಂಕಿಯುರಿಯು
ದೊಡ್ಡದಾದರೂ ಮನೆಯಲ್ಲಿ ದೀಪದಂತೆ ನಿರ್ಮಲಪ್ರಕಾಶವನ್ನೀಯದು. ಸಿಂಹದ
ಶರೀರವು ಸಣ್ಣದು; ಅದರ ಮುಂದೆ ಆನೆ ನಿಲಲಾರದು. ಅನೇಕೌಷಧಗಳನ್ನು
ರಾಶಿಹಾಕಿದರೂ ಅವು ಅಮೃತಬಿಂದುವಿಗೆ ಸರಿಬಾರವು. ಅಂತು ನಿನ್ನ ಜ್ಞಾನಕ್ಕೆ
ಅನೇಕಶಾಸ್ತ್ರಜ್ಞರ ತಿಳಿವಳಿಕೆ ಸಾಟಿಯಾಗಲಾರದು. ಅದರಿಂದ ನಿನ್ನ ನುಡಿಯಂ
ಕೇಳಲು ಚಿತ್ತದಲ್ಲಿ ಉತ್ಕಂಠಿತನಾಗಿರುವೆನು. ಮೌನವಂ ಬಿಟ್ಟು ನನ್ನ ಅಪೇಕ್ಷೆಯಂ
ಪೂರೈಸುವನಾಗು—ಎಂದು ನುಡಿದನು.

ಇಂತು ನುಡಿದ ಜ್ಞಾನದೇವನ ಮಾತನಾಲಿಸಿ ನಾಮದೇವನು—ಪೂಜ್ಯರೆ! ನನ್ನ
ಮಾತಿನಲ್ಲಿ ನಿಮಗೆ ಇಷ್ಟು ಆದರವಿರುವುದರಿಂದ ನನಗೆ ತೋರಿದುದನ್ನು ನಾನು ಹೇಳು
ವೆನು; ಆಲಿಸಿ. ಮನದಲ್ಲಿ ವೈರಾಗ್ಯವು ಬಲವತ್ತರವಾಗಿರಬೇಕು. ಸರ್ವಭೂತಗ
ಳಲ್ಲಿಯೂ ನಿಶ್ಚಲತೆಯುಳ್ಳ ದಯೆಯಿರಬೇಕು. ನಾನು ನೀನು—ಎಂಬ ಕಳವಳವೂ
ಪ್ರಪಂಚದ ತಲ್ಲಣವೂ ಇರಬಾರದು. ಇಂತಹ ಸ್ಥಿತಿಯುಂಟಾಗಲು, ಅದನ್ನು ಶುದ್ಧ
ಭಜನೆಯೆಂದು ಹೇಳಬೇಕು. ಈ ಚಿಹ್ನೆಗಳು ಉಂಟಾಗದಿರಲು, ಸಾಧನಂಗಳನ್ನು
ಏಕೆ ಮಾಡಬೇಕು? ಅಂತರಂಗದಲ್ಲಿ ದೋಷಗಳಂ ನೆನೆಯುತ್ತ ಹೊರಗೆ ಸಾತ್ವಿಕ
ಭಾವದಿಂದಿರುವುದು ನೊಣದಿಂದ ಕೂಡಿದ ಮೃಷ್ಟಾನ್ನದ ಕಬಳಕ್ಕೆ ಸಮಾನವು,
ಉತ್ತಮ ಮಧ್ಯಮವೆಂದೆಣಿಸದೆ ಇರುವುದೇ ಅಖಂಡಮನನವೆನಿಸುವುದು. ಹೃದಯ
ದಲ್ಲಿ ಸ್ವಾನಂದವೆಂಬ ಜೀವನವು ಅಖಂಡಿತವಾಗಿರಬೇಕು. ವಿಶ್ವದಲ್ಲಿ ವಿಶ್ವಂಭರನು
ವ್ಯಾಪಿಸಿರುವನೆಂಬ ಬೋಧವು ಅಚಲವಾದ ಆನಂದಘನದೊಡನೆ ಅಕ್ಷಯವಾಗಿರುವುದೇ
ಧ್ಯಾನವೆನಿಸುವುದು. ನಾದದಲ್ಲಿ ಲುಬ್ಧವಾಗಿ ದೇಹಭಾವವಂ ಮರೆಯುವ ಹುಲ್ಲೆ
ಯಂತೆ, ತದೇಕಲೀನಚಿತ್ತನಾಗಿ ಶ್ರೀಹರಿಕೀರ್ತನೆಯಂ ಕೇಳುವುದೇ ಶ್ರವಣಭಕ್ತಿ
ಯೆಂದು ಅನುಭವಿಗಳಾದ ಸಜ್ಜನರು ಹೇಳುವರು. ಲುಬ್ಧನು ಧನಸಂಗ್ರಹವಿಷಯ
ದಲ್ಲಿಯೇ ಎಂತು ನಿರತನಾಗಿರುವನೋ ಅಂತು ಸರ್ವಕಾಲದಲ್ಲಿಯೂ ಆತ್ಮವಿಚಾರದಲ್ಲಿ
ತತ್ಪರನಾಗಿರುವುದೇ ಮನನವೆನಿಸುವುದು. ಇನ್ನು ನಿದಿಧ್ಯಾಸಾದಿಗಳನ್ನು ತಿಳಿಯಿಸು

ವೆನು.-ಜಾರೆಯು ಲೌಕಿಕಸ್ಥಿತಿಯಿಂದ ತನ್ನ ಮನೆಯಕೆಲಸದಲ್ಲಿದ್ದರೂ ಪರಪುರುಷನಲ್ಲಿಯೇ ಎಂತು ಮನಸ್ಸನ್ನು ಇಟ್ಟಿರುವಳೋ, ಚಾತಕವು ಭೂಮಿಯಲ್ಲಿ ಹಾರಾಡುತಿದ್ದರೂ ತನ್ನ ಚಿತ್ತವನ್ನು ಮೇಘಮಂಡಲದಲ್ಲಿಯೇ ಎಂತು ಇರಿಸಿರುವುದೋ, ಕಮಲಗಳು ಸರೋವರದಲ್ಲಿದ್ದರೂ ದೂರವರ್ತಿಯಾದ ಸೂರ್ಯಮಂಡಲದಲ್ಲಿಯೇ ಎಂತು ಲಕ್ಷ್ಯವಿಟ್ಟಿರುವುವೋ ; ಹಸುವು ಬೆಟ್ಟದ ತಪ್ಪಲಲ್ಲಿ ಮೇಯುತಿದ್ದರೂ ಅದರ ಮನಸ್ಸು ತನ್ನ ಕರುವಿನಮೇಲೆಯೇ ಎಂತುಇರುವುದೋ ಲೋಭಿಯು ಸಂತೆಯಲ್ಲಿ ವ್ಯಾಪಾರಮಾಡುತ್ತಿದ್ದರೂ ದ್ರವ್ಯದಲ್ಲಿಯೇ ಎಂತು ಮನಸ್ಸನ್ನು ನಟ್ಟಿರುವನೋ ; ಸ್ವರ್ಣಕಾರನು ಒಡವೆಗಳನ್ನು ಮಾಡುತಿದ್ದರೂ ಸ್ವರ್ಣವನ್ನು ಸಂಗ್ರಹಿಸುವುದರಲ್ಲಿಯೇ ಎಂತು ತತ್ಪರನಾಗಿರುವನೋ, ಚಕೋರಗಳು ಸಂಚರಿಸುತಿದ್ದರೂ ಚಂದ್ರನಲ್ಲಿಯೇ ಎಂತು ಭಾವವನ್ನು ಇಟ್ಟಿರುವುವೋ ; ನಾರಿಯು ಕೈಗಳಂ ಬಿಟ್ಟು ಲೋಕಾಚಾರದ ಮಾತುಗಳಂ ನುಡಿಯುತ್ತ ನಡೆಯುತಿದ್ದರೂ ತನ್ನತಲೆಯಮೇಲೆ ಇಟ್ಟುಕೊಂಡಿರುವ ನೀರಿನ ಹರಿವಿಯಮೇಲೆಯೇ ಎಂತು ಗಮನವನ್ನಿಟ್ಟಿರುವಳೋ, ಭ್ರಮರಗಳು ಆಕಾಶದಲ್ಲಿ ಹಾರಾಡುತ್ತ ಝೇಂಕರಿಸುತಿದ್ದರೂ ತಮ್ಮ ಚಿತ್ತವನ್ನು ಪುಷ್ಪಗಳಲ್ಲಿಯೇ ಎಂತು ಇಟ್ಟಿರುವುವೋ ; ಅಂತು ಬಾಹ್ಯಸಂಸಾರದಲ್ಲಿ ನಿರತನಾಗಿದ್ದರೂ ಅಂತರಂಗದಲ್ಲಿ ಸರ್ವಭಾವಗಳಿಂದ ಶ್ರೀವಿಟ್ಠಲನನ್ನೇಧ್ಯಾನಿಸುತ್ತ, ಸರ್ವಭೂತಗಳಲ್ಲಿಯೂ ಶ್ರೀವಿಟ್ಠಲರೂಪವನ್ನೇ ನೋಡುತ್ತ, ರಜಸ್ತಮಂಗಳಂ ಬಿಟ್ಟು ನಿಸ್ಸಂಗನಾಗಿ ಶುದ್ಧಸತ್ತ್ವಭಾವಮಂ ಪಡೆದು ಜ್ಞಾನಿಯೆನಿಸಿ ಏಕನಿಷ್ಠೆಯುಳ್ಳ ಭಕ್ತಿಯಿಂದಿರಬೇಕು. ಅಂತಹ ಗುಣವುಳ್ಳವನನ್ನೇ ಶ್ರೇಷ್ಠನೆಂಬರು. ನಿತ್ಯದಲ್ಲಿಯೂ ಏಕಾಂತದೊಳ್ ಕುಳಿತು ನಿಯಮದಿಂದ ಶ್ರೀಹರಿಕೀರ್ತನೆಯಂ ಮಾಡಬೇಕು. ಇವನುಳಿದು ಮಿಕ್ಕ ಸಾಧನಂಗಳೆಲ್ಲವೂ ಬಂಧನಂಗಳೇ. ಇಂತು ಮನೋವಾಕ್ಕಾಯಂಗಳಿಂದ ನನ್ನ ಅನುಭವಮಂ ಹೇಳಿದೆನು. ಇದಂ ಹೇಳಿಸಿದವನು ಪಂಢರೀನಾಥನಾದ ಶ್ರೀವಿಟ್ಠಲನು-ಎಂದು ಇನ್ನೂ ಪಲವುಬಗೆಯಿಂದ ವಿವರಿಸಿ ನುಡಿಯಲು, ಜ್ಞಾನದೇವನು ಕೇಳಿ ವಿಸ್ಮಿತಚಿತ್ತನಾಗಿ-ವಿಷ್ಣುಭಕ್ತರು ಅನೇಕರಿರಬಹುದು ; ಮುಂದೆಯೂ ಹುಟ್ಟಬಹುದು ; ಆದರೆ, ನಾಮದೇವನಂತಹ ಭಕ್ತನಾರೂ ಇಲ್ಲ. ಇವನ ನುಡಿಗಳು ಅತ್ಯದ್ಭುತವಾದವುಗಳು. ವ್ಯರ್ಥಕವಿತ್ವವಲ್ಲ. ಇಂದು ನನ್ನಮೇಲೆ ಅಮೃತವರ್ಷವಾಯಿತು. ಈ ಅಪಾರಸುಖದ ವಿಶ್ರಾಂತಿಯು ಇತರರಿಗೆ ಅತ್ಯಂತ ದುರ್ಲಭವು. ಸಾಧುಗಳು ಈ ವಿಷಯವನ್ನು ತಮ್ಮ ಮನದಲ್ಲಿ ವಿಚಾರದಿಂದ ಚೆನ್ನಾಗಿ ಅವಧರಿಸಬೇಕು ಶಾಸ್ತ್ರವಕ್ತೃಗಳೂ! ವ್ಯುತ್ಪನ್ನರೂ ಬುದ್ಧಿವಂತರೂ ಬಹುಶ್ರುತರೂ ಕರ್ಮನಿಷ್ಠರೂ ವಿದ್ಯಾವಂತರೂ ಪೂಜ್ಯರೂ ಕವಿತ್ವಕಲಾಕುಶಲರೂ ವಾಚಾಳಕರೂ ಸಾಧಕರೂ ಪಾಠಕರೂ ಆತ್ಮಜ್ಞಾನಿಗಳೂ ಯೋಗಯುಕ್ತರೂ ಜೀವನ್ಮುಕ್ತರೂ ವಿರಕ್ತರೂ ಅಸಂಖ್ಯಾಕರಿರಬಹುದು. ಆದರೆ

ಈ ನಾಮದೇವನಂತಹ ಧನ್ಯನು ತ್ರಿಭುವನದಲ್ಲಿಯೂ ದೊರೆಯನು. ಈತನ ಭಕ್ತಿಯ ಗುರುತುಗಳನ್ನು ಪಂಢರೀನಾಥನಲ್ಲದೆ ಮತ್ತಾರೂ ಅರಿಯರು—ಎಂದು ಮನದಲ್ಲಿ ಎಣಿಸಿ ಆನಂದಗೊಂಡು ನಾಮದೇವನನ್ನು ಬಹುವಾಗಿ ಶ್ಲಾಘಿಸಿ ಆಲಿಂಗಿಸಿಕೊಂಡು ಆತನೊಡನೆ ಅಲ್ಲಿಂದಮುಂದೆ ಹೊರಟು ಸ್ವಾನಂದಭರಿತನಾಗಿ ತೀರ್ಥಯಾತ್ರೆಯಂ ಮಾಡುತ್ತ ಹಸ್ತಿನಾಪುರವಂ ಸೇರಿದನು.

ನಾಮದೇವನು ಅತ್ಯಂತಪ್ರೇಮಯುಕ್ತನಾಗಿ ಶ್ರೀಹರಿಯ ಗುಣಂಗಳಂ ಪಾಡುತ್ತ ಪಟ್ಟಣದೊಳಗೆ ಪ್ರವೇಶಿಸಲು, ಜನಗಳು ನೋಡಿ ಭಕ್ತಿಭಾವದಿಂದ ಆತನಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ತಾಳ ತಂಬೂರಿ ಮದ್ದಲೆಗಳನ್ನು ತೆಗೆದುಕೊಂಡು ಆತನೊಡನೆ ಕೀರ್ತನರಂಗದಲ್ಲಿ ಆನಂದದಿಂದ ಕುಣಿಯಲಾರಂಭಿಸಿದರು. ಹಸ್ತಿನಾಪುರದೊಳಗೆ ಎಲ್ಲಾ ಕಡೆಯಲ್ಲಿಯೂ ಭಗವನ್ನಾಮಕೀರ್ತನಪುರಸ್ಸರವಾದ ಜಯಜಯ ಘೋಷವು ತುಂಬಿತು.

ಆಗ ಆನಗರದ ಅವಿಂಧರಾಜನು "ಪಂಡರಾಪುರದಿಂದ ನಾಮದೇವನೆಂಬ ಭಕ್ತನು ತೀರ್ಥಯಾತ್ರೆಯಂ ಮಾಡುತ್ತ ಬಂದಿರುವನು. ಅವನು ಹರಿಕೀರ್ತನವಂ ಮಾಡುತ್ತಿರುವನು. ಅದರಿಂದ ಪಟ್ಟಣದ ಸರ್ವರೂ ಮೋಹಿತರಾಗಿರುವರು" ಎಂಬ ಸುದ್ದಿಯಂ ಕೇಳಿ ಅತ್ಯಂತಕ್ರೋಧಯುಕ್ತನಾದನು. ತಸ್ಕರರು ಚಂದ್ರೋದಯವನ್ನು ಕಂಡು ಎಂತು ಸಂತಾಪಪಡುವರೋ, ಕುಮತವಾದಿಗಳು ವೇದಾಂತವಿಚಾರವಂ ಕೇಳಿ ಎಂತು ಅಸಹನೆಗೊಳ್ಳುವರೋ, ಅಂತು ದುರಾಚಾರನಾದ ಆ ಅವಿಂಧನು ಸಂತಾಪಗೊಂಡು ಅಸಹನೆಯಿಂ ಕೂಡಿ ಥಟ್ಟನೆ ಎದ್ದು "ನಾಮದೇವನ ಕೀರ್ತನದ ಮಹಿಮೆಯಂ ಇಂದು ಪರೀಕ್ಷಿಸಿ ನೋಡುವೆನು. ನನ್ನ ಮನಸ್ಸಿಗೆ ಒಪ್ಪದಿದ್ದರೆ ಅದಂ ದುರ್ಮತವೆಂದು ನಿರಾಕರಿಸಿ ಅವನಂ ಶಿಕ್ಷಿಸುವೆನು" ಎಂದು ತ್ವರೆಯಿಂದ ಕೀರ್ತನರಂಗಕ್ಕೆ ಬಂದನು. ಹೊಲೆಯನು ಬ್ರಾಹ್ಮಣರ ಸಭೆಯಂ ಪೊಕ್ಕಂತೆ, ಶ್ವಾನವು ಯಜ್ಞಶಾಲೆಯಂ ಪ್ರವೇಶಿಸಿದಂತೆ, ದಾರುಣವಾದ ರೋಗವು ನವಯೌವನಾಭಿರಾಮವಾದ ಶರೀರವನ್ನು ಒಳಪೊಕ್ಕಂತೆ, ತಾಳತಂಬೂರಿಮದ್ದಲೆಗಳ ಗಂಭೀರವಾದ ಮಂಗಳಘೋಷವು ಭೋರೆನುತಿರಲು, ಆನಂದಭರದಿಂದ ನಾಮದೇವನು ಮಾಡುತ್ತಿರುವ ಭಗವನ್ನಾಮಸಂಕೀರ್ತನದಿಂದ ಭವ್ಯತರವಾದ ಆ ಪ್ರದೇಶವಂ ಒಳಪೊಕ್ಕು, ಎಲ್ಲರ ಇದಿರಿಗೆ ಒಂದು ಹಸುವನ್ನು ಕೊಂದು, ನಾಮದೇವನನ್ನು ಕುರಿತು—ಎಲೈ ಹುಚ್ಚನೆ! ಮನಸ್ಸಿಗೆ ತೋರಿದಂತೆ ಏನನ್ನು ಹಾಡುವೆ? ನಿಲ್ಲಿಸು. ಈ ಹಸುವನ್ನು ನೀನು ಬದುಕಿಸಿದವನಾದರೆ ನಿನ್ನ ಕೀರ್ತನವು ಸತ್ಯವೇಸರಿ-ಇಲ್ಲದಿದ್ದರೆ ವ್ಯರ್ಥವಾದ ಕೂಗುಳ್ಳ ನಿನ್ನನ್ನು ಇಲ್ಲಿಯೆ ಕತ್ತಿಯಿಂದ ಕತ್ತರಿಸುವೆನು. ಎನಲು, ಅಲ್ಲಿ ನೆರೆದಿದ್ದವರೆಲ್ಲರೂ ಚಿಂತಾಕ್ರಾಂತರಾದರು. ಕೀರ್ತನರಸವು ಕೆಟ್ಟಿತು. ಎಲೆಯಲ್ಲಿ ಮೃಷ್ಟಾನ್ನವನ್ನು ಬಡಿಸಿರಲು ಅದರಲ್ಲಿ ವಿಷವು ಬಿದ್ದಂತೆ, ಸದ್ಗ್ರಂಥವನ್ನು ಓದುತ

ಇರಲು ಪತಂಗವು ದೀಪವನ್ನು ನಂದಿಸಿದಂತೆ, ಬಡವನಿಗೆ ನಿಧಿಯು ದೊರೆಯುವಂತಿರಲು ಗ್ರಹವು ಆವಿಷ್ಟವಾದಂತೆ, ಸುಸ್ವರದಿಂದ ರಾಗವನ್ನಾಲಾಪಿಸುತ್ತಿರಲು ಕಂಠದಲ್ಲಿ ಶ್ಲೇಷ್ಮವು ಅಡ್ಡಬಿದ್ದಂತೆ, ಸಸ್ಯವು ಚೆನ್ನಾಗಿ ಬೆಳೆದಿರಲು ಆಕಸ್ಮಿಕವಾಗಿ ಕ್ಷೇತ್ರದಲ್ಲಿ ಕುಸಿವು ಉಂಟಾದಂತೆ, ಮನೆಯಲ್ಲಿ ಶುಭಕಾರ್ಯವು ನಡೆಯುತ್ತಿರಲು ಆಶೌಚವು ಪ್ರಾಪ್ತವಾದಂತೆ, ಚಕೋರಂಗಳು ಚಂದ್ರನನ್ನು ಆನಂದದಿಂದ ನೋಡುತ್ತಿರಲು ರಾಹುವು ಅಡ್ಡಬಂದಂತೆ, ಶ್ರೋತೃಗಳು ಭಗವನ್ನಾಮಕೀರ್ತನೆಯನ್ನು ಆನಂದದಿಂದ ಶ್ರವಣಮಾಡುತ್ತಿರಲು, ದುಷ್ಟನಾದ ಅವಿಂಧನು ಪ್ರಾಪ್ತನಾದನು.

ದುರ್ಲಲಿತನೂ ಪ್ರಬಲನೂ ಆದ ಅವನನ್ನು ನೋಡಿ ಎಲ್ಲರೂ ಮನದಲ್ಲಿ ಕುದಿಯುತ್ತ ಪ್ರತಿಭಟಿಸಿ ಯಾವಮಾತನ್ನೂ ಆಡುವುದಕ್ಕೆ ಶಕ್ತಿಯಿಲ್ಲದೆ ಸುಮ್ಮನಾದರು.

ಆ ಅವಿಂಧನು ಮತ್ತೆ ನಾಮದೇವನನ್ನು ಕುರಿತು—ಎಲವೊ ! ಏಕೆ ಮಾತನಾಡದೆ ಸುಮ್ಮನಿರುವೆ? ಈ ಹಸುವನ್ನು ಎಂತು ಎಬ್ಬಿಸುವೆ? ಈ ವಿಷಯದಲ್ಲಿ ನಿಷ್ಕೃಷ್ಟವಾದ ಮಾತನ್ನು ಮೊದಲು ನನಗೆ ಹೇಳಿ ಬಳಿಕ ನಿನ್ನ ಕೀರ್ತನವಂ ಮಾಡು—ಎಂದು ಗಜರಿ ಗರ್ಜಿಸಿದನು.

ನಾಮದೇವನು ಮನದಲ್ಲಿ ಭಗವಂತನನ್ನು ಸ್ಮರಿಸಿ, ಅಯ್ಯಾ ! ಇನ್ನು ನಾಲ್ಕು ದಿನಗಳ ಅವಕಾಶವು ಬೇಕು—ಎಂದು ಪ್ರತ್ಯುತ್ತರವನ್ನೀಯಲು, ಆರಾಜನು ಆಮಾತಂ ಕೇಳಿ ತನ್ನ ಮನೆಗೆ ಹೊರಟುಹೋದನು.

ನಾಮದೇವನು ಅಟ್ಟಹಾಸದಿಂದ ಕೀರ್ತನವಂ ಮಾಡುತ್ತ-ದೀನದಯಾಳುವೇ ! ಪತಿತಪಾವನನೆ ! ವಿಧಿಜನಕನೆ ! ಕ್ಷೀರಸಾಗರವಾಸಿಯೆ ! ಯೋಗಿಜನಹೃದಯವಿಭಾಸಿಯೆ ! ಪುಂಡರೀಕವರದನೆ ! ಪಂಢರಪುರಾಧೀಶನೆ ! ನಾಶರಹಿತನೆ ! ಜಗದ್ಗುರುವೆ ! ರಾಘವೇಂದ್ರನೆ ! ರಾವಣಾಂತಕನೆ ! ನಂದನಂದನನೆ ! ಕಂಸಚ್ಛೇದಕನೆ ! ಕೌರವಾಭಿಮಾನಭೇದಕನೆ ! ಪಾಂಡವಪಾಲಕನೆ ! ಆನಂದರೂಪನೆ ! ದ್ರೌಪದೀಮಾನರಕ್ಷಕನೆ ! ಕಮಲಾಕ್ಷನೆ ! ಪಾಂಡುರಂಗನೆ ! ರುಕ್ಮಿಣೀರಮಣನೆ ! ಸಂಕಟವಂ ಪರಿಹರಿಸಿ ನನ್ನನ್ನು ರಕ್ಷಿಸು—ಎಂದು ಗದ್ಗದಕಂಠನಾಗಿ ಸ್ವಾಮಿಯನ್ನು ನೆನೆದು ಮೊರೆಯಿಡುತ್ತ ಆ ಭಗವಂತನ ವಿಯೋಗದಿಂದ ದುಃಖಿಸಿ ಕಣ್ಣುಗಳಿಂದ ಬಾಷ್ಪವಂ ಸುರಿಯಿಸುತ್ತ ರೋದನವಂ ಮಾಡುತಿದ್ದನು.

ಕೀರ್ತನವಂ ಕೇಳುವುದಕ್ಕೆ ಬಂದಿದ್ದವರೆಲ್ಲರೂ ನಾಮದೇವನೊಡನೆ ತಾವೂ ರೋದಿಸುತ್ತ ರಾತ್ರಿಯೆಲ್ಲವಂ ಕಳೆದರು. ದುರ್ಭಿಕ್ಷವೊದವಲು ದಾಂಭಿಕರಾದ ದಾತೃಗಳು ಯಾಚಕರನ್ನು ಎಂತು ಸಡಿಲಬಿಡುವರೋ, ಇಂದ್ರಿಯವೈಕಲ್ಯವುಂಟಾಗಲು ವಿಷಯಾಸಕ್ತಿಯೆಂತು ತೊರೆದುಹೋಗುವುದೋ, ನಷ್ಟವುಂಟಾಗಲು ಗುತ್ತಿಗೆಗಾರರು ದೇಶವನ್ನೇ ಬಿಟ್ಟು ಎಂತು ಹೊರಟುಹೋಗುವರೋ, ಶರತ್ಕಾಲವು ಬರಲು ಮೇಘಗಳು ಗಗನವಂ ಬಿಟ್ಟು ಎಂತು ಓಡುವುವೋ, ಬಿಸಿಲ ಹೊಡೆತವುಂಟಾಗಲು ವಸ್ತ್ರದ

ಪತಂಗದ ಬಣ್ಣವು ಎಂತು ಹಾರಿಹೋಗುವುದೋ, ರಣದಲ್ಲಿ ರಾಜನು ಬೀಳುವುದೂ ಸೈನ್ಯವೆಲ್ಲವೂ ಎಂತು ಚೆದರಿಹೋಗುವುದೋ, ಆಯುಸ್ಸು ತೀರುವುದೂ ಪ್ರಾಣಗಳು ಎಂತು ದೇಹವಂ ಬಿಟ್ಟು ಹೋಗುವುವೋ, ಗೃಹಸ್ಥನಿಗೆ ದಾರಿದ್ರ್ಯವು ಪ್ರಾಪ್ತವಾಗಲು ನಂಟರಿಷ್ಟರೆಲ್ಲರೂ ಬಿಟ್ಟು ಎಂತು ದೂರವಂ ಸಾರುವರೋ, ವಾರ್ಧಕವು ಪ್ರಾಪ್ತವಾಗಲು ಇಂದ್ರಿಯಗಳು ಎಂತು ಸಡಿಲುವುವೋ ಅಂತು ಕೀರ್ತನಕ್ಕೆ ವಿಘ್ನವುಂಟಾಗಲು ಅಲ್ಲಿ ನೆರೆದಿದ್ದವರೆಲ್ಲರೂ ಮೆಲ್ಲಮೆಲ್ಲನೆದ್ದು ಚೆದರಿ ಹೊರಟುಹೋದರು.

ನಾಮದೇವನು ಛಿನ್ನವಾದ ಹಸುವಿನ ಶಿರಸ್ಸನ್ನು ತನ್ನ ತೊಡೆಯಮೇಲೆ ಇರಿಸಿಕೊಂಡು ರೋದನವಂ ಮಾಡುತ್ತ—ಫಂಡರೀನಾಥನಾದ ಶ್ರೀವಿಟ್ಠಲನೇ! ನನಗೆ ಬೇಗದಿಂ ಪ್ರಸನ್ನನಾಗು. ಏಕೆ ಇಂತು ಉಪೇಕ್ಷಿಸುವೆ? ರುಕ್ಮಿಣೀದೇವಿಯ ಸಮೀಪದಲ್ಲಿ ನಿದ್ರೆಯಂ ಮಾಡುತ್ತಿರುವೆಯೋ? ಪ್ರೇಮಭರಿತರಾದ ಭಕ್ತರ ಕೀರ್ತನವಂ ಕೇಳುತ್ತ ಕುಳಿತಿರುವೆಯೋ? ಯೋಗೀಂದ್ರರ ಧ್ಯಾನದಲ್ಲಿ ಸಿಲ್ಕಿ ನಿಂತಿರುವೆಯೋ? ಇನ್ನಾರಾದರೂ ಸಂಕಟವಿತ್ತು ನಿನ್ನಂ ನಿಲಿಸಿಕೊಂಡಿರುವರೋ? ಸಗುಣೋಪಾಸಕರ ಪೂಜೆಯಂ ಸ್ವೀಕರಿಸುತ್ತ ಇರುವೆಯೋ? ಅಮೃತಪಾನಕ್ಕೋಸ್ಕರ ದೇವೇಂದ್ರನು ನಿನ್ನನ್ನು ಕರೆದುಕೊಂಡುಹೋಗಿರುವನೋ? ಫಂಡರಿಯಲ್ಲಿ ಜಾತ್ರೆಗರನೇಕರು ನಿನ್ನ ಸಂದರ್ಶನಕ್ಕೆ ಸೇರಿರುದರಿಂದ ಇಲ್ಲಿಗೆ ಬರಲು ಅವಕಾಶವಿಲ್ಲದಿರುವುದೋ? ಶ್ರೀಮಂತರನೇಕರು ಅಮೂಲ್ಯವಾದ ವಸ್ತ್ರಾಭರಣಗಳಿಂದ ಅಲಂಕಾರಮಾಡಿ ನಿನ್ನನ್ನು ಪೂಜಿಸುತ್ತಿರಲು, ಅಲ್ಲಿಯೇ ಲೀನನಾಗಿ ನನ್ನನ್ನು ಮರೆತಿರುವೆಯೋ?—ಎಂದು ನಾಲ್ಕುದಿನಗಳವರೆಗೂ ನಾನಾರೀತಿಯಿಂದ ಹಂಬಲಿಸಿ, ಕಣ್ಣುಗಳಲ್ಲಿ ತುಂಬಿತುಳುಕಾಡುತ್ತಿರುವ ಪ್ರವಾಹದಿಂದ ನೆಲವನ್ನು ನನೆಯಿಸುತ್ತ—ಎಲೈ ಸ್ವಾಮಿಯೆ! ಎಂತಾದರೂ ಇಂದು ಪ್ರಸನ್ನನಾಗು. ನಿನ್ನನ್ನು ಶರಣುಹೊಕ್ಕಿರುವೆನು. ನಿನ್ನನ್ನು ನಂಬಿದ ನನಗೆ ವಿಧ್ವಂಸವುಂಟಾಗುವ ಸಮಯವು ಇಂದು ಒದಗಿರುವುದು. ನೀನು ನನ್ನಂ ರಕ್ಷಿಸು—ಎಂದು ಅತ್ಯಂತದೈನ್ಯದಿಂದ ಬೇಡಿಕೊಳ್ಳುತ್ತ ಹಾಗೆಯೇ ಮೈಮರೆತನು.

ಭಕ್ತವತ್ಸಲನಾದ ಭಗವಂತನು ನಾಮದೇವನ ಕರುಣಾವಚನವಂ ಕೇಳಿ, ಕರುಣೆಯಿಂದ ಥಟ್ಟನೆ ಇದಿರಿಗೆ ಬಂದು ಪ್ರಸನ್ನನಾಗಿ, ಹಸುವನ್ನು ಬದುಕಿಸಿ ನಾಮದೇವನನ್ನು ಎಚ್ಚರಗೊಳಿಸಿದನು.

ನಾಮದೇವನು ಸ್ವಾಮಿಯನ್ನು ನೋಡಿ ಆನಂದಭರಿತನಾಗಿ ಸಾಷ್ಟಾಂಗನಮಸ್ಕಾರವಂ ಮಾಡಿ—ಎಲೆ ಭಗವಂತನೆ! ಯಾರ ಯೋಗಕ್ಷೇಮದಲ್ಲಿ ನಿಂತಿದ್ದೆ? ನಾಲ್ಕು ದಿನಪರ್ಯಂತವೂ ನನ್ನ ಪರೀಕ್ಷೆಯಂ ಮಾಡಿದೆಯಲ್ಲಾ!—ಎನಲು, ಶ್ರೀಹರಿಯು-ನಾಮದೇವನೆ! “ನಾಲ್ಕುದಿನದವಕಾಶವು ಬೇಕು” ಎಂದು ನೀನು ವ್ಯರ್ಥಪ್ರತಿಜ್ಞೆಯಂ ಮಾಡಿದೆ. ಈಗಲೇ ಎಬ್ಬಿಸುವೆನೆಂದು ಹೇಳಿದ್ದರೆ, ಆಗಲೆ ನಿನ್ನ ಬಳಿಗೆ ಓಡಿಬರುತ್ತಿದ್ದೆನು. ನಿನ್ನ ಸಂಕಲ್ಪವೇ ನಿನಗೆ ಫಲಿಸಿತು. ನನ್ನ ಮೇಲೆ ಏಕೆ ವ್ಯರ್ಥವಾಗಿ

ಆಕ್ಷೇಪವನ್ನಿಡುವೆ? ನಾನು ನಿಮ್ಮ ಅಧೀನನು. ನಿಮ್ಮ ಪ್ರೀತಿಯಿದ್ದಂತೆ ಸಹಜವಾಗಿ ವರ್ತಿಸುವೆನು. ಭಕ್ತರ ವಚನವನ್ನು ಯಥಾರ್ಥಮಾಡುವುದು ನನಗಾವಶ್ಯಕವು. ವಾಲ್ಮೀಕಿಯು ರಾಮಾಯಣಭವಿಷ್ಯದರ್ಥವನ್ನು ನುಡಿದನು. ಅದರಿಂದ ಅದೇಪ್ರಕಾರ ದಲ್ಲಿ ನಾನು ನಡೆಯಬೇಕಾಯಿತು. ಕನ್ನಡಿಯಲ್ಲಿ ಪ್ರೇಕ್ಷಕರ ಮುಖಭಾವವಿದ್ದಂತೆ ಯೇ ಎಂತು ಕಾಣುವುದೋ, ಅಂತು ನನ್ನಲ್ಲಿ ಭಕ್ತರ ಭಾವನೆಯಿದ್ದಂತೆಯೇ ಫಲಿಸು ವುದು. ಕಾಶ್ಮೀರಲಿಂಗವು ಯಾವಯಾವುದರಮೇಲೆ ಇಡಲ್ಪಟ್ಟರೂ ಅದರದರ ಬಣ್ಣ ದಂತೆ ಎಂತಾಗುವುದೋ ಅಂತು ಭಕ್ತರ ಹೃದಯದಲ್ಲಿ ಇಡಲ್ಪಟ್ಟ ನಾನು ಅವರವರ ಪ್ರೀತಿಭಾವವಿದ್ದಂತೆ ಆಗುವೆನು—ಎಂದು ನುಡಿದು ಆಕ್ಷಣದಲ್ಲಿ ಅಂತರ್ಧಾನವನ್ನು ಹೊಂದಿದನು.

ನಾಮದೇವನು ಪಾರ್ಶ್ವದಲ್ಲಿ ನೋಡಲು, ಹಸುವು ಪ್ರಾಣಯುಕ್ತವಾಗಿ ನಿಂದಿದ್ದಿತು. ಅಷ್ಟುಹೊತ್ತಿಗೆ ಅನೇಕರು ಅಲ್ಲಿ ಬಂದು ಸೇರಿ ನೋಡಿ ಆಶ್ಚರ್ಯಪಟ್ಟರು. ರಾಜನಿಗೂ ಈ ಸುದ್ದಿ ತಿಳಿಯಿತು. ಬಂದು ನೋಡಿದನು. ತನ್ನಿಂದ ಕಡಿಯಲ್ಪಟ್ಟ ಪಶು ಬದುಕಿರುವುದನ್ನು ಕಂಡು ಬಹುವಾಗಿ ಸಂತೋಷಿಸಿದನು. ನಾಮದೇವನನ್ನು ಕುರಿತು—ಮಹನೀಯನೆ! ನಿನ್ನ ಭಗವನ್ನಾಮಕೀರ್ತನವು ಮಹಾಮಹಿಮೆಯುಳ್ಳದು. ನಿನ್ನ ಸ್ಥಿತಿಯು ಅಸಾಧಾರಣವಾದುದು. ನೀನು ಧನ್ಯನು. ನನ್ನ ಅಪರಾಧವನ್ನು ಕ್ಷಮಿಸು—ಎಂದು ನುಡಿದು ಸಾಷ್ಟಾಂಗನಮಸ್ಕಾರವಂ ಮಾಡಿದನು. ಸಕಲರೂ ಆನಂದ ಮಗ್ನರಾದರು. "ಈ ನಾಮದೇವನ ಭಕ್ತಿಭಾವವು ಬ್ರಹ್ಮಾದಿಗಳಿಗೂ ವರ್ಣಿಸಲಳವಲ್ಲ; ಈತನು ಧನ್ಯತಮನು; ಮಹಾಭಾಗವತನು." ಎಂದು ಹೊಗಳಿದರು.

ನಾಮದೇವನು ಜಯಜಯಘೋಷಪುರಸ್ಸರವಾಗಿ ಮತ್ತೆ ಭಗವನ್ನಾಮಕೀರ್ತನೆಯಂ ಮಾಡಿ ಭಕ್ತಿಭಾವದಿಂದ ಭಗವಂತನಿಗೆ ಮಂಗಳನೀರಾಜನವನ್ನು ಬೆಳಗಿದನು.

ಮುಂದೆ ಶ್ರೋತೃಗಳು ಚಿತ್ತವನ್ನಿಟ್ಟು ಕಥಾರಸದಲ್ಲಿ ನಿರತರಾಗಬೇಕು. ಗಂಗೆಯ ಪ್ರವಾಹವು ಸಾಗರದಲ್ಲಿ ಸೇರಿ ಎಂತು ಸಾಮರಸ್ಯವಂ ಬಂದುವುದೋ, ಅಂತು ಸತ್ಕಥಾಸಾಗರದಲ್ಲಿ ತಮ್ಮ ಮನಸ್ಸು ಸಮರಸವಾಗಿರುವಂತೆ ಮಾಡಬೇಕು. ಸಂತರೆಂಬ ರಾಜಹಂಸಪಕ್ಷಿಗಳು ವಿಕಲ್ಪವೆಂಬ ನೀರನುಳಿದು ಸದ್ಭಾವನೆಯೆಂಬ ಕ್ಷೀರವಂ ಆದರದಿಂದ ಸ್ವೀಕರಿಸಿ ಆನಂದಿಸಬೇಕು. ಸಂತರಾದ ಶ್ರೋತೃಗಳು ಅವಧಾನವಂ ಕೊಟ್ಟರೆ ಕಥೆಯಲ್ಲಿ ಅಮೃತರಸಪ್ರಾಪ್ತಿಯಾಗುವುದು. ಪಾಂಡುರಂಗನು ಪ್ರಸನ್ನನಾಗಿ ಭವದುಃಖವಂ ಪರಿಹರಿಸುವನು. ದೀನದಯಾಳುವಾದ ರುಕ್ಮಿಣೀಕಾಂತನೇ ಯಥಾರ್ಥವಾಗಿ ಈ ಗ್ರಂಥವಂ ನುಡಿಯುವನು. ಮಹೀಪತಿಯು ತನ್ಮುದ್ರಾಂಕಿತನು.

ಇಂತು ಶ್ರೀಭಕ್ತವಿಜಯದಲ್ಲಿ ಹತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹನ್ನೊಂದನೆಯ ಅಧ್ಯಾಯ.

ಜ್ಞಾನದೇವನಾಮದೇವರ ತೀರ್ಥಾಟನ.

ಎಲೈ ಶ್ರೋತೃಗಳಿರಾ! ಸಾವಧಾನತೆಯಿಂದ ಆಲಿಸಿ. ಬ್ರಾಹ್ಮಣರ ಮನೆಯಲ್ಲಿ ಪಕ್ವವಾದ ಅನ್ನವು ಸರ್ವರಿಗೂ ಎಂತು ಪರಿಗ್ರಾಹ್ಯವೋ, ಚಿನ್ನದ ಆಭರಣವು ಎಂತು ಎಲ್ಲರಿಗೂ ಆದರಣೀಯವೋ, ಶೀತನಿವಾರಕವಾದ ವಸ್ತ್ರವು ಎಂತು ಸಮಸ್ತರಿಗೂ ಆವಶ್ಯಕವೋ, ಅಂತು ಭಗವದ್ಭಕ್ತಕಥೆಯು ಸಕಲರಿಗೂ ಪರಿಗ್ರಾಹ್ಯವೂ ಆದರಣೀಯವೂ ಆವಶ್ಯಕವೂ ಆದುದು. ಸದ್ಭಕ್ತಕಥಾಮೃತಬೀಜವನ್ನು ಗುಣಜ್ಞರಾದ ಶ್ರೋತೃಗಳ ಹೃದಯವೆಂಬ ಫಲವತ್ತಾದ ಭೂಮಿಯಲ್ಲಿ ಬಿತ್ತಲು, ಅದು ಕೋಟಿಗುಣವುಳ್ಳದಾಗುವುದು. "ಸುಮ್ಮನೆ ಪ್ರೌಢಿಯಿಂದ ಹೇಳುವನು" ಎಂದು ಚಿತ್ತದಲ್ಲಿ ವಿಕಲ್ಪಗೊಂಡು ನೀವಾಡಲಾಗದು. ನಾನು ನಿಮ್ಮಲ್ಲಿರುವ ಸಾರಳ್ಯದಿಂದ ಇಂತು ವಿಶೇಷದಿಂ ನುಡಿವೆನು. ನನ್ನಮೇಲೆ ವ್ಯರ್ಥವಾದ ನಿಮಿತ್ತವನ್ನಿಟ್ಟು ಭಕ್ತವಿಜಯವನ್ನು ಉಪೇಕ್ಷಿಸಬೇಡಿ. ದೋಷವನ್ನುಳಿದು ಗುಣವನ್ನೇ ಸ್ವೀಕರಿಸುವುದಕ್ಕೆ ನಿಮಗೆ ಅಧಿಕಾರವಿರುವುದಲ್ಲವೆ? ಮಹೀಪತಿಗೂ ಮನ್ದಮತಿಗೂ ಭೇದವೇನೂ ಇಲ್ಲ. ಮಧ್ಯದ ಎರಡಕ್ಷರಗಳ ವ್ಯತ್ಯಾಸಮಾತ್ರವೇ. ಗ್ರಂಥವಕ್ತೃವು ಶ್ರೀಹರಿಯೆ. ಇದಂ ದೃಢವಾಗಿ ನೀವು ತಿಳಿಯಬೇಕು. ಸೂತ್ರಧಾರಕನು ಕುಣಿಯಿಸದಿದ್ದರೆ ಪುತ್ಥಳಿಯೆಂತು ಕುಣಿಯುವುದು? ಗಾಳಿಯು ಅಲ್ಲಾಡಿಸದಿದ್ದರೆ ತರುವೆಂತು ಅಲ್ಲಾಡುವುದು? ಅಂತು ಶ್ರೀಹರಿಯು ನುಡಿಯಿಸದಿದ್ದರೆ ನಾನು ನುಡಿವುದೇನು?

ಹಿಂದಣ ಅಧ್ಯಾಯದಲ್ಲಿ ನಾಮದೇವನು ಭಗವದನುಗ್ರಹದಿಂದ ಹಸುವನ್ನು ಬದುಕಿಸಲು, ಆ ಅವಿಂಧರಾಜನು ಬಂದು ನೋಡಿ ಸಂತೋಷಿಸಿ ಆತನ ಪಾದಗಳಿಗೆ ಎರಗಿದನೆಂಬುದಂ ಆಲಿಸಿದಿರಷ್ಟೆ. ಇಂತಹ ಚಮತ್ಕಾರವಂ ತೋರಿಸಿ ನಾಮದೇವನು ಬಳಿಕ ಜ್ಞಾನದೇವನೊಡನೆ ಅಲ್ಲಿಂದ ಮುಂದೆ ಹೊರಟು, ಹಗಲೂ ಇರುಳೂ ಶ್ರೀಹರಿಸ್ಮರಣೆಯಂ ಮಾಡುತ್ತ ಮಾರ್ಗವಂ ನಡೆಯುತಿದ್ದನು.

ಇರ್ವರೂ ಯಾವಯಾವದೇಶಗಳಿಗೆ ಹೋದರೂ ಅಲ್ಲಲ್ಲಿ ಆಯಾದೇಶದ ಭಾಷೆಯಿಂದ ಕವಿತ್ವವಂ ಮಾಡಿ ಶ್ರೀಹರಿಯ ಗುಣಂಗಳಂ ವರ್ಣಿಸುತ್ತ ಸರ್ವರಿಗೂ ಆನಂದವನ್ನುಂಟುಮಾಡುತ್ತಿರುವರು. ಆಯಾದೇಶಂಗಳಲ್ಲಿ ಇರುವ ಆಯಾತೀರ್ಥಗಳನ್ನೆಲ್ಲವನ್ನೂ ಈಗ ಹೇಳಲು ತೊಡಗಿದರೆ ಗ್ರಂಥವಿಸ್ತರವಾಗುವುದು. ಅಂತಿರಲಿ. ಅನುಕ್ರಮದಿಂದ ಅನೇಕತೀರ್ಥಗಳ ಯಾತ್ರೆಯಂ ಮಾಡಿಕೊಂಡು—ಬಳಿಕ ಕಾಶೀಪಟ್ಟಣವಂ ಸೇರಿ, ಅಲ್ಲಿ ಜಗತ್ಪಾವನೆಯಾದ ಭಾಗೀರಥಿಯಲ್ಲಿ ಸ್ನಾನವನ್ನೆಸಗುತ್ತ, ವಿಶ್ವೋದ್ಧಾರಕ

ನಾದ ವಿಶ್ವೇಶ್ವರನ ಸಂದರ್ಶನವಂ ಮಾಡುತ್ತ ಆನಂದಭರಿತರಾಗಿ ನಾಲ್ಕುತಿಂಗಳು ಅಲ್ಲಿಯೇ ನಿಲ್ಲಲು, ಅಲ್ಲಿ ಒಂದಾಶ್ಚರ್ಯವು ನಡೆಯಿತು.

ಒಂದುದಿನ ಕಬೀರನ ಮನೆಗೆ ಕೆಲವರು ಸಾಧುಗಳು ಬಂದರು. ರಾತ್ರಿ ಎರಡು ಜಾವವಾಗಿದ್ದಿತು. ಎಲ್ಲರೂ ನಿದ್ರೆಗೈಯುತಿದ್ದರು. ಮನೆಗೆ ಬಂದ ಸಾಧುಗಳನ್ನು ಕಂಡು ಕಬೀರನೂ ಆತನ ಹೆಂಡತಿಯೂ ಸಾಷ್ಟಾಂಗನಮಸ್ಕಾರವಂ ಮಾಡಿದರು. ಮನೆಯು ಅತಿಜೀರ್ಣವಾಗಿ ಮುರಿದುಬೀಳುವಂತಿದ್ದಿತು. ಕುಳಿತುಕೊಳ್ಳುವುದಕ್ಕೆ ತಕ್ಕ ಸ್ಥಳವಿರಲಿಲ್ಲ, ಮನೆಯಲ್ಲಿ ಅನ್ನವಿಲ್ಲದೆ ಮಕ್ಕಳು ಉಪವಾಸ ಮಲಗಿದ್ದರು. ಕಬೀರನು ಒಂದೆಡೆಯಲ್ಲಿ ಜೀರ್ಣವಾದೊಂದು ತೃಣಾಸ್ತರಣವಂ ಹಾಸಿ ಅಲ್ಲಿ ಕುಳಿತುಕೊಳ್ಳಬೇಕೆಂದುನುಡಿದು ಸಾಧುಗಳನ್ನು ಉಪಚರಿಸಿದನು. ಬಳಿಕ ಏಕಾಂತದಲ್ಲಿ ಮಡದಿಯನ್ನು ಕುರಿತು–ಈಗ ಏನಮಾಡೋಣ! ಎಂತಾದರೂ ಇವರಿಗೆ ಆತಿಥ್ಯವನ್ನು ಮಾಡಬೇಕು–ಎನಲು, ಆಕೆ ಅವಶ್ಯವಾಗಿ ಮಾಡತಕ್ಕದು. ಮನೆಯಲ್ಲಿ ಧಾನ್ಯವೇನೂ ಇಲ್ಲ. ನೆರೆಹೊರೆಯವರು ಸಾಲವಂ ಕೊಡುವುದಿಲ್ಲ. ನೀವು ನನಗೆ ಅಪ್ಪಣೆಯಂ ಕೊಟ್ಟರೆ ನಾನು ಅಂಗಡಿಬೀದಿಗೆ ಹೋಗಿ ಎಲ್ಲಿಯಾದರೂ ತರುವೆನು–ಎನಲು, ಕಬೀರನು ಅಂಗೀಕರಿಸಿದನು.

ಆಕೆ ಪತಿಯ ಅಪ್ಪಣೆಯಂ ಪಡೆದು ಧೈರ್ಯವನ್ನು ತಾಳಿ ಶ್ರೀರಾಮನಂ ಮನದಲ್ಲಿ ಸ್ಮರಿಸುತ್ತ ಹೊರಟು ಅಂಗಡಿಬೀದಿಯಂ ಸೇರಿ ಅಲ್ಲಲ್ಲಿ ನೋಡುತ್ತಿರಲು, ಒಂದು ಅಂಗಡಿಯಲ್ಲಿ ಒಬ್ಬ ವರ್ತಕನು ಎಚ್ಚರದಿಂದಿದ್ದನು. ಆತನ ಬಳಿಗೆ ಹೋಗಿ ಅಯ್ಯಾ! ನಮ್ಮ ಮನೆಗೆ ತೀರ್ಥಯಾತ್ರೆಯ ನಿಮಿತ್ತದಿಂದ ಸಾಧುವರೇಣ್ಯರು ಬಂದಿರುವರು. ಅವರಿಗೆ ಭೋಜನಸಾಮಗ್ರಿಗಳು ಬೇಕು; ನೀನು ಹೇಳಿದ ಕ್ರಯವಂ ಕೊಡುವೆನು. ತಡವಂ ಮಾಡದೆ ಸಾಮಗ್ರಿಯೆಲ್ಲವನ್ನೂ ಕೊಡು–ಎಂದು ಕೇಳಿದಳು. ಆ ವರ್ತಕನು ಆಕೆಯನ್ನು ಕುರಿತು–ನೀನು ಯಾರು? ಯಾರಮನೆಯವಳು ? ಎಲ್ಲವನ್ನೂ ಹೇಳು–ಎಂದು ಬೆಸಗೊಂಡನು.

ಅದಕ್ಕೆ ಆಕೆಯು ನಾನು ಯವನಕುಲದಲ್ಲಿ ಉದಯಿಸಿದ ವೈಷ್ಣವವೀರನಾದ ಕಬೀರದಾಸನ ಪತ್ನಿಯು. ಸಾಧುಗಳು ಹಸಿವುಗೊಂಡಿರುವರು. ಮೊದಲು ಭೋಜನ ಸಾಮಗ್ರಿಗಳಂ ಕೊಡುವನಾಗು–ಎನಲು, ವರ್ತಕನು ಕಾಮಾತುರನಾಗಿ, ದೇವೇಂದ್ರನು ಅಹಲ್ಯೆಯನ್ನೂ ಭಸ್ಮಾಸುರನು ಪಾರ್ವತಿಯನ್ನೂ, ರಾವಣನು ಸೀತೆಯನ್ನೂ, ಕೀಚಕನು ದ್ರೌಪದಿಯನ್ನೂ, ಕಂಡು ಮೋಹಿಸಿದಂತೆ, ಆಕೆಯಂ ದುರ್ಬುದ್ಧಿಯಿಂದ ಮೋಹಿಸಿ-ಎಲೆ ಕಾಮಿನೀಮಣಿ! ನಿನ್ನಲ್ಲಿ ನನ್ನ ಮನಸ್ಸು ಅನುರಕ್ತವಾಗಿರುವುದು. ನನ್ನ ಮನೋರಥವನ್ನು ನೀನು ಪೂರಣಮಾಡುವುದಾದರೆ, ಸಾಮಗ್ರಿಗಳನ್ನು ಕೊಡುವೆನು. ಈವಿಷಯದಲ್ಲಿ ಮನಸ್ಸಂಕೋಚವುಳ್ಳವಳಾದರೆ, ಸುಮ್ಮನೆ ಮನೆಗೆ ಹಿಂತಿರುಗಿ ಹೊರಟುಹೋಗು-ಎಂದನು.

ಆಕೆ ಆ ನೀಚನ ದುರ್ಬುದ್ಧಿಯನ್ನು ತಿಳಿದು, ಮನದಲ್ಲಿ—ಆಗುವುದಿಲ್ಲವೆಂದರೆ, ಮತ್ತೆಲ್ಲಿಯೂ ಸಾಮಗ್ರಿಗಳು ದೊರೆಯುವುದಿಲ್ಲ. ಸಾಧುಗಳು ಮನೆಯಲ್ಲಿ ಉಪವಾಸದಿಂ ಮಲಗುವರು. ಅದರಿಂದ ಸತ್ತ್ವಕ್ಕೆ ಹಾನಿಯುಂಟಾಗುವುದು. ಸಮಯ ಬಂದಂತೆ ನಡೆಯಬೇಕು; ಪ್ರಸಕ್ತಿ ಬಂದಂತೆ ಮಾತನಾಡಬೇಕು. ಸಭೆಯಂ ನೋಡಿ ಕೀರ್ತನವಂ ಮಾಡಬೇಕು; ಭೂಮಿಯಂ ನೋಡಿ ಬೀಜವಂ ಬಿತ್ತಬೇಕು. ಹರಿಶ್ಚಂದ್ರಮಹಾರಾಜನು ಸತ್ತ್ವಗುಣಸಂಪನ್ನನು. ಚಂಡಾಲನ ಸೇವೆಯಂ ಮಾಡಿದನು. ಆತನ ಮಡದಿ ಚಂದ್ರಮತಿಯೂ ಬಗೆಬಗೆಯ ಕ್ಲೇಶವನ್ನು ಅನುಭವಿಸಿದಳು. ಆರ್ಜಿಸಿದ ಕೀರ್ತಿಯು ಮುಳುಗುವಸಮಯವೊದಗಿದರೆ, ಅಂತ್ಯಜನ ಕಾಲನ್ನಾದರೂ ಕಟ್ಟಬೇಕು. ದುರ್ಭಿಕ್ಷಕಾಲದಲ್ಲಿ ಅನ್ನಕ್ಕೋಸ್ಕರ ಪರಮಲೋಭಿಯನ್ನಾದರೂ ಯಾಚಿಸಬೇಕು. ಕುಟುಂಬಭರಣಕ್ಕೋಸ್ಕರ ಬ್ರಾಹ್ಮಣರು ಅಬಿಂಧರ ಸೇವೆಯನ್ನೂ ಮಾಡುವರು. ಕಲಿರಾಯನು ಉದಯಿಸಿ ಆಗಬಾರದುದೆಲ್ಲವನ್ನೂ ಆಗಿಸುವನು. ಸಕಲರಿಗೂ ಸ್ವಧರ್ಮಾಚರಣೆಯು ಆವಶ್ಯಕವೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.; ಆದರೂ ಬಾದೊಂದುವೇಳೆ ಶ್ರೀಹರಿಯ ಚರಣವನ್ನು ನಂಬಿ ಅಧರ್ಮವನ್ನು ಆಚರಿಸಬೇಕಾಗಿ ಇರುವುದು. ತಾಯಿತಂದೆಗಳೂ ಗುರುವೂ ಪತಿಯೂ ಪೂಜ್ಯರು. ಅವರ ಮಾತು ಪ್ರಮಾಣವು ಮತ್ತು ಅನುಲ್ಲಂಘ್ಯವಾದುದು; ಆದರೂ, ಭರತನು ತನ್ನ ತಾಯಿಯ ಮಾತನ್ನು ಅಂಗೀಕರಿಸಿದ್ದರೆ, ಶ್ರೀರಾಮಚಂದ್ರನ ಚರಣಾನುಗ್ರಹವು ಎಂತು ದೊರೆಯುತಿದ್ದಿತು? ಪ್ರಹ್ಲಾದನು ತಂದೆಯಮಾತನ್ನು ಒಪ್ಪಿ ನಡೆದಿದ್ದರೆ, ಶ್ರೀನರಹರಿಯು ಎಂತು ಪ್ರಸನ್ನನಾಗುತಿದ್ದನು? ಬಲಿಯು ಗುರುವಾದ ಶುಕ್ರಾಚಾರ್ಯನ ವಚನವನ್ನು ಉಲ್ಲಂಘಿಸಿದುದರಿಂದಲ್ಲವೆ? ವಾಮನರೂಪಿಯಾದ ಶ್ರೀಹರಿಯ ಪೂರ್ಣಾನುಗ್ರಹಕ್ಕೆ ಪಾತ್ರವಾದನು. ಗೋಪಸ್ತ್ರೀಯರು ತಮ್ಮ ಪತಿಗಳಲ್ಲಿಯೇ ಆಸಕ್ತಿಗೊಂಡಿದ್ದರೆ, ಶ್ರೀಕೃಷ್ಣರೂಪದಲ್ಲಿ ಎಂತು ಲೀನೆಯರಾಗುತಿದ್ದರು? ಋಷಿಪತ್ನಿಯರು ಪತಿಗಳ ವಚನವನ್ನು ಉಪೇಕ್ಷಿಸಿ ಶ್ರೀಹರಿಗೆ ಅನ್ನವಂ ತೆಗೆದುಕೊಂಡು ಹೋದುದರಿಂದಲ್ಲವೆ ಆತನ ಅನುಗ್ರಹಕ್ಕೆ ಪಾತ್ರವಾದರು. ಅವರು ಸ್ವಧರ್ಮವನ್ನೇ ಪ್ರಮಾಣವೆಂದು ತಿಳಿದು ನಡೆದಿದ್ದರೆ, ಅಂತು ಶ್ರೀಹರಿಯ ಪೂರ್ಣಾನುಗ್ರಹವುಂಟಾಗುತಿರಲಿಲ್ಲ. ಈಗಲೂ ಧರ್ಮವಿಚಾರವನ್ನು ಮಾಡಿ ನೋಡಿದರೆ, ಮನೆಯಲ್ಲಿ ಸಾಧುಗಳನ್ನು ಉಪವಾಸಗೊಳಿಸಿ ಮಲಗಿಸುವುದಕ್ಕಿಂತಲೂ ಈ ವರ್ತಕನ ಮಾತನ್ನು ಅಂಗೀಕರಿಸಿ ಆ ಸಾಧುಗಳಂ ಸೇವಿಸಿ ಸಂತೋಷಗೊಳಿಸುವುದೇ ಪರಮಧರ್ಮವೆಂದು ತೋರುವುದು. ಶ್ರೀಜಾನಕೀರಮಣನು ಸರ್ವಚೈತನ್ಯಸ್ವರೂಪನಾಗಿರುವನು. ನನ್ನ ಮನೋಭಾವವನ್ನು ಆಸ್ವಾಮಿಯು ಚೆನ್ನಾಗಿ ಬಲ್ಲನು. ಆ ಪಾವನಮೂರ್ತಿಯ ನಾಮಸ್ಮರಣೆಯಿಂದಲೇ ಸಮಸ್ತದುರಿತಂಗಳೂ ದೂರವಾಗುವುವು-ಎಂದು ದೃಢವಾಗಿ ಬಗೆದು ಧೈರ್ಯವನ್ನು ತಾಳಿ, ಆ ವರ್ತಕನನ್ನು ಕುರಿತು—ಮೊದಲು ಭೋಜನಸಾಮಗ್ರಿಗಳನ್ನು ಕೊಡು.

ಕಾಲವು ಬಹುವಾಗಿ ಕಳೆಯಿತು. ಸಾಧುಮಹನೀಯರು ಕ್ಷುಧಿತರಾಗಿರುವರು. ವಿಲಂಬವಾದರೆ ಅವರು ಮಲಗಿ ನಿದ್ರೆಹೋಗುವರು. ಅವರಿಗೆ ಭೋಜನವಂ ಮಾಡಿಸಿ, ಬಳಿಕ ಸತ್ವರವಾಗಿ ನಿನ್ನ ಬಳಿಗೆ ಬರುವೆನು–ಎಂದಳು.

ಕುರುಡನಿಗೆ ಪ್ರಕಾಶಮಾನವಾದುದೂ ಎಂತು ಅಪ್ರಕಾಶವಾಗಿತೋರುವುದೋ, ತಸ್ಕರನಿಗೆ ಚಂದ್ರನೂ ಎಂತು ಅನಾಹ್ಲಾದಕರನಾಗಿ ತೋರುವನೋ, ರೋಗಿಗೆ ಮೃಷ್ಟಾನ್ನವೂ ಎಂತು ಅರುಚಿಕರವಾಗಿರುವುದೋ ಅಂತು ಆ ಗುಣವತಿಯ ಮಾತು ಆ ವರ್ತಕನಿಗೆ ಅಸತ್ಯವಾಗಿತೋರಿತು. ಅದರಿಂದ ಆ ವರ್ತಕನು ಆಕೆಯನ್ನು ಕುರಿತು ನಿನ್ನ ಮಾತನ್ನು ನಂಬಲಾರೆನು. ಪ್ರಮಾಣಮಾಡಿಕೊಟ್ಟರೆ ನನಗೆ ಯಥಾರ್ಥವಾಗಿ ತೋರುವುದು-ಎನಲು, ಆಕೆ ಧೈರ್ಯದಿಂ ಮನವಂ ನಿಗ್ರಹಿಸಿ ಅವನ ಇಷ್ಟದಂತೆ ಪ್ರಮಾಣವಂ ಮಾಡಿಕೊಟ್ಟು ಸಮಸ್ತಸಾಹಿತ್ಯವನ್ನೂ ತೆಗೆದುಕೊಂಡು ತ್ವರೆಯಿಂದ ಮನೆಗೆ ಬಂದು ಪಾಕಕ್ಕೆ ಸಜ್ಜುಗೊಳಿಸಿದಳು.

ಆ ಸಾಧುಗಳು ಸ್ವಹಸ್ತದಿಂದಲೇ ಪಾಕವಂ ಮಾಡಿಕೊಳ್ಳುವೆವೆಂದು ಪಾತ್ರೆಗಳಂ ತೆಗೆದುಕೊಂಡು ಬಾದೆಡೆಯಲ್ಲಿ ಅಡಿಗೆಯಂ ಮಾಡಿಕೊಂಡು ಭಗವಂತನಿಗೆ ನಿವೇದನವಂ ಮಾಡಿ ಸಂತೋಷದಿಂದ ಭುಂಜಿಸಿ ತೃಪ್ತರಾದರು.

ಬಳಿಕ ಕಬೀರನ ಕಾಂತೆಯು ಏಕಾಂತದಲ್ಲಿ ಪತಿಯನ್ನು ಕುರಿತು–ನೀವು ಸಾಧುಗಳ ಬಳಿಯಲ್ಲಿರಿ. ನಾನು ವರ್ತಕನಿಗೆ ಭಾಷೆಯಂ ಕೊಟ್ಟು ಭೋಜನಸಾಮಗ್ರಿಗಳಂ ತಂದಿರುವೆನು. ಅವನ ಬಯಕೆಯಂ ಪೂರಣಮಾಡುವುದಕ್ಕೆ ನನಗೆ ಅಪ್ಪಣೆಯಂ ಕೊಡಬೇಕು. ಸಾವಕಾಶವಾದರೆ ಬೆಳಗಾಗಿಹೋಗುವುದು. ಸತ್ಯಕ್ಕೆ ಚ್ಯುತಿಯುಂಟಾದೀತು-ಎಂದಳು. ಅದಂ ಕೇಳಿ ಕಬೀರನು–ನಿನ್ನೊಡನೆ ನಾನು ಬರುವೆನು. ಆ ವರ್ತಕನ ಉಪಕಾರಭಾರವು ನಮ್ಮಮೇಲೆ ಗುರುತರವಾಗಿ ಬದವಿತು. ಆತನಿಂದ ಸಾಧುಗಳಿಗೆ ಇಂದು ಭೋಜನವಾಯಿತು. ಈ ಪುಣ್ಯವು ಆತನದೇ ಸರಿ. ಆತನ ಉಪಕಾರಕ್ಕೆ ನಮ್ಮಿಂದ ಪ್ರತ್ಯುಪಕಾರವೇನೂ ಆಗಲಾರದು. ನಿನಗೆ ಸಾಧುವಾದ ಉಪಾಯವೇ ತೋರಿತು. ಸಾಧುಗಳ ಕಾರ್ಯಕ್ಕೋಸ್ಕರ ದೇಹವನ್ನು ಸಾರ್ಥಕಮಾಡಿಕೊಂಡೆ. ಈಗ ಮಹಾವರ್ಷವು ಸುರಿಯುತ್ತಿರುವುದು. ಗಾಢವಾದ ಅಂಧಕಾರವು ಕವಿದಿರುವುದು. ಏಕಾಕಿನಿಯಾಗಿ ನೀನು ಹೊರಡುವುದು ಉಚಿತವಲ್ಲ. ದಾರಿಯಲ್ಲಿ ಭಯವುಂಟಾದೀತು. ನಿನ್ನನ್ನು ಹೆಗಲಮೇಲೆ ಎತ್ತಿಕೊಂಡು ಹೋಗಿ ಆಸ್ಥಳಕ್ಕೆ ಬಿಡುವೆನು-ಎಂದು ನುಡಿದು ಮಡದಿಯಂ ಹೆಗಲನೇರಿಸಿ ಹೃದಯದಲ್ಲಿ ಶ್ರೀರಾಮನಂ ಧ್ಯಾನಿಸುತ್ತ "ಇಂದಿನದಿನವು ಸುದಿನವು; ಸಾಧುಗಳನೇಕರು ಮನೆಗೆ ಬಿಜಯಂಗೈದರು. ಅವರಿಗೆ ಆತಿಥ್ಯವು ನಡೆಯಿತು." ಎಂದು ಕಾಂತೆಯೊಡನೆ ಹೇಳುತ್ತ ತ್ವರೆಯಿಂದ ಹೊರಟು ಅಂಗಡಿಬೀದಿಯಂ ಸೇರಿ, ಆಕೆ ತೋರಿಸಿದ ವರ್ತಕನ ಅಂಗಡಿಯ ಬಳಿಯಲ್ಲಿ ಆಕೆಯನ್ನು ಇಳಿಯಿಸಿ–ಇನ್ನು ನಾನು ಮನೆಗೆ ಹೋಗುವೆನು.

ಸಾಧುಗಳು ಮನೆಯಲ್ಲಿ ಕುಳಿತಿರುವರು. ನಾನು ಮನೆಯಲ್ಲಿ ಇಲ್ಲದಿದ್ದರೆ ಅವರು ಬೇಸರಗೊಂಡು ಹೊರಟು ಹೋದಾರು; ನೀನು ಮನಸ್ಸಿನಲ್ಲಿ ಸಂಕೋಚ ಮಾಡದೆ ನಮಗುಪಕಾರವಂ ಮಾಡಿದ ವರ್ತಕನ ಮನಸ್ಸನ್ನು ಸಂತೋಷಗೊಳಿಸು–ಎಂದು ಹೇಳಿ ಸಾಧುಗಳ ಸೇವೆಯಲ್ಲಿ ಆತುರನಾಗಿ ಹಿಂದಿರುಗಿದನು.

ಇತ್ತಲಾವರ್ತಕನು ಕಾಮಾತುರನಾಗಿ ಕಬೀರನ ಮಡದಿಯ ಮಾರ್ಗವನ್ನೇ ನಿರೀಕ್ಷಿಸುತ್ತ "ಅಹಹ! ಬರಿದೆ ಭಾಷೆಯಂ ಕೊಟ್ಟು ಸಾಮಗ್ರಿಗಳನ್ನೂ ತೆಗೆದು ಕೊಂಡು ನನ್ನನ್ನು ಮೋಸಮಾಡಿದಳು" ಎಂದು ನುಡಿಯುತ್ತ, ಅಷ್ಟರಲ್ಲಿ ತನ್ನಿದಿರಿಗೆ ಬಂದು ನಿಂತ ಆಕೆಯನ್ನು ಕಂಡು "ಈಕೆ ಸತ್ಯಶೀಲೆ; ಆಡಿದ ಮಾತನ್ನು ತಪ್ಪದೆ ನನ್ನ ಬಳಿಗೆ ಬಂದಳು" ಎಂದು ಸಂತೋಷಗೊಂಡನು.

ಆಕೆ ಬಂದೆಡೆಯಲ್ಲಿ ಕುಳಿತುಕೊಂಡಳು. ವರ್ತಕನು ಸಮೀಪಕ್ಕೆ ಕರೆದು, ಬಂದ ಆಕೆಯ ಪಾದಗಳನ್ನು ನೋಡಿ–ಈಗ ಪ್ರಬಲವಾದ ಮಳೆಯು ಸುರಿಯುತ್ತಿರುವುದು; ನಿನ್ನ ಕಾಲುಗಳಲ್ಲಿ ಸ್ವಲ್ಪವೂ ಕೆಸರಾಗಿಲ್ಲ. ಇದೇನಾಶ್ಚರ್ಯವು?–ಎಂದು ಬೆಸಗೊಂಡನು. ಅದಕ್ಕೆ ಆಕೆ–ಎಲೆ ಗುಣಶಾಲಿಯಾದ ವರ್ತಕನೆ! ಆಲಿಸು. ನಾನು ಯಥಾರ್ಥವಂ ನುಡಿವೆನು. ನಿನಗೆ ಭಾಷೆಯಂಕೊಟ್ಟು ಭೋಜನಸಾಮಗ್ರಿಗಳಂ ತೆಗೆದುಕೊಂಡು ಮನೆಗೆಹೋದೆನು. ಸಾಧುಗಳು ನೀನುಕೊಟ್ಟಸಾಮಗ್ರಿಗಳಿಂದ ಸ್ವಯಂಪಾಕವಂ ಮಾಡಿಕೊಂಡು ಸಂತುಷ್ಟರಾಗಿ ಭೋಜನವಂ ಮಾಡಿದರು. ಸಾಧುಗಳು ನಮ್ಮ ಮನೆಯಲ್ಲಿ ಭೋಜನವಂ ಮಾಡಿದ ಪುಣ್ಯವು ನಿನ್ನದೇಸರಿ. ನೀನು ನಮಗೆ ಮಾಡಿದ ಉಪಕಾರವು ಅಸಾಧಾರಣವಾದುದು. ಅದಕ್ಕೆ ಪ್ರತ್ಯುಪಕಾರವಂ ನಾವು ಮಾಡಲಾರೆವು. ನಾನು ಪತಿವ್ರತೆಯೆನಿಸಿಕೊಂಡಿರುವೆನು. ನನಗೆ ಪತಿಯ ಆಜ್ಞೆಯೇ ಮುಖ್ಯ. ನಾನು ನಿನಗೆ ಭಾಷೆಕೊಟ್ಟು ಬಂದುದನ್ನು ನನ್ನ ಪತಿಗೆ ತಿಳಿಯಿಸಿದೆನು. ಆತನು ಅನುಮತಿಗೊಂಡು ನನ್ನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ನಿನ್ನ ಬಳಿಗೆ ತಂದು ಬಿಟ್ಟನು. ಇನ್ನು ನಿನ್ನ ಮನಸ್ಸಿನ ಅಪೇಕ್ಷೆಯಂ ತೀರಿಸಿಕೊಳ್ಳಬಹುದು–ಎಂದಳು.

ವರ್ತಕನು ಆ ಸತೀಮಣಿಯ ಮಾತನ್ನು ಕೇಳಿ ಆಕ್ಷಣದಲ್ಲಿ ಪಶ್ಚಾತ್ತಾಪಗೊಂಡು–ನಾನು ಈ ಮನುಷ್ಯಜನ್ಮವನ್ನೆತ್ತಿ ಅದ ಸಾರ್ಥಕ್ಯವನ್ನೂ ಮಾಡಿಕೊಳ್ಳಲಿಲ್ಲ. ಚತುರಶೀತಿಲಕ್ಷಯೋನಿಗಳಲ್ಲಿ ಸುತ್ತಿ ದೈವವಶದಿಂದ ಮನುಷ್ಯದೇಹಕ್ಕೆ ಬಂದು ಇಲ್ಲಿಯೂ ವಿಚಾರವೇನನ್ನೂ ಮಾಡದೆ ವಿಷಯಲಂಪಟನಾದೆನಲ್ಲಾ! ಕಬೀರನು ಮಹಾವಿರಕ್ತನು! ಆತನ ಮಡದಿಯಾದ ಈಕೆಯನ್ನು ನಾನು ಆಶಿಸಿದೆನಲ್ಲಾ! ಕೈಯಲ್ಲಿದ್ದ ಶಸ್ತ್ರದಿಂದ ತುಳಸೀವನವಂ ಛೇದಿಸಿದಂತಾಯಿತು. ಹಿಡಿದ ಗುದ್ದಲಿಯಿಂದ ಯಜ್ಞಶಾಲೆಯಂ ಕೆಡಹಿದಂತಾಯಿತು. ಶಿವಪ್ರೋಕ್ಷೋಪಕರಣವನ್ನು ಕಾಲಿಂದ ಒದೆದಂತಾಯಿತು. ಅಮೃತಕುಂಭವನ್ನು ಎತ್ತಿ ಬಿಸುಟಂತಾಯಿತು. ಸಾಲಿಗ್ರಾಮ

ವನ್ನು ಬಿಡೆದಿಟ್ಟಂತಾಯ್ತು. ಅಶ್ವತ್ಥವೃಕ್ಷವಂ ಕಡಿದಂತಾಯಿತು. ಅಹಹ! ನಾನು ಅಯುಕ್ತವಾದ ಎಸಕವನ್ನು ಎಸಗುತಿದ್ದೆನಲ್ಲಾ! ಕಬೀರನು ಮಹನೀಯನು; ಧನ್ಯನು; ಸಾಧುಗಳ ಕಾರ್ಯಕ್ಕೋಸ್ಕರ ತನ್ನ ಪ್ರಾಣವನ್ನಾದರೂ ಅನ್ಯರಿಗೆ ಅರ್ಪಣಮಾಡುವನು. ಆತನ ನಾಮಸ್ಮರಣೆಯಿಂದಲೇ ನಾನು ಚೇತರಿಸಿಕೊಂಡೆನು—ಎಂದು ಬಗೆದು ವಿವೇಕವಂ ತಂದುಕೊಂಡು, ಆಕೆಗೆ ಸಾಷ್ಟಾಂಗನಮಸ್ಕಾರವಂ ಮಾಡಿ—ಅಮ್ಮಾ! ನೀನು ನನ್ನ ತಾಯಿ ; ನಾನು ನಿನ್ನ ಮಗನು. ನನ್ನ ಅಪರಾಧವನ್ನು ಮನದಲ್ಲಿ ಸ್ವಲ್ಪವೂ ಎಣಿಸಬೇಡ. ಅಜ್ಞಾನದಿಂದ ನಾನು ನಿನ್ನನ್ನು ಛಳಿಸಿದೆನು. ಕ್ಷಮಿಸು. ಅಭಯದಾನವಂ ಮಾಡು. ನನ್ನನ್ನು ರಕ್ಷಿಸು. ಮಹನೀಯನಾದ ನಿನ್ನ ಪತಿಯ ಪಾದದಲ್ಲಿ ನನ್ನನ್ನು ಕೆಡಹು—ಎಂದು ದೀನನಾಗಿ ಬೇಡಿಕೊಂಡನು.

ಆಕೆ ಅವನ ದೀನವಚನವಂ ಕೇಳಿ ಅವನನ್ನು ಕುರಿತು—ಎಲೆ ವಿವೇಕಿಯೇ! ನೀನು ಧನ್ಯನು. ನಿನ್ನ ಮನಸ್ಸು ಬೆಣ್ಣೆಯಂತೆ ಮೃದುವಾದುದು. ನೀನು ಪಶ್ಚಾತ್ತಾಪದಿಂದ ಶುದ್ಧನಾದೆ. ಬಹುಪಾಪಾಚರಣೆಯಂ ಮಾಡಿದ್ದರೂ ಪಶ್ಚಾತ್ತಾಪವುಂಟಾಗಲು, ಪಾಪಗಳಿಂದ ನಿರ್ಮುಕ್ತರಾಗುವರೆಂದು ಶಾಸ್ತ್ರಜ್ಞರು ಹೇಳುವರು. ವಿಷಪಾನವನ್ನು ಮಾಡಿದ್ದರೂ ಬಳಿಕ ಅಮೃತಪಾನವು ಲಬ್ಧವಾದರೆ ಅಪಾಯವು ತಪ್ಪದೆ ಇರದು. ನಿನ್ನ ಚಿತ್ತದಲ್ಲಿ ಅನುತಾಪವುಂಟಾದೊಡನೆಯೆ ನಿನ್ನ ಅಪಾಯವು ದೂರವಾಯಿತು. ನಿನಗೆ ನನ್ನ ಪತಿಯ ಸಂದರ್ಶನವಂ ಮಾಡಿಸುವೆನು. ನನ್ನೊಡನೆ ಬಾ—ಎಂದಳು.

ಆ ವರ್ತಕನು ಆಕೆಯ ಮಾತಂ ಕೇಳಿ ಪರಮಸಂತೋಷಯುಕ್ತನಾಗಿ ಥಟ್ಟನೆ ದಾಂಭಿಕಲಕ್ಷಣವನ್ನೂ ಅಭಿಮಾನವನ್ನೂ ಮೋಹಭ್ರಮವನ್ನೂ ಬಿಟ್ಟು ಮಾಯೆಯೆಂಬ ಬಲೆಯಿಂದ ತಪ್ಪಿಸಿಕೊಂಡು ಆಕೆಯೊಡನೆ ಹೊರಟು ಕಬೀರನ ಮನೆಯಂ ಸೇರಿ ಕಬೀರನಂ ಕಂಡು—ನಾನು ಅಜ್ಞಾನಿ, ಬಾಲಭಾವದಿಂದ ತಿಳಿಯದೆ ಅಪರಾಧವನ್ನೆಸಗಿದೆನು ; ಕ್ಷಮಿಸಿ ಅಭಯವನ್ನಿತ್ತು ನನ್ನನ್ನು ಉದ್ಧರಿಸಬೇಕು-ಎಂದು ಅನನ್ಯಭಾವದಿಂದ ಪ್ರಾರ್ಥಿಸಿ ಸಾಷ್ಟಾಂಗನಮಸ್ಕಾರವಂ ಮಾಡಿದನು.

ಬಳಿಕ ಅಂತರಸಾಕ್ಷಿಯೂ ನಿರ್ವಿಕಾರನೂ ಆದ ಕಬೀರನು ಅವನ ಪಶ್ಚಾತ್ತಾಪಯುಕ್ತವಾದ ಚಿಹ್ನೆಗಳಂ ನೋಡಿ ಆಶ್ಚರ್ಯಗೊಂಡು ಕರುಣದಿಂದ ಆ ವರ್ತಕನನ್ನು ಆಲಿಂಗಿಸಿಕೊಂಡು ಅಭಯವನಿತ್ತನು. ವರ್ತಕನು ಕಬೀರನ ಸಂಗದಿಂದ ಸುಜ್ಞಾನವನ್ನು ಪಡೆದು ಶ್ರೀರಾಮಭಜನೆಯಂ ಮಾಡುತ್ತ ಹೊರಟನು. ಸತ್ಸಂಗದ ಮಹಿಮೆಯು ಶ್ರುತ್ಯಾದಿಗಳಿಗೂ ತಿಳಿಯಲಸದಳವು ; ಅದಂತಿರಲಿ.

ಜ್ಞಾನದೇವನಾಮದೇವರಿರ್ವರೂ ಕಬೀರನ ಅದ್ಭುತವಾದ ಕೀರ್ತಿಯಂ ಕೇಳಿ ಆನಂದಭರಿತರಾಗಿ ಕಬೀರನ ಸಂದರ್ಶನಕ್ಕೋಸ್ಕರ ಹೊರಟು ಆತನ ಮನೆಯಂ ಹೊಕ್ಕರು.

ಕಬೀರನು ಅವರಿರ್ವರನ್ನೂ ಕಂಡು ಸಂತೋಷಗೊಂಡು ಸಾಷ್ಟಾಂಗನಮಸ್ಕಾರವಂ ಮಾಡಿ ಕುಳಿತುಕೊಳ್ಳುವುದಕ್ಕೆ ತೃಣಾಸ್ತರಣವಂ ಹಾಸಿ ಸವಿನುಡಿಗಳಿಂದ ಸತ್ಕರಿಸಿದನು.

ಜ್ಞಾನದೇವನು ನಾಮದೇವನನ್ನೂ ಕಬೀರನನ್ನೂ ಕುರಿತು ನೀವಿರ್ವರೂ ಉದ್ಧವಶುಕರು. ಮಲಿನವಾದ ಭಕ್ತಿಯೋಗವಂ ವೃದ್ಧಿಗೊಳಿಸಿ ಅಜ್ಞರಾದ ನರರನ್ನು ಉದ್ಧರಿಸುವುದಕ್ಕೋಸ್ಕರ ಶ್ರೀಮನ್ನಾರಾಯಣನ ಅಪ್ಪಣೆಯಿಂದ ಈ ಕರ್ಮಭೂಮಿಯಲ್ಲಿ ಅವತರಿಸಿರುವಿರಿ. ನೀವು ಧನ್ಯರು-ಎಂದು ನುಡಿಯಲು, ಅವರಿರ್ವರೂ ಪರಸ್ಪರವಾಗಿ ಅಂತರಂಗದ ಗುರುತುಗಳನ್ನು ತಿಳಿದುಕೊಂಡರು.

ಬಳಿಕ ಜ್ಞಾನದೇವನು ಕಬೀರನನ್ನು ಕುರಿತು-ಅಯ್ಯಾ ಮಹನೀಯನೆ! ದಕ್ಷಿಣದೇಶದಲ್ಲಿ ಪಂಡರೀಕ್ಷೇತ್ರವು ಅತ್ಯುತ್ತಮವಾಗಿರುವುದು. ಭಕ್ತಶಿರೋಮಣಿಯಾದ ಪುಂಡರೀಕನನ್ನು ಅನುಗ್ರಹಿಸುವುದಕ್ಕೋಸ್ಕರ ವೈಕುಂಠವಾಸಿಯಾದ ಶ್ರೀಲಕ್ಷ್ಮೀಪತಿಯು ಅಲ್ಲಿಗೆ ಬಂದು ಆನಂದದಿಂದ ಇಟ್ಟಿಗೆಯಮೇಲೆ ನಿಂದಿರುವನು. ನೀನು ಬರ್ನೆ ಆ ಕ್ಷೇತ್ರಕ್ಕೆ ಬಂದು ಆ ಸ್ವಾಮಿಯ ಸಂದರ್ಶನವಂ ಮಾಡಬೇಕು-ಎನಲು, ಅದಕ್ಕೆ ಆತನು-ಅವಶ್ಯವಾಗಲಿ; ಕಾರ್ತಿಕಮಾಸದ ಏಕಾದಶಿಯ ವೇಳೆಗೆ ಅಲ್ಲಿಗೆ ಬರುವೆನು-ಎಂದು ಪ್ರತ್ಯುತ್ತರವನಿತ್ತು ಪ್ರಾಸ್ತಾವಿಕವಾದ ಮೃದುಮಧುರವಚನನಿಚಯದಿಂದ ಸಂತೋಷಗೊಳಿಸಿದನು.

ಬಳಿಕ ಜ್ಞಾನದೇವನಾಮದೇವರಿರ್ವರೂ ಕಬೀರನ ಅನುಜ್ಞೆಯಂ ಪಡೆದು ಅಲ್ಲಿಂದ ಹೊರಟರು.

ಮುಂದೆ ಸುರಸವಾದ ಕಥೆಯು. ಸಜ್ಜನರು ಸಾದರಭಾವದಿಂದ ಆಲಿಸಬೇಕು. ಬಾಯಾರಿದವನು ಸ್ವಾದೂದಕವನ್ನು ಎಂತು ಸೇವಿಸುವನೋ, ಹಸಿವುಗೊಂಡವನು ಮೃಷ್ಟಾನ್ನವನ್ನು ಎಂತು ಭುಂಜಿಸುವನೋ ಅಂತು ಆಸಕ್ತಿಯಿಂದ ಭಕ್ತರ ಚರಿತ್ರೆಯಂ ಕೇಳಬೇಕು. ಮನದಲ್ಲಿ ಸದ್ವಿಷಯಕವಾದ ಪ್ರೇಮರಸವೊಂದಿರಲು, ಅನಂತ ಲಾಭವು ಕೈಸೇರುವುದು. ಸ್ವಾನಂದಸುಖರಾಶಿಯು ಪ್ರಾಪ್ತವಾಗುವುದು.

ಇಂತು ಶ್ರೀಭಕ್ತವಿಜಯದಲ್ಲಿ ಹನ್ನೊಂದನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹನ್ನೆರಡನೆಯ ಅಧ್ಯಾಯ.

ಇಂದು ಸಕಲಲೋಕಕ್ಕೂ ಸುಖವು. ಭಕ್ತಿವಿಜಯವೆಂಬ ಮೇಘವು ಚಿದಾಕಾಶದಲ್ಲಿ ಕವಿದಿರುವುದು. ಸ್ವಾನಂದವೆಂಬ ರಸವಂ ವರ್ಷಿಸುತಿರುವುದು. ಸತ್ವಶೀಲರಾದ ಶ್ರೋತೃಗಳೆಂಬ ಚಾತಕಗಳು ಮೊತ್ತಮೊದಲು ಅದರಿಂದ ತೃಪ್ತಿಯಂ ಹೊಂದುವುವು. ರಜೋಗುಣವಿಶಿಷ್ಟರಾದವರಿಗೆ ಧಾನ್ಯಂಗಳ ಬೆಳೆಗಳುಂಟಾಗುವುವು. ತಮೋಗುಣಭೂಯಿಷ್ಠರಾದ ಪಶುಸಮಾನರೆನಿಸುವರಿಗೆ ಅಮಿತವಾದ ತೃಣಂಗಳು ದೊರೆಯುವುವು. ಅಲ್ಲಲ್ಲಿ ಹಳ್ಳಗಳಲ್ಲಿ ನೀರು ನಿಲ್ಲುವುದು. ಇದರಿಂದ ಎಲ್ಲರಿಗೂ ಅಲ್ಪವಾಗಿ ಜೀವನವುಂಟಾಗುವುದು. ಮಹತ್ತರವಾದ ಈ ಮಳೆಯಿಂದ ಉಂಟಾದ ಸಂತತಪ್ರವಾಹದಿಂ ಜ್ಞಾನಸಾಗರವಾಗುವುದು. ಅಲ್ಲಿ ಸದಾನಂದಲಹರಿಗಳು ಪರಂಪರೆಯಿಂದ ಮಸಗುವುವು. ಭಾವುಕರೆಂಬ ಮತ್ಸ್ಯಂಗಳು ಅನಪಾಯದಿಂದ ನಿತ್ಯವೂ ಹೊಳೆಯುತಿರುವುವು.

ಜ್ಞಾನದೇವನಾಮದೇವರು ಗಂಗಾತೀರದಲ್ಲಿ ನಾಲ್ಕು ತಿಂಗಳವರೆಗೆ ವಾಸಮಾಡಿಕೊಂಡಿದ್ದು ಬಳಿಕ ಅಲ್ಲಿಂದ ಹೊರಟು ಪ್ರಯಾಗವಂ ಸೇರಿ ಅಲ್ಲಿಂದ ಅಯೋಧ್ಯೆ ಮಥುರೆ ಗೋಕುಲ ದ್ವಾರಕೆ ಮುಂತಾದ ಕ್ಷೇತ್ರಂಗಳಲ್ಲಿ ತೀರ್ಥಯಾತ್ರೆಯಂ ಮಾಡಿಕೊಂಡು ಮುಂದೆ ಬರುವ ಮಾರ್ಗದಲ್ಲಿ ಕಠಿನವಾದ ಮಾರ್ವಾಡದೇಶವು ಪ್ರಾಪ್ತವಾಯಿತು. ಅಲ್ಲಿ ಇರ್ವರಿಗೂ ವಿಶೇಷದಿಂದ ಬಾಯಾರಿಕೆಯುಂಟಾದುದು. ಕುಡಿಯುವುದಕ್ಕೆ ನೀರನ್ನು ಹುಡುಕುತ್ತ ಇರ್ವರೂ ಆಕಸ್ಮಿಕವಾಗಿ ಕಣ್ಣಿಗೆ ಗೋಚರವಾದ ಒಂದು ಸೇದುವ ಬಾವಿಯ ಬಳಿಗೆ ಬಂದರು. ಆ ಬಾವಿಯು ಅತ್ಯಗಾಧವಾಗಿದ್ದಿತು. ನೀರನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ಸಾಧನವಿರಲಿಲ್ಲ. ಜ್ಞಾನದೇವನು ನಾಮದೇವನನ್ನು ಕುರಿತು—ನನಗೆ ಒಂದುಪಾಯವು ವಿದಿತವಾಗಿರುವುದು—ಎಂದು ಹೇಳಿ ಲಘಿಮೆಯ ಶಕ್ತಿಯಿಂದ ಥಟ್ಟನೆ ಬಾವಿಯೊಳಗೆ ಪ್ರವೇಶಿಸಿ ಉದಕವನೀಂಟಿ ಮೇಲ್ಗಡೆಗೆ ಬಂದನು. ನಾಮದೇವನಿಗೆ ನೀರನ್ನು ತೆಗೆದು ಕುಡಿಯಲು ಉಪಾಯವೇನೂ ತೋರಲಿಲ್ಲ. ಜ್ಞಾನದೇವನು ಆತನನ್ನು ಕುರಿತು—ನೀನು ಏತಕ್ಕೆ ಚಿಂತಾಕ್ರಾಂತನಾಗಿರುವೆ ? ನಿನಗೆ ಲಘಿಮೆಯ ಸಾಧನವು ತಿಳಿಯದು. ನಿಮಿಷದಲ್ಲಿ ನಾನು ಉದಕವಂ ತಂದುಕೊಡುವೆನು. ಮನದಲ್ಲಿ ಭೇದಭಾವವಂ ಹಿಡಿಯದೆ ಉದಕಪ್ರಾಶನವಂ ಮಾಡು. ನನ್ನ ಕೈಯಿಂದ ಉದಕವಂ ತೆಗೆದುಕೊಳ್ಳುವುದಕ್ಕೆ ಶಂಕೆಪಡಬೇಡ. ಆತ್ಮನು ಸರ್ವಘಟಗಳಲ್ಲಿಯೂ ಒಬ್ಬನೇ ವ್ಯಾಪಕನಾಗಿರುವನು—ಎನಲು, ನಾಮದೇವನು-ಆತ್ಮನಾದ ವಿಟ್ಠಲನು

ಸರ್ವಾಂತರದಲ್ಲಿಯೂ ಇರುವುದೇ ಪ್ರಮಾಣವಾಗಿದ್ದರೆ, ಈ ಸಮಯದಲ್ಲಿ ನನ್ನ ಚಿಂತೆಯಂ ಪರಿಹರಿಸದೆ ಇರುವನೇ? ಎಂದು ಉತ್ತರವನಿತ್ತು, ಕಣ್ಣುಗಳಂ ಮುಚ್ಚಿಕೊಂಡು ಹೃದಯದಲ್ಲಿ ಪಾಂಡುರಂಗಮೂರ್ತಿಯಂ ಧ್ಯಾನಿಸುತ್ತ, ರುಕ್ಮಿಣೀಪತಿಯೆ! ನನ್ನನ್ನು ಏಕೆ ಉಪೇಕ್ಷಿಸುವೆ? ಓಡಿಬಾ. ನೀನೆ ನನಗೆ ತಂದೆ ತಾಯಿ ಬಂಧು ಬಳಗ. ನನ್ನ ಸಕಲಸಂಪದವೂ ನೀನೆ. ನನ್ನ ಸಿದ್ಧಾಂತಜ್ಞಾನವೂ ನೀನೆ. ನಾನು ನಿನ್ನನುಳಿದು ಮತ್ತೊಂದನರಿಯೆನು. ಬಹುವಿಧವಾಗಿ ನನ್ನಂ ಪರೀಕ್ಷಿಸುವೆ. ಅನಾಥನಾಥನೇ! ದೀನದಯಾಳುವೇ! ನನ್ನಂ ಸಂರಕ್ಷಿಸು. ಕಣ್ಣುಗಳಿಂದ ಬಾಷ್ಪವು ಸುರಿಯುತ್ತಿರುವುದು. ಧೈರ್ಯವಂ ತಾಳಲಾರೆನು. ಶ್ರೀಹರಿಯೇ! ನಿನ್ನನಗಲಿದುದರಿಂದ ನನ್ನ ಪ್ರಾಣಂಗಳು ಹೋಗುತ್ತಿರುವುವು. ಮನೋವಾಕ್ಕಾಯಗಳಿಂದಲೂ ನಾನು ನಿನ್ನ ಪಸುಳೆಯೆನಿಸಿರುವೆನು. ಈಗ ಬಾಯಾರಿಕೆಯೆಂದು ಮತ್ತಾರಿಗೆ ನಾನು ಹೇಳಿಕೊಳ್ಳಲಿ? ಪುಂಡರೀಕವರದನೆ! ಹುಟ್ಟಿದುದು ಮೊದಲಾಗಿ ನಾನು ನಿನ್ನ ಅಣುಗನೆನಿಸಿರುವೆನು. ನನ್ನನ್ನು ಸಂರಕ್ಷಿಸದಿದ್ದರೆ ಲಜ್ಜೆಯಾರಿಗುಂಟಾಗುವುದು? "ಅನಾಥನಾಥನು" ಎಂದು ಹದಿನೆಂಟುಪುರಾಣಗಳಲ್ಲಿಯೂ ಹೊಗಳಿಸಿಕೊಂಡಿರುವೆ. ಆ ಕೀರ್ತಿಯು ಇಂದು ವ್ಯರ್ಥವಾಗಿತೋರುವುದು. ನಕ್ರವು ಗಜೇಂದ್ರನನ್ನು ಬಾಧಿಸಲು, ಎಂತು ತ್ವರೆಯಿಂದ ಓಡಿಬಂದೆಯೋ; ದ್ರೌಪದಿಗೆ ಸಂಕಟವೊದವಲು. ಎಂತು ಥಟ್ಟನೆ ಪ್ರಸನ್ನನಾದೆಯೋ ಅಂತು ಸ್ವಾಮಿಯೇ! ನನ್ನ ಬಳಿಗೆ ಓಡಿಬಂದು ಪ್ರಸನ್ನನಾಗು. ತೀರ್ಥಯಾತ್ರೆಗೆ ಕಳುಹಿಸುವ ಸಂದರ್ಭದಲ್ಲಿ ನನ್ನನ್ನು ಜ್ಞಾನದೇವರ ವಶಕ್ಕೆ ಕೊಟ್ಟು ಕರುಣೆಯಿಂದ ಹಿತೋಕ್ತಿಗಳನ್ನು ನುಡಿದೆ. ಅಂತಹ ಕರುಣೆಯಂ ಈಗ ಮರೆತೆಯಾ? ಪಾಂಡುರಂಗನೆ! ನೀನು ಕರುಣಾನಿಧಿಯಲ್ಲವೆ? ನಿನ್ನ ನಾಮನು ಸಂಕಟಪಡುತ್ತಿರಲು, ನೀನು ಉಪೇಕ್ಷಿಸಬಹುದೇ? ಶೀಘ್ರದಲ್ಲಿ ಬಂದು ನನ್ನನ್ನು ಸಂರಕ್ಷಿಸು. ಇಲ್ಲಿಗೆ ನೀನು ಬಾರದಿದ್ದರೆ ನನ್ನನ್ನು ಎಲ್ಲರೂ ಅನವಮಾನಿಸುವರು. ನನ್ನನ್ನು ಸಂತವಿಡಲು ಬೇಗದಿಂ ಬಾ—ಎಂದು ಪಲವು ಬಗೆಯಿಂದ ಮೊರೆಯಿಡುತ್ತ ಸ್ವಾಮಿಯಂ ಸ್ತುತಿಯಿಸುತಿದ್ದನು.

ಅತ್ತಲು ಭೂವೈಕುಂಠವೆನಿಸಿದ ಆ ಪಂಢರಪುರದಲ್ಲಿ ಲೀಲಾವಿಶೇಷದಿಂ ರಮಿಸುತ್ತಿರುವ ಶ್ರೀಹರಿಯು ತನ್ನ ಮನದಲ್ಲಿ ಕಳವಳವು ಹೆಚ್ಚಲು, ರುಕ್ಮಿಣಿಯನ್ನು ಕುರಿತು—ಎಲೆ ಪ್ರಿಯೆ! ಈಗ ಯಾವಭಕ್ತನಿಗೋ ಸಂಕಟವೊದವಿರುವುದು. ಅವನ ಕಣ್ಣಿಗೆ ನಾನು ಗೋಚರನಾಗದಿದ್ದರೆ ಅವನು ನನ್ನನ್ನು ಸುಮ್ಮನೆ ಬಿಡುವುದಿಲ್ಲ. ಏನ ಮಾಡಲಿ?—ಎನಲು, ದೇವಿಯು ಸ್ವಾಮಿಯನ್ನು ಕುರಿತು— ವಲ್ಲಭನೆ! ಈಗ ಭಕ್ತನ ವಿಷಯದಲ್ಲಿ ಇಂತು ಕಳವಳವುಂಟಾಗಲು ಕಾರಣವೇನು? ಯಾವಭಕ್ತನಿಗೆ ಏನು ಸಂಕಟವೊದವಿರುವುದು? ನೀನು ಇಂತು ಚಿಂತಾಕ್ರಾಂತನಾಗಿರುವುದೇತಕ್ಕೆ?— ಎಂದು ಬೆಸಗೊಂಡಳು.

ಅವಕ್ಕೆ ಸ್ವಾಮಿಯು-ಇಂದು ನನ್ನ ಎಡಗಣ್ಣು ಹಾರುತ್ತಿರುವುದು. ಎಡದ ಭುಜವು ಸ್ಫುರಿಸುತ್ತಿರುವುದು. ನನ್ನ ಯಾವ ಪ್ರಾಣಭಕ್ತನಿಗೆ ಸಂಕಟವೇನೊದವಿರುವುದೋ ತಿಳಿಯೆನು. ನನ್ನ ಭಕ್ತನಿಗೆ ದಾರಿಯಲ್ಲಿ ಬಿರುಗಾಳಿಯಿಂದ ಚಳಿಯಾಗಿ ಇದೆಯೋ ? ಬಿಸಿಲಿನಿಂದ ತಾಪವುಂಟಾಗಿರುವುದೋ ? ಹಸಿವುಬಾಯಾರಿಕೆಗಳಿಂ ಹಿಂಸೆಯಾಗಿದೆಯೊ ? ಅನು ಯಾವುದೂ ನನಗೆ ತಿಳಿಯಲಿಲ್ಲ-ಎನಲು ರುಕ್ಮಿಣೀದೇವಿಯು ಸ್ವಾಮಿಯೇ ! ನಿನಗೆ ತಿಳಿಯದುದುಂಟೆ ?—ಎಂದಳು. ಅವಕ್ಕೆ ಶ್ರೀಹರಿಯು—ಅನೇಕ ಭಕ್ತವರ್ಗದಲ್ಲಿ ಯಾವನೆಂದು ನಾನು ತಿಳಿಯಲಿ ?—ಎಂದು ನುಡಿವಷ್ಟರಲ್ಲಿ ಮಹತ್ತಾದ ಶೋಕಧ್ವನಿಯು ಕಿವಿಗೆ ಬಿದ್ದಿತು. ರುಕ್ಮಿಣಿಯು-ಇದೇನು ? ಶೋಕಧ್ವನಿಯಿಲ್ಲಿಗೆ ಕೇಳುವುದು. ಇದಾರದಾಗಿರಬಹುದು ?—ಎಂದಳು. ಸ್ವಾಮಿಯು ಆಲೋಚಿಸಿ-ಪ್ರಿಯೆ ! ಈಗ ತಿಳಿದೆನು. ನಾಮದೇವನು ಮಾರ್ಗದಲ್ಲಿ ತೃಷಾಕ್ರಾಂತನಾಗಿ ಮೊರೆಯಿಡುತ್ತಿರುವನು. ಇನ್ನು ವಿಲಂಬಮಾಡದೆ ಅವನ ಇಷ್ಟವಂ ಪೂರಣಮಾಡುವೆನೆಂದನು.

ಇತ್ತಲಾಕ್ಷಣದಲ್ಲಿ ಆ ಬಾವಿಯು ಅಮೃತದಂತಿರುವ ಉದಕದಿಂದ ಪೂರ್ಣವಾಗಿ ತುಂಬಿತುಳುಕಾಡಿತು. ಈ ಕೌತುಕವಂ ನೋಡಿ ಜ್ಞಾನದೇವನು ಆಶ್ಚರ್ಯಗೊಂಡು—ಇದೇನು ಆಳವಾಗಿದ್ದ ಬಾವಿಯು ಕೈಯಿಂದ ತೆಗೆದುಕೊಳ್ಳುವಂತೆ ಕ್ಷಣದಲ್ಲಿ ನೀರಿಂದ ತುಂಬಿರುವುದು. ಇದು ಶ್ರೀಹರಿಯ ಅನುಗ್ರಹವಿಲಾಸವು. ಅಹಹ ! ಈ ನಾಮದೇವನು ಆ ಸ್ವಾಮಿಯನ್ನು ಅಸಾಧಾರಣವಾದ ಭಕ್ತಿವಿಶೇಷದಿಂದ ವಶಮಾಡಿಕೊಂಡಿರುವನು—ಎಂದು ಬಗೆದು ಮೈಮರೆತು ಮಲಗಿರುವ ನಾಮದೇವನನ್ನು ಎಚ್ಚರಗೊಳಿಸಿ—ಎಲೈ ಮಹಾನುಭಾವನೆ ! ಇದೊನೋಡು. ದಿವ್ಯವಾದ ಸಲಿಲವನ್ನು ಕೈಯಿಂದಲೇ ತೆಗೆದುಕೊಂಡು ಪಾನಮಾಡು. ಶ್ರೀಹರಿಯು ನಿನಗೆ ಬಳಿದು ಬಾವಿಯಲ್ಲಿ ತುಂಬಿತುಳುಕಾಡುವಂತೆ ಸಲಿಲವನ್ನು ಹರಿಯಿಸಿರುವನು. ನೀನು ಧನ್ಯನು. ಭಗೀರಥನು ಬಹುಪ್ರಯತ್ನದಿಂದ ಭಗವದನುಗ್ರಹವಂ ಪಡೆದು ಭಾಗೀರಥಿಯನ್ನು ಭೂಮಿಗೆ ತಂದನು. ನೀನು ಸುಲಭವಾದ ಭಗವದನುಗ್ರಹವಂ ಪಡೆದು ಅಘಟಿತವಾದ ಎಸಕವನ್ನೆಸಗಿದೆ. ನೀನು ಮಹಾಮಹಿಮನು—ಎಂದು ಬಹುವಿಧವಾಗಿ ಅಭಿನಂದಿಸಿದನು.

ನಾಮದೇವನು ಎದ್ದು ಆನಂದದಿಂದ ಭರಿತನಾಗಿ ಆಬಾವಿಯಲ್ಲಿ ಮೇಲೆ ಹರಿಯುತ್ತಿದ್ದ ಉದಕವನಾಸ್ವಾದಿಸಿ ಜ್ಞಾನದೇವನನ್ನು ಕುರಿತು—ನಾನು ಮನದಲ್ಲಿ ಎಣಿಸಿದುದೆಲ್ಲವನ್ನೂ ಭಕ್ತವತ್ಸಲನಾದ ಆ ಭಗವಂತನು ಪೂರಣಮಾಡುವನು. ಆ ನೀಲಮೇಘಶ್ಯಾಮನನ್ನು ನಾನು ಮತ್ತೆ ಎಂದಿಗೆ ನೋಡುವೆನೋ ಅಂದು ನನ್ನ ಈ ಕಣ್ಣುಗಳಿಗೆ ಪರಮಾನಂದವಾಗುವುದು—ಎಂದನು.

ಜ್ಞಾನದೇವನು ನಾಮದೇವನನ್ನು ಕುರಿತು—ಅಯ್ಯಾ ಮಹಾನುಭಾವನೇ ! ಸಮಾಧಿನಿಷ್ಠೆಯೊಳಿರುವ ಯೋಗೀಂದ್ರನನ್ನು ನೋಡಿದರೂ ನನ್ನ ಮನಸ್ಸಿಗೆ ವಿಶ್ರಾಂತಿಯುಂಟಾಗದು. ನನಗೆ ನಿನ್ನಲ್ಲಿಯೇ ಅತ್ಯಂತಪ್ರೀತಿಯುಂಟಾಗಿರುವುದು. ಮತ್ತೊಂದು

ವಸ್ತುವು ನನ್ನ ಮನಸ್ಸಿಗೆ ಹಿತವಾಗಿತೋರುವುದಿಲ್ಲ. ನೀನು ಮಹಾವಿಷ್ಣುಭಕ್ತನು-ಆಸ್ವಾಮಿಯನ್ನು ಸ್ವಾಧೀನನಂ ಮಾಡಿಕೊಂಡಿರುವೆ. ಆ ಪರಮಾತ್ಮನು ನಿನ್ನ ಬಳಿಯಲ್ಲಿ ಕಾದಿರುವನು. ನಿನ್ನ ಕುಲವು ಧನ್ಯವು. ಧೇನುವಂ ಕಂಡು ವತ್ಸ ಸಂತೋಷಿಸುವಂತೆ ನಾನು ನಿನ್ನಂ ಕಂಡು ಸಂತೋಷಿಸುತ್ತಿರುವೆನು. ನಿನ್ನ ಸದ್ಗುಣಂಗಳಿಂದ ನನ್ನ ಮನಸ್ಸು ಆಹ್ಲಾದಪಡುತ್ತಿರುವುದು. ನಿನ್ನ ಕೀರ್ತನವಂ ಕೇಳುತ್ತಿರಲು, ತೀರ್ಥಯಾತ್ರಾಟನವು ಬೇಕಾಗುವುದಿಲ್ಲ. ಮಹರ್ಷಿಗಳೂ, ಬ್ರಹ್ಮೇಂದ್ರಾದಿಗಳೂ ಯಾವ ಪರಬ್ರಹ್ಮನ ನೆಲೆಯನ್ನು ಈಗಲೂ ಚೆನ್ನಾಗಿ ತಿಳಿಯರೋ ಆಪರತರ ಮೂರ್ತಿಯನ್ನು ವಶಮಾಡಿಕೊಂಡ ನಿನ್ನ ಧನ್ಯತೆಯನ್ನು ನಾನು ವರ್ಣಿಸಲಾರೆನೆಂದನು.

ನಾಮದೇವನು ಎಲ್ಲಿ ತೃಷಾಕ್ರಾಂತನಾಗಿ ಭಗವಂತನನ್ನು ಸ್ತುತಿಯಿಸಿದನೋ ಆಸ್ಥಳದಲ್ಲಿ ಈಗಲೂ ಬಾವಿಯನೀರು ಮೇಲೆ ಹರಿಯುತ್ತಿರುವುದು. ಮಾರ್ವಾಡದೇಶದ ಆಪ್ರಾಂತದಲ್ಲಿ ಮಾರ್ಗಶೀರ್ಷಮಾಸದಲ್ಲಿ ಜಾತ್ರೆ ಸೇರುವುದು. ಆತೀರ್ಥದ ಮಹಿಮೆಯನೆಲ್ಲವಂ ವರ್ಣಿಸಲು ಗ್ರಂಥವಿಸ್ತರವಾಗುವುದು; ಅದಂತಿರಲಿ.

ಅವರಿರ್ವರೂ ಅಲ್ಲಿಂದ ಮತ್ತೆ ಮುಂದೆ ಹೊರಟು ಬದರಿಕಾಶ್ರಮವಂ ಹೊಕ್ಕು ಹಿಮಾಚಲವನ್ನು ಸೇರಿ, ಬೌದ್ಧರೂಪಿಯಾದ ಪರಮೇಶ್ವರನು ಇರುವ ಕೇದಾರಕ್ಕೆ ಹೋಗಿ ಅಲ್ಲಿಂದ ಅನೇಕಮಹಾಕ್ಷೇತ್ರಂಗಳಂ ಪ್ರವೇಶಿಸಿ ಶ್ರೀಶೈಲಕ್ಕೆ ನಡೆತಂದು ಅಲ್ಲಿ ಭಕ್ತರಮಾರ್ಗವಂ ನಿರೀಕ್ಷಿಸುತ್ತ ಲೀಲೆಯಿಂದ ಕುಳಿತಿರುವ ಮಲ್ಲಿಕಾರ್ಜುನಸ್ವಾಮಿಯಂ ನೋಡಿಕೊಂಡು ಅಲ್ಲಿಂದ ಘೃಣೇಶ್ವರನ ಸಂದರ್ಶನವಂ ಪಡೆದು ಬಳಿಕ ನಾಸಿಕಾತ್ರ್ಯಂಬಕಕ್ಕೆ ಗಮಿಸಿ ಕುಶಾವರ್ತದೊಳ್ ಸ್ನಾನವಂ ಮಾಡಿ ಪಂಚವದನನಿಗೆ ನಮಸ್ಕರಿಸಿ ಅಲ್ಲಿಂದ ಹೊರಟು ಪಶ್ಚಿಮಸಮುದ್ರವಂ ಕಂಡು ಅಲ್ಲಿಂದ ಭೀಮಶಂಕರವಂ ಸೇರಿ ಅಲ್ಲಿಂದ ಜನಾರ್ದನನ ದರ್ಶನವಂ ಮಾಡಿ ರಾಮೇಶ್ವರಯಾತ್ರೆಯಂ ಮಾಡಿಕೊಂಡು ಬಳಿಕ ಅಲ್ಲಲ್ಲಿ ಅನುಕ್ರಮದಿಂದ ಪ್ರಾಪ್ತವಾದ ಉತ್ತಮೋತ್ತಮವೆನಿಸಿದ ಪ್ರಸಿದ್ಧವಾದ ಪುಣ್ಯಕ್ಷೇತ್ರಂಗಳ ಸಂದರ್ಶನವಂ ಮಾಡಿ ಕಡೆಗೆ ಮಹಾಶಿವರಾತ್ರಿಯೆನಿಸಿದ ಮಾಘಕೃಷ್ಣ ಚತುರ್ದಶೀದಿವಸಕ್ಕೆ ಸರಿಯಾಗಿ ಅವಂಧ್ಯಾನಾಗನಾಥವೆಂಬ ಮಹಾಕ್ಷೇತ್ರವಂ ಸೇರಿದರು. ಅದು ಭೂಕೈಲಾಸವೆನಿಸಿ ಪ್ರಸಿದ್ಧವಾಗಿರುವುದು. ಅಲ್ಲಿಯ ಪುಣ್ಯತೀರ್ಥದಲ್ಲಿ ಸ್ನಾನವಂ ಮಾಡಿ ನಿತ್ಯನಿಯಮಂಗಳಂ ನೆರವೇರಿಸಿಕೊಂಡು ದೇವಸ್ಥಾನದ ಮಹಾದ್ವಾರದಬಳಿಗೆ ಬಂದು ಭಕ್ತಿಭಾವದಿಂದ ಸಾಷ್ಟಾಂಗನಮಸ್ಕಾರವಂ ಮಾಡಿ ಆಲಯಮಂ ಒಳಪೊಕ್ಕು ಮತ್ತೆ ಸ್ವಾಮಿಗೆ ಅಭಿವಂದಿಸಿ—

ಸ್ಮರಹರ ಯಮಹರ ಭವಹರ |
ಪುರಹರ ಕಾತ್ಯಾಯನೀಮನೋಹರ ದಕ್ಷಾ ||
ಧ್ವರಹರ ತಾಪತ್ರಯಹರ |
ಹರ ವಿಷಭೀತಿಹರ ದುರಿತಹರ ನಿಟಿಲಾಕ್ಷಾ ||

ಧರಣೀಧರಮಂದಿರ ಶಶ |
ಧರಧರ ಮೃಗಧರ ಪದಾಶ್ರಿತೋದ್ಧಾರಧುರಂ ‖
ಧರ ವಿಷಧರವರಧರ ಕಂ |
ಧರನಿಭಕಂಧರ ಪೊದಳ್ದು ಪೊರೆ ಶೂಲಧರಾ ‖

ಎಂದು ಸ್ತುತಿಯಿಸಿ ಮಹಾದೇವನನ್ನು ಭಕ್ತಿಯಿಂದಾರಾಧಿಸಿದರು.

ಬಳಿಕ ನಾಮದೇವನು ಮಹಾದ್ವಾರಕ್ಕೆ ಬಂದು ತಾಳತಂಬೂರಿಗಳಂ ಪಿಡಿದು ಎರಡುನೇತ್ರಗಳನ್ನೂ ಮುಚ್ಚಿಕೊಂಡು ಹೃದಯದಲ್ಲಿ ಶ್ರೀವಿಟ್ಠಲಮೂರ್ತಿಯನ್ನೇ ಧ್ಯಾನಿಸುತ್ತ ಸ್ವಲ್ಪವೂ ದೇಹಸ್ಫೂರ್ತಿಯಿಲ್ಲದೆ ಸ್ವಾನಂದದಿಂದ ಭಗವನ್ನಾಮಸಂಕೀರ್ತನೆಯಂ ಮಾಡುತ್ತ ಕುಣಿಯುತಿದ್ದನು. ತಾಳ ತಂಬೂರಿಗಳ ಗಂಭೀರಧ್ವನಿಯೂ ನಾಮಕೀರ್ತನೆಯ ಘೋಷವೂ ಆಗುತ್ತಿರಲು, ಕೇಳುವುದಕ್ಕೆ ಅಲ್ಲಿ ಅಸಂಖ್ಯಾಕಜನಂಗಳು ಕೂಡಿದರು. ಚಂದ್ರನು ಕಳೆಗಳಿಂದ ಪೂರ್ಣನಾಗಿರಲು, ಸಮುದ್ರನು ನೋಡಿ ಎಂತು ಉಲ್ಲಾಸಗೊಳ್ಳುವನೋ; ಬತ್ತಿಯು ಎಣ್ಣೆಯಿಂದ ಕೂಡಿರಲು, ದೀಪವು ಎಂತು ಪ್ರಕಾಶವಂ ಪಡೆವುದೋ, ಬ್ರಾಹ್ಮಣರು ಅರ್ಘ್ಯಪ್ರದಾನವಂ ಮಾಡಲು, ಸೂರ್ಯನು ಎಂತು ಸಂತೋಷಗೊಳ್ಳುವನೋ, ದಿವ್ಯೌಷಧರಸವಂ ಸೇವಿಸಲು, ಇಂದ್ರಿಯಗಳು ಎಂತು ಪುಷ್ಟಿಯಂ ತಾಳುವುವೋ, ವದಾನ್ಯನು ಧನವಂ ನೀಡಲು, ಯಾಚಕರು ಎಂತು ಆನಂದವೊಂದುವರೋ, ವೃಷ್ಟಿಯಿಂದ ನೆಲವು ತೃಣಭರಿತವಾಗಲು, ಗೋವುಗಳು ಎಂತು ಹರ್ಷವಂ ತಳೆವುವೋ, ಭಕ್ಷ್ಯಭೋಜ್ಯಂಗಳಿಂದ ಸಂತರ್ಪಣೆಯಂ ಮಾಡಲು, ಬ್ರಾಹ್ಮಣರು ಎಂತು ಸಂತುಷ್ಟರಾಗುವರೋ ಅಂತು ನಾಮದೇವನು ಭಗವನ್ನಾಮಸಂಕೀರ್ತನವಂಮಾಡಲು, ಶ್ರೋತೃಗಳು ಪರಮಾನಂದವಂ ಪಡೆಯುತಿದ್ದರು.

ರಾಜನು ರಣರಂಗದಲ್ಲಿ ಶೌರ್ಯೋದ್ರೇಕದಿಂದ ದೇಹಸ್ಮೃತಿಯಂ ಮರೆಯಲು, ಆತನ ಸೈನಿಕರೂ ಅವನಂತೆಯೇ ಎಂತು ಆಗುವರೋ, ಅಂತು ನಾಮದೇವನು ಕೀರ್ತನಸಂರಂಭದಿಂದ ದೇಹಭಾವವಂ ಮರೆತಿರಲು, ಶ್ರೋತೃಗಳೂ ಸ್ವಲ್ಪಕಾಲದಲ್ಲಿ ಆತನಂತೆಯೇ ಮನದಿಂದ ವಿಟ್ಠಲಮೂರ್ತಿಯಂ ಧ್ಯಾನಿಸುತ್ತ ಕೈಯಿಂದ ತಾಳಗಳಂ ಹಾಕುತ್ತ ಮುಖದಿಂದ ಭಗವನ್ನಾಮವಂ ಉದ್ಘೋಷಿಸುತ್ತ ಆನಂದಪರವಶರಾಗಿ ದೇಹವಿಸ್ಮೃತಿಯನ್ನೈದಿದರು.

ಅಷ್ಟುಹೊತ್ತಿಗೆ ಅರ್ಚಕರು ಸ್ನಾನವಂ ಮಾಡಿ ಭಸ್ಮರುದ್ರಾಕ್ಷಾಲಂಕೃತರಾಗಿ ನಿತ್ಯನಿಯಮಂಗಳಂ ನೆರವೇರಿಸಿಕೊಂಡು ಕೈಯಲ್ಲಿ ಅಗ್ರೋದಕವನ್ನೂ ಪೂಜೋಪಚಾರದ್ರವ್ಯಂಗಳನ್ನೂ ತೆಗೆದುಕೊಂಡು ಸ್ವಾಮಿಯ ಅರ್ಚನೆಗೋಸ್ಕರ ಮಹಾದ್ವಾರದ ಬಳಿಗೆ ಬಂದರು.

ನಾಮದೇವನು ಪರವಶನಾಗಿ ಭಗವನ್ನಾಮವಂ ಪಾಡುತ್ತ ನರ್ತನವಮಾಡುತಿರುವನು. ಅಗಣಿತವಾಗಿ ಜನವು ಸೇರಿರುವುದು. ಅರ್ಚಕರಿಗೆ ದೇವಾಲಯದೊಳಗೆ ಹೋಗಲು ಅವಕಾಶವಿಲ್ಲ. ಅವರಲ್ಲಿ ಕೆಲವರು ಆ ಜನಗಳನ್ನು ಕುರಿತು—ದೂರಹೋಗಿ; ದಾರಿಯಂ ಬಿಡಿ-ಎಂದು ಅತ್ಯಂತಕ್ರೋಧಾವಿಷ್ಟರಾಗಿ ಗಜರಿಗರ್ಜಿಸಿದರು. ಮನಸ್ಸಿನಲ್ಲಿ ಕ್ರೋಧವೆಂಬ ದುರ್ಜನನು ನೆಲಸಿರಲು, ಯಾವುದೂ ಪ್ರಿಯವಾಗಿ ತೋರುವುದಿಲ್ಲ. ಭಗವನ್ನಾಮಸಂರಂಭವನ್ನೂ ಅವರು ಅಪ್ರಿಯವಾಗಿ ಎಣಿಸಿ—ಏಕೆ ಇಂತು ವ್ಯರ್ಥವಾಗಿ ಪಾಡುವಿರಿ? ಏಕೆ ಚಪ್ಪಳೆತಟ್ಟುತ್ತ ಕುಣಿಯುವಿರಿ? ಇದಕ್ಕೆ ಪಂಢರಪುರದಲ್ಲಿಯೇ ಮಾನ್ಯತೆ. ಇದು ನಮ್ಮ ನಾಗನಾಥನಿಗೆ ಇಷ್ಟವಿಲ್ಲ. ಯಾವುದನ್ನು ಯಾವುದಕ್ಕೆ ಉಪಯೋಗಿಸಬೇಕೋ ಅದನದಕ್ಕೇ ಉಪಯೋಗಿಸುವುದು ತಕ್ಕುದು. ಹಾಲಿಗೆ ಉಪ್ಪನ್ನೂ, ಪಲ್ಯಕ್ಕೆ ಸಕ್ಕರೆಯನ್ನೂ ಹಾಕಲು, ಸರ್ವಥಾ ರುಚಿಯುಂಟಾಗಲಾರದು. ಕಿವಿಗೆ ಧೂಪವಂ ಪಿಡಿದರೆ ಆ ಸುಗಂಧದಿಂದ ಅದಕ್ಕೇನು? ನೇತ್ರಕ್ಕೆ ಪ್ರೌಢವಾದ ನುಡಿಗಳ ಚಮತ್ಕಾರದಿಂದೇನು? ನಾಲಗೆಗೆ ಕನ್ನಡಿಯಂ ತೋರಿಸಿದರೆ ಅದರಿಂದದಕ್ಕೇನು? ನೇತ್ರಕ್ಕೆ ರಸವತ್ಕಬಳದಿಂದ ಫಲನೇನು? ನಿಮ್ಮ ಈ ಕೀರ್ತನವು ಕೈಲಾಸಪತಿಯಾದ ಪಾರ್ವತೀಪತಿಗೆ ಆಗದು. ಇನ್ನು ನೀವು ಪಂಢರಪುರಕ್ಕೆ ಹೋಗಿ ಮನಸ್ಸಿಗೆ ಬಂದಂತೆ ಕುಣಿಯಿರಿ-ಎಂದು ನುಡಿಯಲು, ಅಲ್ಲಿದ್ದ ಜನಗಳು ಅವರಂ ಕುರಿತು—“ಹರಿ ಬೇರೆ ಹರನು ಬೇರೆ” ಎಂದು ನುಡಿಯಬಾರದು. ಬೆಲ್ಲವೂ ಮಾಧುರ್ಯವೂ, ದೀಪವೂ ಪ್ರಕಾಶವೂ, ಪುಷ್ಪವೂ ಪರಿಮಳವೂ, ಸೂರ್ಯನೂ ಕಿರಣವೂ, ರತ್ನವೂ ಹೊಳಪೂ, ವಾದ್ಯವೂ ಧ್ವನಿಯೂ ಎಂತು ಅಭಿನ್ನವೋ ಅಂತು ಹರಿಹರರು ಅಭಿನ್ನರೆಂದು ಸರ್ವಜ್ಞರು ನುಡಿವರು. ಈ ನಾಮಕೀರ್ತನದಿಂದ ನಾಗನಾಥನು ಸುಪ್ರೀತನಾಗುವನು—ಎಂದು ಉತ್ತರವನ್ನಿತ್ತರು. ಅದಕ್ಕೆ ಆ ಅರ್ಚಕರು ಕುಪಿತರಾಗಿ—ನೀವು ಪಾಮರರು; ನಾವು ಬ್ರಾಹ್ಮಣರು; ಸರ್ವಜ್ಞರು; ಶಾಸ್ತ್ರಾಧಿಕಾರಿಗಳು. ನಮಗೆ ನೀವು ಜ್ಞಾನವನ್ನುಪದೇಶಿಸುವಿರಾ? ಈ ಕೀರ್ತಕನ ಸಿದ್ಧಾಂತಜ್ಞಾನವು ನಮಗೊಪ್ಪುವುದಿಲ್ಲ. ದಾರಿಯಂ ಬಿಟ್ಟು ಹೊರಟುಹೋಗಿ. ಶಿವಪೂಜೆಗೆ ಹೊತ್ತಾಯಿತು—ಎನಲು ಅದಕ್ಕೆ ಅವರೆಲ್ಲರೂ ಪ್ರತ್ಯುತ್ತರವನ್ನೀಯದೆ ಸುಮ್ಮನಾದರು. ಅರ್ಚಕರಲ್ಲಿ ಮತ್ತೆ ಕೆಲವರು ಕ್ರೋಧಾವಿಷ್ಟರಾಗಿ, ತಮ್ಮವರನ್ನು ಕುರಿತು—ಈಗುಂಪಿನ ಮಧ್ಯದಲ್ಲಿ ಮುಖ್ಯನಾಗಿರುವವನನ್ನು ಮೊದಲು ಹೊಡೆದು ಓಡಿಸಿಬಿಡಿ. ಸ್ಪರ್ಶವಾದರೆ ಮತ್ತೆ ಸ್ನಾನವಮಾಡೋಣ—ಎಂದರು. ಅವರು ನಾಮದೇವನನ್ನು ಕುರಿತು. ಎಲವೋ! ಏಕಿಂತು ವ್ಯರ್ಥವಾಗಿ ಕೋಲಾಹಲವಂ ಹತ್ತಿಸುವೆ? ಶಿವಪೂಜೆಗೆ ಹೋಗಲು ನಮಗೆ ದಾರಿಯಿಲ್ಲ. ನೀನು ದೇಹಸ್ಮೃತಿಯನ್ನೂ ಬಿಟ್ಟು ನಾಮಕೀರ್ತನದಲ್ಲಿ ತತ್ಪರನಾಗಿ ಎಲ್ಲರನ್ನೂ ನಿನ್ನದಾರಿಗೇ ಎಳೆದುಕೊಂಡು ಕರ್ಮಮಾರ್ಗವಂ ಮುಳುಗಿಸುತ್ತಿರುವೆ. ಈ ಸ್ಥಳವಂ ಬಿಟ್ಟು ದೇವಾಲಯದ ಹಿಂಭಾಗ

ದಲ್ಲಿ ದೂರವಾಗಿ ನಿಂತು ನಿರ್ಲಜ್ಜನಾಗಿ ಗಾಯನವಂ ಮಾಡು ಹೋಗು—ಎನಲು ನಾಮದೇವನು ಅವರ ಮಾತಂ ಕೇಳಿ, ಆ ಬ್ರಾಹ್ಮಣರಿಗೆ ನಮಸ್ಕಾರವಂ ಮಾಡಿ, ಆಗಲಿ ತಮ್ಮ ಇಷ್ಟದಂತೆ ನಡೆವೆನು—ಎಂದು ಅಲ್ಲಿಂದ ಹೊರಟನು. ಕೀರ್ತನರಸವು ಕೆಟ್ಟಿತು. ನೆರೆದಿದ್ದ ಜನರೆಲ್ಲರೂ ಬೇಸರಗೊಂಡರು. ಸೂರ್ಯನು ಅಂತರ್ಹಿತನಾಗಲು, ಕಿರಣಂಗಳೂ ಎಂತು ಸಂಗಡವೇ ಹೋಗುವುವೋ, ರಾಜನು ಅರಣ್ಯಕ್ಕೆ ಹೊರಡಲು, ಪರಿಜನರೂ ಎಂತು ಜತೆಯೆ ಹೊರಡುವರೋ ಅಂತು ನಾಮದೇವನನ್ನೇ ಅನುಸರಿಸಿ ಹೊರಟರು.

ನಾಮದೇವನು ದೇವಸ್ಥಾನದ ಹಿಂಬಾಗವಂ ಸೇರಿ ಮೊದಲಂತೆ ಹರಿನಾಮಕೀರ್ತನವನಾರಂಭಿಸಿದನು. ಜನಗಳೂ ನಾಮಕೀರ್ತನದಲ್ಲಿ ತತ್ಪರರಾದರು. ಕ್ರಮದಿಂದ ಕೀರ್ತನಸಂರಂಭವು ರಸವತ್ತರವಾಗಿ ಪರಿಣಮಿಸಿತು. ನಾಮದೇವನು ಕಣ್ಣುಗಳಿಂದ ಬಾಷ್ಪವಂ ಸುರಿಯಿಸುತ್ತ—ಪತಿತಪಾವನನೆ! ರುಕ್ಮಿಣೀರಮಣನೆ! ನನ್ನನ್ನು ವಿದೇಶದಲ್ಲಿ ಏಕೆ ತೊರೆದೆ? ಹುಲ್ಲೆಯು ಮರಿಯನ್ನು ಮರೆವಂತೆ, ಪಕ್ಷಿಯು ಪಿಳ್ಳೆಯಂ ಮರೆವಂತೆ ನೀನು ನನ್ನನ್ನು ಮರೆಯಬಹುದೇ? ಚಂದ್ರನು ಚಕೋರದ ವಿಷಯದಲ್ಲಿ ಕೋಪಿಸಿಕೊಳ್ಳುವಂತೆ ನೀನು ನನ್ನವಿಷಯದಲ್ಲಿ ಕೋಪಿಸಿಕೊಳ್ಳಬಹುದೇ! ದೃಷ್ಟಿಯು ನೇತ್ರವನ್ನು ಉಪೇಕ್ಷಿಸುವಂತೆ ನೀನು ನನ್ನನ್ನು ಉಪೇಕ್ಷಿಸಬಹುದೇ "ಪಂಢರಪುರಾಧೀಶನೇ! ನನ್ನ ಮರೆವು ನಿನಗೆ ಎಂತು ಉಂಟಾಯಿತು" ಸಮುದ್ರವಲಯಾಂಕಿತವಾದ ಭೂಮಿಯನೆಲ್ಲವಂ ತಿರುಗಿದೆನು. ಸಕಲತೀರ್ಥಂಗಳನ್ನೂ ನೋಡಿದೆನು. ನಿನ್ನಂತಹ ಸ್ವಾಮಿಯನೆಲ್ಲಿಯೂ ನೋಡಲಿಲ್ಲ. ಪಾದಾರವಿಂದಗಳನ್ನು ಇಟ್ಟಿಗೆಯಮೇಲೆ ಸಮನಾಗಿಟ್ಟು, ಕರಾರವಿಂದಗಳನ್ನು ಕಟಿಯಲ್ಲಿ ಇರಿಸಿಕೊಂಡು ಲೀಲಾವಿಶೇಷದಿಂದ ನಿಂದಿರುವ ರುಕ್ಮಿಣೀಪತಿಯಾದ ನಿನ್ನನ್ನು ಧ್ಯಾನಮಾಡಲು, ದೇಹಭಾವವೇ ಲೀನವಾಗಿಹೋಗುವುದು. ನಿನ್ನ ಕೀರ್ತನದ ಸಂರಂಭದಲ್ಲಿ ಮೊಳಗುತ್ತಿರುವ ತಾಳತಂಬೂರಿಮದ್ದಲೆಗಳ ಮಹಾಘೋಷವು ಕರ್ಣಾನಂದಕರವಾಗಿ ಇರುವುದು. ಶೋಭಿಸುತ್ತಿರುವ ಗರುಡಪತಾಕೆಗಳು ನೇತ್ರಾನಂದವನ್ನುಂಟುಮಾಡುತ್ತಿರುವುವು. ಪರಮಪುರುಷನೆ! ನನ್ನನ್ನು ರಕ್ಷಿಸು—ಎಂದು ಬಗೆಬಗೆಯಿಂದ ಗದ್ಗದಕಂಠನಾಗಿ ನುಡಿಯುತ್ತಿರಲು, ಅಲ್ಲಿ ಒಂದಾಶ್ಚರ್ಯವು ನಡೆಯಿತು:—

ಆ ಕೀರ್ತನರಂಗದೆಡೆಯಲ್ಲಿ ಅನೇಕಪತಾಕೆಗಳು ಮಿಂಚಿನಂತೆ ಗಗನದಲ್ಲಿ ನಿಂದುವು. ಅವಂ ನೋಡಿ ಎಲ್ಲರೂ ವಿಸ್ಮಿತರಾದರು. ಕೃಷ್ಣಪಕ್ಷದ ರಾತ್ರಿಯಾದುದರಿಂದ ಕತ್ತಲೆ ಮುಚ್ಚಿಕೊಂಡಿದ್ದಿತು. ಆ ಪತಾಕೆಗಳ ತೇಜಸ್ಸಿನಿಂದ ಪ್ರಕಾಶವಾಯಿತು. ನಾಮದೇವನು ಆಕಸ್ಮಿಕವಾಗಿ ಗಗನದಲ್ಲಿ ಹೊಳೆಯುತ್ತಿರುವ ಅನೇಕಪತಾಕೆಗಳಂ ಕಂಡು ಶ್ರೀವಿಠ್ಠಲನ ಮಹಿಮೆಯಂ ನೆನೆಯುತ್ತ:: ಈ ಕೀರ್ತನಸಂರಂಭದಲ್ಲಿ ಕೊರತೆಯೇನೂ ಇಲ್ಲ. ಆದರೆ ಭಗವಂತನಾದ ನಾಗನಾಥನು ಪರಾಙ್ಮುಖನಾಗಿರುವನು. ನನ್ನಿಂದ ಏನಪರಾಧವು ಸಂಭವಿಸಿರುವುದೋ? ಈ ಸ್ವಾಮಿಯು ಅಭಿಮುಖ

ನಾಗಿದ್ದರ ಕೀರ್ತನಕ್ಕೆ ಕಳೆಯು ಹೆಚ್ಚುತಿದ್ದಿತು—ಎಂದಾಲೋಚಿಸಿ—ರುಕ್ಮಿಣೀಪತಿಯೇ! ಕ್ಷೀರಸಾಗರವಿಹಾರಿಯೇ! ಲಕ್ಷ್ಮೀನಿವಾಸನೇ! ಮಹೋದರನೇ! ಅನಾಥನಾಥನೆ! ಗಜೇಂದ್ರವರದನೇ! ವಿಧಿಜನಕನೆ! ಯಾದವನಾಯಕನೇ! ನಾಮಮಾತ್ರದಿಂದ ಉಂಟಾಗಿರುವ ಭೇದವನ್ನು ದೂರಮಾಡಿ ನನಗೆ ಪ್ರಸನ್ನನಾಗು. ಅನೇಕಭಕ್ತರ ಅನೇಕಮನೋರಥವನ್ನೂ ಪೂರಣಮಾಡಿ ಅಸಾಧಾರಣವಾದ ಕೀರ್ತಿಯಂಪಡೆದಿರುವೆ. ಅವಿಂಧನು ಕೀರ್ತನರಂಗದಲ್ಲಿ ಹಸುವನ್ನು ಕೊಂದು ಸಂಕಟವನ್ನುಂಟುಮಾಡಿದಾಗ ನನ್ನ ಪ್ರಾರ್ಥನೆಯನ್ನು ಲಾಲಿಸಿ ಪ್ರಸನ್ನನಾಗಿ ಬಂದು ಹಸುವನ್ನು ಬದುಕಿಸಿದೆ. ಅರಣ್ಯದಲ್ಲಿ ನನಗೆ ಬಾಯಾರಿಕೆಯಾಗಲು, ತ್ವರೆಯಿಂದ ಪ್ರಸನ್ನನಾಗಿ ಪ್ರವಾಹವನ್ನೇ ಮೇಲೆ ಹರಿಯಿಸಿದೆ. ಕರುಣಾನಿಧಿಯೇ! ಇಂದದೇಕೆ ನನ್ನ ವಿಷಯದಲ್ಲಿ ಪರಾಙ್ಮುಖನಾಗಿರುವೆ? ಬೇಗನೆ ಕೃಪಾದೃಷ್ಟಿಯಿಂದ ನೋಡು. ನೀನಲ್ಲದೆ ನನ್ನನ್ನು ರಕ್ಷಿಸುವರಾರು?—ಎಂದು ತದೇಕಾಯತ್ತಚಿತ್ತನಾಗಿ ಪ್ರಾರ್ಥನೆಯಂ ಮಾಡುತ್ತಿರಲು, ಶ್ರೀನಾಗನಾಥೇಶ್ವರನು ಥಟ್ಟನೆ ತಿರುಗಿ ಅಭಿಮುಖನಾದನು. ಅಲ್ಲಿದ್ದವರೆಲ್ಲರೂ ನೋಡಿ ಆಶ್ಚರ್ಯಪಟ್ಟರು. "ಧನ್ಯಕಾಲವಿದು. ಇಂದು ಸುದಿವಸವು. ಶ್ರೀಚಂದ್ರಮೌಳಿಯು ಕೀರ್ತನವಂ ಕೇಳುವುದಕ್ಕೋಸ್ಕರ ನಾಮದೇವನಿಗೆ ಪ್ರಸನ್ನನಾದನು. ನಾಮದೇವನು ಧನ್ಯನು; ಮಹಾನುಭಾವನು." ಎಂದು ಅಭಿನಂದಿಸಿದರು. ಪೂರ್ವಾಭಿಮುಖವಾಗಿರುವಂತೆ ಈಗಲೂ ತೋರುತ್ತಿರುವುದು.

ನಾಮದೇವನು ಪ್ರಸನ್ನನಾದ ನಾಗನಾಥನನ್ನು ಕಂಡು ಆನಂದಭರಿತನಾಗಿ—ಕೃಪಾಳುವಾದ ಶ್ರೀರುಕ್ಮಿಣೀನಾಥನು ನನ್ನ ಮನೋರಥವಂ ಪೂರಣಮಾಡಿದನು—ಎಂದು ಮನದಲ್ಲಿ ಎಣಿಸಿ ಅತಿಶಯದಿಂದ ಭಗವನ್ನಾಮಕೀರ್ತನೆಯಂ ಮಾಡುತಿದ್ದನು.

ಇಂತು ಆ ಶಿವರಾತ್ರಿಯ ದಿನದಲ್ಲಿ ಅದ್ಭುತವಾದ ಕೀರ್ತನಸಂರಭವು ಬಳೆದುದು. ಸೂರ್ಯೋದಯವಾಯಿತು. ಬ್ರಾಹ್ಮಣರು ಪೂಜೆಯಂ ನೆರವೇರಿಸಿಕೊಂಡು ಹೊರಗೆ ಬಂದು ನೋಡಲು, ಇದಿರಾಗಿಯೇ ನಾಮದೇವನ ಕೀರ್ತನವು ಆಗುತಿದ್ದಿತು. ಅಲ್ಲಿಂದ ತೀರ್ಥದ ಬಳಿಗೆ ಬಂದು ಸ್ನಾನವಂ ಮಾಡಿ ಅರ್ಘ್ಯಪ್ರದಾನವಂ ಮಾಡಲು ನೋಡಿದಾಗ ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಉದಯಿಸಿದಂತೆ ತೋರಲು—ನಮಗೆ ಜಾಗರದಿಂದ ಇಂತು ದಿಗ್ಭ್ರಮವುಂಟಾಗಿರುವುದೋ? ಅಥವಾ ನಾಮದೇವನಿಗೆ ಪರಮೇಶ್ವರನು ಪ್ರಸನ್ನನಾಗಿ ಅಭಿಮುಖನಾದನೋ?—ಎಂದು ಬಗೆದು, ಬಳಿಕ ಸುತ್ತಲೂ ಚೆನ್ನಾಗಿ ನೋಡಲು, ನದಿ ಮುಂತಾದುದೆಲ್ಲವೂ ಆಯಾಸ್ಥಳದಲ್ಲಿಯೇ ಕಾಣಿಸಿದುದರಿಂದ ನಾಗನಾಥನೇ ಅಭಿಮುಖನಾದನೆಂದು ನಿಶ್ಚಯಿಸಿಕೊಂಡು, ಈ ನಾಮದೇವನ ಮಹಿಮೆಯು ಅಮೇಯವಾದುದೆಂದೆಣಿಸಿ, ವ್ಯರ್ಥವಾಗಿ ಈತನನ್ನು ನಾವು ನಿರಾಕರಿಸಿದೆವು-ಎಂದು ಪಶ್ಚಾತ್ತಾಪವಂ ತಾಳಿ, ಕೀರ್ತನರಂಗಕ್ಕೆ ಬಂದು, ನಾಮದೇವನಂ ಕುರಿತು-ಅಯ್ಯಾ ನಾಮದೇವನೆ! ನೀನು ಧನ್ಯನು; ಮಹಾಭಾಗವತನು. ಉದ್ಧವನ ಪೂರ್ಣಾವತಾರ

ನೆಂದು ಈಗ ದೃಢವಾಗಿ ತಿಳಿದೆವು. ನೀನು ಯಾರೂ ಕಾಣದ ಕೇಳದ ಅಘಟಿತವಾದ
ಎಸಕವನ್ನು ಎಸಗಿದೆ. ಇಂತಹ ಭಾಗ್ಯವಂತನನ್ನು ಪಡೆದ ನಿನ್ನ ಜನನಿಯು ಧನ್ಯೆ.
ಚಂದ್ರಸೂರ್ಯರಿರುವವರೆಗೂ ನಿನ್ನ ಅದ್ಭುತವಾದ ಕೀರ್ತಿಯು ಲೋಕದಲ್ಲಿ ಪ್ರಕಾ
ಶಿಸುತ್ತಿರುವುದು. ನಿನ್ನ ಚರಿತ್ರೆಯಂ ಯಾರು ಪಾಡುವರೋ ಕೇಳುವರೋ ಅವರು
ಧನ್ಯರು-ಎಂದು ಹಲವುಬಗೆಯಿಂದ ಅಭಿನಂದನವಂ ಮಾಡಲು, ನಾಮದೇವನು–
ಎಲ್ಲವೂ ಶ್ರೀಹರಿಯ ಮಹಿಮೆ ; ನಾನು ಕಿಙ್ಕರನು–ಎಂದು ನುಡಿದು ಆಗ ಕಣ್ಣಾ
ಗಳಂ ತೆರೆದು ಮಂಗಳದಾರತಿಯನ್ನೆತ್ತಿ ಭಗವಂತನಿಗೆ ಸಾಷ್ಟಾಂಗನಮಸ್ಕಾರವಂಮಾಡಿ
ದನು. ಗಗನದಲ್ಲಿದ್ದ ಪತಾಕೆಗಳೆಲ್ಲವೂ ಆಕ್ಷಣದಲ್ಲಿ ಅದೃಶ್ಯಗಳಾದುವು. ಭಕ್ತಾಭಿ
ಮಾನಿಯಾದ ಶ್ರೀಹರಿಯು ಭಕ್ತನ ಸಂಕಟವನ್ನು ಪರಿಹರಿಸಿದನು. ದೇವತೆಗಳಲ್ಲಿ
ಶಚೀಪತಿಯು ಎಂತು ಮುಖ್ಯನೋ ಹರಿಭಕ್ತರಲ್ಲಿ ನಾಮದೇವನು ಅಂತು ಮುಖ್ಯನು.
ಭಕ್ತಿಯ ವಿಷಯದಲ್ಲಿ ನಾಮದೇವನಿಗೆ ಸಮನು ಅವನೇ ಅಲ್ಲದೆ ಮತ್ತಾವನೂ ಇಲ್ಲ.
ಅಮೃತಕ್ಕೆ ಸಾಮ್ಯವನ್ನು ಹೇಳುವುದಾದರೆ ಇನ್ನು ಅಂತಹ ರಸವು ಯಾವುದು ಇರು
ವುದು ? ಗಂಗೆಗೆ ಸಮಾನವಾದ ಪಾವನತೀರ್ಥವಿನ್ನಾವುದು ? ಬಳಿಕ ನಾಮದೇವನು
ಜ್ಞಾನದೇವನೊಡನೆ ನಾಗನಾಥಭೂಪನಾದ ನಾಗನಾಥನಿಗೆ ಸಾಷ್ಟಾಂಗನಮಸ್ಕಾರವಂ
ಮಾಡಿ ಅಲ್ಲಿಂದ ಹೊರಟು ಮಾರ್ಗವಂ ನಡೆಯುತ್ತಿರಲು, ಪಂಢರಪುರದ ದಾರಿಯು
ಕಣ್ಣಿಗೆ ಕಾಣಿಸಿತು. ಅತ್ತೆಮನೆಯಿಂದ ಹೊರಟ ಸೊಸೆಯು ತೌರೂರಂ ಕಂಡು
ಎಂತು ಹಿಗ್ಗುವಳೋ, ವಿದೇಶದಲ್ಲಿ ಓದುತ್ತಿದ್ದ ಬಾಲಕನು ತನ್ನ ಜನ್ಮಸ್ಥಾನವಂ ಕಂಡು
ಎಂತು ಉಲ್ಲಾಸಗೊಳ್ಳುವನೋ ಅಂತು ಪಂಢರಪುರದ ದಾರಿಯಂ ಕಂಡು ಸಂತೋ
ಷಿಸಿದನು. ತ್ವರೆಯಿಂದ ನಡೆಯುತ್ತ ಬರಲು, ಪುರದ ಕಲಶವು ದೃಗ್ಗೋಚರವಾ
ಯಿತು. ಇಬ್ಬರೂ ಪಟ್ಟಣದೊಳಗೆ ಪ್ರವೇಶಿಸಿದರು. ತಾಳತಂಬೂರಿಗಳ ನಾದ
ದೊಡನೆ ಭಗವನ್ನಾಮಕೀರ್ತನವಂ ಮಾಡುತ್ತ ದೇವಸ್ಥಾನದ ಮಹಾದ್ವಾರವಂ
ಸೇರಿ ಸಾಷ್ಟಾಂಗನಮಸ್ಕಾರವಂ ಮಾಡಿದರು. ಭೂಮಿಯಲ್ಲಿ ಬಿದ್ದ ದಂಡವು ಎಂತು
ನಿಶ್ಚೇಷ್ಟಿತವಾಗಿರುವುದೋ ಅಂತು ದಂಡವತ್ಪ್ರಣಾಮವಂ ಗೈದ ನಾಮದೇವನು
ದೇಹಭಾವವಂ ಮರೆತು ಬಹುಕಾಲದವರೆಗೆ ನಿಶ್ಚೇಷ್ಟಿತನಾಗಿದ್ದನು.

ಜ್ಞಾನದೇವನು ಶೈತ್ಯೋಪಚಾರವನ್ನೆಸಗಿ ದೇಹಸ್ಮೃತಿಯನ್ನುಂಟುಮಾಡಿ
ಎಬ್ಬಿಸಿ ಆತನ ಕೈಯಂ ಹಿಡಿದುಕೊಂಡು ಸ್ವಾಮಿಯ ಸನ್ನಿಧಿಗೆ ಬಂದನು.

ನಾಮದೇವನು ಭಗವಂತನನ್ನು ಕಣ್ಣಾರೆನೋಡಿ ಮತ್ತೆ ಆಲಿಂಗಿಸಿ ಪರಮಾ
ನಂದಭರದಿಂದ ಕಣ್ಣುಗಳಲ್ಲಿ ಬಾಷ್ಪವು ತುಂಬಿತುಳುಕಾಡುತ್ತಿರಲು, ಗದ್ಗದಸ್ವರಯುಕ್ತ
ನಾಗಿ ಸ್ವಾಮಿಯನ್ನು ಕುರಿತು–ಎಲೈ ದೀನದಯಾಳುವೆ ! ನಿನ್ನನಗಲಿ ನಾನು ಬಹು
ವಾಗಿ ದಣಿದೆನು. ಅಪಾರವಾದ ವ್ಯಾಕುಲತೆಯಂ ತಾಳಿದೆನು. ಕರುಣಾಕಟಾಕ್ಷದಿಂದ
ನನ್ನನ್ನು ನೋಡು. ಅಜ್ಞಾನದಕಳೆಯು ಮನದಲ್ಲಿ ಆವರಿಸಿದ್ದಿತು. ಆದರಿಂದಲೇ

ಊರೂರಂ ಸುತ್ತಿದೆನು. ಆದರೂ ಈ ಪಂಡರಪುರದ ಸುಖವನ್ನು ಸ್ವಪ್ನದಲ್ಲಿಯೂ ಕಾಣಲಿಲ್ಲ. ಮಹಾಮಹಿಮೆಯುಳ್ಳ ಬಹುತೀರ್ಥಂಗಳನ್ನು ಸೇವಿಸಿದೆನು. ಆದರೂ ನನ್ನ ಮನಸ್ಸಿಗೆ ಚಂದ್ರಭಾಗೆಗೆ ಸಮಾನವಾದುದು ಆವುದೂ ತೋರಲಿಲ್ಲ. ಎಷ್ಟೋ ದೇವತಾಮೂರ್ತಿಗಳನ್ನು ಕಂಡೆನು. ಅವ್ಯಾಜಕರುಣಾಮೂರ್ತಿಯಾದ ನಿನ್ನಂತಹ ಪತಿತಪಾವನನು ನನ್ನ ಮನಸ್ಸಿಗೆ ಯಾರೂ ತೋರಲಿಲ್ಲ. ಇಲ್ಲಿಯ ಅಂತಹ ಗರುಡ ಪತಾಕಾದಿಚಿಹ್ನಂಗಳು ಎಲ್ಲಿ ಇಲ್ಲವೋ ಅಲ್ಲಿ ಆ ದೇವರಂ ಕಾಣುವುದೂ, ನನ್ನ ಮನಸ್ಸಿಗೆ ಸಂಕೋಚವಾಗುತಿದ್ದಿತು. ನಿನ್ನಗಲಿಕೆಯ ವ್ಯಸನವು ಮನದಲ್ಲಿ ಹೆಚ್ಚುತಿದ್ದಿತು. ಬಳಿಕ ನಿನ್ನ ರೂಪವನ್ನೇಧ್ಯಾನಿಸಿ ಸಮಾಧಾನವಂ ಹೊಂದುತಿದ್ದೆನು. ಇಷ್ಟನೂ ಮಿತ್ರನೂ ನಂಟನೂ ಆಪ್ತನೂ ಕುಲದೈವತವೂ ನನ್ನ ಸರ್ವಸ್ವವೂ ನೀನೆ. ಬಹುವಾಗಿ ನಿನ್ನನ್ನು ನಾನು ಆಯಾಸಗೊಳಿಸಿದೆನು. ನನ್ನ ಅಪರಾಧವನ್ನು ಕ್ಷಮಿಸು-ಎಂದು ಮತ್ತೆ ಅಭಿವಂದಿಸಿದನು.

ಸ್ವಾಮಿಯು ಪ್ರಸನ್ನನಾಗಿ ನಾಮದೇವನನ್ನು ಕುರಿತು-ಎಲೆ ನಾಮದೇವನೆ! ನಿನ್ನ ಅಗಲಿಕೆಯ ವ್ಯಸನವೇ ನನಗೂ ಬಹುವಾಗಿದ್ದಿತು. ಹಗಲೂ ರಾತ್ರಿಯೂ ನಿನ್ನ ಮಾರ್ಗವನ್ನೇ ಇದಿರು ನೋಡುತಿದ್ದೆನು. ನೀನು ದೂರದಲ್ಲಿರುವಾಗ ಪಂಡರಪುರವೇ ನನಗೆ ಬೇಸರಹುಟ್ಟುಮಾಡುತಿದ್ದಿತು. ಕ್ಷಣವೂ ನಿನ್ನ ಮರವು ನನಗುಂಟಾಗಲಿಲ್ಲ. ಇನ್ನು ಮೇಲೆ ನೀನು ಮರೆಯಾಗದಿರು. ನನ್ನ ಸ್ವರೂಪದಲ್ಲಿಯೇ ದೃಷ್ಟಿಯನ್ನಿಟ್ಟು ನಿಶ್ಚಲತೆಯಿಂದಿರು. ಯಾರಾದರೂ ನನ್ನ ಅಂತರಂಗದ ಭಕ್ತರಾದ ಜಾತ್ರಿಗರು ಕಣ್ಣಿಗೆ ಬಿದ್ದರೆ, ನಮ್ಮ ನಾಮನು ನಿನಗೆ ಎಲ್ಲಿಯಾದರೂ ಗೋಚರನಾದನೇ ? ಸುಖದಿಂದಿರುವನೇ ?-ಎಂದು ಯೋಗಕ್ಷೇಮವನ್ನು ವಿಚಾರಿಸುತಿದ್ದೆ. ಸರ್ವಕಾಲದಲ್ಲಿಯೂ ನಿನ್ನ ಸ್ಮರಣೆಯೇ ನನಗೆ ಇದ್ದಿತು-ಎಂದು ನುಡಿಯುತಿರಲು, ಅನೇಕಭಕ್ತರು ಸನ್ನಿಧಿಗೆ ಬಂದು ನಾಮಕೀರ್ತನವಂ ಮಾಡಿ ಭಗವಂತನನ್ನು ಹಾಡಿಕೊಂಡರು. ನಾಮದೇವನು ಸ್ವಾಮಿಗೆ ಮಂಗಳನೀರಾಜನವನೆತ್ತಿ ಆನಂದದಿಂದ ಭಜನೆಮಾಡುತಿದ್ದನು.

ನಾಮದೇವನು ಬಳಿಕ ತೀರ್ಥಯಾತ್ರಾನಿಮಿತ್ತವಾಗಿ ಬ್ರಾಹ್ಮಣಸಂತರ್ಪಣೆಯಂ ಮಾಡಬೇಕೆಂದು ಭಗವಂತನಿಂದ ಪ್ರೇರಿತನಾಗಿ ಮನದಲ್ಲಿ ಎಣಿಸಲು, ಲೀಲಾಲೋಲನಾದ ಆ ಸ್ವಾಮಿಯು ತಾನೇ ಪ್ರಸನ್ನನಾಗಿ ವೃದ್ಧಬ್ರಾಹ್ಮಣರೂಪದಿಂದ ನಿಂತು ವಿನೋದಪಡುತ್ತ ಅದ್ಭುತನೆನಿಸಿ ಆತನ ಮನೋರಥವನ್ನು ಪೂರ್ಣಮಾಡಿದನು.

ಮುಂದಣ ಅಧ್ಯಾಯದಲ್ಲಿ ಕಥಾರಸವು ಅದ್ಭುತವಾಗಿರುವುದು. ಶ್ರೀಹರಿಯು ನುಡಿವನು. ಸಾಧುಸಜ್ಜನರ ಚರಣಕಿಂಕರನಾದ ಮಹೀಪತಿಯು ನಿಮಿತ್ತಮಾತ್ರನು.

ಇಂತು ಶ್ರೀಭಕ್ತವಿಜಯದಲ್ಲಿ ಹನ್ನೆರಡನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹದಿಮೂರನೆಯ ಅಧ್ಯಾಯ.

ಕೂರ್ಮದಾಸನ ಚರಿತ್ರೆ.

ಎಲೈ ಶ್ರೋತೃಗಳಿರಾ! ಆದರದಿಂದ ಆಲಿಸಿ. ಇಂದು ರಸನೇಂದ್ರಿಯಕ್ಕೆ ಪರಮಾಮೃತವು ದೊರೆತಿರುವುದು. ನಿಮ್ಮಂತಹ ಭಾಗ್ಯಶಾಲಿಗಳು ಮತ್ತಾರೂ ನನಗೆ ಕಾಣಲಿಲ್ಲ. ದೇವತೆಗಳಲ್ಲಿ ವೈಕುಂಠನಾಥನು ಶ್ರೇಷ್ಠನು. ಆತನ ಪ್ರೀತಿಗೆ ಪಾತ್ರಭೂತರು ಭಕ್ತರು. ಅಂತಹ ಭಕ್ತರ ಚರಿತ್ರೆಯು ಪ್ರಕಟವಾಗಿರುವುದು. ಆ ಸದ್ಭಕ್ತರ ಚರಿತ್ರೆಯಂ ಪಾಡಲು, ರುಕ್ಮಿಣೀಕಾಂತನು ಸುಪ್ರೀತನಾಗುವನು. ಚಂದಿರನ ಅಭ್ಯುದಯವಂ ತಿಳಿದು ಸಮುದ್ರರಾಜನು ಎಂತು ಉಲ್ಲಾಸಗೊಳ್ಳುವನೋ, ಶ್ರೀಮಹಾಗಣಪತಿಯು ಸ್ತೋತ್ರವಂ ಮಾಡಲು, ಪಾರ್ವತೀಪರಮೇಶ್ವರರು ಎಂತು ಸಂತೋಷಪಡುವರೋ, ಸಚ್ಛಿಷ್ಯನು ವಿಜ್ಞಾನವೃತ್ತಿಯುಳ್ಳವನಾಗಲು, ಸದ್ಗುರುವೆಂತು ಆನಂದಭರಿತನಾಗುವನೋ, ಮಗನ ಗುಣಂಗಳಂ ವರ್ಣಿಸಲು, ತಾಯಿಯು ಎಂತು ಹಿಗ್ಗುವಳೋ, ನಾರದನ ಗುಣಂಗಳಂ ಬಣ್ಣಿಸಲು, ಬ್ರಹ್ಮದೇವನು ಎಂತು ಹರ್ಷಹೊಂದುವನೋ ಅಂತು ತನ್ನ ಭಕ್ತರ ಚರಿತ್ರೆಯಂ ಕೇಳಲು, ಜಗನ್ನಾಥನು ಸಂತೋಷಪಡುವನು. ಸಂತುಷ್ಟನಾಗಿ ಶ್ರೋತೃಗಳಿಗೂ ವಕ್ತೃಗಳಿಗೂ ಪರಮಪದವಂ ನೀಡುವನು. ಈ ಕಾರಣದಿಂದ ಎಲೈ ಶ್ರೋತೃಗಳಿರಾ! ನೀವು ಭಾಗ್ಯವಂತರೆನಿಸಿಕೊಂಡಿರುವಿರಿ. ಪರಮಪದಕ್ಕಿಂತಲೂ ಅಪೇಕ್ಷಣೀಯವಾದುದು ಮತ್ತೊಂದಾವುದೂ ಇಲ್ಲ.

ಪೈಠಣನಗರದಲ್ಲಿ ಕೂರ್ಮದಾಸನೆಂಬ ಒಬ್ಬ ಬ್ರಾಹ್ಮಣನು ಇದ್ದನು. ಆತನು ಪರಮಭಾವುಕನು. ಅವನಿಗೆ ಕೈಕಾಲುಗಳು ಇರಲಿಲ್ಲ. ಸೂರ್ಯಸಾರಥಿಯಾದ ಅರುಣನೇ ಶ್ರೀಹರಿಯ ಭಜನೆಯಂ ಮಾಡಲು ಭೂಮಿಯಲ್ಲಿ ಬ್ರಾಹ್ಮಣಕುಲದಲ್ಲಿ ಅವತರಿಸಿದಂತೆ ತೋರುತಿದ್ದನು. ಹುಟ್ಟುವಾಗಲೇ ಅವನಿಗೆ ಕೈಕಾಲುಗಳು ಇರಲಿಲ್ಲ. ಆತನು ಎಲ್ಲೆಲ್ಲಿ ಹರಿಕೀರ್ತನೆಯಾಗುವುದೋ ಆಯಾಸ್ಥಳಕ್ಕೆ ಪ್ರಯತ್ನದಿಂದ ದೇಗಿಕೊಂಡುಹೋಗಿ ಅಲ್ಲಿ ಕುಳಿತುಕೊಂಡು, ತಾಳಮದ್ದಲೆಗಳಂ ಬಾಜಿಸುತ್ತ ಭಾಗವತರು ಪಾಡುವ ಹರಿನಾಮಗಳನ್ನು ಭಕ್ತಿಯಿಂದ ಶ್ರವಣಮಾಡುತಿದ್ದನು.

ಒಂದು ದಿವಸ ಹರಿದಾಸರು ಪಂಢರಪುರದ ಮಾಹಾತ್ಮ್ಯವನ್ನು ಸುರಸವಾಗಿ ಬಣ್ಣಿಸುತ್ತಿರಲು, ಅದಂ ಕೇಳಿ ಕೂರ್ಮದಾಸನು ಪರಮೋಲ್ಲಾಸವಂ ತಾಳಿ ಬದ್ಧಾಂಜಲಿಪುಟನಾಗಿ-ನಾನು ಪಂಢರಪುರಕ್ಕೆ ಹೋಗಬೇಕೆಂದರೆ, ರುಕ್ಮಿಣೀಪತಿಯು ನನ್ನನ್ನು ಬರಮಾಡಿಕೊಳ್ಳುವನೇ?—ಎಂದನು.

ಅಲ್ಲಿದ್ದವರು ಈ ಮಾತಂ ಕೇಳಿ ನಗುತ್ತ–ನಿನಗೆ ಕೈಕಾಲುಗಳೇ ಇಲ್ಲ. ನೀನದೆಂತು ಹೋಗುವುದು? ಪಕ್ಷವಿಲ್ಲದ ಪಕ್ಷಿಯು ಎಂತು ಹಾರುವುದು? ಕಣ್ಣಿಲ್ಲದವನು ದರ್ಶನೀಯವಾದುದನ್ನು ನೋಡುವುದೆಂತು? ಕಿವುಡನು ಕೀರ್ತನವಂ ಕೇಳುವುದೆಂತು? ಗಂಟಲಿಲ್ಲದವನು ಗಾನವಂ ಮಾಡುವುದೆಂತು? ಬಡವನು ಯಾಚಕರ ಮನಸ್ಸನ್ನು ಸಂತೋಷಪಡಿಸುವುದೆಂತು? ವಿದ್ಯಾಹೀನನು ಸನ್ಮಾನವಂ ಬಯಸುವುದರಿಂದ ಫಲವೇನು? ಮನಸ್ಸ್ವಾಸ್ಥ್ಯವಿಲ್ಲದವನು ಯೋಗಸಾಧನವನ್ನೇಕೆ ಅಪೇಕ್ಷಿಸಬೇಕು? ಸದ್ಗುರುಕೃಪೆಯಿಲ್ಲದವನಿಗೆ ಆತ್ಮಜ್ಞಾನವೆಂತು ಉಂಟಾಗುವುದು? ನೀನು ಹೆಳವನು; ಪಂಢರಪುರಕ್ಕೆ ಹೋಗಬೇಕೆಂದು ಅಪೇಕ್ಷಿಸುವುದು ಪರಿಹಾಸಾಸ್ಪದವಲ್ಲವೆ? ನಮಗೆ ಧನಸಂಪತ್ತಿಯಿದೆ. ಶರೀರದಲ್ಲಿ ಆರೋಗ್ಯವಿದೆ. ದೃಢಾಂಗರಾಗಿರುವೆವು. ಬಹುದಿವಸಗಳವರೆಗೆ ಪ್ರಯತ್ನಪಟ್ಟರೂ ಆ ಕ್ಷೇತ್ರಯಾತ್ರೆಯು ನಮಗೆ ಘಟಿಸಲಿಲ್ಲ. ಇಂತಿರಲು, ಬಡವನೂ ಹೆಳವನೂ ಆದ ನಿನಗೆ ಆ ಯಾತ್ರೆಯು ಸಾಧ್ಯವೇ?–ಎನಲು, ಅದಕ್ಕೆ ಕೂರ್ಮದಾಸನು–ದುರ್ಲಭವಾದ ಈ ನರದೇಹವು ಪ್ರಾಪ್ತವಾಗಿರುವಲ್ಲಿ ಈಗಲೂ ಪುಣ್ಯತಮವಾದ ಆ ಕ್ಷೇತ್ರದ ಯಾತ್ರೆಯಂ ಮಾಡದಿದ್ದರೆ, ಮುಂದೆ ಅವಶ್ಯವಾಗಿ ಅನುಭವಿಸತಕ್ಕ ಅನೇಕನೀಚಜನ್ಮಗಳಲ್ಲಿ ಎಂತು ಘಟಿಸುವುದು?–ಎಂದು ಅನುತಪ್ತನಾಗಿ ಶ್ರೀರುಕ್ಮಿಣೀಪತಿಯಂ ಧ್ಯಾನಿಸುತ್ತ ಆಕ್ಷಣವೇ ಅಲ್ಲಿಂದ ಹೊರಟು ಮೆಲ್ಲನೆ ತೆವಳುತ್ತ ಗಮಿಸಿ ಬಂದು ಹರಿದಾರಿಯದೂರದೊಳಿದ್ದ ಮಾರುತಿದೇವಾಲಯವನ್ನು ಸೇರಿದನು. ಆಗ ಅವನಿಗೆ ಹಸಿವೂ ಬಾಯಾರಿಕೆಯೂ ಬಹಳವಾಗುಂಟಾಯಿತು. ಚಿಂತಾಕ್ರಾಂತನಾಗಿ–ಪಂಢರೀನಾಥನೆ! ರುಕ್ಮಿಣೀಕಾಂತನೆ! ನೀನು ಈಗ ನನ್ನನ್ನು ಸಂರಕ್ಷಿಸಬೇಕು. ನೀನಲ್ಲದೆ ನನಗೆ ಗತಿಯಿನ್ನಾರೂ ಇಲ್ಲ. ನೀನೇ ತಾಯಿ ತಂದೆ ಬಂಧು ಬಳಗ. ನೀನೇ ನನ್ನ ಪ್ರಾಣವು. ನಿನ್ನನ್ನು ಅನನ್ಯಭಾವದಿಂದ ಶರಣುಹೊಕ್ಕಿರುವೆನು. ಅನಾಥನಾದ ನನ್ನನ್ನು ಕರುಣದಿಂದ ಕಾಪಾಡು–ಎಂದು ಮೊರೆಯಿಡಲು, ದೀನದಯಾಳುವಾದ ಭಗವಂತನು ಅವನ ದೀನವಚನವಂ ಕೇಳಿ ದಯೆಯಿಂದ ಒಬ್ಬ ವರ್ತಕನಾಗಿ ಅಲ್ಲಿಗೆ ಬಂದು–ನೀವುಯಾರು? ನಿಮ್ಮ ಹೆಸರೇನು?–ನಿಮಗೆ ಕೈಕಾಲುಗಳೇ ಇಲ್ಲವಲ್ಲಾ! ಎಲ್ಲಿಗೆ ಪ್ರಯಾಣವನ್ನು ಮಾಡುವಿರಿ?–ಎಂದು ಬೆಸಗೊಂಡನು.

ಕೂರ್ಮದಾಸನು ಅದಕ್ಕೆ–ನಾನು ಪೈಠಣನಗರದವನು. ನನ್ನ ಹೆಸರು ಕೂರ್ಮದಾಸನೆಂದು. ಪಂಢರಪುರಕ್ಕೆ ಹೋಗಬೇಕೆಂಬ ಅಪೇಕ್ಷೆಯಿರುವುದು ಎನಲು, ಶ್ರೀಹರಿಯು ಈ ಮಾತಂ ಕೇಳಿ–ನನ್ನ ಪುಣ್ಯೋದಯದಿಂದ ಇಂದು ಸತ್ಸಂಗತಿಯು ದೊರೆಯಿತು–ಎಂದು ನುಡಿದನು.

ಅದಕ್ಕೆ ಆತನು–ನಾನು ಕರಚರಣರಹಿತನಾಗಿರುವೆನು. ನನ್ನ ಸಂಗತಿಯಿಂದ ನಿಮಗೆ ಉಪಯೋಗವೇನು? ನೀವು ಎಲ್ಲಿಗೆ ಹೋಗುವವರು? ನಿಮ್ಮ ನಾಮಧೇಯವೇನು?–ಎಂದು ಬೆಸಗೊಳ್ಳಲು, ಅದಂ ಕೇಳಿ ಜಗದೀಶನು ನನ್ನನ್ನು ವಿಟ್ಠಲಶೆಟ್ಟಿ

ಯಿಂದ ಎಲ್ಲರೂ ಕರೆವರು. ನನ್ನ ಅಂಗಡಿಯು ಪಂಢರಪುರದಲ್ಲಿರುವುದು. ಅದರಿಂದ ಅಲ್ಲಿಗೆ ಹೋಗಬೇಕು-ಎಂದನು.

ಅದಕ್ಕೆ ಕೂರ್ಮದಾಸನು-ನೀವು ತ್ವರೆಯಿಂದ ಹೋಗತಕ್ಕವರು. ನಿಮ್ಮ ಸಂಗತಿ ನನಗೆ ಎಂತು ಘಟಿಸುವುದು-ಎನಲು, ಲಕ್ಷ್ಮೀಪತಿಯು-ನನ್ನ ಪ್ರಯಾಣವೂ ಸಾವಕಾಶವಾಗಿಯೇ ಇರುವುದು. ಮಾರ್ಗದಲ್ಲಿ ಕೊಡುವುದು ತೆಗೆದುಕೊಳ್ಳುವುದು ಉಂಟು ; ಅದರಿಂದ ಪ್ರತಿದಿವಸವೂ ಒಂದು ಹರಿದಾರಿಯೋ ಅಥವಾ ಅರೆಹರಿದಾರಿಯೋ ನಡೆದು ಅಲ್ಲಲ್ಲಿಯೆ ನಿಲ್ಲುವೆನು. ನಿಮ್ಮ ಸಂಗತಿಯು ನನಗೆ ತಪ್ಪಿಹೋಗಲಾರದು-ಎಂದನು. ಈ ಮಾತಂ ಕೇಳಿ ಕೂರ್ಮದಾಸನು ಸಂತೋಷಪಟ್ಟನು. ಸ್ವಾಮಿಯು ಆತನಿಗೆ ಹಾಲನ್ನೂ ಹಣ್ಣನ್ನೂ ತಂದುಕೊಟ್ಟು ಉಪಚರಿಸಿದನು. ಮತ್ತು ಹೊದಿಯುವುದಕ್ಕೆ ದಿವ್ಯವಾದ ವಸ್ತ್ರವಂ ಕೊಟ್ಟು-ಪಂಢರೀಕ್ಷೇತ್ರವು ಪುಣ್ಯಕರವಾದುದು. ಅಲ್ಲಿ ಭಗವದ್ಭಕ್ತರನೇಕರು ವಾಸಮಾಡುತ್ತಿರುವರು-ಎಂದಿದೇ ಮೊದಲಾದ ಮಾತನ್ನು ಆಡುತ್ತ, ರಾತ್ರಿಯಾಗುವುದೂ, ನೀವು ದಾರಿನಡೆದು ಬಹುಕಷ್ಟಪಟ್ಟಿರಬಹುದು. ಸಂತತವಾಗಿ ನೀವು ನಡೆಯಲಾರಿರಿ. ನಾಳೆ ನೀವು ಎಲ್ಲಿ ನಿಲ್ಲುವಿರೋ ಅಲ್ಲಿಗೆ ನಾನೂ ತ್ವರೆಯಿಂದ ಬಂದು ಸೇರುವೆನು. ಭೋಜನದ ವಿಷಯದಲ್ಲಿ ನೀವು ಚಿಂತೆಯಂ ಮಾಡಬೇಡಿ. ಯಾತ್ರೆಗೆ ಅನಾಥರೂ ದೀನರೂ ಅನೇಕರು ಹೋಗುತ್ತಿರುವರು. ಅವರಿಗೆ ಅನ್ನೋದಕಂಗಳಂ ಕೊಟ್ಟು ಅವರ ಶ್ರಮವಂ ಪರಿಹರಿಸಬೇಕೆಂದು ಮಾರ್ಗದಲ್ಲಿ ಅಲ್ಲಲ್ಲಿ ತಕ್ಕ ಸನ್ನಾಹಗಳಂ ಸಿದ್ಧಪಡಿಸಿರುವೆವು. ಪಥಿಕರ ಯೋಗಕ್ಷೇಮವಂ ವಿಚಾರಿಸುವುದಕ್ಕೇ ನಾವು ಸಂಚಾರಮಾಡುತ್ತಿರುವೆವು. ಈಗ ನೀವು ನಿಶ್ಚಿಂತರಾಗಿ ಮಲಗಿ ನಿದ್ರೆಮಾಡಿ-ಎಂದು ಹೇಳಿ ಅದೃಶ್ಯನಾದನು.

ಸೂರ್ಯೋದಯವಾಗುವುದೂ ಮತ್ತೆ ಬಂದು ಕೂರ್ಮದಾಸನಂ ಎಬ್ಬಿಸಿ-ನಿಮಗೆ ಮಾರ್ಗವಂ ತೋರಿಸುವೆನು ; ನೀವು ಮುಂದಣ ಪ್ರಯಾಣವಂ ಮಾಡಿ. ಸಾಯಂಕಾಲಕ್ಕೆ ನೀವು ಇಳಿದೆಡೆಯಲ್ಲಿ ನಾನು ಬಂದು ಸಿದ್ಧನಾಗುವೆನು-ಎಂದು ಮಾರ್ಗವಂ ತೋರಿಸಿ ತಾನು ಮರೆಗೊಂಡನು.

ಕೂರ್ಮದಾಸನು, ಆತನು ತೋರಿದ ಮಾರ್ಗವನ್ನು ಹಿಡಿದು ಸಾಯಂಕಾಲದವರೆಗೆ ಗಮಿಸಿ ಬಂದು ಗ್ರಾಮದ ಬಳಿಯಂ ಸೇರಿ ಆ ವಿಟ್ಠಲಶೆಟ್ಟಿಯ ಆಗಮನವಂ ನಿರೀಕ್ಷಿಸುತಿದ್ದನು. ಅಷ್ಟರಲ್ಲಿ ಕಮಲಾಕ್ಷನು ಸಮೀಪಕ್ಕೆ ಬಂದು ಪೂರ್ವದಿವಸದಂತೆ ಆತನ ಯೋಗಕ್ಷೇಮವಂ ವಿಚಾರಿಸಿ ಭೋಜನಾದಿಗಳಿಗೆ ತಕ್ಕ ಸನ್ನಾಹಗಳನ್ನು ಒದಗಿಸಿಕೊಟ್ಟು ಮನಸ್ಸಂತೋಷಗೊಳಿಸಿದನು.

ಇಂತು ಪ್ರತಿದಿವಸವೂ ಪರಿಪೋಷಿಸುತ್ತ ಸಮೀಪದಲ್ಲಿ ಗ್ರಾಮವು ಇಲ್ಲದಿದ್ದರೆ ಹೊಸತಾಗಿ ನಿರ್ಮಾಣಮಾಡುತ್ತ, ಆ ಭಕ್ತನಿಗೆ ಸ್ವಲ್ಪವೂ ಕಷ್ಟವುಂಟಾಗದಂತೆ ಆತನ ಯೋಗಕ್ಷೇಮದ ಭಾರವಂ ವಹಿಸಲು, ಆ ಕೂರ್ಮದಾಸನು ನಾಲ್ಕುತಿಂಗಳಿಗೆ

ಲಹುಳವೆಂಬ ಗ್ರಾಮವಂ ಸೇರಿದನು. ಆದಿವಸ ಕಾರ್ತಿಕಶುದ್ಧದಶಮಿಯಾಗಿದ್ದ ಕಾರಣ ಫಂಡರಪುರವಂ ಕುರಿತು ಅಲ್ಲಿಂದ ಅನೇಕರು ಜಾತ್ರಿಗರು ಹೋಗುತಿದ್ದರು. ಕೂರ್ಮದಾಸನು ಅವರಂ ನೋಡಿ-ಅಹಹ! ನಾಳೆ ಕಾರ್ತಿಕಶುಕ್ಲೈಕಾದಶಿಯಾಗಿರುವುದರಿಂದ ಭಗವತ್ಸಂದರ್ಶನಕ್ಕೋಸ್ಕರ ಭಾಗವತರನೇಕರು ತ್ವರೆಯಿಂದ ಹೋಗುತ್ತಿರುವರು. ನಾನು ಹೆಳವನು; ಪರದೇಶಿ; ಅನಾಥನು. ಇಲ್ಲಿ ಒಬ್ಬನೇ ಬಿದ್ದೆನಲ್ಲಾ! ನನಗೂ ಕಾಲುಗಳು ಇದ್ದರೆ ಇವರ ಸಂಗಡನೇ ಹೋಗುತಿದ್ದೆನಲ್ಲಾ!-ಎಂದು ಮನದಲ್ಲಿ ವ್ಯಸನಪಡುತಿದ್ದನು.

ತ್ವರೆಯಿಂದ ನಡೆಯುವರೊಡನೆ ಹೆಳವನು ಅದೆಂತು ನಡೆಯುವನು? ಉದಾರನಿಗೆ ಸರಿಯಾಗಿ ಲೋಭಿಯು ಎಂತು ದಾನಮಾಡುವನು? ಹಸಿವುಗೊಂಡವನಿಗೆ ಸರಿಯಾಗಿ ರೋಗಿಯು ಅದೆಂತು ಭೋಜನವಂ ಮಾಡಲಾರ್ಪನು? ಸೂರ್ಯನ ತೇಜಸ್ಸಿಗೆ ಸರಿಯಾಗಿ ಚಂದ್ರನು ಎಂತು ಪ್ರಕಾಶಿಸುವನು? ಕಾಮಧೇನುವಿಗೆ ಇತರಧೇನುಗಳೆಂತು ಸರಿಹೋಗುವುವು? ಅಂತು ಆ ಯಾತ್ರಿಗರಿಗೆ ಸರಿಯಾಗಿ ನಡೆಯಲು ಶಕ್ತಿಯಿಲ್ಲದ ಆ ಕೂರ್ಮದಾಸನು ಮನದಲ್ಲಿ ವಿಶೇಷದಿಂ ಸಂತಪಿಸುತ್ತ, ಆ ಜನಂಗಳಂ ಕುರಿತು-ಎಲೈ ಪುಣ್ಯವಂತರಿರಾ! ಕರುಣಾಸಿಂಧುವಾದ ಶ್ರೀರುಕ್ಮಿಣೀಪತಿಯು ಚರಣಸನ್ನಿಧಿಯಲ್ಲಿ ನನ್ನ ಬಿನ್ನಪವಂ ದಯೆಯಿಟ್ಟು ನೀವು ಬಿನ್ನವಿಸಬೇಕು. ಅದೇನೆಂದೊಡೆ:—"ಎಲೈ ಸರ್ವಚೈತನ್ಯಸ್ವರೂಪನಾದ ದೇವದೇವನೆ! ನನಗೆ ಕಾಲುಗಳುಇಲ್ಲ. ನಾಳೆಯೇಕಾದಶಿ; ನಿನ್ನ ಚರಣಾರವಿಂದಂಗಳ ಸಂದರ್ಶನವು ನನಗೆ ಲಭಿಸುವಂತಿಲ್ಲ. ಈ ಲಹುಳದಿಂದ ಮುಂದೆ ಏಳು ಹರಿದಾರಿಯ ದೂರದಲ್ಲಿ ಫಂಡರಪುರವು ಇರುವುದು. ನಾನು ಶ್ರಮಪಟ್ಟು ಬರಲು ಇನ್ನು ಏಳುದಿನಗಳೇ ಬೇಕಾಗುವುವು. ಎಲೈ ಭಕ್ತವತ್ಸಲನೆ! ಇಲ್ಲಿಯವರೆಗೆ ನೀನೆ ಬಿಜಯಂಗೈದು ಚರಣಸಂದರ್ಶನವಂ ಕೊಟ್ಟು ನನ್ನ ಮನಸ್ಸನ್ನು ಸಂತವಿಡಬೇಕು. ನಿನ್ನ ಸಂದರ್ಶನವಿಲ್ಲದುದರಿಂದ ಬಹುವಾಗಿ ಸಂತಪಿಸುತ್ತಿರುವೆನು. ಚಾತಕವು ಮೇಘದ ಆಗಮನವನ್ನೂ, ಚಕೋರವು ಚಂದ್ರನ ಮಾರ್ಗವನ್ನೂ ನೋಡುವಂತೆ ನಾನು ಪ್ರತಿಕ್ಷಣವೂ ನಿನ್ನ ಮಾರ್ಗವಂ ನೋಡುತ್ತಿರುವೆನು. ನಂಟರೂ ಇಷ್ಟರೂ ಸಕಲವೈಭವವೂ ನನಗೆ ನೀನೆ. ನೀನಲ್ಲದೆ ನನಗೆ ಬೇರೆ ಗತಿಯಿಲ್ಲ. ಅನಾಥನಾಥನೇ! ಕೃಪಾಸಾಗರನೇ! ಇಂದು ನೀನು ನನ್ನ ಬಳಿಗೆ ಬಂದು ದೀನನಾದ ನನ್ನನ್ನು ಉದ್ಧರಿಸಬೇಕು." ಇಂತೀ ನನ್ನ ಬಿನ್ನಪವನ್ನು ತಪ್ಪದೆ ಬಿನ್ನವಿಸಿ, ಸ್ವಾಮಿಯನ್ನು ಬೇಗನೆ ಇಲ್ಲಿಗೆ ಕಳುಹಿಸಿಕೊಡಬೇಕು-ಎನಲು, ಆ ಯಾತ್ರಿಕರು ಅವಶ್ಯವಾಗಲಿ-ಎಂದು ನುಡಿದು ವಿಟ್ಠಲನಂ ಧ್ಯಾನಿಸುತ್ತ ನಡೆದರು.

ಅತ್ತಲಾ ಫಂಡರಪುರದಲ್ಲಿ ದೇವಸ್ಥಾನದ ಮಹಾದ್ವಾರದ ಬಳಿಯಲ್ಲಿ ನಾಮದೇವನು ವಿರಕ್ತನಾದ ಮನೋವೃತ್ತಿಯುಳ್ಳವನಾಗಿ ಪರಮಾನಂದದಿಂದ ರಾಮಕೃಷ್ಣಾದ್ಯನಂತನಾಮಂಗಳಂ ಕೀರ್ತಿಸುತ್ತ ಶ್ರೀಹರಿಯ ಗುಣಂಗಳಂ ಪಾಡುತ್ತಲಿರುತ್ತಿರೆ

ವಿಠ್ಠಲಮೂರ್ತಿಯಂ ಧ್ಯಾನಿಸುತ್ತ ಸಂಭ್ರಮದಿಂದ ನರ್ತನವಮಾಡುತ್ತಿದ್ದನು. ಮತ್ತೆ- ನಿಜಭಕ್ತರ ವಿಶ್ರಾಂತಿಯ ನೆಲೆಯೂ, ಜ್ಞಾನಿಗಳ ರಹಸ್ಯವಾದ ಜ್ಞಾನವೂ, ಸದ್ಭಕ್ತಿಯ ಬೀಜವೂ, ಮೋಕ್ಷನಾಯಕನೂ ಆದ ಎಲೈ ಪರಮಪುರುಷನೇ! ಮಹಾವಿಷ್ಣುವೇ! ಮೇಘಶ್ಯಾಮನೆ! ಮುಕುಂದನೆ! ಮುರಾರಿಯೆ! ಅಚ್ಯುತನೆ! ನರಹರಿಯೆ! ಶ್ರೀರಾಮನೆ! ರಘುಪತಿಯೆ! ಗೋವರ್ಧನೋದ್ಧಾರನೆ! ಗೋಪೀಮನೋಹರನೆ! ಕರುಣಾಕರನೆ! ದೀನರಕ್ಷಕನೆ! ಪಾಂಡುರಂಗನೆ! ಸಕಲಮಂಗಳಾಧೀಶ್ವರನೆ! ಹೃಷೀಕೇಶನೆ! ಸರ್ವೇಶನೆ! ಅಭಂಗನೆ! ಶ್ರೀಹರಿಯೇ! ನೀನೆ ನನ್ನ ಸಕಲಸಾಮ್ರಾಜ್ಯವು. ಅನಾಥನಾದನನಗೆ ಪರಮಸುಖವನ್ನು ಕೊಡುವನು ನೀನೆ. ನನ್ನನ್ನು ಭವಶ್ರಮದ ದೆಸೆಯಿಂದ ಉದ್ಧರಿಸಬೇಕು-ಎಂದು ನಾನಾವಿಧವಾಗಿ ಪ್ರಾರ್ಥಿಸುತ್ತಿದ್ದನು.

ಆಗ ಶ್ರೀರುಕ್ಮಿಣೀರಮಣನು ಚತುರ್ಭುಜಯುಕ್ತನಾಗಿ ಇದಿರಿಗೆ ಬಂದು ದರ್ಶನವಂಕೊಟ್ಟು ಆಲಿಂಗಿಸಿಕೊಂಡು ತನ್ನ ಕರಕಮಲದಿಂದ ಪರಾಮರ್ಶಿಸಿ ಸಂತವಿಟ್ಟನು.

ಯಾತ್ರಿಕರು ಗರುಡಧ್ವಜಾದಿಗಳಿಂದ ಸಹಿತರಾಗಿ ತಾಳಮದ್ದಲೆಗಳಂ ಬಾಜಿಸುತ್ತ ಜಯಜಯಘೋಷಪುರಸ್ಸರವಾಗಿ ಭಗನ್ನಾಮಸಂಕೀರ್ತನವಂ ಮಾಡುತ್ತ ಬರಲು, ಭೀಮಾತೀರವೆಲ್ಲವೂ ಶಬ್ದಮಯವಾಯಿತು. ಚಂದ್ರಾಮೃತದ ಸವಿಯಂ ಚಕೋರವೇ ಎಂತು ಬಲ್ಲದೋ, ತಾಯ ಸ್ತನ್ಯದ ರುಚಿಯಂ ಶಿಶುವೇ ಎಂತು ಬಲ್ಲದೋ; ಸತ್ಕಥಾರಸವಂ ಸುಜ್ಞಾನಿಗಳೇ ಎಂತು ಬಲ್ಲರೋ; ತಾವರೆಯ ಮರಂದದ ಮಾಧುರ್ಯವನ್ನು ಭ್ರಮರವೇ ಎಂತು ಬಲ್ಲುದೋ ಅಂತು ಆಶಬ್ದರಸವನ್ನು ಭಕ್ತಾಗ್ರಣಿಯಾದ ಪುಂಡರೀಕನೇ ಬಲ್ಲನು. ಆತನೇ ಪಂಢರಪುರದ ಪರಮಾನಂದ ಸರ್ವಸ್ವವನ್ನು ಅನುಭವಿಸುತ್ತಿರುವನು. ಯಾತ್ರಿಕರು ಮಹಾದ್ವಾರದ ಬಳಿಗೆ ಬಂದು ಭಗವಂತನಿಗೆ ಸಾಷ್ಟಾಂಗನಮಸ್ಕಾರವೆಸಗಿ ಜಯಜಯಘೋಷವಂ ಮಾಡಿದರು. ಮುಂದೆ ನೋಡಲು, ಸಿರದಲ್ಲಿ ಮಿರುಗುತ್ತಿರುವ ದಿವ್ಯರತ್ನಖಚಿತವಾದ ಕಿರೀಟದಿಂದಲೂ ಸೊಗಸಿನ ನವಿಲುಗರಿಯಿಂದಲೂ, ಪಣೆಯಲ್ಲಿ ಕಂಗೊಳಿಸುತ್ತಿರುವ ಕಸ್ತೂರೀತಿಲಕದಿಂದಲೂ, ಕರ್ಣಗಳಲ್ಲಿ ವಿರಾಜಿಸುತ್ತಿರುವ ಮಕರಕುಂಡಲಗಳಿಂದಲೂ, ಕಂಠದಲ್ಲಿ ಪರಿಶೋಭಿಸುತ್ತಿರುವ ವೈಜಯಂತಿಯಿಂದಲೂ, ಕೋಮಲವಾದ ತುಳಸೀಮಾಲೆಯಿಂದಲೂ, ಹೃದಯದಲ್ಲಿ ಹೊಳೆಯುತ್ತಿರುವ ಕೌಸ್ತುಭದಿಂದಲೂ ಶ್ರೀವತ್ಸಲಾಂಛನದಿಂದಲೂ, ದೇದೀಪ್ಯಮಾನನಾಗಿ, ಶಂಖಚಕ್ರಧರನಾಗಿ ಪೀತಾಂಬರಧಾರಿಯೆನಿಸಿ, ಇಟ್ಟಿಗೆಯಮೇಲೆ ಪಾದಾರವಿಂದಗಳನ್ನಿಟ್ಟು, ಕಟಿತಟದಲ್ಲಿ ಕರಾರವಿಂದಗಳನಿರಿಸಿಕೊಂಡು ನಿಂತಿರುವ ನೀಲಮೇಘಶ್ಯಾಮನೂ ರಾಜೀವನೇತ್ರನೂ ಶ್ರೀರುಕ್ಮಿಣೀರಮಣನೂ ಮಹಾಮಹಿಮನೂ ಆದ ಪುಂಡರೀಕವರದನಾದ ಶ್ರೀವಿಠ್ಠಲನು ಗೋಚರನಾದನು. ಭಕ್ತರು ಭಗವದ್ದರ್ಶನದಿಂದ ಆನಂದಸಂದಿಲರಾದರು. ಅತ್ತ ನಾಸಿಯಲ್ಲಿ ಕೋಟಿಶ್ವೆ

ಸಿಕ್ಕಿದ ಸೊಸೆಯು ತನ್ನ ತಾಯ ಮುಖವನ್ನು ಕಂಡು ಎಂತು ಸಮಾಧಾನಗೊಳ್ಳು ವಳೋ ಅಂತು ಯಾತ್ರಿಕರು ಭಗವಂತನ ಶ್ರೀಮುಖವನ್ನು ಕಾಣುವುದೂ, ತಮ್ಮ ಮಾರ್ಗಶ್ರಮವೆಲ್ಲವಂ ಕಳೆದು ಮನಸ್ಸಮಾಧಾನವಂ ಪಡೆದರು. ಆ ಸ್ವಾಮಿಯಂ ಮನದಲ್ಲಿ ಏಕನಿಷ್ಠೆಯಿಂದ ಧ್ಯಾನಿಸಿ ತನ್ಮಯರಾಗಿ ನಿಂತರು ; ಅಡಿಗಡಿಗೆ ವಂದಿಸಿ ದರು ; ಪಾಡಿದರು ; ಪಲತೆರದಿಂದ ಪೊಗಳಿದರು.

ಅವರಲ್ಲಿ ಒಬ್ಬನು ಸ್ಮರಣೆಗೊಂಡು ಸ್ವಾಮಿಯನ್ನು ಕುರಿತು–ಎಲೆ ಭಕ್ತವತ್ಸ ಲನೆ ! ಕೂರ್ಮದಾಸನೆಂಬವನು ಲಹುಳದ ಸಮೀಪಕ್ಕೆ ಬಿಜಯಂಗೈಯಬೇಕೆಂದು ನಿನ್ನನ್ನು ಪ್ರಾರ್ಥಿಸಿಕೊಂಡಿರುವನು. ಆತನಿಗೆ ಕಾಲುಗಳು ಇಲ್ಲ. ಬೇಗದಿಂ ಇಲ್ಲಿಗೆ ನಡೆದು ಬರಲಾರನು. ನಿನ್ನ ಸಂದರ್ಶನವಂ ಮಾಡಬೇಕೆಂಬ ಕುತೂಹಲವು ಆತನಿಗೆ ಅತ್ಯಧಿಕವಾಗಿರುವುದು. ಸರ್ವಕಾಲದಲ್ಲಿಯೂ ನಿನ್ನನ್ನೇ ಇದಿರುನೋಡುತಿರುವನು-ಎಂದು ಬಿನ್ನವಿಸಿದನು.

ಫಂಡರೀನಾಥನು ಆನುಡಿಯಂ ಕೇಳಿ, ತನ್ನ ಭಕ್ತನಾದ ಕೂರ್ಮದಾಸನ ದರ್ಶನವು ತನಗೆ ಎಂದಿಗೆ ಲಭಿಸುವುದೋ–ಎಂದು ಚಿಂತಿಸುತ್ತ, ಪ್ರಿಯತಮನಾದ ಅಂತಹ ಭಕ್ತನು ಯಾವನೂ ಇಲ್ಲವೆಂದು ಬಗೆದು, ಜ್ಞಾನದೇವನಾಮದೇವರಿರ್ವರನ್ನೂ ಕರೆದು–ಕೂರ್ಮದಾಸನು ಆರ್ತನಾಗಿ ನನ್ನ ಸಂದರ್ಶನವಂ ಬಯಸುತ್ತಿರುವನು ; ಅಲ್ಲಿಗೆ ಹೋಗುವೆನು. ನೀವೂ ನನ್ನೊಡನೆ ಬನ್ನಿ–ಎಂದು ನುಡಿದು ಅವರೊಡನೆ ಕಾಲುನಡೆಯಿಂದಲೇ ಹೊರಟನು. ಯಾವನು ಕ್ಷೀರಸಾಗರದಲ್ಲಿ ಶೇಷಶಯನದಲ್ಲಿ ಪವಡಿಸುವನೋ ; ಯಾವನು ಶ್ರುತಿಗಳಿಗೂ ಅಗೋಚರನೋ ; ಆಲಕ್ಷ್ಮೀಪತಿಯು ಕಾಲುನಡೆಯಿಂದ ಹೊರಟನು. ಬ್ರಹ್ಮಾದಿದೇವತೆಗಳೂ ನಾರದಾದಿಮಹರ್ಷಿಗಳೂ ಯಾವನ ಚರಣರಜಸ್ಸನ್ನು ಅಪೇಕ್ಷಿಸುವರೋ ; ಆರುಕ್ಮಿಣೀರಮಣನು ಕಾಲಿಂದ ನಡೆಯುತ ಹೊರಟನು. ಯಾವನು ಹಠಯೋಗವುಳ್ಳ ಮಹಾಯೋಗಿಗಳಿಗೂ ಸಿಕ್ಕನೋ ಆ ಮಹಾಮಹಿಮನು ಅಹಹ ! ಕೂರ್ಮದಾಸನ ಭಕ್ತಿಗೆ ಮೆಚ್ಚಿ ತಾನು ನಡೆಯುತ್ತ ಹೊರಟನು.

ನಡೆಯುತ್ತ ದಾರಿಯಲ್ಲಿ ಒಂದು ತೋಟವನ್ನು ಕಂಡು, ಆತೋಟದಲ್ಲಿದ್ದ ಸಾವಂತನೆಂಬವನನ್ನು ನೋಡಬೇಕೆಂದು ಮನದಲ್ಲಿ ಎಣಿಸಿ ತ್ವರೆಯಿಂದ ಹೊರಟು, ನಾಮದೇವನಿಗೆ ಕೌತುಕವಂ ತೋರಬೇಕೆಂದು ಅಪೇಕ್ಷಿಸಿ–ನನಗೆ ಬಾಯಾರಿಕೆ ಬಹುವಾಗಿರುವುದು ! ಉದಕಪಾನವಂ ಮಾಡಿಬರುವೆನು-ಎಂದು ಹೇಳಿ ನಾಮದೇವನನ್ನೂ ಜ್ಞಾನದೇವನನ್ನೂ ಹೊರಗೆ ಬಿಟ್ಟು ತಾನು ತೋಟವನ್ನು ಪ್ರವೇಶಿಸಿ ಸಾವಂತನ ಬಳಿಗೆ ಬಂದನು. ಆಗ ಆತನು ಹೃದಯದಲ್ಲಿ ವಿಟ್ಠಲಮೂರ್ತಿಯಂ ಧ್ಯಾನಿಸಿ ತದೇಕಾಯತ್ತಚಿತ್ತನಾಗಿ ನಾಮಸ್ಮರಣೆಯಂ ಮಾಡುತ್ತ ಪರವಶನಾಗಿದ್ದನು. ಆತನಂ ಕಂಡು ಸ್ವಾಮಿಯು ಆತನ ಮಸ್ತಕದಲ್ಲಿ ಕರಕಮಲವನ್ನಿರಿಸಿ ಎಚ್ಚರಗೊಳಿಸಿ ಆಲಿಂಗಿಸಿಕೊಂಡನು.

ಬಳಿಕ ಆತನು ಶ್ರೀ ರುಕ್ಮಿಣೀಪತಿಯಂ ಇದಿರಲ್ಲಿ ಕಂಡು ಪರಮಾನಂದಭರಿತನಾಗಿ ಬಾಷ್ಪವಂ ಸುರಿಯಿಸುತ್ತ ಸ್ವಾಮಿಯ ಚರಣಕಮಲವಂ ದೃಢವಾಗಿ ಹಿಡಿದು–ಎಲೈ ಸ್ವಾಮಿಯೆ! ನೀನೆ ನನಗೆ ತಾಯಿ ತಂದೆ ಬಂಧು ಬಳಗ. ಸರ್ವಸ್ವವೂ ನೀನೆ. ಈ ಕಣ್ಣಿಂದ ನಿನ್ನಂ ಕಂಡೆನು; ನಾನು ಧನ್ಯನಾದೆನು. ನೀನು ಸುಕುಮಾರಾಂಗನು. ಕಾಲಿಂದ ನಡೆಯುತ್ತ ಬಂದಿರುವೆ. ದೀನರಾದ ಭಕ್ತರನ್ನು ಸಂರಕ್ಷಿಸಿ ಬಹುವಾಗಿ ದಣಿದಿರುವೆ. ಈಗ ಮನಸ್ಸನ್ನು ಸ್ವಸ್ಥಮಾಡಿಕೊಂಡು ಒಂದರೆನಿಮಿಷ ಇಲ್ಲಿ ಕುಳ್ಳಿರು. ನಾನು ಪೂಜೆಯಂ ಮಾಡುವೆನು–ಎನಲು, ಅದಂ ಕೇಳಿ ಭಗವಂತನು–ಇಬ್ಬರು ಕಳ್ಳರು ನನ್ನ ಬೆನ್ನಂ ಹತ್ತಿ ಬಂದಿರುವರು. ಅವರ ದೆಸೆಯಿಂದ ಭಯಪಟ್ಟು ಅಡಗಿಕೊಳ್ಳುವುದಕ್ಕೆ ನಾನು ಇಲ್ಲಿಗೆ ಬಂದರೆ "ನಾನು ಪೂಜೆಮಾಡುವೆನು; ಸ್ವಸ್ಥನಾಗಿ ಇಲ್ಲಿ ಕುಳ್ಳಿರು" ಎಂದು ಹೇಳುವೆ. ಈ ನುಡಿಯಂ ಕೇಳಿದ ನನಗೆ ಆಶ್ಚರ್ಯ ತೋರುವುದು. ಗ್ರಹಣವುಂಟಾಗಿರುವಾಗ ಸೂರ್ಯನಿಗೆ ಅರ್ಘ್ಯಪ್ರದಾನವಂ ಮಾಡಲು, ಅದು ಅವನಿಗೆ ಎಂತು ರುಚಿಸದೋ; ಮನುಷ್ಯನಿಗೆ ಮನಸ್ಸಿನಲ್ಲಿ ಚಿಂತೆಯುಂಟಾಗಿರಲು, ಉಪಚಾರಗಳೆಂತು ಪ್ರಿಯವಾಗವೋ; ಪರರಾಜರು ಬಂದು ಮುತ್ತಿಗೆಹಾಕಿರಲು, ರಾಜನಿಗೆ ಭದ್ರಾಸನವು ಎಂತು ಹೃದ್ಯವಾದುದಲ್ಲವೋ; ಅಂತು ಮನಸ್ಸ್ವಾಸ್ಥ್ಯವಿಲ್ಲದ ನನಗೆ ನೀನು ಮಾಡಬೇಕೆಂದಿರುವ ಪೂಜೆಯು ಅಭಿಮತವಾಗಿಲ್ಲ. ನನ್ನನ್ನು ಎಲ್ಲಿಯಾದರೂ ಅಡಗಿಕೊಂಡಿರುವಂತೆ ಮರೆಮಾಡು–ಎನಲು, ಆತನು ಸ್ವಾಮಿಯನ್ನು ಕುರಿತು–ನೀನು ಎಲ್ಲಿ ಅಡಗಿಕೊಂಡು ಮರೆಯಾಗಿರುವೆ? ಅಂತಹ ಸ್ಥಳವು ಮೂರುಲೋಕದಲ್ಲಿಯೂ ಇಲ್ಲ. ಗಾಳಿಯೂ ಆಕಾಶವೂ ಇಲ್ಲದ ಸ್ಥಳವು ಯಾವುದು? ಅವುಗಳನ್ನು ಎಲ್ಲಿತಾನೇ ಅಡಗಿಸಲಾಗುವುದು? ನೀನು ಮಹಾಮಹಿಮನು; ಸರ್ವವ್ಯಾಪಕನು. ಅನಂತಬ್ರಹ್ಮಾಂಡಗಳೂ ನಿನ್ನ ಉದರದಲ್ಲಿ ಅಡಗಿರುವುವು. ಇಂತಹ ನೀನು ವ್ಯಾಪ್ಯನಾಗಿ ಮರೆಯಾಗಿರಲು ಸ್ಥಳವನೆಲ್ಲಿಯೂ ಕಾಣೆನು–ಎಂದನು. ಈ ಮಾತಂ ಕೇಳಿ ಸ್ವಾಮಿಯು–ಈ ಬ್ರಹ್ಮಜ್ಞಾನದ ಮಾತು ಯಾರಿಗೆ ಬೇಕು? ಈ ವೇಳೆಯಲ್ಲಿ ನನ್ನನ್ನು ಎಲ್ಲಿಯಾದರೂ ಮರೆಮಾಡಲೇಬೇಕು–ಎಂದು ನುಡಿಯಲು, ಅದಕ್ಕೆ ಆ ಸಾವಂತನು ಮನದೊಳಾಲೋಚಿಸಿ, ನನ್ನ ಹೃದಯಮಂದಿರದಲ್ಲಿ ಇರುವನಾಗು–ಎಂದು ಕತ್ತಿಯಿಂದ ಹೊಟ್ಟೆಯನ್ನು ಸೀಳಲು, ಮುರಾರಿಯು ತ್ವರೆಯಿಂದ ಹೃದಯವನ್ನು ಪ್ರವೇಶಿಸಿ ಅಲ್ಲಿ ಕುಳಿತನು. ಸಾವಂತನು ಇಲ್ಲಿಯೂ ಸ್ವಾಮಿಯನ್ನು ಕಳ್ಳರು ಕಂಡಾರೆಂದು ಮರೆಯಾಗಿರುವಂತೆ ಹೊಟ್ಟೆಯ ಮೇಲೆ ವಸ್ತ್ರವಂ ಸುತ್ತಿದನು.

ಈ ನುಡಿಯಂ ಕೇಳಿ ಶ್ರೋತೃಗಳು–ಹೃದಯದಲ್ಲಿ ಸ್ವಾಮಿಯು ಎಂತು ಹಿಡಿದನು? ಆಕ್ಷೇಪಕ್ಕೆ ಈಗ ಅವಕಾಶವು ದೊರೆಯಿತು–ಎನಬಹುದು. ಶ್ರೀಹರಿಯು ಲೀಲಾವಿನೋದತತ್ಪರನು. ಅವನ ವ್ಯಾಪಾರವು ಅಮೇಯವಾದುದು. ಕೃಷ್ಣಾವತಾರದಲ್ಲಿ ಯಶೋದೆಯು ತನ್ನ ಮಂದಿರದಲ್ಲಿ ಮೊಸರಂ ಕಡೆಯುತಿರಲು, ಮಡಿಕೆಯಲ್ಲಿ

ಪ್ರವೇಶಿಸಿ ಬೆಣ್ಣೆಯಂ ಮೆಲ್ಲುತಿರಲಿಲ್ಲವೇ ? ಒಬ್ಬಗೋಪಿಯು . ಪ್ರೇಮದಿಂದ ಮೋಹಿಸಿ ಶ್ರೀಕೃಷ್ಣನಂ ಮಾರುವುದಕ್ಕೆ ತಂದೆನೆನಲು, ಆಗ ಅವಳ ವಚನವಂ ಸಾರ್ಥಕವಮಾಡುವುದಕ್ಕೋಸ್ಕರ ಗಡಿಗೆಯಲ್ಲಿ ಅಡಗಿಕೊಂಡಿರಲಿಲ್ಲವೇ ? ಅಂತು ಸಾವಂತನ ಹೃದಯದಲ್ಲಿಯೂ ಅಡಗಿದ್ದನು. ಈ ಸಂಶಯವಂ ಮನದಲ್ಲಿ ಸರ್ವಥಾ ಮಾಡಬಾರದು.

ಬಳಿಕ ಹೃದಯದಲ್ಲಿ ಅಡಗಿ ಕುಳಿತಿರುವ ಸ್ವಾಮಿಯು ಆಸಾವಂತನನ್ನು ಕುರಿತು–ನಿನ್ನ ಉಪಕಾರಕ್ಕೆ ಸರಿಯಾದುದು ಯಾವುದೂ ಇಲ್ಲ. ನೀನು ನನ್ನ ಸ್ವರೂಪವನ್ನೇ ಹೊಂದಿ ನನ್ನ ಸರ್ವಸ್ವವನ್ನೂ ತೆಗೆದುಕೊಳ್ಳುವನಾಗು. ಅದಕ್ಕಿಂತಲೂ ನಿನಗೆ ಕೊಡತಕ್ಕುದು ಯಾವುದೂ ಇಲ್ಲ–ಎನಲು, ಅದಂ ಕೇಳಿ ಭಕ್ತನಾದ ಸಾವಂತನು–ಇನ್ನು ನಿನ್ನನ್ನು ಜೀವಕ್ಕಿಂತ ಬೇರೆಮಾಡೆನು–ಎಂದು ತದೇಕಾತ್ಮನಾಗಿದ್ದನು. ಸ್ವಾಮಿಯೂ ಆ ಭಕ್ತನೂ, ಗಂಗಾಯಮುನೆಗಳಂತೆಯೂ, ಕ್ಷೀರನೀರಗಳಂತೆಯೂ, ದೇಹಪ್ರಾಣಗಳಂತೆಯೂ, ಚಂದ್ರಬಿಂಬಾಮೃತಗಳಂತೆಯೂ, ಪುಷ್ಪಮಕರಂದಗಳಂತೆಯೂ ಸಮರಸರಾಗಿದ್ದರು. ಶ್ರೀರುಕ್ಮಿಣೀಪತಿಯು ಭಕ್ತನ ಹೃದಯದಲ್ಲಿ ಅದ್ವೈತಭಾವದಿಂದ ನೆಲಸಿ ನಿಂದನು.

ಅತ್ತಲಾತೋಟದ ಹೊರಗಡೆಯಲ್ಲಿ ನಾಮದೇವನು "ಪಂಢರೀನಾಥನು ಇನ್ನೂ ಏಕೆ ಬರಲಿಲ್ಲ ? ಏಕೆ ವಿಲಂಬವಾಗಿರುವುದೋ ? ಎಲ್ಲಿ ನಿಂತನೋ ?–ಎಂದು ಚಿಂತಾಕ್ರಾಂತನಾಗಿ ತೋಟವಂ ಒಳಪೊಕ್ಕು, ನನ್ನ ಜೀವನವಾದ ಸರ್ವಸುಖನಿಧಾನವಾದ ಪಾಂಡುರಂಗನು ನನ್ನಂ ಬಿಟ್ಟು ದೂರಹೋದನು. ಆತನನ್ನು ಯಾರು ತೋರಿಸುವರು ? ಎನುತ್ತ ಗದ್ಗದಕಂಠನಾಗಿ ಪ್ರೇಮಭಾವದಿಂದ ಬಿಕ್ಕಿ ಬಿಕ್ಕಿ ಅಳುತ್ತ ಶ್ರೀವಿಟ್ಠಲನ ಪಾದವನ್ನೇ ನೆನೆಯುತ್ತ, ದೇಹದಲ್ಲಿ ಕಂಪವುಂಟಾಗಿರಲು, ಬಾಯಾರಿದವನು ನೀರನ್ನು ಅರಸುವಂತೆ, ಹಸಿವುಗೊಂಡ ಮಗುವು ತಾಯಂ ಹುಡುಕುವಂತೆ, ಸ್ವಾಮಿಯನ್ನು ಹುಡುಕುತ್ತ, ಹಣವಂ ಕಳೆದುಕೊಂಡ ಲೋಭಿಯಂತೆ ತಲ್ಲಣಿಸುತ್ತ, ಕಣ್ಣುಗಳಿಂದ ಅಶ್ರುಧಾರೆಯಂ ಸುರಿಯಿಸುತ್ತ ಭೂಮಿಯ ಮೇಲೆ ಬಿದ್ದು, ಎಲೈ ಅನಾಥನಾಥನೆ ! ಎಲ್ಲಿರುವೆ? ನಿನ್ನಂ ಕಾಣದಿರುವುದರಿಂದ ಪ್ರಾಣವು ವ್ಯಾಕುಲವಾಗಿದೆ. ನೀನು ನನ್ನಂ ಬಿಟ್ಟು ಹೋಗುವೆ–ಎಂದು ತಿಳಿದಿರಲಿಲ್ಲ. ಅಂತು ನಿನ್ನ ಭಾವವಂ ತಿಳಿದಿದ್ದರೆ ನಿನ್ನ ಪೀತಾಂಬರದ ಸೆರಗಂ ಹಿಡಿದುಕೊಂಡು ಸಂಗಡವೇ ಬರುತಿದ್ದೆನಲ್ಲಾ !–ಎಂದು ಹಂಬಲಿಸುತ್ತ ತಿರುಗುತ್ತಿರಲು, ಸಾವಂತನು ದೃಗ್ಗೋಚರನಾದನು. ನಾಮದೇವನು ಆನಂದಯುಕ್ತನಾಗಿ ಭಗವನ್ನಾಮಕೀರ್ತನವಂ ಮಾಡುತ್ತ ಆತನ ಚರಣಂಗಳಂ ದೃಢವಾಗಿ ಹಿಡಿದು, ಜಗನ್ನಾಥನು ಎಲ್ಲಿಗೆ ಹೋದನು ? ಬಲುಹೊತ್ತಿನಿಂದಲೂ ಕಾಣದೆ ಸಂತಪಿಸುತ್ತಿರುವೆನು–ಎಂದನು. ಆ ಸಾವಂತನು ದೇಹಭಾವವಂ ಮರೆತು ಶ್ರೀಹರಿರೂಪದಲ್ಲಿಯೇ ಲೀನನಾಗಿ 'ನಾನು ನನ್ನದು' ಎಂಬ ಭಿನ್ನಭಾವನೆಯು

ಲ್ಲದಿರಲು, ಆ ಚಿಹ್ನೆಗಳಂ ಕಂಡು ನಾಮದೇವನು—ಈತನ ಬಳಿಯಲ್ಲಿ ವಿಟ್ಠಲನು ಇರುವನು—ಎಂದು ಸ್ವಾತ್ಮಾನುಭವದಿಂದ ನಿಶ್ಚಯಿಸಿದನು. ಜಾರೆಯ ಇಂಗಿತವನ್ನು ಜಾರನು ಎಂತು ತಿಳಿವನೋ ; ಕಳ್ಳನ ಚಿಹ್ನೆಯನ್ನು ಕಳ್ಳನೇ ಎಂತು ಬಲ್ಲನೋ ; ಪಂಡಿತನ ಸರಸೋಕ್ತಿಯ ಸ್ವಾರಸ್ಯವನ್ನು ಪಂಡಿತನೇ ಎಂತು ಅವಧರಿಸಬಲ್ಲನೋ ; ಯೋಗಿಯ ಲಕ್ಷಣವನ್ನು ಯೋಗಿಯೇ ಎಂತು ತಿಳಿವನೋ ; ಗುಪ್ತವಾದ ನಿಕ್ಷೇಪವನ್ನು ಸಿದ್ಧಾಂಜನವುಳ್ಳವನೇ ಎಂತು ಕಂಡುಹಿಡಿಯುವನೋ ; ಅಂತು ನಾಮದೇವನು ಸಾವಂತನ ಬಳಿಯಲ್ಲಿ ಸ್ವಾಮಿಯಿರುವುದನ್ನು ಥಟ್ಟನೆ ತಿಳಿದು, ಆತನನ್ನು ಕುರಿತು—ಅಯ್ಯಾ ಬಡವನಾದ ನನ್ನ ನಿಕ್ಷೇಪವನ್ನು ನೀನು ಎಂತು ನುಂಗಿದೆ ? ಸರ್ವಸುಖಗಳಿಗೂ ನಿವಾಸಸ್ಥಾನವಾದ ನನ್ನ ಪ್ರಾಣಪ್ರಿಯನಾದ ಸ್ವಾಮಿಯನ್ನು ನನಗೆ ತೋರಿಸು. ನಾನು ಅತನನ್ನೇ ಧ್ಯಾನಿಸುತ್ತಿರುವೆನು. ಪ್ರಾಣವು ತಲ್ಲಣಿಸುತ್ತಿರುವುದು. ಎಲೆ ದಯಾಳುವೆ ! ನೀನು ನನ್ನನ್ನು ಬದುಕಿಸು. ನಿನಗೆ ಸ್ವಾಮಿಯು ಎಂತು ದೊರೆತನು ? ಆ ಕುರುಹನ್ನು ನನಗೆ ತಿಳಿಯಿಸು. ನಾನು ಆ ಕುರುಹನ್ನು ಗೊತ್ತುಮಾಡಿಕೊಳ್ಳುವೆನು—ಎಂದನು.

ಸಾವಂತನ ಹೃದಯದಲ್ಲಿ ಸಂನಿವಿಷ್ಟನಾದ ಸ್ವಾಮಿಯು ನಾಮದೇವನ ಕರುಣವಚನವಂ ಕೇಳಿ ಸಾವಂತನನ್ನು ಕುರಿತು—ನನ್ನ ಪ್ರಾಣಪ್ರಿಯನಾದ ನಾಮದೇವನ ದರ್ಶನವಂ ನನಗೆ ಮಾಡಿಸು. ನಾನು ಅವನನ್ನು ನೋಡದೆ ಇರಲಾರೆನು. ನಾನು ನಿನ್ನ ಉದರದಲ್ಲಿ ಸಿಕ್ಕಿಕೊಂಡಿರುವೆನು. ಕೀಟವಿಶೇಷವು ಬಂಧನವಂ ತಾನೇಮಾಡಿಕೊಂಡು ಬಳಿಕ ಹೊರಗೆ ಬರಲು ಎಂತು ಅಶಕ್ತವಾಗಿರುವುದೋ ; ಗಿಳಿಯು ನಳಿಕೆಯಲ್ಲಿ ಸಿಕ್ಕಿಕೊಂಡು ಬಳಿಕ ಎಂತು ಹಾರಿಹೋಗಲಾರದೋ ; ಭ್ರಮರವು ಮಕರಂದದ ಆಸೆಯಿಂದ ಕಮಲವನ್ನು ಸೇರಿ, ಸೂರ್ಯನು ಅಸ್ತಂಗತನಾಗಲು, ಮುಕುಳಿತವಾದ ಆಕಮಲದಲ್ಲಿಯೇ ಎಂತು ಸಿಕ್ಕಿಕೊಂಡಿರುವುದೋ ಅಂತು ನಾನು ನಿನ್ನ ಹೃದಯದಲ್ಲಿ ಸಿಕ್ಕಿಕೊಂಡಿರುವೆನು. ಜಲಾಶಯವನ್ನಗಲಿದ ಮೀನಂತೆ ನಾಮದೇವನು ಹೊರಗೆ ತಲ್ಲಣಿಸುತ್ತಿರುವನು. ಬಂದುಕ್ಷಣ ಅವನ ದರ್ಶನವಂ ನನಗೆ ಮಾಡಿಸು-ಎಂದನು.

ಬಳಿಕ ಸಾವಂತನು ನಾಮದೇವನಂ ಕುರಿತು—ಅಯ್ಯಾ ಭಾಗವತಶಿರೋಮಣಿಯೆ ! ಸ್ವಾಮಿಗೆ ನಿನ್ನಲ್ಲಿ ಕೃಪೆಯುಂಟಾಗಿರುವುದು. ನೀನು ತಲ್ಲಣಗೊಳ್ಳದಿರು. ತ್ವರೆಯಿಂದ ನಿನಗೆ ಸಂದರ್ಶನವಂ ಕೊಡುವನು. ನೀನು ಏನುಪುಣ್ಯವಂ ಮಾಡಿರುವೆಯೋ ; ಸರ್ವವ್ಯಾಪಿಯಾದ ಸ್ವಾಮಿಯ ಭಜನೆಯಂ ಏನುವಿಶೇಷದಿಂ ಮಾಡಿರುವೆಯೋ ; ಗರುಡಧ್ವಜವಂ ಹೆಗಲಮೇಲೆ ಹೊತ್ತುಕೊಂಡು ಎಷ್ಟು ಆವೃತ್ತಿ ಫಂಢರಪುರಕ್ಕೆ ವಾರೆನಡೆದೆಯೋ ; ಸಾಧುಗಳ ಚರಣಸೇವೆಯನ್ನು ಎಷ್ಟು ಮಾಡಿದೆಯೋ ; ಆವ ಭಕ್ತಿವಿಶೇಷದಿಂದ ಭಗವನ್ನಾಮಕೀರ್ತನೆಯಂ ಮಾಡಿದೆಯೋ ; ಜನ್ಮಾಂತರದಲ್ಲಿ ಅದಾವ ಉಗ್ರವ್ರತಪಸ್ಸನ್ನಾಚರಿಸಿದೆಯೋ ; ಆವಾವ ಮಹಾತೀರ್ಥಾಟನಂಗಳಂ

ಮಾಡಿದೆಯೋ; ಎಷ್ಟೆಷ್ಟು ಪರೋಪಕಾರಂಗಳಂ ಮಾಡಿ ಶರೀರಸಾರ್ಥಕತೆಯನ್ನು ಮಾಡಿಕೊಂಡೆಯೋ; ನಿನ್ನ ಭಾಗ್ಯವಿಶೇಷವಂ ನಾನು ಬಣ್ಣಿಸಲಾರೆನು; ಪಂಢರೀನಾಥನೇ ಬಲ್ಲನು. ನಿನ್ನಲ್ಲಿ ಆಸ್ವಾಮಿಗೆ ಪರಮಾನುಗ್ರಹವಿರುವುದು—ಎಂದು ಹೊಗಳಿದನು.

ಬಳಿಕ ನಾಮದೇವನು-ಈಗ ನನಗೆ ನೀನೆ ಜೀವದಾನವಂ ಮಾಡಬೇಕು. ನನಗಿನ್ನಾರೂ ಆಶ್ರಯರಿಲ್ಲ. ನನಗೆ ಬೇಗದಿಂ ವಿಟ್ಠಲನ ದರ್ಶನವಂ ಮಾಡಿಸು. ನಾನು ಸ್ವಾಮಿಯನ್ನು ಬಿಟ್ಟಿರಲಾರೆನು. ಮನದಲ್ಲಿ ಧೈರ್ಯವನ್ನು ತಾಳಲಾರೆನು. ನನ್ನ ದುರವಸ್ಥೆಯನ್ನು ನೋಡಿದ ನಿನಗೆ ಏಕೆ ಕರುಣವುಂಟಾಗುವುದಿಲ್ಲ?-ಎನಲು, ಸಾವಂತನು ಆಮಾತಂ ಕೇಳಿ ಥಟ್ಟನೆ ಮತ್ತೆ ಕತ್ತಿಯಿಂದ ಹೊಟ್ಟೆಯನ್ನು ಸೀಳಿದನು. ಪಾಂಡುರಂಗನು ಹೊರಗೆ ಬಂದನು. ನಾಮದೇವನು ಆ ಸ್ವಾಮಿಯ ಪಾದಗಳನ್ನು ದೃಢವಾಗಿ ಹಿಡಿದನು. ಸ್ವಾಮಿಯು ನಾಮದೇವನನ್ನು ಆಲಿಂಗಿಸಿಕೊಂಡು—ನೀನು ಏಕೆ ಇಷ್ಟು ತಲ್ಲಣಿಸಿದೆ? ಹೇಳೆನಲು, ನಾಮದೇವನು ಅಭಿವಂದಿಸಿ—ಸ್ವಾಮಿಯೇ! ನೀನೇ ನನ್ನ ತಾಯಿ ತಂದೆ ಬಂಧು ಬಳಗ. ನಿನ್ನಂ ಬಿಟ್ಟಿರಲಾರೆನು. ಸಂಕಟದ ವೇಳೆಯಲ್ಲಿ ತಪ್ಪದೆ ನೀನು ಪ್ರಸನ್ನನಾಗುವೆ. ನೀನು ಮಹಾಮಹಿಮನು. ಪ್ರೀತಿಯಿಂದ ನಮ್ಮ ಹಟವಂ ನೆರವೇರಿಸುವೆ. ದೀನದಯಾಳುವೇ! ನಿನ್ನ ವಿಲಾಸವನೇನೆಂದು ಬಣ್ಣಿಸಲಿ?—ಎಂದನು.

ಬಳಿಕ ಸ್ವಾಮಿಯು ಜ್ಞಾನದೇವನ ಕಡೆಗೆ ತಿರುಗಿ ಇನ್ನು ಕೂರ್ಮದಾಸನ ದರ್ಶನಕ್ಕೆ ಹೋಗಬೇಕು. ಆತನಂ ನೋಡದಿದ್ದರೆ ಮನಸ್ಸಮಾಧಾನವಾಗಲಾರದು. ಭಕ್ತರ ಸಂದರ್ಶನವಾದ ದಿವಸವನ್ನು ಸುದಿವಸವೆಂದು ಭಾವಿಸುವೆನು. ಭಕ್ತರ ಸಂಗತಿಯಿಂದ ನನಗೆ ಪರಮಾನಂದವುಂಟಾಗುವುದು-ಎಂದನು.

ಬಳಿಕ ಜ್ಞಾನದೇವನೂ ನಾಮದೇವನೂ ಸಾವಂತನೂ ಶ್ರೀವಿಟ್ಠಲನೂ ಹೊರಟರು. ಶ್ರೋತೃಗಳಿರಾ! ಇದಂ ಕೇಳಿ, ಮೊದಲು ಭಕ್ತರ ಹೆಸರನ್ನೂ ಬಳಿಕ ಸ್ವಾಮಿಯ ಹೆಸರನ್ನೂ ಎಂತು ನೀನು ಹೇಳಿದೆ?— ಎಂದು ನೀವು ಆಕ್ಷೇಪಿಸಬಹುದು. ಆದರೆ ನನ್ನಲ್ಲಿ ಅಧಿಕ್ಷೇಪವನ್ನಿಡಬೇಡಿ. ಶ್ರೀಹರಿಯು 'ಪತಿತಪಾವನನು' ಎಂದು ಪ್ರಸಿದ್ಧನಾಗಿರುವನು. ಆನಾಮದಲ್ಲಿ ಮೊದಲು ಪತಿತಶಬ್ದವೂ ಬಳಿಕ ಪಾವನಶಬ್ದವೂ ಇರುವುದು. ಆದುದರಿಂದ ನಾನು ನುಡಿಯಲ್ಲಿ ಮೊದಲು ಭಕ್ತರ ಹೆಸರನ್ನು ಹೇಳಿರುವೆನು. ಅದಂತಿರಲಿ. ಭಕ್ತವತ್ಸಲನಾದ ಭಗವಂತನು ಇವರೊಡನೆ ಮುಂದೆ ಹೊರಡುತ್ತಿರಲು, ಕೂರ್ಮದಾಸನಿಗೆ ಉತ್ತಮಶಕುನಗಳಾದುವು. ತಣ್ಣಗೆ ಬೀಸುವ ಗಾಳಿಯಿಂದಲೂ ಮಿಂಚಿನಿಂದಲೂ ಮೇಘವು ವರ್ಷಿಸುವುದೆಂಬುದು ಮೊದಲೇ ಸೂಚಿತವಾಗುವಂತೆ, ಕೂರ್ಮದಾಸನಿಗೆ ಬಲಗಣ್ಣು ಹಾರುವುದರಿಂದಲೂ ಅಡಿಗಡಿಗೆ ಬಾಹುಸ್ಫುರಣವುಂಟಾಗುವುದರಿಂದಲೂ ಆನಂದಪ್ರದನಾದ ಜಗನ್ನಾಥನು ಸನ್ನಿಧಾನಕ್ಕೆ

ಬರುವನೆಂಬುದು ಸೂಚಿತವಾಯಿತು. ಕ್ಷಣದಲ್ಲಿ ಸ್ವಾಮಿಯು ಬಳಿಗೆ ಬಂದನು. ಕೂರ್ಮದಾಸನು ಕಂಡು ಪರಮಾನಂದಗೊಂಡು ಸದ್ಭಾವದಿಂದ ಸಾಷ್ಟಾಂಗನಮಸ್ಕಾರ ವಂ ಮಾಡಿ ಪಾಡಿ ಪೊಗಳಿದನು.

ಭಕ್ತಜನೋದ್ಧಾರಕನಾದ ಶ್ರೀವಿಟ್ಠಲನು ಕೂರ್ಮದಾಸನನ್ನು ಆಲಿಂಗಿಸಿ ಕೊಂಡು-ನಿನಗೆ ಇಷ್ಟವಾದ ವರವಂ ಕೇಳು ಕೊಡುವೆನು-ಎನಲು, ಅದಂ ಕೇಳಿ ಆತನು ಸ್ವಾಮಿಯೇ! ನಿನ್ನ ಸಂದರ್ಶನದಿಂದ ಧನ್ಯನಾದೆನು. ನಿರಂತರವೂ ನಿನ್ನ ಸಂದರ್ಶನ ವನ್ನು ಮಾಡುತಿರಬೇಕೆಂದು ಅಪೇಕ್ಷೆಯುಂಟಾಗಿರುವುದು. ಆದುದರಿಂದ ನೀನು ಇಲ್ಲಿಯೇ ನಿರಂತರವಾಗಿ ನಿಲ್ಲಬೇಕು. ಈವರವಂ ನನಗೆ ನೀನು ಕರುಣಿಸಬೇಕು- ಎಂದನು. ಆ ಮಾತಿಗೆ ಶ್ರೀಹರಿಯು ಅವಶ್ಯವಾಗಲಿ-ಎಂದು ಅಲ್ಲಿಯೂ ಭಕ್ತಾನು ಗ್ರಹಕ್ಕೋಸ್ಕರ ನಿಂತನು. ಪಂಡರಪುರದಂತೆ ಅಲ್ಲಿಯೂ ದೇವಾಲಯ ಮೊದಲಾದು ದೆಲ್ಲವೂ ಆಯಿತು. ಆಷಾಢದಲ್ಲಿ ಮತ್ತೆ ಕಾರ್ತಿಕದಲ್ಲಿ ಅಲ್ಲಿಯೂ ಜಾತ್ರೆಯಾಗುವುದು. ಭಾವುಕರಾದ ಭಕ್ತರು ದರ್ಶನಕ್ಕೆ ಹೋಗುತ್ತಿರುವರು.

ಮುಂದಣ ಅಧ್ಯಾಯದಲ್ಲಿ ಕಥೆಯು ರಸವತ್ತಾಗಿರುವುದು. ಶ್ರೋತೃಗಳು ಮನಸ್ಸ್ವಾಸ್ಥ್ಯದಿಂದ ಕೇಳಬೇಕು. ಧನವಂ ಕಾಣುವುದೂ ಲೋಭಿಯು ಆಸೆಯಿಂದ ತಲ್ಲೀನನಾಗುವಂತೆ ಈ ಸತ್ಕಥೆಯಲ್ಲಿ ನೀವು ಆಸಕ್ತರೆನಿಸಬೇಕು. ಮಹೀಪತಿಯು ನಿಮ್ಮ ಚರಣರಜವನ್ನು ಬಯಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಹದಿಮೂರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹದಿನಾಲ್ಕನೆಯ ಅಧ್ಯಾಯ.

ರಾಕನ ಚರಿತ್ರೆ.

ಇಂದು ಅದ್ಭುತವಾದ ಆಶ್ಚರ್ಯವು. ಭಕ್ತವಿಜಯವೆಂಬ ಸೂರ್ಯೋದಯವುಂಟಾ ಗಿರುವುದು. ಸಜ್ಜನರ ಮನಸ್ಸಿನಲ್ಲಿ ಅದೊಂದುಬಗೆಯ ಗೌರವವು ಸಮನಿಸಿರು ವುದು. ಅಪೇಕ್ಷೆಯೆಂಬ ಪ್ರಭೆಯು ಪ್ರಸರಿಸಿರಲು, ಬೋಧವೆಂಬ ಶೀತಲಮಾರು ತವು ಬೀಸುತಿರಲು, ಜ್ಞಾನವೆಂಬ ವೃಕ್ಷವು ಪಲ್ಲವಿತವಾಗುತ ಬಂದುದು. ಸದ್ಭಾ ವನೆಂಬ ಫಲಪುಷ್ಪಗಳು ತಲೆದೋರಿದುವು. ಇದರಿಂದ ರಮಣೀಯವಾದ ಹೃದ ಯೋಪವನದಲ್ಲಿ ಭಾವುಕರು ವಿಶ್ರಾಂತಿಯಂ ಪಡೆಯುವರು.

ಪೂರ್ವಾಧ್ಯಾಯದಲ್ಲಿ ಭಗವಂತನು ಭಕ್ತನಾದ ಕೂರ್ಮದಾಸನಿಗೆ ದರ್ಶನವಂ ಕೊಟ್ಟು ಆತನನ್ನು ಸಂತವಿಟ್ಟನೆಂಬುದಂ ಕೇಳಿದಿರಷ್ಟೆ. ಇನ್ನು ಈಯಧ್ಯಾಯದಲ್ಲಿ ವಿರಕ್ತಶಿರೋಮಣಿಯೂ ಜ್ಞಾನಿಯೂ ಆದ ರಾಕನೆಂಬ ಕುಂಬಾರನ ಚರಿತ್ರೆಯಂ ಆದರದಿಂದ ಆಲಿಸಿ.

ಆ ರಾಕನೆಂಬವನ ಮಡದಿ 'ಬಾಕೆ' ಎಂಬವಳು. ಆಕೆ ಪತಿವ್ರತಾಶಿರೋಮಣಿ. ಅವರಿಗೆ ಒಬ್ಬ ಕನ್ಯಕೆಯಿದ್ದಳು. ಅವಳ ಹೆಸರು 'ವಂಕೆ' ಎಂದು. ಅವಳು ಲಾವಣ್ಯದ ಗಣಿ. ಅವನು ಗುಜರಾತಿಯ ಕುಂಬಾರನು. ಪಂಡರಪುರದಲ್ಲಿ ವಾಸವಾಡುತ್ತ ಕಾಲಕ್ಷೇಪವಂ ಮಾಡಿಕೊಂಡು ಶ್ರೀಹರಿಯಂ ಭಜಿಸುತ್ತಿದ್ದನು. ಇಂತು ಬಹು ದಿವಸಗಳು ಕಳೆದುವು. ಒಂದು ದಿವಸ ಅದೊಂದು ಆಶ್ಚರ್ಯವು ನಡೆದುದು:—ಹಸಿಯ ಮಡಕೆಗಳನ್ನೂ ಗುಡಾಣಗಳನ್ನೂ ಒಣಗಿಸಿ ನಡುಮನೆಯಲ್ಲಿ ಇಟ್ಟಿದ್ದನು. ಒಂದು ಬೆಕ್ಕು ಮೂರುಮರಿಗಳನ್ನು ಈಂದು ಒಂದು ಗುಡಾಣದಲ್ಲಿ ಅವುಗಳನ್ನು ಇಟ್ಟು ಹಗಲೂ ಇರುಳೂ ಅಲ್ಲಿಯೇ ಸುತ್ತಾಡುತ್ತ ಮರಿಗಳ ಯೋಗಕ್ಷೇಮವಂ ನೋಡಿ ಕೊಳ್ಳುತ್ತಿದ್ದಿತು. ಒಂದು ದಿವಸ ಆ ಬೆಕ್ಕು ಹೊರಗೆ ತಿರುಗುವುದಕ್ಕೆಹೋಗಿ ಇರಲು, ಆ ಕುಂಬಾರನು ಮಡಿಕೆಗಳನ್ನೂ ಗುಡಾಣಗಳನ್ನೂ ಆವಿಗೆಯಲ್ಲಿ ಇಟ್ಟು ಸವ್ರದೆಯಂ ಹಾಕಿ ಬೆಂಕಿಯಂ ಹತ್ತಿಸಿದನು. ಬೆಕ್ಕಿನಮರಿಗಳು ಗುಡಾಣದಲ್ಲಿರುವುದನ್ನು ಅವನು ತಿಳಿಯಲಿಲ್ಲ. ಅಗ್ನಿಯು ಪ್ರಜ್ವಲಿಸುತ ಬಂದಿತು. ಅಷ್ಟುಹೊತ್ತಿಗೆ ಆ ಬೆಕ್ಕು ಅಲ್ಲಿಗೆ ಬಂದು ತನ್ನ ಮರಿಗಳನ್ನು ಕಾಣದೆ ಅರಸುತ್ತ ಆವಿಗೆಯ ಬಳಿ ಸುತ್ತಲೂ ಸುತ್ತುತ್ತ ಅರುಚಿಕೊಳುತಿದ್ದಿತು.

ಆಗ ಕುಂಬಾರನು ಜ್ಞಾಪ್ತಿಯಂ ಮಾಡಿಕೊಂಡು "ಅಹಹ ಅನ್ಯಾಯವಾಯಿ ತಲ್ಲಾ !!" ಎಂದು ಸಂತಪಿಸುತ್ತ ಎದೆಯಂ ಬಡಿದುಕೊಳ್ಳುತ್ತ ಮಡದಿಯಂ ಕರೆದು ನನ್ನಿಂದ ಮಹಾಪರಾಧವಾಯಿತು. ಏನಮಾಡಲಿ?— ಎಂದನು. ಆಕೆ ಓಡಿಬಂದು "ಅದೇನದೇನು" ಎಂದು ಬೆಸಗೊಳಲು, ರಾಕನು ಗದ್ಗದಕಂಠನಾಗಿ—ಗುಡಾಣದ ಒಳಗೆ ಬೆಕ್ಕಿನ ಮರಿಗಳು ಇರುವುವೆಂಬುದನ್ನು ತಿಳಿಯದೆ ಆವಿಗೆಯಲ್ಲಿಟ್ಟು ಸುಟ್ಟು ಬಿಟ್ಟೆನಲ್ಲಾ ! ಆ ಮರಿಗಳ ತಾಯಿ ಮೋಹದಿಂದ ಇಲ್ಲಿ ಕಿರುಚಿಕೊಳ್ಳುತ್ತಿದೆಯಲ್ಲಾ !!— ಎಂದು ನುಡಿಯುತ್ತ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು.

ಆಕೆ ಉಪಚರಿಸಿ ಎಚ್ಚರಗೊಳಿಸಿದಳು. ರಾಕನು ಅನುತಪ್ತನಾಗಿ ಸ್ವಾಮಿ ಯೇ! ಪಂಡರೀನಾಥನೇ ! ಕೃಪೆಮಾಡು. ನೀನು ಮಹಾಮಹಿಮನು. ಲಾಕ್ಷಾಗೃಹ ದಲ್ಲಿ ಪಾಂಡವರಂ ಸಲಹಿದೆ. ಕೆಳಗೆ ಬೆಂಕಿಯ ಉರಿಯಿಂದ ಕುದಿದ ಕಡಾಯಿಯಲ್ಲಿ ಇದ್ದ ಸಣ್ಣ ಕಪ್ಪೆಯು ಸಂಕಟಗೊಂಡು ನಿನ್ನಂ ಧ್ಯಾನಿಸಲು, ನೀನು ಪ್ರಸನ್ನನಾಗಿ, ಎಷ್ಟು ಉರಿಯಂ ಹಾಕಿದರೂ ನೀರನ್ನು ಕಾಯದಂತೆ ಮಾಡಿದೆ. ಈಗ ದುಸ್ಸಹಸಂಕ ಟಕ್ಕೆ ನಾನು ಒಳಗಾಗಿರುವೆನು. ನೀನು ಅಘಟಿತಘಟನಾಸಾಮರ್ಥ್ಯವುಳ್ಳವನು. ನೀನು

ಎಣಿಸಿದರೆ ಯಾವುದುತಾನೇ ಅಸಾಧ್ಯವು ? ನಿನ್ನ ಪಾದವಂ ಸ್ಮರಿಸಿದ ಪ್ರಹ್ಲಾದನನ್ನು ಅಗ್ನಿಯಿಂದ ಬದುಕಿಸಿದೆ. ಈ ಬೆಕ್ಕಿನದು ತಮೋಗುಣವು. ನಿನ್ನ ಸ್ಮರಣೆ ಅದಕ್ಕೆ ಸರ್ವಥಾ ಉಂಟಾಗಲಾರದು. ನೀನು ಕೃಪಾವಾರಿಧಿ. ಆದುದರಿಂದ ಬೆಕ್ಕಿನ ಪಿಳ್ಳೆ ಗಳನ್ನು ಬದುಕಿಸಬೇಕು—ಎಂದು ಹಲವುಬಗೆಯಿಂದ ಮೊರೆಯಿಟ್ಟನು.

ಆತನ ಮಡದಿ ಆತನನ್ನು ಕುರಿತು—ದೇವರಿಗೆ ಏನಾದರೂ ಪ್ರಾರ್ಥನೆಯಂ ಮಾಡಿಕೊಳ್ಳಬೇಕು. ಅದರಿಂದಾದರೂ ದೇವನು ಒಲಿದಾನು—ಎನಲು, ಅದಂ ಕೇಳಿ ರಾಕನು—ಅಗ್ನಿಯಲ್ಲಿ ಸಿಕ್ಕಿರುವ ಬೆಕ್ಕಿನಮರಿಗಳು ಬದುಕಿಕೊಂಡರೆ, ಇನ್ನುಮೇಲೆ ಈ ಸಂಸಾರವನ್ನು ಬಿಟ್ಟುಬಿಡುವೆನು. ಮತ್ತೆ ಎಂದಿಗೂ ಮಾಡೆನು—ಎಂದು ಪ್ರಾರ್ಥನೆಯಂ ಮಾಡಿಕೊಂಡನು.

ಬಳಿಕ ದಂಪತಿಗಳಿಬ್ಬರೂ ಸ್ವಾಮಿಯನ್ನು ಕುರಿತು ಅನನ್ಯಭಾವದಿಂದ—ಎಲೈ ದೀನಜನೋದ್ಧಾರಕನೆ! ಕರುಣಾಸಾಗರನೇ! ಬೇಗದಿಂ ಪ್ರಸನ್ನನಾಗು. ನಮ್ಮ ಸಂಕಟವಂ ಪರಿಹರಿಸು-ಎಂದು ಮೊರೆಯಿಡುತ್ತ, ಕಣ್ಣುಗಳಿಂದ ಸಂತತವಾದ ಅಶ್ರುಧಾರೆಯಂ ಸುರಿಯಿಸುತ್ತ, ಮಹತ್ತರವಾದ ಗಾಳಿಯಿಂದ ಉದ್ದೀಪ್ತವಾದ ಅಗ್ನಿಯಿಂ ಬೇಯುತಿರುವ ಆವಿಗೆಯಂ ಅಡಿಗಡಿಗೆ ನೋಡಿ ರೋದನವಂ ಮಾಡುತ್ತ ಮೂರುದಿನಗಳವರೆಗೂ ಅನ್ನೋದಕಗಳಿಲ್ಲದೆ ಅಲ್ಲಿಯೇ ಹೊರಳಾಡುತ್ತ ತಾವು ಮಾಡಿದ ಪ್ರಾರ್ಥನೆಗೆ ಶ್ರೀಹರಿಯು ಒಲಿದಾನು—ಎಂದು ಮನದಲ್ಲಿ ಆಶೆಯಂ ಹಿಡಿದು—ಮಹಾಮಹಿಮನೇ! ವಿಟ್ಠಲನೇ! ಪ್ರಸನ್ನನಾಗು—ಎಂದು ಮತ್ತೆಮತ್ತೆ ಕೂಗಿಕೊಳ್ಳುತಿದ್ದರು.

ಮೂರನೆಯದಿನ ಅಗ್ನಿಯು ಶಾಂತವಾಯಿತು. ಭಾಂಡಗಳೆಲ್ಲವೂ ಕಾಣಿಸಿದುವು. ಬೆಕ್ಕು ಸುತ್ತಲೂ ಸುತ್ತುತ್ತ ಮೋಹದಿಂದ ಕೂಗುತ್ತಲೇ ಇದ್ದಿತು. ಆಗ ಶ್ರೀರುಕ್ಮಿಣೀಪತಿಯು ದುರ್ಘಟವಾದ ಕಾರ್ಯವಂ ನಡೆಯಿಸಿದನು. ಭಾಗ್ಯವಂತರಾದ ಶ್ರೋತೃಗಳು ಆಲಿಸಬೇಕು. ತಾಯ ಧ್ವನಿಯಂ ಕೇಳಿ ಮರಿಗಳು ಆವಿಗೆಯೊಳಗಣಿಂದ ಕೂಗಿಕೊಂಡುವು. ರಾಕನೂ ಅವನ ಮಡದಿಯೂ ಆ ಧ್ವನಿಯಂಕೇಳಿ ಥಟ್ಟನೆ ಆವಿಗೆಯ ಬಳಿಗೆ ಹೋಗಿ ನೋಡಲು, ಒಂದು ಗುಡಾಣವು ಹಸಿದಾಗಿಯೇ ಇದ್ದಿತು. ಅದರಲ್ಲಿ ಆ ಬೆಕ್ಕಿನಮರಿಗಳು ಮೂರೂ ಜೀವದಿಂದ ಇದ್ದುವು. ಅವಂ ನೋಡಿ, ಶ್ರೀರುಕ್ಮಿಣೀರಮಣನು ನಮ್ಮ ವಿಷಯದಲ್ಲಿ ಕೃಪೆಯಂ ಮಾಡಿದನು-ಎಂದು ಪರಮಾನಂದಭರಿತರಾದರು. ಮೂರುದಿನಗಳಿಂದ ಉಂಟಾದ ನಿರಾಹಾರತೆಯಿಂದ ಬಾಡಿ ಬಳಲಿದ್ದ ಅವರ ಮುಖವು ಉಲ್ಲಾಸದಿಂದ ಕಳಕಳಿಸಿತು. ಎಣ್ಣೆಯ ಸೇಚನೆಯಿಂದ ದೀಪವು ಎಂತು ಪ್ರಜ್ವಲಿಸುವುದೋ; ವೃಷ್ಟಿಯಿಂದ ತೃಣಭೂಮಿಯು ಎಂತು ಕಂಗೊಳಿಸುವುದೋ; ನಿಧಿಯನ್ನು ನೋಡುವುದರಿಂದ ಬಡವನ ಮುಖವು ಎಂತು ವಿಕಾಸವನ್ನು ಹೊಂದುವುದೋ; ಸೂರ್ಯೋದಯದಿಂದ ಸರೋವರದಲ್ಲಿ ತಾವರೆಯೆಂತು ಬಾಯಿಬಿಡುವುದೋ;

ಅಂತು ಶ್ರೀಹರಿಯ ಕೃಪೆಯಿಂದ ರಾಕನ ಹೃದಯವು ಪರಮೋಲ್ಲಾಸವನ್ನು ಹೊಂದಿತು. ಅನಂತರಪುರದ ಸಕಲಜನರೂ "ಈ ರಾಕನ ಭಗವದ್ಭಕ್ತಿಯು ಅತಿಶಯಿತವಾದುದು. ಸಂಕಟದಲ್ಲಿ ಲಕ್ಷ್ಮೀಪತಿಯು ಒಲಿದನು." ಎಂದು ಹೊಗಳಿದರು. ರಾಕನು ಅನಿತರಸಾಧಾರಣವಾದ ಕೀರ್ತಿಯನ್ನು ಪಡೆದನು. ಬಳಿಕ ಆತನು ತನ್ನ ಮಡದಿಯಂ ಕರೆದು-ಬೆಕ್ಕಿನ ಮರಿಗಳು ಬೆಂಕಿಯಲ್ಲಿ ಬದುಕಿದರೆ ನಾನು ಪ್ರಾಪಂಚಿಕವಾದ ಸಂಸಾರ ವ್ಯಾಪಾರವನ್ನು ಮಾಡುವುದಿಲ್ಲವೆಂದು ಪ್ರಾರ್ಥನೆಯಂ ಮಾಡಿದೆನು. ಅಂತಹ ಸಂಕಟದಲ್ಲಿ ಜಗನ್ನಾಥನು ನಮಗೆ ಒಲಿದನು. ಆ ಪ್ರಾರ್ಥನೆಯನ್ನು ಪಂಢರೀನಾಥನಿಗೆ ಸಲಿಸಬೇಕು. ಇನ್ನು ಈ ಸಂಸಾರದುಃಖವು ನಮಗೆ ಏತಕ್ಕೆ ?—ಎಂದು ನುಡಿದು ಕೇವಲ ವೈರಾಗ್ಯವನ್ನು ತಾಳಿ, ಊರಲ್ಲಿ ಇದ್ದ ಬ್ರಾಹ್ಮಣರೆಲ್ಲರಂ ಕರೆದು ತನ್ನ ಮನೆಯಲ್ಲಿದ್ದ ಸರ್ವಸ್ವವನ್ನೂ ಅವರಿಗೆ ಸದ್ಭಾವದಿಂದ ದಾನಮಾಡಿದನು. ಬಳಿಕ ಮೂವರೂ ಸಣ್ಣ ಜೀರ್ಣವಸ್ತ್ರವಂ ಧರಿಸಿಕೊಂಡು, ಉದರಭರಣಕ್ಕೋಸ್ಕರ ಅಡವಿಗೆ ಹೋಗಿ ಸೌದೆಯಂ ತಂದು ಮಾರಿ ಅದರಿಂದ ಧಾನ್ಯವಂ ತಂದು ಅಡಿಗೆಯಂ ಮಾಡಿ ಅತಿಥಿಗಳಿಗೆ ಭೋಜನವಂ ಮಾಡಿಸಿ ಶೇಷವನ್ನು ತಾವು ಊಟಮಾಡಿ, ಹಗಲೂ ಇರುಳೂ ಅನನ್ಯಭಾವದಿಂದ ಪಾಂಡುರಂಗಸ್ವಾಮಿಯಂ ಸ್ಮರಣೆಮಾಡುತ್ತಿದ್ದರು. ಬೀದಿಯಲ್ಲಿ ಬಿದ್ದಿರುವ ಬಟ್ಟೆಗಳನ್ನು ಹುಡುಕಿ ಸಂಪಾದಿಸಿಕೊಂಡು ಬಂದು ಅದರಿಂದ ಮಾನವಂ ಕಾಪಾಡಿಕೊಳ್ಳುತ್ತಿದ್ದರು. ಯಾರು ವಸ್ತ್ರವಂ ಕೊಡುವುದಕ್ಕೆ ಬಂದರೂ ಅದಂ ಕಣ್ಣಿಂದಲೂ ನೋಡರು. ಒಂದುದಿನ ಒಬ್ಬ ಸಿಂಪಿಗರವನ ಮನೆಯ ಬಳಿಯಲ್ಲಿ ರಾಕನು ಬಟ್ಟೆಯನ್ನು ಹುಡುಕುತ್ತಿರಲು, ಆ ಮನೆಯವನು ನೋಡಿ, ರಾಕನನ್ನು ಕುರಿತು—ನೋಡಲು ನೀನು ಮಹಾವೈರಾಗ್ಯಶಾಲಿಯಾಗಿ ತೋರುತ್ತಿರುವೆ. ಈ ಬಟ್ಟೆಗಳನ್ನು ಏಕೆ ತೆಗೆದುಕೊಂಡುಹೋಗುವೆ ? ಇವು ನಮಗೆ ಬೇಕು—ಎಂದು ಅಜ್ಞಾನದಿಂದ ತಿರಸ್ಕರಿಸಿ ಮಾತನಾಡಲು, ರಾಕನು ಆ ಬಟ್ಟೆಗಳನ್ನು ಬಿಸುಟು ಮಡದಿಯನ್ನು ಕುರಿತು—ಇನ್ನುಮೇಲೆ ಅರಣ್ಯದಲ್ಲಿ ಬಿದ್ದಿರುವ ಬಟ್ಟೆಗಳನ್ನಾದರೂ ಆಯ್ದುತಂದು ಮಾನವಂ ಮುಚ್ಚಿಕೊಳ್ಳಬೇಕು—ಎಂದನು. ಬ್ರಾಹ್ಮಣರು ಭೋಜನಮಾಡಿ ಬಿಸುಟ ಎಂಜಲೆಲೆಗಳನ್ನು ತೆಗೆದುಕೊಂಡು ಅದರಿಂದಲಾದರೂ ಮಾನಕ್ಕೆ ಮರೆಮಾಡಿಕೊಳ್ಳುತ್ತಿದ್ದರು. ಲೋಕದಲ್ಲಿ ವೈರಾಗ್ಯಶಾಲಿಗಳು ಅನೇಕರಿರಬಹುದು. ಈ ರಾಕನ ಸಮರು ಯಾರೂ ದೊರೆಯರು. ದೃಷ್ಟಾಂತವನ್ನು ಹೇಳಲು ಕವಿವಾಕ್ಯ ಕುಂಠಿತವಾಗುವುದು. ಮುಷ್ಟಿಯಲ್ಲಿ ಸೂರ್ಯನಂ ಹಿಡಿಯಬಹುದು. ವಾಯುವನ್ನು ಪಂಜರದಲ್ಲಿ ಕೂಡಬಹುದು. ಆದರೆ ಭಗವದ್ಭಕ್ತರ ಮಹಿಮೆಯಂ ಇದ್ದಂತೆ ಬಣ್ಣಿಸಲು ಶಕ್ಯವಲ್ಲ. ಪರರ ಜೀವಕ್ಕೋಸ್ಕರ ಸಂಸಾರವನ್ನು ಬಿಡುವ ಮಹಾನುಭಾವನು ಯಾರು ?. ಕ್ಷುದ್ರದೇವತೆಗಳಂ ಭಜಿಸಿ ಪುತ್ರರನ್ನೂ ಧನಧಾನ್ಯಂಗಳನ್ನೂ ಅಪೇಕ್ಷಿಸುವರು. ಮತ್ತು ಇತರವಿಧವಾದ ಅನೇಕಾಭಿಲಷಿತಗಳನ್ನು ಪ್ರಾರ್ಥಿಸುವರು. ಆ ಕುಂಬಾರನು ಅಂತಹನಲ್ಲ. ದೀರ್ಘಕಾಟ

ವಾದ ಪ್ರಾರ್ಥನೆಯಂ ಮಾಡಿದುದರಿಂದ ಭಕ್ತಬಂಧುವಾದ ವೈಕುಂಠನಾಥನು ಸಂಕಟವನ್ನು ಪರಿಹರಿಸಿದನು. ಇನ್ನು ರಾಕನಂತಹ ವಿರಕ್ತನು ಆವನೂ ಇಲ್ಲ.

ಒಂದುದಿನ ಈತನ ಮಗಳು ಮಂಕೆಯು ಸ್ನಾನಕ್ಕೋಸ್ಕರ ಭೀಮಾತೀರಕ್ಕೆ ಹೋಗಿರಲು, ಅಲ್ಲಿಗೆ ನಾಮದೇವನ ಮಗಳೂ ಬಂದು ಬಟ್ಟೆಯಂ ಒಗೆಯುತಿದ್ದಳು. ಒಗೆವ ನೀರು ಸುತ್ತಲೂ ಸಿಡಿಯುತಿದ್ದಿತು. ಮಂಕೆಯು ನೋಡಿ ಅವಳಂ ಕುರಿತು–ಎಲೆ ಕೆಳದಿ! ನಾನು ಸ್ನಾನವಂಮಾಡಿ ಮಾನಸಪೂಜೆಗೆ ಕುಳಿತಿರುವೆನು. ಹನಿಗಳು ಸಿಡಿಯುತಿವೆ. ಮೆಲ್ಲನೆ ಒಗೆ–ಎನಲು, ಅದಕ್ಕವಳು-ನೀನು ಕುಂಭಕಾರಜಾತಿಯವಳು. ನಿನ್ನ ಆಚಾರವು ಬಹುವಾಯಿತು. ನಿನ್ನ ತಂದೆಯು ಸುಖದ ಸಂಸಾರವನ್ನು ಬಿಟ್ಟು ಮನೆಮನೆಗೂ ತಿರಿಯುತ್ತ ಬರುತಿರುವನು. ಮತ್ತು ಆವನು ಕಾಮ್ಯಾರ್ಥಿ. ಪಂಢರೀನಾಥನನ್ನು ಪ್ರಾರ್ಥಿಸಿ ತನ್ನ ಕಾಮಿತಾರ್ಥವನ್ನು ಪಡೆದುಕೊಂಡನು-ಎಂದಳು. ಅದಂ ಕೇಳಿ ಮಂಕೆ ಅವಳಂ ಕುರಿತು–ನಿನ್ನ ತಂದೆ ನಾಮದೇವನು ಎಂದೂ ಅಳುತ್ತಲೇ ಇರುವನು. ಬೌದ್ಧಾವತಾರವಂ ತಾಳಿದ ಭಗವಂತನನ್ನು ಆಗಾಗ ಸಂಕಟಗೊಳಿಸುತಿರುವನು–ಎಂದಳು. ಇಂತು ಪರಸ್ಪರವಾಗಿ ನುಡಿದಾಡುತ್ತ ಇಬ್ಬರೂ ಕಲಹಮಾಡಿ ತಮ್ಮ ತಮ್ಮ ಮನೆಗೆ ಹೋದರು.

ನಾಮದೇವನು ಕೀರ್ತನವನ್ನು ಮುಗಿಯಿಸಿಕೊಂಡು ಮನೆಗೆ ಬರಲು, ಆತನ ಮಗಳು ಆತನನ್ನು ಕುರಿತು ಭೀಮಾತೀರದಲ್ಲಿ ಉಂಟಾದ ಜಗಳವಂ ಹೇಳಿ-ಅಪ್ಪಾ! ಇವಳೊಬ್ಬಳು ನಿನ್ನಲ್ಲಿ ದೋಷವಂ ನುಡಿದಳು. ತನ್ನ ತಂದೆ ನಿಷ್ಕಾಮನು. ಅಡವಿಯಿಂದ ಕಾಷ್ಠಗಳಂ ತಂದು ಮಾರಿ ತನ್ನ ಉದರಭರಣವಂ ಮಾಡುತ್ತಿರುವನು–ಎಂದು ಹೊಗಳಿಕೊಂಡಳು-ಎನಲು, ಆ ಮಾತಂ ಕೇಳಿ ನಾಮದೇವನು ವಿಸ್ಮಿತನಾಗಿ ದೇವಸ್ಥಾನದ ಮಹಾದ್ವಾರವಂ ಸೇರಿ ಚಕ್ರಪಾಣಿಯಂ ಕುರಿತು–ಸ್ವಾಮಿಯೇ ! ನಿನ್ನ ಭಕ್ತನಾದ ಕುಂಬಾರ ರಾಕನು ನಿಷ್ಕಾಮನೋ ಸಕಾಮನೋ? ಇದಂ ನನಗೆ ನಿಶ್ಚಿತವಾಗಿ ಹೇಳು–ಎಂದು ಬೆಸಗೊಳ್ಳಲು, ಲಕ್ಷ್ಮೀಪತಿಯು ನಕ್ಕು–ಅವನಂತಹ ವೈರಾಗ್ಯಶಾಲಿ ಬ್ರಹ್ಮಸೃಷ್ಟಿಯಲ್ಲಿಯೇ ಇಲ್ಲ–ಎಂದನು. ನಾಮದೇವನು ಅವಕ್ಕೆ-ಸ್ವಾಮಿಯೇ! ಆತನ ಸ್ಥಿತಿಯಂ ನನಗೆ ತೋರಿಸಬೇಕು–ಎನಲು, ಸ್ವಾಮಿಯು ಅವಶ್ಯವಾಗಲಿ–ಎಂದು ನುಡಿದನು. ನಾಮದೇವನನ್ನು ಸಂಗಡ ಕರೆದುಕೊಂಡು ರುಕ್ಮಿಣೀಸಮೇತನಾಗಿ ಹೊರಟು ಅರಣ್ಯವಂ ಸೇರಿದನು. ಆಗ ಮಧ್ಯಾಹ್ನಸಮಯ. ಕ್ರೂರವಾದ ಬಿಸಿಲು ತಪಿಸುತಿದ್ದಿತು. ರಾಕನು ಒಂದೆಡೆಯಲ್ಲಿ ಸೌದೆಯಂ ಆಯುತಿದ್ದನು. ರುಕ್ಮಿಣೀಪತಿಯು ಗುಪ್ತವಾಗಿ ಕೌತುಕವಂ ನೋಡುತಿದ್ದನು. ಪತಿವ್ರತೆಯಾದ ಆ ರಾಕನ ಮಡದಿ ಮಗಳೊಡನೆ ತಾನು ಸೌದೆಯಂ ಆಯುತ್ತ ಹೋಗುತಿದ್ದಳು. ಒಂದೆಡೆಯಲ್ಲಿ ಎರಡು ಸೌದೆಯು ಜೋಡಿಸಿಟ್ಟದ್ದಂತೆ ಕಾಣಿಸಿತು. ಅದಂ ಕಂಡು ಇದನ್ನು ಯಾರೋ ಜೋಡಿಸಿಟ್ಟಿರುವರು–ಎಂದು ಬಗೆದು ಅದನ್ನು ತೆಗೆದುಕೊಳ್ಳಲಿಲ್ಲ. ಮರವ

ಕೊಂಬೆಯಂ ಮುರಿಯರು. ತಾನಾಗಿ ಒಣಗಿ ನೆಲದಲ್ಲಿ ಬಿದ್ದುದನ್ನೇ ಮೆಲ್ಲನೆ ಎತ್ತಿ ಕೊಳ್ಳುತಿದ್ದರು. ಭೂಮಿಯಲ್ಲಿ ಹೆಜ್ಜೆಯನ್ನು ಇಡುವಾಗ ಇರುವೆಗಳು ಎಲ್ಲಿ ಸಿಕ್ಕು ವುವೋ, ಹಿಂಸಾದೋಷವು ಎಲ್ಲಿ ಸಂಘಟಿಸುವುದೋ—ಎಂದು ಎಚ್ಚರಿಕೆಯಿಂದ ನಡೆ ಯುತಿರುವರು. ಇದಂ ಕಂಡು ಹೃಷೀಕೇಶನು ರುಕ್ಮಿಣಿಗೆ ಸನ್ನೆಯಂಮಾಡಿ ತೋರಿ; ನಾಮದೇವನಂ ಕುರಿತು—ವಿಷಯದಲ್ಲಿ ವಿರಕ್ತನಾಗಿ ಅಹಿಂಸಾಪರನಾಗಿ ಲೌಕಿಕದಂಭಾ ಚಾರಗಳಂ ಬಿಟ್ಟು ನಿಷ್ಕಾಮತೆಯಿಂದ ನನ್ನಂ ಭಜಿಸುವನಿವನೊಬ್ಬನೇ-ಎಂದನು. ನಾಮದೇವನು . ರುಕ್ಮಿಣಿಯಂ ಕುರಿತು—ತಾಯೇ! ನೀನು ಇವನಿಗೆ ಏನಾದರೂ ಕೊಟ್ಟುನೋಡು-ಎನಲು, ರುಕ್ಮಿಣಿಯು ತನ್ನ ಕೈಯಲ್ಲಿದ್ದ ರತ್ನಖಚಿತವಾದ ಕಂಕಣ ವಂ ಬಾದು ಕಡೆ ಇಟ್ಟು ಅದರಮೇಲೆ ಒಣಗಿದ ಬಾದು ಸೌದೆಯಂ ಮುಚ್ಚಿದಳು. ಬಳಿಕ ರಾಕನು ಮಡದಿಯೊಡನೆಯೂ ಮಗಳೊಡನೆಯೂ ಕಾಷ್ಠವಂ ಆಯುತ್ತ ಆಬಳಿಗೆ ಬಂದು ಆ ಸೌದೆಯಂ ತೆಗೆದುಕೊಳ್ಳುವುದಕ್ಕೆ ಎತ್ತಲು, ಅದರ ಕೆಳಗೆ ದಿವ್ಯ ವಾದ ರತ್ನಕಂಕಣವು ದೃಗ್ಗೋಚರವಾಯಿತು. ವಿರಕ್ತನಾದ ಆತನು ಅದಂ ನೋಡಿ ಮಡದಿಯನ್ನು ಕುರಿತು—ಈ ಅನರ್ಥವನ್ನು ನೋಡಿದೆಯಾ ?—ಎಂದು ತೋರಿ ಮೊದಲಂತೆ ಸೌದೆಯಂ ಮುಚ್ಚಿ ಇಟ್ಟನು. ಆಕೆ-ಈಶ್ವರಭಜನೆಯಂ ಮಾಡು ತಿರಲು ವಿಘ್ನವು ಪ್ರಾಪ್ತವಾಯಿತು. ಯಾವಗ್ರಹವು ಅಡ್ಡಬಂದು ಈ ಕಂಕ ಣವನ್ನಿಲ್ಲಿ ತಂದು ಹಾಕಿತೋ ? ನಾವು ಪ್ರಪಂಚವನ್ನೇ ಬಿಟ್ಟು ಶ್ರೀಪಂಢರೀ ನಾಥನನ್ನು ಶರಣುಹೊಕ್ಕಿರುವೆವು. ನಮಗೆ ಈ ರತ್ನಕಂಕಣವು ಏತಕ್ಕೆ ಬೇಕು— ಎಂದಳು. ಶ್ವಾನವು ಮುಟ್ಟಿದ ಅನ್ನವನ್ನು ಬ್ರಾಹ್ಮಣರು ಎಂತು ತ್ಯಜಿಸುವ ರೋ, ಚಾತಕವು ಭೂಮಿಯಲ್ಲಿ ಬಿದ್ದ ಉದಕವನ್ನು ಎಂತು ತೊರೆಯುವುದೋ ಅಂತು ಆ ಕಂಕಣದ ಮೇಲಿದ್ದ ಕಾಷ್ಠವನ್ನು ಬಿಟ್ಟು ಮುಂದೆ ನಡೆದರು.

ಬಳಿಕ ನಾಮದೇವನು ಸ್ವಾಮಿಯನ್ನು ಕುರಿತು-ಜಗನ್ನಾಥನೇ! ಕುಂಬಾರ ರಾಕನು ನಿಶ್ಚಯದಿಂದ ನಿನ್ನ ಭಜನೆಯಲ್ಲಿ ನಿರತನಾದವನು. ಆದುದರಿಂದ ಇವನಿಗೆ ಸಾಕ್ಷಾತ್ಸಗುಣರೂಪದಿಂದ ಈಕ್ಷಣವೇ ದರ್ಶನವಂ ಕೊಡಬೇಕು—ಎನಲು, ಸ್ವಾಮಿ ಯು ನಕ್ಕು ನಾಮದೇವನನ್ನು ಕುರಿತು—ನಿನ್ನ ಮನಸ್ಸಿಗೆ ನಿದರ್ಶನ ಬಂದಿತೇ ? ಇನ್ನೂ ಸಂಶಯವೋ ?—ಎಂದನು. ನಾಮದೇವನು-ಸತ್ಯವಾಗಿಯೂ ಈ ರಾಕನು ನಿರಪೇ ಕ್ಷನು. ಈತನ ರೀತಿಗೆ ನನ್ನದು ಸರಿಬಾರದು—ಎಂದು ಬಿನ್ನವಿಸಿಕೊಂಡನು.

ಬಳಿಕ ಲಕ್ಷ್ಮೀಪತಿಯು, ನೀಲಮೇಘಶ್ಯಾಮನೂ ಚತುರ್ಭುಜಯುಕ್ತನೂ ಪೀತಾಂಬರಧಾರಿಯೂ ಕಿರೀಟಕುಂಡಲವನಮಾಲಾಲಂಕೃತನೂ ಆಗಿ ಇದಿರಿಗೆ ಬಂದು ಪ್ರಸನ್ನನಾಗಿ ಸಕುಟುಂಬನಾದ ಆ ರಾಕನಿಗೆ ದರ್ಶನಕೊಟ್ಟು ಆತನನನುಗ್ರಹಿಸಿದನು.

ಇಂತು ಶ್ರೀಭಕ್ತವಿಜಯದಲ್ಲಿ ಹದಿನಾಲ್ಕನೆಯ ಅಧ್ಯಾಯಂ ಸಂಪೂರ್ಣಂ.

ಹದಿನೈದನೆಯ ಅಧ್ಯಾಯ.

ಗೋರನ ಚರಿತ್ರೆ.

ಎಲೈ ಶ್ರೋತೃಗಳಿರಾ! ಇನ್ನು ವಿಷ್ಣುಭಕ್ತರಲ್ಲಿ ಶ್ರೇಷ್ಠನಾದ "ಗೋರ" ಎಂಬ ಭಾಗವತನ ಚರಿತ್ರೆಯಂ ಹೇಳುವೆನು:—ಅವಧಾನದಿಂದ ಆಲಿಸಿ.

ತೆರಢೋಕಿ ಎಂಬ ಗ್ರಾಮದಲ್ಲಿ ಗೋರನೆಂಬ ಕುಂಬಾರನು ಮನೆಯಂ ಕಟ್ಟಿಕೊಂಡು ಸುಪನ್ನನಾಗಿ ಸಂಸಾರವಮಾಡುತ್ತ ಶ್ರೀಹರಿಭಜನೆಯಂ ಮಾಡುತ್ತಿದ್ದನು. ಮಣ್ಣನ್ನು ಅಗೆಯುವಾಗಲೂ, ನಡೆಯುವಾಗಲೂ, ಕುಳಿತುಕೊಳ್ಳುವಾಗಲೂ, ಏಳುವಾಗಲೂ, ವಿಶ್ರಾಂತಿಗೊಳ್ಳುವಾಗಲೂ, ಮಡಕೆಗಳಂ ಮಾಡುವಾಗಲೂ ಪಂಡರೀನಾಥನನ್ನೇ ಧ್ಯಾನಿಸುತ್ತ ಆ ಸ್ವಾಮಿಯ ಮಂಗಳನಾಮಂಗಳಂ ಜಪಿಸುತ್ತಿದ್ದನು. ಪ್ರಾಪಂಚಿಕವಾದ ಮಾತುಗಳನ್ನಾಡುತ್ತಿದ್ದರೂ, ಇಂದ್ರಿಯವ್ಯಾಪಾರಗಳಲ್ಲಿ ಇರುತಿದ್ದರೂ ಒಂದುಕ್ಷಣವೂ ಶ್ರೀಹರಿಯ ಧ್ಯಾನವಂ ಬಿಡುತ್ತಿರಲಿಲ್ಲ. ಇದು ಸುಖವು ಇದು ದುಃಖವು-ಎಂದು ಮನಸ್ಸಿನಲ್ಲಿ ತಾರದೆ, ಮಾನಾಪಮಾನಗಳಂ ಲಕ್ಷಿಸದೆ ರಾಜನನ್ನೂ, ಭಿಕ್ಷುಕನನ್ನೂ ಸಮತೆಯಿಂದ ಎಣಿಸುತ್ತ ಇರುತ್ತಿದ್ದನು.

ಒಂದು ದಿವಸ ಆತನ ಮಡದಿಯು ಮಗುವನ್ನು ಆಡುವುದಕ್ಕೆ ಅಂಗಳದಲ್ಲಿ ಬಿಟ್ಟು ನೀರನ್ನು ತರುವುದಕ್ಕೆ ಹೋಗಿರಲು, ಗೋರನು ಮಣ್ಣಿನ ಪಾತಿಯಂ ಮಾಡಿ ಕಣ್ಣುಗಳಂ ಮುಚ್ಚಿಕೊಂಡು ಸ್ವೇಚ್ಛೆಯಿಂದ ತುಳಿಯುತ್ತ ಹೃದಯದಲ್ಲಿ ವಿಟ್ಠಲಮೂರ್ತಿಯಂ ಧ್ಯಾನಿಸುತ್ತ ಆನಂದಬಾಷ್ಪವು ಸುರಿಯುತ್ತಿರಲು, ದೇಹಸ್ಫೂರ್ತಿ ಲೇಶವೂ ಇಲ್ಲದೆ ಇದ್ದನು. ಆಗ ಅಂಗಳದಲ್ಲಿ ಆಡುತ್ತಿದ್ದ ಶಿಶುವು ಅಂಬೆಗಾಲಿಕ್ಕುತ್ತ ಮಣ್ಣಿನ ಬಳಿಗೆ ಬರಲು, ಎಲ್ಲಾ ಮಣ್ಣನ್ನೂ ಎತ್ತಿ ಗುಡ್ಡೆ ಮಾಡುವಾಗ ಆ ಶಿಶುವೂ ಅದರಲ್ಲಿಯೇ ಸೇರಿತು. ಮತ್ತೆ ಮೊದಲಂತೆಯೇ ತುಳಿಯುತ್ತಿದ್ದನು.

ಬಳಿಕ ಆತನ ಕಾಂತೆಯು ನೀರಂ ತೆಗೆದುಕೊಂಡು ಬಂದು ಮೋಹದಿಂದ ಸ್ತನಗಳಲ್ಲಿ ಸೋನೆ ಬರಲು, ಅಂಗಳದಲ್ಲಿ ತನ್ನ ಶಿಶುವಂ ನೋಡಿದಳು. ಶಿಶುವು ಕಾಣಲಿಲ್ಲ. ಪತಿಯ ಸಮೀಪಕ್ಕೆ ಬಂದು—ಅಂಗಳದಲ್ಲಿ ಶಿಶುವನ್ನು ಬಿಟ್ಟು ನಾನು ನೀರಿಗೆ ಹೋಗಿದ್ದೆನಲ್ಲಾ! ಶಿಶುವೆಲ್ಲಿ? ಕಾಣುವುದಿಲ್ಲ—ಎನುತ್ತ, ಮಣ್ಣಿನ ಕಡೆಯಲ್ಲಿ ನೋಡಲು, ರಕ್ತಪ್ರವಾಹವು ಕಂಡಿತು. ಮತ್ತೆ ಚೆನ್ನಾಗಿ ನೋಡಲು, ಅಸ್ಥಿಯೂ ಮಾಂಸವೂ ದೃಷ್ಟಿವಿಷಯವಾಯಿತು. ಅದಂ ಕಂಡು ಎದೆಯಮೇಲೆ ಬಡಿದುಕೊಳ್ಳುತ್ತ ಅಳುತ್ತ ಪತಿಯಂ ಕುರಿತು-ಮಗುವನ್ನು ಮಣ್ಣಿನ ಸಂಗಡ ತುಳಿದು ಕೊಂದಿರಿ. ನಿಮಗೆ ದೇಹಸ್ಫೂರ್ತಿ ಸ್ವಲ್ಪವೂ ಇಲ್ಲ. ಸಂಸಾರಕ್ಕೆ ತಿಲಾಂಜಲಿಯನ್ನು ಬಿಟ್ಟಿರಿ.

ಯಾವಾಗಲೂ ದೇವರಿಗೆ ಹೊಡೆದುಕೊಳ್ಳುತ್ತಿರುವಿರಿ. ಇನ್ನು ನಾನು ಪ್ರಾಣವನ್ನು ಬಿಡುವೆನು—ಎಂದು ಕಠಿನವಾದ ನುಡಿಯಂ ನುಡಿಯಲು, ಗೋರನು ಅದಂ ಕೇಳಿ ದೇಹಸ್ಮೃತಿಯಂ ತಾಳಿ—ಅಚಲವಾದ ನನ್ನ ಧ್ಯಾನಕ್ಕೆ ಭಂಗವಂಮಾಡಿದೆ. ನನ್ನ ಹೃದಯದಲ್ಲಿ ಲಕ್ಷ್ಮೀಕಾಂತನು ಆನಂದದಿಂದ ಕುಳಿತಿದ್ದನು. ನೀನು ವಿಕ್ಷೇಪವನ್ನುಂಟುಮಾಡಿ ಹೊರಡಿಸಿದೆ, ನಿನಗೆ ವಿವೇಕವಿಲ್ಲ. ಅತ್ತ ಕಡೆ ತೊಲಗು—ಎಂದು ಕ್ರೋಧಾವಿಷ್ಟನಾಗಿ ಚಕ್ರದಂಡವಂ ತೆಗೆದುಕೊಂಡು ಆಕೆಯಂ ಹೊಡೆಯುವುದಕ್ಕೆ ಹೋದನು. ಆಕೆ ಅದಂ ಕಂಡು ಭಯಪಟ್ಟು-ನನ್ನನ್ನು ಮುಟ್ಟಿದರೆ ವಿಟ್ಠಲನ ಆಣೆ-ಎಂದಳು. ಆಮಾತಂ ಕೇಳಿ ಆತನು ಸ್ವಸ್ಥನಾಗಿ ಕುಳಿತು ಭಗವನ್ನಾಮಕೀರ್ತನೆಯಂ ಮಾಡುತ್ತಿದ್ದನು.

ಊರಿನಲ್ಲಿ ಜನರೆಲ್ಲರೂ ಕೇರಿಕೇರಿಯಲ್ಲಿ ಕೂಡಿ ಪರಸ್ಪರವಾಗಿ ಮಾತನಾಡುತ್ತ, ಮಣ್ಣಿನಲ್ಲಿ ಶಿಶುವಂ ತುಳಿದ ಆಶ್ಚರ್ಯವನ್ನು ಇಂದು ಕಂಡೆವು. ಇಂತಹ ವಿಪರೀತವನ್ನು ಎಂದೂ ಕೇಳಿರಲಿಲ್ಲ. ಗೋರನು ಜೀವಿತದಶೆಯಲ್ಲಿಯೇ ಪಿಶಾಚನಾದನು—ಎಂದರು. ಮತ್ತೆ ಕೆಲವರು ಶ್ರೀಹರಿಯ ಭಜನೆಯ ಪರಿಯು ಇಂತಹುದು. ಸಂಸಾರದುಃಖವನ್ನು ಹತ್ತಿಸಿಕೊಂಡು ಅವನೇನ ಮಾಡಾನು?-ಎಂದರು. ಇಂತು ಜನರು ಅನೇಕವಿಧವಾಗಿ ನಿಂದಿಸುತ್ತಲೂ ಅಭಿನಂದಿಸುತ್ತಲೂ ಇದ್ದರು. ರಾಜವೀಥಿಯಲ್ಲಿ ಹೋಗುವ ಆನೆಯಂ ಕಂಡು ನಾಯಿ ಬೊಗಳಿದರೆ, ಆನೆಯು ಅದಂ ಮನಸ್ಸಿಗೆ ತಾರದೆ ಸ್ವೇಚ್ಛೆಯಿಂದ ಎಂತು ಹೋಗುವುದೋ ; ಪಂಡಿತರ ಸಭೆಯಲ್ಲಿ ಮೂರ್ಖನು ಬಹುವಾಗಿ ಹರಟಲು, ಅದನವರು ಎಂತು ಎಣಿಸರೋ ; ಅಂತು ನಿಂದಕರು ನಾನಾಪ್ರಕಾರವಾಗಿ ಆಡುವ ಮಾತುಗಳಂ ಕಿವಿಯಲ್ಲಿ ಕೇಳದೆ ಏಕಾಗ್ರಮನಸ್ಕನಾಗಿ, ತನ್ನ ಮಗನಂ ಮಣ್ಣಿನಲ್ಲಿ ತುಳಿದುಬಿಟ್ಟೆನಲ್ಲಾ ಎಂಬುದನ್ನೂ ಸ್ಮರಣೆಗೆ ತಂದುಕೊಳ್ಳದೆ ಸಂಸಾರದುಃಖವನ್ನು ಎಣಿಸದೆ ಶ್ರೀವಿಟ್ಠಲನನ್ನು ಹೃದಯದಲ್ಲಿ ಧ್ಯಾನಿಸುತ್ತ ತನ್ನಾಮಂಗಳಂ ಜಪಿಸುತಿದ್ದನು.

ಇಂತು ಕೆಲವು ದಿವಸ ಕಳೆಯಲು, ಬಳಿಕ ಆತನ ಹೆಂಡತಿ, ಪತಿಯೊಡನೆ ಮಾತನಾಡದೆ ಇದ್ದರೆ ಗೃಹಕೃತ್ಯವು ಎಂತು ನಡೆಯುವುದು ? ರಾಜನು ಅನ್ಯಾಯವನ್ನು ಮಾಡಿದರೆ ಪ್ರಜೆಗಳು ಏನುಮಾಡಬಲ್ಲರು ? ಅಂತು ಪತಿಯ ವಿಷಯದಲ್ಲಿ ನಾನು ಏನುಮಾಡಬಲ್ಲೆನು ?—ಎಂದು ಬಗೆದು ಸಮಾಧಾನವನ್ನು ಹೊಂದಿ, ಪಾದಪ್ರಕ್ಷಾಳನವಂ ಮಾಡುವುದಕ್ಕೆ ಪತಿಯ ಸಮೀಪಕ್ಕೆ ಬಂದಳು. ಆತನು ದೂರಸರಿದು, "ನನ್ನನ್ನು ಮುಟ್ಟಿದರೆ ವಿಟ್ಠಲನ ಆಣೆ" ಎಂದು ನೀನು ಶಪಥವನ್ನು ಆಡಿದೆ. ಅದನೆಂದಿಗೂ ಉಲ್ಲಂಘಿಸುವನಲ್ಲ—ಎಂದು ನುಡಿಯಲು, ಅದಂ ಕೇಳಿ ಆಕೆಯು, ನಾನು ಮರ್ಯಾದಾತೀತವಾದ ಮಾತನಾಡಿದೆ. ನೀವು ಅದಂ ಕ್ಷಮಿಸಿ ನನ್ನಂ ಪರಿಗ್ರಹಿಸಬೇಕು. ಪ್ರಾಪಂಚಿಕವ್ಯವಹಾರದಲ್ಲಿರುವಾಗ ಒಂದೊಂದು ವೇಳೆಯಲ್ಲಿ ಒಳ್ಳೆಯ ಮಾತೂ ಕೆಟ್ಟ ಮಾತೂ ಬರುವುದು, ನೀವು ಅದನ್ನೇ ಹಿಡಿದು ಮಾತನಾಡದಿರ

ಸಂಸಾರದಲ್ಲಿ ಕೊನೆಗಾಣುವ ಬಗೆಯೆಂತು? ಆವಿಗೆಯಲ್ಲಿ ಮಡಿಕೆಗಳು ಇದ್ದರೆ ಅವು ಬೆಂದುಕೊಂಡು ಸಹಜವಾಗಿ ಎಂತು ತಾಗುವುವೋ, ಅಂತು ಪ್ರಾಪಂಚಿಕವ್ಯವಹಾರದಲ್ಲಿರುವರು ಪರಸ್ಪರವಾಗಿ ಮಾತಿನಲ್ಲಿ ಹೊಡೆದಾಡುತ್ತಲೇ ಇರಬೇಕು-ಎನಲು, ಆ ಗೋರನು, ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಉದಯಿಸಿದರೂ, ವಾಯುವು ಪಂಜರದಲ್ಲಿ ಸಿಕ್ಕಿದರೂ, ಆಕಾಶವು ಅಣುವಿನಲ್ಲಿ ಅಡಗಿದರೂ, ವೈಶ್ವಾನರನು ತೃಣದಲ್ಲಿ ಅಡಗಿದರೂ, ಗಾಳಿಯು ಮೇಘಕ್ಕೆ ಅಂಜಿ ಓಡಿದರೂ, ಸಮುದ್ರದಲ್ಲಿ ಸೋರೆಬುರುಡೆಯು ಮುಳುಗಿದರೂ ನನ್ನ ನಿಶ್ಚಯವು ಕಲ್ಪಾಂತರದಲ್ಲಿಯೂ ತಪ್ಪುವುದಿಲ್ಲ-ಎಂದನು. ಅದಂ ಕೇಳಿ ಆಕೆ ಪ್ರತ್ಯುತ್ತರವೇನನ್ನೂ ಆಡಲಾರದೆ ಸ್ವಸ್ಥೆಯಾಗಿ, ಸಂತಾನವಿಲ್ಲದುದರಿಂದ ಮನಸ್ಸಿನಲ್ಲಿ ಚಿಂತಾಕ್ರಾಂತೆಯಾಗಿ, ಪತಿಗೆ ಎರಡನೆಯ ಸಂಬಂಧವನ್ನಾದರೂ ಮಾಡಿಸಬೇಕು; ಅಲ್ಲಿಯಾದರೂ ಸಂತಾನವಾದೀತು-ಎಂದಾಲೋಚಿಸಿ, ತವರುಮನೆಯಂ ಸೇರಿ ತಾಯಿತಂದೆಗಳ ಸಂಗಡ ನಡೆದ ವೃತ್ತಾಂತವೆಲ್ಲವನ್ನೂ ತಿಳಿಯಿಸಿ, ಪತಿಯು ತನ್ನಂ ಬಿಟ್ಟು ಸಂಸಾರವನ್ನೇ ಮುಳುಗಿಸಿದನು. ದಾಯಾದರೂ ನಮ್ಮನ್ನು ಅಧಮರನ್ನಾಗಿ ಕಾಣುವರು. ನಂಟರಿಷ್ಟರೆಲ್ಲರೂ ನಗುವರು. ಭಗವಂತನು ಈಪ್ರಕಾರ ಮಾಡಿದನು. ಆದುದರಿಂದ ಎರಡನೆಯ ಮದುವೆಯನ್ನಾದರೂ ಮಾಡಬೇಕು. ಗೃಹಕೃತ್ಯಸ್ಥಿತಿಯನ್ನು ತಿಳಿದು ನನ್ನ ಮೇಲೆ ಪರರು ಯಾರು ಕನ್ಯಕೆಯಂ ಕೊಡುವರು? ನಿಮ್ಮ ಕಿರಿಯಮಗಳು ಮನೆಯಲ್ಲಿ ಇರುವಳು. ವಳಂ ಕೊಟ್ಟು ನಮ್ಮ ಮನೆಯನ್ನು ಉದ್ಧರಿಸಬೇಕು-ಎಂದು ಆ ತಾಯ್ತಂದೆಗಳ ಪಾದಗಳನ್ನು ಹಿಡಿದಳು. ಮತ್ತೆ ಜಳಜಳನೆ ಕಣ್ಣೀರಂ ಸುರಿಯಿಸುತ್ತ ತಾಯ ಬಳಿಯಲ್ಲಿ ಗೋಳಾಡಿ ನನಗೆ ಅಭಯದಾನವಂ ಮಾಡೆಂದು ಸೆರಗೊಡ್ಡಿ ಬೇಡಿದಳು. ಮಗಳ ಕರುಣವಚನವಂ ಕೇಳಿ ತಾಯ್ತಂದೆಗಳು ಅಂಗೀಕರಿಸಿದರು. ಒಡನೆಯೇ ಮುಹೂರ್ತವಂ ನಿಶ್ಚಯಿಸಿ ಗೋರನನ್ನು ಬರಮಾಡಿಕೊಂಡು ತಮ್ಮ ಎರಡನೆಯ ಕನ್ಯೆಯಂ ಕೊಟ್ಟು ವಿಜೃಂಭಣೆಯಿಂದ ಮದುವೆಯಂ ಮಾಡಿದರು.

ನಂಟರಿಷ್ಟರು ದೇವರಿಗೋಸ್ಕರ ಹೆಂಡತಿಯನ್ನು ಬಿಡುವರುಂಟೆ? ಇದೇನು ವಿಪರೀತ? ನಿನ್ನ ಚರ್ಯೆಯು ಸಲ್ಲದು-ಎಂದು ಗೋರನನ್ನು ಹಾಸ್ಯಮಾಡಿದರು. ಅವಿಂಧನಿಗೆ ಗೋಭೋಜಿಯೂ, ಭ್ರಷ್ಟನಿಗೆ ಶುದ್ಧವಾದ ಆಚಾರವೂ, ಅಂತ್ಯಜನಿಗೆ ಸದ್ವಿಚಾರವೂ, ಪಿಶಾಚಗಳಿಗೆ ಕೀರ್ತನವೂ, ಮೂರ್ಖನಿಗೆ ವಿವೇಕಬೋಧನೆಯೂ, ರೋಗಿಗೆ ಕ್ಷೀರಾನ್ನವೂ, ತಸ್ಕರನಿಗೆ ಬೆಳದಿಂಗಳೂ, ಕಿವುಡನಿಗೆ ಗಾನವೂ, ಹಿಂಸಕನಿಗೆ ಭೂತದಯೆಯೂ ಎಂತು ರುಚಿಸದೋ ಅಂತು ಅಭಕ್ತರಿಗೆ ಭಗವದ್ಭಕ್ತಿನಿಷ್ಠೆಯು ರುಚಿಸದು. ಅದಂತಿರಲಿ.

ಆ ತಾಯ್ತಂದೆಗಳು ಮದುವೆಯಂ ಮಾಡಿಕೊಟ್ಟು ಗೋರನನ್ನು ಕುರಿತು-ಹಿರಿಯ ಕಿರಿಯಮಕ್ಕಳಿಬ್ಬರನ್ನೂ ನಿಮಗೆ ಧಾರೆಯೆರೆದಿರುವೆವು. ಇಬ್ಬರಲ್ಲಿ ಉಪೇಕ್ಷೆಯಂ

ಮಾಡಿದರೆ ಜನರು ನಗುವರು. ಎರಡುಕಣ್ಣುಗಳೂ ಎಂತು ಸಮವೋ ಅಂತು ನಿಮಗೆ ಇವರಿರ್ವರೂ ಸಮಾನೆಯರು. ಇವರಿಬ್ಬರನ್ನೂ ಒಂದೇರೀತಿಯಿಂದ ಬಾಳಿಸ ಬೇಕು. 'ಒಬ್ಬಳಲ್ಲಿ ಹೆಚ್ಚು ಒಬ್ಬಳಲ್ಲಿ ಕಡಿಮೆ' ಎಂಬಂತೆ ನೀವು ನೋಡಿ ದರೆ, ನಿಮ್ಮಮೇಲೆ ವಿಟ್ಠಲನ ಆಣೆಯಿರುವುದು—ಎಂದು ನುಡಿಯಲು, ಗೋರನು ಅವ ರನ್ನು ಕುರಿತು ನಿಮ್ಮ ಮಾತಿನಂತೆಯೆ ನಡೆಯುವೆನು-ಎಂದು ಪ್ರತ್ಯುತ್ತರವನ್ನಿತ್ತು, ಜಗನ್ನಾಥನು ಕೃಪೆಯಂ ಮಾಡಿದರೆ ವಿಘ್ನವು ತನಗೆತಾನೇ ಪರಿಹಾರವಂ ಹೊಂದು ವುದು. ಭಕ್ತರಿಗೆ ವಿಷಯಾಚರಣೆಯು ಸರ್ವಥಾ ಆಗಗೊಡನು—ಎಂದು ಮನದಲ್ಲಿ ಸಂತೋಷಗೊಂಡು, ಆ ಮಡದಿಯರಿಬ್ಬರೊಡನೆ ತನ್ನೂರಿಗೆ ಬಂದು ಸೇರಿ. ವಸ್ತ್ರ ಭೂಷಣಾದಿಗಳಂ ಇಬ್ಬರಿಗೂ ಸಮವಾಗಿ ಸಲಿಸುತ್ತ ಇದ್ದನು. ಹಿರಿಯ ಹೆಂಡತಿ ಯಲ್ಲಿ ಎಂತು ನಡೆವಳಿಯುಳ್ಳವನಾಗಿದ್ದನೋ ಕಿರಿಯವಳಲ್ಲಿಯೂ ಅಂತೆ ಇದ್ದನು. ಇದನ್ನುನೋಡಿ ಹಿರಿಯವಳು ಆತನನ್ನು ಕುರಿತು-ಕಿರಿಯವಳಲ್ಲಿಯೂ ನಿಮ್ಮ ಮನ ಸ್ಸು ಏಕೆ ಒಲ್ಲದು-ಎಂದು ಬೆಸಗೊಂಡಳು. ಅದಕ್ಕೆ ಆತನು, ನಿನ್ನ ತಂದೆ ಅರ್ವ ರ ಲ್ಲಿಯೂ ಹೆಚ್ಚುಕಡಿಮೆಯಿಲ್ಲದಂತೆ ಸಮತೆಯಿಂದ ನಡೆದುಕೊಳ್ಳಬೇಕು. ಈ ವಿಷಯ ದಲ್ಲಿ ವಿಟ್ಠಲನ ಆಣೆ-ಎಂದು ಹೇಳಿದನು. ಆ ಮಾತನ್ನೇ ನಾನು ಮನದಲ್ಲಿ ಪ್ರಮಾಣವಾಗಿ ಎಣಿಸಿರುವೆನು—ಎಂದನು. ಕಿರಿಯವಳು ಈ ಮಾತಂ ಕೇಳಿ ರೋದನಮಾಡುತ್ತ ಹಿರಿಯವಳನ್ನು ಕುರಿತು-ನೀನು ನನ್ನನ್ನು ಎಂತು ಗಂಟುಹಾಕಿದೆ ? ನನಗೆ ಇಂತಹ ದುರವಸ್ಥೆಯನುಂಟುಮಾಡಿದೆಯಲ್ಲಾ—ಎನಲು, ಅದಕ್ಕವಳು—ಇರಲಿ ; ರಾತ್ರಿ ನಿದ್ರೆ ಹೋಗುವಾಗ ಇದಕ್ಕುಪಾಯವಂ ಮಾಡೋಣ-ಎಂದು ಆಕೆಗೆ ಸಮಾಧಾನವನ್ನುಂಟು ಮಾಡಿ, ರಾತ್ರಿಯಾಗುವುದೂ ಪತಿಯು ನಿದ್ರೆಗೈಯುತಿರಲು, ಸವತಿಯನ್ನು ಆತನ ಒಂದು ಪಾರ್ಶ್ವದಲ್ಲಿ ಮಲಗಿಕೊಳ್ಳುವಂತೆ ಹೇಳಿ, ತಾನೂ ಒಂದುಪಾರ್ಶ್ವದಲ್ಲಿ ಮಲಗಿ ಕೊಂಡು ಆತನ ಎರಡು ಕೈಗಳನ್ನು ತೆಗೆದು ಸವತಿಯಮೇಲೂ ತನ್ನಮೇಲೂ ಇಟ್ಟಳು. ಬಳಿಕ ಆತನು ಎಚ್ಚತ್ತು ಮನದೊಳಾಶ್ಚರ್ಯಗೊಂಡು, ಮನಸ್ಸಿನಲ್ಲಿ ವಿಷಯಧ್ಯಾನವಿಲ್ಲದಿರಲು, ಕರಗಳು ಆಣೆಯಂ ಮೀರಿದುವಲ್ಲಾ !-ಎಂದು ಅನುತಾಪ ವುಳ್ಳವನಾಗಿ, ಮನದಲ್ಲಿ ದಾರ್ಢ್ಯವನ್ನು ತಾಳಿ, ಕತ್ತಿಯನ್ನು ಕಂಭಕ್ಕೆ ಕಟ್ಟಿ ಎರಡು ಕೈಗಳನ್ನೂ ಕಡಿದುಕೊಂಡು ಭಜನೆಯಂ ಮಾಡುತ ಕುಳಿತನು.

ಬಳಿಕ ಸೂರ್ಯೋದಯವಾಗುವುದೂ, ಮಡದಿಯರು ಎದ್ದು ಪತಿಯ ಮೊಂಡ ಕೈಗಳನ್ನು ಕಂಡು ರೋದನವಂ ಮಾಡುತ್ತ ಇನ್ನು ಈ ಸಂಸಾರದಲ್ಲಿ ಇರುವು ದೆಂತು ? ದೇಶದೇಶದಲ್ಲಿ ಇರುವ ನಂಟರಿಷ್ಟರೆಲ್ಲರೂ ನಮ್ಮ ಸ್ಥಿತಿಯಂ ನೋಡಿ ನಗುವಂತಾಯಿತು. ಸಂತಾನವಾಗುವುದಕ್ಕೋಸ್ಕರ ಎರಡನೆಯ ಮದುವೆಯಾಯಿತು. ಈಶ್ವರನ ಚಿತ್ತಕ್ಕೆ ಬರಲಿಲ್ಲ. ನಮ್ಮ ಪ್ರಯತ್ನವೇನುನಡೆಯುವುದು ? ಎಂದು ಬಹುವಿಧವಾಗಿ ಹಂಬಲಿಸಿ ಪ್ರಲಾಪಿಸಿದರು.

ಗೋರನು ಪ್ರಲಾಪಿಸುತ್ತಿದ್ದ ಮಡದಿಯರಂ ನೋಡಿ-ಏಕೆ ಇಂತು ಗೋಳಾಡುವಿರಿ? ಶ್ರೀ ರುಕ್ಮಿಣೀಪತಿಯು ನಮ್ಮ ತಲೆಯಮೇಲಿರುವಾಗ ವ್ಯಸನಪಡುವುದೇತಕ್ಕೆ? ದೈವಯೋಗದಿಂದ ಕಾಮಧೇನುವು ದೊರೆತಿರಲು, ತಿನ್ನುವುದಕ್ಕೆ ಇಲ್ಲವೆಂದು ಚಿಂತಿಸಬೇಕೆ? ಕಲ್ಪವೃಕ್ಷದ ಛಾಯೆಯಲ್ಲಿ ಕುಳಿತುಕೊಂಡು ಅನ್ನವಸ್ತ್ರಕ್ಕೆ ಅಭಾವ ನೆನೆಬೇಕೇ? ಸ್ಪರ್ಶಶಿಲೆಯು ದೊರೆತಿರಲು, ಧನಸಂಪತ್ತಿಗೆ ಏನು ಕಡಿಮೆ? ಅಮೃತವು ದೊರೆತಿರುವಾಗ ವ್ಯಾಧಿಭಯವೆಲ್ಲಿಯದು? ಅಂತು ಶ್ರೀರುಕ್ಮಿಣೀರಮಣನು ಪ್ರಸನ್ನನಾಗಿರುವಾಗ ಸಂಸಾರದುಃಖವೇತಕ್ಕೆ? ಬಾಯಿಂದ ಶ್ರೀರಾಮಕೃಷ್ಣ ಹರಿವಿಟ್ಠಲನಾಮಂಗಳಂ ಜಪಿಸುತಿರಲು, ಭವರೋಗಬಾಧೆಯುಂಟಾಗಲಾರದು-ಎಂದು ಸಮಾಧಾನವಂ ಮಾಡಿ, ತಾನೂ ಸಮಾಧಾನಗೊಂಡು, ಒಂದು ಕ್ಷಣವಾದರೂ ವಿಶ್ರಾಂತಿಯಿಲ್ಲದಂತೆ ಇರುಳೂ ಹಗಲೂ ಭಗವನ್ನಾಮಸ್ಮರಣೆಯಂ ಮಾಡುತ್ತಿದ್ದನು.

ಇಂತಿರಲು, ಬಳಿಕ ಆಷಾಢಮಾಸದ ಏಕಾದಶಿ ಪ್ರಾಪ್ತವಾಯಿತು. ಸಂತೋಷದಿಂದ ಮಡದಿಯರಿರ್ವರನ್ನೂ ಕರೆದುಕೊಂಡು, ಪಂಢರಪುರದ ಯಾತ್ರೆಗೆ ಹೊರಟು ಚಂದ್ರಭಾಗೆಯಲ್ಲಿ ಸ್ನಾನವಂ ಮಾಡಿ ಪುಂಡರೀಕನ ದರ್ಶನವಂ ಮಾಡಿ ಕ್ಷೇತ್ರಪ್ರದಕ್ಷಿಣೆಯನೆಸಗಿ ಮಹಾದ್ವಾರದ ಬಳಿಗೆ ಬಂದು ಮಡದಿಯರೊಡನೆ ಸದ್ಭಾವದಿಂದ ಸಾಷ್ಟಾಂಗನಮಸ್ಕಾರವಂ ಮಾಡಿ ಶ್ರೀವಿಟ್ಠಲನನ್ನು ಆರಾಧಿಸಿ ಪಾಡಿ ಪೊಗಳಿದನು.

ನಾಮದೇವನು ಗರುಡಸ್ತಂಭದ ಬಳಿಯಲ್ಲಿ ತಾಳವನ್ನು ಹಾಕುತ್ತ ಆನಂದದಿಂದ ಕೀರ್ತನವ ಮಾಡುತ್ತಿದ್ದನು. ನಿವೃತ್ತಿದೇವಜ್ಞಾನದೇವಾದಿಭಾಗವತಶಿರೋಮಣಿಗಳು ಅಲ್ಲಿ ಸೇರಿದ್ದರು. ಇನ್ನೂ ಅನೇಕರಾದ ಸಂತರು ನೆರೆದಿದ್ದರು. ಕೀರ್ತನಕ್ಕೆ ಬಹುರಸವುಂಟಾಗಿದ್ದಿತು. ಎಲ್ಲರೂ ಕೈಗಳಂ ಮೇಲೆ ಎತ್ತಿ ಜಯಜಯಘೋಷವನ್ನು ಮಾಡುತ್ತಿದ್ದರು. ಈ ಗೋರನು ಕಣ್ಣುಗಳಿಂದ ಬಾಷ್ಪವಂ ಸುರಿಯಿಸುತ್ತಾ, ದೇವಾದಿದೇವನೆ! ರುಕ್ಮಿಣೀಕಾಂತನೆ! ನನ್ನನ್ನು ಏಕೆ ಉಪೇಕ್ಷಿಸಿದೆ? ಎಲ್ಲರೂ ಕೈಗಳಂ ಮೇಲೆತ್ತಿ ಪಾಡಿ ಪೊಗಳುತಿರುವರು. ಮೊಂಡಾಗಿರುವ ಕೈಗಳಂ ಮೇಲೆ ಎತ್ತಲು ನನಗೆ ಲಜ್ಜೆಯಾಗುವುದು. ಕಮಲಲೋಚನನೇ! ನೀನಲ್ಲದೆ ಮೂರು ಲೋಕಗಳಲ್ಲಿಯೂ ನನ್ನಂ ಉದ್ಧರಿಸುವರಿನ್ನಾರೂ ಇಲ್ಲ. ನಿನ್ನ ಮೇಲೆಯೇ ಸರ್ವ ಭಾರವಂ ಇಟ್ಟಿರುವೆನು. ನನಗಿನ್ನಾರೂ ಆಶ್ರಯರಿಲ್ಲ. ನೀನೇ ಗತಿ. ಪತಿತಪಾವನನೆ! ನನ್ನಂ ಸಲಹು-ಎಂದು ಬಹುವಿಧವಾಗಿ ದೈನ್ಯದಿಂದ ಬೇಡಿಕೊಂಡನು. ಆತನ ದೀನವಚನವಂ ಕೇಳಿ ರುಕ್ಮಿಣೀಪತಿಯು ಪ್ರಸನ್ನನಾದನು. ಗೋರನ ಕೈಗಳೆರಡೂ ಪೂರ್ವದಂತೆ ಹುಟ್ಟಿ ನೀಡುವಂತಾದುವು. ಒಡನೆಯೆ ಆನಂದನಿರ್ಭರನಾಗಿ ಕೈಗಳಂ ಮೇಲೆತ್ತಿ ಜಯಜಯಘೋಷವೆಸಗಿ ಪಾಡಿ ಪೊಗಳುತ್ತಿರಲು, ಎಲ್ಲರೂ ಕಂಡು ವಿಸ್ಮಿತರಾದರು. ವಿಷ್ಣುಭಕ್ತನಲ್ಲಿ ಈ ಗೋರನು ದೊಡ್ಡವನು. ಆದುದರಿಂದಲೇ ಕರುಣಾನಿಧಿಯಾದ ಶ್ರೀವಿಟ್ಠಲನು ಈತನಿಗೆ ಕೈಗಳಂ ಕರುಣಿಸಿದನು-ಎಂದು ಅಭಿನಂದಿಸಿದರು.

ಈವಿಸ್ಮಯವಂ ಕಂಡು ಆತನ ಹಿರಿಯಹೆಂಡತಿ ಥಟ್ಟನೆ ಎದ್ದು ಭಗವಂತನಿಗೆ ಸಾಷ್ಟಾಂಗ ನಮಸ್ಕಾರವಂ ಮಾಡಿ ಸ್ವಾಮಿಯನ್ನು ಕುರಿತು—ಅತ್ಯಂತಭಕ್ತಿಭಾವದಿಂದ—ಜಗದೀಶನೆ! ನಿನ್ನ ದಾಸನನ್ನು ಕೃಪಾದೃಷ್ಟಿಯಿಂದ ನೋಡಿದೆ. ನಿನ್ನ ದಾಸಿಯಾದ ನಾನು ಮಗುವನ್ನು ಕಾಣದೆ ಸಂಕಟಪಡುತ್ತಿರುವೆನು. ನಿನ್ನನ್ನು "ಕೃಪಾಸಾಗರನು ಭಕ್ತವತ್ಸಲನು" ಎಂದು ಎಲ್ಲರೂ ಹೊಗಳುತಿರುವರು. ನಿನ್ನ ನಾಮಸಂಕೀರ್ತನವಂ ಮಾಡಲು ತೊಡಗಿ ನಮ್ಮ ಪತಿಯು ದೇಹಸ್ಮೃತಿಯಿಲ್ಲದೆ ಮಣ್ಣಿನಲ್ಲಿ ಸೇರಿಸಿ ಮಗುವನ್ನು ತುಳಿದುದು ಸರ್ವಜ್ಞನಾದ ನಿನಗೆ ವಿದಿತವಾಗಿಯೇ ಇದೆ. ಮಹಾಮಹಿಮನೆ! ನನ್ನ ಮಗುವನ್ನಿತ್ತು ನನ್ನ ಮನಸ್ಸನ್ನು ಸಂತೋಷಗೊಳಿಸು—ಎಂದು ಪ್ರಾರ್ಥಿಸಿದಳು.

ಚಕ್ರಪಾಣಿಯು ಅವಳ ಪ್ರಾರ್ಥನೆಯನ್ನು ಆಲಿಸಿ ಪ್ರಸನ್ನನಾದನು. ಆಕ್ಷಣದಲ್ಲಿ ಒಳಗಣಿಂದ ಆ ಬಾಲಕನು ಅಂಬೆಗಾಲಿಕ್ಕುತ ನಡೆತಂದನು. ಸರ್ವರೂ ನೋಡಿ ಆಶ್ಚರ್ಯಗೊಂಡರು. ಆಕೆ ಪರಮಸಂತೋಷದಿಂದ ತನ್ನ ಬಾಲಕನನ್ನು ಥಟ್ಟನೆ ಎತ್ತಿಕೊಂಡು ಮುದ್ದಾಡಿದಳು.

ಬಳಿಕ ಗೋರನನ್ನು ಕುರಿತು—ಇಂದಿನಿಂದ ನಿನಗೆ ಆಣೆಯು ಬಿಟ್ಟಿತು. ಕೈವಿಡಿದ ಕಾಂತೆಯರಂ ನೀನು ತ್ಯಾಗಮಾಡಬೇಡ. ನನ್ನ ಆಜ್ಞೆಯೇ ಪ್ರಮಾಣವೆಂದು ತಿಳಿದು ಸಂಸಾರದಲ್ಲಿ ಪ್ರವರ್ತಿಸು-ಎಂದು ಆಕಾಶದಲ್ಲಿ ಭಗವದ್ವಾಣಿಯು ಉಂಟಾಯಿತು. ಅದಂ ಕೇಳಿ ಎಲ್ಲರೂ ಜಯಜಯಧ್ವನಿಯಂ ಮಾಡಿದರು. ನಾಮದೇವನು ಆನಂದದಿಂದ ಸ್ವಾಮಿಗೆ ಮಂಗಳನೀರಾಜನವನ್ನೆತ್ತಿದನು.

ಮುಂದಣ ಅಧ್ಯಾಯದಲ್ಲಿ ಕಥೆಯು ಬಹುಸುರಸವಾಗಿರುವುದು. ಶ್ರೋತೃಗಳು ಅವಧಾನವಿತ್ತು ಆಲಿಸಬೇಕು.

ಇಂತು ಶ್ರೀಭಕ್ತವಿಜಯದಲ್ಲಿ ಹದಿನೈದನೆಯ ಅಧ್ಯಾಯಂ ಸಂಪೂರ್ಣಂ.

ಹದಿನಾರನೆಯ ಅಧ್ಯಾಯ.

ನಾಮದೇವನು ಗುರುವನ್ನು ಸಮಾಶ್ರಯಿಸಿದುದು.

ಇಂದು ಭಕ್ತವಿಜಯವೆಂಬ ಸೂರ್ಯಮಂಡಲವು ಉದಯಿಸಿರಲು, ಅವಿದ್ಯಾತಿಮಿರವು ಲೋಪಿಸಿಹೋಗುವುದು. ದ್ವೈತವೆಂಬ ನಕ್ಷತ್ರಕುಲವು ಅಸ್ತವಾಗುವುದು. ಆದರಿಂದ ಜ್ಞಾನಪ್ರಕಾಶವುಂಟಾಗಲು ನವವಿಧಮಾರ್ಗಗಳು ಕಾಣುವುವು. ಭಾವುಕ

ರಲ್ಲಿ ಕೆಲವರು ವಿಚಾರವಮಾಡಿ ಶ್ರವಣಮಾರ್ಗದಲ್ಲಿ ನಡೆವರು. ಕೆಲವರು ಕೀರ್ತನ ಮಾರ್ಗವಂ ಪತ್ತುವರು. ಕೆಲವರು ಸ್ಮರಣಮಾರ್ಗದಲ್ಲಿ ಏಕಾಗ್ರಚಿತ್ತರಾಗಿ ಕುಳಿತು ಕೊಳ್ಳುವರು. ಕೆಲವರಿಗೆ ಪಾದಸೇವನಮಾರ್ಗವು ಅನುಕೂಲವಾಗಿರುವುದು. ಮತ್ತೆ ಕೆಲವರು ಅರ್ಚನವಂದನಾದಿಮಾರ್ಗಗಳನ್ನು ಆಶ್ರಯಿಸುವರು.

ಪೂರ್ವಾಧ್ಯಾಯದಲ್ಲಿ ಭಗವದನುಗ್ರಹದಿಂದ ಭಕ್ತನಾದ ಗೋರನಿಗೆ ಮತ್ತೆ ಕೈಗಳು ಬಂದುವು; ಮೃತನಾದ ಬಾಲಕನು ಬದುಕಿದನು—ಎಂಬುದಂ ಆಲಿಸಿದಿರಷ್ಟೆ. ಬಳಿಕ ಆ ಗೋರನು ಅಲ್ಲಿ ನೆರೆದಿದ್ದ ನಿವೃತ್ತಿದೇವ ಜ್ಞಾನದೇವ ಸೋಪಾನದೇವ ಸಾವಂತ ಮುಕ್ತಾಬಾಯಿ ಮುಂತಾದ ಸಾಧುವರೇಣ್ಯರನ್ನು—ನೀವು ಬಿಜಯಂಗೈದು ನನ್ನ ಮನೆಯಂ ಪವಿತ್ರವನ್ನಾಗಿ ಮಾಡಬೇಕು—ಎಂದು ಪ್ರಾರ್ಥಿಸಲು, ಅವರು ಅವನ ಅಪೇಕ್ಷೆಯಂ ತಿಳಿದು, "ತೆರಢೋಕಿ" ಎಂಬ ಗ್ರಾಮವಂ ಸೇರಿ ಅವನ ಮನೆಯಂ ಪೊಕ್ಕರು. ಗೋರನು ತನ್ನ ಮನೆಗೆ ಬಂದ ಆ ಸಾಧುವರೇಣ್ಯರನ್ನು ಕಂಡು ಪರ ಮೋಲ್ಲಾಸವನ್ನು ಹೊಂದಿ, ತೃಣಾಸ್ತರಣವಂ ಹಾಸಿ ಸವಿನುಡಿಗಳಿಂದ ಉಪಚರಿಸಿ ಸ್ವಾದುತರವಾದ ಫಲಗಳಿನ್ನಿತ್ತು ಸತ್ಕರಿಸಿದನು.

ಜ್ಞಾನದೇವನು ಗೋರನಂ ಕುರಿತು-ನೀನು ಆಸನದಲ್ಲಿ ಕುಳಿತುಕೊಂಡು ಘಟಗ ಳೊಳಗೆ "ಹಸಿದು ಮತ್ತು ಸುಟ್ಟುದು" ಎಂಬುದನ್ನು ಬೇರ್ಪಡಿಸಿ ನನಗೆ ಹೇಳಬೇಕು- ಎನಲು, ಗೋರನು ಜ್ಞಾನದೇವನಾಡಿದ ಮಾತಿನ ಅಭಿಪ್ರಾಯವಂ ತಿಳಿದು, ತಟ್ಟುವ ಹಲಗೆಯಂ ತೆಗೆದುಕೊಂಡು ಅಲ್ಲಿ ಸೇರಿದ್ದ ಸಂತರ ತಲೆಗಳಮೇಲೆ ತಟ್ಟುತ್ತ ಬಂದನು. ಅವರು ಆಪಮಾತನ್ನೂ ಆಡದೆ ಮೌನದಿಂದ ಕುಳಿತುಕೊಂಡಿದ್ದರು. ನಾಮದೇವನ ಬಳಿಗೆ ಬರುವುದೂ ಆತನು—ಸುಮ್ಮನೆ ಏಕೆ ತಾಡನವಂ ಮಾಡುವೆ? ದೂರಸರಿ—ಎನಲು, ಗೋರನು—ಈ ಘಟವು ಇನ್ನೂ ಹಸಿದಾಗಿದೆ—ಎಂದನು. ಮುಕ್ತಾ ಬಾಯಿಯು ಗೋರನನ್ನು ಕುರಿತು-ನೀನು ಇದನೆಂತು ತಿಳಿದೆ? ನೀನು ಉತ್ತಮ ನಾದ ಪರೀಕ್ಷಕನಾಗಿ ತೋರುವೆ. ವಜ್ರ ಮುಂತಾದ ಪರೀಕ್ಷೆಯಂ ಮಾಡುವರಂತೆ ಘಟಗಳ ಪರೀಕ್ಷೆಯಂ ಕ್ಷಣಮಾತ್ರದಲ್ಲಿ ಮಾಡಿದೆ-ಎನಲು, ಅದಂ ಕೇಳಿ ಅಲ್ಲಿ ನೆರೆದಿದ್ದವ ರೆಲ್ಲರೂ ನಕ್ಕರು. ನಾಮದೇವನು ಅದಂ ಕಂಡು ಮನದಲ್ಲಿ ಖೇದಗೊಂಡು ಚಿಂತಾ ಕ್ರಾಂತನಾಗಿ ಒಡನೆಯೇ ಹೊರಟು ಪಂಡರಪುರವಂ ಸೇರಿ ಶ್ರೀರುಕ್ಮಿಣೀಪತಿಯ ಸನ್ನಿ ಧಿಗೆ ಬಂದು ಸದ್ಭಾವದಿಂದ ಸಾಷ್ಟಾಂಗನಮಸ್ಕಾರವಂ ಮಾಡಿ ಕಣ್ಣನೀರಂ ಸುರಿಯಿ ಸುತ್ತ ಗದ್ಗದಿತಕಂಠನಾಗಿ, ಸ್ವಾಮಿಯೇ! ನನಗೆ ಬಹುವಾದ ಅಪಮಾನವುಂಟಾಯಿತು. ಅದರಿಂದ ಸಂತಪಿಸುತ್ತಿರುವೆನು—ಎನಲು, ಜಗನ್ನಾಥನು ನಕ್ಕು-ನಾಮನೆ! ನಿನ್ನನ್ನು ಯಾರು ಏನೆಂದರು? ಸಂಕೋಚವಂ ಬಿಟ್ಟು ಹೇಳು—ಎಂದನು. ಅದಕ್ಕೆ ನಾಮ ದೇವನು—ಹೃಷೀಕೇಶನೇ! "ಸನ್ಮಾನವಂ ಇತರರಿಗೆ ಹೇಳಬೇಕು; ಅವಮಾನವಂ ಮನಕ್ಕೆ ಹೇಳಬೇಕು" ಎಂದು ನೀತಿಯಿರುವುದು—ಎನಲು, ಸ್ವಾಮಿಯು-ನಾಮ

ದೇವನೆ! ನೀನಲ್ಲದೆ ನನಗೆ ಪರಮಸಖನಾವನೂ ಇಲ್ಲ. ಮಿತ್ರನ ಸಂಗಡ ರಹಸ್ಯವಂ ಹೇಳುವುದಕ್ಕೆ ಸಂಕೋಚಪಡಬಾರದು—ಎಂದು ಪ್ರೀತಿಯಿಂದ ನುಡಿದನು.

ಬಳಿಕ ನಾಮದೇವನು—ಸ್ವಾಮಿಯೇ! ನಿನ್ನ ಭಕ್ತನಾದ ಗೋರನು ಸಾಧುಗಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಬಂದು ಕಾರ್ಯವಂ ಮಾಡಿದನು:—ನಮ್ಮೆಲ್ಲರನ್ನೂ ತೃಣಾಸನದಲ್ಲಿ ಕುಳ್ಳಿರಿಸಿ ಸವಿನುಡಿಗಳಿಂದ ಉಪಚರಿಸಿ ಫಲಸಮರ್ಪಣದಿಂದ ಸತ್ಕರಿಸಿದನು. ಆಗ ಜ್ಞಾನದೇವರು ಸಂಕೇತದ ಮಾತನ್ನು ಆಡಿದರು. ಗೋರನು ತಟ್ಟುವ ಹಲಗೆಯನ್ನು ತೆಗೆದುಕೊಂಡು ಎಲ್ಲರ ತಲೆಯಮೇಲೂ ಹೊಡೆಯುತ್ತ ಬಂದನು. ಅವರೆಲ್ಲರೂ ಮೌನದಿಂದ ಕುಳಿತಿದ್ದರು. ನನ್ನ ಬಳಿಗೆ ಬರುವುದೂ ನಾನು ನಿನ್ನ ಪಾದವಂ ನೆನೆದು ಅವನನ್ನು ಕುರಿತು—ಏಕೆ ಸುಮ್ಮನೆ ತಾಡನವಂ ಮಾಡುವೆ? ದೂರಸರಿ—ಎಂದೆನು. ತನ್ನ ನುಡಿಯಂ ಕೇಳಿ ಎಲ್ಲರೂ ಗಹಗಹಿಸಿ ನಕ್ಕು ಅಪಹಾಸ್ಯವಂ ಮಾಡಿದರು. ಗೋರನು "ಇದು ಇನ್ನೂ ಹಸಿಯಘಟವು" ಎಂದು ನನ್ನನ್ನು ಕುರಿತು ಹೇಳಿದನು. ಅದಂ ಕೇಳಲು, ನನಗೆ ಲಜ್ಜೆಯುಂಟಾಯಿತು. ಸಂಕುಚಿತನಾಗಿ ನಿನ್ನಲ್ಲಿ ಹೇಳಿಕೊಳ್ಳುವುದಕ್ಕೋಸ್ಕರ ನಿನ್ನ ಸನ್ನಿಧಿಗೆ ಬಂದೆನು—ಎನಲು, ಸ್ವಾಮಿಯು ನಕ್ಕು—ನಾಮನೆ! ಅವನು ಯಥಾರ್ಥವಾದ ಮಾತನ್ನೇ ಆಡಿದನು. ಯಾವನು ಸದ್ಗುರುವಂ ಸಮಾಶ್ರಯಿಸುವುದಿಲ್ಲವೋ ಅವನನ್ನು "ಅಪಕ್ವಂ" ಎನ್ನುವರು—ಎಂದನು. ಅದಂ ಕೇಳಿ ನಾಮದೇವನು, ಉಪ್ಪಿನಮೇಲೂ ಸಕ್ಕರೆಯ ಮೇಲೂ ಉದಕವನ್ನು ಬಿಡಲು, ಅವೆಂತು ಕ್ಷಣಮಾತ್ರದಲ್ಲಿ ಕರಗಿಹೋಗುವುವೋ ಅಂತು ಮನದಲ್ಲಿ ಕರಗಿ, ಶಿಕ್ಷಾರೂಪವಾದ ಮೋಕ್ಷಶ್ಯಾಮನ ಮಾತಂ ಕೇಳಿ ಚಿಂತಾಕ್ರಾಂತನಾಗಿ ಸ್ವಾಮಿಯನ್ನು ಕುರಿತು-ಎಲೆ ದಯಾಳುವೆ! ನೀನು ದುಃಖವಂ ಪರಿಹರಿಸುವೆ—ಎಂದು ನಿನ್ನಲ್ಲಿ ಬಂದು ಸಂಕಟವಂ ಹೇಳಿಕೊಂಡರೆ, ನೀನೂ ತಿರಸ್ಕರಿಸಿ ಅವರಂತೆ ನುಡಿದೆ. ನೀನು ತಿರಸ್ಕರಿಸಿದ ಬಳಿಕ ಇನ್ನು ಈ ಪ್ರಪಂಚದಲ್ಲಿ ನನಗೆ ಆಶ್ರಯವಿಲ್ಲ. ಭೂಮಿಯು ಬೇಸರಗೊಂಡರೆ ವೃಕ್ಷವು ಎಲ್ಲಿಗೆ ಹೋಗಬೇಕು? ತಾಯಿ ತಿರಸ್ಕರಿಸಿದರೆ ಮಗುವನ್ನು ಇನ್ನಾರು ರಕ್ಷಿಸುವರು? ರಾಜನು ನ್ಯಾಯದಿಂದ ಪರಿಪಾಲಿಸದಿದ್ದರೆ ಪ್ರಜೆಗಳೆಂತು ಸುಖಪಡುವರು? ಜಗನ್ನಾಥನೇ! ನೀನು ಉಪೇಕ್ಷಿಸಿದುದರಿಂದ ತ್ರೈಲೋಕ್ಯದಲ್ಲಿಯೂ ನನ್ನನ್ನು ರಕ್ಷಿಸುವರಿನ್ನಾರೂ ಇಲ್ಲ-ಎಂದು ಬಹುವಿಧವಾಗಿ ಹೇಳಿಕೊಂಡನು. ಸ್ವಾಮಿಯು-ಎಲೆ ನಾಮದೇವನೆ! ಪುಷ್ಪದೊಳಗೆ ಮಕರಂದವು ಸೇರಿರುವಂತೆ ನೀನು ನನ್ನೊಳಗೆ ಸೇರಿದವನು. ನಿನಗೂ ನನಗೂ ಭೇದವಿಲ್ಲ. ನೀನು ಬರಿದೆ ನಿಷ್ಠುರೋಕ್ತಿಯನಾಡಬೇಡ. ಅದ್ವೈತಲಕ್ಷಣವಂ ತಿಳಿಯುವುದಕ್ಕೋಸ್ಕರ ಸದ್ಗುರುವನ್ನು ಸಮಾಶ್ರಯಿಸು—ಎನಲು, ನಾಮದೇವನು ಅದಕ್ಕೆ—ದೇವಾದಿದೇವನೇ! ನನಗೆ ಸದ್ಗುರುವು ಏಕೆಬೇಕು? ನೀನು ಸನ್ನಿಹಿತನಾಗಿರುವಾಗ ಜೀವಕ್ಕೆ ಬಂಧನವು ಏಕೆ ಆಗುವುದು? ವ್ರತವೂ ತಪಸ್ಸೂ

ಯಜ್ಞವೂ ದಾನವೂ ನಿನಗೋಸ್ಕರ ಮಾಡಲ್ಪಡುವುದು. ನಿನ್ನ ಹೊಂದುವುದಕ್ಕೋಸ್ಕರವೇ ಗುರುವನ್ನು ಸಮಾಶ್ರಯಿಸಬೇಕು. ಸಿದ್ಧವಾದ ಸಕ್ಕರೆಯೇ ದೊರೆತ ಬಳಿಕ ಅದಂ ಮಾಡುವ ಸಾಧನವು ಏಕೆಬೇಕು? ಅಮೃತರಸವು ವಶವಾಗಿರಲು ಮಿಕ್ಕ ನಾರುಬೇರುಗಳಿಂದೇನು? ಪಕ್ವವಾದ ಮೃಷ್ಟಾನ್ನವು ಸಿದ್ಧವಾಗಿರಲು ಪಾಕವನ್ನು ಏಕೆ ಮಾಡಿಕೊಳ್ಳಬೇಕು? ತನ್ನ ಮನೆಯಲ್ಲಿಯೇ ಅಮಿತವಾದ ಧನವು ಸಿಕ್ಕಿರಲು ಪರಗೃಹದಲ್ಲಿ ಏಕೆ ಕಷ್ಟಪಡಬೇಕು? ಜಗದ್ಗುರುವಾದ ನೀನು ಸಮೀಪದಲ್ಲಿಯೇ ಇರುವಾಗ ಬೇರೆ ಸದ್ಗುರುವು ಏಕೆಬೇಕು?_ಎಂದನು. ಅದಂ ಕೇಳಿ ಸ್ವಾಮಿಯು-ಎಲೆ ನಾಮದೇವನೆ! ನಾನು ರಾಮಾವತಾರವನ್ನು ವಹಿಸಿದಾಗ ವಸಿಷ್ಠರಂ ಶರಣುಹೊಕ್ಕು ಆತ್ಮಜ್ಞಾನವಂ ಸಂಪಾದಿಸಿದೆನು. ಕೃಷ್ಣಾವತಾರದಲ್ಲಿ ಸಾಂದೀಪನರನ್ನು ಸಮಾಶ್ರಯಿಸಿ ಜ್ಞಾನವಂತನಾದೆನು. ಆದುದರಿಂದ ನೀನು ನನ್ನ ಮಾತಂ ಕೇಳಿದರೆ ಸರ್ವರಿಗೂ ಮಾನ್ಯನಾಗುವೆ-ಎನಲು, ನಾಮದೇವನು ಸ್ವಾಮಿಯ ಪಾದಗಳನ್ನು ದೃಢವಾಗಿ ಹಿಡಿದು-ಶ್ರೀಪತಿಯೇ! ಆದರೆ ಆವ ಗುರುವನ್ನು ಸಮಾಶ್ರಯಿಸಬೇಕು? ಅಪ್ಪಣೆಕೊಡು_ಎಂದನು. ದೇವನು-ವಿಸ್ಟೋಭಖೇಚರನು ಶಿವಾಲಯದಲ್ಲಿ ನಿದ್ರೆಮಾಡುತ್ತಿರುವನು. ಆತನಂತಹ ಆತ್ಮವೇತ್ತೃವು ನನಗೆ ಮತ್ತಾವನೂ ತೋರಲಿಲ್ಲ. ಆದುದರಿಂದ ಸದ್ಗುರುವಾದ ಆತನ ಬಳಿಗೆ ಹೋಗಿ ನಮಸ್ಕಾರಮಾಡು-ಎನಲು, ನಾಮದೇವನು ಗಳಗಳನೆ ಕಣ್ಣಿನಲ್ಲಿ ನೀರುತುಂಬಿ-ಮಹಾಮಹಿಮನೆ! ನಾನು ನಿನ್ನನಗಲಿ ಒಂದು ಕ್ಷಣವಾದರೂ ಕಾಲವಂ ಕಳೆಯಲಾರೆನು. ಈ ವಿಷಯದಲ್ಲಿ ನಿನ್ನ ಪಾದವನ್ನು ಸಾಕ್ಷಿಯಾಗಿಟ್ಟು ಹೇಳುವೆನು-ಎನಲು, ಶಾರ್ಙ್ಗಧರನು-ನಾಮನೆ! ಲೋಕಾಚಾರವನ್ನು ರಕ್ಷಿಸುವುದಕ್ಕೋಸ್ಕರ ಸದ್ಗುರುಸಮಾಶ್ರಯಣವಂ ಮಾಡಬೇಕು. ಅಂತು ಮಾಡದಿದ್ದರೆ ಅಜ್ಞಾನಿಗಳಾದ ಮನುಷ್ಯರು ಎಂತು ತಡಿಯಂ ಸೇರುವರು?_ಎಂದನು.

ನಾಮದೇವನು ಚಕ್ರಪಾಣಿಯ ನುಡಿಯಂ ಶಿರದೊಳಾಂತು ಅಲ್ಲಿಂದ ಹೊರಟನು. ಶ್ರೀಮದ್ಭಾಗವತದ ಏಕಾದಶಸ್ಕಂಧದಲ್ಲಿ ನಿರೂಪಿತವಾಗಿರುವಂತೆ ಶ್ರೀಕೃಷ್ಣಪರಮಾತ್ಮನು ಉದ್ಧವನಿಗೆ ಜ್ಞಾನೋಪದೇಶವಂ ಮಾಡಿ ಬದರಿಕಾಶ್ರಮಕ್ಕೆ ಕಳುಹಿಸಲು, ಆತನು ಬಿಟ್ಟು ಹೋಗಲಾರದೆ ಎಂತು ಸಂಕಟಪಟ್ಟನೋ ಅಂತು ಪಂಡರೀಶನ ಅಗಲಿಕೆಯಿಂದ ಸಂಕಟಪಡುತ್ತ ದಾರಿಯಂ ನಡೆದನು. ನಾಮದೇವನು ಆವುದ್ಧವನ ಅವತಾರವೇ ಆದಕಾರಣ ಆತನ ದೃಷ್ಟಾಂತವನ್ನು ಆತನಿಗೆ ಹೇಳಿದೆನು. ಅದಂತಿರಲಿ.

ವ್ರತಗಳಲ್ಲಿ ಏಕಾದಶೀವ್ರತವು ಎಂತು ಶ್ರೇಷ್ಠವೋ ಅಂತು ದೇವರಲ್ಲಿ ಹೃಷೀಕೇಶನು ಶ್ರೇಷ್ಠನು. ತೀರ್ಥಗಳಲ್ಲಿ ಚಂದ್ರಭಾಗೆಯು ಶ್ರೇಷ್ಠವು. ಆ ಸ್ವಾಮಿಗೂ ಚಂದ್ರಭಾಗೆಗೂ ಉಪಮಾನವಾವುದೂ ತೋರಲಿಲ್ಲ. ಅನೇಕತೀರ್ಥಯಾತ್ರೆಯಂ ಮಾಡಲು, ಅಭಿಮಾನವಿನಿಸ್ಸು ಹೆಚ್ಚುವುದು. ಚಂದ್ರಭಾಗೆಯನ್ನು ಪ್ರಾಣಿಯು

ದೂರದಿಂದ ನೋಡಿದ ಮಾತ್ರದಿಂದ ನಿರಭಿಮಾನನಾಗುವನು. ಪಂಢರೀಶನ ದರ್ಶನಮಾತ್ರದಿಂದ ಅಸಾಧಾರಣವಾದ ಪರಮೋಲ್ಲಾಸವುಂಟಾಗುವುದು. ಈ ಮಹಿಮೆಯಂ ಅಜ್ಞನಾದ ನಾನೇನೆಂದು ಬಣ್ಣಿಸಲಿ? ಪಂಢರಪುರಕ್ಕೆ ಹಾರೆನಸೆಯುವ ಭಕ್ತಮಹನೀಯರೇ ಬಲ್ಲರು. ಚಂದ್ರಭಾಗೆಯಂತಹ ತೀರ್ಥವೂ ಪಂಢರಪುರದಂತಹ ಕ್ಷೇತ್ರವೂ ಶ್ರೀವಿಟ್ಠಲನಂತಹ ದೇವನೂ ನಾಮದೇವನಂತಹ ಭಾಗವತನೂ ಮೂರುಲೋಕದಲ್ಲಿಯೂ ಕಾಣುವುದಿಲ್ಲ.

ಬಳಿಕ ನಾಮದೇವನು ಸದ್ಗುರುವಿನ ಸಂದರ್ಶನಕ್ಕೋಸ್ಕರ ಹೋಗುತ್ತ ಶ್ರೀವಿಟ್ಠಲನ ವಿಯೋಗವಂ ಸೈರಿಸಲಾರದೆ ಹೃದಯದಲ್ಲಿ ಆ ಸ್ವಾಮಿಯಂ ಬಿಡದೆ ಧ್ಯಾನಿಸುತ್ತ ನಾಗನಾಥದೇವಾಲಯವನ್ನು ಸೇರಿ ಒಳಹೊಕ್ಕು ನೋಡಲು, ವಿಸ್ಟೋಭಖೇಚರನು ಮಲಗಿಕೊಂಡು ನಿದ್ರೆಮಾಡುತಿದ್ದನು. ಆತನು ಪಾದುಕೆಗಳಿಂದ ಕೂಡಿದ ತನ್ನ ಎರಡುಕಾಲುಗಳನ್ನೂ ಶಿವನ ಶಿರಸ್ಸಿನಲ್ಲಿರಿಸಿಕೊಂಡಿದ್ದನು. ನಾಮದೇವನು ನೋಡಿ ವಿಸ್ಮಿತನಾಗಿ—ಅಹಹ! ರುಕ್ಮಿಣೀರಮಣನು ಇಂತಹ ಸದ್ಗುರುವನ್ನು ನನಗೋಸ್ಕರ ಹುಡುಕಿ ಹೇಳಿದನೇ? ಎರಡು ಕಾಲುಗಳನ್ನೂ ಈಶ್ವರನ ಮಸ್ತಕದ ಮೇಲೆ ಇರಿಸಿ ಮಲಗಿ ಉನ್ಮತ್ತನಂತೆ ಇರುವವನನ್ನು ಸದ್ಗುರುವನ್ನಾಗಿ ಸಮಾಶ್ರಯಿಸುವುದೆಂತು? ಸದ್ಗುರುಸಮಾಶ್ರಯಕ್ಕೆ ಬಂದ ನನಗೆ ಆರಂಭದಲ್ಲಿ ದುರ್ಲಕ್ಷಣಗಳು ತೋರಿದುವು. ಭೋಜನದ ಮೊದಲ ಕಬಳದಲ್ಲಿಯೇ ನೊಣವು ಸಿಕ್ಕಿದಂತಾಯಿತು. ಪುಸ್ತಕವನ್ನು ಬರೆಯುವುದಕ್ಕೆ ಆರಂಭಿಸಲು ಮೊದಲಕ್ಷರವೇ ಕೆಟ್ಟುಹೋದಂತಾಯಿತು. ಸೂರ್ಯದರ್ಶನವಂ ಮಾಡಲಿಚ್ಛಿಸಲು, ಉಪರಾಗವು ಪ್ರಾಪ್ತವಾದಂತಾಯಿತು. ವಧೂವರರಿಗೆ ಘಟಿತಾರ್ಥವಂ ನೋಡಬೇಕೆಂದಿರಲು, ಅಪಶಕುನವೊದವಿದಂತಾಯಿತು. ಬಿದಿಗೆಯ ಚಂದ್ರನಂ ನೋಡಬೇಕೆಂದಿರಲು, ಮೇಘವು ಅಡ್ಡಬಂದಂತಾಯಿತು. ಸದ್ಗುರುವಂ ಸಮಾಶ್ರಯಿಸಲು ಬಂದ ನನಗೆ ಈತನಲ್ಲಿ ದುರ್ಗುಣವು ತೋರಬಹುದೇ?—ಎಂದು ಮನದಲ್ಲಿಯೇ ವಿಕಲ್ಪಗೊಂಡು ಆತನ ಸಮೀಪವಂ ಸಾರ್ದು—ನೀವು ದೊಡ್ಡವರೆನಿಸಿಕೊಂಡಿರುವಿರಿ. ಇದೇನು ವಿಪರೀತಕಾರ್ಯ? ಸಾಕ್ಷಾತ್ಪರಮೇಶ್ವರನ ಮೇಲೆ ಪಾದಂಗಳನೆಂತು ಇಟ್ಟಿರುವಿರಿ? ನಿಮ್ಮ ಬ್ರಹ್ಮಜ್ಞಾನವು ನನಗೆ ವಿದಿತವಾಯಿತು—ಎನಲು, ವಿಸ್ಟೋಭನು ನಾಮದೇವನಂ ಕುರಿತು—ನನ್ನ ಕಾಲುಗಳು ಆಕಸ್ಮಿಕವಾಗಿ ಅಲ್ಲಿ ಬಿದ್ದುವು. ಪರಮೇಶ್ವರನು ಎಲ್ಲಿ ಇಲ್ಲವೋ ಅಲ್ಲಿ ಕಾಲುಗಳನ್ನು ನೀನು ಎತ್ತಿ ಇರಿಸು. ನನ್ನ ಶರೀರವು ಜರ್ಝರಿತವಾಗಿರುವುದು. ಎತ್ತಿ ಇನ್ನೊಂದುಕಡೆಗೆ ಇರಿಸಿಕೊಳ್ಳುವ ಶಕ್ತಿಯು ನನಗೆ ಇಲ್ಲ. ನೀನು ಶ್ರೀಹರಿಭಕ್ತರಲ್ಲಿ ಅಗ್ರಗಣ್ಯನು. ಯುಕ್ತವಾದ ಮಾತನ್ನು ಆಡಿದೆ-ಎಂದನು. ಬಳಿಕ ನಾಮದೇವನು ಬಳಿಗೆ ಬಂದು ತನ್ನ ಕೈಗಳಿಂದ ಆತನ ಪಾದಗಳನ್ನು ಎತ್ತಿ ಮತ್ತೊಂದೆಡೆಗೆ ಇಡಲು, ಆ ಸ್ಥಳವೂ ಶಿವಲಿಂಗಾಕಾರವಾಗಿಯೇ ಕಾಣಿಸಿತು. ಎಲ್ಲೆಲ್ಲಿ ಕಾಲುಗಳಂ

ತಿರುಗಿಸಿಟ್ಟರೂ ಅಲ್ಲಲ್ಲಿಯೂ ಶಿವಲಿಂಗಗಳೇ ಗೋಚರವಾದುವು. ತದ್ಭಿನ್ನವಾದೆಡೆ ಲೇಶವೂ ಇರಲಿಲ್ಲ. ಘಂಟೆಯೂ ಮೃದಂಗವೂ ದರ್ಶನಕ್ಕೆ ಬಂದ ಜನವೂ ಎಲ್ಲವೂ ಶಿವರೂಪವಾಗಿಯೇ ಕಂಡಿತು. ಬಳಿಕ ಆತನ ಪಾದವಂ ನೋಡಲು, ಅದೂ ಶಿವ ರೂಪವಾಗಿದ್ದಿತು. ತನ್ನನ್ನು ಬಗೆದು ನೋಡಲು, ತಾನೂ ಶಿವರೂಪನಾಗಿದ್ದನು. ಮತ್ತೆ ಸುತ್ತಲೂ ನೋಡಲು, ದೇವಸ್ಥಾನವೆಲ್ಲವೂ ಶಿವಮಯವಾಗಿ ಕಂಡಿತು. ಆಗ ನಾಮದೇವನು ಅತ್ಯಾಶ್ಚರ್ಯಯುಕ್ತನಾಗಿ ನಿಂತನು. ವಿಷ್ಟೋಭನು ನಾಮದೇವನನ್ನು ನೋಡಿ-ನಾಮದೇವನೆ! ನಾನು ತಾಳಲಾರೆನು. ನನ್ನ ಪಾದಗಳಂ ಬೇಗದಿಂ ಭೂಮಿಯ ಮೇಲೆ ಇಡು-ಎನಲು, ನಾಮದೇವನು ಸಾಷ್ಟಾಂಗವಂದನೆಯಂ ಮಾಡಿ,-ನನ್ನಿಂದ ಮಹಾಪರಾಧವಾಯಿತು. ನಾನು ಅಜ್ಞಾನದಿಂದಾಡಿದ ಮಾತನ್ನು ಮನ್ನಿಸಬೇಕು. ನೀವು ಜ್ಞಾನಸಾಗರರು. ಮಹಾಚೈತನ್ಯಸಂಪನ್ನರು. ತಮ್ಮ ಪಾದಸೇವೆಯು ದೊರೆಯಲು, ಸರ್ವವೂ ಶಿವಮಯವಾಗಿಯೇ ತೋರಿತು. ಎಲ್ಲಿ ನೋಡಿದರೂ ಅಲ್ಲಿ ಸ್ವಲ್ಪವೂ ಬರಿದಾದ ಸ್ಥಳವಿಲ್ಲದೆ ಇದೆ. ನಾನೂ ಶಿವನೇ ಆಗಿ ಕಾಣುತ್ತಿರುವೆನು-ಎಂದು ನುಡಿದು ಮತ್ತೆ ವಂದಿಸಿದನು. ಆತನು ನಾಮದೇವನಂ ಕುರಿತು-ಅಯ್ಯಾ ನಾಮದೇವನೆ! ಶಿವಧ್ಯಾನವಂ ನಿನಗೋಸ್ಕರ ಹೇಳುವೆನು;—ಕೇಳು. ಶುದ್ಧಸ್ಫಟಿಕಸಂಕಾಶನೂ ತ್ರಿನೇತ್ರನೂ ಪಂಚವಕ್ತ್ರನೂ ದಶಭುಜನೂ ನಾಗಾಭರಣಭೂಷಿತನೂ ವರಪರಶುಮೃಗಾಭಯಹಸ್ತನೂ ಪದ್ಮಾಸನಾಧಿರೂಢನೂ ನೀಲಗ್ರೀವನೂ ವ್ಯಾಘ್ರಚರ್ಮೋತ್ತರೀಯನೂ ಚಂದ್ರಕಿರೀಟಾಲಂಕೃತನೂ ಗಂಗಾಧರನೂ ವಾಮಾಂಕಾರೂಢಗೌರೀಸಮಾಲಿಂಗಿತನೂ ಅಕ್ಷರನೂ ಅವ್ಯಯನೂ ಸರ್ವವ್ಯಾಪಿಯೂ ಆದ ಶಿವನನ್ನು ಹೃದಯದಲ್ಲಿ ಧ್ಯಾನಿಸಬೇಕು. ಆತನ ಮಸ್ತಕಗಳು ಊರ್ಧ್ವಲೋಕವೆಲ್ಲವಂ ವ್ಯಾಪಿಸಿರುವುವು. ಪಾದಗಳು ಸಪ್ತಪಾತಾಳಲೋಕಗಳನ್ನೂ, ಭುಜಗಳು ಸಮಸ್ತದಿಗಂತರಗಳನ್ನೂ ವ್ಯಾಪಿಸಿರುವುವು. ಆತನನ್ನು ವರ್ಣಿಸಲು ಸಹಸ್ರಮುಖವುಳ್ಳ ಆದಿಶೇಷನಿಗೂ ಅಸದಳವು. ಆ ಪರಮೇಶ್ವರನ ಮಹಿಮೆಯು ಅಪಾರವಾದುದು. ನಾನು ಬದ್ಧಾಂಜಲಿಪುಟನಾಗಿ ಜ್ಞಾನದೇವರನ್ನು ಸಮಾಶ್ರಯಿಸಿ ಅವರ ಪಾದಸೇವೆಯಿಂದ ಜ್ಞಾನವಂ ಸಂಪಾದಿಸಿದೆನು-ಎಂದು ನುಡಿದನು. ನಾಮದೇವನು ಮನದಲ್ಲಿ ಅನುಭವಮಂ ತಾಳಿ ಪರಮಾನಂದಭರಿತನಾದನು. ಶ್ರೀ ಕೃಷ್ಣಪರಮಾತ್ಮನು ಅರ್ಜುನನಿಗೆ ವಿಶ್ವರೂಪಸಂದರ್ಶನವಂ ಮಾಡಿಸಲು, ಆತನಿಗೆ ಎಂತು ಮನನವುಂಟಾಯಿತೋ ಅಂತು ನಾಮದೇವನಿಗೂ ಆತ್ಮಮನನವಾಯಿತು. ಬಳಿಕ ನಾಮದೇವನು ವಿಷ್ಟೋಭನನ್ನು ಕುರಿತು-ಸದ್ಗುರುಗಳಿರಾ! ನಿಮ್ಮ ಪಾದವೇ ನನಗೆ ತಾರಕವಾಯಿತು. ನಿಮ್ಮ ಪಾದಸ್ಪರ್ಶದಿಂದ ನನಗೆ ಸರ್ವವೂ ಶಿವಮಯವಾಗಿಯೇ ಕಾಣುವುದು. ನಿಮ್ಮ ಪಾದವನ್ನು ನಾನು ಸಮಾಶ್ರಯಿಸಿರುವೆನು. ನನ್ನಲ್ಲಿ ಅನುಗ್ರಹವಂ ಮಾಡಬೇಕು-ಎಂದು ಬೇಡಿಕೊಂಡನು. ವಿಷ್ಟೋಭನು ತ್ವರೆಯಿಂದ ಎದ್ದು ನಾಮದೇವನ ಮಸ್ತಕದ

ಮೇಲೆ ಅಭಯಹಸ್ತವನಿರಿಸಿದನು. ಆಗ ನಾಮದೇವನು ಹೃದಯದಲ್ಲಿ ಶ್ರೀ ರುಕ್ಮಿಣೀಪತಿಯಂ ತಿಳಿದನು. ಕೆಲವುಕಾಲ ಗುರುಗಳ ಸವಿಾಪದಲ್ಲಿ ಇದ್ದು ಬಳಿಕ ಶ್ರೀ ವಿಟ್ಠಲನ ಸನ್ನಿಧಿಗೆ ಬಂದನು. ಸ್ವಾಮಿಯು ನಾಮದೇವನನ್ನು ನೋಡಿ-ನೀನು ಸದ್ಗುರುವಂ ಸಮಾಶ್ರಯಿಸಿದ ಬಳಿಕ ನಮ್ಮ ಯೋಗಕ್ಷೇಮವಂ ತೆಗೆದುಕೊಳ್ಳುವುದನ್ನೇ ಬಿಟ್ಟೆ. ಮನವನ್ನು ದೃಢವಾಗಿ ಹಿಡಿದು ಗುರುಗಳ ಬಳಿಯಲ್ಲಿಯೇ ನಿಂತೆ-ಎನಲು, ನಾಮದೇವನು-ಸ್ವಾಮಿಯೇ! ಆ ಸದ್ಗುರುಗಳೂ ನಿನ್ನ ಸ್ವರೂಪವೇ. ಈಗ ನನ್ನ ಮನಸ್ಸಿಗೆ ಸ್ವಲ್ಪವೂ ಭೇದತೋರುವುದಿಲ್ಲ-ಎನಲು, ಆ ನುಡಿಯಂ ಕೇಳಿ ಜಗನ್ನಾಥನು ಸಂತೋಷಪಟ್ಟು ಸವಿಾಪದಲ್ಲಿದ್ದವರನ್ನು ನೋಡಿ-ಇನ್ನುಮೇಲೆ ನಾಮದೇವನನ್ನು ಹಸಿಯಘಟವೆನಲಾಗದು-ಎಂದನು. ಜ್ಞಾನದೇವನು ಆಸಂಕೇತವನ್ನು ತಿಳಿದನು.

ಇಂತು ಶ್ರೀ ಭಕ್ತವಿಜಯದಲ್ಲಿ ಹದಿನಾರನೆಯ ಅಧ್ಯಾಯಂ ಸಂಪೂರ್ಣಂ.

ಹದಿನೇಳನೆಯ ಅಧ್ಯಾಯ.

ಪರುಸಭಾಗವತನ ಚರಿತ್ರೆ.

ಎಲೈ ಶ್ರೋತೃಗಳಿರಾ! ಸುರಸತರವಾದ ಮತ್ತೊಂದು ಚರಿತ್ರೆಯಂ ನುಡಿಯುವೆನು. ಆದರದಿಂದ ಆಲಿಸಬೇಕು. ಪರುಸಭಾಗವತನೆಂಬ ಒಬ್ಬ ಬ್ರಾಹ್ಮಣನು ಪಂಢರಪುರದಲ್ಲಿದ್ದನು. ಆತನು ಭಕ್ತಿಯಿಂದ ಶ್ರೀರುಕ್ಮಿಣೀದೇವಿಯನ್ನು ಕುರಿತು ತಪಸ್ಸಂ ಮಾಡಿದನು. ದೇವಿಯು ಆತನ ಭಕ್ತಿಗೆ ಮೆಚ್ಚಿ ಪ್ರಸನ್ನೆಯಾಗಿ ಸಗುಣರೂಪದಿಂದ ದರ್ಶನವಂ ಕೊಟ್ಟು-ನಿನ್ನ ಅಭೀಷ್ಟವೇನು?-ಎಂದು ಬೆಸಗೊಂಡಳು. ಆತನು ಜಗಜ್ಜನನಿಯ ದರ್ಶನದಿಂದ ಸಂತುಷ್ಟನಾಗಿ-ತಾಯೆ! ನಿನ್ನ ಚರಣಂಗಳ ಭಜನದಲ್ಲಿಯೇ ನನ್ನ ಚಿತ್ತವು ಸ್ಥಿರವಾಗಿ ನಿಲಬೇಕು. ಸಂಸಾರದ ಕೋಟಲೆಯ ಮಾತುಗಳು ಮನಸ್ಸಿಗೆ ಹತ್ತಬಾರದು. ಇಂತು ನೀನು ಅನುಗ್ರಹವಂ ಮಾಡಿ ನನ್ನ ಮನೋರಥವಂ ಪೂರಯಿಸಬೇಕು-ಎಂದು ಬಿನ್ನವಿಸಿಕೊಂಡನು.

ಲೋಕಮಾತೆಯು ಪರುಸವೆಂಬ ಒಂದು ಶಿಲೆಯಂ ಕೊಟ್ಟು-ಇದನ್ನು ಜೀವಕ್ಕಿಂತಲೂ ಬೇರೆ ಎಣಿಸಬೇಡ; ಎಚ್ಚರಿಕೆಯಿಂದ ರಕ್ಷಿಸಿಕೊಂಡಿರು. ಇದನ್ನು ಲೋಹಕ್ಕೆ ಮುಟ್ಟಿಸಿದರೆ ಆ ಲೋಹವು ಸುವರ್ಣವಾಗುವುದು-ಎಂದು ನುಡಿದು ಮರೆಗೊಂಡಳು. ಆತನು ಆ ಸ್ಪರ್ಶಶಿಲೆಯಂ ಪಡೆದು, ತನ್ನ ತಪದಿಂದ ಇಂದ್ರಪದವಿ

ಪ್ರಾಪ್ತವಾದಂತೆ ಪರಮೋಲ್ಲಾಸವಂ ತಾಳಿ ಮನೆಗೆ ಬಂದು ಕಾಂತೆಯಂ ಕರೆದು ನಡೆದ ಸಂಗತಿಯಂ ತಿಳಿಯಿಸಿ ಆ ಪರುಸವಂ ಆಕೆಯ ಕೈಗೆ ಕೊಟ್ಟನು. ಬಳಿಕ ಒಂದು ಲೋಹವಂ ತಂದು ಅದಕ್ಕೆ ಆ ಸ್ಪರ್ಶಶಿಲೆಯಂ ಸ್ಪರ್ಶಮಾಡಲು, ಅದು ಪುಟ ಪಾಕಶೋಧಿತವಾದ ಸುವರ್ಣವಾಯಿತು. ಅದಂ ಕಂಡು ಆತನ ಮಡದಿ ಕಮಲಜೆ ಯೆಂಬಾಕೆ ಪರಮಾನಂದವಂತಾಳಿ-ಜಗನ್ಮಾತೆಯ ಮಹಿಮೆಯಂ ತಿಳಿದವರು ಯಾರು? ನಮ್ಮಂತಹ ಬಡವರಿಗೆ ಆಕೆಯಲ್ಲದೆ ಗತಿಯಿನ್ನಾರು ? ದಾರಿದ್ರ್ಯದುಃಖದಿಂದ ಬಹು ವಾಗಿ ಪೀಡಿತರಾಗಿದ್ದೆವು. ಆಕೆಯ ಅನುಗ್ರಹದಿಂದ ಕೃತಾರ್ಥರಾದೆವು—ಎಂದು ದೇವಿಯ ಕೃಪೆಯಂ ಬಹುವಾಗಿ ಕೊಂಡಾಡಿದಳು.

ಆತನು ಏಕಾಂತದಲ್ಲಿ ಕಾಂತೆಯಂ ಕುರಿತು-ಚಪಲಬುದ್ಧಿಯಿಂದ ಈಸಂಗತಿಯಂ ಯಾರಲ್ಲಿಯೂ ತಿಳಿಯಿಸಬೇಡ. ಸಂತರು ಇದಂ ತಿಳಿದರೆ ನನ್ನನ್ನು ಹಾಸ್ಯಮಾಡದೆ ಇರರು. ಆದುದರಿಂದ ಎಚ್ಚರಿಕೆಯಿಂದಿರು—ಎಂದನು. ಆಕೆ-ಉಂಟೆ? ನಾನು ಯಾರ ಲ್ಲಿಯೂ ಹೇಳುವುದಿಲ್ಲ-ಎಂದು ನುಡಿದಳು.

ದಂಪತಿಗಳಿಬ್ಬರೂ ಸಂಸಾರದಲ್ಲಿ ಅನುರಕ್ತರಾಗಿದ್ದರು. ಪ್ರತಿದಿವಸವೂ ಮೃಷ್ಟಾನ್ನವಂ ಭುಂಜಿಸುತ್ತ ಹೊರಗೆ ಬಡತನದ ಲಕ್ಷಣವನ್ನೇ ತೋರಿಸುತ್ತಿದ್ದರು. ಮನೆಯಲ್ಲಿ ಅಮಿತವಾದ ಧನಸಂಪತ್ತಿಯುಳ್ಳವರಾಗಿ ಬಗೆವಗೆಯ ಭಕ್ಷ್ಯಭೋಜ್ಯಂ ಗಳಂ ಮಾಡಿಕೊಂಡು ಭುಂಜಿಸುತ್ತ ಆನಂದದಿಂದ ಇರುತ್ತಿದ್ದರು. ಮೈಂದರು ಹೃದಯದಲ್ಲಿ ಪರರಿಗೆ ವಂಚನೆಮಾಡುವುದನ್ನೇ ಧ್ಯಾನಿಸುತ್ತ ಹೊರಗೆ ಸಾಧುಗಳಂತೆ ಎಂತು ಕಾಣುವರೋ; ವ್ಯಭಿಚಾರಿಗಳು ಒಳಗೆ ದುರಾಚಾರವುಳ್ಳವರಾದರೂ ಮೇಲೆ ಅತಿಶಯಿತವಾದ ಸದಾಚಾರವುಳ್ಳವರಾಗಿ ಎಂತು ತೋರುವರೋ ಅಂತು ಪರುಸಭಾಗ ವತನು ಧನಸಂಪತ್ತಿಯುಳ್ಳವನಾಗಿ ಸರ್ವಸುಖವನ್ನು ಅನುಭವಿಸುತ್ತ ಇದ್ದರೂ ಮೇಲೆ ಬಡವನಾಗಿ ವಿರಕ್ತನಾಗಿಯೇ ತೋರುತ್ತಿದ್ದನು. ಆದರೂ ಆತನ ಲಕ್ಷಣವಂ ಕಂಡು ಪರೀಕ್ಷಕರಾದ ಚತುರರು ಆತನ ಸ್ಥಿತಿಯಂ ನಿಶ್ಚಯಿಸಿದರು. ಭೋಜನ ಮಾಡಿದುದೂ ಉಪವಾಸವಿರುವುದೂ ಮುಖವಂ ನೋಡಿದುದರಿಂದ ಎಂತು ವಿದಿತವಾ ಗುವುದೋ; ಅಂತು ಪರುಸಭಾಗವತನ ಸ್ಥಿತಿಯು ಸುಜ್ಞಾನಿಗಳಿಂದ ವ್ಯಕ್ತವಾಗಿ ತಿಳಿಯಲ್ಪಡುತಿದ್ದಿತು. ಲೋಕದಲ್ಲಿ ಸುಗುಣವೂ ದುರ್ಗುಣವೂ ಕ್ರಮದಿಂದ ಪ್ರಕಾಶಕ್ಕೆ ಬಾರದೆ ಇರುವುದಿಲ್ಲ.

ಒಂದು ದಿನ ಆತನ ಮಡದಿ ಕಮಲಜೆಯು ಉದಕವಂ ತರುವುದಕ್ಕೋಸ್ಕರ ಚಂದ್ರಭಾಗೆಗೆ ಹೋಗಿ ಅಲ್ಲಿ ರಾಜಾಯಿಯಂ ಕಂಡು ಅವಳೊಡನೆ ಬರುತ್ತ ಮಾರ್ಗ ದಲ್ಲಿ ಯೋಗಕ್ಷೇಮವನ್ನು ವಿಚಾರಿಸಿದಳು. ರಾಜಾಯಿಯು ಗೃಹಕೃತ್ಯದ ಮಾತನ್ನು ಏನನೂ ಆಡದೆ ಸುಮ್ಮನಿರಲು, ಕಮಲಜೆಯು-ಅನ್ನವಸ್ತ್ರದ ವಿಷಯದಲ್ಲಿ ನಿಮಗೆ ಬಹು ಕಷ್ಟವಾಗಿರಬಹುದಲ್ಲವೆ? ಕೆಳದಿಯಾದ ನನ್ನ ಸಂಗಡ ಹೇಳಿಕೊಳ್ಳುವುದಕ್ಕೆ ಸಂಕೋಚ

ಪಡಬೇಡ. ಸ್ನೇಹಿತೆಯಲ್ಲಿ ನಿಷ್ಕಪಟೆಯಾಗಿರಬೇಕು-ಎನಲು, ಅದಕ್ಕೆ ಆಕೆ-ಎಲೆ ಸಖಿ! ಕೇಳು. ನಿನ್ನಲ್ಲಿ ನಾನು ಮರೆಮಾಡುವುದೇನು? ಆದರೆ ನೀನು ಯಾರಲ್ಲಿಯೂ ಬಾಯ್ಬಿಡಬೇಡ. ಮಾನವೆಂಬುದು ದೊಡ್ಡದು. ಒಳಗೆ ಇಲ್ಲದಿದ್ದರೂ ನೋಟ ಎಲ್ಲರಂತೆಯೇ ಇರಬೇಕು. ನನ್ನ ಅವರು ನಿರ್ಲಜ್ಜರಾಗಿ ಸರ್ವಕಾಲದಲ್ಲಿಯೂ ರುಕ್ಮಿಣೀಪತಿಯ ಮುಂದೆ ಕುಣಿಯುತ್ತಿರುವರು. ಮಾನಾಪಮಾನವೂ ಲೋಕರೀತಿಯನನುಸರಿಸಿದ ಸಾಂಸಾರಿಕಚಿಂತೆಯೂ ಅವರ ಮನಸ್ಸಿಗೆ ಹತ್ತುವುದಿಲ್ಲ. ಮನೆಯಲ್ಲಿ ಊಟಮಾಡತಕ್ಕವರು ಅನೇಕರು. ಅನ್ನವಸ್ತ್ರಾದಿಗಳಿಗೆ ಬಹುಕಷ್ಟ. ಆಗಾಗ ಉಪವಾಸಗಳು ಆಗುತ್ತಿರುವುವು. ನಮ್ಮ ಹಣೆಯಲ್ಲಿ ವಿಧಿ ಇಂತು ಬರೆದಿರುವುದು-ಎಂದಳು. ಆ ನುಡಿಯಂ ಕೇಳಿ ಆಕೆ-ನಾಮದೇವನು ಯಾವನನ್ನು ಹಗಲೂ ಇರುಳೂ ಎಡೆಬಿಡದೆ ಭಜಿಸುತ್ತಿರುವನೋ ಆ ದೇವನು ಪ್ರಸನ್ನನಾಗಿ ನಿಮಗೆ ಏನನೂ ಕೊಡಲಿಲ್ಲವೇ? ವೃಕ್ಷವು ಫಲವನ್ನೀಯದಿದ್ದರೆ ಅದಕ್ಕೆ ಸುಮ್ಮನೆ ನೀರನ್ನು ಏಕೆ ಹಾಕಬೇಕು? ಬಾವಿಯಲ್ಲಿ ನೀರು ಬರುವಂತಿಲ್ಲದಿದ್ದರೆ ಏಕೆ ಶ್ರಮಪಟ್ಟು ಅಗಿಯಬೇಕು? ಮದುವೆಯಲ್ಲಿ ಉಡುಗೊರೆಯನ್ನು ಕೊಡದಿದ್ದರೆ ಅಲ್ಲಿಗೆ ಏಕೆ ಹೋಗಬೇಕು? ಔಷಧವು ಗುಣವಂ ಕೊಡದಿದ್ದರೆ ನಾಲಗೆಗೆ ಏಕೆ ಸುಮ್ಮನೆ ಅರುಚಿಯನ್ನುಂಟುಮಾಡಬೇಕು? ಭೂಮಿಯಲ್ಲಿ ಬೆಳೆಯು ಹತ್ತದಿದ್ದರೆ ಕಷ್ಟಪಟ್ಟು ಏಕೆ ವ್ಯವಸಾಯವಂ ಮಾಡಬೇಕು? ಅಂತು ರುಕ್ಮಿಣೀರಮಣನು ಅನ್ನವನ್ನೂ ಕೊಡದಿದ್ದಮೇಲೆ ಸುಮ್ಮನೆ ಆತನ ಆರಾಧನೆಯನೇಕೆ ಮಾಡಬೇಕು? ನನ್ನ ಪತಿಯು ರುಕ್ಮಿಣೀದೇವಿಯನ್ನು ಭಜಿಸುತ್ತಿರಲು, ಆಕೆ ಪ್ರಸನ್ನೆಯಾಗಿ ಕರುಣೆಯಿಂದ ಒಂದು ಪರುಸವನ್ನು ಕೊಟ್ಟಿರುವಳು. ಅದಕ್ಕೆ ಲೋಹವಂ ಸೋಂಕಿಸಿ ಅಧಿಕವಾದ ಚಿನ್ನವಂ ಮಾಡಿಕೊಂಡಿರುವೆವು. ಆದರಿಂದ ಮನೆಯಲ್ಲಿ ಮೃಷ್ಟಾನ್ನವಂ ಭೋಜನಮಾಡುತ್ತಿರುವೆವು-ಎಂದಳು. ಅದಕ್ಕೆ ರಾಜಾಯಿಯು ಪರುಸವೆಂಬುದು ಎಂತಿರುವುದು?—ಎನಲು, ಕಮಲಜೆಯು—ಮನೆಗೆ ಬಾ; ತೋರಿಸುವೆನು-ಎಂದುತ್ತರವನ್ನು ಕೊಟ್ಟಳು. ಇಂತು ಇಬ್ಬರೂ ಮಾತನಾಡುತ್ತ ಹೊರಟು ತಮ್ಮ ತಮ್ಮ ಮನೆಯಂ ಸೇರಿದರು.

ಬಳಿಕ ಒಂದುದಿವಸ ರಾಜಾಯಿಯು ಕಮಲಜೆಯ ಮನೆಗೆ ಬಂದಳು. ಕಮಲಜೆಯು ಪರುಸವನ್ನು ತಂದುತೋರಿಸಿದಳು. ರಾಜಾಯಿಯು ನೋಡಿ—ಸಖಿ! ನಾನೂ ಲೋಹಕ್ಕೆ ಸ್ಪರ್ಶಮಾಡಿನೋಡುವೆನು. ಒಂದುಕ್ಷಣದ ವರೆಗೆ ಕೊಟ್ಟಿರು—ಎನಲು, ಕಮಲಜೆ-ತೆಗೆದುಕೊಂಡು ಹೋಗು. ಲೋಹವಂ ಸೋಂಕಿಸಿ ನಿನ್ನ ದಾರಿದ್ರ್ಯವನ್ನು ಧ್ವಂಸಮಾಡಿಕೊಂಡು ಸುಖದಿಂದಿರು. ಬೇಗನೆ ನನ್ನ ಒಡವೆಯಂ ನನಗೆ ತಂದುಕೊಡು. ಈ ಸಂಗತಿ ನಿನ್ನ ನನ್ನ ಪತಿಗಳಿಗಾರಿಗೂ ತಿಳಿಯಲಾಗದು. ಈವಿಷಯದಲ್ಲಿ ಬಹುಜಾಗರೂಕತೆಯಿಂದಿರು—ಎಂದು ಆಕೆಯ ಕೈಗೆ ಕೊಟ್ಟಳು. ರಾಜಾಯಿಯು ಬಹುಸಂತೋಷದಿಂದ ಅದನ್ನು ತೆಗೆದುಕೊಂಡು ಹೊರಟು ತನ್ನ

ಮನೆಯಂ ಸೇರಿ, ಸೂಜಿ ಕತ್ತರಿ ಮೊದಲಾದ ಮನೆಯಲ್ಲಿದ್ದ ಎಲ್ಲಾ ಲೋಹಗಳಿಗೂ ಸ್ಪರ್ಶವಂ ಮಾಡಿಸಲು, ಅದೆಲ್ಲವೂ ಉತ್ತಮವಾದ ಚಿನ್ನವಾಯಿತು. ಅದಂ ವಿಕ್ರಯಿಸಿ ಹಣವನ್ನು ಮಾಡಿಕೊಂಡು ಅದರಿಂದ ಅಭಿಮತವಾದ ವಸ್ತ್ರಭೂಷಣಗಳನ್ನೂ ಅಗಣಿತವಾದ ಬಗೆವಗೆಯ ಭೋಜನಸಾಮಗ್ರಿಗಳನ್ನೂ ತರಿಸಿ ಸಂತೋಷದಿಂದ ಪಾಕ ಪ್ರಯತ್ನವಂ ಮಾಡಿದಳು. ಆಗ ಮಧ್ಯಾಹ್ನಸಮಯವಾಗಿ ಇದ್ದಿತು. ನಾಮದೇವನು ಮನೆಗೆ ಬಂದನು. ಅಲ್ಲಲ್ಲಿ ಇಟ್ಟಿದ್ದ ಸಾಮಗ್ರಿಗಳೆಲ್ಲವಂ ಕಂಡನು. ಮಡದಿಯನ್ನು ಕುರಿತು-ಈ ಸಾಮಗ್ರಿಗಳಾವುವು? ಎಲ್ಲಿಂದ ಬಂದುವು? ಏನು ಸಂಗತಿ? ಎಲ್ಲವನ್ನೂ ಬೇಗನೆ ಹೇಳು-ಎನಲು, ಆಕೆ-ಭೋಜನಮಾಡಿ; ಸಂಗತಿಯಿಂದೇನು? ಸಂಸಾರಚಿಂತೆಯು ನಿಮಗೆ ಇಂದಿನಿಂದ ಸ್ವಲ್ಪವೂ ಬೇಡ. ಈ ವಿಷಯದಲ್ಲಿ ನಿಮ್ಮ ಮನಸ್ಸಿಗೆ ಸ್ವಲ್ಪವಾದರೂ ಕ್ಲೇಶವನ್ನು ಕೊಡುವುದಿಲ್ಲ. ನಿಮ್ಮನ್ನು ಕುರಿತು ಇನ್ನು ಮೇಲೆ ಏನನೂ ಮಾತನಾಡುವುದಿಲ್ಲ-ಎಂದಳು. ನಾಮದೇವನು ಅದಂ ಕೇಳಿ ವಿಸ್ಮಿತನಾಗಿ-ಸಂಗತಿಯಂ ನೀನು ಹೇಳಿದರೇ ನಾನು ಭೋಜನವಂ ಮಾಡುವೆನು. ಅದೇನು? ಮೊದಲು ಹೇಳು-ಎಂದು ಬೆಸಗೊಂಡನು. ರಾಜಾಯಿಯು ನಿರ್ವಾಹವಿಲ್ಲದೆ ಹೋಗಲು, ಸಂಕಟಗೊಂಡು-ಪರುಸಭಾಗವತನೆಂಬ ಬ್ರಾಹ್ಮಣನು ರುಕ್ಮಿಣೀದೇವಿಯ ಅನುಗ್ರಹದಿಂದ ದಿವ್ಯವಾದ ಒಂದು ಪರುಸವಂ ಸಂಪಾದಿಸಿರುವನು. ನೀವೂ ಪಾಂಡುರಂಗನನ್ನು ಅವಿಚ್ಛಿನ್ನವಾಗಿ ಭಜಿಸುತ್ತಿರುವಿರಿ. ಏನು ಪ್ರಯೋಜನ? ಮನೆಯಲ್ಲಿ ಅನ್ನಕ್ಕೆ ಮಾರ್ಗವಿಲ್ಲ. ಮಕ್ಕಳುಮರಿಗಳು ಸರ್ವಕಾಲದಲ್ಲಿಯೂ ಕಷ್ಟಪಡುತ್ತಿರುವರು. ಆ ಬ್ರಾಹ್ಮಣನ ಹೆಂಡತಿ ಕಮಲಜೆಯೆಂಬಾಕೆ. ಆಕೆಗೂ ನನಗೂ ಪರಮಸ್ನೇಹ. ಆದುದರಿಂದ ಆಕೆ ನನ್ನಲ್ಲಿ ನಂಬುಗೆಯನ್ನಿಟ್ಟು ಆ ಪರುಸವಂ ಕೊಟ್ಟಿರುವಳು. ಅದರಿಂದ ನಮ್ಮ ಕಾರ್ಯವಂ ಸಾಧಿಸಿಕೊಂಡಿರುವೆನು. ಇನ್ನು ಅದನ್ನು ಆಕೆಗೆ ಈಗಲೇ ತೆಗೆದುಕೊಂಡುಹೋಗಿ ಕೊಡಬೇಕು. ಈ ಸಂಗತಿಯನ್ನು ನೀವು ಇನ್ನಾರಲ್ಲಿಯೂ ಹೇಳದಿರಿ-ಎಂದು ನುಡಿದಳು. ನಾಮದೇವನು ಪರುಸವೆಂಬುದು ಎಂತಿರುವುದು? ತೋರಿಸು; ನೋಡೋಣ-ಎನಲು, ಆಕೆ ತಂದುತೋರಿಸಿದಳು. ನಾಮದೇವನು ಬಲಾತ್ಕಾರದಿಂದ ಅದಂ ಕಿತ್ತುಕೊಂಡು ಥಟ್ಟನೆ ಹೊರಟು ಚಂದ್ರಭಾಗೆಯಂ ಸೇರಿ ದೊಡ್ಡ ಮಡುವಿನಲ್ಲಿ ಅದಂ ಬಿಸುಟು ಉಪಾಧಿರಹಿತನಾಗಿ ಆನಂದದಿಂದ ಭಗವನ್ನಾಮಸ್ಮರಣೆಯಂ ಮಾಡುತ್ತ ಕುಳಿತನು. ರಾಜಾಯಿಯು ಮನೆಯಲ್ಲಿ ರೋದನವಂ ಮಾಡುತ್ತ ಕುಳಿತಳು.

ಅತ್ತಲು ಆ ಪರುಸಭಾಗವತನು ತನ್ನ ಮನೆಗೆ ಬಂದು ಪರುಸವನ್ನು ನೋಡಿದನು. ಇಟ್ಟಿದ್ದ ಸ್ಥಳದಲ್ಲಿ ಅದು ಇರಲಿಲ್ಲ. ಕಾಂತೆಯನ್ನು ಕರೆದು-ಪರುಸವೆಲ್ಲಿ? ಇಲ್ಲಿ ಇಲ್ಲವಲ್ಲಾ! ಬಹುಪ್ರಯತ್ನವಂ ಮಾಡಿದರೂ ದೊರೆಯುವಂತಹುದಲ್ಲ. ದೇವಿಯ ಪರಮಾನುಗ್ರಹದಿಂದ ಬಂದುದು. ಆ ನನ್ನ ನಿಧಿಯನ್ನು ಎಲ್ಲಿಯಾದರೂ

ಕಳೆದೆಯೋ? ಏನು ಸಂಗತಿ? ಹೇಳು—ಎನಲು,—ಆಕೆ ಗಡಗಡನೆ ನಡುಗುತ್ತ ಮೆಲ್ಲನೆ ಧೈರ್ಯವಂ ತಾಳಿ-ನನ್ನ ಸಖಿ ರಾಜಾಯಿಯು ತೆಗೆದುಕೊಂಡು ಹೋಗಿರುವಳು. ಇನ್ನೂ ಅರ್ಧಕ್ಷಣವಾಯಿತು. ಈಗಲೇ ತಂದುಕೊಡುವೆನೆಂದು ಹೇಳಿರುವಳು. ಎಲ್ಲಿಯೂ ಹೋಗುವುದಿಲ್ಲ. ನೀವು ಧೈರ್ಯದಿಂದಿರಿ. ಅಯ್ಯೋಪಾಪ! ಆಕೆ ಬಹು ದಾರಿದ್ರ್ಯದಿಂದ ಪೀಡಿತೆಯಾಗಿದ್ದಳು. ಅವಳ ಗೃಹಕೃತ್ಯದ ಕಷ್ಟವಂ ನೋಡಿ ಸೈರಿಸಲಾರದೆ ಕೊಟ್ಟಿರುವೆನು-ಎಂದಳು. ಅದಕ್ಕೆ ಆತನು-ಅದು ಎಲ್ಲಿ ಹೋಗುವುದೋ ಎಂಬ ಭಯವು ನನಗೆ ಬಲವತ್ತರವಾಗಿರುವುದು. ಈಗಲೇ ನೀನು ಹೋಗಿ ತೆಗೆದುಕೊಂಡು ಬಾ—ಎನಲು, ಕಮಲಜೆಯು ಸಂಭ್ರಾಂತೆಯಾಗಿ ಹೊರಟು ರಾಜಾಯಿಯ ಮನೆಯಂ ಸೇರಿ ರಾಜಾಯಿಯನ್ನು ಕುರಿತು ನನ್ನ ಒಡವೆಯನೆಲ್ಲಿ ಇಟ್ಟು ಇರುವೆ? ಈಗಲೇ ಕೊಡು-ಎಂದು ಕೇಳಿದಳು. ಆಕೆ ಹದರಿ-ಸಖಿ! ನನ್ನಿಂದ ಮಹಾಪರಾಧವಾಯಿತು. ನನ್ನ ಅವರು ಮನೆಗೆ ಬಂದು ಅದನ್ನು ತೆಗೆದುಕೊಂಡು ನದಿಗೆ ಹೋಗಿರುವರು. ಈಗಲೇ ಸ್ನಾನವಂ ಮಾಡಿಕೊಂಡು ಬರಬಹುದು. ಬಂದೊಡನೆಯೆ ತಂದು ಕೊಡುವೆನು. ಅದುವರೆಗೂ ತಾಳು-ಎನಲು, ಆಕೆ ಚಿಂತಾಕ್ರಾಂತೆಯಾಗಿ—ಈ ಸಂಗತಿಯನ್ನೇ ನಿನ್ನ ಪತಿಯಲ್ಲಿ ತಿಳಿಯಿಸಲಾಗದು-ಎಂದು ನಾನು ಹೇಳಿದ್ದೆ—ನೀನು ಆ ಒಡವೆಯನ್ನೇ ಆತನ ವಶಕ್ಕೆ ಕೊಟ್ಟುದು ಅತ್ಯಾಶ್ಚರ್ಯವಾಗಿದೆ. ನದಿಗೆ ಸ್ನಾನಕ್ಕೆ ಹೋಗುವವರು ಆ ಒಡವೆಯನ್ನು ಏಕೆ ತೆಗೆದುಕೊಂಡು ಹೋಗಬೇಕು? ನನ್ನ ಮನಸ್ಸಿಗೇಕೋ ಸಂಶಯವುಂಟಾಗಿದೆ. ನನಗೆ ಅದು ಈಗಲೇ ಬೇಕು-ಎಂದಳು. ರಾಜಾಯಿಯು ಮಾತನೇನನೂ ಆಡಲಾರದೆ ಮನದಲ್ಲಿ ತಲ್ಲಣಿಸುತ್ತ-ನೀನೂ ಬಾ, ಇಬ್ಬರೂ ನದೀತೀರಕ್ಕೆ ಹೋಗೋಣ. ಅಲ್ಲಿಯೇ ತೆಗೆದುಕೊಡುವೆನು-ಎಂದು ಅವಳನ್ನೂ ಸಂಗಡ ಕರೆದುಕೊಂಡು ಭೀಮಾತೀರಕ್ಕೆ ಬಂದಳು. ನಾಮದೇವನು ಕಣ್ಣುಗಳಂ ಮುಚ್ಚಿಕೊಂಡು ಧ್ಯಾನಾರೂಢನಾಗಿ ಕುಳಿತಿದ್ದನು. ರಾಜಾಯಿಯು ಪತಿಯಂ ಕುರಿತು—ಪರುಸವಂ ಎಲ್ಲಿ ಇರಿಸಿರುವಿರಿ? ಕಮಲಜೆಯು ಕೇಳುವುದಕ್ಕೆ ಬಂದಿರುವಳು. ಇವಳಿಗೆ ಕೊಡಬೇಕು-ಎನಲು, ನಾಮದೇವನು ಅದಂ ನೀರಿನಲ್ಲಿ ಬಿಸುಟುಬಿಟ್ಟೆ—ಎಂದು ಉತ್ತರವಂ ಹೇಳಿದನು. ಆ ಮಾತಂ ಕೇಳಿ ಅವರಿಬ್ಬರೂ ಸಂತಪ್ತೆಯರಾಗಿ ದೀರ್ಘಸ್ವರದಿಂದ ರೋದನವಂ ಮಾಡುತ್ತ ಎದೆಯಂ ಬಡಿದುಕೊಳ್ಳುತ್ತ ಗೋಳಾಡಿದರು. ಅದಂ ಕಂಡು ಅನೇಕರು ಬಳಿಗೆ ಬಂದು ಸೇರಿದರು. ಸಂಗತಿಯೇನೆಂದು ಕೇಳಿದರು. ಕಮಲಜೆಯು ನಡೆದುದನೆಲ್ಲವನ್ನೂ ತಿಳಿಯಿಸಿದಳು. ಈ ಸುದ್ದಿಯು ಪರುಸಭಾಗವತನಿಗೂ ವಿದಿತವಾಯಿತು. ಆತನೂ ಎದೆಯಂ ಬಡಿದುಕೊಳ್ಳುತ್ತ ಆ ಸ್ಥಳಕ್ಕೆ ಬಂದು ಸೇರಿದನು. ಈತನು ನನ್ನ ಪರುಸವನ್ನು ಅಪಹರಿಸಿ, ನೀರಿನಲ್ಲಿ ಬಿಸುಟೆ—ಎಂದು ನಮ್ಮ ಸಂಗಡ ಸುಳ್ಳುಮಾತನಾಡುವನು-ಎಂದು, ಅಲ್ಲಿ ನೆರೆದಿದ್ದ ಜನರಂ ಕುರಿತು ಹೇಳಿಕೊಂಡನು.

ಅನೇಕರು ನಾಮದೇವನನ್ನೂ ಆತನ ಮಡದಿಯನ್ನೂ ಬಹುವಾಗಿ-ನಿಂದಿಸಿ ಧಾಂಕರಿಸಿದರು. ಭಾವುಕಭಕ್ತಮಹನೀಯರು ನಾಮದೇವನನ್ನು ಕೊಂಡಾಡಿದರು. ಅಲ್ಲದೆ-ಹೊನ್ನೂ ಮಣ್ಣೂ ಈತನಿಗೆ ಸಮವು; ಇಂತಿರುವಲ್ಲಿ ಪರುಸದ ಅಭಿಲಾಷೆಯು ಈತನಿಗೆ ಕಲ್ಪಾಂತದಲ್ಲಿಯಾದರೂ ಹುಟ್ಟಲಾರದು-ಎಂದು ಸಮಾಧಾನೋಕ್ತಿಯ ನಾಡಿದರು. ಕುಟಿಲರು-ಇವನು ಘಾತುಕನು. ಸುಮ್ಮನೆ ತುಳಸೀಮಾಲೆಯಂ ಧರಿಸಿಕೊಂಡು ಜಪವಂ ಮಾಡುವನಂತೆ ಅಭಿನಯಿಸುವನು. ಬ್ರಾಹ್ಮಣನ ಒಡವೆಯನ್ನು ಅಪಹರಿಸಿರುವ ಇವನನ್ನು ಸಾಧುವೆಂದು ಎಂತು ಕರೆಯಬಹುದು-ಎಂದರು. ಪರುಸಭಾಗವತನು ನಾಮದೇವನನ್ನು ಕುರಿತು-ನೀನು ವಿರಕ್ತನು. ದೇವರ ಭಕ್ತನೆಂದು ಪ್ರಖ್ಯಾತನಾಗಿರುವೆ. ಬ್ರಾಹ್ಮಣದ್ರವ್ಯವನ್ನು ಅಪಹರಿಸಿರುವೆ. ಇದು ಸಾಧುಜನಸಮ್ಮತವಲ್ಲ. ನೀನೇ ಮನದಲ್ಲಿ ವಿಚಾರಮಾಡಿನೋಡು-ಎಂದು ಗದ್ಗದಕಂಠನಾಗಿ ನುಡಿದನು.

ನಾಮದೇವನು ಆತನ ಮಾತಂ ಕೇಳಿ-ನಾನು ನಿಮ್ಮ ಪರುಸವಂ ಅಪಹರಿಸಿಲ್ಲ. ಅದು ನನಗೇತಕ್ಕೆ? ನೀವೂ ಹೊರಗೆ ವಿರಕ್ತರಾಗಿರುವುದರಿಂದ ನಿಮಗೇತಾನೆ ಅದು ಏತಕ್ಕೆಂದು ಈ ಚಂದ್ರಭಾಗೆಯ ಮಡುವಿನಲ್ಲಿ ಬಿಸುಟ್ಟೆನು. ನಿಮಗೆ ನನ್ನ ಮಾತು ಅಸತ್ಯವಾಗಿ ತೋರಿದರೆ, ನೀರಿನಲ್ಲಿ ಇಳಿದು ನೋಡಬಹುದು-ಎನಲು, ಜನರೆಲ್ಲರೂ ಆ ಮಾತಂ ಕೇಳಿ ನಕ್ಕು-ಅಹಹ! ಹೊಳೆಯ ಕಲ್ಲುಗಳಲ್ಲಿ ಆ ಸ್ಪರ್ಶಶಿಲೆಯಂ ಕಾಣುವಬಗೆಯೆಂತು? ಇದು ಯಾರಿಗೆ ಸಾಧ್ಯ?-ಎಂದು ಅಪಹಾಸ್ಯಮಾಡಿದರು.

ನಾಮದೇವನು ಥಟ್ಟನೆ ಮಡುವಿನಲ್ಲಿ ಧುಮುಕಿ ಒಂದು ಬೊಗಸೆಯಲ್ಲಿ ಕಲ್ಲುಗಳಂ ತೆಗೆದುಕೊಂಡುಬಂದು ಜನಕ್ಕೆ ಆಶ್ಚರ್ಯವಂ ತೋರುತ್ತ-ಪರುಸಗಳನ್ನು ತಂದಿರುವೆನು. ಇವುಗಳಲ್ಲಿ ನಿಮ್ಮದು ಯಾವುದೋ ಅದಂ ನೋಡಿ ಬೇರ್ಪಡಿಸಿ ತೆಗೆದುಕೊಳ್ಳಿ-ಎಂದು ಪರುಸಭಾಗವತನಿಗೆ ಹೇಳಿದನು. ಆ ಮಾತಿಗೆ ಅಲ್ಲಿ ನೆರೆದಿದ್ದವರನೇಕರು ಇನ್ನೂ ನಕ್ಕು ಹಾಸ್ಯಮಾಡಿದರು. ಕೆಲವರು ಸಾಧುಗಳು-ಈತನ ಹಸ್ತಸ್ಪರ್ಶದಿಂದ ಕಲ್ಲುಗಳು ಪರುಸಕ್ಕೆ ಸಮಾನಗಳೇ ಆಗುವುವು-ಎಂದರು. ಅವರಲ್ಲಿ ಕೆಲವರು ಪರೀಕ್ಷೆಗೋಸ್ಕರ ಒಂದು ಹಿಡಿಯ ಸೂಜಿಗಳಂ ತಂದು ನಾಮದೇವನ ಕೈಯಲ್ಲಿದ್ದ ಕಲ್ಲುಗಳಿಗೆ ಮುಟ್ಟಿಸಿದರು. ಆ ಸೂಜಿಗಳೆಲ್ಲವೂ ಚಿನ್ನವಾದುದರಿಂದ ಎಲ್ಲರೂ ನೋಡಿ ಆಶ್ಚರ್ಯಗೊಂಡರು. "ನಾಮದೇವನ ಹಸ್ತಸ್ಪರ್ಶದಿಂದ ಕಲ್ಲುಗಳೆಲ್ಲವೂ ಪರುಸಗಳೇ ಆದುವು. ಇಂದು ಸುದಿನವು" ಎಂದು ಭಾಗವತರೆಲ್ಲರೂ ಬಹು ಸಂತೋಷಗೊಂಡು ಆಗ ಜಯಜಯಧ್ವನಿಯಂ ಮಾಡಿದರು. ಕುಟಿಲರಾದ ನಿಂದಕರು ಮುಖವಂ ತಗ್ಗಿಸಿಕೊಂಡರು. ಪರುಸಭಾಗವತನು ಈ ಚಮತ್ಕಾರವಂ ನೋಡಿ ಮನದಲ್ಲಿ ಅನುತಾಪಗೊಂಡು ನಾಮದೇವನನ್ನು ಕುರಿತು-ಎಲೆ ಮಹನೀಯನೇ! ನಿನ್ನಂತಹ ಭಾಗ್ಯಶಾಲಿಯಾದ ಭಾಗವತಶಿರೋಮಣಿಯು ಭೂಮಂಡಲದಲ್ಲಿ ಎಲ್ಲಿಯೂ

ಇಲ್ಲ. ನಾನು ಶ್ರೀರುಕ್ಮಿಣಿಯಂ ಭಜಿಸಿ ಬಂದು ಪರುಸವನ್ನು ಪಡೆದೆನು. ನಿನ್ನ ಘನವಾದ ಮೈಮೆಯನ್ನು ತಿಳಿಯದೆ ಈ ಪರುಸಕ್ಕೋಸ್ಕರ ಪ್ರಾಣವನ್ನು ಬಿಡುತಿದ್ದೆ. ನಿನ್ನ ಪಾದವು ಎಲ್ಲಿ ಸೋಂಕುವುದೋ-ಅಲ್ಲಿ ಸಕಲೈಶ್ವರ್ಯವೂ ಸಿದ್ಧಿಸುವುದು. ಇನ್ನು ನನಗೆ ಪರುಸದ ಅಪೇಕ್ಷೆಯಿಲ್ಲ. ನಿನ್ನ ಅನುಗ್ರಹವಂ ಅಪೇಕ್ಷಿಸುವೆನು_ಎನಲು, ನಾಮದೇವನು ತಾನು ನೀರಿನಿಂದ ತಂದಿದ್ದ ಪರುಸಗಳೆಲ್ಲವನ್ನೂ ನದಿಯಲ್ಲಿಯೇ ಹಾಕಿ ಬಿಟ್ಟನು. ಪರುಸಭಾಗವತನು ಶರಣಾಗತನಾಗಿ ನಾಮದೇವನಿಂದ ಜ್ಞಾನೋಪದೇಶವಂ ಪಡೆದು ದಿವ್ಯಜ್ಞಾನಿಯೆನಿಸಿದನು.

ಮುಂದಣ ಚರಿತ್ರೆಯು ಅತಿರಸಭರಿತವಾಗಿರುವುದು. ಕರ್ಣಕ್ಕೆ ಆಪ್ಯಾಯನವಾಗಿರುವುದು. ಈ ಭಕ್ತವಿಜಯವೆಂಬ ಸುಧೆಯಂ ಯಾರು ಸೇವಿಸುವರೋ ಅವರು ಭವರೋಗದಿಂದ ಬಾಧಿಸಲ್ಪಡರು. ಭಕ್ತವಿಜಯವೆಂಬ ಪೂರ್ಣಚಂದ್ರೋದಯದಿಂದ ಸುಜ್ಞರೆಂಬ ಚಕೋರಂಗಳ ಮನಸ್ಸಿಗೆ ಪರಮೋಲ್ಲಾಸವುಂಟಾಗುವುದು. ಅಭಕ್ತ ನಿಂದಕ ತಸ್ಕರರು ಇದರ ಪ್ರಕಾಶವಂ ಸಹಿಸದೆ ದ್ವೇಷವಂ ಮಾಡುವರು. ಮನದಲ್ಲಿ ವಿಶ್ವಾಸವಿಲ್ಲ; ಅದಂತಿರಲಿ. ಅದಂ ಬಣ್ಣಿಸಲು, ವಾಗ್ದೇವಿಗೆ ಬೇಸರವುಂಟಾಗುವುದು. ಸತ್ತ್ವಶೀಲರಾದವರು ದಯೆಯಿಟ್ಟು ಅವಧಾನವಂ ಕೊಡಬೇಕು. ಯಾವನು ಭೀಮಾತೀರದಲ್ಲಿ ನಿಂತು ಮೂರುಲೋಕದಲ್ಲಿಯೂ ವ್ಯಾಪಿಸಿರುವನೋ ಆ ಸ್ವಾಮಿಯ ಕೃಪೆಯಿಂದ ಈ ಗ್ರಂಥವಂ ನಿರೂಪಿಸುತ್ತಿರುವೆನು.

ಇಂತು ಶ್ರೀಭಕ್ತವಿಜಯದಲ್ಲಿ ಹದಿನೇಳನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹದಿನೆಂಟನೆಯ ಅಧ್ಯಾಯ.

ಜಗನ್ಮಿತ್ರನ ಚರಿತ್ರೆ.

ಎಲೈ ಶ್ರೋತೃಗಳಿರಾ! ಭಕ್ತವಿಜಯಗ್ರಂಥವೇ ದೇವಸ್ಥಾನವು. ಇದರ ರಮಣೀಯತೆಯಂ ನೋಡಿ ಪಾಂಡುರಂಗನು ಬಂದು ಇಲ್ಲಿಯೇ ನೆಲಸಿ ನಿಂತಿರುವನು. ಉತ್ತಮವಾದ ಸಾತ್ವಿಕಗುಣವೆಂಬ ಬೃಂದಾವನವು ಇಲ್ಲಿ ಶೋಭಿಸುತ್ತಿರುವುದು. ಸದ್ಭಾವನೆಯೆಂಬ ಪತಾಕೆಯಂ ನಿಲಿಸಲು, ಈ ದೇವಸ್ಥಾನವು ಅತ್ಯಂತಪ್ರಕಾಶವಂ

ಪೊಂದುವುದು. ಅತಿಪಾವನವಾದ ಈ ದೇವಾಲಯಮಂ ಕಂಡು ಭಾವುಕರು ಬಹು ಸಂತೋಷಮಂ ತಾಳುವರು. ಮುಂದಣ ಕಥೆಯಂ ನುಡಿವೆನು ಆದರದಿಂದ ಆಲಿಸಿ:—

"ವರಳಿ ವೈಜನಾಥ" ಎಂಬ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ಸಕುಟುಂಬನಾಗಿದ್ದನು. ಜಗನ್ಮಿತ್ರನೆಂದು ಆತನ ಹೆಸರು. ಆತನು ಪರಮಭಾವುಕನು. ಗ್ರಾಮದಲ್ಲಿ ಭಿಕ್ಷಾಟನವಂ ಮಾಡಿ ಸ್ವಲ್ಪಧಾನ್ಯವಂ ದೊರೆಯಿಸಿಕೊಂಡು ಬಂದು ಕುಟುಂಬಭರಣನಂ ಮಾಡುತಿದ್ದನು. ಆಶಾಪಾಶಕ್ಕೆ ಸಿಕ್ಕನು. ಸಂಸಾರದಲ್ಲಿ ಉದಾಸೀನವೃತ್ತಿಯುಳ್ಳವನು. ರಾತ್ರಿಕಾಲದಲ್ಲಿ ತಪ್ಪದೆ ಹರಿಕೀರ್ತನವಂ ಮಾಡುತಿದ್ದನು. ಗ್ರಾಮದವರೆಲ್ಲರೂ ಬಂದು ಆದರದಿಂದ ಕೀರ್ತನವಂ ಕೇಳುತಿದ್ದರು. ಆತನ ವೈರಾಗ್ಯಸಂಪತ್ತಿಯಂ ಕಂಡು ಆತನಲ್ಲಿ ಪ್ರೀತಿಯಂ ಮಾಡುತಿದ್ದರು. "ಈತನು ಅವತಾರಪುರುಷನು; ಸಂಸಾರದಲ್ಲಿ ಇದ್ದರೂ ವಿರಕ್ತನಾಗಿರುವನು" ಎಂದು ಅಭಿನಂದಿಸುತಿದ್ದರು. ಆತನ ಸತ್ಕೀರ್ತಿಯು ದಿನದಿನಕ್ಕೂ ಬೆಳೆಯಿತು. ಅದಂ ಕೇಳಿ ನಿಂದಕರು ಸಂತಪಿಸುತಿದ್ದರು. ಇದು-ಖದ್ಯೋತವು ಸೂರ್ಯನ ಪ್ರಕಾಶವಂ ಕಂಡು ಸಂತಪಿಸುವಂತಾಯಿತು. ಗಂಗೆಯ ರಭಸವಂ ನೋಡಿ ಪಲ್ವಲವು ಪರಿತಪಿಸುವಂತಾಯ್ತು. ತುಳಸಿಗುಂಟಾಗುವ ಪೂಜೆಯಂ ಕಂಡು ಭಂಗಿಯ ಗಿಡವು ಸಂಕಟಗೊಳ್ಳುವಂತಾಯಿತು. ಕಲ್ಪವೃಕ್ಷದ ಮಹಿಮೆಯಂ ಕೇಳಿ ಈಚಲಮರವು ತಲ್ಲಣಿಸುವಂತಾಯಿತು. ಆ ನಿಂದಕರು ಆವುದಾದರೂ ಒಂದು ರೀತಿಯಿಂದ ಜಗನ್ಮಿತ್ರನಿಗೆ ಅಪಮಾನವನ್ನುಂಟುಮಾಡಬೇಕೆಂದು ಉಪಾಯವಂ ಆಲೋಚಿಸುತ್ತ ಪಲವುಬಗೆಯಿಂದ ಆತನನ್ನು ದೂಷಿಸುತಿದ್ದರು. ಆ ದೂಷಕರ ದೂಷಣೆಗಳಂ ಕೇಳಿದ ಜಗನ್ಮಿತ್ರನ ಮನಸ್ಸಿನಲ್ಲಿ ಸ್ವಲ್ಪವೂ ವಿಕಲ್ಪವುಂಟಾಗಲಿಲ್ಲ.

ಒಂದುದಿನ ರಾತ್ರಿ ಜಗನ್ಮಿತ್ರನು ಕೀರ್ತನವಾದನಂತರ ನಿದ್ರೆಗೈಯುತ್ತಿರಲು, ಒಬ್ಬ ದುರುಳನು ಆತನ ಕುಟೀರಕ್ಕೆ ಬೆಂಕಿಯಂ ಹತ್ತಿಸಿದನು. ಜಗನ್ಮಿತ್ರನು ಎಚ್ಚರಗೊಂಡು ಕುಟೀರಕ್ಕೆ ಬೆಂಕಿ ಬಿದ್ದಿರುವುದಂ ಕಂಡು ಮಡದಿಮಕ್ಕಳು ಅಲ್ಲಿಯೇ ನಿದ್ರೆಮಾಡುತ್ತಿರಲು, ಸಂಭ್ರಾಂತನಾಗಿ ಕರುಣಾನಿಧಿಯಾದ ಪಂಢರೀನಾಥನನ್ನು ಸ್ಮರಿಸಿ—ದೀನಬಂಧುವೇ! ಆಪದ್ಧ್ವಂಸಕನೇ! ರುಕ್ಮಿಣೀಕಾಂತನೇ! ಈ ಸಮಯದಲ್ಲಿ ನೀನಲ್ಲದೆ ರಕ್ಷಿಸುವರಿನ್ನಾರೂ ಇಲ್ಲ. ಮಡದಿಮಕ್ಕಳು ಮಲಗಿ ನಿದ್ರೆ ಮಾಡುತ್ತಿರುವರು. ಕುಟೀರಕ್ಕೆ ಬೆಂಕಿ ಬಿದ್ದಿದೆ. ಸಕುಟುಂಬನಾದ ನನ್ನನ್ನು ಈ ವಿಪತ್ತಿಯಿಂದ ನೀನು ಸಲಹಬೇಕು-ಎಂದು ಅನನ್ಯಭಾವದಿಂದ ಸ್ವಾಮಿಯನ್ನು ಮರೆಪೊಕ್ಕು ಪ್ರಾರ್ಥಿಸುತ್ತ ಅಲ್ಲಿಯೇ ಭಜನೆಮಾಡುತ್ತಿದ್ದನು.

ಭಕ್ತಾಧೀನನಾದ ಚಕ್ರಪಾಣಿಯು ಜಗನ್ಮಿತ್ರನಿಗೆ ಒದವಿದ ಸಂಕಟವನ್ನು ತಿಳಿದು ತ್ವರೆಯಿಂದ ಸಂನಿಹಿತನಾಗಿ ಸುದರ್ಶನವಂ ಮೇಲೆ ಹಿಡಿದು ಅಗ್ನಿಬಾಧೆಯಂ ಪರಿಹರಿಸಿದನು.

ಆಗ ಅಗ್ನಿಯು ಹೊರಗೆ ಪ್ರದೀಪ್ತವಾಯಿತು. ಕೆಲವರು ದೂರದಿಂದಲೇ ನೋಡಿ ಸುಮ್ಮನಾದರು. ಸಾಧುಗಳಾದ ಕೆಲವರು ಸಮೀಪಕ್ಕೆ ಬಂದು ನೋಡಿ-ಅಯ್ಯೋ! ಯಾವ ದುರಾತ್ಮರೋ ಭಾಗವತನಾದ ಜಗನ್ಮಿತ್ರನ ಕುಟೀರಕ್ಕೆ ಬೆಂಕಿಯಂ ಹಾಕಿದರಲ್ಲಾ! ಕುಟಿಯು ಹತ್ತಿಕೊಂಡು ಉರಿಯುತ್ತಿರುವುದು. ದಯಾಳುವಾದ ಪಂಢರೀಶನು ತಿಳಿದು ಸಂರಕ್ಷಿಸಲಿಲ್ಲವಲ್ಲಾ! ಎಂದು ಸಂಕಟಗೊಂಡು ಸಂತಪಿಸುತಿದ್ದರು.

ಅಗ್ನಿಯು ಶಾಂತನಾದನು. ಅಷ್ಟುಹೊತ್ತಿಗೆ ಸೂರ್ಯನೂ ಉದಯಿಸಿದನು. “ಜಗನ್ಮಿತ್ರನು ಸಕುಟುಂಬನಾಗಿ ಸುಟ್ಟುಹೋದನು” ಎಂಬಸುದ್ದಿಯು ಹರಡಿತು. ಬೆಳಗಾಗುವುದೂ ಊರಿನವರೆಲ್ಲರೂ ನೋಡುವುದಕ್ಕೆ ಬಂದರು. ಆಗ ಆತನ ಕುಟೀರವು ಮೇಲಿಂದ ಮೇಲೆಯೇ ಸುಟ್ಟು ಆರಿದ್ದಿತು. ಬೂದಿಯೂ ಮಸಿಯೂ ಏನೂ ಒಳಗೆ ಬೀಳಲಿಲ್ಲ. ಒಳಗೆ ಜಗನ್ಮಿತ್ರನು ಕುಟುಂಬಸಹಿತನಾಗಿ ಭಗವದ್ಭಜನೆಯಂ ಮಾಡುತಿದ್ದನು. ಅದಂ ಕಂಡು ಸಮಸ್ತರೂ ಆಶ್ಚರ್ಯಗೊಂಡರು. ಶ್ರೀಕೃಷ್ಣನು ಲಾಕ್ಷಾಗೃಹದ ಕಿಚ್ಚಿನ ದೆಸೆಯಿಂದ ಪಾಂಡವರನ್ನೂ, ಕಾಡುಗಿಚ್ಚಿನ ದೆಸೆಯಿಂದ ಗೋವುಗಳನ್ನೂ ಸಲಹಿದಂತೆ, ಪರಮ ಕರುಣಾನಿಧಿಯಾದ ಶ್ರೀವಿಟ್ಠಲನು ಇಂದು ಅಗ್ನಿಬಾಧೆಯಿಂದ ಈ ಜಗನ್ಮಿತ್ರನನ್ನು ಸಲಹಿದನು-ಎಂದು ಸಂತೋಷಿಸಿ, ಜಗನ್ಮಿತ್ರನು ಈಶ್ವರಾವತಾರವೆಂದು ಬಗೆದು, “ಈತನಿಗೆ ಏನಾದರೂ ಮಾನ್ಯವಂ ಬರೆದುಕೊಡಬೇಕು. ಇದರಿಂದ ಈತನು ಗೃಹಕೃತ್ಯದಲ್ಲಿ ಅನಾಕುಲನಾಗಿರಬಹುದು. ನಮಗೂ ಧರ್ಮವು ಬರುವುದು. ಶ್ರೀಹರಿಪ್ರೀತಿಯಾಗುವುದು. ನಾವು ಧನ್ಯರಾಗುವೆವು” ಎಂದು ಗ್ರಾಮವಾಸಿಗಳಾದ ಕೆಲವರು ಭಾವುಕರು ಆಲೋಚಿಸಿ, ಈ ಸಂಗತಿಯಂ ಜಗನ್ಮಿತ್ರನಿಗೆ ತಿಳಿಯಿಸಿದರು. ಅದಕ್ಕೆ ಆತನು-ಊರಲ್ಲಿ ಭಿಕ್ಷಾಟನೆಯಂ ಮಾಡುವೆನು. ಇದರಿಂದ ನನ್ನ ಕುಟುಂಬಭರಣವಾಗುತ್ತಿದೆ. ನೀವು ಕೊಡುವ ಭೂದಾನವು ನನಗೆ ಅನಾವಶ್ಯಕವು. ಚಾತಕಕ್ಕೆ ಬಾಯಾರುವುದೂ, ತತ್ಕಾಲಕ್ಕೆ ಮೇಘವು ಒದವಿ ನೀರಂ ಕರೆಯುವಂತೆ ಹೃಷೀಕೇಶನು ತನ್ನ ಭಕ್ತರ ಸಂಕಟವಂ ತಿಳಿದು ಒಡನೆಯೇ ಅನ್ನವಸ್ತ್ರವಂ ಕೊಟ್ಟು ಸಲಹುವನು. ಆತನು ವಿಶ್ವಕುಟುಂಬಿಯು. ಜಗಜ್ಜೀವನನು, ಆತನ ಚರಣಾಶ್ರಯವಿರುವಾಗ ನಿಮ್ಮ ಭೂದಾನವು ನನಗೆ ಏಕೆ ಬೇಕು? ನೀರಲ್ಲಿ ನಿಲಲು ಅವಲಂಬನವಿರುವಾಗ ಈಜುಬಲ್ಲವನಂ ಏಕೆ ಆಶ್ರಯಿಸಬೇಕು? ಗಂಗೆಯು ಸಮೀಪದಲ್ಲಿರಲು ಬಾವಿಯಂ ಏಕೆ ತೋಡಿಸಬೇಕು? ಅಂತು ಪವಿತ್ರವಾದ ಭಿಕ್ಷೆಯಂ ಬಿಟ್ಟು ಬಂಧಕವಾದ ನಿಮ್ಮ ಕ್ಷೇತ್ರವನ್ನೇಕೆ ಪಡೆಯಬೇಕು? ಎಂದು ಉತ್ತರವಂ ಕೊಟ್ಟನು. ಅದಕ್ಕೆ ಅವರು-ನಿಮ್ಮ ಹೆಸರಿಗೆ ಮಾನ್ಯವಂ ಬರೆದುಕೊಡುತ್ತೇವೆ. ಅದಂ ಯಾರಾದರೂ ನಿರ್ವಹಿಸುವರು. ಆದರಲ್ಲಿ ಆದ ಫಲವಂ ಧರ್ಮಕಾರ್ಯಗಳಿಗೆ ಉಪಯೋಗಿಸಬಹುದು-ಎಂದು ಬಲಾತ್ಕರಿಸಿ, ಆತನ ಹೆಸರಿಗೆ ಕೆಲವು

ಭೂಮಿಯಂ ಮಾನ್ಯವಾಗಿ ಬರೆದು ಕೊಟ್ಟರು. ಮತ್ತು ತಾವೇ ವ್ಯವಸಾಯವಂ ಮಾಡುತ್ತ, ಬಂದ ಧಾನ್ಯವಂ ಧರ್ಮಕಾರ್ಯದಲ್ಲಿಯೇ ವ್ಯಯಗೊಳಿಸುತ್ತಿದ್ದರು. ಇಂತು ಬಹುದಿನಗಳು ಕಳೆದುವು.

ಬಳಿಕ ಆ ಗ್ರಾಮಕ್ಕೆ ಕ್ಷೇತ್ರವಿಚಾರಕನು ಹೊಸಬನು ಬಂದನು. ಆತನು ವಿಚಾರಮಾಡಿ ಅಸಹನೆಯಿಂದ ಜಗನ್ಮಿತ್ರನ ಮಾನ್ಯಭೂಮಿಯನ್ನು ಅರಮನೆಗೆ ಸೇರಿಸಲು ಪ್ರಯತ್ನಪಟ್ಟನು. ಜನರು-ನಾವೆಲ್ಲರೂ ಸೇರಿ ಕೊಟ್ಟಿರುವ ಮಾನ್ಯಭೂಮಿಯನ್ನು ನೀನು ಅರಮನೆಗೆ ಏಕೆ ಸೇರಿಸುವೆ? ಧರ್ಮಕಾರ್ಯಕ್ಕೆ ಅಡ್ಡಿಬರಬಾರದು-ಎಂದು ಹಲವು ಬಗೆಯಿಂದ ಸಮಾಧಾನವನ್ನು ಹೇಳಿದರೂ ಪಾಪಿಯಾದ ಆ ಯವನನು ಒಪ್ಪಿಕೊಳ್ಳಲಿಲ್ಲ. ದುರಭಿಮಾನದಿಂದ ಜಗನ್ಮಿತ್ರನಿದ್ದ ಎಡೆಗೆ ಹೋಗಿ ಆತನನ್ನು ಮನಸಾರೆ ನಿಂದಿಸಿ—ಜಗನ್ಮಿತ್ರನೆಂಬ ಹೆಸರು ನಿನಗೆ ಅದೆಂತು ಸಲ್ಲುವುದು? ನಮ್ಮ ಮನೆಯಲ್ಲಿ ದೇವತಾಪ್ರತಿಷ್ಠೆಗೆ ವ್ಯಾಘ್ರವೊಂದು ಬೇಕು. ಇಂದು ಸಾಯಂಕಾಲದೊಳಗಾಗಿ ನೀನು ಅದಂ ತಂದುಕೊಟ್ಟರೆ ನೀನು ಜಗನ್ಮಿತ್ರನೇ ಸರಿ. ಅದು ನಿನ್ನಿಂದ ಆಗದೆ ಇದ್ದರೆ ಇದುವರೆಗೆ ನೀನು ತಿಂದಿರುವುದೆಲ್ಲವನ್ನೂ ಕಕ್ಕಿಸುವೆನು—ಎಂದು ಗರ್ಜಿಸಿದನು.

ಅದಕ್ಕೆ ಜಗನ್ಮಿತ್ರನು ವ್ಯಾಘ್ರವಂ ತಂದುಕೊಡುವೆನು—ಎಂದು ಅಂಗೀಕಾರಗೊಂಡು ಅರಣ್ಯವಂ ಸೇರಿ ರುಕ್ಮಿಣೀಪತಿಯಂ ಹೃದಯದಲ್ಲಿ ಧ್ಯಾನಿಸಿ—ಅನಾಥಬಂಧುವೇ! ಕರುಣಾಕರನೇ! ಭಕ್ತವತ್ಸಲನೇ! ಪತಿತಪಾವನನೇ! ವಿಶ್ವಂಭರನೇ! ದೀನೋದ್ಧಾರನೇ! ರಾಮಚಂದ್ರನೇ! ಪಂಢರೀಶನೇ! ರುಕ್ಮಿಣೀಕಾಂತನೇ! ವಿಶ್ವಪಾಲಕನೇ! ಸರ್ವಚೈತನ್ಯಸ್ವರೂಪನೇ! ನೀನು ಪ್ರಸನ್ನನಾಗು—ಎಂದು ಬಹುವಿಧವಾಗಿ ಸ್ತುತಿಯಿಸಿ—ಕ್ಷೇತ್ರವಿಚಾರಕನು ವ್ಯಾಘ್ರವನ್ನು ಅಪೇಕ್ಷಿಸಿರುವನು; ಅವನ ಮನೆಯಲ್ಲಿ ದೇವತಾಪ್ರತಿಷ್ಠೆಗೆ ಬೇಕಾಗಿದೆ. ನೀನು ದಯೆಮಾಡಿ ಈ ಕಾರ್ಯವಂ ಪೂರಣ ಮಾಡಬೇಕು. ಇಲ್ಲದಿದ್ದರೆ ಈ ದೇಹವಂ ನಿನ್ನ ಪಾದದಲ್ಲಿಯೇ ನಾನು ಸಮರ್ಪಿಸುವೆನು—ಎಂದು ಪ್ರಾರ್ಥಿಸಲು, ದೇವಾದಿದೇವನು ವ್ಯಾಘ್ರರೂಪವಂ ತಾಳಿ ಪ್ರಸನ್ನನಾಗಿ ಇದಿರಿಗೆ ಬಂದು ಜಗನ್ಮಿತ್ರನನ್ನು ಕುರಿತು—ನಿನ್ನನ್ನು ಯಾವನು ಉಪದ್ರವಗೊಳಿಸುತ್ತಿರುವನು? ಅವನನ್ನು ನನಗೆ ತೋರಿಸು. ನಾನು ಅವನನ್ನು ಧ್ವಂಸಮಾಡುವೆನು—ಎನಲು, ಜಗನ್ಮಿತ್ರನು, ಸ್ವಾಮಿಯು ವ್ಯಾಘ್ರರೂಪದಿಂದ ಬಂದಿರುವನೆಂದು ತಿಳಿದು-ಸ್ವಾಮಿಯೇ! ಕ್ಷೇತ್ರವಿಚಾರಕನು ನನ್ನ ಮಿತ್ರನು. ದೇವತಾಪ್ರತಿಷ್ಠೆಗೋಸ್ಕರ ವ್ಯಾಘ್ರವಂ ಅಪೇಕ್ಷಿಸಿರುವನು. ಶಾಂತಿಯಂ ತಾಳಿ ಬರಬೇಕು—ಎಂದು ಬಿನ್ನವಿಸಿದನು. ಚಕ್ರಪಾಣಿಯು ಅದಂ ಕೇಳಿ-ನನ್ನಂ ಹಿಡಿದುಕೊಂಡು ಮುಂದೆ ನಡೆ. ಊರಂ ಸೇರಿ ನಿನಗೆ ಕೌತುಕವಂ ತೋರುವೆನು—ಎನಲು, ಜಗನ್ಮಿತ್ರನು ಅಂಗವಸ್ತ್ರವಂ ಕುತ್ತಿಗೆಗೆ ಹಾಕಿ ಆ ವ್ಯಾಘ್ರವಂ ಹಿಡಿದುಕೊಂಡು ಊರಮುಂದೆ ಬರುತ್ತಿರಲು,

ಆಕಳಂ ಮೇಯಿಸುವವರು ಕಂಡು ಸಂಭ್ರಾಂತರಾಗಿ ಓಡುತ್ತ ಊರೊಳಗೆ ಹೋಗಿ-ಜಗನ್ಮಿತ್ರನು ವ್ಯಾಘ್ರವಂ ಹಿಡಿದುಕೊಂಡು ಬರುತ್ತಿರುವನು—ಎಂದು ಎಲ್ಲಾ ಕಡೆಯಲ್ಲಿಯೂ ತಿಳಿಯಿಸಿದರು. ಅದಂ ಕೇಳಿ ಕೆಲವರು ಆಶ್ಚರ್ಯಗೊಂಡರು. ಕೆಲವರು-ವ್ಯಾಘ್ರವಂ ತರುವುದೆಂತು? ಇದು ಹುಸಿ—ಎಂದರು. ಇನ್ನು ಕೆಲವರು—ಆಶ್ಚರ್ಯವೇನು! ಆತನಿಗೆ ಶ್ರೀಹರಿಯು ಪ್ರಸನ್ನನಾಗಿರುವನು. ಮನೆಗೆ ಅಗ್ನಿಪ್ರವೇಶವಾಗಿರಲು ಸಂರಕ್ಷಿಸಲಿಲ್ಲವೇ?—ಎಂದರು. ಇಂತು ಜನಗಳು ಮಾತನಾಡುತ್ತಿರಲು, ಜಗನ್ಮಿತ್ರನು ವ್ಯಾಘ್ರವಂ ಹಿಡಿದುಕೊಂಡು ಬರುತ್ತಿರುವನೆಂಬುದು ದೃಢವಾಯಿತು. ಎಲ್ಲರೂ ಭಯಪಟ್ಟು ಊರಬಾಗಿಲಂ ಹಾಕಿದರು. ಕೋಟೆಯ ಮೇಲಿಂದ ವ್ಯಾಘ್ರವಂ ಕಂಡು ಕೆಲವರು—ಜಗನ್ಮಿತ್ರನಿಗೆ ಅದೆಂತು ಭಯವಿಲ್ಲ—ಎನಲು, ಅವರಂ ಕುರಿತು ಕೆಲವರು ಅಭಿಜ್ಞರು—ಜಗನ್ಮಿತ್ರನ ನಡೆವಳಿಕೆಯು ನಿಮಗೆ ಇನ್ನೂ ವಿದಿತವಾಗಿಲ್ಲ. ಈತನು ಮಹಾನುಭಾವನು. ನಮಗೆ ಇದು ವ್ಯಾಘ್ರವೆಂದು ತೋರುವುದು. ಶ್ರೀಹರಿಯು ಈ ರೂಪದಿಂದ ಬಂದಿರುವನು. ಜಗನ್ಮಿತ್ರನ ಸಂಕಟವಂ ಪರಿಹರಿಸಲು ಪ್ರಸನ್ನನಾಗಿರುವನು—ಎಂದರು. ಮತ್ತೆ ಕೆಲವರು-ಶ್ರೀಹರಿಯೂ ಅಲ್ಲ. ಏನೂ ಅಲ್ಲ. ಸತ್ಯವಾಗಿಯೂ ವ್ಯಾಘ್ರನೇ—ಎಂದು ತೋರುವುದು. ಕ್ಷೇತ್ರವಿಚಾರಕನನ್ನು ಭಕ್ಷಿಸುವುದಕ್ಕೋಸ್ಕರ ತೆಗೆದುಕೊಂಡುಬಂದಿರುವನು-ಎಂದರು. ಇನ್ನು ಕೆಲವರು—ಅದು ಅಂತಲ್ಲ; ಈ ವ್ಯಾಘ್ರವು ಊರೊಳಗಿರುವ ನಮ್ಮನೆಲ್ಲರನ್ನೂ ಭಕ್ಷಿಸದೆ ಬಿಡದು. ಕ್ಷೇತ್ರವಿಚಾರಕನು ತನ್ನ ಅನ್ಯಾಯದಿಂದ ಊರಿಗೇ ಸಂಕಟವಂ ತಂದಿಟ್ಟನು-ಎನ್ನುತ್ತ ದುರುಳನಾದ ಆ ಕ್ಷೇತ್ರವಿಚಾರಕನನ್ನು ಕರೆಯಿಸಿ-ನೀನು ಜಗನ್ಮಿತ್ರನಿಗೆ ಅವಹೇಳನವಂ ಮಾಡಿ ಊರಿಗೇ ಪ್ರಳಯವನ್ನು ಉಂಟುಮಾಡಿದೆ. ಕಾರ್ತವೀರ್ಯಾರ್ಜುನನು ರೇಣುಕಾದೇವಿಯನ್ನು ಅವಮತಿಗೊಳಿಸಿದುದರಿಂದ ಕ್ಷತ್ರಿಯಕುಲಕ್ಕೇ ಎಂತು ವಿಪತ್ತು ಪ್ರಾಪ್ತವಾಯಿತೋ; ರಾವಣನು ಸೀತಾಪಹಾರವಂ ಮಾಡಿದುದರಿಂದ ರಾಕ್ಷಸಕುಲಕ್ಕೆ ಎಂತು ಧ್ವಂಸವುಂಟಾಯಿತೋ; ದುರ್ಯೋಧನನು ದ್ರೌಪದಿಗೆ ಮಾನಭಂಗವಂ ಮಾಡಿದುದರಿಂದ ತನ್ನ ಕುಲಕ್ಕೇ ಎಂತು ವಿನಾಶವುಂಟಾಯಿತೋ ಅಂತು ಪರಮಭಾಗವತನಾದ ಜಗನ್ಮಿತ್ರನಿಗೆ ನೀನು ಸಂಕಟವನ್ನುಂಟುಮಾಡಿದುದರಿಂದ ನಮ್ಮ ಗ್ರಾಮಕ್ಕೇ ಧ್ವಂಸವುಂಟಾಗುವ ದಶೆ ಬಂದೊದವಿತು—ಎಂದರು. ಅದಂ ಕೇಳಿ ಅವನು ಭಯಪಟ್ಟು ಓಡಿಹೋಗಿ ಮನೆಯಲ್ಲಿ ಸಕುಟುಂಬನಾಗಿ ಅಡಗಿ ಕುಳಿತನು.

ಜಗನ್ಮಿತ್ರನು ವ್ಯಾಘ್ರಸಮೇತನಾಗಿ ಬಂದು ಮುಂದೆ ಊರಬಾಗಿಲು ಹಾಕಿರುವುದನ್ನು ನೋಡಿ ವ್ಯಾಘ್ರವನ್ನು ಕುರಿತು—ಊರೊಳಗೆ ಪ್ರವೇಶಿಸುವ ಬಗೆಯೆಂತು?—ಎನಲು, ವ್ಯಾಘ್ರವು ಬಂದಾವೃತ್ತಿ ಮಹಾರಭಸದಿಂದ ಗರ್ಜಿಸಿತು. ಆಕ್ಷಣವೇ ಊರಬಾಗಿಲು ಭಗ್ನವಾಗಿ ಬಿದ್ದಿತು. ಜಗನ್ಮಿತ್ರನು ವ್ಯಾಘ್ರದೊಡನೆ ಊರೊಳಗೆ ಹೊರಟನು. ಜನಗಳು ದೂರದಿಂದ ನೋಡಿ ದೀರ್ಘಸ್ವರದಿಂದ ರೋದನವಂ ಮಾಡಿ

ದರು. ದುಷ್ಟಸಹವಾಸದಿಂದ ಈಶ್ವರನು ನಮ್ಮ ವಿಷಯದಲ್ಲಿ ಕೋಪಿಸಿಕೊಂಡಿರುವನು—ಎಂದು ತಲ್ಲಣಿಸುತಿದ್ದರು. ಜಗನ್ಮಿತ್ರನು ಹಾಹಾಕಾರವುಳ್ಳ ಜನಗಳನ್ನು ನೋಡಿ—ಎಲೆ ಗ್ರಾಮವಾಸಿಗಳಿರಾ ! ನೀವು ಭಯಪಡಲಾಗದು. ಮನಸ್ಸ್ವಾಸ್ಥ್ಯವಂ ತಾಳಿ ಕೌತುಕವಂ ನೋಡುತ್ತಿರಿ. ಯಾವನು ಇದಕ್ಕೆ ನಿಮಿತ್ತಭೂತನೋ ಅವನೇ ಫಲವಂ ಅನುಭವಿಸುವನು. ನಿಮಗೆ ಚಿಂತೆಯೇಕೆ? ನಿರ್ಭಯರಾಗಿ ಶ್ರೀರುಕ್ಮಿಣೀಕಾಂತನಂ ಭಜಿಸಿ-ಎಂದು ನುಡಿದು ಸಮಾಧಾನಗೊಳಿಸಿದನು.

ಜನಗಳು ಜಗನ್ಮಿತ್ರನ ನುಡಿಯಂ ಕೇಳಿ, ಕ್ಷೇತ್ರವಿಚಾರಕನಿಗೋಸ್ಕರವೇ ವ್ಯಾಘ್ರವಂ ತಂದಿರುವನೆಂದು ಸಂತೋಷಗೊಂಡರು.

ಜಗನ್ಮಿತ್ರನು ವ್ಯಾಘ್ರದೊಡನೆ ಕ್ಷೇತ್ರವಿಚಾರಕನ ಮನೆಯ ಬಳಿಗೆ ಬಂದನು. ಅವನು ದೂರದಿಂದ ಜಗನ್ಮಿತ್ರನನ್ನೂ ವ್ಯಾಘ್ರವನ್ನೂ ಕಂಡು ಗಡಗಡನೆ ನಡುಗುತ್ತ ಬಾಗಿಲನ್ನು ಮುಚ್ಚಿಕೊಂಡು ಹೆಂಡತಿಯನ್ನೂ ಮಕ್ಕಳನ್ನೂ ಬೆನ್ನಹಿಂದೆ ಮರೆಮಾಡಿಕೊಂಡು ತಲ್ಲಣಿಸುತ್ತಿದ್ದನು.

ಜಗನ್ಮಿತ್ರನು-ಕ್ಷೇತ್ರವಿಚಾರಕನನ್ನು ಕುರಿತು-ಅಯ್ಯಾ ! ಬಾಗಿಲಂ ತೆಗೆಯಿರಿ. ವ್ಯಾಘ್ರದೇವರಂ ತಂದಿರುವೆನು. ನೀವು ಮನೆಯೊಳಗೆ ಏಕೆ ಅಡಗಿಕೊಂಡಿರುವಿರಿ? ಸಾಕ್ಷಾದ್ದೈವತವನ್ನು ದೃಷ್ಟಿಯಿಂದ ನೋಡಿ ಭ್ರಾಂತಿಗೊಂಡು ಏಕೆ ಬಾಗಿಲಂ ಹಾಕಿಕೊಂಡಿರಿ? ಮುಂದೆ ಏನಮಾಡಬೇಕೆಂದಿರುವಿರಿ? ನಾನಾತೀರ್ಥಯಾತ್ರೆಗಳಿಂದಲೂ ಅನೇಕವ್ರತೋಪವಾಸಾದಿಗಳಿಂದಲೂ ದೃಗ್ಗೋಚರವಾಗದ ಪರದೈವವು ಇದಿರಿಗೆ ಬರಲು, ನೀವು ಮನೆಯ ಬಾಗಿಲಂ ಮುಚ್ಚಿಕೊಳ್ಳಬಹುದೇ? ಈ ದೈವತವು ಅಷ್ಟಾಂಗಯೋಗಗಳನ್ನು ಸಾಧಿಸಿದರೂ ಪ್ರಾಪ್ತವಾಗಲಾರದು. ಇಂತಹ ಪರವಸ್ತುವನ್ನು ಕಣ್ಣಿಂದ ನೋಡಿ ಏಕೆ ಭ್ರಾಂತಿಗೊಂಡು ಅಡಗಿ ಕುಳಿತಿರುವಿರಿ? ನಾನಾಯಾಗಗಳಿಂದಲೂ ಲಭ್ಯವಾಗದ ಪರದೈವವನ್ನು ಕರೆದುಕೊಂಡು ಬಂದಿರಲು, ನೀವು ಭಯಪಡಬಹುದೇ? ಚಂದ್ರನಿಗಿಂತಲೂ ಶೀತಲವಾಗಿ ಅಮೃತಕಿಂತಲೂ ಸಂಜೀವನವಾಗಿ ಇರುವ ದೈವತವನ್ನು ಕಂಡು ಏಕೆ ಅಂಜುವಿರಿ?—ಎಂದನು.

ಆಗ ವ್ಯಾಘ್ರವು ಗರ್ಜಿಸಿ ಭೂಮಿಯಲ್ಲಿ ರಪ್ಪನೆ ಬಾಲವನ್ನು ಬಡಿಯಿತು. ದುರ್ಜನರ ಹೃದಯವೆಲ್ಲವೂ ಥಟ್ಟನೆ ತಲ್ಲಣಿಸಿತು. ಮತ್ತು ವ್ಯಾಘ್ರವು ಹಾರಾಡುತ್ತ ಭಕ್ಷಿಸಲಿಚ್ಛಿಸುತ್ತಿರಲು, ಜಗನ್ಮಿತ್ರನು ಬಲದಿಂದ ಎಳೆದು ಹಿಡಿಯುತ್ತಿರುವನು. ಭಕ್ತರ ಅಧೀನನಾದ ಭಗವಂತನು ತನ್ನ ದೇವತ್ವವನ್ನು ಅಡಗಿಸಿಕೊಂಡು ವ್ಯಾಘ್ರರೂಪದಿಂದ ಜನಗಳಿಗೆ ಲೀಲೆಯಂ ತೋರಿಸುತ್ತಿರುವನು.

ಆ ಕ್ಷೇತ್ರವಿಚಾರಕನು ಕುಟುಂಬಸಹಿತನಾಗಿ ರೋದನವಂ ಮಾಡುತಿದ್ದನು. ಅವನ ಮಡದಿ ಅವನಂ ಕುರಿತು-ನೀನು ಹೊರಗೆ ಹೋಗು. ಮಕ್ಕಳೂ ನಿನ್ನಿಂದ

ಹುಲಿಯ ಬಾಯಿಗೆ ತುತ್ತಾಗುವುವು. ನಿನ್ನ ಮುಪ್ಪಿನಕಾಲಕ್ಕೆ ಇದೇ ಕೊನೆಯಾಗಿ ಕಾಣುವುದು. ನೀನು ಹೊರಗೆ ಹೋಗಿ ನಮ್ಮನ್ನು ಬದುಕಿಸು-ಎಂದಳು.

ಬಳಿಕ ಅವನು ಎರಡುಕೈಗಳಂ ಮುಗಿದುಕೊಂಡು ಬಾಗಿಲ ಸಮೀಪಕ್ಕೆ ಬಂದು, ದಯಾಳುವೆ! ನನ್ನಲ್ಲಿ ದಯೆಯಂ ಮಾಡು. ಸಕುಟುಂಬನಾದ ನನ್ನನ್ನು ಬದುಕಿಸು. ನನ್ನ ದುರ್ವೃತ್ತಿಯು ನನಗೆ ಈಗಲೇ ಫಲಿಸಿತು. ಜನದಲ್ಲಿ ಅಪಕೀರ್ತಿಗೊಳಗಾದೆನು. ನನ್ನ ಅಪರಾಧವನ್ನು ಸೈರಿಸು. ನೀನು ಜಗನ್ಮಿತ್ರನೆಂಬುದು ಯಥಾರ್ಥವೇ ಸರಿ. ನನಗೆ ಜೀವದಾನವಂ ಮಾಡಬೇಕು-ಎಂದು ಅತಿದೈನ್ಯದಿಂದ ನಾನಾವಿಧವಾಗಿ ಬೇಡಿಕೊಂಡನು.

ಜಗನ್ಮಿತ್ರನು ಕ್ಷೇತ್ರವಿಚಾರಕನ ದೀನೋಕ್ತಿಯಂ ಕೇಳಿ ದಯೆಗೊಂಡು ವ್ಯಾಘ್ರವನ್ನು ಹಿಂದಿರುಗಿಸಿ ಅರಣ್ಯಕ್ಕೆ ತೆಗೆದುಕೊಂಡು ನಡೆದನು. ಸಂಭ್ರಾಂತರಾದ ಜನಗಳೆಲ್ಲರೂ ಸಂತೋಷಗೊಂಡು ಜಗನ್ಮಿತ್ರನನ್ನು ಅಭಿನಂದಿಸಿದರು.

ಬಳಿಕ ಅರಣ್ಯದಲ್ಲಿ ಜಗನ್ನಾಥನು ವ್ಯಾಘ್ರರೂಪವಂ ತೊರೆದು ಶಂಖಚಕ್ರಧರನೂ ಚತುರ್ಭುಜಾಲಂಕೃತನೂ ಆಗಿ ಸ್ವರೂಪದಿಂ ಜಗನ್ಮಿತ್ರನಿಗೆ ಸಂದರ್ಶನವನಿತ್ತು ಸಂತೋಷವನ್ನುಂಟುಮಾಡಿದನು.

ಮುಂದಣ ಅಧ್ಯಾಯದಲ್ಲಿ ಕಥಾರಸವು ಅತಿಶಯಿತವಾಗಿರುವುದು. ಶ್ರೋತೃಗಳು ಶ್ರವಣದಲ್ಲಿ ಏಕಾಗ್ರಚಿತ್ತರಾಗಬೇಕು. ಭೀಮಾತೀರವಾಸಿಯಾದ ಪರಮಪುರುಷನು ಸುಪ್ರೀತನಾಗುವನು. ಆ ಸ್ವಾಮಿಯೇ ಈ ಗ್ರಂಥವಂ ನುಡಿಯಿಸುತ್ತಿರುವನು. ಮಹೀಪತಿಯು ಅನನ್ಯಭಾವದಿಂದ ಆ ಸ್ವಾಮಿಯ ಚರಣಗಳನ್ನು ಆಶ್ರಯಿಸಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಹದಿನೆಂಟನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಹತ್ತೊಂಬತ್ತನೆಯ ಅಧ್ಯಾಯ.

ಯೋಗಪರಮಾನಂದನ ಚರಿತ್ರೆ.

ಭಗವದ್ಭಕ್ತರ ಸುರಸವಾದ ಕಥೆಗಳಂ ಕೇಳಲು, ಸಮಸ್ತಶ್ರೇಯೋಭ್ಯುದಯಗಳೂ ಅನಾಯಾಸದಿಂದ ಒದವುವುವು. ಜಗನ್ನಿವಾಸನು ಶ್ರೋತೃಗಳ ವಿಷಯದಲ್ಲಿ ಸುಪ್ರೀತನಾಗುವನು. ಶಾಂತಿಯೂ ಕ್ಷಮೆಯೂ ಸಮನಿಸುವುವು. ಕಾಮಕ್ರೋಧಾದಿಗಳು ದೇಹವಂ ಬಿಟ್ಟು ಓಡುವುವು. ದುರಿತಗಳೆಲ್ಲವೂ ದಹಿಸಿಹೋಗುವುವು. ಸಾತ್ವಿಕ

ವೈರಾಗ್ಯವು ಅಪ್ರಯತ್ನದಿಂದ ಉಂಟಾಗುವುದು. ಪುರುಷೋತ್ತಮನು ಪ್ರಸನ್ನನಾಗಿ ತನ್ನ ಭಜನೆಯಲ್ಲಿ ಪ್ರೀತಿಯಂ ಹೆಚ್ಚಿಸಿ ಭವಭ್ರಮವನ್ನು ಪರಿಹರಿಸುವನು. ಭಕ್ತಚರಿತ್ರಮಹಿಮೆಯು ಅಸಾಧಾರಣವಾದುದೆಂದು ಪರಮೇಶ್ವರನು ಪಾರ್ವತಿಗೆ ನಿರೂಪಿಸಿರುವನು. ಆದುದರಿಂದ ಆಸ್ತಿಕರಾದ ಶ್ರೋತೃಗಳು ಅವಧಾನವಂ ಕೊಡಬೇಕು.

'ವಾರಸಿ' ಎಂಬ ಪಂಡರಪುರಸಮೀಪಗ್ರಾಮದಲ್ಲಿ ಯೋಗಪರಮಾನಂದನೆಂಬ ಒಬ್ಬ ಬ್ರಾಹ್ಮಣನು ಇರುತಿದ್ದನು. ಆತನು ವಿಷಯಗಳಲ್ಲಿ ವಿರಕ್ತನಾಗಿ ಮಹಾವೈರಾಗ್ಯಶಾಲಿಯೆನಿಸಿಕೊಂಡಿದ್ದನು. ಶ್ರೀರಾಮ ಕೃಷ್ಣ ನಾರಾಯಣ–ಎಂದು ಭಗವನ್ನಾಮವಂ ಸರ್ವಕಾಲದಲ್ಲಿಯೂ ಉಚ್ಚರಿಸುತ್ತ ಊರಲ್ಲಿ ಭಿಕ್ಷಾಟನವಂ ಮಾಡುತ್ತ ಕುಟುಂಬವಂ ಪೋಷಿಸುತಿದ್ದನು. ನಿತ್ಯದಲ್ಲಿಯೂ ತೃಪ್ತನಾಗಿ ಮನಸ್ಸಮಾಧಾನವುಳ್ಳವನಾಗಿ ಇದ್ದನು. ಮಾನಾಪಮಾನಂಗಳನ್ನು ಎಣಿಸನು. ಆಶಾಬಂಧನಕ್ಕೆ ಎಂದಿಗೂ ಸಿಕ್ಕನು. ಅನನ್ಯಭಾವದಿಂದ ಶ್ರೀಹರಿಯ ಭಜನೆಯಂ ಮಾಡುತಿದ್ದನು. ಸ್ನಾನಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು ಬಹುಭಕ್ತಿಯುಕ್ತನಾಗಿ ಷೋಡಶೋಪಚಾರಗಳಿಂದ ಪೂಜೆಯನ್ನೆಸಗಿ ಕಾಯಕ್ಲೇಶವನ್ನೆಣಿಸದೆ ನಿಯಮದಿಂದ ಅನೇಕಪ್ರದಕ್ಷಿಣನಮಸ್ಕಾರಂಗಳಂ ಮಾಡಿ ಪಾಂಡುರಂಗನನ್ನು ಸೇವಿಸುತಿದ್ದನು. ಒಂದುದಿನವೂ ತಪ್ಪದೆ ಭಗವದ್ಗೀತೆಯಂ ಪಠಿಸುತಿದ್ದನು. ಅತಿಥಿಸತ್ಕಾರವಂಗೈದು ಬಳಿಕ ತಾನು ಭೋಜನವಂ ಮಾಡುತಿದ್ದನು.

ತಮ್ಮ ತಮ್ಮ ಕುಲಾಚಾರಕ್ಕೆ ತಕ್ಕ ನಿತ್ಯಕರ್ಮಂಗಳಂ ನೆರವೇರಿಸದೆ ಭಗವದಾರಾಧನೆಯುಂ ಮಾಡದೆ ಉದರಭರಣವೇ ಮುಖ್ಯವೆಂದು ಬಗೆದು ನಿಯಮಹೀನರಾಗಿ ಯಾರು ಅನ್ನವಂ ತಿನ್ನುವರೋ ಅವರು ಮನುಷ್ಯರಲ್ಲಿ ಸೂಕರಸಮಾನರೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟದೆ. ಪಶುಪಕ್ಷಿಗಳ ಯೋನಿಯಲ್ಲಿ ಹುಟ್ಟಿದಾಗ ಪಾಪಪುಣ್ಯಗಳು ಸಂಘಟಿಸುವುದಿಲ್ಲ. ಕ್ರಿಮಿಕೀಟಾದಿಗಳಿಗೆ ಧರ್ಮಾಚರಣೆಯಿಲ್ಲ. ಪುಣ್ಯವಿಶೇಷದಿಂದ ಆಕಸ್ಮಿಕವಾಗಿ ಈ ನರದೇಹವು ಪ್ರಾಪ್ತವಾಗಿರಲು, ಎಂತಾದರೂ ಇದರ ಸಾರ್ಥಕತೆಯಂ ಮಾಡಿಕೊಳ್ಳಬೇಕು. ಸತ್ಸಂಗವಿಂದಲ್ಲದೆ ಜ್ಞಾನವುಂಟಾಗುವುದಿಲ್ಲ. ಸಂಸಾರದಲ್ಲಿ ವ್ಯಾಪೃತರಾದವರಿಗೆ ವಿಶೇಷನಿಯಮಂಗಳಂ ನಡೆಯಿಸಲು ಅವಕಾಶವಿರುವುದಿಲ್ಲ. ವಿಷಯಬಂಧವಂ ಪರಿಹರಿಸುವುದೊಂದಿರುವುದು. ಅದಾವುದೆಂದರೆ:–ತೀರ್ಥಯಾತ್ರಾತಪೋದಾನವ್ರತಾದಿಗಳಿಗಿಂತಲೂ ಪರಮಸಾಧನವಾದ ಶ್ರೀಹರಿಭಜನೆ. ಅದಂ ತಪ್ಪದೆ ಆಚರಿಸಬೇಕು. ಕಲಿಯುಗದಲ್ಲಿ ಭಗವನ್ನಾಮಕೀರ್ತನೆಗಿಂತಲೂ ಮತ್ತೊಂದು ಮುಖ್ಯವಾದುದಿಲ್ಲ. ಸ್ವರ್ಗದಲ್ಲಿ ದೇವತೆಗಳಿಗೆ ಅಮೃತವು ಎಂತು ಸುಲಭವೋ ಅಂತು ಭೂಲೋಕದಲ್ಲಿ ಭಗವನ್ನಾಮವು ಜನಗಳಿಗೆ ಸುಲಭವಾದುದು. ಸಂಸಾರವ್ಯಾಪಾರದಲ್ಲಿ ವ್ಯಾಪೃತನಾಗಿದ್ದರೂ ಯಾವನು–ನಿತ್ಯದಲ್ಲಿಯೂ ಭಗವನ್ನಾಮಕೀರ್ತನವಂ ಮಾಡುತಿರುವನೋ ಆತನು ಧನ್ಯನು. ಆತನ ಸಮೀಪದಲ್ಲಿ ಭಗವಂತನು ಪ್ರೀತಿ

ಯಿಂದ ನೆಲಸಿರುವನು. ಬಹುವಿಧವಾದ ಚತುರೋಕ್ತಿಗಳಿಂದೇನು ? ಭಗವನ್ನಾಮದ ಮಹಿಮೆಯು ಅನುಭವದಿಂದಲೇ ತಿಳಿಯತಕ್ಕದು.

ಇಂತಹ ಭಗವನ್ನಾಮಸಂಕೀರ್ತನದಲ್ಲಿ ನಿರತನಾಗಿ ಯೋಗಪರಮಾನಂದನು ಪಾಂಡುರಂಗನನ್ನು ನಿಷ್ಠೆಯಿಂದ ಸೇವಿಸುತಿದ್ದನು. ಒಂದುದಿನ ಒಬ್ಬ ವರ್ತಕನು ಮಹಾದ್ವಾರದ ಬಳಿಯಲ್ಲಿ ಬಂದು ಇಳಿದನು. ಆಗ ಮಳೆಯು ಬರುತ್ತಿದ್ದುದರಿಂದ ನೆಲವೆಲ್ಲವೂ ಕೆಸರಾಗಿದ್ದಿತು. ಯೋಗಪರಮಾನಂದನು ಆದಿನವೂ ಬಿಡದೆ ಪಾಂಡುರಂಗನಂ ಹೃದಯದಲ್ಲಿ ಧ್ಯಾನಿಸುತ್ತ ಪ್ರದಕ್ಷಿಣನಮಸ್ಕಾರಂಗಳಂ ಮಾಡುತ್ತ ಇರಲು, ವರ್ತಕನು ಆತನ ಭಕ್ತಿಭಾವವಂ ನೋಡಿ ಮನದಲ್ಲಿ ಸಂತೋಷಗೊಂಡು ಈತನು ಧನ್ಯನು, ಮಹಾಭಾಗವತನು–ಎಂದು ಬಗೆದು ತನ್ನ ಗಂಟಿನಿಂದ ಅಮೂಲ್ಯವಾದೊಂದು ಪೀತಾಂಬರವಂ ತಂದು ಯೋಗಪರಮಾನಂದನಿಗೆ ನಮಸ್ಕಾರಮಾಡಿ, ಸ್ವಾಮಿ ! ತಾವು ಧನ್ಯರು. ಈ ಪೀತಾಂಬರವಂ ದಯೆಯಿಟ್ಟು ಸ್ವೀಕರಿಸಿ ಧಾರಣೆ ಮಾಡಬೇಕು. ನಾನು ಮಂದಮತಿ. ಭಗವದ್ಭಕ್ತಿಯನರಿಯೆನು. ಈ ಪೀತಾಂಬರವನ್ನು ತಾವು ಧರಿಸಿದರೆ ಭಗವಂತನು ಸಂತುಷ್ಟನಾಗುವನು–ಎಂದು ಪ್ರಾರ್ಥಿಸಲು, ಅದಕ್ಕೆ ಆತನು–ನನಗೆ ಈ ಪೀತಾಂಬರವು ಏಕೆ ? ಜೀರ್ಣವಸ್ತ್ರವೇನಾದರೂ ಇದ್ದರೆ ಅದಂ ನನಗೆ ಕೊಡಬೇಕು. ಅದನ್ನು ನಾನು ಪ್ರೀತಿಯಿಂದ ಧರಿಸಿಕೊಳ್ಳುವೆನು. ಜೀರ್ಣವಸ್ತ್ರವಂ ಧರಿಸಬೇಕು ; ಭಿಕ್ಷಾಟನವಂ ಮಾಡಿ ಅನ್ನವನ್ನು ತರಬೇಕು ; ಇಂತಿರಲು ಭಗವತ್ಸೇವೆಯು ನಿರ್ವಿಘ್ನವಾಗಿ ನೆರವೇರುವುದು. ನನಗೋಸ್ಕರ ನೀವು ತಂದ ಪೀತಾಂಬರವನ್ನು ದೇವರಿಗೆ ಸಮರ್ಪಿಸಿ. ಇದರಿಂದ ಶ್ರೀರುಕ್ಮಿಣೀಪತಿಯು ಸಂತುಷ್ಟನಾಗುವನು. ನಿಮ್ಮ ವಿಷಯದಲ್ಲಿ ಅನುಗ್ರಹವಂ ಮಾಡುವನು–ಎಂದು ಬಹುವಿಧವಾಗಿ ಹೇಳಿದರೂ ಆ ವರ್ತಕನು ಒಡಂಬಡಲಿಲ್ಲ.

ಯಾರಿಗೆ ಯಾವುದು ಯೋಗ್ಯವೋ ಅದನ್ನು ಅವರಿಗೆ ಕೊಡಬೇಕು. ಪಕ್ಷಿಗಳಿಗೆ ನುಚ್ಚನ್ನು ಹಾಕಬೇಕು. ಪಶುಗಳಿಗೆ ತೃಣವನ್ನು ಹಾಕಬೇಕು. ಸತ್ಪಾತ್ರವಂ ನೋಡಿ ದ್ರವ್ಯದಾನವಂ ಮಾಡಬೇಕು. ಮರದ ಬೇರಿಗೆ ನೀರಂ ಹಾಕಲು ಅದಕ್ಕೆ ಉಲ್ಲಾಸವುಂಟಾಗುವುದು. ಕ್ಷುಧಿತನಿಗೆ ಅನ್ನವಂ ನೀಡಲು ಅವನು ತೃಪ್ತನಾಗುವನು. ಇದಂ ತಿಳಿಯದೆ ಆ ವರ್ತಕನು ಬಲಾತ್ಕಾರದಿಂದ ಆತನಿಗೆ ಪೀತಾಂಬರವನುಡಿಸಿ ತಾನು ಮುಂದಣ ಸಂತೆಗೆ ಹೊರಟುಹೋದನು.

ಯೋಗಪರಮಾನಂದನು ಆ ದಿವ್ಯವಸ್ತ್ರವಂ ಧರಿಸಿಕೊಂಡು ಕಚ್ಚೆಯಂ ಮೇಲೆಳೆದು ಸಿಕ್ಕಿಸಿಕೊಂಡು ಅದಕ್ಕೆ ಕೆಸರು ಹತ್ತುವುದಲ್ಲಾ !–ಎಂದು ತಪಿಸುತ್ತಲೇ ನಮಸ್ಕಾರವಂ ಮಾಡುತಿದ್ದನು. ನಿಶ್ಚಿಂತನಾಗಿ ನಮಸ್ಕಾರವಂ ಮಾಡುತಿದ್ದ ಆತನ ನಿಷ್ಠೆಯೆಲ್ಲವೂ ಆ ವಸ್ತ್ರದ ಮೋಹದಿಂದ ತಪ್ಪಿಹೋಯಿತು. ಎರಡುಜಾವದವರೆಗೂ ಪ್ರದಕ್ಷಿಣನಮಸ್ಕಾರಂಗಳಂ ಮಾಡಿದನು. ಆದರೂ ಆ ವೇಳೆಗೆ ಆದಿವಸ ನಿಯಮಿತ

ನಮಸ್ಕಾರಗಳು ಸಂಪೂರ್ಣವಾಗಲಿಲ್ಲ. ಹಸಿವಿನಿಂದ ಪ್ರಾಣವು ಆಕುಲವಾಯಿತು. ಮೈಯೆಲ್ಲವೂ ಬೆವರಿತು. ಬಹುಶ್ರಮಕ್ಕೆ ಈಡಾದನು. ಮನದಲ್ಲಿ ಸಂತಪಿಸುತ್ತ—ಇಂದು ನಮಸ್ಕಾರಂಗಳಂ ಮಾಡಲು ಏಕೆ ಇಂತು ಕಷ್ಟವಾಗುವುದು ?—ಎಂದು ಚಿಂತಿಸಿ ವೈರಿಯಾದ ಈ ಪೀತಾಂಬರದಿಂದ ಇಂದು ಸೇವೆಗೆ ಅಂತರಾಯವುಂಟಾಯಿತು. ಪೂರ್ಣಿಮಾಚಂದ್ರನಿಗೆ ರಾಹುವು ಒದವಿದಂತೆ, ಎಲೆಯಲ್ಲಿ ಬಡಿಸಿದ ಮೃಷ್ಟಾನ್ನಕ್ಕೆ ಶ್ವಾನವು ಪ್ರಾಪ್ತವಾದಂತೆ, ಗಂಗಾತೀರದಲ್ಲಿ ಇರುವ ಅಶ್ವತ್ಥವೃಕ್ಷಕ್ಕೆ ಸಿಡಿಲು ಬಡಿದಂತೆ ಪಾಂಡುರಂಗನ ಸೇವೆಯಲ್ಲಿ ಏಕಾಗ್ರನಾಗಿದ್ದ ನನಗೆ ಈ ಪೀತಾಂಬರವು ಪ್ರಾಪ್ತವಾಯಿತಲ್ಲಾ ! ಇದು ಭಗವತ್ಸೇವೆಗೆ ವಿಘ್ನವನ್ನುಂಟುಮಾಡಿದುದಲ್ಲದೆ ನನ್ನ ಸುಕೃತವನ್ನೂ ಅಪಹರಿಸಿತು. ಇಂದು ನಾನು ಇಂತಹ ಅನ್ಯಾಯಕ್ಕೆ ಗುರಿಯಾದೆನು. ಇನ್ನು ಏನು ದೇಹದಂಡನವಂ ಮಾಡಿಕೊಳ್ಳಲಿ ? ಅರಣ್ಯವಂ ಪೊಕ್ಕು ಪಂಚಾಗ್ನಿಮಧ್ಯದಲ್ಲಿ ನಿಲ್ಲಲೇ ? ಮಹಾದ್ರಿಯಲ್ಲಿ ಹೋಗಿ ಕುಳಿತುಕೊಳ್ಳಲೇ ? ತ್ರಿವೇಣಿಯಲ್ಲಿ ದೇಹವನ್ನು ಗಂಡುಗತ್ತರಿಗಾದರೂ ಸಿಕ್ಕಿಸಲೇ ? ನಿಯಮದಿಂದ ಸಕಲ ತೀರ್ಥಯಾತ್ರೆಯಂ ಮಾಡಲೇ ? ಅನ್ನೋದಕಂಗಳನ್ನು ಬಿಟ್ಟು ನಿತ್ಯೋಪವಾಸವಂ ಮಾಡಲೇ ? ಪ್ರಾಯೋಪವೇಶವನ್ನಾದರೂ ಮಾಡಲೇ ? ಪಾಂಡುರಂಗನು ಇದರಿಂದಲಾದರೂ ಸಂತುಷ್ಟನಾಗಿ ಸಂದರ್ಶನವಂ ಕೊಡುವನೇ ?—ಎಂದು ಹಲವುಬಗೆಯಿಂದ ಆಲೋಚಿಸಿ ಅನುತಾಪಗೊಂಡು ವಿಚಾರವಮಾಡುತ್ತ ದೇವಸ್ಥಾನದ ಹೊರಗೆ ಬಂದು ಕುಳಿತನು.

ಆ ಸಮಯದಲ್ಲಿ ಒಬ್ಬ ಒಕ್ಕಲಿಗನು ಎರಡೆತ್ತುಗಳ ಹೆಗಲಮೇಲೆ ನೇಗಿಲ ನೊಗವನಿಟ್ಟು ಅವುಗಳನ್ನು ಹೊಲಕ್ಕೆ ಹೊಡೆದುಕೊಂಡು ಹೋಗುತಿದ್ದನು. ಅದಂ ಕಂಡು ಒಕ್ಕಲಿಗನಂ ಕರೆದು—ನನಗೆ ಎರಡೆತ್ತುಗಳು ಬೇಕು. ಈ ಪೀತಾಂಬರವಂ ಕೊಡುವೆನು. ಈ ಯೆತ್ತುಗಳಂ ಕೊಡು—ಎನಲು, ಅವನು ಆಲೋಚಿಸಿ ದ್ವಿಗುಣವಾದ ಮೂಲ್ಯವು ದೊರೆಯುವುದೆಂದು ಅಂಗೀಕರಿಸಿದನು. ಬಳಿಕ ಯೋಗಪರಮಾನಂದನು ಪೀತಾಂಬರವನ್ನು ಅವನಿಗೆ ಕೊಟ್ಟು ಅವನನ್ನು ಕುರಿತು ತನ್ನ ಕಾಲುಗಳಿಗೆ ಹಗ್ಗವಂ ಕಟ್ಟಿ ನೇಗಲ ಹಿಂದೆ ಬಿಗಿದು ರಭಸದಿಂದ ಎತ್ತುಗಳಂ ಕೋಲಿನಿಂದ ಹೊಡೆ—ಎನಲು, ಅವಿವೇಕಿಯಾದ ಆವೊಕ್ಕಲಿಗನು ಅದೇರೀತಿ ಮಾಡಿದನು. ಎತ್ತುಗಳು ಬೇಟೆಗಾರನಂ ಕಂಡ ಹುಲ್ಲೆಗಳಂತೆ ಬೆದರಿ ಮಹಾವೇಗದಿಂದ ಓಡುತ್ತ ಅರಣ್ಯವಂ ಸೇರಿದುವು.

ಯೋಗಪರಮಾನಂದನು ತನ್ನ ದೇಹವು ಎಳೆತದಿಂದ ಶಿಥಿಲವಾಗುತಿದ್ದರೂ ಆ ಕ್ಲೇಶವಂ ಮನದಲ್ಲಿ ಎಣಿಸದೆ ಅನುತಪ್ತನಾಗಿ ಭಗವಂತನನ್ನು ಹೃದಯದಲ್ಲಿ ಧ್ಯಾನಿಸುತ್ತ, ಶ್ರೀರಾಮಕೃಷ್ಣ ! ನಾರಾಯಣ ! ಪತಿತಪಾವನ ! ಕರುಣಾಸಾಗರ ! ಭಕ್ತವತ್ಸಲ! ಪಾಂಡುರಂಗ ! ಪಾಲಿಸು—ಎಂದು ಬಹುವಿಧವಾಗಿ ಗದ್ಗದಸ್ವರದಿಂದ ಭಗವನ್ನಾಮಕೀರ್ತನವಂ ಮಾಡುತಿದ್ದನು. ಚರ್ಮವೆಲ್ಲವೂ ಕಿತ್ತುಹೋಯಿತು.

ಮೂಳೆಗಳು ಜರ್ಝರಿತವಾದುವು. ನಿಮಿಷದಲ್ಲಿ ಪ್ರಾಣವು ಹೋಗುವುದೋ ಏನೋ-ಎಂಬಂತಾಯಿತು. ಅಂತಹ ಸಮಯದಲ್ಲಿಯೂ ಆನಂದದಿಂದ ಭಜನವಂ ಮಾಡು ತಿದ್ದನು.

ಯಾವನು ಗಜೇಂದ್ರನ ಆರ್ತವಚನವಂ ಕೇಳಿ ವೈಕುಂಠದಿಂದ ಬಂದು ಪ್ರಸನ್ನ ನಾದನೋ, ದುಶ್ಶಾಸನನಿಂದ ಅವಮಾನಗೊಂಡ ದ್ರೌಪದಿಯ ದೀನೋಕ್ತಿಯಂ ಕೇಳಿ ಯಾವನು ಸಲಹಿದನೋ ಪಂಢರಪುರಾಧೀಶನಾದ ಆ ಶ್ರೀಮನ್ನಾರಾಯಣನು ಆತನ ಮನೋಭಾವಕ್ಕೆ ಮೆಚ್ಚಿ ಆತನ ಕರುಣೋಕ್ತಿಯಂ ಕೇಳಿ ದಯೆಗೊಂಡು ಇದಿರಿಗೆ ಬಂದು ಪ್ರಸನ್ನನಾದನು.

ಭಗವಂತನ ಸಂದರ್ಶನಮಾತ್ರದಿಂದ ನೊಗಕ್ಕೆ ಕಟ್ಟಿದ್ದ ಹಗ್ಗವು ಬಿಚ್ಚಿಹೋ ಯಿತು. ವಿಕೃತವಾಗಿದ್ದ ಶರೀರವು ಕಳೆಗೂಡಿತು. ಸೂರ್ಯನು ಉದಯಿಸಲು, ಅಂಧ ಕಾರವು ಎಂತು ತೊಲಗುವುದೋ ಅಂತು ಲಕ್ಷ್ಮೀಪತಿಯು ಇದಿರಿಗೆ ಬಂದು ನಿಲಲು, ಆತನ ಕ್ಲೇಶವೆಲ್ಲವೂ ನಿಮಿಷದಲ್ಲಿ ನಾಶವನ್ನು ಹೊಂದಿತು.

ಶ್ರೀರುಕ್ಮಿಣೀಪತಿಯು ಆತನಂ ಕುರಿತು-ಎಲೆ ಯೋಗಪರಮಾನಂದನೆ! ವ್ಯರ್ಥ ವಾಗಿ ಏಕೆ ಇಂತು ದೇಹದಂಡನವಂ ಮಾಡಿಕೊಂಡೆ? ನೀವು ತಿಂದ ಅನ್ನವೂ ಕುಡಿದ ನೀರೂ ನನ್ನ ಉದರದಲ್ಲಿಯೇ ಬಂದು ಸೇರುವುದು. ಸಹಜವಾಗಿ ನೀವು ಮಾಡಿದ ಗಮನಾಗಮನವೇ ನನಗೆ ಪ್ರದಕ್ಷಿಣೆಯಾಗುವುದು. ನೀವು ಏನೇನು ಮಾತನಾಡಿ ದರೂ ಅದೇ ನನ್ನ ಸ್ತೋತ್ರವಾಗುವುದು. ಸುಖಸಂತೋಷದಿಂದ ನೀವು ಮಲಗು ವುದೇ ನನ್ನ ಸಾಷ್ಟಾಂಗನಮಸ್ಕಾರವಾಗುವುದು. ನೀವು ಯಾವಯಾವ ಕರ್ಮವನ್ನು ಮಾಡುವಿರೋ ಅದೆಲ್ಲವೂ ನನ್ನ ಆರಾಧನೆಯೆನಿಸುವುದು. ಇಂತಿರಲು, ನೀನು ಇಂತಹ ಅನರ್ಥವನ್ನು ಏಕೆಮಾಡಿದೆ?-ಎನಲು, ಯೋಗಪರಮಾನಂದನು ಪರಮಾ ನಂದಭರಿತನಾಗಿ-ಸ್ವಾಮಿಯೇ! ದುರ್ಲಭವಾದ ನಿನ್ನ ಚರಣಾರವಿಂದವು ಉಪಾಯ ದಿಂದ ದೊರೆಯಲಾರದು. ನನ್ನ ಅಪರಾಧವನ್ನು ಕ್ಷಮಿಸಿ ನನ್ನನ್ನು ಉದ್ಧರಿಸ ಬೇಕು_ಎಂದು ಅಡಿಗಡಿಗೆ ಅಭಿವಂದಿಸಿದನು.

ಭಕ್ತವತ್ಸಲನಾದ ಭಗವಂತನು ಆತನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಸಂತವಿಟ್ಟನು.

ಇಂತು ಶ್ರೀಭಕ್ತವಿಜಯದಲ್ಲಿ ಹತ್ತೊಂಬತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತನೆಯ ಅಧ್ಯಾಯ.

ನರಹರಿಯ ಚರಿತ್ರೆ.

ಎಲೈ ಶ್ರೋತೃಗಳಿರಾ! ಸುರಸವಾದ ಮತ್ತೊಂದು ಕಥೆಯನ್ನು ನುಡಿವೆನು:— ಆದರದಿಂದ ಆಲಿಸಿ.

ಪಂಢರಪುರದಲ್ಲಿ ನರಹರಿಯೆಂಬ ಒಬ್ಬ ಅಕ್ಕಸಾಲೆಯಿದ್ದನು. ಆತನು ಉಷಃಕಾಲದಲ್ಲಿಯೇ ಎದ್ದು ಭೀಮರಥಿಯಲ್ಲಿ ಸ್ನಾನವಂಮಾಡಿ ಭಕ್ತಿಯಿಂದ ಮಲ್ಲಿಕಾರ್ಜುನಸ್ವಾಮಿಯನ್ನು ಸೇವಿಸುತಿದ್ದನು. ಆತನು ಪಂಢರಪುರದಲ್ಲಿ ಇದ್ದರೂ ಪಂಢರೀಶನ ಸಂದರ್ಶನಕ್ಕೆ ಹೋಗನು. ಮಲ್ಲಿಕಾರ್ಜುನಸ್ವಾಮಿಯಲ್ಲಿಯೇ ಅತ್ಯಂತ ಪ್ರೀತಿಯನ್ನಿಟ್ಟು ಭಜನೆಮಾಡುತಿದ್ದನು. ಚಾತಕವು ಮೇಘೋದಕವನ್ನು ಬಿಟ್ಟು ಜಲಾಂತರವನ್ನು ಎಂತು ಆಸ್ವಾದಿಸುವುದಿಲ್ಲವೋ ಅಂತು ಆನರಹರಿಯು ಶಿವನಂ ಬಿಟ್ಟು ಮತ್ತೊಂದು ದೈವವನ್ನು ಸೇವಿಸುತಿರಲಿಲ್ಲ. ಆಕಾಶದಲ್ಲಿ ಬಹುನಕ್ಷತ್ರಗಳು ಇದ್ದರೂ ನೈದಿಲೆಯು ಚಂದ್ರನ ಸಂಪರ್ಕದಿಂದಲೇ ಎಂತು ಉಲ್ಲಾಸವನ್ನು ಹೊಂದುವುದೋ; ಮನೆಯಲ್ಲಿ ಅನೇಕಸುಂದರಸ್ತ್ರೀಯರಿದ್ದರೂ ಶಿಶುವು ತನ್ನ ತಾಯ ಆದರಣೆಯಿಂದಲೇ ಎಂತು ಸಂತೋಷಗೊಳ್ಳುವುದೋ; ಅನೇಕಪುರುಷರಿದ್ದರೂ ಪತಿವ್ರತೆಯು ತನ್ನ ಪತಿಯ ದರ್ಶನದಿಂದಲೇ ಎಂತು ಸಂತೋಷಮಂ ತಾಳುವಳೋ ಅಂತು ಆತನು ಅನೇಕದೇವರಿದ್ದರೂ ಮಲ್ಲಿಕಾರ್ಜುನೇಶ್ವರನ ಸಂಗತಿಯಿಂದಲೇ ಸಂತೋಷವುಳ್ಳವನಾಗಿದ್ದನು. ಪಾಂಡುರಂಗದೇವಾಲಯದ ಶಿಖರವನ್ನೂ ಕಣ್ಣಿಂದ ನೋಡನು.

ಇಂತಿರಲು, ಪರಸ್ಥಳದ ಒಬ್ಬ ಸಾಧುಕಾರನು—ತನಗೆ ಸುಲಕ್ಷಣನಾದ ಮಗನು ಹುಟ್ಟಿದರೆ ವಿಟ್ಠಲಸ್ವಾಮಿಗೆ ಚಿನ್ನದ ಕಟಿಸೂತ್ರವಂ ಮಾಡಿಸಿ ಅರ್ಪಿಸುವೆನು—ಎಂದು ಪ್ರಾರ್ಥನೆಯಂ ಮಾಡಿಕೊಂಡಿದ್ದನು. ಆಪ್ರಾರ್ಥನೆಗೆ ಸಂತುಷ್ಟನಾಗಿ ಶ್ರೀರುಕ್ಮಿಣೀಪತಿಯು ಆಸಾಧುಕಾರನಿಗೆ ಪುತ್ರನನ್ನು ಕರುಣಿಸಿದನು. ಆತನು ಪುತ್ರಲಾಭದಿಂದ ಸಂತುಷ್ಟನಾಗಿ ಪಂಢರಪುರದ ಯಾತ್ರೋತ್ಸವಕ್ಕೆ ಬಂದು ಶ್ರೀವಿಟ್ಠಲನ ಸಂದರ್ಶನವಂ ಮಾಡಿ ಪೂಜಕರನ್ನು ಕುರಿತು—ಸ್ವಾಮಿ! ಅಲ್ಲಲ್ಲಿ ರತ್ನಗಳಂ ಕೆತ್ತಿ ಅಂದವಾಗಿರುವಂತೆ ಚಿನ್ನದ ಉಡೆದಾರವಂ ಮಾಡಲು ಬುದ್ಧಿವಂತನಾದ ಅಕ್ಕಸಾಲೆಯಾವನು ಈ ಊರಲ್ಲಿರುವನು? ಇಂತಹುದನ್ನು ದೇವರಿಗೆ ಅರ್ಪಣೆಮಾಡಬೇಕೆಂದು ನಾನು ಪ್ರಾರ್ಥನೆಮಾಡಿಕೊಂಡಿರುವೆನು—ಎನಲು, ಅದಕ್ಕೆ ಅವರು:-ಈವೂರಲ್ಲಿ ಅಂತಹ ಉದ್ಯೋಗವಂಮಾಡಲು ಬುದ್ಧಿವಂತನೆನಿಸಿಕೊಂಡಿರುವನು ನರಹರಿಯೆಂಬವನು. ಚಿನ್ನವನ್ನೂ ರತ್ನಗಳನ್ನೂ ಅವನಲ್ಲಿಗೆ ತೆಗೆದುಕೊಂಡುಹೋಗಿ ಕೊಡಿ. ನಿಮ್ಮ ಇಷ್ಟದಂತೆ

ಅವನು ಉಪಕಾರವಂ ಮಾಡಿಕೊಡುವನು. ಅವನಲ್ಲದೆ ಮತ್ತಾವನೂ ತಕ್ಕವನು ದೊರೆಯನು—ಎಂದರು.

ಸಾಧುಕಾರನು ವಿಚಾರಿಸಿಕೊಂಡು ನರಹರಿಯ ಬಳಿಗೆ ಬಂದು ತನ್ನ ಅಭಿಲಷಿತವನ್ನು ತಿಳಿಯಿಸಿದನು. ಅದಕ್ಕೆ ಆತನು—ಆಗಲಿ ಮಾಡಿಕೊಡುವೆನು; ಆದರೆ ಅಳತೆಯಂ ನೀವು ತಂದುಕೊಡಬೇಕು. ನಾನು ದೇವರ ಸನ್ನಿಧಿಗೆ ಬಂದು ಅಳತೆ ನೋಡುವವನಲ್ಲ. ಹೆಚ್ಚುಕಡಿಮೆಯಾದರೆ ನನ್ನನ್ನು ಆಕ್ಷೇಪಕ್ಕೆ ಗುರಿಮಾಡಬೇಡಿ-ಎನಲು, ಆ ಸಾಧುಕಾರನು—ಇವನು ದೇವರ ಸನ್ನಿಧಿಗೆ ಏಕೆ ಬರುವುದಿಲ್ಲವೋ—ಎಂದು ಶಂಕಿಸಿ, ಈವಿಚಾರದಿಂದ ನನಗೇನು ?—ಎಂದು ಬಗೆದು, ಹಿಂದಿರುಗಿ ಹೋಗಿ ಸರಿಯಾದ ಅಳತೆಯಂ ನೋಡಿ ತಂದುಕೊಟ್ಟನು.

ನರಹರಿಯು ಕ್ಷಿಪ್ರದಲ್ಲಿ ಆತನ ಇಷ್ಟದಂತೆ ರತ್ನಖಚಿತವಾದ ಕನಕಕಟಿಸೂತ್ರವಂ ಮಾಡಿಕೊಟ್ಟನು. ಸಾಧುಕಾರನು ಸಂತೋಷದಿಂದ ತೆಗೆದುಕೊಂಡು ಹೋಗಿ ದೇವರಿಗೆ ಅಭಿಷೇಕವಂಮಾಡಿಸಿ ಷೋಡಶೋಪಚಾರಗಳಿಂದ ಪೂಜೆಮಾಡಿಸಿ ನಡುವಿನಲ್ಲಿ ಅದಂ ಧರಿಸಲು, ಅದು ಸಾಲದೆಹೋಯಿತು. ಮತ್ತೆ ನರಹರಿಯ ಬಳಿಗೆ ತಂದುಕೊಡಲು, ಆತನು ದೊಡ್ಡದುಮಾಡಿಕೊಟ್ಟನು. ಮತ್ತೆ ದೇವರಿಗೆ ಧರಿಸಿ ನೋಡಲು, ದೊಡ್ಡದಾಯಿತು. ಮತ್ತೆ ಕಡಿಮೆಮಾಡಿಸಲು, ಸಾಲಲಿಲ್ಲ. ಇಂತು ಎಷ್ಟು ಆವೃತ್ತಿಮಾಡಿಸಿದರೂ ಹೆಚ್ಚು ಕಡಿಮೆಯಾಗುತ ಬಂದಿತು. ಆಸಾಧುಕಾರನು ಚಿಂತಾಕ್ರಾಂತನಾಗಿ—ಶ್ರೀರುಕ್ಮಿಣೀಪತಿಯು ತನ್ನ ವಿಷಯದಲ್ಲಿ ಕೋಪಿಸಿಕೊಂಡನೋ? ನನಗೆ ಸದ್ಭಾವವಿಲ್ಲವೋ? ನನ್ನ ಸೇವೆಯನ್ನು ಸ್ವಾಮಿಯು ಏಕೆ ಬಲ್ಲನೋ ?—ಎಂದು ಚಿಂತಿಸುತ್ತ ಖಿನ್ನನಾಗಿ ನರಹರಿಯ ಬಳಿಗೆ ಬಂದು-ಅಯ್ಯಾ! ನೀನು ದಯೆಯಿಟ್ಟು ದೇವಸ್ಥಾನಕ್ಕೆ ಬಂದು ಕಟಿಸೂತ್ರವನ್ನು ಸರಿಮಾಡಿ ದೇವರಿಗೆ ತೊಡಿಸಿ ಬರಬಾರದೇ-ಎಂದು ದೈನ್ಯದಿಂದ ಹೇಳಿಕೊಂಡನು. ಅದಕ್ಕೆ ಆತನು-ನಾನು ಮೊದಲೇ ಈ ವಿಷಯವನ್ನು ಹೇಳಲಿಲ್ಲವೇ ? ನಾನು ನಿಯಮಪೂರ್ವಕನಾಗಿರುವೆನು. ಈಪೊತ್ತಿನವರೆಗೂ ಆ ದೇವಸ್ಥಾನಕ್ಕೆ ಹೋದವನಲ್ಲ. ಶಂಕರನನಲ್ಲದೆ ಇತರದೇವರನ್ನು ಕಣ್ಣಿಂದ ನೋಡುವುದಿಲ್ಲ-ಎನಲು, ಸಾಧುಕಾರನು ಬಿಡದೆ ಬಹುವಿಧವಾಗಿ ಪ್ರಾರ್ಥಿಸಿಕೊಂಡನು.

ಬಳಿಕ ನರಹರಿಯು ನಿರ್ವಾಹವಿಲ್ಲದೆ ಬಡಂಬಟ್ಟು ಕಣ್ಣಿಗೆ ಬಟ್ಟೆಯಂ ಕಟ್ಟಿಕೊಂಡು ದೇವಸ್ಥಾನಕ್ಕೆ ಹೊರಟನು. ಕ್ಷೇತ್ರವಾಸಿಗಳೆಲ್ಲರೂ ಕಂಡು ವಿಸ್ಮಿತರಾಗಿ ನಕ್ಕರು. ನಿರ್ಭಾಗ್ಯನು ನಿಧಿಯಂ ಕಂಡು ಕಣ್ಣುಗಳಂ ಮುಚ್ಚಿಕೊಂಡಂತೆ ಈ ನರಹರಿಯು ಶ್ರೀವಿಟ್ಠಲನ ದೇವಸ್ಥಾನವಂ ನೋಡಲಾರದೆ ಕಣ್ಣುಗಳಂ ಕಟ್ಟಿಕೊಂಡಿರುವನಲ್ಲಾ-ಎಂದು ಹಾಸ್ಯಮಾಡಿದರು. ಕೆಲವರು-ಅವನ ಮನೋವೃತ್ತಿಯನ್ನು ಅವನೇ ಬಲ್ಲನು. ನಮಗದರಿಂದೇನು ?—ಎಂದರು.

ನರಹರಿಯು ಮಹಾದ್ವಾರದಬಳಿಗೆ ಬಂದನು. ಸಾಧುಕಾರನು ಆತನ ಕೈಯಂ ಹಿಡಿದುಕೊಂಡು ದೇವಾಲಯಕ್ಕೆ ಕರೆದುಕೊಂಡು ಹೋದನು. ಕೆಲವರು ನೋಡಿ-ದೇವರಿಗೆ ಇವನು ನಮಸ್ಕಾರವನ್ನು ಮಾಡಲಿಲ್ಲ-ಎಂದರು. ಇನ್ನು ಕೆಲವರು-ದೇವ ಸಂದರ್ಶನವನ್ನೇ ಮಾಡದವನು ನಮಸ್ಕಾರವನ್ನು ಮಾಡುವನೇ? ಮನೆಗೆ ಬಂದವರಿಗೆ ಆಸನವನ್ನೇ ಕೊಡದವನು ಮೃಷ್ಟಾನ್ನಭೋಜನವಂ ಮಾಡಿಸುವನೇ? ಪ್ರಯಾಗದಲ್ಲಿ ಸ್ನಾನವನ್ನೇಮಾಡದವನು ಅಲ್ಲಿ ದಾನದಕ್ಷಿಣೆಗಳನೇನಂ ಕೊಟ್ಟಾನು? ಮಾರ್ಗದಲ್ಲಿ ಸಜ್ಜನರಂ ಕಂಡರೆ ನಮಸ್ಕಾರಮಾಡದವನು ಅವರಂ ಮನೆಗೆ ಕರೆದುಕೊಂಡುಹೋಗಿ ಸತ್ಕರಿಸುವನೇ? ಗಂಗಾಮಾಹಾತ್ಮ್ಯವನ್ನು ಕಿವಿಯಿಂದಲೇ ಕೇಳದವನು ಗಂಗಾಸ್ನಾನವಂ ಮಾಡುವನೇ? ಮಾರ್ಗಸ್ಥರಿಗೆ ಮಾರ್ಗವನ್ನೇ ತೋರಿಸದವನು ತನ್ನಮನೆಯಲ್ಲಿ ಇಳಿದುಕೊಳ್ಳುವುದಕ್ಕೆ ಅವರಿಗೆ ಸ್ಥಳವಂ ಕೊಡುವನೇ? ಸ್ವಮುಖದಿಂದ ಭಗವದ್ಭಕ್ತರಂ ನಿಂದಿಸುವನು ಭಗವತ್ಕೀರ್ತನವಂ ಕೇಳಲು ಹೋಗುವನೇ? ಅಂತು ದೇವರ ದರ್ಶನವನ್ನೇ ಒಲ್ಲದವನು ಪ್ರದಕ್ಷಿಣನಮಸ್ಕಾರಗಳನ್ನು ಮಾಡಲಾರ್ಪನೇ?-ಎಂದು ಹಾಸ್ಯಮಾಡಿದರು.

ನರಹರಿಯು ದೇವಸ್ಥಾನದ ಒಳಗೆ ಪ್ರವೇಶಿಸಿ ದೇವರಂ ಕೈಯಿಂದ ತಡವರಿಸಿ ನೋಡಿದನು. ಆಗ ಪಂಚವಕ್ತ್ರನೂ ದಶಭುಜನೂ ನಾಗಾಭರಣಭೂಷಿತನೂ ಜಟಾಧರನೂ ಭಸ್ಮೋದ್ಧೂಳಿತಸರ್ವಾಂಗನೂ ವ್ಯಾಘ್ರಚರ್ಮೋತ್ತರೀಯನೂ ಆದ ಪರಮೇಶ್ವರನು ಇಟ್ಟಿಗೆಯ ಪೀಠದ ಮೇಲೆ ನಿಂತಿರುವಂತೆ ತೋರಲು, ಮನಸ್ಸಿನಲ್ಲಿ ತನ್ನ ಆರಾಧ್ಯದೈವತವೇ ಇದು-ಎಂದು ಬಗೆದು, ಕಣ್ಣುಗಳಂ ಕಟ್ಟಿಕೊಳ್ಳುವುದರಿಂದೇನು? ಎಂದು ಪಶ್ಚಾತ್ತಾಪಗೊಂಡು ಕಟ್ಟಿದ್ದ ಬಟ್ಟೆಯಂ ಬಿಚ್ಚಿ ಕಣ್ಣುಗಳಿಂದ ನೋಡಲು, ಸಿರದಲ್ಲಿ ಕಿರೀಟವನ್ನೂ, ಕಂಠದಲ್ಲಿ ಕೌಸ್ತುಭವೈಜಯಂತಿಗಳನ್ನೂ, ಕಿವಿಗಳಲ್ಲಿ ದಿವ್ಯವಾದ ಮಕರಕುಂಡಲಗಳನ್ನೂ ಧರಿಸಿ, ಪೀತಾಂಬರವನುಟ್ಟು ಎರಡು ಕೈಗಳನ್ನೂ ಕಟಿತಟದಲ್ಲಿ ಇಟ್ಟು ಕಣ್ಗೊಳಿಸುವ ನೀಲಮೇಘಶ್ಯಾಮನಾದ ಪಾಂಡುರಂಗನು ಗೋಚರನಾದನು. ಆತನು ವಿಸ್ಮಿತನಾಗಿ ಮತ್ತೆ ಕಣ್ಣುಗಳಂ ಮುಚ್ಚಿಕೊಂಡು ನೋಡಲು, ಈಶ್ವರನಾಗಿಯೇ ತೋರಿದನು. ಒಡನೆಯೆ ಕಣ್ಗಳಂ ತೆರೆದು ನೋಡಲು, ಶ್ರೀರುಕ್ಮಿಣೀಪತಿಯೇ ದೃಗ್ಗೋಚರನಾದನು. ಬಳಿಕ ಆತನು ಪಶ್ಚಾತ್ತಾಪಯುಕ್ತನಾಗಿ ಪ್ರೀತಿಯಿಂದ ಪಾಂಡುರಂಗನಿಗೆ ನಮಸ್ಕಾರಮಾಡಿ–ಎಲೆ ದೇವಾದಿದೇವನೆ! ವಿಶ್ವವ್ಯಾಪಕನೆ! ಸದಾಶಿವನೆ! ಕೇಶವನೆ! ಕೈಲಾಸವಾಸಿಯೆ! ವೈಕುಂಠನಾಥನೆ! ಅದ್ವೈತರೂಪನೆ! ಕ್ಷೀರಸಾಗರವಿಹಾರಿಯೇ! ಭಕ್ತವತ್ಸಲನೇ! ಪಂಡರೀಶನೇ! ನನ್ನ ಮಾಯಾಪಾಶವನ್ನು ಪರಿಹರಿಸು. ನಿನ್ನ ಅದ್ಭುತವಾದ ಮಹಿಮೆಯನ್ನು ಅರಿಯದೆ ನಿನ್ನನಾಮದಲ್ಲಿ ದ್ವೇಷವನ್ನು ಹಿಡಿದಿದ್ದೆನು. ನನ್ನ ಆ ವಿಕಲ್ಪವಂ ಪರಿಹರಿಸಿ ನಿನ್ನ ಘನವಾದ ಮಹಿಮೆಯಂ ತೋರಿದೆ–ಎಂದು-ಬಹುವಿಧವಾಗಿ ಸ್ತುತಿಯಿಸಿ ಆ ಕಟಿಸೂತ್ರ

ವನ್ನು ಧರಿಸಿನೋಡಲು, ಅದು ಸರಿಹೋಯಿತು. ಆ ಸಾಧುಕಾರನು ಸಂತುಷ್ಟಾಂತರಂಗನಾಗಿ ಸ್ವಾಮಿಯನ್ನು ಸೇವಿಸಿ ಹೊರಟುಹೋದನು. ಶ್ರೀವಿಟ್ಠಲನು ಪ್ರಸನ್ನನಾಗಿ ನರಹರಿಯನ್ನು ಕುರಿತು-ನೀನು ನನ್ನ ಭಕ್ತನು. ನನಗೆ ಪ್ರಿಯತಮನಾದವನು. ಆದುದರಿಂದ ನಿನ್ನನ್ನು ಬರಮಾಡಲು ಉಪಾಯವನ್ನೆಸಗಿದೆ. ಇನ್ನುಮೇಲೆ ಸದಾಶಿವನಿಗೂ ನನಗೂ ಭೇದವನ್ನೆಣಿಸಬೇಡ-ಎಂದು ನುಡಿದನು. ನರಹರಿಯು ಪರಮಾನಂದಭರಿತನಾಗಿ ಸ್ವಾಮಿಯ ಪಾದಗಳಿಗೆ ಮತ್ತೆಮತ್ತೆ ಎರಗಿದನು.

ಅಂದಿನಿಂದ ಪಾಂಡುರಂಗನು ತನ್ನ ಶಿರಸ್ಸಿನ ಮೇಲೆ ಲಿಂಗವನ್ನು ಧರಿಸಿರುವನು. ತನ್ನದಾಸನ ಇಚ್ಛೆಯನ್ನು ಎಂದಿಗೂ ಭಂಗಮಾಡುವನಲ್ಲ.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತನೆಯ ಅಧ್ಯಾಯಂ ಸಂಪೂರ್ಣಂ.

ಇಪ್ಪತ್ತೊಂದನೆಯ ಅಧ್ಯಾಯ.

ನಾಮದೇವನ ಏಕಾದಶೀವ್ರತಾಚರಣೆ.

ಎಲೈಶ್ರೋತೃಗಳಿರಾ! ಅದ್ಭುತವಾದ ನಾಮದೇವನ ಏಕಾದಶೀವ್ರತಾಚರಣೆಯನ್ನು ಬಿನ್ನವಿಸುವೆನು :— ಆದರಿಂದ ಆಲಿಸಿ.

ನಾಮದೇವನು ಬಹುನಿಯಮದಿಂದ ಏಕಾದಶೀವ್ರತವನ್ನು ಆಚರಿಸುತ್ತಿದ್ದನು. ಆದಿವಸವೇನಾದರೂ ಆಗಲಿ, ಭೋಜನವನ್ನು ಮಾಡನು. ದೇವರಲ್ಲಿ ಹೃಷೀಕೇಶನು ಎಂತು ಶ್ರೇಷ್ಠನೋ ; ವೃಕ್ಷಗಳಲ್ಲಿ ಅಶ್ವತ್ಥವು ಎಂತು ಶ್ರೇಷ್ಠವೋ ; ಅಂತು ವ್ರತಗಳಲ್ಲಿ ಏಕಾದಶೀವ್ರತವು ಶ್ರೇಷ್ಠವು-ಎಂದು ಆತನು ತಿಳಿದಿದ್ದನು. ಲೋಕದಲ್ಲಿ ಅನೇಕರು ದಂಭಕ್ಕೋಸ್ಕರ ವ್ರತವನ್ನು ಆಚರಿಸುವರು. ಆದರಿಂದೇನು ? ಮನದಲ್ಲಿ ದಾರ್ಢ್ಯವಿಲ್ಲದಿರಲು, ಹಿಡಿದ ವ್ರತವು ವ್ಯರ್ಥವಾಗುವುದು. ಭೂಮಿಯು ಹದವಿಲ್ಲದಿರಲು, ಬಿತ್ತಿದ ಬೀಜವು ಎಂತು ಮೊಳೆಯದೋ ; ಹಸಿವಿಲ್ಲದಿರಲು, ಮಾಡಿದ ಭೋಜನವು ಎಂತು ಜೀರ್ಣಿಸದೋ ; ಕಾಲಿಲ್ಲದಿರಲು, ತೀರ್ಥಾಟನವು ಎಂತು ಸಲ್ಲದೋ ; ಇಂದ್ರಿಯಗಳ ಸ್ವಾಧೀನತೆಯಿಲ್ಲದಿರಲು, ಯೋಗಸಾಧನೆಯೆಂತು ನಡೆಯದೋ ; ಔದಾರ್ಯವಿಲ್ಲದಿರಲು, ಸತ್ಪಾತ್ರದಾನವು ಎಂತು ಲಭಿಸದೋ ; ಶೌರ್ಯವಿಲ್ಲದಿರಲು, ರಣಾಭಿಗಮನವು ಎಂತು ಆಗದೋ ; ಅಂತು ಸದ್ಭಾವವಿಲ್ಲದಿರಲು ವ್ರತಪರಿಪೂರ್ತಿಯುಂಟಾಗಲಾರದು. ನಾಮದೇವನು ಅಂತಹನಲ್ಲ. ಅಸಾಧಾರಣವಾದ ಮನೋದಾರ್ಢ್ಯವುಳ್ಳವನಾದಕಾರಣ ರುಕ್ಮಾಂಗದಾಂಬರೀಷರಂತೆ ನಿಯಮದಿಂದ ಏಕಾದಶೀವ್ರತವನ್ನು ನಡೆ

ಯಿಸುತ್ತಿದ್ದನು. ಹುರಿದ ಬೀಜವು ಮೊಳೆತರೂ, ಸಮುದ್ರವು ಬಾವಿಯಲ್ಲಿ ಅಡಗಿದರೂ, ಅಗ್ನಿಯು ತೃಣದಲ್ಲಿ ಅವಿತುಕೊಂಡರೂ, ಪೃಥ್ವಿಯು ತೂಗುವುದಕ್ಕೆ ಸಾಧ್ಯವಾದರೂ, ವ್ಯಾಘ್ರವು ಸ್ವಭಾವದಿಂದ ಶಾಂತಿಯನ್ನು ಹಿಡಿದು ಕುರಿಗಳ ಮಂದಿಯಲ್ಲಿ ಕುಳಿತರೂ, ಪಾಂಡುರಂಗನ ಅನುಗ್ರಹದಿಂದ ತನ್ನ ವ್ರತಕ್ಕೆ ಭಂಗವುಂಟಾಗಲಾರದೆಂದು ಆತನು ಮನದಲ್ಲಿ ನಿಶ್ಚಯಿಸಿಕೊಂಡಿದ್ದನು.

ಇಂತಿರಲು, ಶ್ರೀವಿಟ್ಠಲನು ನಾಮದೇವನ ಮನೋನಿಶ್ಚಯವನ್ನು ಪರೀಕ್ಷಿಸಬೇಕೆಂದು ಒಂದು ಏಕಾದಶೀದಿನ ವೃದ್ಧನ ಆಕಾರವನ್ನು ತಾಳಿ ಜೀರ್ಣವಸ್ತ್ರವಂ ಧರಿಸಿ, ಕೈಯಲ್ಲಿ ಕೋಲಂ ಹಿಡಿದುಕೊಂಡು ನಾಮದೇವನ ಮನೆಗೆ ಬಂದು ಅಂಗಳದಲ್ಲಿ ಕುಳಿತುಕೊಂಡನು. ನಾಮದೇವನು ಆತನಂ ಕಂಡು ಅಭಿವಂದಿಸಿ-ಏತಕ್ಕೋಸ್ಕರ ನನ್ನ ಮನೆಗೆ ದಯಮಾಡಿದಿರಿ ? ನನ್ನಿಂದ ಏನು ಕಾರ್ಯವಾಗಬೇಕು—ಎಂದು ಬೆಸಗೊಳಲು, ಆತನು-ಅನ್ನವಿಲ್ಲದೆ ಜೀವವು ತಲ್ಲಣಿಸುತ್ತಿರುವುದು. ಸಾಮಗ್ರಿಯಂ ಕೊಟ್ಟು ಭೋಜನಮಾಡಿಸು—ಎಂದನು. ಅದಕ್ಕೆ ನಾಮದೇವನು—ಇಂದು ಏಕಾದಶಿ ; ಅನ್ನದಾನವನ್ನು ಮಾಡಲಾಗದು. ಕಂದಮೂಲಗಳನ್ನಾಗಲಿ ಖರ್ಜೂರಾದಿಫಲಗಳನ್ನಾಗಲಿ ಈಗ ತಂದುಕೊಡುವೆನು—ಎನಲು, ಆತನು ಆ ನುಡಿಯಂ ಕೇಳಿ—ಅನ್ನವಿಲ್ಲದೆ ನನಗಾವುದೂ ಬೇಡ. ಎಂತಾದರೂ ಅನ್ನದಾನವನ್ನು ಮಾಡು. ನೀನು ಈ ವಿಷಯದಲ್ಲಿ ಉಪೇಕ್ಷೆಯಂ ಮಾಡಿದರೆ ನನ್ನ ಪ್ರಾಣವು ಹೊರಟುಹೋಗುವುದು ; ನಿನಗೆ ಪ್ರಾಣಿಹತ್ಯಾದೋಷವು ಬರುವುದು—ಎನಲು, ನಾಮದೇವನು—ನಾನು ಶ್ರೀಹರಿಯ ಭಕ್ತನು. ಪಾಪಪುಣ್ಯವಿರಹಿತನು. ಚಿತ್ತವನ್ನು ಆ ಪಾಂಡುರಂಗನಲ್ಲಿ ಇಟ್ಟು ಜೀವನ್ಮುಕ್ತನಾಗಿರುವೆನು. ಪುಣ್ಯದ ಆಸೆಯೇ ಇಲ್ಲದವನನ್ನು ಪಾಪವು ಎಂತು ಬಾಧಿಸುವುದು ? ವಿಷಯಾಸಕ್ತಿಯಿಲ್ಲದವನಿಗೆ ವಿಯೋಗದುಃಖವು ಎಂತು ಸಮನಿಸುವುದು ? ದ್ರವ್ಯಲೋಭವನ್ನು ಬಿಟ್ಟವನಿಗೆ ಕಳ್ಳರ ಭಯವೇನಿರುವುದು ? ಸನ್ಮಾನವನ್ನು ಉಪೇಕ್ಷಿಸಿರುವನಿಗೆ ಅಪಮಾನದಿಂದೇನು ! ಸುಖವನ್ನೇ ಅಪೇಕ್ಷಿಸದವನಿಗೆ ಲೋಕನಿಂದೆಯು ಎಂತು ದುಃಖಕರವೆನಿಸುವುದು ? ಲಾಭಕ್ಕೆ ಸಂತೋಷಪಡದವನಿಗೆ ಅಲಾಭದಿಂದ ಕೊರತೆಯೇನು ? ತಾರುಣ್ಯದ ರಸವಂ ತಿಳಿಯದವನಿಗೆ ವಾರ್ಧಕದ ಕಷ್ಟವೇನು ತೋರುವುದು ? ಅಂತು ಪುಣ್ಯದ ಬೇಡನ್ನೇ ಮುರಿದಿರುವ ನಾನು ಪಾಪಕ್ಕೋಸ್ಕರ ಎಂದಿಗೂ ಅಂಜುವನಲ್ಲ—ಎಂದನು. ವೃದ್ಧನು ಆ ಮಾತಂ ಕೇಳಿ-ಭೂತದಯೆಯಿಲ್ಲದಿದ್ದರೂ ವೇದಾಂತದ ಮಾತುಗಳನ್ನು ಆಡುವ. ನಾನು ದುಸ್ಸಹವಾದ ಕ್ಷುಧೆಯಿಂದ ಪೀಡಿತನಾಗಿರುವೆನು. ಅದರ ಪರಿಹಾರವಂ ಮೊದಲು ನೀನು ಮಾಡದಿದ್ದರೆ ಸತ್ಯವಾಗಿಯೂ ನನ್ನ ಪ್ರಾಣವು ಥಟ್ಟನೆ ಹೋಗುವುದು—ಎನಲು, ಅದಕ್ಕೆ ನಾಮದೇವನು—ಎಲೆ ವೃದ್ಧನೆ! ನಿನ್ನ ಪ್ರಾಣವು ಹೋದರೆ ನನ್ನ ಪ್ರಾಣವೂ ಹೋಗುವುದು. ಈ ವಿಷಯದಲ್ಲಿ ಸಂಶಯವಿಲ್ಲ. ಇಂದು ಏಕಾದಶಿಯಾದುದರಿಂದ

ನಿಶ್ಚಿತವಾಗಿಯೂ ನಾನು ಅನ್ನದಾನವನ್ನು ಮಾಡುವನಲ್ಲ-ಎಂದನು. ವೃದ್ಧರೂಪಿಯಾದ ಶ್ರೀಹರಿಯು ಚಮತ್ಕಾರದಿಂದ ಗರಗರನೆ ಕಣ್ಣುಗಳಂ ತಿರುಗಿಸಿ ಅಲ್ಲಿಯೇ ಮೂರ್ಛೆಗೊಂಡು ಬಿದ್ದನು. ನಾಮದೇವನು ಬಳಿಗೆ ಬಂದು ನೋಡಲು ಶ್ವಾಸವು ನಿಂತುಹೋಗಿದ್ದಿತು. ವೃದ್ಧನು ಪ್ರಾಣಬಿಟ್ಟನೆಂಬುದಂ ಜನಗಳು ಕೇಳಿ, ನಾಮದೇವನ ಮನೆಯಬಳಿಗೆ ಬಂದು ನಾಮದೇವನನ್ನು ಕುರಿತು-ಮನೆಯಬಾಗಿಲಲ್ಲಿ ಇಂತು ಪ್ರಾಣಹತ್ಯೆಯಾಗುವಂತ ಏಕೆಮಾಡಿದೆ? ಅನ್ನವನ್ನು ಕೊಡದುದರಿಂದ ಇಂತು ಅನರ್ಥವುಂಟಾಯಿತು. ನೀನು ಈ ದೋಷವನ್ನು ಇನ್ನು ಪರಿಹರಿಸಿಕೊಳ್ಳುವ ಬಗೆಯೆಂತು? ಬಾಯಲ್ಲಿ ವೇದಾಂತದ ಮಾತುಗಳನ್ನು ಬಹುವಾಗಿ ನುಡಿಯುವೆ. ಒಂದು ಹಿಡಿಯನ್ನವನ್ನು ಹಾಕದೆ ಪ್ರಾಣವನ್ನು ಕಳೆದೆ-ಎಂದು ಬಹುವಿಧವಾಗಿ ನುಡಿದು ಧಿಕ್ಕರಿಸಿದರು.

ನಾಮದೇವನು ಜನಗಳ ಮಾತನ್ನು ಲಕ್ಷ್ಯಮಾಡದೆ ಆ ವೃದ್ಧನ ಕಳೇಬರವನ್ನು ಕಟ್ಟಿಸಿ ಭೀಮಾತೀರಕ್ಕೆ ತೆಗೆಯಿಸಿಕೊಂಡುಹೋಗಿ ಕಾಷ್ಠವನ್ನು ಅಡಕಿಸಿ ಆ ಕುಣಪವನ್ನು ಅದರಮೇಲೆ ಇಡಿಸಿ ಮಗ್ಗುಲಲ್ಲಿ ತಾನೂ ಮಲಗಿಕೊಂಡು ಅಗ್ನಿಯಂ ಉರಿಗೊಳಿಸಿದನು.

ನಾಮದೇವನ ಮನೋನಿಶ್ಚಯವನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಇಂತಹ ಭಾಗವತನನ್ನು ನಾವೆಲ್ಲಿಯೂ ಕಾಣೆವು. ವೃದ್ಧನು ಮೃತನಾಗುವುದೂ ತಾನೂ ಸಹಗಮನವನ್ನು ಮಾಡಿದನಲ್ಲಾ!-ಎಂದು ಸಜ್ಜನರು ಅಭಿನಂದಿಸಿದರು.

ಬಳಿಕ ಉರಿಯು ದೊಡ್ಡದಾಗುವುದೂ ವೃದ್ಧರೂಪನಾದ ಶ್ರೀಹರಿಯು ಪ್ರಸನ್ನನಾಗಿ ಸ್ವರೂಪವನ್ನು ತಾಳಿ ನಾಮದೇವನನ್ನು ಆಲಿಂಗಿಸಿಕೊಂಡು-ನಾಮದೇವನೆ! ನಿನ್ನಂತಹ ಭಾಗವತನು ತ್ರೈಲೋಕ್ಯದಲ್ಲಿ ಹುಡುಕಿದರೂ ದೊರೆಯನು. ಅಂಬರೀಷರುಕ್ಮಾಂಗದರ ನಿಷ್ಠೆಗಿಂತಲೂ ನಿನ್ನದು ದೊಡ್ಡದು-ಎಂದು ಅಭಿನಂದಿಸಿ ಅದೃಶ್ಯನಾದನು. ಬಳಿಕ ಎಲ್ಲರೂ ನಾಮದೇವನನ್ನು ಮಹಾಧನ್ಯನೆಂದು ಹೊಗಳಿದರು.-

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತೊಂದನೆಯ ಅಧ್ಯಾಯಂ ಸಂಪೂರ್ಣಂ.

ಇಪ್ಪತ್ತೆರಡನೆಯ ಅಧ್ಯಾಯ.

ಮತ್ಸ್ಯೇಂದ್ರನಾಥನ ಕಥೆ.

ಇದು ಭಕ್ತವಿಜಯವೆಂಬ ಕಲ್ಪವೃಕ್ಷದ ಸುತ್ತಲೂ ಭಾವುಕರಾದ ಶ್ರೋತೃಗಳು ಬಂದು ಕುಳಿತಿರುವರು. ಅವರ ಮನೋರಥವೆಲ್ಲವೂ ಕೈಗೂಡದೆ ನಿಲ್ಲಲಾರದು.

ಸೂರ್ಯೋದಯದಿಂದ ಕತ್ತಲೆಯೆಲ್ಲವೂ ಎಂತು ತೊಲಗುವುದೋ ಅಂತು ಸತ್ಕಥಾಶ್ರವಣದಿಂದ ಮನಸ್ಸಿನ ಸಂದೇಹವೆಲ್ಲವೂ ಪರಿಹಾರಹೊಂದುವುದು. ಅಮೃತಸೇವನೆಯಿಂದ ಸಕಲವ್ಯಾಧಿಗಳೂ ಎಂತು ನಶಿಸಿಹೋಗುವುವೋ ಅಂತು ಸಚ್ಚರಿತ್ರಶ್ರವಣದಿಂದ ಭವದುಃಖವೆಲ್ಲವೂ ಧ್ವಸ್ತವಾಗಿಹೋಗುವುದು.

ಎಲೈ ಶ್ರೋತೃಗಳಿರಾ! ಮುಂದಣ ಕಥೆಯಂ ಆದರದಿಂದ ಆಲಿಸಿ. ವಿಶ್ವೋದ್ಧಾರಕ್ಕೋಸ್ಕರ ಅವತರಿಸಿದ ಮತ್ಸ್ಯೇಂದ್ರನಾಥನೆಂಬ ಒಬ್ಬ ಮಹಾಮಹಿಮನಿದ್ದನು. ಆತನು ವೈರಾಗ್ಯದ ಮಹಾಮೇರು. ಬ್ರಹ್ಮಜ್ಞಾನಸಂಪನ್ನನು. ಸದ್ಗತಿಪ್ರದನು. ಸರ್ವಚೈತನ್ಯಸ್ವರೂಪನು. ದೇಹಧಾರಿಯಾಗಿದ್ದರೂ ದೇಹಾತೀತನಾಗಿದ್ದನು. ಆತನು ಮಾತೃಗರ್ಭದಿಂದ ಹುಟ್ಟುವಾಗಲೇ ಸೋಹಂಭಾವವನ್ನು ಕೈಕೊಂಡಿದ್ದನು. ಅವಿದ್ಯೆಯೆಂಬ ಮಾರುತನಿಂದ ಪರಿವೇಷ್ಟಿತನಾಗದೆ ನಿರಂಜನನಾಗಿದ್ದನು. ಆತನು ಸ್ವೇಚ್ಛೆಯಿಂದ ಸಕಲತೀರ್ಥಸೇವೆಯಂ ಮಾಡಬೇಕೆಂದು ಹೊರಟು ಭಿಕ್ಷಾಟನೆಗೋಸ್ಕರ ಊರಿಗೆ ಹೋಗುತ್ತ ದೊರೆತ ಭೈಕ್ಷದಿಂದ ತೃಪ್ತಿಹೊಂದುತ್ತ ಸರ್ವಕಾಲದಲ್ಲಿಯೂ ಅರಣ್ಯದಲ್ಲಿಯೇ ಏಕಾಂತಭಾವದಿಂದಿರುತ್ತ ಆಯಾತೀರ್ಥಗಳಂ ಸೇವಿಸುತ್ತ ಉದಾಸೀನವೃತ್ತಿಯಂ ತಾಳಿ ಹನ್ನೆರಡು ವರ್ಷಗಳಂ ಕಳೆದನು.

ಒಂದುದಿವಸ ಮಾರ್ಗವಶದಿಂದ ಒಂದುನಗರವಂ ಸೇರಿ ಭಿಕ್ಷಾಟನವಂ ಮಾಡುತ್ತ ಒಬ್ಬ ಸಾಧುಕಾರನ ಮನೆಯಂ ಸೇರಿ ಬಾಗಿಲಬಳಿಯಲ್ಲಿ ನಿಂತು ಭಿಕ್ಷೆಯನ್ನು ಬೇಡಲು, ಆ ಸಾಧುಕಾರನ ಮಡದಿ-ಭಿಕ್ಷೆಯನ್ನು ತೆಗೆದುಕೊಂಡು ಹೊರಗೆ ಬಂದು ಭಸ್ಮರುದ್ರಾಕ್ಷಾಲಂಕೃತನಾಗಿ ಸುವರ್ಣಸಮಾನವಾದ ದೇಹದ ಕಾಂತಿಯಿಂದ ಪರಿಶೋಭಿಸುತ್ತ ಮಹಾತೇಜಸ್ವಿಯೂ ಉಪಶಾಂತನೂ ಆದ ಆತನನ್ನು ನೋಡಿ ವಿಸ್ಮಿತೆಯಾಗಿ ಭಕ್ತಿಭಾವದಿಂದ ಆತನಿಗೆ ಅಭಿವಂದಿಸಿ—ಪೂಜ್ಯರ! ತಾವು ಎಲ್ಲಿಂದ ದಯಮಾಡಿದಿರಿ? ಇದಂ ದಯೆಯಿಟ್ಟು ನನಗೆ ಹೇಳಬೇಕು—ಎಂದು ಬೆಸಗೊಳಲು, ಆತನು ಆಕೆಯ ಮಾತಂ ಕೇಳಿ—ನನ್ನದು ಶೂನ್ಯನಿರಂಜನದೇಶ; ಅದಂ ಯೋಗಸುಖಾಧಿಕಾರಿಗಳಾದ ಭಾಗ್ಯಶಾಲಿಗಳಲ್ಲಿ ಯಾರಾದರೂ ಒಬ್ಬಿಬ್ಬರು ಬಲ್ಲರು—ಎಂದನು. ಆಕೆ—ಪೂಜ್ಯರೇ! ನನಗೆ ಸಂತಾನವಿಲ್ಲ. ಮನೆಯಲ್ಲಿ ಸರ್ವಸಂಪತ್ತುಗಳೂ ಪರಿಪೂರ್ಣವಾಗಿವೆ. ಆದರೂ ಎಲ್ಲವೂ ನನಗೆ ಶೂನ್ಯವಾಗಿಯೇ ಕಾಣುವುದು. ಚಂದ್ರನಿಲ್ಲದ ರಾತ್ರಿಯೂ ಬೆಳೆಯಿಲ್ಲದ ಭೂಮಿಯೂ ಜೀವನವಿಲ್ಲದ ನದಿಯೂ ಮೇಘೋದಯವಿಲ್ಲದ ವರ್ಷಾಕಾಲವೂ ಎಂತು ನಿರರ್ಥಕವೋ ಅಂತು ಸಂತಾನವಿಲ್ಲದ ನನ್ನ ಬಾಳಿಕೆ ನಿರರ್ಥಕವಾಗಿರುವುದು. ಶಕ್ತಿಯಿಲ್ಲದೆ ಸ್ಥೂಲವಾಗಿ ಬೆಳೆದ ಶರೀರದಿಂದೇನು? ಪರಾಕ್ರಮವಿಲ್ಲದ ರಾಜನ ವಿಜೃಂಭಣೆಯಿಂದೇನು? ಸದಾಚಾರವಿಲ್ಲದ ಪಂಡಿತನ ಶಾಸ್ತ್ರಜ್ಞಾನದಿಂದೇನು? ಎಣ್ಣೆಬತ್ತಿಯಿಲ್ಲದ ದೀಪದಿಂದೇನು? ಅಂತು ಸಂತಾನವಿಲ್ಲದ ವೈಭವದಿಂದೇನು? ನೀರಿಲ್ಲದೆ ಮಾಡಿದ ತೋಟದಂತೆ ಸಂತಾನವಿಲ್ಲದ ಸಂಪತ್ತು

ಶೋಭಿಸುವುದಿಲ್ಲ. ಯಾವಬಗೆಯಿಂದ ಸಂತಾನಲಾಭವಾಗುವುದೋ ಅದಂ ನನಗೆ ಅನುಗ್ರಹದಿಂದ ತಿಳಿಯಿಸಬೇಕು-ಎಂದು ಪ್ರಾರ್ಥಿಸಲು, ಮಹಾಮಹಿಮನಾದ ಮತ್ಸ್ಯೇಂದ್ರನಾಥನು ಕನಿಕರಗೊಂಡು ಸ್ವಮುಖದಿಂದ ವಿಭೂತಿಯಂ ಮಂತ್ರಿಸಿ ಆಕೆಯ ಕೈಯಲ್ಲಿಕೊಟ್ಟು-ಇದನ್ನು ನೀನು ಭಕ್ಷಿಸು. ನಿನಗೆ ಪುತ್ರಸಂತಾನನಾಗುವುದು. ಆಪುತ್ರನು ಭಗವದವತಾರಪುರುಷನೆನಿಸುವನು. ಇದಂ ಮತ್ತಾರೊಡನೆಯೂ ಹೇಳಬೇಡ. ನಿನ್ನ ಕಾರ್ಯವಂ ಸಾಧಿಸು-ಎಂದು ನಿದೇಶವಿತ್ತು ಹೊರಟುಹೋದನು.

ಆಕೆ ಆಭಸ್ಮವಂ ತೆಗೆದುಕೊಂಡುಹೋಗಿ ಮನೆಯೊಳಗೆ ದೇವರ ಜಗುಲಿಯ ಮೇಲಿಟ್ಟು ತನ್ನನೆರೆಹೊರೆಯವಳಂ ಕರೆದು ಅವಳಂ ಕುರಿತು—ಸಖಿ! ನಾನು ರಹಸ್ಯವಾದ ಒಂದುಮಾತನ್ನು ಹೇಳುವೆನು ಕೇಳು. ಒಬ್ಬಯೋಗಿಯು ಈಗತಾನೇ ನಮ್ಮ ಮನೆಗೆ ಭಿಕ್ಷೆಗೆ ಬಂದಿದ್ದನು. ನಾನು ಭಿಕ್ಷೆಯಂ ತೆಗೆದುಕೊಂಡು ಹಾಕುವುದಕ್ಕೆ ಹೋಗಿ, ಪರಮತೇಜಸ್ವಿಯೂ ಮಹಾಮಹಿಮನೂ ಆದ ಆತನಂ ಕಂಡು ಮನದಲ್ಲಿ ಸಂತೋಷಗೊಂಡು-ನನಗೆ ಸಂತಾನವಿಲ್ಲ—ಎಂದು ತಿಳಿಯಿಸಿದೆನು. ಆತನು ಅನುಗ್ರಹ ಮಾಡಿ ವಿಭೂತಿಯಂ ಮಂತ್ರಿಸಿಕೊಟ್ಟು--ಇದಂ ನೀನು ಭಕ್ಷಿಸು ; ನಿನಗೆ ಪುತ್ರನಾಗುವನು--ಎಂದು ಹೇಳಿರುವನು. ಇದು ಸತ್ಯವೋ ಅಸತ್ಯವೋ ನನಗೆ ತಿಳಿಯದು. ನೀನು ನಿಶ್ಚಯಿಸಿ ಹೇಳು. ನೀನಲ್ಲದೆ ನನಗೆ ಆಪ್ತರು ಮತ್ತಾರೂ ಇಲ್ಲ-ಎನಲು, ಅವಳು—ಅಮ್ಮಾ? ನಾನು ಏನಹೇಳಲಿ! ಜೋಗಿಗಳಲ್ಲಿ ಯಾಥಾರ್ಥ್ಯವಿಲ್ಲ. ಬಗೆ ಬಗೆಯ ಚತುರೋಪಾಯಗಳಿಂದ ಜನಗಳನ್ನು ಮರುಳುಮಾಡುವರು. ನೀನು ಅವನ ಮಾತಿನಲ್ಲಿ ವಿಶ್ವಾಸವಂ ಮಾಡಿದರೆ, ಸಂಸಾರವನ್ನು ಕೆಡಿಸಿಕೊಳ್ಳುವೆ. ಮುಖ್ಯವಾಗಿ ಪತಿಯ ಕ್ಷೇಮವನ್ನು ಬಯಸಬೇಕು. ಅದರಿಂದ ಲೇಸಹುದು. ಈ ಜೋಗಿಗಳನ್ನು ಎಂದಿಗೂ ನಂಬಬಾರದು—ಎಂದು ಆಕೆಗೆ ವಿಕಲ್ಪವನ್ನುಂಟುಮಾಡಿ--ಆ ವಿಭೂತಿಯನ್ನು ಬಿಸುಟ್ಟುಬಿಡು—ಎಂದಳು.

ನೆರೆಮನೆಯವಳ ಮಾತಂ ಕೇಳಲು, ಅತ್ತೆಸೊಸೆಯರಿಗೆ ಕಲಹವೊದವುವುದು. ಅಣ್ಣತಮ್ಮಂದಿರು ಬೇರೆಯಾಗುವರು. ತಾಯಿತಂದೆಗಳನ್ನು ಮಕ್ಕಳು ಬಿಡುವರು. ಇದು ಲೋಕದಲ್ಲಿ ಪ್ರತ್ಯಕ್ಷಾನುಭವವಾಗಿರುವುದು. ಕ್ಷೀರವು ಆಮ್ಲರಸದ ಸಂಪರ್ಕದಿಂದ ಥಟ್ಟನೆ ಎಂತು ಕೆಟ್ಟುಹೋಗುವುದೋ ; ಉತ್ತಮವಾದ ಚಿನ್ನವೂ ಟಂಕದ ಸಂಬಂಧದಿಂದ ಎಂತು ಬಣ್ಣದಲ್ಲಿ ಕಡಿಮೆಯಾಗುವುದೋ ಅಂತು ಕುಲೀನೆಯರೂ ಪರಬುದ್ಧಿಯಿಂದ ಕುತ್ಸಿತೆಯರೆನಿಸುವರು. ಅಮೃತವಂ ವಿಷವೆಂದು ತಿಪ್ಪೆಯಲ್ಲಿ ಸುರಿದಂತೆ, ವೇದಾಂತಪುಸ್ತಕವನ್ನು ಕಳಾಶಾಸ್ತ್ರವೆಂದು ಹರಿದುಹಾಕಿದಂತೆ, ಮುತ್ತಿನ ಮಣಿಯನ್ನು ಗಾಜಿನಮಣಿಯೆಂದು ಬಿಸುಟಂತೆ, ಕಲ್ಪವೃಕ್ಷದ ಬೀಜವನ್ನು ಕುತ್ಸಿತ ಭ್ರಾಂತಿಯಿಂದ ಅಗ್ನಿಯಲ್ಲಿ ಹಾಕಿದಂತೆ, ದೊರೆತ ಯಜ್ಞದ ಪುರೋಡಾಶವನ್ನು ಕಹಿಯೆಂದು ವಿಕಲ್ಪದಿಂದ ಪರಿಹರಿಸಿದಂತೆ, ಆ ಮತ್ಸ್ಯೇಂದ್ರನಾಥನು ಕರುಣಿಸಿದ ವಿಭೂತಿ

ಯನ್ನು ಆಕೆ ಆಕ್ಷಣದಲ್ಲಿಯೇ ಬಿಸುಟ್ಟಳು. ಪ್ರಾರಬ್ಧಕರ್ಮದಿಂದ ಆತನ ಪ್ರಸಾದವು ಅವಳಿಗೆ ಕೈಗೂಡಲಿಲ್ಲ.

ಬಳಿಕ ಹನ್ನೆರಡುವರ್ಷಗಳ ಮೇಲೆ ಆಮತ್ಸ್ಯೇಂದ್ರನಾಥನು ಸಂಚರಿಸುತ್ತ ಆಕಸ್ಮಿಕವಾಗಿ ಮತ್ತೆ ಆಕೆಯ ಮನೆಗೆ ಬಂದು ಬಾಗಿಲಲ್ಲಿ ನಿಂತು ಭಿಕ್ಷವಂ ಬೇಡಲು, ಒಳಗಣಿಂದ ಆಕೆ ಭಿಕ್ಷವಂ ತೆಗೆದುಕೊಂಡು ಬಂದಳು. ಪರಸ್ಪರಮುಖದರ್ಶನವಾಯಿತು. ಅದರಿಂದ ಇರ್ವರಿಗೂ ಪೂರ್ವಸ್ಮರಣವುಂಟಾಯಿತು.–ಆಗ ಮತ್ಸ್ಯೇಂದ್ರನಾಥನು ಆಕೆಯನ್ನು ಕುರಿತು-ನಿನಗೆ ನಾನು ಸಂತಾನಾರ್ಥವಾಗಿ ವಿಭೂತಿಯಂ ಮಂತ್ರಿಸಿಕೊಟ್ಟಿದ್ದೆನಲ್ಲಾ ! ಆಪುತ್ರನಂ ಕರೆದು ನನಗೆ ತೋರಿಸು–ಎನಲು, ಆ ಮಾತಂ ಕೇಳಿ ಆಕೆ ಮನದಲ್ಲಿ ಭಯಗೊಂಡು, ಈತನು ಶಾಪವಿತ್ತು ನನ್ನಂ ಭಸ್ಮಮಾಡಾನು. ಏನುಮಾಡಲಿ–ಎಂದು ಯೋಚಿಸುತ್ತ ಏನುತ್ತರವನ್ನೂ ಹೇಳಲು ಶಕ್ತಿಯಿಲ್ಲದೆ ಮೌನದಿಂದಿದ್ದಳು. ಮತ್ತೆ ಆತನು--ನಾನು ಕೊಟ್ಟ ವಿಭೂತಿಯಂ ಭಕ್ಷಿಸಿದೆಯೋ? ಎಲ್ಲಿಯಾದರೂ ಬಿಸುಟೆಯೋ ?--ಎಂದು ಬೆಸಗೊಳ್ಳಲು, ಆಕೆ–ಪೂಜ್ಯರೆ ! ತಮ್ಮ ಸನ್ನಿಧಿಯಲ್ಲಿ ಸತ್ಯವಂ ನುಡಿವೆನು. ಪರಬುದ್ಧಿಯನ್ನು ಕೇಳಿದುದರಿಂದ ಮನಸ್ಸಿನಲ್ಲಿ ವಿಕಲ್ಪವುಂಟಾಯಿತು. ಅದರಿಂದ ಭಸ್ಮವನ್ನು ಬಿಸುಟೆನು. ನನ್ನ ಪ್ರಾರಬ್ಧಕರ್ಮದಿಂದ ಇಂತು ನಡೆದುದು. ನನ್ನ ಅಪರಾಧವನ್ನು ಕ್ಷಮಿಸಬೇಕು–ಎಂದು ಬೇಡಿಕೊಂಡಳು. ಅದಕ್ಕಾತನು ಭಸ್ಮವನ್ನು ಎಲ್ಲಿ ಬಿಸುಟ್ಟೆ ? ಸಂಕೋಚಪಡದೆ ಅದಂ ತನಗೆ ಹೇಳು-ಎನಲು, ಇಲ್ಲಿ ಸಮೀಪದಲ್ಲಿ ಬೇಸಾಯಗಾರರು ಅಗೆದು ಗುಂಡಿಮಾಡಿರುವ ವಿಶಾಲವಾದ ಒಂದು ಸ್ಥಳವುಂಟು. ಹನ್ನೆರಡುವರ್ಷಗಳಿಂದ ಅಲ್ಲಿ ಜನಗಳು ಗೊಬ್ಬರವನ್ನು ಹಾಕುತ್ತಿರುವರು. ಅಲ್ಲಿ ಬಿಸುಟೆನು-ಎಂದಳು. ಮತ್ಸ್ಯೇಂದ್ರನಾಥನು–ಆಕ್ಷಣ ಆಸ್ಥಳಕ್ಕೆ ಹೋಗಿ, 'ಏಹಿ' ಎನಲು, 'ಮಹಾಗುರೋ' ಎಂದು ಒಳಗಣಿಂದ ಪ್ರತಿಧ್ವನಿಯುಂಟಾಯಿತು. ಮತ್ಸ್ಯೇಂದ್ರನು ಆ ಸಾಹುಕಾರನಿಗೆ ಹೇಳಿ ಸೇವಕರಂ ಬಿಟ್ಟು ಆ ತಿಪ್ಪೆಯನ್ನು ತೋಡಿಸಲು, ಹನ್ನೆರಡುವರ್ಷದ ಮೂರ್ತಿಯೊಂದು ಆಕಸ್ಮಿಕವಾಗಿ ಕಣ್ಣಿಗೆ ಗೋಚರವಾಯಿತು. ಪೂರ್ಣಿಮಾಚಂದ್ರನಂತೆ ಆಹ್ಲಾದಕರನೂ ಸುಂದರನೂ ಆದ ಆಭಗವದವತಾರಪುರುಷನು ಆಧಾರವಿಲ್ಲದಿದ್ದರೂ ಯೋಗಾಸನಾರೂಢನಾಗಿ ಕುಳಿತಿದ್ದನು. ಮೈಗೆ ಮಣ್ಣು ಹತ್ತಿರಲಿಲ್ಲ. ಎಲ್ಲರೂ ನೋಡಿ ವಿಸ್ಮಿತರಾದರು.

ಬಳಿಕ ಮತ್ಸ್ಯೇಂದ್ರನು ಬಳಿಗೆ ಹೋಗಿ ತನ್ನ ಹಸ್ತವಂ ಅವನ ತಲೆಯ ಮೇಲೆ ಇಡಲು, ಅವನು ಎಚ್ಚರಗೊಂಡು ಎದ್ದು ಸಾಷ್ಟಾಂಗನಮಸ್ಕಾರಮಾಡಿದನು. ಅವನಂ ಕೈಯಲ್ಲಿ ಹಿಡಿದುಕೊಂಡು, ಗೋಮಯಮಿಶ್ರವಾದ ಭಸ್ಮದಲ್ಲಿ ಹನ್ನೆರಡುವರುಷವಿದ್ದುದರಿಂದ 'ಗೋರಕ್ಷನಾಥ' ಎಂದು ಅವನಿಗೆ ನಾಮಧೇಯವನ್ನು ಇಟ್ಟನು.

ಸಾಧುಕಾರನೂ ಅವನ ಮಡದಿಯೂ ನೋಡಿ ಅತ್ಯಾಶ್ಚರ್ಯಗೊಂಡು-ನಿಕ್ಷೇಪವು ಕೈಗೆ ದೊರೆಯುತ್ತಿದ್ದಿತು; ಸಂಚಿತದುಷ್ಕರ್ಮವಶದಿಂದ ತಪ್ಪಿಹೋಯಿತೆಂದು ವ್ಯಸನಪಟ್ಟರು. ಮತ್ಸ್ಯೇಂದ್ರನು ಆ ದಂಪತಿಗಳನ್ನು ನೋಡಿ ಕನಿಕರಗೊಂಡು-ನಿಮಗೆ ಮತ್ತೊಬ್ಬ ಮಗನು ಆಗುವನು ; ಸಂದೇಹವಿಲ್ಲ. ವ್ಯಸನಪಡಲಾಗದು—ಎಂದು ಸಮಾಧಾನಗೊಳಿಸಿ ಗೋರಕ್ಷನಾಥನೊಡನೆ ಮುಂದಣ ತೀರ್ಥಯಾತ್ರೆಗೆ ಹೊರಟನು.

ಮಾರ್ಗದಲ್ಲಿ ಗೋರಕ್ಷನು ಮತ್ಸ್ಯೇಂದ್ರನಾಥನನ್ನು ಕುರಿತು—ಪೂಜ್ಯರೇ! ನನ್ನ ಮಸ್ತಕದಲ್ಲಿ ಅಭಯಹಸ್ತವನಿಟ್ಟು ತಾರಕಮಂತ್ರವನ್ನು ಉಪದೇಶಿಸಬೇಕು—ಎಂದು ಪ್ರಾರ್ಥಿಸಲು, ಆತನು ಗೋರಕ್ಷನನ್ನು ನೋಡಿ-ನೀನು ನನ್ನ ಸೇವೆಯಂ ಮಾಡಲಿಲ್ಲ. ಸದ್ಗುರುಸೇವೆಯಂ ಮಾಡದೆ ಉಪದೇಶವಂ ಹೊಂದಲು ನಿನಗೆ ಅಧಿಕಾರವಿಲ್ಲ. ನಾಣ್ಯವಂ ಪರೀಕ್ಷಿಸದೆ ಸೆರಗಿನಲ್ಲಿ ಕಟ್ಟಿಕೊಳ್ಳುವುದಕ್ಕೆ ಎಂತು ಆಗುವುದಿಲ್ಲವೋ ಅಂತು ಪರೀಕ್ಷಿಸದೆ ಶಿಷ್ಯನಂ ಪರಿಗ್ರಹಿಸಲು ಆಗುವುದಿಲ್ಲ. ಶಿಷ್ಯನ ಮನೋಭಾವವನ್ನು ಒರೆಯದೆ ಉಪದೇಶವನ್ನು ಮಾಡಬಾರದು. ನೆಲವನ್ನು ಕೃಷಿಮಾಡದೆ ಸಸ್ಯವನ್ನು ಹಾಕಲು ಆಗಲಾರದು. ಆದುದರಿಂದ ಈಗಲೇ ನಿನ್ನಮನೋರಥವನ್ನು ಪೂರ್ಣಮಾಡಲು ಆಗುವುದಿಲ್ಲ—ಎಂದನು. ಗೋರಕ್ಷನು ವಿನೀತನಾಗಿ-ಪೂಜ್ಯರೆ! ತಮ್ಮಾಜ್ಞೆಯೇ ನನಗೆ ಪ್ರಮಾಣ-ಎಂದು ಬಿನ್ನವಿಸಿ ಆತನೊಡನೆಯೇ ಹೊರಟನು.

ಸ್ವಲ್ಪದೂರ ಹೋಗುವುದೂ ಒಂದು ಊರು ಕಂಡಿತು. ಮತ್ಸ್ಯೇಂದ್ರನು ಊರಹೊರಗೇ ಒಂದುಕಡೆ ಇಳಿದು, ಗೋರಕ್ಷನನ್ನು ಭಿಕ್ಷೆಗೋಸ್ಕರ ಊರೊಳಗೆ ಕಳುಹಿಸಿದನು. ಅವನು ಊರೊಳಗೆ ಪ್ರವೇಶಿಸಿ ಅಲ್ಲಲ್ಲಿ ಬ್ರಾಹ್ಮಣರ ಮನೆಗಳಲ್ಲಿ ಭಿಕ್ಷವಂ ಬೇಡುತ್ತ ಹಾಕದಿದ್ದರೆ ಅಸಮಾಧಾನಗೊಳ್ಳದೆ ಕಡೆಗೆ ಮತ್ತೊಬ್ಬ ಬ್ರಾಹ್ಮಣನ ಮನೆಯಂ ಸೇರಿ ಭಿಕ್ಷವಂ ಬೇಡಿದನು. ಆಗ ಬ್ರಾಹ್ಮಣರು ಒಳಗೆ ಭೋಜನವಂ ಮಾಡುತಿದ್ದರು. ಮನೆಯಾಕೆಯು ಹೋಳಿಗೆಯನ್ನೂ ಒಡೆಯನ್ನೂ ತಂದು ಭಿಕ್ಷಾಪಾತ್ರಕ್ಕೆ ಹಾಕಿದಳು. ಅವನಂ ನೋಡಿ ಜನಗಳು-ಈಬಾಲಯೋಗಿಯು ಮಹಾಸಾಧು. ಮೊಂಡತನವಂ ಮಾಡುವವನಲ್ಲ. ಭಿಕ್ಷವಂ ಹಾಕದಿದ್ದರೆ ಅಸಮಾಧಾನಗೊಳ್ಳುವನಲ್ಲ. ಅಲ್ಪಸಂತುಷ್ಟನಾಗಿರುವನು. ಯಾವನು ಅಲ್ಪಸಂತುಷ್ಟನೋ ಅವನು ಭಗವತ್ಸ್ವರೂಪನು—ಎಂದು ಹೊಗಳುತಿದ್ದರು.

ಬಳಿಕ ಭಿಕ್ಷಾನ್ನವಂ ತೆಗೆದುಕೊಂಡು ಗುರುವಾದ ಮತ್ಸ್ಯೇಂದ್ರನ ಬಳಿಗೆ ಬಂದು ಉತ್ತಮಾನ್ನವನ್ನು ಬೇರ್ಪಡಿಸಿ ಮುಂದೆ ಇರಿಸಿದನು. ಮತ್ಸ್ಯೇಂದ್ರನು ಸಂತೋಷಗೊಂಡು ಭುಂಜಿಸಿ ಗೋರಕ್ಷನನ್ನು ಕುರಿತು—ಒಡೆಗಳು ರುಚಿವತ್ತರವಾಗಿವೆ. ಇದರಿಂದ ನನಗೆ ತೃಪ್ತಿಯುಂಟಾಗಿರುವುದು. ಆದುದರಿಂದ ನಾಳೆಯೂ ಊರೊಳಗೆ ಹೋಗಿ ಇಂತಹ ಭಿಕ್ಷಾನ್ನವನ್ನೇ ತೆಗೆದುಕೊಂಡು ಬಾ-ಎನಲು, ಗೋರಕ್ಷನು-ಅವಶ್ಯವಾಗಿ ತಂದು ಸಮರ್ಪಿಸುವೆನು—ಎಂದು ಅಭಿವಂದಿಸಿದನು.

ಬಳಿಕ ಮರುದಿವಸ ಮಧ್ಯಾಹ್ನವಾಗುವುದೂ, ಭಿಕ್ಷಾಪಾತ್ರವನ್ನು ಕೈಯಲ್ಲಿ ತೆಗೆದುಕೊಂಡು ಗ್ರಾಮವಂ ಪ್ರವೇಶಿಸಿ–ಮತ್ತೊಂದುಮನೆಗೆ ಹೋದರೆ ಕಾರ್ಯಸಾಧನವಾಗುವುದಿಲ್ಲ. ಅದರಿಂದ ನಿನ್ನೆ ಯಾವ ಮನೆಯಲ್ಲಿ ಬ್ರಾಹ್ಮಣರು ಭೋಜನವಂ ಮಾಡುತ್ತಿದ್ದರೋ ಈ ದಿವಸವೂ ಆ ಮನೆಗೇ ಹೋಗಬೇಕು–ಎಂದು ಮನದಲ್ಲಿ ಆಲೋಚಿಸಿ ಅದರಂತೆ ಆ ಮನೆಯ ಬಾಗಿಲಿಗೆ ಹೋಗಿ–ತಾಯೇ! ಬೇಗದಿಂ ಒಡೆಯನ್ನು ತಂದು ಭಿಕ್ಷಾಪಾತ್ರೆಯಲ್ಲಿ ಹಾಕಬೇಕು–ಎಂದನು.

ಆಗ ಮನೆಯ ಯಜಮಾನಿಯು ಬಂದು–ನಮ್ಮ ಮನೆಯಲ್ಲಿ ಒಡೆಗಳು ಉಳಿಯಲಿಲ್ಲ. ನಿನ್ನೆದಿನ ಮನೆಗೆ ಬ್ರಾಹ್ಮಣರು ಭೋಜನಕ್ಕೆ ಬಂದಿದ್ದುದರಿಂದ ಒಡೆಯಂ ಮಾಡಿದ್ದೆವು. ನಿನಗೂ ಹಾಕಿದೆವು. ಇಂದೂ ನೀನು ಅದನ್ನೇ ಅಪೇಕ್ಷಿಸಿದರೆ ಎಲ್ಲಿಂದ ತರಬೇಕು? ಅನ್ನವನ್ನೋ ಧಾನ್ಯವನ್ನೋ ತಂದುಹಾಕುವೆನು. ನಮ್ಮ ಮನೆಯಲ್ಲಿ ಒಡೆಯಿಲ್ಲ; ಸತ್ಯವೆಂದು ನಂಬು-ಎಂದು ನುಡಿದಳು.

ಗೋರಕ್ಷನು ಆಕೆಯ ಮಾತಂ ಕೇಳಿ–ಮತ್ತೊಂದರ ಅಪೇಕ್ಷೆ ನನಗಿಲ್ಲ. ನೀನು ಅಪಾರಧನವಂ ಕೊಟ್ಟರೂ ಅದನ್ನು ಮೃತ್ತಿಕೆಗೆ ಸಮಾನನೆಂದು ಭಾವಿಸುವೆನು. ರಾಜ್ಯಸಂಪತ್ತನ್ನೂ ಇಂದ್ರಪದವಿಯನ್ನೂ ಚತುರ್ವಿಧವಾದ ಮುಕ್ತಿಯನ್ನೂ ನಾನು ಒಲ್ಲೆನು. ಸದ್ಗುರುಗಳ ಅಪೇಕ್ಷೆಯನ್ನು ಪೂರ್ಣಮಾಡುವುದಕ್ಕೋಸ್ಕರ ನಿನ್ನನ್ನು ಒಡೆಯನ್ನು ಬೇಡುವೆನು. ಆ ಸದ್ಗುರುಗಳಿಗೆ ಅದಂ ತೆಗೆದುಕೊಳ್ಳದೆ ಎಂದಿಗೂ ಹೋಗುವವನಲ್ಲ–ಎನಲು, ಆಕೆಯು-ಎಲೆ ಜೋಗಿಗುವರನೆ! ಮೊಂಡತನದಿಂದ ನಿರ್ಬಂಧವನ್ನು ಮಾಡುವೆಯಾ? "ಧರ್ಮವನ್ನು ಮಾಡುವುದಕ್ಕೆ ಹೋದರೆ ಕರ್ಮವು ಘಟಿಸಿತು" ಎಂಬಂತೆ ನಿನ್ನೆ ನಿನಗೆ ಒಡೆಯಂ ಹಾಕಿದುದೇ ಕಷ್ಟತರವಾಯಿತು. ನೀನು ಜೋಗಿಯಲ್ಲ. ವೇಷಧಾರಿಯಾಗಿ ತೋರುವೆ. ಉತ್ತಮವಾದ ಭೋಜ್ಯವನ್ನೇ ಅಪೇಕ್ಷಿಸುವೆ. ಒಂದಾವೃತ್ತಿ ರೊಟ್ಟಿಯನ್ನು ಹಾಕಲು, ಅದರ ಸವಿಯಂ ಕಂಡು ಶ್ವಾನವು ಅಡಿಗಡಿಗೆ ಮನೆಯಬಾಗಿಲಿಗೆ ಬರುವಂತೆ ಭಿಕ್ಷುಕನಾದ ನೀನು ಒಡೆಯ ರುಚಿಯಂ ತಿಳಿದು ಇಂದೂ ಬಂದಿರುವೆ-ಎಂದಳು.

ಗೋರಕ್ಷನು–ನಾನು ಶ್ವಾನಕ್ಕಿಂತಲೂ ಕೀಳಾದವನು. ಆಗಲಿ; ನಾನು ಒಡೆಗಳನ್ನು ತೆಗೆದುಕೊಳ್ಳದೆ ಹೋಗೆನು-ಎನಲು, ಆಕೆಯು–ಎಲೆ ಹಠವಾದಿಯೆ! ಬರಿದೆ ಮೌರ್ಖ್ಯದಿಂದ ಏಕೆ ಕುಳಿತುಕೊಂಡಿರುವೆ? ನಿನ್ನ ಒಂದು ಕಣ್ಣನ್ನು ಕಿತ್ತು ನನಗೆ ಬೇಗಕೊಡು; ನೋಡೋಣ–ಎಂದಳು. ಗೋರಕ್ಷನಾಥನು-ಆಗಲಿ; ಕಿತ್ತುಕೊಡುವೆನು-ಎನಲು, ಆಕೆ-ಸುಮ್ಮನೆ ವ್ಯರ್ಥವಾದ ಮಾತನ್ನು ಏಕೆ ಆಡುವೆ? ನಿಮ್ಮಂತಹ ಜೋಗಿಗಳ ರೀತಿಯೇ ಇಂತು. ತಾವು ಅವಿವೇಕದಿಂದ ಸುಳ್ಳನಾಡುತ್ತ ಪರರಿಗೆ ಜ್ಞಾನೋಪದೇಶವಂ ಮಾಡುವರು. ನಿನ್ನ ಕಣ್ಣನ್ನು ಕಿತ್ತುಕೊಡುವುದು ದಿಟವಾದರೆ ನಾನು ಒಡೆಯನ್ನು ಹಾಕುವುದೂ ದಿಟ–ಎಂದಳು.

ಗೋರಕ್ಷನು ಆ ಮಾತಂ ಕೇಳಿ ಥಟ್ಟನೆ ಬೆರಲನ್ನು ಹಾಕಿ ಒಂದು ಕಣ್ಣುಗುಡ್ಡೆಯಂ ತೆಗೆದು ಆಕೆಯ ಕೈಗೆ ಕೊಟ್ಟನು. ಇದಂ ಕಂಡು ಆಕೆ ಭಯಪಟ್ಟು, ರಾಜಭಟರಿಗೆ ಈ ಸುದ್ದಿ ತಿಳಿದರೆ ತನಗೆ ಹಿಂಸೆಯಾಗುವುದೆಂದು ಎಣಿಸಿ ಸಂಭ್ರಾಂತೆಯಾಗಿ ಮನೆಯ ಬಾಗಿಲಂ ಮುಚ್ಚಿ ಗೋರಕ್ಷನಿಗೆ ನಮಸ್ಕಾರಮಾಡಿ–ನಾನು ನಿನ್ನ ಮನೋನಿಶ್ಚಯವನ್ನು ಪರೀಕ್ಷಿಸುವುದಕ್ಕೆ ಸುಮ್ಮನೆ ನುಡಿದೆನು. ನೀನು ಆ ಮಾತನ್ನು ಸತ್ಯವನ್ನೇ ಮಾಡಿದೆ. ಕಣ್ಣಿನಿಂದ ರಕ್ತದ ಕಾಲ್ವೆ ಹರಿಯುತ್ತಿರುವುದಲ್ಲಾ !-ಎಂದು ತನ್ನ ಸೆರಗಿನಿಂದ ಒತ್ತಿ ಒರಸಿದಳು. ಗೋರಕ್ಷನು-ಇದಕ್ಕೆ ನೀವು ಅಂಜಲಾಗದು–ಎಂದು ಸಮಾಧಾನಗೊಳಿಸಿದನು.

ಗೋರಕ್ಷನು ಕೋಪಗೊಂಡು ಶಾಪವನ್ನು ಕೊಟ್ಟಿದ್ದರೆ ಆಕ್ಷಣದಲ್ಲಿ ಬೂದಿಯಾಗುತ್ತಿದ್ದಳು. ಆತನು ಶಾಂತಿಗೆ ಗಣಿಯಾದುದರಿಂದ ಮನಸ್ಸಿನಲ್ಲಿ ವಿಕಾರವನ್ನು ತಾಳದೆ ಪ್ರಸನ್ನನಾಗಿದ್ದನು. ಆತನು ನಡೆಯುವಾಗ ಆತನ ಹೆಜ್ಜೆಗಳು ಬಿದ್ದ ಎಡೆಗಳಲ್ಲಿ ಸಕಲಸಿದ್ಧಿಗಳೂ ಉಂಟಾಗುವುವು. ಆದರೂ ಆತನು ನಿಷ್ಕಾಮನಾಗಿ ಮನೆಮನೆಗೂ ಹೋಗಿ ಭಿಕ್ಷೆಯಂ ಬೇಡುವನು. ಬಹುತಪಸ್ಸನ್ನಾಚರಿಸಿದವನಾದರೂ ಕಾಮಕ್ರೋಧಯುಕ್ತನಾದರೆ ತನ್ನ ಸುಕೃತವನ್ನು ನಾಶಮಾಡಿಕೊಳ್ಳುವನು. ಗೋರಕ್ಷನು ಜಿತಕಾಮನೂ ಜಿತಕ್ರೋಧನೂ ಆದುದರಿಂದ ಮಹನೀಯನೆನಿಸಿಕೊಂಡಿದ್ದನು.

ಬಳಿಕ ಆ ಮನೆಯ ಯಜಮಾನಿಯು ಒಳಗೆಹೋಗಿ ಬೇಳೆಯಂ ತಿರುವಿ ಸಾಮಗ್ರಿಗಳಂ ಸೇರಿಸಿ ತುಪ್ಪದಲ್ಲಿ ಬೇಯಿಸಿ ಬೇಗನೆ ಒಡೆಗಳನ್ನು ಸಿದ್ಧಮಾಡಿ ತಂದು ಗೋರಕ್ಷನ ಭಿಕ್ಷಾಪಾತ್ರದಲ್ಲಿ ಹಾಕಿ ಬದ್ಧಾಂಜಲಿಯಾಗಿ–ಹೊರಗೆ ಯಾರಿಗೂ ಈ ಸುದ್ದಿಯಂ ತಿಳಿಯಿಸಲಾಗದು-ಎಂದು ಬಿನ್ನವಿಸಿದಳು.

ಗೋರಕ್ಷನು–ನಾನು ಯಾರಿಗೂ ಈ ಸುದ್ದಿಯಂ ತಿಳಿಯಿಸುವುದಿಲ್ಲ. ನೀವು ಸ್ವಲ್ಪವೂ ಭಯವಿಲ್ಲದೆ ಇರಿ-ಎಂದು ಸಂತೋಷಗೊಂಡು ಅಲ್ಲಿಂದ ಹೊರಟು ಕೈಯಿಂದ ಕಣ್ಣು ಮುಚ್ಚಿಕೊಂಡು ಮತ್ಸ್ಯೇಂದ್ರನ ಬಳಿಗೆ ಬಂದು ಸದ್ಭಾವದಿಂದ ನಮಸ್ಕಾರವಂ ಮಾಡಿ–ಪೂಜ್ಯರೆ! ಭಿಕ್ಷೆಯಂ ಬೇಡಿ ಭಕ್ಷ್ಯವಂ ತಂದಿರುವೆನು. ಅನುಗ್ರಹಮಾಡಿ ಯಥಾರುಚಿಯಾಗಿ ಭುಂಜಿಸಬೇಕು–ಎಂದು ನುಡಿದನು.

ಮತ್ಸ್ಯೇಂದ್ರನು ಕಣ್ಣನ್ನು ನೋಡಿ-ಇದೇನು ? ಕಣ್ಣುಗುಡ್ಡೆಯೇನಾಯಿತು ?-ಎಂದು ಬೆಸಗೊಳ್ಳಲು, ಗೋರಕ್ಷನು ಕೈಗಳಂ ಮುಗಿದುಕೊಂಡು–ನಾನು ಒಡೆಯ ಭಿಕ್ಷೆಯಂ ಬೇಡಲು, ಒಬ್ಬಾಕೆ ನನ್ನ ಕಣ್ಣುಗುಡ್ಡೆಯಂ ಬೇಡಿದಳು. ಆದುದರಿಂದ ನಾನು ಕೈಯಿಂದ ಈ ಕಣ್ಣುಗುಡ್ಡೆಯಂ ಕಿತ್ತುಕೊಟ್ಟೆನು–ಎಂದು ನಡೆದ ವೃತ್ತಾಂತವಂ ಅರಿಕೆಮಾಡಿದನು.

ಮತ್ಸ್ಯೇಂದ್ರನು ಆತನ ಮಾತಂ ಕೇಳಿ ವಿಸ್ಮಯಗೊಂಡು-ವತ್ಸನೆ! ನೀನು ಧನ್ಯನು. ನಿನ್ನ ಧೈರ್ಯವೇ ಧೈರ್ಯ. ಆದರೆ ಎರಡನೆಯ ಕಣ್ಣುಗುಡ್ಡೆಯಂ ನನಗೋಸ್ಕರ

ತ್ರಿಗೆದು ಕೊಡು_ಎನಲು, ಗೋರಕ್ಷನು_ಅವಶ್ಯವಾಗಲಿ_ಎಂದು ಥಟ್ಟನೆ ಮತ್ತೊಂದು ಕಣ್ಣುಗುಡ್ಡೆಯುಂ ಸಂತೋಷದಿಂದ ತೆಗೆದುಕೊಟ್ಟನು.

ಮತ್ಸ್ಯೇಂದ್ರನು ಸಂತುಷ್ಟನಾಗಿ ಆತನಂಕುರಿತು_ಸದ್ಗುರುಭಕ್ತನು ನೀನೇ ಸರಿ. ನಿನ್ನ ಮನೋದಾರ್ಢ್ಯಕ್ಕೆ ಮೆಚ್ಚಿದೆನು. ನಿನ್ನಂತಹ ಶಿಷ್ಯನನ್ನು ನಾನು ಎಲ್ಲಿಯೂ ನೋಡಲಿಲ್ಲ. ನೀನು ಧನ್ಯನು_ಎಂದು ಅಭಿನಂದಿಸಿ ಆತನ ಕಣ್ಣುಗಳ ಮೇಲೆ ತನ್ನ ಕೈಯನ್ನಿಡಲು, ಆಕ್ಷಣದಲ್ಲಿ ಆತನಿಗೆ ದಿವ್ಯಚಕ್ಷುಸ್ಸುಗಳುಂಟಾದುವು. ಆತನ ಮಸ್ತಕದಲ್ಲಿ ತನ್ನ ಹಸ್ತವನ್ನಿರಿಸಿ ಆತ್ಮಜ್ಞಾನವನುಪದೇಶಿಸಲು, ಆತನ ಸಂಶಯ ಗ್ರಂಥಿಗಳು ಛಿನ್ನವಾದುವು. ಆತನು ದಿವ್ಯಬೋಧಾಮೃತರಸದಲ್ಲಿ ಮುಳುಗಿ ಪರಮಾನಂದವನ್ನು ತಾಳಿದನು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತೆರಡನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತು ಮೂರನೆಯ ಅಧ್ಯಾಯ.

ಚಾಂಗದೇವನ ಕಥೆ.

ಗಂಗಾತೀರದ ಪುಣ್ಯಸ್ತಂಭವೆಂಬಗ್ರಾಮದಲ್ಲಿ ಮರುದ್ಗಣನೆಂಬ ಬ್ರಾಹ್ಮಣನಿಗೆ ಚಾಂದ್ರದೇವನೆಂಬನು ಪುತ್ರನಾಗವತರಿಸಿದನು. ವೃದ್ಧರಾದ ಆತನ ತಾಯ್ತಂದೆಗಳು ಪುತ್ರಸಂತಾನವಾಗುವುದೂ ಬಹುಸಂತೋಷವಂ ತಾಳಿದರು. ಬಾಲಕನು ತೇಜಸ್ವಿಯಾಗಿ ದಿನದಿನಕ್ಕೆ ಬಳೆದನು. ಆಯಾಕಾಲಗಳಲ್ಲಿ ಉಪನಯನಾದಿಗಳು ಬಳೆದುವು. ಆತನು ಸಕಲವಿದ್ಯಾಪಾರಂಗತನಾದನು. ಯಮನಿಯಮಾದ್ಯಷ್ಟಾಂಗಯೋಗನಿಷ್ಠೆಯುಳ್ಳವನಾಗಿದ್ದನು. ಆತನ ಬಾಯಿಂದ ಹೊರಟ ಆಶೀರ್ವಾದವು ಯಥಾರ್ಥವಾಗಿ ಫಲಿಸುತ್ತಿದ್ದಿತು. ಆತನು ನಡೆಯುವಾಗ ಹೆಜ್ಜೆಯಿಟ್ಟೆಡೆಯಲ್ಲಿ ಸಕಲಸಿದ್ಧಿಗಳೂ ಉಂಟಾಗುತಿದ್ದುವು. ನೂರುವರ್ಷಗಳು ತುಂಬಿದೊಡನೆಯೆ ಮೃತ್ಯುಕಾಲವು ಸಂನಿಹಿತವಾಗಲು, ಯೋಗಮಹಿಮೆಯಿಂದ ಪ್ರಾಣವನ್ನು ಮತ್ತೊಂದೆಡೆ ಇರಿಸಿ ಕಾಲವಂಚನೆಯಂ ಮಾಡಿ ಮತ್ತೆ ದೇಹದಲ್ಲಿ ತರುತ್ತಿರುವನು. ಇಂತು ಅನೇಕಶತವರ್ಷಗಳು ಕಳೆದರೂ ಆತನಿಗೆ ಕಾಲಬಾಧೆ ಹತ್ತಲಿಲ್ಲ. ದೇಹದಲ್ಲಿ ವಾರ್ಧಕವೆಂಬು

ದುಂಟಾಗಲಿಲ್ಲ. ಇದರಿಂದ ಲೋಕದಲ್ಲಿ ಮಾನ್ಯವಾದ ಪ್ರತಿಷ್ಠೆಯುಂಟಾಯಿತು.
ಪಂಡರಪುರದಲ್ಲಿ ನಿತ್ಯವೂ ಕೀರ್ತನರಂಗದಲ್ಲಿ ಕಾಣಿಯುತ್ತಿರುವನು. ಖಾನದೇಶದ ತಪ
ತೀತೀರದೊಳಗಿರುವ ಸ್ವಕೀಯಮಠದಲ್ಲಿ ಇರುತಿರುವನು. 'ಮಾಗಯುಸ್ತಂಭ' ಎಂಬ
ಸ್ಥಳದಲ್ಲಿ ಗೋದಾವರೀತೀರಕ್ಕೆ ನಿತ್ಯದಲ್ಲಿಯೂ ಸ್ನಾನಕ್ಕೆ ಬರುತ್ತಿರುವನು. ಅನೇಕ
ಶಿಷ್ಯಪರಿಗ್ರಹವಂ ಮಾಡಿದನು. ಶಿಷ್ಯರೊತನೆ ಊರ್ಧ್ವಮಾರ್ಗದಿಂದ ಇಷ್ಟವಾದ
ಎಡೆಗಳಿಗೆ ಹೋಗುತ್ತಿರುವನು. ಇಷ್ಟುಸಾಮರ್ಥ್ಯವಿದ್ದರೂ ಚಾಂಗದೇವನು ಸದ್ಗು
ರುವಂ ಸೇವಿಸಲಿಲ್ಲ. ತನ್ನ ಶಿಷ್ಯರಿಗೆ ತಾನು ಜ್ಞಾನೋಪದೇಶವನ್ನು ಮಾಡುತ್ತ ಅವ
ರಿಂದ ಸೇವೆಮಾಡಿಸಿಕೊಳ್ಳುತಿದ್ದನು. ಲೋಕದಲ್ಲಿ ಕೆಲವರು ತಾವು ವಿಧಿವಿರುದ್ಧವಾಗಿ
ನಡೆಯುತಿದ್ದರೂ ಇತರರಿಗೆ ಶಾಸ್ತ್ರವಿಧಿಗಳನ್ನು ಬೋಧಿಸುತ್ತಿರುವರು. ಚಾಂಗ
ದೇವನು ಸಿದ್ಧಿಯ ಸಾಮರ್ಥ್ಯದಿಂದ ಅನೇಕಶಿಷ್ಯರಂ ಸಂಪಾದಿಸಿಕೊಂಡನಲ್ಲದೆ ತಾನು
ಸದ್ಗುರುಸೇವೆಯಂ ಮಾಡಿ ಅದರಿಂದ ಜ್ಞಾನವನ್ನು ಪಡೆಯಲಿಲ್ಲ. ಈ ಮರ್ತ್ಯಲೋಕ
ದಲ್ಲಿ ಹುಡುಕಿದರೂ ನನಗೆ ತಕ್ಕ ಸದ್ಗುರು ಕಾಣುವುದಿಲ್ಲ. ನನ್ನ ಸಾಮರ್ಥ್ಯವು
ಯಾರಿಗೂ ಬರಲಾರದು—ಎಂದು ತಿಳಿದಿದ್ದನು.

ಕೆಲವುಕಾಲ ಕಳೆದಬಳಿಕ ಅಲಕಾಪುರದಲ್ಲಿ ಭಗವದವತಾರಪುರುಷನಾದ ಜ್ಞಾನ
ದೇವನೆಂಬ ಸದ್ಗುರುವಿರುವನೆಂಬ ಸುದ್ದಿಯಂ ಕೇಳಿ ಚಾಂಗದೇವನು ಆತನಂ ಶರಣು
ಹೊಂದಬೇಕೆಂದು ಮನದಲ್ಲಿ ನಿಶ್ಚಯಿಸಿದನು. ಮೊದಲು ಆತನಿಗೆ ಒಂದು ಪತ್ರಿಕೆ
ಯಂ ಬರೆದುಕಳುಹಿಸಿ ಉತ್ತರವಂ ತರಿಸಿಕೊಳ್ಳಬೇಕೆಂದು ಆಲೋಚಿಸಿ, ಮಷಿ
ಯನ್ನೂ ಲೇಖನಿಯನ್ನೂ ಮುಂದಿಟ್ಟುಕೊಂಡು "ತೀರ್ಥರೂಪರೆಂದು ಬರೆಯಲೇ?
ವಯಸ್ಸಿನಲ್ಲಿ ನನಗಿಂತ ಚಿಕ್ಕವರು. ಚಿರಂಜೀವಿಯೆಂದು ಬರೆಯಲೇ? ಮುಂದೆ
ಅವರಿಂದ ಉಪದೇಶವಂ ತೆಗೆದುಕೊಳ್ಳಬೇಕಾಗುವುದು. ಏನು ಬರೆಯಬೇಕು?"
ಎಂದು ಮನದಲ್ಲಿ ವಿಚಾರಮಾಡುತ್ತ ಕಡೆಗೆ ಎರಡೂ ಸರಿಯಿಲ್ಲವೆಂದು ನಿಶ್ಚಯಿಸಿ,
ಬರಿಯ ಪತ್ರಿಕೆಯನ್ನೇ ಮಡಿಸಿ ಶಿಷ್ಯನ ಕೈಯಲ್ಲಿ ಕೊಟ್ಟು ಕಳುಹಿಸಿದನು.

ಇತ್ತ ಅಲಕಾವತಿಯಲ್ಲಿ ಜ್ಞಾನದೇವನು ಶ್ರೀಪಾಂಡುರಂಗಸ್ವಾಮಿಯಂ ಧ್ಯಾನಿಸಿ
ಭಕ್ತಿವಿಶೇಷದಿಂದ ಭಜನೆಯಂ ಮಾಡುತಿರಲು, ಚಾಂಗದೇವನ ಶಿಷ್ಯನು ಕೈಯಲ್ಲಿ
ಪತ್ರಿಕೆಯಂ ತೆಗೆದುಕೊಂಡು ಸಮೀಪಕ್ಕೆಬಂದು ನಮಸ್ಕರಿಸಿ ಆ ಪತ್ರಿಕೆಯಂ ಮುಂದೆ
ಇರಿಸಿದನು.

ಜ್ಞಾನದೇವನು ಅವನನ್ನು ಚಾಂಗದೇವನ ಶಿಷ್ಯನೆಂದು ದೂರದಿಂದಲೇ ತಿಳಿ
ದನು. ತನ್ನ ಮುಂದೆ ಇಟ್ಟ ಪತ್ರಿಕೆಯಂ ಬಿಚ್ಚಿ ನೋಡಿ ಅದರೊಳಗೆ ಅಕ್ಷರಗಳೇ
ಇಲ್ಲದಿರಲು, ಅನೇಕಶತಮಾನಗಳಾದರೂ ಇನ್ನೂ ಚಾಂಗದೇವನು ಶೂನ್ಯನಾಗಿರು
ವನು. ಫಲಪತ್ರದೆಯೇ ಬೆಳೆದ ದಿವ್ಯವೃಕ್ಷದಂತೆಯೂ, ಜಲವಿಲ್ಲದ ಮಹಾಸರೋವರ
ದಂತೆಯೂ, ವೈರಾಗ್ಯವಿಲ್ಲದ ಸಂನ್ಯಾಸಗ್ರಹಣದಂತೆಯೂ, ಔದಾರ್ಯವಿಲ್ಲದ ಮನುಷ್ಯನ

ವೈಭವದಂತೆಯೂ, ಪತಿಯಿಲ್ಲದ ನಾರಿಯ ಅಲಂಕಾರದಂತೆಯೂ, ಭೂತದಯೆಯಿಲ್ಲದವನ ವೇದಾಂತದಂತೆಯೂ, ವೃಷ್ಟಿಯನೀಯದ ಮೇಘದ ಆಡಂಬರದಂತೆಯೂ, ಸದ್ಗುರುಸಮಾಶ್ರಯವಿಲ್ಲದವನ ಆಯುಸ್ಸು ವ್ಯರ್ಥವು. ಅನೇಕಶತಮಾನ ಬದುಕಿ ಏನು ಸಾಧನವಂ ಮಾಡಿದಂತಾಯಿತು–ಎಂದು ಎಣಿಸಿ "ಚೈತನ್ಯವೊಂದೇ ಸರ್ವಭೂತಗಳಲ್ಲಿಯೂ ಇರುವುದು. ಅದು ಹಿರಿದೂ ಅಲ್ಲ; ಕಿರಿದೂ ಅಲ್ಲ. ದೊಡ್ಡದೂ ಅಲ್ಲ; ಸಣ್ಣದೂ ಅಲ್ಲ. ಪರಿವಾರವೂ ಅಲ್ಲ; ನಾಯಕನೂ ಅಲ್ಲ. ದೂರವೂ ಅಲ್ಲ; ಸಮೀಪವೂ ಅಲ್ಲ. ವಿಶಾಲವಾದ ಆಕಾಶದಲ್ಲಿ ಮೇಘವು ತುಂಬಿಕೊಳ್ಳುವಂತೆ, ದೇಹವು ಸ್ಥೂಲವಾದರೂ ಸೂಕ್ಷ್ಮವಾದರೂ ಅದಕ್ಕೆ ಸರಿಯಾಗಿಯೇ ಚೈತನ್ಯವು ವ್ಯಾಪಿಸಿಕೊಂಡಿರುವುದು. ಬ್ರಹ್ಮಾಂಡದಲ್ಲಿ ಏನೇನು ಕಾಣುವುದೋ ಅದೆಲ್ಲವೂ ತನ್ನ ಪಿಂಡಾಂಡದಲ್ಲಿಯೂ ಇರುವುದು. ಆದರೆ ಅದಂ ಮಾಯೆಯು ಕಾಣಲೀಯದು. ಅವಿದ್ಯೆಯಿಂದಲೇ ತನ್ನದು ತನಗೆ ಭ್ರಾಂತಿಕರವಾಗಿರುವುದು. ವಿವೇಕದಿಂದ ಹೃದಯದಲ್ಲಿ ಪೂರ್ವಸ್ಮೃತಿಯಂ ತಂದುಕೊಳ್ಳಬೇಕು. ಯಾವುದು ಜಗತ್ತಿಗೆ ಕಾರಣಭೂತವಾದುದೋ ಆವಸ್ತುವೇ ನಮಗಿರ್ವರಿಗೂ ಸಹಜವಾಗಿರುವುದು. ಚಾಂಗದೇವನೆ! ನೀನು ಇಂತು ತಿಳಿಯತಕ್ಕದು" ಎಂದು ಸ್ವಹಸ್ತದಿಂದಲೇ ಪತ್ರಿಕೆಯಂ ಬರೆದು ಆ ಶಿಷ್ಯನ ಕೈಯಲ್ಲಿಯೇ ಕೊಟ್ಟು ಕಳುಹಿಸಿದನು.

ಅವನು ಆ ಪತ್ರಿಕೆಯಂ ತೆಗೆದುಕೊಂಡು ಹೊರಟು ಚಾಂಗದೇವನ ಸಮೀಪವಂ ಸೇರಿ ಆತನ ಕೈಗೆ ಆ ಪತ್ರಿಕೆಯಂ ಕೊಟ್ಟನು.

ಚಾಂಗದೇವನು ಪತ್ರಿಕೆಯಂ ತೆಗೆದುಕೊಂಡು ಬಿಚ್ಚಿ ಅದರಲ್ಲಿದ್ದ ಅರ್ಥವಂ ಓದಿಕೊಂಡು ಪಶ್ಚಾತ್ತಾಪಯುಕ್ತನಾಗಿ, ಜ್ಞಾನನಿಧಿಯಾದ ಜ್ಞಾನದೇವನ ಸಂದರ್ಶನವಂ ಮಾಡಬೇಕೆಂದು ವ್ಯಾಘ್ರವಂ ಹತ್ತಿಕೊಂಡು ತನ್ನ ಮಹತ್ತ್ವದ ಸಾಮರ್ಥ್ಯವಂ ತೋರುತ್ತ ಅನೇಕಶಿಷ್ಯರೊಡನೆ ಹೊರಟು ಜ್ಞಾನದೇವನಿದ್ದ ಎಡೆಗೆ ಬಂದನು.

ಆ ಸಮಯದಲ್ಲಿ ಒಂದು ಗೋಡೆಯ ಮೇಲೆ ಕುಳಿತಿದ್ದ ಜ್ಞಾನದೇವನು, ಸರ್ವವನ್ನು ಕರದಂಡವನ್ನಾಗಿ ಮಾಡಿಕೊಂಡು ವ್ಯಾಘ್ರಾರೂಢನಾಗಿ ಬರುತಿರುವ ಚಾಂಗದೇವನನ್ನು ದೂರದಿಂದಲೇ ಕಂಡು ತಾನು ಆತನಿಗೆ ಇದಿರಾಗಿ ಹೋಗಬೇಕೆಂದು ಎಣಿಸಿ ಸ್ವಾಧಿಷ್ಠಿತವಾದ ಗೋಡೆಯಂ ಕುರಿತು–ಚಾಂಗದೇವನು ವ್ಯಾಘ್ರಾರೂಢನಾಗಿ ನಮ್ಮ ಬಳಿಗೆ ಬರುತ್ತಿರುವನು; ಆತನನ್ನು ಇದಿರುಗೊಳ್ಳಬೇಕು. ನೀನು ಅಭಿಮುಖವಾಗಿ ನಡೆ–ಎಂದು ಆಜ್ಞಾಪಿಸಿದನು. ಆ ಗೋಡೆಯು ಆಕ್ಷಣದಲ್ಲಿ ನಡೆಗೊಂಡುದು. ಎಲ್ಲರೂ ನೋಡಿ ಆಶ್ಚರ್ಯಗೊಂಡರು.

ಚಾಂಗದೇವನು ಕುಡ್ಯಾರೂಢನಾಗಿ ಇದಿರಿಗೆ ಬರುತಿರುವ ಜ್ಞಾನದೇವನನ್ನು ನೋಡಿ, ನಿರ್ಜೀವವನ್ನು ನಡೆಯಿಸಿಕೊಂಡು ಬರುತಿರುವ ಸದ್ಗುರುಗಳ ಮುಂದೆ ಸಜೀವವಾದ ವ್ಯಾಘ್ರವನ್ನು ಏರಿಹೋಗುವ ನನ್ನ ಮಹಿಮೆಯೇನು?–ಎಂದು

ಥಟ್ಟನೆ ಕೆಳಗಿಳಿದು ನಮಸ್ಕಾರವಮಾಡಿದನು. ಅಮೃತದ ಮುಂದೆ ಔಷಧದ ಶಕ್ತಿ ಯೇಸಿರುವುದು? ಜಾಂಬವತೀಸ್ವಯಂವರದಲ್ಲಿ ಶ್ರೀಕೃಷ್ಣನು ಕರಡಿಯಿಂದ ಪಾಡಿಸಲು, ನಾರದನ ಅಭಿಮಾನವು ಎಂತು ಗಳಿತವಾಯಿತೋ ಅಂತು ಆ ಚಾಂಗದೇವನ ಮನದಲ್ಲಿ ಪೂರ್ಣವಾಗಿದ್ದ ಮದವು ಅಕ್ಷಣ ಗಳಿತವಾಗಿಹೋಯಿತು. ಪೂರ್ವದಲ್ಲಿ ಶ್ರೀಕೃಷ್ಣನ ಶಕ್ತಿಯನ್ನು ಪರೀಕ್ಷಿಸುವುದಕ್ಕೋಸ್ಕರ ಕರುಗಳನ್ನೂ ಗೋಪಾಲಕರನ್ನೂ ಕದ್ದೊಯ್ದು, ಬಳಿಕ ಶ್ರೀಕೃಷ್ಣನಿಂದ ಮತ್ತೆ ಬೇರೆ ನಿರ್ಮಿಸಲ್ಪಟ್ಟ ಕರುಗಳನ್ನೂ ಗೋಪಾಲಕರನ್ನೂ ನೋಡಿ ಲಜ್ಜಿತನಾದ ಬ್ರಹ್ಮನಂತೆ ಆ ಚಾಂಗದೇವನು ಲಜ್ಜಾಕ್ರಾಂತನಾದನು. ಮತ್ತು ಜ್ಞಾನದೇವನು ಗೋಡೆಯನ್ನು ನಡೆಯಿಸಿಕೊಂಡು ಬರುವುದನ್ನು ಕಂಡು ಅತ್ಯಾಶ್ಚರ್ಯಯುಕ್ತನಾಗಿ ಹೃದಯದಲ್ಲಿ ಶ್ರೀಪಾಂಡುರಂಗನನ್ನು ನೆನೆದನು.

ಬಳಿಕ ಅಲ್ಲಿಯೇ ಇದ್ದ ಒಂದು ವಟವೃಕ್ಷದ ಕೆಳಗೆ ಇಬ್ಬರೂ ಸೇರಿ ಮಾತನಾಡಿದರು. ಜ್ಞಾನದೇವನ ಅದ್ಭುತವಾದ ಹಿತೋಕ್ತಿಗಳಿಂದ ಚಾಂಗದೇವನು ಪರಮಾನಂದಭರಿತನಾದನು. ಅವರಿರ್ವರೂ ಸೇರಿದ ಆ ಸ್ಥಳವನ್ನು ಈಗಲೂ ವಿಶ್ರಾಂತಿವಟವೆಂದು ಹೇಳುವರು. ಮನುಷ್ಯನು ಆಸ್ಥಳದಲ್ಲಿ ಕ್ಷಣಮಾತ್ರ ಕುಳಿತುಕೊಳ್ಳಲು, ಕಡೆಯಲ್ಲಿ ಸಾಯುಜ್ಯವಂ ಪಡೆಯುವನು.

ಜ್ಞಾನದೇವನು ಚಾಂಗದೇವನ ಕೈಯಂ ಹಿಡಿದುಕೊಂಡು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋದನು. ಆಗ ಅಲ್ಲಿ ಮುಕ್ತಾಬಾಯಿಯು ಮಿಂಯುತ್ತಿದ್ದಳು. ಚಾಂಗದೇವನು ಅದಂ ತಿಳಿದು ಹಿಂದಿರುಗಿದನು. ಆಕೆ ನೋಡಿ--ಹೇಮೇ! ಗುರುವರ್ಜಿತನೇ!--ಎಂದಳು. ಆ ಮಾತಂ ಕೇಳಿ ಚಾಂಗದೇವನು ಬಳಿಗೆ ಹೋಗಿ ಆಕೆಯ ಪಾದಂಗಳಂ ಪಿಡಿದು-ತಾಯಿ! ನನ್ನ ಸ್ಥಿತಿಯು ನಿನಗೆಂತು ತಿಳಿಯಿತು?-ಎಂದು ಬೆಸಗೊಂಡನು. ಅದಕ್ಕೆ ಆದಿಮಾಯೆಯು-ನೀನು ನನ್ನನ್ನು ನೋಡಿ ಹಿಂದಿರುಗಿದುದರಿಂದ ತಿಳಿಯಿತು. ಸದ್ಗುರುಕೃಪೆಯು ನಿನ್ನಲ್ಲಿ ಉಂಟಾಗಿದ್ದರೆ ಮನಸ್ಸಿನಲ್ಲಿ ವಿಕಾರವು ಹುಟ್ಟುತಿರಲಿಲ್ಲ. ಗೋಡೆಗಳ ಗೂಡುಗಳಂ ಕಂಡಂತೆ ನಿರ್ವಿಕಾರನಾಗಿ ಇರುತಿದ್ದೆ. ಹಸುಗಳು ಬೆತ್ತಲೆಯಾಗಿಯೆ ತಿರುಗುತ್ತಿರುವುವಲ್ಲಾ! ಅವುಗಳಂತೆ-ಎಂದು ನಿನಗೇಕೆ ತೋರಲಿಲ್ಲ?-ಎನಲು, ಆಕೆಯ ಮಾತಂ ಕೇಳಿ ಆತನು ಸಂಕುಚಿತನಾಗಿ ಮತ್ತೆ ಆಕೆಗೆ ಅಭಿವಂದಿಸಿದನು. ಜ್ಞಾನದೇವನನ್ನು ಶರಣುಹೊಕ್ಕು ಆತನಿಂದ ಜ್ಞಾನೋಪದೇಶವಂ ಪಡೆದು ಆತನ ಅನುಗ್ರಹಕ್ಕೆ ಪಾತ್ರನಾದನು. ಜ್ಞಾನದೇವನ ದಿವ್ಯವಾದ ಹಸ್ತವು ತನ್ನ ಮಸ್ತಕದಲ್ಲಿ ಸೋಂಕಿದ ಮಾತ್ರಕ್ಕೆ ದೇಹಮಮತೆಯನ್ನು ಬಿಟ್ಟು ಅತಿವಿರಕ್ತನಾದನು.

ಅಲಕಾವತೀಸ್ಥಾನವು ಉತ್ತಮವಾದುದು. ಪಂಢರಪುರವು ಮರ್ತ್ಯಲೋಕದಲ್ಲಿ ಎರಡನೆಯ ವೈಕುಂಠವೆನಿಸಿರುವುದು. ಜ್ಞಾನದೇವನ ಭಕ್ತಿಗೋಸ್ಕರ ಶ್ರೀ

ರುಕ್ಮಿಣೀಪತಿಯು ಪ್ರತ್ಯಕ್ಷನಾಗಿರುವನು. ಮಹೀಪತಿಯು ಅವನ ಚರಣಗಳನ್ನು ಸರ್ವಕಾಲದಲ್ಲಿಯೂ ಹೃದಯದಲ್ಲಿ ಚಿಂತಿಸುತ್ತಿರುವನು.

ಇಂತು ಶ್ರೀ ಭಕ್ತವಿಜಯದಲ್ಲಿ ಇಪ್ಪತ್ತಮೂರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತನಾಲ್ಕನೆಯ ಅಧ್ಯಾಯ.

ಚೋಖಾಮೇಳನ ಚರಿತ್ರೆ.

ಇಂದು ಶ್ರೋತೃಗಳಿಗೆ ಭಕ್ತಕಥಾಶ್ರವಣದಿಂದ ಭಾಗ್ಯದಶೆಯು ಒದಗಿರುವುದು. ಸಕ್ಕರೆಯನ್ನು ಸೇವಿಸುವುದರಿಂದ ನಾಲಗೆಗೆ ರುಚಿಯು ಎಂತು ಹತ್ತುವುದೋ ಅಂತು ಭಕ್ತಕಥಾರಸವಂ ಸೇವಿಸುವುದರಿಂದ ಹೃದಯಕ್ಕೆ ವಿವೇಕವು ಹತ್ತುವುದು. ಅಮೃತಪಾನದಿಂದ ರೋಗಗಳೆಲ್ಲವೂ ಎಂತು ನಶಿಸಿಹೋಗುವುವೋ ಅಂತು ಸತ್ಕಥಾರಸಾಸ್ವಾದನದಿಂದ ತಮೋರಾಶಿಯೆಲ್ಲವೂ ಧ್ವಂಸವೊಂದುವುದು. ಈ ಭಕ್ತವಿಜಯವೆಂಬ ಕಲ್ಪತರುವು ಸತ್ಕಥಾಮೃತಫಲಗಳಿಂದ ಶೋಭಿಸುತ್ತಿರುವುದು. ಭಾವುಕರಾದ ಶ್ರೋತೃಗಳು ತದ್ರಸಾಸ್ವಾದನದಿಂದ ಧನ್ಯರೆನಿಸುವರು. ಅವರಿಗೆ ಕಲಿಬಾಧೆಯುಂಟಾಗದು. ಆದರಿಂದ ಅವಧಾನವಿತ್ತು ಆಲಿಸಬೇಕು.

ಭಕ್ತರಲ್ಲಿ ಶ್ರೇಷ್ಠನಾದ ಚೋಖಾಮೇಳನೆಂಬವನೊಬ್ಬನಿದ್ದನು. ಅವನು ಶ್ರೀಪಾಂಡುರಂಗನಲ್ಲಿ ಭಕ್ತಿವಿಶೇಷವುಳ್ಳವನಾಗಿದ್ದನು. ಅವನ ಹೃದಯಶುದ್ಧಿಯಂ ನೋಡಿ ಶ್ರೀಪಾಂಡುರಂಗನು ಪ್ರಸನ್ನನಾಗಿರುವನು. ಆ ಚೋಖಾಮೇಳನು ಭೂವೈಕುಂಠವೆನಿಸಿದ ಪಂಢರಪುರದಲ್ಲಿ ಕುಟುಂಬಸಹಿತನಾಗಿ ವಾಸಮಾಡುತ್ತ ಸರ್ವಕಾಲದಲ್ಲಿಯೂ ರುಕ್ಮಿಣೀಪತಿಯಂ ಹೃದಯದಲ್ಲಿ ಧ್ಯಾನಿಸುತ್ತ ತನ್ನಾಮಸಂಕೀರ್ತನೆಯಂ ಮಾಡುತಿದ್ದನು. ನಿತ್ಯವೂ ಭೀಮಾತೀರದಲ್ಲಿ ಸ್ನಾನವಂ ಮಾಡಿ ಮಹಾದ್ವಾರದ ಬಳಿಗೆ ಬಂದು ಅಡ್ಡಬೀಳುತ್ತಿದ್ದನು. ಅವನು ಜಾತಿಯಲ್ಲಿ ಬಹಿಷ್ಕೃತನಾಗಿದ್ದುದರಿಂದ ದೇವಾಲಯದ ಒಳಗೆ ಹೋಗಿ ದರ್ಶನವಂ ಮಾಡುವುದಕ್ಕೆ ಅವನಿಗೆ ಅಧಿಕಾರವಿರಲಿಲ್ಲ. ಆದುದರಿಂದ ದೇವರಿಗೆ ದೂರದಿಂದಲೇ ನಮಸ್ಕಾರಮಾಡುತಿದ್ದನು.

ಬಹುದಿನ ಅವನು ಮಹಾದ್ವಾರದ ಬಳಿಯಲ್ಲಿ ಕುಳಿತಿರಲು, ಕೆಲವರು ಕುತ್ಸಿತರು ಕಂಡು ಶ್ರೀವಿಟ್ಠಲನಿಗೆ ನಿನ್ನಲ್ಲಿ ಪ್ರೀತಿಯಿರುತ್ತಿದ್ದರೆ, ಆಲಯದೊಳಗೇ ಕರೆದು ಕೊಂಡುಹೋಗುತ್ತಿದ್ದನು. ದೇವರಂ ಕಣ್ಣಿಂದ ಕಾಣದೆಯೇ ವ್ಯರ್ಥವಾಗಿ ಏಕೆ ಭಕ್ತಿಯನ್ನು ಮಾಡುವೆ? ಬ್ರಾಹ್ಮಣರ ಮನೆಯಲ್ಲಿ ದೇವರಿಗೆ ನಿವೇದ್ಯವಾದ ಅನ್ನವು ಶ್ವಾನಕ್ಕೆ ಎಂತು ದೊರೆಯಲಾರದೋ ಅಂತು ಶ್ರೀಪಾಂಡುರಂಗನ ಭಕ್ತ್ಯಧಿಕಾರವು ಬಹಿಷ್ಕೃತನಾದವನಿಗೆ ದೊರೆಯಲಾರದಲ್ಲವೆ? ಮಹಾರಾಜನ ವಿಲಾಸಮಂದಿರದ ಪ್ರವೇಶವು ಭಿಕ್ಷುಕನಿಗೆ ಎಂತು ಆಗಲಾರದೋ; ಅಂತು ನಿನಗೆ ದೇವಾಲಯದೊಳಗೆ ಪ್ರವೇಶವಾಗಲಾರದು. ದೇವರು ಒಳಗಿದ್ದರೂ ನಿನಗೆ ದರ್ಶನವಂ ಕೊಡನು-- ಎನಲು, ಅವನು ಅವರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ—ತಾಯ್ತಂದೆಗಳಿರಾ! ನನಗೆ ಇನಿತೊಂದು ಮರ್ಯಾದೆಯೇಕೆ? ಸೂರ್ಯನು ಲಕ್ಷಯೋಜನದ ಮೇಲಿದ್ದರೂ ಕಮಲಗಳನ್ನು ಎಂತು ಉಲ್ಲಾಸಗೊಳಿಸುವನೋ ಅಂತು ಶ್ರೀಪಾಂಡುರಂಗನು ಆಲಯದೊಳಗಿದ್ದರೂ ನನ್ನನ್ನು ರಕ್ಷಿಸುವನು. ಆಮೆಯು ತನ್ನ ಪಿಳ್ಳೆಗಳನ್ನು ದೂರದ ನೋಟದಿಂದಲೇ ಎಂತು ಆಪ್ಯಾಯನಗೊಳಿಸುವುದೋ ಅಂತು ಸ್ವಾಮಿಯು ತನ್ನದಾಸನಾದ ನನ್ನನ್ನು ದೂರದಿಂದಲೇ ಕೃಪಾಪೂರ್ವಕವಾಗಿ ಅವಲೋಕಿಸಿ ಸಂತೋಷಗೊಳಿಸುವನು. ಸರ್ವಕಾಲದಲ್ಲಿಯೂ ಸನ್ನಿಧಿಯಲ್ಲಿಯೇ ಇದ್ದರೂ ದೇವರವಿಷಯದಲ್ಲಿ ಪ್ರೀತಿಯಿಲ್ಲದಿದ್ದರೆ ಆ ಸಮೀಪದ ವಾಸವು ವ್ಯರ್ಥವೇಸರಿ—ಎಂದು ಉತ್ತರವನ್ನು ನುಡಿದು ತನ್ನಮನೆಗೆ ಹೋಗಿ ಹೃದಯದಲ್ಲಿ ರುಕ್ಮಿಣೀಪತಿಯಂ ಧ್ಯಾನಿಸಿ ಪ್ರೇಮಯುಕ್ತನಾಗಿ ಭಜನವಂ ಮಾಡುತ್ತಿದ್ದನು.

ಆಗ ರಾತ್ರಿಯಲ್ಲಿ ಶ್ರೀಪಾಂಡುರಂಗನು ಬಂದು-ಇಂದು ನಿನ್ನಂ ಆಲಯದೊಳಗೆ ಕರೆದುಕೊಂಡು ಹೋಗುವೆನು; ಬಾ—ಎಂದು ಅವನ ಕೈಯಂ ಹಿಡಿದುಕೊಂಡು ಗರ್ಭಗೃಹಕ್ಕೆ ಕರೆದುಕೊಂಡುಹೋಗಿ ಅವನ ಸಂಗಡ ಮಾತನಾಡುತ್ತಿದ್ದನು. ಚೋಖಾಮೇಳನು ಹೃಷೀಕೇಶನ ಪಾದಗಳಿಗೆ ಎರಗಿ-ಸ್ವಾಮಿ! ನೀನು ಅನಾಥನಾಥನು; ಭಕ್ತರ ಮನೋರಥವಂ ಪೂರಯಿಸುವೆ—ಎನುತಿರಲು, ಹೊರಗೆ ಇದ್ದ ಅರ್ಚಕರು ಒಳಗಣ ನುಡಿಗಳಂ ಕೇಳಿ, ಒಳಗೆ ಚೋಖಾಮೇಳನಿರುವನೆಂದು ತಿಳಿದು ವಿಸ್ಮಿತರಾಗಿ ಸಾಕ್ಷ್ಯಕ್ಕೋಸ್ಕರ ಇನ್ನು ಕೆಲವರನ್ನು ಕರೆದು ನಡೆದ ವೃತ್ತಾಂತವಂ ಅವರಿಗೆ ಹೇಳಿ—ಚೋಖಾಮೇಳನು ಒಳಗೆ ದೇವರೊಡನೆ ಮಾತನಾಡುವಂತಿದೆ. ಬಹಿಷ್ಕೃತನು ದೇವರ ಸನ್ನಿಧಿಗೆ ಹೋಗಿರುವನಲ್ಲಾ! ಬಾಗಿಲಿಗೆ ಹಾಕಿದ ಬೀಗವು ಹಾಕಿಯೇ ಇದೆ, ಅವನು ಒಳಗೆ ಎಂತು ಹೋಗಿರುವನೋ ತಿಳಿಯದು. ದೇವರಮೇಲೆ ವಸ್ತ್ರಗಳೂ ಭೂಷಣಗಳೂ ಇರುವುವು. ಅವುಗಳೆಲ್ಲವೂ ಅಶುಚಿಗಳಾದುವು. ಸಾಕ್ಷಾತ್ಪರಬ್ರಹ್ಮಮೂರ್ತಿಯನ್ನು ಮುಟ್ಟಿ ಕಲಗಿಡಿಸಿದನಲ್ಲಾ!! ನಮ್ಮ ಆಚಾರವು ಮುಳುಗಿತು. ಮುಂದೆ ಇದಕ್ಕೆ ಏನಾಲೋಚನೆಯಂ ಮಾಡೋಣ? ಪೂರ್ವಾಚಾರ್ಯರನ್ನು

ರಾಹುವು ಬಂದು ಆಲಿಂಗಿಸಿಕೊಳ್ಳುವಂತೆ ಭಗವಂತನಾದ ಶ್ರೀರುಕ್ಮಿಣೀಪತಿಯನ್ನು ಬಹಿಷ್ಕೃತನು ಮುಟ್ಟಿದನಲ್ಲಾ ! ಈವಿಘ್ನವು ಎಂತು ಪರಿಹಾರವನ್ನೊಂದುವುದು ?-ಎನಲು, ಕೆಲವರು–ಅವನಂ ಕೇಳೋಣ–ಎಂದರು.

ಬಳಿಕ ಬಾಗಿಲಂ ತೆಗೆದು ಚೋಖಾಮೇಳನನ್ನು ಹೊರಗೆ ಕರೆದು–ನೀನು ಆಲಯದೊಳಗೆ ಎಂತು ಪ್ರವೇಶಿಸಿದೆ ?-ಎಂದು ಬೆಸಗೊಂಡರು. ಅವನು ಆವಮಾತಂ ಕೇಳಿ ಹೊರಗೆ ಬಂದು–ನಾನು ನಿಮ್ಮ ಮಗು. ಮೇಘಶ್ಯಾಮನು ಕೈಯಂ ಹಿಡಿದು ನನ್ನನ್ನು ಬಲಾತ್ಕಾರದಿಂದ ಆಲಯಕ್ಕೆ ಕರೆದುತಂದನು. ನನ್ನ ಅನ್ಯಾಯವನ್ನು ನೀವು ಕ್ಷಮಿಸಬೇಕು–ಎಂದು ಬೇಡಿಕೊಂಡನು. ಅರ್ಚಕರು ಅವನಂ ಕುರಿತು–ನೀನು ಪಂಡರಪುರದಲ್ಲಿ ಇದ್ದರೆ ನಿನ್ನಂ ಶ್ರೀರುಕ್ಮಿಣೀಪತಿಯು ಆಲಯಕ್ಕೆ ಕರೆದು ತರುವನು. ಆದುದರಿಂದ ನೀನು ಈಪೂರಲ್ಲಿಯೇ ಇರಕೂಡದು. ನಾಲ್ಕುಹಜ್ಜೆ ದೂರನಾಗಿ ಚಂದ್ರಭಾಗೆಯ ಆಚೆನಡದಲ್ಲಿ ಇರಬೇಕು. ಅಂತು ನೀನು ಮಾಡ ದಿದ್ದರೆ ನಿನ್ನಂ ಶಿಕ್ಷಿಸುವೆವು. ನೀನು ಬಹುವಾದ ಅನ್ಯಾಯವಂ ಮಾಡಿದೆ. ನಮ್ಮಿಂದ ಬಹಿಷ್ಕೃತನಾಗಿರುವ ನೀನು ಒಳಗೆ ಹೋಗಿ ದೇವರನ್ನು ಕೆಡಿಸಿದೆ. ಈ ದೋಷ ದಿಂದ ನೀನು ರೌರವನರಕವಂ ಅನುಭವಿಸಬೇಕಾದೀತು-ಎನಲು, ಚೋಖಾಮೇ ಳನು-ನಾನು ದೇವರಂ ಕುಲಗಿಡಿಸಿದುದು ಸುಳ್ಳು. ಅಂತ್ಯಜನೂ ಬ್ರಾಹ್ಮಣನೂ ಭಾಗೀರಥಿಯಲ್ಲಿ ಸ್ನಾನವಂ ಮಾಡಿದರೆ ಭಾಗೀರಥಿಗೆ ದೋಷವಂ ಕಲ್ಪಿಸಬಾರದು. ಭೂಮಿಯ ಮೇಲೆ ಸಕಲಜಾತಿಯವರೂ ನಡೆಯುವರು ; ಅದರಿಂದ ಭೂಮಿಗೆ ದೋಷವುಂಟೆ ? ಇದು ಯಾವಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ ? ವಾಯುವು ದರಿದ್ರನನ್ನು ಸೋಂಕಲು, ವಾಯುವಿಗೆ ಕೊರತೆಯೇನು ? ಮನದಲ್ಲಿ ಇಂತಹ ವಿಕಲ್ಪವಂ ಮಾಡ ಬಾರದು. ಅಗಸನೊಗೆವ ಬಾವಿಯಲ್ಲಿಯೂ ಮನೆಯ ಘಟದಲ್ಲಿಯೂ ಆಕಾಶವು ಪ್ರತಿಬಿಂಬಿಸಿದರೂ ಆಯೆರಡರಲ್ಲಿಯೂ ಸಿಕ್ಕದೆ ಅಲಿಪ್ತವಾಗಿರುವಂತೆ ದೇವಾದಿದೇವ ನಾದ ಶ್ರೀರುಕ್ಮಿಣೀಪತಿಯು ಸಕಲರಲ್ಲಿಯೂ ಇರುತ್ತ ನಿರ್ಲಿಪ್ತನಾಗಿರುವನು. ಆ ಪರಮಾತ್ಮನಿಗೆ ಸ್ಪೃಷ್ಟಾಸ್ಪೃಷ್ಟದೋಷವು ಎಲ್ಲಿಯದು ? ಆತನು ಅನಂತಬ್ರಹ್ಮಾಂಡ ಗಳಲ್ಲಿಯೂ ವ್ಯಾಪಿಸಿರುವನು. ನೀವು ಇಲ್ಲದ ವಿಕಲ್ಪವನ್ನು ಮನಸ್ಸಿನಲ್ಲಿ ಮಾಡಿ ಕೊಂಡು ಪಾಪಭಾಗಿಗಳಾಗುವಿರಿ–ಎಂದು ನುಡಿದನು.

ಅರ್ಚಕರು ಅವನ ನುಡಿಯಂ ಕೇಳಿ ಕೋಪಗೊಂಡು-ಎಲವೋ ! - ನೀನು ದೋಷದಿಂದ ಬಹಿಷ್ಕೃತನಾದವನು ; ಮಲಿನನು. ಮಿಡಿತೆಯು ತನ್ನ ಜಾಣತನ ದಿಂದ ಗರುಡನಿಗೆ ಹಾರುವುದನ್ನು ಕಲಿಸುವಂತೆಯೂ, ಕುರಿಗಳಂ ಮೇಯಿಸುವನು ಬೃಹಸ್ಪತಿಗೆ ಜ್ಞಾನೋಪದೇಶವಂ ಮಾಡುವಂತೆಯೂ, ಬೇಗಡೆಯು ಚಿನ್ನದಮುಂದೆ ತನ್ನ ಕಾಂತಿಯ ಬೆಡಗಂ ತೋರಿಸುವಂತೆಯೂ, ಶಂಕರನ ಮುಂದೆ ಇತರಗಣಗಳು ಶಾಂತವನಂ ತೋರುವಂತೆಯೂ, ಖದ್ಯೋತಗಳು ಸೂರ್ಯನಮುಂದೆ ತಮ್ಮ ತೇಜಸ್ಸಂ

ಮೆರೆಯುವಂತೆಯೂ, ಸಮುದ್ರವು ಅಗಸ್ತ್ಯನ ಮುಂದೆ ಗರ್ಜಿಸುವಂತೆಯೂ ಬಹಿಷ್ಕೃತನಾದ ನೀನು ಸಕಲನಿಗಮಾಗಮಪಾರಂಗತರಾದ ನಮಗೆ ಜ್ಞಾನೋಪದೇಶವಂ ಮಾಡಿ ನಮ್ಮಮುಂದೆ ನಿನ್ನ ಜಾಣ್ಮೆಯಂ ತೋರಿ ಗರ್ವಪಡುವೆ. ಇನ್ನುಮೇಲೆ ನೀನು ಭೀಮರಥಿಯ ಆಚೆದಡಕ್ಕೆ ಹೋಗಿದ್ದರೆ ಸರಿ; ಇಲ್ಲದಿದ್ದರೆ ನಿಶ್ಚಯವಾಗಿಯೂ ನೀನು ಶಿಕ್ಷೆಗೆ ಗುರಿಯಾಗುವೆ-ಎನಲು, ಅದಕ್ಕೆ ಚೋಖಾಮೇಳನು-ನೀವು ನನ್ನ ತಾಯ್ತಂದೆಗಳು. ನಾನು ನಿಮ್ಮ ಪಾದಸೇವಕನು; ನಿಶ್ಚಯ. ಬಹುದಿವಸದಿಂದ ನನ್ನನ್ನು ಸಂರಕ್ಷಿಸಿದಿರಿ. ಈಗ ದೂರಮಾಡುವಿರಾ?-ಎಂದು ಕಣ್ಣುನಿದುಂಬಿ-ಭಕ್ತವತ್ಸಲನೇ! ಜಗನ್ನಾಥನೆ! ಇಂದಿನಿಂದ ನಿನ್ನ ಚರಣವು ನನಗೆ ದೂರವಾಯಿತೇ? ನನ್ನ ಪ್ರಾರಬ್ಧಕರ್ಮವು ಬಲವತ್ತರವಾಗಿರಲು, ಮಾಡತಕ್ಕದೇನು-ಎಂದು ಸ್ವಾಮಿಯಂ ನೆನೆದು ಹಂಬಲಿಸುತ್ತ ತನ್ನ ಮನೆಗೆ ಬಂದು ಶ್ರೀಹರಿಯನ್ನೇ ಧ್ಯಾನಿಸುತ್ತ ನಾಮಕೀರ್ತನವಂ ಮಾಡುತ್ತ, ಮಡದಿಯಂ ಕುರಿತು-ಪಂಡರೀಶನು ನನ್ನಲ್ಲಿ ಬೇಸರಗೊಂಡನು. ಏನಮಾಡುವುದು? ಇನ್ನುಮೇಲೆ ಆಚೆದಡಕ್ಕೆ ಹೋಗಿರಬೇಕು-ಎಂದು ನಡೆದ ಸಂಗತಿಯೆಲ್ಲವಂ ನುಡಿದು ಆದಿನವೇ ಆಸ್ಥಳವಂ ಬಿಟ್ಟು ಹೊರಟು ಭೀಮರಥಿಯ ಆಚೆದಡದಲ್ಲಿ ದೇವಸ್ಥಾನದ ಇದಿರಿಗೆ ಕುಟೀರವಂ ಕಟ್ಟಿಕೊಂಡು ದೀಪಮಾಲೆಯಂ ಕಟ್ಟಿ ಅಲ್ಲಿಯೇ ಇರುತ್ತ ಹೃದಯದಲ್ಲಿ ನಿರಂತರವೂ ವಿಟ್ಠಲನನ್ನು ಪ್ರೇಮದಿಂದ ಧ್ಯಾನಿಸುತ್ತಿದ್ದನು. ಈಗಲೂ ಪಂಡರಪುರದ ಯಾತ್ರೆಗೆ ಹೋಗುವರೆಲ್ಲರೂ ಆ ದೀಪಮಾಲೆಯನ್ನು ನೋಡುವರು.

ಒಂದುದಿನ ಚೋಖಾಮೇಳನು ಮರದಕೆಳಗೆ ಭೋಜನಕ್ಕೆ ಕುಳಿತುಕೊಂಡಿರಲು, ಶ್ರೀಹರಿಯು ಗೋಪ್ಯನಾಗಿ ಬಂದು ಆತನ ಸಂಗಡ ಭೋಜನಕ್ಕೆ ಕುಳಿತನು. ಆ ಸಮಯದಲ್ಲಿ ಕಾರ್ಯಾಂತರವಶದಿಂದ ಅರ್ಚಕನು ಆ ಮಾರ್ಗದಲ್ಲಿ ಬಂದು ಅಲ್ಲಿ ನಿಂತನು. ಆಗ ಚೋಖಾಮೇಳನ ಹೆಂಡತಿಯು ಮೊಸರಂ ತಂದು ಬಡಿಸಿದಳು. ಹನಿಗಳು ಈಚೆಗೆ ಸಿಡಿದುವು. ಚೋಖಾಮೇಳನು ಹೆಂಡತಿಯನ್ನು ಕುರಿತು-ಎಲೆ! ನೀನು ಅನ್ಯಾಯವಂ ಮಾಡಿದೆ. ಸಂಗಡ ದೇವರು ಭೋಜನಮಾಡುತ್ತಿರುವರು. ನೀನು ಮೊಸರಂ ಬಡಿಸುವುದರಲ್ಲಿ ಹನಿಗಳು ಪೀತಾಂಬರದ ಮೇಲೆ ಸಿಡಿದುವು-ಎಂದನು. ಆಮಾತಂ ಕೇಳಿ ಅರ್ಚಕನು ವಿಸ್ಮಿತನಾದನು. ಚೋಖಾಮೇಳನು ಮರದ ಮೇಲೆ ಇದ್ದ ಕಾಗೆಗಳಂ ನೋಡಿ-ಎಲೆ ಕಾಗೆಗಳಿರಾ! ನೀವು ಕಾಯಿಗಳಂ ಕಚ್ಚಿ ಕೆಳಗೆ ಕೆಡಹುವಿರಿ. ಅವು ದೇವರಿಗೆ ತಾಗುವುವು. ಅದರಿಂದ ನೀವು ಇನ್ನೊಂದು ಮರಕ್ಕೆ ಹೊರಟುಹೋಗಿ-ಎನಲು, ಅರ್ಚಕನು ಆ ಮಾತನ್ನು ಕೇಳಿ ಸಂತಪ್ತನಾಗಿ-ಎಲವೋ ನೀನು ನನ್ನಂ ಕಂಡು ಮನಸ್ಸಿಗೆ ಬಂದಂತೆ ಮಾತನಾಡುವೆ. ಬಹಿಷ್ಕೃತನಾದ ನಿನ್ನ ಸಂಗಡ ದೇವರು ಭೋಜನಮಾಡುವನೆಂದರೇನು? ಇದು ಸುಳ್ಳು-ಎಂದು ಕೋಪದಿಂದ ಬಂದು ಚೋಖಾಮೇಳನಿಗೆ ಎರಡು ಚಪೇಟಿಕೆಯಂ ಕೊಟ್ಟು

ತ್ವರೆಯಿಂದ ನದಿಗೆ ಬಂದು ಸ್ನಾನವಂಮಾಡಿ ಆಹ್ನಿಕವಂ ಮಾಡಿಕೊಂಡು ದೇವಾಲಯವಂ ಪೊಕ್ಕನು. ಅಲ್ಲಿ ಒಳಗೆ ಹೋಗಿನೋಡಲು, ಇಟ್ಟಿಗೆಯ ಮೇಲೆ ನಿಂತಿರುವ ಸ್ವಾಮಿಯ ಪೀತಾಂಬರವೆಲ್ಲವೂ ಮೊಸರ ಹನಿಗಳಿಂದ ತುಂಬಿದ್ದಿತು. ಮುಖವಂ ನೋಡಲು ಕೆನ್ನೆಯು ಬಾತಿದ್ದಿತು. ಎರಡು ಕಣ್ಣುಗಳಲ್ಲಿಯೂ ನೀರು ತುಂಬಿತುಳುಕಾಡುತಿದ್ದಿತು. ಇದೆಲ್ಲವಂ ನೋಡಿ ವಿಸ್ಮಯಗೊಂಡು—ನಾನು ಚೋಖಾಮೇಳನ ಕಪೋಲದಲ್ಲಿ ಹೊಡೆದೆನು. ಆತನನ್ನು ಬೈದೆನು. ಸ್ವಾಮಿಯು ನನಗೆ ಪರೀಕ್ಷೆಯಂ ತೋರಿಸಿದನು. ಬಾಲಕನನ್ನು ಹೊಡೆಯಲು, ತಾಯಿಗೆ ವ್ಯಸನವಾಗುವಂತೆ ಭಕ್ತನನ್ನು ಹೊಡೆಯಲು, ಸ್ವಾಮಿಯು ವ್ಯಸನಗೊಂಡಿರುವನು. ಭಕ್ತವತ್ಸಲನು ಭಕ್ತರ ಮಹಿಮೆಯನ್ನು ಪ್ರಕಾಶಗೊಳಿಸುವನು-ಎಂದು ಬಗೆದು ವಿವೇಕವಂ ತಂದುಕೊಂಡು ಚೋಖಾಮೇಳನ ಬಳಿಗೆ ನಡೆತಂದು ಆತನನ್ನು ಕುರಿತು-ಅಯ್ಯಾ ಭಗವದ್ಭಕ್ತಶಿರೋಮಣಿಯೆ! ನಿನ್ನ ಭಕ್ತಿಯ ಮಹಿಮೆಯನರಿಯದೆ ನಿನ್ನಂ ಭಳಿಸಿದೆನು. ವಜ್ರಾಯುಧವನ್ನು ಚಮ್ಮಟಿಕೆಯಿಂ ಹೊಡೆದು ತಾನು ವ್ಯರ್ಥವಾಗಿ ದಣಿದಂತಾಯಿತು. ನಿನ್ನಂ ಹೊಡೆದುದಕ್ಕೆ ಪಂಢರೀಶನ ಕೆನ್ನೆಯು ಬಾತಿರುವುದು. ಅದಂ ಕಂಡು ನಾನು ಬಹುವಾಗಿ ಭಯಪಟ್ಟು ಬಂದೆನು. ಆದರಿಂದ ಈಗ ನೀನು ದೇವಾಲಯಕ್ಕೆ ಬರಬೇಕು. ಎಂತಾದರೂ ನೀನು ಶ್ರೀವಿಠ್ಠಲನನ್ನು ಸಂತವಿಸಬೇಕು-ಎಂದು ಆತನ ಕೈಯಂ ಹಿಡಿದುಕೊಂಡು ದೇವಸ್ಥಾನಕ್ಕೆ ಬಂದು ದೇವರಂ ಸೇವಿಸುವುದೂ ದೇವರಿಗೆ ಸಮಾಧಾನವಾಯಿತು. ಬಳಿಕ ಸ್ವಾಮಿಯ ಕೆನ್ನೆಯ ಬಾವು ಇಳಿದುಹೋಯಿತು. ಭಕ್ತನ ವಿಯೋಗದಿಂದ ಸಂಕಟಪಡುತ್ತಿದ್ದ ಸ್ವಾಮಿಯ ಮುಖಾರವಿಂದವು ಉಲ್ಲಾಸವನ್ನು ಹೊಂದಿತು. ಅಂದು ಮೊದಲಾಗಿ ಚೋಖಾಮೇಳನು ದೇವಾಲಯಕ್ಕೆ ಬರಲು ತೊಡಗಿದನು. ಎಲ್ಲರೂ ಆತನನ್ನು ಬಹಿಷ್ಕಾರದಿಂದ ಮನ್ನಿಸಿ ಸನ್ಮಾನಿಸುತ್ತ ಬಂದರು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತುನಾಲ್ಕನೆಯ ಅಧ್ಯಾಯಂ ಸಂಪೂರ್ಣಂ.

ಇಪ್ಪತ್ತೈದನೆಯ ಅಧ್ಯಾಯ.

ರಾಮನಾಮಮಹಿಮೆ.

ಕಾಶಿಯಲ್ಲಿ ಒಬ್ಬ ಸಾಧುಕಾರನಿದ್ದನು. ಆತನು ಪರಮಭಾವುಕನು; ಮಹೋದಾರನು. ಆತನಿಗೆ ಐವರು ಪುತ್ರರು. ಸಕಲಸಂಪತ್ಸಮೃದ್ಧಿಯೂ ಉಂಟು.

ಮಡದಿ ಸುಂದರಿ ; ಕುಲೀನೆ ; ಸತೀಶಿರೋಮಣಿ ! ನಂಟರೆಲ್ಲರೂ ಆಪ್ತರಾಗಿರುವರು. ಆತನು ಸರ್ವರಿಗೂ ಮಾನ್ಯನಾಗಿರುತ್ತಿದ್ದನು. ಇಂತಿರಲು, ಪೂರ್ವಕರ್ಮವಶದಿಂದ ಆತನಿಗೆ ಪಾಂಡುರೋಗವು ಪ್ರಾಪ್ತವಾಯಿತು. ಸರ್ವಾಂಗಗಳಲ್ಲಿಯೂ ಕ್ರಿಮಿಗಳು ಬಿದ್ದುವು. ಮನೆಯಲ್ಲಿ ಸಕಲಸಂಪತ್ತು, ಶರೀರದಲ್ಲಿ ಆರೋಗ್ಯ, ಉತ್ತಮರಾದ ಪುತ್ರರು, ಸತಿಯಾದ ಮಡದಿ, ಸರ್ವಭೂತಗಳಲ್ಲಿಯೂ ದಯೆ, ಸರ್ವಶಾಸ್ತ್ರಜ್ಞತೆ, ಉತ್ತಮವರ್ಣವು, ನಿರಹಂಕಾರತೆ, ಪರರಲ್ಲಿ ದೋಷಗಳನೆಣಿಸದೆ ಇರುವಿಕೆ-ಇಂತಿವುಗಳೆಲ್ಲವೂ ಉಳ್ಳವನು ದುರ್ಲಭ. ಇವುಗಳಲ್ಲಿ ಅನೇಕವೊಬ್ಬನಲ್ಲಿದ್ದರೂ ಏನಾದರೂ ಒಂದು ಕೊರತೆಯಿದ್ದೇಇರುವುದು.

ಆ ಸಾಹುಕಾರನು ಯಾರನ್ನೂ ಉಪಮರ್ದನೆಮಾಡದೆ ರಾಜನನ್ನೂ ಭಿಕ್ಷುಕನನ್ನೂ ಸಮತೆಯಿಂದ ಎಣಿಸುತ್ತ ಪರೋಪಕಾರದಲ್ಲಿಯೇ ನಿರತನಾಗಿ ಸಾಧುಗಳನ್ನು ಸೇವಿಸುತ್ತ ಮಹಾಗುಣಾಢ್ಯನೆನಿಸಿಕೊಂಡಿದ್ದರೂ ಪ್ರಬಲವಾದ ರೋಗದಿಂದ ಹಗಲೂ ಇರುಳೂ ಮನದಲ್ಲಿ ಕೊರಗುತ್ತಿದ್ದನು. ಬರುತಬರುತ ಆತನ ಶರೀರವು ಜರ್ಜರಿತವಾಯಿತು. ಅವಯವಗಳಲ್ಲಿ ಕ್ರಿಮಿಗಳು ಹೆಚ್ಚಿದುವು. ದುರ್ಗಂಧವು ಹುಟ್ಟಿತು. ಸರ್ವರೂ ಬೇಸರಗೊಂಡರು. ಆತನಕಡೆ ಯಾರೂ ನೋಡರು. ಹುಟ್ಟಿದಂದಿನಿಂದ ಯಾರನ್ನು ಸಾಕಿದ್ದನೋ ಅಂತ್ಯಕಾಲದಲ್ಲಿ ಅವರೆಲ್ಲರೂ ಉಪೇಕ್ಷಿಸಿದರು.

ವೈದ್ಯರು ಬಂದುನೋಡಿ "ಇದು ದಾರುಣವಾದ ರೋಗವು" ಎಂದು ನಾನಾವಿಧವಾದ ಔಷಧಗಳಂ ಕೊಡುವರು. ಅವರೂ ಶ್ರೀನಿವಾಸನ ದಯೆಯಿಲ್ಲದುದರಿಂದ ಅದೆಲ್ಲವೂ ಇನ್ನೂ ಅಪಾಯಕ್ಕೆ ಕಾರಣವಾಯಿತು. ಜೋಯಿಸರು "ಗ್ರಹಗಳು ಕ್ರೂರವಾಗಿವೆ ; ಆದುದರಿಂದ ನವಗ್ರಹಜಪವಂ ಮಾಡಬೇಕು" ಎಂದರು. ಕೆಲವರು "ಗೊಂದಲವಂ ಹಾಕಬೇಕು" ಎಂದರು. ಏನೇನಂ ಮಾಡಿದರೂ ಅಪಾಯವೇ ಉಂಟಾಗುವುದು. ಶ್ರೀಹರಿಯ ಪಾದಾರವಿಂದವಂ ನೆನೆಯದಿರಲು, ಅಮೃತವು ವಿಷವೇ ಆಗುವುದು. ಕೆಲವರು ಬ್ರಾಹ್ಮಣರು ಮನೆಗೆ ಬಂದು "ಮಲ್ಲಹಾರಿಮಂತ್ರಜಪವಂ ಮಾಡಬೇಕು" ಎಂದರು. ಕೆಲವರು "ದಾನವಂ ಮಾಡಬೇಕು" ಎಂದರು. ಕೆಲವರು "ಸಪ್ತಶತೀಪಾರಾಯಣವಂ ಮಾಡಲು, ಭಗವತಿಯು ಆರೋಗ್ಯವಂ ಮಾಡುವಳು" ಎಂದರು. ಕೆಲವರು "ಸೂರ್ಯನಮಸ್ಕಾರವಂ ಮಾಡಿಸಬೇಕು" ಎಂದರು. ಕೆಲವರು "ಗಾಯತ್ರೀಪುರಶ್ಚರಣೆಯಂ ಮಾಡಬೇಕು" ಎಂದರು. ಕೆಲವರು ವಿಶ್ವೇಶ್ವರನಿಗೆ ರುದ್ರಾಭಿಷೇಕವಂ ಮಾಡಬೇಕೆಂದೂ, ಕೆಲವರು ಹರೇಶ್ವರನಿಗೆ ಪ್ರದಕ್ಷಿಣೆಯಂ ಮಾಡಿಸಬೇಕೆಂದೂ, ಕೆಲವರು ಶ್ರೀಮಹಾಗಣಪತಿಯು ಪ್ರಸನ್ನನಾಗುವುದಕ್ಕೋಸ್ಕರ ಸಂಕಷ್ಟಹರಚತುರ್ಥೀವ್ರತವಂ ಮಾಡಿ ಆಸ್ವಾಮಿಗೆ ಮೋದಕಂಗಳಂ ಸಮರ್ಪಿಸಬೇಕೆಂದೂ, ಕೆಲವರು ಪಂಚಾಕ್ಷರೀಜಪವಂ ಮಾಡಬೇಕೆಂದೂ, ಕೆಲವರು ಕಾಲಭೈರವೋಪಾಸಕರಂ ಕರೆದುತರಬೇಕೆಂದೂ,

ಕೆಲವರು ಗಜದಾನವಂ ಮಾಡಬೇಕೆಂದೂ, ಕೆಲವರು ತುಲಾಭಾರದಾನವಂ ಮಾಡ ಬೇಕೆಂದೂ ಹೇಳಿದರು.

ಇಂತು ಯಾರುಯಾರು ಏನೇನಂ ಹೇಳುವರೋ ಅದನೆಲ್ಲವನ್ನೂ ಆ ಸಾಧು ಕಾರನ ಮಕ್ಕಳು ಬಹುದ್ರವ್ಯವಂ ವ್ಯಯಮಾಡಿ ನೆರವೇರಿಸಿದರು. ಆರೋಗ್ಯವಾ ಗುವುದಕ್ಕೋಸ್ಕರ ವಿವಿಧೋಪಾಯಗಳನ್ನು ಮಾಡಿದರೂ ಯಾವುದೂ ಸಫಲವಾಗಲಿಲ್ಲ. ಸಾಧುಕಾರನು ದಿನದಿನಕ್ಕೆ ದುರ್ದಶೆಗೊಳಗಾದನು. ಸಂಕಟಪಟ್ಟು, ಭಾಗೀರಥಿ ಯಲ್ಲಿ ದೇಹವನ್ನು ಸಮರ್ಪಿಸಬೇಕೆಂದು ಸಿಶ್ಚಯಿಸಿ ಮಡದಿಮಕ್ಕಳಂ ಕರೆದು— ನೀವು ನನ್ನ ಆರೋಗ್ಯಕ್ಕೋಸ್ಕರ ನಾನಾವಿಧೋಪಾಯಗಳಂ ಮಾಡಿದಿರಿ. ನನ್ನ ಕರ್ಮವು ವಿಪರೀತವಾದುದರಿಂದ ನಿಮ್ಮ ಶ್ರಮವು ಸಾರ್ಥಕವಾಗಲಿಲ್ಲ. ಈಗ ದೇಹಾಂತ ಪ್ರಾಯಶ್ಚಿತ್ತವು ಮಾಡತಕ್ಕದು; ನನ್ನ ದೇಹವಂ ಭಾಗೀರಥಿಯಲ್ಲಿ ಹಾಕಿಬಿಡಿ— ಎನಲು, ಅವರು ಮೋಹದಿಂದ ವ್ಯಸನಪಟ್ಟು, ಬಳಿಕ ಸಾಧುಕಾರನನ್ನು ಎತ್ತಿ ಕೊಂಡು ಗಂಗಾತೀರಕ್ಕೆ ಹೋದರು.

ಸಾಧುಕಾರನು ವ್ಯಥೆಯನ್ನು ತಡೆಯಲಾರದೆ ಪ್ರಾಣವಂ ಬಿಡುವನೆಂದು ನೋಡುವುದಕ್ಕೆ ಅನೇಕಜನರು ಅಲ್ಲಿ ಬಂದು ಕೂಡಿದರು. ಅಲ್ಲಿ ಗಂಗಾತೀರದಲ್ಲಿ ಕೂಡಿದ ಜನಗಳಲ್ಲಿ ಕೆಲವರು—ಈತನು ಆತ್ಮಹತ್ಯೆಯಂ ಮಾಡಿಕೊಳ್ಳಬಾರದು— ಎಂದರು. ಕೆಲವರು-ಮಡದಿಮಕ್ಕಳು ಬೇಸರಗೊಂಡರೆ? ಅಯ್ಯೋ!—ಎಂದರು. ಇಂತು ಅನೇಕರು ಅನೇಕವಿಧವಾಗಿ ಮಾತನಾಡುತ್ತ ಕಡೆಗೆ ತಮ್ಮ ಗತಿಯೂ ಇಂತಹುದೇ ಸರಿ. ಇನ್ನುಮೇಲಾದರೂ ವಿವೇಕವಂ ತಂದುಕೊಂಡು ಶ್ರೀಹರಿಯ ಭಜನೆಯಂ ಮಾಡಬೇಕು—ಎಂದರು.

ಸಾಧುಕಾರನು, ಜನಗಳು ಆಡುವ ಬಗೆಬಗೆಯ ಮಾತುಗಳನ್ನು ಕೇಳಿ ಅನು ತಾಪಗೊಳ್ಳುತ್ತ—ನನ್ನಂ ಬೇಗನೆ ಗಂಗೆಯಲ್ಲಿ ಹಾಕಿಬಿಡಿ. ವ್ಯಥೆಯಂ ಸಹಿಸಲಾ ಗದು—ಎಂದನು. ಆಗ ಆ ಮಾತು ಸರ್ವರಿಗೂ ವಿಂತವಾಗಿಯೇ ತೋರಿತು. ಗಂಗೆಗೆ ಹಾಕುವುದಕ್ಕೋಸ್ಕರ ನಾಲ್ಕು ಕುಂಭಗಳನ್ನು ತಂದು ಕೈಕಾಲುಗಳಿಗೆ ಕಟ್ಟಿದರು.

ಅಷ್ಟರಲ್ಲಿ ಪದ್ಮನಾಭನೆಂಬ ಒಬ್ಬ ಬ್ರಾಹ್ಮಣನು ಅಲ್ಲಿಗೆ ಸ್ನಾನಕ್ಕೆ ಬಂದನು. ಆತನು ಭಾಗವತೋತ್ತಮನು. ಕೈಯಲ್ಲಿ ವೀಣೆಯನ್ನು ನುಡಿಯಿಸುತ್ತ ಸದ್ಭಾವ ದಿಂದ ಭಗವನ್ನಾಮಸಂಕೀರ್ತನೆಯಂ ಮಾಡುತಿದ್ದನು. ಆತನು ಅಲ್ಲಿ ಕೂಡಿದ ಜನಗಳನ್ನು ನೋಡಿ—ಇದೇನೆಂದು ವಿಚಾರವಮಾಡಿದನು. ಅವರು ವೃತ್ತಾಂತವೆಲ್ಲವಂ ಹೇಳಿದರು. ಅದಂ ಕೇಳಿ ಪದ್ಮನಾಭನು ಸಾಧುಕಾರನ ಬಳಿಗೆ ಬಂದು—ಅಯ್ಯಾ! ಚತುರಶೀತಿಲಕ್ಷಯೋನಿಗಳಲ್ಲಿ ಹುಟ್ಟಿಹುಟ್ಟಿ ಆಕಸ್ಮಿಕವಾಗಿ ನರದೇಹವಂ ಪಡೆದಿರು ವಾಗ ಇಲ್ಲಿಯೂ ಆತ್ಮಹತ್ಯೆಯಂ ಮಾಡಿಕೊಂಡರೆ ಕಲ್ಪಾಂತದಲ್ಲಿಯೂ ಮುಕ್ತಿ ಯುಂಟಾಗಲಾರದು. ಆದುದರಿಂದ ಪ್ರಾಣವನ್ನು ನೀಗಬೇಡ. ಈ ಕರ್ಮಭೂಮಿ

ಯಲ್ಲಿ ಮನುಷ್ಯಜನ್ಮವು ದುರ್ಲಭವು. ಶ್ರೀಹರಿಭಜನೆಯಂ ಮಾಡಬೇಕು; ಅದರಿಂದ ಜನನಮರಣಗಳು ಬಿಡಿಸಿಹೋಗುವುವು. ಇದು ಸತ್ಯವೆಂದುತಿಳಿ—ಎನಲು, ಆಸಾಧುಕಾರನು ಆತನಂ ಕುರಿತು--ಆರೋಗ್ಯವಾಗಬೇಕೆಂದು ನಾನಾವಿಧೋಪಾಯಗಳಂ ಮಾಡಿದೆನು. ದುಷ್ಕರ್ಮವು ಪ್ರಬಲವಾದುದರಿಂದ ಯಾವುದೂ ಅನುಕೂಲಿಸಲಿಲ್ಲ. ಸರ್ವಾಂಗಗಳಲ್ಲಿಯೂ ಕ್ರಿಮಿಗಳು ಬಿದ್ದಿರುವುವು. ದುರ್ಗಂಧವೂ ಹುಟ್ಟಿರುವುದು. ಆಪ್ತರು ಯಾರೂ ಬಳಿಯಲ್ಲಿ ಸೇರರು. ಎಲ್ಲರೂ ಅಸಹ್ಯತೆಗೊಳ್ಳುವರು. ಇನ್ನೇನು ಮಾಡತಕ್ಕದು?-ಎಂದನು.

ಪದ್ಮನಾಭನು—ಎಲ್ಲವೂ ಆಯಿತು. ಇನ್ನೊಂದುಪಾಯವು ಉಳಿದಿರುವುದು:— ಮೂರಾವೃತ್ತಿ "ರಾಮ" ಎಂದು ನಾಮಸಂಕೀರ್ತನೆಯಂ ಮಾಡಲು ಸರ್ವವ್ಯಥೆಯೂ ದೂರವಾಗಿ ಹೋಗುವುದು.

ಶ್ಲೋ॥ ಅಚ್ಯುತಾನನ್ತಗೋವಿಂದನಾಮೋಚ್ಚಾರಣಭೇಷಜಾತ್ ।
ನಶ್ಯಂತಿ ಸಕಲಾ ರೋಗಾಸ್ಸತ್ಯಂಸತ್ಯಂ ವದಾಮ್ಯಹಂ ॥

ಎಂಬುದನ್ನು ದೃಢವಾಗಿ ತಿಳಿ. ವೇದಶಾಸ್ತ್ರಪುರಾಣಶ್ರವಣವನ್ನೂ ಜಪತಪೋನುಷ್ಠಾನಂಗಳನ್ನೂ ಮಾಡಿದರೂ ಹರಿನಾಮವು ಜಿಹ್ವೆಗೆ ಬಾರದಿದ್ದರೆ ಅವೆಲ್ಲವೂ ವ್ಯರ್ಥವಾಗಿಹೋಗುವುವು. ಬಹುತೀರ್ಥಯಾತ್ರೆಗಳಂ ಮಾಡಿದರೂ, ಸಕಲವ್ರತಗಳನ್ನಾಚರಿಸಿದರೂ, ಅನೇಕದೇವತೋಪಾಸನೆಯಂ ಮಾಡಿದರೂ, ಮಹಾಯಜ್ಞಗಳಂ ಮಾಡಿದರೂ, ಯೋಗಾಸನದಲ್ಲಿ ಕುಳಿತು ಪ್ರಾಣಾಯಾಮಂಗಳಂ ಮಾಡಿದರೂ, ಹರಿನಾಮವನುಚ್ಚರಿಸದಿದ್ದರೆ ಅದೆಲ್ಲವೂ ವ್ಯರ್ಥವೇಸರಿ. ಕರ್ಮಾರಂಭದಲ್ಲಿ ಕೇಶವನಾರಾಯಣಸ್ಮರಣೆಯನ್ನೂ ಕರ್ಮಾಂತರದಲ್ಲಿ ವಿಷ್ಣುಸ್ಮರಣೆಯನ್ನೂ ಮಾಡಲು ಕರ್ಮಗಳು ಸಂಪೂರ್ಣವಾಗುವುವು. ಆದುದರಿಂದ ನೀನು ಸದ್ಭಾವಗೊಂಡು ಮೂರಾವೃತ್ತಿ ಭಗವನ್ನಾಮವನ್ನುಚ್ಚರಿಸು. ನಿನ್ನ ವ್ಯಥೆಯೆಲ್ಲವೂ ಈಕ್ಷಣದಲ್ಲಿಯೇ ಪರಿಹಾರವೊಂದುವುದು—ಎಂದು ನುಡಿಯಲು, ಅಲ್ಲಿ ಕೂಡಿದ್ದ ಜನರೆಲ್ಲರೂ ಕಬೀರಶಿಷ್ಯನಾದ ಆ ಭಾಗವತನ ಮಾತಂ ಕೇಳಿ ತಾವೂ ಭಗವನ್ನಾಮಕೀರ್ತನವಂ ಮಾಡಿದರು. ಮೂರಾವೃತ್ತಿ "ರಾಮ" ಎಂದುಚ್ಚಾರಣೆಯಾಗಲು ನಾಮಘೋಷವು ಅತಿಶಯಿತವಾಯಿತು. ಸಾಧುಕಾರನು ಸದ್ಭಾವದಿಂದ ಮೂರಾವೃತ್ತಿ "ರಾಮ" ಎಂದು ಭಗವನ್ನಾಮಸಂಕೀರ್ತನವಂ ಮಾಡಿದನು. ಅದರಿಂದ ಆತನ ಶರೀರವು ಆಕ್ಷಣದಲ್ಲಿ ರೋಗನಿರ್ಮುಕ್ತವಾಗಿ ಕಳೆಗೂಡಿತು.

ಆಗ ಇಂತಹ ಆಶ್ಚರ್ಯವು ನಡೆದುದು. ಭಗವದ್ಭಕ್ತರ ಮಹಿಮೆ ದೊಡ್ಡದು. ದೇವತೆಗಳಿಗೂ ತಿಳಿಯಲಸಾಧ್ಯ, ಅಲ್ಲಿ ನೋಡುವುದಕ್ಕೆ ಬಂದಿದ್ದವರೆಲ್ಲರೂ ಸದ್ಭಾವದಿಂ ಭಗವನ್ನಾಮಸ್ಮರಣೆಯಂ ಮಾಡಿದುದರಿಂದ ಅವರವರ ಸಂಕಟವೆಲ್ಲವೂ ನಿರಾಸ

ವುಳ್ಳುದಾಯಿತು. ಆವುದಾವರೂ ಬಾದು ರೋಗವಿಲ್ಲದವರು ಇಲ್ಲ. ಒಬ್ಬನಿಗೆ ಶೀತಜ್ವರ, ಒಬ್ಬನಿಗೆ ಪಿತ್ತಜ್ವರ, ಒಬ್ಬನಿಗೆ ಕ್ಷಯ, ಒಬ್ಬನಿಗೆ ಕಿವಿಯಶೂಲೆ, ಒಬ್ಬನಿಗೆ ದವಡೆಯ ಶೂಲೆ, ಒಬ್ಬನಿಗೆ ಹೊಟ್ಟೆಯಶೂಲೆ, ಒಬ್ಬನಿಗೆ ಮೊಳಕಾಲಸೇದು, ಒಬ್ಬನಿಗೆ ಕಜ್ಜಿ, ಒಬ್ಬನಿಗೆ ಹುಳುಕಡ್ಡಿ, ಕೆಲವರಿಗೆ ತೊನ್ನು. ಕೆಲವರಿಗೆ ಉಬ್ಬಸ, ಕೆಲವರಿಗೆ ನಾಲ್ಕರ ಚಳಿ, ಕೆಲವರಿಗೆ ಕೆಮ್ಮುನೆಗಡಿ, ಕೆಲವರಿಗೆ ಮೂಲವ್ಯಾಧಿ. ಕೆಲವರಿಗೆ ಭೂತಬಾಧೆ, ಇಂತು ಅನೇಕರಿಗೆ ಇದ್ದ ಅನೇಕರೋಗಗಳು ಭಗವನ್ನಾಮಾಮೃತ ದಿವ್ಯೌಷಧದ ಪ್ರಭಾವದಿಂದ ಆಕ್ಷಣದಲ್ಲಿ ಧ್ವಂಸವೊಂದಿದುವು. ಎಲ್ಲರೂ ಆರೋಗ ದೃಢಗಾತ್ರರಾದರು.

ಸಾಧುಕಾರನೂ ಆಕ್ಷಣದಲ್ಲಿ ಎದ್ದು ಪದ್ಮನಾಭನಿಗೆ ನಮಸ್ಕಾರವಂ ಮಾಡಿ— ಅಯ್ಯಾ ಮಹನೀಯನೆ! ಸಂಕಟವುಂಟಾದ ಕಾಲಗಳಲ್ಲಿ ಎಷ್ಟೋ ಆವೃತ್ತಿ ನಾನು ಭಗವನ್ನಾಮಕೀರ್ತನವಂ ಮಾಡಿರುವೆನು. ಆದರೂ ಆನಾಮದಲ್ಲಿ ಇಂತಹ ದಾರ್ಢ್ಯವಿರಲಿಲ್ಲ. ಭಾಗವತಶಿರೋಮಣಿಯಾದ ನಿನ್ನಸಂಗತಿಯಿಂದ ಭಗವನ್ನಾಮಕೀರ್ತನದಲ್ಲಿ ಅಸಾಧಾರಣವಾದ ಮನೋದಾರ್ಢ್ಯವುಂಟಾಗಲು, ನನ್ನ ಸಂಕಟವೆಲ್ಲವೂ ಪರಿಹಾರವನ್ನು ಹೊಂದಿತು. ನೀನು ಮಹಾಭಾಗವತನು; ವಿಶ್ವೋದ್ಧಾರಕನಾಗಿ ಪುಟ್ಟಿರುವೆ—ಎಂದು ಅಭಿನಂದಿಸಿದನು. ವಾರಾಣಸಿಯ ಜನರೆಲ್ಲರೂ ಪದ್ಮನಾಭನಿಗೆ ವಂದಿಸಿ ಅಹೋರಾತ್ರಿಗಳಲ್ಲಿಯೂ ಶ್ರೀರಾಮಭಜನೆಯಂ ಮಾಡುವರಾದರು. ಪದ್ಮನಾಭನು ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿಯೂ ವಾರಾಣಸಿಯನ್ನು ರಾಮನಾಮಮಯವನ್ನಾಗಿ ಮಾಡಿದನು.

"ನಿಮ್ಮ ಸಂಪ್ರದಾಯಿಯಾದ ಪದ್ಮನಾಭನು ಮೂರಾವೃತ್ತಿ ರಾಮನಾಮೋಚ್ಚಾರಣವಂ ಮಾಡಿಸಿ ಆರ್ತರಾದ ಜನರಂ ಸುಖಿಗಳನ್ನಾಗಿ ಮಾಡಿದನು. ಈ ವಿಸ್ಮಯವಂ ಮರ್ತ್ಯಲೋಕದಲ್ಲಿ ಯಾರೂ ತೋರಿಸಲಿಲ್ಲ" ಎಂದು ಜನಮುಖದಿಂದ ನಡೆದ ವೃತ್ತಾಂತವಂ ಕೇಳಿ ಕಬೀರನು ಪದ್ಮನಾಭನನ್ನು ಕರೆಯಿಸಿ-ರಾಮ ಎಂಬ ಎರಡಕ್ಷರದಿಂದಲೆ ಸಕಲಾಭೀಷ್ಟಗಳೂ ಸಿದ್ಧಿಸುತಿರುವಾಗ ಆನಾಮವನ್ನು ಮೂರಾವೃತ್ತಿ ಹೇಳಿಸಬೇಕಾಯಿತೇ? ಆನಾಮದ ಮಹಿಮೆಯಂ ನೀನು ತಿಳಿದವನಲ್ಲ. ಅದರ ಮಹಿಮೆಯು ಅಪಾರವಾದುದು; ಕೇಳು:—ಪೂರ್ವದಲ್ಲಿ ಮಹಾಪಾತಕಿಯಾದ "ವಾಲ್ಯಾ" ಎಂಬ ವ್ಯಾಧನು ನಾರದನಿಂದ ಉಪದಿಷ್ಟನಾಗಿ ರಾಮನಾಮವಂ ಜಪಿಸಿ ವಾಲ್ಮೀಕಿಯಾದನು. ಆತನು ಶ್ರೀರಾಮಾವತಾರವಾಗುವುದಕ್ಕೆ ಪೂರ್ವದಲ್ಲಿಯೇ ಶತಕೋಟಿಗ್ರಂಥವಿಸ್ತರವುಳ್ಳ ರಾಮಾಯಣವನ್ನು ತನ್ನ ಬುದ್ಧಿಯಿಂದಲೇ ನಿರ್ಮಿಸಿ ಬರೆದನು. ಅದನ್ನು ಕೈಲಾಸಪತಿಯಾದ ಪರಮೇಶ್ವರನು ತಾನು ಓದಿ ಬಳಿಕ ಆ ಶತಕೋಟಿಗ್ರಂಥಗಳನ್ನು ಹಂಚಿದನು:—ಸ್ವರ್ಗಮರ್ತ್ಯಪಾತಾಳಲೋಕಗಳಲ್ಲಿ ಒಂದು ಭಾಗಕ್ಕೆ ಮೂವತ್ತುಮೂರುಕೋಟಿಯ ಪ್ರಕಾರ ಮೂರುಭಾಗಗಳನ್ನು ಮಾಡಲು,

ಒಂದುಕೋಟಿ ನಿಂತಿತು. ಅದನ್ನು ಮತ್ತೆ ಸ್ವರ್ಗಮರ್ತ್ಯಪಾತಾಳಗಳಲ್ಲಿ ಮೂವತ್ತು ಮೂರುಲಕ್ಷದ ಪ್ರಕಾರ ಭಾಗಿಸಲು, ಒಂದು ಲಕ್ಷವು ನಿಂತಿತು. ಅದನ್ನೂ ಮತ್ತೆ ಲೋಕತ್ರಯಕ್ಕೆ ಮೂವತ್ತುಮೂರುಸಾಸಿರದಂತೆ ಹಂಚಿಕೊಡಲು, ಒಂದು ಸಾಸಿರ ವುಳಿದುದು. ಅದನ್ನೂ ಮತ್ತೆ ಮುನ್ನೂರು ಗ್ರಂಥದಪ್ರಕಾರ ಮೂರುಭಾಗಗಳಂ ಮಾಡಿದನು. ಅದನ್ನೂ ಮೂವತ್ತುಮೂರರಪ್ರಕಾರ ಮೂರುಲೋಕಗಳಿಗೂ ಭಾಗ ಮಾಡಿಕೊಡಲು, ಒಂದು ಶ್ಲೋಕವು ನಿಂತಿತು. ಅದಕ್ಕೆ ಮೂವತ್ತೆರಡು ಅಕ್ಷರಗಳು ಇದ್ದುವು. ಅವುಗಳನ್ನು ಅದೇರೀತಿಯಲ್ಲಿ ಮೂರುಲೋಕಗಳಿಗೂ ಹತ್ತುಹತ್ತಕ್ಷರ ಗಳ ಪ್ರಕಾರ ಹಂಚಲು, ನಿಂತ ಎರಡಕ್ಷರಗಳನ್ನು ತನ್ನ ಬಳಿಯಲ್ಲಿಯೇ ಇರಿಸಿ ಕೊಂಡನು.

ಶ್ರೀಹರಿಯು ಕೂರ್ಮಾವತಾರವನ್ನು ವಹಿಸಿದಾಗ ಸಮುದ್ರಮಥನದಲ್ಲಿ ಮಹಾ ದಾರುಣವಾದ ವಿಷವು ಹುಟ್ಟಿ ಮೂರುಲೋಕಗಳನ್ನೂ ಸುಡುತಬಂದುದು. ದೇವತೆಗ ಳೆಲ್ಲರೂ ಹೆದರಿದರು. ಪರಮೇಶ್ವರನು ತನ್ನಲ್ಲಿ ಇದ್ದ "ರಾಮ" ಎಂಬ ಎರಡಕ್ಷರ ಗಳನ್ನು ಜಪಿಸುತ್ತ ಆ ವಿಷವನ್ನು ಸೇವಿಸಿ ಲೋಕಗಳನ್ನು ಕಾಪಾಡಿದನು.

ಇಂತಿರಲು ಈ ನಾಮವನ್ನು ನೀನು ಮೂರಾವೃತ್ತಿ ಏಕೆ ಹೇಳಿಸಿದೆ—?ಎನಲು, ಪದ್ಮನಾಭನು ಸಂತೋಷಗೊಂಡು ಕಬೀರನಿಗೆ ಅಭಿವಂದಿಸಿದನು.

ಎಲೈ ಶ್ರೋತೃಗಳಿರಾ! ಇನ್ನೊಂದು ಕಥೆಯು ಬಹುಸುರಸವಾಗಿರುವುದು. ಆದರದಿಂದ ಆಲಿಸಿ.

ಕಬೀರನು ಸರ್ವಕಾಲದಲ್ಲಿಯೂ ವಿರಕ್ತಮನಸ್ಕನಾಗಿದ್ದನು. ಘಟದ ಜಲ ದಲ್ಲಿ ಪ್ರತಿಬಿಂಬಿಸಿದ ಸೂರ್ಯನು ಎಂತು ಅಲ್ಲಿ ಲಿಪ್ತನಲ್ಲವೋ; ಕಮಲಪತ್ರವು ಜಲ ದಲ್ಲೇ ಇದ್ದರೂ ಅದು ಎಂತು ನನೆಯದೆ ಇರುವುದೋ, ದರ್ಪಣದಲ್ಲಿ ಕಂಡ ಮುಖವು ಅದರಲ್ಲಿ ಎಂತು ಸಿಕ್ಕದೋ ಅದೇರೀತಿಯಲ್ಲಿ ಕಬೀರನು ಸಂಸಾರದಲ್ಲಿದ್ದರೂ ಅದರಲ್ಲಿ ಸಿಕ್ಕದೆ ಉದಾಸೀನನಾಗಿ, ಸದ್ಭಾವದಿಂದ ನಿರಂತರವೂ ಭಜನವಂ ಮಾಡುತ್ತಿದ್ದನು. ಒಂದುದಿನ ಅನೇಕಸಹಸ್ರಭಾಗವತರು ಊರ್ಧ್ವಪುಂಡ್ರಗಳಿಂದಲೂ ತುಲಸೀಮಾಲೆ ಗಳಿಂದಲೂ ಅಲಂಕೃತರಾಗಿ ಪ್ರೇಮದಿಂ ಭಗವದ್ಭಜನವಂ ಮಾಡುತ್ತ ಕಾಶೀಪಟ್ಟ ಣಕ್ಕೆ ಬಂದು ಊರ ಜನರಂ ಕುರಿತು, ಈ ಪಟ್ಟಣದಲ್ಲಿ ನಮಗೆ ಭೋಜನಸಾ ಹಿತ್ಯವಂ ಕೊಟ್ಟು ಸತ್ಕರಿಸುವ ವೈಷ್ಣವಶಿರೋಮಣಿ ಯಾವನಿರುವನು ?-ಎಂದು ಕೇಳಲು, ಅವರು ಈವೂರಲ್ಲಿ ಕಬೀರನೆಂಬ ಧನವಂತನು ಎಷ್ಟುಸಾಸಿರಜನಗಳು ಬಂದರೂ ತೃಪ್ತಿಗೊಳಿಸಲು ಶಕ್ತನಾಗಿರುವನು—ಎಂದು ಉತ್ತರವಂ ಹೇಳಿದರು.

ಮನೆಯಲ್ಲಿ ಧನಧಾನ್ಯಗಳು ಇದ್ದರೂ ಯಾರು ಕ್ಷುಧಿತರಾದವರಿಗೆ ಭೋಜ ನವಂ ಮಾಡಿಸದೆ ಪರರ ಮನೆಯಂ ತೋರಿಸಿ ಕಳುಹುವರೋ ಅವರನ್ನು ದರಿದ್ರ ರೆಂದೇ ತಿಳಿಯಬೇಕು. ಮಹಾಸೌಧದಿಂದಲಂಕೃತವಾದ ಭವನವನ್ನು ಕಟ್ಟಿಕೊಂಡು

ಪಥಿಕರಾಗಿ ಬಂದವರಿಗೆ ಯಾರು ಸ್ಥಳವಂ ಕುಡದಿರುವರೋ ಅವರ ಭವನವು ಭವನವಲ್ಲ. ಯಾರು ತಮ್ಮಲ್ಲಿ ಕವಿತ್ವಸ್ಫೂರ್ತಿಯಿದ್ದರೂ ಭಗವದ್ಗುಣಂಗಳಂ ವರ್ಣಿಸದೆ ಮನಸ್ಸುಬಂದಂತೆ ದುರ್ವಿಷಯಂಗಳಂ ಬಣ್ಣಿಸುವರೋ ಅವರ ವಾಕ್ಕನ್ನು ನೀಚವೆಂದು ತಿಳಿಯಬೇಕು. ತನ್ನ ಶರೀರದಲ್ಲಿ ಶಕ್ತಿಯಿದ್ದರೂ ಯಾವನು ಪರೋಪಕಾರವನ್ನು ಎಂದಿಗೂ ಮಾಡನೋ ಅವನು ಸರ್ವಪ್ರಕಾರದಲ್ಲಿಯೂ ಮನುಷ್ಯನಲ್ಲ. ಅವನಂ ಊರಹಂದಿಯೆನ್ನಬೇಕು. ಅದಂತಿರಲಿ. ಆ ವಿರಾಗಿಗಳು ಅನ್ನವಂ ಅಪೇಕ್ಷಿಸಲು, ಲುಬ್ಧರಾದ ಆಜನರು ತಮ್ಮಮೇಲಣ ಅರಿಷ್ಟವಂ ಕಳೆದುಕೊಂಡು ಕಬೀರನ ಮನೆಯಂ ತೋರಿಸಿದರು. ಬಳಿಕ ಆವಿರಕ್ತರು ಕಬೀರನ ಮನೆಯಂ ಕುರಿತು ಹೋಗಿ ಬಾಗಿಲ ಬಳಿಯಲ್ಲಿ "ಶ್ರೀಸೀತಾರಾಮ" ಎಂದು ಭಗವನ್ನಾಮಕೀರ್ತನೆಯಂ ಮಾಡಿದರು. ಆ ಶಬ್ದವಂ ಕೇಳುವುದೂ ಕಬೀರನು ಹೊರಗೆ ಬಂದು ಸದ್ಭಾವದಿಂದ ನಮಸ್ಕಾರಮಾಡಿ ಯೋಗಕ್ಷೇಮವಂ ವಿಚಾರಿಸಿದನು.

ಅವರು ಆತನಂ ಕುರಿತು—ನಾವು ಇಷ್ಟುಮಂದಿಗಳೂ ತೀರ್ಥಯಾತ್ರೆಯಂ ಮಾಡುತ್ತ ಈವೂರಿಗೆ ಬಂದೆವು. ಇಲ್ಲಿಯ ಜನರು ನಿನ್ನನ್ನು ಅನ್ನದಾತೃವೆಂದು ಹೇಳಿದರು. ಆ ಮಾತಂ ಕೇಳಿ ಸಂತೋಷದಿಂದ ನಿನ್ನಲ್ಲಿಗೆ ಬಂದಿರುವೆವು. ನೀನು ಇಂದು ನಮಗೆಲ್ಲರಿಗೂ ಭೋಜನಸಾಮಗ್ರಿಗಳನ್ನು ಕೊಟ್ಟು ಸತ್ಕರಿಸಬೇಕು-ಎಂದು ನುಡಿದರು.

ಕಬೀರನು—ಅವಶ್ಯವಾಗಲಿ. ಮಹನೀಯರಾದ ನಿಮ್ಮ ಸಂದರ್ಶನದಿಂದ ಧನ್ಯನಾದೆನು—ಎಂದು ಹೇಳಿ ಅವರೆಲ್ಲರನ್ನೂ ಉಚಿತವಾದೊಂದು ವಿಶಾಲಸ್ಥಳದಲ್ಲಿ ಇಳಿಯಿಸಿ ಅಂಗಡಿಬೀದಿಗೆ ಹೋಗಿ ತುಳಸೀದಾಸನೆಂಬ ವರ್ತಕನ ಅಂಗಡಿಯನ್ನು ಸೇರಿ—ಅಯ್ಯಾ ವರ್ತಕನೆ! ಇಂದು ಅನೇಕಸಾಧುಗಳು ಬಂದಿಳಿದಿರುವರು. ಅವರು ಕ್ಷುಧಿತರಾಗಿರುವರು. ದಯೆಯಿಟ್ಟು ಅವರಿಗೆ ಭೋಜನಸಾಮಗ್ರಿಗಳನ್ನು ಕೊಡಬೇಕು—ಎಂದು ಬೆಸಗೊಳ್ಳಲು, ಆ ವರ್ತಕನು ಉನ್ಮತ್ತನಾದುದರಿಂದ—ನಿನ್ನ ಮಡದಿಯನ್ನು ಇಂದು ರಾತ್ರಿಯಲ್ಲಿ ನನ್ನಭೋಗಕ್ಕೆ ಕಳುಹಿಸುವುದಾದರೆ, ಬಂದಿರುವ ಸಾಧುಗಳೆಲ್ಲರಿಗೂ ಆಗುವಷ್ಟು ಭೋಜನಸಾಮಗ್ರಿಗಳನ್ನು ಕೊಡುವೆನು—ಎಂದು ಉತ್ತರವನ್ನು ಹೇಳಿದನು.

ಕಬೀರನು ಮನದಲ್ಲಿ ವಿಕಲ್ಪಗೊಳ್ಳದೆ ದೈವನ್ಯಸ್ತಭರನಾಗಿ ಆ ವರ್ತಕನ ಮಾತಿಗೆ ಅಂಗೀಕಾರಗೊಂಡನು. ಕಾಮಾತುರನಾದ ಆ ವರ್ತಕನು ಸಂತೋಷಗೊಂಡು ಕಬೀರನಿಗೆ ಸಕಲಸಾಹಿತ್ಯಗಳನ್ನೂ ಕೊಟ್ಟು ಕಳುಹಿಸಿದನು.

ಕಬೀರನು ಬಂದಿದ್ದ ಸಾಧುಗಳಿಗೆ ಆ ಭೋಜನಸಾಮಗ್ರಿಗಳನ್ನು ಸಮರ್ಪಿಸಿ ತೃಪ್ತಿಗೊಳಿಸಿದನು. ರಾತ್ರಿಯಾಗುವುದೂ ಏಕಾಂತದಲ್ಲಿ ತನ್ನ ಮಡದಿಯನ್ನು ಕರೆದು-ಸಾಧುಜನಗಳ ಕಾರ್ಯಕ್ಕೋಸ್ಕರ ಇಂದು ರಾತ್ರಿ ತುಳಸೀದಾಸನೆಂಬವನಿಗೆ

ನಿನ್ನನ್ನು ವರಿಸಿರುವೆನು. ನೀನು ಮನದಲ್ಲಿ ಸಂಕೋಚವಂ ಹೊಂದದೆ ಅವನ ಇಚ್ಛೆಯಂ ಪೂರ್ಣಮಾಡಬೇಕು-ಎನಲು, ಆ ಸತೀಮಣಿಯು ಪತಿಯ ವಚನವಂ ಕೇಳಿ-ಅವಶ್ಯವಾಗಲಿ-ಎಂದು ಅಂಗೀಕರಿಸಿದಳು. ಬಳಿಕ ಕಬೀರನು ಆಕೆಯನ್ನು ಕರೆದುಕೊಂಡು ಆ ವರ್ತಕನ ಮನೆಗೆ ಹೋದನು. ಆ ವರ್ತಕನು ಘುಮಘುಮಿಸುವ ಚಂದನವನ್ನೂ ಮಗಮಗಿಸುವ ಪುಷ್ಪಹಾರವನ್ನೂ ಮಿರುಮಿರುಗುವ ವಸ್ತ್ರವನ್ನೂ ಥಳಥಳಿಸುವ ಅಲಂಕಾರಗಳನ್ನೂ ಸಿದ್ಧಪಡಿಸಿಕೊಂಡು ರಮಣೀಯಪರ್ಯಂಕವನೇರಿ ಕಾಮಾತುರನಾಗಿ ಕಬೀರನ ಮಡದಿಯ ಆಗಮನವನ್ನು ನಿರೀಕ್ಷಿಸುತಿದ್ದನು.

ಕಬೀರನು, ಲಾವಣ್ಯದಗಣಿಯೂ ಸುಗುಣತರಂಗಿಣಿಯೂ ಆದ ತನ್ನಮಡದಿಯನ್ನು ಆ ತುಳಸೀದಾಸನ ಬಳಿಯಲ್ಲಿ ಬಿಟ್ಟು—ನೀನು ಈತನ ಮನಸ್ಸನ್ನು ಸಂತೋಷಪಡಿಸು—ಎಂದು ಆಕೆಗೆ ಹೇಳಿ ಹೊರಟುಹೋದನು.

ಕಬೀರನ ಮಡದಿಯು ಪತಿಯ ಆಜ್ಞೆಯನ್ನು ಸಿರದಿಂದ ವಹಿಸಿ ಆ ವರ್ತಕನನ್ನು ಕುರಿತು-ನಿನ್ನ ಉಪಕಾರವು ಹೇಳಲಸದಳವು. ಅನೇಕಸಾಧುಮಹಾಜನಗಳನ್ನು ತೃಪ್ತಿಗೊಳಿಸಿದೆ. ಈಗ ನಿನ್ನವಿಷಯಾಸಕ್ತಿಯೇನಿರುವುದೋ ಅದನ್ನು ಪೂರಣಮಾಡಿಕೊಳ್ಳುವುದು-ಎಂದು ಹೇಳಿ ತಾನು ಸದ್ಭಾವದಿಂದ ಶ್ರೀರಾಮಭಜನೆಯಂ ಮಾಡುತ ಒಂದೆಡೆಯಲ್ಲಿ ಕುಳಿತಳು.

ಆಗ ವರ್ತಕನು ಕಾಮಬಾಣಪೀಡಿತನಾಗಿ ಮನದಲ್ಲಿ ಮಹೋಲ್ಲಾಸಗೊಂಡು ಇಂದು ಸುದಿನವೆಂದು ಬಗೆದು ದೀಪವಂ ಕಂಡು ಪತಂಗವು ಭ್ರಾಂತಿಯಿಂದ ಮೇಲೆ ಬೀಳುವಂತೆ ಆಕೆಯನ್ನು ಆಲಿಂಗಿಸಿಕೊಳ್ಳುವುದಕ್ಕೆ ಬಳಿಗೆ ಬಂದನು.

ಆ ಸಮಯದಲ್ಲಿ ಶ್ರೀರಘುನಂದನನು ಆಪುರ ರಾಜಭಟಾಧ್ಯಕ್ಷನ ರೂಪವಂ ಧರಿಸಿ ಕೈಗಳಲ್ಲಿ ಧನುರ್ಬಾಣಗಳಂ ಪಿಡಿದು ಕೋಪದಿಂದ ಕಣ್ಣುಗಳನ್ನು ಕೆಚ್ಚನೆ ಮಾಡಿಕೊಂಡು—ಎಲವೋ! ಏನು ಅಕಾರ್ಯವಂ ಮಾಡಲು ತೊಡಗಿರುವೆ? ಛೀ ದುಷ್ಟನೆ! ಪಾಪಿಯೆ! ಧನುಸ್ಸಿನಲ್ಲಿ ಬಾಣವಂಹೂಡಿ ಈಗಲೇ ನಿನ್ನನ್ನು ಸಂಹರಿಸುವೆನು—ಎನಲು, ವರ್ತಕನು ನೋಡಿ ಗಡಗಡನೆ ನಡುಗಿ—ಅಯ್ಯಾ ಮಹನೀಯನೆ! ನಾನು ತಪ್ಪನ್ನು ಮಾಡಿದೆನು. ದಯೆಯಿಟ್ಟು ಕ್ಷಮಿಸಬೇಕು. ನನ್ನ ಮಾನವನ್ನು ನೀನು ಕಾಪಾಡಬೇಕು. ನೀನು ಎಷ್ಟುಧನವನ್ನು ಅಪೇಕ್ಷಿಸುವೆಯೋ ಅಷ್ಟುಧನವನ್ನು ಈಗಲೇ ಸಮರ್ಪಿಸುವೆನು-ಎಂದು ನುಡಿಯುತ್ತ ಆತನ ಪಾದಂಗಳಂ ಪಿಡಿದನು. ಆಗ ರತಿಪತಿಯು ಲಜ್ಜಿತನಾದನು. ವರ್ತಕನ ವಿಷಯಾಸಕ್ತಿಯು ಅಲ್ಲಿಯೇ ಅಡಗಿತು. ಪ್ರಬಲವಾದ ವಾಯುವು ಬೀಸಲು, ಮೇಘವೃಂದವು ಎಂತು ಚೆದರಿಹೋಗುವುದೋ ಅಂತು ಆರಾಜಭಟಾಧ್ಯಕ್ಷನು ದೃಗ್ಗೋಚರನಾಗಲು ಆ ವರ್ತಕನ ಕಾಮವು ಆಕ್ಷಣದಲ್ಲಿ ನಶಿಸಿಹೋಯಿತು. ಕಳ್ಳನನ್ನು ವಸ್ತುವಿನೊಡನೆ ಹಿಡಿಯಲು, ಅವನು ಲಜ್ಜಿತನಾಗಿ ಮಾತನಾಡದೆ ಎಂತು ನಿಲ್ಲುವನೋ ಅಂತು ಆ ರಾಜಭಟಾಧ್ಯಕ್ಷನನ್ನು ಕಂಡು

ತುಳಸೀದಾಸನು ಯಾವಮಾತನ್ನೂ ಆಡಲಾರದೆ ದಿಗ್ಭ್ರಾಂತನಾಗಿ ಯಾವ ಉಪಾಯವನ್ನೂ ಕಾಣದೆ ಸ್ತಬ್ಧನಾಗಿ ನಿಂತನು.

ರಾಜಭಟಾಧ್ಯಕ್ಷನು ಆಗ ಕೋಪದಿಂದ ಗದರಿಗರ್ಜಿಸಿ–ಎಲವೋ! ಈಕಬೀರನ ಮಡದಿಯು ನನ್ನ ತಂಗಿ. ಈಕೆಗೆ ನಮಸ್ಕಾರವನ್ನುಮಾಡು-ಎನಲು, ವರ್ತಕನು ಭಯದಿಂದ ನಡುಗುತ್ತ-ತಾಯೆ! ನಾನು ಅನುಚಿತವನೆಸಗಿದೆನು. ನನ್ನ ಅಪರಾಧವನ್ನು ಕ್ಷಮಿಸು–ಎಂದು ಆಕೆಗೆ ನಮಸ್ಕಾರವನ್ನು ಮಾಡಿದನು.

ರಾಜಭಟಾಧ್ಯಕ್ಷನು ವರ್ತಕನಂ ಕುರಿತು–ಎಲವೋ ನೀಚನೆ! ಇನ್ನುಮೇಲೆ ಜಾಗರೂಕನಾಗಿರು. ಇಂತು ಧನಮದದಿಂದ ಮನಸ್ಸಿಗೆ ತೋರಿದಂತೆ ದುರಾಚಾರವನ್ನು ನಡೆಯಿಸಿದರೆ ನಿನ್ನನ್ನು ಧ್ವಂಸಮಾಡುವೆನು–ಎಂದು ನುಡಿದು-ಆಕೆಯನ್ನು ಕುರಿತು-ಅಮ್ಮಾ! ನಿನ್ನಮನೆಗೆ ನೀನು ನಡೆ-ಎಂದು ಆಕೆಯನ್ನು ಕರೆದುಕೊಂಡು ಹೋಗಿ ಆಕೆಯ ಮನೆಯನ್ನು ಸೇರಿಸಿ ತಾನು ಅದೃಶ್ಯನಾದನು.

ಆಗ ಕಬೀರನು ಮನೆಗೆ ಬಂದ ಮಡದಿಯನ್ನು ಕಂಡು-ಇದೇನು? ನೀನು ಇಷ್ಟುಬೇಗದಿಂ ಬಂದೆ? ಕಾರಣವೇನು? ನಾನು ವರ್ತಕನಿಗೆ ವಾಗ್ದಾನವಂ ಮಾಡಿದ್ದೆನಲ್ಲಾ! ನನ್ನ ಸತ್ತ್ವಕ್ಕೆ ನೀನು ಹಾನಿಯುಂ ತಂದೆಯಲ್ಲಾ?–ಎನಲು, ಆಕೆ ಪತಿಯಮಾತಂ ಕೇಳಿ,–ನನ್ನಿಂದ ತಪ್ಪೇನೂ ಇಲ್ಲ; ಈವೂರ ರಾಜಭಟಾಧ್ಯಕ್ಷನು ಅಲ್ಲಿಗೆ ಬಂದು ವರ್ತಕನನ್ನು ದಂಡಿಸಿ ನನ್ನಂ ಮನೆಗೆ ಕರೆದುಕೊಂಡುಬಂದು ಬಿಟ್ಟನು–ಎಂದಳು. ಕಬೀರನು ಮಡದಿಯ ನುಡಿಯಂ ಕೇಳಿ ಕೋಪಗೊಂಡು ಆ ವೂರ ರಾಜಭಟಾಧ್ಯಕ್ಷನ ಮನೆಗೆ ಹೋದನು.

ಅವನು ಮನೆಗೆ ಬಂದ ಕಬೀರನನ್ನು ನೋಡಿ ಸಂಭ್ರಮದಿಂದ ಎದ್ದು ಅಭಿವಂದಿಸಿ–ನನ್ನ ಮನೆಗೆ ಈಹೊತ್ತಿನಲ್ಲಿ ಅದೇನುಕಾರಣ ದಯೆಮಾಡಿದಿರಿ–ಎಂದು ಬೆಸಗೊಳಲು, ಕಬೀರನು-ಈವೂರಲ್ಲಿರುವ ತುಳಸೀದಾಸನೆಂಬ ವರ್ತಕನಿಗೆ ಈರಾತ್ರಿ ನನ್ನ ಮಡದಿಯನ್ನು ಮಾರಿ ಅವನಿಂದ ಸಾಧುಗಳ ಸತ್ಕಾರಕ್ಕೋಸ್ಕರ ಭೋಜನ ಸಾಮಗ್ರಿಗಳಂ ತಂದಿದ್ದೆನು. ನೀನು ಈಗ ಅವನಮನೆಗೆ ಹೋಗಿ ಅವನನ್ನು ಏಕೆ ದಂಡಿಸಿದೆ? ಇದು ನಿನಗೆ ಯುಕ್ತವಲ್ಲ. ಭೂಮಿಯನ್ನು ದಾನಮಾಡುವುದಕ್ಕೆ ಭೂಪತಿಯು ಅಧಿಕಾರಿ. 'ಮಗಳನ್ನು ವರನಿಗೆ ಕೊಡುವುದಕ್ಕೆ ತಂದೆಯು ಅಧಿಕಾರಿ. ಸ್ತ್ರೀಗೆ ಪತಿಯಲ್ಲದೆ ಮತ್ತಾವನೂ ಅಧಿಕಾರಿಯಲ್ಲ. ಇಂತಿರಲು' ದುರ್ಬುದ್ಧಿಯಾದ ನೀನು ಏಕಾಂತಸಂಧಿಯನ್ನು ತಿಳಿದು ಆ ವರ್ತಕನ ಮನೆಗೆ ಹೋಗಲು ಕಾರಣವೇನು? ನನ್ನ ಸತ್ತ್ವವು ನಿನ್ನಿಂದ ಲೋಪಿಸುವಂತಾಯಿತು–ಎಂದನು.

ಅವನು ಕಬೀರನ ಪಾದಂಗಳಂ ಪಿಡಿದು-ನನಗೆ ಆವಸುದ್ದಿಯೂ ತಿಳಿಯದು. ನಾನು ಆ ವರ್ತಕನನ್ನು ಕಂಡಿದ್ದರೆ ನನ್ನ ಕಣ್ಣುಗಳು ಇಂಗಿಹೋಗಲಿ. ನೀವು ಸಾಧುಗಳು; ಮಹನೀಯರು; ಭಾಗವತಶಿರೋಮಣಿಗಳು. ನಿಮ್ಮೊಡನೆ ನಾನು

ಅಸತ್ಯವಚನವನ್ನು ನುಡಿದರೆ ನನಗೆ ಮಹಾರೌರವನರಕಯಾತನೆಯುಂಟಾಗಲಿ– ಎನಲು, ಕಬೀರನು ಅವನ ಮಾತಂ ಕೇಳಿ ಮನದಲ್ಲಿ ವಿಸ್ಮಯಗೊಂಡು-ಇದು ಶ್ರೀರಾಮನ ವ್ಯಾಪಾರವೇಸರಿ. ಭಕ್ತವತ್ಸಲನಾದ ಭಗವಂತನು ಸರ್ವಕಾಲದಲ್ಲಿಯೂ ತನ್ನ ದಾಸರನ್ನು ಕರುಣದಿಂದ ರಕ್ಷಿಸುವನು–ಎಂದು ಬಗೆದು ಅಲ್ಲಿಂದ ಹೊರಟು ತುಳಸೀದಾಸನ ಮನೆಯಂ ಸೇರಿ ಅವನಂ ಕಂಡು–ಅಯ್ಯಾ ವರ್ತಕನೆ! ನೀನು ಧನ್ಯನು. ಶ್ರೀರಘುನಂದನನು ರಾಜಭಟಾಧ್ಯಕ್ಷನ ರೂಪದಿಂದ ಬಂದು ನಿನಗೆ ಸಂದರ್ಶನವಂ ಕೊಟ್ಟನು. ಮಹಾಯೋಗಿಗಳು ನಾನಾವಿಧಸಾಧನಂಗಳಂ ಮಾಡುವರು; ಅವರ ಕಣ್ಣಿಗೆ ಕಾಣಿಸಿಕೊಳ್ಳನು. ಅಂತಹ ಮಹಾನುಭಾವನು ಅನಾಯಾಸದಿಂದ ನಿನಗೆ ಸಂದರ್ಶನವಿತ್ತನು. ನಿನ್ನ ಭಾಗ್ಯಕ್ಕೆ ಪಾರವಿಲ್ಲ–ಎನಲು, ತುಳಸೀದಾಸನು– ಮಹನೀಯನೆ! ಆತನು ಶ್ರೀರಾಮಚಂದ್ರನೇ? ನನಗೆ ತಿಳಿಯಲಿಲ್ಲ. ಅಂತು ಆತನು ಸ್ವಾಮಿಯೇ ಆಗಿದ್ದರೆ ಆತನ ಸಂದರ್ಶನವು ನಿನ್ನ ಸಂಗತಿಯಿಂದ ನನಗಾದುದು. ನಾನು ಮತ್ತೊಂದು ಸ್ಥಳದಲ್ಲಿ ಇಂತಹ ಅನುಚಿತಕಾರ್ಯವಂ ನಡೆಯಿಸಿದ್ದರೆ ಮಹಾರೌರವಕ್ಕೆ ಗುರಿಯಾಗುತಿದ್ದೆನು. ನಿನ್ನ ಮಹಿಮೆಯಿಂದ ನಾನು ಚೇತರಿಸಿಕೊಂಡೆನು. ಬೆನ್ನಿಗೆ ಪಾಷಾಣವನ್ನು ಕಟ್ಟಿಕೊಂಡು ಸಮುದ್ರವನ್ನು ಈಜಿದಂತಾಯಿತು. ದಾರುಣವಾದ ಅಕಾರ್ಯವನ್ನು ಮಾಡಿ ಮಹಾನುಭಾವನಾದ ನಿನ್ನ ಸಂಗತಿಯಿಂದ ಪಾಪವನ್ನು ಕಳೆದುಕೊಂಡೆನಲ್ಲಾ–ಎಂದು ಪಶ್ಚಾತ್ತಾಪಯುಕ್ತನಾಗಿ ಅಂದಿನಿಂದ ಶ್ರೀರಾಮಭಜನೆಯಲ್ಲಿ ನಿರತನಾದನು.

ಕಬೀರನು ತನ್ನ ಮನೆಗೆ ಬಂದನು. ಸುಂದರಿಯೂ ಕುಲೀನೆಯೂ ಆದ ಮಡದಿಯಿಂದಲೂ, ಗುಣವಂತನಾದ ಪುತ್ರನಿಂದಲೂ ಕೂಡಿ ಸಂಸಾರದಲ್ಲಿದ್ದರೂ ವಿಷಯಾಸಕ್ತಿಗೊಳಗಾಗದೆ ಅತ್ಯಂತವಿರಕ್ತನಾಗಿ ಸರ್ವಕಾಲದಲ್ಲಿಯೂ ಶ್ರೀರಾಮನಂ ಹೃದಯದಲ್ಲಿ ಧ್ಯಾನಿಸುತ್ತ ಆತನ ಭಜನೆಯಲ್ಲಿ ವ್ಯಾಪೃತನಾಗಿದ್ದನು.

ಎಲೈ ಶ್ರೋತೃಗಳಿರಾ! ಸಂತರ ಚರಿತ್ರೆಯು ರಸಾಲವಾದುದು. ಇದೇ ವಿವೇಕರತ್ನದ ಗಣಿಯು. ಇದರ ಧಾರಣದಿಂದ ಕರ್ಣಗಳು ಶೋಭಿಸುವುವು. ಸಾಧುಗಳ ಚರಿತ್ರೆಯೆಂಬುವುದೇ ಭೀಮರಥಿ. ನಾನಾದೃಷ್ಟಾಂತಂಗಳೇ ತರಂಗಗಳು. ಮಹೀಪತಿಯು ಅನುತಾಪವುಳ್ಳವನಾಗಿ ಅಲ್ಲಿ ಸುಸ್ನಾತನಾಗಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತೈದನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತಾರನೆಯ ಅಧ್ಯಾಯ.

ಪಿಪಾಜಿರಾಯನ ಕಥೆ.

ಶ್ರೋತೃಗಳು ಸಾವಧಾನಮನಸ್ಕರಾಗಿ ಆಲಿಸಬೇಕು. ಸಂತರ ಚರಿತ್ರೆಯನ್ನು ಆಲಿಸಲು ಸಕಲದೋಷಂಗಳೂ ಪರಿಹಾರವೊಂದುವುವು.

ಉತ್ತಮವಾದ ಗಂಗವಂಶದಲ್ಲಿ ಪಿಪಾಜಿಯೆಂಬ ರಾಜನಿದ್ದನು. ಆತನು ಪರಮಭಾವುಕನು. ಆತನ ಮನೆಯಲ್ಲಿ ಧರ್ಮದೇವತೆ ಸರ್ವಕಾಲದಲ್ಲಿಯೂ ವಾಸ ಮಾಡುತ್ತಿರುವಳು. ಸಾಧುಗಳು ತನ್ನ ಮನೆಯಂ ಕುರಿತು ಬರಲು, ಇದಿರಿಗೆ ಹೋಗಿ ಕರೆದುತಂದು ಮನೆಯಲ್ಲಿ ಇಳಿಸಿ ಆತಿಥ್ಯದಿಂದ ಸತ್ಕರಿಸುತ್ತಿದ್ದನು. ಆತನು ಶೂರನು; ತೇಜಸ್ವಿ; ಉದಾರನು; ಪುತ್ರಸಂಪತ್ತಿಯುಳ್ಳವನು. ನಿತ್ಯವೂ ಶಕ್ತಿಯನ್ನು ಆರಾಧಿಸುತಿದ್ದನು. ಆ ಭಗವತಿಯು ಆತನಿಗೆ ಪ್ರಸನ್ನೆಯಾಗಿದ್ದಳು. ಪ್ರಾತಃಕಾಲದಲ್ಲಿ ಸ್ನಾನವಂ ಮಾಡಿ ದೇವಿಯ ಆಲಯವಂ ಪೊಕ್ಕು ನಿಯಮಗೊಂಡು ವಸ್ತ್ರಾಲಂಕಾರಪುಷ್ಪಧೂಪದೀಪನೈವೇದ್ಯಗಳನ್ನು ಸಮರ್ಪಿಸುವನು. ಆ ರಾಜನ ಭಕ್ತಿಭಾವಕ್ಕೆ ಮೆಚ್ಚಿ ದೇವಿಯು ನೈವೇದ್ಯವಂ ಭುಂಜಿಸುತಿದ್ದಳು. ಬಳಿಕ ತಾಂಬೂಲವಂ ಸಮರ್ಪಿಸಿ ಪ್ರದಕ್ಷಿಣನಮಸ್ಕಾರಂಗಳಂ ಮಾಡಿ ಪ್ರಾರ್ಥಿಸಿ ತನ್ನ ಮನೆಗೆ ಭೋಜನಕ್ಕೆ ಹೋಗುತಿದ್ದನು.

ಬಳಿಕ ಒಂದು ದಿನ ಮಹಾತ್ಮರಾದ ಕೆಲವರು ಸಾಧುಮಹಾಜನಂಗಳು ಆ ರಾಜನ ಸತ್ಕೀರ್ತಿಯಂ ಕೇಳಿ ಆಕಸ್ಮಿಕವಾಗಿ ಆ ನಗರಕ್ಕೆ ಬಂದರು. ಅವರು ವಿರಕ್ತರು. ಮಹಾಭಾಗವತರು. ಅನೇಕಜನ್ಮಗಳಲ್ಲಿ ಮಾಡಿದ ದಾನಂಗಳಿಂದಲೂ, ತೀರ್ಥಯಾತ್ರೆಯಿಂದಲೂ, ಮಹಾಯಜ್ಞಗಳಿಂದಲೂ, ನಿಯಮಯುಕ್ತ ಏಕಾದಶೀವ್ರತದಿಂದಲೂ, ಮಾತಾಪಿತೃಸೇವೆಯಿಂದಲೂ, ವಾಪೀಕೂಪಾದಿನಿರ್ಮಾಣದಿಂದಲೂ, ಸಮನಿಸಿದ ಪುಣ್ಯದ ಪರಿಪಾಕದಿಂದ ಮಹನೀಯರಾದ ಭಾಗವತರ ಸೇವೆಯು ದೊರೆಯುವುದು. ಅಂದು ಆ ಸಾಧುಗಳು ತನ್ನೂರಿಗೆ ಬಂದಿರುವರೆಂಬ ಸುದ್ದಿಯಂ ಸೇವಕರ ಮುಖದಿಂದ ಕೇಳಿ ಆ ರಾಜನು ಇದಿರುಗೊಂಡು ಅವರನ್ನು ಮನೆಗೆ ಕರೆದುಕೊಂಡು ಬಂದು ಉಪಚರಿಸಿ ಬಳಿಕ ಶುಚಿಯಾಗಿ ದೇವಿಯ ಆಲಯವಂ ಪೊಕ್ಕು ದೇವಿಯಂ ನಿತ್ಯದಂತೆ ಪೂಜಿಸಿದನು.

ಅಂದು ದೇವಿಯು ನೈವೇದ್ಯವಂ ಭುಂಜಿಸದೆ ಆ ರಾಜನನ್ನು ಕುರಿತು—ಅರಸನೆ! ಇಂದು ವೈಷ್ಣವಶಿರೋಮಣಿಗಳಾದ ಮಹಾನುಭಾವರನೇಕರು ಊರಿಗೆ ಬಂದಿರುವರು. ಅವರೆಲ್ಲರೂ ಭೋಜನಮಾಡುವವರೆಗೂ ನಾನು ನೈವೇದ್ಯವಂ ತೆಗೆದುಕೊಳ್ಳುವು

ದಿಲ್ಲ. ಹೃಷೀಕೇಶನು ಬ್ರಹ್ಮಾಂಡನಾಯಕನು. ಅನಂತಶಕ್ತಿಗಳು ನಾವೆಲ್ಲರೂ ಆತನ ದಾಸಿಯರು. ಆತನ ಪ್ರಿಯಭಕ್ತರಾದ ಮಹನೀಯರು ನಿನ್ನ ಮನೆಗೆ ಬಂದಿರುವರು. ನಿನ್ನ ಪುಣ್ಯಕ್ಕೆ ಎಣೆಯಿಲ್ಲ-ಎಂದಳು.

ರಾಜನು ಬದ್ಧಾಂಜಲಿಪುಟನಾಗಿ ದೇವಿಯೆ! ನಿನಗಿಂತಲೂ ಶ್ರೇಷ್ಠವಾದ ದೈವತವು ಯಾವುದು?-ಎನಲು, ಆ ಮಾತಂ ಕೇಳಿ ದೇವಿಯು-ಅರಸನೆ! ಬ್ರಹ್ಮೇಂದ್ರಾದಿಗಳೂ ಯಾವನ ಪಾರವನ್ನು ಕಾಣರೋ; ಸೂರ್ಯಚಂದ್ರರು ಯಾವನ ಕಾಂತಿಯಿಂದ ಪ್ರಕಾಶಿಸುತ್ತಿರುವರೋ; ಯಾವನು ಮತ್ಸ್ಯಕೂರ್ಮವರಾಹನಾರಸಿಂಹಾದ್ಯವತಾರಗಳನ್ನು ಮಾಡಿ ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪರಿಪಾಲಿಸಿ ತ್ರೈಲೋಕ್ಯವನ್ನೂ ಕಾಪಾಡಿದನೋ; ರಾವಣನು ಇಂದ್ರಾದಿಗಳನ್ನು ಸೆರೆಯಲ್ಲಿ ಹಾಕಿರಲು, ಯಾವನು ರಾಮಾವತಾರವನ್ನು ವಹಿಸಿ ಆ ಸೆರೆಯನ್ನು ಬಿಡಿಸಿದನೋ; ಕ್ಷೀರಸಾಗರವಾಸಿಯೂ ಪುರಾಣಪುರುಷನೂ ಆದ ಆ ರುಕ್ಮಿಣೀಪತಿಯು ಸರ್ವರಿಗಿಂತಲೂ ಶ್ರೇಷ್ಠನು-ಎಂದು ಉತ್ತರವನ್ನು ಹೇಳಿದಳು.

ರಾಜನು-ಎಲೆ ಜನನಿಯೆ! ಆ ದೇವಶ್ರೇಷ್ಠನಾದ ಲಕ್ಷ್ಮೀಪತಿಯ ಸಂದರ್ಶನವಂ ನನಗೆ ಮಾಡಿಸಬೇಕು-ಎಂದು ಅಭಿನಂದಿಸಿ ಬೇಡಿಕೊಳ್ಳಲು, ಅದಕ್ಕೆ ಆ ದೇವಿಯು-ಮಹನೀಯರಾದ ಸಂತರನ್ನು ನೀನು ಶರಣುಹೊಂದಿ ಅವರಿಂದ ಶ್ರೀಪತಿಯ ಸಂದರ್ಶನವಂ ಪಡೆಯಬೇಕು. ರಾಜ್ಯವನ್ನೂ ಧನಧಾನ್ಯಗಳನ್ನೂ ಬುದ್ಧಿಸಿದ್ಧಿಗಳನ್ನೂ ಬೇಡಿದರೆ ನಾನು ಕೊಡಬಲ್ಲೆನು. ಅಲ್ಲದೆ ಆ ಸ್ವಾಮಿಯ ದರ್ಶನವಂ ಮಾಡಿಸುವುದು ನನ್ನಧೀನವಲ್ಲ. ಅಖಿಲಕಲ್ಯಾಣಗುಣಪೂರ್ಣನಾದ ಆ ಭಗವಂತನು ಭಕ್ತವತ್ಸಲನು; ಭಕ್ತರಿಗೆ ಅಧೀನನಾಗಿರುವನು. ಈಗ ಊರಿಗೆ ಬಂದಿರುವ ಸಂತರು ಮಹನೀಯರು; ವಿರಕ್ತರು; ಭಾಗವತಶಿರೋಮಣಿಗಳು. ಅವರಲ್ಲಿಗೆ ಹೋಗಿ ಭಕ್ತಿಪೂರ್ವಕವಾಗಿ ಸಾಷ್ಟಾಂಗನಮಸ್ಕಾರಮಾಡಿ ಅವರನ್ನು ಪ್ರಾರ್ಥಿಸು-ಎಂದು ನುಡಿದಳು. ರಾಜನು ದೇವಿಯ ಅಪ್ಪಣೆಯನ್ನು ಸಿರದಿಂದ ವಹಿಸಿ ಸತ್ವರನಾಗಿ ಮನೆಗೆ ಬಂದು ಆ ಸಂತರು ಭೋಜನಮಾಡಿದ ಬಳಿಕ ಅವರಿಗೆ ತಾಂಬೂಲ ಪುಷ್ಪಹಾರಂಗಳಂ ಸಮರ್ಪಿಸಿ ಸಾಷ್ಟಾಂಗನಮಸ್ಕಾರವಂ ಮಾಡಿ-ಪೂಜ್ಯರೆ! ನೀವು ಅನುಗ್ರಹಿಸಿ ಶ್ರೀಲಕ್ಷ್ಮೀಪತಿಯ ಸಂದರ್ಶನವಂ ನನಗೆ ಮಾಡಿಸಬೇಕು-ಎಂದು ಬಿನ್ನವಿಸಲು, ಆ ಸಂತರು ಆತನ ಮಾತಂ ಕೇಳಿ-ಅಯ್ಯಾ ರಾಜನೆ! ನೀನು ರಾಮಾನಂದರಂ ಶರಣುಹೊಂದು. ನೀನು ಅವರ ಅನುಗ್ರಹವಂ ಪಡೆದರೆ ಜನ್ಮವು ಸಾರ್ಥಕವಾಗುವುದು. ನಿರ್ಬಲನ ಸೇವೆಯೂ, ಜ್ಞಾನಹೀನರ ಸಂಗವೂ, ಸೌಖ್ಯಕರವಾಗಲಾರದು. ಪ್ರೇಮವಿಲ್ಲದ ಹರಿಕೀರ್ತನೆಯೂ ಅಜ್ಞಾನಿಯಾದ ಗುರುವಿನ ಗುರುತ್ವವೂ, ಕೃಪಣಶಿಷ್ಯನ ಶಿಷ್ಯತ್ವವೂ, ಸುಖವನ್ನೀಯದು. ಆಶಾಬದ್ಧನಾದ ವಕ್ತೃವಿನಿಂದಲೂ, ಅಭಕ್ತನೂ ವಿವಾದಿಯೂ ಆದ ಶ್ರೋತೃವಿನಿಂದಲೂ, ಅನುಭವವಿಲ್ಲದೆ ಹೇಳುವ ಜ್ಞಾನವ

ಮಾತುಗಳಿಂದಲೂ, ಜ್ಞಾನವಿಲ್ಲದೆ ಸಂನ್ಯಾಸವನ್ನು ಗ್ರಹಿಸುವುದರಿಂದಲೂ, ನಿರ್ಧನನ ಗಾರ್ಹಸ್ಥ್ಯದಿಂದಲೂ, ದುಷ್ಟಸ್ತ್ರೀಯ ಸಂಗದಿಂದಲೂ ಸೌಖ್ಯವಿಲ್ಲ. ಅಂತು ಕ್ಷುದ್ರ ದೇವತೋಪಾಸನೆಯಂ ಮಾಡುವುದರಿಂದೇನು? ಅದು ಎಂದಿಗೂ ಉತ್ತಮಸುಖವ ನ್ನೀಯದು. ಇನ್ನು ಮೇಲಾದರೂ ನೀನು ಅಪ್ರಮತ್ತನಾಗಿ ರಾಮಾನಂದರನ್ನು ಶರಣುಹೊಂದು. ಧನ್ಯನಾಗುವೆ—ಎಂದರು.

ರಾಜನು ಆ ಸಂತರ ವಚನವಂ ಕೇಳಿ ಆಕ್ಷಣದಲ್ಲಿಯೇ ಪಶ್ಚಾತ್ತಾಪಗೊಂಡು ಮಂತ್ರಿಯಂ ಕರೆದು ರಾಜ್ಯಭಾರವನ್ನು ಅವನಿಗೆ ವಹಿಸಿ, ಧನಕನಕವಸ್ತ್ರಂಗಳಂ ಬ್ರಾಹ್ಮಣರಿಗೆ ಸೂರೆಗೊಟ್ಟು ಸ್ವಕೀಯವಾದ ಸರ್ವಸ್ವವನ್ನೂ ಕೃಷ್ಣಾರ್ಪಣವಮಾಡಿ ರಾಮಾನಂದರನ್ನು ಸೇವಿಸುವುದಕ್ಕೋಸ್ಕರ ಕಾಶೀಪಟ್ಟಣವಂ ಕುರಿತು ಹೊರಟನು. ಆತನ ಮಡದಿಯೂ ಪತಿವ್ರತಾಶಿರೋಮಣಿಯಾದುದರಿಂದ ಸರ್ವಮಮತೆಯನ್ನೂ ಬಿಟ್ಟು ತನ್ನ ವಸ್ತ್ರಾಭರಣಂಗಳಂ ಬ್ರಾಹ್ಮಣರಿಗೆ ಕೊಟ್ಟು ಪತಿಯೊಡನೆಯೇ ಹೊರಟಳು.

ಆರಾಜನು ಸಕುಟುಂಬನಾಗಿ ಕಾಶಿಯನ್ನು ಸೇರಿ ರಾಮಾನಂದರ ಸನ್ನಿಧಿಗೆ ಹೋಗಿ ಸಾಷ್ಟಾಂಗನಮಸ್ಕಾರವಂ ಮಾಡಿ ಶರಣಾಗತನಾಗಿ ಬಂದಿರುವ ನನ್ನನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿ, ಬಹುಕಾಲ ಅವರಂ ಸೇವಿಸುತ್ತ ಅವರ ಅನುಗ್ರಹಕ್ಕೆ ಪಾತ್ರವಾದನು. ಅವರು ಶ್ರೀರಾಮಮಂತ್ರವನ್ನು ಆತನಿಗೆ ಉಪದೇಶಿಸಿದರು. ರಾಜನು ಗುರುಮುಖದಿಂದ ಮಂತ್ರೋಪದೇಶವನ್ನು ಹೊಂದಿ ಶ್ರವಣಮನನಂಗಳಿಂದ ಅನು ಭವಕ್ಕೆ ತಂದುಕೊಂಡು ನಿದಿಧ್ಯಾಸೆಯಲ್ಲಿದ್ದನು.

ಗುರುವು ಜ್ಞಾನಿಯಾಗಿಯೂ ಶಿಷ್ಯನು ಪಶ್ಚಾತ್ತಾಪಯುಕ್ತನಾಗಿಯೂ ಇದ್ದರೆ ಅಲ್ಲಿ ಆತ್ಮಜ್ಞಾನವು ಪ್ರಕಾಶಿಸುವುದು. ಅಂತಿಲ್ಲದಿದ್ದರೆ ಅವರ ವೃತ್ತಿಯು ದಾಂಭಿಕ ವೆನಿಸುವುದು. ಪರಿಸವು ಉತ್ತಮವಾದರೂ ಸ್ಪೃಶ್ಯವು ಆಯಸವಲ್ಲದಿದ್ದರೆ ಎಂತು ಫಲವಿಲ್ಲವೋ ಅಂತು ಗುರುವು ಜ್ಞಾನಿಯಾದರೂ ಶಿಷ್ಯನು ಪಶ್ಚಾತ್ತಾಪವಿಲ್ಲದವನಾದರೆ ಫಲವಿಲ್ಲ. ಶಿಷ್ಯನು ಅಭಕ್ತನಾಗಿರಲು, ಗುರುವು ಏನಮಾಡಾನು? ಸದ್ಗುರುವು ಸರ್ವರ ವಿಷಯದಲ್ಲಿಯೂ ದಯಾಳುವಾಗಿರುವನು. ಆತನಿಗೆ ರಾಜನೂ ಭಿಕ್ಷುಕನೂ ಸಮರು. ಯಾರ ಭಾವನೆಯು ಎಂತಿರುವುದೋ ಅವರಿಗೆ ಅಂತು ಫಲವಾಗುವುದು. ಸೂರ್ಯನು ಅಭ್ಯುದಿತನಾಗಿರಲು, ಪ್ರಕಾಶವು ಸರ್ವರಿಗೂ ಸಮವು. ಆದರೆ ದಿವಾ ಭೀತಂಗಳು—ಇವನು ಏಕೆ ಉದಯಿಸಿದನೋ—ಎಂದು ಸಂಕಟಪಡುವುವು. ಚಂದ್ರನ ಬೆಳಗು ಚಕೋರಗಳಿಗೂ ಕಳ್ಳರಿಗೂ ಸಮವು; ಆದರೂ ಕಳ್ಳರು ದುಃಖಪಡುವರು; ಚಕೋರಗಳಿಗೆ ಅಮೃತವಾಗಿರುವುದು. ಅಂತು ಸಾಧುಮಹನೀಯರು ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವರು. ಇತರರ ಭಾವನೆಯಿದ್ದಂತೆ ಫಲವಾಗುವುದು. ಅದಂತಿರಲಿ. ಆ ರಾಜನು ಸದ್ಗುರುಗಳಾದ ರಾಮಾನಂದರಲ್ಲಿ ಸದ್ಭಾವನೆಯುಳ್ಳವ

ಸಾಗಿದ್ದನು. ಅವರ ಅನುಗ್ರಹದಿಂದ ಸುಜ್ಞಾನವಂ ಪಡೆದು ಸರ್ವಕಾಲದಲ್ಲಿಯೂ ಪ್ರೀತಿಯಿಂದ ಭಗವನ್ನಾಮಕೀರ್ತನವಂ ಮಾಡುತಿದ್ದನು.

ಒಂದುದಿನ ಆರಾಜನು ಗುರುಗಳ ಸನ್ನಿಧಿಯಲ್ಲಿ ದ್ವಾರಕೆಗೆ ಹೋಗಬೇಕೆಂದಿರುವೆನೆಂದು ಬಿನ್ನವಿಸಿ ಅನುಜ್ಞೆಯಂ ಪಡೆದು ಅಲ್ಲಿಂದ ಹೊರಟು ದ್ವಾರಕೆಯಂ ಸೇರಿ ಗೋಮತಿಯಲ್ಲಿ ಸ್ನಾನವಂಮಾಡಿ ಶ್ರೀಕೃಷ್ಣನ ಸಂದರ್ಶನಕ್ಕೋಸ್ಕರ ದೇವಾಲಯವಂ ಸೇರಿ ಮಹಾದ್ವಾರದ ಬಳಿಯಲ್ಲಿ ಸಾಷ್ಟಾಂಗನಮಸ್ಕಾರವಂ ಮಾಡಿ ಒಳಹೊಕ್ಕನು. ಬದ್ಧಾಂಜಲಿಪುಟನಾಗಿ ಶ್ರೀಹರಿಯಂ ಧ್ಯಾನಿಸುತ್ತ—ಮುಕುಂದನೇ! ಮುರಾರಿಯೇ! ಪುರಾಣಪುರುಷನೇ! ಶ್ರೀಹರಿಯೆ! ನಾನು ಶರಣಾಗತನಾಗಿರುವೆನು. ದೀನನಾದ ನನ್ನನ್ನು ಕೃಪೆಯಿಂದ ಉದ್ಧರಿಸಬೇಕು. ನೀನು ದೇವಾದಿದೇವನು; ಸನಾತನನು—ಎಂಬುದನ್ನು ಅರಿಯದೆ ಇತರದೇವತೋಪಾಸನೆಯಂ ಮಾಡುತಿದ್ದೆನು. ಅಮೃತವಂ ಬಿಟ್ಟು ಕಲಗಚ್ಚನ್ನು ಗ್ರಹಿಸಿದಂತೆ, ಪರಿಸವನ್ನು ಬಿಟ್ಟು ಕಾಡುಗಲ್ಲನ್ನು ಸ್ವೀಕರಿಸಿದಂತೆ, ಅಶ್ವತ್ಥವಂ ಬಿಟ್ಟು ಬೊಬ್ಬುಳಿಮರವಂ ಸಮಾಶ್ರಯಿಸಿದಂತೆ ಆಯಿತು. ಸೂರ್ಯನು ಇಲ್ಲದಿರುವಾಗ ಖದ್ಯೋತದ ತೇಜಸ್ಸನ್ನೇ ಅಧಿಕವೆಂದು ತಿಳಿವಂತೆ, ವೇದಾಂತಶ್ರವಣವೇ ಇಲ್ಲದಿರುವಾಗ ಕಳಾಶಾಸ್ತ್ರವೇ ದೊಡ್ಡದೆಂದು ಭಾವಿಸುವಂತೆ, ಕಲ್ಪವೃಕ್ಷವನ್ನು ಕಾಣದಿರುವಾಗ ಬಬ್ಬೂರವನ್ನೇ ಮಾನ್ಯವೆಂದು ಅರಿತಂತೆ ನಿನ್ನನರಿಯದೆ ಇತರದೈವತವನ್ನು ಪರಮವೆಂದು ತಿಳಿದಿದ್ದೆನು. ಅನಂತಜನ್ಮಗಳ ಸುಕೃತವಿಶೇಷವು ಫಲಿಸಿದುದರಿಂದ ಆಕಸ್ಮಿಕವಾಗಿ ಸಾಧುಮಹನೀಯರು ನನ್ನ ಮನೆಗೆ ಬಂದು ನಿನ್ನ ಪರತರವಾದ ಮಹಿಮೆಯನ್ನು ನನಗೆ ತಿಳಿಯಿಸಿದರು—ಎಂದು ಅನನ್ಯಭಾವದಿಂದ ಸ್ವಾಮಿಯನ್ನು ನೆನೆದು ಸಂಪ್ರಾರ್ಥಿಸಲು, ಭಕ್ತವತ್ಸಲನಾದ ಭಗವಂತನು ಚತುರ್ಭುಜಯುಕ್ತನೂ ಪೀತಾಂಬರಧಾರಿಯೂ ದೇದೀಪ್ಯಮಾನವಾದ ಕಿರೀಟದಿಂದ ಪರಿಶೋಭಿತನೂ ಆಗಿ ಸಗುಣರೂಪದಿಂದ ಆಪಿಪಾಜಿರಾಯನಿಗೆ ಸಂದರ್ಶನವಂ ಕೊಟ್ಟು ಸಂತೋಷವನ್ನುಂಟುಮಾಡಿದನು.

ಆರಾಯನು ನಾಲ್ಕುತಿಂಗಳು ಸಂತತವಾಗಿ ಪರಮಾತ್ಮನನ್ನು ಸೇವಿಸುತ್ತ ನಾಮಸಂಕೀರ್ತನವಂ ಮಾಡುತ್ತ ಅಲ್ಲಿಯೇ ಇದ್ದು ಬಳಿಕ ಸ್ವಾಮಿಯ ಅನುಜ್ಞೆಯಂ ಪಡೆದು ಸಕುಟುಂಬನಾಗಿ ಅಲ್ಲಿಂದ ಹೊರಟು ಮಾರ್ಗದಲ್ಲಿ ಬರುತ್ತಿರಲು, ಭಯಂಕರವಾದ ಒಂದು ಹುಲಿಯು ದೃಗ್ಗೋಚರವಾಯಿತು. ಸುಕುಮಾರಾಂಗಿಯಾದ ಆ ರಾಜಕಾಂತೆಯು ಆವ್ಯಾಘ್ರವನ್ನು ನೋಡಿ ಭಯದಿಂದ ಗಡಗಡನೆ ನಡುಗುತ್ತ ಪತಿಯಂ ಕುರಿತು—ಹುಲಿಯಂ ಕಂಡಿರಾ!-ಎಂದಳು. ಹುಲಿಯೂ ಮಹಾರಭಸದಿಂದ ಗರ್ಜಿಸುತ್ತ ಬಳಿಗೆ ಬಂದಿತು. ರಾಜನು ಮಡದಿಯಂ ಕುರಿತು—ಪ್ರಿಯೆ! ನೀನು ಅಂಜಬೇಡ. ನಿನಗೆ ಇದು ಹುಲಿಯಾಗಿ ಕಾಣುವುದು. ಇದರಲ್ಲಿ ಶ್ರೀರಘುನಂದನನು

ಇರುವನು. ಆ ಸ್ವಾಮಿಯಿಲ್ಲದುದು ಲೋಕದಲ್ಲಿ ಅಣುಮಾತ್ರವೂ ಇಲ್ಲ. ಸೂರ್ಯನು ಸರ್ವಘಟಗಳಲ್ಲಿಯೂ ಎಂತು ಪ್ರತಿಬಿಂಬಿಸುವನೋ ಉದಕವು ಸರ್ವರಸಗಳಲ್ಲಿಯೂ ಎಂತು ಸೇರುವುದೋ; ಆಕಾಶವು ಎಲ್ಲಾಸ್ಥಳಗಳಲ್ಲಿಯೂ ಎಂತು ವ್ಯಾಪಿಸಿರುವುದೋ ಅಂತು ಶ್ರೀಯದುನಾಯಕನು ಸರ್ವಭೂತಗಳಲ್ಲಿಯೂ ಇರುತಿರುವನು. ಪಟವೂ ತಂತುವೂ ಎಂತು ಬೇರೆಯಲ್ಲವೊ, ಸುವರ್ಣವೂ ಅಲಂಕಾರವೂ ಎಂತು ಭಿನ್ನವಲ್ಲವೋ, ಅಂತು ಸ್ವಾಮಿಯೂ ಜಗತ್ತೂ ಬೇರೆಯಲ್ಲ. ಅಜ್ಞಾನಿಗಳು ವಿಶ್ವಂಭರನಂ ಅರಿಯದೆ ವಿಶ್ವವೆನ್ನುವರು. ಆಪರಮಾತ್ಮನು ಅನಂತಬ್ರಹ್ಮಾಂಡಗಳಲ್ಲಿಯೂ ಜಲದಲ್ಲಿಯೂ ಸ್ಥಳದಲ್ಲಿಯೂ ವ್ಯಾಪಿಸಿರುವನು. ಇದು ವ್ಯಾಘ್ರವಲ್ಲ. ರುಕ್ಮಿಣೀರಮಣನೇ ಎಂದು ನಿಶ್ಚಯದಿಂದ ತಿಳಿ-ಎಂದನು. ರಭಸವುಳ್ಳ ಆ ಹುಲಿಯು ಸ್ತಬ್ಧವಾಗಿ ನಿಂತಿತು. ರಾಯನು ಅದಂ ಕುರಿತು—ಎಲೆವ್ಯಾಘ್ರವೆ! ನೀನು ಶ್ರೀರಾಮಭಜನಯಂ ಮಾಡು—ಎಂದನು. ಆಮಾತಂ ಕೇಳಿ ಆವ್ಯಾಘ್ರವು ಆತನಿಗೆ ಅಡ್ಡಬಿದ್ದಿತು. ಸಾಧುದರ್ಶನವಾಗುವುದೂ ಅದಕ್ಕೆ ಜ್ಞಾನವುಂಟಾಯಿತು. ರಾಜನು ಆ ವ್ಯಾಘ್ರವಂ ಕುರಿತು—ನೀನು ಹಿಂಸಾಕರ್ಮವನ್ನು ಬಿಡು—ಎಂದು ನುಡಿದು ತನ್ನ ಕೊರಲಲ್ಲಿ ಇದ್ದ ತುಳಸೀಮಾಲೆಯಂ ಅದರ ಕೊರಲಿಗೆ ಹಾಕಿ ಶ್ರೀಹರಿನಾಮವನ್ನುಪದೇಶಿಸಿದನು. ಶ್ರೀಹರಿನಾಮಕ್ಕಿಂತ ಅಧಿಕವಾದ ಮಂತ್ರವು ಯಾವುದೂ ಇಲ್ಲ. ಗಜೇಂದ್ರವು ಅಜ್ಞಾನಿಯಾದ ಪಶುವು. ಹರಿನಾಮಕೀರ್ತನದಿಂದ ಉದ್ಧಾರವನ್ನು ಹೊಂದಿತು. ಮಾರ್ಗದಲ್ಲಿ ಜನಗಳನ್ನು ಹೊಡೆಯುತಿದ್ದ ವ್ಯಾಧನು ನಾರದಮಹರ್ಷಿಯಿಂದ ಉಪದಿಷ್ಟನಾಗಿ ರಾಮನಾಮವನ್ನು ಜಪಿಸಿ ವಾಲ್ಮೀಕಿಯೆನಿಸಿದನು. ಅಜಾಮಿಳನು ಮಹಾದುರಿತಗಳಿಂದ ವೇಷ್ಟಿತನಾದವನು; 'ನಾರಾಯಣ' ಎಂದು ಉಚ್ಚರಿಸಿದುದರಿಂದಲೇ ವೈಕುಂಠಪದವನ್ನಡರಿದನು. ಕಾಮಕ್ರೋಧಾದ್ಯರಿಷಡ್ವರ್ಗವು ಶ್ರೀಹರಿಸ್ಮರಣೆಯಿಂದ ದೂರವಾಗುವುದು. ಅಂತಹ ತಾರಕನಾಮವನ್ನು ವ್ಯಾಘ್ರಕ್ಕೆ ನುಡಿದು ರಾಯನು ಅಲ್ಲಿಂದ ಹೊರಟು ಕಾಶೀಪಟ್ಟಣವಂ ಸೇರಿದನು.

ಆ ವ್ಯಾಘ್ರವು ಪಶ್ಚಾತ್ತಾಪಗೊಂಡು ಅಂದಿನಿಂದ ಹಿಂಸಾಕರ್ಮವಂ ಬಿಟ್ಟು ಮಾಂಸಾಹಾರವಂ ವರ್ಜಿಸಿ ಉದುರಿದೆಲೆಗಳಂ ಭಕ್ಷಿಸುತ್ತ ಏಳುದಿವಸದವರಗೂ ಅರಣ್ಯದಲ್ಲಿ ಸಂಚರಿಸುತಿದ್ದುದು. ವ್ಯಾಘ್ರವೃಶ್ಚಿಕಾದಿಜಂತುಗಳು ತಾಮಸಪ್ರಕೃತಿಗಳು. ಅವುಗಳಲ್ಲಿ ಸತ್ತ್ವಗುಣವೆಂಬುದಿಲ್ಲವೇ ಇಲ್ಲ. ಆದರೂ ವ್ಯಾಘ್ರವು ಕಡೆಯಲ್ಲಿ ಸತ್ಸಂಗದ ಮಹಿಮೆಯಿಂದ ದಿವ್ಯಜ್ಞಾನವಂ ಪಡೆದು ಶ್ರೀಹರಿಭಜನೆಯಲ್ಲಿ ಚಿತ್ತವನಿಟ್ಟು ದೇಹವನ್ನು ಕೃಷ್ಣಾರ್ಪಿತವಂ ಮಾಡಿತು.

ಈ ಮಾಯಾಸಂಸಾರದಲ್ಲಿ ಇದ್ದರೂ ಯಾವನಿಗೆ ಅಂತ್ಯಕಾಲದಲ್ಲಿ ಶ್ರೀಹರಿಸ್ಮರಣೆಯುಂಟಾಗುವುದೋ ಅದರಿಂದವನಿಗೆ ತಪ್ಪದೆ ಸದ್ಗತಿಯುಂಟಾಗುವುದು.

ನಂತರ ಚರಿತ್ರುಯೆಂಬುದೇ ಗಂಗೆ; ಅಥವಾ ಭೀಮರಥಿ. ಅಲ್ಲಿ ಸದ್ಭಾವದಿಂದ ಸ್ನಾನವಂ ಮಾಡಿ ಶ್ರೀಪಾಂಡುರಂಗನನ್ನು ಶರಣುಹೊಂದಬೇಕು.

ಮಹೀಪತಿಯು ಆಸ್ವಾಮಿಯ ಚರಣಗಳನ್ನು ಅನನ್ಯಭಾವದಿಂದ ನಂಬಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತಾರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತೇಳನೆಯ ಅಧ್ಯಾಯ.

ನರಸಿಂಹಮಹಾಂತನ ಕಥೆ.

ದೀನದಯಾಳುವಾದ ಎಲೆ ಜಗತ್ಪತಿಯೇ! ನೀನು ಮೂರುಲೋಕಗಳಲ್ಲಿಯೂ ವ್ಯಾಪಿಸಿ ಮಿಗಿಲಾಗಿರುವೆ. ಶ್ರುತಿಗಳು ನಿನ್ನಂ ವರ್ಣಿಸುವುವು. ಆದರೂ ನಿನ್ನ ಮಹಿಮೆಯ ಪಾರವನ್ನು ತಿಳಿಯುವು. ಹದಿನೆಂಟುಪುರಾಣಂಗಳೂ ನಿನ್ನ ಮಹಿಮೆಯಂ ಬಣ್ಣಿಸಿ ದಣಿದುವು. ಷಡ್ದರ್ಶನಂಗಳೂ ವಿವಾದವಂ ಮಾಡುವುವು. ಅವುಗಳಿಗೆ ನಿನ್ನ ಪಾರವು ತಿಳಿಯಲಿಲ್ಲ. ನಿನ್ನ ಅಪಾರವಾದ ಗುಣಂಗಳಂ ಬಣ್ಣಿಸಿ ಆದಿಶೇಷನು ದಣಿದನು. ಆತನ ನಾಲಗೆಯು ಸೀಳಿತು. ಬಳಿಕ ಲಜ್ಜಿತನಾಗಿ ತನ್ನ ಶರೀರವನ್ನೇ ನಿನಗೆ ಹಾಸೆಗೆಯಂ ಮಾಡಿದನು. ತನ್ನ ಸಹಸ್ರಫಣಗಳಿಂದ ನಿನಗೆ ಛಾಯೆಮಾಡಿದನು. ಸರಸ್ವತಿಯು ನಿನ್ನ ಮಹಿಮೆಯನ್ನು ವರ್ಣಿಸಬೇಕೆಂದು ನಿಶ್ಚಯಿಸಿ ಕ್ಷೀರಸಮುದ್ರವನ್ನೇ ಮಸಿಯನ್ನಾಗಿಯೂ ಹದಿನೆಂಟು ವನಸ್ಪತಿಗಳನ್ನೇ ಲೇಖನಿಯನ್ನಾಗಿಯೂ ಪೃಥ್ವಿಯನ್ನೇ ಪತ್ರಿಕೆಯನ್ನಾಗಿಯೂ ಮಾಡಿಕೊಂಡು ಬರೆಯಲು ಅದಾವುದೂ ಸಾಲದೆಹೋಯಿತು. ಆದುದರಿಂದ ಅಪಾರವಾದ ನಿನ್ನ ಮಹಿಮೆಗೆ ಬೆರಗಾಗಿ ನಿನ್ನ ಪಾದಗಳಿಗೆ ಎರಗಿದಳು. ಅಲೌಕಿಕವಾದ ನಿನ್ನ ಗುಣವಿಶೇಷಂಗಳನ್ನು ಬಣ್ಣಿಸುವುದಕ್ಕೆ ಉದ್ಯುಕ್ತರಾಗಿ ಮಹಾಮಹಿಮರೆಲ್ಲರೂ ಸೋತರು. ನೀನು ಅನಂತಬ್ರಹ್ಮಾಂಡಗಳಿಗೂ ನಾಯಕನು; ಅನಂತನು. ವಿಶ್ವವ್ಯಾಪಕನಾದ ನಿನ್ನ ಸತ್ತ್ವವು ವಿಶ್ವದಲ್ಲಿ ಎತ್ತಲೂ ತುಂಬಿತುಳುಕಾಡುತಿರುವುದು. ನಿನ್ನ ಭಕ್ತರ ಚರಿತ್ರೆಯು ನನಗೆ ಬಹುಪ್ರಿಯವಾಗಿರುವುದು. ನೀನು ಎನ್ನ ಬುದ್ಧಿಯನ್ನು ಪ್ರಕಾಶಗೊಳಿಸಿ ನನ್ನ ಈ ಗ್ರಂಥವನ್ನು ಸುರುಚಿರವಾಗಿರುವಂತೆ ಹೇಳಿಸಬೇಕು.

ಎಲೈ ಶ್ರೋತೃಗಳಿರಾ! ಇನ್ನು ಅವಧಾನವಿತ್ತು ಆಲಿಸಬೇಕು :—

ಜುನ್ಯಗಡಿಯಲ್ಲಿ ಒಬ್ಬ ನಾಗರಬ್ರಾಹ್ಮಣನಿಗೆ ಒಬ್ಬ ಮಗನು ಉದಯಿಸಿದನು. ಆ ಕುಮಾರನು ದಿನದಿನಕ್ಕೆ ಬಳೆಯುತಬಂದನು. ಎಂಟನೆಯ ವರ್ಷದಲ್ಲಿ ಉಪನಯನವಾಯಿತು. ತಾಯ್ತಂದೆಗಳು ಪರಲೋಕವನ್ನೈದಿದರು. ದೊಡ್ಡಪ್ಪ ಚಿಕ್ಕಪ್ಪ ಮುಂತಾದವರು ಆ ಕುಮಾರನಂ ಸಂರಕ್ಷಿಸುತ ಬಂದರು. ಅವನು ಊರ ಹುಡುಗರ ಸಂಗಡ ಸ್ವೇಚ್ಛೆಯಿಂದ ಆಟವಾಡುತಿದ್ದನು. ಸರ್ವಕಾಲದಲ್ಲಿಯೂ ಸೆಂಡು ಬುಗುರಿ ಕಣ್ಣಮುಚ್ಚಾಲೆ ನೀರಿನಲ್ಲಿ ಈಸಾಡುವುದು ಮುಂತಾದುದರಲ್ಲಿ ಆಸಕ್ತನಾಗಿದ್ದನು. ಇಂತು ಬಾಲ್ಯದ ಆಟಗಳನ್ನು ಆಡುವುದರಲ್ಲಿಯೇ ಕಾಲಹರಣವಾಗಿಹೋಯಿತು. ಮೇಘಶ್ಯಾಮನನ್ನು ಭಜಿಸಲಿಲ್ಲ. ಆ ಕುಮಾರನ ಹೆಸರು ನರಸಿಂಹಮಹಾಂತನೆಂದು. ಆತನು ಭಗವದವತಾರಪುರುಷನು. ಒಂದುದಿನ ಆಟವಾಡಿಕೊಂಡು ಮನೆಗೆ ಬಂದನು. ಅತ್ತಿಗೆಯನ್ನು ಕುರಿತು-ಅತ್ತಿಗೆಯೆ! ನನಗೆ ಪಿಪಾಸೆಯಧಿಕವಾಗಿದೆ. ಕುಡಿಯುವುದಕ್ಕೆ ನೀರನ್ನು ಕೊಡು–ಎಂದು ಕೇಳಿದನು. ಆಕೆ ಕುಪಿತೆಯಾಗಿ–ಮನೆಗೆ ಏಕೆ ಬಂದೆ? ನೀನು ದುಷ್ಟರ ಸಂಗದಿಂದ ಕೆಟ್ಟುಹೋದೆ. ತಾಯ್ತಂದೆಗಳನ್ನು ಸಾಗಿಸಿಬಿಟ್ಟೆ. ಹಗಲೂ ಇರುಳೂ ಆಟವಾಡುತ್ತ ಯಥೇಚ್ಛವಾಗಿ ಭೋಜನಮಾಡುತ್ತ ವಿದ್ಯಾಭ್ಯಾಸವೇನನೂ ಮಾಡದೆ ವ್ಯರ್ಥವಾಗಿ ಶರೀರವನ್ನು ಬಳೆಯಿಸುತಿರುವೆ. ಮುಂದೆ ನಿನ್ನ ಕೈವಿಡಿದವಳು ನಿನ್ನಿಂದ ಬಹುಸುಖಪಡುವಳು. ಅಹಹ!! ವ್ಯರ್ಥವಾಗಿ ಏಕೆ ಜನ್ಮವನೆತ್ತಿದೆ–ಎನಲು, ಆಕೆಯ ಮಾತನ್ನು ಕೇಳಿ ನರಸಿಂಹಮಹಾಂತನು ಮನದಲ್ಲಿ ಪಶ್ಚಾತ್ತಾಪಗೊಂಡು ಮಾತನೇನನೂ ಆಡದೆ ಅಲ್ಲಿಂದ ಥಟ್ಟನೆ ಹೊರಟು ಮಹಾರಣ್ಯವನ್ನು ಪ್ರವೇಶಿಸಿ–ನನ್ನ ಪ್ರಾಚೀನಕರ್ಮವು ಪ್ರಬಲವಾದುದು. ಏನೇನು ದುರವಸ್ಥೆಯನ್ನು ಹೊಂದಬೇಕೋ? ಬಾಲ್ಯದಲ್ಲಿ ತಾಯ್ತಂದೆಗಳು ತೀರಿಹೋಗುವುದೂ, ತಾರುಣ್ಯದಲ್ಲಿ ಕಾಂತೆಯು ಕಳೆದುಹೋಗುವುದೂ, ವಾರ್ಧಕದಲ್ಲಿ ಪುತ್ರಶೋಕವುಂಟಾಗುವುದೂ, ದುಷ್ಕರ್ಮದ ಫಲವು. ನಾನು ಜನ್ಮಾಂತರದಲ್ಲಿ ಏನು ದುಷ್ಕರ್ಮವನ್ನು ಮಾಡಿದ್ದೆನೋ ಅದರ ಫಲವು ಈಗ ಪ್ರಾಪ್ತವಾಯಿತು–ಎಂದು ವ್ಯಸನಪಡುತ್ತ ಮುಂದೆ ನಡೆಯುತ್ತಿರಲು, ಒಂದು ಶಿವಾಲಯವು ಗೋಚರವಾಯಿತು. ಮಹಾರಣ್ಯವಾದುದರಿಂದ ಮನುಷ್ಯಸಂಚಾರವೇ ಇರಲಿಲ್ಲ. ಆದರೂ ನರಸಿಂಹಮಹಾಂತನು ಧೈರ್ಯವನ್ನವಲಂಬಿಸಿ ಆದೇವಾಲಯಮಂ ಒಳಹೊಕ್ಕು ಕೈಲಾಸನಾಥನಂ ಕಂಡು ಅಭಿವಂದಿಸಿ ಉತ್ತಾನಪಾದರಾಯನ ಕುವರನು ಮುನಿಸುಗೊಂಡು ವೈಕುಂಠನಾಥನನ್ನು ಆರಾಧಿಸಿದಂತೆ ಮನೆಯಲ್ಲಿ ಉಂಟಾದ ತಿರಸ್ಕಾರದಿಂದ ಮನದಲ್ಲಿ ಖಿನ್ನನಾಗಿ ಆ ಪರಮೇಶ್ವರನನ್ನು ನಿರ್ಭರಭಕ್ತಿಯಿಂದ ಆರಾಧಿಸಿ ಏಳುದಿನಗಳವರೆಗೆ ಅನ್ನೋದಕಗಳನ್ನು ಬಿಟ್ಟು ಅನನ್ಯಭಾವದಿಂದ ಭಜಿಸಿ, ಈ ಶರೀರವನ್ನು ಈ ಸ್ವಾಮಿಗೆ ಸಮರ್ಪಿಸುವೆನು–ಎಂದು ದೇವರ ಮುಂದೆ ಮಲಗಿಬಿಟ್ಟನು. ಲೋಕದಲ್ಲಿ ಜನರು ಗಂಧಾಕ್ಷತಪುಷ್ಪಗಳನ್ನೂ ರತ್ನಸುವರ್ಣಾಭರಣ

ಗಳನ್ನೂ ಸ್ವಾಮಿಗೆ ಭಕ್ತಿಯಿಂದ ಸಮರ್ಪಿಸುವರು. ಕೆಲವರು ದ್ರವ್ಯವಂ ವ್ಯಯ ಮಾಡಿ ದೇವರಿಗೋಸ್ಕರ ಆಲಯವಂ ಕಟ್ಟಿಸುವರು. ಭಾಗೀರಥಿಯ ಉದಕವಂ ತಂದು ಅಭಿಷೇಕವಂ ಮಾಡುವರು. ಅಂತಲ್ಲದೆ ಯಾರೂ ತಮ್ಮ ಶರೀರವಂ ದೇವರಿಗೋಸ್ಕರ ಸಮರ್ಪಿಸಿದವರಿಲ್ಲ. ಶರೀರಲೋಭವನ್ನು ಹಿಡಿದು ಯಾರು ನಾನಾಸಾಧನಂಗಳಂ ಮಾಡುವರೋ; ಅವರ ಧ್ಯಾನವು ಸಿದ್ಧಿಸುವುದಿಲ್ಲ. ಅವರಿಗೆ ಜಗದೀಶನು ಸಂದರ್ಶನವನೀಯನು. ಅದಂತಿರಲಿ. ನರಸಿಂಹಮಹಾಂತನ ದೃಢವಾದ ಮನೋಭಾವವಂ ನೋಡಿ ಸದಾಶಿವನು ಸಂತುಷ್ಟನಾಗಿ ಅವನಂ ಎಬ್ಬಿಸಿ-ಎಲೈ ಬಾಲಕನೆ! ಈಗ ನಾನು ನಿನಗೆ ಪ್ರಸನ್ನನಾಗಿರುವೆನು. ನಿನ್ನ ಬಯಕೆಯೇನು? ಹೇಳು-ಎಂದು ಬೆಸಗೊಂಡನು.

ನರಸಿಂಹಮಹಾಂತನು ಅಶ್ರುತಪೂರ್ವವಾದ ಪರಮೇಶ್ವರನ ವಚನಾಮೃತವನ್ನು ಆಕರ್ಣಿಸಿ ಸಂತೋಷಗೊಂಡು ಥಟ್ಟನೆ ಎದ್ದು ಸಾಷ್ಟಾಂಗನಮಸ್ಕಾರವಂ ಮಾಡಿ-ಎಲೆ ದೇವದೇವನೇ! ನಿನ್ನನ್ನು ಏನಂ ಬೇಡಬೇಕೋ ಅದು ನನಗೆ ತಿಳಿಯದು. ನೀನು ಪ್ರಸನ್ನನಾಗಿರುವನಾದರೆ ನಿನಗೆ ಪ್ರಾಣಕ್ಕಿಂತಲೂ ಪ್ರಿಯವಾದುದು ಯಾವುದೋ ಅದಂ ನನಗೆ ಕರುಣಿಸಬೇಕು. ಅಜ್ಞಾನಿಯಾದ ಬಾಲಕನು ತನಗೆ ಬೇಕಾದ ಆಹಾರವನ್ನು ತಿಳಿಯದಿದ್ದರೂ ತಾಯಿಯು ಆ ಬಾಲಕನಿಗೆ ತಕ್ಕ ಆಹಾರವನ್ನು ಇತ್ತು ಎಂತು ಪೋಷಿಸುವಳೋ ಅಂತು ವಿಶ್ವನಾಥನಾದ ನೀನು ನನಗೆ ಸುಮುಚಿತವಸ್ತುವನಿತ್ತು ನನ್ನನ್ನು ಪೋಷಿಸಬೇಕು-ಎಂದು ಪ್ರಾರ್ಥಿಸಲು, ಪರಮೇಶ್ವರನು ಇಂತಹ ಚತುರಭಕ್ತನನ್ನು ಎಲ್ಲಿಯೂ ಕಾಣಲಿಲ್ಲ-ಎಂದು ವಿಸ್ಮಯದಿಂದ ಸಂತೋಷಗೊಂಡು ಅವನಂ ಕುರಿತು-ಎಲೆ ಭಜಕನೆ! ಸಕಲದೇವತೆಗಳಿಗೂ ಪೂಜ್ಯನಾದ ಶ್ರೀಕೃಷ್ಣನೇ ನನಗೆ ಪ್ರಿಯನು. ಆತನ ನಾಮವನ್ನು ನಾನು ನಿತ್ಯವೂ ಗೋಪ್ಯವಾಗಿ ಜಪಿಸುತ್ತಿರುವೆನು. ಆ ವಸ್ತುವಲ್ಲದೆ ನನಗೆ ಮತ್ತೊಂದಿಷ್ಟವಿಲ್ಲ. ಅಂತಹ ವಸ್ತುವನ್ನು ನೀನು ನನ್ನಂ ಬೇಡುವೆ. ಯಾಚಕನು ರಾಜನನ್ನು ರಾಜ್ಯವನ್ನೇ ಬೇಡಿದರೆ, ಕೃಪಣನನ್ನು ಅವನ ಸರ್ವಸ್ವವನ್ನೇ ಯಾಚಿಸಿದರೆ, ಕಾರ್ಯವು ಎಂತು ಸಿದ್ಧಿಯಂ ಹೊಂದುವುದು?-ಎನಲು, ಅದಕ್ಕೆ ನರಸಿಂಹಮಹಾಂತನು ಪರಮೇಶ್ವರನಂ ಕುರಿತು-ಸ್ವಾಮಿಯೆ! ಹೇಳುವ ನಾನಾದೃಷ್ಟಾಂತಗಳಂ ಕೇಳಲು, ನನ್ನ ಮನಸ್ಸಿಗೆ ಸಂಶಯವುಂಟಾಗುತ್ತಿರುವುದು. ಬಲಿಚಕ್ರವರ್ತಿಯು ದಾತನೆಂದು ತಿಳಿದು ಯಾಚಕರೂಪಿಯಾದ ವಾಮನನು ಭೂಮಿಯಂ ಬೇಡಲು, ಆತನು ತ್ರೈಲೋಕ್ಯರಾಜ್ಯವನ್ನೇ ಕೊಟ್ಟು ವಿಖ್ಯಾತನಾಗಲಿಲ್ಲವೆ? ಭಗವಂತನೇ! ನೀನು ಮಹೋದಾರನು. ನನಗೆ ನೀನು ಪ್ರಸನ್ನನಾದವನಾದರೆ ನಿನಗೆ ಪ್ರಿಯವಾದುದನ್ನೇ ನನಗೆ ಕರುಣಿಸಬೇಕು-ಎಂದನು. ಪರಮೇಶ್ವರನು ಅವನ ಮಾತಂ ಕೇಳಿ-ಅಪ್ರಾಕೃತವಾದ ಶ್ರೀಕೃಷ್ಣಲೀಲೆಯು ನನಗೆ ಪ್ರಿಯವಾದುದು. ಆ ಶ್ರೀಕೃಷ್ಣನು ಗೋಕುಲದಲ್ಲಿ

ಯಮುನಾತೀರದೊಳ್ ರಚಿಸುವ ರಾಸಕ್ರೀಡೆ ಮುಂತಾದುದು ನನಗೆ ಸರ್ವಕಾಲದಲ್ಲಿಯೂ ಹೃದಯಂಗಮವಾಗಿರುವುದು. ಅದಂ ನೋಡಲು ನಾನು ಅಲ್ಲಿಗೆ ಹೋಗುವೆನು. ಶ್ರೀಪತಿಯು ರಾಸಮಂಡಲವಂ ರಚಿಸಿ ನೃತ್ಯವಂ ಮಾಡುತಿದ್ದರೆ ನಾನು ಲಯಬದ್ಧವಾಗಿರುವಂತೆ ತಾಳಮೃದಂಗವಂ ಬಾಜಿಸುತ್ತಿರುವೆನು. ಅದಂ ನಿನಗೆ ನಾನು ತೋರಿಸುವೆನು. ನನ್ನೊಡನೆ ಬಾ-ಎಂದು ಆತನಿಗೆ ಗೋಪಿಕಾವೇಷವಂ ಧಾರಣಮಾಡಿಸಿ ಸಂಗಡ ಕರೆದುಕೊಂಡು ನಡೆದು ದ್ವಾರಕೆಯಂ ಸೇರಿ ಯಮುನಾತೀರದಲ್ಲಿ ಕಂಗೊಳಿಸುತಿದ್ದ ರಾಸಮಂಡಲಕ್ಕೆ ಬಂದು ಶ್ರೀಕೃಷ್ಣನನ್ನು ಕಂಡನು.

ಈ ಮಾತಂ ಕೇಳಿ ವಿಚಕ್ಷಣರಾದ ಶ್ರೋತೃಗಳು-ಶ್ರೀಕೃಷ್ಣನು ದ್ವಾಪರಯುಗದಲ್ಲಿ ರಾಸಕ್ರೀಡೆಯಂ ರಚಿಸಿದನು. ನರಸಿಂಹಮಹಾಂತನು ಕಲಿಯುಗದವನು. ಅವರಿಗೆ ಸಂಬಂಧವೆಲ್ಲಿಯದು? ಈ ಕಥೆಯನ್ನು ಇಲ್ಲಿ ಏಕೆಬರೆಯುವೆ?–ಎಂದು ಅಧಿಕ್ಷೇಪಿಸಬಹುದು. ಆದರೆ ನನ್ನ ಈ ನುಡಿಯನ್ನು ವೃಥಾಕವಿತ್ವವೆನಲಾಗದು. ಭವಿಷ್ಯೋತ್ತರಪುರಾಣದಲ್ಲಿ ವ್ಯಾಸಮಹರ್ಷಿಗಳು ಕಲಿಯುಗದಲ್ಲಿ ನಡೆವ ಭಕ್ತರ ಚರಿತ್ರೆಗಳನ್ನು ವರ್ಣಿಸಿರುವರು. "ಶ್ರೀಕೃಷ್ಣನು ಮಥುರಾಗೋಕುಲ ಬೃಂದಾವನಗಳಲ್ಲಿ ಸರ್ವಕಾಲದಲ್ಲಿಯೂ ಲೀಲೆಗಳನ್ನು ಅನುಭವಿಸುತ್ತ ಇರುವನು. ಭಾವುಕರಾದ ಭಕ್ತರು ಯಾರೋ ಅವರಿಗೆ ತನ್ನ ಲೀಲೆಗಳಂ ತೋರುವನು" ಎಂದು ಹೇಳಿರುವರು. ಮರ್ಯಾದೆಯನ್ನು ಉಲ್ಲಂಘಿಸಿ ಸಮುದ್ರೋದಕವು ಎಂತು ಹೊರಗೆ ಬಾರದೋ; ಜೀವಿಗಳ ಆಯುಃಪರಿಮಿತಿಯನ್ನು ಮೀರಿ ಕಾಲನು ಎಂತು ದಂಡಿಸುವುದಿಲ್ಲವೋ; ದಿನಪ್ರಮಾಣವನ್ನು ಅತಿಕ್ರಮಿಸಿ ಸೂರ್ಯನು ಎಂತು ಅಸ್ತಂಗತನಾಗುವುದಿಲ್ಲವೋ; ಪತಿವ್ರತೆಯು ಪತಿಯ ಆಜ್ಞೆಯನ್ನು ಮೀರಿ ಎಂತುನಡೆಯಳೋ; ಅಂತು ಕವಿಯು ಭಗವತ್ಪ್ರೇರಣೆಯನ್ನು ಮೀರಿ ಇಲ್ಲದ ಸಂಗತಿಯನ್ನು ಹೇಳನು. ಅಡಿಗೆಯನ್ನು ಮಾಡುವುದಕ್ಕೋಸ್ಕರ ನೆರೆಮನೆಯಾಕೆಯನ್ನು ಪ್ರಾರ್ಥಿಸಿ ಕರೆದುತಂದರೆ ಆಕೆಯು ತನ್ನ ಮನೆಯಿಂದ ಸಾಮಗ್ರಿಯಂ ತರುವುದುಂಟೆ? ಆಕೆ ಪಾಕಮಾಡುವುದರಲ್ಲಿ ಚತುರೆಯಾಗಿದ್ದರೆ ಭೋಜ್ಯವಸ್ತುಗಳನ್ನು ರುಚಿಕರಗಳಾಗಿರುವಂತೆ ಮಾಡಬಲ್ಲಳು. ಅದರಂತೆ ಕವಿಯು ರಚನವಿಶೇಷದಿಂದ ಕಥೆಯು ಸರಸವಾಗುವುದು. ಅಂತಲ್ಲದೆ ಮೂಲವಂಬಿಟ್ಟು ಅಸತ್ಯಗ್ರಂಥವಂ ಕವಿಯು ಎಂದಿಗೂ ಹೇಳನು. ಆದುದರಿಂದ ಪಂಡಿತರನ್ನು ಪ್ರಾರ್ಥಿಸುವೆನು; ಚಿತ್ತದಲ್ಲಿ ವಿಕಲ್ಪವನ್ನು ಮಾಡಬಾರದು. ಭೀಮಾತೀರವಿಹಾರಿಯಾದ ರುಕ್ಮಿಣೀರಮಣನೇ ಬುದ್ಧಿಯಂ ಕೊಟ್ಟು ಗ್ರಂಥವಂ ನುಡಿಯಿಸುವನು.

ಕಥೆಯ ಸಂಗತಿ ನಿಂತಿತು. ಭಾವುಕರಾದ ಶ್ರೋತೃಗಳು ಅವಧಾನವನ್ನೀಯಬೇಕು. ಪಾರ್ವತೀಪತಿಯು ನರಸಿಂಹಮಹಾಂತನನ್ನು ಕರೆದುಕೊಂಡು ಶ್ರೀಹರಿಯು ಕ್ರೀಡಿಸುತಿದ್ದ ಯಮುನಾತೀರಕ್ಕೆ ಬಂದನಲ್ಲವೆ? ಆ ಯಮುನಾತೀರದಲ್ಲಿ ಗಗನ

ಚುಂಬಿಗಳಾದ ಪಾರಿಜಾತಾಮಲಕವಕುಲಪಾಟಲಬಿಲ್ವಾಶ್ವತ್ಥಚಂಪಕದ್ರಾಕ್ಷಾ ನಾರಿಕೇಳದಾಡಿಮಪನಸಾದ್ಯನೇಕವೃಕ್ಷಂಗಳೂ, ಅಲ್ಲಲ್ಲಿ ಕಂಗೊಳಿಸುತ್ತಿರುವ ಪುಷ್ಪವಾಟಿಕೆಗಳಲ್ಲಿ ಜಾತಿಮಲ್ಲಿಕಾದಿವಿವಿಧಪುಷ್ಪವಲ್ಲರಿಗಳೂ, ಶ್ರೀಕೃಷ್ಣನ ಕಟಾಕ್ಷಗಳಿಂದ ಪವಿತ್ರಿತಗಳಾಗಿ ಸೊಗಸುಗೊಂಡಿರುವುವು. ವಸಂತನು ಸರ್ವಕಾಲದಲ್ಲಿಯೂ ಅಲ್ಲಿ ತಾನೇ ಪ್ರತ್ಯಕ್ಷನಾಗಿರುತ್ತ ಶೃಂಗಾರವಂ ಮಾಡುವನು. ಭಗವಂತನಾದ ಯಶೋದಾನಂದನನು ವಿಭವದಿಂದ ವಿನೋದಗೊಳ್ಳುತ್ತಿರುವನು. ಶ್ರೀಕೃಷ್ಣನ ಕಟಾಕ್ಷಂಗಳ ಮೈಮೆಯು ದೊಡ್ಡದು. ನೀರುಗುಂಡಿಯಮೇಲೆ ಬೀಳಲು ಅದು ಸಮುದ್ರವೆನಿಸುವುದು. ಮಂಜಿನ ಮೇಲೆ ಬೀಳಲು ಅದು ಅಮೃತವಾಗುವುದು. ಶ್ರೀಕೃಷ್ಣನು ಅಲ್ಲಿ ಕ್ರೀಡಿಸುತ್ತಿರಲು, ಹರಳುಗಳೆಲ್ಲವೂ ಪದ್ಮರಾಗಗಳಾಗಿರುವುವು. ಶುಕಪಿಕಹಂಸಸಾರಸಚಾತಕಕಪೋತಾದಿ ಪಕ್ಷಿಗಳೆಲ್ಲವೂ ಅಲ್ಲಿ ಆನಂದದಿಂದ ನಲಿದಾಡುತಿರುವುವು. ಈ ಬಣ್ಣನೆಯಂತಿರಲಿ.

ಶ್ರೀಕೃಷ್ಣನು ತನ್ನ ಬಳಿಗೆ ಬಂದ ಪರಮೇಶ್ವರನನ್ನು ಕಂಡು ಆಲಿಂಗಿಸಿಕೊಂಡನು. ಶ್ರುತಿಗಳೇ ಗೋಪಸ್ತ್ರೀಯರಾಗಿ ಸುತ್ತಲೂ ಆವರಿಸಿಕೊಂಡಿರಲು, ಶ್ರೀಕೃಷ್ಣನು ಮಧ್ಯದಲ್ಲಿ ಕೋಳಲನೂದಲು ಆರಂಭಿಸಿದನು. ಗೋಪಸ್ತ್ರೀಯರು ವಾಸುದೇವನ ಪಾದಗಳಿಗೆ ಎರಗಿದರು. ಆ ಸ್ವಾಮಿಯ ಪಾದಗಳು ಅತ್ಯಂತಸುಕುಮಾರಂಗಳು. ಧ್ವಜಾಂಕುಶಾದ್ಯನೇಕರಸಾಧಾರಣರೇಖೆಗಳಿಂದ ಪರಿಶೋಭಿಸುತ್ತಿರುವುವು. ಬ್ರಹ್ಮದೇವನು ಭಗವಂತನ ಉದರದಲ್ಲಿ ಉತ್ಪವಿಸಿದವನಾದರೂ ಆ ಪಾದಗಳನ್ನು ಅರಿಯನು. ಪವಿತ್ರತೆಯನ್ನು ವಿಚಾರಮಾಡಲು, ಸಾಕ್ಷಾದ್ಗಂಗೆಯೇ ತತ್ಪಾದೋದಕವೆನಿಸಿರುವಳು. ಆ ಪಾದಗಳಲ್ಲಿ ಕಂಗೊಳಿಸುವ ಅಂದುಗೆಗಳು "ಮೂರು ಲೋಕದೊಳಗೂ ನಾವೇ ಧನ್ಯಂಗಳು ; ಕಮಲಾಪತಿಯು ಸಂತುಷ್ಟನಾಗಿ ನಮ್ಮನ್ನು ಸರ್ವಕಾಲದಲ್ಲಿಯೂ ಪಾದಂಗಳಲ್ಲಿ ಧರಿಸಿರುವನು" ಎಂದು ಧ್ವನಿಮಾಡುತ್ತ ಇರುವುವು. ಆ ಪಾದನಖಂಗಳ ಕಾಂತಿಯನ್ನು ಕಂಡು ಚಂದ್ರನು ಬಹುಲಜ್ಜಿತನಾಗಿರುವನು. ಪಾದದರ್ಶನವನ್ನು ಮಾಡಿದವರ ಪಾಪವೆಲ್ಲವೂ ಕ್ಷಣದಲ್ಲಿ ಧ್ವಂಸವೂದುವುವೆಂದು ತೊಡರುಗಳು ಧ್ವನಿಗೈಯುತ್ತಿರುವುವು. ಜಾನುಜಂಘೆಗಳು ಅತಿಸುಂದರವಾಗಿರುವುವು. ಕಟಿಯಲ್ಲಿ ವಿದ್ಯುತ್ಕೋಟಿಯಂತ ಹೊಳೆಯುತ್ತಿರುವ ಪೀತಾಂಬರವು ಶೋಭಿಸುತ್ತಿರುವುದು. ಆಜಾನುಬಾಹುಗಳೆರಡೂ ಸುವರ್ಣದಂಡಗಳಂತೆ ಕಂಗೊಳಿಸುತ್ತಿರುವುವು. ನಾಭಿಯು ಬ್ರಹ್ಮನ ಜನ್ಮಸ್ಥಾನವು. ಆದರೂ ಆತನು ಅದರ ಆಳವನ್ನು ತಿಳಿಯನು. ಶ್ರೀದೇವಿಗೆ ಕ್ರೀಡಾಭವನವಾದ ಕೌಸ್ತುಭದಿಂದ ಮೆರೆವ ವಿಶಾಲವಕ್ಷಸ್ಸ್ಥಳ, ನೀಲಮೇಘಶ್ಯಾಮಲವಾದಮೈ, ಸುಂದರತರವಾದ ತ್ರಿವಳಿ, ಭ್ರಾಂತಿಗೊಂಡು ಶ್ರೀವತ್ಸವನ್ನೇ ನೋಡುವಂತಿರುವ ರೋಮಾವಳಿ, ಬಟ್ಟಗೂಡಿದ್ದ ಸರ್ವಾನಂದಕ್ಕೆ ಎಡೆಯಾದ ವದನಾರವಿಂದ, ಲಕ್ಷ್ಮಿಗೊಬ್ಬಳಿಗೆ ಲಭ್ಯವಾದ ಅಮೃತರಸದ ಸವಿಯಿಂದ ಕೂಡಿ ವೇಣುಚುಂಬಿತವಾಗಿ ಸುರುಚಿರವಾದ ಅಧರ,

ಕಮಲದಳಗಳಂತೆ ವಿಶಾಲವಾದ ನೇತ್ರಗಳು, ಸರಳತರವಾದ ನಾಸಿಕೆ, ಥಳಥಳಿಸುವ ಕರ್ಣಕುಂಡಲಗಳು, ತಿದ್ದಿದಂತಿರುವ ಹುಬ್ಬುಗಳು, ವಿಶಾಲವಾದ ನಿಟಿಲ, ನವಿಲ್ಗರಿಯಿಂದ ಕೂಡಿದ ಮುಂಗುರುಳು, ಕೋಟಿಸೂರ್ಯಪ್ರತೀಕಾಶವಾದ ಕಿರೀಟ, ನಿರ್ಮಲವಾದ ಆಕಾಶದಲ್ಲಿ ಪ್ರಕಾಶಿಸುವ ನಕ್ಷತ್ರಗಳಂತೆ ಶೋಭಿಸುವ ಅನೇಕರತ್ನಾಭರಣಂಗಳು, ಕಂಠದಲ್ಲಿ ಉಯ್ಯಾಲಾಡುವ ಏಕಾವಳಿ, ಪಾದಪರ್ಯಂತವಾದ ಲಂಬಮಾನವಾದ ವೈಜಯಂತಿ, ಭಕ್ತಜನಸಮರ್ಪಿತವಾದ ಘಮಘಮಿಸುವ ವಿವಿಧಪುಷ್ಪತುಳಸೀಮಾಲೆ, ಸರ್ವಾಂಗಗಳಲ್ಲಿ ವಿಲಿಪ್ತವಾದ ಮಗಮಗಿಸುವ ಚಂದನ, ನಿಟಿಲದಲ್ಲಿ ತಿದ್ದಿದ ಸುರುಚಿರವಾದ ಕಸ್ತೂರೀತಿಲಕ, ಇಂತಿವುಗಳಿಂದ ಜಗನ್ಮೋಹನನಾದ ಶ್ರೀಕೃಷ್ಣಪರಮಾತ್ಮನು ಸಂತೋಷದಿಂದ ವೇಣುನಾದವಂ ಮಾಡುತ್ತಿರಲು, ಗೋಪಿಯರು ಧ್ಯಾನಿಸುತ್ತ ಸ್ತಿಮಿತಲೋಚನೆಯರಾಗಿ ಆ ವೇಣುನಾದಕ್ಕೆ ಸರಿಯಾಗಿ ಮುಖದಿಂದ ಪದಂಗಳಂ ಪಾಡುತ್ತ ರಾಗಗಳನ್ನು ಆಲಾಪಿಸುತ್ತ ಶ್ರೀಯದುನಂದನನನ್ನು ಸುತ್ತುವರಿದು ನರ್ತನವಂ ಮಾಡುತಿದ್ದರು. ಪಾರ್ವತೀಪತಿಯು ಮೃದಂಗವಂ ಬಾಜಿಸುತಿರ್ದನು. ಶ್ರೀಕೃಷ್ಣನು ನಡುನಡುವೆ ತಾಳದ ಸಂಗತಿಗಳಂ ಸಂಕೇತದಿಂದ ತೋರುತಿದ್ದನು. ತಾಳಮೃದಂಗಧ್ವನಿಯಿಂದಲೂ ಗೋಪಿಯರ ನರ್ತನದಿಂದಲೂ ಗಾಯನದಿಂದಲೂ ವೇಣುನಾದದಿಂದಲೂ ಬ್ರಹ್ಮಾನಂದವುಂಟಾಗಿದ್ದಿತು.

ಆ ಸಮಯದಲ್ಲಿ ವ್ರಜಸುಂದರಿಯರು—ಶ್ರೀಕೃಷ್ಣನಂ ಕುರಿತು—ಸ್ವಾಮಿಯೆ! ನಿನ್ನೊಡನೆ ಕಾಮಸುಖವನ್ನನುಭವಿಸಲು ನಾವು ಬಂದಿರುವೆವು. ನೀನು ಒಬ್ಬನು. ನಾವು ಅಸಂಖ್ಯೆಯರಿರುವೆವು. ನಿನ್ನ ವದನಾರವಿಂದವನ್ನು ನೋಡಿದರೆ ನಮಗೆಲ್ಲರಿಗೂ ಚುಂಬಿಸಲಾಸೆಯುಂಟಾಗುವುದು. ನಿನ್ನ ಮಂಗಳಕರವಾದ ಹೃದಯಕ್ಕೆ ನಮ್ಮ ಹೃದಯವನ್ನು ಕೂಡಿಸಿ ಆಲಿಂಗನವಂ ಮಾಡಿಕೊಳ್ಳಬೇಕೆಂದು ಉತ್ಕಂಠಿತೆಯರಾಗಿ ಇರುವೆವು. ಇಷ್ಟು ಮಂದಿಗಳನ್ನೂ ನೀನು ಸಂತೋಷಗೊಳಿಸಬೇಕು—ಎಂದು ಪ್ರಾರ್ಥಿಸಿದರು. ಶ್ರೀಹರಿಯು ಆ ಗೋಪಿಯರ ಮಾತಂ ಕೇಳಿ ಅವರ ಭಾವವನ್ನು ಅನುಸರಿಸಿ, ಆ ಗೋಪಸ್ತ್ರೀಯರು ಎಷ್ಟುಮಂದಿಗಳಿದ್ದರೋ ತಾನೊಬ್ಬನೇ ಅಷ್ಟು ಸಂಖ್ಯೆಯ ಸ್ವರೂಪವಂ ಧರಿಸಿ ವೇಣುಗಾನವಂ ಮಾಡುತ್ತ ನರ್ತನವಂ ಮಾಡುತಿರ್ದನು.

ಗೋಪಿಯರು ನೀಲಮೇಘಶ್ಯಾಮನ ಕರಾರವಿಂದವಂ ಹಿಡಿದು ಆ ಸ್ವಾಮಿಯ ತೋಳುಗಳಂ ತಮ್ಮ ಕೊರಲುಗಳಮೇಲೆ ಹಾಕಿಕೊಂಡು ಆಗಾಗ ಚುಂಬನವಂ ಮಾಡುವರು. ಇಬ್ಬರು ಗೋಪಿಯರು ಇಬ್ಬರು ಕೃಷ್ಣರು ಒಬ್ಬರೊಬ್ಬರ ಕೈಗಳಂ ಹಿಡಿದು ರಾಸಮಂಡಲದಲ್ಲಿ ಆನಂದದಿಂದ ಕ್ರೀಡಿಸುತ್ತಿರುವರು. ಗೋಪಿಯರು ಶ್ರೀಕೃಷ್ಣನ ಸುಕುಮಾರವಾದ ಶರೀರವನ್ನೂ ವಿಶಾಲವಾದ ಹೃದಯವನ್ನೂ ರೋಮಾವಳಿಯನ್ನೂ ತ್ರಿವಳಿಯನ್ನೂ ನೋಡಿದೊಡನೆಯೆ ಮೋಹಿತೆಯರಾಗುತ್ತ ಆ ಸ್ವಾಮಿಯ

ಕರವನ್ನು ತೆಗೆದು ತಮ್ಮ ಹೃದಯದಲ್ಲಿ ಇಟ್ಟುಕೊಳ್ಳುವರು. ತಂಬುಲವನ್ನು ತಮ್ಮ ಮುಖದಲ್ಲಿ ಗ್ರಹಿಸುವರು. ಶ್ರೀಕೃಷ್ಣನು ಸರ್ವರ ಮನೋವಿನೋದಕ್ಕೂ ಆಶ್ರಯನಾದುದರಿಂದ ಯಾರಯಾರ ಅಪೇಕ್ಷೆ ಎಂತಿರುವುದೋ ಅವರವರಪೇಕ್ಷೆಯನ್ನು ಅಂತಂತು ಪೂರೈಸುತಿದ್ದನು.

ಇಂತು ಅನೇಕಗೋಪಿಯರು ರಾಸಮಂಡಲದಲ್ಲಿ ಪಾಡುತ ಕುಣಿಯುತಿರಲು, ಗೋಪಿಕಾವೇಷಧಾರಿಯಾದ ನರಸಿಂಹಮಹಾಂತನು ಅನೇಕನಕ್ಷತ್ರಗಳುಳ್ಳ ಗಗನಮಂಡಲದಲ್ಲಿ ಧ್ರುವನಕ್ಷತ್ರದಂತೆ ದೃಗ್ಗೋಚರನಾಗಲು, ಶ್ರೀಕೃಷ್ಣನು ಈಶ್ವರನಂ ಕುರಿತು—ವೃಷಭಧ್ವಜನೆ ! ಇದೇನು ? ಯಾವ ಹೊಸಗೋಪಿಯನ್ನು ಕರೆದುಕೊಂಡು ಬಂದೆ ? ನಮ್ಮಿರ್ವರಿಗೂ ಪರಸ್ಪರಪ್ರಿತಿವಿಶೇಷವಿರುವುದರಿಂದ ನೀನು ಈ ರಾಸಮಂಡಲಕ್ಕೆ ಬರುತಿರುವೆ. ಇಂದು ನೀನು ಮಿತ್ರತ್ವದಲ್ಲಿ ವಂಚನೆಯಂ ಮಾಡಬಹುದೇ ? ಎನಲು, ಚಂದ್ರಮೌಳಿಯು ನಕ್ಕು ನರಸಿಂಹಮಹಾಂತನಿಗೆ ಸನ್ನೆಯಂ ಮಾಡಲು, ಆತನು ಬಳಿಗೆಬಂದು ಶ್ರೀಕೃಷ್ಣನ ಪಾದಗಳಿಗೆ ಎರಗಿದನು. ಪರಮೇಶ್ವರನು ಶ್ರೀಕೃಷ್ಣನಂ ಕುರಿತು-ವಾಸುದೇವನೆ! ಈತನು ನಿನ್ನ ಪಾದಸೇವಕನು; ಈತನಂ ಸಂರಕ್ಷಿಸಬೇಕು, ಈತನು ಸಜ್ಜನರನ್ನು ಉದ್ಧರಿಸುವುದಕ್ಕೋಸ್ಕರ ಸ್ವಾಂಶದಿಂದ ಅವತರಿಸಿ ಇರುವನೆಂಬುದು ನಿನಗೆ ವಿದಿತವಾಗಿಯೇ ಇದೆ. ಬ್ರಾಹ್ಮಣಕುಲದಲ್ಲಿ ಉತ್ಪನ್ನನಾದ ಈತನಿಗೆ ಕೇವಲಬಾಲ್ಯದಲ್ಲಿಯೆ ತಾಯ್ತಂದೆಗಳು ತೀರಿಹೋದರು. ಈತನು ನನ್ನನ್ನು ಸೇರಿ ಅನ್ನೋದಕಂಗಳನ್ನೂ ಬಿಟ್ಟು ಅನನ್ಯಭಾವದಿಂದ ತನ್ನ ಶರೀರವನ್ನು ನನಗೆ ಸಮರ್ಪಿಸಲು, ನಾನು ಸಂತುಷ್ಟನಾಗಿ ವರವಂ ಬೇಡೆಂದು ಹೇಳಿದೆನು. ಅದಕ್ಕೆ—ವರವಂ ಬೇಡಲು ನನಗೆ ತಿಳಿಯದು ; ನಿನಗೆ ಇಷ್ಟವಾದುದು ಯಾವುದೋ ಅದಂ ಕರುಣಿಸಬೇಕೆಂದು ಬೇಡಿದನು. ನನಗೆ ಇಷ್ಟನಾದವನು ನೀನು. ನಿನ್ನ ವಿಲಾಸವು ನನಗೆ ಇಷ್ಟವಾದುದು. ಆದುದರಿಂದ ನಿನ್ನ ಸನ್ನಿಧಿಗೆ ಕರೆದುಕೊಂಡು ಬಂದೆನು. ನೀನು ಮಸ್ತಕದಲ್ಲಿ ಅಭಯಹಸ್ತವನಿಟ್ಟು ವರದಾನವಂ ಮಾಡಬೇಕು-ಎಂದನು.

ಕಮಲಾಪತಿಯು ಸಂತುಷ್ಟನಾಗಿ ನರಸಿಂಹಮಹಾಂತನಂ ಕೈಯಲ್ಲಿ ಹಿಡಿದುಕೊಂಡು ಮಸ್ತಕದಲ್ಲಿ ದಿವ್ಯಹಸ್ತವನಿರಿಸಿ ಅಭಯವನಿತ್ತು—ಈ ರಾಸಮಂಡಲವಂ ಕಣ್ಣಿಂದ ಕಂಡೆಯಲ್ಲಾ ! ಇದರಂತೆ ಪ್ರಬಂಧವನ್ನು ರಚಿಸಿ ಸರ್ವರಿಗೂ ತಿಳಿಯಿಸುವನಾಗು. ನನ್ನ ಲೀಲಾವಿಭವವು ನಿನ್ನ ಕಣ್ಣಿಗೆ ನಿತ್ಯವೂ ಕಾಣುವಂತೆ ವರವಂ ಕರುಣಿಸಿರುವೆನು—ಎಂದು ನುಡಿದು, ಪರಮೇಶ್ವರನಂ ಕುರಿತು—ಇನ್ನು ಈತನನ್ನು ನೀನು ಕರೆದುಕೊಂಡು ಹೋಗಬಹುದೆನಲು, ಪಾರ್ವತೀಪತಿಯು ಶ್ರೀಕೃಷ್ಣನನ್ನು ಅಭಿವಂದಿಸಿ ನರಸಿಂಹಮಹಾಂತನನ್ನೂ ಕರೆದುಕೊಂಡು ಅಲ್ಲಿಂದ ಹೊರಟು ತನ್ನ ಆಲಯಕ್ಕೆ ಬಂದು ಆತನಿಗೆ ಅಭಯವಂ ಕರುಣಿಸಿ ಅಂತರ್ಧಾನವನೈದಿದನು.

ಬಳಿಕ ನರಸಿಂಹಮಹಾಂತನು ಆ ಶಿವಾಲಯದಲ್ಲಿಯೇ ಇರುತ್ತ ಪ್ರೀತಿವಿಶೇಷದಿಂದ ಹಗಲೂ ಇರುಳೂ ಭಗವನ್ನಾಮಸಂಕೀರ್ತನೆಯಂ ಮಾಡುತ್ತ ಶ್ರೀಕೃಷ್ಣಲೀಲಾಕಥೆಗಳಂ ಪಾಡುತ್ತ ಆನಂದದಿಂದ ಕಾಲವಂ ಕಳೆಯುತ್ತಿದ್ದನು. ಶ್ರೀಹರಿಯ ಗುಣಂಗಳಂ ವಿಶೇಷಿಸಿ ರಾಸಕ್ರೀಡೆಯನ್ನು ಬಣ್ಣಿಸಿ ಗ್ರಂಥವನ್ನು ರಚಿಸಿದನು. ಆ ಗ್ರಂಥವು ಗುಜರಾತಿಯ ಭಾಷೆಯಲ್ಲಿರುವುದು. ಆದೇಶದಲ್ಲಿ ಈಗಲೂ ಜನರು ಅದನ್ನು ಪಾಡುತ್ತಿರುವರು.

ಹಿಂದೆ ನರಸಿಂಹಮಹಾಂತನು ಮುನಿಸುಗೊಂಡು ತನ್ನ ಮನೆಯಿಂದ ಹೊರಟು ಅರಣ್ಯವಂ ಪ್ರವೇಶಿಸಿದನೆಂದು ಬಂಧುಗಳು ಅಂದಿನಿಂದಲೂ ಹುಡುಕುತಿದ್ದರು. ಆಕಸ್ಮಿಕವಾಗಿ ಆ ಶಿವಾಲಯದಲ್ಲಿ ಆತನಂ ಕಂಡು ಆತನು ಮಾಡುತಿದ್ದ ಭಗವನ್ನಾಮಸಂಕೀರ್ತನವಂ ಕೇಳಿ ಸಂತುಷ್ಟರಾಗಿ ಅನೇಕರೀತಿಯಿಂದ ಸಮಾಧಾನವನ್ನು ಹೇಳಿ ತಮ್ಮ ಊರಿಗೆ ಕರೆದುಕೊಂಡು ಹೋದರು. ಆತನನ್ನು ನೋಡಿ ಎಲ್ಲರೂ—ಈತನಲ್ಲಿ ಭಗವದನುಗ್ರಹವುಂಟಾದಕಾರಣ ಮೊದಲಿದ್ದ ಅವಗುಣಂಗಳೆಲ್ಲವೂ ಹೋದುವು. ಈಗ ಸಾತ್ತ್ವಿಕನಾಗಿ ಮಹಾತೇಜಸ್ಸಂಪನ್ನನಾಗಿರುವನು. ಶ್ರೀಹರಿಯ ಕೃಪೆಯುಂಟಾದರೆ ಯಾವ ವಿಷಯದಲ್ಲೇನುಕೊರತೆ?—ಎಂದು ಅಭಿನಂದಿಸಿದರು.

ಆವೂರಲ್ಲಿಯೇ ಇನ್ನೊಬ್ಬ ಬ್ರಾಹ್ಮಣನಿದ್ದನು. ಆತನು ನರಸಿಂಹಮಹಾಂತನ ಸಾತ್ತ್ವಿಕಭಾವವನ್ನು ನೋಡಿ ಸಂತೋಷಗೊಂಡು ತನ್ನ ಮಗಳನ್ನು ಕೊಟ್ಟು ಮದುವೆಯಂ ಮಾಡಿದನು. ನರಸಿಂಹಮಹಾಂತನು ಗೃಹಸ್ಥಾಶ್ರಮವಂ ಪಡೆದು ದಿನದಿನಕ್ಕೆ ಅಭಿವೃದ್ಧಿಯೊಂದಿದನು. ಯಾರನ್ನೂ ಉಪಸರ್ಪಣೆಮಾಡನು; ರಾಜನನ್ನೂ ಭಿಕ್ಷುಕನನ್ನೂ ಸಮರನ್ನಾಗಿ ತಿಳಿಯುತಿದ್ದನು. ಸರ್ವಕಾಲದಲ್ಲಿಯೂ ಭಗವದ್ಧ್ಯಾನದಲ್ಲಿ ನಿರತನಾಗಿದ್ದನು. ಆತನಿಗೆ ಒಬ್ಬ ಪುತ್ರನುದಯಿಸಿದನು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತೊಂದನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತೆರಡನೆಯ ಅಧ್ಯಾಯ.

ಶ್ರೀರುಕ್ಮಿಣೀಪತಿಯೆ! ವ್ರಜನಾರೀರಾಸರಂಗವಿನೋದನೆ! ಪುಂಡರೀಕವರದನೆ! ಪಾಂಡುರಂಗನೇ! ಶ್ರೀರಂಗನಾಥನೆ! ನಿನ್ನಲ್ಲಿ ಅಪೇಕ್ಷೆಯುಂಟಾಗಲು, ಭಜಕರು ಸರ್ವವಿಷಯಗಳಲ್ಲಿಯೂ ನಿರಪೇಕ್ಷರಾಗುವರು. ನೀನು ಸಕಲಜೀವರಿಗೂ ವಿಶ್ರಾಂತಿ

ಸ್ಥಾನವು. ಆತ್ಮಾರಾಮನಾದ ರಘುನಂದನನೆ! ನೀನು ಮನಃಪ್ರೇರಕನು. ಸರ್ವ ಚೈತನ್ಯಸ್ವರೂಪನು. ಗುಣಾತೀತನು. ವೈರಿಗಳಿಗೂ ಸಾಯುಜ್ಯವನ್ನೀಯುವನು. ನೀನು ದೇವಾದಿದೇವನು; ಸನಾತನನು. ಅಂಬರೀಷನು ನಿನ್ನನ್ನು ಶರಣುಹೊಂದಿ ಏಕಾದಶೀವ್ರತವನ್ನು ಪ್ರೀತಿಯಿಂದ ಆಚರಿಸುವಂದು ಮಹಾಮುನಿಯಾದ ದುರ್ವಾಸನು ಆತನನ್ನು ಛಳಿಸುವುದಕ್ಕೋಸ್ಕರ ಬಂದು ಶಾಪವನ್ನು ಕೊಡಲುಜ್ಜುಗಿಸಲು, ಆ ಅಂಬರೀಷನು ನಿನ್ನನ್ನು ಮರೆವೊಕ್ಕು ಸ್ತುತಿಯಿಸಿದನು. ಆತನ ಕರುಣಾವಚನವಂ ಕೇಳಿ ದಯೆಯಿಂದ ಸಂನಿಹಿತನಾಗಿ ಆತನಿಗೆ ಅಭಯವನ್ನು ಕೊಟ್ಟು ಆ ಋಷಿಯ ಮೇಲೆ ಚಕ್ರವಂ ಪ್ರಯೋಗಿಸಿ ಆ ಭಕ್ತನಿಗೋಸ್ಕರ ಆ ಋಷಿಯನ್ನು ಸಂಕಟಗೊಳಿಸಿದೆ. ಬಳಿಕ ಆ ಋಷಿಯು ಶಾಪವನ್ನೀಯಲು, ಆ ನಿನ್ನದಾಸನಿಗೆ ಅಭಯವಂ ಕೊಟ್ಟು ನೀನೆ ಹತ್ತು ಗರ್ಭಗಳಲ್ಲಿ ವಾಸವಂ ಮಾಡಿದೆ. ಮತ್ಸ್ಯಕೂರ್ಮವರಾಹ ರೂಪಗಳಿಂದ ಪೃಥ್ವಿಯನ್ನು ರಕ್ಷಿಸಿದೆ. ದುರ್ಲಲಿತನಾದ ಹಿರಣ್ಯಕಶಿಪುವು ಭಕ್ತನಾದ ಪ್ರಹ್ಲಾದನನ್ನು ಹಿಂಸೆಗೊಳಿಸುತ್ತಿರಲು, ನರಸಿಂಹರೂಪದಿಂದ ಸ್ತಂಭದಲ್ಲಿ ಅವತರಿಸಿ ಆದೈತ್ಯನನ್ನು ಸಂಹರಿಸಿ ಪ್ರಹ್ಲಾದನನ್ನು ಪಾಲಿಸಿದೆ. ಉದ್ವೃತ್ತರಾದ ಕ್ಷತ್ರಿಯರನ್ನು ಪರಶುರಾಮಾವತಾರದಿಂದ ಧ್ವಂಸಮಾಡಿದೆ. ರಾವಣನು ಪರಮೇಶ್ವರನ ವರದಿಂದ ದೃಪ್ತನಾಗಿ ಇಂದ್ರಾದಿದೇವತೆಗಳನ್ನು ಸೆರೆಯಲ್ಲಿಟ್ಟು ರಾಜ್ಯವಾಳುತಿರಲು, ವಾಯುವು ಆತನ ಮನೆಯಲ್ಲಿ ಸಂಮಾರ್ಜನೆಯನ್ನು ಮಾಡುತ್ತಿದ್ದನು. ಇತರರು ಅನೇಕವಾದ ಇತರಸೇವಾಕಾರ್ಯಗಳಲ್ಲಿ ವ್ಯಾಪೃತರಾಗಿದ್ದರು. ಕರುಣಾನಿಧಿಯಾದ ನೀನು ದೇವತೆಗಳ ಸಂಕಟವನರಿತು ರಾಮಾವತಾರವನ್ನು ವಹಿಸಿ ಆ ರಾವಣನನ್ನು ಸಂಹರಿಸಿದೆ. ಸಕಲದೇವತೆಗಳನ್ನೂ ಸೆರೆಯಿಂದ ಬಿಡಿಸಿ ತ್ರೈಲೋಕ್ಯವನ್ನು ರಕ್ಷಿಸಿದೆ. ಕಂಸಚಾಣೂರಾದಿಗಳು ಪ್ರಬಲಿಸಿ ಲೋಕಕಂಟಕರಾಗಿರಲು, ಶ್ರೀಕೃಷ್ಣಾವತಾರವನ್ನು ಧರಿಸಿ ಆ ದುಷ್ಟರನ್ನು ಧ್ವಂಸಮಾಡಿ, ಪಾಪಿಗಳಾದ ಕೌರವರನ್ನು ಶಿಕ್ಷಿಸಿ ಧರ್ಮಾತ್ಮರಾದ ಧರ್ಮಜಾದಿಗಳನ್ನು ರಕ್ಷಿಸಿ ಧರ್ಮಸಂಸ್ಥಾಪನೆಯನ್ನು ಮಾಡಿದೆ. ಈ ಕಲಿಯುಗದಲ್ಲಿ ಸದ್ಭಾವದಿಂದ ಶರಣಾಗತರಾದ ಭಕ್ತಶ್ರೇಷ್ಠರನ್ನು ಪಲವು ಬಗೆಯಿಂದ ಉದ್ಧರಿಸುತ್ತಿರುವೆ. ರಾಮದಾಸನಿಗೋಸ್ಕರ ಠಾಕುಳಕ್ಕೆ ಬಂದೆ. ಗುಂಜಿಯ ತೂಕದ ಚಿನ್ನಕ್ಕೋಸ್ಕರ ಸಂತೆಯಲ್ಲಿ ಮಾರಲ್ಪಟ್ಟೆ. ನೀನು ಮಹಾಮಹಿಮನು. ನಿನ್ನ ನಾಮಸಂಕೀರ್ತನದಿಂದ ಸಕಲರೂ ಧನ್ಯರೆನಿಸುವರು. ನಿನ್ನ ಭಕ್ತರ ಚರಿತ್ರೆಯನ್ನು ಶ್ರವಣಮಾಡಲು, ನೀನು ಪ್ರಸನ್ನನಾಗುವೆ.

ಎಲೈ ಶ್ರೋತೃಗಳಿರಾ! ಮುಂದಣ ಕಥೆಯನ್ನು ಆಲಿಸಿ. ಶ್ರೀಕೃಷ್ಣನು ನರಸಿಂಹಮಹಾಂತನಿಗೆ ರಾಸಕ್ರೀಡಾವಿಲಾಸವಂ ತೋರಿಸಿದನು. ಅದರಂತೆ ಪ್ರಬಂಧವಂ ರಚಿಸುವ ಶಕ್ತಿಯನ್ನೂ ಕರುಣಿಸಿದನು. ಅನಂತರ ನರಸಿಂಹಮಹಾಂತನು ಆಸ್ಯ

ಮಿಯ ವರಪ್ರಸಾದದಿಂದ ಅನೇಕಗ್ರಂಥಗಳಂ ರಚಿಸಿ, ತಾಳಮೃದಂಗಗಳಂ ಬಾಜಿಸುತ್ತ ನಿತ್ಯದಲ್ಲಿಯೂ ಹರಿಕೀರ್ತನೆಯಂ ಮಾಡುತ್ತ ಯಾರ ಮನೆಯ ಬಾಗಿಲನ್ನೂ ಕಾಯದೆ, ಧನಿಕನನ್ನೂ ದೀನನನ್ನೂ, ಕಲ್ಪವೃಕ್ಷವನ್ನೂ ಬಬ್ಬೂರವನ್ನೂ, ಪಂಡಿತನನ್ನೂ ಗಾಂಪನನ್ನೂ, ಸುಜನನನ್ನೂ ದುರ್ಜನನನ್ನೂ, ಸಮತೆಯಿಂದ ಕಾಣುತ್ತ ಅಪ್ರಾರ್ಥಿತವಾಗಿ ದೊರೆತ ದ್ರವ್ಯದಿಂದ ಅತಿಥಿಸತ್ಕಾರವಂ ಮಾಡಿ ಕುಟುಂಬಭರಣವಂ ಮಾಡುತ್ತಿದ್ದನು.

ಆ ಜುನ್ನಾಗಡಿಯ ಸಮೀಪದಲ್ಲಿ ಶ್ಯಾಮಪುರವೆಂಬ ಗ್ರಾಮವಿರುವುದು. ಅಲ್ಲಿ ಧನಿಕನಾದ ತ್ರಿಪುರಾಂತಕನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನು ನರಸಿಂಹಮಹಾಂತನ ಬಂಧು. ಆತನ ಕನ್ಯಕೆ ಮದುವೆಗೆ ಬಂದಿದ್ದಳು. ವರನಿಶ್ಚಯಕ್ಕೋಸ್ಕರ ತನ್ನ ಪುರೋಹಿತನಾದ "ಕೃಷ್ಣಭಟ್ಟ" ಎಂಬವನನ್ನು ಕಳುಹಿಸಿಕೊಟ್ಟನು. ಆತನು ನರಸಿಂಹಮಹಾಂತನ ಮನೆಗೆ ಬಂದು "ನಿಮ್ಮ ಕುಮಾರನಿಗೆ ತನ್ನ ಕನ್ಯೆಯನ್ನು ಕೊಡಬೇಕೆಂದು ನಿಶ್ಚಯಿಸಿಕೊಂಡು ನಮ್ಮ ಯಜಮಾನನು ನನ್ನನ್ನು ತಮ್ಮಲ್ಲಿಗೆ ಕಳುಹಿಸಿಕೊಟ್ಟಿರುವನು. ತಾವು ದೊಡ್ಡಮನಸ್ಸಂ ಮಾಡಿ ಆಕನ್ಯೆಯಂ ತಂದುಕೊಳ್ಳಬೇಕು. ಕನ್ಯೆ ಲಕ್ಷಣವತಿಯಾಗಿರುವಳು. ಉತ್ತಮವಾದ ಬಂಧುತ್ವ" ಎಂದು ತಕ್ಕತೆರದಲ್ಲಿ ಮಾತನಾಡಿದನು. ಆ ನರಸಿಂಹಮಹಾಂತನು--ದೈವಸಂಕಲ್ಪವಿದ್ದರೆ ಆಗಬಹುದು_ಎಂದನು. ಘಟಿತಾರ್ಥವನ್ನು ನೋಡಲು, ಮೂವತ್ತಾರುಗುಣಗಳೂ, ಕೂಡಿಬಂದುವು. ಲಗ್ನವನ್ನು ನಿಶ್ಚಯಮಾಡಿ_ಆ ಪುರೋಹಿತನು ಹಿಂದಿರುಗಿ ಬಂದನು. ಪುರೋಹಿತನುಮಾಡಿದ ನಂಟತನವೇ ಸರ್ವರ ಮನಸ್ಸಿಗೂ ಸಮಾಧಾನಕರವಾಗಿರುವುದು. ಒಂದುಪಕ್ಷದಲ್ಲಿ ಆತನು ನಿಶ್ಚಯಿಸಿದ ವರನಿಗೆ ಯಜಮಾನನು ಕನ್ಯಕೆಯನ್ನು ಕೊಡದಿದ್ದರೆ ಪುರೋಹಿತನು ತನ್ನ ಬೆರಲನ್ನುಕೊಯ್ದು ವರನಿಗೆ ಕೊಡಬೇಕು. ಆ ದೇಶದಲ್ಲಿ ಪದ್ಧತಿಯಿಂತಿರುವುದು. ಆ ಬ್ರಾಹ್ಮಣನು ವರನಿಶ್ಚಯಮಾಡಿ ಯಜಮಾನನಿಗೆ ತಿಳಿಯಿಸಿದನು. ಪುರೋಹಿತನ ಮಾತನ್ನು ಕೇಳಿ ಎಲ್ಲರೂ ನಕ್ಕರು. "ಈಕನ್ಯೆಯ ಪೂರ್ವಕರ್ಮವು ವಿಪರೀತವಾಗಿರುವಂತೆ ತೋರುವುದು; ಆತನು ವೈಷ್ಣವನು; ವಿಷಯಗಳಲ್ಲಿ ಉದಾಸೀನವೃತ್ತಿಯುಳ್ಳವನು; ಹಗಲೂ ಇರುಳೂ ಕುಣಿಯುತ್ತಿರುವನು; ತಿನ್ನುವುದಕ್ಕೆ ಅನ್ನವಿಲ್ಲ; ಉಡುವುದಕ್ಕೆ ಬಟ್ಟೆಯಿಲ್ಲ; ಇರುವುದಕ್ಕೆ ಮನೆಯಿಲ್ಲ; ಇಂತಹ ಮನುಷ್ಯನ ಮನೆಗೆ ಕನ್ಯಕೆಯನ್ನು ಕೊಡುವುದಕ್ಕೆ ನೀನು ಎಂತು ನಿಶ್ಚಯವನ್ನು ಮಾಡಿದೆ? ಏನಾದರೂ ನಂಟತನವು ಶೋಭಿಸುವುದಿಲ್ಲ. ಆತನು ಕೇವಲವಿರಕ್ತನು; ತನ್ನವರು ಪೆರರವರು_ಎಂಬ ಎಣಿಕೆಯೇ ಆತನಿಗಿಲ್ಲ. ಅಂತವನ ಸಂಬಂಧವಂ ಮಾಡುವುದೆಂತು?" ಎಂದು ಮಾಂಕರಿಸಿದರು. ಪುರೋಹಿತನು ಆನುಡಿಯಂ ಕೇಳಿ ಉಪಶಾಂತನಾಗಿ_ನಾನು ನಿಶ್ಚಯಮಾಡಿಕೊಂಡು ಬಂದಿರುವೆನು. ನೀವಾದರೆ ಸಂದೇಹಪಡುವಿರಿ. ನಾನು ಬೆರಲನ್ನು ಕೊಯ್ದು ಕೊಟ್ಟುಬಿಡುವೆನು-

ಎಂದನು. ಅದಕ್ಕೆ ಯಜಮಾನನಾದ ತ್ರಿಪುರಾಂತಕನು—ನಾಳೆ ಮುಹೂರ್ತವು ನಿಶ್ಚಿತವಾಗಿದೆ. ನಾವು ಊರಲ್ಲಿ ಪ್ರಖ್ಯಾತರಾಗಿರುವವರು. ಬೀಗನು ಭಿಕ್ಷುಕನೆನಿಸಿರುವನು. ನಮ್ಮ ಸಂಬಂಧವನ್ನು ತಿಳಿದು ನಂಟರು ಅಪಹಾಸ್ಯಮಾಡದಂತೆ ಜನೂರಾನೆಕುದುರೆಗಳನ್ನೂ ರಥಗಳನ್ನೂ ಮದುವೆಗೆ ಬರಲು ತರಬೇಕು. ಕನ್ಯಕೆಗೆ ಅಮೂಲ್ಯವಾದ ವಸ್ತ್ರಾಲಂಕಾರಗಳನ್ನು ತರಬೇಕು. ಅನೇಕಮಂಗಳವಾದ್ಯಗಳು ಸಂಗಡ ಬರಬೇಕು. ನಮ್ಮ ಊರಲ್ಲಿರುವರಿಗೆಲ್ಲರಿಗೂ ಮೃಷ್ಟಾನ್ನಭೋಜನವಂ ಮಾಡಿಸಬೇಕು. ಇಷ್ಟು ಸಾಹಿತ್ಯಗಳಿಂದ ನಾಳೆ ಲಗ್ನಕ್ಕೆ ಬರಬೇಕು. ಅಂತು ತಪ್ಪಿದರೆ ಲಗ್ನವೂ ತಪ್ಪಿಹೋಗಬಹುದು. ಈ ಮಾತು ಸತ್ಯವೆಂದು ತಿಳಿ-ಎಂದನು. ಈ ನುಡಿಯಂ ಕೇಳಿ ತ್ರಿಪುರಾಂತಕನು ಆಯಜಮಾನನ ಮನೋಗತವನರಿತು ಅವನನ್ನು ಕುರಿತು ಭೀಷ್ಮಕರಾಜನು ತನ್ನ ಕನ್ಯಕೆಯಾದ ರುಕ್ಮಿಣಿಯನ್ನು ಶ್ರೀಕೃಷ್ಣನಿಗೆ ಕೊಡಬೇಕೆಂದು ನುಡಿದಂದು ಅವಹೇಳನಮಾಡಿದಂತೆ, ಪಾರ್ವತಿಯನ್ನು ತ್ರಿಪುರಾರಿಗೆ ಕೊಡಲು ನಿಶ್ಚಯಿಸಿದಂದು ಸ್ತ್ರೀಯರೆಲ್ಲರೂ ಅಪಹಾಸ್ಯವಂ ಮಾಡಿದಂತೆ ನೀನು ನನ್ನನ್ನು ಹಾಸ್ಯಮಾಡಿದೆ. ಆದರೂ ಬಾಧೆಯಿಲ್ಲ. ನೀವು ಏನೇನಂ ಅಪೇಕ್ಷಿಸುವಿರೋ ಅದೆಲ್ಲವೂ ಸಿದ್ಧವಾಗುವುದು. ಈ ವಿಷಯದಲ್ಲಿ ಸಂದೇಹಪಡಲಾಗದು—ಎಂದು ಹೇಳಿ, ಅಲ್ಲಿಂದ ನರಸಿಂಹಮಹಾಂತನಲ್ಲಿಗೆ ಬಂದು—ನಾಳೆ ಉತ್ತಮವಾದ ಮುಹೂರ್ತವು ಇರುವುದು. ನೀವು ಶ್ರೀಕೃಷ್ಣನ ಸಾಹಾಯ್ಯವಂ ಪಡೆದು ಸರ್ವಸಾಹಿತ್ಯಗಳನ್ನೂ ಸಿದ್ಧಪಡಿಸಿಕೊಂಡು ಹೊರಡಬೇಕು-ಎಂದನು. ನರಸಿಂಹಮಹಾಂತನು ಉದಾಸೀನನು; ಯಾರ ಆಶೆಯನ್ನೂ ಇಡನು. ಆದುದರಿಂದ ಇತರಪ್ರಸ್ತಾವಗಳನ್ನು ಆಡಿದರೆ ಮದುವೆಯ ಕಾರ್ಯವು ಎಲ್ಲಿ ನಿಂತುಹೋಗುವುದೋ ಎಂದು ಶಂಕಿತನಾಗಿ ಮುಖ್ಯವಾದ ಮಾತನ್ನೇ ಆಡಿಕೊಂಡು ಹಿಂದಿರುಗಿ ತನ್ನ ಗ್ರಾಮವಂ ಸೇರಿದನು.

ಸೂಜಿಯೂ ಬಿಳಿಗಾರವೂ ಸಜ್ಜನರೂ ಸೇರಿದೆಡೆಯಲ್ಲಿ ಭೇದವು ಹುಟ್ಟದೆ ಒಂದಾಗುವುದು. ಕೊಡಲಿಯೂ ಕತ್ತರಿಯೂ ಕುತ್ಸಿತರೂ ಎಲ್ಲಿ ಮಧ್ಯಸ್ಥರಾಗುವರೋ ಅಲ್ಲಿ ತತ್ಕಾಲದಲ್ಲಿಯೇ ಅನರ್ಥವುಂಟಾಗುವುದು. ಮದುವೆಯ ಕಾಲದಲ್ಲಿ ಚಾಡಿಹೇಳುವವನನ್ನೂ, ಯುದ್ಧದಲ್ಲಿ ಹೆದರುವವನನ್ನೂ, ಕೀರ್ತನದಲ್ಲಿ ಹರಟುವವನನ್ನೂ, ತುಳಸಿಯ ಬಳಿಯಲ್ಲಿ ಆತನನ್ನೂ, ಪುರಾಣಪಠನದೆಡೆಯಲ್ಲಿ ಅತಿವಾಚಾಳಕನನ್ನೂ, ಭಾವುಕರ ಮಧ್ಯದಲ್ಲಿ ನಿಂದಕನನ್ನೂ, ಪ್ರವಾಸದಲ್ಲಿ ಬಹುಕ್ಷುಧಿತನಾದವನನ್ನೂ, ಭಜನದಲ್ಲಿ ತಲ್ಲಣವುಳ್ಳವನನ್ನೂ, ನೆರೆಯಲ್ಲಿ ನಂಟನನ್ನೂ ಸೇರಿಸಬಾರದು. ಈ ಬಹುಭಾಷಣಗಳಂತಿರಲಿ. ಕಥೆಯು ನಿಂತು ಹೋಯಿತು. ಪುರೋಹಿತನು ತ್ರಿಪುರಾಂತಕನಲ್ಲಿಗೆ ಬಂದು—ನಾಳೆ ಬೇಗದಿಂದ ಲಗ್ನವನ್ನು ಸಾಧಿಸಬೇಕು. ನೀವು ಜಾಗರೂಕರಾಗಿ ಎಲ್ಲಾ ಸಾಹಿತ್ಯಗಳನ್ನೂ ಸಿದ್ಧಪಡಿಸಿಕೊಳ್ಳುವುದು-ಎಂದು ಹೇಳಿದನು.

ಅದಂ ಕೇಳಿ ತ್ರಿಪುರಾಂತಕನು—ನರಸಿಂಹಮಹಾಂತನು ಅಸಹಾಯನು. ಅವನಲ್ಲಿ ಸಾಹಿತ್ಯವೇನೂ ಇಲ್ಲ. ನಾಳೆ ಎಂತು ಆತನು ಎಲ್ಲವನ್ನೂ ಸಿದ್ಧಪಡಿಸಿಕೊಂಡು ಬರುವನು? ಈ ಸಂಬಂಧವು ತಪ್ಪಿಹೋಗುವುದಕ್ಕೋಸ್ಕರವೇ ನಾಳೆ ಲಗ್ನವಂ ನಿಶ್ಚಯಿಸಲ್ಪಟ್ಟಿದೆ—ಎನಲು, ಪುರೋಹಿತನು—ನೀನು ಅವಿಶ್ವಾಸಿಯು. ನಿನಗೆ ವಿವೇಕವಿಲ್ಲ. ಅಹಂಭಾವವನ್ನು ಹಿಡಿದಿರುವೆ. ಅದರಿಂದ ಅಪಮಾನವನ್ನು ಅನುಭವಿಸೀಯೆ. ಪತಿವ್ರತೆಯಾದ ದ್ರೌಪದಿಯನ್ನು ಛಳಿಸಿದುದರಿಂದ ದುರ್ಯೋಧನನಿಗೆ ಎಂತು ಅವಮಾನವುಂಟಾಯಿತೋ ನಿನಗೂ ಅಂತು ಆಗುವುದು—ಎಂದನು.

ಬಳಿಕ ಎರಡನೆಯದಿನ ಸೂರ್ಯನು ಉದಯಿಸುವುದೂ ನರಸಿಂಹಮಹಾಂತನು ಸ್ನಾನವಂ ಮಾಡಿ ದ್ವಾದಶನಾಮಗಳನ್ನು ಹಚ್ಚಿಕೊಂಡು ಕೊರಲಲ್ಲಿ ತುಳಸೀಮಾಲೆಯುಂ ಧರಿಸಿ ಶ್ರೀಕೃಷ್ಣನನ್ನು ಅನನ್ಯಭಾವದಿಂದ ಪೂಜಿಸಿ ಭಾಗವತರಂ ಸಂಗಡ ಕರೆದುಕೊಂಡು ಸಕುಟುಂಬನಾಗಿ-ಜಯಜಯ ಮುಕುಂದನೇ! ಮುರಾರಿಯೆ! ಅನಾಥನೆ! ಭಕ್ತಪಕ್ಷಪಾತಿಯೆ! ಪುರಾಣಪುರುಷನೆ! ಮಧುಕೈಟಭಾರಿಯೆ! ದ್ವಾರಕಾನಿವಾಸಿಯೆ! ಶ್ರೀರುಕ್ಮಿಣೀಕಾಂತನೆ! ವಿಧಿಜನಕನೆ! ಮಧುರಾವಿಹಾರನೆ! ಕಂಸಾಂತಕನೆ! ಕರುಣಾನಿಧಿಯೆ! ದೇವಾದಿದೇವನೆ! ಸನಾತನನೆ! ವಿಶ್ವವ್ಯಾಪಕನೆ! ಜಗಜ್ಜೀವನನೆ! ಜಗನ್ಮೋಹನನೆ! ಗೋವಿಂದನೆ! ಭಕ್ತಕಾಮಕಲ್ಪತರುವೆ! ಪುರುಷೋತ್ತಮನೆ! ಶ್ರೀಹರಿಯೆ! ನೀನು—ಪ್ರಸನ್ನನಾಗು—ಎಂದು ಭಗವನ್ನಾಮಸಂಕೀರ್ತನೆಯುಂ ಮಾಡುತ್ತ ಭಗವಚ್ಚರಿತ್ರೆಗಳಂ ಪಾಡುತ್ತ ಕುಣಿಯುತ್ತ ಆನಂದಭರಿತನಾಗಿ ಲಗ್ನಕ್ಕೆ ಹೊರಟನು.

ಆ ಸಮಯದಲ್ಲಿ ದ್ವಾರಕೆಯಲ್ಲಿ ಸಿಂಹಾಸನಾರೂಢನಾಗಿದ್ದ ಶ್ರೀಕೃಷ್ಣಪರಮಾತ್ಮನು ರುಕ್ಮಿಣಿಯಂ ಕುರಿತು-ಪ್ರಿಯೆ! ನನ್ನ ಭಕ್ತಶ್ರೇಷ್ಠನಾದ ನರಸಿಂಹಮಹಾಂತನು ಸದ್ಭಾವದಿಂದ ನನ್ನನ್ನು ನಂಬಿರುವನು. ಇಂದು ಆತನ ಮಗನ ಮದುವೆಯು; ಆದುದರಿಂದ ನಾನು ಮೊದಲೇ ಹೋಗಿ ಆ ಕಾರ್ಯವನ್ನು ಸಿದ್ಧಿಹೊಂದಿಸಬೇಕು—ಎಂದು ನುಡಿದು ತಕ್ಕವೇಷದಿಂದ ಉದ್ಧವಾಕ್ರೂರಾದಿಭಕ್ತರನ್ನು ಸಂಗಡ ಕರೆದುಕೊಂಡು ಜಾಂಬವತೀಕಾಳಿಂದೀಸತ್ಯಭಾಮಾಸಮೇತನಾಗಿ ಹೊರಟನು. ರುಕ್ಮಿಣಿಯೂ ಅನೇಕಗೋಪಸ್ತ್ರೀಯರನ್ನು ಕರೆದುಕೊಂಡು ಸಂಗಡ ಹೊರಟಳು. ಅನೇಕರಥಗಳು ಹೊರಟುವು. ಅಷ್ಟಮಹಾಸಿದ್ಧಿಗಳು ದಾಸಿಯರಾಗಿ ಪರಿಚರಿಸುತ್ತ ಹೊರಟರು. ಮಂಗಳವಾದ್ಯವಾಗುತ್ತಿರುವುದು. ಇಂತು ಶ್ರೀಪತಿಯು ತಕ್ಕ ಪರಿವಾರದಿಂದಲೂ ಮಂಗಳವಿಭವದಿಂದಲೂ ಕೂಡಿ ಬಹುವಿಜೃಂಭಣೆಯಿಂದ ಪ್ರಯಾಣವಂ ಬೆಳೆಯಿಸುತ್ತ, ಮಾರ್ಗದಲ್ಲಿ ನಾಮಸಂಕೀರ್ತನವಂ ಮಾಡುತ್ತ ಆನಂದದಿಂದ ಪಾಡುತ್ತ ಕುಣಿಯುತ್ತ ಸಕುಟುಂಬನಾಗಿ ಹೋಗುತ್ತಿರುವ ನರಸಿಂಹಮಹಾಂತನನ್ನು ಕಂಡು

ಆತನನ್ನು ಮುಂಚೆ ನಡೆದು, ಊರು ಸಮೀಪವಾದುದನ್ನು ತಿಳಿದು ಬೀಗನಿಗೆ ಸುದ್ದಿಯಂ ಹೇಳಿ ಕಳುಹಿಸಿದನು.

ತ್ರಿಪುರಾಂತಕನು ಆ ಸುದ್ದಿಯಂ ಕೇಳಿ ಬೆರಗಾದನು. ಊರ ಜನರು ಕಂಡು—ಮದುವೆಗೆ ಅಸಂಖ್ಯಾಕರು ಬಂದಿರುವರು; ಇಳಿದುಕೊಳ್ಳುವುದಕ್ಕೆ ಊರಲ್ಲಿ ಸ್ಥಳ ಸಾಲದು; ಏನಮಾಡುವುದು?—ಎಂದರು. ಅನೇಕರು ಸೌಧದಲ್ಲಿ ನಿಂತು ನೋಡುವರಾದರು. ಭೋರ್ಗರೆವ ಮಂಗಳವಾದ್ಯಧ್ವನಿಯಿಂದ ಆಕಾಶವೆಲ್ಲವೂ ತುಂಬಿತು.

ಬಳಿಕ ತ್ರಿಪುರಾಂತಕನು ಸಂಭ್ರಾಂತನಾಗಿ ಗ್ರಾಮದ ಜನರನ್ನು ಸಂಗಡ ಕರೆದುಕೊಂಡು ಸಣ್ಣ ಮಂಗಳವಾದ್ಯವನ್ನು ಊದಿಸಿಕೊಂಡು ಇದಿರುಗೊಳ್ಳುವುದಕ್ಕೆ ಬಂದನು. ಸೂರ್ಯನು ಉದಯಿಸಿರಲು ಚಂದ್ರಿಕೆಯ ಪ್ರಕಾಶವು ಎಂತು ಮೇಲಾಗದೋ; ಗಂಭೀರವಾದ ಅಂಭೋನಿಧಿಯ ಮುಂದೆ ಗ್ರಾಮಸಾರದ ಗುಂಡಿಯು ಎಂತು ಶೋಭಿಸದೋ; ಗರುತ್ಮಂತನ ಮುಂದೆ ಶಲಭದ ಹಾರುವಿಕೆಯೆಂತು ಮೆರೆಯದೋ; ಅಮೂಲ್ಯವಾದ ರತ್ನದ ಮುಂದೆ ಗಾಜಿನ ಕಾಂತಿಯೆಂತು ಶೋಭಿಸದೋ; ಅಧ್ಯಾತ್ಮವಿದ್ಯೆಯ ಮುಂದೆ ಇತರವಿದ್ಯೆಗಳ ವಿಚಾರವೆಂತು ರಂಜಿಸದೋ; ಪಂಡಿತವರೇಣ್ಯನ ಮುಂದೆ ಮೂಢನ ವಾಗ್ಮಿತೆಯೆಂತು ವಿಜೃಂಭಿಸದೋ, ಅಂತು ಆ ವರನ ವೈಭವದ ಮುಂದೆ ತ್ರಿಪುರಾಂತಕನ ವಿಭವವು ಪ್ರಕಾಶಿಸಲಿಲ್ಲ. ವರನ ಕಡೆಯ ವಿಜೃಂಭಣೆಯಂ ನೋಡಿ ಕನ್ಯೆಯ ಕಡೆಯವರೆಲ್ಲರೂ ಲಜ್ಜಿತರಾದರು. ಪುರೋಹಿತನು ತನಗೆ ಶ್ರೀಹರಿಯೊಲಿದನೆಂದು ಬಗೆದು ಮನದಲ್ಲಿ ಸಂತೋಷಗೊಂಡನು. ವಿಶ್ವಕರ್ಮನು ತಾನೇ ಬಂದು ವಿಶಾಲವಾದ ಕಲ್ಯಾಣಮಂಟಪವನ್ನು ನಿರ್ಮಿಸಿ ರತ್ನಕಂಬಲಾಸ್ತರಣದಿಂ ರಂಜನಗೊಳಿಸಿ ಸಕಲಸಾಹಿತ್ಯವನ್ನೂ ಸಿದ್ಧಪಡಿಸಿದನು. ರಂಭಾದ್ಯಪ್ಸರಸ್ಸ್ತ್ರೀಯರು ಬಂದು ನರ್ತನಮಾಡುತ್ತಿರುವರು. ಕಸ್ತೂರೀಕೇಸರಕರ್ಪೂರಾದಿಸುಗಂಧದ್ರವ್ಯಗಳು ಘುಮಘುಮಿಸುತ್ತಿರುವುವು. ಮಂಗಳದ್ರವ್ಯಗಳನ್ನು ಚಿನ್ನದ ತಟ್ಟೆಯಲ್ಲಿ ತೆಗೆಯಿಸಿಕೊಂಡು ಮಹಸಂತೋಷಿತನಾಗಿ ಶ್ರೀಹರಿಯು ಬಂದು ಕುಳಿತುಕೊಂಡನು. ಸುತ್ತಲೂ ನೆಂಟರಿಷ್ಟರೆಲ್ಲರೂ ಬಂದು ಕುಳಿತರು. ರುಕ್ಮಿಣಿಯು ನಡುವೆ ಬಂದು ಕುಳಿತಳು. ಅವರ ಸಮೀಪದಲ್ಲಿ ನರಸಿಂಹಮಹಾಂತನ ಮಡದಿಯೂ ಬಂದು ಕುಳಿತಳು. ಶುಭಕುಸುಮಮಾಲಾಲಂಕೃತನಾಗಿ ಶ್ರೀಹರಿಯು ಅಂತು ಭಾಗವತವರೇಣ್ಯರ ಮಧ್ಯದಲ್ಲಿ ಆನಂದಭರದಿಂದ ಕುಳಿತಿರಲು, ತ್ರಿಪುರಾಂತಕನು ಗ್ರಾಮದ ಜನಗಳೊಡನೆ ಸಮೀಪಕ್ಕೆ ಬಂದನು. ಶ್ರೀಹರಿಯು ಎಲ್ಲರೊಡನೆ ಪ್ರತ್ಯುತ್ಥಾನಮಾಡಿ ತ್ರಿಪುರಾಂತಕನನ್ನು ಕೈಹಿಡಿದು ಕುಳ್ಳಿರಿಸಿಕೊಂಡು--ಸ್ವಾಮಿ! ಭಾಗವತಶಿರೋಮಣಿಯಾದ ಈ ನರಸಿಂಹಮಹಾಂತನು ಭಗವದನುಗ್ರಹದಿಂದ ನಿಮಗೆ ಬೀಗನಾದನು. ಉತ್ತಮವಾದ ಸ್ಥಳವನ್ನು ನೋಡಿ ಸಂಬಂಧವನ್ನು ಬೆಳೆಯಿಸಿದಿರಿ. ನಮಗೆಲ್ಲರಿಗೂ ಪರಮಸಂತೋಷವಾಯಿತು--ಎಂದು ಮೃದುಮಧುರವಾಗಿ ಮಾತನಾಡಿದನು. ಅದಂ

ಕೇಳಿ ತ್ರಿಪುರಾಂತಕನು—ತಮ್ಮ ನಾಮಧೇಯವನ್ನು ಕೇಳಲು ಅಪೇಕ್ಷಿಸುವೆನು ತಮ್ಮ ಸಂದರ್ಶನವು ಇದುವರೆಗೂ ಆಗಿರಲಿಲ್ಲ. ತಾವು ಎಲ್ಲಿಂದ ದಯಮಾಡಿದಿರಿ ? ಲೋಹಕ್ಕೆ ಪರಿಸದ ಸಂಸ್ಪರ್ಶವಾದಂತೆ ಮಹನೀಯರಾದ ತಮ್ಮ ಅನುಬಂಧವು ನನಗುಂಟಾಯಿತು. ಈ ಮದುವೆಯ ನಿಮಿತ್ತದಿಂದ ತಮ್ಮ ಸಂದರ್ಶನವು ನನಗಾದುದು—ಎಂದನು. ಅದಕ್ಕೆ ದೇವಾದಿದೇವನು—'ಸಾರಲಸಾವ' ಎಂದು ನನ್ನ ಹೆಸರು. ನರಸಿಂಹಮಹಾಂತನಲ್ಲಿ ಕೂಡುವುದು ಕೊಳ್ಳುವುದು ನಮಗುಂಟು. ದ್ವಾರಕೆಯಲ್ಲಿ ನಾವು ಇರುವುದು. ಈತನ ಹೃದಯವನ್ನು ನಾನು ಒಬ್ಬನೇ ಬಲ್ಲೆನು—ಎಂದು ಜಗಜ್ಜೀವನನು ನುಡಿಯಲು, ಆ ನುಡಿಯ ಸ್ವಾರಸ್ಯವು ಯಾರಿಗೂ ತಿಳಿಯಲಿಲ್ಲ. ಆ ಸ್ವಾಮಿಯು ಮಹಾಚಮತ್ಕಾರವುಳ್ಳವನು. ಜಗನ್ಮೋಹನನು. ಆತನ ಆಳವು ಯಾರಿಗೂ ತಿಳಿಯಲಸದಳವು. ತ್ರಿಪುರಾಂತಕನು ತಾನು ವರನ ಪೂಜೆಗೆ ತಂದಿರುವ ವಸ್ತ್ರವು ಕಿರಿದು ? ಅಯೋಗ್ಯವು--ಎಂದು ಲಜ್ಜಿತನಾದನು. ನೆರೆದಿರುವ ಅಸಂಖ್ಯರಾದ ಬೀಗರನ್ನು ನೋಡಿ ಬೆರಗಾದನು. ತನ್ನ ಊರ ಅರಸನಿಗೆ ಬಹುದ್ರವ್ಯವಂ ಸಾಲಕೊಡುವುದೂ, ಕವೀಶ್ವರನ ಸಂಗಡ ವಿವಾದಮಾಡುವುದೂ ಎಂತು ಯೋಗ್ಯವಲ್ಲವೋ ಅಂತು ತನಗಿಂತಲೂ ಅಧಿಕನಾದವನ ಸಂಗಡ ನಂಟತನವಂ ಮಾಡುವುದು ತಕ್ಕುದಲ್ಲ--ಎಂದು ಎಣಿಸಿ, ಉದಿತನಾದ ಸೂರ್ಯನ ಮುಂದೆ ಚಂದ್ರನು ಎಂತು ತೇಜೋಹೀನನಾಗುವನೋ ಅಂತು ನಿಸ್ತೇಜಸ್ಕನಾಗಿ, ತನ್ನಲ್ಲಿ ಸಿದ್ಧವಾದ ಸಾಹಿತ್ಯವು ಪರಿಮಿತವಾದುದು; ಬಂದಿರುವ ನಂಟರು ಅಪರಿಮಿತರು. ಏನುಮಾಡುವುದೆಂದು ಚಿಂತಾಭರದಿಂದ ಕೊರಗುತ್ತಿರಲು, ಲಕ್ಷ್ಮೀಪತಿಯು ಇದನರಿತು ಆತನಂ ಕುರಿತು--ಸ್ವಾಮಿ ! ನಿಮ್ಮಲ್ಲಿ ಏನು ಸಾಹಿತ್ಯವು ಸಿದ್ಧವಾಗಿರುವುದೋ ಅದನ್ನು ಬರಮಾಡಿ ಇಲ್ಲಿಯೇ ಶುಭಪ್ರಸ್ತುತವನ್ನು ನೆರವೇರಿಸಬೇಕು. ಇಲ್ಲಿ ಸಕಲಸಾಹಿತ್ಯವೂ ಸಿದ್ಧವಾಗಿರುವುದು. ಭೇದವಂ ಎಣಿಸಿ ಸಂಕೋಚಪಡಬಾರದು. ಶರೀರಸಂಬಂಧಕ್ಕೋಸ್ಕರ ದ್ವೇಷಮದಗಳು ಗಂಟುಬಿದ್ದಿರುವುವು. ಜ್ಞಾನದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ಅದೆಲ್ಲವೂ ಸಂಗತವಾದುದಲ್ಲ. ಎಲ್ಲರೂ ಏಕಭಾವರಾಗಿಯೇ ಇರಬೇಕು. ಭೇದವನ್ನೆಣಿಸಬಾರದು--ಎನಲು ತ್ರಿಪುರಾಂತಕನು ಆಮಾತಿಗೆ ಅವಶ್ಯವೆಂದು ಅಂಗೀಕಾರಗೊಂಡು ಆಕ್ಷಣದಲ್ಲಿ ಹಿಂದಿರುಗಿ ಮನೆಗೆ ಹೋಗಿ ಮದವಣಗಿತಿಯನ್ನು ಕರೆದುಕೊಂಡು ಸಿದ್ಧವಾಗಿದ್ದ ಸಾಹಿತ್ಯವನ್ನು ತೆಗೆದುಕೊಂಡು ಅವಿರೋಧಭಾವದಿಂದ ಆ ಸ್ಥಳಕ್ಕೆ ಮತ್ತೆ ಬಂದು ಸೇರಿದನು. ಗಂಗೆಯಲ್ಲಿ ಕಾಡುಹಳ್ಳವು ಸೇರಲು, ಅದನ್ನು ಅಪವಿತ್ರವೆನ್ನುವರು ಯಾರು ? ಅಂತು ತ್ರಿಪುರಾಂತಕನು ಜಗನ್ನಾಥನ ಸನ್ನಿಧಿಗೆ ಬರಲು, ಅಲ್ಲಿ ಅಲ್ಪತೆಯನ್ನು ಎಣಿಸುವರು ಯಾರು? ಶ್ರೀಹರಿಯು ಅಂಗೀಕರಿಸಲು ಬಡವನಿಗೆ ಕೊರತೆಯೇನು? ಬಳಿಕ ಮಂಗಳವಾದ್ಯಂಗಳು ಭೋರೆನುತಿರಲು, ಮಂಗಳವಿಧಿಗಳಂ ಮಾಡಿ ದೇವತಾಪ್ರತಿಷ್ಠೆಯಂ ನೆರವೇರಿಸಿ ಎಲ್ಲರಿಗೂ ಮೃಷ್ಟಾನ್ನ ಭೋಜನವಂ ಮಾಡಿಸಿ ದಕ್ಷಿಣಾತಾಂಬೂ

ಲಗಳಂ ಕೊಟ್ಟರು. ನರಸಿಂಹಮಹಾಂತನಿಗೆ ಶ್ರೀಪತಿಯು ಉಡುಗೊರೆಯನ್ನು ಕೊಟ್ಟನು. ಸೂರ್ಯನು ಅಸ್ತನಾಗಲು, ಬ್ರಾಹ್ಮಣೋತ್ತಮರು–ದೇವಾದಿದೇವನಾದ ಲಕ್ಷ್ಮೀಪತಿಯು ವಧೂವರರಂ ರಕ್ಷಿಸಲಿ; ಕ್ಷೀರಸಾಗರವಾಸಿಯೂ ಶೇಷಶಾಯಿಯೂ ಆದ ಭಗವಂತನು ವಧೂವರರಂ ರಕ್ಷಿಸಲಿ; ಯಾವನ ನಾಮಸ್ಮರಣೆಯನ್ನು ಮಾಡಲು, ಸಕಲದುರಿತಗಳೂ ಧ್ವಂಸಹೊಂದುವುವೋ ದ್ವಾರಕಾವಿಹಾರಿಯಾದ ಆಜಗನ್ಮೋಹನನು ವಧೂವರರಂ ರಕ್ಷಿಸಲಿ: ಸನಕಸನಂದನಾದಿಗಳು ಯಾವನನ್ನು ಸರ್ವಕಾಲದಲ್ಲಿಯೂ ಹೃದಯದಲ್ಲಿ ಧ್ಯಾನಿಸುವರೋ ಭಕ್ತವತ್ಸಲನಾದ ಆ ಹೃಷೀಕೇಶನು ವಧೂವರರಂ ರಕ್ಷಿಸಲಿ--ಎಂದು ಮಂಗಳಾಷ್ಟಕವಂ ಪಾಡುತ್ತಿರಲು, ಮುಹೂರ್ತವಂ ಬೆಳೆಯಿಸಿದರು. ವೈಕುಂಠನಾಥನೇ ಪ್ರತ್ಯಕ್ಷನಾಗಿ ಎಲ್ಲಿ ಬಂದಿರುವನೋ ಅಲ್ಲಿ ಯಾವವಸ್ತುವೂ ಕಡಿಮೆಯಾಗಲಾರದು. ಕನ್ಯಾದಾನದ ವೇಳೆಯಲ್ಲಿ ವಿಪ್ರರಿಗೆ ಅಪರಿಮಿತವಾದ ದಕ್ಷಿಣೆಯಂ ಕೊಟ್ಟರು. ಅಮೂಲ್ಯವಾದ ವಸ್ತ್ರಾಭರಣಗಳು ವಧೂವರರಿಗೆ ಅರ್ಪಿಸಲ್ಪಟ್ಟುವು. ಸಕಲಜನರಿಗೂ ಮೃಷ್ಟಾನ್ನಭೋಜನವಾಯಿತು. ಎಲ್ಲಾ ಕಡೆಗಳಲ್ಲಿಯೂ ಶ್ರೀಪತಿಯೇ ಸಂಪೂರ್ಣವಾಗಿ ಉತ್ಸವವಂ ನೆರವೇರಿಸುತ್ತಿರುವನು. ಬೀಗಿತಿಯರು ಸಂಭ್ರಮಗೊಳ್ಳುತಿರುವರು. ವಿವಿಧವಾದ ಮಂಗಳಧ್ವನಿಗಳು ಹೃದಯಂಗಮವಾಗಿರುವುವು. ಬಗೆಬಗೆಯ ಬಾಣಬಿರುಸುಗಳು ಸೊಗಸು ವೀರುತಿರುವುವು. ಅನೇಕಯಂತ್ರಗಳ ನಾದವು ಪರಮಾನಂದಕರವಾಗಿರುವುವು. ಅಷ್ಟನಾಯಿಕೆಯರು ಪಾಡುತಿರುವರು. ಹರಿಭಕ್ತರು ಹರಿನಾಮವಂ ಆನಂದದಿಂದ ಸಂಕೀರ್ತಿಸುತಿರುವರು. ಇಂತು ಅಪೂರ್ವವಾದ ರೀತಿಯಿಂದ ಮಹೋತ್ಸವವು ಬೆಳೆಯಿತು. ಸಕಲರೂ ಆನಂದಗೊಂಡರು. ನರಸಿಂಹಮಹಾಂತನ ಮಡದಿ ಮನದಲ್ಲಿ ವಿಸ್ಮಿತೆಯಾದಳು. ಐದುದಿನಗಳೂ ಮಹೋತ್ಸವವು ನೆರವೇರಿತು. ನಾಕಬಲಿಯೂ ನಡೆಯಿತು. ಶ್ರೀಕೃಷ್ಣನು ಬೀಗರೆಲ್ಲರಿಗೂ ಅಪರಿಮಿತವಸ್ತ್ರಭೂಷಣಂಗಳಂ ಕೊಟ್ಟನು. ಮದವಣಿಗನನ್ನೂ ಪರಿಜನರನ್ನೂ ಕರೆದುಕೊಂಡು ಬೀಗನ ಅಪ್ಪಣೆಯಂ ತೆಗೆದುಕೊಂಡು ಜುನ್ನಾಗಡಿಗೆ ಬಂದುಸೇರಿ ನರಸಿಂಹಮಹಾಂತನನ್ನು ಕುರಿತು-ಸಂಕಟಬಂದಾಗ ನನ್ನ ಸ್ಮರಣೆಯಂ ಮಾಡು–ಎಂದು ಹೇಳಿ ದ್ವಾರಕೆಗೆ ಹೊರಟುಹೋದನು.

ಮುಂದೆ ಶ್ರೋತೃಗಳು ಸಾದರರಾಗಿ ಅವಧಾನವಂ ಕೊಡಬೇಕು. ಈ ಭಕ್ತವಿಜಯವೇ ಮುಖ್ಯವಾದ ತುಳಸೀವನವು. ಭೀಮಾತೀರವಿಹಾರಿಯಾದ ಶ್ರೀರುಕ್ಮಿಣೀಪತಿಯು ಇಲ್ಲಿಯೇ ಬಂದು ನೆಲಸಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಇಪ್ಪತ್ತೊಂಬತ್ತನೆಯ ಅಧ್ಯಾಯ.

ಜಯಜಯ ಶುಭವದನಾರವಿಂದನೆ! ಸಮಸ್ತಶುಭಗಳಿಗೂ ಅಧೀಶನಾದವನೆ! ಅಶುಭವಿಧ್ವಂಸಕನೆ! ವಿಶ್ವವ್ಯಾಪಕನೆ! ಸರ್ವೇಶನೆ! ಪಂಡರಪುರಾಧೀಶನೆ! ಶ್ರೀವಿಟ್ಠಲನೆ! ಪುರಾಣಪುರುಷನೆ! ಅನಂತನಾಮಾವಳಿಗಳುಳ್ಳವನೆ! ಭಕ್ತರ ಕಾಮಿತಾರ್ಥಗಳನ್ನು ಪೂರಣಮಾಡುವುದರಲ್ಲಿ ಕಲ್ಪತರುವೆನಿಸಿದವನೆ! ಸಗುಣರೂಪನೆ! ನೀಲಮೇಘಶ್ಯಾಮನೆ! ಭಕ್ತರಲ್ಲಿ ಪ್ರೀತಿಮಾಡುವವನು ನೀನೊಬ್ಬನೇ. ದ್ರೌಪದಿಯ ಮಾನವಂ ಕಾದವನೇ! ಗಜೇಂದ್ರನ ಸಂಕಟವನ್ನು ಬಿಡಿಸಿದವನೆ! ಶೇಷಶಯನನೇ! ಕ್ಷೀರಸಾಗರವಾಸಿಯೇ! ಪಾಂಡುರಂಗನೆ! ನೀನು ಸರ್ವದೇವರಲ್ಲಿಯೂ ಶ್ರೇಷ್ಠನಾದವನು. ಶಿವನು ನಿನ್ನ ನಾಮವನ್ನು ಸರ್ವಕಾಲದಲ್ಲಿಯೂ ಜಪಿಸುತ್ತಿರುವನು. ಇಂದ್ರಾದಿದೇವತೆಗಳೆಲ್ಲರೂ ನಿನ್ನನ್ನೇ ಸ್ತುತಿಯಿಸುವರು. ಸರ್ವರ ಅಂತರಸಾಕ್ಷಿಯಾದ ನೀನು ಸಕಲಯೋಗಿಗಳಿಗೂ ಧ್ಯೇಯನಾದವನು. ವೈರಿಗಳಿಗೂ ಸಾಯುಜ್ಯವನ್ನು ಕೊಡುವ ದಯಾಳುವು. ಆನಂದಸ್ವರೂಪನು. ಬ್ರಹ್ಮನಿಗೂ ಜನಕನೆನಿಸಿರುವೆ. ಸರ್ವಕ್ಕೂ ನೀನೇ ಕರ್ತೃವಾದವನು. ಶ್ರುತಿಗಳಿಗೂ ನಿನ್ನ ಪಾರವು ತಿಳಿಯದು. ಚತುರ್ದಶವಿದ್ಯೆಗಳೂ ಚತುಷ್ಷಷ್ಟಿಕಲೆಗಳೂ ನಿನ್ನನ್ನು ವರ್ಣಿಸುತ್ತಿರುವುವು. ಆದರೂ ನೀನು ಅಲ್ಲಿ ನಿಲ್ಲೆ. ಭಕ್ತರ ಬಳಿಗೆ ಹೊರಟುಹೋಗುವೆ. ವೈಕುಂಠಲೋಕವನ್ನೂ ಕ್ಷೀರಸಾಗರದಲ್ಲಿ ಶ್ರೀಶೇಷಶಯನತನ್ನೂ ಅಮೃತಪಾನವನ್ನೂ ಬಿಟ್ಟು ಭಕ್ತರಂ ಹುಡುಕುತಿರುವೆ. ದ್ವಾರಕಾಪುರವನ್ನು ಬಿಟ್ಟು ಪುಂಡರೀಕನ ಬಾಗಿಲಿಗೆ ಬಂದು ಕಟಿಯಲ್ಲಿ ಕರಗಳನ್ನಿರಿಸಿ ನಿಂತುಕೊಂಡಿರುವೆ. ಇಂತಹ ಭಕ್ತಪ್ರೇಮವೇ ನಿನಗಾವಶ್ಯಕವು. ಪ್ರೇಮಭಕ್ತರ ಹೃದಯವೇ ನಿನಗೆ ವಾಸಸ್ಥಾನವು. ನೀನು ಆತ್ಮಾರಾಮನು. ಸರ್ವಾತ್ಮಗಳಲ್ಲಿಯೂ ರಮಿಸುತ್ತಿರುವೆ. ಆದುದರಿಂದ ಮೊದಮೊದಲಲ್ಲಿ ನಿನಗೋಸ್ಕರ ನಮಸ್ಕಾರವಂ ಮಾಡುವೆನು. ಗ್ರಂಥವನ್ನು ಹೇಳುವುದಕ್ಕೆ ಪ್ರತಿಭೆಯನಿತ್ತು ಸಹಾಯನಾಗಿರಬೇಕು. ಇನ್ನು ಶ್ರೋತೃಗಳು ಅವಧರಿಸಬೇಕು.

ಜಗಜ್ಜೀವನನು ಲಗ್ನವನ್ನು ಸಿದ್ಧಿಹೊಂದಿಸಿ ಹೊರಟುಹೋದ ಬಳಿಕ ನರಸಿಂಹಮಹಾಂತನು ಸರ್ವಕಾಲದಲ್ಲಿಯೂ ಶ್ರೀಹರಿಯನ್ನು ಹೃದಯದಲ್ಲಿ ಸ್ಮರಿಸುತ್ತ ಕೀರ್ತನದಲ್ಲಿ ಕುಣಿಯುತ್ತ ಮಾನಾಪಮಾನವಂ ಬಿಟ್ಟು ಆಶಾಪಾಶಗಳಂ ಖಂಡಿಸಿ ಮನಸ್ಸಿನ ಕೋರಿಕೆಗಳನ್ನು ತಡೆದು ನಿಲ್ಲಿಸಿ ಸಂತುಷ್ಟಚಿತ್ತನಾಗಿ ವಿಷಯಗಳ ಸವಿಗೆ ಆಸೆಪಡದೆ ಮಮತೆಯೆಂಬ ಸಂತತಿಯಂ ಕತ್ತರಿಸಿ ಬುದ್ಧಿಯ ಕುತ್ಸಿತವಿಕಲ್ಪಗಳಂ

ತಪ್ಪಿಸಿ ಉಪಶಾಂತಿಯಂ ಪಡೆದು ಸಮವಿಷಮಭಾವವನ್ನೆಣಿಸದೆ ಸರ್ವರಲ್ಲಿಯೂ ಒಂದೇರೀತಿಯುಳ್ಳವನಾದುದರಿಂದ ಪರಮಾಣುಗಳನ್ನೂ ಇಂದ್ರಾದಿದೇವತೆಗಳನ್ನೂ ಸಮತ್ವದಿಂದ ಕಾಣುತ್ತ, ವ್ಯಾಘ್ರವೃಶ್ಚಿಕಾದಿಗಳ ದುರ್ಗುಣಗಳನ್ನೂ ಬಗೆಯದೆ ಇದಿರಿನಲ್ಲಿ ದ್ರವ್ಯದ ರಾಶಿಯನ್ನು ಸುರಿದಿದ್ದರೂ ಅದನ್ನು ಮೃತ್ತಿಕೆಗೆ ಸಮಾನವನ್ನಾಗಿ ತಿಳಿಯುತ್ತ ಅಮೂಲ್ಯರತ್ನಗಳನ್ನೂ ಕಲ್ಲುಗಳಿಗೆ ಸಮಗಳನ್ನಾಗಿ ಎಣಿಸುತ್ತ ಆನಂದದಿಂದ ಇದ್ದನು.

ಒಂದುದಿನ ದ್ವಾರಕೆಗೆ ಹೋಗುವ ಯಾತ್ರಿಕರು ಆಜುನ್ಯಾಗಡಿ ಎಂಬ ಗ್ರಾಮದಲ್ಲಿ ಬಂದು ಇಳಿದುಕೊಂಡರು. ಅವರಲ್ಲಿ ಕೇಶವಭಟ್ಟನೆಂಬ ಪರಮಭಾವುಕನಾದ ಬ್ರಾಹ್ಮಣನು ಬಂದು ಊರ ಜನರಂ ಕುರಿತು—ನಾವು ಶ್ರೀಹರಿಯ ದರ್ಶನಕ್ಕೋಸ್ಕರ ದ್ವಾರಕೆಗೆ ಯಾತ್ರೆಹೋಗುವೆವು. ಅಲ್ಲಿಗೆ ಹುಂಡಿಯನ್ನು ಬರೆದುಕೊಡುವ ಸಾಧುಕಾರನು ಈವೂರಲ್ಲಿ ಯಾವನಿರುವನು? ದಯೆಯಿಟ್ಟು ಹೇಳಬೇಕು--ಎಂದು ಬೆಸಗೊಳಲು, ಅಲ್ಲಿ ನೆರೆದಿದ್ದ ಕೆಲವರು ದುರ್ಜನರು ಆ ಮಾತಂ ಕೇಳಿ—ಈವೂರಲ್ಲಿ ನರಸಿಂಹಮಹಾಂತನೆಂಬವನಿರುವನು ; ಆತನು ಧನವಂತನಾದರೂ ವಿರಕ್ತನಾಗಿ ತೋರುವನು. ನೀವು ಆತನ ಬಳಿಗೆ ಹೋಗಿ ಕೇಳಿದರೆ ನಿಮ್ಮ ಕಾರ್ಯವು ಕೈಗೂಡುವುದು. ಇದೋ ಇತ್ತಕಡೆ ಸ್ವಲ್ಪದೂರದಲ್ಲಿ ಆತನ ಮನೆಯಿರುವುದು. ಮನೆಯ ಮುಂದೆ ಗರುಡಧ್ವಜಪತಾಕೆಗಳು ಕಾಣುವುವು. ದೊಡ್ಡ ಬೃಂದಾವನವಿರುವುದು. ಮತ್ತು ಹರಿಕೀರ್ತನವಾಗುತ್ತಿರುವುದು. ಈ ಗುರುತನ್ನು ನೋಡಿಕೊಂಡು ಹೋದರೆ ಆತನ ಮನೆಯು ಥಟ್ಟನೆ ಸಿಕ್ಕುವುದು—ಎಂದರು. ಆ ಮಾತಂ ಕೇಳಿ ಬ್ರಾಹ್ಮಣನು ಸತ್ಯವೆಂದು ನಂಬಿ ನರಸಿಂಹಮಹಾಂತನ ಮನೆಗೆ ಹೋದನು. ಇದಂ ಕೇಳಿ ಶ್ರೋತೃಗಳು—ಶ್ರೀಹರಿಯು ಸರ್ವಾಂತರ್ಯಾಮಿಯಾಗಿದ್ದರೂ ಅಲ್ಪರಿಂದ ನಿಜಭಕ್ತರಿಗೆ ಕೊರತೆಯುಂಟಾಗುವಂತೆ ಮಾಡಿದನೇ ?—ಎಂದು ಶಂಕೆಗೊಳ್ಳಬಹುದು. ಶ್ರೀಮನ್ನಾರಾಯಣನು ಭಕ್ತರನ್ನೂ ಅಭಕ್ತರನ್ನೂ ತಾನೆ ನಿರ್ಮಿಸಿರುವನು. ಅಭಕ್ತರ ದೆಸೆಯಿಂದ ಭಕ್ತರು ಸನ್ಮಾನವಂ ಹೊಂದುವರು. ಮೊಸಳೆಯು ಗಜೇಂದ್ರನನ್ನು ಹಿಡಿಯದಿದ್ದರೆ ವೈಕುಂಠನಾಥನು ಓಡಿಬರುತ್ತಿದ್ದನೇ? ದುಶ್ಶಾಸನನು ದ್ರೌಪದಿಯನ್ನು ಸಂಕಟಪಡಿಸದಿದ್ದರೆ ಶ್ರೀಹರಿಯು ಆಕೆಗೆ ಅಕ್ಷಯವಸ್ತ್ರಂಗಳಂ ಕರುಣಿಸುತಿದ್ದನೇ ? ಹಿರಣ್ಯಕಶಿಪುವು ಪ್ರಹ್ಲಾದನನ್ನು ಹಿಂಸೆಗೊಳಿಸದಿದ್ದರೆ ಜಗನ್ನಾಥನು ಸ್ತಂಭದ ದೆಸೆಯಿಂದ ಅವತರಿಸುತ್ತಿದ್ದನೇ? ಕಬ್ಬಿಣ್ಣಂ ನಿರ್ಮಿಸದಿದ್ದರೆ ಪರಿಸವನ್ನು ಯಾರು ಕೇಳುತಿದ್ದರು ? ಯಾಚಕನೇ ಇಲ್ಲದಿದ್ದರೆ ಕಲ್ಪತರುವಿಗೆ ಉತ್ಕರ್ಷವೇನುಂಟಾಗುತಿದ್ದಿತು? ಕತ್ತಲೆಯೇ ಇಲ್ಲದಿದ್ದರೆ ದೀಪವನ್ನು ಯಾರು ಅಪೇಕ್ಷಿಸುತ್ತಿದ್ದರು? ಅಸತ್ಯಭಾಷಣವೇ ಇಲ್ಲದಿದ್ದರೆ ಸತ್ಯದ ಮಹಿಮೆಯೇನಿರುತಿದ್ದಿತು? ಪ್ರಜೆಗಳನ್ನೇ ನಿರ್ಮಿಸದಿದ್ದರೆ ರಾಜನಿಗೆ ಎಂತು ಸನ್ಮಾನವುಂಟಾಗುತಿದ್ದಿತು ? ಸಣ್ಣವಾದ ನಕ್ಷತ್ರಗಳು

ಇಲ್ಲದಿದ್ದರೆ ಚಂದ್ರನನ್ನು ಶ್ರೇಷ್ಠನೆಂದು ಯಾರು ಹೇಳುತಿದ್ದರು? ಯಮಪುರವಂ ನಿರ್ಮಿಸದಿದ್ದರೆ ಸ್ವರ್ಗವನ್ನು ಯಾರು ಅಪೇಕ್ಷಿಸುತ್ತಿದ್ದರು? ಅಂತು ಅಲ್ಪರಾದ ಅಭಕ್ತರಿರುವುದರಿಂದ ಭಕ್ತರು ದೊಡ್ಡವರೆನಿಸಿಕೊಂಡಿರುವರು. ಶ್ರೀಹರಿಯು ಪ್ರಸನ್ನನಾಗಿ ಭಕ್ತರಲ್ಲಿ ಕೃಪೆಮಾಡುತ್ತಿರುವನು.

ಆಬ್ರಾಹ್ಮಣನು ನರಸಿಂಹಮಹಾಂತನ ಮನೆಯಂ ಸೇರಿ, ಪರಿಶುದ್ಧವಾದ ಬೃಂದಾವನದ ಬಳಿಯಲ್ಲಿ ದೇಹಭಾವವಂ ಮರೆತು ಭವವ್ಯಾಧಿಯನ್ನು ದೂರಮಾಡಿ ವೈಕುಂಠನಾಯಕನಂ ಹೃದಯದಲ್ಲಿ ಧ್ಯಾನಿಸುತ್ತ ಅದ್ವೈತಬೋಧದಲ್ಲಿ ಮಗ್ನನಾಗಿ ಕುಳಿತಿದ್ದ ನರಸಿಂಹಮಹಾಂತನಂ ನೋಡಿ ವಿಸ್ಮಿತನಾಗಿ ಆತನ ಮುಂದೆ ನಿಂತನು. ಸ್ವಲ್ಪಕಾಲವಾದಬಳಿಕ ನರಸಿಂಹಮಹಾಂತನು ಆ ಬ್ರಾಹ್ಮಣನಂ ಕಂಡು ಸದ್ಭಾವದಿಂದ ನಮಸ್ಕಾರವಂ ಮಾಡಿ ಕುಳಿತುಕೊಳ್ಳುವುದಕ್ಕೆ ಆಸನವಂ ಕೊಟ್ಟು ಸನ್ಮಾನವಂ ಮಾಡಿ ಎತ್ತಣಿಂದ ಬಂದಿರಿ? ಮುಂದೆ ಎಲ್ಲಿಗೆ ಪ್ರಯಾಣವಂ ಮಾಡುವಿರಿ?—ಎಂದು ಬೆಸಗೊಂಡನು. ಅದಕ್ಕೆ ಆತನು—ನಾನು ದ್ವಾರಕೆಗೆ ಹೋಗುವೆನು. ವೆಚ್ಚಕ್ಕೋಸ್ಕರ ಬಡನೆ ಏಳುನೂರು ವರಹಗಳನ್ನು ತಂದಿರುವೆನು. ಮಾರ್ಗದಲ್ಲಿ ಕಳ್ಳರ ಉಪದ್ರವವು ಬಹುವಾಗುಂಟು. ಇದಕ್ಕೋಸ್ಕರ ಚಿಂತಿಸುತ್ತಿರುವೆನು. ಈ ದ್ರವ್ಯವನ್ನು ಇಲ್ಲಿ ತೆಗೆದುಕೊಂಡು ಅಲ್ಲಿಯವರಿಗೆ ಹುಂಡಿಯನ್ನು ಬರೆದು ಕೊಡಬೇಕು. ಈ ವೂರಿಗೆ ನಾನು ಬಂದು-ಹುಂಡಿಯಂ ಬರೆದುಕೊಡುವ ಸಾಧುಕಾರರು ಇಲ್ಲಿ ಯಾರಿರುವರೆಂದು ಜನಗಳನ್ನು ವಿಚಾರಿಸಲು, ತಮ್ಮ ಹೆಸರನ್ನು ಹೇಳಿ ತಮ್ಮ ಮನೆಯನ್ನು ತೋರಿಸಿದರು—ಎಂದನು.

ನರಸಿಂಹಮಹಾಂತನು ಆಮಾತಂ ಕೇಳಿ ಮನದೊಳಾಶ್ಚರ್ಯಗೊಂಡು, ಜನಗಳು ನನ್ನನ್ನು ಅವಮಾನಗೊಳಿಸುವುದಕ್ಕೋಸ್ಕರ ಅಸತ್ಯವಾದ ಮಾತನ್ನು ಹೇಳಿದರೆಂದು ತಿಳಿದು, ಅನಾಥನಾಥನಾದ ಭಗವಂತನು ಭಕ್ತಪಕ್ಷಪಾತಿಯಾಗಿರುವನು. ನನ್ನ ಯೋಗಕ್ಷೇಮಭಾರವನ್ನು ಹೊತ್ತಿರುವನು. ಭಕ್ತರ ಕಾರ್ಯಕ್ಕೋಸ್ಕರವೇ ನಾನಾವತಾರಗಳನ್ನು ಮಾಡಿರುವನು. ಈ ಕಾರ್ಯವನ್ನೂ ಆತನೇ ನೆರವೇರಿಸುವನು. ಇದಕ್ಕೆ ನನಗೆ ಚಿಂತೆಯೇಕೆ?—ಎಂದು ಬಗೆದು ಆತನನ್ನು ಕುರಿತು-ಅವಶ್ಯವಾಗಲಿ-ಎಂದನು.

ಆ ಬ್ರಾಹ್ಮಣನು ತನ್ನಲ್ಲಿದ್ದ ದ್ರವ್ಯವನ್ನು ಆತನ ಮುಂದೆ ತೆಗೆದು—ದ್ವಾರಕೆಯಲ್ಲಿ ನಿಮ್ಮ ಕಡೆಯವರು ಯಾರು? ಅವರ ಹೆಸರೇನು? ಹೇಳಬೇಕು—ಎಂದನು. ಅದಕ್ಕೆ ನರಸಿಂಹಮಹಾಂತನು—ನನ್ನ ಕರಣಿಕನು ಅಲ್ಲಿ ಇರುವನು. ಆತನ ಹೆಸರು "ಸಾರಳಸಾವ" ಎಂದು. ಆತನಿಗೆ ಇಂದ್ರಾದಿಗಳೂ ಅಭಿವಂದಿಸುವರು. ನಾಲ್ಕು ವೇದಗಳೂ ಕೈವಾರಿಗಳಾಗಿ ಆತನ ಗುಣಂಗಳಂ ವರ್ಣಿಸುತ್ತಿರುವುವು. ಕೈಲಾಸಪತಿಯಾದ ಉಮಾಕಾಂತನು ಆತನ ನಾಮವನ್ನು ಜಪಿಸುತ್ತಿರುವನು. ಮುಖ್ಯವಾದ

ಅಂಗಡಿ ಕ್ಷೀರಸಾಗರದಲ್ಲಿ. ಎರಡನೆಯದು ವೈಕುಂಠದಲ್ಲಿ. ಗೋಕುಲಬೃಂದಾವನಮಥುರಾನಗರಗಳಲ್ಲಿಯೂ ಆತನಿರುವನು. ಮಾನದೇಶದಲ್ಲಿ ಭೀಮಾತೀರದೊಳಗೆ ಪಂಢರಪುರವೆಂಬ ವಿದೇಶಿಯನ್ನು ಕಟ್ಟಿಸಿಕೊಂಡು ಅಲ್ಲಿ ಪುಂಡರೀಕನೆಂಬ ತನ್ನ ಇಷ್ಟನ ಬಳಿಯಲ್ಲಿಯೂ ಇರುವನು. ಆತನೇ ದ್ವಾರಕೆಯಲ್ಲಿಯೂ ಸಾಧುಕಾರತ್ವವನ್ನು ವಹಿಸಿರುವನು. ವ್ಯಾಸಾದಿಗಳು ಆತನ ಬಳಿಯಲ್ಲಿ ವ್ಯಾಪಾರಿಗಳು. ಕೀರ್ತನವೆಂಬ ವ್ಯಾಪಾರವು ಆತನಲ್ಲಿ ನಡೆಯುತ್ತಿರುವುದು. ಭಾವುಕರಾದ ನಾಮದೇವ ಕಬೀರ ಮುಂತಾದವರು ಅದಂ ಕೊಳ್ಳುವರು-ಎಂದು ನುಡಿದನು. ಆ ಬ್ರಾಹ್ಮಣನು ಇದನೆಲ್ಲವನ್ನೂ ಕೇಳಿ, ಮನದಲ್ಲಿ ಸಮಾಧಾನಗೊಂಡು ಎಲ್ಲಾ ದ್ರವ್ಯವನ್ನೂ ಬೃಂದಾವನದಲ್ಲಿ ಇರಿಸಿದನು.

ನರಸಿಂಹಮಹಾಂತನು ಭಗವಂತನನ್ನು ಹೃದಯದಲ್ಲಿ ಧ್ಯಾನಿಸಿ—ದ್ವಾರಕಾವಾಸಿಯಾದ ಎಲೆಚಕ್ರಪಾಣಿಯೇ! ದಾಸನ ಬಿನ್ನಪವನ್ನು ಆಲಿಸಬೇಕು. ನೀನು ಮಹೋದಾರನು ; ಧೀರನು; ಗುಣನಿಧಿ. ಉಪಮನ್ಯುವೆಂಬ ಬಾಲಕನು ಹಾಲನ್ನು ಬೇಡಲು, ಅವನ ವಚನವಂ ಕೇಳಿ ಕ್ಷೀರಸಮುದ್ರವನ್ನೇ ಕೊಟ್ಟೆ. ನಿನ್ನ ಗುಣವನ್ನು ಹೊಗಳುವುದಕ್ಕೆ ತೊಡಗಿ ಬ್ರಹ್ಮನೂ ದಣಿದನು. ಕುಚೇಲನೆಂಬ ಬ್ರಾಹ್ಮಣನು ದರ್ಶನಕ್ಕೆ ಬಂದಮಾತ್ರಕ್ಕೆ ಆತನಿಗೆ ಸುವರ್ಣಪಟ್ಟಣವನ್ನೇ ನಿರ್ಮಿಸಿಕೊಟ್ಟೆ. ಧ್ರುವಬಾಲನನ್ನು ಧ್ರುವಪದವನೇರಿಸಿದೆ. ನೀನು ಇಂತಹ ಸ್ವಾಮಿಯು. ಭಕ್ತರನ್ನು ಸರ್ವಕಾಲದಲ್ಲಿಯೂ ವಾತ್ಸಲ್ಯದಿಂದ ಸಲಹುತ್ತಿರುವೆ. ನೀನು ವದಾನ್ಯಚೂಡಾಮಣಿಯಾದವನು. ನನ್ನ ಈಲೇಖನವನ್ನು ನೋಡಿದೊಡನೆಯೇ ಈಬ್ರಾಹ್ಮಣನಿಗೆ ದ್ರವ್ಯವಂ ಕೊಡಬೇಕು. ನಿನ್ನಲ್ಲಿರುವ ಅನಿತರವಾದ ನಂಬುಗೆಯಿಂದ ನಿನ್ನಲ್ಲಿ ನ್ಯಸ್ತಭರನಾಗಿ ಈತನ ದ್ರವ್ಯವನ್ನು ತೆಗೆದುಕೊಂಡಿರುವೆನು. “ನಾನು ಅವ್ಯಕ್ತನು ; ನಿರಂಜನನು. ನನ್ನನ್ನು ಏಕೆ ಈ ನಿರ್ಬಂಧಕ್ಕೆ ಸಿಕ್ಕಿಸುವೆ” ಎಂದು ನುಡಿದೀಯೆ. ಜನಗಳಲ್ಲಿ ಅಪಹಾಸ್ಯವುಂಟಾದೀತು ; ಆದುದರಿಂದ ಇಂತಹಮಾತು ಬಾರದಂತೆ ಕಾರ್ಯವಂ ಸಾಧಿಸಿ ಆನಂದವನ್ನುಂಟುಮಾಡಬೇಕು. ದ್ವಾರಕಾವಾಸಿಯಾದ ಸಾರಳ ಸಾವನೆ! ಈತನಿಗೆ ಏಳುನೂರು ವರಹಗಳನ್ನು ತಪ್ಪದೆ ಕೊಡಬೇಕು—ಎಂದು ಹುಂಡಿಯಂ ಬರೆದು ಆತನ ಕೈಗೆ ಕೊಟ್ಟು, ಊರಲ್ಲಿದ್ದ ಸಂತರಾದ ಭಾಗವತರಂ ಕರೆಯಿಸಿ ಆ ದ್ರವ್ಯವನ್ನು ಅವರಿಗೆ ಹಂಚಿಕೊಟ್ಟು ತಾನು ನಿರುಪಾಧಿಕನಾಗಿ ಭಗವನ್ನಾಮಸ್ಮರಣೆಯಂ ಮಾಡುತ್ತ ಕುಳಿತನು.

ಆಬ್ರಾಹ್ಮಣನು ನರಸಿಂಹಮಹಾಂತನಿಗೆ ನಮಸ್ಕಾರವಂ ಮಾಡಿ ಹೊರಟು ಮಾರ್ಗದಲ್ಲಿ—ಇಂತಹ ದಾತೃವಾದ ಸಾಧುಕಾರನನ್ನು ನಾನು ಎಲ್ಲಿಯೂ ನೋಡಲಿಲ್ಲ—ಎಂದು ವಿಸ್ಮಿತನಾಗಿ ಇನ್ನು ಸ್ವಲ್ಪದೂರಹೋಗಿ—ಆತನು ಸರ್ವವಿಷಯಗಳಲ್ಲಿಯೂ, ವಿರಕ್ತನು. ಮನೆಯಲ್ಲಿ ಅನ್ನವಸ್ತ್ರಕ್ಕೆ ಸಂಕೋಚವಾಗಿರುವುದು, ಕ್ಷಮೆಯನ್ನೂ

ಶಾಂತಿಯನ್ನೂ ಹಿಡಿದಿರುವನು. ಇಂತವನ ಸಂಗಡ ವ್ಯವಹಾರವಂ ಮಾಡಿದೆನಲ್ಲಾ! ನನಗೇನು ಬುದ್ಧಿ ಭ್ರಮಿಸಿತೋ! ಆಕಾಶದಲ್ಲಿ ಸೇರಿದ ಶಬ್ದವು ಎಂತು ಹಿಂದಿರುಗದೋ ಸಮುದ್ರದಲ್ಲಿ ಹಾಕಿದ ಉಪ್ಪೂ, ಅಗ್ನಿಯಲ್ಲಿ ಹಾಕಿದ ತುಪ್ಪವೂ ಏನಮಾಡಿದರೂ ಎಂತು ಕೈಗೆ ಸೇರದೋ ಅಂತು ನರಸಿಂಹಮಹಾಂತನಿಗೆ ಕೊಟ್ಟ ದ್ರವ್ಯವೂ ಕೃಷ್ಣಾರ್ಪಣವೊಂದಿತು. ತುಳಸಿಗೆ ನೀರನ್ನು ಹಾಕಿ ಅದರ ಫಲವನ್ನು ಎಂತು ಅಪೇಕ್ಷಿಸಲಾಗದೋ ಅಂತು ನರಸಿಂಹಮಹಾಂತನಿಗೆ ಕೊಟ್ಟ ದ್ರವ್ಯವನ್ನೂ ಅಪೇಕ್ಷಿಸಲಾಗದು. ಸಮುದ್ರದಲ್ಲಿ ಸೇರಿದ ಉದಕದಂತೆ ನನ್ನ ದ್ರವ್ಯವು ಕುಬೇರನ ಭಂಡಾರದಲ್ಲಿ ಸೇರಿಹೋಯಿತು. ಆಕಾಶದಲ್ಲಿ ಪುಷ್ಪವನ್ನು ಇರಿಸಲು, ಅದು ಆ ಪುಷ್ಪದ ಪರಿಮಳವನ್ನು ವಾಯುವಿಗೆ ಕೊಟ್ಟಂತೆ ನನ್ನ ದ್ರವ್ಯವನ್ನು ಆತನು ಬ್ರಾಹ್ಮಣರಿಗೆ ಯಥೇಷ್ಟವಾಗಿ ಹಂಚಿಬಿಟ್ಟನು. ಈ ವಿಷಯದಲ್ಲಿ ಏಕೆ ಬರಿದೆ ವ್ಯಸನಪಡಬೇಕು. ವಿಶ್ವಂಭರನಾದ ಶ್ರೀಕೃಷ್ಣನು ಸರ್ವರ ಚಿಂತೆಯನ್ನೂ ಪರಿಹರಿಸುವನಾಗಿರುವನು—ಎಂದು ಮನಸ್ಸಿಗೆ ಸಮಾಧಾನಮಾಡಿಕೊಂಡು ದ್ವಾರಕಾಪಟ್ಟಣವನ್ನು ಸೇರಿ ಗೋಮತಿಯಲ್ಲಿ ಸ್ನಾನವಂ ಮಾಡಿ ಶ್ರೀಕೃಷ್ಣನ ಸಂದರ್ಶನವಂ ಮಾಡಿ—ದೀನಬಂಧುವೆ! ಅನಾಥನಾಥನೆ! ಕೃಪಾರಾಶಿಯೇ! ನನ್ನ ಚಿಂತೆಯಂ ಪರಿಹರಿಸಬೇಕು—ಎಂದು ದೈನ್ಯದಿಂದ ಪ್ರಾರ್ಥಿಸಿ ಸಾಷ್ಟಾಂಗವಂದನೆಯಂ ಮಾಡಿ, ಅಲ್ಲಿದ್ದ ಅರ್ಚಕರಂ ಕುರಿತು-ಈವೂರಲ್ಲಿ "ಸಾರಳಸಾವ" ಎಂಬ ಸಾಧುಕಾರನ ಮನೆಯೆಲ್ಲಿರುವುದು? ದಯೆಯಿಟ್ಟು ನನಗೆ ತೋರಬೇಕು. ಆತನಲ್ಲಿಗೆ ಹುಂಡಿಯಂ ತಂದಿರುವೆನು—ಎನಲು, ಅವರು ಆ ಮಾತಂ ಕೇಳಿ-ಈವೂರಲ್ಲಿ ಸಾರಳಸಾವ" ಎಂಬ ಸಾಧುಕಾರನಾವನೂ ಇಲ್ಲ. ನಾವು ಇದುವರೆಗೂ ಆ ಹೆಸರನ್ನು ಕಂಡುಕೇಳಿದುದಿಲ್ಲ. ನೀವು ಹುಡುಕಿದರೂ ಈ ಪಟ್ಟಣದಲ್ಲಿ ಆ ಹೆಸರವನು ದೊರೆಯನು-ಎಂದರು. ಅದಕ್ಕೆ ಆಬ್ರಾಹ್ಮಣನು—ಸ್ವಾಮಿ! ಜುನ್ನಾಗಡಿಯಲ್ಲಿ ನರಸಿಂಹಮಹಾಂತನೆಂಬ ಒಬ್ಬ ವಿರಕ್ತನಾದ ಭಾಗವತೋತ್ತಮನಿರುವನು. ಆತನಿಗೆ ಏಳುನೂರುವರಹಗಳನ್ನು ಕೊಟ್ಟು ಆತನಿಂದ ಹುಂಡಿಯನ್ನು ಬರೆಯಿಸಿಕೊಂಡು ಬಂದೆನು-ಎನಲು, ಮತ್ತೆ ಅವರು—ಸ್ವಾಮಿ! ನೋಡಿ ದ್ರವ್ಯವ್ಯವಹಾರವನ್ನು ಮಾಡಬೇಕು. ಪಾತ್ರವನ್ನು ನೋಡಿ ದಾನವಂ ಕೊಡಬೇಕು. ಸದ್ಗುರುವನ್ನು ಅರಿತು ಶರಣುಹೊಂದಿ ಜ್ಞಾನರಹಸ್ಯಾರ್ಥವನ್ನು ತಿಳಿಯಬೇಕು. ಹರಿಭಕ್ತನಂ ನೋಡಿ ಸದ್ಭಾವದಿಂದ ನಮಸ್ಕಾರವಂ ಮಾಡಬೇಕು. ಇಂತು ಪ್ರಪಂಚದ ಸ್ಥಿತಿಯಿರುವುದು. ವಿಪರೀತವೃತ್ತಿಯನ್ನು ಆಚರಿಸಬಾರದು. ಹರಿದಾಸನಿಗೆ ಭಕ್ತಿಯಿಂದ ಅನ್ನವಸ್ತ್ರಗಳಂ ಕೊಡಬೇಕು; ಅಂತಲ್ಲದೆ ಅವನಲ್ಲಿ ಕುಡುವುದೂ ಕೊಳ್ವುದೂ ತಕ್ಕುದಲ್ಲ. ಅಂತಹ ವಿರಕ್ತರ ಸಂಗತಿಗೆ ಯಾವನು ಹೋಗುವನೋ ಅವನನ್ನು ತಮ್ಮಂತೆಯೇ ಮಾಡಿಕೊಳ್ಳುವರು. ನದಿಗಳು ಸಮುದ್ರಕ್ಕೆ ಹೋಗಿ ಸೇರಲು, ಅವು ಸಮುದ್ರವೇ ಎಂತು ಆಗುವುವೋ; ಲೋಹವು

ಪರಿಸಕ್ಕೆ ಸೇರಿಕಲು ಆಕ್ಷಣವೇ ಅವರ ಸ್ವರೂಪವು ಎಂತು ಭಿನ್ನವಾಗುವುದೋ; ಗಂಗೆಯಲ್ಲಿ ಕಾಡುಹಳ್ಳ ಸೇರಲು, ಅವರ ನಾಮರೂಪವೇ ಎಂತು ಬೇರೆಯಾಗುವುದೋ ಅಂತು ಸಾಧುಸಜ್ಜನರ ಸಂಗತಿಯಿಂದ ಪ್ರಪಂಚವು ತನಗೆತಾನೇ ಲೀನವಾಗಿ ಹೋಗುವುದು. ಇಂತು ವೃದ್ಧಾಚಾರವಿರುವುದರಿಂದ ನೀನು ಆ ವಿಷ್ಣುಭಕ್ತನ ಸಂಗಡ ವ್ಯವಹಾರವಂ ಮಾಡಬಹುದೇ? ಇನ್ನು "ಸಾರಳಸಾವ" ಎಂಬ ಸಾಧುಕಾರನನ್ನು ಎಲ್ಲಿ ಹುಡುಕುವೆ?-ಎಂದರು. ಆಬ್ರಾಹ್ಮಣನು ಅರ್ಚಕರ ಮಾತಂ ಕೇಳಿ ಬಹುಚಿಂತಾಕ್ರಾಂತನಾಗಿ ಸ್ವಾಮಿಗೆ ಮತ್ತೆ ನಮಸ್ಕಾರವಂ ಮಾಡಿ ಅಲ್ಲಿಂದ ಹೊರಟು ತನ್ನ ಬೀಡಿಗೆ ಹೋಗುತ್ತ ಮಾರ್ಗದಲ್ಲಿ-ನರಸಿಂಹಮಹಾಂತನು ಆ ದಿನವೇ ದ್ರವ್ಯವೆಲ್ಲವನ್ನೂ ಹಂಚಿಬಿಟ್ಟನು. ಇನ್ನು ಆ ದ್ರವ್ಯದ ಆಸೆಯಿಂದ ಫಲವೇನು? ಆ ಆಸೆಯನ್ನು ಬಿಟ್ಟು ವೈಕುಂಠನಾಥನನ್ನು ಶರಣುಹೊಂದಬೇಕು-ಎಂದು ಬಗೆದು ಅಲ್ಲಿಯೇ ಕುಳಿತುಕೊಂಡನು.

ಆಗ ದೇವಾದಿದೇವನಾದ ರುಕ್ಮಿಣೀಕಾಂತನು ಉದ್ಧವಾದಿಗಳನ್ನು ಕುರಿತು-ನರಸಿಂಹಮಹಾಂತನು ನನ್ನ ಮೇಲೆ ಹುಂಡಿಯನ್ನು ಬರೆದು ಕಳುಹಿಸಿರುವನು. ಆತನ ಕಾರ್ಯವನ್ನು ಈಗಲೇ ನೆರವೇರಿಸಬೇಕು. ಅದಕ್ಕೋಸ್ಕರ ಈಗ "ಸಾರಳಸಾವ" ಎಂಬ ಹೆಸರಿಂದ ನರರೂಪವನ್ನು ಧರಿಸಿ ಹೊರಡುವೆನು-ಎನಲು, ಅವರು ಪುರುಷೋತ್ತಮನ ಮಾತಂ ಕೇಳಿ-ಸ್ವಾಮಿಯೇ! ನಿನ್ನ ಮಹಿಮೆಯನ್ನು ಶ್ರುತಿಗಳೂ ಸಾಕಲ್ಯದಿಂದ ತಿಳಿಯಲಾರವು. ಅಂತಹ ಮಹಾಮಹಿಮನಾದ ನೀನು ಭಕ್ತರ ಕಾರ್ಯಕ್ಕೋಸ್ಕರ ಅನಂತರೂಪವನ್ನು ಧರಿಸುವೆ. ನೀನು ಮಹಾತಂತ್ರನು. ಭಕ್ತರಿಗೆ ಮೊದಲು ಭಯವನ್ನು ಹುಟ್ಟಿಸಿ ಬಳಿಕ ಅಭೀಷ್ಟವಾದ ನಾಮರೂಪದಿಂದ ಅವರಿಗೆ ಪ್ರಸನ್ನನಾಗುವೆ ಎಳಮಗುವಿನ ತಾಯಿಯು ಇಲ್ಲದ ಬೂತನ್ನು ತೋರಿಸಿ ಅಂಜಿಸಿ ಬಳಿಕ ಸಮಾಧಾನವನ್ನುಂಟುಮಾಡುವಂತೆ ನೀನು ಭಯವನ್ನುಂಟುಮಾಡಿ ಬಳಿಕ ಭಯವಂ ಪರಿಹರಿಸಿ ಸಮಾಧಾನಗೊಳಿಸುವೆ. ಆದುದರಿಂದಲೇ ನಿನ್ನನ್ನು "ಭಯಕೃತ್ ಭಯನಾಶನಃ" ಎಂದು ಸ್ತುತಿಯಿಸುವರು-ಎಂದರು.

ಬಳಿಕ ಸ್ವಾಮಿಯು ದಿವ್ಯವಸ್ತ್ರಭೂಷಣಾಲಂಕೃತನಾಗಿ ಸಾಧುಕಾರನ ವೇಷವಂ ಧರಿಸಿ ರಥಾರೂಢನಾಗಿ ತ್ವರೆಯಿಂದ ಆಬ್ರಾಹ್ಮಣನ ಬಳಿಗೆ ಬಂದು ಸೇರಿದನು. ಭಕ್ತರ ಪಕ್ಷಪಾತಿಯೂ ಜಗದ್ವಂದ್ಯನೂ ಆದ ಆಸ್ವಾಮಿಯ ಲೀಲೆಯು ಯಾರಿಗೂ ತಿಳಿಯಲಸದಳವು. ಆಬ್ರಾಹ್ಮಣನನ್ನು ನೋಡಿ ಜಗನ್ನಾಥನು-ನೀವು ಯಾರು? ಇಲ್ಲಿ ಕುಳಿತುಕೊಂಡು ಏಕೆ ಚಿಂತೆಮಾಡುತ್ತಿರುವಿರಿ? ಎಂದು ಬೆಸಗೊಂಡನು.

ಆತನು ಅಭಿವಂದಿಸಿ-ಸ್ವಾಮಿ! ಜುನ್ನಾಗಡಿಯಲ್ಲಿರುವ ನರಸಿಂಹಮಹಾಂತನೆಂಬ ಹಿರಿಯ ಭಕ್ತನ ಕರಣಿಕನು "ಸಾರಳಸಾವ" ಎಂಬಾತನು ಈ ಪೂರಲ್ಲಿರುವನು. ಆತನ ದರ್ಶನವು ನನಗಾಗಬೇಕು. ಆತನೆಲ್ಲಿರುವನೋ ತಿಳಿಯೆನು-ಎಂದನು. ಆಮಾತಂ

ಕೇಳಿ ಲಕ್ಷ್ಮೀಪತಿಯು ನಕ್ಕು—ನಾನೇ ಆ ನರಸಿಂಹಮಹಾಂತನ ಕರಣಿಕನು. ನನ್ನ ಹೆಸರೇ 'ಸಾರಳಸಾವ' ಎಂದು. ಆತನು ನನಗೆ ಏನಪ್ಪಣೆಯಂ ಕೊಟ್ಟಿರುವನು ?—ಎಂದು ಬೆಸಗೊಂಡನು.

ಮಳೆ ಸುರಿಯಲು, ತೃಣವೆಂತು ಉಲ್ಲಾಸಗೊಳ್ಳುವುದೋ ; ಪ್ರೇಮಳಭಕ್ತನು ಹರಿಕೀರ್ತನೆಯಂ ಕೇಳಿ ಎಂತು ಸಂತೋಷಪಡುವನೋ ; ಪಶ್ಚಾತ್ತಾಪಗೊಂಡವನು ತೀರ್ಥವಿಶೇಷವಂ ಕಂಡು ಎಂತು ಹರ್ಷಗೊಳ್ಳುವನೋ ; ಭಾಗವತೋತ್ತಮನು ಭಾಗವತಶ್ರವಣವಂ ಮಾಡಿ ಎಂತು ಆನಂದಭರಿತನಾಗುವನೋ ; ತೃಷಾಕ್ರಾಂತನು ಸ್ವಾದೂದಕವಂ ಕಂಡು ಎಂತು ಸಂತುಷ್ಟನಾಗುವನೋ ; ಯಾಚಕನು ಔದಾರ್ಯವುಳ್ಳ ದಾತೃವಂ ಕಂಡು ಎಂತು ಮುದಿತನಾಗುವನೋ ಅಂತು ಪರಮಪುರುಷನ ಮಾತಂ ಕೇಳಿ ಆ ಬ್ರಾಹ್ಮಣನು ಮನದಲ್ಲಿ ಪರಮಹರ್ಷವಂ ತಾಳಿ, ಹುಂಡಿಯ ಲೇಖನವಂ ತೆಗೆದು ಅವನ ಕೈಗೆ ಕೊಟ್ಟನು.

ಲಕ್ಷ್ಮೀಪತಿಯು ಆ ಲೇಖನವಂ ತೆಗೆದುಕೊಂಡು ಸಿರದಲ್ಲಿ ವಹಿಸಿದನು. ಅಹಹ! ನಿಗಮಾಗಮಗಳೂ ಯಾವನ ಗತಿಯನ್ನು ತಿಳಿಯಲಾರವೋ ಆ ಮಹಾನುಭಾವನು ಭಕ್ತರ ಅಧೀನನಾಗಿರುವನು. ಆ ಲೇಖನವಂ ಓದಿಕೊಂಡು—ನರಸಿಂಹಮಹಾಂತನು ಸಂಸಾರದಲ್ಲಿದ್ದರೂ ವಿರಕ್ತನಾಗಿರುವನು. ಲೇಶವಾದರೂ ಆಶೆಯೆಂಬುದಿಲ್ಲ—ಎಂದು ಸಂತೋಷಗೊಂಡು, ಆ ಕ್ಷಣದಲ್ಲಿ ಏಳುನೂರುವರಹಗಳಂ ತೆಗೆದು ಆ ಬ್ರಾಹ್ಮಣನ ಮುಂದೆ ಸುರಿದನು. ಆ ದ್ರವ್ಯವನ್ನು ನೋಡಿ ಬ್ರಾಹ್ಮಣನು ಸಮಾಧಾನಗೊಂಡು ವಿಸ್ಮಿತನಾಗಿ-ನೀವು ಶ್ರೀಮಂತರು ; ನರಸಿಂಹಮಹಾಂತನು ಬಡವನು. ಸೇವಕನು ಪ್ರಬಲನು ; ಸ್ವಾಮಿಯು ದುರ್ಬಲನು-ಇಂತೆಂಬುದಿದು ವಿಪರೀತವಾಗಿ ತೋರುವುದು. ಅರುಣನು ಸೂರ್ಯನಿಗಿಂತಲೂ ತೇಜೋಧಿಕನಾಗಿರುವುದುಂಟೆ ? ಗಂಗೆಗಿಂತಲೂ ಊರಬಚ್ಚಲ ಕಾಲ್ವೆಯು ಪುರಾಣಪ್ರತಿಪಾದಿತವಾದುದೇ ? ರಾಜನಿಗಿಂತಲೂ ಅಧಿಕಾರಿಯು ದೊಡ್ಡವನಾಗಿ ಪೃಥ್ವಿಯಲ್ಲಿ ಎಲ್ಲಿಯೂ ತೋರಲಿಲ್ಲ. ಶ್ರೀರಾಮನಿಗಿಂತಲೂ ವಾನರರು ಪ್ರತಾಪಾಧಿಕರೇ ? ಕೈಲಾಸಪತಿಯಾದ ಪಾರ್ವತೀರಮಣನಿಗಿಂತಲೂ ಗಣಗಳು ಶ್ರೇಷ್ಠರೇ ? ಈ ವಿಷಯದ ನಿಜಸ್ಥಿತಿಯೇನು ?--ಎನಲು, ಆತನನ್ನು ಕುರಿತು ಸ್ವಾಮಿಯು—ವಿಷ್ಣುಭಕ್ತರು ಸರ್ವಕಾಲದಲ್ಲಿಯೂ ಉದಾಸೀನರು. ಸಂಸಾರದಲ್ಲಿದ್ದರೂ ಮಾಯಾತೀತರು. ಆಶಾರಹಿತರಾಗಿರುವರು. ನಿತ್ಯಪರಿಪೂರ್ಣರಾಗಿರುವರು. ಮೇಘವು ವರ್ಷಿಸಲೆಂದು ಸಮುದ್ರವು ಅಪೇಕ್ಷಿಸುವುದೇ ? ಮನೆಯಲ್ಲಿ ದೀಪವನ್ನು ಹತ್ತಿಸಬೇಕೆಂದು ಸೂರ್ಯನು ಅಪೇಕ್ಷಿಸಬೇಕೆ ? ಅಂತು ತೃಪ್ತರಾದ ಭಾಗವತೋತ್ತಮರು ಏನನ್ನೂ ಅಪೇಕ್ಷಿಸರು. ಸುಧಾರಸವನ್ನು ಪಾನಮಾಡುವರು ಔಷಧಪ್ರಯತ್ನವನ್ನು ಮಾಡರು. ಭಗವದ್ಭಜನದಲ್ಲಿ ನಿರತರಾದ ಮಹನೀಯರು ಧನಸಂಪತ್ತು ಅಧಿಕವೆಂದು ಎಣಿಸರು. ಅಧ್ಯಾತ್ಮಜ್ಞಾನವುಂಟಾಗಿರಲು,

ಕಳಾಶಾಸ್ತ್ರಶ್ರವಣದಲ್ಲಿ ಪ್ರಯತ್ನವಂ ಮಾಡುವರೇ? ಭಾಗವತಶಿರೋಮಣಿಗಳು ಭಗವದ್ಭಜನದಲ್ಲಿಯೇ ನಿಮಗ್ನರಾಗಿ ಇತರಲೌಕಿಕವಿಷಯಗಳನ್ನು ಮನಸ್ಸಿಗೆ ತಾರರು. ನರಸಿಂಹಮಹಾಂತನು ಪರಮವಿರಕ್ತನು. ಧನಸಂಪತ್ತು ಆತನಿಗೆ ಇಷ್ಟವಿಲ್ಲ. ಆತನ ಸ್ವಭಾವಕ್ಕೆ ನಾವು ಏನತಾನೇ ಮಾತಲು ಆಗುವುದು? ಜನನಿಯು ತನ್ನ ಮಗುವಿನ ತುಡುಗೆಯಂ ತುಡಿಸಿ ಅಲಂಕಾರಗೊಳಿಸಿ ತಾನು ಎಂತು ಸಂತೋಷಪಡುವಳೋ ಅಂತು ನರಸಿಂಹಮಹಾಂತನು ಸರ್ವಸ್ವವನ್ನೂ ನನಗೊಪ್ಪಿಸಿ ತಾನು ಸಂತೋಷ ಪಡುತ್ತಿರುವನು—ಎಂದು ನುಡಿದು ಆ ಕ್ಷಣದಲ್ಲಿ ಅದೃಶ್ಯನಾದನು. ಬ್ರಾಹ್ಮಣನು ನೋಡಿ ಆಶ್ಚರ್ಯಗೊಂಡನು. ಬಳಿಕ ದ್ರವ್ಯವನ್ನು ಎಣಿಕೆಮಾಡಲು, ಅಗಣಿತವಾಗಿದ್ದಿತು. ದ್ವಾರಕಾನಾಥನಾದ ಶ್ರೀಕೃಷ್ಣನೇ ಪ್ರತ್ಯಕ್ಷನಾಗಿ ತನಗೆ ಸಂದರ್ಶನವಂ ಕೊಟ್ಟನೆಂದು ನಿಶ್ಚಯಿಸಿಕೊಂಡು ಅಲ್ಲಿಯ ಬ್ರಾಹ್ಮಣರಿಗೆ ಸಂತರ್ಪಣೆಯಂ ಮಾಡಿದನು. ಅಗ್ನಿಹೋತ್ರಿಗಳೂ ಯೋಗ್ಯರೂ ಆದ ಅನೇಕರಾದ ಬಡಬ್ರಾಹ್ಮಣರಿಗೆ ಪುಷ್ಕಳವಾದ ದ್ರವ್ಯವಂ ಕೊಟ್ಟನು. ದೇವಾಲಯಕ್ಕೆ ಹೋಗಿ ಭಗವಂತನಿಗೆ ಸಾಷ್ಟಾಂಗ ವಂದನೆಯಂ ಮಾಡಿ ಅಪ್ಪಣೆಯಂ ತೆಗೆದುಕೊಂಡು ಅಲ್ಲಿಂದ ಹೊರಟು ಮತ್ತೆ ಜುನ್ನಾಗಡಿಗೆ ಬಂದು ನರಸಿಂಹಮಹಾಂತನನ್ನು ಕಂಡು ನಡೆದ ವೃತ್ತಾಂತವೆಲ್ಲವಂ ನುಡಿದು-ಮಹನೀಯನೆ! ಹರಿಭಕ್ತರಲ್ಲಿ ನೀನು ಶ್ರೇಷ್ಠನು. ದ್ವಾರಕಾನಾಯಕನನ್ನು ಋಣಿಯನ್ನಾಗಿ ಮಾಡಿಕೊಂಡಿರುವೆ. ಸಾರಳಸಾವನಾಗಿ ಬಂದು ನನಗೆ ದರ್ಶನವಂ ಕೊಟ್ಟನು. ನಿನ್ನ ಲೇಖನವಂ ಕೈಗೆ ಕೊಡುವುದೂ ಬಹುಪ್ರೇಮದಿಂದ ತೆಗೆದುಕೊಂಡು ಸಿರದಿಂದ ವಹಿಸಿ ದ್ರವ್ಯವನ್ನು ತೆಗೆದು ನನ್ನ ಕೈಗೆ ಕೊಟ್ಟನು. ನಾನು ಎಣಿಸಿನೋಡಲು, ಸಂಖ್ಯಾರಹಿತವಾಗಿ ತುಂಬಿತು. ಮತ್ತೆ ನೋಡುವಷ್ಟರಲ್ಲಿ ಆತನು ಕಣ್ಣಿಗೆ ಕಾಣಲಿಲ್ಲ—ಎಂದನು.

ನರಸಿಂಹಮಹಾಂತನು ಆ ಬ್ರಾಹ್ಮಣನ ವಚನವಂ ಕೇಳಿ ಆನಂದಬಾಷ್ಪವಂ ಸುರಿಯಿಸುತ್ತ ಭಗವಂತನನ್ನು ಹೃದಯದಲ್ಲಿ ಧ್ಯಾನಿಸಿ—ದ್ವಾರಕಾವಾಸಿಯೇ! ರುಕ್ಮಿಣೀ ರಮಣನೇ! ಅನಾಥನಾಥನೆ! ಕರುಣಾರಾಶಿಯೆ! ನನಗೋಸ್ಕರ ನೀನು ದಣಿದೆಯಾ? ನೀನು ಮಹಾಮಹಿಮನು. ಮಹಾಯೋಗಿಗಳೂ ನಿನ್ನ ಪಾದವಂ ಅರಿಯರು. ಚತುರ್ವರ್ಗಕ್ಕಗಳಿಗೆ ಅಗೋಚರನು. ಆದರೂ ಭಕ್ತವತ್ಸಲನಾಗಿ ಭಕ್ತರ ಮನೋರಥವಂ ಪೂರೈಸುವೆ--ಎಂದು ನಾನಾರೀತಿಯಿಂದ ಪಾಡಿಪೊಗಳಿ ಮನಸ್ಸಮಾಧಾನವಂ ಪಡೆದು ಭಗವನ್ನಾಮಸ್ಮರಣೆಯಂ ಮಾಡುತ್ತ ತದೇಕಧ್ಯಾನದಿಂದ ಕುಳಿತನು.

ಎಲೈ ಶ್ರೋತೃಗಳಿರಾ! ಈ ಸಂತರ ಚರಿತ್ರೆಯೆಂಬುದೇ ಕ್ಷೀರಸಾಗರವು. ಶೇಷಶಾಯಿಯಾದ ಲಕ್ಷ್ಮೀಕಾಂತನು ನಿರಂತರವಾಗಿ ಇಲ್ಲಿಯೇ ವಾಸಮಾಡುತ್ತಿರುವನು. ಹೀನನೂ ದೀನನೂ ಅನಾಥನೂ ಆದ ನಾನು ಪರಮಾಮೃತವಂ

ಸೇವಿಸುವುದಕ್ಕೋಸ್ಕರ ಇಲ್ಲಿಗೆ ಬಂದಿರುವೆನು. ಕರುಣಾನಿಧಿಯಾದ ಪರಮಪುರುಷನು ಪ್ರೇಮವೆಂಬ ಜೀವನವನಿತ್ತು ಸಲಹುವನು.

ಇಂತು ಶ್ರೀಭಕ್ತವಿಜಯದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯಂ ಸಂಪೂರ್ಣಂ.
ಮಂಗಳಮಸ್ತು.

ಮೂವತ್ತನೆಯ ಅಧ್ಯಾಯ.

ಶ್ರೋತೃಗಳು ಮುಂದಣಕಥೆಯಂ ಆದರದಿಂದ ಅವಧರಿಸಬೇಕು. ಜುನ್ನಾಗಡಿಯಲ್ಲಿ ನರಸಿಂಹಮಹಾಂತನು ಭಕ್ತಿವಿಶೇಷದಿಂದ ಶ್ರೀಹರಿಕೀರ್ತನೆಯಂ ಮಾಡಿಕೊಂಡು ಪರಮಾನಂದಭರಿತನಾಗಿದ್ದನು. ಶಮದಮಾದಿಸುಗುಣಗಳು ಆತನಲ್ಲಿ ಮೂರ್ತಗಳಾಗಿದ್ದುವು. ಅಯಾಚನವೃತ್ತಿಯಿಂದ ಅಲ್ಪಸಂತುಷ್ಟನಾಗಿ ಕುಟುಂಬಭರಣವಂ ಮಾಡುತಿದ್ದನು. ಸಂಸಾರದಲ್ಲಿದ್ದರೂ ಸುಖದುಃಖಗಳಿಂದ ಅಲಿಪ್ತನಾಗಿದ್ದನು. ತಾವರೆಯು ಸರೋವರದಲ್ಲಿ ಇದ್ದರೂ ನೀರುಹತ್ತದೆ ಎಂತಿರುವುದೋ ; ಸೂರ್ಯನು ಘಟದಲ್ಲಿ ಪ್ರತಿಬಿಂಬಿಸಿದರೂ ಎಂತು ಸೇರದಿರುವನೋ ; ವಾಯುವು ಎಲ್ಲಾ ಕಡೆಯಲ್ಲಿದ್ದರೂ ಎಂತು ಹಿಡಿಯಲ್ಪಡದಿರುವುದೋ ಅಂತು ಸಾಧುಗಳು ಪ್ರಪಂಚದಲ್ಲಿದ್ದರೂ ಸಾಂಸಾರಿಕ ದುಃಖಕ್ಕೆ ಬಾಹ್ಯರಾಗಿರುವರು. ಮಹನೀಯನಾದ ಭಾಗವತನನ್ನು ಯಾವನು ನಿಂದಿಸುವನೋ ಅವನು ಅಜ್ಞಾನಿಯೆನಿಸುವನು. ಅವನನ್ನು ಭೂಮಿಗೆ ಭಾರವೆಂದು ತಿಳಿಯಬೇಕು. ಆಕಾಶಕ್ಕೆ ಕಪ್ಪನ್ನು ಹತ್ತಿಸಲು ತೊಡಗಿದರೆ ಅದು ಅವನ ಕೈಗೇ ಎಂತು ಹತ್ತುವುದೋ ಅಂತು ಭಾಗವತನನ್ನು ನಿಂದಿಸಲು, ಆನಿಂದೆಯು ಅವನಿಗೆ ಉಂಟಾಗುವುದು. ಅದಂತಿರಲಿ. ನರಸಿಂಹಮಹಾಂತನು ಸಂಸಾರದಲ್ಲಿ ವಿರಕ್ತನಾಗಿಯೇ ಇದ್ದನು.

ಇಂತಿರಲು, ಆತನ ಮಗಳು ಋತುಮತಿಯಾದಳು. ವರನ ತಾಯ್ತಂದೆಗಳು ನಿಷೇಕಪ್ರಸ್ತುತಕ್ಕೆ ಹೇಳಿಕಳುಹಿಸಿದರು. ಆಗ ನರಸಿಂಹಮಹಾಂತನ ಮಡದಿ ಮನೆಯಲ್ಲಿ ಅನ್ನವಸ್ತ್ರಕ್ಕೆ ಮಾರ್ಗವಿರಲಿಲ್ಲವಾದುದರಿಂದ ಚಿಂತಿಸಿ ಪತಿಯನ್ನು ಕುರಿತು–ಅಲ್ಲಿಗೆ ಉಡುಗೊರೆಯೇನನ್ನು ತೆಗೆದುಕೊಂಡುಹೋಗಬೇಕೆಂದು ಆಲೋಚಿಸಿರುವಿರಿ?–ಎಂದು ಬೆಸಗೊಂಡಳು. ಅದಕ್ಕೆ ಆತನು ಉಡುಗೊರೆಗೆ ಹರಿನಾಮವೇ ಇದೆ–ಎಂದು ನುಡಿದು ದೃಢಮನಸ್ಕನಾಗಿ ಹೊರಟು ಮಗಳ ಮನೆಯಂ ಸೇರಿದನು. ಆತನಂ ಕಂಡು ನಂಟರು–ಇಲ್ಲಿಗೆ ಈತನು ಏಕೆ ಬಂದನು ? ಸುಮ್ಮನೆ ಲೋಕದ ಮರ್ಯಾದೆಗೋಸ್ಕರ

ಬರುವಂತೆ ಈತನಿಗೆ ಹೇಳಿಕಳುಹಿಸಿದೆವು. ಕೊರಲಲ್ಲಿ ತುಲಸೀಮಾಲೆಯಂ ಧರಿಸಿಕೊಂಡು ಕೈಯಲ್ಲಿ ಉಡುಗೊರೆಯೇನೂ ಇಲ್ಲದೆ ನಿರ್ಲಜ್ಜನಾಗಿ ಬಂದನಲ್ಲಾ—! ಎಂದು ಹಾಸ್ಯಮಾಡಿದರು. ಆಗ ಆತನ ಕನ್ಯಕೆ ಸಂಕೋಚಪಟ್ಟು ತಂದೆಯಬಳಿಗೆ ಬಂದು ದುರ್ಜನರು ನಿಮ್ಮನ್ನು ಹಾಸ್ಯಮಾಡುವರು. ಆಮಾತುಗಳಂ ಕೇಳಿದರೆ ನನಗೆ ಲಜ್ಜೆಯಾಗುವುದು-ಎಂದಳು.

ನರಸಿಂಹಮಹಾಂತನು ತನ್ನನ್ನು ಹಾಸ್ಯಮಾಡಿದ ನಂಟರನ್ನು ಕುರಿತು—ನಿಮಗೆ ಉಡುಗೊರೆಯೇನೇನು ಬೇಕು? ಹೇಳಿ-ಎನಲು, ಅವರು ಈ ಮಾತಂ ಕೇಳಿ ಮತ್ತೆ ನಕ್ಕರು. ಅವರಲ್ಲಿ ಒಬ್ಬ ಕುಟಿಲನು ಪತ್ರಿಕೆಯನ್ನು ಬರೆದು ಕೊಡುವೆನು—ಎಂದು ಹೇಳಿ ಇನ್ನು ಕೆಲವರೊಡನೆ ಆಲೋಚಿಸಿ ಬಗೆಬಗೆಯ ಉಡುಗೊರೆಯ ಹೆಸರುಗಳನ್ನು ಬರೆದು ಪತ್ರಿಕೆಯಂ ಕೈಗೆ ಕೊಟ್ಟನು. ನರಸಿಂಹಮಹಾಂತನು ಆ ಕುಟಿಲನನ್ನು ಕುರಿತು—ನಿನಗೆ ಏನುಬೇಕು? ಅದನ್ನು ಬರೆದುಕೊಡು--ಎಂದನು. ಆಗ ಅವನ ಭಾವವು ಶುದ್ಧವಲ್ಲದಕಾರಣ ನರಸಿಂಹಮಹಾಂತನ ಅವಿಶ್ವಾಸದಿಂದ ನನಗೆ ಒಂದು ಪಾಷಾಣವು ಬೇಕು-ಎಂದು ನುಡಿದು ಅದರ ಹೆಸರನ್ನೂ ಬರೆದುಕೊಟ್ಟನು. ಎಲ್ಲರನ್ನೂ ಕುರಿತು—ನಮನಮಗೆ ಬೇಕಾದ ಉಡುಗೊರೆಯೆಲ್ಲವನ್ನೂ ಪತ್ರಿಕೆಯಲ್ಲಿ ಬರೆದುಕೊಟ್ಟದಾಯಿತು. ಬರುವ ವಿಷಯದಲ್ಲಿ ನಂಬುಗೆಯಿಲ್ಲ-ಎಂದು ತಿರಸ್ಕರಿಸಿದನು. ಯಾವನಿಗೆ ಮಹನೀಯರಾದ ಸಾಧುಗಳ ವಚನದಲ್ಲಿ ವಿಶ್ವಾಸವಿಲ್ಲವೋ ಅವನು ಮಹಾದುರ್ಜನನು; ದ್ರೋಹಿ; ಅವನಿಗೆ ಹರಿಪ್ರಾಪ್ತಿಯೆಂದಿಗೂ ಆಗಲಾರದು. ಯಾವನು ಮೂರ್ಖನೋ, ಬ್ರಹ್ಮದ್ರೋಹಿಯೋ ತೀರ್ಥಕ್ಷೇತ್ರನಿಂದಕನೋ ಅವನಿಗೆ ಹರಿಪ್ರಾಪ್ತಿಯಾಗಲಾರದು. ಸ್ತ್ರೀಲಂಪಟನು, ಮಾತೃದ್ರೋಹಿ, ಸಂಸಾರಚಕ್ರದಲ್ಲಿಯೆ ಬಿದ್ದಿರುವನು ಯಾವನೋ, ವಿಧಿನಿಷೇಧಗಳನ್ನು ಅರಿಯದವನುಯಾವನೋ ಅವನಿಗೆ ಹರಿಪ್ರಾಪ್ತಿಯಾಗಲಾರದು. ಅಹಹ!! ಆ ದುರ್ಜನನು ತನಗೆ ಪಾಷಾಣವು ಬೇಕೆಂದು ನುಡಿದು ಸಾಧುಮಹನೀಯನಾದ ನರಸಿಂಹಮಹಾಂತನನ್ನು ಹಾಸ್ಯಮಾಡಿದನು. ಅದಂತಿರಲಿ. ನರಸಿಂಹಮಹಾಂತನು ತಿರಸ್ಕೃತನಾದರೂ ಮನದಲ್ಲಿ ಎಣಿಸದೆ ಭಕ್ತವತ್ಸಲನಾದ! ಭಗವಂತನನ್ನು ಪಲವುಬಗೆಯಿಂದ ಸ್ತುತಿಯಿಸಿ-ದೀನದಯಾಳುವೆ! ಅನಾಥನಾಥನೆ! ಕಮಲನೇತ್ರನೆ! ರುಕ್ಮಿಣೀಮಾನಸಚಕೋರಚಂದ್ರನೆ! ಕರುಣಾನಿಧಿಯೇ! ಈಗ ನೀನು ತ್ವರೆಯಿಂದ ಪ್ರಸನ್ನನಾಗಬೇಕು. ಭಕ್ತರು ಬಯಸಿದುದೆಲ್ಲವನ್ನೂ ಕರುಣಿಸುವೆ. ಈಗ ನರಸಿಂಹಮಹಾಂತನನ್ನು ಉಪೇಕ್ಷಿಸಬೇಡ—ಎಂದು ಪ್ರಾರ್ಥಿಸಲು, ಸರ್ವಚೈತನ್ಯಸ್ವರೂಪನಾದ ಶ್ರೀರುಕ್ಮಿಣೀಪತಿಯು ಭಕ್ತಶಿರೋಮಣಿಯಾದ ನರಸಿಂಹಮಹಾಂತನ ಪ್ರಾರ್ಥನೆಯನ್ನರಿತು ಸಂತುಷ್ಟನಾಗಿ ಉಡುಗೊರೆಗಳ ಮತ್ತು ಒಡವೆಗಳ ಮೊಟ್ಟೆಗಳಂ ತೆಗೆದುಕೊಂಡು ಆ ಕ್ಷಣವೇ ಅಲ್ಲಿಗೆ ಬಂದುಸೇರಿದನು. ಅಲ್ಲಿ ನೆರೆದಿದ್ದ ಆ ನಂಟರೆಲ್ಲರೂ ಆತನಂ ಕುರಿತು-ನೀವು ಯಾರು? ಎಲ್ಲಿರುವವರು?-ಎನಲು, ಅದಕ್ಕೆ

ಸ್ವಾಮಿಯು-ನಾನು ನರಸಿಂಹಮಹಾಂತನ ಲೆಕ್ಕವನ್ನು ಬರೆಯುವವನು. ದ್ವಾರಕೆಯಲ್ಲಿರುವ ಅಂಗಡಿಯಲ್ಲಿ ಇರುವೆನು. ಇಲ್ಲಿಗೆ ಜವಳಿಯನ್ನೂ ಒಡವೆಗಳನ್ನೂ ತಂದಿರುವೆನು-ಎಂದನು.

ಭಗವಂತನೆಂಬುದು ಯಾರಿಗೂ ಗೊತ್ತಾಗಿಲ್ಲ. ಜನಗಳು ಮೋಹಿತರಾಗಿರುವರು. ಭ್ರಾಂತಿಯಿಂದ ಕಣ್ಣುಮುಚ್ಚಿಕೊಂಡಿರುವರು. ಶ್ರೀಹರಿಯು ವಸ್ತ್ರಗಳ ಗಂಟನ್ನು ಹೊತ್ತುಕೊಂಡು ಒಡವೆಗಳ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ನಿಂತಿದ್ದನು. ನರಸಿಂಹಮಹಾಂತನು ನಂಟರಂ ಕುರಿತು-ಯಾರುಯಾರಿಗೆ ಏನೇನಪೇಕ್ಷೆಯಿರುವುದೋ ಹೇಳಿ. ಮನದಲ್ಲಿ ವಿಕಲ್ಪವಂ ಮಾಡದಿರಿ. ಸಂಕೋಚಪಡಲಾಗದು-ಎಂದನು. ಶ್ರೀಹರಿಯು ನರಸಿಂಹಮಹಾಂತನ ಕೈಯಲ್ಲಿದ್ದ ಪತ್ರಿಕೆಯಂ ತೆಗೆದುಕೊಂಡು ಗಂಟನ್ನು ಬಿಚ್ಚಿ ಪತ್ರಿಕೆಯಲ್ಲಿ ಬರೆದಿರುವಂತೆ ಅವರವರಿಗೆ ಆಯಾ ವಸ್ತ್ರಗಳನ್ನು ತನ್ನ ಕೈಯಿಂದಲೇ ಕೊಡುತಬಂದನು. ಬಳಿಕ ಅಳಿಯನಿಗೆ ಧೋತ್ರ ಶಲ್ಯ, ಅಳಿಯನ ತಾಯಿಗೆ ಪಟ್ಟೆಯಸೀರೆ ಪಟ್ಟೆಯ ಕುಪ್ಪಸ, ಕೆಲವರಿಗೆ ಬರಿಯಸೀರೆ, ಕೆಲವರಿಗೆ ಬರಿಯಕುಪ್ಪಸ, ಕೆಲವರಿಗೆ ಕರಿಯಚಂದ್ರಕಳೆಯಸೀರೆ, ಕೆಲವರಿಗೆ ಮುಂಗಿಪೈಠಣಿ, ಕೆಲವರಿಗೆ ರುಮ್ಮಾಲ್‌ಚೌಕಳಿ, ಕೆಲವರಿಗೆ ಕುಸುಂಬಪತ್ತಲ, ಕೆಲವರಿಗೆ ಕೇಸರಿಯಬಣ್ಣದ ಪತ್ತಲ, ಕೆಲವರಿಗೆ ಹಳದಿಯ ಪತ್ತಲ, ಕೆಲವರಿಗೆ ಪಾಗುಪರಕಾಳಿ, ಕೆಲವರಿಗೆ ಅಷ್ಟಕಂಬಿಶಲ್ಯ, ಕೆಲವರಿಗೆ ಮೇಘವರ್ಣದಪತ್ತಲ, ಕೆಲವರಿಗೆಪಟ್ಟೆಯವಸ್ತ್ರ, ಚೌಬುಡ್ಡಿ ಕಾಶಿಪಾರಸೀರೆ ; ಕೆಲವರಿಗೆ ಪೀತಾಂಬರ, ಕೆಲವರಿಗೆ ಮದನಗುಲಾಲ್‌ಪಟ್ಟೆ ಮುಗುಟ. ಇಂತು ಅವರವರ ಮನಸ್ಸಿಗೆ ಬೇಕಾದುದನೆಲ್ಲವನ್ನೂ ಕೊಟ್ಟನು. ಆದರೂ ತಂದಿದ್ದ ಗಂಟು ಮೊದಲಂತೆ ತುಂಬಿಯೇ ಇದ್ದಿತು. ಈವಿನೋದವಂ ನೋಡುವುದಕ್ಕೋಸ್ಕರ ಅಲ್ಲಿ ನೆರೆದಿದ್ದ ಜನಗಳಿಗೂ ಅರಸಿನಕುಂಕುಮಕ್ಕೋಸ್ಕರ ಬಂದಿದ್ದ ಮುತ್ತೈದೆಯರೆಲ್ಲರಿಗೂ ಬಗೆವಗೆಯ ವಸ್ತ್ರಗಳನ್ನು ಹಂಚಿಕೊಟ್ಟನು. ಅವರೆಲ್ಲರೂ ಧನ್ಯರಾದುದರಿಂದ ಶ್ರೀಮನ್ನಾರಾಯಣನೆ ಬಂದು ಅವರಿಗೆ ವಸ್ತ್ರಗಳನ್ನು ನೀಡಿದನು. ಅಹಹ! ಇದಕ್ಕೆ ದೃಷ್ಟಾಂತವೇನಂ ಹೇಳುವುದು? ಹಿಂದೆ ಹಸ್ತಿನಾಪುರದಲ್ಲಿ ದುಷ್ಟಕೌರವನು ದ್ರೌಪದಿಯ ಮಾನಭಂಗವಂ ಮಾಡಲುಜ್ಜುಗಿಸಿದಾಗ ಶ್ರೀಹರಿಯು ಅಕ್ಷಯವಸ್ತ್ರಗಳನ್ನು ತೆಗೆದುಕೊಂಡು ಓಡಿಬಂದಂತಾಯಿತು. ಮೊದಲು ಇಂತು ವಸ್ತ್ರಗಳಂ ಕೊಟ್ಟು ಬಳಿಕ ಒಡವೆಯ ಪೆಟ್ಟಿಯಂ ತೆಗೆದು, ಕೆಲವರಿಗೆ ಚಂದ್ರಸೂರ್ಯಹೆರೆಯುಂ, ಕೆಲವರಿಗೆ ರಾಗಟೆ ಜಡೆಕುಚ್ಚುಗಳಂ, ಕೆಲವರಿಗೆ ಜುಮುಕಿಗಳಂ, ಕೆಲವರಿಗೆ ಬುಗುಡಿಗಳಂ, ಕೆಲವರಿಗೆ ವಿಮಾನುಬಾವುಲಿಗಳಂ, ಕೆಲವರಿಗೆ ಹೂಸೆಯೊಳೆಮುಡ್ಡಿಕೆಗಳಂ, ಕೆಲವರಿಗೆ ಮುತ್ತಿನಸರವಂ, ಕೆಲವರಿಗೆ ಮೋಹನಮಾಲೆಯುಂ, ಕೆಲವರಿಗೆ ಎರಡೆಳೆಯ ಪುತ್ಥಳೀಸರಂ, ಕೆಲವರಿಗೆ ಬಾಹುಬಂದುಗಳಂ, ಕೆಲವರಿಗೆ ಢುಂಢುಬಳೆಗಳಂ, ಕೆಲವರಿಗೆ ಉಡೆದಾರಗಳಂ, ಕೆಲವರಿಗೆ ವಂಕಿಸರಪಣಿಗಳಂ,

ಕೆಲವರಿಗೆ ಗುಜರಿಯೆಂಬ ಮಹಾಭರಣವನ್ನೂ, ಕಾಲುಂಗರವನ್ನೂ, ಪಿಲ್ಲಿಕಿರುಪಿಲ್ಲಿಗಳನ್ನೂ ಕೆಲವರಿಗೆ ಉಂಗುರಗಳನ್ನೂ ನೀಡಿದನು. ಇಂತು ಶ್ರೀಪತಿಯು ಕೌತುಕವಂ ತೋರಿಸಿ ಯಾರಯಾರ ಅಪೇಕ್ಷೆಯೆಂತೆಂತು ಇದ್ದಿತೋ ಅಂತಂತು ಅವರವರ ಅಪೇಕ್ಷೆಯಂ ಪೂರೈಸಿ ಬಳಿಕ, ಗೋವರ್ಧನಪರ್ವತವನ್ನು ಎತ್ತಿದ ತಾನು ಪತ್ರಿಕಾಲೇಖಕನ ತಲೆಯಮೇಲೆ ಒಂದು ಪಾಷಾಣವಂ ಎತ್ತಿ ಇರಿಸಿದನು.

ಅದಂ ನೋಡಿ ಸಕಲರೂ ನಕ್ಕು ಅವನಂ ಕುರಿತು-ನಿನ್ನದು ದುರದೃಷ್ಟವು. ಕಲ್ಪವೃಕ್ಷದ ಕೆಳಗೆ ಕುಳಿತುಕೊಂಡು ಭಿಕ್ಷಾಟನವಂ ಬಯಸಿದಂತಾಯಿತು. ಪಾರ್ವತೀಪತಿಯು ಪ್ರಸನ್ನನಾಗಿ ಭಸ್ಮಾಸುರನನ್ನು ಕುರಿತು ವರವನ್ನು ಬೇಡು-ಎನಲು, ಅವನು ವಿಪರೀತವರವಂ ಬೇಡಿದಂತಾಯಿತು-ಎನಲು, ಆ ಕುಟಿಲನು ಆ ನುಡಿಯಂ ಕೇಳಿ ನೀರಲ್ಲಿ ಬಿದ್ದ ಮಣ್ಣುಹೆಂಟೆಯಂತೆ ಕರಗಿಹೋದನು. ನರಸಿಂಹಮಹಾಂತನಿಗೆ ಎಲ್ಲರೂ ನಮಸ್ಕಾರವಂ ಮಾಡಿ-ಶ್ರೀಪಾಂಡುರಂಗನು ನಿನಗೆ ಪ್ರಸನ್ನನಾಗಿರುವನು. ನೀನು ಧನ್ಯನು-ಎಂದು ಅಭಿನಂದಿಸಿದನು.

ನಿಷೇಕಪ್ರಸ್ತುತವು ನೆರವೇರಿತು. ಬಳಿಕ ನರಸಿಂಹಮಹಾಂತನು ಜುನ್ಯಾಗಡಿಗೆ ಹೊರಟನು. ತನ್ನೊಡನೆಯೆ ಬರುತ್ತಿದ್ದ ಶ್ರೀಕೃಷ್ಣನನ್ನು ನೋಡಿ-ಸ್ವಾಮಿಯೇ! ರುಕ್ಮಿಣೀಕಾಂತನೇ! ನನಗೋಸ್ಕರ ಉಡುಗೊರೆಗಳಂ ತೆಗೆದುಕೊಂಡು ಬಂದು ನೀನು ಬಹುವಾಗಿ ದಣಿದೆ-ಎಂದು ಅಭಿನಂದಿಸಿದನು. ಸ್ವಾಮಿಯು-ನಾನು ಎಲ್ಲರಿಗೂ ವಸ್ತ್ರಗಳನ್ನು ಕೊಟ್ಟೆನು. ಈತನಿಗೆ ಯಾವ ಸನ್ಮಾನವನ್ನೂ ಮಾಡಲಿಲ್ಲ-ಎಂದು ತನ್ನಲ್ಲಿ ಆಲೋಚಿಸಿ ಪ್ರಸನ್ನನಾಗಿ ತುಳಸೀಮಿಶ್ರವಾದ ಪುಷ್ಪಮಾಲಿಕೆಯಂ ಆತನ ಕೊರಲಲ್ಲಿ ಹಾಕಿ ಅಲ್ಲಿಯೇ ಅಂತರ್ಧಾನವನ್ನೈದಿದನು.

ನರಸಿಂಹಮಹಾಂತನು ತನ್ನ ಸ್ಥಾನವಂ ಸೇರಿ ನಿತ್ಯವೂ ನಿಯಮದಿಂದ ದೇವರಿಗೆ ಪುಷ್ಪಮಾಲಿಕೆಯಂ ಸಮರ್ಪಿಸಿ ಕೀರ್ತನವಂ ಮಾಡುತ್ತಿದ್ದನು. ಸ್ವಾಮಿಗೆ ಸಮರ್ಪಿಸಿದ ಆ ಮಾಲಿಕೆಯು ಕೀರ್ತನಕಾಲದಲ್ಲಿ ಆತನ ಕೊರಲಿಗೆ ತನಗೆ ತಾನೆ ಬಂದು ಬೀಳುತಿದ್ದಿತು. ಈ ವೃತ್ತಾಂತವು ಆ ದೇಶದ ರಾಜನಿಗೂ ತಿಳಿಯಿತು. ರಾಜನು ಈ ಸುದ್ದಿಯಂ ಕೇಳಿ ತಾನು ಪ್ರತ್ಯಕ್ಷವಾಗಿ ನೋಡಬೇಕೆಂದು ಅಪೇಕ್ಷಿಸಿ ಆ ಜುನ್ಯಾಗಡಿಗೆ ಬಂದು ಸೇರಿದನು.

ಒಂದು ದಿವಸ ನರಸಿಂಹಮಹಾಂತನು ಕೀರ್ತನಮಾಡುತ್ತಿರುವ ಸಮಯದಲ್ಲಿ ರಾಜನು ಅಲ್ಲಿಗೆ ಬಂದು ನಿಂತುಕೊಂಡನು. ನರಸಿಂಹಮಹಾಂತನು ಭಗವನ್ಮೂರ್ತಿಯಂ ಪೂಜಿಸಿ ಪುಷ್ಪಮಾಲಿಕೆಯಂ ಧಾರಣಮಾಡಿ ಕೀರ್ತನಮಾಡುತ್ತಿರಲು, ರಾಜನು-ಏನೋ ಕೃತ್ರಿಮಸ್ಥಿತಿಯಿಂದ ಮಾಲಿಕೆಯು ಈತನ ಕೊರಲಿಗೆ ಬಂದು ಬೀಳುವುದೆಂದು ಬಗೆದು, ಸೂಜಿಯನ್ನೂ ದಾರವನ್ನೂ ತೆಗೆದುಕೊಂಡು ದೇವರಿಗೆ ತೊಡಿಸಿದ್ದ ಕವಚಕ್ಕೂ ಆ ಮಾಲಿಕೆಗೂ ದೃಢವಾದ ಹೊಲಿಗೆಯನ್ನು ಹಾಕಿ, ನರಸಿಂಹಮಹಾಂತ

ನನ್ನು ಕುರಿತು-ಈಗ ಈ ಹಾರವು ನಿನ್ನ ಕೊರಲಿಗೆ ಬಂದು ಬೀಳದಿದ್ದರೆ ನಿನಗೆ ಶಿಕ್ಷೆಯಂ ಮಾಡುವೆನು. ಕೃತ್ರಿಮವಿದ್ಯೆಗಳಂ ಮಾಡಿ ಭಾವುಕಜನರಿಗೆ ಮೋಸವಂ ಮಾಡು ವೆಯಾ?-ಎಂದು ಕೋಪದಿಂದ ಗದರಿ ಗರ್ಜಿಸಿದನು.

ಆಗ ನರಸಿಂಹಮಹಾಂತನು ಕೈಯಲ್ಲಿ ವೀಣೆಯಂ ನುಡಿಯಿಸುತ್ತ ಶ್ರೀಹರಿಯ ನಾಮವಂ ಉದ್ಘೋಷಿಸುತ್ತ ಭಕ್ತಿಭಾವದಿಂದ ಕುಣಿಯುತ್ತ-ಎಲೈ ಸ್ವಾಮಿಯೇ! ನೀನು ಮತ್ಸ್ಯಾವತಾರವನ್ನು ವಹಿಸಿ ವೇದವನ್ನುದ್ಧರಿಸಿದೆ. ಇಂದು ಹಾರವಂ ಕರು ಣಿಸುವುದಕ್ಕೆ ಏಕೆ ವಿಲಂಬವಂ ಮಾಡುವೆ? ಕೂರ್ಮರೂಪವಂ ತಾಳ್ದು ಹದಿನಾಲ್ಕು ಲೋಕಗಳಂ ವಹಿಸಿದೆ. ಇಂದು ನನಗೆ ಹಾರವಂ ಕೊಡುವುದಕ್ಕೆ ಏಕೆ ವಿಳಂಬವಾ ಗಿರುವುದು? ವರಾಹರೂಪವಂ ಧರಿಸಿ ಹಿರಣ್ಯಾಕ್ಷನನ್ನು ಸಂಹರಿಸಿ ಭೂಮಿಯನ್ನು ಉದ್ಧರಿಸಿದೆ. ಇಂದು ನನಗೆ ಹಾರವಂ ಕೊಡಲು ಏಕೆ ವಿಲಂಬಮಾಡುತ್ತಿರುವೆ? ಸ್ತಂಭ ವನ್ನು ಒಡೆದುಕೊಂಡು ಬಂದು ಹಿರಣ್ಯಕಶಿಪುವನ್ನು ಧ್ವಂಸಮಾಡಿ ಪ್ರಹ್ಲಾದನನ್ನು ಉದ್ಧರಿಸಿದೆ. ಇಂದು ನನಗೆ ಹಾರವಂ ಕೊಡಲು ಏಕೆ ದಯೆಯುಂಟಾಗಲಿಲ್ಲ. ವಾ ಮನರೂಪವಂ ಧರಿಸಿ ಮೂರುಲೋಕಗಳನ್ನೂ ಮೂರುಹೆಜ್ಜೆಗೆ ಸರಿಮಾಡಿದೆ. ಇಂದು ನನ್ನ ಪ್ರಾರ್ಥನೆಯು ಏಕೆ ಮನಸ್ಸಿಗೆ ಬಾರದು? ಪರಶುರಾಮಾವತಾರವಂ ತಾಳಿ ದೃಪ್ತರಾದ ಕ್ಷತ್ರಿಯರೆಲ್ಲರಂ ಧ್ವಂಸಮಾಡಿ ಸಂತರಂ ಕಾಪಾಡಿದೆ. ಈಗ ನನ್ನ ನುಡಿಯಂ ಕೇಳಿ ಏಕೆ ಕರುಣೆಯಂ ಮಾಡದಿರುವೆ? ದೇವತೆಗಳ ಕಷ್ಟವಂ ಸೈರಿಸ ಲಾರದೆ ಶ್ರೀರಾಮಾವತಾರವಂ ಮಾಡಿ ರಾವಣಕುಂಭಕರ್ಣಾದಿಗಳಂ ಧ್ವಂಸಮಾಡಿದೆ. ಇಂದು ನನ್ನ ಸಂಕಟವೇಕೆ ನಿನ್ನ ಮನಸ್ಸಿಗೆ ಹತ್ತದು? ದುಷ್ಟಕೌರವನು ದ್ರೌಪದಿಯನ್ನು ಸಂಕಟಗೊಳಿಸುತ್ತಿರಲು, ಅಂದು ಆಕೆಗೆ ಪ್ರಸನ್ನನಾದೆ. ಇಂದೇಕೆ ನನ್ನ ಸಂಕಟವಂ ನೋಡಿ ಪ್ರಸನ್ನನಾಗದೆ ಇರುವೆ?-ಎಂದು ದೈನ್ಯದಿಂ ಬೇಡಿಕೊಂಡ ರೂ ಚಕ್ರಪಾಣಿಯು ಪ್ರಸನ್ನನಾಗದಿರಲು, ಇನ್ನು ಅಪಶಬ್ದವನ್ನು ನುಡಿದೆನಾದರೆ ಸ್ವಾಮಿಯು ನನಗೆ ಪ್ರಸನ್ನನಾಗಿ ಹಾರವನ್ನು ಕೊಟ್ಟಾನು-ಎಂದು ಚಿಂತಿಸುತಿದ್ದನು.

ಆಗ ರಾಜನು ಆತನನ್ನು ಕುರಿತು-ನಿನ್ನ ಕೃತ್ರಿಮಸ್ಥಿತಿಯು ವ್ಯಕ್ತವಾಯಿತು. ಇನ್ನು ನೀನು ಶಿಕ್ಷೆಗೆ ಸಿದ್ಧನಾಗು-ಎಂದು ಹೊಡೆಯುವುದಕ್ಕೆ ಉದ್ಯುಕ್ತನಾದನು. ನರಸಿಂಹಮಹಾಂತನು, ಅನಿವಾರ್ಯವಾದ ಮಹಾಸಂಕಟವು ಬಂದೊದವಲು, ಏನೂ ತೋರದೆ ಸ್ವಾಮಿಯನ್ನು ಕುರಿತು, ಇಂದು ಆಪುಷ್ಪಹಾರವನ್ನು ನನಗೆ ಕೊಟ್ಟರೆ ನಿಮ್ಮಪ್ಪನ ಗಂಟು ಏನುಹೋಗುತ್ತಿದ್ದಿತು?-ಎಂದನು. ಆ ನುಡಿಯಂ ಕೇಳಿ ದ್ವಾರಕಾನಾಥನು ಸಂತುಷ್ಟನಾದನು. ಮೊದಲು ಅನೇಕದೀನವಚನಗಳಿಂದ ಬೇಡಿ ಕೊಂಡರೂ ಆತನ ಚಿತ್ತಕ್ಕೆ ಬರಲಿಲ್ಲ. ಅಂತು ಗದರಿಸಿ ಮಾತನಾಡುವುದೂ, ಆಕ್ಷಣ ಕೊರಲಲ್ಲಿ ಹಾರವು ಬಂದುಬಿದ್ದಿತು. ರಾಜನು ಅದನ್ನು ನೋಡಿ ವಿಸ್ಮಿತನಾಗಿ ಸಂತೋಷಗೊಂಡು-ಈತನು ಮಹಾಭಕ್ತನು; ಪರಮೇಶ್ವರಾವತಾರವು-ಎಂದು

ಮನದಲ್ಲಿ ಎಣಿಸಿ ಆತನಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ-ಅಯ್ಯಾ ಮಹನೀಯನೆ! ನನ್ನಿಂದ ಮಹಾಪರಾಧವಾಯಿತು. ನೀನು ಅದಂ ಮನದೊಳಿತಲಾಗದು. ನೀನು ಹರಿಸಂಕೀರ್ತನಮಂ ಮಾಡುವುದು ತಿಳಿದಿರಲಿಲ್ಲ. ಪಾಮರನಾದ ನಾನು ಜನರ ಮಾತಂ ಕೇಳಿ, ದುರ್ಯೋಧನನು ಪಾಂಡವರಂ ಛಳಿಸಿ ಅವಮಾನಕ್ಕೆ ಗುರಿಯಾದಂತೆ, ಮಹಾನುಭಾವನಾದ ನಿನ್ನಂ ಛಳಿಸಿ ಅವಮಾನಕ್ಕೆ ಗುರಿಯಾದೆನು-ಎಂದು ಮತ್ತೆ ವಂದಿಸಿ ಆತನ ಅಪ್ಪಣೆಯಂ ತೆಗೆದುಕೊಂಡು ತನ್ನ ಪಟ್ಟಣಕ್ಕೆ ಹೊರಟುಹೋದನು.

ನರಸಿಂಹಮಹಾಂತನು ಪರಮಾನಂದದಿಂದ ನಿತ್ಯವೂ ತಪ್ಪದೆ ಶ್ರೀಹರಿಭಜನೆಯಂ ಮಾಡುತಿದ್ದನು.

ಮುಂದಣ ಅಧ್ಯಾಯದಲ್ಲಿ ಶ್ರೀರುಕ್ಮಿಣೀಪತಿಯು ದ್ವಾರಕೆಯಿಂದ ಢಾಕೂರ್ ಎಂಬಲ್ಲಿಗೆ ಬಿಜಯಂಗೈದನೆಂಬ ಸಂಗತಿ ನಿರವಿಸಲ್ಪಡುವುದು. ಶ್ರೋತೃಗಳು ಅವಹಿತರಾಗಬೇಕೆಂದು ಮಹೀಪತಿ ಪ್ರಾರ್ಥಿಸುವನು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಮೂವತ್ತೊಂದನೆಯ ಅಧ್ಯಾಯ.

ರಾಮದಾಸನ ಚರಿತ್ರೆ

ಜಯಜಯ ದ್ವಾರಕಾವಾಸಿಯೆ! ರುಕ್ಮಿಣೀರಮಣನೇ! ಸರ್ವಚೈತನ್ಯಸ್ವರೂಪನೆ! ಬ್ರಹ್ಮದೇವನ ತಂದೆಯಾದವನೆ! ಭಕ್ತಭೂಷಣನೆ! ದಾನವಮರ್ದನನೆ! ಶ್ರೀಕೃಷ್ಣನೆ! ಜಯಜಯ ವಿಶ್ವವ್ಯಾಪಕನೆ! ವಿಶ್ವಂಭರನೆ! ಸಾಯುಜ್ಯವಂ ಕೊಡುವುದರಲ್ಲಿ ಮಹೌದಾರ್ಯವುಳ್ಳವನೇ! ಪತಿತಪಾವನನೇ! ಜಗದುದ್ಧಾರನೆ! ರಾಧಾಮನೋಹರನೆ! ಗೋವಿಂದನೇ! ಜಯಜಯ ಸಗುಣಸ್ವರೂಪನೆ! ನೀಲಮೇಘಶ್ಯಾಮನೆ! ಗುಣಾತೀತನೇ! ಪುರುಷೋತ್ತಮನೆ! ಬ್ರಹ್ಮಾಂಡನಾಯಕನೆ! ಆತ್ಮಾರಾಮನ! ನಿನ್ನ ಭಜನದಲ್ಲಿ ಪ್ರೀತಿಯಂ ಹೆಚ್ಚಿಸು. ಗೋಮತೀತೀರವಿಹಾರಿಯೆ! ಜಗದ್ಗುರುವೆ! ನಿನ್ನ ಪಾದದಲ್ಲಿ ನನ್ನ ಚಿತ್ತವಂ ಸ್ಥಿರವಾಗಿನಿಲ್ಲಿಸು. ಯೋಗಿಹೃದಯಾರವಿಂದಮಿಳಿಂದ! ಸಚ್ಚಿದಾನಂದ! ನಿನ್ನ ಚರಣಾರವಿಂದದಲ್ಲಿಯೇ ನನ್ನ ಮನಸ್ಸು ನಿಲ್ಲುವಂತೆ ಕೃಪೆಯಂ

ಮಾಡು. ನೀನೇ ಸಹಾಯನಾಗಿ ನಿನ್ನ ಭಕ್ತರ ಚರಿತ್ರೆಯಂ ನುಡಿಯಿಸು. ಶ್ರೋತೃಗಳ ಶ್ರವಣಗಳು ತೃಪ್ತಿಹೊಂದುವುವು. ಭಾವುಕರಾದ ಶ್ರೋತೃಗಳಿರಾ! ಇನ್ನು ಅವಧರಿಸಬೇಕು. ಇದು ಪಾವನವೂ ಸರಸವೂ ಆದ ಕಥೆ. ಇದನ್ನು ಶ್ರವಣಮಾಡುವುದರಿಂದ ಕ್ಷಣಮಾತ್ರದಲ್ಲಿ ದುರಿತಗಳೆಲ್ಲವೂ ನಾಶವನ್ನೈದುವುವು. ದ್ವಾರಕಾಪುರಾಧೀಶನಮೂರ್ತಿಯು ಭಕ್ತಿಗೋಸ್ಕರ ಅಲ್ಲಿಗೆ ನೂರೈವತ್ತು ಹರಿದಾರಿಯುಳ್ಳ ಢಾಕೂರೆಂಬ ಊರಿಗೆ ಬಂದಿರುವುದು.

ಆ ಢಾಕೂರಲ್ಲಿ ರಾಮದಾಸನೆಂಬ ಭಾವುಕನಾದೊಬ್ಬ ಬ್ರಾಹ್ಮಣನಿದ್ದನು. ಆತನು ಭಿಕ್ಷಾಟನವಂಗೈದು ಕುಟುಂಬಭರಣವಂ ಮಾಡುತಿದ್ದನು. ಆಶಾರಹಿತನಾಗಿ ಸರ್ವಕಾಲದಲ್ಲಿಯೂ ಸಂತುಷ್ಟನಾಗಿ ಮನಸ್ಸಿನ ತಲ್ಲಣವಂ ನಿಲಿಸಿ ಆನಂದದಿಂದ ಭಗವನ್ನಾಮಸ್ಮರಣೆಯಂ ಮಾಡುತಿದ್ದನು. ಹದಿನೈದುದಿನಗಳಿಗೊಮ್ಮೆ ಪ್ರತ್ಯೇಕಾದಶಿ ದ್ವಾರಕೆಗೆ ಯಾತ್ರೆಹೋಗುವ ನಿಯಮವಂ ಇಟ್ಟುಕೊಂಡಿದ್ದನು. “ಸಾಯಾ” ಎಂಬ ಮರವನ್ನು ಕೊರೆದು ಅದರಲ್ಲಿ ತುಳಸಿಯ ಗಿಡವಂ ಹಾಕಿ ಬೆಳೆಯಿಸಿ ಯಾತ್ರೆಗೆ ಹೋಗುವಾಗ ಸಂಗಡತೆಗೆದುಕೊಂಡು ಹೋಗುತಿದ್ದನು. ಮಾರ್ಗದಲ್ಲಿ ನಡೆವಾಗ ಪ್ರೇಮಭಾವದಿಂದ ಶ್ರೀಹರಿಯ ಗುಣಂಗಳಂ ಪಾಡುತ್ತ ಶರೀರಶೋಭನಂ ಬಿಟ್ಟು ವೈರಾಗ್ಯಭರಿತನಾಗಿ ಇರುತ್ತ ದ್ವಾರಕೆಯು ಕಣ್ಣಿಗೆ ಕಾಣಲು, ಮಾರ್ಗದಲ್ಲಿ ನಿಧಿಯಂ ಕಂಡ ಕೃಪಣನಂತೆಯೂ, ತೌರೂರಂ ಕಂಡ ಅತ್ತೆಮನೆಯ ಸೊಸೆಯಂತೆಯೂ, ಅವರ್ಷಣಕಾಲದಲ್ಲಿ ಜಲಧರವಂ ಕಂಡ ಜನದಂತೆಯೂ ಪರಮಾನಂದಭರಿತನಾಗಿ ಶ್ರೀಹರಿಯಂ ಧ್ಯಾನಿಸಿ ಮನದೊಳನುತಾಪಗೊಂಡು ಗೋಮತಿಯಲ್ಲಿ ಸ್ನಾನವಂ ಮಾಡಿ ಮಹಾದ್ವಾರದಬಳಿಗೆ ಹೋಗಿ ಸದ್ಭಾವದಿಂದ ಸಾಷ್ಟಾಂಗನಮಸ್ಕಾರವಂ ಮಾಡಿ ದೇಹಾಭಿಮಾನವಂ ಬಿಟ್ಟು--ಸ್ವಾಮಿಯೆ! ಅನನ್ಯಶರಣನಾಗಿ ನಿನ್ನ ಸನ್ನಿಧಿಗೆ ಬಂದಿರುವೆನು. ನನ್ನ ಜನನಮರಣಂಗಳಂ ಖಂಡಿಸಬೇಕು—ಎಂದು ಪ್ರಾರ್ಥಿಸಿ, ಭಕ್ತಿಯಿಂದ ಸಂಗಡ ಸಂರಕ್ಷಿಸುತ್ತ ತಂದ ತುಳಸಿಯ ಗಿಡದಲ್ಲಿ ತೆನೆಗಳಂ ತೆಗೆದು ದೇವರಿಗೆ ಸಮರ್ಪಿಸಿ, ಸ್ವಾಮಿಯೇ! ಪತಿತಪಾವನನೆ! ಗರುಡಧ್ವಜನೆ! ಅಲ್ಪವಾದ ನನ್ನ ಈ ಪೂಜೆಯಂ ಪ್ರೀತಿಯಿಂದ ಸ್ವೀಕರಿಸಬೇಕು—ಎಂದು ಬಿನ್ನವಿಸಿ, ಮತ್ತೆ ಹಿಂದಿರುಗಿ ಢಾಕೂರಿಗೆ ಬರುತಿದ್ದನು. ಏಕಾದಶಿ ಬರಲು, ಮತ್ತೆ ದ್ವಾರಕೆಗೆ ಪ್ರಯಾಣ ಮಾಡುತಿದ್ದನು. ಇಂತು ಇಪ್ಪತ್ತೈದುವರ್ಷಗಳವರೆಗೂ ನಡೆದನು.

ಬಳಿಕ ವಾರ್ಧಕದಿಂದ ಶರೀರವು ಜರ್ಜರಿತವಾಗಲು, ಬಂದಾವೃತ್ತಿ ದ್ವಾರಕೆಗೆ ಬಂದು—ಸ್ವಾಮಿಯೇ! ಕರುಣಾನಿಧಿಯೇ! ನನ್ನಲ್ಲಿ ಶಕ್ತಿಯು ಕಡಿಮೆಯಾಯಿತು. ಇನ್ನು ಮೇಲೆ ವಾರೆನಡೆಯಲಾರೆನು. ನಿನ್ನ ಪ್ರೀತಿಯು ನನ್ನಲ್ಲಿ ಸಂಪೂರ್ಣವಾಗಿರಬೇಕು-ಎಂದು,ಬಿನ್ನವಿಸಿ ಸಾಷ್ಟಾಂಗವಂದನೆಯಂ ಮಾಡಿ, ಕಣ್ಬನಿ ತುಂಬಿತುಳುಕಾಡುತ್ತಿರಲು, —ಸ್ವಾಮಿಯೆ! ಇದೆ ಕಡೆಯ ಸಂದರ್ಶನವು—ಎಂದು ಗದ್ಗದಕಂಠನಾಗಿ

ನುಡಿಯಲು, ಕರುಣಾರ್ದ್ರಹೃದಯನಾದ ಪರಮಾತ್ಮನು ಚತುರ್ಭುಜಗಳಿಂದ ಆತನನ್ನು ಆಲಿಂಗಿಸಿಕೊಂಡು ಆತನನ್ನು ಕುರಿತು—ಎಲೆ ರಾಮದಾಸನೆ! ನೀನು ಬಹು ಶ್ರಮಪಟ್ಟು ನನ್ನ ಸೇವೆಯಂ ಮಾಡಿದೆ. ನಿನ್ನ ಋಣವು ನನ್ನ ಮೇಲೆ ಬಹುವಾಯಿತು. ಅದು ತೀರಲಾರದು; ಆದುದರಿಂದ ನನ್ನನ್ನೇ ನಿನ್ನ ಊರಿಗೆ ತೆಗೆದುಕೊಂಡುಹೋಗುವುದು. ನನ್ನ ರಥವು ಇಲ್ಲಿಯೆ ಇದೆ. ಕುದುರೆಗಳನ್ನು ಹೂಡಿ ರಥದಲ್ಲಿ ನನ್ನಂ ಕುಳ್ಳಿರಿಸಿಕೊಂಡು ಈ ರಾತ್ರಿಯಲ್ಲಿಯೇ ಪ್ರಯಾಣಮಾಡುವನಾಗು—ಎಂದು ಅಪ್ಪಣೆಯನ್ನೀಯಲು, ರಾಮದಾಸನು ಸಂತೋಷಗೊಂಡು ರಥವನ್ನು ಸಿದ್ಧಮಾಡಿ ಅದರಲ್ಲಿ ದೇವರಂ ಇರಿಸಿಕೊಂಡು ಪ್ರಯಾಣಮಾಡಿ ವೇಗದಿಂದ ಢಾಕೂರಿಗೆ ಬಂದು ಸ್ವಾಮಿಯಂ ಕುರಿತು ಜಗನ್ನಾಥನೇ! ಇನ್ನು ನಿನ್ನನ್ನು ಎಲ್ಲಿ ಬಯ್ತಿಡಲಿ? ಹಿಂದೆ ಹುಡುಕಿಕೊಂಡು ಬೆನ್ನಂ ಹತ್ತಿ ಬಂದರೆ ನಾನು ಶಿಕ್ಷೆಗೆ ಒಳಗಾಗಬೇಕಾಗುವುದು—ಎಂದು ನುಡಿದನು.

ಅತ್ತ ದ್ವಾರಕೆಯಲ್ಲಿ ಪ್ರಾತಃಕಾಲವಾಗುವುದೂ ಅರ್ಚಕರು ದೀವಟಿಗೆಯ ಆರತಿಗೋಸ್ಕರ ಬಂದು ನೋಡಲು, ಆಲಯದಲ್ಲಿ ದೇವರ ಮೂರ್ತಿಯೇ ಇರಲಿಲ್ಲ. ಎಲ್ಲರಿಗೂ ಆಶ್ಚರ್ಯವಾಯಿತು. ಎಲ್ಲರೂ ಒಟ್ಟುಸೇರಿ ಆಲೋಚನೆಯಂ ಮಾಡಿದರು. ಅವರಲ್ಲಿ ಒಬ್ಬನು-ರಾಮದಾಸನೆಂಬವನು ಬಂದಿದ್ದ; ಆತನೇ ದೇವರನ್ನು ಸಾಗಿಸಿಕೊಂಡು ಹೋಗಿರಬಹುದು. ದಾರಿಯಲ್ಲಿ ರಥವು ಹೋದ ಗುರುತು ಕಾಣುತ್ತಿರುವುದು—ಎನಲು, ಎಲ್ಲರೂ ಇರಬಹುದೆಂದು ಅಂಗೀಕರಿಸಿದರು. ಕೆಲವರು ರಥದ ದಾರಿಯನ್ನೇ ಹಿಡಿದು ಢಾಕೂರಿಗೆ ಬಂದು ಅಲ್ಲಿ ವಿಚಾರಿಸಿ ರಾಮದಾಸನಂ ಕಂಡು—ನೀನು ಶ್ರೀಕೃಷ್ಣಮೂರ್ತಿಯಂ ತಂದೆಯಲ್ಲಾ! ಎಲ್ಲಿ ಇರಿಸಿರುವೆ?—ಎಂದು ಬೆಸಗೊಳಲು, ಆತನು-ನಾನು ಮೂರ್ತಿಯನ್ನು ತರಲಿಲ್ಲ. ಬೇಕಾದರೆ ನನ್ನ ಮನೆಯನ್ನು ಶೋಧನ ಮಾಡಿ—ಎಂದು ಅಸತ್ಯವಚನವಂ ನುಡಿದನು.

ಬಳಿಕ ಅವರು ಊರಲ್ಲಿ ಎಲ್ಲಾ ಮನೆಗಳಲ್ಲಿಯೂ, ಸೇದುವ ಬಾವಿಗಳಲ್ಲಿಯೂ ಹುಡುಕುತ ಬಂದರು. ಊರಹೊರಗೆ ಬಂದು ಸರೋವರವಿದ್ದಿತು. ಅಲ್ಲಿ ಇಳಿದು ನೋಡುವಾಗ ಎದೆಗೆ ಈಟಿಯು ಚುಚ್ಚಿಕೊಂಡಂತೆ ಆಗಿ ರಕ್ತವು ಸುರಿಯುತಬಂದುದು. ಅದಂ ಕಂಡು ಇಲ್ಲಿ ಜಗನ್ನಾಥನು ದೊರೆತನೆಂದು ಆ ಸರಸ್ಸಿನಲ್ಲಿ ಮತ್ತೆ ಮುಳುಗಿ ಕಷ್ಟಪಟ್ಟು ಕಡೆಗೆ ಮೂರ್ತಿಯನ್ನು ತೆಗೆದರು. ರಥವನ್ನು ಸಿದ್ಧಮಾಡಿ ಅದರಲ್ಲಿ ಇರಿಸಿಕೊಂಡು ಹೊರಡಬೇಕೆಂದಿರುವಷ್ಟರಲ್ಲಿ ರಾಮದಾಸನು ಚಿಂತಾಕ್ರಾಂತನಾಗಿ ದೇವರಂ ಕುರಿತು—ಸ್ವಾಮಿಯೇ! ಭಕ್ತವತ್ಸಲನೇ! ನನ್ನಂ ಬಿಟ್ಟು ಹೋಗುವೆಯಾ? ನಿನಗೋಸ್ಕರ ಅಸತ್ಯವಚನವನ್ನು ನುಡಿದೆನಲ್ಲಾ!-ಎಂದು ತದೇಕಧ್ಯಾನದಲ್ಲಿರಲು, ಸ್ವಾಮಿಯು ಧ್ಯಾನದಲ್ಲಿ ಪ್ರಕಟನಾಗಿ ಆತನನ್ನು ಕುರಿತು—ನೀನು ಮನಸ್ಸ್ವಾಸ್ಥ್ಯದಿಂದ ನನ್ನನ್ನು ಭಜಿಸುತ್ತಿರು. ಸೊಂಟದಲ್ಲಿ ಕರಗಳನ್ನು ಇಟ್ಟುಕೊಂಡು ಪುಂಡರೀಕನ ಬಾಗಿಲಲ್ಲಿ ಎಂತು ನಿಂತಿರುವೆನೋ ಅಂತು ನಿನ್ನ ಬಳಿಯಲ್ಲಿ ಢಾಕೂರಲ್ಲಿಯೇ ಇರು

ವೆನು-ಎಂದನು. ಅದಕ್ಕೆ ರಾಮದಾಸನು, ಈಗ ಅರ್ಚಕರು ನಿನ್ನಂ ತೆಗೆದುಕೊಂಡು ಹೋಗುತ್ತಿರುವರು. ಇದಕ್ಕೇನುಪಾಯವಂ ಮಾಡಬೇಕೋ ನನಗೆ ತಿಳಿಯದು. ನೀನು ಕೃಪಾವಂತನು; ನನಗೆ ಪ್ರಸನ್ನನಾಗಬೇಕು-ಎನಲು, ಸ್ವಾಮಿಯು-ನೀನು ಅರ್ಚಕರಂ ಕುರಿತು ಈ ಮೂರ್ತಿಯ ತೂಕದಷ್ಟು ಚಿನ್ನವನ್ನು ಕೊಡುವೆನು. ಇಲ್ಲಿಯೇ ಬಿಟ್ಟುಹೋಗಿ-ಎಂದು ಮಾತನಾಡಿ ನಿಷ್ಕರ್ಷೆಯಂ ಮಾಡಿಕೊಳ್ಳುವನಾಗು. ಬಳಿಕ ನಿನ್ನ ಮಡದಿಯ ಮೂಗಿನಲ್ಲಿರುವ ಮುಕುರವನ್ನು ತುಲೆಯಲ್ಲಿ ಇಟ್ಟರೆ ನನ್ನ ತೂಕಕ್ಕೆ ಅದನ್ನು ಸರಿಮಾಡುವೆನು-ಎಂದನು.

ಆ ಮಾತಂ ಕೇಳಿ ರಾಮದಾಸನು ಬಹುಸಂತೋಷವಂ ತಾಳಿ ಅರ್ಚಕರ ಬಳಿಗೆ ಬಂದು-ನಾನು ಬಹುಶ್ರಮದಿಂದ ಮೂರ್ತಿಯನ್ನು ದ್ವಾರಕೆಯಿಂದ ತಂದೆನು. ಈ ಮೂರ್ತಿಯು ಇಲ್ಲಿಯೇ ಇರಲಿ. ಇದರ ತೂಕದಷ್ಟು ಸುವರ್ಣವನ್ನು ನಿಮಗೆ ಕೊಡುವೆನು-ಎಂದು ಬೇಡಿಕೊಂಡನು. ಸರ್ವರಿಗೂ ಬುದ್ಧಿಪ್ರೇರಕನಾದವನು ಆ ಸ್ವಾಮಿಯೇ; ಅದರಿಂದ ಆ ಅರ್ಚಕರು ಆ ಮಾತಿಗೆ ಒಡಂಬಟ್ಟರು.

ಬಳಿಕ ರಾಮದಾಸನು ಗ್ರಾಮಸ್ಥರಂ ಕರೆದು ಈ ಮೂರ್ತಿಯ ತೂಕಕ್ಕೆ ಸರಿಯಾದ ಚಿನ್ನವನ್ನು ಈ ಅರ್ಚಕರಿಗೆ ನಾನು ಕೊಡುವಂತೆ ಒಪ್ಪಿಕೊಂಡಿರುವೆನು. ಇವರು ಈ ಮೂರ್ತಿಯನ್ನು ನನ್ನ ವಶಕ್ಕೆ ಬಿಟ್ಟುಬಿಡಬೇಕು. ಈ ಮೂರ್ತಿಯು ನನ್ನದಾಯಿತು. ಈ ವಿಷಯದಲ್ಲಿ ನೀವೆಲ್ಲರೂ ಸಾಕ್ಷಿಗಳಾಗಿರಬೇಕು-ಎಂದು ನುಡಿದನು. ಅದಕ್ಕೆ ಕೆಲವರು ಕುಟಿಲರು-ನಿನಗೆ ತಿನ್ನುವುದಕ್ಕಿಲ್ಲ. ಇಂತವನು ಈ ಮೂರ್ತಿಯ ತೂಕದ ಚಿನ್ನವನ್ನು ಎಲ್ಲಿಂದ ತಂದುಕೊಡುವೆ? ಇದು ನಮಗೆ ಆಶ್ಚರ್ಯಕರವಾಗಿ ತೋರುವುದು-ಎನಲು, ಬಳಿಕ ಆತನು-ಶ್ರೀಹರಿಯು ಮಹಾಸಮರ್ಥನು; ಆತನೇ ನಮ್ಮ ಮನೆಗೆ ಬಂದ ಬಳಿಕ ನನ್ನನ್ನು ದರಿದ್ರನೆಂದು ಹೇಳಲು, ನಿಮಗೆ ಎಂತು ಲಜ್ಜೆಯಾಗುವುದಿಲ್ಲ? ದರಿದ್ರನ ಮನೆಗೆ ಮಹಾಲಕ್ಷ್ಮಿಯು ಬಾಗಿನವಂ ಕುಡುವುದಕ್ಕೆ ಬಂದಿರಲು, ಅವನನ್ನು ದರಿದ್ರನೆನ್ನುವರೇ ಮೂರ್ಖರೆನಿಸುವರಲ್ಲವೆ? ಕಬ್ಬಿಣನ್ನ ಪೆಟ್ಟಿಗೆಯಲ್ಲಿ ಪರಿಸವು ಬೀಳಲು, ಅದನ್ನು ಮೊದಲ ಬೆಲೆಗೆ ಕೇಳಿ ನಾಲಗೆಗೆ ಏಕೆ ಸುಮ್ಮನೆ ದಣಿವನ್ನುಂಟುಮಾಡಬೇಕು? ಗಂಗಾಜಲದ ಪ್ರವಾಹವು ಅಮಂಗಲವಾದ ಗ್ರಾಮದ ಹಳ್ಳದಲ್ಲಿ ಬೀಳಲು, ಆ ಹಳ್ಳವನ್ನು ಅಪವಿತ್ರವೆಂದು ಹೇಳಬಹುದೇ? ಸರಸ್ವತಿಯು ಪ್ರಸನ್ನೆಯಾಗಿ ಮೂಗನಿಗೆ ಅಧ್ಯಯನವಂ ಮಾಡಿಸಲು, ಅವನನ್ನು ಮೂಢನೆಂದು ಹೇಳುವನಿಗೆ ಮೂಢತ್ವವು ಬರುವುದಿಲ್ಲವೆ? ಅಂತು ವೈಕುಂಠನಾಥನು ನನಗೋಸ್ಕರ ಪ್ರಸನ್ನನಾಗಿರುವನು; ಇಂತಹ ನನ್ನನ್ನು ದರಿದ್ರನೆನಲು ನಿಮಗೆ ಶಂಕೆಯೇ ತೋರಲಿಲ್ಲವಲ್ಲಾ!-ಎಂದು ಪ್ರತ್ಯುತ್ತರವಂ ನುಡಿದನು. ಅದಕ್ಕೆ ಎಲ್ಲರೂ ಕೌತುಕವನ್ನು ನೋಡೋಣ-ಎಂದು ಬಗೆದು, ಆಗಲಿ, ನಾವು ಸಾಕ್ಷಿಗಳಾಗಿರುವೆವು-ಎಂದರು.

ಬಳಿಕ ಅರ್ಚಕರು ದೇವಮೂರ್ತಿಯನ್ನು ತುಲೆಯಲ್ಲಿರಿಸಿ-ಎಲ್ಲಿ? ಇದರ ತೂಕದ ಸುವರ್ಣವನ್ನು ತಂದು ಹಾಕು-ಎಂದರು.

ರಾಮದಾಸನು ಮನೆಗೆಹೋಗಿ ಮುತದಿಯ ಮುಕುರವನ್ನು ತೆಗೆದುಕೊಂಡು ಹಿಡಿಯಲ್ಲಿ ಮುಚ್ಚಿಕೊಂಡು ಬಂದನು. ಆಗ ಕೆಲವರು ಚಿನ್ನವನ್ನು ತಂದೆಯಾ? ಎಲ್ಲಿ ತೋರಿಸು. ಸುಮ್ಮನೆ ಮನೆಗೆಹೋಗಿ ಬಂದಿರುವೆ-ಎನಲು, ರಾಮದಾಸನು ಹಿಡಿಯನ್ನು ತೆಗೆದು ತೋರಿದನು. ಸಕಲರೂ ನೋಡಿ ನಕ್ಕು-ಈ ಚಿನ್ನವು ಬಹುವಾಯಿತು-ಎಂದು ಹಾಸ್ಯಮಾಡಿದರು.

ಬಳಿಕ ರಾಮದಾಸನು ಬದ್ಧಾಂಜಲಿಪುಟನಾಗಿ ಶ್ರೀರುಕ್ಮಿಣೀಪತಿಯಂ ಕುರಿತು-ಸ್ವಾಮಿಯೇ! ಅನಾಥನಾಥನೇ! ದೀನರಕ್ಷಕನೇ! ಕರುಣಾರಾಶಿಯೇ! ಶ್ರೀಕೃಷ್ಣನೇ! ಸತ್ಯಭಾಮೆಯು ನಿನ್ನಂ ನಾರದನಿಗೆ ದಾನಕೊಡಲು, ತುಳಸೀದಳದ ತೂಕಕ್ಕೆ ಸರಿಯಾಗಿ ಯಶಸ್ಸನ್ನು ಉಂಟುಮಾಡಲಿಲ್ಲವೇ? ನಾನೂ ದೀನನು. ನನ್ನಲ್ಲಿ ಅನುಗ್ರಹವಿರಬೇಕು-ಎಂದು ಪ್ರಾರ್ಥಿಸಿ, ತುಳಸೀದಳವನ್ನೂ ಆ ನಾಸಾಭರಣವನ್ನೂ ತುಲೆಯಲ್ಲಿ ಇರಿಸಿದನು.

ಅನಂತಬ್ರಹ್ಮಾಂಡಗಳೂ ಯಾವನ ಉದರದಲ್ಲಿ ಇರುವುವೋ ಆವಿಶ್ವಂಭರನು ಪಲದ ತೂಕಕ್ಕೆ ಮೇಲೆ ಹೋದನು. ಅದಂ ಕಂಡು ಎಲ್ಲರೂ ಜಯಜಯಧ್ವನಿಯನ್ನು ಮಾಡಿದರು. ದೇವತೆಗಳು ಪ್ರೂಮಳೆಯಂ ಕರೆದರು. ಸರ್ವರೂ-ರಾಮದಾಸನು ಧನ್ಯನು; ಪಲಮಾತ್ರಸುವರ್ಣವಂ ಸದ್ಭಾವದಿಂ ಸಮರ್ಪಿಸಿ ದ್ವಾರಕಾನಾಯಕನನ್ನು ಸ್ವಾಧೀನನಂ ಮಾಡಿಕೊಂಡನು-ಎಂದು ಅಭಿನಂದಿಸಿದರು. ಅರ್ಚಕರು ರಾಮದಾಸನಂ ಕುರಿತು-ನಿನ್ನ ಭಕ್ತಿಯು ಅದ್ಭುತವಾದುದು. ನಿನ್ನ ಕೀರ್ತಿಯು ಅಪಾರವಾದುದು-ಎಂದು ಹೊಗಳಿ ದ್ವಾರಕೆಗೆ ಹೊರಟುಹೋದರು. ಅಲ್ಲಿ ನೂತನಮೂರ್ತಿಯನ್ನು ಸ್ಥಾಪನೆ ಮಾಡಿದರು. ಶ್ರೀಚಕ್ರಪಾಣಿಯು ರಾಮದಾಸನ ಭಕ್ತಿಗೋಸ್ಕರ ಢಾಕೂರಲ್ಲಿ ನಿಂತನು. ಈಗಲೂ ದ್ವಾರಕೆಗೆ ಯಾತ್ರೆಹೋಗುವರು ಮೊದಲು ಢಾಕೂರಿಗೆ ಹೋಗಿ ಅಲ್ಲಿ ಶ್ರೀಕೃಷ್ಣನ ಸಂದರ್ಶನವಂ ಮಾಡಿಕೊಂಡು ಬಳಿಕ ದ್ವಾರಕೆಗೆ ಹೋಗುವರು.

1೪೬] ಮುಂದಣ ಅಧ್ಯಾಯದಲ್ಲಿ ರಸವು ಅದ್ಭುತವು. ಮಧುರೆಯ ಪುರಾತನಭಗವನ್ಮೂರ್ತಿಯೂ ಒಬ್ಬ ಬ್ರಹ್ಮಚಾರಿಗೋಸ್ಕರ ಹರಿದ್ವಾರಕ್ಕೆ ಬಿಜಯಂಗೈದುದೆಂಬ ಸಂಗತಿ ನಿರವಿಸಲ್ಪಡುವುದು.

ಯಾವನು ನಾನಾವಿಧವಾದ ಚರಿತ್ರೆಯಂ ಬಳೆಯಿಸಿ ಭಕ್ತರ ಮಹಿಮೆಯನ್ನು ಪ್ರಕಾಶಗೊಳಿಸುವನೋ ಆಸ್ವಾಮಿಯ ಸದ್ಗುಣವನ್ನು ಮಹೀಪತಿಯು ಪ್ರೀತಿಯಿಂದ ವರ್ಣಿಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತೊಂದನೆಯ ಅಧ್ಯಾಯಂ ಸಂಪೂರ್ಣಂ.

ಮೂವತ್ತೆರಡನೆಯ ಅಧ್ಯಾಯ.

ನಿರಾಧಾರಬ್ರಹ್ಮಚಾರಿಯ ಚರಿತ್ರೆ.

ಮಧುರೆಯ ಪುರಾತನಮೂರ್ತಿಯು ಹರಿದ್ವಾರಕ್ಕೆ ಬಿಜಯಂಗೈದ ಕಥೆಯನ್ನು ಶ್ರೋತೃಗಳು ಆದರದಿಂದ ಕೇಳಬೇಕು.

ಪೂರ್ವದಲ್ಲಿ ಅದೊಂದು ಶಿವರಾತ್ರಿಯ ಪುಣ್ಯಕಾಲದಲ್ಲಿ ರಾಮೇಶ್ವರದೊಳಗೆ ಜಾತ್ರಿಗರು ಸೇರಿದ್ದಾಗ ಉತ್ತರದೇಶದಿಂದ ಇಬ್ಬರು ಬ್ರಾಹ್ಮಣರು ಅಲ್ಲಿಗೆ ಬಂದರು. ಅವರು ತೀರ್ಥಯಾತ್ರಿಗಳು; ವಿರಕ್ತರು; ಪವಿತ್ರರು. ಪ್ರೇಮದಿಂ ಇರುಳೂ ಹಗಲೂ ಹರಿಭಜನೆಯಂ ಮಾಡುತ್ತಿದ್ದರು. ಅವರಲ್ಲಿ ಒಬ್ಬರೊಬ್ಬರು ಒಬ್ಬರೊಬ್ಬರ ಯೋಗಕ್ಷೇಮವಂ ವಿಚಾರಿಸಲು, ಒಬ್ಬನು--ನನ್ನ ಕುಟುಂಬವೆಲ್ಲವೂ ಈಗ ಹರಿದ್ವಾರದಲ್ಲಿ ಇರುವುದು_ಎಂದನು. ಇನ್ನೊಬ್ಬನು ಗೌಡದೇಶದಲ್ಲಿ ನನ್ನ ಜನ್ಮಭೂಮಿ. ನನಗೆ ತಂದೆ ತಾಯಿ ಬಂಧು ಬಳಗ ಸಖ ಹರಿಯೇ ಅಲ್ಲದೆ ಮತ್ತಾರೂ ಇಲ್ಲ. ಸಪ್ತಪುರೀಯಾತ್ರೆಯಂ ಮಾಡಿಕೊಂಡು ಈಗ ರಾಮೇಶ್ವರಕ್ಕೆ ಬಂದಿರುವೆನು. ನನ್ನ ಹೆಸರು ನಿರಾಧಾರಬ್ರಹ್ಮಚಾರಿಯೆಂದು ಹೇಳುವರು_ಎಂದನು. ಈ ಮಾತಂ ಕೇಳಿ ಮೊದಲನೆಯ ಕಲ್ಯಾಣನೆಂಬ ಆ ಬ್ರಾಹ್ಮಣನು ಸಂತೋಷಗೊಂಡನು. ಇಬ್ಬರೂ ಸದ್ಭಾವದಿಂದ ಒಡಗೂಡಿ ತೀರ್ಥಕ್ಷೇತ್ರಂಗಳ ದರ್ಶನವಂ ಮಾಡುತ್ತ ಶ್ರೀಹರಿಯ ಗುಣವಂ ಪಾಡುತ್ತ ಸರ್ವಕಾಲದಲ್ಲಿಯೂ ಆನಂದದಿಂದ ಆತ್ಮವಿಚಾರವಂ ಎಸಗುತ್ತ ಮಧುರಾಪಟ್ಟಣಕ್ಕೆ ಬಂದು ಯಮುನೆಯಲ್ಲಿ ಸ್ನಾನವಂ ಮಾಡಿ ಸ್ವಾಮಿಯ ಸಂದರ್ಶನವಂ ಪಡೆದು ಅಲ್ಲಿ ಮೂರುದಿವಸವಿದ್ದರು.

ಆಗ ಕಲ್ಯಾಣನಿಗೆ ಜ್ವರಬರುವುದಕ್ಕೆ ಪ್ರಾರಂಭವಾಯಿತು. ಶರೀರಪ್ರಾರಬ್ಧವು ಯಾರಿಗೂ ಬಿಟ್ಟುದಲ್ಲ. ಚಂದ್ರನಿಗೆ ಕ್ಷಯರೋಗವೂ ಇಂದ್ರನಿಗೆ ಸರ್ವಾಂಗಭಂಗವೂ ಪೂರ್ವಕರ್ಮದಿಂದ ಉಂಟಾಗಿರುವುದು. ಈಶ್ವರನೂ ಬ್ರಹ್ಮಕಪಾಲವನ್ನು ಕೈಯಲ್ಲಿ ಹಿಡಿದುಕೊಂಡು ಬಹುಶ್ರಮಗೊಂಡನು. ವಿಷಪಾನವಂ ಮಾಡಿ ನೀಲಕಂಠನೆನಿಸಿದನು. ಅದಂತಿರಲಿ. ಆ ಸಮಯದಲ್ಲಿ ಇಬ್ಬರೂ ಮಧುರಾಪುರದಲ್ಲಿಯೇ ನಿಂತರು. ಪರೋಪಕಾರಿಯಾದ ಆ ಬ್ರಹ್ಮಚಾರಿಯು ಕಲ್ಯಾಣನ ಸೇವೆಯಂ ಮಾಡುತ್ತ ಉಪಚರಿಸುತಿದ್ದನು. ಕೆಲವರು ಚಿತ್ತದಲ್ಲಿ ಭೂತದಯೆಯಿಲ್ಲದೆಯೇ ಪ್ರಪಂಚದಲ್ಲಿ ದೊಡ್ಡವರೆನಿಸಿಕೊಳ್ಳುವರು. ಅವರಿಗೆ ಶ್ರೀಹರಿಯ ಪ್ರಾಪ್ತಿಯು ಕಲ್ಪಾಂತದಲ್ಲಿಯೂ ಆಗಲಾರದು. ಆ ನಿರಾಧಾರನು ಅಂತವನಲ್ಲ. ಪರೋಪಕಾರವೂ ಸತ್ಯವಚನವೂ ಭೂತದಯೆಯೂ ಆತನಲ್ಲಿಯೇ ನೆಲಸಿ ನಿಂದಿರುವುವು. ನಿತ್ಯವೂ

ವಿವಿಧೋಪಚಾರಗಳಂ ಮಾಡುತ್ತ ಎಡೆಬಿಡದೆ ಆತನ ಬಳಿಯಲ್ಲಿಯೇ ಇರುತಿದ್ದನು. ಆರುತಿಂಗಳು ಉಪದ್ರವವು ಆತನನ್ನು ಬಾಧಿಸಿತು. ಆದರೂ ಬೇಸರಗೊಳ್ಳದೆ ಒಂದೇ ರೀತಿಯಿಂದ ಉಪಚರಿಸುತಿದ್ದನು. ಶ್ರೀಹರಿಯೇ! ಈತನಿಗೆ ಆರೋಗ್ಯವಂ ಕುಡು-ಎಂದು ಮನಃಪೂರ್ವಕವಾಗಿ ನಿರಂತರವೂ ಭಗವಂತನನ್ನು ಪ್ರಾರ್ಥಿಸುತಿದ್ದನು. ಅಷ್ಟುಹೊತ್ತಿಗೆ ಆತನಿಗೆ ಪ್ರಾರಬ್ಧಾನುಭವವು ತೀರಿತು. ಆರೋಗ್ಯವುಂಟಾಯಿತು.

ಆಗ ಆರೋಗ್ಯಭಾಗ್ಯವನ್ನು ಹೊಂದಿದ ಕಲ್ಯಾಣನು ಸಂತೋಷದಿಂದ ನಿರಾಧಾರನನ್ನು ಕುರಿತು—ಮಹನೀಯನಾದ ನಿರಾಧಾರನೆ! ನನಗೆ ನೀನು ಪ್ರಾಣಾಪ್ತನು. ನಿರಾಧಾರರಿಗೆ ಆಧಾರನಾದುದರಿಂದ ನಿರಾಧಾರಾಧಾರನೆಂಬ ಹೆಸರು ನಿನಗೆ ಸಲ್ಲುವುದು. ನಿನ್ನ ಉಪಕಾರವು ನನ್ನಮೇಲೆ ಬಹುವಾಯಿತು. ಎಷ್ಟು ಜನ್ಮಗಳಿಗೂ ತೀರದು. ಮಡದಿ ಮಗಳು ಮಗನು ಮುಂತಾದವರೆಲ್ಲರೂ ಮನೆಯಲ್ಲಿಯೇ ನಿಂತಿರುವರು. ಪರದೇಶದಲ್ಲಿ ಶ್ರೀಹರಿಭಕ್ತನಾದ ನೀನು ನನ್ನನ್ನು ಸಂರಕ್ಷಿಸಿದೆ. ಆದುದರಿಂದ ನಿನ್ನ ವಿಷಯದಲ್ಲಿ ನನಗೆ ಪರಮಸಂತೋಷವುಂಟಾಗಿರುವುದು. ನನಗೆ ಎಂಟುವರ್ಷದ ಒಬ್ಬ ಕನ್ಯಕೆಯಿರುವಳು. ಅವಳನ್ನು ನಿನಗೆ ಕೊಟ್ಟು ಮದುವೆಮಾಡುವೆನು. ಇದು ನಿಶ್ಚಯ—ಎಂದು ನುಡಿದನು.

ನಿರಾಧಾರನು ಕಲ್ಯಾಣನ ಕಲ್ಯಾಣೋಕ್ತಿಯಂ ಕೇಳಿ-ನಾನು ಗೃಹಸ್ಥಾಶ್ರಮವನ್ನು ವಹಿಸುವನಲ್ಲ. ದುಃಖರೂಪವಾದ ಸಂಸಾರದಲ್ಲಿ ನನ್ನನ್ನು ಹಾಕದಿರಿ-ಎನಲು ಕಲ್ಯಾಣನು ಆತನಂ ಕುರಿತು-ಹರಿದಾಸರಿಗೆ ಸಂಸಾರವೆಂಬ ಬಾಧೆಯೆಲ್ಲಿರುವುದು? ಆ ಭಾರವನ್ನು ಶ್ರೀಹರಿಯು ತಾನೇ ಹೊತ್ತುಕೊಂಡು ಸಂರಕ್ಷಿಸುತ್ತಿರುವನು. ಪುಣ್ಯಕ್ಷೇತ್ರವಾದ ಈ ಮಧುರಾಪಟ್ಟಣದಲ್ಲಿ ನಿನಗೆ ಕನ್ಯಾದಾನವನ್ನು ಮಾಡುವುದಕ್ಕೋಸ್ಕರ ಸಂಕಲ್ಪವಂ ಮಾಡಿರುವೆನು. ನೀನು ಅಂಗೀಕರಿಸಬೇಕು. ನನ್ನ ಸಂಕಲ್ಪವು ನೆರವೇರದಿದ್ದರೆ ನನ್ನ ಜನ್ಮವು ವ್ಯರ್ಥವಾಗಿ ಹೋಗುವುದು-ಎಂದನು.

ಬಳಿಕ ಇಬ್ಬರೂ ದೇವಾಲಯದ ಮಹಾದ್ವಾರದ ಬಳಿಗೆ ಹೋಗಿ ಸ್ವಾಮಿಗೆ ಸಾಷ್ಟಾಂಗವಂದನೆಯಂ ಮಾಡಿದರು.

ಕಲ್ಯಾಣನು ಅಲ್ಲಿ ಬ್ರಹ್ಮಚಾರಿಯನ್ನು ಕುಳ್ಳಿರಿಸಿ ಸಂಕಲ್ಪವಂ ಮಾಡಿ, ನನ್ನ ಮನೆಯಂ ಸೇರಿ ಕನ್ಯಾದಾನವಂ ಮಾಡಿಕೊಡುವೆನು. ಸಿರಿರಾಯನೇ ಸಾಕ್ಷಿಯಾಗಿ ಇರುವನು-ಎಂದು ನುಡಿದು ಉದಕಧಾರೆಯಂ ಬಿಟ್ಟನು.

ಮತ್ತೆ ಇಬ್ಬರೂ ದೇವರಿಗೆ ಅಭಿವಂದಿಸಿ, ಅಲ್ಲಿಂದ ಹೊರಟು ಮೂರುವಾರ ದಾರಿಯಂ ನಡೆದು ಹರಿದ್ವಾರಕ್ಕೆ ಬಂದು ಸೇರಿದರು.

ಕಲ್ಯಾಣನು ಆ ಬ್ರಹ್ಮಚಾರಿಯೊಡನೆ ತನ್ನ ಮನೆಯಂ ಹೊಕ್ಕನು. ತೀರ್ಥಯಾತ್ರೆಯಿಂದ ಬಳಲಿದವನಾಗಿಯೂ ವಾರ್ಧಕಾವಸ್ಥೆಯುಳ್ಳವನಾಗಿಯೂ ಇರುವ

ಆತನನ್ನು ಮನೆಯವರು ಯಾರೂ ಮಾತನಾಡಿಸಲಿಲ್ಲ. ಸರ್ವರೂ ಸುಖಸಂಗಿಗಳು. ಅಂತ್ಯಕಾಲಕ್ಕೆ ಉಪೇಕ್ಷೆಮಾಡಿಬಿಡುವರು. ಆದುದರಿಂದ ಮನುಷ್ಯನು ಸರ್ವಕಾಲದಲ್ಲಿಯೂ ಜಾಗರೂಕನಾಗಿರಬೇಕು. ಬಹುದಿವಸ ದೇಶಸಂಚಾರವಂ ಮಾಡಿಕೊಂಡು ಬಂದ; ಅಲ್ಲಿಗೂ ಏನನೂ ಕಾಣೆವು. ಒಬ್ಬ ಬ್ರಹ್ಮಚಾರಿಯನ್ನು ಬೇರೆ ಸಂಗಡ ಕಟ್ಟಿಕೊಂಡು ಬಂದಿರುವನು—ಎಂದು ಮಕ್ಕಳು ನುಡಿದರು.

ಬಳಿಕ ಕಲ್ಯಾಣನು ಮಡದಿಯ ಬಳಿಗೆ ಹೋಗಿ-ಎಲೆ! ನಾನು ತೀರ್ಥಾಟನವಂ ಮಾಡುತಿರುವಾಗ ಮಧುರೆಯಲ್ಲಿ ಶರೀರಕ್ಕೆ ಬಹೂಪದ್ರವವುಂಟಾಯಿತು—ಎನಲು, ಅದಕ್ಕೆ ಆಕೆ—ಆ ಪುಣ್ಯಕ್ಷೇತ್ರದಲ್ಲಿ ದೇಹವಂ ಬಿಡುವುದಕ್ಕೆ ನಿಮಗೆ ಪುಣ್ಯವಿರಲಿಲ್ಲ. ಆದುದರಿಂದಲೇ ಹಿಂದಿರುಗಿ ಅದೇಮುಖವನ್ನು ತೆಗೆದುಕೊಂಡು ಮನೆಗೆ ಬಂದಿರಿ—ಎಂದಳು.

ಕಲ್ಯಾಣನು-ಆಯುಸ್ಸು ಇದ್ದರೆ ಮರಣವುಂಟಾಗದು. ಈ ಬ್ರಹ್ಮಚಾರಿಯ ಸಹವಾಸದಿಂದ ಬಹುಸುಖವಾಯಿತು. ಔಷಧೋಪಚಾರಗಳಂ ಈತನೇ ಮಾಡಿದನು—ಎನಲು, ಅದಕ್ಕೆ ಆಕೆಯು—ಸಂಗಡವಿದ್ದಮೇಲೆ ಒಬ್ಬರಿಗೊಬ್ಬರು ಉಪಚಾರವನ್ನು ಮಾಡಲೇಬೇಕು. ಅದೇನು ವಿಶೇಷ? ಸುಮ್ಮನೆ ಹೋಗಿ—ಎಂದಳು. ಈ ದಂಪತಿಗಳ ಸಂವಾದವನ್ನು ಬ್ರಹ್ಮಚಾರಿಯು ಬಾಗಿಲ ಜಗುಲಿಯಮೇಲೆ ಮಲಗಿಕೊಂಡು ಕೇಳುತಲೇ ಇದ್ದನು.

ಕಲ್ಯಾಣನು ಮತ್ತೆ ಮಡದಿಯನ್ನು ಕುರಿತು—ಮಧುರಾಮಹಾಪುಣ್ಯಕ್ಷೇತ್ರದಲ್ಲಿ ದೇವರ ಮಹಾಸನ್ನಿಧಿಯಲ್ಲಿ ನಮ್ಮ ಕನ್ಯೆಯನ್ನು ಈ ಬ್ರಹ್ಮಚಾರಿಗೆ ಕೊಡುವುದಾಗಿ ನಿಶ್ಚಯಮಾಡಿರುವೆನು--ಎನಲು, ಆಕೆಯು ನೀವು ಎರಡನೆಯ ಮದುವೆಯನ್ನು ಮಾಡಿಕೊಳ್ಳಿ. ಅವಳ ಉದರದಲ್ಲಿ ಕನ್ಯಕೆಯಾದರೆ ಅವಳನ್ನು ಈ ಬ್ರಹ್ಮಚಾರಿಗೆ ಕೊಡಿ-ಎಂದಳು.

ಕಲ್ಯಾಣನು ಆಕೆಯಂ ಕುರಿತು—ಹರಿಭಕ್ತನಿಗೆ ನೀನು ಕನ್ಯಾದಾನವಂ ಮಾಡಿದರೆ ನಿನ್ನ ಪುಣ್ಯಕ್ಕೆ ಪಾರವಿಲ್ಲ. ನನ್ನ ಮಾತಂ ತಿರಸ್ಕರಿಸಬೇಡ—ಎನಲು, ಆಕೆಯು ನನ್ನ ಕನ್ಯೆಯನ್ನು ಈಗಲೇ ಬಾವಿಗೆ ತಳ್ಳಿಬಿಡುವೆನು; ಅಥವಾ ಮುಂದಾದರೂ ನನ್ನ ಮನೆಯಲ್ಲಿಯೆ ಇಟ್ಟುಕೊಂಡಿರುವೆನು; ಅಲ್ಲದೆ ಹರಿಭಕ್ತನಿಗೆ ಕನ್ಯಕೆಯನ್ನು ಎಂದಿಗೂ ಕುಡುವವಳಲ್ಲ—ಎಂದಳು. ಕಲ್ಯಾಣನು ಮಗನನ್ನು ಕರೆದು ಕೇಳಿದನು; ಅವನೂ ಒಡಂಬಡಲಿಲ್ಲ.

ಬಳಿಕ ಕಲ್ಯಾಣನು ಆ ನಿರಾಧಾರಬ್ರಹ್ಮಚಾರಿಯನ್ನೂ ಸಂಗಡ ಕರೆದುಕೊಂಡು ರಾಜನ ಸನ್ನಿಧಿಗೆ ಹೋಗಿ ಮಧುರೆಯಲ್ಲಿ ನಡೆದ ಸಂಗತಿಯೆಲ್ಲವಂ ಹೇಳಿ, ನನ್ನ ಸಂಕಲ್ಪವು ವ್ಯರ್ಥವಾದರೆ ನನಗೆ ಯಮಪುರವಾಸವು ಸಿದ್ಧ. ನಾನು ಪ್ರೀತಿಯಿಂದ ಕನ್ಯಾದಾನವಂ ಮಾಡಲು ನಿಶ್ಚಯಿಸಿಕೊಂಡಿರುವೆನು. ಮನೆಯಲ್ಲಿ ಮಡದಿಯೂ ಮಗನೂ

ನನ್ನ ಮಾತನ್ನು ಅಂಗೀಕರಿಸರು. ನೀನು ದಯೆಯಿಟ್ಟು ಅವರಿಗೆ ಹೇಳಿ ಕನ್ಯಕೆಯನ್ನು ಈತನಿಗೆ ಕೊಡಿಸಬೇಕು-ಎನಲು, ರಾಜನು ನೀನು ಮಧುರೆಯಲ್ಲಿ ಸಂಕಲ್ಪಮಾಡಿದುದು ನನಗೆ ದಿಟವಾಗಿ ತೋರುವುದಿಲ್ಲ. ಈ ವಿಷಯದಲ್ಲಿ ಸಾಕ್ಷಿಯಾರು ?-ಎಂದನು.

ಆಗ ನಿರಾಧಾರನು ರಾಜನಂ ಕುರಿತು ಅನಂತಬ್ರಹ್ಮಾಂಡಗಳು ಯಾವನ ಇಚ್ಛಾಮಾತ್ರದಿಂದ ಹುಟ್ಟುವುವೋ ಮತ್ತು ಲಯವನ್ನು ಹೊಂದುವುವೋ ; ಪುರಾಣಪುರುಷನೂ ಲಕ್ಷ್ಮೀಪತಿಯೂ ಮಧುರಾವಿಹಾರಿಯೂ ಆದ ಆ ಶ್ರೀಕೃಷ್ಣನೇ ಸಾಕ್ಷಿಯಾಗಿ ಇರುವನು-ಎನಲು, ರಾಜನು ಆ ಬ್ರಹ್ಮಚಾರಿಯಂ ಕುರಿತು-ಶಾರ್ಙ್ಗಧರನು ಸಾಕ್ಷಿಯಾಗಿದ್ದರೆ ಆತನು ನಮಗೆ ಬಂದು ಹೇಳಬೇಕು. ಅಂತಾದರೆ ಕನ್ಯೆಯನ್ನು ಕೊಡಿಸುವೆನು-ಎಂದನು.

ಬ್ರಹ್ಮಚಾರಿಯು ಅವಶ್ಯವಾಗಿ ಸಾಕ್ಷ್ಯವನ್ನು ಹೇಳುವುದಕ್ಕೆ ಆ ಜಗನ್ನಾಥನಂ ಕರೆದು ತರುವೆನು-ಎಂದು ಅಲ್ಲಿಂದ ಸತ್ವರನಾಗಿ ಹೊರಟು ಪ್ರಯಾಣಮಾಡಿ ಮಧುರೆಯಂ ಸೇರಿ ಶ್ಯಾಮಸುಂದರನ ಸಂದರ್ಶನವಂ ಮಾಡಿ ದೇವಾದಿದೇವನೆ! ಸರ್ವಜ್ಞನೆ! ಸರ್ವಚೈತನ್ಯಸ್ವರೂಪನೇ! ನೀನು ಸರ್ವವನ್ನೂ ಬಲ್ಲೆ. ಸಾಕ್ಷ್ಯವನ್ನು ಹೇಳುವುದಕ್ಕೋಸ್ಕರ ನನ್ನೊಡನೆ ಬಿಜಯಂಗೈಯಬೇಕು. ಇಲ್ಲದಿದ್ದರೆ ನನ್ನ ಬ್ರಹ್ಮಚರ್ಯ ವಿಫಲವಾಗಿ ಹೋಗುವುದು-ಎಂದು ಬಿನ್ನವಿಸಲು, ಸ್ವಾಮಿಯು-ಪಾಷಾಣಮೂರ್ತಿಯೆಂತು ನಡೆಯುವುದು ?-ಎಂದನು. ಆಗ ನಿರಾಧಾರನು-ಈಗ ಎಂತು ಮಾತನಾಡಿತೋ ಅಂತು ನಡೆಯುವುದು. ನಾನು ನಿರಾಧಾರನಾಗಿರುವೆನು. ಶ್ರೀಹರಿಯೆ! ನಿನ್ನ ಆಶ್ರಯವಲ್ಲದೆ ನನಗೆ ಮತ್ತೊಂದಿಲ್ಲ; ಆದುದರಿಂದ ಜಗದೀಶನೆ! ನನ್ನಲ್ಲಿ ಕೃಪೆ ಮಾಡಿ ಅಲ್ಲಿಯವರೆಗೆ ನಡೆದುಬರಬೇಕು-ಎಂದು ಅನನ್ಯಭಾವದಿಂದ ಪ್ರಾರ್ಥಿಸಲು, ಶ್ರೀನಿವಾಸನು ಆ ಮಾತಂ ಕೇಳಿ ಭಕ್ತವಾತ್ಸಲ್ಯದಿಂದ ಅಂಗೀಕರಿಸಿ ಹೊರಟು, ನಿರಾಧಾರನನ್ನು ಕುರಿತು-ನೀನು ಹಿಂದಿರುಗಿ ನೋಡದೆ ನಡೆಯಬೇಕು. ಅಂತು ನಡೆಯದೆ ಹಿಂದಿರುಗಿ ನೋಡಿದರೆ ನಾನು ಅಲ್ಲಿಯೆ ನಿಲ್ಲುವೆನು-ಎಂದು ನುಡಿದು, ದೇದೀಪ್ಯಮಾನವಾದ ಮೂರ್ತಿಯುಳ್ಳವನಾಗಿ ದಿವ್ಯಾಲಂಕಾರಗಳಿಂದ ಹೊಳೆಯುತ್ತ ಕಾಲುಗಳಲ್ಲಿ ಅಂದುಗೆಗಳ ಝುಣಝುಣತ್ಕಾರವು ಕಿವಿಗಿನಿದಾಗಿರಲು, ನಡೆಗೊಂಡು ಬರುತ್ತಿರುವಾಗ ನಗರದ ಅರೆಹರಿದಾರಿಯ ಸಮೀಪದಲ್ಲಿ ನಿರಾಧಾರನು ಹಿಂದಿರುಗಿ ನೋಡಿದನು. ಶ್ರೀಚಕ್ರಪಾಣಿಯು ಅಲ್ಲಿಯೇ ನಿಂತನು. ನಿರಾಧಾರನು ಚಿಂತಿಸುತ್ತಿರಲು, ಶ್ರೀಪತಿಯು ಆತನಂ ಕುರಿತು ನೀನು ಹಿಂದಿರುಗಿ ನೋಡಿದಲ್ಲಿಯೇ ನಾನು ನಿಲ್ಲುವೆನೆಂದು ಮೊದಲೇ ಹೇಳಿದ್ದೆನಲ್ಲಾ! ನೀನು ತಿರುಗಿನೋಡಿದೆ. ಆದುದರಿಂದ ಇಲ್ಲಿಯೇ ನಿಂತೆನು. ಆವರೇನಾಯಿತು? ಈಗ ರಾಜನನ್ನು ಇಲ್ಲಿಗೇ ನನ್ನ ಬಳಿಗೆ ಕರೆದುಕೊಂಡು ಬರುವನಾಗು-ಎಂದನು.

ಆಗ ನಿರಾಧಾರನು ರಾಜಸಭೆಗೆ ಬಂದು ಮಹಾರಾಜನನ್ನು ಕುರಿತು-ಯಾವನು ಭಕ್ತನಾದ ಅಂಬರೀಷನಲ್ಲಿ ಅಭಿಮಾನವಿಟ್ಟು ದುರ್ವಾಸನನ್ನೂ ಅವಮಾನ ಗೊಳಿಸಿದನೋ ; ಕ್ಷೀರಾಬ್ಧಿವಾಸಿಯಾದ ಆ ಸ್ವಾಮಿಯಂ ಸಾಕ್ಷ್ಯಕ್ಕೋಸ್ಕರ ಕರೆದು ತಂದಿರುವೆನು. ಯಾವನು ರಾವಣಕುಂಭಕರ್ಣೇಂದ್ರಜಿನ್ಮುಖರಾದ ಅಸುರರಂ ಸಂಹರಿಸಿ ದೇವತೆಗಳ ಸೆರೆಯಂ ಬಿಡಿಸಿದನೋ ಅಯೋಧ್ಯಾವಾಸಿಯಾದ ಆ ರಘುನಂದನನನ್ನು ಸಾಕ್ಷ್ಯಕ್ಕೋಸ್ಕರ ಕರೆದುಕೊಂಡು ಬಂದಿರುವೆನು. ಗೋಕುಲದಲ್ಲಿ ಲೀಲೆಯಿಂದ ಮನೆಮನೆಯಲ್ಲಿಯೂ ಕಳ್ಳತನವಂ ಮಾಡಿ ತಾಯಿಯಿಂದ ಒರಲಿಗೆ ಕಟ್ಟಲ್ಪಟ್ಟವನು ಯಾವನೋ ಗೋಕುಲವಾಸಿಯಾದ ಆಮುರಾರಿಯನ್ನು ಸಾಕ್ಷಿಯನ್ನಾಗಿ ಬರಿಸಿರುವೆನು. ಯಾವನು ಕಂಸಚಾಣೂರಾದಿಗಳಂ ನಿಗ್ರಹಿಸಿ ಉಗ್ರಸೇನನಂ ರಾಜ್ಯದಲ್ಲಿ ಸ್ಥಾಪಿಸಿದನೋ ಮಧುರಾವಾಸಿಯಾದ ಆಜಗಜ್ಜೀವನನ್ನು ಸಾಕ್ಷ್ಯಕ್ಕೋಸ್ಕರ ಕರೆದುಕೊಂಡು ಬಂದಿರುವೆನು. ದುಶ್ಶಾಸನನು ದ್ರೌಪದಿಯನ್ನು ಬಾಧಿಸಲು, ಯಾವನು ಅನಂತಹಸ್ತಗಳಿಂದ ಆಕೆಗೆ ವಸ್ತ್ರಗಳನ್ನು ಉಡಿಸಿದನೋ, ಭಕ್ತಜನಪಕ್ಷಪಾತಿಯಾದ ಆ ಶ್ರೀರುಕ್ಮಿಣೀಪತಿಯನ್ನು ಸಾಕ್ಷ್ಯಕ್ಕೋಸ್ಕರ ಕರೆತಂದಿರುವೆನು- ಎನಲು, ಆನುಡಿಯಂ ಕೇಳಿ ಎಲ್ಲರೂ ವಿಸ್ಮಿತರಾದರು. ರಾಜನು ಓಡಿಬಂದು ಆತನ ಪಾದಗಳಂ ಹಿಡಿದನು. ಭೇರಿಮೊದಲಾದ ವಾದ್ಯಗಳು ಮೊಳಗುತ್ತಿರಲು, ಗರುಡಧ್ವಜಾದಿ ಚಿಹ್ನೆಗಳಿಂದಲೂ ಪರಿಜನಗಳಿಂದಲೂ ಪರಿವೃತನಾಗಿ ರಾಜನು ಶ್ರೀಹರಿಯನ್ನು ಇದಿರುಗೊಳ್ಳುವುದಕ್ಕೆ ಹೊರಟನು. ಜಯಜಯಶಬ್ದವು ಎಲ್ಲಿಯೂ ತುಂಬಿತು. ದೇವತೆಗಳು ಪುಷ್ಪವೃಷ್ಟಿಯಂ ಕರೆದರು. ಯದುವೀರನು ಸಾಕ್ಷ್ಯವನ್ನು ಹೇಳುವುದಕ್ಕೋಸ್ಕರ ಮಧುರೆಯಿಂದ ಬಂದನೆಂದು ಸಜ್ಜನರೆಲ್ಲರೂ ಕೀರ್ತನೆಯಂ ಮಾಡುತಿರಲು, ಮಹಾರಾಜನು ದೇದೀಪ್ಯಮಾನವಾದ ಶ್ರೀಹರಿಯ ತೇಜೋಮೂರ್ತಿಯನ್ನು ಕಂಡು ಸಾಷ್ಟಾಂಗ ನಮಸ್ಕಾರವಂ ಮಾಡಿದನು. ಚತುರ್ಭುಜಗಳಿಂದ ಯುಕ್ತವೂ ನೀಲಮೇಘಶ್ಯಾಮವೂ ಕಿರೀಟಾಲಂಕೃತಮಸ್ತಕವೂ ಪೀತಾಂಬರವಿರಾಜಮಾನವೂ ಆದ ದಿವ್ಯಮಂಗಳಮೂರ್ತಿಯನ್ನು ಕಂಡು ಸರ್ವರೂ ಪರಮಾನಂದಭರಿತರಾದರು.

ಆಗ ರಾಜನು ಮಧುರೆಯಿಂದ ಬಂದಿದ್ದ ವಿರಕ್ತರಾದ ಸಾಧುಗಳನ್ನು ಕುರಿತು- ನೀವು ಮಧುರೆಗೆ ಹೋಗಿದ್ದಿರಲ್ಲಾ ! ಅಲ್ಲಿಯ ಮೂರ್ತಿಯು ಅಲ್ಲಿರುವುದೇ ?-ಎಂದು ಬೆಸಗೊಳಲು, ಅವರೆಲ್ಲರೂ ಈತನೇ ಮಧುರಾವಾಸಿಯಾದ ಶ್ರೀಕೃಷ್ಣನು. ಭಕ್ತಕಾರ್ಯಕ್ಕೋಸ್ಕರ ಓಡಿಬಂದನು-ಎಂದರು. ಬಳಿಕ ರಾಜನು ನಗರವಾಸಿಯಾದ ಒಬ್ಬ ಸಾಧುಕಾರನನ್ನು ಕರೆಯಿಸಿ, ಹೆಣ್ಣಿನ ಕಡೆಯ ಎಲ್ಲಾ ಸಾಹಿತ್ಯವನ್ನೂ ನೀವು ಸಿದ್ಧಮಾಡಿ. ನಾನು ವರನ ಕಡೆಯವನಾಗಿರುವೆನು-ಎಂದು ನುಡಿದು ಲಗ್ನವಂ ನಿಶ್ಚಯಿಸಿ ಊರ ಸುತ್ತಲೂ ಐದುಹರಿದಾರಿಯವರೆಗೂ ಚಪ್ಪರವಂ ಹಾಕಿಸಿದನು. ಲಗ್ನಕ್ಕೆ ಶ್ರೀಮನ್ನಾರಾಯಣನೇ ಬಂದನೆಂಬ ಸುದ್ದಿಯಂ ಕೇಳಿ ಭಕ್ತರ ಮಹಿಮೆಯಂ ಕಣ್ಣಾರೆ ನೋಡುವುದ

ಕೋಸ್ಕರ ಅಸಂಖ್ಯಾತರಾಗಿ ದೇಶದೇಶದ ಜನರು ಬಂದು ಸೇರಿದರು. ಎಲ್ಲಿ ಲಕ್ಷ್ಮೀಕಾಂತನು ತಾನೇ ಪ್ರತ್ಯಕ್ಷನಾಗಿ ಬಂದಿರುವನೋ ಅಲ್ಲಿ ಯಾವವಸ್ತುವಿಗೆ ಏನುಕೊರತೆ? ಮಹನೀಯರೆಲ್ಲರೂ ಉತ್ಸವವಂ ನೋಡುವುದಕ್ಕೆ ಬಂದರು. ಅಪರಿಮಿತವಾದ ಮಂಗಳವಾದ್ಯಗಳು ಆಗುತಿರುವುವು. ಲಗ್ನವು ಪ್ರಾಪ್ತವಾಗಲು, ಬ್ರಾಹ್ಮಣರು ಅಂತರಪಟವಂ ಹಿಡಿದು—ವೈಕುಂಠನಾಥನಾದ ಭಗವಂತನು ವಧೂವರರಂ ರಕ್ಷಿಸಲಿ. ಯಾವನು ವಿಸಾನರೂಪವಂತಾಳ್ದು ಶಂಭಾಸುರನಂ ಸಂಹರಿಸಿದನೋ ಆ ಕ್ಷೀರಾಬ್ಧಿವಾಸಿಯು ವಧೂವರರಂ ರಕ್ಷಿಸಲಿ. ಯಾವನು ಸ್ತಂಭವಂ ಭೇದಿಸಿಕೊಂಡು ಬಂದು ಪ್ರಹ್ಲಾದಹಿಂಸಕನಾದ ದೈತ್ಯನನ್ನು ಭೇದಿಸಿದನೋ ಆ ಶ್ರೀನರಹರಿಯು ವಧೂವರರಂ ರಕ್ಷಿಸಲಿ. ನಂದನಮನೆಯಲ್ಲಿ ಮೃತ್ತಿಕೆಯಂ ಭಕ್ಷಿಸಿ ಪರೀಕ್ಷೆಗೋಸ್ಕರ ಬಾಯನ್ನು ತೆರೆದು ತನ್ನ ತಾಯಿಗೆ ತನ್ನ ಉದರದಲ್ಲಿ ಬ್ರಹ್ಮಾಂಡವೆಲ್ಲವನ್ನೂ ತೋರಿಸಿದನೋ ಆ ಶ್ರೀಕೃಷ್ಣನು ವಧೂವರರಂ ರಕ್ಷಿಸಲಿ. ಪಾಂಡವರ ಮನೆಯಲ್ಲಿ ಉಚ್ಛಿಷ್ಟಪಾತ್ರಂಗಳಂ ತೆಗೆಯುವುದು ಮುಂತಾದ ಸೇವೆಯಂ ಮಾಡಿ ಪ್ರೀತಿಯಿಂದ ಆಪಾಂಡವರಂ ನಾನಾರೀತಿಯಲ್ಲಿ ಸಲಹಿದನೋ ಭಕ್ತವತ್ಸಲನಾದ ಆ ಮುರಾರಿಯು ವಧೂವರರಂ ರಕ್ಷಿಸಲಿ. ಕಲಿಯುಗದಲ್ಲಿ ಮಥುರೆಯಿಂದ ನಡೆದು ಬಂದು ಭಕ್ತವಾತ್ಸಲ್ಯವಂ ಮೆರೆದ ಮಥುರಾನಾಥನಾದ ಶ್ರೀಕೃಷ್ಣನು ವಧೂವರರಂ ರಕ್ಷಿಸಲಿ—ಎಂದು ಮಂಗಳಾಷ್ಟಕವಂ ಪಾಡಿ ಮುಹೂರ್ತವಂ ಬಳೆಯಿಸಿದರು. ನಾಲ್ಕುದಿವಸಪ್ರೊ ಮಹೋತ್ಸವವು ಬಳೆಯಿತು. ಮದುವೆಗೆ ಬಂದಿದ್ದವರೆಲ್ಲರೂ ಸತ್ಕೃತರಾಗಿ ಸಂತೋಷಗೊಂಡು ಹೊರಟರು. ಆಭಗವನ್ಮೂರ್ತಿಯು ಅಲ್ಲಿ ಹರಿದ್ವಾರದಲ್ಲಿಯೇ ನಿಂತಿತು. ಮಥುರೆಯಲ್ಲಿ ನೂತನಮೂರ್ತಿಯನ್ನು ಸ್ಥಾಪಿಸಿದರು. ಭಕ್ತಜನಾಭಿಮಾನಿಯಾದ ಶ್ರೀಹರಿಯು ನಾನಾಚರಿತ್ರಗಳಂ ತೋರುತಿರುವನು. ಯಾರಭಾವವು ಎಂತಿರುವುದೋ ಅವರಿಗೆ ಅಂತು ಆಗುವನು. ದಕ್ಷಿಣದೇಶದಲ್ಲಿ ಫಂಡರಪುರದಲ್ಲಿಯೂ ಪಶ್ಚಿಮದೇಶದಲ್ಲಿ ದ್ವಾರಕಾಪಟ್ಟಣದಲ್ಲಿಯೂ ನಿಂತು ಭಕ್ತರ ಮಾರ್ಗವಂ ನಿರೀಕ್ಷಿಸುತ್ತಿರುವನು. ಪೂರ್ವದೇಶದಲ್ಲಿ ಜಗನ್ನಾಥದಲ್ಲಿ ಚತುರ್ಭುಜಗಳಿಂದ ಶೋಭಿಸುತಿರುವನು. ಶ್ರೋತೃಗಳು ಸ್ವಸ್ಥಚಿತ್ತರಾಗಿ ಭಕ್ತಚರಿತ್ರೆಯನ್ನು ಶ್ರವಣಮಾಡಬೇಕು. ಮುಂದಣ ಅಧ್ಯಾಯದಲ್ಲಿ ಕಥೆಯು ಸುರಸವಾಗಿರುವುದು. ಅಕ್ರೂರನ ಅವತಾರವಾದ ಸುರದಾಸನೆಂಬವನ ಚರಿತ್ರೆಯು ನಿರವಿಸಲ್ಪಡುವುದು. ಶ್ರೀಪಾಂಡುರಂಗನೇ ಆನಂದಸರೋವರವು. ಭಕ್ತರ ಕಥೆಗಳೇ ತಾವರೆಗಳು. ಮಹೀಪತಿಯು ಅಲ್ಲಿ ಭ್ರಮರವಾಗಿ ಆಮೋದದಿಂದ ತದ್ರಸವನ್ನು ಸೇವಿಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತೆರಡನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಮೂವತ್ತು ಮೂರನೆಯ ಅಧ್ಯಾಯ.

ಸುರದಾಸನ ಚರಿತ್ರೆ.

ಕಲಿಯುಗದಲ್ಲಿ ಸುರದಾಸನೆಂಬ ಭಕ್ತನ ಚರಿತ್ರೆಯು ವಿಶೇಷದಿಂದ ಆದರಣೀಯವಾದುದು. ಸಜ್ಜನರು ಚಿತ್ತವನ್ನಿಟ್ಟು ಕೇಳಬೇಕು.

ಭಗವಂತನು ಶ್ರೀಕೃಷ್ಣಾವತಾರವಂ ಮಾಡಿ ದ್ವಾರಕೆಯಲ್ಲಿರುವಾಗ ಸತ್ಯಭಾಮಾದೇವಿಯು ಬಹುಪ್ರೀತಿಪಾತ್ರವಾಗಿದ್ದಳು. ಆಕೆಯ ಮನೆಗೆ ಭಗವದ್ಭಕ್ತನಾದ ಅಕ್ರೂರನು ಒಂದುದಿವಸ ಬಂದನು. ಆಕೆಯು ಆಸನವಂ ಕೊಟ್ಟು ಸನ್ಮಾನವಂಮಾಡಿ ಕುಳ್ಳಿರಿಸಿ ನಾಚಿಕೆಬಿಟ್ಟು—ಅಕ್ರೂರನೆ ! ಸ್ವಾಮಿಯು ಮೊದಲಿನಂತೆ ಈಗ ನನ್ನಮನೆಗೆ ಬರುವುದಿಲ್ಲ. ನೀನು ಸಮಾಧಾನವನ್ನು ಹೇಳಿ ನನಗೆ ದರ್ಶನವಂ ಮಾಡಿಸಬೇಕು. ಆ ಸ್ವಾಮಿಯು ಭಕ್ತರಾದ ನಿಮ್ಮ ಅಧೀನನಾಗಿರುವನು. ಇದನ್ನು ನಾನು ಬಲ್ಲೆ. ವಿಯೋಗಾಗ್ನಿಯು ಹೃದಯವನ್ನು ಸುಡುತಿದೆ. ಅದರಿಂದ ನಿಮಗೆ ಅಡಿಗಡಿಗೂ ಬಿನ್ನವಿಸುವೆನು. ಶ್ರೀವಸುದೇವನಂದನನಂ ಪ್ರಾರ್ಥಿಸಿ ಕರೆದುತರುವನಾಗು. ಈ ರಹಸ್ಯವಾದ ಮಾತನ್ನು ನಾನು ಇನ್ನಾರ ಸಂಗಡ ಹೇಳಿಕೊಳ್ಳಲಿ ? ನೀನು ನನ್ನಮೇಲೆ ಕೃಪೆಯನ್ನು ಮಾಡಿ ಈಗಲೇ ಹೊರಡು. ಹದಿನಾರುಸಾವಿರ ಅಂತಃಪುರಗಳಲ್ಲಿ ಇದ್ದರೂ ರುಕ್ಮಿಣಿಯ ಮನೆಯಲ್ಲಿಯೇ ವಿನೋದಗೊಂಡಿರುವನು. ಇಂತಹ ವ್ಯಾಪಕನಾದ ಮುರಾರಿಯನ್ನು ನನಗೋಸ್ಕರ ತೋರಿಸು—ಎಂದು ನುಡಿಯಲು, ಆಗ ಅಕ್ರೂರನು ತನ್ನ ಮನದಲ್ಲಿ ಆಲೋಚಿಸಿ-ಶ್ರೀಕೃಷ್ಣನು ಈಗ ಬಾರದಿದ್ದರೆ ಈ ಸುಂದರಿಯು ಈಕ್ಷಣವೇ ಪ್ರಾಣವಂ ಬಿಡುವಳು. ಅನರ್ಥವಾಗದೆ ಇರದು. ಬಳಿಕ ಶ್ರೀಕೃಷ್ಣನು ನನ್ನ ವಿಷಯದಲ್ಲಿ ಕೋಪವಂ ಮಾಡುವನು—ಎಂದು ನಿಶ್ಚಯಿಸಿ, ಆಕೆಯಂ ಕುರಿತು—ತಾಯೆ ! ಮನಸ್ಸ್ವಾಸ್ಥ್ಯವಂ ಹೊಂದು. ಶ್ರೀಹರಿಯನ್ನು ಈಗಲೇ ಕರೆದುತರುವೆನು-ಎಂದು ಹೇಳಿ ಆ ಕ್ಷಣದಲ್ಲಿ ತಾನೇ ಕೃಷ್ಣರೂಪವಂ ತಾಳಿದನು. ಆ ಸಮಯದಲ್ಲಿ ಸಾಕ್ಷಾತ್ಕೃಷ್ಣನೂ ಅಲ್ಲಿಗೆ ಬಂದು, ಸ್ವರೂಪವನ್ನು ಧರಿಸಿರುವ ಅಕ್ರೂರನನ್ನು ನೋಡಿ—ಎಲೆ ಅಕ್ರೂರನೆ ! ಮನದಲ್ಲಿ ಏನಾಲೋಚನೆಯಂ ಮಾಡಿದೆ ? ನನಗೆ ತಿಳಿಯಿಸದೆ ನನ್ನ ಮನೆಯಲ್ಲಿ ಎಂತು ಕಪಟರೂಪವಂ ತಾಳಿ ಬಂದೆ ? ಈ ಅಪರಾಧದಿಂದ ನೀನು ಕಲಿಯುಗದಲ್ಲಿ ಅಂಧಕನಾಗಿ ಜನಿಸು—ಎಂದೂ, ಸತ್ಯಭಾಮೆಯನ್ನು ಕುರಿತು—ನೀನು ದಾಸಿಯಾಗಿ ಜನ್ಮವನ್ನೆತ್ತು-ಎಂದೂ ಶಾಪವನ್ನು ಕೊಟ್ಟನು.

ಆಗ ಅಕ್ರೂರನು ಬದ್ಧಾಂಜಲಿಪುಟನಾಗಿ—ದೇವದೇವನೆ ! ನೀನು ಸರ್ವಾಂತರ್ಯಾಮಿ ; ಆತ್ಮಾರಾಮನು ; ನನ್ನ ಮನಸ್ಸನ್ನು ಅರಿಯದವನಲ್ಲ. ನೀನು ತ್ವರೆಯಿಂದ

ಬಾರದಿದ್ದರೆ ಸತ್ಯಭಾಮೆಯು ಪ್ರಾಣವಂ ಬಿಡುವಳಾಗಿದ್ದಳು. ಅದುಕಾರಣ ಈಗ ಧೈರ್ಯವನ್ನುಂಟುಮಾಡುವುದಕ್ಕೋಸ್ಕರ ನಿನ್ನ ರೂಪವನ್ನು ಸ್ವೀಕರಿಸಿದೆನಲ್ಲದೆ ಮತ್ತೆ ಬೇರೆಯಿಲ್ಲ-ಎಂದು ವಿನಯದಿಂದ ಅರಿಕೆಮಾಡಿಕೊಂಡನು.

ಶ್ರೀಹರಿಯು ಆ ಮಾತಂ ಕೇಳಿ-ಅಕ್ರೂರನೆ! ನಿನ್ನ ಮನೋಗತವನ್ನು ನಾನು ಬಲ್ಲೆನು. ನೀನು ವಿಶೇಷದಿಂದ ಹೇಳಬೇಕಾದುದಿಲ್ಲ. ಆದರೆ ಪಾಮರಜನರನ್ನು ಉದ್ಧರಿಸುವುದಕ್ಕೋಸ್ಕರ ಕಲಿಯುಗದಲ್ಲಿ ಅವತಾರವಂ ಮಾಡು. ನಾನು ಬಾಹ್ಯಭಾವದಿಂದ ಶಾಪವನ್ನು ಕೊಟ್ಟೆನು. ಮನಸ್ಸಿನಲ್ಲಿ ನಿನ್ನ ಮೇಲೆ ನನಗೆ ಕೋಪವಿಲ್ಲ-ಎಂದು ಅಪ್ಪಣೆಯಂ ಕೊಟ್ಟನು.

ಬಳಿಕ ಅಕ್ರೂರನು-ಕಲಿಯುಗದಲ್ಲಿ ನಾನು ಅವತರಿಸಿದಾಗ ನನಗೆ ನೀನು ದಯೆಯಿಟ್ಟು ದರ್ಶನವಂ ಕೊಡಬೇಕು-ಎಂದು ಪ್ರಾರ್ಥಿಸಲು, ಶ್ರೀಹರಿಯು—ನೀನು ಅಂಧಕನಾಗಿ, ದಾಸಿಯಾಗಿ ಜನಿಸುವ ಸತ್ಯಭಾಮೆಗೆ ಎಂದು ಗೋಚರನಾಗುವೆಯೋ ಅಂದು ನಾನು ಪ್ರಕಟನಾಗಿ ನಿನ್ನನ್ನು ಸ್ವರೂಪದಲ್ಲಿ ಸೇರಿಸಿಕೊಳ್ಳುವೆನು-ಎಂದು ವರವಂ ಕೊಟ್ಟನು.

ಅಂತು ಶ್ರೀಹರಿಯ ಅಪ್ಪಣೆಯಿಂದ ಅಕ್ರೂರನು ಈ ಕಲಿಯುಗದಲ್ಲಿ ಅಂಧಕನಾಗಿ ಮಧುರಾಪಟ್ಟಣದಲ್ಲಿ ಅವತರಿಸಿದನು. ಆತನ ಹೆಸರು ಸುರದಾಸನೆಂದು. ಹಗಲೂ ಇರುಳೂ ಕುಳಿತಾಗಲೂ ಮಲಗಿದಾಗಲೂ ಭೋಜನವಂ ಮಾಡುವಾಗಲೂ ನಡೆವಾಗಲೂ ಭಗವಂತನನ್ನು ಸ್ಮರಿಸುತಿದ್ದನು. ಪ್ರೇಮಯುಕ್ತನಾಗಿ ಕೀರ್ತನವಂಮಾಡುತ್ತ ಗೀತಪ್ರಬಂಧಗಳಂ ರಚಿಸಿ ಆಲಾಪಿಸುತ್ತ ನಿತ್ಯನಿಯಮಗಳನ್ನು ತಪ್ಪದೆ ಆಚರಿಸುತ್ತ ಪುರುಷೋತ್ತಮನ ಸೇವೆಯಲ್ಲಿ ನಿರತನಾಗಿದ್ದನು.

ಒಂದುದಿವಸ ಸಂದರ್ಶನಕ್ಕೋಸ್ಕರ ದೇವಾಲಯವಂ ಒಳಪೊಕ್ಕು ಸಾಷ್ಟಾಂಗ ನಮಸ್ಕಾರವಂ ಮಾಡಿ ಪೂರ್ವಜನ್ಮಸ್ಮರಣೆಯಂ ಪಡೆದು-ಶ್ರೀಕೃಷ್ಣನೇ! ಪತಿತಪಾವನನೇ! ಕರುಣಾಸಿಂಧುವೆ! ಜಗದ್ಬಂಧುವೆ! ನಿರಪರಾಧನಾದ ನನಗೆ ಏತಕ್ಕೆ ಶಾಪವನ್ನು ಕೊಟ್ಟೆ? ನಿನ್ನಂ ಕರೆದು ತರುವುದಕ್ಕೋಸ್ಕರ ಕಂಸನು ನನ್ನಂ ಗೋಕುಲಕ್ಕೆ ಕಳುಹಿಸಿರಲು, ನಾನು ಅಲ್ಲಿಗೆ ಬಂದುದು ಯಶೋದೆಗೆ ಬಹುವ್ಯಸನಕರವಾಯಿತು. ಆದರೂ ನಾನು ನಿನ್ನಂ ಕರೆದುಕೊಂಡು ಬಂದೆನು. ಆಗ ಯಶೋದೆಯು ಗೋಳಿಟ್ಟಳು. ಆಕೆಯ ಗೋಳು ನನಗೆ ಹತ್ತಿತೋ? ಗೋಪಿಯರು ಅತಿಶಯದಿಂದ ರೋದನವಂ ಮಾಡುತ್ತ, "ನಮಗೆ ಶ್ರೀಕೃಷ್ಣನಂ ದಾನಮಾಡು" ಎಂದು ಬೇಡಿಕೊಂಡರು. ನಾನು ಅವರ ಮಾತಂ ಅಂಗೀಕರಿಸಲಿಲ್ಲ. ಆದುದರಿಂದ ಅವರ ಗೋಳು ನನಗೆ ತಟ್ಟಿತೋ? ಗೋಕುಲದ ಜನರೆಲ್ಲರೂ ತಲೆಯ ಕೂದಲುಗಳಂ ಕಿತ್ತುಕೊಳ್ಳುತ್ತ ಅಳುತ್ತ ಅಡ್ಡಬೀಳುತ್ತ ದುರವಸ್ಥೆಪಡುತಿದ್ದರೂ ನಾನು ನಿನ್ನನ್ನು ಬಿಡದೆ ಕರೆದುಕೊಂಡು ಬಂದ ಕಾರಣ ನನಗೆ ಶಾಪವನ್ನು ಕೊಟ್ಟೆಯೋ ಏನೋ? ಇದು ತಪ್ಪಾಗಿರಬಹುದಲ್ಲದೆ

ನಾನು ಸತ್ಯಭಾಮೆಯ ಮನೆಯಲ್ಲಿ ನಿನ್ನರೂಪವಂ ಧರಿಸಿದುದು ಬೇರೆ ತಪ್ಪಲ್ಲ. ನೀನು ಅಂತರಸಾಕ್ಷಿಯಾದುದರಿಂದ ನನ್ನ ಮನಸ್ಸನ್ನು ತಿಳಿಯದವನಲ್ಲ. ಗೋಕುಲದಲ್ಲಿ ನನ್ನಿಂದ ಅಪರಾಧವುಂಟಾದುದಕ್ಕೆ ನನ್ನ ಮನಸ್ಸೇ ಸಾಕ್ಷಿಯಾಗಿರುವುದು-ಎಂದು ಕಣ್ಣುಗಳಲ್ಲಿ ನೀರು ತುಂಬಿತುಳುಕಾಡುತಿರಲು, ವ್ಯಸನಗೊಂಡು ಹಂಬಲಿಸಿದನು. ಆತನ ಕರುಣಾವಚನವಂ ಕೇಳಿ ಕರುಣಾಕರನಾದ ಶ್ರೀಪತಿಯು ಕರುಣೆಯಿಂದ ಪ್ರಸನ್ನನಾದನು. ಆ ಕ್ಷಣದಲ್ಲಿ ಸುರದಾಸನ ಕಣ್ಣುಗಳು ಕಾಣುವಂತಾದುವು. ಶಂಖ ಚಕ್ರಗದಾಪದ್ಮವಿರಾಜಿತನಾಗಿಯೂ ದಿವ್ಯಪೀತಾಂಬರಧರನಾಗಿಯೂ ಕೋಟಿಸೂರ್ಯ ರನ್ನೂ ತಿರಸ್ಕರಿಸುವ ತೇಜೋವಿಶೇಷವುಳ್ಳವನಾಗಿಯೂ ಇರುವ ಪರಮಪುರುಷನ ದಿವ್ಯಮಂಗಳಮೂರ್ತಿಯನ್ನು ಕಣ್ಣುಗಳಿಂದ ನೋಡಿ ಪರಮಾನಂದಭರಿತನಾಗಿ ಸಾಷ್ಟಾಂಗನಮಸ್ಕಾರವಂ ಮಾಡಿದನು.

ಆಗ ಸ್ವಾಮಿಯು ಆತನನ್ನು ಕುರಿತು-ಎಲೆ ಸುರದಾಸನೆ! ನಾನು ನಿನಗೆ ಪ್ರಸನ್ನನಾಗಿರುವೆನು. ನಿನಗೆ ಬೇಕಾದ ವರವಂ ಬೇಡುವನಾಗು-ಎನಲು, ಸುರ ದಾಸನು-ಸ್ವಾಮಿಯೇ! ನಾನು ಹುಟ್ಟಿದಂದಿನಿಂದ ಮತ್ತೊಂದು ವಸ್ತುವನ್ನು ನೋಡಿ ದವನಲ್ಲ. ಈಗ ನಿನ್ನ ರೂಪವನ್ನು ನೋಡಿ ಇದನ್ನೇ ಹೃದಯದಲ್ಲಿ ಧ್ಯಾನಿಸುತ್ತಿ ರುವೆನು. ಆದುದರಿಂದ ನನ್ನ ಕಣ್ಣುಗಳನ್ನು ಮೊದಲಂತೆಯೆ ಮಾಡಿದರೆ ಈರೂಪ ದಲ್ಲಿಯೇ ಮನಸ್ಸು ಸ್ವಸ್ಥವಾಗಿ ನಿಲ್ಲುವುದು. ಇದನ್ನೇ ನಾನು ಬೇಡುವೆನು. ನೀನು ಇದನ್ನೇ ಅನುಗ್ರಹಿಸಬೇಕು-ಎಂದು ಪ್ರಾರ್ಥಿಸಲು, ಭಗವಂತನು ಸುರದಾಸನ ಮನಸ್ಸಂ ಕಂಡು ನಕ್ಕು ಆತನ ಕಣ್ಣುಗಳನ್ನು ಮೊದಲಂತೆಯೇ ಮಾಡಿದನು.

ಸುರದಾಸನೂ ಆಶ್ರೀಹರಿಯ ರೂಪವನ್ನೇ ಮನದಲ್ಲಿ ಹಿಡಿದು ಮಧುರೆಯಲ್ಲಿ ನಿಂತನು. ಮುಂದಣ ಕಥೆಯಂ ಅವಧರಿಸಬೇಕು.

ಅವಂತೀನಗರದಲ್ಲಿ ಪರಮಭಾವುಕನಾದ ಒಬ್ಬ ರಾಜನಿದ್ದನು. ಆತನ ಬಳಿ ಯಲ್ಲಿ ಐನೂರುಮಂದಿ ಗಾಯಕರಿರುತ್ತಿದ್ದರು. ಅವರಲ್ಲಿ ಶ್ರೇಷ್ಠನಾದ ತಾನಸೇನ ನೆಂಬವನು ರಾಗಜ್ಞಾನದಲ್ಲಿ ಅತಿಪ್ರವೀಣನಾಗಿದ್ದನು. ಆತನ ಗಾಯನದಿಂದ ನಂದಿ ಹೋದ ದೀಪವೂ ಮತ್ತೆ ಪ್ರಜ್ವಲಿಸುವುದು. ಆ ರಾಜನು ಆಗಾಯಕನನ್ನು ಕುರಿತು- ಭೂಮಂಡಲದಲ್ಲಿ ಹುಡುಕಿದರೂ ನಿನ್ನಂತಹ ಶ್ರೇಷ್ಠನಾದ ಗಾಯಕನಿನ್ನೊರ್ವನೂ ದೊರೆಯನು-ಎಂದು ಶ್ಲಾಘಿಸಿದನು. ಆಮಾತಂ ಕೇಳಿ ಆ ತಾನಸೇನನು-ಮಹಾರಾಜನೆ! ಪ್ರಪಂಚದ ಸೃಷ್ಟಿಯಲ್ಲಿ ಒಬ್ಬನಿಗಿಂತ ಅಧಿಕನಾದ ಮತ್ತೊಬ್ಬನನ್ನು ಈಶ್ವರನು ನಿರ್ಮಿಸಿರುವನು. ಸೃಷ್ಟಿಕರ್ತೃವಾದ ಬ್ರಹ್ಮನು ಸೃಷ್ಟಿಯಲ್ಲಿ ನಾನೊಬ್ಬನೇ ಸರಿ- ಎಂದು ತಿಳಿದಿರಲು, ವಿಶ್ವಾಮಿತ್ರನನ್ನು ಹುಟ್ಟಿಸಿ ಆತನಿಂದ ಪ್ರತಿಯಾಗಿ ಸಕಲವಸ್ತು ಗಳನ್ನೂ ನಿರ್ಮಾಣಮಾಡಿಸಿದನು. ಸಮುದ್ರರಾಜನು ನಾನೇ ಮಹಾವಿಸ್ತಾರವುಳ್ಳವ ನೆಂದು ಗರ್ವಪಡುತಿರಲು, ಅಗಸ್ತ್ಯಮಹರ್ಷಿಯನ್ನು ನಿರ್ಮಿಸಿ ಆತನಿಂದ ಆಚಮನ

ಗೊಳಿಸಿದನು. ನಾರದನು ತಾನೇ ಚೆನ್ನಾಗಿ ಪಾಡುವವನೆಂದು ಅಹಂಕಾರವುಳ್ಳವನಾಗಿರಲು, ಶ್ರೀಕೃಷ್ಣನು ಕರಡಿಯಂ ಕರೆದು ಅದರಿಂದ ಮೇಲಾಗಿರುವಂತೆ ಗಾಯನವಂ ಮಾಡಿಸಿದನು. ಆದುದರಿಂದ ನಾನೇ ದೊಡ್ಡವನು ; ಇತರರು ಕಡಿಮೆಯೆಂಬ ಮಾತನಾಡಬಾರದು. ಈ ವಿಷಯದಲ್ಲಿ ಅಹಂಕಾರಪಡಬಾರದು-ಎಂದು ನುಡಿದನು.

ರಾಜನು ಆತನ ಮಾತಂ ಕೇಳಿ ಬಹುಸಂತೋಷವಂ ತಾಳಿ—ಆದರೆ ಪ್ರಕೃತದಲ್ಲಿ ನಿನಗಿಂತಲೂ ಗಾಯನದಲ್ಲಿ ಶ್ರೇಷ್ಠನಾವನು ?-ಎಂದು ಬೆಸಗೊಳಲು, ತಾನಸೇನನು ಮಹಾರಾಜನೆ ! ಮಥುರೆಯಲ್ಲಿ ಸುರದಾಸನೆಂಬವನಿರುವನು. ಆತನು ಅಕ್ರೂರಾವತಾರವು?-ಎಂದು ನುಡಿದನು. ಅದಕ್ಕೆ ರಾಜನು—ಆತನು ಎಷ್ಟು ರಾಗಗಳಂ ಪಾಡಬಲ್ಲನು ?--ಎಂದು ಬೆಸಗೊಳಲು, ತಾನಸೇನನು-ಭಾಗೀರಥಿಯೊಳಗಣಿಂದ ಒಂದು ಬೊಗಸೆಯ ಸಣ್ಣ ಮಳಲಂ ತಂದು ಸುರಿದರೆ ಅದು ಎಷ್ಟು ಸಂಖ್ಯೆಯುಳ್ಳುದೋ ಅಷ್ಟುಸಂಖ್ಯೆಯ ರಾಗಗಳನ್ನು ಆತನು ಪಾಡಬಲ್ಲನು-ಎಂದು ಉತ್ತರವಂ ಹೇಳಿದನು.

ರಾಜನು ಆಮಾತಂಕೇಳಿ ಆಶ್ಚರ್ಯಗೊಂಡು, ಆಕ್ಷಣದಲ್ಲಿ ಶಿಬಿಕೆಯನ್ನು ಕೊಟ್ಟುಕಳುಹಿಸಿ ಸುರದಾಸನಂ ಕರೆದುತರಿಸಿ ಆತನಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಕನಕಪೀಠದಲ್ಲಿ ಕುಳ್ಳಿರಿಸಿ ಬಹುಸನ್ಮಾನವಂ ಮಾಡಿದನು. ಆಗ ಸಮಸ್ತ ಗಾಯಕರೂ ನೆರೆದರು.

ತಾನಸೇನನು ಸುರದಾಸನಂ ಕುರಿತು-ಪೂಜ್ಯರೆ ! ತಮ್ಮ ಮುಖದಿಂದ ಕೀರ್ತನವಂ ಕೇಳಬೇಕೆಂದು ಸರ್ವರೂ ಅಪೇಕ್ಷಿಸುತ್ತಿರುತರು. ಇದಕ್ಕೋಸ್ಕರವೇ ಮಹಾರಾಜರು ತಮ್ಮನ್ನು ಕರೆತರಿಸಿದರು-ಎಂದು ಸಭೆಯಲ್ಲಿ ಬಿನ್ನವಿಸಲು, ಸುರದಾಸನು-ನಾವು ವೈಕುಂಠವಾಸಿಗಳು. ಶ್ರೀಹರಿಯ ಗುಣಗಳಂ ಪಾಡುವುದಕ್ಕೋಸ್ಕರ ಮರ್ತ್ಯಲೋಕಕ್ಕೆ ಬಂದಿರುವೆವು. ಆಕೀರ್ತನದ ಶ್ರವಣವು ನಿಮಗೆಲ್ಲರಿಗೂ ಇಷ್ಟವಾಗಿದ್ದರೆ ಅವಶ್ಯವಾಗಿ ಅದನ್ನೇ ಸ್ವಲ್ಪ ಪಾಡುವೆನು.—ಎಂದು ವೀಣೆಯನ್ನು ತೆಗೆದುಕೊಂಡು ಶ್ರುತಿಮಾಡಿ ಪಾಡುವುದಕ್ಕೆ ಪ್ರಾರಂಭಿಸಿದನು. ಆಗ ರೂಪಾಂತರದಿಂದ ಬಂದು ಗಣೇಶನು ತಾಳವನ್ನು ತೆಗೆದುಕೊಂಡನು. ಸರಸ್ವತಿಯು ವೀಣೆಯಂ ತೆಗೆದುಕೊಂಡು ಮಂಜುಳಸ್ವರದಿಂದ ಪಾಡುವಳಾದಳು ಗಂಧರ್ವರೂ ರಂಭಾದ್ಯಪ್ಸರಸ್ಸ್ತ್ರೀಯರೂ ಬಂದು ಸೇರಿದರು. ಶ್ರೀಮಾಧವನು ಬಂದು ನರ್ತನವಂ ಮಾಡುವನಾದನು. ಯೋಗಿಗಳು ವಜ್ರಾಸನದಲ್ಲಿ ಕುಳಿತು ಧ್ಯಾನಿಸುತ್ತಿದ್ದರೂ ಅವರ ಧ್ಯಾನಕ್ಕೆ ವಿಷಯನಾಗನು. ಋಷಿಗಳು ಮಹಾತಪಸ್ಸನಾಚರಿಸಿದರೂ ಅವರಿಗೆ ದೊರೆಯನು. ಬ್ರಹ್ಮಾದಿಗಳೂ ಪಾರವನ್ನು ತಿಳಿಯರು. ಇಂತಹ ಮಹಾನುಭಾವನು ಸುರದಾಸನ ಕೀರ್ತನದಲ್ಲಿ ಆನಂದದಿಂದ ಕುಣಿಯುತಿರುವನು.

ಇಂತು ಸಾಮಗ್ರಿಗಳು ಸಿದ್ಧವಾಗಿರಲು, ಪಾಡುವುದಕ್ಕೆ ಆರಂಭಿಸಿ ಶ್ರೀಕೃಷ್ಣಾವತಾರದಲ್ಲಿ ಬಳಿದ ಲೀಲೆಗಳ ಕಥೆಯಂ ಕೀರ್ತನೆಮಾಡಿದನು. ಇದೇರೀತಿಯಲ್ಲಿ ಅಲ್ಲಿ

ಪ್ರತಿದಿವಸವೂ ಸುರದಾಸನು ಕೀರ್ತನವಮಾಡುತ್ತ ಸಮಸ್ತರಿಗೂ ಭಜನಮಾರ್ಗದಲ್ಲಿ ಮನಸ್ಸನ್ನುಂಟುಮಾಡಿ ತಾನು ಪರಮಾನಂದದಲ್ಲಿ ಮುಳುಗಿದ್ದನು.

ಒಂದುದಿನ ರಾಜನು ಅಂತಃಪುರಕ್ಕೆ ಹೋಗಿರಲು, ಸ್ತ್ರೀಯರೆಲ್ಲರೂ ಕೈಗಳಂ ಮುಗಿದುಕೊಂಡು—ಸುರದಾಸನು ನಿತ್ಯವೂ ಹರಿಕೀರ್ತನೆಯಂ ಮಾಡುತಿರುವನು. ಅದಂ ಕೇಳಬೇಕೆಂಬ ಅಪೇಕ್ಷೆಯು ನಮಗೆ ಬಹುವಾಗಿರುವುದು—ಎಂದು ಪ್ರಾರ್ಥಿಸಲು, ರಾಜನು ಆಲೋಚಿಸಿ—ಸುರದಾಸನು ಅಂಧಕನು. ಆತನನ್ನು ಅಂತಃಪುರಕ್ಕೆ ಬರಮಾಡಲು, ಸಂಕೋಚನೇನೂ ಇಲ್ಲ. ಅವಶ್ಯವಾಗಬಹುದು—ಎಂದು ಅಪ್ಪಣೆಯಂ ಕೊಟ್ಟನು. ಬಳಿಕ ರಾಜಸ್ತ್ರೀಯರೆಲ್ಲರೂ ನಾಟಕಶಾಲೆಯಲ್ಲಿ ನೆರೆದರು. ಸುರದಾಸನು ಮಹಾರಾಜನಿಂದ ಪ್ರಾರ್ಥಿತನಾಗಿ ಅಲ್ಲಿಗೆ ಬಂದು ಕೀರ್ತನವನಾರಂಭಿಸಿದನು. ಸುಂದರಿಯರೆಲ್ಲರೂ ಕೇಳಿ ಪರವಶೆಯರಾದರು. ಆಗ ಒಂದಾಶ್ಚರ್ಯವು ನಡೆಯಿತು:—

ಪೂರ್ವದಲ್ಲಿ ಶ್ರೀಕೃಷ್ಣನು—ನೀನು ದಾಸಿಯಾಗು—ಎಂದು ಸತ್ಯಭಾಮೆಗೆ ಶಾಪವಂ ಕೊಟ್ಟಿದ್ದನಲ್ಲಾ! ಆಕೆಯು ಆ ರಾಜಗೃಹದಲ್ಲಿ ದಾಸಿಯಾಗಿದ್ದಳು. ಸುರದಾಸನ ಕೀರ್ತನವಂ ಕೇಳುವುದಕ್ಕೆ ಅಲ್ಲಿಗೆ ಬಂದಳು. ಆ ಕೀರ್ತನವಂ ಕೇಳಿ ದೇಹಭಾವವಂ ಮರೆತು ನಾದದಲ್ಲಿ ಲುಬ್ಧವಾದ ಹರಿಣಿಯಂತೆ ತಲ್ಲೀನೆಯಾಗಿ ನಿಂತಳು. ಇದು ಜಲ; ಇದು ಸ್ಥಲ—ಎಂಬುದು ತೋರದಂತಾಯಿತು. ಸುರದಾಸನು ಆಕೆಯ ದೃಷ್ಟಿಗೆ ಗೋಚರನಾಗುವುದೂ ಆತನಿಗೆ ಕಣ್ಣುಗಳು ಬಂದುವು. ಸುರದಾಸನು ಆ ದಾಸಿಯನ್ನು ಕುರಿತು—ಇದೊ ಮುಂಗಡೆಯಲ್ಲಿ ಉದ್ಧವನು ಬಂದು ನಿಂತಿರುವನು—ಎನಲು, ಆಗ ರಾಜಸ್ತ್ರೀಯರೆಲ್ಲರೂ—ಈತನಿಗೆ ಕಣ್ಣುಗಳು ಇಲ್ಲವೆಂದು ಕೇಳಿದ್ದೆವು. ಈಗ ಕಣ್ಣುಗಳಿಂದ ಚೆನ್ನಾಗಿ ನೋಡುತ್ತಿರುವನು—ಎಂದು ನಾಚಿ ತ್ವರೆಯಿಂದ ತೆರೆಯನ್ನು ಮರೆಮಾಡಿಕೊಂಡರು. ಆಸಮಯದಲ್ಲಿ ಶ್ರೀಕೃಷ್ಣನು ಅಲ್ಲಿ ಪ್ರಕಟನಾಗಿ ಆ ದಾಸಿಯನ್ನೂ ಸುರದಾಸನನ್ನೂ ತನ್ನ ಸ್ವರೂಪದಲ್ಲಿ ಸೇರಿಸಿಕೊಂಡು ಅಂತರ್ಧಾನವನ್ನೈದಿದನು.

ಮುಂದಣ ಅಧ್ಯಾಯದಲ್ಲಿ ಶ್ಯೇನನೆಂಬ ನಾಪಿತನ ಚರಿತ್ರೆಯು ಅದ್ಭುತವಾಗಿ ಇರುವುದು, ಭಾವುಕರು ಅದನ್ನು ಆದರದಿಂದ ಅವಧರಿಸಬೇಕು. ಭಕ್ತರ ಚರಿತ್ರೆಯನ್ನು ವಿಶ್ವಾಸದಿಂದ ಕೇಳಿದರೆ ಶ್ರೀಹರಿಯು ಅವರ ವಿಷಯದಲ್ಲಿ ಸಂತುಷ್ಟನಾಗುವನು—ಎಂದು ಮಹೀಪತಿಯು ಕೈಮುಗಿದುಕೊಂಡು ಬಿನ್ನವಿಸಿಕೊಳ್ಳುವನು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತುಮೂರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಮೂವತ್ತು ನಾಲ್ಕನೆಯ ಅಧ್ಯಾಯ.

ಶ್ಯೇನನೆಂಬ ನಾಪಿತನ ಕಥೆ.

ಶ್ಯೇನನೆಂಬ ನಾಪಿತನು ಭಕ್ತರಲ್ಲಿ ದೊಡ್ಡವನು. ಸರ್ವಕಾಲದಲ್ಲಿಯೂ ಹರಿಭಜನೆಯಲ್ಲಿರುತಿದ್ದನು. ಆತನ ಚರಿತ್ರೆಯು ಶ್ರಾವ್ಯವಾದುದು. ಭಾವುಕರಾದ ಶ್ರೋತೃಗಳಿರಾ! ತತ್ಪರರಾಗಿ ಕೇಳಿ.

ಆ ಶ್ಯೇನನು, ಸಂಸಾರವು ನಶ್ವರವೆಂದು ತಿಳಿದು ಅತ್ಯಂತವಿರಕ್ತನಾಗಿ ಇರುಳೂ ಹಗಲೂ ಭಗವನ್ನಾಮಕೀರ್ತನೆಯಂ ಮಾಡುತಿದ್ದನು. ಚತುರ್ಭುಜಗಳಿಂದ ಯುಕ್ತವಾದ ಸುಂದರಮೂರ್ತಿಯು ಆತನ ಮನೆಯಲ್ಲಿಯೇ ಇರುತಿದ್ದಿತು. ನಿತ್ಯವೂ ಪ್ರಾತಃಕಾಲದಲ್ಲಿ ಸ್ನಾನವಂ ಮಾಡಿ ಮೊದಲು ಶ್ರೀಹರಿಯನ್ನು ಸೇವಿಸಿ ಬಳಿಕ ಸಂಸಾರವ್ಯಾಪಾರಕ್ಕೆ ಹೋಗುತ್ತಿದ್ದನು. ನಾಪಿತವೃತ್ತಿಯು ನೀಚವಾದುದು. ಅದಕ್ಕಿಂತಲೂ ನೀಚವಾದ ಕೂಟಸಾಕ್ಷ್ಯಮುಂತಾದ ಇತರಾನೇಕವೃತ್ತಿಗಳುಂಟು. ಇವು ಬಹುಜನ್ಮಸಂಚಿತವಾದ ಪಾಪದಿಂದ ಪ್ರಾಪ್ತವಾಗುವುವು. ಅಂತಹ ಜಾತಿಗಳಲ್ಲಿ ಜನ್ಮವನ್ನು ಎತ್ತಿದರೂ, ಕೂಟಸಾಕ್ಷ್ಯಮುಂತಾದ ವೃತ್ತಿಗಳನ್ನು ಅವಲಂಬಿಸಿ ನಡೆದರೆ ಆದೋಷವು ಜನನಮರಣಂಗಳುಂಟಾಗುತಿರುವವರೆಗೂ ಬಿಡದು. ಈ ಧರ್ಮನೀತಿಯಂ ಕೇಳಿ ಶ್ರೋತೃಗಳು ಮನದಲ್ಲಿ ಕೋಪವನಿಡಲಾಗದು. ಶಾಸ್ತ್ರವು ಇಂತಹ ಕುತ್ಸಿತಕರ್ಮಂಗಳಂ ನಿಂದಿಸಿರುವುದು. ಆದುದರಿಂದ ಅಧಿಕ್ಷೇಪಿಸಲಾಗದು. ಈವೃತ್ತಿಗಳನ್ನು ಅಂಗೀಕರಿಸಲು ದೋಷವು ಪ್ರಾಪ್ತವಾಗದೆ ಇರದೆಂದು ಸಜ್ಜನರು ಬಗೆದು ಚಿತ್ತದಲ್ಲಿ ಅನುತಾಪವಂ ತಾಳಬೇಕು. ಈಜಾತಿಗಳಲ್ಲಿ ಜನ್ಮವುಂಟಾದರೂ ಶ್ರೀಹರಿಯ ಭಜನೆಯು ಯಾವನಿಗೆ ಘಟಿಸದೋ ಅವನು ಭವಚಕ್ರದಲ್ಲಿಯೇ ಸಿಕ್ಕಿ ತೊಳಲುತಿರುವನು. ಅವನಿಗೆ ಎಂದಿಗೂ ಬಿಡುಗಡೆಯಾಗಲಾರದು. ಆಶ್ಯೇನನು ಈಯರ್ಥವನ್ನು ತಿಳಿದವನಾಗಿ ಶ್ರೀಹರಿಗೆ ಶರಣಾಗತನಾದನು. ಅದರಿಂದ ಅವನ ದೋಷಗಳೆಂಬ ತೃಣರಾಶಿಯು ಆಕ್ಷಣದಲ್ಲಿಯೇ ಸುಟ್ಟುಹೋಯಿತು. ಗ್ರಾಮದೊಳಗಣ ಹಳ್ಳವು ತನ್ನಲ್ಲಿ ಸೇರಲು, ಗಂಗೆಯು ಅದನ್ನು ತನ್ನಂತೆ ಎಂತು ಮಾಡಿಕೊಳ್ಳುವಳೋ ಅಂತು ಯಾವ ಜಾತಿಯಲ್ಲಿ ಹುಟ್ಟಿದವನಾದರೂ ಪಶ್ಚಾತ್ತಾಪಯುಕ್ತನಾಗಿ ಶ್ರೀಹರಿಯನ್ನು ಶರಣುಹೊಂದಲು, ಆಸ್ವಾಮಿಯು ಅವನನ್ನು ಸ್ವರೂಪದಲ್ಲಿ ಸೇರಿಸಿಕೊಳ್ಳುವನು.

ಒಂದುದಿನ ಆಶ್ಯೇನನು ಶ್ರೀಹರಿಯ ಸೇವೆಯಂ ಮಾಡುತ ಕುಳಿತಿರಲು, ರಾಜನ ಕಡೆಯವರು ಆತನನ್ನು ಕರೆಯುವುದಕ್ಕೆ ಬಂದರು. ಆಗ ಆತನ ಮಡದಿಯು

ಆತನಿದ್ದಲ್ಲಿಗೆ ಹೋಗಿ–ಮಹಾರಾಜರು ನಿಮ್ಮನ್ನು ಕರೆಯಿಸಿರುವರು-ಎಂದು ಹೇಳಲು, ಮನೆಯಲ್ಲಿ ಇಲ್ಲವೆಂದು ಉತ್ತರವಂ ಪೇಳಿಂದನು. ಮತ್ತೆ ನಾಲ್ಕಾವೃತ್ತಿ ಇತರರು ಕರೆಯುವುದಕ್ಕೆ ಬಂದರು. ಎಲ್ಲರಿಗೂ ಅದೇ ಉತ್ತರವು ದೊರೆಯಿತು. ಬಳಿಕ ನೆರೆಮನೆಯ ದುರ್ಜನನೊಬ್ಬನು ರಾಜನ ಬಳಿಗೆ ಹೋಗಿ-ಶ್ಯೇನನು ದೇವರ ಪೂಜೆಯಂ ಮಾಡುತ್ತ ಮನೆಯಲ್ಲಿ ಕುಳಿತುಕೊಂಡಿರುವನು. ಯಾರು ಬಂದರೂ ತಾನು ಮನೆಯಲ್ಲಿಲ್ಲವೆಂದು ಉತ್ತರವಂ ಹೇಳಿಸುವನು-ಎಂದು ಚಾಡಿಯಂ ಹೇಳಿದನು.

ರಾಜನು ಆ ಮಾತಂ ಕೇಳಿ ಶ್ಯೇನನ ವಿಷಯದಲ್ಲಿ ಬಹುವಾಗಿ ಕೋಪಿಸಿಕೊಂಡನು. ಮೊದಲೇ ರಾಜನು ಅವಿಂಧನು; ದುರ್ಜನನು. ಅವನು ಚಾಡಿಯ ಮಾತನ್ನು ಕೇಳಲು ಹೇಳುವುದೇನಿದೆ? ಮದ್ಯಪಾನವಂ ಮಾಡಿದ ಮರ್ಕಟವು ಚೇಳಿಂದ ಕಡಿಯಲ್ಪಟ್ಟಂತಾಯಿತು. ಮೊದಲೇ ದುರ್ಗಂಧಯುಕ್ತವಾದ ನೀರುಳ್ಳಿಗೆ ಬೆಳ್ಳುಳ್ಳಿಯು ಸೇರಿದಂತಾಯಿತು. ಅಂತು ಮಹಾಕೋಪವಿಕಾರದಿಂದ ಘುಡಿಘುಡಿಸುತ್ತ ರಾಜನು ತನ್ನ ಭೃತ್ಯರಂ ಕುರಿತು-ಶ್ಯೇನನನ್ನು ಕೋಡಗಗಟ್ಟುಗಟ್ಟಿ ಈಗಲೇ ತೆಗೆದುಕೊಂಡು ಬನ್ನಿ-ಎಂದಾಜ್ಞಾಪಿಸಿದನು.

ಈ ವಿಷಯವನ್ನು ತಿಳಿದು ಭಕ್ತಪಕ್ಷಪಾತಿಯಾದ ಭಗವಂತನು ಶ್ಯೇನನ ಭಜನೆಗೆ ಅಂತರಾಯವುಂಟಾಗಬಾರದೆಂದು ಬಗೆದು, ಆಶ್ಯೇನನ ರೂಪವಂತಾಳಿ ಅರಮನೆಯ ಬಾಗಿಲಿಗೆ ಬಂದನು. ಯಾವನು ಆದ್ಯಂತರಹಿತನೋ; ಯಾವನು ಕ್ಷೀರಸಾಗರದಲ್ಲಿ ಶೇಷಶಾಯಿಯೆನಿಸಿರುವನೋ; ಯಾವನನ್ನು ಮಹಾಯೋಗಿಗಳು ಹಗಲೂ ಇರುಳೂ ಧ್ಯಾನಿಸುವರೋ; ಯಾವನ ಸತ್ತ್ವದಿಂದ ದಶೇಂದ್ರಿಯಗಳೂ ಮನಸ್ಸೂ ಬುದ್ಧಿಯೂ ಪ್ರವರ್ತಿಸುತ್ತಿರುವುವೋ ಆ ಶ್ರೀಹರಿಯು ತನ್ನ ಭಕ್ತನಾದ ಶ್ಯೇನನ ಸಂಕಟವಂ ನೋಡಿ, ತನ್ನ ಕಿರೀಟಕುಂತಲಗಳನ್ನೂ ಕೌಸ್ತುಭಮಣಿಯನ್ನೂ ತೆಗೆದಿರಿಸಿ ತನ್ನ ಶ್ರೇಷ್ಠತ್ವವನ್ನೆಣಿಸದೆ ನಾಪಿತನಾಗಿ ಹೆಗಲಮೇಲೆ ಗೊಂಗಡಿಯನ್ನು ಹಾಕಿಕೊಂಡು ಕಂಕುಳಲ್ಲಿ ಅಡಪವನ್ನು ಇಟ್ಟುಕೊಂಡು ನಡೆದುಬಂದನು. ವೇದಶಾಸ್ತ್ರಗಳು ಬಹುಕಷ್ಟಪಟ್ಟು ಯಾವನಂ ಹುಡುಕುತ್ತಿರುವುವೋ ಆ ಜಗನ್ನಾಥನು ಅರಮನೆಯಂ ಸೇರಿ ರಾಜನನ್ನು ಕಂಡು ಕೈಮುಗಿದನು. ಶ್ರೀಹರಿಯೇ ನಾಪಿತನ ರೂಪದಿಂದ ಬಂದಕಾರಣ ಆ ಸ್ವಾಮಿಯ ಸಂದರ್ಶನವಾಗುವುದೂ ಆಕ್ಷಣದಲ್ಲಿಯೇ ರಾಜನ ಕೋಪವು ಶಾಂತಿಯನ್ನು ಹೊಂದಿತು. ಬಳಿಕ ರಾಜನನ್ನು ಇದಿರಿಗೆ ಕುಳ್ಳಿರಿಸಿಕೊಂಡು ಶ್ಮಶ್ರುಕರ್ಮವಂ ಮಾಡುತ್ತ ತಲೆಯಂ ನನೆಯಿಸುತ್ತಿರಲು, ರಾಜನು ಆತನನ್ನು ಕುರಿತು-ನೀನು ನಾಪಿತರಲ್ಲಿ ಚತುರನಾಗಿರುವೆ. ನೀನು ನಮ್ಮ ಬಳಿಯಲ್ಲಿಯೇ ಇರಬೇಕೆಂದು ನನಗಿಷ್ಟವಿದೆ-ಎನಲು, ಅದಕ್ಕೆ ಸ್ವಾಮಿ-ನಾನು ಎಲ್ಲಾ ಬ್ರಹ್ಮಾಂಡದಲ್ಲಿಯೂ ವ್ಯಾಪಿಸಿರುವೆನು. ಅಣುಮಾತ್ರವಾದರೂ ನಾನು ಇಲ್ಲದ ಸ್ಥಳವೇ ಇಲ್ಲ. ಯಾವುದನ್ನೂ ನಾನು ಮಾಡುವುದಿಲ್ಲ. ಕೆಡಿಸುವುದಿಲ್ಲ. ನಾನು

ಮಾಡಿದರೂ ಅಕರ್ತೃವಾಗಿರುವೆನು. ವ್ಯಾಪಕನಾಗಿದ್ದರೂ ಅತೀತನಾಗಿರುವೆನು. ಆಶ್ರಿತರ ಕಾರ್ಯಕ್ಕೋಸ್ಕರ ಒಂದೊಂದು ಕ್ಷಣದಲ್ಲಿ ಒಂದೊಂದು ವೇಷವಂ ಧರಿಸುವೆನು—ಎಂದು ನುಡಿದನು.

ರಾಜನು ಬಹುಹರ್ಷವಂ ತಾಳಿ ಮೈಗೆ ಹಚ್ಚಿಕೊಳ್ಳುವುದಕ್ಕೆ ಸುಗಂಧತೈಲವಂ ತರಿಸಿ ಗಂಧದ ಚೌಕಿಯನ್ನು ಹಾಕಿಸಿಕೊಂಡು ತಾನು ಅದರಮೇಲೆ ಕುಳಿತುಕೊಂಡನು. ಶ್ಯೇನನು ಎಣ್ಣೆಯನ್ನು ಲೇಪಿಸುತಿದ್ದನು. ರತ್ನಖಚಿತವಾಗಿ ಬಹುಸುಂದರವೆನಿಸಿದ ಬಟ್ಟಲು ಸಮೀಪದಲ್ಲಿ ಇಡಲ್ಪಟ್ಟಿದ್ದಿತು. ಅದರಲ್ಲಿ ದಿವ್ಯವಾದ ಮಲ್ಲಿಗೆಯೆಣ್ಣೆಯು ತುಂಬಿದ್ದಿತು. ಅದರಲ್ಲಿ ಶ್ರೀಹರಿಯು ಚತುರ್ಭುಜಯುಕ್ತವಾದ ತನ್ನ ಸ್ವರೂಪವನ್ನು ತೋರಿಸಿದನು. ರಾಜನು ದೇದೀಪ್ಯಮಾನವಾದ ಕಿರೀಟದಿಂದಲೂ ದಿವ್ಯವಾದ ಪೀತಾಂಬರದಿಂದಲೂ ಕಂಗೊಳಿಸುವ ಶ್ಯಾಮಲಮೂರ್ತಿಯಂ ಕಂಡು ಮನದೊಳಾಶ್ಚರ್ಯಗೊಂಡು ಮೇಲೆ ದೃಷ್ಟಿಯಿಟ್ಟುನೋಡಲು, ಮರ್ದನ ಮಾಡುತಿದ್ದ ಶ್ಯೇನನು ಗೋಚರನಾದನು. ಮತ್ತೆ ತೈಲಪರಿಪೂರ್ಣವಾದ ಬಟ್ಟಲಲ್ಲಿ ನೋಡಲು ಪೂರ್ವದಂತೆ ಶ್ರೀಕೃಷ್ಣರೂಪವು ಕಂಡಿತು. ರಾಯನಿಗೆ ದೇಹಭಾವವು ಮರೆತುಹೋಯಿತು. ಆರೂಪದಲ್ಲಿಯೇ ಸ್ತಬ್ಧನಾಗಿ ಕುಳಿತನು. ಮರ್ದನವು ಸಾಕು; ಇನ್ನು ನಿಲಿಸು—ಎಂದು ಹೇಳುವುದಕ್ಕೂ ತೋರಲಿಲ್ಲ. ಸಕಲೇಂದ್ರಿಯಗಳೂ ಆಭಗವತ್ಸ್ವರೂಪದಲ್ಲಿ ಲೀನವಾದುವು. ಅದಂ ಕಂಡು ಅಲ್ಲಿದ್ದ ಸಭಾಸದರೆಲ್ಲರೂ ನಕ್ಕು-ರಾಜನಿಗೆ ಗ್ರಹವು ಹಿಡಿಯಿತು—ಎಂದರು. ಬಳಿಕ ಸೇವಕರು—ಈಗ ಎರಡು ಜಾವವಾಯಿತು. ಎದ್ದು ಸ್ನಾನವಂ ಮಾಡಬೇಕು; ಎಚ್ಚರಗೊಳಬೇಕು—ಎಂದು ಬಿನ್ನವಿಸಿದರು. ರಾಜನು ಶ್ಯೇನನಂ ಕುರಿತು—ನೀನು ಇನ್ನು ಒಂದುಕ್ಷಣ ನನ್ನ ಬಳಿಯಲ್ಲಿಯೇ ಇರು-ನೀನು ಹೊರಟುಹೋದರೆ ನಾನು ಪ್ರಾಣವಂ ಬಿಡುವೆನು—ಎಂದನು. ಆಗ ಶ್ರೀಹರಿಯು-ಮತ್ತೆ ನಾನು ಬೇಗನೆ ಬರುವೆನು. ನನ್ನಂ ನೀನು ತಡೆಯಬೇಡ-ಎಂದು ಹೊರಡಲುಜ್ಜುಗಿಸಲು, ಚಿನ್ನದನಾಣ್ಯಗಳಂ ತರಿಸಿ ಬೊಗಸೆಯಲ್ಲಿ ತುಂಬಿ ಆತನ ಉಡಿಯಲ್ಲಿ ಹಾಕಿದನು. ಶ್ರೀಹರಿಯು ಅದಂ ತೆಗೆದುಕೊಂಡು ಅಡಪದಲ್ಲಿ ಸೇರಿಸಿ ಅಲ್ಲಿಂದ ಹೊರಟು ಆ ಅಡಪವನ್ನು ಶ್ಯೇನನ ಮನೆಯಲ್ಲಿ ಗೂಟಕ್ಕೆ ತಗಲಿಸಿ ತಾನು ಅಂತರ್ಧಾನವನ್ನೈದಿದನು.

ಇತ್ತ ರಾಜನು ಬೇಗದಿಂ ಸ್ನಾನವಂ ಮಾಡಿ ಸೇವಕರನ್ನು ಕುರಿತು—ಶ್ಯೇನನಂ ಈಗಲೇ ಕರೆದುಕೊಂಡು ಬನ್ನಿ. ಉಪಚಾರಗಳೂ ವಸ್ತ್ರಭೂಷಣಗಳೂ ನನಗೆ ಇಷ್ಟವಾಗಿಲ್ಲ. ಮೃಷ್ಟಾನ್ನವೂ ನನಗೆ ಇಷ್ಟವಾಗಿಲ್ಲ. ಪರಿಮಳದ್ರವ್ಯವೂ ಪುಷ್ಪಮಾಲಿಕೆಯೂ ನನಗೆ ಅಭಿಮತವಾಗಿಲ್ಲ. ಶ್ಯೇನನಂ ಮೊದಲು ಕರೆದುಕೊಂಡು ಬಂದು ನನಗೆ ದರ್ಶನವಂ ಮಾಡಿಸು. ಅವನೀಗ ಬಾರದಿದ್ದರೆ ಸತ್ಯವಾಗಿ ನನ್ನಪ್ರಾಣಗಳು ಹೊರಟುಹೋಗುವುವು. ಆದುದರಿಂದ ಆ ಮಹನೀಯನನ್ನು ಕಾಣಿಸಿ-ಎನಲು,

ಸೇವಕರೆಲ್ಲರೂ, ರಾಜನು ವ್ಯಾಕುಲನಾಗಿರುವನೆಂದು ಸಂಭ್ರಾಂತರಾಗಿ ತ್ವರೆಯಿಂದ ಶ್ಯೇನನ ಮನೆಗೆ ಹೋಗಿ ಪ್ರಯತ್ನದಿಂದ ಆತನಂ ಹೊರಡಿಸಿದರು.

ಶ್ಯೇನನು, ತನ್ನ ಮೇಲೆ ರಾಜನು ಕುಪಿತನಾಗಿರುವನೆಂದು ನಿಶ್ಚಯಿಸಿ ಭಯಗೊಂಡು ತ್ವರೆಯಿಂದ ಅಡಪವಂ ತೆಗೆದುಕೊಂಡು ಅರಮನೆಗೆ ಬಂದನು. ರಾಜನು ಅವನಂ ಕಾಣುವುದೂ ಎದ್ದು ನಿಂತುಕೊಂಡನು. ಸಭಾಸದರೆಲ್ಲರೂ ಕಂಡು ವಿಸ್ಮಿತರಾದರು. ರಾಜನು ಶ್ಯೇನನಂ ಕುರಿತು–ಎಲೆ ಶ್ಯೇನನೆ! ನೀನು ಇಂದು ಪ್ರಾತಃಕಾಲದಲ್ಲಿ ಬಂದಿದ್ದಾಗ ಚತುರ್ಭುಜಯುಕ್ತವಾದ ಯಾವ ರೂಪವಂ ತೋರಿದೆಯೋ ಆ ರೂಪವನ್ನು ನನಗೋಸ್ಕರ ತೋರಿಸುವನಾಗು–ಎಂದು ಅವನ ಪಾದಗಳಂ ಪಿಡಿದನು. ಶ್ಯೇನನು ರಾಜನವಾತಂ ಕೇಳಿ ವಿಸ್ಮಿತನಾಗಿ ಸಂಭ್ರಾಂತನಾದನು.

ಬಳಿಕ ರಾಜನು ಬಟ್ಟಲಲ್ಲಿ ಎಣ್ಣೆಯಂ ತರಿಸಿ ಶ್ಯೇನನ ಮುಖಕ್ಕೆ ತೋರಿಸಿದನು. ಅದರಲ್ಲಿ ಪೂರ್ವದಂತೆ ಚತುರ್ಭುಜಯುಕ್ತವಾದ ರೂಪು ಕಾಣಲಿಲ್ಲ. ಚತುರನಾದ ಶ್ಯೇನನು ವಿಚಾರದಿಂದ ಸ್ವಾಮಿಯು ಪ್ರಾತಃಕಾಲದಲ್ಲಿ ನನ್ನ ಕೃತ್ಯವಂ ನಡೆಯಿಸಿದನೆಂದು ನಿಶ್ಚಯಿಸಿ ಆ ಸ್ವಾಮಿಯ ಭಕ್ತವಾತ್ಸಲ್ಯಕ್ಕೆ ಅತ್ಯಾಶ್ಚರ್ಯಗೊಂಡು ಮನದಲ್ಲಿ ಪಶ್ಚಾತ್ತಾಪಂಬಡುತ್ತ ಸ್ವಾಮಿಯೇ! ದೀನಬಂಧುವೇ! ಪತಿತಪಾವನನೇ! ಶ್ರೀಮನ್ನಾರಾಯಣನೇ! ಯಾರಿಗೂ ತಿಳಿಯಲಸದಳವಾದ ವಿಲಾಸವುಳ್ಳವನೇ! ನನಗೋಸ್ಕರ ನೀನು ನೀಚಕಾರ್ಯವಂ ಮಾಡಿದೆಯಲ್ಲಾ! ಅನಾಥನಾಥನೇ! ಶ್ರೀರುಕ್ಮಿಣೀರಮಣನೇ! ಶ್ಯಾಮಸುಂದರನೇ! ನಿನ್ನನ್ನು ವರ್ಣಿಸುವ ಶ್ರುತಿಶಾಸ್ತ್ರಗಳಿಗೂ ನಿನ್ನ ಮಹಿಮೆಯು ತಿಳಿಯದು. ಅಂತಹ ನೀನು ನನಗೋಸ್ಕರ ನೀಚಕಾರ್ಯವನ್ನು ಅಂಗೀಕರಿಸಿದೆ. ಬ್ರಹ್ಮಾದಿಗಳೂ ನಿನ್ನ ಪಾರವನ್ನರಿಯರು. ಅಂತಹ ಮಹಾನುಭಾವನಾದ ನೀನು ನನಗೋಸ್ಕರ ಅಡಪವನ್ನು ಹೆಗಲಿಗೆ ಹಾಕಿಕೊಂಡೆಯಲ್ಲಾ! ದಯಾಳುವೇ!–ಎಂದು ಹಂಬಲಿಸುತ್ತ ತದೇಕಧ್ಯಾನನಾಗಿ ನಿಂತನು. ರಾಜನು ಶ್ಯೇನನ ಪಾದಗಳಂ ಪಿಡಿದು–ನಿನ್ನಸಂಗತಿಯಿಂದ ನನಗೆ ಶ್ರೀಕೃಷ್ಣನ ಸಂದರ್ಶನವಾಯಿತು–ಎಂದು ಕೊಂಡಾಡಿದನು. ಶ್ಯೇನನು ಅಡಪದಲ್ಲಿದ್ದ ಚಿನ್ನದ ನಾಣ್ಯಗಳಂ ನೋಡಿಕೊಂಡು ಅಲ್ಲಿಯೇ ಆಕ್ಷಣದಲ್ಲಿ ಅವನೆಲ್ಲವನ್ನೂ ಬ್ರಾಹ್ಮಣರಿಗೆ ಕೊಟ್ಟುಬಿಟ್ಟನು. ರಾಜನು ಅಂದಿನಿಂದ ಅನುತಾಪಗೊಂಡು ಶ್ರೀಹರಿಭಜನೆಯಲ್ಲಿ ವ್ಯಾಪೃತನಾದನು. ಶ್ರೀಹರಿಯು ಆತನಿಗೆ ಪ್ರಸನ್ನನಾದನು. ಶ್ಯೇನನು ಪರಮಾನಂದಭರಿತನಾಗಿ ಸರ್ವಕಾಲದಲ್ಲಿಯೂ ಪುರುಷೋತ್ತಮನನ್ನು ಧ್ಯಾನಿಸುತ್ತ ಜನ್ಮವಂ ಸಾರ್ಥಕಮಾಡಿಕೊಂಡನು.

ಮುಂದಣ ಅಧ್ಯಾಯದಲ್ಲಿ ಸಾತ್ವಿಕನೆಂಬ ರಾಜನ ಕಥೆಯು ನಿರವಿಸಲ್ಪಡುವುದು. ಅದರ ಶ್ರವಣದಿಂದ ಜ್ಞಾನಿಗಳು ಸಂತೋಷಪಡುವರು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತುನಾಲ್ಕನೆಯ ಅಧ್ಯಾಯಂ ಸಂಪೂರ್ಣಂ.

ಮೂವತ್ತೈದನೆಯ ಅಧ್ಯಾಯ.

ಸಾತ್ತ್ವಿಕನ ಮತ್ತು ಕರ್ಮಾಬಾಯಿಯ ಕಥೆ

ಶ್ರೋತೃಗಳಿರಾ! ಆದರದಿಂದ ಆಲಿಸಿ. ಭಕ್ತರ ಕಥೆಯೆಂಬ ಪರಮಾಮೃತವಂ ಸೇವಿಸಲು, ಭವರೋಗವು ನಿರಸನವನ್ನು ಹೊಂದುವುದು.

ಜಗನ್ನಾಥದಲ್ಲಿ ಸಾತ್ತ್ವಿಕನೆಂಬ ಒಬ್ಬ ರಾಜನಿದ್ದನು. ಆತನಿಗೆ ದೇವರನುಳಿದು ಮತ್ತೊಂದು ವಸ್ತು ವಿಷ್ಟವಾಗಿರಲಿಲ್ಲ. 'ಒಡ್ಡಿ ಜಗನ್ನಾಥ' ಎಂಬ ಕ್ಷೇತ್ರವು ಮರ್ತ್ಯಲೋಕದಲ್ಲಿ ಸಾಕ್ಷಾದ್ವೈಕುಂಠಭುವನವು. ಎಲ್ಲಿ ಭಗವಂತನು ಬೌದ್ಧಾವತಾರವಂ ಸ್ವೀಕರಿಸಿ ಸಂಪೂರ್ಣಲೀಲೆಗಳಂ ತೋರುತಿರುವನೋ ಆಸ್ಥಳವು ಪೂರ್ವಸಮುದ್ರತೀರದಲ್ಲಿ ಇರುವುದು. ಅಲ್ಲಿ ಇದ್ದ ಆಸಾತ್ವಿಕರಾಜನಿಗೆ ಗರುಡಧ್ವಜನು ಪ್ರತ್ಯಕ್ಷನಾಗಿದ್ದನು. ಆತನು ನಿತ್ಯವೂ ತ್ರಿಕಾಲದಲ್ಲಿ ಪೂಜೆಯಾಗುವಾಗ ದೇವಸ್ಥಾನದಲ್ಲಿ ಬಂದು ಕುಳಿತುಕೊಂಡು ಪೂಜೆಯಾದ ಬಳಿಕ ತುಳಸೀಪ್ರಸಾದವಂ ಸ್ವೀಕರಿಸಿ ಭಜನವಂ ಮಾಡುತಿದ್ದನು. ದೇವರಿಗೆ ವಸ್ತ್ರಾಭರಣಗಳನ್ನೂ ದಿವ್ಯಾನ್ನನೈವೇದ್ಯವನ್ನೂ ಸಮರ್ಪಿಸುತ್ತ ಬಂದ ಅತಿಥಿಗಳನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸುತಿದ್ದನು. ನಂದದ ದೀಪಗಳನ್ನು ಇಡಿಸಿದ್ದನು. ಅಲ್ಲಲ್ಲಿ ಅನ್ನಸತ್ರಂಗಳನ್ನು ಏರ್ಪಡಿಸಿದ್ದನು. ಪಾತ್ರವರಿತು ದಾನವಮಾಡುತಿದ್ದನು. ಸರ್ವಭೂತಗಳನ್ನೂ ಅನ್ನೋದಕದಿಂದ ಸಂತೋಷಗೊಳಿಸುತಿದ್ದನು. ಇಂತು ಸತ್ಕಾರ್ಯದಲ್ಲಿ ನಿರತನಾದ ಆ ರಾಜನು ಒಂದು ದಿನ ದೇವಾಲಯದ ಮಹಾದ್ವಾರದಲ್ಲಿ ಕುಳಿತುಕೊಂಡು ಹೊತ್ತುಹೋಗದಕಾರಣ ಪಗಡೆಯಾಟವಂ ಹೂಡಿ ದಾಳವಂ ತೆಗೆದುಕೊಂಡು ಆಡುತ್ತ ನಗುತ್ತ ವಿನೋದಪಡುತ್ತ ಇತರವ್ಯಾಪಾರವನ್ನೇ ಸ್ಮರಿಸದೆ ಇರುತಿರಲು, ಆ ಸಮಯದಲ್ಲಿ ಅರ್ಚಕನು ಪ್ರಸಾದವನ್ನು ಹಂಚುತಬಂದನು. ಆಗ ರಾಜನು ಪ್ರಸಾದವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಎಡದ ಕೈಯನ್ನು ಒಡ್ಡಿದನು. ಅದಂ ಕಂಡು ಅರ್ಚಕನು, ಇದೇನು ವಿಪರೀತ?-ಎಂದು ಬಗೆದು, ಪ್ರಸಾದವಂ ಎಡದಕೈಯಲ್ಲಿ ತೆಗೆದುಕೊಳ್ಳುವಿರಾ?-ಎಂದು ನುಡಿದು ಹಿಂದಿರುಗಿ ಹೊರಟುಹೋದನು.

ಪಗಡೆಯಾಟವು ತೀರಿದ ಬಳಿಕ ರಾಜನು ಜನರಂ ಪ್ರಸಾದವನ್ನು ಕೇಳಲು, ಅವರು-ನೀವು ಎಡದಕೈಯಂ ನೀಡಿದುದರಿಂದ ಅರ್ಚಕರು ಕೊಡದೆ ಹಿಂದಿರುಗಿ ಹೊರಟುಹೋದರು_ಎನಲು, ರಾಜನು ಆಮಾತಂ ಕೇಳಿ ಭಯಗೊಂಡು_ಇದೇನು ನನ್ನ ಪೂರ್ವಪುಣ್ಯವು ವಿಪರೀತವಾಯಿತು? ದ್ಯೂತವು ಮುಂದೆ ಬಂದು ನಿಂತಿತು,

ಪ್ರಸಾದವನ್ನು ಸ್ವೀಕರಿಸದೆಹೋದೆನಲ್ಲಾ! ಅಮೃತವಂ ಬಿಟ್ಟು ಮದ್ಯಪಾನವಂ ಮಾಡಿದಂತಾಯಿತು. ಕಲ್ಪವೃಕ್ಷದಮೇಲೆ ಕೋಪಿಸಿಕೊಂಡು ಈಚಲುಮರಕ್ಕೆ ನೀರನೆರೆದಂತಾಯಿತು. ಜೋಗಸೆಯಲ್ಲಿ ಬೂದಿಯಂ ತುಂಬಿಕೊಳ್ಳಲು, ಹತ್ತಿರಿದ್ದ ಕಸ್ತೂರಿಯು ನಷ್ಟವಾದಂತಾಯಿತು. ಕಾಗೆಯಕಡೆಗೆ ನೋಡಲು, ರಾಜಹಂಸವು ಹಾರಿಹೋದಂತಾಯಿತು. ಚಂಡಾಲನು ದೊರೆಯಲು, ಬ್ರಾಹ್ಮಣರು ಮುನಿಸುಗೊಂಡು ಎದ್ದುಹೋದಂತಾಯಿತು. ಹಾಳಾದ ಈಯಾಟದಿಂದ ನಾನು ಕೆಟ್ಟೆನು-ಎಂದು ಮನದಲ್ಲಿ ಬಗೆದು ಪಶ್ಚಾತ್ತಾಪಗೊಂಡು-ಅಹಹ! ದೇವಸ್ಥಾನದ ಒಳಗೆ ಹೋಗದೆ ಇಂದು ಸೇನೆಗೆ ಕಳ್ಳನಾದೆನಲ್ಲಾ! ಛೀ—ಎಂದು ತನ್ನನ್ನು ನಿಂದಿಸಿಕೊಳ್ಳುತ್ತ ಅರಮನೆಗೆ ಬಂದು-ನನ್ನ ಈ ಕೈ ಅನ್ಯಾಯವಂ ಮಾಡಿತು. ಅದರಿಂದ ಇದಕ್ಕೆ ಶಿಕ್ಷೆಯಂ ಮಾಡಬೇಕು-ಎಂದು ಮನದಲ್ಲಿ ನಿಶ್ಚಯಿಸಿ ಅದಕ್ಕೆ ಒಂದು ಯುಕ್ತಿಯನಾಲೋಚಿಸಿ ಪ್ರಧಾನನಂ ಕರೆದು ಅವನನ್ನು ಕುರಿತು—ನಾನು ರಾತ್ರಿಯಲ್ಲಿ ಮನೆಯೊಳಗೆ ಮಲಗಿ ಇರುವಾಗ ಅಲ್ಲಿಗೆ ಬಂದು ಪಿಶಾಚಿಯು ಬಂದು ಗವಾಕ್ಷಮಾರ್ಗದಿಂದ ಒಳಗೆ ಕೈಯಂ ಹಾಕುವುದು. ಅದಂ ಕಾಣಲು ನನಗೆ ಭಯವಾಗುವುದು. ಆದುದರಿಂದ ನೀನು ಮಂಚದಬಳಿಯಲ್ಲಿಯೇ ನಿಂತಿದ್ದು ಥಟ್ಟನೆ ಆ ಕೈಯಂ ಛೇದಿಸುವನಾಗು-ಎಂದು ಹೇಳಿದನು.

ಪ್ರಧಾನನು-ಅಪ್ಪಣೆಯಾದಂತೆ ನಡೆಯುವೆನು-ಎಂದು ನುಡಿದು, ಅಂದು ರಾತ್ರಿಯಾಗುವುದೂ ಕೈಯಲ್ಲಿ ತೀಕ್ಷ್ಣವಾದ ಶಸ್ತ್ರವಂ ಪಿಡಿದು ನಿರೀಕ್ಷಿಸುತ್ತ ಕುಳಿತುಕೊಂಡಿದ್ದನು. ದೀಪವು ಮಂದಿರದಲ್ಲಿ ಉರಿಯುತಿದ್ದಿತು. ಪ್ರಧಾನನು ಎಚ್ಚರದಿಂದ ಕಾದಿರಲು, ಆ ಸಮಯದಲ್ಲಿ ರಾಜನು ತನ್ನ ಕೈಯನ್ನು ಹೊರಗಣಿಂದ ಗವಾಕ್ಷದ್ವಾರದಲ್ಲಿ ನೀಡಿದನು. ಪ್ರಧಾನನು ಶಸ್ತ್ರದಿಂದ ಥಟ್ಟನೆ ಆ ಕೈಯನ್ನು ಛೇದಿಸಿದನು. ಆ ಕೈ ನೆಲದಲ್ಲಿ ಬಿದ್ದಿತು. ಪ್ರಧಾನನು ಚೆನ್ನಾಗಿ ನೋಡಿ ಗುರುತಿನಿಂದ ರಾಜನ ಕೈಯೆಂದು ನಿಶ್ಚಯಿಸಿ ಬಹುದುಃಖದಿಂದ ಸಂತಪ್ತನಾಗಿ ಹಾಹಾರವಮಂ ಮಾಡುತಿರಲು, ರಾಜನು ಮಂದಿರದೊಳಗೆ ಬಂದು ಪ್ರಧಾನನನ್ನು ಕುರಿತು-ನನ್ನ ಕೈ ನನಗೆ ಶತ್ರುವಾಯಿತು. ಆದಕಾರಣ ಇದನ್ನು ಕಡಿಯಿಸಿದೆನು. ಇದಕ್ಕೋಸ್ಕರ ನೀನು ದುಃಖಿಸಬೇಡ—ಎಂದು ನುಡಿದು ಆತನಿಗೆ ಸಮಾಧಾನವನ್ನುಂಟುಮಾಡಿ ಆ ಕೈಯನ್ನು ಪಲ್ಲಕ್ಕಿಯಲ್ಲಿ ಇರಿಸಿ-ನನ್ನ ಅಪರಾಧದ ಎಣಿಕೆಯೇನೂ ಇಲ್ಲ. ನಾನು ಪಗಡೆಯನ್ನು ಆಡುವಾಗ ಪ್ರಸಾದವನ್ನು ಕೊಡುವುದಕ್ಕೆ ಬರಲು, ದುರ್ಭಾವದಿಂದ ತೆಗೆದುಕೊಳ್ಳದೆ ಹೋದ ಅಪರಾಧಿಯನ್ನು ನಿಮ್ಮ ಬಳಿಗೆ ಕಳುಹಿಸಿರುವೆನು. ಕರ್ಮೇಂದ್ರಿಯಗಳಲ್ಲಿ ಈ ಕರವು ಪ್ರಬಲವಾದುದು. ಇದೇ ಮಹಾಪರಾಧಿಯಾಗಿ ನನಗೆ ತೋರಿರುವುದು. ಮತ್ತು ಮದದಿಂದ ವನದಲ್ಲಿ ಬೇಟೆಯಾಡಿ ನಾನಾಮೃಗಗಳನ್ನು ಹಿಂಸೆಪಡಿಸಿರುವುದೂ ಇದೇ. ಇದನ್ನು ಶಿಕ್ಷಿಸಿ ನಿಮ್ಮ ಸನ್ನಿಧಿಗೆ ಕಳುಹಿಸಿರುವೆನು. ಇದರ ಮೇಲೆ ತಮ್ಮ

ಚಿತ್ತಕ್ಕೆ ತೋರಿದಂತೆ ಶಿಕ್ಷೆಯಂ ಮಾಡಬೇಕು—ಎಂದು—ಜಗನ್ನಾಥಸ್ವಾಮಿಗೆ ನನ್ನ ಬಿನ್ನಪವಂ ಅರಿಕೆಮಾಡಬೇಕೆಂದು ದೂತರಲ್ಲಿ ಹೇಳಿ ದೇವಾಲಯಕ್ಕೆ ಕಳುಹಿಸಿ ಕೊಟ್ಟನು.

ಅವರು ರಾಜನ ಅಪ್ಪಣೆಯಂ ಸಿರದಿಂದ ವಹಿಸಿ ಶಿಬಿಕೆಯಲ್ಲಿ ಕೈಯನ್ನು ಮೆರೆವಣಿಗೆಮಾಡಿಸಿಕೊಂಡು ದೇವಸ್ಥಾನಕ್ಕೆ ತೆಗೆದುಕೊಂಡು ಬಂದು ದೇವರ ಸನ್ನಿಧಿಯಲ್ಲಿ ಇರಿಸಿ ರಾಜನ ಬಿನ್ನಪವನ್ನು ಸ್ವಾಮಿಗೆ ನಿವೇದಿಸಿದರು.

ಸಜ್ಜನರೆಲ್ಲರೂ ಈ ವಿಷಯವಂ ಕೇಳಿ—ರಾಜನು ಧನ್ಯನು. ಸಂಸಾರದಲ್ಲಿ ಇದ್ದರೂ ವಿರಕ್ತನಾಗಿರುವನು. ದೇವರಿಗೋಸ್ಕರ ತನ್ನ ಕೈಯಂ ಛೇದಿಸಿಕೊಂಡನು. ಶರೀರವು ನಶ್ವರವಾದುದು. ಲೋಕದಲ್ಲಿ ಅಸಂಖ್ಯಾತರಾದ ಜನರಿರುವರು. ಯಾರೂ ದೇವರಲ್ಲಿ ತಮ್ಮ ಮನಸ್ಸನ್ನು ಸ್ಥಿರವಾಗಿ ಇಡರು. ದೇಹಸಾರ್ಥಕತೆಯಂ ಮಾಡಿಕೊಳ್ಳರು. ಉದರಪರಿಪೋಷಣೆಕ್ಕೋಸ್ಕರ ದೇಶಾಂತರಗಳಲ್ಲಿ ಅಲೆದು ಕಷ್ಟಪಡುವರು. ಅನೇಕರು ವ್ಯರ್ಥವಾದ ನಿಮಿತ್ತದಿಂದ ಅಲ್ಲಿಯೇ ಪ್ರಾಣಬಿಡುವರು. ಅಂತಲ್ಲದೆ ವಿಶ್ವಂಭರನ ಭಜನೆಯನ್ನು ಏಕಾಗ್ರತೆಯಿಂದ ಮಾಡಿ ಯಾರೂ ಪ್ರಾಣವನ್ನು ಬಿಡರು. ಶರೀರದಲ್ಲಿ ಜ್ವರವುಂಟಾದರೆ ಹದಿನಾಲ್ಕು ಲಂಘನಗಳನ್ನಾದರೂ ಮಾಡುವರು. ಅಹಹ! ನಿರ್ಭಾಗ್ಯರು ಏಕಾದಶೀದಿನದಲ್ಲಿ ಉಪೋಷವನ್ನುಮಾಡರು. ವ್ಯವಹಾರದಲ್ಲಿ ಬಂದುಕಾಸು ಹೋದರೆ ಸ್ನೇಹಿತನೊಡನೆಯಾದರೂ ಕಲಹವಂ ಮಾಡಿ ಮನಸ್ಸಿಗೆ ಬಂದಂತೆ ಮಾತನಾಡುವರು. ಸದ್ಭಾವದಿಂದ ಶ್ರೀಹರಿಯ ಗುಣಗಳಂ ಪಾಡರು. ಕಳ್ಳರು ಧನಸಂಪದವಂ ಕಿತ್ತುಕೊಂಡು ಹೋದರೆ ಕೈಗಳಂ ಹಿಸಿಕಿಕೊಂಡು ಸುಮ್ಮನಾಗುವರು. ಅಲ್ಲದೆ ಸತ್ಪಾತ್ರದಲ್ಲಿ ವೆಚ್ಚವಂ ಮಾಡರು. ಇದು ಕಲಿಯ ಧರ್ಮವು. ಮಾಯಾಲೋಭಿಗಳೇ ಅನೇಕರು ಇರುವರು. ಈ ರಾಜನು ಅಂತಹನಲ್ಲ. ಮಹಾನಿಷ್ಠೆಯುಳ್ಳವನು—ಎಂಬುದು ಈಗ ನಮಗೆ ತಿಳಿಯಿತು-ಎಂದು ಮಾತನಾಡುತಿದ್ದರು.

ಆಗ ಬಂದಾಶ್ಚರ್ಯವು ನಡೆಯಿತು.-ಸಜ್ಜನರು ಪ್ರೀತಿಯಿಂದ ಕೇಳತಕ್ಕದು. ಛಿನ್ನವಾಗಿದ್ದ ರಾಜನ ಕೈ ಸರ್ವರೂ ನೋಡುತಿರುವಾಗಲೇ ದವನವಾಯಿತು. ಅದನ್ನು ಪುಷ್ಪವಾಟಿಕೆಗೆ ತೆಗೆದುಕೊಂಡು ಹೋಗಿ ನೆಲದಲ್ಲಿ ಬೆಳೆಯಿಸಿದರು. ಬಳಿಕ ಅರ್ಚಕರು ಶ್ರೀಹರಿಯ ಪ್ರಸಾದವನ್ನು ತೆಗೆದುಕೊಂಡು ರಾಜನಿಗೆ ಕೊಡುವುದಕ್ಕೆ ಬಂದರು. ಆಗ ರಾಜನು ಭಗವದ್ಧ್ಯಾನದಲ್ಲಿ ಲೀನನಾಗಿ ದೇಹಸ್ಮೃತಿಯಿಲ್ಲದೆ ಆ ಮೊಂಡಕೈಯನ್ನೇ ನೀಡಿದನು. ಅರ್ಚಕರು ಪ್ರಸಾದವನ್ನು ಕುಡುವುದೂ ಮೊದಲಂತೆ ಕೈಯಾಯಿತು. ಭಕ್ತರು ಜಯಜಯಧ್ವನಿಯನ್ನು ಮಾಡಿದರು. ಜ್ಞಾನಿಗಳು ಆಶ್ಚರ್ಯಗೊಂಡರು.

ಶ್ರೋತೃಗಳಿರಾ! ಸರಸವಾದ ಮುಂದಣ ಕಥೆಯನಾಲಿಸಿ. ಈ ಕಥೆಯು ಶ್ರವಣಗತವಾದಮಾತ್ರಕ್ಕೆ ತಾಪತ್ರಯವು ಪರಿಹಾರವನ್ನು ಹೊಂದುವುದು.

ಆ ಜಗನ್ನಾಥದಲ್ಲಿಯೆ ಕರ್ಮಾಬಾಯಿಯೆಂಬ ಒಬ್ಬ ಬ್ರಾಹ್ಮಣಸ್ತ್ರೀಯಿದ್ದಳು. ಆಕೆಯ ಚಿತ್ತವು ಶ್ರೀಹರಿಯ ಪಾದದಲ್ಲಿಯೇ ಹತ್ತಿದ್ದಿತು. ಆಕೆ ಗರ್ಭಿಣಿಯಾಗಿದ್ದಳು. ಆಸಮಯದಲ್ಲಿ ಆಕೆಯ ಪತಿಯು ಶಾಂತನಾದನು. ಅಪಾರವ್ಯಸನಕ್ಕೆ ಈಡಾದಳು. ನವಮಾಸಗಳು ತುಂಬಿದುವು. ಒಬ್ಬ ಪುತ್ರನು ಉದಯಿಸಿದನು. ಆಗ ಆಕೆಯು–ದೇವಾದಿದೇವನೆ! ಜಗನ್ನಾಥನೆ! ಇವನನ್ನು ಬದುಕಿಸು–ಎಂದು ನಿತ್ಯವೂ ಪ್ರಾರ್ಥಿಸುತಿದ್ದಳು. ದಿನದಿನಕ್ಕೆ ಶಿಶುವು ಬಳೆಯಿತು. ಪ್ರಾಪ್ತವಯಸ್ಕನಾದ ಆ ಕುಮಾರನಿಗೆ ಮದುವೆಯಂ ಮಾಡಿದಳು. ದಿನಕ್ರಮದಿಂದ ಸೊಸೆಯು ಗರ್ಭಿಣಿಯಾದುದಂ ಕಂಡು ಅಪಾರವಾದ ಸಂತೋಷದಲ್ಲಿ ಮುಳುಗಿದಳು. ಮೊಮ್ಮಗನು ಹುಟ್ಟಿದನು. ಒಡನೆಯೆ ಮಗನು ದೈವಗತಿಯನ್ನು ಹೊಂದಿದನು. ಮತ್ತೆ ಮಹತ್ತರವಾದ ಶೋಕಕ್ಕೆ ಒಳಗಾದಳು. ವಿವೇಕದಿಂದ ಮನಸ್ಸನ್ನು ನಿಗ್ರಹಿಸುತ್ತ ಈ ಶಿಶುವಾದರೂ ಬದುಕಿಕೊಂಡರೆ ಮನೆಯ ಹೆಸರನ್ನು ಹೇಳೀತು–ಎಂದು ಅತ್ಯಾದರದಿಂದ ಮೊಮ್ಮಗನನ್ನು ಪೋಷಿಸುತಬಂದಳು. ಕುಳಿತುಕೊಳ್ಳುವಾಗಲೂ, ಮಲಗುವಾಗಲೂ, ಭೋಜನಮಾಡುವಾಗಲೂ ಕ್ಷಣವಾದರೂ ಮೊಮ್ಮಗನನ್ನು ಬಿಟ್ಟರಳು. ಇಂತು ಕೆಲದಿವಸ ಕಳೆಯಿತು. ಕಡೆಗೆ ಆ ಮೊಮ್ಮಗನೂ ಕಾಲಾಧೀನನಾದನು. ಅಹಹ! ಆಕೆಯ ದುಃಖವನ್ನು ವಿವರಿಸಲು ಯಾರಿಗೆ ಸಾಧ್ಯವು? ಮಹಾದುಃಖದಿಂದ ಮನಸ್ಸು ವ್ಯಾಕುಲವಾಗಿದ್ದರೂ ಶ್ರೀಹರಿಯನ್ನು ನೆನೆಯದೆ ಇರಲಿಲ್ಲ. ಇರುಳೂ ಹಗಲೂ ಅದೇ ವ್ಯಸನದಿಂದ ಸಂಕಟಪಡುತ್ತ–ಶ್ರೀಹರಿಯೇ! ಈ ದುಃಖರೂಪವಾದ ಸಂಸಾರದಲ್ಲಿ ನನ್ನನ್ನು ಏಕೆ ಹಾಕಿದೆ? ನಿನಗೆ ನನ್ನ ವಿಷಯದಲ್ಲಿ ದಯೆಯಿಲ್ಲವೇ? ಎಂದು ಭಗವಂತನಲ್ಲಿ ಮೊರೆಯಿಡುತಿದ್ದಳು.

ಇಂತಿರಲು, ಜಗನ್ನಾಥಯಾತ್ರೆಗೆ ಬಂದ ಸಾಧುಗಳು ಕೆಲವರು ಆ ಕರ್ಮಾಬಾಯಿಯ ಮನೆಯಲ್ಲಿ ಇಳಿದರು. ಆಕೆಯು ವ್ಯಸನಪಡುತಿದ್ದುದಂ ಕಂಡು ಏನು ಸಂಗತಿ?-ಎಂದು ವಿಚಾರಿಸಿದರು. ಆಕೆಯು ನಡೆದ ವೃತ್ತಾಂತವೆಲ್ಲವಂ ತಿಳಿಯಿಸಿದಳು. ಅದಂ ಕೇಳಿ ಸಾಧುಗಳು ಅಮ್ಮಾ! ಈ ಸಂಸಾರವೇ ದುಃಖರೂಪವಾದುದು. ಇಲ್ಲಿ ಲೇಶಮಾತ್ರವಾದರೂ ಸುಖವಿಲ್ಲ. ನಿಶ್ಚಯವೆಂದು ತಿಳಿ. ತಗಣೆಗಳು ತುಂಬಿದ ಮಂಚದಲ್ಲಿ ಮಲಗಲು, ಸುಖನಿದ್ರೆಹತ್ತುವುದೆಂತೋ; ಬಾಯಾರಿದವನಿಗೆ ಮೃಗತೃಷ್ಣೆಯಿಂದ ತೃಷ್ಣಾಪರಿಹಾರವಾಗುವುದೆಂತೋ; ಆಯುಸ್ಸಿಲ್ಲದವನು ವಿಷಪ್ರಾಶನದಿಂದ ಬದುಕುವುದೆಂತೋ; ಕಿವುಡನಿಗೆ ಕಥೆಯಂ ಹೇಳಲು ಪೌರಾಣಿಕನಿಗೆ ಸುಖವಾಗುವುದೆಂತೋ ಈ ದುಃಖಮಯವಾದ ಸಂಸಾರದಲ್ಲಿ ಸುಖವಾಗುವುದೂ ಅಂತು. ಆದುದರಿಂದ ಇನ್ನುಮೇಲೆ ಎಚ್ಚತ್ತುಕೊಳ್ಳುವಳಾಗು; ಈ ಪ್ರಪಂಚವು ನಶ್ವರವು-ಎಂದು

ನುಡಿಯಲು, ಆಕೆ ಮನದಲ್ಲಿ ಕರಗಿ ಅವರಂ ಕುರಿತು-ಸಾಧುಗಳಿರಾ! ನೀವು ಹೇಳಿದಂತೆ ನಾನು ಕೇಳುವೆನು-ಎಂದಳು.

ಬಳಿಕ ಸಾಧುಗಳು ಆಕೆಯಂ ಕುರಿತು-ಸರ್ವಕಾಲದಲ್ಲಿಯೂ ಜಗನ್ನಾಥನಂ ಭಜಿಸಬೇಕು. ಜನಗಳಿಗೆ ಅವರವರ ಅಧಿಕಾರವನ್ನನುಸರಿಸಿ ಉಪದೇಶವಂ ಮಾಡುವುದಕ್ಕೂ ಶ್ರೀಹರಿಯ ಗುಣಕೀರ್ತನವಂ ಶ್ರವಣಮಾಡಿಸಿ ಭಗವದ್ಭಕ್ತಿಸುಖವಂ ಕರುಣಿಸುವುದಕ್ಕೂ ದುರ್ಜನರ ಮದವಂ ಧ್ವಂಸಮಾಡುವುದಕ್ಕೂ ಭಗವದಾಜ್ಞೆಯಿಂದ ಸಾಧುಗಳು ನೆಲದಲ್ಲಿ ಅವತರಿಸಿರುವರು-ಎನಲು, ಆಕೆಯು ಅವರ ಮಾತಂ ಕೇಳಿ ಅವರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿದಳು. ಅವರು ತಮ್ಮಲ್ಲಿದ್ದ ಒಂದು ಗೋಪಾಲಮೂರ್ತಿಯನ್ನು ತೆಗೆದು ಆಕೆಗೆ ಕೊಟ್ಟು-ನಿನ್ನ ಮೊಮ್ಮಗನಲ್ಲಿ ಯಾವಪ್ರಕಾರದಿಂದ ಪ್ರೀತಿಯಂ ಮಾಡುತಿದ್ದೆಯೋ ಅದೇಪ್ರಕಾರದಿಂದ ಈ ಮೂರ್ತಿಯಲ್ಲಿ ಪ್ರೀತಿಯನ್ನು ಇಟ್ಟು ಸರ್ವಕಾಲದಲ್ಲಿಯೂ ಸೇವೆಯಂ ಮಾಡುತಿರು-ಎಂದು ಹೇಳಿ ಮುಂದಣ ತೀರ್ಥಯಾತ್ರೆಗೆ ಹೊರಟುಹೋದರು.

ಅವರ ಮಾತು ಕರ್ಮಾಬಾಯಿಗೆ ಸಮುಚಿತವಾಗಿ ತೋರಿತು. ಇಂದಿನಿಂದ ಮೊಮ್ಮಗನಂ ಲಾಲಿಸುತ್ತ ಇದ್ದಂತೆಯೇ ಆ ಗೋಪಾಲಮೂರ್ತಿಯಂ ಲಾಲಿಸುತ್ತ ಆಗಾಗ ದೃಷ್ಟಿದೋಷಕ್ಕೆ ಪರಿಹಾರವಂ ಮಾಡುತ್ತ ಮಹಾಮೋಹಗೊಂಡು, ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಬಿಸಿನೀರನೆರೆಯುವಂತೆ ಎರೆಯುತ್ತ, ತೊಟ್ಟಿಲಲ್ಲಿ ಮಲಗಿಸಿ ಜೋಗುಳವಂ ಪಾಡಿ ತೂಗುತ್ತ ವಸ್ತ್ರಭೂಷಣಾಗಳಿಂದ ಅಲಂಕರಿಸುತ್ತ ಮೊಸರನ್ನವನ್ನು ಕಲೆಯಿಸಿ ಬಟ್ಟಲಲ್ಲಿ ಇಟ್ಟುಕೊಂಡು-ಅಪ್ಪಾ! ಹಸಿವುಗೊಂಡಿರುವೆಯಾ? ಉಣ್ಣು-ಎಂದುಊಟಮಾಡಿಸುತ್ತ ಮತ್ತೊಂದು ವಿಷಯವಂ ಮನಸ್ಸಿಗೆ ತಾರದೆ ಸರ್ವಕಾಲದಲ್ಲಿಯೂ ಎಡೆಬಿಡದೆ ಆ ಮೂರ್ತಿಯನ್ನು ಉಪಚರಿಸುತಿದ್ದಳು. ಆಕೆಯ ಅಸಾಧಾರಣವಾದ ಭಕ್ತಿಭಾವವಂ ಕಂಡು ಶ್ರೀಹರಿಯು ಊಟಮಾಡುತಬಂದನು.

ಬಳಿಕ ಒಂದು ದಿನ ಕೇವಲಕರ್ಮಠನಾದ ಒಬ್ಬ ಬ್ರಾಹ್ಮಣನು ಆಕೆಯ ಮನೆಗೆ ಬಂದು ಇಳಿದನು. ಆಕೆಯು ಪ್ರಾತಃಕಾಲದಲ್ಲಿ ಎದ್ದು ದೇವರಿಗೆ ಭೋಜನ ಮಾಡಿಸುತಿದ್ದುದಂ ಕಂಡು ಆಬ್ರಾಹ್ಮಣನು-ಇದೇನೆಂದು ವಿಚಾರಮಾಡಿದನು. ಆಕೆಯು ಎಲ್ಲಾ ಸಂಗತಿಯನ್ನೂ ಹೇಳಿದಳು. ಆಕೆಯ ಮಾತಂ ಕೇಳಿ ಆಬ್ರಾಹ್ಮಣನು-ಸ್ನಾನವಂ ಮಾಡಿ ಶ್ರೀಕೃಷ್ಣನ ಪೂಜೆಯಂ ಮಾಡಬೇಕು. ಮೈಲಿಗೆಯಿಂದ ದೇವರಿಗೆ ನೈವೇದ್ಯಸಮರ್ಪಣೆಯಂ ಮಾಡುತಿರುವೆ. ಇದು ದೇವರಿಗೆ ಸಮರ್ಪಕವಾಗಲಾರದು-ಎನಲು, ಆಕೆಯು-ಇನ್ನು ಮೇಲೆ ನೀವು ಹೇಳಿದಂತೆ ಮಾಡುವೆನೆಂದು ಹೇಳಿ ಮರುದಿನದಿಂದ ಬೆಳಗಾಗುವುದೂ ಎದ್ದು ಸಂಮಾರ್ಜನಾದಿ ಗೃಹಕಾರ್ಯವಂ ನೆರವೇರಿಸಿ ಸ್ನಾನವಂ ಮಾಡಿ ಮಿಸಲನೀರಂ ತಂದು ಪಾಕವನ್ನು

ಆರಂಭಿಸಿದಳು. ಎಲ್ಲಾ ಕೆಲಸಗಳನ್ನೂ ಮಾಡಿ ನಿವೇದ್ಯಕ್ಕೆ ಸಿದ್ಧಮಾಡುವುದು ಬಹು ಕಾಲವಾಗುತ್ತ ಬಂದಿತು.

ಇಂತಿರಲು ಜಗನ್ನಾಥನು ಹಸಿವುಗೊಂಡು ಅರ್ಚಕನ ಸ್ವಪ್ನದಲ್ಲಿ ಕಾಣಿಸಿಕೊಂಡು-ಕರ್ಮಾಬಾಯಿಯು ಭಕ್ತಿಯಿಂದ ಹೊತ್ತಿಗೆಮುಂಚೆ ನನಗೆ ನಿವೇದ್ಯವಂ ಸಮರ್ಪಿಸುತಿದ್ದಳು. ಆದುದರಿಂದ ನಾನು ಸಂತುಷ್ಟನಾಗುತಿದ್ದೆನು. ಆಕೆಯ ಮನೆಗೆ ಒಬ್ಬ ಕರ್ಮಠಬ್ರಾಹ್ಮಣನು ಬಂದು ಇಳಿದು ಆಕೆಗೆ ವಿಕಲ್ಪವಂ ತಂದುಹಾಕಿದನು. ಅದರಿಂದ ನೈವೇದ್ಯಕ್ಕೆ ನಿತ್ಯವೂ ಹೊತ್ತು ಬಹುವಾಗುವುದು. ನೀನು ಹೋಗಿ ಆಕೆಗೆ ಹೇಳತಕ್ಕದು:--ಪರಮಾತ್ಮನು ಶುದ್ಧನು ; ಮಾಯಾತೀತನು ; ಆತನನ್ನು ಕರ್ಮಬಾಧೆಗಳು ಬಾಧಿಸಲಾರವು. ಆತನು ಸರ್ವವಂ ಮಾಡುವನಾದರೂ ಅಕರ್ತೃವಾಗಿರುವನು. ಸರ್ವಕರ್ಮಗಳಿಗೂ ಸಾಕ್ಷಿಭೂತನಾಗಿರುವನು. ಭಕ್ತರಿಗೋಸ್ಕರ ಅವತಾರವಂ ಮಾಡಿರುವನು. ಆತನು ವಿಶ್ವವ್ಯಾಪಕನು_ಎಂದು ನೀನು ಆಕೆಗೆ ಉಪದೇಶಿಸು_ಎಂದು ಅಪ್ಪಣೆಯನೀಯಲು, ಅರ್ಚಕನು ಆಕೆಯ ಮನೆಗೆ ಹೋಗಿ ಸ್ವಾಮಿಯ ಆಜ್ಞೆಯನ್ನು ತಿಳಿಯಿಸಿದನು.

ಆಕೆ ಮರುದಿವಸದಿಂದ ಹೊತ್ತಿಗೆಮುಂಚೆ ನೈವೇದ್ಯವಂ ಸಿದ್ಧಮಾಡಿಕೊಂಡು ದೇವಸ್ಥಾನಕ್ಕೆ ಜಗನ್ನಾಥಸ್ವಾಮಿಯ ಸನ್ನಿಧಿಗೇ ತಂದಿಡುತಿದ್ದಳು. ಶ್ರೀಹರಿಯು ಪ್ರತ್ಯಕ್ಷನಾಗಿ ಭೋಜನವಂ ಮಾಡುತಬಂದನು. ಭಕ್ತರೆಲ್ಲರೂ ಜಯಜಯ-ಎಂದು ಪಾಡಿಪೊಗಳಿ ಆನಂದದಿಂದ ಕರಾಸ್ಫಾಲನವಂ ಮಾಡಿದರು.

ಕರ್ಮಠರಾದನೇಕರು ಕರ್ಮಾಬಾಯಿಯ ಭಕ್ತಿಭಾವಕ್ಕೆ ಬೆರಗಾಗಿ_ನಾವು ಅಗ್ನಿಹೋತ್ರಿಗಳು ; ಯಜ್ಞಾದಿಗಳಂ ಮಾಡುವೆವು. ಆದರೂ ಶ್ರೀರಂಗನು ನಮಗೆ ಪ್ರಸನ್ನನಾಗನು. ಬ್ರಹ್ಮಾದಿಗಳೂ ನಿರಂತರವೂ ಯಾವನನ್ನು ಭಜಿಸುತ್ತಿರುವರೋ ; ನಾನಾಯಾಗಾದಿಸತ್ಕರ್ಮಗಳು ಯಾರಲ್ಲಿ ಹುಟ್ಟಿದುವೋ ಆ ಸ್ವಾಮಿಯು, ಕರ್ಮಾಬಾಯಿಯು ತಂದ ನಿವೇದ್ಯವಂ ಪ್ರತ್ಯಕ್ಷನಾಗಿ ಭುಂಜಿಸಿದನು. ಭಕ್ತರ ಮಹಿಮೆಯನ್ನು ಚತುರ್ಮುಖನೂ ವರ್ಣಿಸಲಾರನು_ಎಂದು ಹೊಗಳುತ್ತ ಕರ್ಮಾಬಾಯಿಗೆ ವಂದಿಸಿದರು.

ಈಗಲೂ ಜಗನ್ನಾಥಕ್ಷೇತ್ರದಲ್ಲಿ ವೈಕುಂಠನಾಯಕನು ಸಾಕ್ಷ್ಯವನ್ನು ತೋರುತಿರುವನು !_ನಿತ್ಯವೂ ಮೊದಲು ಕರ್ಮಾಬಾಯಿಯ ಹುಗ್ಗಿಯು ನಿವೇದ್ಯಕ್ಕೆ ಬರುವುದು. ಬಳಿಕ ಮಹಾನೈವೇದ್ಯದ ಸಮರ್ಪಣೆಯಾಗುವುದು.

ಮುಂದಣ ಅಧ್ಯಾಯದಲ್ಲಿ ಜಸವಂತನೆಂಬ ಸಾಧುಕಾರನ ಕಥೆ ರಸಾಲವಾಗಿರುವುದು. ಅವಧಾನವಂ ಕೊಡಬೇಕೆಂದು ಮಹೀಪತಿಯು ಪ್ರಾರ್ಥಿಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತೈದನೆಯ ಅಧ್ಯಾಯಂ ಸಂಪೂರ್ಣಂ.

ಮೂವತ್ತಾರನೆಯ ಅಧ್ಯಾಯ.

ಜಸವಂತನ ಮತ್ತು ಮದನಮೋಹನನ ಚರಿತ್ರೆ.

ಇಂದು ಮಂಗಳಕರವಾದ ದಿವಸವು. ಸುಜ್ಞಾನಿಗಳಾದ ಶ್ರೋತೃಗಳು ಬಂದಿರುವುದರಿಂದ ಸಕಲಾಭೀಷ್ಟಗಳೂ ಸಿದ್ಧಿಸುವುವು. ಕಥೆಯು ರಸಯುಕ್ತವಾಗಿ ಸಾಗುವುದು. ಜಸವಂತನೆಂಬ ಸಾಧುಕಾರನು ಶ್ರೀರಾಮೋಪಾಸಕನು; ಭಕ್ತಶ್ರೇಷ್ಠನು. ಆತನ ಚರಿತ್ರೆಯು ಶ್ರಾವ್ಯವಾದುದು. ಭಾವುಕರು ಅವಧರಿಸಬೇಕು.

ಆ ಸಾಧುಕಾರನಿಗೆ ಐವರು ಪುತ್ರರಿದ್ದರು. ಮನೆಯಲ್ಲಿ ಲಕ್ಷಾಂತರದ್ರವ್ಯಸಂಪತ್ತಿಯಿದ್ದಿತು. ಆತನು ಸರ್ವಕಾಲದಲ್ಲಿಯೂ ಶ್ರೀರಾಮಭಜನೆಯಂ ಮಾಡುತಿದ್ದನು. ಬಂದ ಅತಿಥಿಗಳನ್ನು ಮೃಷ್ಟಾನ್ನದಿಂದ ಸತ್ಕರಿಸುತಿದ್ದನು. ಸಾಧುಗಳನ್ನು ಸನ್ಮಾನಿಸುತಿದ್ದನು. ಯಾರಿಗೂ ವಿಮುಖನಾಗಿರಲಿಲ್ಲ. ಬಹುಧರ್ಮವಾಸನೆಯಿಂದ ಇರುತಿದ್ದನು. ಆತನ ಮಕ್ಕಳು ದಿನದಿನಕ್ಕೆ ದೊಡ್ಡವರಾದರು. ಅವರು ಪರಮದುಷ್ಟರು; ದುರಾಚಾರಿಗಳು; ಹರಿಭಜನೆಗೆ ವಿಮುಖರಾಗಿದ್ದರು. ಪೌಲಸ್ತ್ಯನ ವಂಶದಲ್ಲಿ ವಿಷ್ಣುದ್ರೋಹಿಯಾದ ರಾವಣನು ಹುಟ್ಟಿದಂತೆ, ಚಂದ್ರವಂಶದಲ್ಲಿ ದುರ್ಗುಣಶಿರೋಮಣಿಯಾದ ದುರ್ಯೋಧನನು ಹುಟ್ಟಿದಂತೆ, ಜಸವಂತನ ವಂಶದಲ್ಲಿ ಪಾಪಿಗಳವರು ಪುಟ್ಟಿದರು. ಅವರಿಗೆ ಉಚಿತಾನುಚಿತಜ್ಞಾನವೇ ಇರಲಿಲ್ಲ. ಧರ್ಮವಂ ಮಾಡುವ ವಿಷಯದಲ್ಲಿ ಅವರಿಗೆ ಸ್ವಲ್ಪವೂ ಸಹನೆಯಿಲ್ಲ. ವೃದ್ಧನಿಗೆ ಹುಚ್ಚು ಹಿಡಿಯಿತು; ಮನೆಯಲ್ಲಿದ್ದ ದ್ರವ್ಯವೆಲ್ಲವನ್ನೂ ನಾಶಮಾಡುವನು—ಎಂದು ದುರುಕ್ತಿಗಳನಾಡುತಿದ್ದರು. ಸರ್ವರೂ ಸುಖಕ್ಕೋಸ್ಕರ ಸ್ನೇಹವುಳ್ಳವರಾಗಿರುವರು. ಅಂತ್ಯಕಾಲಕ್ಕೆ ಉಪೇಕ್ಷೆಯಂ ಮಾಡುವರು. ಆದುದರಿಂದ ವಿವೇಕವಂ ಪಡೆದು ಸರ್ವಕಾಲದಲ್ಲಿಯೂ ಜಾಗರೂಕನಾಗಿರಬೇಕು. ನಾಲಗೆಯು ಚೆನ್ನಾಗಿರುವಾಗ ಶ್ರೀಹರಿಯ ಗುಣಗಳಂ ಪಾಡಬೇಕು; ಕೈಯು ನಿಜನಿಷ್ಠೆಯಿಂದಿರುವಾಗ ಶ್ರೀಹರಿಯಂ ಪೂಜಿಸಬೇಕು. ಕಾಲು ಚೆನ್ನಾಗಿರುವಾಗ ಶ್ರೀಹರಿಯ ಕೀರ್ತನರಂಗದಲ್ಲಿ ನಿರ್ಲಜ್ಜನಾಗಿ ಕುಣಿಯಬೇಕು. ಕಿವಿಗಳು ಗ್ರಹಣಶಕ್ತಿಗೊಂಡಿರುವಾಗ ಭಕ್ತರ ಚರಿತ್ರೆಗಳಂ ವಿಶ್ವಾಸದಿಂದ ಶ್ರವಣಮಾಡಬೇಕು. ಶರೀರದಲ್ಲಿ ಶಕ್ತಿಯಿರುವಾಗಲೇ ತೀರ್ಥಯಾತ್ರೆಯಂ ಮಾಡಬೇಕು. ಕಣ್ಣುಗಳು ಚೆನ್ನಾಗಿ ಕಾಣುತಿರುವಾಗ ಶ್ರೀಹರಿಯನ್ನು ಪ್ರೀತಿಯಿಂದ ನೋಡಬೇಕು-ಎಂದು ಮನದಲ್ಲಿ ನಿಶ್ಚಯಿಸಿ ಜಸವಂತನು ಜಾಗರೂಕನಾಗಿ ಧರ್ಮಸಂಗ್ರಹದಲ್ಲಿಯೇ ನಿರತನಾಗಿದ್ದನು.

ಆತನ ಮಡದಿಮಕ್ಕಳು ಆತನ ವೃತ್ತಿಯಂ ನೋಡಿ ಸೈರಿಸಲಾರದೆ-ಈತನು ನಮ್ಮ ಶತ್ರು; ನಮ್ಮ ಭಾಗ್ಯವೆಲ್ಲವನ್ನೂ ಮುಳುಗಿಸುತ್ತಿರುವನು-ಎಂದು ಕೆಲವು ದ್ರವ್ಯಗಳನ್ನು ಕದ್ದು ಬೇರೆ ತೆಗೆದಿರಿಸಿದರು. ದುರ್ಜನನಿಗೆ ಸಜ್ಜನನು ಇಷ್ಟನಾಗನು. ಕಳ್ಳನಿಗೆ ಬೆಳದಿಂಗಳು ಆಗದು. ಪತಿವ್ರತೆಯ ಕೀರ್ತಿಯಂ ಕೇಳಿ ವ್ಯಭಿಚಾರಿಣಿಯು ಅಸಹನೆಗೊಳ್ಳುವಳು. ಸೂರ್ಯೋದಯವಂ ಕಂಡು ಗೂಗೆಯು ಸಂತಪಿಸುವುದು. ಸುಜ್ಞಾನಿಯಾದ ಪಂಡಿತನಂ ಕಾಣಲು, ಮೂರ್ಖನಿಗೆ ವ್ಯಸನವುಂಟಾಗುವುದು. ಹೇಡಿಗೆ ಪ್ರತಾಪಿಯಾದ ಪುರುಷನು ಇಷ್ಟನಾಗನು. ಕರ್ಮನಿಷ್ಠನಾದ ಬ್ರಾಹ್ಮಣನಂ ಕಂಡು ಭ್ರಷ್ಟನು ಸಂತಾಪಪಡುವನು. ಅಂತು ಸಜ್ಜನನಾದ ಜಸವಂತನನ್ನು ಕಂಡು ದುರಾಚಾರಿಗಳಾದ ಅವನ ಮಕ್ಕಳು ದ್ವೇಷಿಸುತಿದ್ದರು. ರಾಜಸನ್ನಿಧಿಯಲ್ಲಾದರೂ ಹೇಳಿಕೊಳ್ಳಬೇಕು; ಇಲ್ಲದಿದ್ದರೆ ಎಂತಾದರೂ ಇವನನ್ನು ಕೊಂದುಬಿಡಬೇಕು-ಎಂದು ಮನದಲ್ಲಿ ನಿಶ್ಚಯಿಸಿ ಆ ದುಷ್ಟರೈವರೂ ಅರಮನೆಗೆ ಹೋಗಿ ರಾಜನನ್ನು ಕುರಿತು—ನಮ್ಮ ತಂದೆಯು ಅವಿವೇಕದಿಂದ ಮನಸ್ಸುಬಂದಂತೆ ಧನವೆಲ್ಲವನ್ನೂ ವ್ರಯಮಾಡುತ್ತಿರುವನು. ನಮ್ಮಲ್ಲಿ ದ್ರವ್ಯವು ಇದ್ದರೆ ಅದು ನಿಮ್ಮದೇ ಆಗಿರುವುದು. ಆವಶ್ಯಕತೆಯುಂಟಾದಾಗ ನಾವು ಉಪಯೋಗಿಸುವೆವು. ಆದಕಾರಣ ನಮ್ಮ ತಂದೆಯನ್ನು ಕರೆತರಿಸಿ ಶಿಕ್ಷಿಸಬೇಕು—ಎಂತು ಬೇಡಿಕೊಳಲು, ಆ ಅವಿವೇಕಿರಾಜನು ಆ ದುಷ್ಟರಮಾತನ್ನು ಕೇಳಿ ಸ್ವಲ್ಪವೂ ವಿಚಾರಮಾಡದೆ ಜಸವಂತನನ್ನು ಕರೆಯಿಸಿದನು.

ಎಲ್ಲಿ ರಾಜನು ಅವಿವೇಕಿಯಾಗಿಯೂ, ಅಧರ್ಮಪ್ರವರ್ತಕನಾಗಿಯೂ, ಪ್ರಧಾನನು ದುರ್ಜನನಾಗಿಯೂ ಇರುವರೋ, ಭಾಗವತರೂ ನದೀಜಲವೂ ಎಲ್ಲಿ ಇಲ್ಲವೋ, ಎಲ್ಲಿ ಸಾಧುಗಳಿಲ್ಲವೋ, ಎಲ್ಲಿ ಹರಿಕೀರ್ತನೆಯೂ ಆತ್ಮವಿಚಾರವೂ ಪುರಾಣಶ್ರವಣವೂ ಇಲ್ಲವೋ, ಎಲ್ಲಿ ಸಾಧುಕಾರರೂ ವಿವೇಕಿಗಳಾದ ಪುರುಷರೂ ಇಲ್ಲವೋ, ಆಸ್ಥಳದಲ್ಲಿ ಸಜ್ಜನನು ಒಂದು ಕ್ಷಣವಾದರೂ ನಿಲಬಾರದು.

ರಾಜನು ಜಸವಂತನನ್ನು ನೋಡಿ—ನೀನು ಅದೇಕೆ ಅವಿವೇಕದಿಂದ ಉನ್ಮತ್ತನಾಗಿರುವೆ? "ಸ್ವೇಚ್ಛೆಯಿಂದ ಮನೆಯ ಧನವನ್ನು ಮಕ್ಕಳಿಗೆ ತಿಳಿಯದಂತೆ ಯಾಚಕರಿಗೆ ಹಂಚುತ್ತಿರುವನು" ಎಂದು ಕೇಳುವೆನು-ಎನಲು, ಜಸವಂತನು—ನಾನು ಅಂತು ಉನ್ಮತ್ತನೇ ಸರಿ. ಶ್ರೀರಾಮಭಜನೆಯಲ್ಲಿ ಪ್ರೀತಿಯನ್ನಿಟ್ಟ ಮಹನೀಯರಾದ ಸಂತರಂ ಪೂಜಿಸುವುದಕ್ಕೋಸ್ಕರ ನನ್ನ ಧನವನ್ನು ನಾನು ವ್ಯಯಮಾಡುತ್ತಿರುವೆನು-ಎಂದು ಉತ್ತರವಂ ಕೊಟ್ಟನು.

ರಾಜನು ಆತನ ಮಾತನ್ನು ಕೇಳಿ ಪಂಜರದೊಳಗಣ ಗಿಳಿಯ ಸವಿನುಡಿಯಂ ಕೇಳಿ ದುರಭಿನಿವೇಶದಿಂದ ಕನಲುವ ಗಿಡಗನಂತೆ ಕನಲ್ದು ಆತನ ಮಕ್ಕಳಂ ಕರೆಯಿಸಿ ಅವರಂ ಕುರಿತು—ನಿಮಗೋಸ್ಕರ ಇವನನ್ನು ಕೊಲಿಸಬೇಕೆಂದಿರುವೆನು. ಈ ವಿಷಯದಲ್ಲಿ

ನಿಮ್ಮ ಇಷ್ಟವೇನು ?–ಎಂದು ಬೆಸಗೊಳಲು, ಅವರು-ಇವನು ನಮ್ಮ ತಂದೆಯಲ್ಲ. ನಮ್ಮ ಶತ್ರು. ಈಕ್ಷಣದಲ್ಲಿ ಇವನನ್ನು ಮೊಟ್ಟೆಕಟ್ಟಿಸಿ ನೀರಿನಲ್ಲಿ ಹಾಕಿಸಬೇಕು-ಎಂದು ಹೇಳಿಕೊಂಡರು.

ಅರಸನು ಅವರ ಮಾತಿನಂತೆ ಜಸವಂತನಂ ಮೊಟ್ಟೆಕಟ್ಟಿಸಿ ಪಾಷಾಣವಂ ಬಿಗಿದು ನೀರು ತುಂಬಿರುವ ಒಂದು ಜಲಾಶಯದಲ್ಲಿ ಹಾಕಿಸಿದನು.

ಆಗ ಭಕ್ತವತ್ಸಲನಾದ ಜಾನಕೀಪತಿಯು ಭಕ್ತನ ಸಂಕಟವನರಿತು ತ್ವರೆಯಿಂದ ಪ್ರಸನ್ನನಾಗಿ ಆನೆಯರೂಪವಂ ತಾಳ್ದು ಜಲಾಶಯವಂ ಪೊಕ್ಕು ತನ್ನ ಬೆನ್ನಿನ ಮೇಲೆ ಆತನನ್ನು ಹಿಡಿದನು. ಜಸವಂತನು ಅರಸನನ್ನು ಕುರಿತು-ಎಲೆ ವಿಚಾರಪರನಲ್ಲದ ರಾಜನೆ! ಯಾವನು ಸ್ತಂಭವಿಲ್ಲದೆಯೆ ಆಕಾಶವನ್ನು ಎತ್ತಿ ಹಿಡಿದಿರುವನೋ. ಸೂರ್ಯಚಂದ್ರರು ಯಾವನ ಕಾಂತಿಯಿಂದ ಪ್ರಕಾಶಿಸುತ್ತಿರುವರೋ ; ಯಾವನ ಪ್ರಭಾವದಿಂದ ನೀರಲ್ಲಿ ಕಲ್ಲುಗಳು ತೇಲಿದುವೋ ಆ ಜಾನಕೀರಮಣನಾದ ರಘುನಂದನನು ಜಸವಂತನನ್ನು ನೀರಲ್ಲಿ ಎತ್ತಿ ಹಿಡಿದು ರಕ್ಷಿಸುತ್ತಿರುವನು. ಪ್ರತ್ಯಕ್ಷವಾಗಿದೆ ; ನೋಡು-ಎನಲು, ಆ ಅರಸನು ಅನಾಕುಲನಾಗಿ ನೀರಮೇಲೆಯೇ ಇರುವ ಜಸವಂತನನ್ನು ನೋಡಿ ವಿಸ್ಮಿತನಾಗಿ ಮನದಲ್ಲಿ ಪಶ್ಚಾತ್ತಾಪಗೊಂಡು ಜನಗಳನ್ನು ನೀರಿನಲ್ಲಿ ಇಳಿಸಿ ಜಸವಂತನನ್ನು ಬರಿಸಿ ಮೊಟ್ಟೆಯಂ ಬಿಚ್ಚಿಸಿ ಆತನ ಕಾಲ್ಗಳಿಗೆ ಎರಗಿ ಬದ್ಧಾಂಜಲಿಪುಟನಾಗಿ–-ಎಲೆಭಗವದ್ಭಕ್ತಶಿರೋಮಣಿಯೇ ! ನನ್ನಿಂದ ಅಪರಾಧವಾಯಿತು. ದಯೆಯಿಟ್ಟು ಕ್ಷಮಿಸಬೇಕು-ಎಂದು ದೈನ್ಯದಿಂದ ಪ್ರಾರ್ಥಿಸಿ ಆತನ ಮಕ್ಕಳಂ ಶಿಕ್ಷಿಸಿ–ನಿಮ್ಮ ತಂದೆಗೆ ನೀವು ಶರಣಾಗತರಾಗಬೇಕೆಂದು ಆಜ್ಞಾಪಿಸಿದನು.

ಬಳಿಕ ಅವರು ದುರ್ಬುದ್ಧಿಯಂ ಬಿಟ್ಟು ತಂದೆಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಆತನ ಭಕ್ತಿವಿಶೇಷಕ್ಕೆ ಸಂತೋಷಗೊಂಡು ಪ್ರೀತಿಯಿಂದ ಪೂಜಿಸುತ್ತಬಂದರು.

ಎಲೈ ಶ್ರೋತೃಗಳಿರಾ! ಮತ್ತೊಂದು ಸತ್ಕಥೆಯಂ ನುಡಿವೆನು ; ಆಲಿಸಿ.

ಸುರದಾಸಮದನಮೋಹನನೆಂಬವನೊಬ್ಬನಿದ್ದನು. ಆತನ ಚರಿತ್ರೆಯು ಪಾವನವಾದುದು. ಹಸ್ತಿನಾಪುರದಲ್ಲಿ ಅಕಬರ್‌ರಾಜನ ಬಳಿಯಲ್ಲಿ ಆತನು ಸೇವಕನಾಗಿದ್ದನು. ದಿನಕ್ರಮದಿಂದ ಆತನಿಗೆ ಮಧುರಾಪಟ್ಟಣದ ಮುಖ್ಯಾಧಿಕಾರವು ಪ್ರಾಪ್ತವಾಯಿತು. ಆತನು ಅಲ್ಲಿಯೇ ಇರುತ್ತ ಸಂತರ ಸತ್ಕಾರದಲ್ಲಿ ನಿರತನಾಗಿದ್ದನು. ಮಧುರಾಗೋಕುಲ ಬೃಂದಾವನಗಳು ಪುರಾತನಮಹಾಕ್ಷೇತ್ರಗಳು. ಶ್ರೀಕೃಷ್ಣನ ಲೀಲಾವಿಶೇಷಗಳಿಂದ ಮಹಾಮಹಿಮೆಯುಳ್ಳುವುಗಳು. ಅದರಿಂದ ಪುಣ್ಯವಂತರಾದ ಅನೇಕಸಾಧುಗಳು ಅಲ್ಲಿ ವಾಸವಂ ಮಾಡಿಕೊಂಡಿರುವರು. ಅವರು ಸಂಸಾರದಲ್ಲಿ ವಿರಕ್ತರಾಗಿ ಭಗವದ್ಭಜನದಲ್ಲಿ ತತ್ಪರರಾಗಿರುವರು.

ತಾಯಿಯ ಬಯಕೆಗಳಂ ಪೂರೈಸಲು, ಗರ್ಭವು ತೃಪ್ತವಾಗುವಂತೆ, ಮಗನಿಗೆ ವಿಜಯವುಂಟಾಗಲು ತಂದೆಯು ಸಂತೋಷಪಡುವಂತೆ, ತನ್ನ ಭಕ್ತರಿಗೆ ಪೂಜೆಯು

ಊಟವಾಗಲು ಶ್ರೀಹರಿಯು ಸಂತೋಷಿಸುವನು. ಬೇರಿಗೆ ನೀರಂ ಸೇಚನೆಮಾಡಲು, ಮರದಕೊಂಬೆ ಕಳಕಳಿಸುವಂತೆ, ಬಾಲಕನಿಗೆ ಒಡವೆಗಳಂ ತುಡಿಸಲು, ತಾಯಿಯು ಆನಂದಪಡುವಂತೆ ಭಕ್ತರಿಗೆ ಸನ್ಮಾನವಂ ಮಾಡಲು, ಶ್ರೀಪತಿಯು ಉಲ್ಲಾಸಗೊಳ್ಳುವನು—ಎಂದು ಸುರದಾಸಮೋಹನನು ಮನದಲ್ಲಿ ಎಣಿಸಿ ಶ್ರೀಹರಿಯ ಭಕ್ತರಾದ ಸಾಧುಗಳನ್ನು ಸರಸತರವಾದ ಭಕ್ಷ್ಯಭೋಜ್ಯಗಳಿಂದಲೂ ಬಗೆಬಗೆಯ ಸ್ವಾದುಫಲಗಳಿಂದಲೂ ವಸ್ತ್ರಭೂಷಣಗಳಿಂದಲೂ ಸತ್ಕರಿಸುತ್ತ ದ್ರವ್ಯವನ್ನು ವ್ಯಯಮಾಡುತಿದ್ದನು. ಈತು ಸತ್ಪಾತ್ರಗಳಲ್ಲಿ ದ್ರವ್ಯವ್ಯಯವಂ ಮಾಡುತಿರಲು, ಶ್ರೀರುಕ್ಮಿಣೀಕಾಂತನು ಸಂತುಷ್ಟನಾದನು.

ಸುರದಾಸನು ಪ್ರಾಪಂಚಿಕವ್ಯವಹಾರದಲ್ಲಿದ್ದರೂ ಕೇವಲವಿರಕ್ತನಾಗಿ ಸಾಧುಸೇವೆಯಲ್ಲಿ ನಿಮಗ್ನನಾದನು. ಕೆಲವುದಿನಗಳು ಕಳೆಯುವುದೂ ತನ್ನ ಹಣವೆಲ್ಲವೂ ಮುಗಿದುಹೋಯಿತು. ಬಳಿಕ ಚಿಂತಾಕ್ರಾಂತನಾಗಿ—ಇನ್ನುಮೇಲೆ ಸಾಧುಸತ್ಕಾರವು ಕಡಿಮೆಯಾಗುವಂತಹಸ್ಥಿತಿಯೊದಗಿತಲ್ಲಾ! ಭಾಗವತರಿಗೆ ಅನ್ನದಾನವಂ ಮಾಡದೆ ಬದುಕಲೇನುಪ್ರಯೋಜನ? ಅರಮನೆಯ ದ್ರವ್ಯವು ನನ್ನ ಸ್ವಾಧೀನತೆಯಲ್ಲಿಯೇ ಇರುವುದು. ಅದನ್ನು ವ್ಯಯಮಾಡಿ ಸಾಧುಗಳ ಸತ್ಕಾರವಂ ನೆರವೇರಿಸಬೇಕು. ರಾಜನು ಕೋಪಗೊಂಡು ನನ್ನನ್ನು ಕೊಲಿಸಿದರೂ ನನ್ನ ದೇಹವು ಸಾರ್ಥಕವಾಗುವುದು. ಭವರೋಗನಿರಸನವಾಗುವುದು—ಎಂದು ಮನದಲ್ಲಿ ಬಗೆದು ದೃಢನಿಶ್ಚಯವಂ ಮಾಡಿ ರಾಜಕೀಯಕೋಶವಂ ಒಡೆದು ಶ್ರೀವಿಷ್ಣುಭಕ್ತರ ಸೇವೆಯಲ್ಲಿ ತತ್ಪರನಾಗಿ ನಿತ್ಯವೂ ಭಕ್ಷ್ಯಭೋಜ್ಯಾನ್ನಗಳಂ ಮಾಡಿಸಿ ಮಹನೀಯರನ್ನು ಸತ್ಕರಿಸಿ ತೃಪ್ತಿಪಡಿಸುತಿದ್ದನು. ಮಥುರಾಗೋಕುಲಬೃಂದಾವನಾದಿಪುಣ್ಯಕ್ಷೇತ್ರಗಳಲ್ಲಿದ್ದ ಸಜ್ಜನರಿಗೆಲ್ಲರಿಗೂ ವಸ್ತ್ರಭೂಷಣಗಳನ್ನೂ ದೇವತಾರ್ಚನೋಪಕರಣಗಳನ್ನೂ ಕೊಟ್ಟನು. ಅನೇಕಧರ್ಮಶಾಲೆಗಳನ್ನು ಕಟ್ಟಿಸಿದನು. ಅನೇಕಸತ್ಕಾರ್ಯಗಳನ್ನು ಮಾಡಿದನು. ಇದರಿಂದ ಎಂಬತ್ತುಲಕ್ಷದ ಹತ್ತುಸಾಸಿರ ದ್ರವ್ಯವು ವೆಚ್ಚವಾಗಿಹೋಯಿತು.

ಆಗ ಆತನಲ್ಲಿ ಪ್ರಧಾನನಾಗಿದ್ದ ದುರಾಚಾರನೊಬ್ಬನು ಸಹಿಸದೆ ಸಂತಾಪಗೊಂಡು ಹಸ್ತಿನಾಪುರಕ್ಕೆ ಹೋಗಿ ರಾಜನನ್ನು ಕಂಡು—ಮಧುರೆಯಲ್ಲಿ ಸುರದಾಸಮದನಮೋಹನನನ್ನು ಅಧಿಕಾರದಲ್ಲಿ ಇಟ್ಟಿರುವಿರಿ. ಅವನು ಲಕ್ಷ್ಯಮಾಡದೆ ಅರಮನೆಯ ಹಣವೆಲ್ಲವನ್ನೂ ವ್ಯರ್ಥವಾಗಿ ಸೂರೆಗೊಳಿಸಿರುವನು--ಎಂದು ನಡೆದ ಸಂಗತಿಯನ್ನು ವಿಸ್ತರದಿಂದ ತಿಳಿಯಿಸಿದನು.

ರಾಜನು ಆನುಡಿಯಂ ಕೇಳಿ ಬಹುಕ್ರೋಧಾವಿಷ್ಟನಾದನು. ಯಜ್ಞೇಶ್ವರನಲ್ಲಿ ಮಾಡಿದ ಆಜ್ಯಾಹುತಿಯು ಅಜ್ಞಾನಿಗೆ ವ್ಯರ್ಥವಾಗಿ ತೋರುವುದು. ತುಳಸಿಗೆ ನೀರೆರೆದುದು ಮೂಢನಿಗೆ ನಿಷ್ಫಲವಾಗಿತೋರುವುದು. ಅತಿಥಿಗೆ ಅನ್ನದಾನಮಾಡಿದುದು ಲುಬ್ಧನಿಗೆ ಸೂರೆಯಾದಂತೆ ತೋರುವುದು. ಬ್ರಾಹ್ಮಣನು ಪವಮಾನಸೂಕ್ತವಂ ಪಠಿಸು

ವುದು ವೃಷಲನಿಗೆ ಬಗುಳಾಟವಾಗಿತೋರುವುದು. ಭಕ್ತನು ಭಜನತತ್ಪರನಾಗಿದ್ದರೆ ಅದು ನಿಂದಕನಿಗೆ ವ್ಯರ್ಥವಾಗಿತೋರುವುದು. ಅಂತು ಭಕ್ತಿಯಿಂದ ಭಾಗವತರಿಗೋಸ್ಕರ ಸುರದಾಸಮದನಮೋಹನನು ಮಾಡಿದ ದ್ರವ್ಯದ ವೆಚ್ಚವು ಆದುರ್ಮತಿಗೆ ವ್ಯರ್ಥವೆಂದು ತೋರಲು, ರಾಜನಿಗೆ ಚಾಡಿಯಂ ಹೇಳಿದನು.

ಬಳಿಕ ಕ್ರೋಧಾವಿಷ್ಟನಾದ ರಾಜನು, ಮಥುರೆಯಲ್ಲಿರುವ ಎಲ್ಲಾ ದ್ರವ್ಯವನ್ನೂ ತೆಗೆಯಿಸಿಕೊಂಡು ಈಕ್ಷಣ ಬರಬೇಕೆಂದು ಆಜ್ಞಾಪತ್ರವಂ ಬರೆದುಕೊಟ್ಟು ದೂತರಂ ಕಳುಹಿಸಿಕೊಟ್ಟನು.

ಅವರು ಮಥುರೆಯಂ ಸೇರಿ ಸುರದಾಸನ ಮನೆಯಂ ಸಾರ್ದು ಆತನಂ ಕುರಿತು ಕೋಪಯುಕ್ತರಾಗಿ, ಎರಡುವರ್ಷದಿಂದ ಈ ದೇಶದ ಹಣವನ್ನೇ ಕಳುಹಿಸಲಿಲ್ಲವೆಂದು ಮಹಾರಾಜರು ನಿಮ್ಮ ವಿಷಯದಲ್ಲಿ ಅಸಮಾಧಾನಗೊಂಡು ನಿಮ್ಮನ್ನು ಈಗಳೇ ಸನ್ನಿಧಿಗೆ ಕರೆದುಕೊಂಡು ಬರುವಂತೆ ಅಪ್ಪಣೆಮಾಡಿರುವರು. ನಿಮ್ಮ ವಶದಲ್ಲಿರುವ ದೇಶದ ಹಣವೆಲ್ಲವನ್ನೂ ತೆಗೆದುಕೊಂಡು ಈಕ್ಷಣವೇ ಹೊರಟು ನಡೆಯಬೇಕು. ಇಲ್ಲದಿದ್ದರೆ ನಿಮ್ಮನ್ನು ರಾಜಾಜ್ಞಾಪ್ರಕಾರದಿಂದ ಕಟ್ಟಿ ತೆಗೆದುಕೊಂಡು ಹೋಗುವೆವು—ಎನಲು, ಸುರದಾಸಮದನಮೋಹನನು ಅವರನ್ನು ಕುರಿತು—ಮಹಾರಾಜರು ವ್ಯರ್ಥವಾಗಿ ನನ್ನ ಮೇಲೆ ಕೋಪಗೊಂಡಿರುವರು. ನಾನು ದ್ರವ್ಯವಂ ಕೊಟ್ಟು ಅಮೂಲ್ಯರತ್ನಗಳಂ ತೆಗೆದಿಟ್ಟಿರುವೆನು. ಅವಂ ತೋರಿಸಿದ ಬಳಿಕ ಮಹಾರಾಜರು ಬಹುಸಂತೋಷವಂ ತಾಳುವರು. ಆ ರತ್ನಗಳಿಗೆ ಪರೀಕ್ಷಕರಿಂದ ಕ್ರಯವನ್ನು ಕಟ್ಟಿಸಿದರೆ ದ್ವಿಗುಣವಾಗುವುದು-ಎಂದು ನುಡಿದು, ಬಳಿಕ ಒಳಹೊಕ್ಕು ಒಳಗೆ ಇದ್ದ ಎರಡು ಪೆಟ್ಟಿಗೆಗಳಂ ಸಿದ್ಧಮಾಡಿ ಅದರಲ್ಲಿ ಹರಲುಕಲ್ಲುಗಳಂ ತುಂಬಿ, ಎಂಬತ್ತು ಲಕ್ಷದ ಹತ್ತುಸಾಸಿರದ್ರವ್ಯವು ಮಹನೀಯರಾದ ಸಾಧುಗಳಿಗೋಸ್ಕರ ವೆಚ್ಚಗೊಳಿಸಲ್ಪಟ್ಟಿತು. ಸುರದಾಸನು ಭಯಪಟ್ಟು ಅರ್ಧರಾತ್ರದಲ್ಲಿ ಓಡಿಹೋದನು; ಸಾಧುಸತ್ಕಾರದಿಂದ ಭಗವಂತನು ಸುಪ್ರೀತನಾಗಿದ್ದರೆ ಈ ಪೆಟ್ಟಿಗೆಗಳಲ್ಲಿ ತುಂಬಿರುವ ಕಲ್ಲುಗಳೆಲ್ಲವೂ ರತ್ನಗಳೇ ಆಗುವುವು—ಎಂದು ಪತ್ರಿಕೆಯಂ ಬರೆದು ಅದನ್ನು ಆ ಪೆಟ್ಟಿಗೆಯಲ್ಲಿಯೇ ಇಟ್ಟು ಬೀಗವಂ ಹಾಕಿ ಅದರಮೇಲೆ ಮುದ್ರೆಯಂ ಮಾಡಿ ಬಾಗಿಲಲ್ಲಿ ಇದ್ದ ರಾಜದೂತರ ಬಳಿಗೆ ತೆಗೆದುಕೊಂಡು ಬಂದು ಈಅಮೂಲ್ಯರತ್ನಂಗಳಂ ತೆಗೆದುಕೊಂಡು ಮನೆಯಲ್ಲಿರಿಸಿದ್ದೆನು. ಮಹಾರಾಜರ ಸಂದರ್ಶನಕ್ಕೋಸ್ಕರ ನಾನೂ ಬರಬೇಕೆಂದೇ ಅಪೇಕ್ಷಿಸಿಕೊಂಡಿದ್ದೆನು-ಎಂದನು.

ಆ ದೂತರು ಆ ಪೆಟ್ಟಿಗೆಗಳನ್ನು ನೋಡಿ ಸುರದಾಸನ ಮಾತನ್ನು ಕೇಳಿ ಸಂತೋಷಪಟ್ಟು-ನೀವು ಬುದ್ಧಿವಂತರು ; ಸ್ವಾಮಿಕಾರ್ಯದಲ್ಲಿ ಅತಿತತ್ಪರರು. ನಿಮ್ಮ ವಿಷಯದಲ್ಲಿ ಮಹಾರಾಜರು ಕೋಪಿಸಿಕೊಂಡುದು ವ್ಯರ್ಥವೇ ಸರಿ-ಎಂದು ಅಭಿನಂದಿಸಿದರು.

ಸುರದಾಸನು ಆ ದೂತರನ್ನು ಭಕ್ಷ್ಯಭೋಜ್ಯಾದಿಗಳಿಂದ ಸತ್ಕರಿಸಿ ವಸ್ತ್ರಭೂಷಣಂಗಳಂ ಕೊಟ್ಟು ಸಂತೋಷಪಡಿಸಿದನು. ಅಂದು ಅವರು ರಾತ್ರಿಯಲ್ಲಿ ನಿದ್ರೆಗೈಯು

ತಿರುವಾಗ ಓಡಿಹೋಗಿ ಒಂದು ಅರಣ್ಯದಲ್ಲಿ ಭಗವದ್ಭಜನವನ್ನು ಮಾಡುತ್ತ ಕುಳಿತು ಕೊಂಡನು.

ಬಳಿಕ ಸೂರ್ಯೋದಯವಾಗುವುದೂ ರಾಜದೂತರು ಎದ್ದು ಸುರದಾಸನಂ ನೋಡಲು, ಅವನು ಕಾಣಲಿಲ್ಲ. ಮನೆಯಲ್ಲಿಯೂ ಪಟ್ಟಣದಲ್ಲಿಯೂ ಪಟ್ಟಣದ ಸುತ್ತ ಅರಣ್ಯದಲ್ಲಿಯೂ ಹುಡುಕಿದರೂ ಗೋಚರನಾಗಲಿಲ್ಲ. ರಾಜಭಯದಿಂದ ಎಲ್ಲಿಯೋ ತಪ್ಪಿಸಿಕೊಂಡು ಹೋದನೆಂದು ನಿಶ್ಚಯಿಸಿದರು. ಈ ವೃತ್ತಾಂತವನ್ನು ರಾಜನು ಕೇಳಿ ದರೆ ತಮ್ಮನ್ನು ಶಿಕ್ಷಿಸದೆ ಇರನು—ಎಂದು ಚಿಂತಿಸಿ ಭಯಪಟ್ಟು ತಮ್ಮ ವಶದಲ್ಲಿದ್ದ ರತ್ನ ಪೇಟಿಕೆಗಳನ್ನು ಕಂಡು ಸ್ವಲ್ಪಸಮಾಧಾನವಂ ತಾಳಿ, ಈ ರತ್ನಪೇಟಿಕೆಗಳನ್ನು ಸಮರ್ಪಿ ಸಿದರೆ ರಾಜನು ತಮ್ಮ ಮೇಲೆ ಕೋಪಿಸಿಕೊಳ್ಳನೆಂದು ಬಗೆದು ಹಸ್ತಿನಾವತಿಯಂ ಸೇರಿ ರಾಜಸನ್ನಿಧಿಯಂ ಸಾರ್ದು ರಾಜನಿಗೆ ವಂದಿಸಿ ಮುಂದೆ ಪೆಟ್ಟಿಗೆಗಳಂ ಇರಿಸಿ—ಮಹಾ ಸ್ವಾಮಿ ! ಸುರದಾಸನು ಕಾರ್ಯದಕ್ಷನು; ಬುದ್ಧಿವಂತನು. ಅಮೂಲ್ಯರತ್ನಗಳಂ ತೆಗೆದು ತನ್ನ ಮನೆಯಲ್ಲಿ ಇಟ್ಟುಕೊಂಡು ನಿರ್ಭಯನಾಗಿ ತಮ್ಮ ಸಂದರ್ಶನಕ್ಕೆ ಬರಬೇ ಕೆಂದೇ ಇದ್ದನು. ನೀವು ದುರ್ಬುದ್ಧಿಯ ಮಾತಂ ಕೇಳಿ ಆತನನ್ನು ಇಲ್ಲಿಗೆ ಕರೆದು ತರುವಂತೆ ಹೇಳಿ ನಮ್ಮನ್ನು ಕಳುಹಿಸಿದಕಾರಣ ನಾವು ಹೋಗಿ ಮನೆಯ ಬಾಗಿಲಲ್ಲಿ ಕುಳಿತುಕೊಳ್ಳುವುದೂ, ತಾನು ಭಯಪಟ್ಟು ರತ್ನಗಳ ಪೆಟ್ಟಿಗೆಗಳನ್ನು ನಮ್ಮ ವಶಕ್ಕೆ ಕೊಟ್ಟು ಎಲ್ಲಿಯೋ ಓಡಿಹೋದನು-ಎಂದು ಬಿನ್ನವಿಸಿದರು.

ರಾಜನು ಅವರ ಮಾತಂ ಕೇಳಿ ವಿಸ್ಮಯಗೊಂಡು ಪೆಟ್ಟಿಗೆಗಳ ಬೀಗವನ್ನು ತೆಗೆಯಿಸಿ ನೋಡಲು ಕಲ್ಲುಗಳೆಲ್ಲವೂ ರತ್ನಗಳಾಗಿದ್ದುವು. ರಾಜನು ಪರಮಸಂತೋ ಷವಂ ತಾಳಿದನು. ಅದರಲ್ಲಿ ಒಂದು ಪತ್ರಿಕೆಯು ಕಂಡಿತು; ಅದನ್ನು ತೆಗೆಯಿಸಿ ಓದಿಸಿದನು. ಎಂಬತ್ತು ಲಕ್ಷದ ಹತ್ತುಸಾಸಿರ ದ್ರವ್ಯವು ಮಹನೀಯರಾದ ಸಾಧುಗಳ ಗೋಸ್ಕರ ವೆಚ್ಚಗೊಳಿಸಲ್ಪಟ್ಟಿತು. ಸುರದಾಸನು ಭಯಪಟ್ಟು ಅರ್ಧರಾತ್ರದಲ್ಲಿ ಓಡಿಹೋದನು. ಸಾಧುಸತ್ಕಾರದಿಂದ ಭಗವಂತನು ಸುಪ್ರೀತನಾಗಿದ್ದರೆ ಈ ಪೆಟ್ಟಿಗೆ ಗಳಲ್ಲಿ ತುಂಬಿರುವ ಕಲ್ಲುಗಳೆಲ್ಲವೂ ರತ್ನಗಳೇ ಆಗುವುವು" ಎಂದು ಬರೆದಿದ್ದು ದನ್ನು ಕೇಳಿ ಆಶ್ಚರ್ಯಗೊಂಡು ಸುರದಾಸನ ಮನೋನಿಶ್ಚಯಕ್ಕೆ ಸಂತೋಷಿಸಿ, ಅಮೂ ಲ್ಯವಾದ ರತ್ನಗಳನ್ನು ಬೊಕ್ಕಸದಲ್ಲಿ ಇರಿಸಿ, ಚಾಡಿಹೇಳಿದ ದುರ್ಬುದ್ಧಿಯನ್ನು ಕರೆ ಯಿಸಿ—ಸುರದಾಸನು ಸತ್ಪಾತ್ರದಲ್ಲಿ ದ್ರವ್ಯವ್ಯಯವಂ ಮಾಡಿರುವನು. ನೀನು ನಮ್ಮ ಸಂಗಡ ವ್ಯರ್ಥವಾಗಿ ಬೊಕ್ಕಸವನ್ನು ಸೂರೆಮಾಡಿದನೆಂದು ಅಸತ್ಯವಾದ ಮಾತನ್ನು ಆಡಿದೆ. ನೀನು ಭಾಗವತದ್ರೋಹಿ; ನೀನು ಶಿಕ್ಷೆಗೆ ಅರ್ಹನು-ಎಂದು ಅವನಂ ಶಿಕ್ಷಿಸಿ, ಪತ್ರಿಕೆಯಲ್ಲಿ ಬರೆದಿರುವುದು ಸುರದಾಸನ ಸ್ವಹಸ್ತಾಕ್ಷರವೆಂದು ತಿಳಿದು ಆತನ ಧರ್ಮವಿಶೇಷದಿಂದ ಕಲ್ಲುಗಳೂ ಅಮೂಲ್ಯರತ್ನಗಳಾದುವೆಂದು ಸಂತೋಷಿಸಿ ಆತನು ಭಯಪಟ್ಟು ಓಡಿಹೋದುದಕ್ಕೆ ದುಃಖಗೊಂಡು ಪ್ರಧಾನನಂ ಕರೆಯಿಸಿ—ಸುರ

ದಾಸನಂತಹ ಮಹಾಮಹಿಮನಾದ ಅಧಿಕಾರಿಯು ಲೋಕದಲ್ಲಿ ಎಲ್ಲಿ ಹುಡುಕಿದರೂ ದೊರೆಯನು. ನಾನು ರಾಜ್ಯಮದದಿಂದ ಉನ್ಮತ್ತನಾಗಿದ್ದೆನು. ಆತನು ಸಾಧುಸತ್ಕಾರ ದಿಂದ ಪರಮಾರ್ಥಸಾಧನವಂ ಮಾಡಿಸಿದನು. ಆತನು ಎಲ್ಲಿದ್ದರೂ ಆತನಿಗೆ ಅಭಯ ವಚನವಂ ಕೊಟ್ಟು ಆತನನ್ನು ಕರೆದುತರಬೇಕು. ಈವಿಷಯದಲ್ಲಿ ಸಮಸ್ತದೇಶ ಗಳಿಗೂ ಪತ್ರಿಕೆಗಳಂ ಬರೆದು ಕಳುಹಿಸು-ಎಂದು ಆಜ್ಞೆ ಮಾಡಿದನು.

ಪ್ರಧಾನನು ಸಂತುಷ್ಟನಾಗಿ-ಸುರದಾಸನು ನಮ್ಮ ಭಯದಿಂದ ಅನುತಪ್ತನಾಗಿ ತೀರ್ಥಯಾತ್ರೆಗೆ ಹೊರಟುಹೋಗಿರುವನು. ಆತನನ್ನು ಕಂಡರೆ ಆತನಿಗೆ ಅಭಯವಂ ಹೇಳಿ ಆಕ್ಷಣ ನಮ್ಮಲ್ಲಿಗೆ ಕಳುಹಿಸಿಕೊಡಬೇಕು-ಎಂದು ರಾಜಾಜ್ಞೆಯಿಂದ ಲೇಖನ ಗಳಂ ಬರೆದು ಸಮಸ್ತದೇಶಗಳಿಗೂ ಕಳುಹಿಸಿಕೊಟ್ಟನು. ಈಸುದ್ದಿಯು ಎಲ್ಲಿಯೂ ಹರಡಿತು. ಸುರದಾಸನು ಮಧುರೆಯಲ್ಲಿಯೇ ಇದ್ದನು. ನಡೆದ ಸಂಗತಿಯಂ ಕೇಳಿ ಮನದಲ್ಲಿ ವಿಸ್ಮಿತನಾಗಿ-ಶ್ರೀರುಕ್ಮಿಣೀಪತಿಯು ಕೃಪಾಳುವು. ಆತನ ವ್ಯಾಪಾರವು ಯಾರಿಗೂ ತಿಳಿಯದು. ಆತನು ಅಘಟಿತಘಟನಾಸಾಮರ್ಥ್ಯವುಳ್ಳವನು; ಮಹಾಮಹಿ ಮನು. ಆತನ ಕೃಪೆಯಿಂದ ಕಲ್ಲುಗಳೂ ರತ್ನಗಳಾದುವು. ಮಹಾರಾಜನು ನನ್ನ ವಿಷಯದಲ್ಲಿ ಪ್ರಸನ್ನನಾಗಿರುವನು-ಎಂದು ಮನಸ್ಸಿಗೆ ಸಮಾಧಾನವಂ ತಂದುಕೊಂಡು ಹಸ್ತಿನಾವತಿಗೆ ಬಂದು ರಾಜನ ದರ್ಶನವಂ ಮಾಡಿದನು.

ರಾಜನು ಸುರದಾಸನಂ ಕಾಣುವುದೂ ಎದ್ದು ಆಲಿಂಗನವಂ ಮಾಡಿಕೊಂಡು-ಎಲೆ ಮಹನೀಯನೆ! ನಿನ್ನಂತಹ ಅಧಿಕಾರಿಯು ಎಲ್ಲಿ ಹುಡುಕಿದರೂ ನನಗೆ ದೊರೆ ಯನು. ನೀನು ಸತ್ಪಾತ್ರದಲ್ಲಿ ದ್ರವ್ಯವ್ಯಯವಂ ಮಾಡಿದೆ. ಅದು ಅನಂತವಾಗಿ ರತ್ನ ರೂಪವಾಗಿ ಪರಿಣಮಿಸಿತು. ನಾನು ಅಜ್ಞಾನದಿಂದ ತಿಳಿಯದೆ ದುರ್ಬುದ್ಧಿಯ ಮಾತಂ ಕೇಳಿ ನಿನ್ನನ್ನು ಭಳಿಸಿದೆನು. ನೀನು ಇನ್ನು ನಿರ್ಭಯನಾಗಿ ಪೂರ್ವದ ಅಧಿಕಾರವನ್ನೇ ಮಾಡುತಿರು--ಎನಲು; ಸುರದಾಸಮದನಮೋಹನನು ಅಭಿವಂದಿಸಿ-ಮಹಾರಾಜನೆ! ಲಾಲಿಸು. ನಾನು ಪ್ರಪಂಚದ ಆಶೆಯನ್ನೇ ಬಿಟ್ಟೆನು. ಮತ್ತೆ ನನ್ನನ್ನು ಆಶಾಪಾಶದಲ್ಲಿ ಏಕೆ ವ್ಯರ್ಥವಾಗಿ ಸಿಕ್ಕಿಸುವೆ?-ಎಂದು ಉತ್ತರವಂ ಹೇಳಿದನು.

ರಾಜನು-ನೀನು ನಿಶ್ಶೇಷವಾಗಿ ಮಾಯಾಭ್ರಾಂತಿಯನ್ನು ಬಿಟ್ಟಿರುವವನು; ಆದರೂ ನನಗೋಸ್ಕರ ನೀನು ನಿನ್ನ ಪೂರ್ವದ ಅಧಿಕಾರವನ್ನೇ ಪಡೆದು ದ್ರವ್ಯವಂ ಸಾಧು ಸತ್ಕಾರದಲ್ಲಿ ವೆಚ್ಚಮಾಡು. ಮಹನೀಯರನ್ನು ಸೇವಿಸುವುದರಲ್ಲಿ ನಿನಗಿಂತಲೂ ಬಲ್ಲ ವನು ಯಾವನೂ ಇಲ್ಲ. ಆ ದೇಶದ ಸಕಲದ್ರವ್ಯವನ್ನೂ ನೀನು ಭಾಗವತರ ಭೋಜನ ಸತ್ಕಾರದಲ್ಲಿ ನಿಶ್ಶಂಕನಾಗಿ ಉಪಯೋಗಿಸಬಹುದು. ನೀನು ಅನುತಪ್ತನಾಗಿ ಅಧಿಕಾ ರವನ್ನು ಬಿಟ್ಟಿದ್ದರೂ ಮತ್ತೆ ನನ್ನ ಮಾತಿನಿಂದ ವಹಿಸುವನಾಗು-ಎನಲು, ರಾಜನ ವಿನಯ ವಚನವಂ ಕೇಳಿ ಸುರದಾಸನು-ಸಂಸಾರಪ್ರಪಂಚದಲ್ಲಿಯೇ ಪರಮಾರ್ಥಸಾಧನವಾ ಗುತ್ತಿರುವುದು; ಆದಕಾರಣ ಅದನ್ನು ಬಿಡಬಾರದು-ಎಂದು ಆಲೋಚನೆಯಂ ಮಾಡಿ,

ರಾಜಾಜ್ಞೆಯೇ ಮುಖ್ಯವೆಂದು ಅಂಗೀಕರಿಸಿದನು. ಬಳಿಕ ರಾಜನು ಸನ್ಮಾನಿಸಿ ಆಜ್ಞಾ ಪತ್ರವಂ ಬರೆದುಕೊಟ್ಟು ಕಳುಹಿಸಿದನು.

ಸುರದಾಸಮದನಮೋಹನನು ಮಥುರಾಕ್ಷೇತ್ರಕ್ಕೆ ಬಂದು ಮೊದಲಂತೆ ಭಕ್ಷ್ಯ ಭೋಜ್ಯಾದಿಗಳಿಂದ ಸಾಧುಮಹನೀಯರನ್ನು ಸತ್ಕರಿಸುತ್ತ ಇದ್ದನು. ಪೂರ್ವದಲ್ಲಿ ರಾಜನಿಗೆ ತಿಳಿದರೆ ಕೋಪಗೊಂಡಾನೆಂಬ ಭಯವಿದ್ದಿತು. ಶ್ರೀಹರಿಯ ಕೃಪೆಯಿಂದ ಆ ಭಯವು ಪರಿಹಾರವನ್ನು ಹೊಂದಿತು. ನಿಶ್ಶಂಕನಾಗಿ ಸಾಧುಸೇವೆಯಲ್ಲಿ ಸದ್ಭಾವದಿಂದ ಪ್ರವರ್ತಿಸುತ್ತ ಹೃದಯದಲ್ಲಿ ಶ್ರೀಕೃಷ್ಣಪರಮಾತ್ಮನನ್ನು ಧ್ಯಾನಿಸುತ್ತ ಹಗಲೂ ಇರುಳೂ ತನ್ನಾಮಸಂಕೀರ್ತನೆಯಂ ಮಾಡುತ ಬಗೆಬಗೆಯ ಗೀತಪ್ರಬಂಧಗಳಂ ರಚನೆಮಾಡಿ ಚಿತ್ತದಲ್ಲಿ ಭಾವಾರ್ಥವಂ ಪಿಡಿದು ಕೀರ್ತನದಲ್ಲಿ ಪಾಡುತಿದ್ದನು.

ಇಂತಿರಲು, ಒಂದುದಿನ ಕೀರ್ತನವನ್ನಾರಂಭಿಸಿ ಭಗವಂತನನ್ನು ಸ್ತುತಿಯಿಸಿ ಉಲ್ಲಾಸದಿಂದ ಪ್ರಬಂಧರಚನೆಯಂ ಮಾಡುತ್ತ "ಸುರದಾಸನು ಸಂತರ ಸೇವಾಧುರಂಧರನು" ಎಂದು ಹೇಳಿಕೊಂಡನು. ಜನರು ಕೆಲವರು ಆ ನುಡಿಯಂ ಕೇಳಿ ಇಲ್ಲದುದನ್ನು ಏಕೆ ವ್ಯರ್ಥವಾಗಿ ಹೇಳಿಕೊಳ್ಳಬೇಕು? ಮೇಘವು ಮಳೆಯಂ ಕರೆಯದೆ ಏಕೆ ಗರ್ಜನೆಯಂ ಮಾಡಬೇಕು? ಜೀವವಿಲ್ಲದ ಶರೀರಕ್ಕೆ ಶೃಂಗಾರವೇಕೆ? ವಾಸನೆಯಿಲ್ಲದ ಕಸ್ತೂರಿಯನ್ನು ಅಂಗಡಿಯಲ್ಲಿ ಏಕೆ ಇರಿಸಿಕೊಳ್ಳಬೇಕು? ನಡೆವಳಿಯಲ್ಲಿ ಇಲ್ಲದಿರಲು, ಬರಿದೆ ಕವಿತ್ವಕೌಶಲದಿಂದೇನು? ಚಿತ್ರದಲ್ಲಿ ಸೂರ್ಯಮಂಡಲವನ್ನು ಬರೆಯುವರು; ಆದರೆ ಆತನ ಪ್ರಕಾಶವನ್ನು ಯಾರೂ ಬರೆಯಲಾರರು. ಅದರಂತೆ ಸುರದಾಸನು ಕವಿತ್ವದಲ್ಲಿ ಬಹುವಾಗಿ ಹೊಗಳಿಕೊಳ್ಳುವನು. ನಡೆವಳಿಯಲ್ಲಿ ನಡೆಯನು-ಎಂದು ದೂಷಿಸಿದರು. ಕೆಲವರು ಭಾವುಕರಾದ ಸಜ್ಜನರು ಸುರದಾಸನ ನುಡಿಯಂ ವಿಹಿತವೆಂದು ತಿಳಿದರು. ಕೆಲವರು--ಈಗಿನ ಕವಿತ್ವವೆಂದು ಗೌರವವಂ ಕೊಡರು; ಕಾಲಕ್ರಮದಿಂದ ಸಕಲರೂ ಸನ್ಮಾನಿಸುವರು-ಎಂದರು. ಇಂತು ಜನಗಳು ಬಗೆಬಗೆಯಿಂದ ಮಾತನಾಡಿಕೊಂಡರು. ಲೋಕದಲ್ಲಿ ಎಲ್ಲರೂ ಮಾಯೆಯ ಬಲೆಗೆ ಸಿಕ್ಕಿರುವರು. ಜ್ಞಾನಿಯಾದ ಮಹನೀಯನನ್ನು ಅಜ್ಞಾನಿ, ಭ್ರಾಂತನು-ಎಂದು ನುಡಿವರು. ಸಂದುಹೋದ ಬಳಿಕ ಬಹುವಾಗಿ ಹೊಗಳುವರು. "ಮೊದಲು ಮರೆವು ಕಡೆಯಲ್ಲಿ ನೆನೆವು" ಎಂಬಂತೆ ಸಕಲರೂ ಪ್ರವರ್ತಿಸುವರು. ಸುಜ್ಞಾನಿಯಾದ ವಿಚಕ್ಷಣನು ತನ್ನ ಅನುಭವದ ಗುರುತನ್ನು ಬಲ್ಲನು. ಅದಂತಿರಲಿ. ಬಹುವಾದ ಮಾತುಗಳಿಂದೇನು? ಈಶ್ವರನ ಮಾಯೆಯು ಅನಿವಾರ್ಯವಾದುದು. ಅದು ವಿಕಲ್ಪದ ಬಲೆಯನ್ನು ಹಾಕಿ ಸಂಶಯವೆಂಬ ಕೆಸರಲ್ಲಿ ಮುಳುಗಿಸಿರುವುದು. ಸುರದಾಸನು ಮಹಾಭಕ್ತನು; ಸಂತರ ಸೇವೆಯಲ್ಲಿ ತತ್ಪರನಾಗಿರುವನು. ಅವನ ನುಡಿಯನ್ನು ವಿಚಾರಮಾಡದೆ ನಿಂದಿಸುತಿದ್ದರು. ಕಾರ್ಯವಂ ನಡೆಯಿಸುತ್ತ ಅದರಂತೆ ಹೇಳಿದ ಮಾತನ್ನು ದಾಂಭಿಕವೆಂದರು.

ಒಂದು ದಿವಸ ಸುರದಾಸನು ದೇವರ ಸಂದರ್ಶನಕ್ಕೆ ಹೋಗುವ ವೇಳೆಯಲ್ಲಿ ಒಬ್ಬ ವಿರಾಗಿಯು ಸವಿಾಪಕ್ಕೆ ಬಂದು—ಈತನು ಕವಿತ್ವದಲ್ಲಿ ಹೇಳಿಕೊಂಡ ಅಂಶಿತಕ್ಕೆ ಈತನ ಮನಸ್ಸನ್ನು ಪರೀಕ್ಷಿಸಿ ನೋಡಬೇಕೆಂದು ಮನದಲ್ಲಿ ಎಣಿಸಿ ಸುರದಾಸನನ್ನು ಕುರಿತು—ಅಯ್ಯಾ! ನಾನು ದೇವರ ದರ್ಶನಕ್ಕೆ ಹೋಗಿ ಬೇಗನೆ ಬರುವೆನು. ಅದುವರೆಗೆ ನನ್ನ ಪಾದುಕೆಗಳನ್ನು ಕೈಯಲ್ಲಿ ಜಾಗರೂಕನಾಗಿ ಹಿಡಿದುಕೊಂಡಿರಬೇಕು-ಎನಲು, ಆ ವಿರಾಗಿಯ ಮಾತನ್ನು ಕೇಳಿ ಸುರದಾಸನು ಮನದಲ್ಲಿ ಸಮಾಧಾನವನ್ನು ಹೊಂದಿ-ಬಹುದಿವಸದಿಂದ ಇಂತಹ ಸೇವೆಯನ್ನು ಅಪೇಕ್ಷಿಸಿಕೊಂಡಿದ್ದೆನು. ಇಂದು ನನ್ನ ಆ ಅಪೇಕ್ಷೆಯು ಸಫಲವಾಯಿತು-ಎಂದು ಅಂಗೀಕರಿಸಿ ಆತನ ಪಾದುಕೆಗಳಂ ಕೈಯಲ್ಲಿ ಸ್ವೀಕರಿಸಿ ವಸ್ತ್ರವನ್ನು ಸುತ್ತಿ ಪ್ರೀತಿಯಿಂದ ಹಿಡಿದುಕೊಂಡು ಮಹಾದ್ವಾರದ ಬಳಿಯಲ್ಲಿಯೇ ನಿಂತನು.

ವಿರಾಗಿಯು ಆತನ ರೀತಿಗೆ ಆಶ್ಚರ್ಯಗೊಂಡು ದೇವಸ್ಥಾನಮಂ ಪೊಕ್ಕು ದೇವರ ಸಂದರ್ಶನವಂ ಮಾಡಿ ಸುರದಾಸನ ಮನೋದಾರ್ಢ್ಯವಂ ಪರೀಕ್ಷಿಸುವುದಕ್ಕೋಸ್ಕರ ವಿಲಂಬವಂ ಮಾಡಬೇಕೆಂದು ಎಣಿಸಿ ಕೀರ್ತನಮಂಟಪದಲ್ಲಿ ಆನಂದಭರಿತನಾಗಿ ಕೀರ್ತನವಂ ಮಾಡುತ್ತ ಪ್ರಾತಃಕಾಲದಿಂದ ಅಸ್ತಮಯದ ವರೆಗೂ ಕುಳಿತುಕೊಂಡನು. ಬಳಿಕ ರಾತ್ರಿಯಾಗುವುದೂ ಹೊರಗೆ ಬಂದು ಮಹಾದ್ವಾರದ ಬಳಿಯಲ್ಲಿ ನೋಡಲು, ಸುರದಾಸನು ಪಾದುಕೆಗಳನ್ನು ಕೈಯಲ್ಲಿಯೇ ಹಿಡಿದುಕೊಂಡು ಏಕಭಾವದಿಂದ ನಿಂತೇ ಇದ್ದನು. ವಿರಾಗಿಯನ್ನು ಕಂಡು ಸುರದಾಸನು ಪಾದುಕೆಗಳನ್ನು ಬಳಿಯಲ್ಲಿ ಇಟ್ಟನು.

ಆ ವಿರಾಗಿಯು ಸುರದಾಸನ ಮಸ್ತಕದಲ್ಲಿ ಕರವನಿಟ್ಟು—ಮಹನೀಯನೇ! ನೀನೆ ಏಕನಿಷ್ಠೆಯುಳ್ಳ ಭಾಗವತಶಿರೋಮಣಿ. ನಿನ್ನ ಮನಸ್ಸನ್ನು ಪರೀಕ್ಷಿಸುವುದಕ್ಕೋಸ್ಕರ ಇಷ್ಟುಹೊತ್ತು ಒಳಗಿದ್ದು ವಿಲಂಬವಂ ಮಾಡಿದೆನು. ನೀನು ಸಂತರ ಸೇವಕನೆನಿಸುವೆ. ನಾನು ಅಹಂಕಾರದಿಂದ ನಿನ್ನ ಮನಸ್ಸನ್ನು ಒರೆದು ನೋಡಿದೆನು. ಸಂತರ ಸೇವಾಧುರಂಧರನೆಂಬ ನುಡಿ ನಿನಗೆ ಸಲ್ಲುವುದು. ನಿಶ್ಚಯವಾಗಿಯೂ ನೀನು ನುಡಿದಂತೆ ನಡೆವಾತನು—ಎಂದು ಅಭಿನಂದಿಸಿ ಹೊರಟುಹೋದನು.

ಸುರದಾಸನು ಪಶ್ಚಾತ್ತಾಪಯುಕ್ತನಾಗಿ ತನ್ನ ಸರ್ವಸ್ವವನ್ನೂ ಸತ್ಪಾತ್ರದಲ್ಲಿ ಸೂರೆಗೊಳಿಸಿ ಉಪಾಧಿರಹಿತನಾಗಿ ಶ್ರೀಹರಿಭಜನೆಯೊಂದರಲ್ಲಿಯೇ ನಿರತನಾದನು. ಸಂತರ ಸೇವಾವಿಶೇಷದಿಂದ ಶ್ರೀರುಕ್ಮಿಣೀಕಾಂತನು ಸಂತುಷ್ಟನಾಗಿ ಆ ಸಮಯದಲ್ಲಿ ಪ್ರತ್ಯಕ್ಷನಾಗಿ ದರ್ಶನವಂ ಕೊಟ್ಟನು.

ಇಂತು ಭಕ್ತರಲ್ಲಿ ಒಬ್ಬರಿಗಿಂತ ಒಬ್ಬರು ಅಧಿಕರು. ಮುಂದಣ ಕಥೆಯು ಅತಿರಸಭರಿತವಾದುದು. ಶ್ರವಣದಿಂದ ಸುಖವುಂಟಾಗುವುದು. ಶ್ರೋತೃಗಳು ಮನವಿಟ್ಟು ಆಲಿಸಬೇಕು. ಶ್ರೀಭೀಮಾತೀರವಿಹಾರಿಯಾದ ರುಕ್ಮಿಣೀಪತಿಯು ಗ್ರಂಥವಂ

ಚಮತ್ಕಾರದಿಂದ ಆಗಿಸುವನು. ಆತನ ಕೃಪೆಯಿಂದ ಮಹೀಪತಿಯು ಶ್ರೋತೃಗಳಂ ಕುರಿತು ಬಿನ್ನವಿಸಿಕೊಳ್ಳುವನು.

ಇಂತು ಶ್ರೀ ಭಕ್ತವಿಜಯದಲ್ಲಿ ಮೂವತ್ತಾರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಮೂವತ್ತೇಳನೆಯ ಅಧ್ಯಾಯ.

ರಸಿಕಮುರಾರನ ಚರಿತ್ರೆ.

ಶ್ರೀಭೀಮಾತೀರವಾಸಿಯೇ! ರುಕ್ಮಿಣೀಪತಿಯೇ! ಜಗತ್ಪ್ರಕಾಶಕನೇ! ಅನಂತನೇ! ನೀನಲ್ಲದೆ ನುಡಿಯುವನು ನುಡಿಯಿಸುವನು ಮತ್ತೊಬ್ಬನಿಲ್ಲ. ವೃಕ್ಷಕ್ಕೆ ಬೇರೆ ಎಂತು ಕಾರಣವೋ; ಧಾನ್ಯವು ಬೆಳೆಯುವುದಕ್ಕೆ ಬೀಜವು ಎಂತು ಕಾರಣವೋ; ಅಂತು ಭಕ್ತರ ಚರಿತ್ರೆಯನ್ನು ರಸಭರಿತವಾಗಿ ನುಡಿಯುವುದಕ್ಕೆ ನೀನೇ ಕಾರಣಭೂತನು. ನಾನು ಅತ್ಯಂತಮಂದಬುದ್ಧಿಯು. ಕೃಪಾನಿಧಿಯಾದ ನೀನು ನನಗೆ ಉಪಾಸ್ಯನು. ತೆರೆಯಲ್ಲಿ ಸೂತ್ರಧಾರನು ಸೂತ್ರವಂ ಪಿಡಿದು ಸಭೆಯಲ್ಲಿ ಬೊಂಬೆಗಳಂ ಕುಣಿಯಿಸುವಂತೆ, ನೀನು ನನ್ನ ಹೃದಯದಲ್ಲಿ ಪ್ರವೇಶಿಸಿ ನನ್ನ ಮುಖದಿಂದ ಭಕ್ತರ ಕಥೆಗಳನ್ನು ಹೊರಗೆ ನುಡಿಯಿಸುವೆ. ನಿನ್ನ ಗುಣಗಳಂ ವರ್ಣಿಸುವುದಕ್ಕೆ ಬಹುಕವಿತ್ವವಂ ಮಾಡಿ ಪಾರವಿಲ್ಲದುದರಿಂದ ಸರಸ್ವತಿಯು ದಣಿದುನಿಂತಳು. ಶ್ರೀಪತಿಯೇ! ನಿನ್ನಂ ಅಡಿಗಡಿಗೂ ಪ್ರಾರ್ಥಿಸುವೆನು. ನೀನು ಪ್ರಸನ್ನನಾಗಿ ಗ್ರಂಥವಂ ನುಡಿಯಿಸು.

ಎಲೈ ಶ್ರೋತೃಗಳಿರಾ! ಹಿಂದಣ ಅಧ್ಯಾಯದಲ್ಲಿ ಸುರದಾಸಮದನಮೋಹನನ ಚರಿತ್ರೆಯಂ ಕೇಳದಿರಲ್ಲಾ! ಇನ್ನು ರಸಿಕಮುರಾರನೆಂಬ ಭಕ್ತನ ಚರಿತ್ರೆಯಂ ಆದರದಿಂದ ಆಲಿಸಿ.

ಆ ರಸಿಕಮುರಾರನು ಮಹಾಭಕ್ತನು. ಸಂತರ ಸೇವೆಯಲ್ಲಿ ಅತಿತತ್ಪರನು. ಆತನು ಮಥುರಾದೇಶದ ಸಾಯನಗರವೆಂಬ ಊರಲ್ಲಿ ವಾಸಮಾಡಿಕೊಂಡಿದ್ದನು. ನಿತ್ಯದಲ್ಲಿಯೂ ಯಮುನೆಯಲ್ಲಿ ಸ್ನಾನವಂ ಮಾಡಿ ಪೂಜಾಸಾಹಿತ್ಯವಂ ತೆಗೆದ ಕೊಂಡು ಷೋಡಶೋಪಚಾರಗಳಿಂದ ಶ್ರೀಕೃಷ್ಣಪೂಜೆಯಂ ಮಾಡಿ ಪುಷ್ಪಗಳಂ ಸಮರ್ಪಿಸುತ್ತಿದ್ದನು. ಬಳಿಕ ವಿಷ್ಣುಭಕ್ತರಂ ಕರೆತಂದು ಅವರಂ ಪೂಜಿಸುತಿದ್ದನು. ಬಗೆ

ವಗೆಯ ಮೃಷ್ಟಾನ್ನದಿಂದ ನಿತ್ಯವೂ ಸಂತರನ್ನು ತೃಪ್ತಿಗೊಳಿಸುತಿದ್ದನು. ಸಂತರನ್ನು ವಿಷ್ಣುಸಮಾನರೆಂದು ತಿಳಿದಿದ್ದನು. ಆತನಿಗೆ ಶಿಷ್ಯರನೇಕರು ಇದ್ದರು. ಅವರು ನಿತ್ಯವೂ ಸಾಹಿತ್ಯವಂ ಸಿದ್ಧಪಡಿಸಿಕೊಳುತ್ತಿದ್ದರು. ತಾನು ಏಕಾಂತದಲ್ಲಿ ಕುಳಿತು ಭಜನೆಯಂ ಮಾಡುತಿದ್ದನು.

ಇಂತಿರಲು, ಒಂದುದಿನ ಕೆಲವರು ಭಾಗವತರು ಮನೆಗೆ ಬರುವುದೂ, ಅವರಿಗೆ ಕುಳಿತುಕೊಳ್ಳುವುದಕ್ಕೆ ಆಸನವಂ ಕೊಟ್ಟು ಉಪಚರಿಸಿದನು. ಶಿಷ್ಯರಂ ಕರೆದು-ನೀವು ಸಂತರ ಪೂಜೆಯಂ ಮಾಡಿ ಚರಣತೀರ್ಥವಂ ನನಗೆ ತಂದುಕೊಡಬೇಕೆಂದು ಹೇಳಲು, ಒಬ್ಬ ಶಿಷ್ಯನು ಪೂಜೆಗೆ ಹೊರಟು ಚರಣಗಳಂ ತೊಳೆಯುತ ಬಂದನು. ಅವರಲ್ಲಿ ಒಬ್ಬ ಕುಷ್ಠರೋಗದ ಬ್ರಾಹ್ಮಣನಿದ್ದನು. ಆತನು ಮಲಿನವಸ್ತ್ರಗಳನುಟ್ಟಿದ್ದನು. ಕಾಲುಗಳು ಒಡೆದಿದ್ದುವು. ಅದಂ ನೋಡಿ-ಆತನ ಚರಣತೀರ್ಥವಂ ತೆಗೆದುಕೊಂಡರೆ ವಮನವಾದೀತೆಂದು ಅಸಹ್ಯತೆಗೊಂಡು ಶುಚಿಗಳಾಗಿ ಕಂಡ ಇತರರ ಪಾದಗಳನ್ನುಮಾತ್ರ ತೊಳೆದು ಪದ್ಧತಿಯಂತೆ ಪೂಜೆಮಾಡಿ ನಮಸ್ಕರಿಸಿ ಆ ತೀರ್ಥವಂ ತೆಗೆದುಕೊಂಡುಬಂದು ಗುರುಗಳಿಗೆ ಕೊಟ್ಟನು.

ಮುರಾರನು ಆ ತೀರ್ಥವಂ ಪ್ರಾಶನಮಾಡಿ ತಮ್ಮ ಶಿಷ್ಯರನೆಲ್ಲರಂ ಕರೆದು-ಇಂದು ಚರಣತೀರ್ಥವಂ ಪ್ರಾಶನಮಾಡಿದೆನು. ಇದು ರುಚಿಯುಳ್ಳುದಾಗಿಲ್ಲ. ಯಾವ ಸಂಶಯವಂ ಮನದೊಳಿಟ್ಟು ಶ್ರೀವಿಷ್ಣುಭಕ್ತರಂ ಪೂಜಿಸಿದಿರಿ? ನನಗೆ ಏನೋ ಲೋಪವು ತೋರಿ ಬಂದಿದೆ. ಇಂದು ಚರಣಾಮೃತವು ಸಪ್ಪೆಯಾಗಿರುವುದಕ್ಕೆ ಕಾರಣವೇನು? ಇದರ ವಿಚಾರವಂ ಸರಿಯಾಗಿ ತಿಳಿದು ನನಗೆ ಹೇಳಬೇಕು-ಎನಲು, ತಮ್ಮ ಸದ್ಗುರುವಿನ ವಚನವಂ ಕೇಳಿ ಶಿಷ್ಯರೆಲ್ಲರೂ ತಮ್ಮಲ್ಲಿ ವಿಚಾರಮಾಡಿದರು. ಅಂದು ಯಾವನು ಸಂತರ ಪೂಜೆಯಂ ಮಾಡಿದ್ದನೋ ಅವನು ಭೀತನಾಗಿ ಗುರುಗಳ ಸನ್ನಿಧಿಯಲ್ಲಿ ನಿಂತುಕೊಂಡು ಬದ್ಧಾಂಜಲಿಪುಟನಾಗಿ-ಪೂಜ್ಯರೆ! ಲಾಲಿಸಬೇಕು. ನಾನು ಇಂದು ಸಂತರ ಪಾದಂಗಳಂ ತೊಳೆಯುವಾಗ ಕುಷ್ಠರೋಗದ ಒಬ್ಬ ಬ್ರಾಹ್ಮಣನು ಬಂದು ನಿಂತನು. ಆತನಂ ಕಾಣುವುದೂ ನನಗೆ ಅಸಹ್ಯತೆತೋರಿತು. ಆದರಿಂದ ಆತನಂ ಬಿಟ್ಟು ಉಳಿದವರ ಚರಣತೀರ್ಥವಂ ಸ್ವೀಕರಿಸಿ ತಮಗೆ ತಂದು ಸಮರ್ಪಿಸಿದೆನು-ಎಂದು ಯಥಾರ್ಥವಾದ ಸ್ಥಿತಿಯಂ ಹೇಳಲು, ರಸಿಕಮುರಾರನು ಆಕ್ಷಣ ಆ ಬ್ರಾಹ್ಮಣನ ಬಳಿಗೆ ಹೋಗಿ ಸಾಷ್ಟಾಂಗನಮಸ್ಕಾರವಂ ಮಾಡಿ ಸ್ವಹಸ್ತದಿಂದ ಆತನ ಚರಣವಂ ತೊಳೆದು ಚರಣಾಂಗುಷ್ಠವನ್ನು ಕಣ್ಣಿಗೆ ಒತ್ತಿಕೊಂಡು ಪ್ರೀತಿಯಿಂದ ತೀರ್ಥಪ್ರಾಶನವಂ ಮಾಡಿ ಈಗ ತೀರ್ಥಕ್ಕೆ ರುಚಿಯುಂಟಾಯಿತು-ಎಂದನು.

ಆಮಾತಂ ಕೇಳಿ ವಿಷ್ಣುಭಕ್ತರೆಲ್ಲರೂ ವಿಸ್ಮಯಗೊಂಡು ಗುರುಕೃಪಾಮಹಿಮೆಯನ್ನು ಒಬ್ಬ ಸಚ್ಛಿಷ್ಯನೇ ಎಂತು ಬಲ್ಲನೋ; ಚಂದ್ರಾಮೃತದ ರುಚಿಯನ್ನು ಚಕೋರವೇ ಎಂತು ಬಲ್ಲುದೋ; ಪತಿಯ ಮನೋಭಾವವಂ ಪತಿವ್ರತೆಯೇ ಎಂತು

ಬಲ್ಲಳೋ; ಭಗವದ್ಭಕ್ತರ ಕಥೆಯ ರಸವನ್ನು ಮಹನೀಯರಾದ ವಿರಕ್ತರೇ ಎಂತು ಬಲ್ಲರೋ; ತಾವರೆಯ ಮಕರಂದದ ಸವಿಯನ್ನು ಭ್ರಮರವೇ ಎಂತು ಬಲ್ಲುದೋ; ಗಾಯತ್ರಿಯ ಅಗಾಧವಾದ ಮಹಿಮೆಯನ್ನು ವಿಶ್ವಾಮಿತ್ರಮಹರ್ಷಿಯೇ ಎಂತು ಬಲ್ಲನೋ; ಶ್ರೀರಾಮನಾಮದ ಪ್ರಭಾವವನ್ನು ಒಬ್ಬ ಕೈಲಾಸನಾಥನೇ ಎಂತು ಬಲ್ಲನೋ; ಭಾಗವತಧರ್ಮಂಗಳ ಮಹಿಮೆಯನ್ನು ಭಾಗವತರೇ ಎಂತು ಬಲ್ಲರೋ ಅಂತು ಚರಣತೀರ್ಥದ ಸವಿಯನ್ನು ಈ ಮುರಾರನೊಬ್ಬನೇ ಬಲ್ಲನು. ಈತನಂತೆ ಮತ್ತೊರ್ವನು ತಿಳಿಯಲಾರನು-ಎಂದು ಅಭಿನಂದಿಸಿ ಸಿರದಲ್ಲಿ ವರದಹಸ್ತವನಿರಿಸಿ-ನಿನ್ನ ನಿಷ್ಠೆಯಿಂದ ನಿನಗೆ ಶ್ರೀಕೃಷ್ಣಪರಮಾತ್ಮನು ಸಹಾಯನಾಗಿರುವನು. ಸಂತರ ಚರಣಗಳಲ್ಲಿ ಭಕ್ತಿಯುಳ್ಳವನಾದಕಾರಣ ಆ ಚರಣತೀರ್ಥದ ರಸವನ್ನು ತಿಳಿದಿರುವನಾಗಿರುವೆ. ಅದುಕಾರಣ ನೀನು ಇಂದಿನಿಂದ ರಸಿಕಮುರಾರನೆಂದು ಪ್ರಸಿದ್ಧಿಯನ್ನು ಪಡೆ-ಎಂದು ಹೇಳಿ ಹೊರಟುಹೋದರು.

ಆ ರಸಿಕಮುರಾರನ ಗುರು ದಯಾರ್ಣವನೆಂದು. ಆತನು ಬ್ರಹ್ಮಜ್ಞಾನಸಂಪನ್ನನು. ಶ್ರೀಸಾಲಿಗ್ರಾಮಮೂರ್ತಿಯನ್ನು ಇಟ್ಟುಕೊಂಡು ನಿತ್ಯವೂ ಭಕ್ತಿಯಿಂದ ಯಥಾವಿಧಿಪೂಜೆಯಂ ಮಾಡಿ ವಸ್ತ್ರಭೂಷಣಗಳಿಂದ ಅಲಂಕಾರವಂ ಮಾಡುತಿದ್ದನು.

ಆತನ ಸಂದರ್ಶನಕ್ಕೋಸ್ಕರ ಒಬ್ಬ ರಾಜನು ಬಂದು ಆತನು ಮಾಡುವ ಭಗವತ್ಪೂಜೆಯಂ ನೋಡಿ ಸಂತೋಷಗೊಂಡು ಆತನಿಗೆ ನಾಲ್ಕು ಗ್ರಾಮಗಳಂ ಸರ್ವಮಾನ್ಯವಾಗಿ ಮಾಡಿಕೊಟ್ಟು—ನಿಮ್ಮ ದೇವರ ಪೂಜೆಗೋಸ್ಕರ ಈ ಗ್ರಾಮಗಳಂ ಕೊಟ್ಟಿರುವೆನು. ಈ ಗ್ರಾಮಗಳ ಹಣವಂ ತರಿಸಿಕೊಂಡು ನಿರಾತಂಕತೆಯಿಂದ ದೇವರ ಪೂಜೆಯನ್ನೂ ಸಂತರ ಪೂಜೆಯನ್ನೂ ಮಾಡುತ್ತ ಸುಖದಿಂದಿರುವುದು-ಎಂದು ಹೇಳಿ ಹೊರಟು ಹೋದನು.

ದಯಾರ್ಣವನು ಮನದಲ್ಲಿ ವಿಸ್ಮಿತನಾಗಿ—ಶ್ರೀಕೃಷ್ಣನು ತನ್ನ ಪೂಜೆಗೆ ಆನುಕೂಲ್ಯವಂ ಕಲ್ಪಿಸಿಕೊಟ್ಟನು—ಎಂದು ಸಂತೋಷಗೊಂಡು ವಿಶೇಷದಿಂದ ಶ್ರೀಹರಿಪೂಜೆಯಂ ಮಾಡುತಿದ್ದನು.

ಇಂತು ಬಹುದಿನಗಳವರೆಗೂ ನಿರ್ವಿಘ್ನವಾಗಿ ಶ್ರೀಕೃಷ್ಣನ ಪೂಜೆಯು ನಡೆಯಿತು. ಇಂತಿರಲು ಬಳಿಕ ಒಬ್ಬ ದುಷ್ಟನು ಅರಮನೆಗೆ ಹಣವಂ ಕೊಟ್ಟು ಆ ದೇಶದ ಗುತ್ತಿಗೆಯನ್ನು ಮಾಡಿಕೊಂಡು ರಾಜಶಾಸನವಂ ತೆಗೆದುಕೊಂಡು ಕ್ರಮದಿಂದ ಆ ದಯಾರ್ಣವನ ಗ್ರಾಮಕ್ಕೂ ಬಂದು, ಅದು ದಯಾರ್ಣವನ ಸರ್ವಮಾನ್ಯವೆಂದು ಜನಮುಖದಿಂದ ಕೇಳಿ ಸಹಿಸದೆ, ದುರ್ಯೋಧನನು ಧರ್ಮರಾಜನ ರಾಜ್ಯವನ್ನು ವಶಮಾಡಿಕೊಂಡಂತೆ ತನ್ನ ವಶವಂ ಮಾಡಿಕೊಂಡನು. ಬಹುಜನರು ಧರ್ಮನೀತಿಗಳಂ ಹೇಳಿದರು. ಆದರೂ ಆ ಪಾಪಿಯು ಯಾರ ಮಾತನ್ನೂ ಕೇಳಲಿಲ್ಲ. ಅಧೋಗತಿಯಂ ಹೊಂದುವುದಕ್ಕೋಸ್ಕರ ಆ ಬ್ರಹ್ಮಸ್ವವನ್ನೂ ಅಪಹರಿಸಬೇಕೆಂಬ ದುರಾಲೋಚನೆಯು ಅವನಿಗೆ

ಉಂಟಾಯಿತು. ಅಭಕ್ತನಿಗೆ ಹರಿಕಥೆಯೂ, ವ್ಯಭಿಚಾರಿಣಿಗೆ ಪತಿಸೇವೆಯೂ ಎಂತು ಇಷ್ಟವಲ್ಲವೋ ಅಂತು ಲುಬ್ಧನಾದ ಆ ದುಷ್ಟನಿಗೆ ಧರ್ಮೋಪದೇಶವು ಅಭಿಮತವಾಗಲಿಲ್ಲ. ವಿರಕ್ತನಿಗೆ ವ್ಯರ್ಥವಾಗಿ ಯಾರು ಸರ್ವಮಾನ್ಯವಂ ಬರೆದು ಕೊಟ್ಟರು ?-ಎಂದು ಧಿಕ್ಕರಿಸಿ ಮಾತನಾಡಿದನು.

ಈ ಸಂಗತಿ ದಯಾರ್ಣವನಿಗೆ ತಿಳಿಯಿತು. ಮನದೊಳಾಲೋಚನೆಯಂ ಮಾಡಿ ಮತ್ತಾವ ಉಪಾಯವೂ ತೋರದೆ, ಏನುಕಾರ್ಯವಂ ಮಾಡುತಿದ್ದರೂ ಬಿಟ್ಟು ಈಕ್ಷಣವೇ ಬರಬೇಕು-ಎಂದು ತನ್ನ ಶಿಷ್ಯನಾದ ರಸಿಕಮುರಾರನಿಗೆ ಪತ್ರಿಕೆಯಂ ಬರೆದು ಒಬ್ಬ ಶಿಷ್ಯನ ಕೈಯಲ್ಲಿ ಕೊಟ್ಟು ಕಳುಹಿಸಿದನು.

ಆಶಿಷ್ಯನು ಪತ್ರಿಕೆಯಂ ತೆಗೆದುಕೊಂಡು ಹೊರಟು ರಸಿಕಮುರಾರನ ಬಳಿಯಂ ಸೇರಿದನು. ಆಗ ರಸಿಕಮುರಾರನು ಮನೆಯಲ್ಲಿ ಭೋಜನವಂ ಮಾಡುತಿದ್ದನು. ಸದ್ಗುರುಗಳಕಡೆಯಿಂದ ಬಂದ ಆ ಶಿಷ್ಯನಂ ಕಾಣುವುದೂ, ಒಣಗುತಿದ್ದ ಮರಕ್ಕೆ ಘನವಾದ ಮಳೆಯು ಬಂದರೆ ಎಂತೋ; ಅತ್ತಮನೆಯಲ್ಲಿರುವ ಹೆಣ್ಣಿಗೆ ತೌರುಮನೆಯಿಂದ ಕರೆಯುವುದಕ್ಕೆ ಅನುಬಂಧಿಗಳು ಬಂದರೆ ಎಂತೋ ಅಂತು ಉಲ್ಲಾಸವುಂಟಾಯಿತು. ಉಲ್ಲಾಸಗೊಂಡು-ಸದ್ಗುರುಗಳು ಏನಪ್ಪಣೆಯಂ ಕೊಟ್ಟಿರುವರು ?--ಎಂದು ಆತನಂ ಬೆಸಗೊಂಡನು. ಆತನು ಪತ್ರಿಕೆಯಂ ಕೊಟ್ಟನು. ರಸಿಕಮುರಾರನು ಆಪತ್ರಿಕೆಯಂ ಎಡದಕೈಯಲ್ಲಿ ತೆಗೆದುಕೊಂಡು ಒಡೆದು ಓದಿ ನೋಡಿ ಆಜ್ಞೆಯಂ ಶಿರದಿಂದ ವಹಿಸಿ ಭೋಜನಮಾಡುತಿದ್ದವನು ಹಾಗೆಯೇ ಎದ್ದು ಯಾರೊಡನೆಯೂ ಮಾತನಾಡದೆ ತ್ವರೆಯಿಂದ ಹೊರಟು ಏನಾಜ್ಞೆಯಾದರೂ ಮಾಡುವೆನೆಂದು ಮನದಲ್ಲಿ ಉಲ್ಲಾಸಂಬಡುತ್ತ ಊರಂ ಸೇರಿ ದಯಾರ್ಣವನ ಮನೆಯಂ ಪೊಕ್ಕು ಆತನಂ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿದನು. ಉಚ್ಛಿಷ್ಟವು ಕೈಗೂ ಬಾಯಿಗೂ ಹತ್ತಿದ್ದುದಂ ಕಂಡು ದಯಾರ್ಣವನು ಇದೇನೆಂದು ಕೇಳಿದನು. ಅದಕ್ಕೆ ರಸಿಕಮುರಾರನು-ಪೂಜ್ಯರೆ! ನಿಮ್ಮ ಆಜ್ಞೆಯೇ ನನಗೆ ಮುಖ್ಯವು. ಪತ್ರಿಕೆಯಂ ಓದಿನೋಡಿ ಭೋಜನವಂ ಮಾಡುತಿದ್ದವನು ಬಿಟ್ಟು ಹೊರಟು ಬಂದೆನು-ಎಂದನು.

ಆಮಾತಂ ಕೇಳಿ ಸಕಲರೂ ಆಶ್ಚರ್ಯಗೊಂಡು-ಸದ್ಗುರುಗಳಲ್ಲಿ ಭಕ್ತಿಯಂ ಮಾಡುವ ಲಕ್ಷಣವು ನಿನಗೊಬ್ಬನಿಗೇ ತಿಳಿದಿರುವುದು-ಎಂದು ಶ್ಲಾಘಿಸಿದರು.

ದಯಾರ್ಣವನು ರಸಿಕಮುರಾರನಂ ಕುರಿತು-ನಮ್ಮ ದೇವರ ಪೂಜೆಯ ಗ್ರಾಮಗಳೆಲ್ಲವಂ ಒಬ್ಬ ದುಷ್ಟನು ಸ್ವಾಧೀನಮಾಡಿಕೊಂಡನು. ಅನೇಕಸಜ್ಜನರು ಅನೇಕವಿಧವಾಗಿ ಅವನಿಗೆ ಧರ್ಮನೀತಿಯಂ ಉಪದೇಶಿಸಿದರು. ಆದರೂ ಆದುರ್ಬುದ್ಧಿಯು ಯಾರಮಾತನ್ನೂ ಕೇಳಲಿಲ್ಲ. ಆದುದರಿಂದ ನೀನು ತ್ವರೆಯಿಂದ ಹೋಗಿ ಅವನಿಗೆ ತಕ್ಕ ಉಪದೇಶವಂ ಮಾಡಿ ಗ್ರಾಮಗಳಂ ಬಿಡಿಸಿಕೊಂಡು ಬರಬೇಕು.

ಶ್ರೀಕೃಷ್ಣನ ನಾಮಸ್ಮರಣೆಯಂ ಮಾಡುತ್ತ ಈಗಲೇ ನೀನು ಹೊರಡಬೇಕು—ಎಂದನು. ರಸಿಕಮುರಾರನು ಗುರ್ವಾಜ್ಞೆಯಂ ಶಿರದಿಂದ ವಹಿಸಿ ಆ ದುಷ್ಟನ ವಾಸಸ್ಥಾನವಂ ವಿಚಾರಿಸಿಕೊಂಡು ತ್ವರೆಯಿಂದ ಹೊರಟು ಆನಗರವಂ ಸೇರಿ ಒಂದು ಮನೆಯಲ್ಲಿ ಇಳಿದುಕೊಂಡು ಅಲ್ಲಿದ್ದ ಭಾವುಕರಂ ಕಂಡು—ನಿಮ್ಮ ಊರ ಅಧಿಕಾರಿಯು ಸರ್ವಮಾನ್ಯವಂ ಕಿತ್ತುಕೊಂಡು ಇರುವನು. ಸದ್ಗುರುಗಳು ಆಜ್ಞೆಯಂ ಕೊಟ್ಟು ನನ್ನನ್ನು ಕಳುಹಿಸಿರುವರು. ಆತನಲ್ಲಿಗೆ ಹೋಗಿ ತಕ್ಕ ಉಪದೇಶವಂ ಮಾಡಿ ಕಾರ್ಯವಂ ಸಾಧಿಸಬೇಕೆಂದಿರುವೆನು—ಎನಲು, ಅದಕ್ಕೆ ಅವರು-ಅಧಿಕಾರಿಯು ಪರಮ ದುರ್ಜನನು, ವೈಷ್ಣವದ್ರೋಹಿ; ಚಂಡಾಲನು. ನೀವು ತ್ವರೆಪಟ್ಟು ಈಗಲೇ ಆತನಲ್ಲಿಗೆ ಹೋಗಲಾಗದು. ನೀವು ಭಾಗವತರು; ಸಾತ್ತ್ವಿಕರು. ನಿಮ್ಮ ಉಪದೇಶವು ಅವನಲ್ಲಿ ನಡೆಯುವುದಿಲ್ಲ. ಭಾಂಡಶಕಲಕ್ಕೆ ಪರಿಸವನ್ನು ಮುಟ್ಟಿಸುವುದರಿಂದೇನು ? ಅವನಿಗೆ ನೀವು ಹಿತೋಪದೇಶವಂ ಮಾಡುವುದೂ ಅಂತು ವ್ಯರ್ಥವು. ಸತ್ಪುರುಷರಾದ ನೀವು ಸಂಕಟಗೊಂಡುದರಿಂದ ಅವನ ಮನಸ್ಸು ಕರಗುವುದಿಲ್ಲ. ಪರರ ಶಿಶುವು ಹಸಿವುಗೊಂಡರೆ ಬಂಜೆಗೆ ಸೊನೆ ಬರುವುದೇ ? ಆದಕಾರಣ ಸಾಧುಗಳಾದ ನೀವು ಆ ದುಷ್ಟನ ಬಳಿಗೆ ಏಕೆ ಹೋಗುವಿರಿ? ನಾವು ದಿನಕ್ರಮದಿಂದ ಯುಕ್ತಿಯಂ ಮಾಡಿ ನಿಮ್ಮ ಕಾರ್ಯವಂ ಸಾಧಿಸಿಕೊಡುವೆವು—ಎಂದು ನುಡಿಯಲು, ಭಾವುಕರಿರಾ ! ತ್ವರೆಯಿಂದ ಕಾರ್ಯವಂ ಸಾಧಿಸಬೇಕೆಂದು ಗುರುಗಳಾಜ್ಞೆಯಾಗಿರುವುದು. ಅವರ ಆಜ್ಞೆಯೇ ನನಗೆ ಮುಖ್ಯವು. ಆದುದರಿಂದ ಆತನಲ್ಲಿಗೆ ಈಗಲೇ ಹೋಗುವೆನು. ನನ್ನ ಮಾತನ್ನು ಅವನು ಅವಧರಿಸದೆ ಹೋದರೆ ನನ್ನ ಯತ್ನವೇನೂ ಇಲ್ಲ—ಎಂದು ನುಡಿದನು.

ರಸಿಕಮುರಾರನು ಮಾನ್ಯಗ್ರಾಮಗಳಂ ಬಿಡಿಸಿಕೊಳ್ಳುವುದಕ್ಕೋಸ್ಕರ ಬರುವನೆಂದು ಯಾರೋ ಆ ದುರ್ಜನನಿಗೆ ಸುದ್ದಿಯಂ ತಿಳಿಯಿಸಿದರು. ಅದಂ ಕೇಳಿ ಆ ಕುಮತಿಯು ಒಂದು ಯುಕ್ತಿಯನ್ನು ಆಲೋಚಿಸಿ ಒಂದು ಮದದಾನೆಯನ್ನು ತರಿಸಿ ಮಾವಟಿಗನನ್ನು ಏಕಾಂತದಲ್ಲಿ ಕರೆದು—ರಸಿಕಮುರಾರನು ನಮ್ಮ ದರ್ಶನಕ್ಕೆ ಬರುವನು. ನೀನು ಆನೆಯನ್ನು ಬೀದಿಯಲ್ಲಿ ನಿಲಿಸಿಕೊಂಡಿದ್ದು ಚೌಕದಲ್ಲಿ ಅವನು ಬರುವಾಗ ಆತನನ್ನು ಕೊಲಿಸಿಬಿಡಬೇಕು. ನೀನು ಈ ಕಾರ್ಯವನ್ನು ಸಾಧಿಸಿದರೆ ನಿನಗೆ ಹೆಚ್ಚಾದ ಧನವನ್ನು ಸನ್ಮಾನವಾಗಿ ಕೊಡುವೆನು—ಎನಲು, ಆ ಮಾವಟಿಗನು ಧನದಾಸೆಗೆ ಆಮಾತನಂಗೀಕರಿಸಿ ಆನೆಗೆ ಬಹುಮದ್ಯವಂ ಕುಡಿಯಿಸಿ ರಾಜಬೀದಿಯಲ್ಲಿ ಕರೆದುಕೊಂಡು ಹೋಗಿ ನಿಲಿಸಿಕೊಂಡಿದ್ದನು.

ರಸಿಕಮುರಾರನು ಅನೇಕಶಿಷ್ಯರೊಡನೆ ಕೂಡಿ ತಾಳಮೃದಂಗಧ್ವನಿಯಿಂದ ಸಂಭ್ರಮಗೊಂಡು ಕೀರ್ತನವಂ ಮಾಡುತ್ತ—ಜಯ ವಿಶ್ವವ್ಯಾಪಕನೇ ! ವಿಧಿಜನಕನೆ! ಕಂಸಾಂತಕನೆ ! ರುಕ್ಮಿಣೀಕಾಂತನೆ ! ಭಕ್ತಬಂಧುವಾದವನು ನೀನಲ್ಲದೆ ಮತ್ತಾರೂ

ಇಲ್ಲ. ವೈಕುಂಠನಾಯಕನೇ! ನೀನಿಲ್ಲದ ಸ್ಥಳವು ಅಣುಮಾತ್ರವೂ ಇಲ್ಲ. ಆಕಾಶವು ಸಮಸ್ತವಸ್ತುಗಳಲ್ಲಿಯೂ ಎಂತು ವ್ಯಾಪಿಸಿರುವುದೋ ಅಂತು ನೀನು ಸಕಲಪ್ರಾಣಿಗಳಲ್ಲಿಯೂ ವ್ಯಾಪಕನಾಗಿರುವೆ. ನಿನ್ನ ಘನವಾದ ವಿಶ್ವರೂಪಕ್ಕೆ ನಾನು ನಮಸ್ಕಾರವನ್ನು ಮಾಡುವೆನು—ಎಂದು ಆನಂದಭರಿತನಾಗಿ ಶ್ರೀಹರಿಯ ಗುಣಂಗಳಂ ಪಾಡುತ್ತ ಬಂದನು. ಪುರಜನರೆಲ್ಲರೂ ಕೌತುಕವಂ ನೋಡುತ್ತಿದ್ದರು. ಆ ಸಮಯದಲ್ಲಿ ಮದದಾನೆಯು ಇದಿರಾಗಿ ಬಂದುದು. ಅದಂ ಕಂಡು ಗ್ರಾಮವಾಸಿಗಳು ಸಂಕೇತವನ್ನರಿತು ರಸಿಕಮುರಾರನ ಸಮೀಪಕ್ಕೆ ಬಂದು—ದುರ್ಜನನು ನಿಮ್ಮನ್ನು ಕೊಲಿಸುವುದಕ್ಕೋಸ್ಕರ ದ್ವೇಷದಿಂದ ಆನೆಯನ್ನು ನಿಮ್ಮ ಮೇಲೆ ಬಿಡಿಸಲು ಉಜ್ಜುಗಿಸಿರುವನು—ಎಂದು ಮೆಲ್ಲನೆ ಕಿವಿಯಲ್ಲಿ ಹೇಳಿದರು. ಆಮಾತಂ ಕೇಳಿದರೂ ರಸಿಕಮುರಾರನ ಮನದಲ್ಲಿ ಭಯವುಂಟಾಗಲಿಲ್ಲ. ಈ ದೇಹವು ನಶ್ವರವಾದುದು; ಇದನ್ನು ಎನಿತುಪರಿಯಿಂದ ರಕ್ಷಿಸಿದರೂ ಕಡೆಗೆ ಕಾಲನು ಗ್ರಾಸವಂ ಮಾಡಿಬಿಡುವನು. ಇಂತಹ ದೇಹವನ್ನು ಸದ್ಗುರುಗಳ ಕಾರ್ಯಕ್ಕೋಸ್ಕರ ಉಪಯೋಗಿಸಲು, ಸಕಲ ವಿಘ್ನಗಳೂ ಆಕ್ಷಣದಲ್ಲಿಯೇ ಓಡಿಹೋಗುವುವು—ಎಂದು ಎಣಿಸಿ ಮುಂದೆ ಹೊರಟನು.

ಆಗ ಈತನಿಗೆ ಅಭಿಮುಖನಾಗಿಯೇ ಉನ್ಮತ್ತವಾದ ಆನೆಯು ಬರಲು, ಬಳಿಯಲ್ಲಿದ್ದ ಶಿಷ್ಯರೆಲ್ಲರಂ ಕುರಿತು—ಕಾಲವು ಇದಿರಾಗಿ ಬರುತಿದೆ. ಎಲ್ಲರೂ ಓಸರಿಸಿ ನಿಲಬೇಕು. ಇಲ್ಲದಿದ್ದರೆ ಕ್ಷಣದಲ್ಲಿ ಧ್ವಂಸವೊಂದುವೆವು. ನೀವೆಲ್ಲರೂ ಗುರುಗಳಿಂದ ಉಪದೇಶವಂ ತೆಗೆದುಕೊಂಡಿರುವಿರಿ. ಈಗ ದೇಹದ ಆಶೆಯನ್ನು ಇಟ್ಟುಕೊಂಡು ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕೆಂದು ಇರುವುದಾದರೆ ಹೊರಡಿ. ನಿಮ್ಮ ಕೊರಲಿಗೆ ಸುಮ್ಮನೆ ತುಳಸೀಮಾಲೆಯಂ ಹಾಕಿ ಏಕೆ ಸಿಕ್ಕಿಸಿ ಕೆಡಹಬೇಕು? ಎನಲು, ಅವರೆಲ್ಲರೂ ಆನುಡಿಯಂ ಕೇಳಿ ಕೊರಲಲ್ಲಿ ಇದ್ದ ಮಾಲಿಕೆಯಂ ತೆಗೆದು ಹಾಕಿ ಮುರಾರನಂ ಕುರಿತು—ನಾವು ನಿಮ್ಮ ದೆಸೆಯಿಂದ ಬಿಡಲ್ಪಟ್ಟೆವು—ಎಂದು ಉತ್ತರವಂ ಹೇಳಿ ಓಡಿಹೋದರು. ಬೇಸಗೆಬರುವುದೂ ಮೇಘಗಳು ಆಕಾಶವಂ ಬಿಟ್ಟು ಎಂತು ಓಡಿಹೋಗುವುವೋ; ಗ್ರೀಷ್ಮಕಾಲವು ಬರಲು, ನದಿಗಳ ಪ್ರವಾಹಗಳು ಎಂತು ಕಾಣದಂತಾಗುವುವೋ; ರಾಜನು ಪರರಾಯರ ಮುತ್ತಿಗೆಯಲ್ಲಿ ಸಿಕ್ಕಲು ದೇಹದಲ್ಲಿ ಆಶೆಯುಳ್ಳ ಭಟರು ಎಂತು ಪಲಾಯನಮಾಡುವರೋ; ವಿಷಮಕಾಲವು ಪ್ರಾಪ್ತವಾಗಲು ದಾಂಭಿಕರ ಆಚಾರಗಳು ಎಂತು ದೂರವಾಗುವುವೋ; ವಾರ್ಧಕವು ಪ್ರಾಪ್ತವಾಗಲು, ಇಂದ್ರಿಯಗಳ ವಿಷಯಾಸಕ್ತಿಗಳು ಎಂತು ಬಿಟ್ಟುಹೋಗುವುವೋ; ಗೃಹಸ್ಥನಿಗೆ ದಾರಿದ್ರ್ಯವು ಬರಲು, ನಂಟರೆಲ್ಲರೂ ಎಂತು ಆತನನ್ನು ತೊರೆದು ದೂರರಾಗುವರೋ; ಶ್ರೀಶಂಕರಾಚಾರ್ಯರು ಕಾಯ್ದ ಕಬ್ಬಿಣ್ಣ ಭಿಕ್ಷವಂ ತೆಗೆದುಕೊಳ್ಳಲು ಶಿಷ್ಯರೆಲ್ಲರೂ ಎಂತು ಓಡಿಹೋದರೋ ಅಂತು ಅವರೆಲ್ಲರೂ ಓಡಿಹೋಗಲು ರಸಿಕಮುರಾರನೊಬ್ಬನೇ ಆಸ್ಥಳದಲ್ಲಿ ನಿಂತನು.

ಊರ ಜನರೆಲ್ಲರೂ ದೂರದಿಂದ ನೋಡುತ್ತ ದುಷ್ಟನಾದ ಈವೂರ ಅಧಿಕಾರಿಯು ಈತನಂ ವ್ಯರ್ಥವಾಗಿ ಕೊಲಿಸುವನಲ್ಲಾ !–ಎಂದು ಸಂಕಟಪಡುತಿದ್ದರು.

ರಸಿಕಮುರಾರನು ಸದ್ಭಾವದಿಂದ ಶ್ರೀಹರಿಯ ಭಜನೆಯಂ ಮಾಡುತ ನಿಂತನು. ಆಗ ಮಾವಟಿಗನು ಆನೆಯನ್ನು ರಸಿಕಮುರಾರನ ಮೇಲೆ ನಡೆಯಿಸಿದನು. ಶ್ರೀಹರಿಯು ಸರ್ವಭೂತಗಳಲ್ಲಿಯೂ ವ್ಯಾಪಕನಾಗಿರುವನು–ಎಂಬ ಮನೋನಿಶ್ಚಯವು ಆ ಮುರಾರನಿಗೆ ದೃಢವಾಗಿದ್ದಿತು. ಇಂತಹ ಸ್ಥಿತಿ ಯಾವನಲ್ಲಿರುವುದೋ ಅಂತವನಿಗೆ ಎಂದಿಗೂ ಅಪಾಯವು ಬರಲಾರದು. ಆನೆ ಬಳಿಗೆ ಬಂದು ಮುರಾರನ ಕಾಲುಗಳಂ ಹಿಡಿಯಿತು. ಆತನ ಪಾದಸ್ಪರ್ಶದಿಂದ ಆನೆಯು ತಾಮಸಗುಣವುಳ್ಳುದಾದರೂ ಸದ್ಭಾವದಿಂದ ನಮಸ್ಕಾರಮಾಡಿತು. ಅದಂ ಕಂಡು ಸರ್ವರೂ ಮದದಾನೆಯು ಅನೇಕಪ್ರಾಣಿಗಳಂ ಸಂಹರಿಸುವಂತಹುದು. ಅವರೂ ಈ ರಸಿಕಮುರಾರನ ಪಾದಗಳಿಗೆ ನಮಸ್ಕಾರವಂ ಮಾಡಿತು; ಇದು ಅತ್ಯಾಶ್ಚರ್ಯವು–ಎಂದು ಮಾತನಾಡಿಕೊಂಡರು.

ಮುರಾರನು ಶಿಷ್ಯರು ತೆಗೆದೆಸೆದಿದ್ದ ತುಳಸೀಮಾಲೆಗಳನೆಲ್ಲವನ್ನೂ ಕೂಡಿಸಿ ಆ ಆನೆಯ ಕೊರಳಿಗೆ ಹಾಕಿ, ಶ್ರೀರಾಮ ಕೃಷ್ಣ ನಾರಾಯಣ–ಎಂಬ ಮಂತ್ರವನ್ನು ಉಪದೇಶಿಸಿ-ನೀನು ಉನ್ಮತ್ತಭಾವವಂ ಬಿಟ್ಟು ಇನ್ನುಮೇಲೆ ಸಂತರ ಸೇವೆಯಂ ಮಾಡಬೇಕೆಂದು ನುಡಿದನು. ಆ ಆನೆ ಆಮಾತಂ ಕೇಳಿ ಸಾತ್ವಿಕಭಾವವಂ ಪಡೆಯಿತು.

ಸೇವಕರು ಅದಂ ನೋಡಿ ಆ ಅಧಿಕಾರಿಯ ಬಳಿಗೆ ಹೋಗಿ–ನೀವು ಯಾವನಂ ಕೊಲಿಸುವುದಕ್ಕೋಸ್ಕರ ಆನೆಯಂ ಕಳುಹಿಸಿದಿರೋ ಆತನಿಗೆ ಆ ಆನೆಯು ಸಾಷ್ಟಾಂಗ ನಮಸ್ಕಾರವಂ ಮಾಡಿತು–ಎಂದು ಹೇಳಲು, ಅವನು ಆಮಾತಂ ಕೇಳಿ ಆಶ್ಚರ್ಯಗೊಂಡು ಚಿತ್ತದಲ್ಲಿ ಪಶ್ಚಾತ್ತಾಪವನ್ನು ಹೊಂದಿ ರಸಿಕಮುರಾರನ ಸಮೀಪಕ್ಕೆ ಬಂದು ಆತನಿಗೆ ನಮಸ್ಕಾರವಂ ಮಾಡಿ, ನಿಮ್ಮ ಅದ್ಭುತಮಹಿಮೆಯನರಿಯದೆ ನಿಮ್ಮನ್ನು ಅವಮಾನಗೊಳಿಸಿದೆನು. ನೀವು ಶ್ರೀಹರಿಭಕ್ತೋತ್ತಮರು ಎಂಬ ನಿಶ್ಚಯ ವೆನಗುಂಟಾಯಿತು. ಅದರಿಂದ ನಿಮಗೆ ಸಾಷ್ಟಾಂಗವಂದನೆಯನ್ನು ಮಾಡಿದೆನು. ನಿಮ್ಮ ಮನದಲ್ಲಿ ಏನಪೇಕ್ಷೆಯಿರುವುದೋ ಅದಂ ನನಗೆ ಅಪ್ಪಣೆಕೊಡಿಸಬೇಕು. ಅದಂ ಅವಶ್ಯವಾಗಿ ಈಡೇರಿಸುವೆನು-ಎಂದು ವಿನಯಭಾವದಿಂದ ವಿಜ್ಞಾಪಿಸಿಕೊಂಡನು.

ರಸಿಕಮುರಾರನು ಅವನ ಮಾತಂ ಕೇಳಿ ಶ್ರೀಗುರುಗಳ ಪಾದವಂ ಮನದಲ್ಲಿ ಧ್ಯಾನಿಸಿ–ಅಯ್ಯಾ! ದೇವರ ಪೂಜೆಯ ಗ್ರಾಮಗಳಂ ಬಿಟ್ಟುಕೊಡಬೇಕು. ಅಲ್ಲದೆ ನಮ್ಮಿಂದ ಉಪದೇಶಿಸಲ್ಪಟ್ಟ ಈ ಆನೆಯನ್ನು ನಮಗೆ ಕೊಡಬೇಕು. ಇದನ್ನುಳಿದು ಮತ್ತೊಂದರಪೇಕ್ಷೆ ನಮಗಿಲ್ಲ-ಎನಲು, ಅವನು ಆಮಾತಿಗೆ ಒಡಂಬಟ್ಟು ಮತ್ತೆ ಸಾಷ್ಟಾಂಗನಮಸ್ಕಾರವಂ ಮಾಡಿದನು.

ಪಶುಜಾತಿಯಲ್ಲಿ ಉನ್ಮತ್ತವಾಗಿರುವ ಆನೆಯು ಜ್ಞಾನವುಳ್ಳುದಾದುದರಿಂದ ಸರ್ವರೂ ಆಶ್ಚರ್ಯಗೊಂಡರು.

ಬಳಿಕ ರಸಿಕಮುರಾರನು ಸನ್ನದುಗಳಂ ಬರೆಯಿಸಿಕೊಂಡು ಸಂಗಡ ಆನೆಯನ್ನೂ ಕರೆದುಕೊಂಡು ಕಾರ್ಯಸಾಧನದಿಂದ ಸಂತುಷ್ಟನಾಗಿ ಶ್ರೀಹರಿಕೀರ್ತನೆಯುಂ ಮಾಡುತ್ತ ತ್ವರೆಯಿಂದ ದಯಾರ್ಣವನ ಬಳಿಗೆ ಬಂದು ಸಾಷ್ಟಾಂಗವಂದನೆಯುಂ ಮಾಡಿ ಸನ್ನದುಗಳನ್ನು ಸಮರ್ಪಿಸಿ ನಡೆದ ಸಂಗತಿಯನ್ನು ಬಿನ್ನವಿಸಿದನು.

ಆನೆಯು ಸಂಪೂರ್ಣಜ್ಞಾನವುಳ್ಳುದಾಗಿ ರಾತ್ರಿಯಲ್ಲಿ ಹರಿಕೀರ್ತನವಂ ಕೇಳುತ್ತ ಹಗಲು ಅಡವಿಗೆ ಹೋಗಿ ಸೌದೆಯನ್ನೂ, ನಂತರ ಭೋಜನಕ್ಕೋಸ್ಕರ ಪತ್ರಾವಳಿಗಳನ್ನೂ ತಂದು ಕೊಡುತಿದ್ದಿತು. ಹೊರಗೆ ಬಿಸುಟ್ಟ ಉಚ್ಛಿಷ್ಟವನ್ನು ಭಕ್ಷಿಸಿಕೊಂಡು ಮತ್ತೊಂದನ್ನು ಮುಟ್ಟದೆ ಇದ್ದಿತು. ದೇವಾಲಯದ ಮಹಾದ್ವಾರದಲ್ಲಿ ಶ್ರೀವಿಷ್ಣುಭಕ್ತರು ನಿತ್ಯವೂ ಭಾಗವತವನ್ನು ಓದುತಿರಲು, ಅದನ್ನು ಕೇಳುತ್ತ ಅಲ್ಲಿ ನಿಲ್ಲುತಿದ್ದಿತು. ಪಶುಜಾತಿಯಲ್ಲಿಯೂ ಉನ್ಮತ್ತವಾದ ಆನೆಯ ಜನ್ಮವನ್ನು ಪಡೆದಿದ್ದರೂ ಪೂರ್ವಜನ್ಮಸುಕೃತವಿಶೇಷವಿದ್ದುದರಿಂದ ಅದು ಫಲಿಸಲು, ಸದ್ಗುರುಕೃಪೆಯುಂಟಾಯಿತು. ಸಾಧುಸಮಾಗಮವುವೊದವಿತು. ಇಂತು ಬಹುದಿವಸಗಳು ಕಳೆಯಲು, ರಸಿಕಮುರಾರನು ಆನೆಯನ್ನೂ ಕರೆದುಕೊಂಡು ತೀರ್ಥಯಾತ್ರೆಗೆ ಪ್ರಯಾಣವಾಡಿದನು. ಅನೇಕಭಾಗವತರು ಆನಂದಭರಿತರಾಗಿ ಪಾತ್ರವಸ್ತ್ರಂಗಳನ್ನೂ ಇತರಸಂಭಾರಗಳನ್ನೂ ಗಂಟುಕಟ್ಟಿ ಆನೆಯ ಮೇಲೆ ಹೊರಿಸಿ ತಾವೂ ಹಿಂದೆ ನಡೆದರು. ಆನೆಯೂ ಮಾರ್ಗದಲ್ಲಿ ತಸ್ಕರರು ಯಾರಾದರೂ ಬಂದರೆ ಅವರನ್ನು ಧ್ವಂಸಮಾಡುತ್ತ ಮುಖದಿಂದ ರಾಮನಾಮವಂ ಉದ್ಘೋಷಿಸುತಿದ್ದಿತು.

ರಸಿಕಮುರಾರನು ಪಶ್ಚಾತ್ತಾಪಯುಕ್ತನಾಗಿ ಅನೇಕತೀರ್ಥಂಗಳನ್ನು ಸೇವಿಸಿ ಬಳಿಕ ಇತರರ ಇಷ್ಟಾನುಸಾರದಿಂದ ಕುರುಕ್ಷೇತ್ರಕ್ಕೆ ಹೊರಡಬೇಕೆಂದು ಎಣಿಸಿ ಆ ಮಾರ್ಗವಂ ಕುರಿತು ನಡೆಯುತ್ತ ಅಲ್ಲಿ ಪ್ರಾಪ್ತವಾದ ವರುಣಾವತಿಯಲ್ಲಿ ಮೂರು ದಿವಸಗಳ ವರೆಗೆ ನಿಂತನು.

ಅಷ್ಟರಲ್ಲಿ ಅಲ್ಲಿಯ ತುರುಷ್ಕರಾಜನಿಗೆ ಆತನ ಸೇವಕರು—ಒಬ್ಬ ವಿರಕ್ತನು ಊರಲ್ಲಿ ಬಂದಿಳಿದಿರುವನು. ಅವನ ಬಳಿಯಲ್ಲಿ ಅನೇಕರು ಪರಿಚರಿಸುತಿರುವರು. ಮತ್ತು ಒಂದಾನೆಯೂ ಇರುವುದು. ಅದು ಬಹುಸುಂದರವಾಗಿದೆ. ಅದು ನಿಮ್ಮಲ್ಲಿ ಇದ್ದರೆ ರಾಜ್ಯಕ್ಕೆ ಬಹುಭೂಷಣವಾಗಿ ಒಪ್ಪುವುದು. ಆದಕಾರಣ ಎಂತಾದರೂ ಬಲಾತ್ಕಾರದಿಂದ ಆ ಆನೆಯನ್ನು ಅವನೆಡೆಯಿಂದ ಗ್ರಹಿಸಬೇಕು—ಎಂದು ಹೇಳಿದರು. ಅವನು ಸೇವಕರ ಮಾತಂ ಕೇಳಿ ಅದನ್ನು ಅಪೇಕ್ಷಿಸಿ—ರಾಜಯೋಗ್ಯವಾದ ವಸ್ತು ಆ ಭಿಕ್ಷುಕನಿಗೆ ಏಕೆ? ಆ ಆನೆಯಂ ಈಗಲೇ ತೆಗೆದುಕೊಂಡು ಬನ್ನಿ. ಅವನು ಕೊಡದಿದ್ದರೆ ಅವನನ್ನು ಶಿಕ್ಷಿಸುವುದು—ಎಂದು ದೂತರಿಗೆ ಆಜ್ಞಾಯಿಸಿತ್ತು ಕಳುಹಿಸಿಕೊಟ್ಟನು.

ದೂತರು ಆ ದುರ್ಬುದ್ಧಿಯ ಮಾತಂ ಕೇಳಿ ತ್ವರೆಯಿಂದ ಹೊರಟು, ಭಾಗವತರ ಮಧ್ಯದಲ್ಲಿ ಮನಸ್ಸ್ವಾಸ್ಥ್ಯದಿಂದ ನಿಂತಿದ್ದ ಆನೆಯನ್ನು ನೋಡಿ ಸಂತೋಷಗೊಂಡು ರಸಿಕಮುರಾರನಂ ಕುರಿತು—ನಿಮ್ಮ ಬಳಿಯಲ್ಲಿರುವ ಈ ಆನೆಯ ಮೇಲೆ ನಮ್ಮ ಮಹಾರಾಜರಿಗೆ ಪ್ರೀತಿಯುಂಟಾಗಿರುವುದು. ಅದಕ್ಕೋಸ್ಕರ ನಮ್ಮನ್ನು ಕಳುಹಿಸಿ ಕೊಟ್ಟಿರುವರು. ಇದನ್ನು ನಮ್ಮ ವಶಕ್ಕೆ ಕೊಡಬೇಕು. ನೀವು ಅನುನಯದಿಂದ ಕೊಡದಿದ್ದರೆ ಬಲಾತ್ಕಾರದಿಂದಲಾದರೂ ತೆಗೆದುಕೊಂಡು ಹೋಗುವೆವು. ಈ ವಿಷಯ ದಲ್ಲಿ ಏನುತ್ತರ?—ಎಂದು ಬೆಸಗೊಂಡರು.

ಇದಂ ಕೇಳಿ ಅಲ್ಲಿದ್ದ ಸಂತರೆಲ್ಲರೂ—ರಾಜನು ತುರುಷ್ಕನು; ಉನ್ಮತ್ತನು; ಕುಮತಿ. ಅವನಿಗೆ ಧರ್ಮನೀತಿಯಂ ಹೇಳಿ ಕಳುಹಿಸಿದರೆ ಅವನೆಂದಿಗೂ ಕೇಳನು; ಕಾಗೆಯನ್ನು ಪಂಜರದಲ್ಲಿರಿಸಿ ಪ್ರಯತ್ನದಿಂದ ಕಲಿಸಿದರೂ ಅದರ ಬಾಯಲ್ಲಿ ರಾಮ ನಾಮೋಚ್ಚಾರಣೆಯಾಗುವುದೇ? ಲುಬ್ಧನನ್ನು ಧನವಂ ಬೇಡಿದರೆ ಅವನು ನೀಡು ವನೇ? ಕಳ್ಳಿಯ ಮರಕ್ಕೆ ನೀರೆರೆದು ಅದಂ ಬೆಳೆಯಿಸಿದರೆ ಅದರಲ್ಲಿ ಸ್ವಾದುಫಲ ವುಂಟಾಗುವುದೇ? ಘಾತುಕನಾದ ಕಿರಾತನಿಗೆ ಬೋಧಿಸಿದರೆ ಅವನು ಸಿಕ್ಕಿದ ಪಶು ವನ್ನು ಬಿಡುವನೇ? ತುಳಸಿಯ ಮಾಹಾತ್ಮ್ಯವಂ ಶ್ರವಣಮಾಡಿಸಿದರೆ ಅದರ ವಿಷಯ ದಲ್ಲಿ ಆಡಿಗೆ ದಯೆಬರುವುದೇ? ಬ್ರಹ್ಮಜ್ಞಾನಿಯಂ ಕಂಡರೆ ಮದ್ಯಪಾಯಿಗೆ ಭಕ್ತಿಯು ಉಂಟಾಗುವುದೇ? ಅರಗಿಳಿಯ ಮುದ್ದಿನನುಡಿ ಗಿಡಗನಿಗೆ ಹೃದಯಂಗಮವಾಗುವುದೇ? ಮೀನು ನೀರಿಲ್ಲದೆ ತಲ್ಲಣಿಸುತಿದ್ದರೆ ಬಳಿಯಲ್ಲಿರುವ ಬಕಪಕ್ಷಿಗೆ ಕರುಣೆಯುಂಟಾ ಗುವುದೇ? ಇದೆಲ್ಲವೂ ಎಂತು ಅಸಂಭಾವ್ಯವೋ ಅಂತು ನಮ್ಮ ಧರ್ಮಬೋಧೆಯು ಅವನ ಮನಸ್ಸಿಗೆ ಹತ್ತುವುದೂ ಅಸಂಭಾವಿತವು. ಈ ವಿಷಯದಲ್ಲಿ ಏನುಮಾಡು ವುದು?—ಎಂದು ಚಿಂತಿಸುತಿದ್ದರು.

ರಸಿಕಮುರಾರನು ರಾಜದೂತರಂ ಕುರಿತು—ಈ ಆನೆಯು ವಿಷ್ಣುಭಕ್ತರ ನಲ್ಲದೆ ಇನ್ನಾರನ್ನೂ ಬಳಿಗೆ ಬರಲೀಯದು. ಇದರಮೇಲೆ ನೀವು ಕೈಯಿಟ್ಟರೆ ಕ್ಷಣಮಾತ್ರದಲ್ಲಿ ಕೊಂದುಬಿಡುವುದು—ಎಂದು ಉತ್ತರವನ್ನು ಹೇಳಿದನು. ಆದರೂ ಅವರು ಆನೆಯನ್ನು ಹಿಡಿವ ಸಾಹಸವನ್ನು ಮಾಡಿದರು. ಆನೆಯು ಸ್ವಾಧೀನತೆಗೆ ಬಾರದೆ ಕೋಪದಿಂದ ಕೊಲ್ಲುವುದಕ್ಕೆ ಪ್ರವರ್ತಿಸಿತು.

ದೂತರು ಭೀತರಾಗಿ ಓಡಿ ರಾಜಸನ್ನಿಧಿಯಂ ಸೇರಿ—ಆನೆಯು ವಿಷ್ಣುಭಕ್ತರಿಗೆ ಅಲ್ಲದೆ ಮತ್ತಾರಿಗೂ ಅಧೀನವಾಗದು—ಎಂದು ಬಿನ್ನವಿಸಲು, ರಾಜನು ಮಾವಟಿಗರನ್ನು ಕರೆಯಿಸಿ—ನೀವು ವಿಷ್ಣುಭಕ್ತರ ವೇಷವಂ ಹಾಕಿಕೊಂಡು ಹೋಗಿ ಆ ಆನೆಯಂ ತೆಗೆದುಕೊಂಡು ಬನ್ನಿ—ಎಂದು ಅಪ್ಪಣೆಮಾಡಿದನು.

ಅವರು ರಾಜಾಜ್ಞೆಯಂತೆ ಕೊರಳಿಗೆ ತುಳಸೀಮಾಲೆಯಂ ಹಾಕಿಕೊಂಡು ಗೋಪೀಚಂದನನಾಮಗಳಂ ಧರಿಸಿಕೊಂಡು, ಗೋಪಾಲಕೃಷ್ಣ—ಎಂದು ನಾಮಸಂ

ಕೀರ್ತನವಂ ಮಾಡುತ್ತ ಯಾತ್ರಿಕರಂ ಪಿಡಿದು ಸುಲಿದುಕೊಳ್ಳುವುದಕ್ಕೋಸ್ಕರ ತನಸ್ವಿವೇಷವಂ ಧರಿಸಿ ಮಾರ್ಗದಲ್ಲಿ ಪ್ರತಿಪಾಲಿಸುವ ಕಳ್ಳನಂತೆ, ಮಿನಂ ಹಿಡಿಯುವುದಕ್ಕೋಸ್ಕರ ಧ್ಯಾನಾರೂಢಗಳಾಗಿರುವ ಬಕಗಳಂತೆ ಪ್ರಚ್ಛನ್ನಭಾವವಂ ತಾಳಿ ಕಪಟದ ವಿಷ್ಣುಭಕ್ತರಾಗಿ ಆನೆಯ ಸಮೀಪಕ್ಕೆ ಬಂದು ಅದಂ ಹಿಡಿಯುವುದಕ್ಕೆ ಉದ್ಯುಕ್ತರಾದರು. ಆನೆಗೆ ಅವರ ಕಪಟಭಾವವು ತಿಳಿಯಿತು. ಆದರೂ ಮುಖದಿಂದ ಭಗವನ್ನಾಮಸಂಕೀರ್ತನವನ್ನು ಮಾಡುತಿದ್ದುದರಿಂದ ಅದು ಶಾಂತಿಯನ್ನು ಅವಲಂಬಿಸಿತು. ಆ ಕಪಟಿಗಳು ಆನೆಯಂ ಹಿಡಿದು ರಾಜದ್ವಾರಕ್ಕೆ ತೆಗೆದುಕೊಂಡು ಹೋಗಿ ರಾಜನಿಗೆ ಕಾಣಿಸಿ ಅವನ ಅಪ್ಪಣೆಯಿಂದ ಅದನ್ನು ಒಂದು ಸ್ಥಳದಲ್ಲಿ ಕಟ್ಟಿದರು. ಅಂದಿನಿಂದ ತನಗೆ ಸಂತರ ಸೇವೆಯು ತಪ್ಪಿಹೋಯಿತೆಂಬ ವ್ಯಸನವು ಆ ಆನೆಯ ಮನಸ್ಸಿನಲ್ಲಿ ನಟ್ಟಿತು. ಅದು ಏಳುದಿವಸಗಳವರೆಗೆ ತೃಣಾದ್ಯಾಹಾರವಂ ತೆಗೆದುಕೊಳ್ಳದೆ ಕಣ್ಣೀರಧಾರೆಯಂ ಸುರಿಯಿಸುತ್ತ ಇದ್ದು ಬಳಿಕ ದೇಹವಂ ಬಿಟ್ಟು ವೈಕುಂಠಲೋಕವಂ ಸೇರಿತು. ಸಾಧುಗಳ ಸಂಗವು ದೊರೆಯಲು ಅಲ್ಪಕಾಲದಲ್ಲಿ ಪಶುವಿಗೂ ಸದ್ಗತಿಯು ಉಂಟಾಯಿತು. ಮನುಷ್ಯರ ಸಂಗತಿಯಿಂದ ಸುಗುಣವುಂಟಾಗುವುದೇನೂ ಅದ್ಭುತವಲ್ಲ. ದಿವ್ಯವಾದ ಸುಗಂಧತರುವಿನ ಸಂಗತಿಯಿಂದ ಸುತ್ತಣ ಕಂಟಕದ್ರುಮಗಳಿಗೂ ಸುವಾಸನೆ ಉಂಟಾಗುವುದು. ಅಂತು ದುರ್ಜನನೂ ಸತ್ಪುರುಷರ ನೆರೆಯಲ್ಲಿ ಸೇರಲು ಉತ್ತೀರ್ಣನಾಗುವನು. ಆದುದರಿಂದ ಎಲೈ ಶ್ರೋತೃಗಳಿರಾ! ನೀವು ಭಾಗ್ಯವಂತರು; ಭಕ್ತರ ಕಥೆಯಂ ಕೇಳುತಿರುವಿರಿ.

ಮುಂದಣ ಅಧ್ಯಾಯದಲ್ಲಿ ಮಿರಾಬಾಯಿಯೆಂಬಾಕೆಗೆ ಸಂಕಟದಲ್ಲಿ ಚಕ್ರಪಾಣಿಯು ಪ್ರಸನ್ನನಾದನೆಂಬ ಕಥೆಯು ನಿರವಿಸಲ್ಪಡುವುದು. ಆಕಥೆಯ ರಸವನ್ನು ಭಾಗ್ಯವಂತರಾದ ನಿಮ್ಮ ಶ್ರವಣಪತ್ರಪುಟದಲ್ಲಿ ಬಡಿಸುವೆನು. ಆದರದಿಂದ ಅದಂ ಗ್ರಹಿಸಲು, ಸ್ವಾನಂದಾನುಭವವಾಗುವುದು.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತೇಳನೆಯ ಅಧ್ಯಾಯಂ ಸಂಪೂರ್ಣಂ.

ಮೂವತ್ತೆಂಟನೆಯ ಅಧ್ಯಾಯ.

ಮಿರಾಬಾಯಿಯ ಚರಿತ್ರೆ.

ಎಲೈ ಶ್ರೋತೃಗಳಿರಾ! ಶ್ರದ್ಧೆಯೆಂಬ ಪೂರ್ಣಿಮೆಯು ಪ್ರಾಪ್ತವಾಗಲು, ಭಕ್ತವಿಜಯವೆಂಬ ಪೂರ್ಣಚಂದ್ರನು ದೃಗ್ಗೋಚರನಾಗಿರುವನು. ಆತನು ಹೃದಯಾಕಾಶದಲ್ಲಿ ವ್ಯಾಪಿಸಲು, ಅವಿದ್ಯಾತಿಮಿರವು ದೂರವಾಗಿ ಸರಿಯುತ್ತಿರುವುದು. ಸುಜ್ಞಾನಿಗ

ಳೆಂಬ ಚಕೋರಪಕ್ಷಿಗಳಿಗೆ ನಿಶ್ಚಯವಾಗಿಯೂ ಪರಮೋಲ್ಲಾಸವು ಉಂಟಾಗಿರುವುದು. ವಿಶ್ವಾಸದಿಂದ ನಿಟ್ಟಿಸಿ ನೋಡಲು, ಅಮೃತವೃಷ್ಟಿಯು ಪ್ರಾಪ್ತವಾಗುವುದು. ಅನಂತ ವಾದ ಸುಖಸಮೃದ್ಧಿಯೊದವುವುದು. ಈ ಚಂದ್ರನಂ ನೋಡಿ ವಿಕಲ್ಪಿತಸ್ಕರರು ಸಂತಾಪ ಪಡುವರು. ಅವರ ದುಷ್ಟವ್ಯಾಪಾರವು ಇದರ ಮುಂದೆ ನಡೆಯದು. ಅದರಿಂದ ದೂರ ವೋಡಿಹೋಗುವರು. ಶ್ರೋತೃಗಳು ಮನಸ್ಸ್ವಾಸ್ಥ್ಯವಂ ತಾಳ್ದು ಶ್ರವಣದಲ್ಲಿ ಸಾದರ ರಾಗಿರಬೇಕು.

ಹಿಂದೂಸ್ಥಾನದಲ್ಲಿ ಉದಯಪುರವೆಂಬ ದೊಡ್ಡಪಟ್ಟಣವಿರುವುದು. ಅದು ಪುಣ್ಯ ನಗರವು. ಅಲ್ಲಿ ಒಬ್ಬ ರಾಜನಿದ್ದನು. ಆತನು ವಿಷ್ಣುಭಕ್ತನು ; ಅತಿಥಿಗಳೆಲ್ಲರನ್ನೂ ಅನ್ನವಸ್ತ್ರಾದಿಗಳಿಂದ ಸಂತೋಷಪಡಿಸುತ್ತಿದ್ದನು. ಬಂದ ಭಾಗವತರನ್ನು ಪೂಜಿಸುತ್ತ ಇದ್ದನು. ಅರಮನೆಯ ಮುಂದೆ ಗೋಪಾಲಕೃಷ್ಣಮೂರ್ತಿಯನ್ನು ನಿತ್ಯವೂ ಷೋಡ ಶೋಪಚಾರಗಳಿಂದ ಪೂಜಿಸಿ ಮಂಗಳನೀರಾಜನವನ್ನು ಬೆಳಗಿ ಪ್ರಸಾದವಂ ತೆಗೆದು ಕೊಂಡು ಬಳಿಕ ಭೋಜನವಂ ಮಾಡುತಿದ್ದನು.

ಇಂತಿರಲು, ಆತನಿಗೆ ಕನ್ಯಾರತ್ನವೊಂದು ಜನಿಯಿಸಿತು. ಹನ್ನೆರಡುದಿನಗಳಾಗು ವುದೂ ಆಮಗುವಿಗೆ ಮೀರಾಬಾಯಿಯೆಂದು ಹೆಸರನಿಟ್ಟರು. ತಾಯಿಯು ಮಗುವ ನ್ನೆತ್ತಿ ಶ್ರೀಕೃಷ್ಣನ ಪಾದಗಳಮೇಲೆ ಹಾಕಿದಳು. ಆ ಕುವರಿ ರೂಪಿನಲ್ಲಿ ಅತ್ಯಂತ ಸುಂದರಿ. ರಾಜನು ಆ ಕುವರಿಯನ್ನು ನೋಡಿ ಹಿಗ್ಗುತಿದ್ದನು. ದಿನದಿನಕ್ಕೆ ಅವಳು ಬೆಳೆಯುತ ಬಂದಳು. ರಾಜನು ದೇವಸ್ಥಾನಕ್ಕೆ ಬರುವಾಗ ಮಗುವನ್ನು ಸಂಗಡ ಕರೆದು ಕೊಂಡು ಬರುತ್ತ ಇದ್ದನು. ಶ್ರೀಕೃಷ್ಣಮೂರ್ತಿಯು ಬಹುಸುಂದರವಾಗಿದ್ದಿತು. ಆಮೂರ್ತಿಗೆ ದಿವ್ಯಪೀತಾಂಬರವನುಡಿಸಿ ಸಿರದಲ್ಲಿ ದಿವ್ಯಕಿರೀಟವನ್ನಿಟ್ಟು ಕಿವಿಗಳಲ್ಲಿ ಮಣಿಖಚಿತವಾದ ಮಕರಕುಂಡಲಗಳಂ ಧರಿಸಿ ಕೊರಲಲ್ಲಿ ಮುಕ್ತಾಹಾರವನ್ನೂ ವೈಜ ಯಂತಿಯನ್ನೂ ಇಳಿಯಬಿಟ್ಟು ಇನ್ನೂ ಅನೇಕವಾದ ರತ್ನಾಭರಣಗಳಂ ತುಡಿಸಿ ಅಲಂಕಾ ರವಮಾಡುತಿದ್ದರು. ನೋಡಲು ಭಗವನ್ಮೂರ್ತಿಯು ಹಸನ್ಮುಖವಾಗಿ ಸುಕುಮಾರವಾಗಿ ಮನೋಹರವಾಗಿ ಕಂಗೊಳಿಸುತಿದ್ದಿತು. ಇಂತಹ ಚೆಲುವಿನ ಗೋಪಾಲಕೃಷ್ಣಮೂ ರ್ತಿಯಂ ನೋಡುವುದೂ ಅದರಲ್ಲಿಯೇ ಮೀರಾಬಾಯಿಯ ಮನಸ್ಸು ನಿಂತಿತು. ನನಗೆ ಈದೇವರೇ ಪತಿಯಾಗಬೇಕಲ್ಲದೆ ನಾನು ಮತ್ತೊಬ್ಬರನ್ನು ವರಿಸುವುದಿಲ್ಲ—ಎಂದಳು. ಆಕೆಯು ಇಂತು ಮನದಲ್ಲಿ ನಿಶ್ಚಯವಂ ಮಾಡಿರಲು, ಒಂದುದಿನ ರಾಜನು ತನ್ನ ಕಾಂ ತೆಯಂ ಕುರಿತು—ಮೀರಾಬಾಯಿಯು ದೊಡ್ಡವಳಾಗಿ ಕಾಣುವಳು. ಆದಕಾರಣ ಇನ್ನು ವಿಲಂಬವಂ ಮಾಡದೆ ಉತ್ತಮನಾದ ವರನನ್ನು ನೋಡಿ ಮದುವೆಯಂ ಮಾಡಬೇಕು— ಎಂದನು.

ಆಗ ಸಮೀಪದಲ್ಲಿದ್ದ ಮೀರಾಬಾಯಿಯು ತಂದೆಯ ಮಾತಂ ಕೇಳಿ ಮಂಜುಳ ಸ್ವರದಿಂದ—ನನಗೆ ಪತಿಯನ್ನು ನಾನು ನೋಡಿಕೊಂಡಿರುವೆನು. ಆತನು ಯಾರೆಂದರೆ,

ನೀವು ನಿತ್ಯವೂ ಯಾರ ಪೂಜೆಯನ್ನು ಭಕ್ತಿಯಿಂದ ಮಾಡುತಿರುವಿರೋ ಆ ಶ್ರೀಕೃಷ್ಣನೇ. ನೀವು ಹಿರಿಯರು; ತಾಯ್ತಂದೆಗಳು. ಆಲೋಚನೆಯಂ ಮಾಡಿ ಆಗೋಪಾಲಕೃಷ್ಣಮೂರ್ತಿಗೆ ನನ್ನನ್ನು ಸಮರ್ಪಿಸಬೇಕು. ಚಿತ್ತದಲ್ಲಿ ಸಂದೇಹಪಡಬಾರದು-ಎನಲು, ರಾಜನು ಮಗಳ ಮಾತಂ ಕೇಳಿ ಅಮ್ಮಾ! ಅದು ನಿರ್ಜೀವವಾಗಿರುವ ಪಾಷಾಣಮೂರ್ತಿ. ನೀನು ಇನ್ನೂ ಪಸುಳೆ. ನಿನಗೆ ತಿಳಿಯದು. ಅದರಿಂದಲೇ ಆ ಮೂರ್ತಿಯಲ್ಲಿ ನಿನಗೆ ಬಹುಪ್ರೀತಿಯುಂಟಾಗಿದೆ. ಶ್ರೀಹರಿಯು ಈ ಕಲಿಯುಗದಲ್ಲಿ ಬೌದ್ಧಾವತಾರವಂಮಾಡಿ ಸ್ವಸ್ಥನಾಗಿ ನಿಂತಿರುವನು. ಆತನ ಸಾಕ್ಷಾದ್ರೂಪವು ಮನುಷ್ಯರಿಗೆ ಕಾಣಬರುವುದಿಲ್ಲ. ಈ ಅರ್ಥವು ನಿನ್ನ ಬಾಲಬುದ್ಧಿಗೆ ತೋರದು. ಅದರಿಂದ ಆ ಮೂರ್ತಿಯನ್ನು ವರಿಸಲಿಚ್ಛಿಸುವೆ. ಈ ಇಚ್ಛೆಯನ್ನು ಬಿಟ್ಟು ಪ್ರಸಿದ್ಧನಾಗಿರುವ ರಾಜನನ್ನು ವರಿಸುವವಳಾಗು-ಎಂದು ಹೇಳಿದನು.

ಅವಕ್ಕೆ ವಿರಾಬಾಯಿಯು-ಆತನು ದೇವಾದಿದೇವನು. ಶ್ರೀನಿವಾಸನು. ತ್ರೈಲೋಕ್ಯನಾಥನು. ಆತನಿಗಿಂತ ಶ್ರೇಷ್ಠನಾದವನು ಹುಡುಕಿದರೂ ಎಲ್ಲಿಯೂ ದೊರೆಯನು. ಆತನು ಚತುರ್ಮುಖನಿಗೂ ತಂದೆಯಾದವನು. ಸರ್ವವಂಮಾಡಿಯೂ ಅಕರ್ತೃವೆನಿಸುವನು. ಆತನ ನಾಮವನ್ನು ಜಪಿಸಿದುದರಿಂದ ಶಿವನು ವಿಷಜ್ವಾಲೆಯ ಶಾಂತಿಯಂ ಹೊಂದಿದನು. ಅದು ನಿನಗೆ ತಿಳಿಯದು. ಸುರರಲ್ಲಾಗಲಿ ನರರಲ್ಲಾಗಲಿ ಆತನಿಗಿಂತ ದೊಡ್ಡವನಾದವನು ಯಾವನೂ ಇಲ್ಲ. ಆದುದರಿಂದ ಆತನಲ್ಲಿಯೇ ನನಗೆ ಅತ್ಯಂತಪ್ರೀತಿಯು ಹುಟ್ಟಿರುವುದು. ಆತನನ್ನು ಪಾಷಾಣಮೂರ್ತಿಯೆಂದು ನೀನು ನುಡಿವೆ. ಅಂತಹನುಡಿಯನ್ನು ಎಂದಿಗೂ ನುಡಿಯಬಾರದು. ಪ್ರಹ್ಲಾದನು ವಿಶ್ವಾಸವನ್ನು ಹಿಡಿದಿರಲು ಮರದಲ್ಲಿಯೇ ಸ್ವಾಮಿಯು ಪ್ರಕಟನಾದನು. ಇದು ಪೂರ್ವಕಾಲದ ಮಾತೆಂದು ಮನದಲ್ಲಿ ವಿಕಲ್ಪವನ್ನು ಎಣಿಸೀಯೆ; ಈ ಕಲಿಯುಗದಲ್ಲಿಯೂ ಶ್ರೀಕೃಷ್ಣನು ದ್ವಾರಕೆಯಿಂದ ಢಾಕೂರಿಗೆ ನಡೆದುಬಂದನು. ಮತ್ತು ಮಧುರೆಯಲ್ಲಿದ್ದ ಪುರಾತನಮೂರ್ತಿಯು ಒಂದೇರಾತ್ರಿಯಲ್ಲಿ ಹರಿದ್ವಾರಕ್ಕೆ ನಡೆದುಬಂದಿತು. ನಾಮದೇವನ ಅತಿಶಯವಾದ ಭಕ್ತಿಯನ್ನುನೋಡಿ ಸ್ವಾಮಿಯು ಆತನ ಸಂಗಡ ಭೋಜನವಂ ಮಾಡಿರುವನು. ಭಕ್ತರ ಶುದ್ಧಭಾವವೇ ಸಾಕ್ಷಾತ್ಪರಬ್ರಹ್ಮವೆನಬೇಕು. ಪ್ರೇಮಯುಕ್ತನಾಗಿ ಕೀರ್ತನದಲ್ಲಿ ನಾಮವನ್ನು ಪಾಡುತಿದ್ದರೆ ಅಲ್ಲಿಯೇ ಮಾಧವನು ಇರುತಿರುವನು. ಕಮಲಗಳಲ್ಲಿ ಉಂಟಾದ ಪ್ರೀತಿಯಿಂದ ಝೇಂಕರಿಸುತ್ತ ಬಳಿಯಲ್ಲಿ ಸುತ್ತುತಿರುವ ಭ್ರಮರಗಳಂತೆ ಸ್ವಾಮಿಯು ಕೀರ್ತನರಂಗದ ಬಳಿಯಲ್ಲಿ ಸುತ್ತುತಿರುವನು. ಈ ಕಲಿಯುಗದಲ್ಲಿ ಅಭಕ್ತರಿಗೋಸ್ಕರವೇ ಮೌನವಂ ವಹಿಸಿರುವನು. ಭಾವುಕರಾದ ಭಕ್ತರೊಡನೆ ಮಾತನಾಡುತಿರುವನು. ಆದಕಾರಣ ಮನದಲ್ಲಿ ವಿಕಲ್ಪವನ್ನು ಮಾಡದೆ ನನ್ನಂ ಶ್ರೀಗೋಪಾಲಮೂರ್ತಿಗೆ ಅರ್ಪಿಸಬೇಕು. ಭಜನದಲ್ಲಿ ಪ್ರೀತಿಯನಿಡಬೇಕು-ಎಂದಳು. ಆಮಾತುಗಳಂಕೇಳಿ ರಾಜನು-ಇವಳ ಜನ್ಮಾಂತರಸುಕೃತವು

ಉತ್ತಮವಾದುದು. ನನಗೆ ಈಗ ತಿಳಿಯಬಂದಿತು. ಇವಳು ಬಾಲೆ; ಅಜ್ಞಾನಿನಿ; ಏನನೂ ತಿಳಿಯದ ಪಸುಳೆ. ಪುರಾಣಂಗಳಂ ಕೇಳಿದವಳಲ್ಲ. ಇಂತಿರುವಲ್ಲಿ ನಮಗೂ ದೊರೆಯದ ಅದ್ಭುತವಾದ ತಿಳಿವಳಿಕೆ ಇವಳಿಗೆ ಎಲ್ಲಿಂದ ಬಂದಿತು ?-ಎಂದು ಅತ್ಯಂತ ವಿಸ್ಮಯಗೊಂಡು ಮಗಳಂ ಕುರಿತು-ಅಮ್ಮಾ ! ಆ ಗೋಪಾಲಮೂರ್ತಿಯನ್ನು ನಿನ ಗೋಸ್ಕರನೇ ಸಮರ್ಪಿಸಿರುವೆನು. ನೀನು ಆಮೂರ್ತಿಯನ್ನು ಮನೆಗೆ ತೆಗೆದು ಕೊಂಡು ಬಂದು ಪ್ರೀತಿಯಿಂದ ಪೂಜೆಯಂ ಮಾಡುತಿರು-ಎಂದು ಅಪ್ಪಣೆಯಂ ಕೊಟ್ಟನು.

ಆ ವಿರಾಬಾಯಿಯು ತಂದೆಯ ಅಪ್ಪಣೆಯಂ ಕೇಳಿ ಬಹುಸಂತೋಷಗೊಂಡು ಆ ಗೋಪಾಲಮೂರ್ತಿಯನ್ನು ತನ್ನ ಮನೆಗೆ ತೆಗೆದುಕೊಂಡುಬಂದು ಅಲ್ಲಿಯೇ ಸ್ಥಾಪಿಸಿ ಭಕ್ತಿಯಿಂದ ನಿತ್ಯವೂ ಪೂಜಿಸುತಿದ್ದಳು. ರಾಜನು, ತನ್ನ ಮಗಳು ಸುಜ್ಞೆ ಯೆಂದು ಭಾವಿಸಿ ಸಂತೋಷಿಸುತ್ತ ಪೂಜಾಸಾಹಿತ್ಯಗಳನ್ನು ತಾನೆ ಸಿದ್ಧಪಡಿಸಿ ಕೊಡುತಿದ್ದನು.

ಆಕೆಯು ನಿತ್ಯವೂ ಪ್ರಾತಃಕಾಲದಲ್ಲಿ ಸ್ನಾನವಂಮಾಡಿ ನಿಯಮದಿಂದ ಭಗವ ನ್ನಾಮಸಂಕೀರ್ತನೆಯಂಮಾಡಿ ಸ್ವಾಮಿಗೆ ಮೊದಲು ಸುಗಂಧತೈಲಗಳಿಂದ ಉದ್ವರ್ತನ ವನ್ನುಮಾಡಿ ಬಳಿಕ ಪಂಚಾಮೃತದ್ರವ್ಯಗಳಿಂದ ಅಭಿಷೇಕವಂ ಮಾಡಿ ತದನಂತರ ಉಷ್ಣೋದಕದಿಂದ ಕ್ಷಾಳನವಂಮಾಡಿ ವಸ್ತ್ರದಿಂದೊರಸಿ ಪೀತಾಂಬರವನುಡಿಸಿ ಹೊದಿಸಿ ಶಿರಸ್ಸಿನಲ್ಲಿ ಕಿರೀಟವನಿಟ್ಟು ರತ್ನಾಭರಣಗಳಿಂದ ಅಲಂಕಾರವಂಮಾಡಿ ಊರ್ಧ್ವ ತ್ರಿಪುಂಡ್ರಂಗಳಂತಿದ್ದಿ ದಿವ್ಯಗಂಧವಂ ತೊಡೆದು ಪುಷ್ಪಮಾಲೆಯಂ ಸಮರ್ಪಿಸಿ ಧೂಪ ದೀಪನೈವೇದ್ಯತಾಂಬೂಲಮಂಗಳನೀರಾಜನಾದ್ಯುಪಚಾರಂಗಳಂ ಸಲಿಸಿ ಪ್ರದಕ್ಷಿಣ ನಮಸ್ಕಾರಂಗಳಂ ಮಾಡಿ-ಪತಿತಪಾವನನೆ ! ಶ್ರೀಕೃಷ್ಣನೇ ! ನನ್ನ ಭಕ್ತಿಭಾವವು ಅಲ್ಪವಾಗಿರುವುದು. ನನ್ನಲ್ಲಿ ದಯೆಯಂ ಮಾಡು-ಎಂದು ಪ್ರಾರ್ಥಿಸಿ ವಿಷ್ಣುಭಕ್ತರಂ ಕರೆದು ಸದ್ಭಾವದಿಂದ ಅವರ ಪೂಜೆಯಂಮಾಡಿ ನಮಸ್ಕರಿಸಿ ಉಳಿದ ಪ್ರಸಾದಾನ್ನವಂ ಭುಂಜಿಸಿ ಬಳಿಕ ಮಧ್ಯಾಹ್ನದಲ್ಲಿ ಭಾಗವತಪುರಾಣವಂ ಶ್ರವಣಮಾಡುತಿದ್ದಳು.

ಆಗ ಶ್ರೀಹರಿಯ ಚರಿತ್ರಂಗಳಂ ಕೇಳುವುದಕ್ಕೆ ಅಧ್ಯಾತ್ಮಜ್ಞಾನಿಗಳೂ ಸರ್ವದಾ ವೈರಾಗ್ಯಭರಿತರೂ, ಯಾರ ಸ್ಪರ್ಶದ ದೆಸೆಯಿಂದ ತೀರ್ಥಗಳೂ ನಿರ್ಮಲಗಳಾಗು ವುವೋ ಆ ಸಾಧುಮಹನೀಯರೂ, ರಾಜನನ್ನೂ ಭಿಕ್ಷುಕನನ್ನೂ ಸಮಭಾವದಿಂದ ಕಾಣುವರೂ, ಸಗಣಿಯನ್ನೂ, ಸುವರ್ಣವನ್ನೂ, ಊರ್ವಶಿಯನ್ನೂ ಹೆಣ್ಣುಕರಡಿ ಯನ್ನೂ ಸಮವಾಗಿ ಭಾವಿಸುವರೂ ಆಕೆಯ ಮನೆಗೆ ಬರುತ್ತಿದ್ದರು. ರಾತ್ರಿಯಲ್ಲಿ ನಾನಾಪ್ರಬಂಧಕವಿತ್ವವಂಮಾಡಿ ಶ್ರೀಹರಿಯ ಗುಣಂಗಳಂ ಪಾಡುತ್ತ ಕೀರ್ತನವಂ ಮಾಡುತಿದ್ದರು.

ಆನಗರದೊಳಿದ್ದ ನಿಂದಕರಾದ ದುರ್ಜನರು ಅದಂ ಕಂಡು-ರಾಜನ ಮಗಳು ಆತನ ಹೆಸರಂ ಮುಳುಗಿಸಿದಳು ; ವಿರಾಗಿಗಳಂ ಸುತ್ತಲೂ ಕೂಡಿಸಿಕೊಂಡು ಕೀರ್ತನ

ದಲ್ಲಿ ನಿರ್ಲಜ್ಜೆಯಾಗಿ ಕುಣಿಯುತ್ತಿರುವಳು ; ರೂಪದಲ್ಲಿ ಸುಂದರಿ; ಲಾವಣ್ಯದ ಗಣಿ; ಸುಗುಣಕ್ಕೆ ಕಳಂಕವಂ ಹತ್ತಿಸಿದಳು. ಪ್ರಜೆಗಳು ಮಾರ್ಗವಂಬಿಟ್ಟು ನಡೆದರೆ ಅವರನ್ನು ರಾಜನು ದಂಡಿಸುವನು. ತನ್ನ ಮನೆಯಲ್ಲಿಯೇ ದುಷ್ಕರ್ಮವು ನಡೆಯುತ್ತಿದ್ದರೂ ಸರ್ವಕಾಲದಲ್ಲಿಯೂ ಮದಾಂಧನಾಗಿ ಉದಾಸೀನನಾಗಿರುವನು. ಸೂರ್ಯನಂತೆ ಮಹಾತೇಜಸ್ಸಂಪನ್ನನು. ಅಂತಹನ ಕನ್ಯೆ ದುಷ್ಟಗುಣವುಳ್ಳವಳಾದಳು. ಕಬ್ಬಿನ ಹೊಟ್ಟೆಯಲ್ಲಿ ಸೂನಂಗಿ ಹುಟ್ಟಿದಂತಾಯಿತು—ಎಂದು ನಿಂದಿಸುತ್ತ ಕೈಗಳಂ ತಟ್ಟಿಕೊಂಡು ನಗುತ್ತ ಮನದಲ್ಲಿ ಪಾಪಭಾವನೆಯಂ ಮಾಡಿ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು. ಕಾಗೆಯು ಮರದಮೇಲೆ ಕುಳಿತುಕೊಂಡು, ಮೇಯುವ ಪಶುಗಳ ವ್ರಣಗಳನ್ನೇ ಎಂತು ಲಕ್ಷಿಸುವುದೋ ಅಂತು ನಿಂದಕರೂ ಪರರ ದೋಷಗಳನ್ನೇ ನೋಡುತ್ತಿರುವರು. ಇದು ಅವರ ದುಷ್ಟಸ್ವಭಾವವು.

ರಾಜನು ಜನಗಳ ನಿಂದಾವಚನಗಳನ್ನು ಕೇಳಿ ಸಂಕಟಗೊಂಡು ತನ್ನ ಕಾಂತೆಯನ್ನು ಏಕಾಂತದಲ್ಲಿ ಕರೆದು ಕ್ರೋಧಯುಕ್ತನಾಗಿ—ನನಗೇನೂ ತಿಳಿಯದು. ನಮ್ಮ ಕುಲಕ್ಕೆ ಅಪಶಬ್ದವು ಹತ್ತಿತು. ಅನೇಕರು ಮೀರಾಬಾಯಿಯ ವಿಷಯದಲ್ಲಿ ಅನೇಕವಿಧವಾಗಿ ಮಾತನಾಡಿಕೊಳ್ಳುವರು. ವಿಷ್ಣುಭಕ್ತರ ಗುಂಪನ್ನು ಸೇರಿಸಿಕೊಂಡು ಅವರ ಮುಂದೆ ನಿರ್ಲಜ್ಜೆಯಾಗಿ ಗಾಯನವಂ ಮಾಡುತ್ತಿರುವಳೆಂದು ಆಡಿಕೊಳ್ಳುವರು. ಜನಗಳ ಅಪಶಬ್ದಗಳನ್ನು ಕೇಳಲು ಆಗುವದಿಲ್ಲ. ಆದುದರಿಂದ ನೀನು ಈಗಲೇ ಹೋಗಿ ಕುವರಿಯಂ ಕುರಿತು—ನಿನಗೆ ಇದುವರೆಗೂ ಬಾಲ್ಯವಾಗಿದ್ದಿತು. ನೀನು ತಿಳಿಯೆ. ಇನ್ನು ಮೇಲೆ ನೀನು ಹಟವನ್ನು ಮಾಡುವುದು ತರವಲ್ಲ. ನಿನಗೆ ತಕ್ಕ ವರನಾದ ಒಬ್ಬ ರಾಜನನ್ನು ನೋಡಿ ಮದುವೆಯಂ ಮಾಡುವೆವು—ಎಂದು ಹೇಳಿ ಅವಳ ಮನೋಭಾವವನ್ನರಿತು ಈಗಲೇ ನನಗೆ ಬಂದು ತಿಳಿಯಿಸಬೇಕು—ಎಂದು ಆಜ್ಞಾಪಿಸಲು, ಆಕೆಯು ಪತಿಯ ಆಜ್ಞೆಯನ್ನು ಅಂಗೀಕರಿಸಿ ಕನ್ಯಕೆಯ ಬಳಿಗೆ ಬಂದು—ವತ್ಸೆ! ನೀನು ಮದುವೆಯಂ ಮಾಡಿಕೊಳ್ಳದಿರುವುದರಿಂದ ಜನಗಳು ನಿನ್ನನ್ನು ಬಹುವಿಧವಾಗಿ ನಿಂದಿಸುತ್ತಿರುವರು. ಈವರೆಗೆ ನಿನಗೆ ಬಾಲ್ಯವಿದ್ದಿತು. ಇನ್ನು ಮೇಲೆ ನೀನು ಹಟವಂ ಮಾಡಿದರೆ ಚೆನ್ನಾಗಿಲ್ಲ. ನಿನಗೆ ತಕ್ಕ ವರನನ್ನು ನೋಡಿ ಮದುವೆಯಂ ಮಾಡಬೇಕೆಂದು ಆಲೋಚಿಸಿ ನಿನ್ನಂ ಕೇಳಬಾರೆಂದು ನನಗೆ ಅಪ್ಪಣೆಯಂ ಕೊಟ್ಟಿರುವರು—ಎಂದಳು.

ಆ ಕುವರಿ ತಾಯಿಯ ಮಾತಂ ಕೇಳಿ—ಅಮ್ಮಾ! ನಾನು ಶ್ರೀಕೃಷ್ಣನನುಳಿದು ಮತ್ತೊಬ್ಬಪುರುಷನನ್ನು ಪತಿಯನ್ನಾಗಿಮಾಡಿಕೊಳ್ಳುವುದಿಲ್ಲ. ಇತರರೆಲ್ಲರೂ ನನಗೆ ತಂದೆಗೆ ಸಮಾನರು. ಇದು ನನ್ನ ದೃಢವಾದ ನಿಶ್ಚಯವು. ಇದನರಿತೂ ಅಯ್ಯನು ನನ್ನನ್ನು ಅಡಿಗಡಿಗೂ ಏಕೆ ಕೇಳುವನು? ಜನಗಳ ನಿಂದಾವಚನಗಳಿಂದ ನನ್ನ ಮನಸ್ಸಿಗೆ ಏನೂ ಭಯವಿಲ್ಲ. ನನ್ನ ಮನವನ್ನು ಅರಿಯದೆ ಜನಗಳು ನಿಂದಿಸುವರು;

ನಿಂದಿಸಿಕೊಳಲಿ. ತಾಳಮೃದಂಗಗಳಂ ಬಾಜಿಸುತ್ತ ಭಾಗವತರ ಸಮೂಹದಲ್ಲಿ ಕೀರ್ತನವಂ ಮಾಡುವಳೆಂಬುದಕ್ಕೋಸ್ಕರ ಜನರು ನಿಂದಿಸುವರೆಂದು ನುಡಿದಿರಿ. ಭಾವುಕರು ನನ್ನನ್ನು ಕುಲದೀಪನೆನ್ನುವರು. ಅಭಕ್ತರಾದ ನಿಂದಕರು, ದುರ್ಗತಿಯಂ ಸಂಪಾದಿಸಿದಳೆನ್ನುವರು. ಕೆಲವರು ಈಕೆಗೆ ಭಜನದಲ್ಲಿ ಪ್ರೀತಿಯು ಹತ್ತಿತೆನ್ನುವರು. ಕೆಲವರು ಮೀರಾಬಾಯಿಯು ಹುಚ್ಚಿಯಾದಳೆನ್ನುವರು. ಜನಗಳು ಎಂತಾದರೂ ಮಾತನಾಡಿಕೊಳಲಿ. ನಾನು ಚಿಕ್ಕವಳಾದರೂ ಪರಿಶುದ್ಧವಾದ ನನ್ನ ಆತ್ಮವನ್ನು ಜ್ಞಾನಹೀನರು ತಿಳಿಯರು. ನಾನು ಜ್ಞಾನವಿಧಿಯನ್ನು ಹಿಡಿದು ಭಕ್ತಿಮಾರ್ಗದಲ್ಲಿ ಹೊರಟಿರುವೆನು. ಅದಕ್ಕೆ ಕುಮತಿಗಳು ಬರಿದೆ ಅಪಶಬ್ದವನಾಡುವರು. ಇದರಿಂದ ನನಗೇನೂ ಕೊರತೆಯಿಲ್ಲ. ಈ ವಿಷಯವನ್ನು ತಂದೆಗೆ ತಿಳಿಯಿಸುವುದು—ಎಂದಳು. ಆಮಾತಂ ಕೇಳಿ ಆಕೆ ಅಲ್ಲಿಂದ ಹೊರಟು ಪತಿಯ ಬಳಿಗೆ ಬಂದು ಆತನಂ ಕುರಿತು—ನಾನು ಏಕಾಂತದಲ್ಲಿ ವತ್ಸೆಗೆ ನೀತಿಯನ್ನು ಹೇಳಿದೆನು. ಅದು ಅವಳ ಮನಸ್ಸಿಗೆ ಬರಲಿಲ್ಲ. ನಮ್ಮ ಮಾತನ್ನು ಅವಳು ಒಪ್ಪುವುದಿಲ್ಲ—ಎನಲು, ರಾಜನು ಅದಕ್ಕೆ ಕೋಪಗೊಂಡು ಕಾಂತೆಯಂ ಕುರಿತು—ಮನೆಯಲ್ಲಿ ಮಗಳು ಸಂದುಹೋದಳೆಂಬ ವಾರ್ತೆಯೊಂದೇ ಹರಡಿಕೊಳ್ಳುವುದು. ಅದರಿಂದೇನು? ಜನಾಪವಾದವನ್ನು ಸೈರಿಸುವುದು ಕಷ್ಟ. ಅದರಿಂದ ಅವಳಿಗೆ ಎಂತಾದರೂ ವಿಷವನ್ನು ಕುಡಿಸಿಬಿಡು—ಎಂದು ಹೇಳಿ ವಿಷವನ್ನು ತರಿಸಿ ಬಟ್ಟಲಲ್ಲಿ ಹಾಕಿ ಆಕೆಯ ಕೈಯಲ್ಲಿ ಕೊಟ್ಟು ಕಳುಹಿಸಿದನು. ಆಕೆಯು ಪತಿಯ ವಚನವಂ ಮೀರಲಾರದೆ ಅಂಗೀಕರಿಸಿ ಮಗಳಮೇಲಣ ಮೋಹದಿಂದ ಬಹುವಾಗಿ ವ್ಯಸನಪಡುತ್ತ ಮಗಳ ಬಳಿಗೆ ಬಂದು ಅವಳಂ ಕುರಿತು—ನಿನ್ನ ತಂದೆ ನಿನಗೆ ವಿಷವನ್ನು ಕೊಟ್ಟು ಕಳುಹಿಸಿರುವರು. ಸುಕುಮಾರಾಂಗಿಯಾದ ಎಲೆ ವತ್ಸೆ! ನಿನಗೆ ಕಾಲವು ಸನ್ನಿಹಿತವಾಯಿತು—ಎಂದು ಕಂಬನಿದುಂಬಿ ಗೋಳಿಟ್ಟಳು.

ಮೀರಾಬಾಯಿಯು ತಾಯ ಮೋಹವಂ ನೋಡಿ-ಅಮ್ಮಾ! ಈ ಮಾನವದೇಹವು ನಶ್ವರವಾದುದು. ಎಷ್ಟುದಿವಸವಿದ್ದರೂ ಕೊನೆಗೆ ಹೋಗುವಂತಹುದು. ಶ್ರೀಕೃಷ್ಣಭಜನೆಯ ನಿಮಿತ್ತದಿಂದ ಈಗ ಹೋಗುವುದು. ಇದಕ್ಕೇಕೆ ಶೋಕವಂ ಮಾಡಬೇಕು ? ಮೃಗತೃಷ್ಣಾಪ್ರವಾಹವು ಇಂಗಿಹೋದರೆ, ಬಂಜೆಯ ಮಗನ ಮದುವೆಗೆ ವಿಘ್ನವುಂಟಾದರೆ, ಅಮಾವಾಸ್ಯೆಯ ರಾತ್ರಿಯಲ್ಲಿ ಬೆಳದಿಂಗಳು ಲೋಪಿಸಿದರೆ ಚಿಂತೆಯಂ ಮಾಡಬೇಕೆ ? ಆ ಮಾತೇ ಪುಸಿಯಾಗಿರುವುದು. ಇನ್ನು ಆಕಾಶಕ್ಕೆ ವ್ಯಸನವೇನು. ಆಕಾಶಪುಷ್ಪವು ಗಳಿತವಾಯಿತೆಂದು ವ್ಯಸನಪಡುವಂತೆ ಬರಿದೆ ನೀನು ಏಕೆ ಶೋಕಿಸುವೆ? ತೊಟ್ಟಿನಲ್ಲಿ ಹುಟ್ಟಿದ ಕಾಯಿ ಮತ್ತೊಂದು ಬಳಿಯಲ್ಲಿ ಬಿದ್ದುಹೋಗುವಂತೆ ನಾನು ಶ್ರೀಕೃಷ್ಣಸ್ವಾಮಿಯ ಪಾದಗಳಲ್ಲಿ ಸೇರಿರುವೆನು. ಇನ್ನುಮೇಲೆ ಸಂಬಂಧವೆಲ್ಲಿಯದು? ಮುತ್ತುಗಳು ಸಮುದ್ರದಲ್ಲಿ ಹುಟ್ಟುವುವು.

ಶ್ರೀಮಂತರು ಅವುಗಳನ್ನು ಭೂಷಣಗಳನ್ನಾಗಿಮಾಡಿಕೊಳ್ಳುವರು. ಅಂತು ನನ್ನನ್ನು ಶ್ರೀಯದುನಾಯಕನು ಅಂಗೀಕರಿಸಿರುವನು. ಇನ್ನು ಮಿಥ್ಯಾಭೂತವಾದ ಪ್ರಾಪಂಚಿಕ ಮಾಯೆಯನ್ನು ಬಿಟ್ಟು ವ್ಯರ್ಥವಾಗಿ ಶೋಕವಂ ಮಾಡದಿರು—ಎಂದು ನುಡಿದು—ಶ್ರೀಕೃಷ್ಣಸ್ವಾಮಿಯ ಪಾದಗಳಲ್ಲಿ ಶಿರಸ್ಸನ್ನಿರಿಸಿ ಆ ಸ್ವಾಮಿಯಂ ಕುರಿತು-ಎಲೆ ಜಗನ್ನಾಥನೆ! ಈಗ ನಮ್ಮ ತಂದೆಯು ನನಗೆ ವಿಷವಂ ಕೊಟ್ಟು ಕಳುಹಿಸಿರುವನು. ಇನ್ನು ನಿನ್ನ ಕೃಪೆಯಿಂದ ವೈಕುಂಠಲೋಕವಂ ಪಡೆವೆನು. ಆದರೆ ನಿನ್ನ ಅರ್ಚನೆಯಂ ಯಾರುಮಾಡುವರು? ಮೀರಾಬಾಯಿಯು ದೇವರಲ್ಲಿ ಭಕ್ತಿಯಂ ಮಾಡಲು, ಕೊನೆಗೆ ಅವಳಿಗೆ ರಾಜನಿಂದ ವಿಷವು ದೊರೆಯಿತು; ಆದರಿಂದ ಸಂದು ಹೋದಳು—ಎಂದು ನಿಂದಕರು ಆಡಿಕೊಂಡಾರು. ಅಭಕ್ತರು ಇಂತಹ ಮಾತುಗಳನ್ನು ಆಡದಿರರು. ವಸ್ತ್ರಭೂಷಣಗಳಿಂದ ಯಾರು ನಿನಗೆ ಅಲಂಕಾರವಂ ವಿರಚಿಸುವರು? ಬಗೆಬಗೆಯ ಕುಸುಮಂಗಳಂ ಕೊಯ್ದು ಹಾರವಂಮಾಡಿ ಯಾರು ನಿನಗೆ ಸಮರ್ಪಿಸುವರು?—ಎಂದು ನನಗೆ ದಾರುಣವಾದ ಚಿಂತೆಯುಂಟಾಗುತ್ತಿದೆ. ನೀನು ಸುಕುಮಾರನು; ಶ್ಯಾಮಸುಂದರನು; ರಾಜೀವನಯನನು. ಮೀರಾಬಾಯಿಯು ಇವನಿಗೋಸ್ಕರ ಪ್ರಾಣವನ್ನು ಅರ್ಪಿಸಿದಳೆಂದು ಇನ್ನು ಮೇಲೆ ನಿನ್ನನ್ನು ನೋಡಿದವರೆಲ್ಲರೂ ನಿನ್ನನ್ನು ದೂಷಿಸುವರು. ಒಳ್ಳೆತಾಯಿತು. ಶ್ರೀರುಕ್ಮಿಣೀಪತಿಯೇ! ನಾನು ಬರಿದೆ ಏಕೆ ಚಿಂತೆಯಂಮಾಡಲಿ? ಭೂತಭವಿಷ್ಯತ್ತುಗಳಿಗೆಲ್ಲಕ್ಕೂ ನೀನೇ ಕರ್ತೃ. ನೀನಲ್ಲದೆ ಬೇರೆಯಿಲ್ಲ. ಲಾಕ್ಷಾಗೃಹದಲ್ಲಿ ಸುಟ್ಟುಹೋಗುತ್ತಿದ್ದ ಪಾಂಡುರಾಯನ ಮಕ್ಕಳನ್ನು ಸಲಹಿದೆ. ನೀನು ಕೃಪಾಸಾಗರನು; ಅನಾಥನಾಥನು. ನಿನ್ನ ಅಂತವು ಶ್ರುತಿಶಾಸ್ತ್ರಗಳಿಗೂ ತಿಳಿಯದು. ಪ್ರಹ್ಲಾದನಿಗೆ ಆತನ ತಂದೆಯು ವಿಷವಂ ಕುಡಿಸಿದರೂ ಆತನನ್ನು ನೀನು ರಕ್ಷಿಸಿದೆ. ನಿನ್ನ ಮಂಗಳನಾಮವು ನಾಲಗೆಯಮೇಲಿರಲು, ಕಲಿಬಾಧೆಯುಂಟಾಗಲಾರದು. ಶಿವನು ಹಾಲಾಹಲವನ್ನು ಕುಡಿದು ನಿನ್ನ ನಾಮಾಮೃತದ ದೆಸೆಯಿಂದ ಶೀತಲನಾದನು. ಇಂತಹ ಮಹಾಮಹಿಮನಾದ ನೀನು ನನಗೆ ಪ್ರಸನ್ನನಾಗಿರುವಾಗ ನಾನು ಏಕೆ ಬರಿದೆ ತಲ್ಲಣಿಸಬೇಕು—ಎಂದು ನುಡಿದು ತಾಯಿಯ ಕೈಯಿಂದ ವಿಷದ ಬಟ್ಟಲನ್ನು ತೆಗೆದುಕೊಂಡು—ಸ್ವಾಮಿಯೇ! ನೀನು ಸರ್ವಭೋಕ್ತೃ—ಎಂದು ಮೊದಲು ದೇವರಿಗೆ ನಿವೇದ್ಯವಂ ಮಾಡಿ ಬಳಿಕ ತಾನು ಪ್ರಾಶನಮಾಡಿದಳು. ಆಗ ಒಂದು ಅದ್ಭುತವು ನಡೆಯಿತು:—ಭಾವುಕರಾದ ಶ್ರೋತೃಗಳು ಅವಧರಿಸಬೇಕು. ಮೀರಾಬಾಯಿಯು ವಿಷಪ್ರಾಶನವಂ ಮಾಡಿದುದು ಅಮೃತಪ್ರಾಶನವಂ ಮಾಡಿದಂತಾಯಿತು. ಆ ಸಾಲಿಗ್ರಾಮಶಿಲಾಮಯವಾದ ಗೋಪಾಲಕೃಷ್ಣಮೂರ್ತಿಯು ಹಸುರುಬಣ್ಣವಾಗಿ ಪರಿಣಮಿಸಿತು. ಅನೇಕರು ನೋಡುತಿದ್ದರು. ಆಗ ರಾಜನು ತನ್ನ ಮಡದಿಯಲ್ಲಿ ನಂಬುಗೆ ಸಾಲದಿರಲು ಹಿಂದೆ ತಾನೂ ಬಂದು ಪ್ರತ್ಯಕ್ಷವಾಗಿ ನೋಡುತಿದ್ದನು. ನಡೆದ ಸಂಗತಿಯೆಲ್ಲವನ್ನೂ ಕಣ್ಣಾರೆ ಕಂಡು, ನಾನು

ಪತಿತನು ; ದುಸ್ಸ್ವಭಾವನು. ದೇವರಿಗೆ ವಿಷವಂ ಕುಡಿಸಿದೆನು ಎಂದು ಮನದಲ್ಲಿ ಅನುತಾಪಗೊಂಡು ಮಗಳನ್ನು ಆಲಿಂಗಿಸಿಕೊಂಡನು. ಆಕೆ ತಂದೆಯಂ ನೋಡಿ ಸಾಷ್ಟಾಂಗನಮಸ್ಕಾರವಂಮಾಡಿ_ಅಪ್ಪಾ! ನಿನ್ನ ದೆಸೆಯಿಂದ ನನಗೆ ಶ್ರೀಗೋಪಾಲ ಕೃಷ್ಣನು ದೊರೆತನು_ಎಂದಳು. ರಾಜನು ಮಗಳಂ ಕುರಿತು_ಅಮ್ಮಾ! ನಿನಗೆ ವಿಷವಂ ಕುಡಿಸಲು ಶ್ರೀಕೃಷ್ಣಮೂರ್ತಿಯ ವರ್ಣ ಬೇರೆಯಾಯಿತು. ಇದರಿಂದ ನನಗೆ ವ್ಯಸನವುಂಟಾಗಿದೆ. ನೀನು ಸ್ವಾಮಿಯನ್ನು ಪ್ರಾರ್ಥಿಸಿ ಮೂರ್ತಿಯು ಮೊದಲಂತೆಯೇ ಆಗುವತೆರದಲ್ಲಿ ಮಾಡಬೇಕು. ಅದರಿಂದ ನನ್ನ ಮನಸ್ಸಿಗೆ ಸಂತೋಷ ವುಂಟಾದೀತು. ಲೋಕದಲ್ಲಿ ಕೀರ್ತಿಯು ಪ್ರಕಟವಾದೀತು-ಎಂದನು.

ಆಗ ಮೀರಾಬಾಯಿಯು ಕೈಗಳಂ ಜೋಡಿಸಿಕೊಂಡು ಶ್ರೀಕೃಷ್ಣಮೂರ್ತಿ ಯಂ ಕುರಿತು_ಸ್ವಾಮಿಯೇ! ಇಂದು ವಿಷಪ್ರಾಶನವಂ ಮಾಡಿದಕಾರಣ ನಿನ್ನ ವರ್ಣವು ಭಿನ್ನವಾಯಿತು. ಆ ಕೃಷ್ಣಾವತಾರದೊಳ್ ಯಮುನಾನದಿಯಲ್ಲಿ ಕಾಳೀಯ ಸರ್ಪವನ್ನು ಮರ್ದಿಸಿದೆ. ಅದರಿಂದೇನೂ ಆಗಲಿಲ್ಲ. ಇಂದು ಈ ಸ್ವಲ್ಪ ವಿಷವು ಎಂತು ನಿನ್ನ ದೇಹಕ್ಕೆ ಏರಿತು? ನಿನ್ನ ನಾಮವನ್ನು ಜಪಿಸುವ ಭಕ್ತರಿಗ ವಿಷವು ಅಮೃತವಾಗುವುದೆಂದು ಪುರಾಣಗಳು ಹೇಳುತಿರುವುವು. ನಿನ್ನ ನಾಮವನ್ನು ಧೂರ್ಜಟಿ ಜಪಿಸಲು ಉದರದಲ್ಲಿ ಶೀತಲತೆಯುಂಟಾಯಿತು. ಇಂತಿರಲು, ಈಗ ನೀನೇ ಕಷ್ಟಕ್ಕೆ ಒಳಗಾಗಿರುವೆ. ಸಮುದ್ರನ ಭಯದಿಂದ ಅಗಸ್ತ್ಯಮಹರ್ಷಿಯು ಅನು ಷ್ಠಾನವಂ ಬಿಟ್ಟು ಚಿಂತಿಸುವಂತಾಯಿತು. ಅತ್ಯಂತವಾಗಿ ಪ್ರಜ್ವಲಿಸುವ ಅಗ್ನಿಯು ತೃಣಗಳನ್ನು ಕಂಡು ಗಡಗಡನೆ ನಡುಗುವಂತಾಯಿತು. ನಿನ್ನ ನಾಮವನ್ನು ಹಗಲಿರುಳೂ ಜಪಿಸುವ ಭಕ್ತರಿಗೆ ದುರಿತಗಳ ಬಾಧೆಯುಂಟಾಗುವುದಾದರೆ ನಿನಗೂ ವಿಷದ ಬಾಧೆಯು ದಿಟವಾಗುಂಟಾಗುವುದು. ಪ್ರಾಣಿಗಳಿಗೆ ಅಮೃತಪಾನವಂ ಮಾಡಿ ಸಲು ರೋಗದ ಬಾಧೆಯುಂಟಾಗುವುದಾದರೆ, ನಿನಗೆ ಅಪಾಯವುಂಟಾಗಬಹುದು. ಆದರೆ ಜನಗಳಿಗೆ ಅದ್ಭುತವಂ ತೋರಿಸುವುದಕ್ಕೋಸ್ಕರ ನಾನಾಲೀಲೆಗಳನ್ನು ಮಾ ಡುತಿರುವೆ. ಸ್ವಾಮಿಯೇ! ನೀನು ಈಗ ಮೊದಲಂತೆ ಆಗು_ಎಂದು ಅಸಾಧಾರಣ ವಾದ ಭಕ್ತಿಭಾವದಿಂದ ಪ್ರಾರ್ಥಿಸಿ ಸಾಷ್ಟಾಂಗನಮಸ್ಕಾರವಂ ಮಾಡಿದಳು.

ಆಕ್ಷಣವೇ ಶಾರ್ಙ್ಗಧರನು ಪ್ರಸನ್ನನಾಗಿ ಮೊದಲಂತಾದನು. ಆದರೆ ಪ್ರ ಪಂಚದ ಜನಗಳಿಗೆ ಸಾಕ್ಷ್ಯವಂ ತೋರುವುದಕ್ಕೋಸ್ಕರ ಕಂಠದಲ್ಲಿ ಮಾತ್ರ ಹಸರು ವರ್ಣವುಳ್ಳವನಾಗಿನಿಂತನು. ಆ ಜಗನ್ನಾಥನು ಭಕ್ತರ ಕೀರ್ತಿಯಂ ಬೆಳೆಯಿಸು ವನು. ಭವಭಂಗವಂಮಾಡುವನು. ಮಹಾದಯಾಳು. ಅವನ ಮಹಿಮೆಯು ಯಾರಿಗೂ ತಿಳಿಯಲಸದಳವು.

ಬಳಿಕ ರಾಜನು ಸಂತೋಷದಿಂದ ದೇವರಿಗೆ ಸಾಷ್ಟಾಂಗನಮಸ್ಕಾರವಂಮಾಡಿ, ಮಗಳನ್ನು ಕುರಿತು-ಮಗಳೆ! ನೀನು ನಮ್ಮ ವಂಶವನ್ನೇ ಉದ್ಧರಿಸಿದೆ_ಎಂದು

ಅಭಿನಂದಿಸಿದನು. ನಿಂದಕರೆಲ್ಲರೂ ತಲೆಯಂತಗ್ಗಿಸಿಕೊಂಡು, ಭಕ್ತಜನವಂ ಭಳಿಸಿದುದರಿಂದ ಲೋಕದಲ್ಲಿ ತಮಗೆ ಅಪಕೀರ್ತಿಯುಂಟಾಯಿತು—ಎಂದರು.

ಮೀರಾಬಾಯಿಯು ಪರಮಾನಂದಭರಿತೆಯಾಗಿ ಶ್ರೀಕೃಷ್ಣಮೂರ್ತಿಯ ಪೂಜೆಯಂ ಮಾಡುತಬಂದಳು; ಭಕ್ತರ ಮಹಿಮೆಯನ್ನು ಪ್ರಕಾಶಿಸಿ ಆತ್ಮಜ್ಞಾನವಂ ಹೊಂದಿದಳು.

ಈಗಲೂ ಆದೇಶದಲ್ಲಿ ರಾಣಾರಾಜನ ಮನೆಯಲ್ಲಿ ಅತ್ಯಂತಸುಂದರವಾದ ಆ ಶ್ರೀಕೃಷ್ಣಮೂರ್ತಿಯು ಇರುತಿದೆ.

ಮುಂದಣ ಅಧ್ಯಾಯದಲ್ಲಿ, ಕಾಹ್ನೋಪಾತ್ರೆ, ಎಂಬ ಭಕ್ತೆಯ ಚರಿತ್ರೆ ಬಹು ಸುರಸವಾಗಿರುವುದು. ಶ್ರೋತೃಗಳು ಆದರದಿಂದ ಕೇಳಬೇಕು.

ಯಾವನು ಆದಿಮಾಯೆಯ ಜನಕನೋ ಬ್ರಹ್ಮದೇವನ ತಂದೆಯೋ ಆಪರಮಾತ್ಮನು ಹೃದಯದಲ್ಲಿ ವಾಸವಂ ಮಾಡಿ ಕಥೆಯಂ ಹೇಳಿಸುವನು. ಮಹೀಪತಿಯು ಆತನ ಕೃಪೆಯಿಂದಲೂ ಸಾಧುಗಳ ವಂದನೆಯ ಪ್ರಸಾದದಿಂದಲೂ ನುಡಿಯುವನು. ನುಡಿಯಿಸುವನು ಆ ಶ್ರೀರುಕ್ಮಿಣೀಪತಿಯೇ.

ಇಂತು ಶ್ರೀಭಕ್ತವಿಜಯದಲ್ಲಿ ಮೂವತ್ತೆಂಟನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಮೂವತ್ತೊಂಬತ್ತನೆಯ ಅಧ್ಯಾಯ.

ಕಾಹ್ನೋಪಾತ್ರೆಯ ಕಥೆ.

ಎಲೈ ಶ್ರೋತೃಗಳಿರಾ! ಆದರದಿಂದ ಆಲಿಸಿ. ದಕ್ಷಿಣದೇಶದಲ್ಲಿ ಪಂಡರೀಕ್ಷೇತ್ರಕ್ಕೆ ಆರುಹರಿದಾರಿಯ ದೂರದಲ್ಲಿ ಮಂಗಳವೇಢೆಯೆಂಬ ಊರು ಇರುವುದು. ಅಲ್ಲಿ ಶ್ಯಾಮೆಯೆಂಬ ಒಬ್ಬ ವೇಶ್ಯೆಯಿದ್ದಳು. ಅವಳ ಉದರದಲ್ಲಿ 'ಕಾಹ್ನೋಪಾತ್ರಾ' ಎಂಬ ಕನ್ಯಾಮಣಿಯುದಯಿಸಿದಳು. ಆಕೆಯ ಸೌಂದರ್ಯಾತಿಶಯವಂ ನೋಡಿ ದೇವಸ್ತ್ರೀಯರೆಲ್ಲರೂ ನಾಚಿಕೆಗೊಳುತಿದ್ದರು. ಆಕೆಗೆ ಸಮಾನೆಯರಾದವರನ್ನು ಬ್ರಹ್ಮನು ಮರ್ತ್ಯಲೋಕದಲ್ಲಿ ನಿರ್ಮಿಸಿಯೇ ಇಲ್ಲ. ಬಾಲ್ಯದಲ್ಲಿಯೇ ಆಕೆಗೆ ತಾಯಿಯು

ನೃತ್ಯವಿದ್ಯಾಭ್ಯಾಸವಂ ಮಾಡಿಸಿದಳು. ಅದನ್ನು ರಂಭಾದ್ಯಪ್ಸರಸ್ತ್ರೀಯರು ಕೇಳಿ ಲಜ್ಜಿತೆಯರಾಗುತಿದ್ದರು. ತಾಯಿಯು ಆಕೆಯಂ ಕುರಿತು-ರಾಜನ ಬಳಿಗೆ ಹೋಗೋಣ ಬಾ. ನಿನ್ನ ರೂಪಲಾವಣ್ಯವಂ ನೋಡಿ ಬಹುಧನಕನಕಂಗಳಂ ಕೊಟ್ಟಾನು-ಎನಲು, ಆಕೆಯು ಅಮ್ಮಾ! ನನಗೆ ಯೋಗ್ಯನಾದ ಸುಂದರಪುರುಷನು ಎಲ್ಲಿ ಹುಡುಕಿದರೂ ದೊರೆಯನು. ಈಯರ್ಥವನ್ನು ನೀನು ತಿಳಿದೇಇರುವೆ. ನನಗಿಂತಲೂ ಕೋಟಿಗುಣವುಳ್ಳ ಸುಂದರಪುರುಷನು ಯಾವನೋ ಅವನಂ ವರಿಸುವೆನು-ಎಂದು ಉತ್ತರವಂ ಹೇಳಿ ಮನದಲ್ಲಿಯೂ ಅಂತೆ ನಿಶ್ಚಯವುಳ್ಳವಳಾಗಿ ಸ್ವಸ್ಥೆಯಾಗಿದ್ದಳು. ಮರ್ತ್ಯಲೋಕದಲ್ಲಿರುವ ಪುರುಷರೆಲ್ಲರನ್ನೂ ಸೂರ್ಯನ ಮುಂದಣ ಖದ್ಯೋತಂಗಳನ್ನಾಗಿ ತಾನು ತಿಳಿಯುತಿದ್ದಳು.

ಬಳಿಕ ಒಂದುದಿವಸ ವಿಷ್ಣುಭಕ್ತರಾದ ಯಾತ್ರಿಕರು ಫಂಡರಪುರಕ್ಕೆ ಗರುಡಧ್ವಜಾದಿಗಳನ್ನು ತೆಗೆದುಕೊಂಡು ಮಂಗಳವಾದ್ಯದೊಡನೆ ಕೀರ್ತನವಂ ಮಾಡುತ್ತ ಹೋಗುತಿದ್ದರು.

ಕಾಹ್ನೋಪಾತ್ರೆಯು ಅವರಂ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ-ನೀವು ವಿಷ್ಣುಭಕ್ತರು. ಎಲ್ಲಿಗೆ ಹೋಗುವಿರಿ? ನನಗೆ ಹೇಳಿ-ಎಂದಳು. ಅವರು ಸಾಕ್ಷಾದ್ವೈಕುಂಠವಾಸಿಯಾದ ಸ್ವಾಮಿಯು ಪುಂಡರೀಕನಿಗೋಸ್ಕರ ಎಲ್ಲಿ ಬಂದು ನಿಂತಿರುವನೋ ಆ ಫಂಡರಪುರದ ಯಾತ್ರೆಗೆ ಹೋಗುತ್ತಿರುವೆವು-ಎಂದು ಉತ್ತರವಂ ಹೇಳಿದರು.

ಅದಕ್ಕೆ ಕಾಹ್ನೋಪಾತ್ರೆಯು-ವೈಕುಂಠನಾಥನು ಎಂತಿರುವನು?-ಎಂದು ಬೆಸಗೊಳಲು, ಅವರು-ಆತನ ಮಹಿಮೆಯನ್ನು ಬಣ್ಣಿಸಲು ಬ್ರಹ್ಮಾದಿದೇವತೆಗಳಿಗೂ ಶಕ್ಯವಲ್ಲ. ಆತನು ಮಹೋದಾರನು; ಧೀರನು; ಸುಂದರನು; ಅನಂತಸುಲಕ್ಷಣಗಳುಳ್ಳವನು. ಸೂರ್ಯಚಂದ್ರರು ಮುಂತಾದವರೆಲ್ಲರೂ ಆತನ ತೇಜಸ್ಸಿನಿಂದಲೇ ಪ್ರಕಾಶಿಸುತ್ತಿರುವರು-ಎಂದು ಹೇಳಿದರು. ಮತ್ತೆ ಅವರಂ ಕುರಿತು ಆಕೆಯು-ಹೃಷೀಕೇಶನು ಅಂತಹನೆಂದು ಹೇಳಿದಿರಿ. ನಾನು ಶರಣಾಗತೆಯಾದರೆ ಆಸ್ವಾಮಿಯು ನನ್ನನ್ನು ಅಂಗೀಕರಿಸುವನೇ?-ಎಂದು ಕೇಳಲು, ಅದಕ್ಕೆ ಅವರು-ಕುಬ್ಜೆಯೆಂಬ ದಾಸಿಯು ಕುರೂಪೆ; ಹೀನೆ. ಅಂತಹಳನ್ನು ಶ್ರೀಕೃಷ್ಣನು ಮಥುರೆಯಲ್ಲಿ ಪರಿಗ್ರಹಿಸಿ ಸಾರೂಪ್ಯವನೀಯಲಿಲ್ಲವೇ? ಅಜಾಮಿಳನು ಪಾಪಿ. ಅವನಂ ಉದ್ಧರಿಸಲಿಲ್ಲವೇ? ಆತನು ಪತಿತಪಾವನನು; ದೀನದಯಾಳು; ವಿಶ್ವಪಾಲಕನು-ಎಂದರು.

ಆಕೆಯು ಆ ಸಂತರ ವಚನವಂ ಕೇಳಿ ತ್ವರೆಯಿಂದ ಮನೆಗೆಬಂದು-ನಾನು ಫಂಡರಪುರಕ್ಕೆಹೋಗುವೆನು-ಎಂದು ತಾಯಂಕುರಿತು-ಹೇಳಿ, ಕೈಯಲ್ಲಿ ವೀಣೆಯಂ ತೆಗೆದುಕೊಂಡು ಪ್ರೇಮದಿಂದ ಶ್ರೀಹರಿಯಗುಣಂಗಳಂ ಬಣ್ಣಿಸಿ ಗಾಯನವಂಮಾಡುತ್ತ ಹೊರಟು ಫಂಡರಪುರವಂಸೇರಿ ದೇವಾಲಯವಂಹೊಕ್ಕು ಸದ್ಭಾವದಿಂದ ಸಾಷ್ಟಾಂಗ

ನಮಸ್ಕಾರವಂ ಮಾಡಿ-ಸ್ವಾಮಿಯೇ! ವಿಟ್ಠಲನೇ! ನಿನ್ನ ಕೀರ್ತಿಯಂ ಕೇಳಿ ನಿನ್ನ ಸನ್ನಿಧಿಗೆ ಶರಣಾಗತೆಯಾಗಿ ಬಂದಿರುವೆನು. ನೀನು ಪರಮೋದಾರನು; ಧೀರನು; ಪರಮಸುಂದರನು; ಷಡ್ಗುಣೈಶ್ವರ್ಯಸಂಪನ್ನನು; ಸುಲಕ್ಷಣನು. ಕುಬ್ಜೆಯೂ ಅಜಾಮಿಳನೂ ಶರಣಾಗತರಾಗಲು ಅವರಂ ಉದ್ಧರಿಸಿದವನು-ಎಂದು ಸಂತರು ಹೇಳಲು;—ನನ್ನಲ್ಲಿ ಇದ್ದ ಲೌಕಿಕಕಾಮವನ್ನೂ ದೇಹಾಭಿಮಾನವನ್ನೂ ಬಿಟ್ಟು ನಿನ್ನ ಪಾದಗಳನ್ನು ಮರೆಹೊಕ್ಕಿರುವೆನು. ನೀನು ಇನ್ನು ನನ್ನನ್ನು ಅಂಗೀಕರಿಸಬೇಕು—ಎಂದು ಅನನ್ಯಭಾವದಿಂದ ಸ್ವಾಮಿಯ ಪಾದದಲ್ಲಿ ಸಿರವನಿರಿಸಿದಳು. ಅಂದಿನಿಂದ ಶ್ರೀಹರಿಯ ರೂಪವನ್ನೇ ಮನದಲ್ಲಿ ಹಿಡಿದು ನಿತ್ಯವೂ ಮಹಾದ್ವಾರದಲ್ಲಿ ನಿಂತು ಆಸ್ವಾಮಿಯ ಗುಣಗಳನ್ನೇ ವರ್ಣಿಸುತಿದ್ದಳು.

ಒಂದುಸಮಯದಲ್ಲಿ ಒಬ್ಬ ದುರಾಚಾರನು ಕಾಹ್ನೋಪಾತ್ರೆಯನ್ನು ನೋಡಿ ಬಳಿಕ ಬೆದರಕ್ಕೆಹೋಗಿ ಅಲ್ಲಿಯ ಅರಸನನ್ನು ಕುರಿತು—ಪಂಢರಪುರದೇವಾಲಯದ ಮಹಾದ್ವಾರದಲ್ಲಿ ಒಬ್ಬ ಸೂಳೆಯು ಕೀರ್ತನವಂ ಮಾಡುತ್ತಿರುವಳು. ಅವಳಂತಹ ಸುಂದರಿ ಮೂರುಲೋಕದಲ್ಲಿಯೂ ಇಲ್ಲ—ಎಂದು ಹೇಳಿದನು.

• ನಿರಪರಾಧಗಳಾದ ಮೀನುಗಳನ್ನು ಧೀವರನು ಎಂತು ಹಿಂಸಿಸುವನೋ; ಸಾಧುಗಳಾದ ಹರಿಣಗಳನ್ನು ವ್ಯಾಧನು ಎಂತು ಪೀಡಿಸುವನೋ ಅಂತು ದುರ್ಜನನು ಸಜ್ಜನರನ್ನು ನಿಷ್ಕಾರಣವಾಗಿ ದ್ವೇಷಿಸಿ ಬಾಧಿಸುವನು. ಅದಂತಿರಲಿ. ಒಂದುದಿವಸ ಕಾಹ್ನೋಪಾತ್ರೆಯು ಮಹಾದ್ವಾರದಲ್ಲಿ ಭಗವದ್ಗುಣಕೀರ್ತನವಂ ಮಾಡುತ್ತ ನಿಂತಿರಲು, ರಾಜದೂತರು ತ್ವರೆಯಿಂದ ಬಂದು ಆಕೆಯನ್ನು ಕುರಿತು-ನೀನು ಈಕ್ಷಣ ಬೆದರಕ್ಕೆ ಹೊರಟು ಬರಬೇಕು. ಮಹಾರಾಜನ ಅಪ್ಪಣೆಯಾಗಿದೆ. ಸಾಮವಚನದಿಂದ ನೀನು ಬಾರದಿದ್ದರೆ ಬಲಾತ್ಕಾರದಿಂದ ಹಿಡಿದುಕೊಂಡು ಹೋಗುವೆವು. ಎನಲು, ಆಕೆಯು—ದೇವರ ಸನ್ನಿಧಿಗೆ ಹೋಗಿ ನಮಸ್ಕಾರವಂ ಮಾಡಿ ಬರುವೆನು-ಎಂದು ಹೇಳಿ ಗರ್ಭಗೃಹವಂ ಹೊಕ್ಕಳು. ಆ ರಾಜದೂತರು ಸಭಾಮಂಟಪದಲ್ಲಿಯೇ ನಿಂತಿದ್ದರು. ಕಾಹ್ನೋಪಾತ್ರೆಯು ದೇವರ ಸನ್ನಿಧಿಯಲ್ಲಿ—ಸ್ವಾಮಿಯೇ! ಪುಂಡರೀಕವರದನೇ! ಪಾಂಡುರಂಗನೇ! ನಾನು ನಿನ್ನವಳೆನಿಸಿರುವೆನು. ಶ್ರೀರಂಗನೇ! ಭವಭಂಗನೇ! ನಿನ್ನವಳಾದ ನನ್ನನ್ನು ರಾಜದೂತರು ಹಿಡಿದುಕೊಂಡುಹೋದರೆ ಅಪಮಾನವು ಯಾರಿಗಾಗುವುದು? ಪಂಢರಪುರೀನಿವಾಸನೇ! ಶ್ರೀಹರಿಯೇ! ಗಜೇಂದ್ರನ ಕರುಣವಚನವಂ ಕೇಳಿ ಅವನಿಗೆ ತ್ವರೆಯಿಂದ ಪ್ರಸನ್ನನಾದೆ. ಮೃಗಜಾತಿಯ ಜಿಂಕೆಯು ಬಲೆಯಲ್ಲಿ ಸಿಕ್ಕಿ ಬಿದ್ದಿದ್ದಾಗ ನಿನ್ನಂ ಸ್ಮರಿಸಲು, ನೀನು ಅದಕ್ಕೆ ಒಲಿದೆ. ದೂರ್ವಾಸರು ಅಂಬರೀಷನನ್ನು ಛಳಿಸಲು ಆತನಿಗೋಸ್ಕರ ನೀನು ಗರ್ಭವಾಸವನ್ನು ವಹಿಸಿದವನಾದೆ. ಕೊಪ್ಪರಿಗೆಯ ಕಾಯ್ದ ನೀರಲ್ಲಿ ಬಿದ್ದ ಕಪ್ಪೆಯು ನಿನ್ನಂ ಸ್ಮರಿಸಿದ ಮಾತ್ರಕ್ಕೆ ನೀನು ಅದಕ್ಕೆ ಪ್ರಸನ್ನನಾದೆ. ಅಜಾಮಿಳನು ಮತ್ತು ಚೋಖಾಮೇಳನು ಅಂತ್ಯಜಾತಿಯವರು.

ಅವರನ್ನು ನೀನು ಅಂಗೀಕರಿಸಿದೆ. ನನ್ನಂ ಉಪೇಕ್ಷಿಸಿಬಿಟ್ಟರೆ ಈಯಪಮಾನವು ಯಾರಿಗಾಗುವುದು? ನಿನ್ನ ಸ್ವರೂಪದಲ್ಲಿಯೇ ಲೀನವಾದ ಮನಸ್ಸುಳ್ಳ ನನ್ನನ್ನು ಈ ದುರ್ಜನರು ಮುಟ್ಟಿದರೆ ಸಾಧುಸಜ್ಜನರೆಲ್ಲರೂ ನಗುವರಲ್ಲಾ !—ಎಂದು ಪಲವು ತೆರದಲ್ಲಿ ಸ್ತುತಿಸಲು, ಶ್ರೀಮನ್ನಾರಾಯಣನು, ಆಕೆಯ ಕರುಣಾವಚನವನಾಲಿಸಿ ಕರುಣೆಯಿಂದ ಪ್ರಸನ್ನನಾಗಿ ಆಕೆಯ ಜೀವಕಳೆಯನ್ನು ತೆಗೆದು ತನ್ನ ಸ್ವರೂಪದಲ್ಲಿ ಸೇರಿಸಿಕೊಂಡನು. ಸನ್ನಿಧಿಯಲ್ಲಿ ನಿಂತಿದ್ದ ಸಂತರೂ ಅರ್ಚಕರೂ ಕಂಡರು. ಆಕೆಯು ಸ್ವಾಮಿಯ ತೊಡೆಯಲ್ಲಿ ಐಕ್ಯವನ್ನು ಹೊಂದಿದಳು. ಆ ನಿದರ್ಶನವು ಈಗಲೂ ಇರುವುದು. ಪಂಡರಪುರದ ಯಾತ್ರೆಗೆ ಹೋದ ಭಾವುಕರೆಲ್ಲರೂ ಪ್ರೀತಿಯಿಂದ ನೋಡುತ್ತಿರುವರು. ಅದಿರಲಿ. ಬಳಿಕ ಆಕೆಯ ಕಳೇಬರವನ್ನು ತೆಗೆದುಕೊಂಡು ಹೋಗಿ ದಕ್ಷಿಣದ್ವಾರದಲ್ಲಿ ಸ್ಥಾಪನವಮಾಡಿದರು. ಆ ಸ್ಥಳದಲ್ಲಿ ತರಟಿಯೆಂಬ ಗಿಡ ಹುಟ್ಟಿತು.

ಸಭಾಮಂಟಪದಲ್ಲಿ ನಿಂತಿದ್ದ ರಾಜದೂತರು ಅರ್ಚಕರಂ ಕರೆದು ಕಾಹ್ನೋಪಾತ್ರೆ ಏನಾದಳೆಂದು ಬೆಸಗೊಳ್ಳಲು, ಅವರು ಆಕೆಯ ಜೀವಕಳೆಯು ಶ್ರೀಹರಿಯ ರೂಪದಲ್ಲಿ ಲೀನವಾಯಿತು—ಎಂದರು. ರಾಜದೂತರು ಕಳೇಬರವನ್ನಾದರೂ ನಮಗೆ ತೋರಿಸಿ-ಎನಲು, ಅದೂ ಗಿಡವಾಯಿತೆಂದು ಉತ್ತರವಂ ಹೇಳಿದರು. ಆ ಮಾತಂ ಕೇಳಿ ದೂತರು-ನಮ್ಮನ್ನು ಹೊರಬಾಗಿಲಲ್ಲಿಯೇ ನಿಲ್ಲಿಸಿ ಸುರಂಗದ ಮಾರ್ಗದಿಂದ ಆಕೆಯನ್ನು ಎಲ್ಲಿಗೋ ಓಡಿಸಿ ಈಗ ಗಿಡವಾದಳೆಂದು ಅಸತ್ಯವನ್ನಾಡುವಿರಿ—ಎಂದು ಗರ್ಜಿಸಿ ನುಡಿದು ವಿಚಾರವಂ ಮಾಡದೆ ಅವರನ್ನು ಹಿಡಿದುಕೊಂಡು ಬೆದರಕ್ಕೆ ಕರೆದುಕೊಂಡು ಹೋಗಿ ರಾಜನಿಗೆ ಈ ವೃತ್ತಾಂತವಂ ಹೇಳಿದರು.

ಆ ರಾಜನು ತುರುಷ್ಕಜಾತಿಯವನು, ಅವಿವೇಕಿ; ಆದುದರಿಂದ ಅರ್ಚಕರು ಭಯಪಟ್ಟು ತೆಂಗಿನಕಾಯಿಯನ್ನೂ ಬುಕ್ಕಿಟ್ಟನ್ನೂ ಪ್ರಸಾದವೆಂದು ಆತನ ಮುಂದೆ ಇರಿಸಿದರು. ಆಗ ಆತನು ಆ ಪ್ರಸಾದವನ್ನು ತೆಗೆದುಕೊಳ್ಳಲು, ಅದರಲ್ಲಿ ಕೂದಲು ಸಿಕ್ಕಿತು. ಅದನ್ನು ಕಂಡು ರಾಜನು ಬಹುಕೋಪಗೊಂಡು ಅರ್ಚಕರನ್ನು ಕುರಿತು ಇದೇನಿದೇನೆಂದು ಗಜರಿ ಬೆಸಗೊಳ್ಳಲು, ಅವರು ಕೇವಲಭೀತರಾಗಿ ಈ ಕೂದಲು ದೇವರದು-ಎಂದು ಉತ್ತರವಂ ಹೇಳಬೇಕೆಂದು ಮನದಲ್ಲಿ ತೋರಲು, ಮಹಾರಾಜನೆ ಆಲಿಸು; ವೈಕುಂಠವಾಸಿಯು ಭೀಮಾತೀರದಲ್ಲಿ ಇಟ್ಟಿಗೆಯ ಮೇಲೆ ನಿಂತಿರುವನು; ಕಾಹ್ನೋಪಾತ್ರೆಯಲ್ಲಿ ಪಕ್ಷಪಾತಿಯಾದವನು; ಈ ಕೂದಲು ಆ ಸ್ವಾಮಿಯದು; ನಿಶ್ಚಯವು. ತಾವು ಅಪೇಕ್ಷಿಸಿದರೆ ಬಂದು ನೋಡಬಹುದು. ದೇವರಿಗೆ ಕೂದಲು ಇಲ್ಲದಿದ್ದರೆ ನಮಗೆ ಶಿಕ್ಷೆಯಂ ಮಾಡತಕ್ಕುದು-ಎಂದು ಆ ಅರ್ಥಕ್ಕೆ ಪತ್ರವಂ ಬರೆದು ಕೊಟ್ಟರು.

ಬಳಿಕ ರಾಜನು ಅವರಂ ಕುರಿತು ಕಾಹ್ನೋಪಾತ್ರೆಯು ದೇವರಲ್ಲಿ ಎಂತು ಸೇರಿದಳು ?–ಎಂದು ಕೇಳಲು, ಅದಕ್ಕೆ ಅವರು ನೀರಲ್ಲಿ ಉಪ್ಪು ಎಂತು ಸೇರುವುದೋ ಅಂತು ಸೇರಿದಳು-ಎಂದರು. ಆಗ ರಾಜನು ಪರೀಕ್ಷಿಸುವುದಕ್ಕೋಸ್ಕರ ಫಂಡರಪುರಕ್ಕೆ ಹೊರಟನು.

ಬ್ರಾಹ್ಮಣರು ಅದಂ ಕಂಡು–ಈಗ ಏನುಮಾಡುವುದು ? ದೇವರಿಗೆ ಕೂದಲು ಇಲ್ಲದಿದ್ದರೆ ಅವಿಂಧನು ನಮ್ಮನ್ನು ಕೊಲ್ಲಿಸುವುದು ನಿಶ್ಚಯ. ಜಗನ್ನಾಥನು ನಮ್ಮ ಮಾನವನ್ನು ರಕ್ಷಿಸುವನೋ ಉಪೇಕ್ಷಿಸುವನೋ ?–ಎಂದು ಮನದಲ್ಲಿ ಚಿಂತೆಯಂ ಮಾಡುತಿದ್ದರು.

ಫಂಡರಪುರವು ಸಮೀಪವಾಯಿತು. ಬ್ರಾಹ್ಮಣರು–ಸ್ವಾಮಿಯೇ ! ಕೃಪಾನಿಧಿಯೇ ! ಮಾಧವನೇ! ನೀನು ನಮ್ಮನ್ನು ರಕ್ಷಿಸಬೇಕು. ಲಾಕ್ಷಾಗೃಹದಲ್ಲಿ ಪಾಂಡವರು ಸಿಕ್ಕಿರಲು, ಅವರನ್ನು ಅಪಾಯದಿಂದ ರಕ್ಷಿಸಿದೆ. ಈಗ ನಮ್ಮನ್ನು ರಕ್ಷಿಸುವುದು ನಿನಗೆ ಯಾವ ಕಷ್ಟಕಾರ್ಯ? ದುರ್ಜನರ ಪಂಕ್ತಿಯಲ್ಲಿ ಬಡಿಸುತ್ತಿದ್ದ ದ್ರೌಪದಿಗೆ ಚತುರ್ಭುಜಗಳನ್ನು ಮಾಡಿದೆ. ಕಾಡುಕಿಚ್ಚು ಹತ್ತಿ ಉರಿಯುತ್ತ ಬರಲು, ಆ ಜ್ವಾಲೆಗಳಂ ನುಂಗಿ ಗೋವುಗಳನ್ನೂ ಗೋಪಾಲಕರನ್ನೂ ರಕ್ಷಿಸಿದೆ. ದಾರುಣವಾದ ಮಳೆಯು ಸುರಿಯುತ್ತಿರಲು, ನಖಾಗ್ರದಲ್ಲಿ ಗೋವರ್ಧನಸ್ವರೂಪವನ್ನು ಎತ್ತಿದೆ. ಇಂತಹ ಮಹಾಮಹಿಮನಾದ ನಿನಗೆ ನಮ್ಮನ್ನು ಸಲಹುವುದೇನು ಕಷ್ಟವು? ಇಂತಹ ನಿನ್ನ ಮಹಾಮಹಿಮೆಯನ್ನು ತಿಳಿದು ಚತುರ್ಭುಜನು ಶ್ಯಾಮವರ್ಣನು ಕೇಶಗಳುಳ್ಳವನು-ಎಂದು ರಾಜಾಸ್ಥಾನದಲ್ಲಿ ಪತ್ರವಂ ಬರೆದುಕೊಟ್ಟೆವು–ಎಂದು ದೇವರನ್ನು ಪ್ರಾರ್ಥಿಸಿದರು.

ಆ ಸಮಯದಲ್ಲಿ ರಾಜನು ಮಹಾದ್ವಾರದ ಬಳಿಗೆ ಬಂದನು. ಬ್ರಾಹ್ಮಣರೂ ಗರುಡಸ್ತಂಭದ ಬಳಿಯಲ್ಲಿ ಸಾಷ್ಟಾಂಗನಮಸ್ಕಾರವಂ ಮಾಡಿ-ಅನಂತನೇ ! ಪುಂಡರೀಕವರದನೇ ! ಇಂತಹ ಸಂಕಟದಲ್ಲಿ ನಮ್ಮನ್ನು ನೀನಲ್ಲದೆ ಮತ್ತಾರೂ ರಕ್ಷಿಸುವರಿಲ್ಲ–ಎಂದು ಅಡಿಗಡಿಗೆ ಮೊರೆಯಿಡುತಿದ್ದರು. ರಾಜನು ನೆರೆಯ ಮಂಟಪದಲ್ಲಿ ನಿಂತು ಶೋಭಾಯಮಾನವಾದ ಕಿರೀಟವೂ ಸುಂದರವಾದ ಸಹಜವಾದ ಮುಂಗುರುಳುಗಳೂ ಕಮಲದಂತಿರುವ ವಿಶಾಲವಾದ ನೇತ್ರಗಳೂ ಮಕರಾಕಾರವಾದ ದಿವ್ಯಕುಂಡಲಗಳೂ ಕಂಠದಲ್ಲಿ ಕೌಸ್ತುಭವೂ ಹೃದಯದಲ್ಲಿ ಅತಿಸುಂದರವಾದ ಪದಕವೂ ಕಟಿತಟದಲ್ಲಿ ವಿರಾಜಮಾನವಾದ ಕರಯುಗಳವೂ ದಿವ್ಯವಾದ ಪೀತಾಂಬರವೂ ಸೊಗಸಿನ ವೈಜಯಂತೀಮಾಲೆಯೂ ಉಳ್ಳವನಾಗಿ ಮಹಾಯೋಗಿಗಳಿಗೆ ಧ್ಯೇಯವಾಗಿಯೂ ಸಕಲ ದೇವತೆಗಳಿಗೆ ಪೂಜ್ಯವಾಗಿಯೂ ಇರುವ ಮೂರ್ತಿಯುಳ್ಳ ಸ್ವಾಮಿಯನ್ನು ಕಂಡು ಪರಮಾನಂದಭರಿತನಾಗಿ ಮನದಲ್ಲಿ ಪಶ್ಚಾತ್ತಾಪವನ್ನು ಹೊಂದಿ ಬ್ರಾಹ್ಮಣರಂ ಕುರಿತು– ನೀವು ಹೇಳಿದಂತೆ ಮೂರ್ತಿಯನ್ನು ಕಂಡೆನು. ನನಗೆ ಪರಮಾನಂದವಾಯಿತು.

ಎಂದು, ಸಾಷ್ಟಾಂಗನಮಸ್ಕಾರವಂ ಮಾಡಿ, ಕಾಹ್ನೋಪಾತ್ರೆಯ ಭಾಗ್ಯವು ಉತ್ಕೃಷ್ಟವಾದುದು. ಹರಿಸ್ವರೂಪದಲ್ಲಿಯೇ ಲೀನೆಯಾದಳು. ನಾವು ಅಭಾಗ್ಯರು, ಜ್ಞಾನಹೀನರು ; ಆದುದರಿಂದ ಆಕೆಯನ್ನು ಛಳಿಸಿದೆವು-ಎಂದು ನುಡಿದು, ಆ ಕಾಹ್ನೋಪಾತ್ರೆಯು ಗಿಡವಾದುದೆಂತು-ಎಂದು ಬೆಸಗೊಳಲು, ಅವರು ರಾಜನನ್ನು ದಕ್ಷಿಣದ್ವಾರದ ಬಳಿಗೆ ಕರೆದುಕೊಂಡು ಹೋಗಿ ತರಟಿಯೆಂಬ ಗಿಡವನ್ನು ತೋರಿಸಿ, ಈ ಫಂಡರೀ ಕ್ಷೇತ್ರವು ಪುರಾತನವಾದುದು. ಇಲ್ಲಿ ಸಕಲದೇವತಾಗಣವೂ ವೃಕ್ಷರೂಪವಾಗಿರುವುದು-ಎಂದು ಹೇಳಿದರು. ಆ ತರಟಿಯೆಂಬ ವೃಕ್ಷವು ಈಗಲೂ ಇದೆ. ಭಾವುಕರು ನೋಡುತಿರುವರು.

ಮುಂದಣ ಅಧ್ಯಾಯದಲ್ಲಿ ವಿಷ್ಣುಭಕ್ತನಾದ ದಾಮಾಜಿಪಂತನ ಚರಿತ್ರೆಯು ಅದ್ಭುತವಾಗಿರುವುದು. ಮಹೀಪತಿಯು ಭಕ್ತರ ಶರಣಾಗತನು. ಪ್ರೇಮಯುಕ್ತನಾಗಿ ಗುಣಗಳಂ ವರ್ಣಿಸುತ್ತಿರುವನು.

ಇಂತು ಶ್ರೀ ಭಕ್ತವಿಜಯದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ನಾಲ್ವತ್ತನೆಯ ಅಧ್ಯಾಯ.

ದಾಮಾಜಿಪಂತನ ಚರಿತ್ರೆ.

ಜಯಭಕ್ತವತ್ಸಲನೆ! ರುಕ್ಮಿಣೀಕಾಂತನೆ! ದೀನಬಂಧುವೆ ! ಅನಾಥನಾಥನೆ! ನಿಜಭಕ್ತರಿಗೆ ಸೌಖ್ಯವಂ ಕೊಡುವಾತನು ನೀನಲ್ಲದೆ ಮತ್ತೊಬ್ಬನು ಇಲ್ಲ. ಅನಂತಾವತಾರಗಳಂ ಧರಿಸಿದ ಕೃಪಾನಿಧಿಯೇ! ಗುಣಜಲನಿಧಿಯೇ! ಯಾದವೇಂದ್ರನೇ! ಭಕ್ತರ ಮಾಯೆಯುಂ ಪರಿಹರಿಸು. ಜಯವಿಶ್ವೇಶ್ವರನೇ! ಕೈವಲ್ಯವಂ ನೀಡುವುದರಲ್ಲಿ ಮದಾನ್ಯನೆನಿಸಿದವನೆ! ಭಕ್ತಭೂಷಣನೆ! ಜಗದುದ್ಧಾರನೆ! ಶಾರ್ಙ್ಗಪಾಣಿಯೆ ! ಭಕ್ತರಿಗೆ ಸಂಕಟವು ಪ್ರಾಪ್ತವಾಗಲು, ನೀನು ಆಕ್ಷಣದಲ್ಲಿ ಬಂದು ನಾಚಿಕೆಗೊಳ್ಳದೆ ಅವರ ಕಾರ್ಯಗಳಂ ಮಾಡುತ್ತಿರುವೆ. ನಿನ್ನ ಆ ಸಚ್ಚರಿತ್ರೆಯನ್ನು ನೀನು ನಟಿಯಿಸುವೆ. ಬುದ್ಧಿಯು ನನ್ನ ಸ್ವತಂತ್ರವಲ್ಲ. ನಾನು ನಿಮಿತ್ತಕ್ಕೆ ಮುಂದೆ ಇರುವೆನು.

ಎಲೈ ಶ್ರೋತೃಗಳಿರಾ ! ಪೂರ್ವಾಧ್ಯಾಯದಲ್ಲಿ ಕಾಹ್ನೋಪಾತ್ರೆಯ ಚರಿತ್ರೆಯಂ ಕೇಳಿದಿರಷ್ಟೆ. ಇನ್ನು ಉದಾರನೂ ಧೀರನೂ ಜ್ಞಾನಿಯೂ ಪ್ರಪಂಚದಲ್ಲಿದ್ದೂ ವಿರಕ್ತನೂ ಎನಿಸಿ ಭಗವದ್ಭಕ್ತನಾದ ದಾಮಾಜಿಪಂತನ ಚರಿತ್ರೆಯನ್ನು ಆದರದಿಂದ ಕೇಳಬೇಕು.

ಬೆದರ ಎಂಬ ಪಟ್ಟಣದಲ್ಲಿ ಅಪಿಂಧರಾಜನೊಬ್ಬನಿದ್ದನು. ಆತನ ಬಳಿಯಲ್ಲಿ ದಾಮಾಜಿಪಂತನು ಏಕನಿಷ್ಠೆಯಿಂದ ಸೇವೆಮಾಡಿಕೊಂಡಿದ್ದನು. ಈ ಸಂಸಾರವು ಮಿಥ್ಯಾಭೂತವಾದುದೆಂದು ತಿಳಿದು ಸರ್ವಕಾಲದಲ್ಲಿಯೂ ಶ್ರೀಹರಿಯ ಭಜನೆಯಂ ಮಾಡುತಿದ್ದನು. ಪಂಡರೀಕ್ಷೇತ್ರಕ್ಕೆ ಎರಡುಗಾವುದದ ದೂರದಲ್ಲಿ ಮಂಗಳವೇಢೆಯೆಂಬ ಊರಿರುವುದು. ಆ ರಾಜನು ದಾಮಾಜಿಪಂತನಲ್ಲಿ ಪ್ರೀತಿವಿಶ್ವಾಸವುಳ್ಳವನಾಗಿದ್ದುದರಿಂದ ಆವೂರ ಅಧ್ಯಕ್ಷತೆಯನ್ನು ಕೊಟ್ಟು ಅಲ್ಲಿಯ ಬೊಕ್ಕಸವನ್ನೂ ಅವನ ವಶಮಾಡಿದನು. ದಾಮಾಜಿಪಂತನು ಸಕುಟುಂಬನಾಗಿ ಆವೂರಲ್ಲಿಯೇ ನಿಂತನು. ಮಧ್ಯಾಹ್ನಕಾಲದಲ್ಲಿ ಬಂದ ಅತಿಥಿಗಳಿಗೆ ಅನ್ನದಾನವಂ ಮಾಡುತ್ತ ಶ್ರೀಪಾಂಡುರಂಗಸ್ವಾಮಿಯ ಚರಣಾರವಿಂದದಲ್ಲಿಯೇ ಹಗಲೂ ಇರುಳೂ ಭಾವವಂ ಹಿಡಿದಿದ್ದನು. ಇಂತು ಬಹುದಿವಸಗಳು ಕಳೆದುವು. ದುರ್ಭಿಕ್ಷಕಾಲವು ಪ್ರಾಪ್ತವಾಯಿತು. ಪ್ರಾಣಿಗಳು ಕ್ಷುಧೆಯಿಂದ ಪೀಡಿತರಾಗಿ ಪ್ರಾಣಗಳಂ ಬಿಡುತ್ತಿದ್ದರು. ಅನ್ನವು ಎಲ್ಲಿಯೂ ದೊರೆಯುತ್ತಿರಲಿಲ್ಲ. ಇಂತಹ ಕಠಿನಕಾಲವು ಬಂದುದರಿಂದ ಜನಗಳನೇಕರು ಸ್ವದೇಶವಂ ಬಿಟ್ಟು ಹೋದರು. ಪಂಡರೀಕ್ಷೇತ್ರದಲ್ಲಿಯೂ ಅನ್ನವು ದೊರೆಯದು ; ಆಗ ಒಬ್ಬ ಬ್ರಾಹ್ಮಣನು ಕ್ಷುಧಿತನಾಗಿ ಮಂಗಳವೇಢೆಗೆ ಬಂದು, ಇಂದು ಅನ್ನವು ದೊರೆಯಿತು—ಎನ್ನುತ್ತ ದಾಮಾಜಿಪಂತನ ಮನೆಗೆ ಬಂದವನಾದನು. ಆ ಸಮಯದಲ್ಲಿ ಆತನು ಬ್ರಾಹ್ಮಣನಂ ಕಾಣುವುದೂ ಸದ್ಭಾವದಿಂದ ನಮಸ್ಕಾರವಂ ಮಾಡಿ, ಪ್ರಸಾದವಂ ತೆಗೆದುಕೊಳ್ಳುವುದಕ್ಕೋಸ್ಕರ ಶೀಘ್ರದಲ್ಲಿ ಸ್ನಾನವಂ ಮಾಡಿಕೊಂಡು ಬರಬೇಕು—ಎಂದು ಪ್ರಾರ್ಥಿಸಿದನು. ಬ್ರಾಹ್ಮಣನು ಆತನ ಆದರಣವಂ ನೋಡಿ ಬಹುಸಂತೋಷವಂ ತಾಳಿದನು. ಮಕ್ಕಳಲ್ಲಿ ಪ್ರೀತಿಯಂ ಮಾಡಲು, ತಾಯಿಯು ಸಮಾಧಾನಪಡುವಂತೆಯೂ, ಮಗನನ್ನು ಆದರಿಸಲು, ತಂದೆಯು ಸಂತೋಷಪಡುವಂತೆಯೂ, ಯಾಚಕರಂ ಪೂಜಿಸಲು ಶಾರ್ಙ್ಗಧರನು ತೃಪ್ತನಾಗಿ ಉಲ್ಲಾಸಪಡುವನು. ಕಠಿನಕಾಲವು ಪ್ರಾಪ್ತವಾಗಲು, ಗೃಹಸ್ಥನು ಅನ್ನವಸ್ತ್ರವನ್ನು ಕೊಡುವ ಶಕ್ತಿಯಿಲ್ಲದವನಾದರೂ ಮೃದೂಕ್ತಿಯಿಂದ ಅತಿಥಿಯ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕು. ಭಿಕ್ಷವಂ ನೀಡುವುದಕ್ಕೆ ಶಕ್ತಿಯಿಲ್ಲದಿದ್ದರೂ ಕೋಪವನ್ನಾದರೂ ನಿಗ್ರಹಿಸಿಕೊಂಡಿರಬೇಕು. ಅಂತು ಇರದೆ ನಿಷ್ಠುರೋಕ್ತಿಗಳಿಂದ ಅತಿಥಿಯ ಮನಸ್ಸಂ ನೋಯಿಸಿದರೆ ಘೋರವಾದ ನರಕದಲ್ಲಿ ಬೀಳುವನು—ಎಂದು ಶಾಸ್ತ್ರದಲ್ಲಿ ಹೇಳಿರುವ ನೀತಿಯನ್ನು ದಾಮಾಜಿಪಂತನು ಬಲ್ಲನು. ಆದುದರಿಂದ ಬ್ರಾಹ್ಮಣನನ್ನು ಆದರಿಸಿದನು. ಬಳಿಕ

ಬ್ರಾಹ್ಮಣನು ಸ್ನಾನಾಹ್ನಿಕಗಳನ್ನು ಮಾಡಿಕೊಂಡು ಬರಲು, ಆತನನ್ನು ಪಂಕ್ತಿಯಲ್ಲಿ ಕುಳ್ಳಿರಿಸಿಕೊಂಡು ಎಲೆಯಲ್ಲಿ ಉತ್ತಮಾನ್ನಗಳಂ ಬಡಿಸಿ ಕಡೆಗೆ ತುಪ್ಪವಂ ಬಡಿಸುವುದೂ ಆಪೋಶನವಂ ತೆಗೆದುಕೊಳ್ಳಬೇಕೆಂಬ ಸಮಯದಲ್ಲಿ ಪಂಢರಪುರದಿಂದ ಬಂದಿದ್ದ ಆ ಬ್ರಾಹ್ಮಣನು ರೋದನವಂ ಮಾಡಲಾರಂಭಿಸಿದನು. ಕಣ್ಣುಗಳಿಂದ ನೀರು ಸುರಿಯುತ್ತಿದ್ದುದು. ಈ ವಿಪರೀತವಂ ಕಂಡು ಸರ್ವರೂ ವಿಸ್ಮಿತರಾದರು. ಆ ಸಮಯದಲ್ಲಿ ಮನೆಯ ಯಜಮಾನನು ಆ ಬ್ರಾಹ್ಮಣನಂ ಕುರಿತು, ಸ್ವಾಮಿ! ಈಗಿನ ಸಮಯವಾವುದು? ಯಾವುದನ್ನು ಜ್ಞಾಪಿಸಿಕೊಂಡು ದುಃಖಪಡುವಿರಿ?-ಎನಲು, ಆ ಮಾತಂ ಕೇಳಿ ಬ್ರಾಹ್ಮಣನು—ನನ್ನ ಮಕ್ಕಳುಮರಿಗಳೆಲ್ಲರಿಗೂ ಈಹೊತ್ತಿಗೆ ನಾಲ್ಕುದಿನಗಳ ಉಪವಾಸವಾಯಿತು. ನಾನು ಬಹುನಿರ್ದಯನು. ನಿಮ್ಮ ಮನೆಯಲ್ಲಿ ಭೋಜನವಂ ಮಾಡುತ ಕುಳಿತೆನು. ಮುಂದೆ ಯಾವ ಪರಿಯಿಂದ ಆಗುವುದೋ ಎಂದು ದುಃಖವುಂಟಾಯಿತು—ಎಂದನು.

ಆ ಮಾತಂ ಕೇಳಿ ದಾಮಾಜಿಪಂತನು ಆತನಂ ಕುರಿತು, ಸ್ವಾಮಿ! ಇನ್ನೊಂದು ಸಂವತ್ಸರದ ವರೆಗೂ ನಿಮಗೆ ನಾನು ಅನ್ನವನ್ನು ಪೂರೈಸುವೆನು. ನೀವು ಮನಸ್ಸನ್ನು ಸ್ವಸ್ಥಮಾಡಿಕೊಂಡು ಭೋಜನವಂ ಮಾಡಬೇಕು. ಸಾಯಂಕಾಲಕ್ಕೆ ನಿಮ್ಮ ಊರಿಗೆ ನಿಮ್ಮ ಮನೆಗೆ ಧಾನ್ಯವನ್ನು ಕೊಟ್ಟು ಕಳುಹಿಸುತ್ತೇನೆ-ಎಂದನು. ಆ ಅಭಯ ವಚನವಂ ಕೇಳಿ ಬ್ರಾಹ್ಮಣನು ದೇವೇಂದ್ರನಿಂದ ಅಮೃತವನ್ನು ಪಡೆದ ಆಯುರ್ಹೀನನಂತೆ ಸಂತೋಷವಂ ತಾಳಿ ಭೋಜನವಂ ಮಾಡಿದನು.

ದಾಮಾಜಿಪಂತನು ಬಳಿಕ ತಾಂಬೂಲದಕ್ಷಿಣೆಗಳಂ ಕೊಟ್ಟು ಆಶೀರ್ವಾದವಂ ಸ್ವೀಕರಿಸಿ ತನ್ನ ಭೃತ್ಯರಂ ಕರೆದು, ಎರಡು ಖಂಡಗದ ಧಾನ್ಯವನ್ನು ತೆಗೆದುಕೊಂಡು ಹೋಗಿ ಪಂಢರಪುರದಲ್ಲಿ ಈ ಬ್ರಾಹ್ಮಣನ ಮನೆಯಲ್ಲಿ ಹಾಕಿ ಬರಬೇಕೆಂದು ಹೇಳಿದನು. ಆ ಮಾತಂ ಕೇಳಿ ಬ್ರಾಹ್ಮಣನು ಬಹುಸಂತೋಷವಂ ತಾಳಿ, ರುಕ್ಮಿಣೀಪತಿಯು ನನಗೆ ಪ್ರಸನ್ನನಾದನು—ಎಂದನು. ಬಳಿಕ ಧಾನ್ಯವನ್ನು ಎತ್ತುಗಳ ಮೇಲೆ ಹೇರಿಸಿ ಆ ಬ್ರಾಹ್ಮಣನೊಡನೆ ಪಂಢರಪುರಕ್ಕೆ ಕೊಟ್ಟು ಕಳುಹಿಸಲು, ಅಲ್ಲಿ ಇದ್ದ ಜನರು ಆ ಧಾನ್ಯದ ಹೇರುಗಳನ್ನು ಕಂಡು ಬಂದು ಮೇಲೆ ಬಿದ್ದು ಹೇರುಗಳನ್ನು ಕೆಡಹಿ ಧಾನ್ಯವೆಲ್ಲವನ್ನೂ ಸೂರೆಗೊಂಡು ಹೋದರು. ಅವರು ಉಪವಾಸದಿಂದ ಪೀಡಿತರಾಗಿದ್ದ ಕಾರಣ ಯಾರ ಯತ್ನವೇನೂ ನಡೆಯಲಿಲ್ಲ. ಧಾನ್ಯವಂ ಸಂಗಡ ತೆಗೆಯಿಸಿಕೊಂಡು ಬಂದಿದ್ದ ಆ ಬ್ರಾಹ್ಮಣನು, ಭೂಮಿಯಲ್ಲಿ ಸಸ್ಯವು ಚೆನ್ನಾಗಿ ಬೆಳೆದಿರುವಾಗ ಅದರ ಮೇಲೆ ಗೂಬೆಯು ಬಂದು ಕುಳಿತುಕೊಳ್ಳಲು, ಸಂಕಟಪಡುವ ಕರ್ಷಕನಂತೆ ಸಂಕಟಪಡುತ್ತ, ತನ್ನ ಅನ್ನವನ್ನು ನೀವು ಏಕೆ ಕಿತ್ತುಕೊಂಡುಹೋಗುವಿರಿ-ಎಂದು ರೋದನಮಾಡಿದನು.

ಬಳಿಕ ಘಂಡರಪುರದ ಬ್ರಾಹ್ಮಣರೆಲ್ಲರೂ ಆತನನ್ನು ಕುರಿತು, ನೀವು ಧಾನ್ಯವನ್ನು ಎಲ್ಲಿಂದ ತಂದು ಇದ್ದಿರಿ? ಅದಂ ನಮಗೋಸ್ಕರ ಹೇಳಿರಿ–ಎಂದು ಕೇಳಲು, ಆತನು–ನಾಗಳನೇಢೆಯಲ್ಲಿರುವ ದಾಮಾಜಿಪಂತನು, ಜ್ಞಾನಿಯು ಮಹೋಪಕಾರನು. ಆತನು ಕೃಪೆಯಿಂದ ಕೊಟ್ಟನು. ದೇವರು ಕೊಟ್ಟುದನ್ನು ಕರ್ಮವು ಕಿತ್ತುಕೊಂಡು ಹೋಯಿತು–ಎಂಬ ಮಾತು ನನಗೆ ನಿದರ್ಶನಕ್ಕೆ ಬಂದುದು. ನನ್ನ ಕುಟುಂಬದ ಪೂರ್ವಕರ್ಮವು ದುಷ್ಟವಾದುದು. ಆದುದರಿಂದ ಜನಗಳು ಧಾನ್ಯವನ್ನು ಕೊಳ್ಳೆ ಮಾಡಿಬಿಟ್ಟರು–ಎಂದನು.

ಆ ಮಾತಂ ಕೇಳಿ ಬ್ರಾಹ್ಮಣರೆಲ್ಲರೂ ಹೊರಟು ದಾಮಾಜಿಪಂತನ ಮನೆಯಂ ಸೇರಿದರು. ಆತನು ಅವರಂ ಕಾಣುವುದೂ ಭಕ್ತಿಭಾವದಿಂದ ನಮಸ್ಕಾರವಂ ಮಾಡಲು, ಆ ಬ್ರಾಹ್ಮಣರು–ನಿಮಗೆ ಕಲ್ಯಾಣವುಂಟಾಗಲಿ–ಎಂದು ಆಶೀರ್ವಾದವಂ ಮಾಡಿ, ಈಗ ದುರ್ಭಿಕ್ಷಕಾಲವು ಪ್ರಾಪ್ತವಾಗಿರುವುದು; ನೀವು ನಮ್ಮೂರ ಬ್ರಾಹ್ಮಣನಿಗೆ ಅನ್ನವಂ ಕೊಟ್ಟ ವೃತ್ತಾಂತವಂ ಕೇಳಿ ನಿಮ್ಮ ಬಳಿಗೆ ಓಡಿಬಂದೆವು. ನೀವು ಉದಾರರು; ಸುಜ್ಞಾನಿಗಳು. ನಿಮಗೆ ಸಣ್ಣವರು ದೊಡ್ಡವರು–ಎಂಬ ಭೇದವಿಲ್ಲ. ಅನ್ನದಾನಕ್ಕೆ ಪಾತ್ರಾಪಾತ್ರವಿವೇಚನೆಯಿಲ್ಲವೆಂಬುದು ನಿಮಗೆ ತಿಳಿದೇ ಇದೆ. ಗಗನದಲ್ಲಿ ಸೂರ್ಯನು ಉದಯಿಸಲು, ಪ್ರಕಾಶವು ಎಂತು ಸರ್ವರಿಗೂ ಸಮವೋ ಅಂತು ನೀವು ಎಲ್ಲರಿಗೂ ಸಮರು. ನಾವು ಕ್ಷೇತ್ರವಾಸಿಗಳಾದ ಬ್ರಾಹ್ಮಣರು ಅನ್ನವಿಲ್ಲದೆ ಉಪವಾಸಗೊಂಡು ಪ್ರಾಣವಂ ಬಿಡುವರಾಗಿರುವೆವು–ಎಂದು ನುಡಿಯಲು, ದಾಮಾಜಿಪಂತನು ಅವರ ಮಾತಂ ಕೇಳಿ ಕನಿಕರಗೊಂಡು ಅವರಿಗೆ ಅಭಯವಂ ಕೊಟ್ಟು ಕುಳ್ಳಿರಿಸಿ ಮನೆಯೊಳಗೆ ಹೋಗಿ ಮಡದಿಯಂ ಕುರಿತು–ಘಂಡರಪುರದ ಬ್ರಾಹ್ಮಣರು ಅನ್ನವಿಲ್ಲದೆ ಉಪವಾಸದಿಂದ ಪ್ರಾಣವಂ ಬಿಡುವರಾಗಿರುವರಂತೆ. ಎಲ್ಲರೂ ಒಟ್ಟಾಗಿ ಇಲ್ಲಿಗೆ ಬಂದಿರುವರು. ಅವರಿಗೆ ನಮ್ಮಲ್ಲಿ ಇಲ್ಲವೆಂದು ಹೇಳಿದರೆ ಸತ್ಯಕ್ಕೆ ಹಾನಿಯುಂಟಾಗುವುದು. ಎಲ್ಲರಿಗೂ ಕೊಟ್ಟು ಸಂತೋಷಪಡಿಸಲು ಧಾನ್ಯವು ಬೇರೆಯಿಲ್ಲ. ಅದಕ್ಕೆ ಏನುಮಾಡೋಣವೆಂದು ಚಿಂತೆಯುಂಟಾಗಿದೆ. ಒಬ್ಬನಿಗೆ ಸ್ವಲ್ಪ ಧಾನ್ಯವನ್ನು ಕೊಟ್ಟದ್ದೆವು. ಅನೇಕರು ಕೂಡಿ ಅದನ್ನು ಕಿತ್ತುಕೊಂಡುಹೋದರು. ದುರ್ಭಿಕ್ಷಕ್ಕೋಸ್ಕರ ಜನಗಳು ಸ್ವದೇಶವನ್ನೇ ಬಿಟ್ಟು ಹೋದರು–ಎಂದು ನುಡಿಯಲು, ಆಕೆಯು ಪತಿಯನ್ನು ಕುರಿತು–ಇದಕ್ಕೆ ಏನುಪಾಯವಂ ಮಾಡಬೇಕೆಂದು ನಿಮಗೆ ತೋರುವುದೋ ಅದರಂತೆ ಮಾಡಿ. ಎಂತಾದರೂ ಬ್ರಾಹ್ಮಣರನ್ನು ಸಂತೋಷಪಡಿಸಿ ಕಳುಹಿಸಬೇಕು–ಎಂದಳು.

ಬಳಿಕ ಆತನು–ಅರಮನೆಯ ಧಾನ್ಯದ ಭಂಡಾರಗಳೆರಡೂ ನನ್ನ ಸ್ವಾಧೀನತೆಯಲ್ಲಿವೆ. ಅವುಗಳೆಲ್ಲವನ್ನೂ ಬ್ರಾಹ್ಮಣರಿಗೆ ಸೂರೆಮಾಡಿಸಿ ಕೊಟ್ಟು ಅವರ ಪ್ರಾಣಗಳಂ ರಕ್ಷಿಸಬೇಕೆಂದಿರುವೆನು. ಈ ಸುದ್ದಿಯನ್ನು ರಾಜನು ತಿಳಿದು ಕೋಪ

ಗೊಂಡು ನನ್ನ ಪ್ರಾಣವನ್ನು ತೆಗೆದುಕೊಂಡರೂ ತೆಗೆದುಕೊಳ್ಳಲಿ. ನನ್ನ ಒಂದು ಜೀವವು ಹೋಗುವುದು. ಕ್ಷೇತ್ರವಾಸಿಗಳಾದ ಬ್ರಾಹ್ಮಣರನೇಕರು ಬದುಕುವರು. ನಾನು ಒಬ್ಬನು ದೇಹದ ಮೇಲೆ ಆಶೆಯನ್ನು ಇಟ್ಟರೆ ಇಷ್ಟುಮಂದಿಗಳೂ ಮೃತರಾಗುವರು—ಎಂದು ತನ್ನ ಮನೋನಿಶ್ಚಯಮಂ ನುಡಿದು ಬಳಿಕ ಹೊರಗೆ ಬಂದು ಧಾನ್ಯದ ಭಂಡಾರಗಳನ್ನು ತೆಗೆಯಿಸಿ ಬ್ರಾಹ್ಮಣರಂ ಕರೆದು ನಿಮ್ಮಲ್ಲಿ ಯಾರುಯಾರಿಗೆ ಎಷ್ಟೆಷ್ಟು ಧಾನ್ಯವು ಬೇಕಾಗುವುದೋ ಅವರವರು ಅಷ್ಟಷ್ಟನ್ನು ಕಟ್ಟಿಕೊಂಡು ಹೋಗಿ—ಎಂದನು. ಈಯುದಾರವಾದ ಮಾತನ್ನು ಕೇಳಿ ಬ್ರಾಹ್ಮಣರೆಲ್ಲರೂ ಸಂತೋಷಪಟ್ಟು—ನಿಮಗೆ ರುಕ್ಮಿಣೀಪತಿಯು ಕಲ್ಯಾಣಮಂ ಮಾಡಲಿ—ಎಂದು ಆಶೀರ್ವಾದಮಂ ಮಾಡಿ ಬೇಕಾದಷ್ಟು ಧಾನ್ಯಮಂ ಕಟ್ಟಿಕೊಂಡು ಸಂತೋಷದಿಂದ ತಮ್ಮ ತಮ್ಮ ಮನೆಗೆ ಹೋದರು.

ಬಳಿಕ ಈ ವೃತ್ತಾಂತವನ್ನು ಕೇಳಿ ಉಳಿದ ಬ್ರಾಹ್ಮಣರೂ ವೈಶ್ಯರೂ ಶೂದ್ರರೂ ಬಡಗಿಯವರೂ, ಚರ್ಮಕಾರರು ಕುಂಬಾರರು ಬೆಸ್ತರು ಗೌಳಿಗರು ಕಲ್ಲುಕುಟಿಗರು ಅಗಸರು ಕಂಚುಗಾರರು ತೋಟದ ತಿಗುಳರು ರಂಗುಗಾರರು ಚಿತ್ರಗಾರರು ಮುಂತಾದ ಜಾತಿಯವರೂ ಇನ್ನೂ ಅನೇಕರಾದ ಸಾಧುಸಜ್ಜನರೂ, ನಮಗೆ ರುಕ್ಮಿಣೀಪತಿಯು ಪ್ರಸನ್ನನಾಗಿ ದಾಮಾಜಿಪಂತರ ಹೃದಯದಲ್ಲಿ ಪ್ರವೇಶಿಸಿರುವನು—ಎಂದು ಭಾವಿಸಿ ಮಂಗಳವೇಢೆಗೆ ಬಂದು ತಮತಮಗೆ ಬೇಕಾದಷ್ಟು ಧಾನ್ಯವನ್ನು ಕಟ್ಟಿಕೊಂಡು ಹೋಗುವವರಾದರು.

ಈ ಮಾತಂ ಕೇಳಿ ಶ್ರೋತೃಗಳು—ಸಕಲಜಾತಿಯವರೂ ಅನ್ನಕ್ಕೋಸ್ಕರ ಒಂದು ಕಡೆ ಎಂತು ಕೂಡಿದರೆಂದು ಶಂಕೆಪಡಲಾಗದು. ಅನ್ನದಾನಕ್ಕೆ ಸಕಲಜಾತಿಯವರೂ ಸಮರು. ಕ್ಷೇತ್ರವಾಸಿಗಳಾದ ಸರ್ವರೂ ಸಮರೆಂದೇ ತಿಳಿಯಬೇಕೆಂದು ಪುರಾತನವಾದ ಅಭಂಗಗಳಲ್ಲಿ ಸಂತರು ಹೇಳಿರುವರು. ಒಂಬತ್ತು ಲಕ್ಷದ ಜಲಚರಯೋನಿಗಳು ತನ್ನಲ್ಲಿ ಇದ್ದರೂ ಅವುಗಳು ಸಮುದ್ರಕ್ಕೆ ಎಂತು ಸಮಗಳೋ ಹತ್ತು ಲಕ್ಷದ ಪಕ್ಷಿಜಾತಿಗಳು ತನ್ನಲ್ಲಿ ಸಂಚರಿಸುತ್ತಿದ್ದರೂ ಆಕಾಶಕ್ಕೆ ಎಂತು ಸಮಗಳೋ ಇಪ್ಪತ್ತು ಲಕ್ಷದ ಸ್ಥಾವರಂಗಳು ತನ್ನಲ್ಲಿ ಅಂಕುರಿಸಿದ್ದರೂ ಅವು ಭೂಮಿಗೆ ಎಂತು ಸಮಾನಗಳೋ ಅಂತು ಪತಿತಪಾವನನಾದ ಶ್ರೀರುಕ್ಮಿಣೀಪತಿಗೆ ಸಕಲಜಾತಿಯವರೂ ಸಮಾನರೆನಿಸುವರು. ಯಾರಿಗೆ ಸಂಪೂರ್ಣವಾದ ಆತ್ಮಜ್ಞಾನವುಂಟಾಗಿರುವುದೋ ಅವರೇ ಈ ಸಿದ್ಧಾಂತದ ಗುರುತನ್ನು ಬಲ್ಲರು. ಅನೇಕವಾದ ಭೇದಂಗಳ ತಾರತಮ್ಯಮಂ ಕಣ್ಣಿನಿಂದ ಕಂಡರೂ, ಇದು ಶ್ರೇಷ್ಠ ಇದು ಕಡಿಮೆ—ಎಂದು ಹೇಳರು. ಈಯುತ್ತಮಲಕ್ಷಣವುಳ್ಳ ಭಕ್ತಿಯನ್ನು ದಾಮಾಜಿಪಂತನು ತಿಳಿದಿದ್ದನು. ಆದುದರಿಂದ ಸರ್ವಭೂತಗಳಿಗೂ ಪ್ರೀತಿಯಿಂದ ಅನ್ನಮಂ ಕೊಡುತ್ತಿರುವನು. ಅನಾಥರು ದುರ್ಬಲರು ಅತ್ಯಂತದೀನರು ಮುಂತಾದವರ ಪ್ರಾಣಗಳನ್ನು ದುರ್ಭಿಕ್ಷದಲ್ಲಿ ನಾನು ಅನ್ನ

ದಾನದಿಂದ ಬದುಕಿಸಿದೆ-ಎಂದು ಅಹಂಕಾರದ ಲೇಶವನ್ನಾದರೂ ತಾಳದವನಲ್ಲ. ಕರ್ಣಾಕರ್ಣಿಕೆಯಿಂದ ಎಲ್ಲಾದೇಶಗಳಲ್ಲಿಯೂ ದಾವಾಜಿಪಂತನ ಕೀರ್ತಿಯು ಪ್ರಕಟವಾಯಿತು. ಲುಬ್ಧರಾದ ಜನರು ಈ ವೃತ್ತಾಂತವಂ ಕೇಳಿ—ರಾಜನ ಧಾನ್ಯವನ್ನು ಹಂಚಿದನು. ಆತನ ಕೈಯಿಂದ ಏನು ವೆಚ್ಚವಾಯಿತು ? ಶರೀರಶ್ರಮದಿಂದ ಸಂಪಾದಿಸಿ ಏನೂ ವೆಚ್ಚವನ್ನು ಮಾಡಲಿಲ್ಲ—ಎಂದು ನಿಂದಿಸಿದರು. ಕೆಲವರು ನಿಮ್ಮನಿಮ್ಮ ವ್ಯಾಪಾರಗಳಂ ಬಿಟ್ಟು ಆತನ ನಿಂದೆಯಂ ಏಕೆ ಮಾಡುವಿರಿ ?-ಎಂದರು. ಇನ್ನು ಕೆಲವರು ಈ ಸಂಗತಿ ರಾಜನಿಗೆ ತಿಳಿದರೆ ಬಹುದುಃಖಕ್ಕೆ ಗುರಿಮಾಡುವನು. ಶರೀರವನ್ನು ದಂಡಿಸಿ ಗಳಿಸಿದ ದ್ರವ್ಯವನ್ನೇ ಹಂಚಬೇಕು. ಆತನು ಅಘಟಿತವಾದ ಕೆಲಸವನ್ನು ಮಾಡಿದನು. ಅವಿಂಧರಾಜನು ಕೇಳಿದರೆ ಆತನ ಪ್ರಾಣವನ್ನೇ ತೆಗೆದುಕೊಳ್ಳುವನು—ಎಂದು ಹಲವುಬಗೆಯಿಂದ ಮಾತನಾಡಿಕೊಂಡರು. ಆದರೂ ದಾವಾಜಿಪಂತನು ಹರ್ಷಶೋಕಗಳಲ್ಲಿ ಬೀಳದೆ ಸರ್ವಕಾಲದಲ್ಲಿಯೂ ಆನಂದದಿಂದಿರುತ್ತಿದ್ದನು. ಒಂದು ತಿಂಗಳ ವರೆಗೆ ಯಾಚಕಜನರು ಧಾನ್ಯವನ್ನು ತೆಗೆದುಕೊಂಡು ಹೋಗುತ್ತಿದ್ದರು.

ಬಳಿಕ ಮಹಾಸಂಕಟವು ಬದವಿತು. ಭಾವುಕರು ಕೇಳಬೇಕು. ಅಲ್ಲಿ ಒಬ್ಬ ಬ್ರಾಹ್ಮಣನು 'ಶಿರಸ್ತೆ' ಎಂಬ ಕೆಲಸದಲ್ಲಿದ್ದನು. ಆತನು ದುಷ್ಟನು. ರಾಜನಿಗೆ ಇಂತು ಬರೆದು ಕಳುಹಿಸಿದನು:—ಮಹಾರಾಜೇಂದ್ರನೆ ! ಸೇವಕನ ಬಿನ್ನಪವಂ ಲಾಲಿಸಬೇಕು. ದಾವಾಜಿಪಂತನು ಭಂಡಾರದ ಧಾನ್ಯವೆಲ್ಲವನ್ನೂ ಬ್ರಾಹ್ಮಣರಿಗೆ ಸೂರೆಗೊಟ್ಟುಬಿಟ್ಟನು. ನಾನು ನಿಮ್ಮ ಆಜ್ಞಾಧಾರಕನು. ಸನ್ನಿಧಿಗೆ ವಿಜ್ಞಾಪಿಸಿಕೊಂಡಿರುವೆನು—ಎಂದು. ಅವಿಂಧರಾಜನು ಆ ಲೇಖನವನ್ನು ಕೇಳಿ, ಬಡಬಾಗ್ನಿಯಲ್ಲಿ ಆಜ್ಯವನ್ನು ಸುರಿಯಲು, ಅದು ಗಗನಪರ್ಯಂತ ಎಂತು ಪ್ರಜ್ವಲಿಸುವುದೋ ಅಂತು ಕೋಪೋದ್ರೇಕದಿಂದ ಪ್ರಜ್ವಲಿಸುತ್ತ, ಮದ್ಯವಂ ಪಾನಮಾಡಿದ ಮದದಾನೆಯಂತೆ ಉದ್ಧೃತ್ತನಾಗಿ ವಿವೇಕವಿಚಾರವೇನೂ ಇಲ್ಲದೆ-ನನ್ನ ಅಪ್ಪಣೆಯಂ ಪಡೆಯದೆ ಧಾನ್ಯಕೋಶವನ್ನು ಎಂತು ಸೂರೆಗೊಳಿಸಿದನು ? ಅವನನ್ನು ಸನ್ನಿಧಿಗೆ ಬರಮಾಡಿ ಶಿರಸ್ಸಂಛೇದಿಸಬೇಕೆಂದು ದುರಾಲೋಚನೆಯಂ ಮಾಡಿ, ಈಗಲೇಬರಬೇಕೆಂದು ಆಜ್ಞಾಪತ್ರವನ್ನು ಬರೆದು ದೂತರ ಕೈಯಲ್ಲಿ ಕೊಟ್ಟು ಮಂಗಳವೇಢೆಗೆ ಕಳುಹಿಸಿಕೊಟ್ಟನು.

ಆ ದೂತರು ಪತ್ರವನ್ನು ತೆಗೆದುಕೊಂಡು ಬಂದು ದಾವಾಜಿಪಂತನ ಕೈಯಲ್ಲಿ ಕೊಟ್ಟರು. ಗ್ರಾಮವಾಸಿಗಳು-ಈತನು ಅರಮನೆಯ ಧಾನ್ಯವನ್ನು ಸೂರೆಗೊಳಿಸಿದನು. ಅನ್ಯಾಯ ; ಮಹಾಪರಾಧವನ್ನು ಮಾಡಿದನು. ಆದುದರಿಂದ ರಾಜಸನ್ನಿಧಿಗೆ ಹಿಡಿದುಕೊಂಡು ಹೋಗುವುದಕ್ಕೋಸ್ಕರ ಕಿಂಕರರು ಬಂದಿರುವರು-ಎಂದು ವ್ಯಸನಪಡುತ್ತಿದ್ದರು. ದಾವಾಜಿಪಂತನು ಆಜ್ಞಾಪತ್ರವನ್ನು ಓದಿಕೊಂಡು-ನನ್ನಿಂದ

ಮಹಾಪರಾಧವಾಯಿತು. ಈಗ ವ್ಯಸನಪಡುವುದೇಕೆ-ಎಂದು ತನ್ನಲ್ಲಿ ಬಗೆದು ದೂತರ ಸಂಗಡ ಹೊರಟು ಅವರಂ ಕುರಿತು- ಪಂಢರಪುರಕ್ಕೆ ಹೋಗಿ ಪಾಂಡುರಂಗ ಸ್ವಾಮಿಯ ಸಂದರ್ಶನವಂ ಮಾಡಬೇಕೆಂದಿರುವೆನು. ಈ ವಿಷಯದಲ್ಲಿ ನೀವು ಸಮ್ಮತಿಪಡಬೇಕೆಂದು ಹೇಳಿಕೊಂಡು ತ್ವರೆಯಿಂದ ಪಂಢರಪುರವನ್ನು ಸೇರಿ ಭೀಮಾತೀರದಲ್ಲಿ ಸ್ನಾನವಂ ಮಾಡಿ ದೇವಾಲಯವಂ ಪೊಕ್ಕು ಗರುಡಸ್ತಂಭದ ಬಳಿಯಲ್ಲಿ ಸಾಷ್ಟಾಂಗ ನಮಸ್ಕಾರವಂ ಮಾಡಿ ನೆರೆಯ ಮಂಟಪದಲ್ಲಿ ನಿಂತು ವಂದಿಸಿ ಮುಂದೆ ನೋಡಲು, ಇಟ್ಟಿಗೆಯ ಮೇಲೆ ನಿಂತಿರುವ ಪರಬ್ರಹ್ಮನು ದೃಗ್ಗೋಚರನಾದನು. ಯಾವನು ಅನಾಥನಾಥನೋ ಭಕ್ತರ ಪಕ್ಷಪಾತಿಯೋ ಅವಿಶ್ವೋದ್ಧಾರಕನಾದ ಜಗದ್ಗುರುವಿನ ಅತ್ಯಂತಸುಂದರವಾದ ಶ್ರೀಮುಖವನ್ನೂ ಮಕರಾಕಾರವಾದ ದಿವ್ಯಕುಂಡಲಗಳನ್ನೂ ಕಂಠದಲ್ಲಿ ವಿರಾಜಮಾನವಾದ ಕೌಸ್ತುಭವನ್ನೂ ತುಳಸೀಹಾರವನ್ನೂ ಕಟಿಯಲ್ಲಿ ಧರಿಸಿರುವ ಪೀತಾಂಬರವನ್ನೂ ನಾಸಾಗ್ರದಲ್ಲಿ ಇಡಲ್ಪಟ್ಟ ದೃಷ್ಟಿಯನ್ನೂ-ನೋಡಿ ಸಂತೋಷಗೊಂಡು ಮೂರ್ತಿಯನ್ನು ಆಲಿಂಗನಮಾಡಿಕೊಂಡು ಸದ್ಭಾವದಿಂದ ಪಾದಗಳಂ ಪಿಡಿದು ಮತ್ತೆ ಆರೂಪವಂ ನೋಡಿ ಕೈಗಳಂ ಮುಗಿದುಕೊಂಡು ದೇವಾದಿದೇವನೆ ! ರುಕ್ಮಿಣೀಕಾಂತನೇ ! ಇದೇ ಕೊನೆಯ ಸಂದರ್ಶನವು. ನಿನ್ನ ಪಾದವನ್ನು ನಂಬಿ ನಿನ್ನಲ್ಲಿ ನ್ಯಸ್ತಭರನಾಗಿ ನಾನು ಮಹತ್ತರವಾದ ಅನ್ಯಾಯವಂ ಮಾಡಿದೆನು. ಆದುದರಿಂದ ರಾಜನು ಕೋಪಗೊಂಡು ಶಿರಚ್ಛೇದನಕ್ಕೋಸ್ಕರ ಹಿಡಿದುತರಲು ದೂತರಂ ಕಳುಹಿಸಿರುವನು. ಆದರೆ ನಾನು ಹುಟ್ಟಿದುದು ಏನುಸಾರ್ಥಕವಾಯಿತು ? ಕಡೆಯಕಾಲಕ್ಕೆ ನನಗೆ ನಿನ್ನ ಪಾದಸಂದರ್ಶನವೊಂದಾಯಿತು_ಎಂದು, ಕಂಠವು ಬಿಕ್ಕಿಕೊಂಡುಬರಲು ಗದ್ಗದಸ್ವರದಿಂದ ನುಡಿದು, ಕಣ್ಣಿನಿಂದ ನೀರು ಸುರಿಯುತ್ತಿರಲು, ಮತ್ತೆ ಸ್ವಾಮಿಯ ರೂಪವಂ ನೋಡಿ ಬಳಿಕ ರುಕ್ಮಿಣೀಸತ್ಯಭಾಮಾರಾಧೆಯರಂ ವಂದಿಸಿ ಗರುಡನನ್ನೂ ಹನುಮಂತನನ್ನೂ ಅಭಿವಂದಿಸಿ, ಅಲ್ಲಿಂದ ಹೊರಟು ಮುಂದೆ ಪ್ರಯಾಣಮಾಡಿದನು. ಆಗ ಆ ಕ್ಷೇತ್ರವಾಸಿಗಳೆಲ್ಲರೂ ಪಂಢರೀನಾಥನು ದಾಮಾಜಿಪಂತನ ವಿಷಯದಲ್ಲಿ ಏನು ಮಾಡುವನೋ ತಿಳಿಯದು_ಎಂದು ಮಾತನಾಡಿಕೊಳ್ಳುತ್ತಿದ್ದರು.

ದಾಮಾಜಿಪಂತನು ಪಂಢರಪುರವಂ ಎಡಕ್ಕೆ ಬಿಟ್ಟುಕೊಂಡು ಹೋಗುತ್ತಿರಲು, ಆತನಿಗೆ ಉಂಟಾದ ಸಂಕಟವಂ ತಿಳಿದು ಪಂಢರೀನಾಥನಾದ ಶ್ರೀರುಕ್ಮಿಣೀಪತಿಯು_ ಈ ದಾಮಾಜಿಪಂತನು ನನ್ನ ಮೇಲೆ ಭಾರವಂ ಹಾಕಿ ಧಾನ್ಯದ ಭಂಡಾರವಂ ಸೂರೆ ಮಾಡಿದನು. ಈಗ ರಾಜನು ಕೋಪಗೊಂಡು ದಂಡಿಸುವುದಕ್ಕೋಸ್ಕರ ಹಿಡಿದು ತರಿಸಿರುವನು. ನನ್ನನ್ನು ಭಕ್ತವತ್ಸಲನೆಂದು ನಿಗಮಾಗಮಗಳು ಹೊಗಳುತಿರುವುವು. ಈಗ ಈತನಂ ಸಂರಕ್ಷಿಸದಿದ್ದರೆ ನನ್ನ ಗೌರವಕ್ಕೆ ಹಾನಿಯುಂಟಾಗುವುದು_ ಎಂದು ತನ್ನಲ್ಲಿ ಬಗೆದು ಕ್ಷಣದಲ್ಲಿ ಅಂತ್ಯಜರೂಪವಂ ಧರಿಸಿ ಭಕ್ತಕಾರ್ಯವನ್ನು

ಮಾಡಲು ಉಲ್ಲಾಸಗೊಂಡು ಆ ದಾಮಾಜಿಪಂತನ ಹಸ್ತಾಕ್ಷರದಂತೆ ಬಿನ್ನಪವನ್ನು ಬರೆದುಕೊಂಡು ತಲೆಗೆ ಹರಿಕುಟ್ಟೆಯನ್ನು ಸುತ್ತಿಕೊಂಡು, ಕರಿಯ ದಾರವನ್ನು ಕೊರಲಿಗೆ ಕಟ್ಟಿಕೊಂಡು, ಪಗರೆಗಳನ್ನು ಕಿವಿಗಳಲ್ಲಿ ಹಾಕಿಕೊಂಡು, ಕೌಪೀನವನ್ನು ಧರಿಸಿ ಕೈಯಲ್ಲಿ ಕೋಲನ್ನು ಹಿಡಿದುಕೊಂಡು ನಿಲಲು, ಆಗ ರುಕ್ಮಿಣಿಯು—ಇದೇನು ಏನು ಕಾರ್ಯವನ್ನು ಆಲೋಚಿಸಿದಿರಿ ?-ಎಂದು ಕೇಳಲು, ಅದಕ್ಕೆ ವೈಕುಂಠನಾಥನು—ನನ್ನ ಭಕ್ತನಾದ ದಾಮಾಜಿಪಂತನನ್ನು ದಂಡಿಸುವುದಕ್ಕೋಸ್ಕರ ರಾಜಕಿಂಕರರು ಬೆದರಕ್ಕೆ ಹಿಡಿದುಕೊಂಡು ಹೋದರು. ಆತನ ಸಂರಕ್ಷಣೆಗೋಸ್ಕರ ಈ ರೂಪವನ್ನು ಧರಿಸಿದೆನು. ಭಕ್ತರಿಗೆ ಸಂಕಟವುಂಟಾಗಲು ನನಗೆ ನಾಚಿಕೆಯಾಗುವುದು—ಎಂದು ನುಡಿದು ಹಣದ ಪೆಟ್ಟಿಗೆಗಳನ್ನು ಸಿದ್ಧಮಾಡಿ ಅದರಮೇಲೆ ರಾಜಮುದ್ರೆಯಂ ಮಾಡಿ ಅತಿತ್ವರೆಯಿಂದ ಹೊರಟು ಬೆದರವನ್ನು ಸೇರಿ ಅಲ್ಲಿ ಅರಮನೆಯ ದ್ವಾರಪಾಲಕರಂ ಕುರಿತು-ನಾನು ಮಂಗಳವೇಢೆಯಿಂದ ಬಂದಿರುವೆನು. ಮಹಾರಾಜರಿಗೆ ಈ ಸಂಗತಿಯನ್ನು ಬಿನ್ನವಿಸಬೇಕೆಂದು ಹೇಳಲು, ಅವರು ತಿಳಿಯಿಸಿ ರಾಜನ ಅಪ್ಪಣೆಯಿಂದ ಒಳವುಗಿಸಿದರು. ಶ್ರುತಿಶಾಸ್ತ್ರಗಳಿಗೂ ಯಾವನ ಮಹಿಮೆಯು ಸಾಕಲ್ಯದಿಂದ ತಿಳಿಯದೋ ಆತನು ತನ್ನ ತಲೆಯನ್ನು ತಗ್ಗಿಸಿಕೊಂಡು “ಜೀಯ” ಎಂದು ನುಡಿಯುತ್ತಿದ್ದನು. ಎಂಬತ್ತೆಂಟುಸಾಸಿರ ಮಹರ್ಷಿಗಳು ಯಾವನ ಪ್ರಾಪ್ತಿಗೋಸ್ಕರ ಅದ್ಭುತವಾದ ತಪಸ್ಸನ್ನು ಆಚರಿಸುತ್ತಿರುವರೋ ಆತನು ತನ್ನ ಭಕ್ತನಿಗೆ ಸಂಕಟವೊದವಿದುದರಿಂದ ಅವಿಂಧನನ್ನು “ತಾಯಿ ತಂದೆ” ಎನ್ನುತ್ತಿದ್ದನು. ಆಗ ಪ್ರಧಾನರು ಆತನಂ ಕುರಿತು-ನಾಯಕನೆ ! ನೀನುಯಾರು ? ಎಲ್ಲಿಂದ ಬಂದೆ ?-ಎಂದು ಕೇಳಲು, ಆತನು ನಾನು ಮಂಗಳವೇಢೆಯಿಂದ ಬಂದಿರುವೆನು. ದಾಮಾಜಿಪಂತನ ಮನೆಯ ಊಳಿಗದಲ್ಲಿರುವ ಹೊಲೆಯನು. ನಾನು ಆತನ ಸೇವಕನು-ಎಂದು ಉತ್ತರವಂ ಹೇಳಿದನು. ಯಾವನು ಕ್ಷೀರಾಬ್ಧಿಯಲ್ಲಿ ಶೇಷಶಾಯಿಯೆನಿಸಿರುವನೋ ಆತನು ಇಂತಹ ನೀಚಶಬ್ದವನ್ನು ಏಕೆ ಹೇಳಿಕೊಂಡನೆಂದೀರಿ. ಆದರೆ ಆ ವಿಷಯದಲ್ಲಿ ವಿಕಲ್ಪವಂ ಎಣಿಸಬಾರದು. ನಂದನ ಮನೆಯ ದನಗಳ ಕಾಯುವನೆಂದೂ ಧರ್ಮರಾಯನ ಮನೆಯಲ್ಲಿ ಎಂಜಲೆಲೆಗಳನ್ನು ತೆಗೆದವನೆಂದೂ ಅರ್ಜುನನ ಸಾರಥ್ಯವಂ ಮಾಡಿ ಕುದುರೆಗಳನ್ನು ನಾಲ್ಕು ಕೈಗಳಿಂದಲೂ ತಿಕ್ಕಿತೊಳೆದವನೆಂದೂ ಪ್ರಸಿದ್ಧವಾಗಿರುವಾಗ ಭಕ್ತವರ್ಯನಾದ ದಾಮಾಜಿಪಂತನ ಸೇವಕನೆಂದು ಹೇಳಿಕೊಳ್ಳುವ ವಿಷಯದಲ್ಲಿ ಅಡ್ಡಿಯೇನು ? ಆ ಬಳಿಕ ನಿನ್ನ ಹೆಸರೇನೆಂದು ಕೇಳಲು, ವಿಟ್ಠಲನಾಯಕನೆಂದು ಹೇಳಿ ಬಿನ್ನವತ್ತಳೆಯನ್ನು ಆತನ ಮುಂದೆ ಇಟ್ಟನು. ಆ ಅಕ್ಷರಗಳ ಗುರುತಿನಿಂದ ಅವನ ಮಾತುಗಳೆಲ್ಲವೂ ಯಥಾರ್ಥವಾಗಿಯೇ ತೋರಿದುವು. ಬಿನ್ನವತ್ತಳೆಯನ್ನು ಓದುವುದೂ, ರಾಜನು ಏಕಾಗ್ರತೆಯಿಂದ ಕೇಳಿ ಅಪರಾಧವನ್ನು ಮಾಡಿದವನಾದರೆ ಪತ್ರವನೇನೆಂದು ಬರೆದಾನೆಂದು ಬಗೆದು ಆ ಪತ್ರದಲ್ಲಿ ಶ್ರೀಮ

ನ್ಮಹಾರಾಜರ ಸನ್ನಿಧಿಯಲ್ಲಿ ದಾಮಾಜಿಪಂತನು ವಿಜ್ಞಾಪಿಸಿಕೊಳ್ಳುವುದೇನೆಂದರೆ:—ಈ ದೇಶದಲ್ಲಿ ಕ್ಷಾಮವು ಬಂದುದರಿಂದ ಧಾನ್ಯವು ಬಹುಪ್ರಿಯವಾಯಿತು. ಏಳುನೂರು ಖಂಡಿಯ ಧಾನ್ಯವನ್ನು ನಿಮ್ಮ ಆದಾಯಕ್ಕೋಸ್ಕರ ಮಾರಿದೆನು. ಒಂದುರೂಪಾಯಿಗೆ ಬಂದು ಬಳ್ಳದ ಪ್ರಕಾರ ಧಾರಣೆಯಾಗಿದ್ದಿತು. ಆ ದ್ರವ್ಯವೆಲ್ಲವನ್ನೂ ಪೆಟ್ಟಿಗೆಯಲ್ಲಿ ತುಂಬಿಸಿ ಸನ್ನಿಧಿಗೆ ಕಳುಹಿಸಿರುವೆನು. ನನ್ನ ಸೇವಕನಾದ ವಿಟ್ಠಲನಾಯಕನು ನನ್ನ ಮನೆಯ ಎಲ್ಲಾ ಬದುಕಿಗೂ ಗೊತ್ತಾದವನು. ಈತನು ಲೆಕ್ಕವನ್ನೂ ಹಣವನ್ನೂ ತಂದು ಒಪ್ಪಿಸುವನು. ಸಂದುದಕ್ಕೆ ಉತ್ತರ ಅಪ್ಪಣೆಯಾಗಬೇಕು-ಎಂದು ಬರೆದಿದ್ದ ಅರ್ಥವನ್ನು ಗ್ರಹಿಸಿದನು. ಪೆಟ್ಟಿಗೆಯು ಚಿಕ್ಕದಾಗಿದ್ದ ಕಾರಣ ಅಷ್ಟೊಂದು ಹಣವಿರುವುದು ಸುಳ್ಳೆಂದು ತೋರಿತು. ಪ್ರಧಾನರು ಲೆಕ್ಕವನ್ನು ಮಾಡಿ ಒಂದು ಲಕ್ಷದ ಅರುವತ್ತೆಂಟುಸಾಸಿರ ದ್ರವ್ಯವು ಬರಬೇಕೆಂದು ಹೇಳಿದರು. ಪೆಟ್ಟಿಗೆಯನ್ನು ತೆರೆದು ಚೀಲವನ್ನು ಬಿಚ್ಚಿನೋಡುವಾಗ ದ್ರವ್ಯವು ಅಪಾರವಾಗಿ ತುಂಬಿ ಇದ್ದಿತು. ಎಣಿಸುವವನ ಕೈಗಳು ದಣಿದುವು. ರಾಜನು ಕಂಡು ವಿಸ್ಮಿತನಾದನು. ಮಳಲೊಳಗಣ ಚಿಲುಮೆಯಲ್ಲಿ ನೀರನ್ನು ಎಷ್ಟು ತೆಗೆದರೂ ಮುಗಿಯದೆ ಮೊದಲಂತೆಯೇ ಎಂತಿರುವುದೋ ಅಂತು ಎಷ್ಟು ತೆಗೆದರೂ ದ್ರವ್ಯವು ಇದ್ದೇ ಇದ್ದುದು. ಶ್ರೀರುಕ್ಮಿಣೀಪತಿಯು ಇಂತಹ ಚಮತ್ಕಾರವನ್ನು ಆಗ ಅವನಿಗೆ ತೋರಿಸಿದನು. ಇದು ಯಾರಿಗೂ ತಿಳಿಯದೆ ಹೋಯಿತು. ಮಾಯೆಯು ಭ್ರಾಂತಿಯನ್ನು ಹಚ್ಚಿದಳು. ನಿನ್ನ ಭಾಗ್ಯವು ಉತ್ಕೃಷ್ಟವಾದುದೆಂದು ರಾಜನನ್ನು ಎಲ್ಲರೂ ಬಣ್ಣಿಸುತಿದ್ದರು. ದ್ರವ್ಯವು ಮುಗಿಯದೆ ಅಪಾರವಾಗಿ ಇದ್ದುದು. ಆಗ ಚೀಲವನ್ನೇ ತೆಗೆದು ಭಂಡಾರದಲ್ಲಿ ಇರಿಸಿದರು. ಬಳಿಕ ರಾಜನು—ದಾಮಾಜಿಪಂತನು ಧನ್ಯನು. ನಮ್ಮ ಹಿತೈಷಿಯಾದವನು ಇಂತಹ ಸಜ್ಜನನನ್ನು ಶಿರಸ್ತೆದಾರನ ಮಾತಂ ಕೇಳಿ ವ್ಯರ್ಥವಾಗಿ ಕೋಪಿಸಿಕೊಂಡು ಹಿಡಿದು ತರುವುದಕ್ಕೆ ಕಳುಹಿಸಿದೆನು. ಅಗಸನ ಕತ್ತೆಯು ಹಸಿವುಗೊಂಡಿತೆಂದು ಕಾಮಧೇನುವಂ ಹೊಡೆದು ಅಟ್ಟಿದಂತಾಯಿತು-ಎಂದನು. ಆಗ ಅಂಗಳದಲ್ಲಿ ನಿಂತಿದ್ದ ಶಾರ್ಙ್ಗಧರನು—ತನಗೆ ಹಣಸಂದುದಕ್ಕೆ ಪ್ರತ್ಯುತ್ತರವನ್ನು ನನಗೆ ಬೇಗನೆ ಕೊಡಬೇಕು. ಮಂಗಳವೇಢೆಯು ಬಹುದೂರವಿದೆ. ಹೋಗಿ ಸೇರುವುದು ಸಾವಕಾಶವಾಗುವುದು-ಎಂದು ಕೇಳಲು, ಧಾನ್ಯದ ದ್ರವ್ಯವೆಲ್ಲವೂ ಬಂದು ಸೇರಿತು. ಶಿರಸ್ತೆದಾರನನ್ನು ಬಿಡದೆ ಜ್ಞಾನಮಂಟಪದಲ್ಲಿ ಹಾಕಬೇಕು. ಈ ಪತ್ರವನ್ನು ಕಂಡಕ್ಷಣವೇ ಅವನ ಆಗತಿಯೇನಿದ್ದರೂ ಅದನ್ನು ಮುಳುಗಿಸಬೇಕು. ನೀವು ಮಂಗಳವೇಢೆಯಲ್ಲಿ ಅಧಿಕಾರದಲ್ಲಿಯೇ ಇರಬೇಕು-ಎಂದು ದಾಮಾಜಿಪಂತನಿಗೆ ಪ್ರತ್ಯುತ್ತರವನ್ನು ಬರೆದು ವಿಟ್ಠಲನಾಯಕನಿಗೆ ವಸ್ತ್ರವನ್ನು ಕೊಟ್ಟು ಬಹುಮಾನವನ್ನು ಮಾಡಿ ಆ ಪತ್ರವನ್ನು ಅವನ ಕೈಗೆ ಕೊಟ್ಟನು. ಆಗ ಜಗಜ್ಜೀವನನು-ನಿಮಗೆ ಆಯುಸ್ಸು ಅಪಾರವಾಗಲಿ-ಎಂದು ಹರಸಿ ಮತ್ತು ನಮಸ್ಕಾರವನ್ನು ಮಾಡಿ ಲೇಖನವನ್ನು ತೆಗೆದುಕೊಂಡು

ಹೊರಟನು. ಬಳಿಕ ರಾಜನು ಸಂತುಷ್ಟನಾಗಿ ದಾಮಾಜಿಪಂತನಿಗೆ ವಸ್ತ್ರಭೂಷಣಂಗಳನ್ನೂ ಗಜತುರಗವಾಹನಂಗಳನ್ನೂ ದೂತರ ಸಂಗಡ ಕಳುಹಿಸಿಕೊಟ್ಟನು. ಅವರ ಸಂಗಡಲೇ ಜಗಜ್ಜೀವನನು ಮಂಗಳವೇಢೆಗೆ ಹೊರಟನು. ದಾಮಾಜಿಪಂತನಿಗೆ ಈ ಸಂಗತಿಯೇನೂ ತಿಳಿಯದು. ಆತನು ಬೆದರಕ್ಕೆ ಬರುವಾಗ ಆ ದೂತರಿಗೂ ದಾಮಾಜಿಪಂತನಿಗೂ ಮಾರ್ಗದಲ್ಲಿ ಸಂದರ್ಶನವಾಗದೆ ಹೋಯಿತು. ಆ ಮಾಯಾಲಾಘವಿಯಾದ ವೈಕುಂಠನಾಯಕನು ತನ್ನ ಲೀಲೆಯನ್ನು ಭಕ್ತನಿಗೆ ತೋರಿಸಿದನು.

ಅತ್ತಲು ರಾಜದೂತರು ದಾಮಾಜಿಪಂತನನ್ನು ಬೆದರಕ್ಕೆ ಹಿಡಿದುತಂದವರಾದರು. ಈ ಸಮಾಚಾರವು ರಾಜನಿಗೆ ತಿಳಿಯಿತು. ಆತನು ದಾಮಾಜಿಪಂತನನ್ನು ಇದಿರುಗೊಳ್ಳುವುದಕ್ಕೆ ಬಂದನು. ಪರಸ್ಪರಸಂದರ್ಶನವಾಯಿತು. ರಾಜನು ಆತನನ್ನು ಆಲಿಂಗಿಸಿಕೊಂಡು–ನಿನ್ನೆದಿನ ವಿಟ್ಠಲಮೊಳೆಯನು ಬಂದು ಧಾನ್ಯದ ಹಣವೆಲ್ಲವನ್ನೂ ಸಂದಾಯಮಾಡಿದನು. ನಿಮಗೆ ಆತನ ಸಂಗಡವೇ ಬಹುಮಾನಾರ್ಥವಾಗಿ ವಸ್ತ್ರಭೂಷಣಂಗಳನ್ನು ಕಳುಹಿಸಿಕೊಟ್ಟಿರುವೆವು. ನಾವು ಆಶಿರಸ್ತೆದಾರನು ಹೇಳಿದ ಮಾತನ್ನು ಕೇಳಿ ನಿಮ್ಮಮೇಲೆ ಅನ್ಯಾಯವಾಗಿ ಕೋಪಮಾಡಿ ನಿಮ್ಮಂ ಕರೆದು ತರುವುದಕ್ಕೆ ಕಳುಹಿಸಿದ್ದೆವು. ನಿನ್ನೆದಿನ ವಿಟ್ಠನಾಯಕನು ಬಂದು ಸಂಗತಿಯೆಲ್ಲವನ್ನೂ ನಮಗೆ ಹೇಳಿ ನಿಮ್ಮ ಹಸ್ತಾಕ್ಷರದ ಪತ್ರವನ್ನೂ ಹಣವನ್ನೂ ತಂದುಕೊಟ್ಟು ಹೊರಟು ಹೋದನು–ಎಂದು ಹೇಳಿದನು. ದಾಮಾಜಿಪಂತನು ಆ ಮಾತಂ ಕೇಳಿ ಮನದಲ್ಲಿ ಆಶ್ಚರ್ಯಗೊಂಡು ನನ್ನ ವಿಪತ್ತನ್ನು ಪರಿಹರಿಸುವುದಕ್ಕೋಸ್ಕರ ಪಂಢರೀನಾಥನೇ ಬಂದು ಇದ್ದನೆಂದು ನಿಶ್ಚಯಿಸಿಕೊಂಡು, ಯಾವನು ನಿರ್ಗುಣನೋ ನಿರಾಕಾರನೋ ಆತನು ಅಂತ್ಯಜನಾಗಿ ತಾಳ್ದು ದ್ರವ್ಯದ ಭಾರವನ್ನು ಶಿರಸ್ಸಿನ ಮೇಲೆ ಹೊತ್ತನು. ಯಾವನ ಕಿರೀಟದ ಕಾಂತಿಯು ಮುಂದೆ ಕೋಟಿಸೂರ್ಯರೂ ತೋರಿಪಿಸಿಹೋಗುವರೋ ಆ ಪುರಾಣಪುರುಷನಾದ ರುಕ್ಮಿಣೀಪತಿಯು ತಲೆಗೆ ಹರಿಕಿನ ಅರಿವೆಯನ್ನು ಸುತ್ತಿ ಮಕರಕುಂಡಲಗಳಂ ತೆಗೆದು ಕಿವಿಗಳಲ್ಲಿ ಪಗರೆಗಳಂ ಹಾಕಿಕೊಂಡು, ಅತಿಸುಂದರವಾದ ಕೌಸ್ತುಭಮಣಿಯನ್ನು ತೆಗೆದುಬಿಟ್ಟು ಕೊರಲಿಗೆ ಧಾರವನ್ನು ಹಾಕಿಕೊಂಡು, ಶಂಖಚಕ್ರಗಳನ್ನು ಬಿಸುಟು ಕೈಯಲ್ಲಿ ಕೋಲನ್ನು ಹಿಡಿದು, ಪೀತಾಂಬರವನ್ನು ತೆಗೆದು ಬಿಸುಟು ಕೌಪೀನವನ್ನು ಧರಿಸಿ, ಕಾಲುಕಡಗಗಳಂ ಬಿಟ್ಟು ಹರಿಕುಕೆರವನ್ನು ಹಾಕಿಕೊಂಡು ಈ ಪ್ರಕಾರ ಬಂದನಲ್ಲಾ! ನನ್ನ ಬಾಳನ್ನು ಸುಡಬೇಕು. ಎಲೈ ಸ್ವಾಮಿಯೇ! ನಿನ್ನನ್ನು ನಾನು ಕಷ್ಟಪಡಿಸಿದೆನಲ್ಲಾ!!–ಎಂದು ಗದ್ಗದಕಂಠನಾಗಿ ನುಡಿಯುತ್ತ ಕಣ್ಣುಗಳಿಂದ ಆನಂದಬಾಷ್ಪವಂ ಸುರಿಯಿಸುತ್ತ ಇರಲು, ಅವನು ಶ್ರೀರುಕ್ಮಿಣೀಪತಿಯೇ ಹೊರತು ಅಂತ್ಯಜನಲ್ಲ. ಅನುಭವದ ಗುರುತು ತಿಳಿಯಬರುವುದು. ಅವನು ಮಾನವನೇ ಆಗಿದ್ದರೆ ಅಷ್ಟು ಭಾರವನ್ನು ಎಂತು ವಹಿಸುವನು? ಒಂದು ಲಕ್ಷದ ಅರುವತ್ತೆಂಟುಸಾವಿರ ದ್ರವ್ಯವನ್ನು ಎಣಿಸಿ

ತೆಗೆದುಕೊಂಡರೂ ಚೀಲದಲ್ಲಿ ಕಡಿಮೆಯಾಗಲಿಲ್ಲ. ಎಣಿಸುವವನ ಕೈಗಳು ಸೋತು ಹೋದುವು. ಚೀಲವನ್ನೇ ಬೊಕ್ಕಸದಲ್ಲಿ ಇಡಿಸಿದುದಾಯ್ತು. ಈ ದಾಮಾಜಿಪಂತನಿಗೋಸ್ಕರ ಶ್ರೀರುಕ್ಮಿಣೀಪತಿಯು ಬಹುವಾಗಿ ದಣಿದನು—ಎಂದು ರಾಜನೇ ಮುಂತಾದವರೆಲ್ಲರೂ ಮಾತನಾಡುತಿದ್ದರು. ದಾಮಾಜಿಪಂತನು—ಯಾವ ನನ್ನ ಕಾರ್ಯದಿಂದ ಶ್ರೀಹರಿಯು ದಣಿದನೋ ಇನ್ನು ಆ ಕಾರ್ಯವನ್ನೇ ಮಾಡಬಾರದು. ಅಲಂಕಾರವನ್ನು ಧರಿಸುವಾಗ ಕಿವಿಯು ಹರಿದುಹೋಗಲು, ಬಳಿಕ ಒಡವೆಯಿಂದೇನುಕಾರ್ಯ?--ಎಂದಾಲೋಚಿಸಿ ರಾಜನನ್ನು ಕುರಿತು—ನಿಮ್ಮ ಊಳಿಗವು ಸಾಕು. ಪಂಢರಪುರದಲ್ಲಿ ವಾಸವಂ ಮಾಡುವುದಕ್ಕೆ ನಮಗೆ ಅಪ್ಪಣೆಯಂ ಕೊಡಬೇಕು-ಎನಲು, ರಾಜನು—ಸ್ವಾಮಿಯು ನಿಮಗೆ ಸಾಲಗಾರನಾಗಿರುವನು. ನಿಮ್ಮದೆಸೆಯಿಂದ ನಮಗೂ ಆ ಸ್ವಾಮಿಯ ದರ್ಶನವಾಯಿತು-ಎಂದನು.

ಇತ್ತಲು ಶಾರ್ಙ್ಗಧರನು ಮಂಗಳವೇಢೆಗೆ ಹೋಗಿ ಮನೆಯಲ್ಲಿ ಸಮಾಚಾರವನ್ನು ಹೇಳಿ ಅದೃಶ್ಯನಾದನು.

ಬಳಿಕ ದಾಮಾಜಿಪಂತನು ರಾಜಸೇವೆಯಂ ಬಿಟ್ಟು ಪಂಢರಪುರಕ್ಕೆ ಬಂದು ದೇವರನ್ನು ಆಲಿಂಗಿಸಿಕೊಂಡು ಗದ್ಗದಕಂಠನಾಗಿ—ಪತಿತಪಾವನನೇ! ರುಕ್ಮಿಣೀಕಾಂತನೇ! ದೀನಬಂಧುವೇ! ಕರುಣಾಸಿಂಧುವೆ! ಪಂಢರೀನಾಥನೆ! ನನ್ನ ಅಪರಾಧವು ಯಾರಿಂದಲೂ ಎಣಿಸಲು ಶಕ್ಯವಲ್ಲ. ನೀನು ಸನಕಾದಿಗಳಿಂ ಪೂಜೆಗೊಳ್ಳುವನು. ಶಿವಾದಿಗಳಿಂದ ಸನ್ನುತನಾದವನು. ಅನಾಮಿಕನಾಗಿ ನನ್ನ ಪ್ರಾಣವನ್ನು ಕಾಯುವನಾದೆ. ನೀನು ಬ್ರಹ್ಮದೇವನ ಜನಕನು. ಸತ್ಪಾವನೆಯಾದ ಗಂಗೆಯ ಜನಕನು. ಇಂತವನು ನನಗೋಸ್ಕರ ವ್ಯರ್ಥವಾಗಿ ಅಂತ್ಯಜನಾದೆಯಲ್ಲಾ! ವಿಟ್ಠಲನಾಯಕನೆಂದು ನಿನಗೆ ಯಾರು ಹೆಸರನಿಟ್ಟದ್ದರು. ಮನೆಯ ಮಗನೆಂದು ರಾಜನ ಸಂಗಡ ಹೇಳಿಕೊಂಡು ಬಂದೆಯಲ್ಲಾ!—ಎಂದು ಪಲವುತೆರದಲ್ಲಿ ನುಡಿದು ಕಣ್ಣುಗಳಿಂದ ಅಶ್ರುಧಾರೆಯು ಸುರಿಯುತ್ತಿರಲು, ಸ್ವಾಮಿಯ ರೂಪವನ್ನು ಚೆನ್ನಾಗಿ ನೋಡಿ ಪಾದಗಳ ಮೇಲೆ ಸಿರವನ್ನು ಇರಿಸಿದವನಾದನು. ಬಳಿಕ ಕುಟುಂಬಸಮೇತನಾಗಿ ಪಂಢರಿಯಲ್ಲಿಯೇ ವಾಸಮಾಡುತ್ತ ಪ್ರೇಮಯುಕ್ತನಾಗಿ ಕೀರ್ತನದಲ್ಲಿ ಶ್ರೀಹರಿಯ ಗುಣಗಳಂ ವರ್ಣಿಸುತ್ತ ಇರುತಿದ್ದನು. ಅದಂ ನೋಡಿ ಕ್ಷೇತ್ರವಾಸಿಗಳಾದ ಜನರು-ಈತನ ಭಕ್ತಿಯು ಉತ್ಕೃಷ್ಟವಾದುದು. ರುಕ್ಮಿಣೀಪತಿಯನ್ನು ಋಣಿಯನ್ನಾಗಿ ಮಾಡಿ ಅದ್ಭುತವಾಗಿ ಕೀರ್ತಿಯಂ ಬಳೆಯಿಸಿದನು. ಅದ್ಭುತವಾದ ಕಾರ್ಯವನ್ನು ಮಾಡಿದುದರಿಂದ ಚಕ್ರಪಾಣಿಯು ಸಂತುಷ್ಟನಾದನು—ಎಂದು ತಂತಮ್ಮ ಮನೆಗಳಲ್ಲಿ ಮಾತನಾಡಿಕೊಳ್ಳುತಿದ್ದರು.

ಮುಂದಣ ಅಧ್ಯಾಯದಲ್ಲಿ ಮೃತ್ಯುಂಜಯನ ಚರಿತ್ರೆಯು ಅತ್ಯಂತಪಾವನವಾದುದು. ಭಾವುಕರು ಪ್ರೀತಿಯಿಂದ ಕೇಳಬೇಕು. ಅದು ಸರ್ವರಿಗೂ ಸೌಖ್ಯವನ್ನು

ಕೊಡುವಂತಹುದು; ಆಸಕ್ತಿಯಿಂದ ಚಿತ್ತದಲ್ಲಿ ಭಾವಾರ್ಥವನ್ನು ಹಿಡಿದವರಾದರೆ ಪಾವನರಾಗುವಿರಿ ಚಂದ್ರನು ಉದಯಿಸಲು, ಪ್ರಕಾಶವನ್ನು ಸರ್ವರೂ ನೋಡುವರು. ಆದರೂ ಅಮೃತವು ಚಕೋರಗಳಿಗೇ ಪ್ರಾಪ್ತವಾಗುವುದು. ಗ್ರಂಥಶ್ರವಣದಲ್ಲಿ ಪ್ರೀತಿಯನ್ನಿಟ್ಟು ರುಕ್ಮಿಣೀಪತಿಯಂ ಭಜಿಸಬೇಕೆಂದು ಮಹೀಪತಿಯು ಸರ್ವರನ್ನೂ ಪ್ರಾರ್ಥಿಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ನಾಲ್ವತ್ತೊಂದನೆಯ ಅಧ್ಯಾಯ.

ಮೃತ್ಯುಂಜಯನ ಚರಿತ್ರೆ.

ಜಯಜಯ ಧಂತರೀಶನೇ! ಲೀಲಾಜಗನ್ನಾಟಕಸೂತ್ರಧಾರನೇ! ಜಗನ್ನಿವಾಸನೇ! ವಿಶ್ವರೂಪನೇ! ಹೃಷೀಕೇಶನೇ! ಅಕ್ಷರನೇ! ಪಾಂಡುರಂಗನೇ! ಜಯ ಹರಿಹರೇಶ್ವರನೇ! ಅಪರಿಮಿತವಾದ ಔದಾರ್ಯವುಳ್ಳವನೇ! ನಿಜಭಕ್ತರ ಹೃದಯಮಂದಿರದಲ್ಲಿ ವಾಸವಂ ಮಾಡಿರುವೆ. ಜಗದುದ್ಧಾರಕನೇ! ಜಯಜಯ ಕಮಲಾಪತಿಯೇ! ವಿಶ್ವನಾಥನೇ! ಅನಂತಕೀರ್ತಿಯುಳ್ಳವನೇ! ನಿನ್ನ ಸ್ವರೂಪವಂ ವರ್ಣಿಸಲು ಶ್ರುತಿಗಳು ಕುಂಠಿತವಾದುವು. ಜಯ ಜಯ ಸಗುಣರೂಪನೇ! ಮೋಘಶ್ಯಾಮನೇ! ಗುಣನಿಧಿಯೇ! ಆತ್ಮಾರಾಮನೇ! ಭಕ್ತವತ್ಸಲನೇ! ಪುರುಷೋತ್ತಮನೇ! ಭಜನದಲ್ಲಿ ಪ್ರೇಮವನ್ನು ಹುಟ್ಟಿಸು. ಸುರುಚಿರವಾಗಿ ಭಕ್ತರ ಚರಿತ್ರೆಯನ್ನು ಹೇಳಿಸುವನಾಗು. ಆದರದಿಂದ ಕೇಳುವರ ಮನದಲ್ಲಿ ಪ್ರೇಮವು ತುಂಬಿಕೊಳ್ಳುವುದು.

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ಪರಮಭಕ್ತನಾದ ಆ ದಾಮಾಜಿಪಂತನ ಸಂಕಟದ ವೇಳೆಯಲ್ಲಿ ರುಕ್ಮಿಣೀಕಾಂತನು ಪ್ರಸನ್ನನಾದನೆಂಬ ಕಥೆಯಂ ಕೇಳಿದಿರಲ್ಲಾ! ಮುಂದಣ ಕಥೆಯಂ ಆಲಿಸಿ.

ಬೀದರದಲ್ಲಿ ಶಾಂತಬ್ರಾಹ್ಮಣಿಯೆಂಬ ರಾಜನು ರಾಜ್ಯಭಾರವಂ ಮಾಡುತ್ತಿದ್ದನು. ಆತನಿಗೆ ಜ್ಞಾನವೈರಾಗ್ಯಗಳುಂಟಾದುವು. ಅದೆಂತು ಉಂಟಾಯಿತೆಂದೀರಿ. ಆ ಸಂಗತಿಯನ್ನು ಕೇಳಿ. ಆತನು ಒಂದುದಿವಸ ನಿತ್ಯದಂತೆ ಕಾಂತೆಯೊಡನೆ ಉಪ್ಪರಿಗೆಯಲ್ಲಿ ಸರಸಸಲ್ಲಾಪದಲ್ಲಿರುತ್ತ ದಿವ್ಯವಸ್ತ್ರಾಲಂಕಾರಾದಿಗಳಿಂದ ವಿಲಾಸಗೊಳ್ಳುತ್ತ ಉತ್ತಮವಾದ ಬಾಳೆಹಣ್ಣುಗಳನ್ನೂ ಸಕ್ಕರೆಯನ್ನೂ ಭಕ್ಷಿಸಿ ಸಿಪ್ಪೆಯನ್ನು ಗವಾಕ್ಷದಿಂದ ಕೆಳಗೆ ಬಿಸುಡಲು, ಅಲ್ಲಿ ಒಬ್ಬಹುಚ್ಚನಾದ ಭಿಕ್ಷುಕನು ಬಂದು ಆಸಿಪ್ಪೆಯನ್ನು ತಿನ್ನುತ್ತ ಕುಳಿತುಕೊಂಡನು. ರಾಣಿಯು ಅವನಂ ಕಂಡು ಪತಿಗೆ ಬೆರಲಿಂದ ತೋರಿಸಿ—ಅನೇಕಸ್ಥಳಗಳಲ್ಲಿ ರಕ್ಷಕರಿರುವ ಅರಮನೆಯಲ್ಲಿ ಈ ಭಿಕ್ಷುಕನು ಎಂತು ಬಂದನು?—ಎಂದು ಕೇಳಲು, ಆತನು ಕಾಂತೆಯ ಮಾತಂ ಕೇಳಿ ಮನದಲ್ಲಿ ಕೋಪಗೊಂಡು, ದ್ವಾರಪಾಲಕರಂ ಕರೆಯಿಸಿ—ಬಾಗಿಲಿಂದ ಒಳಗೆ ಯಾರನ್ನೂ ಬಿಡಲಾಗದೆಂಬುದಕ್ಕೋಸ್ಕರ ನಿಮ್ಮನ್ನು ಬಾಗಿಲಲ್ಲಿ ಇರಿಸಿರುವಾಗ ಈ ಭಿಕ್ಷುಕನು ಒಳಗೆ ಎಂತು ಬಂದನು?—ಎಂದು ವಿಚಾರಮಾಡಿ ಅವರಂ ದಂಡಿಸಲು, ಆ ದ್ವಾರಪಾಲಕರು ಆ ಭಿಕ್ಷುಕನ ಬಳಿಗೆ ಬಂದು ಕಾಲಿನಿಂದ ಅವನನ್ನು ಒದೆದರು. ಅವನು ಆ ಪಾದಪ್ರಹಾರಗಳಿಗೆ ವ್ಯಸನಪಡದೆ ನಗುತ ನಿಂತುಕೊಂಡನು. ಅದಂ ಕಂಡು ರಾಜನು ಮನದೊಳಾಶ್ಚರ್ಯವಂ ತಾಳಿ—ಅವನಂ ಹೊಡೆಯಬೇಡಿ—ಎಂದು ದೂತರಿಗೆ ಹೇಳಿ ಅವನಿಗುಂಟಾದ ಪ್ರಹಾರಗಳಿಗೆ ತಾನು ದುಃಖಗೊಂಡು ಅಳುತ್ತ, ಆ ಭಿಕ್ಷುಕನಂ ಕುರಿತು-ದ್ವಾರಪಾಲಕರು ನಿನ್ನನ್ನು ಹೊಡೆದರೆ ನೀನು ನಕ್ಕ ಬಗೆಯೆಂತು? ಹೇಳೆನಲು, ಭಿಕ್ಷುಕನು ನಾನುಮಾಡಿದ ಕೆಲಸಕ್ಕೆ ವಿಪರೀತವಾದುದನ್ನು ಕಂಡು ನನಗೆ ನಗೆ ಬಂದುದು. ಸಿಪ್ಪೆಯನ್ನು ಸ್ವಲ್ಪವಾಗಿ ಚಪ್ಪರಿಸಿದ ಮಾತ್ರಕ್ಕೆ ನನಗೆ ಇಲ್ಲಿ ಇಷ್ಟು ಶಿಕ್ಷೆಯಾಯಿತು. ಒಳಗಣ ತಿರುಳಂ ಮೆದ್ದುದಕ್ಕೆ ಮುಂದೆ ನಿನಗೆ ಯಾವಗತಿಯುಂಟಾಗುವುದೋ? ಈ ಅರಮನೆಯ ಒಳಗಣ ಪ್ರದೇಶವನ್ನು ಸ್ವಲ್ಪವಾಗಿ ತುಳಿದಮಾತ್ರಕ್ಕೆ ನನಗೆ ಇಷ್ಟು ತಾಡನವಾಯಿತು. ನೀನು ಸರ್ವಕಾಲದಲ್ಲಿಯೂ ಅಂತಃಪುರದಲ್ಲಿ ಶಯನವಂ ಮಾಡುವೆ. ಮುಂದೆ ನಿನಗೆ ಎಂತಹ ದಂಡನೆಯಾಗುವುದೋ ಎಂದು ನನಗೆ ಚಿಂತೆಯುಂಟಾಗಿರುವುದು. ಮೀನುಗಳು ನಿರ್ಜೀವವಾದ ಉಂಡೆಯಂ ನುಂಗಿದಮಾತ್ರಕ್ಕೆ ಸತ್ತುಹೋಗುವುವು. ಮಹಾಜೀವಗಳನ್ನು ಕೊಂದು ಉದರಪೋಷಣವಂ ಮಾಡುವಂತವನಿಗೆ ಯಾವಗತಿಯಾಗುವುದೋ ಎಂದು ನಿನ್ನ ದುಃಖದ ಸ್ಮರಣೆಯುಂಟಾದುದರಿಂದ ನಗೆ ಬಂದಿತು-ಎಂದು ಉತ್ತರವಂ ಹೇಳಿದನು.

ಆ ಮಾತಂ ಕೇಳುವುದೂ ಆ ಕ್ಷಣದಲ್ಲಿ ರಾಜನ ವೃತ್ತಿಯು ಬೇರೆಯಾಯಿತು. ಚಿತ್ತದಲ್ಲಿ ಪಶ್ಚಾತ್ತಾಪವುಂಟಾಯಿತು. ಸಕಲರಾಜ್ಯಸಂಪತ್ತಿಯನ್ನೂ ತೊರೆದು, ಯಾರಿಗೂ ಈ ವೃತ್ತಾಂತವು ತಿಳಿಯದಂತೆ ಹೊರಟು ಮಹಾರಣ್ಯವಂ ಪೊಕ್ಕು ಅಲ್ಲಿ ಕುಳಿತುಕೊಂಡು ವ್ಯಸನಪಡುತ್ತ—ಸತ್ಸಂಗತಿಯಿಲ್ಲದೆ ನಾನೊಬ್ಬನೇ ಈ ಅರಣ್ಯದಲ್ಲಿ

ಕುಳಿತೇನು? ಭಗವದ್ಭಜನವಂ ಎಂತು ಮಾಡಬೇಕೋ; ಯೋಗಸಾಧನವಂ ಎಂತು ಮಾಡಬೇಕೋ; ದೇಹದಂಡನವಂ ಯಾವಪ್ರಕಾರದಿಂದ ಮಾಡಬೇಕೋ; ಅದೊಂದೂ ನನಗೆ ತಿಳಿಯದು. ವೈರಾಗ್ಯದ ಮಾತುಗಳು ಎಂತಿರುವುವೋ, ಹೃದಯದಲ್ಲಿ ಯಾವಪರಿಯಿಂದ ಪಶ್ಚಾತ್ತಾಪಪಡಬೇಕೋ; ಸಂಕಟದಲ್ಲಿ ಸ್ವಾಮಿಯು ಕೃಪೆಗೊಂಡು ನನ್ನನ್ನು ಯಾವರೀತಿಯಿಂದ ನೋಡುವನೋ; ಮಾನಸಪೂಜೆಯನ್ನು ಮಾಡತಕ್ಕುದೆಂತೋ; ಬಾಹ್ಯಪೂಜೆಯೆಂತೋ; ನನ್ನ ಜನ್ಮಸಾಫಲ್ಯವು ಯಾವ ಗುರುವಿಂದಾಗುವುದೋ; ಜನಗಳಲ್ಲಿ ಯಾವಸ್ಥಿತಿಯಿಂದ ಇರಬೇಕೋ; ಸಂತರ ಸಂದರ್ಶನವು ಎಂದಿಗಾಗುವುದೋ-ಎಂದು ಆಲೋಚನೆಯಂ ಮಾಡುತಿರ್ದನು.

ಆಗ ಆಷಾಢಮಾಸವಾದುದರಿಂದ ಯಾತ್ರಿಕರು ತಾಳ ತಂಬೂರಿ ಮೃದಂಗಗಳಂ ತೆಗೆದುಕೊಂಡು ಆನಂದದಿಂದ ಹಾಡುತ್ತ ಕುಣಿಯುತ್ತ ಗರುಡಪತಾಕಾದಿಗಳೊಡನೆ ಪಂಡರಪುರಕ್ಕೆ ಪ್ರಯಾಣಮಾಡುತ್ತಿರಲು, ಶಾಂತಬ್ರಾಹ್ಮಣಿಯು ಈ ಸಮಾರಂಭವಂ ಕಂಡು ಮನದಲ್ಲಿ ಬಹುಸಂತೋಷಗೊಂಡು ಅವರ ಬಳಿಗೆ ಹೋಗಿ ಸಾಷ್ಟಾಂಗ ನಮಸ್ಕಾರವಂ ಮಾಡಿ ಅವರಂ ಕುರಿತು-ನಿಮ್ಮ ದರ್ಶನಮಾತ್ರದಿಂದ ಇಂದಿನದಿನ ಸುದಿನವು. ನನ್ನ ಪೂರ್ವಜನ್ಮದ ಸುಕೃತವು ಫಲಿಸುವ ಕಾಲ ಬಂದೊದಗಿತು. ನಾನು ಮನದಲ್ಲಿ ಏನನ್ನು ಅಪೇಕ್ಷಿಸುತಿರ್ದೆನೋ ಅದು ಈಗ ದೊರೆಯಿತು-ಎಂದು ನುಡಿದು ಅವರಸಂಗಡವೇ ಹೊರಟು ಪಂಡರೀಕ್ಷೇತ್ರವಂ ಸೇರಿ ಚಂದ್ರಭಾಗೆಯಲ್ಲಿ ಸ್ನಾನವಂ ಮಾಡಿ ಪುಂಡರೀಕನಂ ಪೂಜಿಸಿ ಸಾಧುಸಜ್ಜನರಂ ವಂದಿಸಿ ಕ್ಷೇತ್ರಪ್ರದಕ್ಷಿಣೆಯಂ ಮಾಡಿ ಮಹಾದ್ವಾರದ ಬಳಿಗೆ ಬಂದು ಅಲ್ಲಿ ಕೀರ್ತನದ ಸಂಭ್ರಮವಂ ನೋಡಿ ಸಂತೋಷಪಟ್ಟನು. ಬಹುಕ್ಷೇತ್ರಗಳು ಇರುವುವು, ಆದರೂ ಪಂಡರಪುರದಂತಹ ಅದ್ಭುತಕ್ಷೇತ್ರವು ಮೂರುಲೋಕದಲ್ಲಿಯೂ ಕಾಣುವುದಿಲ್ಲ. ಇದಕ್ಕೆ ಸಾಮ್ಯವನ್ನು ಹೇಳುವುದಕ್ಕೆಯಾವ ಸ್ಥಳವೂ ಕಾಣಲಿಲ್ಲ. ಎಂತಹ ಹೀನಬುದ್ಧಿಯ ದುರ್ಜನನಾದರೂ ಅವನು ಪಂಡರಪುರದಲ್ಲಿ ಭಗವದ್ಭಕ್ತಿಯುಳ್ಳವನಾಗುವನು. ಮಿಕ್ಕ ತೀರ್ಥಗಳಲ್ಲಿ ಸ್ನಾನವಂ ಮಾಡಲು, ಆ ಕ್ಷಣದಲ್ಲಿ ಅಭಿಮಾನವುಂಟಾಗುವುದು. ಚಂದ್ರಭಾಗೆಯ ದರ್ಶನವಾದಮಾತ್ರಕ್ಕೆ ಸದ್ಭಾವವು ಹೆಚ್ಚುವುದು. ಅಂತಹ ಕ್ಷೇತ್ರವನ್ನು ಕಂಡು ಶಾಂತಬ್ರಾಹ್ಮಣಿಯು ಪರಮಾನಂದಭರಿತನಾಗಿ ದೇವರ ದರ್ಶನಕ್ಕೋಸ್ಕರ -ನೆರೆಯ ಮಂಟಪಕ್ಕೆ ಬಂದು ಇಟ್ಟಿಗೆಯಮೇಲೆ ಲೀಲೆಯಿಂದ ನಿಂತಿರುವ ಸಗುಣಪರಬ್ರಹ್ಮಮೂರ್ತಿಯನ್ನು ಕಂಡು ಸಾಷ್ಟಾಂಗನಮಸ್ಕಾರಮಾಡಿ, ಜಯಜಯ ಪತಿತಪಾವನನೇ ಪುರಾಣಪುರುಷನೆ! ಸಗುಣಸ್ವರೂಪನೆ! ಹೃಷೀಕೇಶನೆ! ಲೀಲಾನಾಟಕಿಯೇ! ಸರ್ವೇಶನೆ! ಪಂಡರೀಶನೆ! ಶ್ರೀವಿಟ್ಠಲನೆ! ನಿನ್ನ ಕೀರ್ತಿಯನ್ನು ಕಿವಿಗಳಿಂ ಕೇಳಿ ಶರಣಾಗತನಾಗಿ ಬಂದಿರುವೆನು. ನಿನ್ನ ಸ್ವರೂಪವನ್ನು ತಿಳಿಯುವುದಕ್ಕೆ ಶಾಸ್ತ್ರ, ಗುರು ಯಾರೂ ದೊರೆಯಲಿಲ್ಲ. ನನ್ನ ಮನೋರಥವಂ ಪೂರೈಸಬೇಕು-ಎಂದು ಪ್ರಾರ್ಥಿಸಿ ಅನನ್ಯ

ಭಾವದಿಂದ ಮಹಾದ್ವಾರದಲ್ಲಿ ಧರಣಿಕುಳಿತುಕೊಂಡು ಫಲಮೂಲೋದಕಗಳನ್ನಾದರೂ ತೆಗೆದುಕೊಳ್ಳದೆ ಅನುತಾಪದಿಂದ ಮೂರುದಿನಗಳವರೆಗೆ ಕುಳಿತಿರಲು, ಆಗ ರುಕ್ಮಿಣೀಕಾಂತನು ಪ್ರಸನ್ನನಾಗಿ ರಾತ್ರಿಯಲ್ಲಿ ಸ್ವಪ್ನದಲ್ಲಿ ಕಾಣಿಸಿಕೊಂಡು ವಿವೇಕಸಿಂಧುವೆಂಬ ಗ್ರಂಥವನ್ನು ಕೊಟ್ಟು ಕಲ್ಯಾಣದಲ್ಲಿ ಸಹಜಾನಂದಸ್ವಾಮಿಗಳವರು ಇರುವರು; ಅವರ ಕಡೆಯಿಂದ ಉಪದೇಶವಂ ತೆಗೆದುಕೊಳ್ಳುವುದು-ಎಂದು ಅಪ್ಪಣೆ ಮಾಡಿ ಅದೃಶ್ಯನಾದನು. ಬಳಿಕ ಎಚ್ಚರಗೊಂಡು ನೋಡಲು, ಆ ಪುಸ್ತಕವು ಅಲ್ಲಿಯೇ ಇದ್ದಿತು. ಪಂಡರೀನಾಥನುಮಾತ್ರ ಕಾಣಲಿಲ್ಲ ಈ ಚಮತ್ಕಾರವಂ ಕಂಡು ಆಶ್ಚರ್ಯಪಟ್ಟು, ಸದ್ಗುರು ದರ್ಶನವಂ ಕೊಟ್ಟನು. ನಾನು ಪುಣ್ಯವಂತನು-ಎಂದು ಬಗೆದು ಏಕಾಂತದಲ್ಲಿ ಆ ಗ್ರಂಥವಂ ಓದಿ ಮನನವಂ ಮಾಡಿಕೊಳ್ಳುತಿದ್ದು ಸಹಜಾನಂದ ಗುರುಗಳನ್ನು ಸಮಾಶ್ರಯಿಸುವಂತೆ ಆಜ್ಞಾಪಿಸಿದುದು ಸ್ಮೃತಿಪಥಕ್ಕೆ ಬರಲು, ದೇವರಿಗೆ ನಮಸ್ಕಾರವಂ ಮಾಡಿ ಅಪ್ಪಣೆಯಂ ತೆಗೆದುಕೊಂಡು ಕಲ್ಯಾಣಕ್ಕೆ ಹೋದನು. ಅಲ್ಲಿ ಆ ಗುರುಗಳು ಇರಲಿಲ್ಲ. ಹಿಂದಿರುಗಿ ಪಂಡರಪುರವನ್ನೇ ಸೇರಿ ಅಲ್ಲಿಯೇ ಇದ್ದನು. ಕಾರ್ತಿಕಮಾಸ ಬರುವುದೂ ಸಹಜಾನಂದಸ್ವಾಮಿಗಳು ತಾವಾಗಿ ಯಾತ್ರೆಹೊರಟು ಪಾಂಡುರಂಗಕ್ಷೇತ್ರಕ್ಕೆ ಬರಲು, ಆಗ ಶಾಂತಬ್ರಾಹ್ಮಣಿಯು ಅವರಂ ಕಂಡು ತನಗುಂಟಾದ ಸ್ವಪ್ನದ ಸಂಗತಿಯನ್ನು ತಿಳಿಯಿಸಲು, ಅವರು ಪ್ರೀತಿಯಿಂದ ಅವನಿಗೆ ಉಪದೇಶವಂ ಮಾಡಿ ಅವನಿಗೆ 'ಮೃತ್ಯುಂಜಯ'-ಎಂದು ಹೆಸರನಿಟ್ಟರು.

ಆ ಮೃತ್ಯುಂಜಯನು ಬಳಿಕ ನಾರಾಯಣಪುರದಲ್ಲಿ ವಾಸವಂ ಮಾಡಿ ಸದ್ಗುರು ಮುಖದಿಂದ ಶ್ರವಣಮನನವಂ ಮಾಡುತ್ತ ನಿದಿಧ್ಯಾಸಾದಿ ಸಾಕ್ಷಾತ್ಕಾರದಿಂದ ವಿಜ್ಞಾನ ಸ್ಥಿತಿಯನ್ನು ಹೊಂದಿದವನಾದನು. ಆಸ್ಥಳದಲ್ಲಿ 'ಭವರ' ಎಂಬ ಜಂಗಮಯ್ಯನು ಭಾವುಕನಾಗಿದ್ದನು. ಆತನು ಮೃತ್ಯುಂಜಯನನ್ನು ಶರಣುಪೊಕ್ಕು ಉಪದೇಶವಂ ತೆಗೆದುಕೊಂಡನು. ಅಲ್ಲಿ ಸಮುಚ್ಚಯನೆಂಬ ಮತ್ತೊಬ್ಬ ಜಂಗಮಯ್ಯನು ಸರ್ವರಿಗಿಂತಲೂ ಶ್ರೇಷ್ಠನೆನಿಸಿಕೊಂಡಿದ್ದನು. ಆತನು-ಮೃತ್ಯುಂಜಯನು ಮ್ಲೇಚ್ಛಜಾತಿಯವನು. ಆತನಿಗೆ ಸ್ವಲ್ಪಜ್ಞಾನವಿದ್ದಮಾತ್ರಕ್ಕೆ ಈ ಭವರಯ್ಯನು ಆತನಿಂದ ಎಂತು ಉಪದೇಶವಂ ತೆಗೆದುಕೊಂಡನು-ಎಂದು ನಿಂದಿಸಿ ಆತನಂ ಜಾತಿಯಿಂದ ಹೊರ ಮಾಡಿದನು. ಶೂದ್ರನ ಮನೆಯಲ್ಲಿ ಉತ್ತಮವಾದ ಪಕ್ವಾನ್ನವನ್ನು ಬ್ರಾಹ್ಮಣರು ಸೇವಿಸುವರೇ ? ಮದ್ಯದ ಪಾತ್ರೆಯಲ್ಲಿ ಗಂಗೋದಕವನ್ನು ತಂದರೆ ಅದನ್ನು ಪ್ರಾಶನ ಮಾಡುವರೇ? ಕೆರಗಳು ಹೊಸತಾದರೆ ಅವನ್ನು ಶಿರಸ್ಸಿನಲ್ಲಿ ಧರಿಸುವರೇ? ಕಲ್ಲು ಮಹಾದ್ವಾರದ ಬಳಿಯದಾದರೆ ಅದನ್ನು ದೇವರ ಮುಂದಾಸನದಲ್ಲಿರಿಸಿ ಪೂಜಿಸುವರೇ? ಕಾಲಿಗಿಡುವ ಕಿರುಬಿಲ್ಲೆಯು ಸುವರ್ಣದವಾದರೆ ಅದನ್ನು ಮೂಗಿನಲ್ಲಿ ಇಡುವರೇ? ಹಿತ್ತಾಳೆಯನ್ನು ಬೆಳಗಿದರೆ ಅದು ಚಿನ್ನಕ್ಕೆ ಸರಿಯಾಗುವುದೇ? ಹಾವುಮೆಕ್ಕೆಕಾಯನ್ನು ಸಕ್ಕರೆಯಲ್ಲಿ ಹೊರಳಿಸಿದರೂ ಅದರ ಒಳಗಣ ಕಹಿ ಹೋಗುವುದೇ? ರಾಜನ

ಸೊಳೆಯು ಸುರೂಪೆಯೂ ಸುಗುಣೆಯೂ ಆದರೆ ಅವಳನ್ನು ಪುಣ್ಯಾಹವಾಚನದಲ್ಲಿ ಕೂಡಿಸುವರೇ? ಅಂತು ಆ ಯವನಜಾತಿಯವನು ಸ್ವಲ್ಪಜ್ಞಾನವನ್ನು ಪಡೆದ ಮಾತ್ರಕ್ಕೆ ಅವನನ್ನು ಸದ್ಗುರುಸ್ಥಾನದಲ್ಲಿ ಸರ್ವಕಾಲದಲ್ಲಿಯೂ ಭಾವಿಸಬಹುದೇ?– ಎಂದು ವಿಕಲ್ಪವನ್ನು ಬಗೆದು ಸಮುಚ್ಚಯನು ನಿಂದಿಸುತಿದ್ದುದನ್ನು ಭವರಯ್ಯನು ಕೇಳಿ ಮನದಲ್ಲಿ ವ್ಯಸನಗೊಂಡು ಮೃತ್ಯುಂಜಯನ ಬಳಿಗೆ ಹೋಗಿ ಹೇಳಿಕೊಂಡನು. ಆತನು ಆನಾತಂ ಕೇಳಿ ಭವರಯ್ಯನನ್ನು ಕುರಿತು–ನೀನು ವಿಶ್ವಾಸವನ್ನು ದೃಢವಾಗಿ ಹಿಡಿದಿರಬೇಕು. ವಿಕಲ್ಪಿಗಳ ದ್ವೇಷದ ಮಾತನ್ನು ಸರ್ವಪ್ರಕಾರದಲ್ಲಿಯೂ ಕೇಳಬಾರದು. ಸರ್ವಕಾಲದಲ್ಲಿಯೂ ಸ್ವಸ್ಥಚಿತ್ತನಾಗಿ ಈಶ್ವರಭಜನೆಯಂ ಮಾಡುತ್ತಿರಬೇಕು-ಎಂದು ಸಮಾಧಾನಗೊಳಿಸಿದನು.

ಅಲ್ಲಿ ಕಾಶೀಪತಿಯೆಂಬ ಒಬ್ಬ ರಾಜನಿದ್ದನು. ಆತನು ಮಹೋದಾರನು; ಜ್ಞಾನಿ; ನಿತ್ಯಾನಿತ್ಯವಿಚಾರವಂ ಮಾಡುತ್ತ ಶಿವಭಕ್ತಿತತ್ಪರನಾಗಿದ್ದನು. ಆತನು ತನ್ನ ಮನೆಯಲ್ಲಿ ನಿತ್ಯದಲ್ಲಿಯೂ ಸಾಸಿರಜಂಗಮರಂ ಪೂಜಿಸಿ ಮೃಷ್ಟಾನ್ನಭೋಜನವಂ ಮಾಡಿಸುತಿದ್ದನು.

ಒಂದುದಿನ ಆ ಕಾಶೀಪತಿಯು ಜಂಗಮಯ್ಯರನ್ನು ಪಂಕ್ತಿಯಲ್ಲಿ ಕುಳ್ಳಿರಿಸಿ ಪಾತ್ರಗಳಲ್ಲಿ ಅನ್ನವನ್ನೂ ತುಪ್ಪ ಸಕ್ಕರೆ ಮೊದಲಾದುವನ್ನೂ ಬಡಿಸಿಸಿ ಶಿವನಿಗೆ ನೈವೇದ್ಯಸಮರ್ಪಣೆಯಂ ಮಾಡಿರೆಂದು ಆಜ್ಞಾಪಿಸಲು, ಅವರು ಧರಿಸಲ್ಪಟ್ಟ ತಮ್ಮ ತಮ್ಮ ಲಿಂಗಗಳನ್ನು ನೋಡಿಕೊಂಡರು. ಯಾರಲಿಂಗವೂ ಇರಲಿಲ್ಲ. ಶಾಸ್ತ್ರವೇತ್ತೃವಾದ ಬ್ರಾಹ್ಮಣನ ಯಜ್ಞೋಪವೀತವು ಬಿದ್ದುಹೋದರೆ ಆತನು ಎಂತು ಖಿನ್ನನೂ ಲಜ್ಜಿತನೂ ಆಗುವನೋ ಅಂತು ಆ ಲಿಂಗರಹಿತರಾದ ಸರ್ವರೂ ಖೇದಗೊಂಡು ಬಹುಲಜ್ಜಿತರಾಗಿ-ಏನುಪೂಜೆ? ಏನುಭೋಜನ? ದೇಹಕ್ಕೆ ಪ್ರಾಯಶ್ಚಿತ್ತವಾಗಬೇಕಾಯಿತು. ಲಿಂಗವು ಹೋದಬಳಿಕ ಇನ್ನು ಪ್ರಾಣವನ್ನು ಇಟ್ಟುಕೊಂಡಿರುವುದೆಂತು? ಲಿಂಗಧಾರಣೆಯ ಕಾಲದಲ್ಲಿ ಕುಲಗುರುಗಳು ಲಿಂಗವನ್ನು ಕಳೆದರೆ ದೇಹಾಂತಪ್ರಾಯಶ್ಚಿತ್ತವೆಂದು ಹೇಳಿರುವರು. ಈಗ ಯಾರನ್ನು ಜಾತಿಯಿಂದ ಹೊರಮಾಡಬೇಕು? ಎಲ್ಲರ ಗತಿಯೂ ಒಂದೇಆಯಿತು–ಎಂದು ಚಿಂತೆಯಿಂದ ಆಕುಲರಾದರು. ಎಲ್ಲರಿಗೂ ಭ್ರಾಂತಿ ಹಿಡಿಯಿತು. ಕೆಲವರು–ರಾಜಾನ್ನವನ್ನು ಭಕ್ಷಿಸಿದಕಾರಣ ದೋಷವು ಪ್ರಾಪ್ತವಾಯಿತು; ಆದರಿಂದಲೇ ಶಿವನು ನಮ್ಮೆಲ್ಲರನ್ನೂ ಬಿಟ್ಟಂತೆ ತೋರುವುದು-ಎಂದರು. ಕೆಲವರು–ಅನ್ನಕ್ಕೆ ಏನುಬಾಧೆ? ನಮ್ಮ ಭಾವವು ಶುದ್ಧವಲ್ಲದಕಾರಣ ಶಿವನು ನಮ್ಮನ್ನು ಬಿಟ್ಟುಹೋಗಿ ತನ್ನ ಲೀಲೆಯನ್ನು ತೋರಿಸಿದನೆಂದರು. ಇಂತು ನಾನಾಪ್ರಕಾರದಿಂದ ಪರಸ್ಪರವಾಗಿ ಮಾತನಾಡುತಿದ್ದರು. ಯಾರಿಗೂ ಮುಂದಣ ಉಪಾಯವು ತೋರಲಿಲ್ಲ. ಸರ್ವರ ಮತಿಯೂ ಕುಂಠಿತವಾಯಿತು. ಕೆಳಗೆ ನೋಡುತ ಕುಳಿತರು.

ಕಾಶೀಪತಿಯು ಜಂಗಮರಂ ಕುರಿತು—ಯಾರೋ ಸಾಧುಪುರುಷರ ಹೇಳನವಂ ಮಾಡಿ ಬಂದಿರುವಂತೆ ತೋರುವುದು. ಆದುದರಿಂದ ನಿಮ್ಮೆಲ್ಲರ ಮೇಲೆ ಈಶ್ವರನು ಕೋಪಿಸಿಕೊಂಡಿರುವನು—ಎನಲು, ರಾಜನ ಮಾತಂಕೇಳಿ ಒಬ್ಬರನ್ನೊಬ್ಬರು ವಿಚಾರಿಸುತ್ತ ಬರಲು ಸಮುಚ್ಛಯಜಂಗಮಯ್ಯನು ತನ್ನ ಮನದಲ್ಲಿ, ಮ್ಲೇಚ್ಛಶಿಷ್ಯನೆಂದು ಭವರಯ್ಯನನ್ನು ನಾನು ನಿಂದಿಸಿದೆನು. ಆ ದೋಷವು ತನಗೆ ಪ್ರಾಪ್ತವಾಗಿರಬಹುದು—ಎಂದು ಬಗೆದು ಈ ಸಂಗತಿಯನ್ನು ಎಲ್ಲರೊಡನೆಯೂ ಹೇಳಿ, ಇದಕ್ಕೆ ಏನುಪಾಯವಂ ಮಾಡಬೇಕೋ ನನಗೆ ತಿಳಿಯದು—ಎಂದನು.

ಬಳಿಕ ರಾಜನು ಅವರನ್ನು ಕುರಿತು—ನೀವೆಲ್ಲರೂ ಹೋಗಿ ಆ ಮೃತ್ಯುಂಜಯನನ್ನು ಪ್ರಾರ್ಥಿಸಲು ಈ ಸಂಕಟವು ಪರಿಹೃತವಾದೀತೆಂದು ಹೇಳಿದನು. ಆ ಮಾತು ಸರ್ವರಿಗೂ ಸಮ್ಮತವಾಗಿ ತೋರಿತು. ಎಲ್ಲರೂ ಹೊರಟು ತ್ವರೆಯಿಂದ ಮೃತ್ಯುಂಜಯನ ಮನೆಯಂ ಸೇರಿ ಸಾಷ್ಟಾಂಗನಮಸ್ಕಾರವಂ ಮಾಡಿ ಕೈಮುಗಿದುಕೊಂಡು ನಿಂತು—ಭವರಯ್ಯನನ್ನು ನಾವು ಹೊರಮಾಡಿದುದರಿಂದ ಶಿವನು ನಮ್ಮನ್ನೇ ಬಿಟ್ಟು ಹೋದನು—ಎಂದು ನಡೆದ ಸಂಗತಿಯೆಲ್ಲವಂ ಹೇಳಿಕೊಳ್ಳಲು, ಆ ಮಾತಂ ಕೇಳಿ ಮೃತ್ಯುಂಜಯನು ದಯಾರ್ದ್ರಹೃದಯನಾಗಿ ಜಂಗಮರಿಗೆ ಸಮಾಧಾನವಂ ಮಾಡಿ ತನ್ನಲ್ಲಿದ್ದ ವೇದಾಂತ ಮತ್ತು ಸಿದ್ಧಾಂತವೆಂಬ ಎರಡು ವಿಶ್ವಕರ್ಮರುಗಳನ್ನು ಕರೆದು ಅವರುಗಳಿಂದ ಅವರ ಲಿಂಗಗಳೆಲ್ಲವನ್ನೂ ತರಿಸಿದನು. ಬಳಿಕ ಅವರು ತಮ್ಮ ತಮ್ಮ ಲಿಂಗಗಳನ್ನು ಗುರುತುನೋಡಿ ತೆಗೆದುಕೊಳ್ಳಲು ಆಗದೆ ಆತನನ್ನೇ ಪ್ರಾರ್ಥಿಸಿ ಆತನ ಅನುಗ್ರಹದಿಂದ ತಮ್ಮ ತಮ್ಮ ಲಿಂಗಗಳನ್ನು ಪಡೆದುಕೊಂಡು ಸದ್ಭಾವದಿಂದ ಆತನನ್ನು ವಂದಿಸಿ ಹೊಗಳುತ್ತ ಜ್ಞಾನಸಾಗರಯ್ಯನೆಂದು ಆತನಿಗೆ ಹೆಸರನ್ನಿಟ್ಟು ಸಂತೋಷದಿಂದ ಅಲ್ಲಿಂದ ಹೊರಟು ರಾಜನ ಮನೆಯಂ ಸೇರಿ ಭೋಜನ ಮಾಡಿದರು.

ಇಂತು ವಿಷ್ಣುಭಕ್ತರು ಅಘಟಿತವಾದ ಚರಿತ್ರೆಯನ್ನು ತೋರಿಸಿರುವರು. ಮಹೀಪತಿಯು ಅವರ ಶರಣಾಗತನಾಗಿ ಪ್ರೀತಿಯಿಂದ ಅವರ ಗುಣಗಳಂ ವರ್ಣಿಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತೊಂದನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಭಾನುದಾಸನ ಚರಿತ್ರೆ.

ಜಯ ಜಯ ವಾಸುದೇವನೆ! ಜಗನ್ನಾಥನೇ! ಕಮಲಲೋಚನನೆ! ರುಕ್ಮಿಣೀಕಾಂತನೆ! ಭಕ್ತರಿಗೆ ಸೌಖ್ಯವನ್ನು ಕೊಡುವನು ನೀನಲ್ಲದೆ ಮತ್ತಾರೂ ಇಲ್ಲ. ಜಯ ಪದ್ಮನಾಭನೆ! ವಿಶ್ವಮೂರ್ತಿಯೇ! ವಿಧಿಜನಕನೆ! ವೈಕುಂಠಪತಿಯೆ! ವಿರಾಟ್‌ಸ್ವರೂಪನೆ! ವಾಮನಮೂರ್ತಿಯೇ! ನಿನ್ನ ಸ್ಥಿತಿಯು ವೇದಶಾಸ್ತ್ರಗಳಿಗೂ ಅಗಮ್ಯವಾಗಿ ಇರುವುದು. ನೀನು ಅಪರಿಮಿತವಾದ ಬಾಹುಗಳಿಂದ ವಿಶ್ವವನ್ನು ಪಾಲಿಸುವನು. ವಿಶ್ವಚಕ್ಷುಸ್ಸಿನಿಂದ ನೋಡುವನು; ವಿಶ್ವಪಾದಗಳಿಂದ ನಡೆಯುವನು—ಎಂದು ವೇದಗಳು ಉದ್ಘೋಷಿಸುವುವು. ಆ ವಿರಾಟ್‌ಸ್ವರೂಪವು ನಿನ್ನ ಭಕ್ತರಿಗೆ ತಿಳಿಯದೆಂದು ನೀನು ಸಗುಣಸ್ವರೂಪನಾಗಿ ಅವರನ್ನು ನಿನ್ನ ಭಜನವಲ್ಲಿ ಹಚ್ಚಿಸಿ ಅವರು ಎಂತೆಂತು ಅಪೇಕ್ಷಿಸುವರೋ ನೀನು ಅಂತಂತು ಆಗುತ್ತಿರುವೆ. ತಾಯಿಯು ಬಾಲಕನಂ ಕೈಯಲ್ಲಿ ಹಿಡಿದು ಅವನ ಸಂಗಡ ಮೆಲ್ಲಮೆಲ್ಲನೆ ನಡೆಯುವಂತೆ ನೀನು ಭಕ್ತರನ್ನು ಅನುಸರಿಸಿ ನಡೆಯುವೆ. ಬಾಲಕನು ಮುದ್ದುಮುದ್ದಾಗಿ ಮಾತನಾಡಿದರೆ ತಾಯಿ ಅದಕ್ಕೆ ಸಂತೋಷಪಡುವಂತೆ ನಿನ್ನ ಭಕ್ತರು ಜ್ಞಾನವಿಲ್ಲದೆ ಹುಚ್ಚುಹುಚ್ಚಾಗಿ ನಿನ್ನ ಸ್ತೋತ್ರವನ್ನು ಮಾಡಿದರೆ ಅದಕ್ಕೆ ನೀನು ಸಂತೋಷವಂ ತಾಳುವೆ.

ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ಮೃತ್ಯುಂಜಯನ ಚರಿತ್ರೆಯಂ ಕೇಳಿ ಆತನ ಅಗಾಧಮಹಿಮೆಯಂ ಪರಿಶೀಲಿಸಿದಿರಷ್ಟೆ. ಇನ್ನು ಸೂರ್ಯಾವತಾರವೆನಿಸಿದ ಭಾನುದಾಸನ ಚರಿತ್ರೆಯಂ ನುಡಿವೆನು; ಆಲಿಸಿ.

ಪ್ರತಿಷ್ಠಾನದಲ್ಲಿ ಸೂರ್ಯೋಪಾಸಕನಾದ ಒಬ್ಬ ಬ್ರಾಹ್ಮಣನಿದ್ದನು. ಆತನು ಸುಜ್ಞಾನಿ; ಪವಿತ್ರನು; ಭಾವುಕನು. ಆತನಿಗೆ ಪುತ್ರನು ಉದಯಿಸಲು, ಸಂತೋಷಗೊಂಡನು. ಬಾಲಕನು ದಿನದಿನಕ್ಕೆ ದೊಡ್ಡವನಾದನು. ಅವನಿಗೆ ಉಪನಯನವಾಯಿತು. ತಾಯಿತಂದೆಗಳು ಅವನನ್ನು ಪೋಷಿಸುತಿದ್ದರು. ಆ ಬಾಲಕನು ಅಧ್ಯಯನವಂ ಮಾಡದೆ ಇದ್ದಕಾರಣ ಒಂದುದಿನ ತಂದೆಯು ಅವನಮೇಲೆ ಕೋಪಿಸಿಕೊಳ್ಳಲು, ಅವನು ಭಯಪಟ್ಟು ಮುಸಿದುಕೊಂಡು ಹೊರಟು ತಲ್ಲಣಿಸುತ್ತ ಊರಹೊರಗೆ ತನಗೆ ಅಡಗಿಕೊಳ್ಳುವುದಕ್ಕೆ ಸ್ಥಳವನ್ನು ಹುಡುಕುತ್ತಿರಲು, ಅಲ್ಲಿ ಒಂದು ದೇವಾಲಯವು ಕಾಣಬಂದುದು. ಆ ದೇವಾಲಯವು ಭೂಮಿಯಲ್ಲಿಯೇ ಗುಪ್ತವಾಗಿದ್ದಕಾರಣ ಅಲ್ಲಿ ಮನುಷ್ಯಸಂಚಾರವಿರಲಿಲ್ಲ. ಅಲ್ಲಿ ಅಡಗಿಕೊಂಡುಕುಳಿತು, ಅಲ್ಲಿ ಪುರಾತನವಾ

ಗಿದ್ದ ಸೂರ್ಯನಾರಾಯಣಮೂರ್ತಿಯಂ ಕಂಡು ದಂಡಪ್ರಣಾಮವಂ ಮಾಡಿದನು. ಆ ದೇವನು ಆಬಾಲಕನ ಸದ್ಭಾವಕ್ಕೆ ಸಂತೋಷಗೊಂಡು-ಈ ಬಾಲಕನು ಅಜ್ಞಾನಿಯಾದರೂ ಮನದಲ್ಲಿ ನಿಶ್ಚಯವುಳ್ಳವನು-ಎಂದು ಮೆಚ್ಚಿ ಪ್ರಸನ್ನನಾಗಿ ಮನುಷ್ಯರೂಪದಿಂದ ದರ್ಶನವಂ ಕೊಟ್ಟು ಬಂದು ಬಟ್ಟಲಲ್ಲಿ ತುಂಬಿದ ಹಾಲನ್ನು ಕುಡಿವುದಕ್ಕೆ ಕೊಟ್ಟು, ಎಲೆ ಬಾಲನೆ! ನೀನು ನಿರ್ಭಯನಾಗಿ ಪಾಂಡುರಂಗನ ಸ್ಮರಣೆಯಂ ಮಾಡುತ್ತಿರುವನಾಗು. ಏನಾದರೂ ಸಂಕಟಪ್ರಾಪ್ತವಾದವೇಳೆಯಲ್ಲಿ ನನ್ನನ್ನು ಸ್ಮರಿಸು. ನಾನು ನಿನಗೆ ಪ್ರಸನ್ನನಾಗುವೆನು-ಎಂದು ವರವಂ ಕೊಟ್ಟು ಅದೃಶ್ಯನಾದನು.

ಇತ್ತಲು ಆ ಬಾಲಕನ ತಾಯ್ತಂದೆಗಳು ಮಗನನ್ನು ಕಾಣದೆ ಏಳುದಿವಸದವರೆಗೂ ಹುಡುಕಿ ಎಲ್ಲಿಯೂ ದೊರೆಯದೆ ಇದ್ದಕಾರಣ ಬಹುವಾಗಿ ವ್ಯಸನಪಡುತ್ತಿದ್ದರು. ಒಂದುದಿನ ಆ ಕುಮಾರನು ದೇವಾಲಯದಿಂದ ಹೊರಗೆ ಬಂದನು. ಆಗ ಒಬ್ಬ ಬ್ರಾಹ್ಮಣನು ಅವನನ್ನು ಕಂಡು ಕೂಗಿದನು. ಬಾಲಕನು ಥಟ್ಟನೆ ದೇವಾಲಯಕ್ಕೆ ಮತ್ತೆ ಹೊರಟುಹೋಗಿ ಅಡಗಿಕೊಂಡನು. ಆಬ್ರಾಹ್ಮಣನು ಊರಿಗೆ ಬಂದು ಆ ಬಾಲಕನ ತಂದೆಗೆ ಸಮಾಚಾರವಂ ಹೇಳಿದನು. ತಾಯ್ತಂದೆಗಳು ಮಗನ ಸಮಾಚಾರವಂ ಕೇಳಿ ಸಂತೋಷಗೊಂಡು ಇಷ್ಟಮಿತ್ರರೊಡನೆ ನೋಡುವುದಕ್ಕೆ ಹೊರಟು, ಅರಣ್ಯದಲ್ಲಿ ಪಾಳುಗುಡಿಯಂ ಕಂಡು ಆಶ್ಚರ್ಯಮಂ ತಾಳಿ ದೀವಟಗೆಗಳಂ ಪ್ರೊತ್ತಿಸಿಕೊಂಡು ಒಳಪೊಕ್ಕು ಅಲ್ಲಿದ್ದ ಸೂರ್ಯನಾರಾಯಣಮೂರ್ತಿಯನ್ನೂ, ಆ ಮೂರ್ತಿಯ ಪಾದಗಳಲ್ಲಿ ಶಿರಸ್ಸನ್ನಿರಿಸಿಕೊಂಡು ಮಲಗಿರುವ ಆಕುಮಾರನನ್ನೂ ಕಂಡರು. ಅವರು ಪರಮಾನಂದಭರಿತರಾಗಿ ಸಮೀಪಕ್ಕೆಬಂದು ಮಗನನ್ನು ಹೃದಯದಲ್ಲಿ ಹಿಡಿದು-ಮಗುವೆ! ಇಂತಹ ಸ್ಥಳದಲ್ಲಿ ನೀನೊಬ್ಬನೆ ಎಂತು ಬದುಕಿದ್ದೆ?-ಎಂದು ನುಡಿದು ಕಣ್ಣುಗಳಲ್ಲಿ ನೀರನ್ನು ತಂದುಕೊಂಡರು. ಊರ ಜನರು-ಇಲ್ಲಿ ಅನ್ನೋದಕಗಳಿಲ್ಲ. ನಿನಗೆ ಹಸಿವೂ ನೀರಡಿಕೆಯೂ ಆದರೆ ಎಂತು ಮಾಡಿದೆ? ನಿನ್ನ ಜೀವವು ಎಂತು ನಿಂತಿರುವುದು?-ಎಂದು ಕೇಳಲು, ಅದಕ್ಕೆ ಆಬಾಲಕನು-ಪರಮತೇಜಸ್ವಿಯಾದ ಒಬ್ಬ ಬ್ರಾಹ್ಮಣನು ಇಲ್ಲಿ ಪ್ರಕಟನಾಗಿ ಬಟ್ಟಲಲ್ಲಿ ತುಂಬಿದ ಹಾಲನ್ನು ತಂದು ಕುಡಿಯಲು ಕೊಡುತ್ತಿರುವನು-ಎಂದು ನುಡಿದನು. ಅದಂ ಕೇಳಿ ಎಲ್ಲರೂ-ಈತನ ಭಾವಕ್ಕೆ ಮೆಚ್ಚಿ ಸೂರ್ಯನೇ ಬ್ರಾಹ್ಮಣರೂಪದಿಂದ ಬಂದು ದರ್ಶನವಂ ಕೊಡುತ್ತಿರುವನು-ಎಂದು ನಿಶ್ಚಯಿಸಿ ಭಾನುವು ಪ್ರಸನ್ನನಾದಕಾರಣ ಭಾನುದಾಸನೆಂದು ಅವನಿಗೆ ಹೆಸರನಿಟ್ಟು ಪ್ರೀತಿಯಿಂದ ಊರಿಗೆ ಕರೆದುಕೊಂಡುಬಂದರು.

ಬಳಿಕ ಆಭಾನುದಾಸನ ತಂದೆಯು-ಪರಮೇಶ್ವರನು ಇವನನ್ನು ಬದುಕಿಸಿದನು. ಇನ್ನುಮೇಲೆ ಇವನನ್ನು ಕುರಿತು ಕಠಿನವಾದಮಾತನಾಡಬಾರದು. ನಾರಾಯಣನು ಕೃಪೆಯಂ ಮಾಡಿ ನನಗೆ ಪುತ್ರದಾನವಂ ಮಾಡಿರುವನು. ಇವನ ಪ್ರಾರಬ್ಧಗತಿಯು ಎಂತಿರುವುದೋ ಮುಂದೆ ಅಂತ ಗುವುದು. ಈ ವ್ಯಸನವನ್ನು ಮನಸ್ಸಿಗೆ

ಏಕೆ ಸುಮ್ಮನೆ ಹತ್ತಿಸಿಕೊಳ್ಳಬೇಕು ?—ಎಂದು ಮನಸ್ಸಿಗೆ ಸಮಾಧಾನವಂ ಮಾಡಿಕೊಂಡು ಆತನಲ್ಲಿ ಅತ್ಯಂತಪ್ರೀತಿಯಂ ಮಾಡುತ್ತ, ವಿದ್ಯಾಭ್ಯಾಸವಂ ಮಾಡಹೇಳಿದರೆ ಮೊದಲಂತೆ ಎಲ್ಲಿ ಮುನಿಸುಗೊಂಡುಹೋಗುವನೋ ಎಂದು ಆವಮಾತನ್ನೇ ಆಡದೆ ಕನ್ಯಕೆಯಂ ವಿಚಾರಿಸಿ ಆತನಿಗೆ ವಿವಾಹವಂ ಮಾಡಿದನು.

ಕೆಲವು ದಿವಸಗಳು ಕಳೆದಬಳಿಕ ಭಾನುದಾಸನ ತಾಯ್ತಂದೆಗಳು ಪರಿಮಿತಿತೀರಲು ಕಾಲವಶರಾದರು. ಆದರೂ ಭಾನುದಾಸನು ಚಿಂತೆಯಂ ಮಾಡದೆ ನಿರ್ಭಯನಾಗಿ ಪ್ರಪಂಚದ ವ್ಯವಹಾರದಲ್ಲಿ ಸಿಕ್ಕಿಬೀಳದೆ, ಯಾರ ಉಪಸರ್ಪಣೆಯನ್ನೂ ಮಾಡದೆ, ವ್ಯಾಪಾರವ್ಯವಸಾಯಗಳಂ ಮಾಡದೆ, ರಾಜಸೇವೆಗೆ ಒಳಗಾಗದೆ ಸರ್ವಕಾಲದಲ್ಲಿಯೂ ಶ್ರೀಪಾಂಡುರಂಗನ ಭಜನೆಯಂ ಮಾಡುತಿದ್ದನು.

ಮನೆಯಲ್ಲಿ ಅನ್ನವಸ್ತ್ರಗಳಿಗೆ ಕೊರತೆಯಾಗಿರುವುದರಿಂದ ಮಡದಿಮಕ್ಕಳು ಬಹುವಾಗಿ ಕಷ್ಟಪಡುತ್ತಿರುವರು. ಆದರೂ ತಾನು ಔದಾಸೀನ್ಯವಂ ವಹಿಸಿದ್ದನು. ಅದಂ ನೋಡಿ ಊರಲ್ಲಿದ್ದ ನಾಲ್ವರು ಸಜ್ಜನರು ಭಾನುದಾಸನಂ ಕರೆದು-ಕುಟುಂಬಕ್ಕೆ ಅನ್ನವಸ್ತ್ರವು ಬೇಕು. ನಿನಗೆ ಅದು ತಿಳಿಯದು. ನಿಮ್ಮ ತಾಯ್ತಂದೆಗಳು ಇದುವರೆಗೂ ಮೂರ್ಧನ್ಯರಾಗಿದ್ದು ಸಂಸಾರವನ್ನು ನಿರ್ವಹಿಸುತಿದ್ದರು. ನೀನು ಇಂತು ಉದಾಸೀನನಾಗಿದ್ದರೆ ಸಂಸಾರವು ಯಾವಪರಿಯಿಂದ ನಡೆಯಬೇಕು ? ನಿನಗೆ ವಿದ್ಯಾಭ್ಯಾಸವೂ ವಿಶೇಷವಾಗಿಲ್ಲ. ಆದಕಾರಣ ಈಗ ನಾವು ನಿನಗೆ ಒಂದಾಲೋಚನೆಯಂ ಹೇಳುವೆವು. ಅದನ್ನು ಆದರದಿಂದ ಕೇಳು. ಈಗ ನಿನಗೆ ನಾವು ನೂರು ವರಹಗಳನ್ನು ಬಂಡವಾಳವಾಗಿ ಕೊಡುವೆವು. ಅದಕ್ಕೆ ಜವಳಿಯಂ ತೆಗೆದುಕೊಂಡು ಅಂಗಡಿಯಂ ಹಾಕಬೇಕು. ಬಂದ ಲಾಭದಲ್ಲಿ ಕುಟುಂಬಕ್ಕೆ ಅನ್ನವಸ್ತ್ರಗಳಂ ಮಾಡಿಕೊಳ್ಳಬೇಕು—ಎಂದು ಹೇಳಿ ನಿರ್ಬಂಧಪಡಿಸಿ ಆತನನ್ನೂ ಅಂಗಡಿಗೆ ಕರೆದುಕೊಂಡು ಹೋಗಿ ಜವಳಿಯಂ ಕೊಡಿಸಿ ಒಂದು ಅಂಗಡಿಯಂ ಗೊತ್ತುಮಾಡಿಕೊಟ್ಟು ನೆರೆಯ ವ್ಯಾಪಾರಗಾರನನ್ನು ಕುರಿತು—ನೀವು ನಿತ್ಯವೂ ಮನೆಯಿಂದ ಬರುವಾಗ ಈತನನ್ನೂ ಸಂಗಡ ಕರೆದುಕೊಂಡುಬಂದು ಸವಿಾಪದಲ್ಲಿ ಕುಳ್ಳಿರಿಸಿಕೊಂಡು ಪ್ರಪಂಚದ ವ್ಯವಹಾರದಲ್ಲಿ ಸ್ವಲ್ಪ ಪ್ರಬುದ್ಧನನ್ನಾಗಿ ಮಾಡಬೇಕೆಂದು ಹೇಳಿದರು.

ಆವ್ಯಾಪಾರಗಾರನು ಅವರ ಮಾತಿಗೆ ಒಡಂಬಟ್ಟು ನಿತ್ಯವೂ ಭಾನುದಾಸನನ್ನು ತನ್ನ ಸಂಗಡ ಕರೆದುಕೊಂಡು ಬರುತ್ತ ತನ್ನ ಬಳಿಯಲ್ಲಿಯೇ ಕುಳ್ಳಿರಿಸಿಕೊಂಡು "ಮೂಳುವುಧಾನು ಅಂಗಳು, ಕೇಳುವಕಾಂಡಿದವಿತ್ರು, ಸೆವೊ ಕುಡಕಾಜವಾರು" ಎಂದು ಭಾಷೆಯ ಸಂಕೇತಾರ್ಥವನ್ನು ಹೇಳಿಕೊಟ್ಟು, ಯಾವಯಾವ ಜವಳಿಯನ್ನು ಯಾವಯಾವಪ್ರಕಾರ ಕೊಡತಕ್ಕುದೋ ಅದೆಲ್ಲವಂ ಹೇಳಿ ಅಸಲನ್ನು ರಕ್ಷಿಸಿಕೊಂಡು ಲಾಭವನ್ನು ನೋಡಿ ಹೇಳಬೇಕು. ಯಾರಸಂಗಡವಾದರೂ ಯಥಾರ್ಥವಾದ ಮಾತನಾಡಿದರೆ ನಷ್ಟವು ಸಂಭವಿಸುವುದು—ಎಂದು ಹೇಳಲು, ಭಾನುದಾಸನು ಆ ವರ್ತಕ

ನನ್ನು ಕುರಿತು—ನಾನು ಅಸತ್ಯವಾದಮಾತನೆಂದಿಗೂ ಆಡುವವನಲ್ಲ. ನನಗೆ ಏನೂ
ದೊರೆಯದೆ ಹೋದರೂ ಸತ್ಯವಂ ಬಿಡುವನಲ್ಲ-ಎಂದು ಉತ್ತರವಂ ಹೇಳಿದನು.
ಆಮಾತಿಗೆ ವ್ಯಾಪಾರಗಾರರು ನಕ್ಕು, ಈತನ ಹಣೆಯಲ್ಲಿ ಭಿಕ್ಷವೇ ಬರೆದಿದೆ. ಆದುದ
ರಿಂದ ನಮ್ಮ ಮಾತಂ ಕೇಳುವುದಿಲ್ಲ-ಎಂದರು. ಕೆಲವರು, ಈತನಿಗೆ ಅದರ ಸವಿ ಹತ್ತಿ
ದರೆ ಬಹುವಾಗಿ ಅಸತ್ಯದ ಮಾತುಗಳನ್ನು ಆಡದೆ ಇರನು. ಪ್ರಪಂಚದ ವ್ಯವಹಾರ
ದಲ್ಲಿ ಸತ್ಯವಚನವನ್ನು ಆಡುವವನು ಯಾವ ಪುಣ್ಯಾತ್ಮನಿರುವನೋ ಕಾಣೆವೆಂದರು.
ಹುಟ್ಟುಕುರುಡನ ಮನಸ್ಸಿಗೆ ಎಲ್ಲರೂ ಕುರುಡರಂತೆ ಎಂತು ತೋರುವರೋ, ರೋಗಿಗೆ
ಮೃಷ್ಟಾನ್ನವು ಎಂತು ಕಹಿಯಾಗಿ ತೋರುವುದೋ ಅಂತು ತಾನು ಅಸತ್ಯವಂತನಾದರೆ
ಅವನಿಗೆ ಇತರರೆಲ್ಲರೂ ಅಸತ್ಯವಂತರಾಗಿಯೇ ತೋರುವರು. ತಾನು ಅನಾಚಾರಿಯಾ
ದರೆ ಇತರರನ್ನೂ ಅಂತೆ ತಿಳಿಯುವನು. ಭಾನುದಾಸನ ಮನೋನಿಶ್ಚಯವು ದೊಡ್ಡದು.
ಪ್ರಪಂಚದ ವ್ಯವಹಾರದಲ್ಲಿ ಅಸತ್ಯವಾದ ಮಾತನ್ನು ಆಡನು. ಅದಂ ಕಂಡು
ಸರ್ವರೂ ಆಶ್ಚರ್ಯಪಡುತಿದ್ದರು. ಆವನಾದರೂ ಒಬ್ಬಗ್ರಾಹಕನು ಬಂದು ಜವಳಿ
ಯನ್ನು ಕೇಳಿದರೆ ಅವನ ಸಂಗಡ ಯಥಾರ್ಥವಾಗಿ ಒಂದೇಸಾರಿ, ನಮ್ಮ ಅಸಲು ಇಷ್ಟು;
ಲಾಭವಿಷ್ಟು; ಸಮ್ಮತವಾದರೆ ತೆಗೆದುಕೊಳ್ಳತಕ್ಕದು; ಇಲ್ಲದಿದ್ದರೆ ಮತ್ತೊಂದಂಗ
ಡಿಯಲ್ಲಿ ನೋಡತಕ್ಕದು-ಎಂದು ಇಷ್ಟುಮಟ್ಟಿಗೆ ಮಾತನಾಡಿ ಬಳಿಕ ಭಗವನ್ನಾಮ
ಸ್ಮರಣೆಯಂ ಮಾಡುತಿರುತಿದ್ದನು. ಜನರಲ್ಲಿ ಜನಾರ್ದನನು ವ್ಯಾಪಿಸಿರುವುದರಿಂದ
ಭಾನುದಾಸನು ಅಸತ್ಯವಚನವನ್ನು ಕಲ್ಪಾಂತದಲ್ಲಿಯೂ ಆಡುವವನಲ್ಲ-ಎಂಬ ನಿಶ್ಚ
ಯವು ಸರ್ವರಿಗೂ ಉಂಟಾಯಿತು. ಗ್ರಾಹಕರೆಲ್ಲರೂ ಆತನ ಬಳಿಗೇ ಬರುತಿದ್ದರು.
ಇತರರಾದ ವ್ಯಾಪಾರಗಾರರು ಇದನ್ನು ನೋಡಿ ನಮ್ಮ ಸಂಗಡ ಈತನನ್ನು ಕರೆದು
ಕೊಂಡುದರಿಂದ ನಮಗೆ ಬಾಧಕವಾಯಿತು. ನಮ್ಮ ನೆರೆಯಲ್ಲಿ ಕುಳಿತುಕೊಳ್ಳು
ವನು. ಎಲ್ಲಾ ಗ್ರಾಹಕರನ್ನೂ ತನ್ನಕಡೆಗೇ ಕರೆದುಕೊಳ್ಳುವನು. ನಾವು ಮಿಟಮಿ
ಟನೆ ಆತನಕಡೆ ನೋಡುತ್ತ ಸುಮ್ಮನೆ ಕುಳಿತುಕೊಂಡಿರುವೆವು-ಎಂದು ಮನದಲ್ಲಿ
ಸಂಕಟಪಡುತಿದ್ದರು. ಕೆಲವರು, ಈತನು ಎಲ್ಲರನ್ನೂ ಮೋಹಗೊಳಿಸುವನು-
ಎಂದೂ, ಕೆಲವರು, ಆತನು ಯಥಾರ್ಥವಾದಿಯೆಂದು ಜನಗಳಿಗೆ ವಿಶ್ವಾಸವು ಉಂಟಾ
ಗಿರುವುದು; ಆದಕಾರಣ ಜನರೆಲ್ಲರೂ ಆತನಲ್ಲಿಯೇ ಹೋಗುವರು. ನಾವು ಅಸತ್ಯ
ವಾದಿಗಳು. ಈಪ್ರಪಂಚದೋಷವು ಈಶ್ವರನಿಗೆ ಸಮ್ಮತವಾದುದಲ್ಲ-ಎಂದೂ, ಕೆಲ
ವರು, ಯಥಾರ್ಥವಾಗಿಯೇ ಮಾತನಾಡಬೇಕು—ಎಂದೂ, ಮತ್ತೆ ಕೆಲವರು, ನಾವು
ಯಥಾರ್ಥವಾದ ಮಾತನಾಡಿದರೂ ಜನರಿಗೆ ಅದು ಸತ್ಯವಾಗಿ ತೋರುವದಿಲ್ಲ; ಒಂದು
ಸಾರಿ ವೃತ್ತಿಯಿಂತಹುದೆಂದು ಜನರಲ್ಲಿ ಪ್ರಸಿದ್ಧವಾಗಲು, ಬದುಕಿರುವವರೆಗೂ ಹಾಗೆಯೇ
ಇರುವುದು. ಈಗ ಈವಿಷಯದಲ್ಲಿ ಭಾನುದಾಸನೇ ಸಾಕ್ಷಿ. ನಾಯಿಯು ಮನೆಯಲ್ಲಿ
ಕುಳಿತಿರಲು, ಯಾವಮನುಷ್ಯನಾದರೂ ರೊಟ್ಟಿಯನ್ನು ಕದ್ದುಕೊಂಡರೆ ನಾಯಿಯು

ಮೇಲೆಯೇ ಅದವಾದವು ಬರುವುದು. ಹುಲಿಯು ಉಪಶಾಂತಿಯನ್ನು ಹಿಡಿದು ಕುಳಿತರೂ ಜನರು, ಕೊಂದುಹಾಕುವುದಕ್ಕೋಸ್ಕರ ಹೊಂಚಿಹಾಕುತಿರುವುದೆನ್ನುವರು. ಧನಲೋಭಿಯಾದವನು ವಿರಕ್ತನಾದರೂ ಸಂಪಾದಿಸುವುದಕ್ಕೋಸ್ಕರ ವೇಷವನ್ನು ಧರಿಸಿದನೆನ್ನುವರು. ಜಾರನು ತೀರ್ಥಯಾತ್ರೆಗೆ ಹೊರಟರೂ ಪರಸ್ತ್ರೀಯನ್ನು ಹುಡುಕುವುದಕ್ಕೆ ಹೊರಟನೆನ್ನುವರು. ಬೆಕ್ಕು ಸ್ವಸ್ಥವಾಗಿ ಶಾಂತಿಯಿಂ ತಾಳಿ ಕುಳಿತಿದ್ದರೂ ಇಲಿಗಳಿಗೋಸ್ಕರ ಹೊಂಚಿಹಾಕುವುದೆನ್ನುವರು. ಅಂತು ನಮ್ಮ ಜನ್ಮವೆಲ್ಲವೂ ಅಸತ್ಯವಾದ ಮಾತನಾಡುವರೆಂಬುವರಲ್ಲಿಯೇ ಕಳೆದುದರಿಂದ ಈಗ ಯಥಾರ್ಥವಾಗಿ ನುಡಿದರೂ ಅದು ಸತ್ಯವಾಗಿ ತೋರುವುದಿಲ್ಲ. ನೋಡಲು, ಭಾನುದಾಸನ ಅಂಗಡಿಯು ಸ್ವಲ್ಪವಾಗಿಯೇ ಇದ್ದಿತು. ಈಗ ಆತನು ಭಾಗ್ಯವಂತನಾದನು. ಆತನಿಗೆ ಈಶ್ವರನು ಸಹಾಯನಾದನು. ನಾವು ಬಹುವಾದ ಸಾಹಸವಂ ಮಾಡಿದರೂ ಹೊಟ್ಟೆತುಂಬುವಷ್ಟು ರೊಟ್ಟಿಯು ದೊರೆಯದು. ಸಾಲಗಾರರು ಬಂದು ಬಾಗಿಲಲ್ಲಿ ಕುಳಿತುಕೊಳ್ಳುವರು. ಇದಕ್ಕೆ ನಾವೇನುಮಾಡಬೇಕು? ಭಾನುದಾಸನನ್ನು ಸಂಗಡ ಸೇರಿಸಿಕೊಂಡುದರಿಂದಲೂ ನಾವು ಮುಳುಗಿಹೋದೆವು. ಗ್ರಾಹಕರೆಲ್ಲರನ್ನೂ ಆತನೇ ಕರೆದುಕೊಳ್ಳುವನು—ಎಂದೂ ಬಗೆಬಗೆಯಿಂದ ಮಾತನಾಡಿಕೊಳ್ಳುತಿದ್ದರು.

ಬಳಿಕ ಒಂದುದಿವಸ ವ್ಯಾಪಾರಗಾರರೆಲ್ಲರೂ ಕೂಡಿ ಸಂತೆಗೆ ಹೋಗಿದ್ದು ಸಂತೆ ತೀರುವುದೂ ಅಲ್ಲಿಂದ ಹೊರಟುಬಂದು ಒಂದು ಗುಡಿಯಲ್ಲಿ ಇಳಿದುಕೊಂಡರು. ಅವರ ಸಂಗಡ ಭಾನುದಾಸನೂ ಸಂತೆಗೆ ಹೋಗಿದ್ದು ಅವರ ನೆರೆಯಲ್ಲೇ ಬಿಡಾರವಂ ಮಾಡಿ ಇಳಿದನು. ಆಗ ಊರಲ್ಲಿ ಒಬ್ಬ ಹರಿದಾಸನು ಬಂದು ಅಂಗಡಿಯಲ್ಲಿ ಹರಿಕಥೆಯನ್ನಾರಂಭಿಸಿದನು. ಕಥಾಶ್ರವಣಕ್ಕೆ ಬರಬೇಕೆಂದು ಸರ್ವರನ್ನೂ ಕರೆಯುವುದಕ್ಕೋಸ್ಕರ ಜನರು ತಿರುಗುತಿದ್ದರು. ಭಾನುದಾಸನು ಆ ಸಂಗತಿಯಂ ಕೇಳಿ, ಇಂದು ಏಕಾದಶೀಮಹಾದಿವಸವು; ಕಥೆಯನ್ನು ಕೇಳುವುದಕ್ಕೆ ಹೋಗಬೇಕು—ಎಂದು ಮನದಲ್ಲಿ ಉಲ್ಲಾಸಗೊಂಡು ವ್ಯಾಪಾರಗಾರರೆಲ್ಲರಂ ಕುರಿತು—ಈಗ ಹರಿಕೀರ್ತನವಂ ಕೇಳುವುದಕ್ಕೆ ಹೋಗಬೇಕು. ನಿಮಗೆ ಬರಲಾರದಷ್ಟು ಆಲಸ್ಯವಾಗಿದ್ದರೆ ನೀವೆಲ್ಲರೂ ಬಿಡಾರದಲ್ಲೇ ಇದ್ದುಕೊಂಡು ನಮ್ಮ ಅಂಗಡಿಯನ್ನು ನಿಮ್ಮ ಬಳಿಯಲ್ಲಿಯೇ ಇಟ್ಟುಕೊಂಡು ರಕ್ಷಿಸಬೇಕು—ಎನಲು, ಅವನ ಮಾತಿಗೆ ಅವರೆಲ್ಲರೂ ಕೋಪಗೊಂಡು—ನೀನು ದೇವರ ಭಕ್ತನೆನಿಸಿಕೊಂಡಿರುವೆ. ಸರ್ವಕಾಲದಲ್ಲಿಯೂ ಅಸತ್ಯವಾದ ವಚನವನ್ನೇ ಆಡುತಿರುವೆ. ಕಥಾಶ್ರವಣಕ್ಕೆ ಹೋಗುವನಾದರೆ ನಿನ್ನ ಬಿಡಾರವನ್ನೇ ತೆಗೆದುಕೊಂಡು ಹೋಗು. ನಮಗೆ ಆಯಾಸವಾಗಿರುವುದು. ಆದಕಾರಣ ನಾವು ನಿದ್ದೆಗೆಯ್ಯುವೆವು. ನೀನು ಮತ್ತೊಂದುಕಡೆ ಬಿಡಾರವಂ ಮಾಡಿ ಅಲ್ಲಿ ನಿನ್ನ ಅಂಗಡಿಯನ್ನು ಇಟ್ಟುಕೊಳ್ಳುವನಾಗು. ಇಲ್ಲಿ ಕಳ್ಳತನವಾದರೆ ನಮ್ಮ ಮೇಲೆ ಮಾತಿಲ್ಲ. ಕೀರ್ತನದಲ್ಲಿ ಏನೋ ಫಲವಾಗುವುದು. ನಮಗದು ತಿಳಿಯದು—ಎಂದರು.

ಅತಕ್ಕೆ ಭಾನುದಾಸನು-ಅಂಗಡಿಯು ಬದುಕು ಹೋಗಲಿ; ಅಥವಾ ಇರಲಿ. ಪಾಂಡುರಂಗನ ಪಾದದಲ್ಲಿ ನನಗೆ ಭಾವವು ತುಂಬಿರುವುದು. ನಾನು ಅದನ್ನು ಎಂತಾದರೂ ಬಿಡುವನಲ್ಲ-ಎಂದು ಉತ್ತರವಂ ಹೇಳಿ ಬದುಕನೆಲ್ಲವನ್ನೂ ಅಲ್ಲಿಯೇ ಬಿಟ್ಟು, ಎಲ್ಲಿ ಸಂತರು ಕೂಡಿ ಕೀರ್ತನವಂ ಮಾಡುತಿದ್ದರೋ ಅಲ್ಲಿಗೆ ಬಂದು ಮನದಲ್ಲಿ ಪರಮೋಲ್ಲಾಸವಂ ತಾಳಿ ಹರಿದಾಸರಿಗೆ ನಮಸ್ಕಾರವಂ ಮಾಡಿ, ಇಂದು ಏಕಾದಶೀಮಹಾದಿವಸದಲ್ಲಿ ಸಾಧುಸಜ್ಜನರ ಸಂಗತಿಯುಂಟಾದುದರಿಂದ ಧನ್ಯನಾದೆನು-ಎಂದು ನುಡಿದು, ಆಗ ವೈಷ್ಣವರು ತಾರಕವಾದ ರಾಮಕೃಷ್ಣನಾಮಗಳನ್ನು ಪಾಡುತಿರಲು. ಆನಂದದಿಂದ ಶ್ರವಣವಂ ಮಾಡುತ್ತ ಕುಳಿತುಕೊಂಡನು.

ಇತ್ತಲು ದುರ್ಮತಿಗಳಾದ ವ್ಯಾಪಾರಗಾರರು ಬಿಡಾರದಲ್ಲಿ ಕುಳಿತು-ಭಾನುದಾಸನು ತನ್ನ ಬದುಕನೆಲ್ಲವನ್ನೂ ಬಿಟ್ಟು ಕೀರ್ತನಕ್ಕೆ ಹೊರಟುಹೋದನು; ಆದುದರಿಂದ ಅವನ ಕುದುರೆಯನ್ನು ಬಿಟ್ಟುಕೊಟ್ಟು ಜವಳಿಯ ಪಿಂಡಿಯನ್ನು ಗುಳಿಯಲ್ಲಿ ಹಾಕಬೇಕು. ಈ ಸಂಗತಿಯಂ ಅವನಿಗೆ ತಿಳಿಯಿಸಬಾರದು. ಅವನು ಬಂದು ನಮ್ಮನ್ನು ಕೇಳಿದರೆ, ನಮಗೆ ನಿದ್ರೆಹತ್ತಿದಾಗ ಕಳ್ಳರು ಬಂದು ಇದ್ದರು. ನಮಗೆ ತಿಳಿಯದ ಹಾಗೆ ತ್ವರೆಯಿಂದ ಓಡಿಹೋದರು-ಎಂದು ಹೇಳಬೇಕು. ಮನೆಗೆ ಹೋಗಿ ಜವಳಿಯಂ ಹಂಚಿಕೊಳ್ಳಬೇಕು-ಎಂದು ಆಲೋಚನೆಯಂ ಮಾಡಿ, ಅವನ ಕುದುರೆಯನ್ನು ಬಿಟ್ಟುಕೊಟ್ಟು ಅಲ್ಲಿ ಇದ್ದ ಆಳವಾದ ಬಂದು ಗುಳಿಯಲ್ಲಿ ಜವಳಿಯ ಪಿಂಡಿಗಳಂ ಹಾಕಿ ಚಪ್ಪಳಿತಟ್ಟುತ್ತ, ಭಾನುದಾಸನು ನಮ್ಮ ಜತೆಗೆ ಸೇರಿದಂದಿನಿಂದಲೂ ಆತನಿಗೆ ಸಂಪತ್ತು ಉಂಟಾಯಿತು. ಗ್ರಾಹಕರೆಲ್ಲರೂ ಅವನಕಡೆಗೆ ತಿರುಗಿದುದರಿಂದ ನಮಗೆ ದಾರಿದ್ರ್ಯವು ಬಂದಿತೆಂಬ ಚಿಂತೆಯೆಲ್ಲವೂ ಇಂದು ಪರಿಹಾರವೊಂದಿತು-ಎಂದು ಪರಸ್ಪರವಾಗಿ ಮಾತನಾಡಿಕೊಳ್ಳುತ್ತ, ಧರ್ಮರಾಯನ ಸಂಪತ್ತನ್ನು ಅಪಹರಿಸಿ ಉಲ್ಲಾಸಗೊಂಡ ದುರ್ಯೋಧನನಂತೆ ಉಲ್ಲಾಸಗೊಂಡರು.

ಶ್ರೀರುಕ್ಮಿಣೀಪತಿಯು ಈ ವ್ಯಾಪಾರಗಾರರ ದುಷ್ಕೃತ್ಯವನ್ನು ತಿಳಿದು, ಭಾನುದಾಸನು ನಿಶ್ಚಲಚಿತ್ತನಾಗಿ ಕೀರ್ತನದಲ್ಲಿ ಕುಳಿತಿರುವನು. ದುರ್ಮತಿಗಳು ಅವನ ಅಂಗಡಿಯ ಬದುಕನೆಲ್ಲವನ್ನೂ ಗುಣಿಯಲ್ಲಿ ಹಾಕಿಬಿಟ್ಟರು. ಕುದುರೆಯು ಓಡಿಹೋಗುವುದು. ಬಳಿಕ ಭಾನುದಾಸನು ಎಲ್ಲಿಂದು ಹುಡುಕಬಲ್ಲನು ? ಆತನಿಗೆ ಪ್ರಪಂಚದ ಆವಶ್ಯಕತೆಯೇ ಇಲ್ಲ. ನನ್ನ ಭಜನೆಯ ಹುಚ್ಚು ಹಿಡಿದಿರುವುದು; ಇದಕ್ಕೆ ಏನುಮಾಡಲಿ ?-ಎಂದು ಮನದಲ್ಲಿ ಚಿಂತಿಸಿ, ಬಳಿಕ ವಿಪ್ರವೇಷವಂ ಧರಿಸಿ ಸಂತೆಯಲ್ಲಿ ಕುದುರೆಯಂ ಹಿಡಿದುಕೊಂಡು ಕುಳಿತನು.

ಯಾವನು ಕ್ಷೀರಸಾಗರದಲ್ಲಿ ಶೇಷಶಾಯಿಯೆನಿಸಿರುವನೋ, ಯಾವನ ಪಾದಗಳನ್ನು ಮಹಾಲಕ್ಷ್ಮಿಯು ಒತ್ತುತಿರುವಳೋ, ಯಾವನು ತೀರ್ಥಯಾತ್ರಾವ್ರತೋಪವ್ರತಗಳಿಗೆ ದೊರೆಯನೋ, ಯಾವನು ಸಮಾಧಿನಿಷ್ಠರಾದ ಯೋಗಿಗಳ ಧ್ಯಾನಕ್ಕೂ ವಿಷ

ಯನಾಗನೋ, ಯಾವನು ಬ್ರಹ್ಮದೇವನಿಗೆ ತಂದೆಯೆನಿಸಿರುವನೋ, ಯಾವನು ಅನಂತ ಬ್ರಹ್ಮಾಂಡಗಳಿಗೂ ಕರ್ತೃವೋ, ಆ ಭಕ್ತಪಕ್ಷಪಾತಿಯಾದ ಪುಂಡರೀಕವರದನು ಭಾನುದಾಸನ ಕುದುರೆಯನ್ನು ಹಿಡಿದುಕೊಂಡು ಚೌಕದಲ್ಲಿ ಕುಳಿತಿದ್ದನು.

ಗುಡಿಯಲ್ಲಿ ಇಳಿದಿದ್ದ ವ್ಯಾಪಾರಗಾರರು ಭಾನುದಾಸನಂ ನಿಂದಿಸುತ್ತ, ಇನ್ನು ಮೇಲೆ ತನ್ನ ಅಂಗಡಿಯಂ ನೋಡುವುದಕ್ಕೆ ಬಂದಾನು ; ಇಲ್ಲಿಯ ಸಂಗತಿ ತಿಳಿದರೆ ತಲ್ಲಣಗೊಂಡಾನು-ಎಂದು ಮಾತನಾಡಿಕೊಳ್ಳುತಿದ್ದರು. ಶ್ರೀಹರಿಯು ಅದಂ ತಿಳಿದು ಕೋಪಗೊಂಡನು. ಆತನ ಕೃಪೆ ತಪ್ಪುವುದೂ, ಆಕಸ್ಮಿಕವಾಗಿ ಕಳ್ಳರು ಬಂದು ವ್ಯಾಪಾರಗಾರರ ಬದುಕನೆಲ್ಲವನ್ನೂ ಸೂರೆಮಾಡಿಕೊಂಡು ಅವರನ್ನು ಬಲವಾಗಿ ಪ್ರಹರಿಸಿ ಅವರ ಕುದುರೆಗಳನ್ನು ತೆಗೆದುಕೊಂಡು ಹೊರಟುಹೋದರು.

ಬಳಿಕ ಆ ವ್ಯಾಪಾರಗಾರರೆಲ್ಲರೂ ಅಳುತ್ತ ಕುಳಿತು, ನಾವು ಭಾನುದಾಸನ ನಿಂದೆಯಂ ಮಾಡಿದೆವು. ಅದರಿಂದ ಪಾಂಡುರಂಗನು ನಮಗೆ ಶಿಕ್ಷೆಯಂ ಮಾಡಿದನು-ಎಂದು ಸಂಕಟಪಟ್ಟರು. ಕೆಲವರು-ಕರ್ಮಾನುಸಾರದಿಂದ ಆಯಾಕಾಲಕ್ಕೆ ಅನುಗುಣವಾದ ಬುದ್ಧಿಯು ಉಂಟಾಗುವುದು. ನಾವು ಜ್ಞಾನಹೀನರು, ಆಲೋಚನೆಯಂ ಮಾಡಲಿಲ್ಲ-ಎಂದರು. ಕೆಲವರು-ನಮ್ಮ ಪ್ರಾರಬ್ಧ ಕೆಟ್ಟದು ; ಆದುದರಿಂದ ಅತರ್ಕ್ಯವಾದ ಕಾರ್ಯವು ನಡೆಯಿತು. ಭಾನುದಾಸನು ಭಗವದ್ಭಕ್ತನು. ಏಕನಿಷ್ಠೆಯುಳ್ಳವನು. ಆತನೊಡನೆ ವ್ಯರ್ಥವಾಗಿ ದ್ವೇಷವಂ ಮಾಡಿದೆವು-ಎಂದು ದೀರ್ಘಸ್ವರದಿಂದ ರೋದನವಂ ಮಾಡುತಿದ್ದರು. ಊರೊಳಗಣಿಂದ ವಿಚಾರಿಸಲು ಯಾರೂ ಬರಲಿಲ್ಲ. ರುಕ್ಮಿಣೀರಮಣನು ಎಲ್ಲರನ್ನೂ ಮೋಹಗೊಳಿಸಿದನು.

ಅತ್ತಲು ಅತ್ಯಂತಸಂಭ್ರಮದಿಂದ ಕೀರ್ತನೆಯಾಗುತಿದ್ದುದು ಮದ್ದಳೆಯು ಮತ್ತು ವೀಣೆಯ ಸುಸ್ವರದಿಂದ ನಾದವು ಪರಿಪೂರ್ಣವಾಗಿ ಅಂತರಿಕ್ಷದಲ್ಲಿ ತುಂಬಿದ್ದುದು. ಎಲ್ಲರೂ ಭಗವನ್ನಾಮವನುದ್ಘೋಷಿಸುತಿದ್ದರು. ಇಂತಿರಲು ಆಗ ನಾಲ್ಕು ಗಳಿಗೆಯ ರಾತ್ರಿಯ ಶೇಷವಿರುವ ಸಮಯದಲ್ಲಿ ಹರಿದಾಸನು ಭಕ್ತಿಯಿಂದ ಆರತಿಯನೆತ್ತಿ ಪ್ರಸಾದವನ್ನು ಸರ್ವರಿಗೂ ಕೊಟ್ಟನು.

ಬಳಿಕ ಭಾನುದಾಸನು ಹರಿದಾಸನಿಗೆ ನಮಸ್ಕಾರವಂ ಮಾಡಿ ತನ್ನ ಬಿಡಾರಕ್ಕೆ ಹೊರಟನು. ಆ ಮಾರ್ಗದಲ್ಲಿ ಒಬ್ಬ ಬ್ರಾಹ್ಮಣನು ಕುದುರೆಯನ್ನು ಹಿಡಿದುಕೊಂಡು ನಿಂತಿದ್ದನು. ಸಮೀಪಕ್ಕೆ ಬರಲು, ಕುದುರೆಯು ಧ್ವನಿಮಾಡಿತು. ತನ್ನ ಕುದುರೆಯು ಇಲ್ಲಿಗೆ ಎಂತು ಬಂದುದೋ ? ಕಾಣೆನೆಂದನು. ಆಗ ತನ್ನ ಅಂಗವಸ್ತ್ರವನ್ನು ಕುದುರೆಯ ಕೊರಲಿಗೆ ಹಾಕಿ ಹಿಡಿದುಕೊಂಡು ನಿಂತಿದ್ದ ಆ ಬ್ರಾಹ್ಮಣನು ಭಾನುದಾಸನಂ ಕಾಣುವುದೂ ಥಟ್ಟನೆ ಅದೃಶ್ಯನಾದನು

ಭಾನುದಾಸನು ಈ ಕೌತುಕವಂ ಕಂಡು ಮನದೊಳಾಶ್ಚರ್ಯಗೊಂಡು ಕುದುರೆಯನ್ನು ಹಿಡಿದುಕೊಂಡು ತನ್ನ ಬಿಡಾರಕ್ಕೆ ಬಂದನು. ಆಗ ತನ್ನ ಜತೆಯ ವ್ಯಾಪಾರ

ಗಾರರೆಲ್ಲರೂ ದೀರ್ಘಸ್ವರದಿಂದ ರೋದನವಂ ಮಾಡುತ್ತಿರಲು, ಅವರನ್ನು ಇದೇನೆಂದು ವಿಚಾರಿಸಿದನು. ಅವರು—ನಾವು ದುರ್ಬುದ್ಧಿಗಳು; ಭಾಗ್ಯಹೀನರು; ನಿನ್ನನ್ನು ಕೋಟಲೆಗೊಳಿಸಿ ನಿನ್ನ ಕುದುರೆಯಂ ಬಿಟ್ಟುಕೊಟ್ಟು ಜವಳಿಯ ಪಿಂಡಿಯನ್ನು ಹಳ್ಳದಲ್ಲಿ ಹಾಕಿದೆವು. ಎರಡುಜಾವವಾಗುವುದರೊ, ಕಳ್ಳರು ಬಂದು ನಮ್ಮನ್ನು ಸುಲಿದುಕೊಂಡು ಹೋದರು. ನಮ್ಮ ಕರ್ಮದ ಗತಿಯು ಈತೆರವಾಯಿತು. ನಾವು ಯಾರಸಂಗಡ ಹೇಳಿಕೊಳ್ಳಬೇಕು? ನಮ್ಮ ಕುದುರೆಗಳೂ ಜವಳಿಯ ಪಿಂಡಿಗಳೂ ಹೋದುವು. ತಾಡನಗಳೂ ಅಪರಿಮಿತವಾಗಿ ಆದುವು. ಇನ್ನು ನಮ್ಮ ಮುಂದಣ ಸಂಸಾರದ ಮಾರ್ಗವೇ ಕೆಟ್ಟುಹೋಯಿತು. ನಮ್ಮ ಬಂಡವಾಳವು ಮುಳುಗಿತು. ಈಶ್ವರನು ನಿಮ್ಮ ಬದುಕನ್ನು ಸಂರಕ್ಷಿಸಿದನು. ಅತ್ತ ಕಡೆಯಿರುವ ಗುಣಿಯಲ್ಲಿ ಹಾಕಿರುವುದನ್ನು ಇನ್ನು ರಕ್ಷಿಸಿಕೊಳ್ಳುವುದು—ಎಂದು ನುಡಿದರು.

ಆ ಮಾತಂ ಕೇಳುವುದೂ ಭಾನುದಾಸನ ಮನಸ್ಸು ದ್ರವಿಸಿತು. ಕುದುರೆಯನ್ನು ಶ್ರೀರುಕ್ಮಿಣೀಪತಿಯೇ ಹಿಡಿದುಕೊಂಡು ನಿಂತಿರಬಹುದು—ಎಂದು ಬಗೆದು, ಈ ಪ್ರಪಂಚದ ವ್ಯವಹಾರವು ಸರ್ವಪ್ರಕಾರದಲ್ಲಿಯೂ ಕೆಟ್ಟುದು. ಇದರಲ್ಲಿ ಆತ್ಮಸುಖದ ಮಾರ್ಗವೂ ಇಲ್ಲ. ವ್ಯರ್ಥವಾಗಿ ಮೋಹಿತನಾದೆನಲ್ಲಾ! ನೀಲಮೇಘಶ್ಯಾಮನೂ ಸುಕುಮಾರನೂ ರಾಜೀವನಯನನೂ ಪೀತಾಂಬರಧಾರಿಯೂ ಆದ ಜಗಜ್ಜೀವನನು ನನಗೋಸ್ಕರ ಬ್ರಾಹ್ಮಣರೂಪವಂ ತಾಳಿ ಕುದುರೆಯಂ ಹಿಡಿದುಕೊಂಡು ಕುಳಿತಿದ್ದನಲ್ಲಾ! ಯಾವುದರಿಂದ ಪಂಢರೀನಾಥನು ದಣಿದುಕೊಂಡನೋ ಇನ್ನುಮೇಲೆ ಆಕಾರ್ಯವನ್ನು ಎಂತೂ ಮಾಡಬಾರದು—ಎಂದು ಮನದಲ್ಲಿ ಪಶ್ಚಾತ್ತಾಪವಂ ತಾಳಿ, ಸಮೀಪದಲ್ಲಿ ಇದ್ದ ವ್ಯಾಪಾರಗಾರರಂ ಕುರಿತು, ಕಳ್ಳರು ನಿಮ್ಮನ್ನು ಸುಲಿದುಕೊಂಡುಹೋದುದಕ್ಕೆ ನೀವು ಸ್ವಲ್ಪವೂ ವ್ಯಸನಪಡಲಾಗದು. ಮನಸ್ಸನ್ನು ಸ್ವಸ್ಥಮಾಡಿಕೊಳ್ಳಿರಿ—ಎಂದು ಹೇಳಿ, ಹಳ್ಳದೊಳಗಣಿಂದ ಜವಳಿಯ ಪಿಂಡಿಯನ್ನು ತೆಗೆದು ಜವಳಿಯನ್ನೂ ದ್ರವ್ಯವನ್ನೂ ಹಂಚಿಕೊಟ್ಟು ಕುದುರೆಯನ್ನು ಅವರಿಗೆ ಕೊಟ್ಟು ಅಲ್ಲಿಂದ ಹೊರಟು ಮಾನಾಪಮಾನಂಗಳಂ ಬಿಟ್ಟು ಮನೆಯಂ ಸೇರಿ ಶ್ರೀಹರಿಯ ಭಜನೆಯಂ ಮಾಡುತ್ತ ಕೀರ್ತನದಲ್ಲಿ ಭಗವದ್ಗುಣಗಳಂ ಪಾಡುತ್ತ ಕುಳಿತನು. ಯಾರನ್ನೂ ಉಪಸರ್ಪಣೆಮಾಡದೆ ಪ್ರಪಂಚದ ಚಿಂತೆಯಂ ಮನಸ್ಸಿಗೆ ಹತ್ತಿಸಿಕೊಳ್ಳದೆ ಪತ್ನೀಪುತ್ರರಿದ್ದರೂ ವಿರಕ್ತನಾಗಿ ಇದ್ದನು. ಆಷಾಢದ ಮತ್ತು ಕಾರ್ತಿಕದ ಉತ್ಸವಗಳು ಬರಲು, ತಪ್ಪದೆ ಪಂಢರಪುರಕ್ಕೆ ವಾರೆನಡೆಯುತ್ತಿದ್ದನು. ಅಲ್ಲಿ ತಾಳಮೃದಂಗಗಳೊಡನೆ ಮಳಲೊಟ್ಟನಲ್ಲಿ ಕುಣಿಯುತ್ತ ಬಗೆಬಗೆಯ ಕವಿತ್ವವಂ ಮಾಡಿ ಶ್ರೀಹರಿಯ ಗುಣಂಗಳಂ ಪಾಡುತ್ತ ಪರಮಾನಂದಭರಿತನಾಗಿದ್ದನು. ಭಾನುದಾಸನು ಕೀರ್ತನದಲ್ಲಿ ನಿಲ್ಲುವುದೂ ನೇತ್ರಗಳಿಂದ ಸ್ವಾನಂದಜಲಧಾರೆಯು ತುಂಬಿಬರುವುದು. ಆ ವಿಶ್ವಾಸವಂ ನೋಡಿ ಶ್ರೀರುಕ್ಮಿಣೀಪತಿಯು ಉಲ್ಲಾಸಪಡುತ್ತಿದ್ದನು. ದುರ್ಬುದ್ಧಿಯುಳ್ಳವನಾಗಲಿ; ಪಾಷಂಡ

ನಾಗಲಿ; ಯಾರಾಗಲಿ; ಆಕೀರ್ತನವಂ ಕೇಳಲು, ಪ್ರೇಮಳರಾಗಿ ಈ ಕೀರ್ತನವು ಬಹುರಸಭರಿತವಾದುದು; ನಿರಂತರವೂ ಕೇಳತಕ್ಕದು-ಎಂದು ನುಡಿಯುವರು. ಈ ಪ್ರಾಪಂಚಿಕವಾಯೆಯು ಸುಳ್ಳು; ದೇಹವು ಶಾಶ್ವತವಲ್ಲ-ಎಂದು ಶ್ರೋತೃಗಳು ಬರೆದು ಸರ್ವಭೂತಗಳಲ್ಲಿಯೂ ದಯೆಯಂ ಮಾಡುವರು. ಭಾನುದಾಸನು, ಇತರರು ಅನ್ನವಸ್ತ್ರಗಳಂ ಕೊಟ್ಟರೆ ತೆಗೆದುಕೊಳ್ಳುತ್ತ ಯಾರನ್ನೂ ಬಾಯಿಬಿಟ್ಟು ಕೇಳದೆ ಅಯಾಚಿತವೃತ್ತಿಯಿಂದ ಇರುತಿದ್ದನು. ಸ್ವಕೀಯರು ಪರಕೀಯರು-ಎಂಬ ವಿಕಲ್ಪವ ನೆಣಗದೆ, ಸರ್ವಭೂತಗಳಲ್ಲಿಯೂ ಸಮವಾದ ಬುದ್ಧಿಯಿಂದ ಇರುತ್ತ ಕೇವಲವೈರಾಗ್ಯಭರಿತನಾಗಿ ಹಗಲೂ ಇರುಳೂ ಶ್ರೀಹರಿಯ ಭಜನೆಯಲ್ಲಿ ನಿರತನಾಗಿದ್ದನು.

ಮುಂದಣ ಅಧ್ಯಾಯದಲ್ಲಿ ವಿಜಯನಗರದ ಮಹಾರಾಜನು ಜಗಜ್ಜೀವನನ್ನು ಕರೆದುಕೊಂಡುಹೋಗುವನೆಂಬ ಸಂಗತಿಯು ನಿರವಿಸಲ್ಪಡುವುದು. ಆ ಕಥೆಯು ರಸಭರಿತವಾದುದು. ಕೇಳುವುದೂ ಭಾವುಕರಿಗೆ ಸಂತೋಷವಾಗುವುದು. ಮಹೀಪತಿಯು ಸಾಧುಸಜ್ಜನರೆಂಬ ದೇವತೆಗಳ ಸಮೂಹದಲ್ಲಿ ಗುಣಕೀರ್ತನಂಗಳೆಂಬ ಬಿಡಿಯಹೂಗಳನ್ನು ಪುಷ್ಪಾಂಜಲಿಮಾಡಿಕೊಂಡು ನಿಂತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತೆರಡನೆಯ ಅಧ್ಯಾಯಂ ಸಂಪೂರ್ಣಂ.
ಮಂಗಳಮಸ್ತು.

ನಾಲ್ವತ್ತುಮೂರನೆಯ ಅಧ್ಯಾಯ.

ಕೇಳಿರೈ ಸಜ್ಜನರಾದ ಶ್ರೋತೃಗಳಿರಾ! ಕಲ್ಪವೃಕ್ಷದಲ್ಲಿ ಫಲಗಳಾದಂತೆ ಇಂದು ಈ ಭಕ್ತವಿಜಯದಲ್ಲಿ ಅತ್ಯಂತರಸಭರಿತವಾದ ಭಕ್ತರ ಚರಿತ್ರೆಗಳು ಪ್ರಕಟವಾದುವು. ಯಾವುದು ಕೇಳುವುದಕ್ಕೆ ದುರ್ಲಭವಾದುದೋ, ಬ್ರಹ್ಮದೇವನಿಗೂ ಯಾವುದರ ಪಾರವು ತಿಳಿಯದೋ, ವೇದಗಳಿಗೂ ಯಾವುದರ ಸತ್ತ್ವವು ತಿಳಿಯದೋ ಆ ಭಕ್ತರ ಮಹಿಮೆಯು ಸಾಮ್ಯವಿಲ್ಲದುದೆಂದು ತಿಳಿಯಬೇಕು. ಯಾರಿಗೆ ಸತ್ಕರ್ಮಗಳೇ ಪ್ರಧಾನವಾಗಿರುವುವೋ ಅವರು ಬ್ರಹ್ಮಭುವನವನ್ನು ಹೊಂದುವರು. ಯಾರು ಯಜ್ಞಗಳನ್ನು ಮಾಡುವರೋ ಅವರು ಸ್ವರ್ಗಲೋಕವಂ ಸೇರುವರು. ಯಾರು ಪಿತೃಗಳಲ್ಲಿ ಭಾವವನ್ನು ಇಡುವರೋ ಅವರು ಪಿತರರನ್ನೇ ಹೊಂದುವರು. ಯಾರು ಇತರದೇವತೋಪಾಸನೆಯಂ ಮಾಡುವರೋ ಅವರು ಅಂತ್ಯಕಾಲಕ್ಕೆ ಅವರನ್ನೇ ಹೊಂದುವರು. ಯಾರು ಪಿಶಾಚೋಪಾಸನೆಯಂ ಮಾಡುವರೋ ಆತಾಮಸಗುಣಿ

ಗಳು ದೇಹಾಂತದಲ್ಲಿ ಆರೂಪವನ್ನೇ ಪಡೆಯುವರು. ಯಾರು ಶ್ರೀಹರಿಭಕ್ತರ ಕಥೆಯಂ ಕೇಳುವರೋ ಅವರು ವೈಕುಂಠವನ್ನೇ ಪಡೆಯುವರು. ಅವರ ಸಂಕಟವನ್ನು ತಿಳಿದು ಶ್ರೀಹರಿಯು ಆಕ್ಷಣದಲ್ಲಿಯೇ ಪರಿಹರಿಸುವನು. ಅಂತ್ಯಕಾಲದಲ್ಲಿ ಚತುರ್ಭುಜಯುಕ್ತವಾದ ತನ್ನ ರೂಪವನ್ನುಂಟುಮಾಡಿ ಸಾರೂಪ್ಯವಂ ಕೊಡುವನು. ಪಂಡರನಾಥನು ಈ ಗ್ರಂಥಕ್ಕೆ ಇಂತಹ ವರವನ್ನು ದಯೆಪಾಲಿಸಿರುವನು. ಆದುದರಿಂದ ಶ್ರೋತೃಗಳು ಚಿತ್ತದಲ್ಲಿ ಆದರವನ್ನಿಟ್ಟು ಕೇಳತಕ್ಕುದು.

ಪೂರ್ವಾಧ್ಯಾಯದಲ್ಲಿ ಶ್ರೀರುಕ್ಮಿಣೀಪತಿಯು ಭಾನುದಾಸನಿಗೆ ದರ್ಶನವಂ ಕೊಟ್ಟುದರಿಂದ ಆತನು ವಿರಕ್ತನಾಗಿ ಪ್ರಪಂಚದ ವ್ಯವಹಾರಗಳಂ ಬಿಟ್ಟನೆಂಬ ಕಥೆಯಂ ಕೇಳಿದಿರಷ್ಟೆ, ಇನ್ನೊಂದು ಕಥೆಯಂ ಕೇಳಬೇಕು.

ಪಂಡರೀಕ್ಷೇತ್ರದಲ್ಲಿ ಇದ್ದ ಒಬ್ಬ ಬ್ರಾಹ್ಮಣನು ದ್ರವ್ಯದ ಆಶೆಯಂ ಹಿಡಿದು ದೇಶಾವಾರಕ್ಕೋಸ್ಕರ ಹೊರಟು ಅನೇಕಪಟ್ಟಣಗಳನ್ನು ನೋಡುತ್ತ ವಿದ್ಯಾನಗರಕ್ಕೆ ಬಂದು ಅಲ್ಲಿಯ ರಾಜನನ್ನು ಕಾಣಬೇಕೆಂದು ಕುತೂಹಲವುಳ್ಳವನಾಗಿ ಸ್ನಾನಸಂಧ್ಯಾವಂದನಾದಿನಿತ್ಯಕರ್ಮಗಳಂ ನೆರವೇರಿಸಿಕೊಂಡು ರಾಜಮಂದಿರದ ಬಳಿಗೆ ಬಂದು ಒಳಪುಗಲು ಪ್ರಯತ್ನಿಸಿದನು. ದ್ವಾರಪಾಲಕರು ಅಡ್ಡಿಮಾಡಿ ಒಂದುಕ್ಷಣ ಇಲ್ಲಿಯೇ ಕುಳಿತುಕೊಳ್ಳಿ; ಮಹಾರಾಜರಿಗೆ ತಿಳಿಯಿಸಿ ಅವರ ಅಪ್ಪಣೆಯಂ ತೆಗೆದುಕೊಂಡು ಬರುವೆವು-ಎಂದು ಹೇಳಿ ರಾಜಸನ್ನಿಧಿಯಂ ಸೇರಿ ತಿಳಿಯಿಸಿ ಆತನ ಅಪ್ಪಣೆಯಂ ಪಡೆದು ಹೊರಗೆಬಂದು ಆಬ್ರಾಹ್ಮಣನನ್ನು ಒಳಗೆ ಪ್ರವೇಶಗೊಳಿಸಿದರು.

ರಾಜನು ಆ ಬ್ರಾಹ್ಮಣನಂ ಕಂಡೊಡನೆಯೇ ಸಾಷ್ಟಾಂಗನಮಸ್ಕಾರವಂ ಮಾಡಿ ನಾನು ಧನ್ಯನಾದೆನು.ಎಂದು ಸಂತೋಷದಿಂದ ಪೂಜೆಯಂ ಮಾಡಿ ಅವನಂ ಕುರಿತು— ಪೂಜ್ಯರೆ! ಎಲ್ಲಿಂದಬಂದಿರಿ? ನಿಮ್ಮ ಅಪೇಕ್ಷೆಯೇನಿರುವುದು? ದಯೆಯಿಟ್ಟು ಹೇಳಬೇಕು-ಎಂದು ಪ್ರಾರ್ಥಿಸಲು, ಆಬ್ರಾಹ್ಮಣನು, ನಾನು ಪಂಡರೀಕ್ಷೇತ್ರದಲ್ಲಿ ಇರುವನು. ನಿಮ್ಮ ಅಸಾಧಾರಣವಾದ ಔದಾರ್ಯವಂ ಕೇಳಿ ದೇಶಾವಾರವಂ ತೆಗೆದುಕೊಂಡು ಹೋಗುವುದಕ್ಕೆ ಬಂದಿರುವೆನು—ಎಂದು ನುಡಿದನು.

ರಾಜನು ಆಮಾತಂ ಕೇಳಿ ಸಂತೋಷಗೊಂಡು—ಪೂಜ್ಯರೆ! ನೀವು ನಿಮ್ಮ ಮನಸ್ಸನ್ನು ಸ್ವಸ್ಥಮಾಡಿಕೊಂಡು ಕುಳಿತುಕೊಳ್ಳಬೇಕು. ನಾನು ದೇವಿಯ ಪೂಜೆಯಂ ಮಾಡಿಕೊಂಡು ಬರುವೆನು. ನೀವೂ ಬಂದು ಸುವರ್ಣಕಾಂತಿಯುಕ್ತವಾದ ದೇವಾಲಯವಂ ನೋಡಬೇಕು. ನಾನು ಪೂಜೆಯಂ ಮಾಡಿ ಬಳಿಕ ನಿಮಗೆ ತುಳಸೀದಳವಂ ಸಮರ್ಪಿಸುವೆನು—ಎಂದನು. ಆಮಾತಿಗೆ ಬ್ರಾಹ್ಮಣನು ಸಂತೋಷಪಟ್ಟನು. ಬಳಿಕ ರಾಜನು ದೇವಿಯ ದರ್ಶನಕ್ಕೆ ಹೋಗುವುದೂ ಬ್ರಾಹ್ಮಣನೂ ಆತನ ಸಂಗಡವೇ ಹೋದನು. ದೇವಾಲಯದ ಸುತ್ತಲೂ ಹೂವಿನತೋಟಗಳನ್ನು ಮಾಡಿಸಿ ಮಧ್ಯದಲ್ಲಿ ದೇವತೆಯಂ ಪ್ರತಿಷ್ಠೆಮಾಡಿಸಿದ್ದನು. ಮಹೋತ್ಸವಾರಂಭ

ದಿಂದ ನಾನಾವಿಧವಾದ್ಯಗಳು ಘೋರೆಂದು ಮೊಳಗುತ್ತಿರಲು, ಬ್ರಾಹ್ಮಣರು ಮಂತ್ರಂಗಳಂ ಉದ್ಘೋಷಿಸುತ್ತಿರಲು, ರಾಜನು ಪೂಜೆಯಂ ಆರಂಭಿಸಿದನು. ವಸ್ತ್ರಭೂಷಣಂಗಳಿಂದಲೂ ದಿವ್ಯರತ್ನಗಳಿಂದಲೂ ದೇವಿಗೆ ಅಲಂಕಾರವಂ ಮಾಡಿ ಚಂದನವಂ ಸಮರ್ಪಿಸಿ ಕೊರಲಲ್ಲಿ ಪುಷ್ಪಹಾರಗಳಂ ಹಾಕಿ ಧೂಪದೀಪನೈವೇದ್ಯಗಳಂ ಭಕ್ತಿಯಿಂದ ಸಮರ್ಪಿಸಿ ಪಂಚಾರತಿಯನ್ನು ಬೆಳಗಿ ಸಾಷ್ಟಾಂಗನಮಸ್ಕಾರವಂ ಮಾಡಿ ದೇವಿಯ ಪಾದಗಳಮೇಲೆ ಶಿರಸ್ಸನಿರಿಸಿ ಪ್ರಸಾದವಂ ಸರ್ವರಿಗೂ ಹಂಚಿ ಬಳಿಕ ತಾನೂ ಸ್ವಸ್ಥಮನಸ್ಕನಾಗಿ ಕುಳಿತು ಪಂಡರಪುರದ ಬ್ರಾಹ್ಮಣನ ಸಂಗಡ-ಈ ರಾಸಾಯಿಯಂತಹ ದೇವತೆಯು ಪೃಥ್ವಿಯಲ್ಲಿ ಎಲ್ಲಿ ಹುಡುಕಿದರೂ ಇರಲಾರದು. ನಾವು ಎಲ್ಲಿಯೂ ಕಂಡುದಿಲ್ಲ; ಕೇಳಿಯುದಿಲ್ಲ. ಈ ಸುಂದರವಾದ ದೇವಾಲಯವಂ ನೋಡಿ. ಇದಕ್ಕೆ ಬೆಳ್ಳಿಯನೀರು ಬಳಿದಿರುವುದು. ಸುತ್ತಲೂ ಹೂವಿನ ತೋಟಗಳಂ ಮಾಡಿಸಿ ನಾನೇ ಪುಷ್ಪಗಳಂ ಕೊಯ್ದು ಪೂಜಿಸುತ್ತಿರುವೆನು. ಈ ವಿದ್ಯಾನಗರದ ಅಶೇಷಜನರೂ ಸಂದರ್ಶನಕ್ಕೆ ಬರುತಿರುವರು. ಸೇವೆಯು ಸರಿಯಾಗಿ ನಡೆಯುವುದಕ್ಕೆ ಪ್ರಧಾನರಾದ ತಕ್ಕವರನ್ನು ನಿಯಮಿಸಿರುವೆನು. ನೀವು ಪಂಡರಪುರದಲ್ಲಿಯೇ ಇರುವವರಲ್ಲವೇ ? ಈ ದೇವಿಗೆ ನಡೆಯುವಂತೆ ಅಲ್ಲಿ ಪಾಂಡುರಂಗದೇವರಿಗೆ ಉಪಚಾರಂಗಳು ನಡೆಯುತ್ತಿರಲಾರವು. ಈ ಮಹಿಮೆಯು ಅಲ್ಲಿರಲಾರದು. ಅಲ್ಲಿ ಬಡಬ್ರಾಹ್ಮಣನು ಪೂಜೆಯಂ ಮಾಡುವನು. ಇಂತಹ ಅಮೂಲ್ಯವಾದ ವಸ್ತ್ರಾಭರಣಗಳು ಅಲ್ಲಿ ಎಲ್ಲಿ ಬಂದಾವು ?—ಎಂದು ನುಡಿಯಲು, ಆರಾಮರಾಜನ ಮಾತಂ ಕೇಳಿ ಆ ಬ್ರಾಹ್ಮಣನು ಮನದಲ್ಲಿ ಕೋಪವಂ ತಾಳಿ—ಎಲೆ ರಾಜನೆ! ನೀನು ಪಂಡರಪುರೀಕ್ಷೇತ್ರವನ್ನೇ ಕಣ್ಣಿಂದ ನೋಡದೆ ನಿನ್ನದನ್ನೇ ದೊಡ್ಡದೆಂದು ಅಭಿಮಾನದಿಂದ ನುಡಿಯುವೆ. ದೇವಾಲಯಕ್ಕೆ ಬೆಳ್ಳಿಯ ನೀರನ್ನು ಬಳಿದಿರುವುದೇ ಮಹಾಭೂಷಣವೆಂದು ಹೇಳಿಕೊಳ್ಳುವೆ. ನಮ್ಮ ಕ್ಷೇತ್ರವನ್ನು ಚಿನ್ನದ ಕುಂದಣದಿಂದ ವಿಶ್ವಕರ್ಮನು ನಿರ್ಮಿಸಿರುವನು. ಅಲ್ಲಿಯ ಮರಗಳೆಲ್ಲವೂ ಕಲ್ಪವೃಕ್ಷಗಳು. ಕಲ್ಲುಗಳೆಲ್ಲವೂ ಪರಿಸಗಳು ಚಿಂತಾಮಣಿಗಳೂ ಆಗಿರುವುವು. ನಾಲ್ಕುಕಡೆಯಲ್ಲಿಯೂ ದಿವ್ಯಪತಾಕೆಗಳು ಮಿಂಚಿನಂತೆ ಹೊಳೆಯುತ್ತಿರುವುವು. ಅಲ್ಲಿಯ ಧೇನುಗಳೆಲ್ಲವೂ ಕಾಮಧೇನುಗಳು. ಬೃಂದಾವನಗಳು ರತ್ನಖಚಿತವಾಗಿರುವುವು. ಪ್ರೇಮಳಭಕ್ತರು ಸರ್ವಕಾಲದಲ್ಲಿಯೂ ಉಲ್ಲಾಸದಿಂದ ಕೀರ್ತನವಂ ಮಾಡುತಿರುವರು. ಮತ್ತು ಸಕಲತೀರ್ಥಗಳಿಗೂ ಸ್ವಾಮಿನಿಯಾದ ಚಂದ್ರಭಾಗೆಯು ಅಮೃತವಾಹಿನಿಯಾಗಿರುವಳು. ಆಕೆಯ ದರ್ಶನಮಾತ್ರದಿಂದಲೇ ಪ್ರಾಣಿಗಳು ಮುಕ್ತರಾಗಿ ವೈಕುಂಠವನ್ನೇ ಹೊಂದುವರು. ರಂಭೆ ತಿಲೋತ್ತಮೆ ಮುಂತಾದವರು ಬಂದು ಗರುಡಸ್ತಂಭದ ಬಳಿಯಲ್ಲಿ ನರ್ತನವಂ ಮಾಡುತಿರುವರು. ಗಂಧರ್ವರು ಬಂದು ಬಾಗಿಲಲ್ಲಿ ಗಾಯನವಂ ಮಾಡುತಿರುವರು. ಆನಾದವು ಆಕಾಶದಲ್ಲಿ ತುಂಬಿರುವುದು. ದೇವಾದಿದೇವನಾದ ಶ್ರೀರುಕ್ಮಿಣೀಪತಿಯು

ಕ್ಷೀರಸಾಗರವಾಸಿಯಾದವನಾದರೂ ಭಕ್ತನಾದ ಪುಂಡರೀಕನಿಗೋಸ್ಕರ ಆಸ್ಥಳಕ್ಕೆ ಬಂದು ಎರಡುಕೈಗಳನ್ನೂ ಕಟಿಯಲ್ಲಿ ಇರಿಸಿಕೊಂಡು ನಿಂತು ಭಕ್ತರಿಗೆ ಸಂಕಟ ಪ್ರೊದವಿದರೆ ಆಕ್ಷಣದಲ್ಲಿಯೇ ಪರಿಹರಿಸುವನು. ಆಸ್ವರೂಪವಂ ನೋಡಿ ಲಕ್ಷ್ಮಿಯು ಲಜ್ಜಿತೆಯಾಗಿರುವಳು. ಆತನ ಕಿರೀಟದ ಕಾಂತಿಯಮುಂದೆ ಕೋಟಿಸೂರ್ಯರ ಕಾಂತಿಯೂ ಲೋಪಿಸಿಹೋಗುವುದು. ಶ್ಯಾಮಲನೂ ಸುಕುಮಾರನೂ ಆದ ಶಾರ್ಙ್ಗಧರನು ಪೀತಾಂಬರವನ್ನೂ ಮಕರಾಕಾರವಾದ ದಿವ್ಯಕುಂಡಲಗಳನ್ನೂ ಧರಿಸಿ ಶ್ರೀಮುಖದಿಂದ ಶೋಭಿಸುತಿರುವನು. ಇಂತಹ ರೂಪವಂ ಕಂಡು ಇಂದ್ರಾದಿತ್ರಯಸ್ತ್ರಿಂಶತ್ಕೋಟಿದೇವತೆಗಳೂ ಕೈಗಳಂ ಮುಗಿದುಕೊಂಡು ನಿಂತು ಸರ್ವಕಾಲದಲ್ಲಿಯೂ ಸ್ತೋತ್ರವಂ ಮಾಡುತಿರುವರು. ಯಾವನ ನಾಮವನ್ನು ಕೈಲಾಸಪತಿಯು ಹಗಲಿರುಳೂ ಏಕಾಂತದಲ್ಲಿ ಜಪಿಸುತಿರುವನೋ, ಶ್ರುತಿಶಾಸ್ತ್ರಗಳು ಯಾವನ ಮಹಿಮೆಯನ್ನು ವರ್ಣಿಸುತಿರುವುವೋ, ಯಾವನ ಪಾರವು ಬ್ರಹ್ಮದೇವನಿಗೂ ತಿಳಿಯಲಸದಳವೋ, ಆದಿಶೇಷನು ಸಹಸ್ರಮುಖದಿಂದ ಯಾವನನ್ನು ಸ್ತುತಿಯಿಸಲಾರಂಭಿಸಿ ನಾಲಗೆಯು ಸೀಳಿಹೋಗಲು, ಸ್ವಸ್ಥನಾಗಿ ನಿಂತನೋ, ಆ ಪಾಂಡುರಂಗನಂತಹ ಮಹಾಮಹಿಮನಾದ ದೇವನೂ ಪಂಡರಪುರದಂತಹ ಕ್ಷೇತ್ರವೂ ಚಂದ್ರಭಾಗೆಯಂತಹ ತೀರ್ಥವೂ ಮೂರುಲೋಕದಲ್ಲಿಯೂ ಇಲ್ಲ. ಇದನ್ನು ಕಣ್ಣಿಂದ ಕಾಣದೆಯೇ ನಿನ್ನದನ್ನೇ ಭೂಷಣವೆಂದು ವ್ಯರ್ಥವಾಗಿ ಹೇಳುತಿರುವೆ. ನಿನ್ನ ಕುಲದೇವತೆಯಾದ ಈ ರಾಸಾಯಿಯು ನಮ್ಮ ಮನಸ್ಸಿಗೆ ಒಪ್ಪಲಿಲ್ಲ. ಈಕೆ ಪಂಡರಪುರಕ್ಕೆ ನಿತ್ಯವೂ ಬಂದು ಸಂಮಾರ್ಜನೆಯಂ ಮಾಡುತಿರುವಳು-ಎಂದು ನುಡಿದನು.

ರಾಜನು ಕೋಪಗೊಂಡವನಾಗಿ ನನ್ನ ಆರಾಧ್ಯದೈವವನ್ನು ನನ್ನ ಇದುರಿಗೆ ಇವನು ನಿಂದಿಸಿ ವಿಚಾರವಂ ಮಾಡದೆ ತನ್ನ ಪ್ರಶಂಸೆಯನ್ನೇ ಮಾಡಿಕೊಳ್ಳುವನು. ಇವನ ಜೀವವನ್ನೇ ತೆಗೆಯಿಸಬೇಕು; ಆದರೆ ಇದರಿಂದ ಬ್ರಹ್ಮಹತ್ಯಾಪಾತಕವು ಪ್ರಾಪ್ತವಾಗುವ ಕಾರಣ ತಕ್ಕಂತೆ ಶಿಕ್ಷೆಯಂ ಮಾಡಿಸಿ ಊರಿಂದ ಹೊರಗೆ ಹೊರಡಿಸಿಬಿಡಬೇಕೆಂದು ಆಲೋಚನೆಯಂ ಮಾಡಿ, ಬ್ರಾಹ್ಮಣನನ್ನು ಕುರಿತು—ನೀನು ಅಸತ್ಯವಾದ ಮಾತನಾಡಿದೆ. ಪಂಡರಪುರವು ಸುವರ್ಣಮಯವಾದುದೆಂದು ಎಂದಿಗೂ ಕೇಳಿದುದಿಲ್ಲ. ರಾಸಾಯಿಯು ಮೂಲಪೀಠನಿವಾಸಿನಿಯು, ಈಕೆಯನ್ನು ದಾಸಿಯೆಂದು ನುಡಿಯುವೆ. ಆದುದರಿಂದ ನಿನಗೆ ಶಿಕ್ಷೆಯಂ ಮಾಡಿಸಿ ಅರಣ್ಯಕ್ಕೆ ಸಾಗಿಸಿಬಿಡುವೆನು—ಎಂದನು. ಬಳಿಕ ಬ್ರಾಹ್ಮಣನು ರಾಜನಂ ಕುರಿತು—ನಾನು ಯಥಾರ್ಥವಾಗಿ ನುಡಿದಿರುವೆನು. ನೀನು ಪಂಡರಪುರಕ್ಕೆ ಬಂದು ರುಕ್ಮಿಣೀಪತಿಯನ್ನು ನೋಡಬೇಕು. ನಾನು ಹೇಳಿದುದಕ್ಕಿಂತಲೂ ಮಹಿಮೆಯು ಕೋಟಿಗುಣ ಅಧಿಕವಾಗಿ ನಿನಗೆ ಕಾಣದೆ ಹೋದರೆ ನನ್ನನ್ನು ಶಿಕ್ಷಿಸಬಹುದು. ಎಲ್ಲಿಯವರೆಗೆ ಆದೇವನನ್ನು ಕಾಣೆಯೋ ಅಲ್ಲಿಯವರೆಗೆ ಈ ರಾಸಾಯಿಯು ದೊಡ್ಡವಳು. ಸೂರ್ಯನು ಉದಯಿಸಿದ ಬಳಿಕ

ದೀಪದ ಕಾಂತಿಯು ಶೋಭಿಸುವುದೇ ? ಐರಾವತವನ್ನು ನೋಡುವವರೆಗೂ ಇತರವಾದ ಆನೆಗಳು ದೊಡ್ಡವುಗಳಾಗಿ ತೋರುವುವು. ಪೂರ್ಣಿಮಾಚಂದ್ರನು ಉದಯಿಸದಿದ್ದರೆ ನಕ್ಷತ್ರಗಳು ಕಾಂತಿಯುಳ್ಳವುಗಳಾಗಿ ತೋರುವುವು. ಸುಧಾರಸವು ಕೈಸೇರದೆ ಇರಲು, ಇತರವೈದ್ಯರು ಶ್ಲಾಘನೀಯರಾಗಿರುವರು. ಕ್ಷೀರಸಮುದ್ರವನ್ನು ಕಾಣದಿದ್ದರೆ ನದಿಗಳು ಸಾಮ್ಯವೇ ಇಲ್ಲವುಗಳಾಗಿ ತೋರುವುವು. ಕಲ್ಪವೃಕ್ಷಗಳ ತೋಪನ್ನು ಕಾಣುವವರೆಗೂ ಮಾವಿನ ತೋಪು ಪ್ರೀತಿವಿಷಯವಾಗಿರುವುದು. ವೇದಾಂತವಿಚಾರವಂ ಕೇಳದೆಇರಲು ಪಾಷಂಡವಾದವು ಅಧಿಕವಾಗಿ ತೋರುವುದು. ಸುವರ್ಣದ ಪರ್ವತವನ್ನು ಕಾಣದಿದ್ದರೆ ಹಿತ್ತಾಳೆಯೇ ದೊಡ್ಡದಾಗಿ ಕಾಣುವುದು. ಅಂತು ಪಾಂಡುರಂಗನನ್ನು ಕಾಣುವ ಪರ್ಯಂತವೇ ಇತರದೈವತವು ಪ್ರಿಯವಾಗಿ ತೋರುವುದು-ಎಂದನು.

ಆಮಾತಂ ಕೇಳಿ ರಾಜನು—ಈಗ ಪಂಡರಪುರಕ್ಕೆ ಬರುವೆನು. ನೀನು ಹೇಳಿದ ಪ್ರಕಾರದಿಂದಲೇ ದಿಟವಾಗಿ ಕಂಡರೆ ಸರಿ; ಇಲ್ಲದೆ ನೀನು ಅಸತ್ಯವಾದ ಮಾತನ್ನು ಆಡಿದವನಾಗಿದ್ದರೆ ತಪ್ಪದೆ ಶಿಕ್ಷೆಯಂ ಮಾಡಿಸುವೆನು-ಎಂದು ನುಡಿದು, ಪ್ರಧಾನನಂ ಕರೆದು ನಾನು ಬಂದೆಡೆಗೆ ಹೊರಡಬೇಕೆಂದು ಹೇಳಿ, ಆಕ್ಷಣವೇ ಸಿದ್ಧವಾದ ರಥದಲ್ಲಿ ಕುಳಿತುಕೊಂಡು ಗಜತುರಗಾದಿಸೈನ್ಯದೊಡನೆ ಪಾಂಡುರಂಗನ ದರ್ಶನಕ್ಕೆ ಹೊರಟನು. ಸಂಗಡ ನಾನಾವಿಧವಾದ್ಯಗಳು ಮೊಳಗುತಿದ್ದುವು. ಆಬ್ರಾಹ್ಮಣನೂ ರಾಜನ ಸಂಗಡವೇ ಹೊರಟು ನಡೆಯುತ್ತ—ಶ್ರೀರುಕ್ಮಿಣೀಪತಿಯು ನನ್ನ ಮಾನವಂ ಸಂರಕ್ಷಿಸುವನೋ? ದೀನನಾದ ನನ್ನನ್ನು ಉಪೇಕ್ಷಿಸುವನೋ? ಕಾಣೆ. ನಾನು ಹೇಳಿದಂತೆ ಕಾಣದಿದ್ದರೆ ಈತನು ನನ್ನಂ ಶಿಕ್ಷಿಸುವುದರಲ್ಲಿ ಸಂದೇಹವಿಲ್ಲ—ಎಂದು ಮನದಲ್ಲಿ ತಲ್ಲಣಿಸುತ್ತ ಶ್ರೀಪಾಂಡುರಂಗಮೂರ್ತಿಯನ್ನು ಧ್ಯಾನಿಸುತ್ತ—ಎಲೆ ರುಕ್ಮಿಣೀಪತಿಯೇ! ಭಕ್ತವತ್ಸಲನೇ! ಈ ಸಂಕಟದಲ್ಲಿ ನನ್ನಂ ಸಂರಕ್ಷಿಸಬೇಕು. ನಾನು ಅನಾಥನು; ದೀನನು. ನಾನು ನಿನ್ನ ಬ್ರಾಹ್ಮಣನು. ದೇಶಾಚಾರಕ್ಕೋಸ್ಕರ ಹೊರಟು ನಿನ್ನ ಹೆಸರನ್ನು ಹೇಳಿಕೊಂಡು ಕುಟುಂಬಪೋಷಣೆಯಂ ಮಾಡುತ್ತಿದ್ದೆನು. ದೇವಾದಿದೇವನೆ! ನಿನ್ನ ಅದ್ಭುತವಾದ ಕೀರ್ತಿಯನ್ನು ಪೂರ್ವಿಕರಾದ ಸಂತರು ಎಂತು ಹೇಳುತಿದ್ದರೋ ಈಗ ನಾನು ಅಂತೆ ಹೇಳಿರುವೆನು; ಆದರೆ ರಾಜನಿಗೆ ಯಥಾರ್ಥವು ತೋರದು. ಈತನ ಕುಲದೇವತೆಯನ್ನು ನಿಂದಿಸಿದುದರಿಂದ ಸಿಟ್ಟುಗೊಂಡು ಪರೀಕ್ಷೆಗೋಸ್ಕರ ಹೊರಟುಬಂದಿರುವನು. ಪಂಡರೀನಾಥನೇ! ಪಂಡರಪುರವು ಎಂತಿರುವುದೋ ನಾನು ಅಂತೆ ಹೇಳಿರುವೆನು. ಕಲಿಯುಗದಲ್ಲಿ ಜನರಿಗೆ ಗೋಡೆಗಳೆಲ್ಲವೂ ಮಣ್ಣಿನವಾಗಿಯೇ ಕಾಣುವುವು. ಹಿರಿಯರ ಕಾಲದಲ್ಲಿ ಹೂಳಿಟ್ಟ ನಿಕ್ಷೇಪವು ಅದೃಷ್ಟಹೀನನಿಗೆ ಇಜ್ಜಲಾಗಿ ಎಂತು ಕಾಣುವುದೋ ಅಂತು ಪಂಡರಪುರಿಯು ಸುವರ್ಣಮಯವಾದುದಾದರೂ ವಿಕಲ್ಪದಿಂದ ಕಾಣಲಾಗದು. ನಾನು ಹೇಳಿದಂತೆ ಈಗ ಕಾಣದಿದ

ನನ್ನನ್ನು ಆತನು ನಿಂದಿಸುವನು. ನಾನು ನಿನ್ನ ಚರಣಾರವಿಂದದಲ್ಲಿ ಪ್ರಾಣವನ್ನು ಅರ್ಪಿಸಿಬಿಡುವೆನು. ನಂತರ ವಚನವು ಅಸತ್ಯವಾಗಿಹೋಗುವುದು. ಈ ಪಂಡರಿಯ ಮಾಹಾತ್ಮ್ಯೆಯುಂ ಮುಂದೆ ಸಜ್ಜನರು ಯಾರಾದರೂ ಕೇಳಿ ವಿಶ್ವಾಸವನ್ನೇ ಮಾಡದಂ ತಾಗುವುದು. ಅನಾಥನಾಥನೇ! ರುಕ್ಮಿಣೀರಮಣನೇ! ಈ ಸಮಯದಲ್ಲಿ ನನಗೆ ನೀನು ಪ್ರಸನ್ನನಾಗಬೇಕು-ಎಂದು ಸ್ತುತಿಯಿಸಲು, ಜಗದುದ್ಧಾರನಾದ ಸ್ವಾಮಿಯು ಆತನ ಕರುಣವಚನವಂ ಕೇಳಿ ಕನಿಕರಗೊಂಡು-ನನ್ನ ಕೀರ್ತಿಯನ್ನು ಹೊಗಳಿದುದರಿಂದ ಈ ಬ್ರಾಹ್ಮಣನಿಗೆ ಅವಮಾನವುಂಟಾಗುವುದಾದರೆ ನನಗೆ ಅಪಕೀರ್ತಿಯುಂಟಾಗದೆ ಇರದು; ಆದುದರಿಂದ ಈತನು ಎಂತು ಹೇಳಿರುವನೋ ಅಂತು ತೋರಬೇಕಾಯಿತು-ಎಂದು ಆಲೋಚಿಸಿ ರುಕ್ಮಿಣಿಯಂ ಕುರಿತು—ವಿದ್ಯಾನಗರದ ರಾಜನು ನಮ್ಮ ದರ್ಶನಕ್ಕೋಸ್ಕರ ಬರುತ್ತಿರುವನು. ಪೂರ್ವದಲ್ಲಿ ದ್ವಾರಕಾಪುರಿಯು ಯಾವಪ್ರಕಾರವಿದ್ದಿತೋ ಅದಕ್ಕಿಂತಲೂ ಅತಿಶಯಿತವಾಗಿರುವಂತೆ ಈ ಪಂಡರಪುರವನ್ನು ಆತನಿಗೆ ಒಂದುಕ್ಷಣ ತೋರಿಸಿ ಆತನ ಸಂಶಯವಂ ಪರಿಹರಿಸಬೇಕು; ಇಲ್ಲದಿದ್ದರೆ ನನ್ನನ್ನು ನಂಬಿದ ಬ್ರಾಹ್ಮಣನಿಗೆ ಶಿಕ್ಷೆಯುಂಟಾದೀತು; ಬಳಿಕ ಆತನು ತನ್ನ ಪ್ರಾಣವನ್ನು ನನಗೆ ಒಪ್ಪಿಸಾನು; ನನ್ನ ಬಿರುದಿಗೆ ಹಾನಿಯುಂಟಾದೀತು; ಸಾಧುಸಜ್ಜನರೆಲ್ಲರೂ ನಕ್ಕಾರು—ಎಂದು ನುಡಿದು, ವೈಕುಂಠದ ರಚನೆಯನ್ನೇ ಈಕ್ಷಣ ಇಲ್ಲಿ ಉಂಟುಮಾಡಿ ರಾಜನಿಗೆ ಅದ್ಭುತವಂ ತೋರಿಸುವೆನು-ಎಂದು ಮನದಲ್ಲಿ ಆಲೋಚಿಸುವಾಗ ಆಕ್ಷಣದಲ್ಲಿ ಅದೇಪ್ರಕಾರವಾಯಿತು. ಮಾಯಾಲಾಘವಿಯಾದ ಆ ಜಗಜ್ಜೀವನನು ಭಕ್ತರ ಮಹಿಮೆಯಂ ಬೆಳಗುವನು.

ಇತ್ತಲು ವಿದ್ಯಾನಗರದ ರಾಮರಾಜನಿಗೆ ಪಂಡರಪುರವು ಸಮೀಪವಾಗಲು, ಬ್ರಾಹ್ಮಣನು ಭಯಪಟ್ಟು ರುಕ್ಮಿಣೀಪತಿಯಂ ಸ್ತುತಿಯಿಸುತಿದ್ದನು. ರಾಜನು ಆಬ್ರಾಹ್ಮಣನಂ ಸಮೀಪಕ್ಕೆ ಕರೆದು ಈಗ ನನ್ನ ಮನದ ಸಂಶಯವು ಪರಿಹಾರವಂ ಹೊಂದದಿದ್ದರೆ ನಿನ್ನನ್ನು ಅವಮಾನಗೊಳಿಸದೆ ಬಿಡೆನು—ಎಂದು ನುಡಿದು, ಆನೆಯ ಮೇಲೆ ಅಂಬಾರಿಯಂ ಇಡಿಸಿ ಅದರಲ್ಲಿ ಕುಳಿತುಕೊಂಡು ಪಂಡರಪುರವಂ ಸುತ್ತಲೂ ನೋಡುತ ಬಂದನು. ದೇವಾಲಯದ ಗೋಪುರವೂ ಕಲಶಗಳೂ ಪ್ರಾಕಾರವೂ ಮನೆಗಳೂ ಸುವರ್ಣಮಯವಾಗಿ ದೇದೀಪ್ಯಮಾನವಾಗಿ ಕಾಣಬರಲು, ರಾಯನು ಮನದಲ್ಲಿ ವಿಸ್ಮಿತನಾಗಿ ಬ್ರಾಹ್ಮಣನು ನನ್ನಸಂಗಡ ಯಾವಪ್ರಕಾರದಿಂದ ಹೇಳಿದನೋ ಪಂಡರಪುರವು ಅದೇಪ್ರಕಾರದಲ್ಲಿ ಶೋಭಿಸುತ್ತಿರುವುದು—ಎಂದು ಬಗೆದು ಚಿತ್ತದಲ್ಲಿ ಅನುತಾಪಗೊಂಡು ಕೆಳಗೆ ಇಳಿದು ಆ ಬ್ರಾಹ್ಮಣನಿಗೆ ಸಾಷ್ಟಾಂಗನಮಸ್ಕಾರವಂಮಾಡಿ ಆತನಂ ಕುರಿತು; ಪೂಜ್ಯರೇ! ನೀವು ಎಂತು ನಿರೂಪಿಸಿದಿರೋ ಅಂತು ಕಾಣುವುದು. ಇದನ್ನು ನಾನು ಅರಿಯದೆ ವೃಥಾಭಿಮಾನವನ್ನೂ ವಿಕಲ್ಪವನ್ನೂ ಹಿಡಿದು ಇದ್ದೆನು—ಎಂದು ನುಡಿದು ಬಳಿಕ ಮನಸ್ಸನ್ನು ಶುದ್ಧಮಾಡಿಕೊಂಡು ಕಾಲುನಡೆಯಿಂದಲೇ

ಹೊರಟನು. ಅದಂ ಕಂಡು ಬ್ರಾಹ್ಮಣನು ಆಶ್ಚರ್ಯಗೊಂಡು ನನಗೆ ದೇವನು ಪ್ರಸನ್ನನಾದನೆಂದು ತಿಳಿದು ಸಂತೋಷಯುಕ್ತನಾಗಿ, ಭಕ್ತಜನಶಿರೋಮಣಿಯಾದವನು ಪುಂಡರೀಕನೊಬ್ಬನೇ ಸರಿ. ಶ್ರೀಕೃಷ್ಣನು ಆತನನ್ನು ನೋಡುವುದಕ್ಕೆ ದ್ವಾರಕೆಯಿಂದ ಬಂದಿರುವನು. ಸಕಲತೀರ್ಥಂಗಳಲ್ಲಿ ಗಂಗೆಯೇ ಶ್ರೇಷ್ಠಯಾದವಳು. ಆಕೆಗಿಂತಲೂ ಚಂದ್ರಭಾಗೆ ಹೆಚ್ಚು. ದರ್ಶನಮಾತ್ರದಿಂದಲೇ ಜಗತ್ತೆಲ್ಲವನ್ನೂ ಪಾವನವನ್ನಾಗಿ ಮಾಡುವಳು. ಅಭಿಮಾನವನ್ನು ಹತ್ತಲೀಯಳು. ಮಧುರೆಗೆ ಗೋಕುಲ ಬೃಂದಾವನ ಮುಂತಾದ ಕ್ಷೇತ್ರಗಳಲ್ಲಿ ಶ್ರೀಹರಿಯು ವಿಹರಿಸುತ್ತಿರುವನು. ಭಕ್ತರಿಗೋಸ್ಕರ ದ್ವಾರಕೆಯಲ್ಲಿಯೂ ಇರುವನು. ಆದರೂ ಈ ಕ್ಷೇತ್ರದ ಮಹಿಮೆಯು ಅತ್ಯದ್ಭುತವಾಗಿ ಕಾಣುವುದು-ಎಂದು ಮೆಚ್ಚಿ ನಿರ್ಲಜ್ಜನಾಗಿ ಪಾಡುತಿದ್ದನು.

ಬಳಿಕ ರಾಜನು ಪಂಡರಪುರದೆಲ್ಲೆಯಂ ತುಳಿಯುವುದೂ ಕಲ್ಪವೃಕ್ಷಗಳ ತೋಪುಗಳೂ ಚಿಂತಾಮಣಿಗಳೂ ಪರಿಸಗಳೂ ಕಾಮಧೇನುವಿಗೆ ಸಮಾನವಾದ ಹಸುಗಳೂ ಗೋಚರಗಳಾದುವು. ಇದನೆಲ್ಲವನ್ನೂ ನೋಡಿ ವಿಸ್ಮಿತನಾಗಿ ಆ ಬ್ರಾಹ್ಮಣನ ಕೈಯಂ ಹಿಡಿದುಕೊಂಡು ಹೊರಟು ಪ್ರಕಾಶಮಾನವಾದ ಪಂಡರಪುರದ ಎಲ್ಲಾ ಭಾಗಗಳನ್ನೂ ನೋಡುತ್ತ ನೇತ್ರಾನಂದವಂ ಪಡೆದನು. ಅಲ್ಲಿ ಹಂಸಗಳೂ ನವಿಲುಗಳೂ ವೃಕ್ಷಗಳಲ್ಲಿ ಕುಳಿತು ಸ್ವಚ್ಛಂದದಿಂದ ಮಧುರವಾದ ದನಿಯಂ ಗೈಯುತಿದ್ದುವು. ಅಲ್ಲಲ್ಲಿ ದೇವಾಂಗನೆಯರು ಸಭೆಯಂ ಮಾಡಿ ನೃತ್ಯವಂ ಮಾಡುತಿದ್ದರು. ಬ್ರಾಹ್ಮಣರು ತಪ್ರೋನುಷ್ಠಾನಗಳಲ್ಲಿ ನಿರತರಾಗಿ ವೇದಾಧ್ಯಯನವಂ ಮಾಡುತಿದ್ದರು. ಭಕ್ತಜನಂಗಳು ವೀಣೆಮದ್ದಲೆಗಳಂ ತೆಗೆದುಕೊಂಡು ಆನಂದದಿಂದ ಕೀರ್ತನೆಯಂ ಮಾಡುತಿದ್ದರು. ಸಾಧುಗಳು ಅಲ್ಲಲ್ಲಿ ಆತ್ಮವಿಚಾರವಂ ಮಾಡುತ್ತ ಆದರ ಅನುಭವದಲ್ಲಿ ಲೀನರಾಗಿ ಒಬ್ಬರಿಗೊಬ್ಬರು ಆಲಿಂಗನವಂ ಮಾಡಿಕೊಳುತಿದ್ದರು. ಮುಖ್ಯಂಗಳಾದ ಅಷ್ಟೋತ್ತರಶತತೀರ್ಥಗಳು ಮೂರ್ತಿವೆತ್ತು ಚಂದ್ರಭಾಗೆಯಲ್ಲಿ ಸ್ನಾನವಂ ಮಾಡಿ ಪಾವನಗಳಾಗುತಿದ್ದುವು. ಪಟ್ಟಣದ ಜನಂಗಳು ಚಿನ್ನದ ಬೃಂದಾವನಂಗಳಂ ಮಾಡಿಕೊಂಡು ದಿವ್ಯವಸ್ತ್ರಾಭರಣಂಗಳಂ ಧರಿಸಿಕೊಂಡು ಪೂಜೆಯಂ ಮಾಡುತಿದ್ದರು. ಇದನೆಲ್ಲವನ್ನೂ ಕಂಡು ರಾಜನು ಪರಮಾನಂದಭರಿತನಾಗಿ ಭೀಮರಥಿಯಲ್ಲಿ ಸ್ನಾನವಂ ಮಾಡಿ ದೇವರ ದರ್ಶನಕ್ಕೆ ಹೊರಟನು. ದೇವರ ಸನ್ನಿಧಿಯಲ್ಲಿ ಇಂದ್ರಾದಿದೇವತೆಗಳೆಲ್ಲರೂ ನಿಂತು ದರ್ಶನವಂ ಮಾಡುತಿದ್ದರು. ಅಷ್ಟಮಹಾಸಿದ್ಧಿಗಳೂ ದಾಸಿಯರಾಗಿ ಸೇವೆಯಂ ಮಾಡುತಿದ್ದರು. ಅವರ ಮಧ್ಯದಲ್ಲಿ ರಾಸಾಯಿಯೂ ಇರಲು, ರಾಜನು ಕಂಡು ಬೆರಗಾಗಿ—ಇದೇನು ? ವಿದ್ಯಾನಗರದಲ್ಲಿ ನಾನು ಪೂಜಿಸುವ ನಮ್ಮ ಕುಲದೇವತೆಯು ಪಂಡರಪುರದಲ್ಲಿ ಸೇವೆಯಂ ಮಾಡುತ್ತಿರುವಳು—ಎಂದು ಆಶ್ಚರ್ಯಗೊಂಡು, "ಉಫೇ" ಎಂದು ಶಬ್ದವನ್ನುಚ್ಚರಿಸಿ, ತಾಯೆ ! ಈಸ್ಥಳದಲ್ಲಿ ಅಂಗಳವನ್ನು ನೀನು ಏನುಕಾರಣದಿಂದ ಕೈಯಾರೆ ಬಳಿಯುತ್ತಿರುವೆ ?—ಎಂದು ಬೆಸ

ಗೊಳ್ಳಲು, ಅದಕ್ಕೆ ಆ ದೇವತೆಯು-ನನ್ನಂತಹ ದಾಸಿಯರು ಪಲಬರು ಇಲ್ಲಿ ಸೇವೆಯಂ ಮಾಡುವುದಕ್ಕೋಸ್ಕರ ನಿತ್ಯವೂ ಬರುತಿರುವರು. ನೀನು ವ್ಯರ್ಥವಾಗಿ ಅಭಿಮಾನವಂ ಹಿಡಿದಿರುವೆ. ಈ ಪುಂಡರೀಕನ ಅಂಗಳದಲ್ಲಿ ಬಹುತೀರ್ಥಗಳು ಹೊರಳಾಡುತಿರುವುವು. ಅವು ಪಾವನಂಗಳಾಗಿ ಜಲರೂಪದಿಂದ ಪ್ರವಹಿಸುತಿರುವುವು-ಎಂದು ಉತ್ತರವಂ ಹೇಳಿದಳು.

ಬಳಿಕ ಮುಂದೆ ನೋಡಲು, ಕೀರ್ತನವಂ ಮಾಡುತಿದ್ದ ನಾರದಾದಿಗಳು ದೃಗ್ಗೋಚರರಾದರು. ಸಮಸ್ತರೂ ಚತುರ್ಭುಜಗಳಿಂದ ಯುಕ್ತರಾಗಿ ಕಾಣಲ್ಪಟ್ಟರು. ರಾಜನು ಆನಂದಭರಿತನಾಗಿ ಅವರಿಗೆಲ್ಲರಿಗೂ ಸಾಷ್ಟಾಂಗನಮಸ್ಕಾರವಂ ಮಾಡಿದನು. ದ್ವಾರದಲ್ಲಿ ಜಯವಿಜಯರು ಶಂಖಚಕ್ರಾದಿಗಳಿಂದ ಯುಕ್ತರಾಗಿ ನಿಂತಿದ್ದರು. ದಿವ್ಯಪತಾಕೆಗಳು ಆಕಾಶದಲ್ಲಿ ಹೋಗಿ ಮಿಂಚಿನಂತೆ ಹೊಳೆಯುತ್ತಿದ್ದುವು.

ರಾಜನು ದೇವಾಲಯವಂ ಪ್ರೊಕ್ಕು ಸಾಷ್ಟಾಂಗನಮಸ್ಕಾರವಂ ಮಾಡಿ ದೇವರ ಮಹಾತೇಜಸ್ಸನ್ನು ನೋಡಲು ಆಗದೆ ನಿಮೀಲಿತಲೋಚನನಾಗಿ ಬ್ರಾಹ್ಮಣನ ಕೈಯಂ ಹಿಡಿದುಕೊಂಡು ಭಗವದನುಗ್ರಹದಿಂದ ಸ್ವಲ್ಪಕಾಲದಲ್ಲಿಯೇ ಕಣ್ಣುಗಳಂ ತೆರೆದು, ಶ್ಯಾಮಲನೂ ಸುಕುಮಾರನೂ ರಾಜೀವನೇತ್ರನೂ ಆದ ಸಗುಣಸ್ವರೂಪನೆನಿಸಿದ ಜಗಜ್ಜೀವನನ ಮಂದಸ್ಮಿತಸುಂದರವಾದ ವದನಾರವಿಂದವನ್ನು ನೋಡಿ ಪರಮಾನಂದಭರಿತನಾದನು. ಈಶ್ವರನು ಹೃದಯದಲ್ಲಿ ಸರ್ವಕಾಲದಲ್ಲಿಯೂ ಧ್ಯಾನಿಸುವಂತಹ ಆ ಸ್ವಾಮಿಯ ಸ್ವರೂಪವನ್ನು ವರ್ಣಿಸಲು ಯಾರಿಗೆ ಸಾಧ್ಯವು? ಅದಕ್ಕೆ ಯಾವ ಉಪಮಾನವನ್ನು ಹೇಳಿದರೂ ಗೌಣವಾಗಿಯೇ ತೋರುವುದು. ಅಮೃತಕ್ಕೆ ಸಾಮ್ಯವನ್ನು ಹೇಳಲು ಅಂತಹ ರಸವು ಯಾವುದಿರುವುದು? ಅಂತು ದೇವಾದಿದೇವನಾದ ರುಕ್ಮಿಣೀಕಾಂತನಿಗೆ ದೃಷ್ಟಾಂತವನ್ನು ಹೇಳುವುದಕ್ಕೆ ಶಕ್ಯವಲ್ಲ. ಆದರೆ ಉತ್ತಮರಾದ ಭಕ್ತರು ತದ್ರೂಪವನ್ನು ಕಣ್ಣಿಂದ ನೋಡುವರು. ಆಗುರುತನ್ನು ಅನುಭವಿಗಳೇ ಬಲ್ಲರು. ಮಹಾಮಹಿಮನಾದ ಆಸ್ವಾಮಿಯನ್ನು ಸ್ತುತಿಯಿಸುವ ವಿಷಯದಲ್ಲಿ ಶ್ರುತಿಗಳು ಮೂಕತ್ವವಂ ಪಡೆವುವು. ಅದಂತಿರಲಿ.

ಬಳಿಕ ರಾಜನು ಬ್ರಾಹ್ಮಣನಂ ಕುರಿತು-ಎಲೆ ಪೂಜ್ಯರೆ! ನೀವು ನನಗೆ ಪರಮಾಪ್ತರು. ನಿಮ್ಮ ಉಪಕಾರವನೇನೆಂದು ಹೇಳಲಿ? ಗರುಡಧ್ವಜನ ದರ್ಶನವಂ ಮಾಡಿಸಿದಿರಿ. ನೀವು ಯಾವಪ್ರಕಾರದಿಂದ ಹೇಳಿದಿರೋ ಅದಕ್ಕಿಂತಲೂ ಕೋಟಿಗುಣವಧಿಕವಾದುದನ್ನು ಕಂಡೆನು. ವೈಕುಂಠನಾಯಕನಂ ಕಣ್ಣಾರೆ ಕಂಡು ಪರಮಾನಂದಭರಿತನಾದೆನು. ನನ್ನ ಕುಲದೇವತೆಯಾದ ರಾಸಾಯಿಯು ಅಂಗಳವಂ ಬಳಿಯುತ್ತಿರುವಳು. ಇಂದ್ರಾದಿದೇವತೆಗಳೆಲ್ಲರೂ ಕೈಮುಗಿದುಕೊಂಡು ನಿಂತಿರುವರು. ಈ ಪಂಢರಿಯಂತಹ ಕ್ಷೇತ್ರವೂ ಪಾಂಡುರಂಗನಂತಹ ದೈವತವೂ ಚಂದ್ರಭಾಗೆಯಂತಹ ಪಾವನವಾದ ತೀರ್ಥವೂ ಮೂರುಲೋಕಗಳಲ್ಲಿಯೂ ಕಾಣುವುದಿಲ್ಲ-ಎಂದನು. ಗೆಜ್ಜಲು ಹೊಸಲ

ಮರೆಯಲ್ಲಿ ಇದ್ದುಕೊಂಡು ತಾನು ಬ್ರಹ್ಮಾಂಡದಂತೆ ದೊಡ್ಡದೆನ್ನುವುದು ; ಅದನ್ನು ಒಡೆದು ನಾಲ್ಕು ಕಡೆಯಲ್ಲಿಯೂ ತೋರಿಸಲು, ಅದು ಎಂತು ಮರುಳಾಗಿ ಹೋಗುವುದೋ ರಾಜನ ಪರಿಯೂ ಅಂತಾಯಿತು. ಬಳಿಕ ಬ್ರಾಹ್ಮಣನ ಪಾದಗಳಂ ಪಿಡಿದುಕೊಂಡು—ನಾನು ಅವಿದ್ಯೆಯಿಂದ ಆವೇಷ್ಟಿತನಾಗಿದ್ದೆನು; ಈಗ ನಿನ್ನಿಂದ ಪಾವನನಾದೆನು—ಎಂದನು.

ಸ್ವಾಮಿಯು ಈ ಪ್ರಕಾರದಿಂದ ಕೌತುಕವಂ ತೋರಿಸಿ ಆ ಸಮಸ್ತರಚನೆಯನ್ನೂ ಅದೃಶ್ಯನೆನಿಸಿದನು. ಬಳಿಕ ಮಣ್ಣಿನ ಗೋಡೆಗಳೇ ಕಾಣಲ್ಪಟ್ಟುವು. ಸ್ವಾಮಿಯು ಆರಾಜನಿಗೆ ಯಾವಪ್ರಕಾರದಿಂದ ತೋರಿದನೋ ಫಂಡರಪುರವು ಅದೇ ಪ್ರಕಾರದಿಂದಿರುವುದು. ಆದರೆ ಈಗ ಮನುಷ್ಯರಿಗೆ ಕರ್ಮಗತಿಯಿಂದ ಸಾಮಾನ್ಯವಾಗಿ ಕಾಣುವುದು. ರಾಜನು ಆ ಅದ್ಭುತಚಮತ್ಕಾರವಂ ನೋಡಿ ಅತ್ಯಂತವಿಸ್ಮಿತನಾಗಿ-ಸಮೀಪದಲ್ಲಿರುವ ಕ್ಷೀರಸಾಗರವನ್ನು ಬಿಟ್ಟು ಕೆರೆಯ ನೀರಿನಲ್ಲಿ ಏಕೆ ಸ್ನಾನವಂ ಮಾಡಬೇಕು ? ಅಮೃತಸರೋವರವನ್ನೇ ಕಂಡಬಳಿಕ ಔಷಧಗಳನ್ನು ಏಕೆ ತೆಗೆದುಕೊಳ್ಳಬೇಕು ? ಕಲ್ಪವೃಕ್ಷವು ಸಮೀಪದಲ್ಲಿರಲು, ಗೊಬ್ಬಳಿಯಮರದ ನೆಳಲಲ್ಲಿ ಏಕೆ ಕುಳಿತುಕೊಳ್ಳಬೇಕು ? ಕೈಯಲ್ಲಿದ್ದ ಪರಿಸವನ್ನು ಬಿಟ್ಟು ರಸವಾದವನ್ನು ಮಾಡುವುದಕ್ಕೆ ಏಕೆ ತೊಡಗಬೇಕು ? ಕಾಮಧೇನುವೇ ಮನೆಗೆ ಬಂದ ಬಳಿಕ ಆಡನ್ನು ಏಕೆ ಸಾಕಬೇಕು ? ಮನೆಯಲ್ಲಿ ಸೂರ್ಯನಾರಾಯಣನು ಪ್ರಕಟನಾದಮೇಲೆ ದೀಪವನ್ನು ಏಕೆ ಸಮಾಶ್ರಯಿಸಬೇಕು ? ಅಂತು ಪಾಂಡುರಂಗದೇವನ ಸಂದರ್ಶನವಾದ ಬಳಿಕ ಮಿಕ್ಕದೇವತೆಗಳಂ ಏಕೆ ಉಪಾಸನೆಮಾಡಬೇಕು ?-ಎಂದು ಬಗೆದು ಸ್ವಾಮಿಯಂ ಕುರಿತು ನಿನ್ನನ್ನು ವಿದ್ಯಾನಗರಕ್ಕೆ ತೆಗೆದುಕೊಂಡು ಹೋಗಬೇಕೆಂಬ ಅಪೇಕ್ಷೆಯಿದೆ. ಶರಣಾಗತನಾದ ನನಗೆ ಅಭಯವಂ ಕೊಟ್ಟು ಬೇಗದಿಂ ಹೊರಡಬೇಕು. ದಯಾನಿಧಿಯಾದ ನೀನು ನನ್ನ ಮನೋರಥವಂ ಪೂರೈಸಬೇಕು—ಎಂದು ಪ್ರಾರ್ಥಿಸಲು, ದೇವಾದಿದೇವನು-ಆಗಲಿ, ಬರುವೆನು; ಆದರೆ ಎಲ್ಲಿ ನನ್ನನ್ನು ಭೂಮಿಯಮೇಲೆ ಇರಿಸುವೆಯೋ ಅಲ್ಲಿಯೇ ನಿಲ್ಲುವೆನು. ನಿನ್ನಿಂದ ಏನಾದರೂ ಅನ್ಯಾಯ ನಡೆದರೆ ಹಿಂದಿರುಗಿ ಫಂಡರಪುರಕ್ಕೆ ಹೊರಟುಬರುವೆನು—ಎಂದು ಅಪ್ಪಣೆಯನ್ನೀಯಲು, ರಾಜನು ಬಹುಸಂತೋಷಗೊಂಡು ಸ್ವಾಮಿಯನ್ನು ಸಾಗಿಸಿಕೊಂಡುಹೋಗುವೆನೆಂದು ಫಂಡರಪುರದಿಂದ ವಿದ್ಯಾನಗರದ ಪರ್ಯಂತವಾಗಿಯೂ ಎರಡು ಪಾರ್ಶ್ವಗಳಲ್ಲಿ ಜನಗಳನ್ನು ಸಾಲಾಗಿ ನಿಲಿಸಿ ಮೂರ್ತಿಯನ್ನು ಕೈಗಳಮೇಲೆ ಸಾಗಿಸಿದನು. ಭೂಪತಿಯು ಬಲವಂತನಾದುದರಿಂದ ಯತ್ನವೇನೂ ನಡೆಯದೆ ಇರಲು, ಅರ್ಚಕನಾದ ಬ್ರಾಹ್ಮಣನು ಸುಮ್ಮನಿದ್ದನು.

ರಾಜನು ವಿದ್ಯಾನಗರಕ್ಕೆ ಬಂದು ಪಾಂಡುರಂಗಮೂರ್ತಿಯನ್ನು ಅಲ್ಲಿ ಸ್ಥಾಪಿಸಿ ನಾನಾವಿಧೋಪಚಾರಗಳಿಂದ ಪೂಜಿಸುತ್ತಿದ್ದನು.

ಇತ್ತಲು ಆಷಾಢಮಾಸದಲ್ಲಿ ಭಕ್ತರು ಪಂಡರಪುರದ ಯಾತ್ರೆಗೆ ಬರಲು, ದೇವರು ವಿದ್ಯಾನಗರಕ್ಕೆ ಹೊರಟುಹೋದರೆಂಬ ಸುದ್ದಿಯು ಅಲ್ಲಿ ತಿಳಿಯಿತು. ಪ್ರಾಣವಿಲ್ಲದ ಶರೀರದಂತೆಯೂ ನೀರಿಲ್ಲದ ನದಿಯಂತೆಯೂ ರಾಜನಿಲ್ಲದ ಸೈನ್ಯಸಂಪತ್ತಿಯಂತೆಯೂ ಚಂದ್ರನಿಲ್ಲದ ನಕ್ಷತ್ರಮಂಡಲದಂತೆಯೂ ಪತಿಯಿಲ್ಲದ ಪತಿವ್ರತೆಯಂತೆಯೂ ಪಂಡರಪುರವು ಹಾಳುಬಡಿಯುತ್ತ ಭಯಂಕರವಾಗಿ ಕಾಣುತ್ತಿದ್ದಿತು. ಆಗ ಸಂತರೆಲ್ಲರೂ ಗರುಡಸ್ತಂಭದ ಬಳಿಯಲ್ಲಿ ಬಂದು ಕುಳಿತುಕೊಂಡು—ನಾವು ಇನ್ನು ಯಾರ ಕೀರ್ತನೆಯಂ ಮಾಡಬೇಕು? ಜಗಜ್ಜೀವನನು ನಮ್ಮನ್ನು ಬಿಟ್ಟನು. ಪುಂಡರೀಕನಿಗೆ ಕೊಟ್ಟಿದ್ದ ವರವು ಅಸತ್ಯವಾಯಿತು-ಎಂದರು. ಮತ್ತು ಭಾವುಕರಾದ ಭಕ್ತರು ಬಂದು, ಪಂಡರೀಪತಿಯು ಏನಾದನೆಂದು ವಿಚಾರಿಸಲು, ವಿದ್ಯಾನಗರಕ್ಕೆ ಹೊರಟುಹೋದನೆಂದು ಜನಗಳು ಹೇಳಿದರು. ಬಳಿಕ ಅವರೆಲ್ಲರೂ, ಯಾರಾದರೂ ವಿದ್ಯಾನಗರಕ್ಕೆ ಹೋಗಿ ರುಕ್ಮಿಣೀಪತಿಯಂ ತರಬೇಕೆಂದು ಪರಸ್ಪರವಾಗಿ ಮಾತನಾಡಿಕೊಂಡರು. ಆದರೆ ಯಾರೂ ದೃಢವಾದ ನಿಶ್ಚಯವುಳ್ಳವರಾಗಿರಲಿಲ್ಲ. ಕೆಲವರು—ಪುಂಡರೀಕನನ್ನೇ ಉಪೇಕ್ಷಿಸಿಹೋದವನು ಇನ್ನು ನಮಗೋಸ್ಕರ ಬರುವನೇ?—ಎಂದರು. ಕೆಲವರು—ರಾಜಮಂದಿರದಲ್ಲಿ ನಮಗೆ ಪ್ರವೇಶವೇ ಆಗಲಾರದು. ಈ ಸುದ್ದಿಯನ್ನು ರಾಜನು ಕೇಳಿದರೆ ನಮಗೆ ಶಿಕ್ಷೆಯಂ ಮಾಡಿಸದೆ ಇರನು—ಎಂದರು. ಕೆಲವರು—ನಮ್ಮ ದೇಹದಲ್ಲಿಯೇ ಸ್ವಾಮಿಯಿರುವನೆಂದು ಬ್ರಹ್ಮಜ್ಞಾನದ ಮಾತುಗಳನ್ನಾಡಿ ನಿರ್ಗುಣಭಾವವಂ ತೋರಿಸಿದರು. ಕೆಲವರು-ಈಶ್ವರೇಚ್ಛೆಯಿಂದ ಯಾವ ಯಾವ ಕಾರ್ಯವು ಎಂತೆಂತು ಆಗಬೇಕೋ ಅಂತೆಂತು ಆಗುವುದು. ಇದಕ್ಕೆ ತಲ್ಲಣಿಸಬಾರದು-ಎಂದರು.

ಈ ಪ್ರಕಾರದಿಂದ ಮಾತುಗಳು ನಡೆಯುತ್ತಿರಲು, ಭಾನುದಾಸನು—ಪಂಡರೀನಾಥನನ್ನು ನಾನು ತರುವೆನು. ಇಲ್ಲದೆ ಇದ್ದರೆ ಪ್ರಾಣವನ್ನೇ ಬಿಡುವೆನು—ಎಂದು ಪ್ರತಿಜ್ಞೆಯನ್ನು ಮಾಡಿ ಅಲ್ಲಿಂದ ಸತ್ವರನಾಗಿ ಹೊರಟು ವಿದ್ಯಾನಗರವಂ ಸೇರಿ ಊರ ಜನಗಳಂ ಕುರಿತು-ನಿಮ್ಮ ರಾಜನು ಪಂಡರಪುರದಿಂದ ಪಾಂಡುರಂಗಮೂರ್ತಿಯನ್ನು ತಂದನಲ್ಲಾ! ಅದನ್ನು ಎಲ್ಲಿ ಸ್ಥಾಪಿಸಿರುವನು? ನನಗೆ ಸತ್ಯವಾದ ಸಂಗತಿಯಂ ಹೇಳಬೇಕು-ಎಂದು ಕೇಳಲು, ಎಲ್ಲರೂ ರಾಜಭಯದಿಂದ ನಾವು ತಿಳಿಯೆವು—ಎಂದು ಹೇಳುತ್ತಿದ್ದರು. ಬಳಿಕ ಭಾನುದಾಸನು ಏಕಾಂತದಲ್ಲಿ ವಿಷ್ಣುಭಕ್ತರಂ ಕೇಳಲು, ಅವರು—ರಾಜನು ರುಕ್ಮಿಣೀಪತಿಯನ್ನು ಏಕಾಂತದಲ್ಲಿ ಇರಿಸಿಕೊಂಡು ಪೂಜಿಸುತ್ತ ಇರುವನು. ಆತನು ಪೂಜೆಯನ್ನು ಮಾಡಿದ ಬಳಿಕ ಬಾಗಿಲಿಗೆ ಬೀಗವನ್ನು ಹಾಕಿಬಿಡುವರು. ಯಾರಿಗೂ ದರ್ಶನಕ್ಕೂ ಅವಕಾಶವಿಲ್ಲ. ಬಾಗಿಲಲ್ಲಿ ಕಾವಲಿಟ್ಟಿರುವನು—ಎಂದು ಹೇಳಿದರು.

ಭಾನುದಾಸನು ಆ ಮಾತನ್ನು ಕೇಳಿ ಹರ್ಷಯುಕ್ತನಾಗಿ ಅರ್ಧರಾತ್ರದಲ್ಲಿ ಸರ್ವರೂ ನಿದ್ರೆಗೈಯುತ್ತಿರುವಾಗ ದ್ವಾರದಬಳಿಗೆ ಬಂದುನಿಂತನು. ಆಗ ಬೀಗವು ತನಗೆತಾನೇ ತೆರೆದುಹೋಯಿತು. ಬಳಿಕ ಒಳಗೆ ಪ್ರವೇಶಿಸಿ ಸಾಷ್ಟಾಂಗನಮಸ್ಕಾರವಂ ಮಾಡಿ ಭಕ್ತಿಗೊಂಡು ಗದ್ಗದಕಂಠನಾಗಿ ಸ್ವಾಮಿಯಂ ಕುರಿತು-ಲಕ್ಷ್ಮೀಕಾಂತನೇ! ವೈಕುಂಠವಾಸಿಯೇ! ಪುಂಡರೀಕವರದನೇ! ಯಾದವವರ್ಯನೆ! ನಮ್ಮಮೇಲಣಪ್ರೀತಿಯಂ ಬಿಟ್ಟು ಈರಾಜನಿಗೆ ಅಧೀನನಾದೆಯಲ್ಲಾ? ಇಲ್ಲಿಂದ ಎಂದಿಗೂ ಹೋಗುವುದಿಲ್ಲವೆಂದು ಪುಂಡರೀಕನಿಗೆ ವರವನ್ನು ಕೊಟ್ಟಿದ್ದೆ. ಅದು ಈಗ ಅಸತ್ಯವಾಗಿ ತೋರಿಬಂದುದಲ್ಲಾ! ಬಡವರಾದೆಮ್ಮ ಪೂಜೆಯು ಮನಸ್ಸಿಗೆ ಬಾರದೆ ಹೋದುದರಿಂದ ಇಲ್ಲಿ ಅರಸು ಮಾಡುವ ಉಪಚಾರವು ಸುಖವೆಂದು ತಿಳಿದು ಇಲ್ಲಿಯೇ ನಿಂತೆ. ಭಕ್ಷ್ಯಭೋಜ್ಯಾದಿನೈವೇದ್ಯವು ದೊರೆಯುವುದರಿಂದ ಬಡವರಾದೆಮ್ಮ ಸ್ಮರಣೆಯು ನಿನಗೆ ಆಗಲಿಲ್ಲವೇ? ರುಕ್ಮಿಣಿ ಸತ್ಯಭಾಮೆ ರಾಧೆ ಮುಂತಾದವರೆಲ್ಲರನ್ನೂ ಬಿಡುವಂತೆ ರಾಮರಾಜನು ಮರುಳು ಮಾಡಿ ನಿನಗೆ ಇಲ್ಲಿ ಪ್ರೀತಿಯನುಂಟುಮಾಡಿದನೇ? ಅಲ್ಲಿ ರಂಭೆ ರೇಣುಕೆ ಮೇನಕೆ ಮುಂತಾದವರು ನಿನ್ನ ಸೇವೆಗೋಸ್ಕರ ಬರುತಿರುವರು. ಅವರೆಲ್ಲರನ್ನೂ ಬಿಟ್ಟು ಇಲ್ಲಿ ಬಂದು ಕುಳಿತೆ. ಫಂಡರಪುರವಂ ಬಿಟ್ಟು ಈ ವಿದ್ಯಾನಗರದಲ್ಲಿಯೇ ವಾಸವಂ ಹಿಡಿದೆ. ಅಲ್ಲಿ ಭಕ್ತರಾಜರೂ ಮಹರ್ಷಿಗಳೂ ನಿನ್ನ ಮಾರ್ಗವಂ ನೋಡುತ್ತ ನಿಂತಿರುವರು. ನಮ್ಮಲ್ಲಿ ದಾರುಣವಾದ ದೋಷವುಂಟಾಯಿತೆಂದು ಅದರ ಭಯದಿಂದ ಇಲ್ಲಿಗೆ ಓಡಿಬಂದೆಯಾ? ಅಥವಾ ನನ್ನನ್ನು ಇವರು ಪ್ರೇಮದಾನವಂ ಬೇಡುವರೆಂದು ಬೇಸತ್ತು ಬಂದೆಯಾ? ಅಲ್ಲದಿದ್ದರೆ ಕೀರ್ತನದಗದ್ದಲವು ಬಹುವಾದುದರಿಂದ ನಿದ್ರೆಬಾರದೆ ಇದು ಏಕಾಂತಸ್ಥಾನವೆಂದು ಬಂದಿರುವೆಯಾ? ಇದೇ ನನಗೆ ದಿಟವಾಗಿ ತೋರುವುದು. ಇಂತೂ ಅಲ್ಲದಿದ್ದರೆ ಯಾತ್ರೆಗೆ ಕೂಡುವ ಅಸಂಖ್ಯಾತರಾದ ಜನರಿಗೆ ಆಲಿಂಗನವಂ ಕೊಟ್ಟು ದಣಿದು ವಿಶ್ರಾಂತಿಗೊಳ್ಳುವುದಕ್ಕೋಸ್ಕರ ಇಲ್ಲಿಗೆ ಬಂದೆಯಾ?— ಎಂದು ಪಲವುತೆರದಿಂದಬಿನ್ನವಿಸಲು, ಆ ಮಾತುಗಳಂ ಕೇಳಿ ಜಗಜ್ಜೀವನನು ಭಾನುದಾಸನಂ ಕುರಿತು—ನೀನು ಮನದಲ್ಲಿ ವಿಚಾರವಂ ಮಾಡದೆ ನಿಷ್ಠುರವಾದ ಮಾತನಾಡುವೆ. ನನಗೆ ಇಲ್ಲಿಯ ಉಪಚಾರಗಳೂ ದಿವ್ಯವಸ್ತ್ರಭೂಷಣಂಗಳೂ ರುಚಿಸವು. ಎಂದಿಗೆ ಭೀಮಾತೀರವನ್ನು ಸೇರುವೆನೋ—ಎಂದು ಮನದಲ್ಲಿ ಚಿಂತೆಯಂ ಮಾಡುತ್ತಿರುವೆನು. ಅರಸು ನನ್ನಂ ತಗೆದುಕೊಂಡು ಬಂದು ಇಲ್ಲಿ ಸೆರೆಯಲ್ಲಿ ಹಾಕಿದನು. ನೀವು ಯಾರೂ ನಿಷ್ಠುರಭಾವವಂ ವಹಿಸಿ ತಿರುಗಿಸಿಕೊಳಲಿಲ್ಲ. ನಿಮಗೆ ನಾನು ಬುದ್ಧಿಸಿದ್ಧಿಗಳನ್ನೂ ನಾಲ್ಕುಬಗೆಯ ಮುಕ್ತಿಗಳನ್ನೂ ಕೊಡುವವನಾಗಿದ್ದೆನು. ನೀವು ಅವನೆಲ್ಲವನ್ನೂ ಉಪೇಕ್ಷಿಸಿಬಿಟ್ಟು ಪ್ರೀತಿಯಿಂದ ಭಜನವಂ ಮಾಡುತಿರುವಿರಿ. ಅದನುಳಿದು ನಿಮಗೆ ಕೊಡುವ ವಸ್ತು ಬೇರೆಯಾವುದೂ ಇಲ್ಲ. ನಿಮ್ಮ ಸೇವೆಯ ಋಣವು ನನ್ನ ಮೇಲೆ ಬಹುವಾಗಿರುವುದು. ಅದು ತೀರುವುದಕ್ಕೆ ಆಸ್ಪದವಿಲ್ಲ. ಆದರಿಂದ ನಿಮ್ಮನ್ನು

ಬಿಟ್ಟುಬಂದೆನು-ಎಂದು ಬಾಷ್ಪಪೂರಿತಲೋಚನನಾಗಿ ಗದ್ಗದಸ್ವರದಿಂದ ನುಡಿದನು. ಭಾನುದಾಸನೂ ಪ್ರೇಮಾತಿಶಯದಿಂದ ಬಿಕ್ಕಿ ಬಿಕ್ಕಿ ಅಳುತ್ತ ನಿಂತನು. ಸ್ವಾಮಿಯು ಭಾನುದಾಸನಿಗೆ ಆಲಿಂಗನವಂ ಕೊಟ್ಟು, ಪ್ರಾತಃಕಾಲದ ಪೂಜೆಯಾಗುವಾಗ ನಿನಗೆ ಮತ್ತೆ ದರ್ಶನವಂ ಕೊಡುವೆನು-ಎಂದು ನುಡಿದು ಸಮಾಧಾನಗೊಳಿಸಿ ತನ್ನ ಕಂಠದಲ್ಲಿ ಇದ್ದ ನವರತ್ನಹಾರವಂ ತೆಗೆದು ಭಾನುದಾಸನ ಕೊರಲಿಗೆ ಹಾಕಿ ರಾಜನು ದರ್ಶನಕ್ಕೋಸ್ಕರ ಬಂದಾನು ? ನೀನು ಈಗಲೇ ಬಿಡಾರಕ್ಕೆ ಹೋಗು-ಎಂದು ಅಪ್ಪಣೆಯಂ ಕೊಟ್ಟನು. ಭಾನುದಾಸನು ಹೊರಗೆ ಬರುವುದೂ ಬಾಗಿಲಿಗೆ ಬೀಗವು ಮೊದಲಂತೆ ಸೇರಿಕೊಂಡಿತು; ಸ್ವಾಮಿಯು ಯಾರಿಗೂ ತಿಳಿಯದಂತೆ ಭಕ್ತನಂ ಕಾಣಿಸಿಕೊಂಡನು.

ಬಳಿಕ ಅರಸು ಪ್ರಾತಃಕಾಲದಲ್ಲಿ ಎದ್ದು ಸ್ನಾನವಂ ಮಾಡಿ ದೇವರಿಗೆ ಸಾಷ್ಟಾಂಗ ವಂದನೆಯನೆಸಗಿ ಆರತಿಯಂ ಮಾಡುವಾಗ ಕಂಠದಲ್ಲಿ ರತ್ನಹಾರವು ಕಾಣದೆ ಇದ್ದುದರಿಂದ ಅರ್ಚಕರಂ ಕರೆದು-ಇಲ್ಲಿಗೆ ಕಳ್ಳನು ಯಾವನು ಬಂದಿದ್ದನು?-ಎಂದು ಕೋಪೋದ್ದೀಪಿತನಾಗಿ ವಿಚಾರಮಾಡಿ ಬಹುವಾಗಿ ತಾಡಿಸಿ-ಅಂತಹ ಅಮೂಲ್ಯರತ್ನಗಳು ಪೃಥ್ವಿಯಲ್ಲಿ ಎಲ್ಲಿ ಹುಡುಕಿದರೂ ದೊರೆಯಲಾರವು. ಆದುದರಿಂದ ಹಾರವನ್ನು ಬೇಗದಿಂ ತಂದುಕೊಡಬೇಕೆಂದು ದೂತರಿಗೆ ಅಪ್ಪಣೆಯಂ ಮಾಡಲು, ಅವರು ಮನೆಮನೆಗೂ ಹೋಗಿ ಶೋಧನೆಯಂ ಮಾಡಿ ಎಲ್ಲಿಯೂ ಕಾಣದೆ ಅಂಗಡಿಬೀದಿಮುಂತಾದೆಡೆಗಳಲ್ಲಿಯೂ ಶೋಧಿಸುತ್ತ ಬಂದರು. ಆಗ ಭಾನುದಾಸನು ನದೀತೀರದಲ್ಲಿ ಸ್ನಾನವಂ ಮಾಡಿ ಭಗವನ್ನಾಮಸ್ಮರಣೆಯಂ ಮಾಡುತ್ತ ಕುಳಿತಿದ್ದನು. ರಾಜದೂತರು ಅಲ್ಲಿಯೂ ನೋಡುತ್ತ ಬಂದು ಈತನ ಕೊರಲಲ್ಲಿ ಇದ್ದ ಹಾರವಂ ದೂರದಿಂದ ಕಂಡು, ಕಳ್ಳನು ಸಿಕ್ಕಿದನೆಂದು ಸಂತೋಷಗೊಂಡು ಆಭಾಗವತಾಗ್ರಣಿಯನ್ನು ಹಿಡಿದುಕಟ್ಟಿ ತರುತಿದ್ದರು. ನಗರದಲ್ಲಿ ಜನಗಳು ಆತನಂ ಕಂಡು ನಕ್ಕು-ಕಳ್ಳರು ಜನರಿಗೆ ಮೋಸವಂ ಮಾಡುವುದಕ್ಕೋಸ್ಕರ ಸಂತರವೇಷವಂ ಹಾಕಿಕೊಂಡು ಹೊಂಚುಹಾಕುತ್ತಿರುವರು. ದೇವರಮೇಲೆಯೇ ಕೈಯಂ ಹಾಕಿದವನು ಮನುಷ್ಯರಿಗೆ ಅಂಜುವನೇ ? ಕೊಲೆಗಾರನ ಕೈಗೆ ಕಪಿಲೆಯಾಕಳು ಸಿಕ್ಕಿದರೆ ಅವನು ಅದನ್ನು ಪೂಜಿಸುವನೇ ?-ಎಂದು ಪಲವುತೆರದಿಂದ ನುಡಿದು ನಿಂದಿಸುತಿದ್ದರು.

ಭಾನುದಾಸನು ಅವರ ಮಾತುಗಳಿಗೆ ವ್ಯಸನಪಡದೆ ನಾಮಸ್ಮರಣೆಯಂ ಮಾಡುತಿದ್ದನು. ಕೆಲವರು-ಕಳ್ಳನ ಕೊರಲಲ್ಲಿ ತುಳಸೀಮಾಳೆಯೆಂಬ ಗಾದೆಯ ದೃಷ್ಟಾಂತವನ್ನು ಇಂದು ಪ್ರತ್ಯಕ್ಷವಾಗಿ ಕಂಡೆವು-ಎನುತಿದ್ದರು.

ರಾಜದೂತರು ಹಾರವಂ ತೆಗೆದುಕೊಂಡು ರಾಜನಿಗೆ ಸಮರ್ಪಿಸಿ, ಕಳ್ಳನಂ ಹಿಡಿದು ತಂದಿರುವೆವು. ಇವನಿಗೆ ಏನು ಶಿಕ್ಷೆಯಂ ಮಾಡಬೇಕೆಂದು ಅಪ್ಪಣೆಯಾಗುವುದು?-ಎಂದು ಬಿನ್ನವಿಸಲು, ರಾಜನು ಬಹುಕೋಪಗೊಂಡು ಇವನನ್ನು ಶೂಲಕ್ಕೆ ಹಾಕಿಬಿಡಿ-ಎಂದಾಜ್ಞಾಪಿಸಿದನು. ಯಾರು ? ಏನು ?-ಎಂದು ವಿಚಾರವನ್ನೇ ಮಾಡಲಿಲ್ಲ.

ಆಗ ಭಾನುದಾಸನು ರಾಜದೂತರಂ ಕುರಿತು-ನನಗೆ ಮರಣವು ಸಮೀಪವಾಯಿತು; ಆದುದರಿಂದ ಕೊನೆಯಕಾಲಕ್ಕೆ ನನಗೆ ಪಾಂಡುರಂಗದೇವರ ದರ್ಶನವಂ ಮಾಡಿಸಬೇಕೆಂದು ಹೇಳಿಕೊಳ್ಳಲು. ಅವರಲ್ಲಿ ಸಜ್ಜನರಾಗಿದ್ದವರು ಆಮಾತಿಗೆ ಒಡಂಬಟ್ಟು ಅರಸನ ಅಪ್ಪಣೆಯಂ ಪಡೆಸಿಕೊಂಡು ದೇವಸ್ಥಾನಕ್ಕೆ ಕರೆದುಕೊಂಡುಹೋದರು. ಅಲ್ಲಿ ಭಾನುದಾಸನು ಸ್ವಾಮಿಯಂ ಕುರಿತು-ಸ್ವಾಮಿಯೇ! ಇವನು ನನ್ನಂ ತೆಗೆದುಕೊಂಡು ಹೋಗುವುದಕ್ಕೆ ಬಂದನೆಂದು ಇಂತಹ ಯುಕ್ತಿಯನೆಸಗಿ ಅರಸನಿಂದ ಶಿಕ್ಷೆಯಂ ಮಾಡಿಸಿದೆಯಾ? ನಿನ್ನಂ ಕರೆದುಕೊಂಡುಹೋಗುವುದಕ್ಕೆ ಬಂದವನ ಪ್ರಾಣವನ್ನು ತೆಗೆದುಕೊಂಡು ಅರಮನೆಯಲ್ಲಿ ಇದ್ದುಕೊಂಡು ಸುಖಪಡಬೇಕೆಂಬ ಆಲೋಚನೆಯಂಮಾಡಿ ರತ್ನಹಾರವನ್ನು ನನ್ನ ಕುತ್ತಿಗೆಗೆ ಹಾಕಿದೆಯಾ ?-ಎಂದು ನುಡಿದು ಕಣ್ಬನಿದುಂಬಿ-ಶತಸಹಸ್ರಜನ್ಮಗಳಾದರೂ ನಾನು ನಿನ್ನಂ ಬಿಡುವನಲ್ಲ-ಎಂದು ಸಾಷ್ಟಾಂಗನಮಸ್ಕಾರವಂ ಮಾಡಿದನು.

ರಾಜದೂತರು, ಮೊದಲೇ ಕದಿಯದಿದ್ದರೆ ಇಂತಹ ದುರವಸ್ಥೆಯು ಏಕೆ ಉಂಟಾಗುತಿದ್ದಿತು ? ಸಾಕು ; ಇನ್ನುಏಳು ; ಬೇಗದಿಂದ ನಡೆ-ಎಂದು ಆತನ ಹೆಗಲಮೇಲೆ ಶೂಲವನ್ನು ಹೇರಿ ತಲೆಗೆ ಚಂದ್ರವನ್ನು ಹಚ್ಚಿ ಹೊರಡಿಸಿಕೊಂಡು ನಡೆಯುತ್ತಿರಲು, ಬೀದಿಯಲ್ಲಿ ಈಕೌತುಕವನ್ನು ನೋಡುವುದಕ್ಕೋಸ್ಕರ ಅಸಂಖ್ಯಾತರಾದ ಜನರು ಕೂಡಿ, ಕಳ್ಳತನವಮಾಡದಿದ್ದರೆ ಇಂತಹ ಸಂಕಟವು ಏಕೆ ಬರುತಿದ್ದಿತು ?-ಎಂದು ಬಹುಪ್ರಕಾರವಾಗಿ ನಿಂದಿಸುತ್ತಿರಲು, ಭಾನುದಾಸನು ಆಮಾತಿಗೆ ಸ್ವಲ್ಪವೂ ಖೇದಪಡದೆ ಇದ್ದನು.

ಬಳಿಕ ದೂತರು ಊರಹೊರಗೆ ಕರೆದುಕೊಂಡುಹೋಗಿ ರಾಜನ ಅಪ್ಪಣೆಯಂತೆ ಶೂಲವನೇರಿಸುವಷ್ಟರಲ್ಲಿ ಆತನು ದೇವರನ್ನು ಪ್ರಾರ್ಥಿಸುತ್ತ ಇದ್ದನು:-ಆಕಾಶವೇ ನನ್ನಮೇಲೆ ಮುರಿದುಬಿದ್ದರೂ, ಸಪ್ತಸಮುದ್ರಗಳೂ ಏಕವಾದರೂ, ನಾನು ನಿನ್ನಂ ಬಿಡುವನಲ್ಲ. ಈ ನಶ್ವರವಾದ ದೇಹವನ್ನು ನಿನಗೆ ನಿವಾಳಿಸಿ ಬಿಸುಟಿರುವೆನು. ಸಮಸ್ತಭೂಮಂಡಲವೂ ಪಂಚಭೂತಗಳೂ ಲಯವನ್ನು ಹೊಂದಿದರೂ ಆಗಲೂ ನೀನಲ್ಲದೆ ನನಗೆ ಪ್ರಾಣಸಖನು ಯಾವನೂ ಇಲ್ಲ-ಎಂದು ಬಿನ್ನವಿಸುತ್ತ ಶೂಲಕ್ಕೇರಿಸಿದ ವ್ಯಸನವನ್ನೇನನ್ನೂ ಮನಸ್ಸಿಗೆ ಹತ್ತಿಸಿಕೊಳ್ಳದೆ ಒಂದೇಭಾವದಿಂದ ಸ್ವಾಮಿಯನ್ನು ನೆನೆಯುತ್ತಿರಲು, ಜಗಜ್ಜೀವನನು ಭಾನುದಾಸನ ಮನೋನಿಶ್ಚಯಕ್ಕೆ ಮೆಚ್ಚಿ ಪ್ರಸನ್ನನಾದನು. ಆಗ ಅದ್ಭುತವಾದ ಕೌತುಕವಾಯಿತು. ಅದಂ ಭಾವುಕರು ಆದರದಿಂದ ಆಲಿಸಬೇಕು. ಅಲ್ಲಿ ನಟ್ಟು ಇದ್ದ ಶೂಲದ ಮರವು ಒಂದು ಕ್ಷಣದಲ್ಲಿ ಚಿಗುರಿ, ಚಿಗುರುಗಳಿಂದಲೂ ಪುಷ್ಪಗಳಿಂದಲೂ ಫಲಗಳಿಂದಲೂ ಭರಿತವಾದುದು. ದೂತರು ಅದಂ ಕಂಡು ಬೆರಗಾಗಿ ರಾಜನ ಬಳಿಗೆ ಹೋಗಿ, ಶೂಲಕ್ಕೆ ಹಾಕಲ್ಪಟ್ಟವನು ವಿಷ್ಣುಭಕ್ತನಾದಕಾರಣ ಆತನಿಗೆ ಪಂಢರೀನಾಥನು ಪ್ರಸನ್ನನಾದನು. ಶೂಲವು ವೃಕ್ಷವಾಗಿ

ಫಲಪುಷ್ಪಗಳಿಂದ ಕಂಗೊಳಿಸುತಿರುವುದೆಂದು ತಿಳಿಯಲು, ಆ ಮಾತಂ ಕೇಳಿ ರಾಜನು ಆಶ್ಚರ್ಯಗೊಂಡು ವಧ್ಯಸ್ಥಾನಕ್ಕೆ ಬಂದು ಕಣ್ಣಿತ್ತಿ ನೋಡಿದನು. ಬಳಿಕ ಪಶ್ಚಾತ್ತಾಪದಿಂದ ಕೂಡಿ—ನನ್ನಿಂದ ಬಹುಅನ್ಯಾಯವಾಯಿತು—ಎಂದು ನುಡಿದು ಭಾನುದಾಸನಿಗೆ ಸದ್ಭಾವದಿಂದ ನಮಸ್ಕಾರವಂಮಾಡಿ ನಾನು ವಿವೇಕವಿಲ್ಲದೆ ಅಪರಾಧವನ್ನು ಮಾಡಿದೆನು. ಕ್ಷಮಿಸಬೇಕು-ಎಂದು ಪ್ರಾರ್ಥಿಸಿ, ಬಳಿಕ ಆತನನ್ನು ಕರೆದುಕೊಂಡು ದೇವಾಲಯಮಂ ಪೊಕ್ಕನು.

ಭಾನುದಾಸನು ಪಾಂಡುರಂಗಮೂರ್ತಿಯನ್ನು ಕಂಡು ಗದ್ಗದಕಂಠನಾಗಿ ಪಾದಗಳನ್ನು ದೃಢವಾಗಿ ಹಿಡಿದುಕೊಂಡು ನಿಂತನು.

ಆಗ ಜಗಜ್ಜೀವನನು ಭಾನುದಾಸನಂ ಎತ್ತಿ ಹಿಡಿದು-ನನಗೋಸ್ಕರ ನೀನು ಬಹಳವಾಗಿ ದಣಿದೆಯಲ್ಲಾ ! ಇನ್ನು ನನ್ನಂ ಹೆಗಲನೇರಿಸಿಕೊಂಡು ಹೊರಡುವನಾಗು. ಅಲ್ಲಿ ಪುಂಡರೀಕನ ಬಾಗಿಲಲ್ಲಿಯೇ ಇರುವೆನು-ಎಂದನು.

ಆಗ ರಾಮರಾಜನು—ಸ್ವಾಮಿಯೇ! ನನ್ನಂಉಪೇಕ್ಷಿಸಿ ಹೋಗುವೆಯಾ?--ಎನಲು, ದೇವನು-ನಿನ್ನಿಂದ ಬಹುಅನ್ಯಾಯ ನಡೆದುದು. ನಿನ್ನ ಜನ್ಮಾಂತರಸುಕೃತವಿಶೇಷವಿದ್ದಕಾರಣ ಕೆಲವುದಿವಸ ಇಲ್ಲಿ ವಾಸವಂ ಮಾಡಿದೆನು. ಇನ್ನುಮೇಲೆ ನನ್ನ ಸ್ವರೂಪವನ್ನು ಹೃದಯದಲ್ಲಿ ಧ್ಯಾನಿಸುತ್ತಿರುವನಾಗು-ಎಂದು ಅಪ್ಪಣೆಯಂ ಕೊಟ್ಟನು.

ಬಳಿಕ ಭಾನುದಾಸನು-ರುಕ್ಮಿಣೀಕಾಂತನೇ ! ನಿನ್ನನ್ನು ಎತ್ತಲು ನನ್ನ ಕೈಯಿಂದಾಗುವುದೇ ?—ಎನಲು, ಆಮಾತಂ ಕೇಳಿ ದೀನದಯಾಳುವು—ನಾನು ನಿನ್ನ ಸ್ವಾಧೀನನಾಗಿರುವೆನು. ಭಕ್ತಶಿರೋಮಣಿಯೇ ! ನನ್ನ ಹೃದಯದಲ್ಲಿ ನಿನ್ನ ಕಳವಳವೇ ಹತ್ತಿರುವುದು—ಎಂದು ನುಡಿದು ತತ್ಕಾಲದಲ್ಲಿಯೇ ಸೂಕ್ಷ್ಮರೂಪವಂ ಧರಿಸಿ, ನನ್ನಂ ಸಂಬಳಿಗೆಯಲ್ಲಿ ಇರಿಸಿ ತೆಗೆದುಕೊಂಡು ಹೋಗೆಂದು ಅಪ್ಪಣೆಯನಿತ್ತನು. ಭಾನುದಾಸನು ಸಂಬಳಿಗೆಯನ್ನು ಸಿದ್ಧಮಾಡಲು, ರುಕ್ಮಿಣೀಪತಿಯು ಅದರಲ್ಲಿ ಕುಳಿತುಕೊಂಡನು. ಇಂತಹ ಅದ್ಭುತವು ನಡೆದುದು. ಶ್ರೋತೃಗಳಿರಾ! ನೀವು ಸಂಶಯಪಡಲಾಗದು. ಬಹುವಿಸ್ತಾರವಾಗಿರುವ ಆಕಾಶವೆಲ್ಲವೂ ಘಟದ ಜಲದಲ್ಲಿ ಎಂತು ಪ್ರತಿಫಲಿಸುವುದೋ, ಗಾಳಿಯು ಅಪಾರವಾಗಿ ಬೀಸುವುದಾದರೂ ಬೀಸಣಿಗೆಯಲ್ಲಿ ಅಡಗಿ ಸ್ವಲ್ಪಸ್ವಲ್ಪವಾಗಿ ಎಂತು ಬರುವುದೋ ಅದೇಪ್ರಕಾರದಿಂದ ಅಧೀನನಾದ ರುಕ್ಮಿಣೀಪತಿಯು ಅವನ ಇಚ್ಛೆ ಇದ್ದಂತೆ ಆಗುತ್ತಿರುವನು. ಪೂರ್ವದಲ್ಲಿ ಶ್ರೀಕೃಷ್ಣಾವತಾರದಲ್ಲಿ ಯಶೋದೆಯು ಮೊಸರನ್ನು ಕಡೆಯುತ್ತಿರುವಾಗ ಮಡಿಕೆಯಲ್ಲಿ ಆಕೆಯ ಕೈಗೆ ಸಿಕ್ಕಿದವನಿಗೆ ಇಂದು ಭಾನುದಾಸನ ಕಕ್ಷವಾಳದಲ್ಲಿ ಸೇರುವುದಕ್ಕೆ ಏನು ಸಂದೇಹವು ?—ಎಂದು ತಿಳಿಯತಕ್ಕದು. ಯಾವನು ಬ್ರಹ್ಮಾಂಡಂಗಳಂ ವ್ಯಾಪಿಸಿ ಮಹತ್ತ್ವದಿಂದ ಕೂಡಿದವನಾಗಿಯೂ ಅಣುವಿಗಿಂತ ಅಣುವಾಗಿಯೂ ಜ್ಞಾನದೃಷ್ಟಿಯಿಂದ ಕಾಣಿಸಲ್ಪಡುವನೋ ಆಪರಬ್ರಹ್ಮನು ಭಾನುದಾಸನ ಭಕ್ತಿವಿಶೇಷಕ್ಕೋಸ್ಕರ ಸಂಬ

ಳಿಗೆಯಲ್ಲಿ ಸೇರಿಕೊಳ್ಳಲು, ಆತನು ಸಂತೋಷದಿಂದ ಹೆಗಲಮೇಲೆ ಹೊತ್ತುಕೊಂಡು ತ್ವರೆಯಿಂದ ಹೊರಟನು. ಸಂಬಳಿಗೆಯೊಳಗಣಿಂದ ರುಕ್ಮಿಣೀರಮಣನು ಮಂಜುಳ ಸ್ವರನಾಗಿ-ಇಾದಿನವಿನ ಸುದಿನವು. ಸಂತರ ಸಂದರ್ಶನವು ದೊರೆಯುವುದು-ಎಂದು ಮಾತನಾಡುತ್ತಿರಲು, ಆನಂದದಿಂದ ಭರಿತನಾಗಿ ಭಾನುದಾಸನು ಪದ್ಮಾಲಯವನ್ನು ಸೇರಿ ಅಲ್ಲಿ ಸಂಬಳಿಗೆಯಂ ಕೆಳಗೆ ಇರಿಸಿ ತಾನು ಸ್ನಾನಕ್ಕೆಹೊರಟು ಹೋದನು.

ಇತ್ತಲು ರುಕ್ಮಿಣೀರಮಣನು ಸಂಬಳಿಗೆಯಲ್ಲಿ ಇದ್ದವನು ಥಟ್ಟನೆ ಬೆಳೆಯುತ್ತಿರಲು, ತಳವು ಬಿಡೆದು ಚೂರುಚೂರಾಗಿ ಮೇಲಣ ಭಾಗವು ಮಸ್ತಕದ ಮೇಲೆ ಬಂದು ಇದ್ದಿತು. ಭಾನುದಾಸನು ಬಂದು ನೋಡಿ-ಸ್ವಾಮಿಯೇ! ಇದೇನಂ ಮಾಡಿದೆ? ಇಷ್ಟರಲ್ಲಿಯೇ ದೊಡ್ಡವನಾಗಿ ಬೆಳೆದೆ. ನನ್ನಿಂದ ಎತ್ತುವುದಕ್ಕೆ ಎಂತಾದೀತು?-ಎನಲು, ಆಗ ರುಕ್ಮಿಣೀರಮಣನು ಭಾನುದಾಸನೊಡನೆ-ಇನ್ನು ನೀನು ಊರಿಗೆ ಮುಂಚೆ ಹೋಗಿ ಈ ಸುದ್ದಿಯಂ ಹೇಳು. ಸಾಧುಸಜ್ಜನರು ನಾನಾವಾದ್ಯಗಳಂ ತೆಗೆದುಕೊಂಡು ಇದಿರಾಗಿ ಬರುವರು. ಇಾದು ಸುದಿನವಾಗಿರುವುದು. ಪ್ರಶಸ್ತವಾದ ಗಳಿಗೆಯಲ್ಲಿ ನನ್ನನ್ನು ಸಿಂಹಾಸನವೇರಿಸಬೇಕು-ಎಂದು ಹೇಳಿದನು. ಅದಂ ಕೇಳಿ ಭಾನುದಾಸನು ತ್ವರೆಯಿಂದ ಊರಿಗೆ ಹೊರಟನು.

ಅಷ್ಟರಲ್ಲಿ ಗರುಡಸ್ತಂಭದ ಬಳಿಯಲ್ಲಿ ವಿಷ್ಣುಭಕ್ತರೆಲ್ಲರೂ ಕುಳಿತು-ಭಾನುದಾಸನು ಹೋಗಿ ಬಹುದಿನಸವಾಯಿತು. ರುಕ್ಮಿಣೀಕಾಂತನು ಬಾರನೋ ಏನೋ? ತಿಳಿಯದು-ಎಂದು ಚಿಂತೆಯಂ ಮಾಡುತಿದ್ದರು. ಆಗ ಹಸನ್ಮುಖನಾಗಿ ಬಳಿಗೆ ಬರುತ್ತಿರುವ ಭಾನುದಾಸನಂ ಕಂಡು-ಅಹಹ! ಸಂತೋಷದಿಂದ ಬರುತ್ತಿರುವನು. ಶ್ರೀಶೇಷಶಾಯಿಯನ್ನು ತಂದಿರಬಹುದು-ಎಂದು ತಿಳಿದರು. ಭಾನುದಾಸನು ಸಮೀಪವಂ ಸೇರಿ ಸಾಧುಸಜ್ಜನರೆಲ್ಲರನ್ನೂ ಆಲಿಂಗಿಸಿಕೊಂಡು-ರುಕ್ಮಿಣೀಕಾಂತನು ಪದ್ಮಾಲಯಕ್ಕೆ ಬಂದಿರುವನು-ಎಂದು ಹೇಳಲು, ಅವರೆಲ್ಲರಿಗೂ ಪರಮಾನಂದವಾಯಿತು. ದಿಂಡೆಗಳನ್ನೂ ಪತಾಕೆಗಳನ್ನೂ ತೆಗೆದುಕೊಂಡು ತಾಳಮದ್ದಲೆ ಮುಂತಾದ ವಾದ್ಯಗಳು ಭೋರ್ಗರೆಯುತ್ತಿರಲು, ಸಂಭ್ರಮದಿಂದ ಕೂಡಿ ಇದಿರಾಗಿ ನಡೆದರು. ಅರ್ಚಕರೂ ಅಧಿಕಾರಿಗಳೂ ಪಟ್ಟಣದ ಸ್ತ್ರೀಪುರುಷರೆಲ್ಲರೂ ಇದಿರಾಗಿ ಹೊರಟು ಮೇಘಶ್ಯಾಮನಂ ಕಂಡು ದಂಡಪ್ರಣಾಮವಂ ಮಾಡಿದರು. ರುಕ್ಮಿಣೀರಮಣನು ರಥವನ್ನೇರಿ ಸಂಭ್ರಮದಿಂದ ನಡೆದನು. ಸಂತರು ಶ್ರೀಹರಿಯ ಗುಣಗಳಂ ಪಾಡುತಿದ್ದರು. ಅವರ ಮುಂದುಗಡೆಯಲ್ಲಿ ವೇಶ್ಯೆಯರು ನರ್ತನವಂ ಮಾಡುತಿದ್ದರು. ಭೇರಿ ಮೊದಲಾದ ವಾದ್ಯಗಳ ನಾದವು ಆಕಾಶದಲ್ಲಿ ತುಂಬಿತು. ಸಕಲರೂ ಆನಂದಸಮುದ್ರದಲ್ಲಿ ಮುಳುಗಿದರು. ಆ ಸಮಾರಂಭವಂ ವರ್ಣಿಸಿ ಯಾವ ದೃಷ್ಟಾಂತವನ್ನು ಹೇಳಿದರೂ ಸಾಲದು. ಈಗಲೂ ಕಾರ್ತಿಕಮಾಸದಲ್ಲಿ ಭಕ್ತರು ಅಂತಹ ಮಹೋತ್ಸವವನ್ನು ಕಣ್ಣಿಂದ ನೋಡುತ್ತಿರುವರು. ಪೂರ್ಣಿಮಾದಿವಸ ರಥೋತ್ಸವವು ಯಾವಪ್ರಕಾರದಿಂದ ಆಗುವುದೋ ಅದೆ

ಕ್ಕಿಂತಲೂ ಶತಗುಣಾಧಿಕವಾದ ಪ್ರಕಾರದಿಂದ ಮೆರೆವಣಿಗೆಯು ಆಗುತ್ತಿರಲು, ಪಂಡರೀನಾಥನು ರಥಾರೂಢನಾಗಿ ಹೊರಟು ಚಂದ್ರಭಾಗೆಯ ತೀರಕ್ಕೆ ಬರುವುದೂ ಆಕೆಯು ಇದಿರಾಗಿ ಬಂದು ಸ್ವಾಮಿಗೆ ನಮಸ್ಕಾರವಂ ಮಾಡಿದಳು. ಬಳಿಕ ಮಹಾದ್ವಾರದ ಬಳಿಗೆ ಬರುವುದೂ ಅರ್ಚಕರು ಬಿಜಯಮಾಡಿಸಿ ಮಧುಪರ್ಕವಂ ಸಮರ್ಪಿಸಿ, ಬ್ರಾಹ್ಮಣರು ಮಂತ್ರಘೋಷವಂ ಮಾಡುತ್ತಿರಲು, ಅಭಿಷೇಕವಂ ಮಾಡಿದರು ಭಕ್ತಜನಂಗಳು ಕೀರ್ತನದಲ್ಲಿ ಭಗವನ್ನಾಮಂಗಳಂ ಸಂಭ್ರಮದಿಂದ ಗರ್ಜಿಸುತ್ತಿರಲು, ಜಗನ್ನಿವಾಸನು ಸಿಂಹಾಸನವನ್ನಲಂಕರಿಸಿದನು. ಆ ದಿವಸವು ಸುದಿವಸವು. ವಸ್ತ್ರಭೂಷಣಾಲಂಕಾರಗಳಿಂದಲೂ ಸಮಸ್ತೋಪಚಾರಗಳಿಂದಲೂ ಪೂಜಿಸಿ ಬಗೆವಗೆಯ ಭಕ್ಷ್ಯಭೋಜ್ಯಗಳ ನೈವೇದ್ಯವಂ ಸಮರ್ಪಿಸಿ ಮಂಗಳಾರತಿಯಂ ಬೆಳಗಿ ಮಂತ್ರಘೋಷಪುರಸ್ಸರವಾಗಿ ಪುಷ್ಪಾಂಜಲಿಯಂ ಸಮರ್ಪಿಸಿದರು. ಅದಂ ನೋಡಲು, ಯಾತ್ರಿಕರಿಗೆಲ್ಲರಿಗೂ ಪರಮಾನಂದವಾಯಿತು. ಎಲ್ಲರೂ ಭಾನುದಾಸನನ್ನು ನೋಡಿ ಈತನ ದೆಸೆಯಿಂದ ಪಂಡರೀನಾಥನು ಮತ್ತೆ ಬಂದು ಸೇರಿದನು—ಎಂದು ಪಲವುತೆರದಲ್ಲಿ ಹೊಗಳಿದರು. ಕೆಲವರು ಸಂತೋಷದಿಂದ ಊರಲ್ಲಿ ಸಕ್ಕರೆಯಂ ಹಂಚಿದರು. ಕೆಲವರು ಪಕ್ವಾನ್ನಂಗಳಂ ಮಾಡಿಸಿ ಬ್ರಾಹ್ಮಣರಿಗೆ ಭೋಜನವಂ ಮಾಡಿಸಿದರು. ಕ್ಷೇತ್ರವಾಸಿಗಳೆಲ್ಲರೂ ಸಂತುಷ್ಟರಾದರು. ಹದಿನಾಲ್ಕುವರ್ಷ ಅರಣ್ಯದಲ್ಲಿ ಕಾಳ್ಗೆದ್ದ, ಶ್ರೀರಾಮಚಂದ್ರನು ಅಯೋಧ್ಯೆಗೆ ಬರಲು, ಆ ನಗರದಲ್ಲಿದ್ದವರಿಗೆಲ್ಲರಿಗೂ ಎಂತು ಆನಂದವಾಯಿತೋ ಅಂತು ಅಂದು ಪಂಡರಪುರವಾಸಿಗಳಿಗೆಲ್ಲರಿಗೂ ಆನಂದವಾಯಿತು. ಅನಾವೃಷ್ಟಿಕಾಲದಲ್ಲಿ ಬಿಸಲಿಂದ ಪರಿತಪ್ತವಾದ ಭೂಮಿಗೆ ಅಪರಿಮಿತವಾದ ಮಳೆಯಿಂದ ಉಲ್ಲಾಸವುಂಟಾದಂತೆಯೂ, ಅಗಸ್ತ್ಯರ ಕುಕ್ಷಿಯಿಂದ ಹೊರಗೆ ಸಮುದ್ರವು ಹೊರಟುಬರಲು, ಸಮಸ್ತದ್ವಿಜರಿಗೂ ಆನಂದವಾದಂತೆಯೂ, ವಸಂತಕಾಲವು ಪ್ರಾಪ್ತವಾಗಲು, ಎಲ್ಲಾ ವನಸ್ಪತಿಗಳಿಗೂ ಉಲ್ಲಾಸವುಂಟಾಗುವಂತೆಯೂ, ಹೊರಟು ಹೋದಪ್ರಾಣವು ಮತ್ತೆ ಬಂದು ಸೇರಲು, ಪ್ರಾಣಿಗೆ ಸಂತೋಷವುಂಟಾಗುವಂತೆಯೂ ಶ್ರೀಪತಿಯು ಮತ್ತೆ ಬಂದು ಸೇರಲು, ಪಂಡರಪುರವಾಸಿಗಳಿಗೆಲ್ಲರಿಗೂ ಪರಮಾನಂದವುಂಟಾಯಿತು.

ಮುಂದಣ ಅಧ್ಯಾಯದಲ್ಲಿ ಕಥೆಯು ಸುರಸವಾಗಿರುವುದು. ಭಕ್ತರಿಗೆ ಉಂಟಾದ ವಿಜಯವನ್ನು ನಿರವಿಸುವುದರಿಂದ ಈ ಗ್ರಂಥಕ್ಕೆ ಭಕ್ತವಿಜಯವೆಂಬ ಹೆಸರುಂಟಾಗಿರುವುದು. ಈ ಸಾತ್ವಿಕಭಕ್ತರ ಮಹಿಮೆಯಂ ಶ್ರೀರುಕ್ಮಿಣೀಪತಿಯು ಬಳೆಯಿಸುತ್ತ ಇರುವನು. ಮಹೀಪತಿಯು ಆತನ ಗುಣಂಗಳಂ ಪಾಡುವ ಸ್ತುತಿಪಾಠಕನಾಗಿ ಕೀರ್ತನ ಮಾಡುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತುಮೂರನೆಯ ಅಧ್ಯಾಯಂ ಸಂಪೂರ್ಣಂ.

ಭೈರವಭಟ್ಟನ ಚರಿತ್ರೆ.

ಕರ್ಮೇಂದ್ರಿಯಗಳಲ್ಲಿ ವಾಗಿಂದ್ರಿಯವು ಪುಣ್ಯಪಾವನವಾದುದೂ ಸಂಪೂರ್ಣ ಭಾಗ್ಯವುಳ್ಳುದೂ-ಎಂದು ತೋರುವುದು. ಏನುಕಾರಣವೆಂದರೆ, ಸದ್ಭಕ್ತರ ಗುಣಂಗಳಂ ವರ್ಣಿಸುವುದರಿಂದ ದುರಿತಗಳೆಲ್ಲವೂ ಓಡಿಹೋಗುವುವು. ಶ್ರೀಕೃಷ್ಣಮೂರ್ತಿಯಂ ಧ್ಯಾನಿಸುವುದರಿಂದ ಮನಸ್ಸು ಪಾವನವೆನಿಸುವುದು. ಸತ್ಕಥಾಶ್ರವಣದಿಂದ ಶ್ರವಣಂಗಳು ಅನಾಯಾಸದಿಂದ ಧನ್ಯವೆನಿಸುವುವು. ಭಕ್ತರ ಕಥೆಯಂ ಕೇಳಲು, ಮನವು ಉನ್ಮದವಾಗುವುದು. ಬಳಿಕ ನಿಶ್ಚಲವಾಗಿ ಸಮಾಧಾನಗೊಳ್ಳುವುದು. ಈ ಪುಸ್ತಕಕ್ಕೆ ನಮಸ್ಕಾರವಂ ಮಾಡಲು, ಹಸ್ತಗಳು ಪವಿತ್ರವಾಗುವುವು. ಆಲಸ್ಯವನ್ನು ಬಿಟ್ಟು ಕಥಾಶ್ರವಣಕ್ಕೆ ಕುಳಿತುಕೊಳ್ಳಲು, ಸರ್ವಾಂಗವೂ ಪಾವನವೆನಿಸುವುದು. ಆದುದರಿಂದ ಪುಣ್ಯವಂತರಾದ ಶ್ರೋತೃಗಳು ಸಂಪೂರ್ಣವಾದ ಆಸಕ್ತಿಯನಿಡಬೇಕು.

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ಭಾನುದಾಸನು ವಿದ್ಯಾನಗರಕ್ಕೆ ಹೋಗಿ ಪಾಂಡುರಂಗಮೂರ್ತಿಯಂ ತಂದು ಪಂಡರಪುರದಲ್ಲಿ ಸ್ಥಾಪಿಸಿದನೆಂಬ ಕಥೆಯಂ ಕೇಳಿದಿರಷ್ಟೆ. ಇನ್ನು ಮುಂದಣ ಕಥೆಯಂ ಆಲಿಸಿ.

ಪ್ರತಿಷ್ಠಾನಕ್ಷೇತ್ರದಲ್ಲಿ ಭೈರವಭಟ್ಟನೆಂಬ ಬ್ರಾಹ್ಮಣನು ಶಾಸ್ತ್ರಗಳಲ್ಲಿ ನಿಪುಣ ಪಂಡಿತನಾಗಿಯೂ ವೇದಾಂತಜ್ಞಾನವುಳ್ಳವನಾಗಿಯೂ ಇರುತಿದ್ದನು. ಇನ್ನು ಕೆಲವರು ವೇದಾಧ್ಯಯನವಂ ಮಾಡಿದ್ದರು. ಅವರು ಈತನ ವಿದ್ಯಾರ್ಥಿಗಳೆನಿಸಿದ್ದರು. ಕೆಲವರು ಈತನ ಸಂಗತಿಯಿಂದ ಪುರಾಣವ್ಯುತ್ಪತ್ತಿಯಂ ಸಂಪಾದಿಸಿದ್ದರು. ಈತನಿಗೆ ವಿದ್ಯಾಸಾಮರ್ಥ್ಯವಿದ್ದರೂ ಎಂದಾದರೂ ರಾಜದರ್ಶನಕ್ಕೆ ಹೋಗನು. ಮನೆಯಲ್ಲಿ ಅಗ್ನಿಹೋತ್ರವನಿರಿಸಿಕೊಂಡು ಸತ್ಕರ್ಮಾಚರಣೆಯಲ್ಲಿ ನಿರತನಾಗಿದ್ದನು. ವಿಷಯಗಳಲ್ಲಿ ಔದಾಸೀನ್ಯದಿಂದ ಇದ್ದುಕೊಂಡು ಅಯಾಚನವೃತ್ತಿಯುಳ್ಳವನಾಗಿ ಬಂದವರಿಗೆ ವೇದಪಾಠವಂ ಹೇಳುತಿದ್ದನು. ನಿತ್ಯವೂ ಗಂಗೆಯಲ್ಲಿ ಸ್ನಾನವಂಮಾಡಿ ನಿತ್ಯಕರ್ಮಂಗಳಂ ನೆರವೇರಿಸಿಕೊಂಡು ಮಧ್ಯಾಹ್ನಕಾಲಕ್ಕೆ ಮನೆಗೆ ಬಂದು ದೇವರ ಪೂಜೆಯಂ ಮಾಡಿ ವೈಶ್ವದೇವವನೆಸಗಿ ಪಙ್ಕ್ತಿಯಲ್ಲಿ ಬ್ರಾಹ್ಮಣರಂ ಕುಳ್ಳಿರಿಸಿಕೊಂಡು ಭೋಜನ ಮಾಡಿ ಬಳಿಕ ಪುರಾಣವಂ ಹೇಳುತಿದ್ದನು. ಶ್ರವಣಮಾಡುವುದಕ್ಕೆ ಅನೇಕರು ಬಂದು ಸುಜ್ಞಾನಿಗಳಾಗುತಿದ್ದರು.

ಈ ಪ್ರಕಾರದಿಂದಿರುವಲ್ಲಿ ಒಂದುದಿನ ಭೋಜನಕ್ಕೆ ಕುಳಿತುಕೊಂಡಾಗ ಮಡದಿಯಂ ಕುರಿತು-ನನಗೆ ಸಪ್ಪೆಯ ಶಾಕವಂ ಬಡಿಸಿದೆ-ಎಂದು ವಿನೋದದಿಂದ ನುಡಿದನು. ಆಕೆ ಆ ನುಡಿಯಂ ಕೇಳಿ-ನಿಮಗೆ ಅರುವತ್ತು ವರ್ಷಗಳಾದುವು. ಇನ್ನುಮೇಲೆ

ನಾಲಗೆಯ ರುಚಿಯನ್ನು ಏಕೆ ವ್ಯರ್ಥವಾಗಿ ಬಯಸುವಿರಿ?—ಎಂದು ಪ್ರತ್ಯುತ್ತರವಂ ಹೇಳಿದಳು. ಆತನು ಆ ಮಾತಂ ಕೇಳುವುದೂ ಹೃದಯದಲ್ಲಿ ಅನುತಾಪಗೊಂಡು— ನನ್ನಬಾಳು ವ್ಯರ್ಥವಾಯಿತು. ಇನ್ನುಮೇಲಾದರೂ ಜನ್ಮಸಾರ್ಥಕತೆಯನ್ನು ಮಾಡಿ ಕೊಳ್ಳಬೇಕು-ಎಂದು ಆಕ್ಷಣ ಅಲ್ಲಿಂದ ಎದ್ದು ಹೆಂಡತಿಗೆ ನಮಸ್ಕಾರವಂ ಮಾಡಿ ತಾಯೆ! ನನಗೆ ಯಥಾರ್ಥವಾಗಿ ಉಪದೇಶವಂ ಮಾಡಿದೆ. ಜನ್ಮಾಂತರಸುಕೃತವು ಬಹುವಿದ್ದಿತು. ಅದು ಇಂದು ಫಲಿಸಿತು. ಆದಕಾರಣ ಈವಾತಿನ ನಿಮಿತ್ತದಿಂದ ನನಗೆ ಅದ್ಭುತವಾದ ವೈರಾಗ್ಯವುಂಟಾಯಿತು-ಎಂದು ನುಡಿದು ಅಲ್ಲಿಂದ ಹೊರಟು ಏಕಾಂತದಲ್ಲಿ ಕುಳಿತುಕೊಂಡು, ಈಗ ನಾನು ಈ ತೆರದಿಂದ ಅರಣ್ಯದಲ್ಲಿ ಹೋಗಿ ಕುಳಿತರೆ, ಲೋಕಾ ಚಾರಿಗಳು ಕಂಡು ಏನಾದರೂ ಸಂಕಟವನ್ನು ತಂದು ಹಾಕಿ ನನ್ನನ್ನು ಮನೆಗೆ ಕರೆದು ತರುವರು. ಆದುದರಿಂದ ಯಾರೊಡನೆಯೂ ಮಾತನಾಡದಂತೆ ತಕ್ಕ ಯುಕ್ತಿಯನೆಸಗ ಬೇಕು. ಒಂದುವೇಳೆ ಸಂನ್ಯಾಸಗ್ರಹಣವಂ ಮಾಡಿದರೂ ಸಕಲಬ್ರಾಹ್ಮಣರೂ ಪೂಜೆ ಯಂ ಮಾಡುವರು. ಪರಮಹಂಸನಾದರೂ ಬ್ರಾಹ್ಮಣನೆಂದು ಸನ್ಮಾನಿಸುವರು. ಆದು ದರಿಂದ ಏನಮಾಡಿದರೆ, ಶ್ರೇಷ್ಠರಾದವರು ನಿಂದೆಯಂ ಮಾಡುವರೋ, ಸರ್ವರೂ ಕಂಡು ಉಗುಳುವರೋ, ನಂಟರೆಲ್ಲರೂ ಅವಮಾನಮಾಡುವರೋ, ಅಂತಹ ಕಾರ್ಯ ವನ್ನೇ ಈಗ ಮಾಡತಕ್ಕುದು. ಅಂತು ನನಗೆ ಘಟಿಸಿದರೆ ದೇಹವು ಪಾವನವಾಗುವು ದೆಂದು ನಿಶ್ಚಯಿಸಿ ಪಶ್ಚಾತ್ತಾಪಗೊಂಡು, ತುರುಷ್ಕಪುರೋಹಿತನಾದ ಬಾಜಿಯೆಂಬಾ ತನ ಮನೆಗೆಹೋಗಿ ಆತನಂ ಕುರಿತು-ನನ್ನನ್ನು ನಿಮ್ಮಜಾತಿಗೆ ಸೇರಿಸಿಕೊಳ್ಳಬೇಕು. ಹಿಂದೂಜಾತಿಯವರನ್ನು ತುರುಷ್ಕರನ್ನಾಗಿ ಮಾಡಿದರೆ ಪುಣ್ಯವೆಂದು ನಿಮ್ಮ ಶಾಸ್ತ್ರದಲ್ಲಿ ಹೇಳಿರುವುದು. ಆದುದರಿಂದ ಮನದಲ್ಲಿ ಸಂಕೋಚವಂ ಮಾಡದೆ ನಿಮ್ಮಂತೆ ನನ್ನನ್ನೂ ಮಾಡಬೇಕು—ಎನಲು, ಆತನು—ಭಟ್ಟರೇ! ಇಂದು ಏಕೆ ಬೇಸರಗೊಂಡಿರಿ? ಏನು ಕಾರಣದಿಂದ ನಿಮ್ಮವೃತ್ತಿಯು ಬೇರೆಯಾಯಿತು? ನೀವು ಸುಜ್ಞಾನಿಗಳು, ಪಂಡಿತರು. ನಮ್ಮ ಜಾತಿಗೆ ಏಕೆ ಬರುವಿರಿ? ಏನಾದರೂ ಅಪೇಕ್ಷೆಯಿದ್ದರೆ ಅದನ್ನು ನಾನು ಪೂರೈ ಸುವೆನು—ಎಂದು ಉತ್ತರವಂ ಹೇಳಿದನು. ಆವಾತಿಗೆ ಭೈರವಭಟ್ಟನು—ನನಗೆ ಮತ್ತೇನೂ ಅಪೇಕ್ಷೆಯಿಲ್ಲ. ಭಗವಂತನು ದೊರೆಯುವುದಕ್ಕೆ ನಿಮ್ಮಲ್ಲಿ ಒಂದುತರದ ಮಾರ್ಗವು ಕಾಣುವುದು-ಎನಲು, ಆತನ ನಿಶ್ಚಯಂ ನೋಡಿ ಬಾಜಿಯು ಆತನನ್ನು ಜಾತಿಭ್ರಷ್ಟನನ್ನಾಗಿ ಮಾಡಿದನು.

ಬ್ರಾಹ್ಮಣರು ಆ ಸುದ್ದಿಯಂ ಕೇಳಿ ವ್ಯಸನಗೊಂಡು ಉಪಾಯವೇನೂ ನಡೆ ಯದೆ ಹೋದುದರಿಂದ ಸುಮ್ಮನಿದ್ದರು. ಪೈಠಣದಲ್ಲಿ ಇದ್ದ ಕೆಲವರು ವಿಕಲ್ಪಿಗಳು ಆತನನ್ನು ಕಂಡು ನಿಂದಿಸುತ್ತಿದ್ದರು. ಕೆಲವರು-ವೈರಾಗ್ಯತಾಮಸನೆಂದೂ, ಕೆಲವರು- ಪಿಶಾಚನಾಗಿ ತೋರುವನೆಂದೂ, ಕೆಲವರು—ಅವನ ಹೆಸರನ್ನು ಆಡಿದರೆ ನಮ್ಮ ಸುಕೃ ತವು ನಷ್ಟವಾದೀತೆಂದೂ, ಕೆಲವರು-ಅವನ ಹೆಂಡತಿಯು ಅಂತಹಮಾತನಾಡಬಾರ

ದಾಗಿದ್ದಿತೆಂದೂ, ಕೆಲವರು-ಆಕೆಯ ಪೂರ್ವಕರ್ಮವು ವಿಪರೀತವಾಗಿ ಕಾಣುವುದೆಂದೂ, ಕೆಲವರು-ಅವನು ಮಹಾನಿರ್ದಯಚಿತ್ತನು. ನಮ್ಮ ಹೆಂಗಸರು ಎಷ್ಟೋ ಮಾತನಾಡುವರು. ಇಂತು ಕೋಪವಂ ಮಾಡಿಕೊಂಡು ನಾವು ಪ್ರಪಂಚವ ಭ್ರಾಂತಿಯನ್ನೇ ಬಿಟ್ಟೇನೇ?-ಎಂದೂ, ಕೆಲವರು-ಶಾಸ್ತ್ರದಲ್ಲಿ ನಿಪುಣನಾಗಿದ್ದನು. ಸಂನ್ಯಾಸಗ್ರಹಣವಂ ಮಾಡಬಹುದಾಗಿದ್ದಿತು. ಚಿತ್ತದಲ್ಲಿ ತಾಮಸಗುಣದಿಂದ ಅನೀಷ್ಟಿತನಾಗಿ ಮ್ಲೇಚ್ಛನಾಗಿ ಕುಳಿತನು-ಎಂದೂ, ಕೆಲವರು-ಪರಮಾತ್ಮಾನುಷ್ಠಾನವಂ ಮಾಡಲು ಚಿತ್ತವೈಕಲ್ಯವಾಗಿರಬೇಕೆಂದೂ, ಕೆಲವರು-ವಿಚಾರವಮಾಡದೆ ಸುಮ್ಮನೆ ನಿಂದೆಯಂ ಮಾಡುವಿರಿ. ವಿದ್ಯೆಯೂ ಉತ್ತಮಕುಲವೂ ದ್ರವ್ಯಸಂಪತ್ತೂ ಪುತ್ರಕಳತ್ರರೂ ಇರುವವರಿಗೆ ವೈರಾಗ್ಯವುಂಟಾಗುವುದು ದುರ್ಘಟವಾದುದೆಂದೂ ಹಲವುಬಗೆಯಿಂದ ನುಡಿಯುತ್ತ ಇದ್ದರು. ಕೆಲವರು ನಿಂದಿಸುತ್ತಲೂ ಕೆಲವರು ಸ್ತುತಿಯಿಸುತ್ತಲೂ ಇದ್ದರು. ಭೈರವಭಟ್ಟನು ಯಾವುದಕ್ಕೂ ಮನದಲ್ಲಿ ವಿಕಾರವನ್ನು ಹೊಂದದೆ ಪಶ್ಚಾತ್ತಾಪಯುಕ್ತನಾಗಿ ಧೈರ್ಯದಿಂದಿರುತಿದ್ದನು.

ಬಳಿಕ ಬಂದುದಿನ ಗಂಗಾತೀರದಲ್ಲಿ ಬ್ರಾಹ್ಮಣರು ಕೂಡಿ ಇರಲು, ಅವರ ಬಳಿಗೆ ಈ ಭೈರವಭಟ್ಟನು ಹೋಗಿ ಪಶ್ಚಾತ್ತಾಪಯುಕ್ತನಾಗಿ ಅಳುತ್ತ ಗದ್ಗದಸ್ವರದಿಂದಕೂಡಿ ಕಣ್ಣುಗಳಿಂದ ನೀರಸುರಿಯಿಸುತ್ತಿರಲು, ಅವರು ನೋಡಿ-ನೀವು ಆವ ಕಾರಣದಿಂದ ತುರುಷ್ಕರಾದಿರಿ? ಅಲ್ಲಿ ಯಾವ ಸುಗುಣವಂ ಕಂಡು ನಮ್ಮನ್ನು ಬಿಟ್ಟುಕೊಟ್ಟಿರಿ?-ಎಂದು ಕೇಳಿದರು. ಆವಮಾತಿಗೆ ಭೈರವಭಟ್ಟನು ನನ್ನ ದುಷ್ಕರ್ಮವು ಬಲವತ್ತಾದಕಾರಣ ಅವಿಚಾರದಿಂದ ಸಂಘಟನೆಯಾಯಿತು. ಈಶ್ವರಪ್ರಾಪ್ತಿಗೋಸ್ಕರ ನಾನು ಸ್ವೇಚ್ಛೆಯಿಂದ ಯವನನಾದೆನು. ಅಲ್ಲಿ ಆತ್ಮಪ್ರಾಪ್ತಿಲಕ್ಷಣವು ಕಾಣಬರಲಿಲ್ಲ-ಎನಲು, ಆ ಬ್ರಾಹ್ಮಣರು ತಮ್ಮ ಸ್ವಕರ್ಮದಿಂದಲೇ ಸದ್ಗತಿಯುಂಟಾಗುವುದು-ಎಂದು ನುಡಿದು, ತಾವು ಪರಸ್ಪರವಾಗಿ ಆಲೋಚನೆಯಂ ಮಾಡಿ, ಇತರಗ್ರಾಮದವರು ನಮ್ಮನ್ನೇ ಶಾಸ್ತ್ರವಿಷಯವನ್ನು ಕೇಳುವುದಕ್ಕೆ ಬರುವರು. ಇಂತಿರುವಲ್ಲಿ ನಾವು ಯಾರನ್ನು ವಿಚಾರಿಸತಕ್ಕದು? ಪಶ್ಚಾತ್ತಾಪಯುಕ್ತನಾದ ಈತನನ್ನು ಶುದ್ಧನನ್ನಾಗಿ ಮಾಡುವ ವಿಷಯದಲ್ಲಿ ಸಂಶಯನೇನೂ ಇಲ್ಲ-ಎಂದು ನಿಶ್ಚಯಿಸಿ ಬಳಿಕ ಶಾಸ್ತ್ರಪಂಕ್ತಿಯಂ ನೋಡಿ ಅಮಿತವಾದ ದ್ರವ್ಯವಂ ವೆಚ್ಚಮಾಡಿ ಯಥಾವಿಧಿ ಪ್ರಾಯಶ್ಚಿತ್ತವಂ ಮಾಡಿಸಿ ಭೈರವಭಟ್ಟನನ್ನು ಪವಿತ್ರನನ್ನಾಗಿಮಾಡಿ-ನಿಮ್ಮ ಸ್ವಕರ್ಮದಿಂದಲೇ ನಿಮಗೆ ಶ್ರೀಹರಿಯ ದರ್ಶನವಾದೀತೆಂದು ಆತನಿಗೆ ಹೇಳಿದರು.

ಬಳಿಕ ತುರುಷ್ಕರೆಲ್ಲರೂ ಕೂಡಿಬಂದು ಬ್ರಾಹ್ಮಣರಂ ಕುರಿತು-ನೀವು ತುರುಷ್ಕನಾದವನನ್ನು ಬ್ರಾಹ್ಮಣನಂ ಮಾಡಿದ ಬಗೆಯೆಂತು? ಆವಿಚಾರವು ನಮಗೆ ತಿಳಿಯದು-ಎನಲು, ಭೈರವಭಟ್ಟನು ಅವರಂ ಕುರಿತು-ನನ್ನನ್ನು ನೀವು ತುರುಷ್ಕನನ್ನಾಗಿ ಮಾಡಿದ ಬಗೆಯೆಂತು? ಕಿವಿಯ ರಂಧ್ರಗಳು ಈಗಲೂ ಕಾಣುತಿರುವುವು. ಅದರಿಂದ ನನಗೆ

ಸಂಶಯವು ಹೆಚ್ಚಾಗಿರುವುದು. ನೇತ್ರದೃಷ್ಟಿಯು ಚೆನ್ನಾಗಿರಲು, ಅಂಧಕನೆಂದು ಹೇಳುವುದೆಂತು? ಶಬ್ದಗಳು ಕಿವಿಯಲ್ಲಿ ಬೀಳುತಿರುವಾಗ ಕಿವುಡನೆಂದು ಹೇಳುವುದೆಂತು? ಕಾಲುಗಳಲ್ಲಿ ನಡೆಯುವ ಶಕ್ತಿಯಿರಲು, ಹೆಳವನೆಂದು ಹೇಳುವುದೆಂತು? ಜೀವ ಶಿವ-ಎಂಬೀಭೇದದಶೆಯಲ್ಲಿ ಮುಕ್ತನೆಂದು ಹೇಳುವುದೆಂತು? ಸಕ್ಕರೆಯನ್ನು ಮದ್ಯದಲ್ಲಿ ಕಲಿಸಿದರೆ ಅದರ ಸವಿಯು ಎಂತು ಹೋಗುವುದಿಲ್ಲವೋ ಅಂತು ನೀವು ನನ್ನನ್ನು ಭ್ರಷ್ಟನನ್ನಾಗಿ ಮಾಡಿದರೂ ನನ್ನ ಕಿವಿಯ ರಂಧ್ರಗಳು ಹೋಗಿಲ್ಲವು. ವಿಂಧನಾಗಿರುವವನನ್ನು ಅವಿಂಧನೆಂದು ಹೇಳಲು, ನಿಮಗೆ ಲಜ್ಜೆಯೇಕೆ ಆಗುವುದಿಲ್ಲ?—ಎಂದು ಅವರ ಸಂಗಡ ವಿವಾದವಂ ಮಾಡಲು, ಅವರು ಮುಂದೆ ಏನನೂ ನುಡಿಯಲಾರದೆ ನಿಂತರು.

ಬಳಿಕ ಭೈರವಭಟ್ಟನು-ಬ್ರಾಹ್ಮಣರಂ ಕುರಿತು-ನೀವು ನನಗೆ ಪ್ರಾಯಶ್ಚಿತ್ತವಂ ಮಾಡಿಸಿ ಬ್ರಾಹ್ಮಣನನ್ನಾಗಿ ಮಾಡಿದಿರಿ. ಅಂತಹ ನಿಮ್ಮ ಧರ್ಮಶಾಸ್ತ್ರವು ಯಾವುದೋ ತಿಳಿಯದು. ಗುಹ್ಯದಮೇಲಣ ತೊಗಲಂ ಕೊಯ್ದಿದ್ದರೂ ಪ್ರಾಯಶ್ಚಿತ್ತದಿಂದ ಅದು ಬರಲಿಲ್ಲ. ಮೇಲೆ ಗೋಮಯವನ್ನೂ ಭಸ್ಮವನ್ನೂ ಬಳಿದರೆ ನಾನು ಎಂತು ಪವಿತ್ರನಾದೆನು? ಮೂಗಂ ಕೊಯ್ದ ಬಳಿಕ ಮರ್ಯಾದೆಯೆಂತು ನಿಂತಿತು? ಅಂತು ನನ್ನನ್ನು ಯವನರು ಭ್ರಷ್ಟನನ್ನಾಗಿ ಮಾಡಲು, ಬ್ರಾಹ್ಮಣ್ಯವೆಲ್ಲಿನಿಂತಿತು? ಪೂರ್ಣಿಮೆಯು ಬಂದು ಚಂದ್ರನನ್ನು ಪ್ರಕಾಶಗೊಳಿಸಿದರೂ ಅವನಲ್ಲಿ ಕಳಂಕವು ನಿಂತಂತೆ ನೀವು ಪ್ರಾಯಶ್ಚಿತ್ತದಿಂದ ಶುದ್ಧನನ್ನಾಗಿ ಮಾಡಿದರೂ ನನ್ನ ದೇಹದಲ್ಲಿ ಕಳಂಕವು ನಿಂತೇ ಇದೆ. ಕ್ಷೌರಕನ ಕೈಯಿಂದ ಜುಟ್ಟನ್ನು ನಿಲಿಸಿದಿರಿ; ಮುಂದೆ ಅದು ಬೆಳೆಯುವಂತೆ ಚರ್ಮವು ಬೇರೆ ಬೆಳೆಯತಕ್ಕುದಲ್ಲ. ಆದುದರಿಂದ ಈ ಸಂಶಯವು ನನ್ನಲ್ಲಿ ದೃಢವಾಗಿ ನಿಂತಿತು. ನಾನು ಸರ್ವಪ್ರಕಾರದಲ್ಲಿಯೂ ಬ್ರಾಹ್ಮಣನಲ್ಲ. ನನ್ನನ್ನು ಯವನನೆಂದೂ ಹೇಳಲಾಗದು. ನನ್ನ ಜಾತಿಯ ಹೆಸರು ಏನೋ ನನಗೆ ತಿಳಿಯದು. ಕುಂಬಾರನ ಚಕ್ರದಮೇಲೆ ಮಣ್ಣಿನ ಮುದ್ದೆಯನ್ನು ಇರಿಸಿದ ಮಾತ್ರಕ್ಕೆ ಅದು ಘಟವಾಗಲಾರದು. ಅದು ಕೇವಲಮೃತ್ತಿಕೆಯೂ ಅಲ್ಲ. ನನ್ನಗತಿಯೂ ಅಂತಾಯಿತು—ಎಂದು ನುಡಿದನು. ಈ ಮಾತಂ ಕೇಳಿ ಅವರು—ಈತನ ಸಂಶಯವು ಎಂತು ಪರಿಹಾರವೊಂದುವುದು?—ಎಂದು ಚಿಂತಿಸುತ್ತ ಸುಮ್ಮನಾದರು.

ಬಳಿಕ ಭೈರವಭಟ್ಟನು ಯಾರನಾದರೂ ಸುಜ್ಞಾನಿಗಳಂ ಕಂಡರೆ—ನಾನು ಯಾರಾಗಿರುವೆನು? ಅದನ್ನು ನನಗೆ ಹೇಳಿ ಮುಂದೆ ಹೊರಡಬೇಕೆಂದು ಕೇಳುತಿದ್ದನು. ಅವರು—ನೀನು ತುರುಷ್ಕನಾಗಿರುವೆ-ಎಂದು ಹೇಳಲು, ಅದಕ್ಕೆ-ನಿಮಗೆ ಯಥಾರ್ಥವಾದ ಸಂಗತಿ ತಿಳಿಯದು. ವ್ಯರ್ಥವಾಗಿ ನನ್ನನ್ನು ಕೆಣಕುವಿರಿ. ನಾನು ಯಥಾರ್ಥವಾಗಿ ತುರುಷ್ಕನೇ ಆದರೆ ನನ್ನ ಕಿವಿಗಳು ಏಕೆ ವಿದ್ಧವಾಗಿ ಇದ್ದಾವು? ಇದನ್ನರಿಯದೆ ನನ್ನನ್ನೇ ಮೂರ್ಖನೆನ್ನುವಿರಿ—ಎಂದು ಕೋಪಗೊಳ್ಳುವನು. ಯಾರಾದರೂ-ನೀವು

ಭೈರವಭಟ್ಟರು ; ಪ್ರತಿಷ್ಠಾವಂತರು ; ದೊಡ್ಡ ಬ್ರಾಹ್ಮಣರು-ಎಂದು ಹೇಳಲು, ಅವರಂ ಕುರಿತು-ನೀವು ನನ್ನನ್ನು ಬ್ರಾಹ್ಮಣನೆನ್ನುವಿರಿ. ಆದರೆ ನನಗೆ ಚರ್ಮಭೇದನವು ಏಕೆ ಮಾಡಿದೆ-ಎಂದು ಚರ್ಚಿಸುತಿದ್ದನು. ಅದಂ ಕೇಳಿ ಎಲ್ಲರೂ ಆಶ್ಚರ್ಯಪಡುತಿದ್ದರು. ಎಲ್ಲರೊಡನೆಯೂ ಈತೆರದಿಂದಲೆ ಮಾತನಾಡುತಿದ್ದುದರಿಂದ ಈತನಿಗೆ ಭೈರವಪಿಶಾಚನೆಂದು ಹೆಸರಾಯಿತು. ಆತನು ತನಗೆ ಸದ್ಗುರುವೆಂದಿಗೆ ದೊರೆಯುವನೋ? ನನ್ನ ಸಂಶಯವೆಂತು ನಿವಾರಣಹೊಂದುವುದೋ-ಎಂಬ ಕಳವಳದಿಂದ ಬಹುದಿವಸವಂ ಕಳೆದು ದೇಶಸಂಚಾರವಂ ಮಾಡುತ್ತ ವಟವಾಳನೆಂಬಲ್ಲಿಗೆ ಬಂದನು. ಅಲ್ಲಿ ನಾಗನಾಥರೆಂಬ ಸಿದ್ಧರು ಮಠದಲ್ಲಿ ಇರುತಿದ್ದರು. ಅವರು ಭಕ್ತಿಯಿಂದ ಸದ್ಗುರುಗಳ ಸಮಾಧಿಯನ್ನು ಕಟ್ಟಿಸುವುದಕ್ಕೆ ಪರ್ವತದಂತಹ ದೊಡ್ಡದೊಡ್ಡ ಕಲ್ಲುಗಳನ್ನು ಕೋತಿಗಳಿಂದ ಎಳೆಯಿಸುತಿದ್ದರು. ಭೈರವಪಿಶಾಚನು ಕಂಡು ಆಶ್ಚರ್ಯಗೊಂಡು ಈತನು ತನ್ನ ಸಂಶಯವನ್ನು ಪರಿಹರಿಸಿ ಮನಸ್ಸಿಗೆ ನಿಶ್ಚಲತ್ವವನ್ನುಂಟುಮಾಡಾನು-ಎಂದು ತನ್ನ ಮನದಲ್ಲಿ ನಿಶ್ಚಯಿಸಿ, ನಾಗನಾಥರಂ ಕುರಿತು-ನಾನು ಹಿಂದೂಜಾತಿಯವನೋ ತುರುಷ್ಕನೋ? ಸ್ಪಷ್ಟವಾಗಿ ಹೇಳಬೇಕು-ಎನಲು, ಅವರು ಕೋಪಗೊಂಡು ಕೈಯಲ್ಲಿ ಹಿಡಿದಿದ್ದ ದೊಣ್ಣೆಯನೆತ್ತಿ ನೆತ್ತಿಯಮೇಲೆ ಹಾಕಲು, ಆಹೊಡೆತಕ್ಕೆ ಆಭೈರವಭಟ್ಟನು ಮೂರ್ಛೆಗೊಂಡು ನೆಲಕ್ಕೆ ಬಿದ್ದನು. ಒಡನೆಯೇ ಒನಕೆಯಂ ತರಿಸಿ ಶಿಷ್ಯರ ಕೈಯಿಂದ ಅಸ್ಥಿಮಾಂಸಗಳಂ ಚೆನ್ನಾಗಿ ಕುಟ್ಟಿಸಿ ಮುದ್ದೆಯಂ ಮಾಡಿಸಿ ಅದರಿಂದಲೇ ಒಂದು ಮೂರ್ತಿಯಂ ನಿರ್ಮಿಸಿ ಸ್ವಹಸ್ತದಿಂದ ಅದಕ್ಕೆ ಅಗ್ನಿಯಂ ಹತ್ತಿಸಿದನು. ಆ ಕೌತುಕವಂ ನೋಡಿ ಸರ್ವರೂ ಆಶ್ಚರ್ಯಗೊಂಡರು. ಅಗ್ನಿಯು ಶಾಂತವಾಗುವುದೂ ಜಗನ್ನಾಥನು ಕೃಪಾದೃಷ್ಟಿಯಿಂದ ನೋಡಿದಮಾತ್ರಕ್ಕೆ ಚೈತನ್ಯವುಂಟಾಯಿತು. ಎರಕವುಳ್ಳ ಸಗುಣಬ್ರಹ್ಮರೂಪಪ್ರತಿಮೆಯಂತೆ ಕಂಗೊಳಿಸುತ್ತ ಯೋಗಿಯ ಉನ್ಮನಿಯಲ್ಲಿ ಬಂದು ಕುಳಿತನೋ ಎಂಬಂತಿರಲು, ನಾಗನಾಥರು ಮನದಲ್ಲಿ ಸಂತೋಷಗೊಂಡು ಆತನಂ ಕುರಿತು-ಭೈರವಪಿಶಾಚನೇ! ಈಗ ನೀನು ಯಾರಾಗಿರುವೆ? ನನಗೆ ಹೇಳು-ಎನಲು, ಆತನು ಅದಕ್ಕೆ ಈಗ ತಾನು ಯವನನೆಂಬುದಕ್ಕೆ ಗುಹ್ಯದಮೇಲಣ ತೊಗಲು ಬಂದಿರುವುದು. ಬ್ರಾಹ್ಮಣನೆಂಬುವುದಕ್ಕೆ ಕಿವಿಗಳಲ್ಲಿ ರಂಧ್ರವಿಲ್ಲ. ತನ್ನ ಸಂಶಯವು ಪರಿಹಾರವೊಂದಿತೆಂದು ತನ್ನ ಮನದಲ್ಲಿ ಆಲೋಚಿಸಿ ಮೌನದಿಂದಿರುತಿದ್ದನು.

ಸದ್ಗುರು ಸಿದ್ಧಾಂತಜ್ಞಾನವನ್ನುಪದೇಶಿಸುವನು. ಅಷ್ಟೇಅಲ್ಲದೆ ದೇಹವನ್ನು ಬೇರೆಮಾಡನು. ನಾಗನಾಥರು ಇಂತಹ ಅಘಟಿತವಾದ ಕಾರ್ಯವನೆಸಗಿ ದಾರುಣವಾದ ವಿಕಲ್ಪವನ್ನುಪರಿಹರಿಸಿದರು. ಬಳಿಕ ನಾಗನಾಥರು ಆತನ ಮಸ್ತಕದಲ್ಲಿ ಹಸ್ತವನಿರಿಸಿ ಆತ್ಮಜ್ಞಾನವನುಪದೇಶಿಸಲು, ತತ್ಕಾಲದಲ್ಲಿಯೇ ಜ್ಞಾನಿಯಾಗಿ ಶ್ರೀಹರಿಯ ಭಜನೆಯಲ್ಲಿ ವ್ಯಾಪೃತನಾಗಿ ಚಿತ್ತದಲ್ಲಿ ಸಂತೋಷಗೊಂಡು-ಸದ್ಗುರುಗಳು ಧನ್ಯರು. ಕ್ಷಣಮಾತ್ರ

ದಲ್ಲಿ ಎರಡನೆಯ ಜನ್ಮವಂ ಕೊಟ್ಟರು. ಆತ್ಮಜ್ಞಾನಿಗಳಾದ ಗುರುಗಳು ಅನೇಕರು ಇರಬಹುದು. ಜನ್ಮಮರಣಾಂಗಳಂ ಪರಿಹರಿಸಬಲ್ಲರು. ದೇಹವನ್ನೇ ಬೇರ್ಪಡಿಸು ವಂತವನನ್ನು ಕಾಣೆನು. ಪಾಂಡುರಂಗಮೂರ್ತಿಯನ್ನು ಧ್ಯಾನಿಸಿ ಉಪಾಸನೆಮಾಡುವ ಭಕ್ತರು ಪಲಬರಿರುವರು. ಆದರೆ ಪಾಷಾಣಮೂರ್ತಿಗೆ ಊಟಮಾಡಿಸಿದ ನಾಮದೇವ ನಂತವನು ದೊರೆಯನು. ಮಿಥ್ಯಾಮಾಯೆಯೆಂದು ಎಲ್ಲರೂ ಬಾಯಿಂದ ಆಡುವರು. ಸಂಕಟವೇಳೆಯಲ್ಲಿ ಧೈರ್ಯವನ್ನೂ ಪಾಡುವರು. ಆದರೆ ತನ್ನ ಮಗನ ಶಿರಸ್ಸನ್ನು ಛೇದಿಸಿದ ಕಬೀರನಂತಹ ಮಹಾನುಭಾವನು ಯಾವನಿರುವನು? ಆಚಾರಹಿತರೂ ಜ್ಞಾನಿಗಳೂ ಪವಿತ್ರರೂ ನಾನಾನಿಗಮಾಗಮಜ್ಞರೂ ಅಸಂಖ್ಯಾತರಿರುವರು. ಕೋಣ ನಿಂದ ವೇದವನ್ನು ಹೇಳಿಸಿದ ಜ್ಞಾನದೇವನಂತವನು ಯಾವನಿರುವನು? ಭಕ್ತಶಿರೋ ಮಣಿಯಾದ ಸಾವಂತನು ಧನ್ಯನು. ಪಂಡರೀನಾಥನು ಅಡಗಿಕೊಳ್ಳುವುದಕ್ಕೆ ಬರಲು, ತನ್ನ ಕೈಯಿಂದ ಹೊಟ್ಟೆಯಂ ಸೀಳಿ ಹೃದಯದಲ್ಲಿ ಸ್ವಾಮಿಯಂ ಧರಿಸಿದನು. ಅದಂತಿರಲಿ. ಪ್ರೇಮಳರಾದ ಶ್ರೀಹರಿಯ ಭಕ್ತರು ಒಬ್ಬರಿಗಿಂತ ಒಬ್ಬರು ಅಧಿಕರಾಗಿರುವರು. ನೀಲಮೇಘಶ್ಯಾಮನನ್ನು ವಶಮಾಡಿಕೊಂಡ ಅವರ ಮಹಿಮೆಯು ಯಾರಿಗೂ ತಿಳಿಯಲಸದಳವು.

ಭೈರವಭಟ್ಟನು ನಾಗನಾಥರ ಕೃಪೆಯಿಂದ ಸಂಪೂರ್ಣವಾದ ಜ್ಞಾನವಂ ಪಡೆದು ಆತ್ಮಸ್ವರೂಪವನ್ನೈದಿ ಬಳಿಕ ಪಂಡರಪುರಕ್ಕೆ ಹೋಗಿ ಸಗುಣರೂಪವನ್ನು ಕಣ್ಣಿಂದ ಕಂಡು ಪ್ರೇಮಭರಿತನಾಗಿ ಕೀರ್ತನದಲ್ಲಿ ಆನಂದದಿಂದ ಕುಣಿಯುತಿದ್ದನು. ಈತನು ಶ್ರೀಭಾಗವತದ ದಶಮಸ್ಕಂಧಕ್ಕೆ ಮಹಾರಾಷ್ಟ್ರಭಾಷೆಯಿಂದ ಟೀಕೆಯಂ ಮಾಡಿರುವನು. ಆಶ್ಲೋಕಗಳನ್ನು ಭಾವುಕರು ಆಲಿಸಿ ಪರಮಾನಂದವೊಂದುವರು. ಇನ್ನೂ ಅನೇಕವಾದ ಪದಗಳನ್ನು ರಚಿಸಿರುವನು. ಆತನು ರಚಿಸಿದ ಭೈರವಭಟ್ಟೀಯವೆಂಬ ಕಾವ್ಯವು ಪ್ರಸಿದ್ಧವಾಗಿರುವುದು. ಅದನ್ನು ಶ್ರವಣದ್ವಾರದಿಂದ ಕೇಳಲು, ದುರಿತಗಳೆಲ್ಲವೂ ಛಿನ್ನಭಿನ್ನವಾಗುವುವು, ಈ ಸಾತ್ತ್ವಿಕಭಕ್ತರ ಕೀರ್ತಿಯನ್ನು ಕೇಳಲು, ಜಡಜೀವರೆಲ್ಲರೂ ಪವಿತ್ರೂತರಾಗುವರು. ಆದುದರಿಂದಲೇ ಶ್ರೋತೃಗಳು ಚಿತ್ತದಲ್ಲಿ ಪ್ರೀತಿಯನಿಡಬೇಕೆಂದು ಮಹೀಪತಿಯು ಬಿನ್ನವಿಸಿಕೊಳ್ಳುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತುನಾಲ್ಕನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಏಕನಾಥನ ಚರಿತ್ರೆ.

ಎಲೈ ಶ್ರೋತೃಗಳಿರಾ! ರಸಭರಿತವಾದ ಕಥೆಯಂ ಕೇಳಿರಿ. ಅದಂ ಕೇಳಿದ ಮಾತ್ರದಿಂದಲೇ ಭವದುಃಖವು ಪರಿಹಾರವೊಂದುವುದು. ಹೃದಯದಲ್ಲಿ ಪೂರ್ಣವಿವೇಕವೂ ದೃಢವಾದ ಶಾಂತಿಸುಖವೂ ಕೈಸೇರುವುದು. ಯೋಗಸಾಧನೆಯೇನೂ ಇಲ್ಲದೆಯೇ ತೀರ್ಥಯಾತ್ರೆಯೇನೂ ಇಲ್ಲದೆಯೇ ಭಕ್ತಚರಿತ್ರಶ್ರವಣದಿಂದ ಸದ್ಗತಿಯುಂಟಾಗುವುದು. ಶಾಸ್ತ್ರವ್ಯುತ್ಪತ್ತಿ ಬಹುವಾಗಿಲ್ಲದಿದ್ದರೂ ವೈರಾಗ್ಯವುಂಟಾಗದಿದ್ದರೂ ಕ್ಷಣಕಾಲ ಶ್ರೀಹರಿಕೀರ್ತನದಲ್ಲಿ ಮನವನಿಡುವುದರಿಂದಲೇ ಪಾವನರಾಗುವರು. ಯಾರಿಗೆ ವ್ರತಗಳೂ ನಿಯಮಗಳೂ ಘಟಿಸಲಿಲ್ಲವೋ, ವಿಷಯವಾಸನೆ ಹೋಗಲಿಲ್ಲವೋ ಅವರೂ ವಾಕ್ಕಿನಿಂದ ರಾಮನಾಮವನ್ನು ಕೀರ್ತಿಸಲು ಧನ್ಯರಾಗುವರು. ಯಾರಿಗೆ ದ್ರವ್ಯಲೋಭವೂ ಕುಟುಂಬದಲ್ಲಿ ಅಧಿಕವಾದಮಮತೆಯೂ ಇರುವುದೋ ಅವರಿಗೆ ಭಕ್ತಚರಿತ್ರಶ್ರವಣದಿಂದ ಹೃದಯದಲ್ಲಿ ದೃಢವಾದ ಪಶ್ಚಾತ್ತಾಪವುಂಟಾಗುವುದು. ಲೋಹವು ಪರಿಸಕ್ಕೆ ಸೋಂಕಲು ಅವರ ರೂಪವೇ ಎಂತು ಬೇರೆಯಾಗುವುದೋ ಅಂತು ಭಕ್ತಕಥಾಸಂಗತಿಯಿಂದ ಮನದ ಅಜ್ಞಾನವು ವಿವೇಕವಾಗಿ ಪರಿಣಮಿಸುವುದು. ಪೂರ್ವಸುಕೃತದ ಸಂಚಯವು ಬಹುವಾಗಿ ಇರುವುದರಿಂದಲೇ ಭಕ್ತಕಥೆಯಲ್ಲಿ ರುಚಿ ಹತ್ತುವುದು. ನಿರ್ಭಾಗ್ಯರಾದ ಇತರರು ವಿಕಲ್ಪದಿಂದ ಕಿಡುವರು. ಸಾತ್ತ್ವಿಕಕಥಾರಸವಂ ಸೇವಿಸುವುದರಿಂದ ಬಹುಪುಣ್ಯವಂತರೆನಿಸುವರು.

ಹಿಂದಣ ನಾಲ್ವತ್ತುಮೂರನೆಯ ಅಧ್ಯಾಯದಲ್ಲಿ ಭಾನುದಾಸನು ವಿದ್ಯಾನಗರಕ್ಕೆ ಹೋಗಿದ್ದ ಪಾಂಡುರಂಗಮೂರ್ತಿಯಂ ಪಂಢರಪುರಕ್ಕೆ ತೆಗೆದುಕೊಂಡುಬಂದು ಸ್ಥಾಪಿಸಿದನೆಂಬ ಕಥೆಯಂ ಕೇಳಿದಿರಷ್ಟೆ. ಆ ಭಾನುದಾಸನಿಗೆ ಸದ್ಗುಣಿಯಾದ ಚಕ್ರಪಾಣಿಯೆಂಬ ಪುತ್ರನು ಹುಟ್ಟಿದನು. ಅವನು ಪರಮಭಾವುಕನು, ವೈಷ್ಣವನು; ಜ್ಞಾನಿ. ಶ್ರೀಹರಿಯ ಭಜನೆಯಲ್ಲಿಯೇ ನಿಮಗ್ನನಾಗಿ ಇರುವನು. ಆತನ ಮಗನು ಸೂರ್ಯನಾರಾಯಣನು. ಆತನು ಜ್ಞಾನದಿಂದ ದೇದೀಪ್ಯಮಾನನಾದವನು. ಆತನ ಭಾರ್ಯೆ ಸುಲಕ್ಷಣೆಯಾದವಳು. ಆಕೆಯ ಹೆಸರು ರುಕ್ಮಿಣಿಯೆಂದು. ಆಕೆಯ ಉದರದಲ್ಲಿ ಒಬ್ಬ ಪುತ್ರನು ಉದಯಿಸಿದನು. ಆತನು ಏಕನಾಥನೆಂದು ಪ್ರಸಿದ್ಧನಾದವನು. ಆತನು ಸಾಕ್ಷಾಜ್ಜಗದ್ಗುರುವಿನವತಾರವು. ಆತನ ಚರಿತ್ರೆಯು ಕೇಳತಕ್ಕುದು.

ಆ ಏಕನಾಥನು ದಿನದಿನಕ್ಕೆ ದೊಡ್ಡವನಾಗಲು, ತಾಯಿತಂದೆಗಳು ಆತನಿಗೆ ಉಪನಯನವಂ ಮಾಡಿ ಆತನನ್ನು ಪ್ರೀತಿಯಿಂದ ಪೋಷಿಸುತಿದ್ದರು. ಅಲ್ಲಿಗೆ ಸಮೀಪದಲ್ಲಿ ಜ್ಞಾನಿರಾಶಿಗಳೆನಿಸಿದ ಜನಾರ್ದನಪಂತರೆಂಬವರು ಇದ್ದರು. ಅವರಿಗೆ ಸಾಕ್ಷಾದ್ದತ್ತಾತ್ರೇಯರ ದರ್ಶನವಾಗುತಿದ್ದಿತು. ಇದಂ ತಿಳಿದು ಏಕನಾಥನು ಅವರ ಸಂದರ್ಶನಕ್ಕೋಸ್ಕರ ಹೋಗಿ ಸದ್ಭಾವದಿಂದ ಅವರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿದನು. ಅವರು ಆತನಂ ನೋಡಿ—ನೀನು ಯಾರು? ಯಾರಮಗನು? ಇಲ್ಲಿಗೆ ಏನುಕಾರ್ಯಕ್ಕೋಸ್ಕರ ಬಂದಿರುವೆ?—ಎಂದು ನುಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡು ವೈದಿಕನೆ ತಾಯ್ತಂದೆಗಳಂ ಬಿಟ್ಟು ಮುನಿಸುಗೊಂಡು ನಮ್ಮ ಬಳಿಗೆ ಬಂದೆಯಾ? ಇದನ್ನು ಯಥಾರ್ಥವಾಗಿ ಹೇಳು. ಸಂಕೋಚಪಡಬೇಡ—ಎನಲು, ಏಕನಾಥನು ಕೈಗಳಂ ಜೋಡಿಸಿಕೊಂಡು-ನಾನು ಋಗ್ವೇದಿಬ್ರಾಹ್ಮಣಕುಮಾರನು ತಾಯ್ತಂದೆಗಳ ಮೇಲೆ ಮುನಿದವನಲ್ಲ. ಪ್ರಪಂಚಿಕವಾಸನೆಯೂ ಅಹಂಕಾರವೂ ದೇಹಕ್ಕೆ ಹತ್ತಿರುವುವು. ಕಾಮಕ್ರೋಧಲೋಭಮೋಹಮದಮಾತ್ಸರ್ಯಂಗಳೆಂಬ ಅರಿಷಡ್ವರ್ಗವು ಅನಿವಾರ್ಯವಾಗಿ ದೇಹದಲ್ಲಿ ವ್ಯಾಪಿಸಿರುವುವು. ಇದರಿಂದ ಮನದಲ್ಲಿ ಪಶ್ಚಾತ್ತಾಪವು ಹುಟ್ಟಲು, ಪೂಜ್ಯರ ಸಂದರ್ಶನಕ್ಕೋಸ್ಕರ ಬಂದೆನು. ಇಲ್ಲಿಯೇ ಇದ್ದುಕೊಂಡು ಅಹೋರಾತ್ರಗಳಲ್ಲಿಯೂ ತಮ್ಮ ಸೇವೆಯಂ ಮಾಡುತಿರಬೇಕೆಂಬ ಅಪೇಕ್ಷೆಯು ಮನಸ್ಸಿನಲ್ಲಿ ಬಹುವಾಗಿರುವುದು. ನಾನು ಪತಿತನು. ತಮ್ಮಲ್ಲಿ ಶರಣಾಗತನಾಗಿರುವೆನು. ಸದ್ಗುರುವೇ! ನನ್ನನ್ನು ಅಂಗೀಕರಿಸಬೇಕು-ಎಂದು ನುಡಿದು ಅವರ ಪಾದಗಳಂ ದೃಢವಾಗಿ ಹಿಡಿದನು.

ಅವರು ಆ ಏಕನಾಥನ ಮಾತಂ ಕೇಳಿ ಸಂತೋಷಗೊಂಡು, ವಯಸ್ಸಿನಲ್ಲಿ ಸಣ್ಣವನಾದರೂ ಜ್ಞಾನವು ಅಸಾಧಾರಣವಾಗಿದೆ-ಎಂದು ಆಶ್ಚರ್ಯವಂ ತಾಳಿ ಅಭಯವಂ ಕೊಟ್ಟು—ನಮ್ಮಲ್ಲಿಯೇ ಸುಖವಿಂದಿರು-ಎಂದು ಹೇಳಿದರು.

ಏಕನಾಥನು ಆ ಜನಾರ್ದನಪಂತರ ವಚನವಂ ಕೇಳಿ, ದ್ವೈಪಾಯನಮುನೀಂದ್ರನು ಸಂಶಯವೆಂಬ ಅರಣ್ಯದಲ್ಲಿ ತೊಳಲುತ್ತ ನಾರದರ ಸಂದರ್ಶನದಿಂದ ಎಂತು ಸಂತುಷ್ಟನಾದನೋ, ಹಂಸರೂಪದಿಂದ ನಾರಾಯಣನು ದರ್ಶನವಂ ಕೊಡಲು, ಬ್ರಹ್ಮದೇವನು ಎಂತು ಸಂತೋಷವಂ ತಾಳಿದನೋ ಅಂತು ಸಂತೋಷವಂತಾಳಿ, ಆ ಗುರುಗಳ ಸೇವೆಯಲ್ಲಿ ತತ್ಪರನಾಗಿ ಹಗಲೂ ರಾತ್ರಿಯೂ ಆಲಸ್ಯಗೊಳ್ಳದೆ ನಡೆದುಕೊಳ್ಳುತಿದ್ದನು. ರಾತ್ರಿಯಲ್ಲಿ ಅವರು ಮಲಗುವುದೂ ಸಮೀಪದಲ್ಲಿ ಕುಳಿತುಕೊಂಡು ಪಾದಗಳಂ ಒತ್ತುತಿರುವನು. ಅವರಿಗೆ ನಿದ್ರೆ ಹತ್ತಿದರೂ ತಾನು ಎದ್ದು ಹೋಗಬೇಕೆಂಬುದಿಲ್ಲ. ವೀಳ್ಯದೆಲೆಯನ್ನು ಅದರಲ್ಲಿ ಹಾಕತಕ್ಕ ಸಾಹಿತ್ಯವೆಲ್ಲವಂ ಹಾಕಿ ಸ್ವಹಸ್ತದಿಂದ ಕಟ್ಟಿ ವಿನೀತನಾಗಿ ಅವರಬಾಯಿಗೆ ನೀಡುತಿರುವನು. ಮುಖಪ್ರಕ್ಷಾಳನಸಮಯದಲ್ಲಿ ತಸ್ತ-ಎಂಬ ಪಾತ್ರೆಯನ್ನು ತಂದು ಮುಂದಿಡುತಿರುವನು. ತನ್ನ ಕೈಯಿಂದ

ಸ್ನಾನವಂ ಮಾಡಿಸಿ ಪೂಜಾಸಾಹಿತ್ಯವಂ ಸಿದ್ಧಪಡಿಸಿಕೊಡುತ್ತಿರುವನು. ಗಂಧಾಕ್ಷತ ಧೂಪದೀಪಾದಿಗಳಲ್ಲಿ ಯಾವುದನ್ನು ಯಾವಾಗಕೇಳುವರೋ ಆಕ್ಷಣವೇ ಅದಂ ಹಿಡಿದು ಕೊಂಡುನಿಂತಿರುವನು. ಭೋಜನವಂ ಮಾಡಿದ ಬಳಿಕ ಎಡೆಯಲ್ಲಿ ನಿಂತ ಉಚ್ಛಿಷ್ಟವನ್ನು ಪ್ರೀತಿಯಿಂದ ಭೋಜನವಮಾಡುತ್ತಿರುವನು. ಆ ಗುರುಗಳು ಕಾಳಂಜಿಯಲ್ಲಿ ಉಗುಳಿದ ಕಫವನ್ನು ಏಕಾಂತದಲ್ಲಿ ತೆಗೆದುಕೊಂಡುಹೋಗಿ ಪ್ರಾಶನವಂ ಮಾಡುತಿರುವನು. ಇಂತಹ ಗುರುಭಕ್ತಿಯಲ್ಲಿ ಸರ್ವಕಾಲದಲ್ಲಿಯೂ ತತ್ಪರನಾಗಿರಲು, ಆ ಜನಾರ್ದನಪಂತರು ಕಂಡು ಆಶ್ಚರ್ಯಗೊಂಡು-ಈತನನ್ನು ಮನುಷ್ಯನೆನಬಾರದು. ಗುರುಭಕ್ತಿಯುಳ್ಳವರಲ್ಲಿ ಈತನು ಶ್ರೇಷ್ಠತಮನು-ಎಂದು ಬಗೆದು, ಒಂದುದಿನ ಕೃಪೆಯಿಂದ ಏಕಾಂತದಲ್ಲಿ ಆತನನ್ನು ಕುರಿತು–ನೀನು ನಮ್ಮ ಬಳಿಯಲ್ಲಿ ಸೇವೆಯಂ ಮಾಡುತಿರುವೆ. ನಿನ್ನ ತಾಯ್ತಂದೆಗಳಿಗೆ ಈಸಂಗತಿಯೇ ತಿಳಿಯದು. ನೀನು ವಿರಕ್ತನಾಗಿ ಕಾಣುತಿರುವೆ. ಮನೆಯಲ್ಲಿ ಅನ್ನವಸ್ತ್ರ ಮೊದಲಾದುದೆಲ್ಲವೂ ಬೇಕಾಗುವುದು. ನಿನ್ನ ತಾಯ್ತಂದೆಗಳಿಬ್ಬರೂ ವೃದ್ಧರು. ನಿನಗೋಸ್ಕರ ಚಿಂತೆಯಂ ಮಾಡುತಿದ್ದಾರು–ಎಂದು ಹೇಳಿ ಆತನಮನೆಗೆ ಬೇಕಾದ ಸಾಮಗ್ರಿಗಳನ್ನು ಕಳುಹಿಸಿಕೊಟ್ಟು ಸಮಾಚಾರವನ್ನೂ ಹೇಳಿಕಳುಹಿಸಿದರು. ಬಳಿಕ–ಇನ್ನುಮೇಲೆ ಇವನಿಗೆಏನಾದರೂ ಕೆಲಸವನ್ನು ಹೇಳಬೇಕೆಂದು ಆಲೋಚಿಸಿ, ಲೆಕ್ಕವನ್ನು ಬರೆಯಬೇಕೆಂದು ಆಜ್ಞೆಯಂ ಮಾಡಿ-ನೀನು ಈ ಕೆಲಸದಲ್ಲಿಯೇ ಇದ್ದರೆ ನಿನ್ನ ಜ್ಞಾನವು ತಿಳಿಯಬಾರದೀತು–ಎನಲು, ಏಕನಾಥನು ಸಂತೋಷಗೊಂಡು ಅವಶ್ಯವಾಗಲಿ. ತಮ್ಮ ಆಜ್ಞೆಯೇ ನನಗೆ ಮುಖ್ಯವು–ಎಂದು ನುಡಿದು ಅಂದಿನಿಂದ ಆ ಕೆಲಸಕ್ಕೆ ಪ್ರವರ್ತಿಸಿದನು. ಗುರುಗಳ ಸೇವೆಯಲ್ಲಿಯೂ ಕಡಿಮೆಬೀಳದಿದ್ದನು. ಇದನ್ನು ನೋಡಿ ಜನಾರ್ದನಪಂತರು ಈತನು ಚತುರನು. ಲೆಕ್ಕವನ್ನು ಸಮಂಜಸವಾಗಿ ಬರೆದಾನು. ಈತನ ವಿಚಾರವು ನನ್ನ ಮನಸ್ಸಿಗೆ ಹತ್ತಿತು. ಇನ್ನುಮೇಲೆ ಯಾವನಿಮಿತ್ತದಿಂದಲಾದರೂ ಈತನ ಮನಸ್ಸನ್ನು ಸ್ವರೂಪದಲ್ಲಿ ಹತ್ತಿಸಬೇಕೆಂದು ಆಲೋಚಿಸಿ, ಏಕನಾಥನಂ ಕರೆದು–ಖರಡುಕತಾವಣೆಗಳಂ ನೋಡಿ ನಮಗೆ ಲೆಕ್ಕವನ್ನು ತಂದುತೋರಿಸು–ಎನಲು, ಅವಶ್ಯವೆಂದು ಅವರ ಪಾದಗಳಿಗೆ ಎರಗಿ ಅಲ್ಲಿಂದ ಹೊರಟು ನಿತ್ಯಾಚರಣೆಗಳನೆಲ್ಲವನ್ನೂ ನೆರವೇರಿಸಿ ರಾತ್ರಿಯಲ್ಲಿ ದೀಪಕ್ಕೆ ಎಣ್ಣೆಯನ್ನು ತುಂಬುವಂತೆ ಹಾಕಿ ಲೆಕ್ಕಗಳನ್ನು ಇಟ್ಟುಕೊಂಡು ನೋಡಲು, ಕಡೆಗೆ ಒಂದು ಕಾಣಿಯು ತಪ್ಪಿದ್ದುದರಿಂದ ಅದನ್ನು ಹುಡುಕುತ್ತ ಕುಳಿತನು. ಎಲ್ಲೆಲ್ಲಿ ನೋಡಿದರೂ ಆಕಾಣಿ ದೊರೆಯದೆ ಲೆಕ್ಕವು ತಾಳೆಬೀಳದೆಹೋಗಲು, ಏಕಾಗ್ರಚಿತ್ತನಾಗಿ ಹುಡುಕುತಿದ್ದನು. ಒಂದುಕ್ಷಣವಾದರೂ ಮಲಗನು. ದೇಹದ ಅಲಸಿಕೆಯಂ ನೋಡನು. ದಾರುಣವಾದ ಬಾಯಾರಿಕೆಯಾದರೂ ಜಲಪಾನಮಾಡನು. ಆಹಾರವಂ ತೆಗೆದುಕೊಂಡು ಜಲಪಾನಮಾಡಿದರೆ ನಿದ್ರೆಯೂ ಆಲಸ್ಯವೂ ಬಂದೀತು. ಗುರುನಾಥರು ಕೇಳಿದರೆ ಏನುತ್ತರಹೇಳಲಿ ?–ಎಂದು ಚಿಂತೆಯಂ ಮಾಡುತ್ತ ಕುಳಿತನು.

ಆಗ ಜನಾರ್ದನಪಂತರು ಎಚ್ಚರಿಕೆಗೊಂಡು ಸುತ್ತಲೂ ನೋಡಲು, ಏಕನಾಥನು ಕಾಣಲಿಲ್ಲ. ಆಶ್ಚರ್ಯಗೊಂಡು ಅಂತರ್ಗೃಹಗಳಲ್ಲಿ ನೋಡುತ್ತ ಬಂದರು. ಅಲ್ಲಿ ಲೆಕ್ಕವಂ ನೋಡುತ್ತ ಕುಳಿತಿದ್ದನು. ಆ ಸಮಯದಲ್ಲಿ ಆಕಸ್ಮಿಕವಾಗಿ ಕಾಣಿಯು ಸಿಕ್ಕಿ ಲೆಕ್ಕವು ತಾಳೆಬೀಳಲು, ಆಯೇಕನಾಥನು ಹರ್ಷಗೊಂಡು ತನ್ನಲ್ಲಿ ತಾನೇ ಚಪ್ಪಳೆಯಂ ಬಾರಿಸಿದನು. ಇತರರು ಯಾರೂ ಇರಲಿಲ್ಲ. ಆಗ ಜನಾರ್ದನಪಂತರು ಅಲ್ಲಿಯೇ ನಿಂತುಕೊಂಡು ಕೌತುಕವಂ ನೋಡಿ ಬಳಿಕ ಇದಿರಾಗಿ ಬಂದು ಏಕನಾಥನೇ! ಮನಸ್ಸಿಗೆ ಏನಾಶ್ಚರ್ಯವು ತೋರಿದುದರಿಂದ ಸಂತೋಷಗೊಂಡು ನಕ್ಕೆ?-ಎಂದು ಬೆಸಗೊಳಲು, ಆಧ್ವನಿಯಂ ಕೇಳಿ ಬೆರಗಾಗಿ ಪಕ್ಕದಲ್ಲಿ ನೋಡಿ ಥಟ್ಟನೆ ಎದ್ದು ನಮಸ್ಕಾರವಂಮಾಡಿ-ಲೆಕ್ಕವನ್ನು ಶೋಧಿಸಿ ನೋಡುವಾಗ ಅದರಲ್ಲಿ ಒಂದು ಕಾಣಿಯು ತಪ್ಪಿ ಇದ್ದಿತು. ಅದು ಆಕಸ್ಮಿಕವಾಗಿ ಸಿಕ್ಕಿ ತಾಳೆಬಿದ್ದುದರಿಂದ ಮನಸ್ಸಿಗೆ ಸಂತೋಷವಾಯಿತು. ಅದರಿಂದ ನನಗೆ ನಗೆ ಬಂದುದು—ಎಂದನು. ಆಮಾತಂ ಕೇಳಿ ಜನಾರ್ದನಪಂತರು ವಿಸ್ಮಿತರಾಗಿ—ನಿನ್ನ ಚಿತ್ತವು ಆಕಾಣಿಯಲ್ಲಿಯೇ ಏಕಾಗ್ರವಾಗಿ ಎಂತು ನಿಂತಿತೋ ಅಂತು ಶ್ರೀಕೃಷ್ಣನ ಪಾದಗಳಲ್ಲಿ ಸ್ಥಿರವಾಗಿ ನಿಂತರೆ ನಿಜಹಿತವನ್ನು ನೀನು ಹೊಂದುವೆ—ಎನಲು, ಈ ಶಬ್ದವು ಕಿವಿಯಲ್ಲಿ ಬೀಳುವುದೂ ಮನದಲ್ಲಿ ಪಶ್ಚಾತ್ತಾಪವನ್ನು ತಾಳಿ—ಪೂಜ್ಯರು ಈಮಾರ್ಗವನ್ನೇ ಆದೇಶಿಸಲೆಂದು ಅಪೇಕ್ಷಿಸುತಿದ್ದೆನು. ಇಂದಿನದಿನ ಸುದಿನವು. ಕೃಪೆಯಿಂದ ಅನುಗ್ರಹವಂ ಮಾಡಲು, ಮಾಯೆಯ ವಿಕಾರವು ಪರಿಹಾರವೊಂದಿತು. ಪ್ರಾಪಂಚಿಕವಿಕಾರವು ತಳದಿಂದ ಬಳಿದು ಹೋಯಿತು—ಎಂದು ನುಡಿದು ಬಳಿಕ ಲೇಖನಿಯಂ ತೆಗೆದುಕೊಂಡು ಸದ್ಗುರುಗಳ ಪಾದದ ಮೇಲೆ ಇರಿಸಿ "ಜಮಾಖರ್ಚಿನ ಝಡತಿ" ಯನ್ನು ಹೇಳಿದನು:—ಇದನ್ನು ಪ್ರೀತಿಯಿಂದ ಕೇಳಬೇಕು. ನರದೇಹವೆಂಬುದೇ "ಸಾಲ್ ಮಜಕೂರ್ ಜಮಾ." "ಗುದಸ್ತೆಯ ಸಿಲ್ಕ" ಪೂರ್ವದ ಸಂಸ್ಕಾರ. ಹೃದಯವೆಂಬ ಪತ್ರದಲ್ಲಿ ಪ್ರೇಮವೆಂಬ ಅಕ್ಷರಗಳಿಂದ ಸ್ವಧರ್ಮವೆಂಬ ಖರ್ಚನ್ನು ಬರೆದೆನು. ವಿಚಾರವೆಂಬ ನಿಯಮದ "ಸುರನೀಸಂ" ಜಾಗರೂಕತೆಯಿಂದ ಬರೆದೆನು. ಬಳಿಕ ಗುರುಕೃಪೆಯೆಂಬ ಎಲ್ಲಾ ಲೆಕ್ಕವನ್ನೂ ವಿಚಾರಿಸಿದೆನು. ಸಕಲಫಲತ್ಯಾಗವಂ ಮಾಡಿದುದರಿಂದ ಸ್ವಾಮಿಗಳ ಬಳಿಯಲ್ಲಿ ನಿಸೂರಾದೆನು. ಬ್ರಹ್ಮಾರ್ಪಣವಾಗಿ ಆಸಮಯದಲ್ಲಿ ಸಮರ್ಪಿಸಿದೆನೋ ಇಲ್ಲವೋ ತಿಳಿಯದು—ಎಂದು ಈ ಪ್ರಕಾರದಿಂದ ನರದೇಹದ ಜಮೆಯನ್ನು ಝಾಡೆಯಾಗಿ ತಂದು ಅಜ್ಞಾನದ ಬಾಕಿಯನ್ನು ಝಾಡೆಮಾಡಿ ವ್ಯಾಪಾರಗಳಂ ಬಿಟ್ಟು ನಿಮ್ಮ ಪಾದಗಳಲ್ಲಿಯೇ ಹತ್ತಿದೆನು. ತ್ರೈಲೋಕ್ಯಸ್ವಾಮಿತ್ವವೆಂಬ ವ್ಯಾಪಾರವು ತಮ್ಮ ದೆಸೆಯಿಂದ ನನಗೆ ದೊರೆಯಿತು. ಶ್ರೀಕೃಷ್ಣನ ಚರಣವೇ ನನ್ನ ಹೃದಯಕ್ಕೆ ಪ್ರಿಯವಾಗಿರುವುದು. ತಾವು ಕೃಪೆಮಾಡಿ "ಸೋಹಂ" ಎಂಬ ಸನ್ನದನ್ನು ಕೊಟ್ಟಿರಿ. ಅದನ್ನು ನಾನು ಸಿರಿದಿಂದ ವಹಿಸಿದೆನು. ತಮ್ಮ ಪ್ರೇಮವೆಂಬ ಅಪರಿಮಿತವಸ್ತ್ರಂಗಳ ಉಡು

ಗೊರೆಯಂ ಈಗ ಹೊಂದಿದವನಾದೆನು. ಅದರಿಂದ ಭವರೋಗಬಾಧೆಯು ಪರಿಹಾರ ವೊಂದಿತು. ಕೈವಲ್ಯವೆಂಬ ಪಟ್ಟಣವಂ ಸೇರಿ ಚೈತನ್ಯವೆಂಬ ಆಸನದಲ್ಲಿ ಕುಳಿತೆನು. ಸ್ವಾನುಭವನೆಂಬ ತಹಶೀಲಂ ಮಾಡಿ ಸ್ವಾಮಿಗಳಿಗೆ ಇರಸಾಲಂ ಕೊಟ್ಟೆನು. ಸಂತರ ಸಂಗದಿಂದ ಭಕ್ತಿಯ ವಸೂಲಂ ಬಾಕಿಮಾಡಿದೆನು. ಪೂರ್ವದ ಸುಕೃತವೇನಿದ್ದಿತೋ ಅದರಿಂದ ಶ್ರೀರಾಮನಾಮದಲ್ಲಿ ಭಕ್ತಿಯನ್ನು ಮಾಡಿದೆನು—ಎಂದು. ಆ ಮಾತುಗಳಂ ಕೇಳುವುದೂ ಜನಾರ್ದನರಂತರಿಗೆ ಪರಮಾನಂದವಾಯಿತು. ಈತನಿಗೆ ಉಪದೇಶವಂ ಮಾಡಲು ಅಧಿಕಾರವುಂಟಾಯಿತೆಂದು ತೋರುವುದು—ಎಂದು ಬಗೆದರು. ಬಳಿಕ ಏಕ ನಾಥನಂ ಎಬ್ಬಿಸಿ ಆಲಿಂಗಿಸಿಕೊಂಡು ತಾರಕವಾದ ರಾಮಕೃಷ್ಣಮಂತ್ರಗಳಂ ಉಪದೇ ಶಿಸಿದರು. ಏಕನಾಥನು ಅದರಲ್ಲಿಯೇ ವಿಶ್ವಾಸವನ್ನು ದೃಢವಾಗಿಟ್ಟು ಗೂಢವಾದ ಪರಮಾ ರ್ಥಯೋಗವನ್ನು ಪ್ರೀತಿಯಿಂದ ಮಾಡುತಿರುವನು. ಇಷ್ಟು ಕೃಪೆಯಾದಬಳಿಕವೂ ಗುರುಸೇವೆಯಲ್ಲಿ ಕಡಿಮೆಬೀಳದೆ ದಿನದಿನಕ್ಕೆ ಅಧಿಕವಾದ ಸದ್ಭಾವವಂ ಪಡೆದನು.

ಆತನ ನಿಶ್ಚಯವಂ ನೋಡಿ ಜನಾರ್ದನಪಂತರು-ಈತನನ್ನು ಮನುಷ್ಯನೆಂಬ ವರು ಯಾರು ? ಪ್ರಪಂಚವನ್ನು ಉದ್ಧರಿಸುವುದಕ್ಕೋಸ್ಕರ ವಿಷ್ಣುವೇ ಅವತರಿಸಿರು ವನು. ಇನ್ನುಮೇಲೆ ಈತನಲ್ಲಿ ಕೃಪೆಯಂ ಮಾಡಿ ಈತನಿಗೆ ಶ್ರೀದತ್ತಾತ್ರೇಯರ ದರ್ಶನವಂ ಮಾಡಿಸಬೇಕು—ಎಂದು ಮನದಲ್ಲಿ ಎಣಿಸಿ ಉಲ್ಲಾಸಗೊಂಡು ಏಕನಾಥನಂ ಕುರಿತು—ನಿನಗೆ ದತ್ತಾತ್ರೇಯರ ದರ್ಶನವಂ ಮಾಡಿಸುವೆನು. ನೀನು ನಿರ್ಭಯತೆ ಯಿಂದ ಚಿತ್ತವನ್ನು ದೃಢಮಾಡಿಕೊಂಡಿರು. ಅವರು ತಮ್ಮ ಸ್ವರೂಪವನ್ನು ಒಂದೊಂ ದು ಗಳಿಗೆಗೆ ಒಂದೊಂದು ಪ್ರಕಾರ ಬೇರೆಮಾಡುವರು. ಅಜ್ಞಾನಿಜನಗಳು ಯಾರನ್ನು ನಿಂದಿಸುವರೋ ಅಂತವರ ರೂಪವನ್ನೇ ಅವರು ತಾಳುತಿರುವರು. ಆದರೆ ನಾನು ಯಾರಸಂಗಡ ಮಾತನಾಡುತಿರುವೆನೋ ನೀನು ಅವರ ಪಾದಗಳನ್ನು ದೃಢವಾಗಿ ಹಿಡಿ ಯುವನಾಗು. ನಿನಗೆ ಅವರು ಪ್ರಸಾದವನ್ನು ಕೊಟ್ಟರೆ ನೀನು ಅದನ್ನು ಅಲ್ಲಿಯೇ ಭಕ್ಷಿಸು—ಎಂದು ಬುದ್ಧಿವಾದವನ್ನು ಹೇಳಲು, ಏಕನಾಥನು ಅವರಿಗೆ ಸಾಷ್ಟಾಂಗನಮ ಸ್ಕಾರವನ್ನು ಮಾಡಿ—ಪೂಜ್ಯರೇ! ನನಗೆ ಬಹುದಿವಸದಿಂದ ಇದೇ ಅಪೇಕ್ಷೆ ಇದ್ದಿತು. ಆದರೆ ಸ್ವಾಮಿಗಳ ಆಜ್ಞೆಯಂ ಮೀರಿ ಎಂದಿಗೂ ಎಂತೂ ಮಾತನಾಡಲಾರೆನು. ಈದಿ ವಸ ನನ್ನ ಆ ಮನದರ್ಥವನ್ನು ಅನುಸರಿಸಿ ನನಗೆ ಅಭಯವಂ ಕೊಟ್ಟಿರಿ. ಇಂದು ದತ್ತಾತ್ರೇಯರ ಚರಣಸಂದರ್ಶನವಂ ಮಾಡಿಕೊಂಡು ಮನೋರಥವನ್ನು ಪೂರೈಸಿ ಕೊಳ್ಳುವೆನು-ಎಂದನು.

ಇಂತು ಪರಿಪೂರ್ಣವಾದ ಏಕನಾಥನ ಬಯಕೆಯಂ ಬಗೆದು ಆತನನ್ನು ತನ್ನೊ ಡನೆ ಅರಣ್ಯಕ್ಕೆ ಕರೆದುಕೊಂಡು ಹೋದರು. ಆಗ ಅಲ್ಲಿಗೆ ಅನಸೂಯಾಸುತರು ನೋಡುವುದಕ್ಕೋಸ್ಕರ ಬಂದರು.

ಆಗ ಅವರು ಏಕನಾಥನನ್ನು ಕುರಿತು-ಇದೋ ತುರುಷ್ಕವೇಷದಿಂದ ಕುದುರೆಯ ಮೇಲೆ ಕುಳಿತುಕೊಂಡು ಬರುತಿರುವವರು. ಇವರೇ ನಮ್ಮ ಸ್ವಾಮಿಗಳು-ಎನಲು, ಏಕನಾಥನು ನೋಡಿ-ಈತನು ಯವನನೇ ಸರಿ-ಎಂದು ತಿಳಿದನು. ರಕ್ತ ವರ್ಣವೂ ವಿಶಾಲವೂ ಆದ ನೇತ್ರಗಳುಳ್ಳವರಾಗಿ ಕುದುರೆಯನೇರಿ ಕೈಯಲ್ಲಿ ಶಸ್ತ್ರವನ್ನು ಪಿಡಿದು ಸಮೀಪಕ್ಕೆ ಬಂದ ಅವರನ್ನು ಜನಾರ್ದನಪಂತರು ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿದರು. ಯವನರೂಪದ ದತ್ತಾತ್ರೇಯರು ಜನಾರ್ದನಪಂತರ ಸಂಗಡ ಮಾತನಾಡುತ ಕುಳಿತರು. ಏಕನಾಥನು ಅವರಂ ಕಂಡು ಆಶ್ಚರ್ಯಗೊಂಡನು.

ಬಳಿಕ ದತ್ತಾತ್ರೇಯರು ಭೋಜನವಂ ಮಾಡಬೇಕೆಂದು ನುಡಿದು ಬಗೆವಗೆಯ ಪಕ್ವಾನ್ನಂಗಳಂನಿರ್ಮಿಸಿ ರತ್ನಖಚಿತವಾದ ಚಿನ್ನದ ತಳಿಗೆಯಲ್ಲಿ ಬಡಿಸಿಕೊಂಡು ಜನಾರ್ದನಪಂತರಸಂಗಡ ಭೋಜನವಮಾಡುತ್ತಾ ಅತ್ತಕಡೆ ಕಾಣುವ ಬಾಲಕನನ್ನು ನಿಮ್ಮ ಮನಸ್ಸಿಗೆ ಬಂದರೆ ಭೋಜನಕ್ಕೆ ಕರೆಯಬಹುದೆಂದರು.

ಆ ಮಾತಂ ಕೇಳಿ ಏಕನಾಥನು ಯವನನ ಅನ್ನವನ್ನು ಭಕ್ಷಿಸುವುದೆಂತು ?-ಎಂದು ವಿಕಲ್ಪಗೊಂಡು ದೂರವ್ಹೋಡಿಹೋದನು. ಬಳಿಕ ದತ್ತಾತ್ರೇಯರು ಅದೃಶ್ಯರಾಗಲು, ಗುರುಗಳ ಬಳಿಗೆ ಬಂದು ಅವರ ಪಾದದ ಮೇಲೆ ಶಿರಸ್ಸನಿರಿಸಿ-ಈಗ ಬಂದಿದ್ದ ಯವನನು ಯಾವನು ? ತಾವು ಆತನ ದರ್ಶನವಂ ಪಡೆದಿರಿ-ಎನಲು, ಅವರು-ಅವರನ್ನು ನೀನು ಅರಿಯದೆಹೋದೆ. ಅವರೇ ದತ್ತಾತ್ರೇಯರು. ಸಾಧಕರು ನಾನಾಸಾಹಸಂಗಳನ್ನು ಮಾಡುವರು. ಆದರೂ ಅವರಿಗೆ ಸಂದರ್ಶನವು ಆಗಲಾರದು. ಅಂತವರ ಸಂದರ್ಶನವು ನಿನಗೆ ಅನಾಯಾಸದಿಂದಲೇ ಆದರೂ, ನಿನ್ನ ಮನದಲ್ಲಿ ವಿಕಲ್ಪ ಹುಟ್ಟಿತು. ಭಾಗ್ಯಹೀನನು ಮಾರ್ಗವನ್ನು ನಡೆಯುತ್ತಿರುವಾಗ ಕಲ್ಪವೃಕ್ಷವು ಕಾಣಲು ಅದನ್ನು ಉಪೇಕ್ಷಿಸಿದಂತಾಯಿತು. ಅಮೂಲ್ಯವಾದ ಮುಕ್ತಾಫಲಗಳು ಕೈಮೇಲೆ ಬಿದ್ದರೂ ಪ್ರಾಪ್ತಿಯಿಲ್ಲದಿರಲು, ಕಣ್ಣುಗಳಂ ಮುಚ್ಚಿಕೊಂಡಂತಾಯಿತು. ಅಮೃತಸಮುದ್ರವನ್ನಾದರೂ ಕಾಣಬಹುದು. ಕಾಲನನ್ನಾದರೂ ಕೋಲಿನಿಂದ ಹೊಡೆದು ಕೊಲ್ಲಬಹುದು. ಅನಸೂಯಾಸುತರು ಪ್ರಾಕೃತರ ದೃಷ್ಟಿಗೆ ದುರ್ಲಭರು. ವಜ್ರಾಸನದಿಂದ ಅತಿಕಠಿನವಾದ ಯೋಗವನಾದರೂ ಸಾಧಿಸಬಹುದು. ಪ್ರಾಣಿಮಾತ್ರದ ಮನೋಗತವನ್ನು ಹೇಳದಿದ್ದರೂ ತಿಳಿಯಬಹುದು. ಸಾಹಸವಂ ಮಾಡಿ ಸಪ್ತಸಮುದ್ರಗಳಲ್ಲಿಯೂ ಸ್ನಾನವಂ ಮಾಡಬಹುದು. ಮುಂದಣ ಭವಿಷ್ಯತ್ಸಂಗತಿಯನ್ನಾದರೂ ತಿಳಿಯಬಹುದು. ಆದರೆ ಆ ದತ್ತಾತ್ರೇಯರ ಸಂದರ್ಶನವನ್ನು ಮಾಡುವುದು ಆಗಲಾರದು. ಅದು ನಿನಗೆ ಲಭಿಸಿದ್ದರೂ ನೀನು ವಿಕಲ್ಪಗೊಂಡೆ. ಆದರೂ ಚಿಂತೆಯಿಲ್ಲ. ಮುಂದೆ ಇನ್ನೊಂದುವೇಳೆ ದರ್ಶನವಂ ಕೊಟ್ಟಾರು. ಆಗಲಾದರೂ ಜಾಗರೂಕನಾಗಿರು-ಎಂದು ನುಡಿದರು.

ಆವಮಾತಿಗೆ ಏಕನಾಥನು-ನಾನು ನಿಮ್ಮ ಮುದ್ರಾಂಕಿತನೆನಿಸಿರುವೆನು. ಮತ್ತೊಂದುಕಡೆ ಚಿತ್ತವನಿಟ್ಟರೆ ವಿಕಲ್ಪವು ಹುಟ್ಟೀತು. ಬಾಲಕನು ತಂದೆಯ ಗುರುತನ್ನು ತಿಳಿದರೆ ತಂದೆಯು ಸಹಜವಾಗಿಯೇ ಪ್ರೀತಿಯಂ ಮಾಡುವನು. ಅಂತು ನಿಮ್ಮ ಪಾದಗಳನ್ನು ಸಿರದಲ್ಲಿ ಧರಿಸಲು, ಶ್ರೀದತ್ತಾತ್ರೇಯರು ಸಂತುಷ್ಟರಾಗುವರು. ತೊಟ್ಟನಲ್ಲಿ ಬಿಟ್ಟ ಹೂವಿಗೆ ಬೇರಿನ ರಸವು ಎಂತು ಸಹಜವಾಗಿ ಉಂಟಾಗುವುದೋ ಅಂತು ನಿಮ್ಮ ಧ್ಯಾನವು ನನಗೆ ಹತ್ತಿರಲು, ಅನಾಯಾಸದಿಂದಲೇ ಅವರ ದರ್ಶನವು ನನಗೆ ದೊರೆದೀತು-ಎಂದು ಉತ್ತರವಂ ಹೇಳಿದನು. ಇಂತು ಮಾತನಾಡುತ್ತ ಇಬ್ಬರೂ ಮನೆಗೆ ಬಂದರು.

ಮತ್ತೊಂದು ದಿನ ಗುರುಗಳು ಏಕನಾಥನಂ ಕರೆದು ಇಂದು ಅರಣ್ಯಕ್ಕೆ ಹೋಗೋಣ ಬಾ. ನಿನಗೆ ದತ್ತಾತ್ರೇಯರ ದರ್ಶನವಂ ಮಾಡಿಸುವೆನು. ಅವರು ಯಾವ ರೂಪದಿಂದ ಬರುವರೋ ನನಗದು ತಿಳಿಯದು-ಎಂದು ನುಡಿದು, ಆತನನ್ನೂ ಸಂಗಡ ಕರೆದುಕೊಂಡು ಅರಣ್ಯಕ್ಕೆ ಹೋದರು. ಸ್ವಲ್ಪಕಾಲವಾಗುವುದೂ ದತ್ತಾತ್ರೇಯರು ಮಲಂಗಫಕೀರನ ರೂಪವಂ ತಾಳಿ ಬಂದರು. ಸಂಗಡ ಮಾಯೆಯನ್ನೇ ಸ್ತ್ರೀಯನ್ನಾಗಿಯೂ ಕಾಮಧೇನುವನ್ನೇ ನಾಯಿಯನ್ನಾಗಿಯೂ ಮಾಡಿಕೊಂಡು ಬಂದುದಂ ಕಂಡು ಜನಾರ್ದನಪಂತರು ಆನಂದಗೊಂಡು ಅವರ ಮುಂದೆ ಹೋಗಿ ಸಾಷ್ಟಾಂಗ ನಮಸ್ಕಾರವಂ ಮಾಡಲು, ಅವರೂ ಆಲಿಂಗಿಸಿಕೊಂಡರು. ಸರ್ವರೂ ಸ್ವಲ್ಪಕಾಲ ಮಾತನಾಡುತ ಕುಳಿತರು.

ದತ್ತಾತ್ರೇಯರು-ನನಗೆ ಹಸಿವು ಬಹುವಾಗಿದೆ. ಭೋಜನವಂ ಮಾಡಬೇಕು-ಎಂದು ಮಣ್ಣಿನ ಮುಚ್ಚಳವನ್ನು ತೆಗೆದುಕೊಂಡು ಅದರಲ್ಲಿ ತಮ್ಮ ಹಸ್ತದಿಂದ ನಾಯಿ ಮೊಲೆಹಾಲನ್ನು ಕರೆದು ಆ ಹಾಲಿನಿಂದ ಅನ್ನವಂ ಕಲಿಸಿ ಜನಾರ್ದನಪಂತರೊಡನೆ ಭೋಜನವಂ ಮಾಡುತ್ತ-ಅತ್ತಕಡೆ ಕಾಣುವ ಹುಡುಗನು ಯಾರು? ಅವನಂ ಕರೆದುಕೊಂಡುಬನ್ನಿ. ಭೋಜನವಂ ಮಾಡಲಿ-ಎಂದು ಅಪ್ಪಣೆಯಂ ಕೊಡಲು, ಏಕನಾಥನು ಆಮಾತಂ ಕೇಳಿ-ಈತನು ಪ್ರತ್ಯಕ್ಷವಾಗಿ ಫಕೀರನು. ವಿಪರೀತಕಾರ್ಯವನ್ನು ಮಾಡುವುದೆಂತು?-ಎಂದು ಎಣಿಸಿ ಮನದಲ್ಲಿ ಸಂಕೋಚಗೊಂಡನು.

ಆಗ ಜನಾರ್ದನಪಂತರು ಏಕನಾಥನನ್ನು ಕುರಿತು-ನಿನಗೆ ಮೊದಲೇ ಎಲ್ಲವನ್ನೂ ಹೇಳಿ ಇದ್ದೆನು. ಸದ್ಗುರುಗಳ ಸಂದರ್ಶನವು ಲಭಿಸಿರುವುದು. ಇವರ ಪ್ರಸಾದವನ್ನು ತೆಗೆದುಕೊಂಡು ಹೋಗು-ಎಂದು ಹೇಳಲು, ಬಳಿಕ ಏಕನಾಥನು ಮನದಲ್ಲಿ ಸಂಕೋಚಪಡುತ್ತ ಅಂಜುತ್ತ ಸಮೀಪಕ್ಕೆ ಬಂದು-ಸಂಗಡ ನಾನು ಕುಳಿತುಕೊಳ್ಳುವುದಿಲ್ಲ. ಪ್ರಸಾದವನ್ನು ಕೊಡಬೇಕೆನಲು, ಆಗ ಜನಾರ್ದನಪಂತರು ಉಚ್ಛಿಷ್ಟಗ್ರಾಸವನ್ನು ತೆಗೆದು ಆತನ ಕೈಯಲ್ಲಿ ಕೊಟ್ಟರು. ಏಕನಾಥನು ಅದನ್ನು ವಸ್ತ್ರದ ಸೆರಗಿನಲ್ಲಿ ಕಟ್ಟಿಕೊಂಡು ಸುಮ್ಮನೆ ಕುಳಿತುಕೊಂಡನು. ಭೋಜನವಾದಬಳಿಕ

ದತ್ತಾತ್ರೇಯರು—ಅತ್ತ ಕಡೆ ಇರುವ ಹುಡುಗನು ಯಾವನು—ಎಂದು ಮತ್ತೆ ಕೇಳಲು-ಅವರು ಏಕನಾಥನಂ ಕರೆದು ದತ್ತಾತ್ರೇಯರ ಪಾದದಮೇಲೆ ಬೀಳಿಸಿದರು.

ಆಗ ಗುರುವರೇಣ್ಯರು ವೈದಿಕವಿ-ಶ್ರುತಿಶಾಸ್ತ್ರಂಗಳ ಸಾರವಂ ಆಲೋಚನೆ ಮಾಡಿ ಲೋಕಹಿತಾರ್ಥವಾಗಿ ವ್ಯಾಸರು ಹೇಳಿರುವ ಶ್ರೀಭಾಗವತದ ಅರ್ಥವು ಅತ್ಯಂತ ರಹಸ್ಯವಾಗಿರುವುದು. ಅದನ್ನು ಈತನು ಪ್ರಾಕೃತಭಾಷೆಯಿಂದ ಹೇಳಿಯಾನು. ಅದನ್ನು ಪ್ರೀತಿಯಿಂದ ಶ್ರವಣಮಾಡುವರು ಭವಬಾಧೆಯನ್ನು ಕಳೆದುಕೊಂಡಾರು. ಅಲ್ಲದೆ ಶ್ರೀಹರಿಯ ಚರಿತ್ರೆಯನ್ನು ಅನೇಕವಾದ ಗಾನಪದಗಳಿಂದ ರಚನೆಮಾಡಿ ಕೀರ್ತನದಿಂದ ಜನರನ್ನು ಉದ್ಧರಿಸಿಯಾನು—ಎಂದು ವರವಂ ಕೊಟ್ಟು ಸಿರದಲ್ಲಿ ಅಭಯಕರವನಿಟ್ಟು, ಬಳಿಕ ಆ ಕ್ಷಣದಲ್ಲಿಯೇ ಅದೃಶ್ಯರಾದರು.

ಬಳಿಕ ಜನಾರ್ದನಪಂತರು ಏಕನಾಥನಂ ಕುರಿತು—ಇಂದಾದರೂ ನಿನಗೆ ಯಥಾರ್ಥವು ತೋರಿತೋ ಇಲ್ಲವೊ? ನಿನಗೆ ಕೊಟ್ಟ ಪ್ರಸಾದವನ್ನು ಎಲ್ಲಿ ಹಾಕಿರುವೆ? ಹೇಳು—ಎನಲು, ಆತನು ಆಗ್ರಾಸವನ್ನು ಬಿಸುಟ್ಟುಬಿಟ್ಟೆನೆಂದನು. ಆಗ ಜನಾರ್ದನರು ತಮ್ಮ ಮುಖದಿಂದ ತಂಬುಲವಂ ತೆಗೆದು ಸ್ವಹಸ್ತದಿಂದ ಆತನ ಮುಖದಲ್ಲಿ ಹಾಕಿ ಆತನ ಕೈಯಂ ಹಿಡಿದುಕೊಂಡು ಮನೆಗೆ ಬಂದರು.

ಬಳಿಕ ಇರ್ವರೂ ಒಬ್ಬರನ್ನೊಬ್ಬರು ಅಗಲದೆ ಇದ್ದರು. ತಾಯಿಯು ಪಸುಳೆಯನ್ನೂ ಪಸುಳೆಯು ತಾಯನ್ನೂ ಮರೆಯದೆ ಇರುವಂತೆ ಇದ್ದರು. ದೀಪವೂ ಅದರ ಪ್ರಕಾಶವೂ, ಸುವರ್ಣವೂ ಅದರ ಕಾಂತಿಯೂ, ಉದಕವೂ ದ್ರವತ್ವವೂ, ಸೂರ್ಯನೂ ಆತನ ಕಿರಣವೂ, ಚಂದ್ರನೂ ಶೀತಲತ್ವವೂ, ವಾಯುವೂ ಚಂಚಲತ್ವವೂ, ಸಮುದ್ರವೂ ತೆರೆಗಳೂ, ಅಮೃತವೂ ಮಾಧುರ್ಯವೂ, ಕಿವಿಯೂ ಕೇಳುವಿಕೆಯೂ, ಪೃಥ್ವಿಯೂ ಘನತ್ವವೂ, ಅಧ್ಯಾತ್ಮವೂ ಸತ್ವಗುಣವೂ ಎಂತು ಅಭಿನ್ನಗಳಾಗಿ ನಾಮಮಾತ್ರದಿಂದ ಬೇರೆಯಾಗಿರುವುವೋ ಅಂತು ಜನಾರ್ದನರೂ ಏಕನಾಥನೂ ನಾಮರೂಪಗಳಿಂದ ಬೇರೆಯಾಗಿ ಏಕಚಿತ್ತರಾಗಿ, ಆವೆಯೂ ಅದರ ಮರಿಯೂ ಇರುವಂತಿದ್ದರು.

ಬಳಿಕ ಒಂದುದಿವಸ ಜನಾರ್ದನರು-ಇನ್ನುಮೇಲೆ ಈತನಿಂದ ಸೇವೆಯಂ ತೆಗೆದುಕೊಳ್ಳುವುದು ಅನುಚಿತವಾಗಿ ಕಾಣುವುದು—ಎಂದು ಮನದಲ್ಲಿ ಭಾವಿಸಿ ಏಕನಾಥನಂ ಕರೆದು-ನನ್ನ ಆಜ್ಞೆಯೇ ನಿನಗೆ ಪ್ರಮಾಣವು. ಇನ್ನು ನೀನು ಸ್ವಗೃಹಕ್ಕೆ ಹೋಗಿ ಗೃಹಸ್ಥಾಶ್ರಮವನ್ನು ಅವಲಂಬಿಸಿ, ಸ್ನಾನಸಂಧ್ಯಾವಂದನದೇವತಾರ್ಚನವೈಶ್ವದೇವಾತಿಥಿಪೂಜಾದಿನಿತ್ಯಕರ್ಮಗಳನ್ನೂ ನೈಮಿತ್ತಿಕಕರ್ಮಗಳನ್ನೂ ವಿಧಿವಿಹಿತವಾಗಿ ಆಚರಿಸಿ ಜನರಿಗೆ ಸನ್ಮಾರ್ಗವಂ ತೋರಿಸುವನಾಗು. ನೀನು ಅಧ್ಯಾತ್ಮಜ್ಞಾನನಿಪುಣನಾದರೂ ಸತ್ಕರ್ಮಗಳನ್ನು ಬಿಡಬೇಡ. ತಾನು ನದಿಯನ್ನು ದಾಟದ ಬಳಿಕ ಹರಿಗೋಲನ್ನು ಎಂತು ಒಡೆಯಬಾರದೋ ಅಂತುಜ್ಞಾನವಂ ಪಡೆದಿದ್ದರೂ ಕರ್ಮಗಳನ್ನು ಧ್ವಂಸಮಾಡಬಾರದು. ಕರ್ಮಗಳನ್ನು ಮಿಥ್ಯಾಭೂತಗಳೆಂದು ತಿಳಿದಿದ್ದರೂ ಲೋಕಾಚಾರ

ಕ್ಕೋಸ್ಕರ ಆಚರಿಸಲೇಬೇಕು. ಯಥಾವಿಧಿಕರ್ಮಗಳನ್ನಾಚರಿಸಿ ಅವಂ ಈಶ್ವರಾರ್ಪಣವಮಾಡಬೇಕು. ನೀನು ಈ ವಚನವನ್ನೇ ಪ್ರಮಾಣವಾಗಿ ತಿಳಿದು ನಡೆದವನಾದರೆ ನಿನಗೆ ರುಕ್ಮಿಣೀಕಾಂತನು ಪ್ರಸನ್ನನಾಗುವನು-ಎಂದು ಹೇಳಿ ಮಸ್ತಕದಮೇಲೆ ಹಸ್ತವನ್ನಿರಿಸಲು, ಆತನು ಅಭಿವಂದಿಸಿ ಆಜ್ಞೆಯಂ ತೆಗೆದುಕೊಂಡು ಪ್ರತಿಷ್ಠಾನಕ್ಕೆ ಹೊರಟನು. ಸದ್ಗುರುಗಳ ವಚನವೇ ಪ್ರಮಾಣವು. ಅದಕ್ಕಿಂತ ಅಧಿಕವಾದ ಸಾಧನವೇ ಇಲ್ಲ. ಇಂತಹ ಗುರುಭಕ್ತಿಯುಳ್ಳವರೇ ಗುರುತಂಬಲ್ಲರು ; ಇತರರು ತಿಳಿಯರು. ಅದಂತಿರಲಿ.

ಬಳಿಕ ಏಕನಾಥನು ತನ್ನ ಮನೆಯಂ ಸೇರಿ ವೃದ್ಧರಾದ ತಾಯ್ತಂದೆಗಳಿಗೆ ನಮಸ್ಕಾರವಂ ಮಾಡಿದನು. ಮಗನಂ ಕಂಡು ಅವರು ಪರಮಸಂತೋಷವಂ ತಾಳಿದರು. ಏಕನಾಥನು ನಿತ್ಯದಲ್ಲಿಯೂ ಸ್ನಾನಸಂಧ್ಯಾವಂದನದೇವತಾರ್ಚನಮಾತಾಪಿತೃಸೇವೆಗಳಂ ಮಾಡುತ್ತ ಯಾರ ಉಪಸರ್ಪಣೆಯನ್ನೂ ಮಾಡದೆ, ಚಿಕ್ಕವರು ದೊಡ್ಡವರು-ಎಂಬ ವಿಕಲ್ಪವನೆಣಿಸದೆ, ಕಣ್ಣಿಗೆ ಕಾಣುವ ಚರಾಚರಪ್ರಪಂಚವೆಲ್ಲವನ್ನೂ ಜನಾರ್ದನರೂಪದಿಂದ ತಿಳಿಯುತ್ತ ಮನೆಯಲ್ಲಿದ್ದ ಪುರಾತನವಾದ ಪಾಂಡುರಂಗಮೂರ್ತಿಯನ್ನು ಭಕ್ತಿಪುರಸ್ಸರವಾಗಿ ನಾನಾವಿಧೋಪಚಾರಗಳಿಂದ ಪೂಜಿಸಿ ನೈವೇದ್ಯವಂ ಸಮರ್ಪಿಸಿ ಪುಷ್ಪಾಂಜಲಿಯನೆರಚಿ ಪ್ರದಕ್ಷಿಣನಮಸ್ಕಾರಗಳಂ ಮಾಡಿ ಪಶ್ಚಾತ್ತಾಪಯುಕ್ತನಾಗಿ, ಜಯ ಪತಿತಪಾವನನೇ! ಜಗದುದ್ಧಾರಕನೇ! ದ್ವಾರಕಾವಾಸಿಯೇ! ರುಕ್ಮಿಣೀರಮಣನೇ! ಅನಾಥನಾಥನೆ! ಸರ್ವೇಶ್ವರನೇ! ಪಾಂಡುರಂಗನೇ! ನಾನು ಅನನ್ಯಭಾವದಿಂದ ನಿನ್ನನ್ನು ಶರಣುಹೊಕ್ಕಿರುವೆನು. ನನ್ನನ್ನು ಉದ್ಧರಿಸು—ಎಂದು ಪ್ರಾರ್ಥಿಸಿ ಮತ್ತೆ ನಮಸ್ಕಾರವಂ ಮಾಡಿ ತೀರ್ಥವಂ ಪ್ರಾಶನಮಾಡಿ ತುಳಸೀಪ್ರಸಾದವಂ ಸ್ವೀಕರಿಸಿ ಬ್ರಾಹ್ಮಣರನ್ನು ಪಂಕ್ತಿಯಲ್ಲಿ ಕುಳ್ಳಿರಿಸಿಕೊಂಡು ಭೋಜನವಂ ಮಾಡಿ ಮೂರನೆಯ ಜಾವದಲ್ಲಿ ಸದ್ಭಾವದಿಂದ ಪುರಾಣವಂ ಪಠಿಸಿ ರಾತ್ರಿಯಲ್ಲಿ ಹರಿಕೀರ್ತನೆಯನ್ನು ಆರಂಭಿಸುತ್ತಿದ್ದನು. ಕೇಳುವುದಕ್ಕೋಸ್ಕರ ಅನೇಕರಾದ ಭಾವುಕರು ಬಂದು ಏಕನಾಥನ ಕೀರ್ತನವಂ ಕೇಳಿ ತಲ್ಲೀನರಾಗುತ್ತಿದ್ದರು. ಏಕನಾಥನು ಜನಾರ್ದನರ ಕೃಪೆಯಿಂದ ಪ್ರಸಾದವಾಕ್ಯಗಳಂಬಂತೆ ಕವಿತ್ವವಂ ನುಡಿಯುತ್ತ ಇದ್ದನು. ಸಾಧುಸಜ್ಜನರು ಅದಂ ಕೇಳಿ ಸಂತೋಷಭರಿತರಾಗುತ್ತಿದ್ದರು.

ಒಂದುದಿವಸ ರಾತ್ರಿಯಲ್ಲಿ ಏಕನಾಥನು ನಿದ್ದೆಗೈಯುತ್ತಿರಲು, ಶ್ರೀರಘುನಾಥನು ಸ್ವಪ್ನದಲ್ಲಿ ಬಂದು--ವಾಲ್ಮೀಕಿಕೃತರಾಮಾಯಣವು ಸಂಸ್ಕೃತವಾದುದರಿಂದ ಅದರ ಅರ್ಥವು ಗಹನವಾಗಿರುವುದು ; ಅಜ್ಞರಿಗೆ ತಿಳಿಯಲಸಾಧ್ಯವು. ಅದಕ್ಕೆ ಮಹಾರಾಷ್ಟ್ರಭಾಷೆಯಿಂದ ಟೀಕೆಯಂ ಮಾಡಿ ಜನಗಳಿಗೆ ನಿರವಿಸಬೇಕು-ಎಂದು ನುಡಿಯಲು, ಏಕನಾಥನು ಇಂತಹಸ್ವಪ್ನವಂ ಕಂಡು ಎಚ್ಚರಿಕೆಗೊಂಡು ಎದ್ದು ಸಂತೋಷಗೊಂಡು ಸ್ವಾಮಿಯ ಆಜ್ಞೆಯನ್ನು ಶಿರದಿಂದ ವಹಿಸಿ ಪ್ರಶಸ್ತವಾದ ಒಂದುದಿವಸವನ್ನು ನೋಡಿ,

ಶುಭಮುಹೂರ್ತದಲ್ಲಿ ಸಪ್ತಕಾಂಡಗಳನ್ನೂ ಶೋಧಿಸಿ ತದಭಿಪ್ರಾಯವೆಲ್ಲವನ್ನೂ ಮನಸ್ಸಿಗೆ ತಂದುಕೊಂಡು ತಲ್ಲೀನನಾಗಿ-ಇದರ ಅರ್ಥವು ಬಹುಗಂಭೀರವಾದುದು. ಇದನ್ನು ನಾನು ಪ್ರಾಕೃತದಿಂದ ಏನಹೇಳಬಲ್ಲೆನು?—ಎಂದು ಚಿಂತಿಸಿ, ಗುರುಗಳ ಪಾದವನ್ನು ನೆನೆದು, ಸದ್ಗುರುಕೃಪೆಯಿಂದ ನನ್ನ ಬುದ್ಧಿಗೆ ತೋರಿದಷ್ಟು ಹೇಳು ವೆನು-ಎಂದು ತೊಡಗಿ ಬಾಲಕಾಂಡವನಾರಂಭಿಸಿ ಮೊದಲನೆಯ ಅಧ್ಯಾಯದಲ್ಲಿ ಮಂಗ ಳಾಚರಣೆಯಂ ಮಾಡಿ ವಿಘ್ನೇಶ್ವರನನ್ನೂ ಸರಸ್ವತಿಯನ್ನೂ ಸ್ತುತಿಯಿಸಿ ಸದ್ಗುರು ಗಳಿಗೆ ಅಭಿವಂದಿಸಿ ಸಾಧುಸಜ್ಜನರಂ ಪ್ರಾರ್ಥಿಸಿ "ಏಕನಾಥೀಯ" ಎಂಬ ಗ್ರಂಥ ವನ್ನು ಸದ್ಭಾವದಿಂದ ರಚಿಸಲುಜ್ಜುಗಿಸಿದನು. ಅದನ್ನೇ "ಭಾವಾರ್ಥರಾಮಾಯಣ ವೆಂದೂ" ಹೇಳುವರು. ಶ್ರೀರಘುನಾಥನೇ ಮುಖದಲ್ಲಿ ನಿಂತು ಯಥಾರ್ಥವನ್ನು ನುಡಿಯಿಸುತಿದ್ದನು. ನಿಮಿತ್ತಮಾತ್ರಕ್ಕೆ ಏಕನಾಥನು ಮುಂದಾಳಾಗಿರುವನು. ಪವಿ ತ್ರರಾದ ಸದ್ಭಕ್ತರು ಇದನ್ನು ಬಲ್ಲರು. ನೆರೆಯಲ್ಲಿದ್ದ ಒಬ್ಬ ಗೃಹಸ್ಥನು-ಸಂಸ್ಕೃತದ ಮೇಲೆ ಪ್ರಾಕೃತದ ಟೀಕೆಯನ್ನು ಏಕೆ ಮಾಡುವನು?—ಎಂದು ನಿತ್ಯದಲ್ಲಿಯೂ ನಿಂದಿಸುತಿದ್ದನು. ಭಾವುಕರಾದ ಪ್ರೇಮಿಗಳರು—ಈ ಕವಿತ್ವವು ರಸಭರಿತವಾದುದು. ಕಿವಿಯಲ್ಲಿ ಬೀಳುವುದೂ ತತ್ಕಾಲದಲ್ಲಿಯೇ ಮನದ ತಲ್ಲಣವು ಬಿಟ್ಟುಹೋಗು ವುದು-ಎನುತಿದ್ದರು.

ಬಳಿಕ ಒಂದುದಿನದ ರಾತ್ರಿಯಲ್ಲಿ ಏಕನಾಥನು ನಿದ್ದೆಗೈಯುತಿರುವ ಸಮಯ ದಲ್ಲಿ ಜಾನಕೀಪತಿಯು ಸ್ವಪ್ನದಲ್ಲಿ ಬಂದು—ನಿದ್ದೆಯನ್ನೂ ಆಲಸ್ಯವನ್ನೂ ಬಿಟ್ಟು ರಾಮಾಯಣವಂ ಬರೆಯುತ ಕುಳ್ಳಿರು. ನಿನ್ನ ವಾಕ್ಕು ರಸಯುಕ್ತವಾದುದು. ನನಗೆ ಬಹುಪ್ರಿಯವು—ಎಂದು ಮಷೀಭಾಜನವನ್ನೂ ಲೇಖನಿಯನ್ನೂ ಪತ್ರಿಕೆಯನ್ನೂ ತಂದುಕೊಟ್ಟನು. ಆಗ ಏಕನಾಥನು ಎಚ್ಚರಗೊಂಡು ಥಟ್ಟನೆ ಎದ್ದು ಸಮೀಪ ದಲ್ಲಿ ಗೋಚರನಾದ ಶ್ರೀರಾಮಚಂದ್ರನನ್ನು ನೋಡಿ ಪರಮಾನಂದಭರಿತನಾಗಿ ಸಾಷ್ಟಾಂಗನಮಸ್ಕಾರವಂಮಾಡಿ ರಾಮಾಯಣವಂ ಬರೆಯುತ್ತ ಕುಳಿತುಕೊಳ್ಳಲು, ಆಗ ಒಂದು ಅದ್ಭುತವು ನಡೆದುದು:—ಸಜ್ಜನರು ಅದನ್ನು ಆಲಿಸಬೇಕು.

ಆಂಜನೇಯನು ಸೀತೆಯನ್ನು ಹುಡುಕುವುದಕ್ಕೋಸ್ಕರ ಹೊರಟ ಕಥೆಯಂ ಬರೆಯುವ ಸಮಯದಲ್ಲಿ ಏಕನಾಥನಿಗೆ ಭ್ರಾಂತಿಯೇನೂ ಇರಲಿಲ್ಲ. ನಾನು—ಎಂಬ ಅಹಂಕಾರವಿರಲಿಲ್ಲ. ಮಹೇಂದ್ರಪರ್ವತದ ಮೇಲಿನಿಂದ ಹನುಮಂತನು ಹಾರಿದ ಕಥಾಸಂಗತಿ ಬರುವಾಗ ಆತನಿಗೆ ಕೇವಲಾನಂದಾವಿರ್ಭಾವವುಂಟಾಯಿತು. ಪ್ರೇಮ ರಸವು ಮನದಲ್ಲಿ ತುಂಬಿಕೊಂಡುಬರಲು, ಆ ಅರ್ಧರಾತ್ರಸಮಯದಲ್ಲಿ ಆಕ್ಷಣವೇ ಹಾರಿ ನೆರೆಮನೆಯ ಅಂಗಳದಲ್ಲಿ ಬಿದ್ದನು.

ಆ ಮನೆಯ ಯಜಮಾನನು ಎಚ್ಚತ್ತು ಅಂಗಳದಲ್ಲಿ ನೋಡುವಾಗ ಏಕನಾ ಥನು ಮೂರ್ಛಿತಬಿಟ್ಟು ಬಿದ್ದಿದ್ದನು. ಕಂಡು ವಿಸ್ಮಿತನಾಗಿ ಕೈಯಲ್ಲಿದ್ದ ಕಾಗದವನ್ನು

ತೆಗೆದುನೋಡಲು, ಕಥಾಭಿಪ್ರಾಯವು ಮನದಲ್ಲಿ ಹೊಳೆಯಲು, ಪ್ರೇಮಭರದಿಂದ ಹಾರಿಬಿದ್ದನೆಂದು ತಿಳಿಯಿತು. ಆತನನ್ನು ಕುರಿತು—ಏನುನಿಮಿತ್ತದಿಂದ ಇಲ್ಲಿಗೆ ಹಾರಿಬಂದುಬಿದ್ದಿರಿ ?—ಎಂದು ಬೆಸಗೊಂಡನು. ಆಗ ದೇಹಸ್ಮೃತಿಯಿಲ್ಲದಕಾರಣ ಏಕನಾಥನು ಉತ್ತರವೇನನೂ ಹೇಳಲಿಲ್ಲ. ಆಗೃಹಸ್ಥನು ಏಕನಾಥನ ಅಂತಹಸ್ಥಿತಿಯಂ ಕಂಡು ಪಶ್ಚಾತ್ತಾಪಯುಕ್ತನಾಗಿ, ಈತನು ಅವತಾರಪುರುಷನು. ಈತನನ್ನು ನಾನು ವ್ಯರ್ಥವಾಗಿ ನಿಂದಿಸುತಿದ್ದೆನು—ಎಂದು ಎಣಿಸಿ ಬಳಿಕ ಆತನನ್ನು ತನ್ನ ಬೆನ್ನಿಗೆ ಕಟ್ಟಿಕೊಂಡು ಹೋಗಿ ಆತನ ಮನೆಯಲ್ಲಿ ಕುಳ್ಳಿರಿಸಿದನು. ಏಕನಾಥನು ಎಚ್ಚರಿಕೆಗೊಂಡು ಮತ್ತೆ ಬರೆಯಲು ತೊಡಗಿದನು.

ಆಗ ಆಗೃಹಸ್ಥನು ಸಾಷ್ಟಾಂಗನಮಸ್ಕಾರವಂ ಮಾಡಿ ತನ್ನ ಮನೆಗೆ ಹೋಗಿ ಏಕನಾಥನಿಂದ ಉಪದೇಶವನ್ನು ತೆಗೆದುಕೊಳ್ಳಬೇಕೆಂದು ಆಲೋಚನೆಯಂ ಮಾಡಿದನು. ಅದ್ಭುತವಾದ ಚಮತ್ಕಾರವನ್ನು ಕಂಡುದರಿಂದ ವಿಶ್ವಾಸವು ಹುಟ್ಟಿದರೇನು ? ಅದು ಶುದ್ಧಭಾವಾರ್ಥವಲ್ಲ. ದಾಂಭಿಕವೆನಿಸಿಕೊಳ್ಳುವುದು. ಪರಿಸದ ಶಿಲೆಯನ್ನು ದೇವರ ಮೂರ್ತಿಯನ್ನಾಗಿ ಮಾಡಿಕೊಂಡು ಸಕಲೋಪಚಾರಗಳಿಂದ ಪೂಜಿಸಿದರೂ ಅದನ್ನು ದಾಂಭಿಕವೆಂದೇ ಹೇಳಬೇಕು. ಕಾಮಧೇನುವಿನ ಮಹಿಮೆಯಂ ನೋಡಿ ಅದಕ್ಕೆ ಪ್ರದಕ್ಷಿಣೆಯಂ ಮಾಡಿದರೇನು ? ಸದ್ಭಾವದ ಗುರುತನ್ನು ಸುಜ್ಞಾನಿಗಳು ತಿಳಿಯುವರು. ಕಲ್ಪವೃಕ್ಷವೆಂದು ತಿಳಿದಬಳಿಕ ಕಾಮ್ಯಬುದ್ಧಿಯಿಂದ ಅದಕ್ಕೆ ನೀರ ನೆರೆದರೆ ಅಂತಹ ಜನರನ್ನು ಪರೋಪಕಾರಿಗಳೆಂದು ಸಜ್ಜನರು ಹೇಳುವರೇ ? ಅದೇ ರೀತಿಯಿಂದ ಮೊದಲು ಸಂತರನ್ನು ಅಪಹಾಸ್ಯಮಾಡಿ ಅವರ ಮಹಿಮೆಯಂ ಕಂಡು ಬಳಿಕ ಅವರಲ್ಲಿ ಭಕ್ತಿಯಂ ಮಾಡುವವನನ್ನು ದಾಂಭಿಕನೆಂದೂ ಮಾಯಾವಿಯೆಂದೂ ಹೇಳಬೇಕಲ್ಲದೆ ಮತ್ತೇನೂ ಇಲ್ಲ. ಗೃಹಸ್ಥನಿಗೆ ವೈಭವವುಂಟಾದರೆ ನಂಟರೂ ಇಷ್ಟರೂ ಬಹುವಾದ ಆದರಣೆಯಂ ಮಾಡುವರು. ಆದರೆ ಅವರು ಪೂರ್ವದಲ್ಲಿ ಮಾಡಿದ ಅಪಮಾನವು ಸ್ಮೃತಿಪಥವನಡರಿದರೆ ಆ ಆದರಣೆಯು ಎಂದಿಗೂ ಪ್ರಶಸ್ತವೆನಿಸಲಾರದು. ಅಂತು ಆ ಗೃಹಸ್ಥನು ಏಕನಾಥನನ್ನು ಮೊದಲು ಮನವಾರೆ ನಿಂದಿಸಿ ಮಹಿಮೆಯಂ ನೋಡಿದ ಬಳಿಕ ಶರಣಾಗತನಾದರೂ ಅವನ ಪೂರ್ವದ ರೀತಿಯು ಸ್ಮರಣೆಗೆ ಬರಲು, ಅವನ ಭಕ್ತಿಯು ದಾಂಭಿಕವೆಂದು ಏಕನಾಥನಿಗೆ ತೋರಿತು.

ಒಂದು ದಿನ ಏಕನಾಥನು ದೇವರ ಮನೆಯಲ್ಲಿ ಏಕಾಂತದಲ್ಲಿ ಕುಳಿತಿರಲು, ಆಗೃಹಸ್ಥನು ಬಂದು—ತನ್ನ ಮಸ್ತಕದ ಮೇಲೆ ಕರವನ್ನಿರಿಸಿ ಉಪದೇಶವಂ ಮಾಡಬೇಕು—ಎಂದು ಬಹುವಿಧವಾಗಿ ಪ್ರಾರ್ಥಿಸಲು, ಆಮಾತಂ ಕೇಳಿ ಏಕನಾಥನು ಸುಮ್ಮನಿದ್ದನು. ಅಧಿಕಾರವಂ ನೋಡದೆ ಶಿಷ್ಯಪರಿಗ್ರಹವನೆಂತುಮಾಡುವುದು? ಭೂಮಿಯು ಊಷರವಾದುದಾದರೆ ಬೀಜವನೆಂತೂ ಬಿತ್ತಬಾರದು. ಕುಳಕ್ಕೆ ಸ್ಥಳವೂ ಸ್ಥಿತಿಯೂ ಇಲ್ಲದಿದ್ದರೆ ಸಾಲವನ್ನು ಕೊಡಬಾರದು. ಗಡಿಗೆಯು ದೃಢವಾದುದೋ ಭಿನ್ನವಾ

ದುದೋ–ಎಂಬುದನ್ನು ನೋಡದೆ ಅದರಲ್ಲಿ ನೀರನ್ನು ತುಂಬಬಾರದು–ಎಂದು ತಿಳಿದು-ಆಗೃಹಸ್ಥನಂ ಕುರಿತು-ನಿಮಗೆ ತಕ್ಕವರಾದವರಂ ನೋಡಿ ನೀವು ಅವರಲ್ಲಿ ಭಕ್ತಿಯಂ ಮಾಡುವುದು-ಎಂದು ಉತ್ತರವಂ ನುಡಿದನು. ಆದರೂ ಆತನು ಎಂತೂ ಕೇಳದೆ-ತಮ್ಮನುಳಿದು ಮತ್ತಾರಲ್ಲಿಯೂ ಉಪದೇಶವಂ ತೆಗೆದುಕೊಳ್ಳುವುದಿಲ್ಲ. ನೀವೇ ಉಪದೇಶವಂ ಮಾಡಬೇಕು–ಎಂದು ನಿರ್ಬಂಧಿಸಿದನು. ದಾಕ್ಷಿಣ್ಯಕ್ಕೋಸ್ಕರ–ನಾಳೆ ದಿನ ಮುಹೂರ್ತವು ಚೆನ್ನಾಗಿರುವುದು. ನೀವು ಸ್ನಾನವಂ ಮಾಡಿಕೊಂಡು ಬನ್ನಿ-ಎಂದು ಏಕನಾಥನು ನುಡಿದನು. ಬಳಿಕ ಆಗೃಹಸ್ಥನು ಮನೆಗೆ ಎದ್ದು ಹೋದನು.

ಏಕನಾಥನು–ಕೃಪಣನಿಗೂ ಅಲಸನಿಗೂ ಎಂತಾದರೂ ಉಪದೇಶವಂ ಮಾಡಬಾರದು-ಎಂದು ಮನದಲ್ಲಿ ಆಲೋಚನೆಯಂ ಮಾಡಿ ಮರುದಿವಸ ಉದಯದಲ್ಲಿ ಸ್ನಾನವಂ ಮಾಡಿ ದೇವರ ಮನೆಯಂ ಸೇರಿ, ಮನೆಯವರನ್ನು ಕುರಿತು–ನೀವು ಅಗ್ರೋದಕವನ್ನು ತಂದು ಇಡಬೇಡಿ. ನಾನು ಕೂಗಿದರೂ ಯಾರೂ ಪ್ರತ್ಯುತ್ತರವನ್ನು ಹೇಳಬೇಡಿ–ಎಂದು ದೃಢವಾಗಿ ಹೇಳಿ ಬಳಿಕ ಮಾನಸಪೂಜೆಗೆ ಕುಳಿತನು.

ಆಗೃಹಸ್ಥನು ಸ್ನಾನಮಾಡಿಕೊಂಡು ತ್ವರೆಯಿಂದ ಏಕನಾಥನ ಮನೆಗೆ ಬಂದು ಏಕನಾಥನು ದೇವರ ಮನೆಯಲ್ಲಿ ಧ್ಯಾನಾರೂಢನಾಗಿ ಕುಳಿತು ಮುಖದಿಂದ ರಾಮಕೃಷ್ಣ ಮಂತ್ರವಂ ಜಪಿಸುತಿರಲು, ಮಾತನಾಡುವುದಕ್ಕೆ ಅವಕಾಶವಿಲ್ಲದೆ ಸುಮ್ಮನ ಕುಳಿತುಕೊಂಡಿದ್ದನು.

ಏಕನಾಥನು–ಆಗೃಹಸ್ಥನ ಮನಸ್ಸನ್ನು ಪರೀಕ್ಷಿಸಬೇಕು. ದಾಂಭಿಕನಾಗಿದ್ದರೆ ಉಪದೇಶವಂ ಮಾಡಬಾರದು-ಎಂದು ಆಲೋಚಿಸಿ ಮನೆಯವರನ್ನು ಕುರಿತು–ದೇವರಿಗೆ ಅಗ್ರೋದಕವನ್ನು ಏಕೆ ತಂದಿಡಲಿಲ್ಲ? ಈಗಲಾದರೂ ಬೇಗದಿಂ ತಂದು ಇಡಿ-–ಎಂದು ಕೂಗಿದನು. ಯಾರೂ ಪ್ರತ್ಯುತ್ತರವನ್ನು ಕೊಡಲಿಲ್ಲ. ಏನಮಾಡಲಿ? ಯಾರೂ ತಂದಿಡಲಿಲ್ಲವಲ್ಲ! ನಾನೇ ಏಳಬೇಕಾಯಿತು–ಎಂದು ನುಡಿದು, ಸ್ವಲ್ಪಕಾಲವಾಗುವುದೂ ತಾನೆ ಎದ್ದು ಪಾತ್ರೆಯನ್ನು ಕೈಯಲ್ಲಿ ತೆಗೆದುಕೊಂಡು ಅಂತರ್ಗೃಹಕ್ಕೆ ಹೋಗಿ ಅಗ್ರೋದಕವನ್ನು ತಂದನು. ಆಗೃಹಸ್ಥನು ಯಾವುದಕ್ಕೂ ಮಾತನಾಡದೆ ಸುಮ್ಮನೆ ಕುಳಿತಿದ್ದನು. ಏಕನಾಥನು ಇಂತು ಆಗೃಹಸ್ಥನನ್ನು ಪರೀಕ್ಷಿಸಿ ಬಳಿಕ ತಾನು ದೇವರಪೂಜೆಯನಾರಂಭಿಸಿದನು. ಇವನು ಕೃಪಣನು ಅಲಸನು. ಇವನು ಉಪದೇಶಕ್ಕೆ ಅರ್ಹನಲ್ಲ. ಯಾವನು ಧನವ್ಯಯವಿಲ್ಲದೆ ಸುಲಭವಾಗಿ ದೊರೆಯುವ ಉದಕವನ್ನೇ ದೇವರಿಗೆ ತಂದು ಕೊಡನೋ ಅವನು ಮುಂದೆ ಸೇವೆಯನ್ನು ಏನು ಮಾಡಾನು? ಯಾವನು ಬ್ರಾಹ್ಮಣನಿಗೆ ನಮಸ್ಕಾರವನ್ನು ಮಾಡನೋ ಅವನು ಭಕ್ಷ್ಯಭೋಜ್ಯಗಳಿಂದ ಭೋಜನವನ್ನೇನುಮಾಡಿಸಾನು ? ಯಾವನು ಮಾರ್ಗಸ್ಥನಿಗೆ ಮಾರ್ಗವನ್ನು ತೋರಿಸನೋ ಅವನು ಇಳಿದುಕೊಳ್ಳುವುದಕ್ಕೆ ಮನೆಯಲ್ಲಿ ಸ್ಥಳವನ್ನೇನ ಕೊಟ್ಟಾನು? ಯಾವನು ನಂಟರಿಗೆ ಕುಳಿತುಕೊಳ್ಳುವುದಕ್ಕೆ ಆಸನವಂ ಕೊಡನೋ

ಅವನು ತಲೆಗೆ ಸುತ್ತಿಕೊಳ್ಳುವುದಕ್ಕೆ ಪಾಗನೇನಕೊಟ್ಟಾನು ? ಅಂತು ಕಾಸುಮುಟ್ಟದ ಉದಕವನ್ನು ತಂದು ಕೊಡದ ಈ ಗೃಹಸ್ಥನು ಮುಂದೆ ಸಾಧನವನೇನಮಾಡಾನು–ಎಂದು ಮನದಲ್ಲಿ ಎಣಿಸಿ ದೇವರ ಪೂಜೆಯಂ ಮಾಡುತಿದ್ದನು.

ಬಳಿಕ ಆಗೃಹಸ್ಥನು ನನ್ನ ಮಸ್ತಕದ ಮೇಲೆ ಹಸ್ತವನಿರಿಸಬೇಕು–ಎಂದು ಪ್ರಾರ್ಥಿಸಲು, ಏಕನಾಥನು-ಶುಭಮುಹೂರ್ತವು ಮೀರಿಹೋಯಿತು. ಇನ್ನು ಪ್ರಕೃತದಲ್ಲಿ ಶುಭಮುಹೂರ್ತವು ಕಾಣುವುದಿಲ್ಲ-ಎಂದು ನುಡಿದನು. ಆಗೃಹಸ್ಥನು ಆಮಾತಂ ಕೇಳಿ ಬೇಸರಗೊಂಡು ಎದ್ದು ಮನೆಗೆ ಹೊರಟುಹೋದನು. ಬಳಿಕ ಏಕನಾಥನಿಗೆ ಮನಸ್ಸಮಾಧಾನವಾಯಿತು. ದಾಂಭಿಕತ್ವವೂ ಶಿಷ್ಯಪರಿಗ್ರಹವೂ ವ್ಯರ್ಥವಾಗಿ ನನಗೆ ಏಕೆ ಬೇಕು? ಸರ್ವೋಪಾಧಿಗಳಂ ಬಿಡಿಸಿಕೊಂಡು ಶ್ರೀಪಾಂಡುರಂಗನನ್ನು ಏಕನಿಷ್ಠೆಯಿಂದ ಭಜಿಸಬೇಕು. ನನಗೆ ಶಿಷ್ಯಶಾಖೆಯು ಏಕೆ? ಅದರಿಂದ ನಾನು ಬಲ್ಲವನೆಂಬ ಅಹಂಕಾರವು ಉಂಟಾಗುವುದು-ಎಂದು ತನ್ನ ಮನದಲ್ಲಿ ಬಗೆದು ಏಕನಾಥನು ಕೇವಲವೈರಾಗ್ಯಭರಿತನಾಗಿ ಭಗವದ್ಭಜನೆಯಂ ಮಾಡುತಿದ್ದನು. ಮುಂದೆ ದ್ವಾರಕೆಯಿಂದ ಶ್ರೀಕೃಷ್ಣನು ಈತನ ಸೇವೆಯಂ ಮಾಡುವುದಕ್ಕೆ ತಾನೇ ಬರುವನು. ಆ ಕಥೆಯನ್ನು ಕಿವಿಯಿಂದ ಕೇಳಲು, ಶ್ರೋತೃಗಳಿಗೆ ಅಧಿಕವಾಗಿ ಸವಿ ಹತ್ತುವುದು. ಅದರಿಂದ ಭವರೋಗವು ವಿಧ್ವಸ್ತವಾಗಿ ಓಡಿಹೋಗುವುದು. ಆದುದರಿಂದ ಶ್ರೋತೃಗಳಂ ಕುರಿತು ಕಥಾಶ್ರವಣದಲ್ಲಿ ಮನಸ್ಸನಿರಿಸಿ ಸ್ವಸ್ಥರಾಗಿ ಕುಳ್ಳಿರಬೇಕೆಂದು ಅಡಿಗಡಿಗೂ ಬಿನ್ನವಿಸಿಕೊಳ್ಳುವೆನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತೈದನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ನಾಲ್ವತ್ತಾರನೆಯ ಅಧ್ಯಾಯ.

ಶ್ರೀಕೃಷ್ಣನು ದ್ವಾರಕೆಯಿಂದ ಏಕನಾಥನ ಸೇವೆಗೆ ಬರುವಿಕೆ.

ಇಂದು ಅಮೃತದ ಸಿಂಧುವೇ ತುಂಬಿತೋ, ಅಥವಾ ಬ್ರಹ್ಮವಿದ್ಯೆಯ ಬೊಕ್ಕಸವೇ ತೆರೆದುದೋ, ಅಲ್ಲದಿದ್ದರೆ ಸೂರ್ಯನ ತೇಜಸ್ಸು ಶ್ರೋತೃಗಳ ಹೃದಯದಲ್ಲಿ ಪ್ರಕಟವಾಯಿತೋ ಅಥವಾ ಶುದ್ಧಜ್ಞಾನದ ರಹಸ್ಯವು ಆಕಸ್ಮಿಕವಾಗಿ ಕಿವಿಯಲ್ಲಿ ಬಿದ್ದುದೋ, ಅಲ್ಲದಿದ್ದರೆ ಮೋಕ್ಷದ ಬೀಜವು ಪುಣ್ಯದಿಂದ ಪ್ರಾಪ್ತವಾಯಿತೋ, ಇಲ್ಲದಿದ್ದರೆ ಶುಭಗಳ ನಿಧಿಯಾದ ಈ ಮಂತ್ರರಾಜ್ಯವು ದೈವಯೋಗದಿಂದ ಮೊದಲು ಪ್ರಕಟವಾಗಲು,

ವಿವೇಕವೈರಾಗ್ಯಬುದ್ಧಿಯು ಭಕ್ತಕಥಾಸಂಧಿಯಲ್ಲಿಯೇ ಉಂಟಾಗಿರಬಹುದು. ಅಥವಾ ವಿವೇಕವೆಂಬ ಬಳ್ಳಿಯಲ್ಲಿ ಶಾಂತಿಸುಖರೂಪವಾದ ಮೊಳಕೆಯ ಸಸಿಯು ಹುಟ್ಟಿತೋ, ಅಲ್ಲದಿದ್ದರೆ ನಾರದಮುನೀಂದ್ರನ ಸುಖಸ್ವರೂಪವು ಪ್ರಕಟವಾಯಿತೋ-ಎಂಬಂತಿರುವುದು. ರಸಭರಿತವಾದ ಭಕ್ತರ ಕಥೆಯು ವೈರಾಗ್ಯಸಿಧಿ, ಭೂತದಯಾಸಾರವು, ಪ್ರೇಮದ ಗಣಿ, ಸಾಯುಜ್ಯದ ಸ್ಥಾನವು, ಕೀರ್ತನಸುಖದ ರಾಶಿಯು, ಸಿರ್ವಿಕಲ್ಪತೆಯ ಕಲ್ಪವೃಕ್ಷವು, ನಿಷ್ಕಾಮಸಾಧನೆಯ ಬೀಜವು-ಎನಿಸಿರುವುದು.

ಹಿತ್ತಾಳೆಗೆ ಕಾವು ಕೊಡಲು ಕಪ್ಪಾಗುವುದು. ಟಂಕಹತ್ತಿದ ಸುವರ್ಣವನ್ನು ಒರೆಗಲ್ಲಿನಲ್ಲಿ ಒರೆದರೆ ಬಣ್ಣ ಕಡಿಮೆಯಾಗಿ ಕಾಣುವುದು. ಅದನ್ನು ಪರೀಕ್ಷಕರು ನೋಡಿ ಎಂತು ಬಿಟ್ಟುಬಿಡುವರೋ ಅಂತು ಏಕನಾಥನು ಗೃಹಸ್ಥನ ಭಾವವಂ ಪರೀಕ್ಷಿಸಿ ಅವನನ್ನು ಪರಿಹರಿಸಿದನು. ಅನ್ನದ ಬಂದಗಳನ್ನು ಹಿಡಿದು ನೋಡಿ ಪಕ್ವವಾದ ರೀತಿಯನ್ನು ತಿಳಿಯುವಂತೆ ನೀರನ್ನು ಬೇಡಿ ಅವನ ಮನಃಪರಿಪಾಕವನ್ನು ತಿಳಿದನು. ಬಳಿಕ ಏಕನಾಥನು ನಿತ್ಯವೂ ಸದ್ಭಾವದಿಂದ ಷೋಡಶೋಪಚಾರಪೂರ್ವಕವಾಗಿ ಶ್ರೀಹರಿಯಂ ಪೂಜಿಸುತಿದ್ದನು. ಸಾಹಿತ್ಯವನ್ನು ಸಿದ್ಧಪಡಿಸಿಕೊಡುವುದಕ್ಕೆ ಎರಡನೆಯವನು ಇಲ್ಲವೆಂಬ ಅರ್ಥವು ಗರುಡಧ್ವಜನಿಗೆ ವಿದಿತವಾಗಲು, ಸ್ವಾಮಿಯು-ಏಕನಾಥನಿಗೆ ನನ್ನ ಪೂಜೆಯಲ್ಲಿ ವಿಶ್ವಾಸವು ದೃಢವಾಗಿ ಹತ್ತಿತು. ಆದುದರಿಂದ ಈಗ ನಾನು ತ್ವರೆಯಿಂದ ಆತನ ಕಾರ್ಯಗಳನ್ನು ಪ್ರೀತಿಗೊಂಡು ಮಾಡಬೇಕು-ಎಂದು ಎಣಿಸಿ ಬ್ರಾಹ್ಮಣರೂಪವಂ ತಾಳಿ ಪ್ರತಿಷ್ಠಾನಕ್ಕೆ ಬಂದು ಅಂತರಸಾಕ್ಷಿಯೂ ಚೈತನ್ಯಘನನೂ ಬ್ರಹ್ಮಾಂಡವಾಸಿಯೂ ಸರ್ವಜ್ಞನೂ ಜಗಜ್ಜೀವನನೂ ಆದ ತನಗೆ ಸರ್ವವೂ ವಿದಿತವಾಗಿದ್ದರೂ ಗ್ರಾಮವಾಸಿಗಳಾದ ಜನರಂ ಕುರಿತು-ಈವೂರಲ್ಲಿ ವೈಷ್ಣವಶಿರೋಮಣಿಯೆನಿಸಿ ಶ್ರೀಕೃಷ್ಣಪೂಜೆಯಲ್ಲಿ ಅತ್ಯಂತಾದರವುಳ್ಳವನಾಗಿ ಪ್ರತಿದಿನವೂ ಬ್ರಾಹ್ಮಣರಿಗೆ ಭೋಜನವಂ ಮಾಡಿಸುವವನ ಮನೆಯು ಯಾವುದು-ಎಂದು ಕೇಳುತ್ತಬರಲು, ಊರಿನವರು ಏಕನಾಥನ ಮನೆಯಂ ತೋರಿದರು. ಬ್ರಾಹ್ಮಣರೂಪಿಯಾದ ಶ್ರೀಕೃಷ್ಣನು ಏಕನಾಥನ ಮನೆಯಂ ಪ್ರವೇಶಿಸಿ ಆತನಿಗೆ ನಮಸ್ಕಾರವಂ ಮಾಡಿ-ನಾನು ಪರದೇಶಿ; ಅನಾಥಬ್ರಾಹ್ಮಣನು. ನೀವು ನಿತ್ಯದಲ್ಲಿಯೂ ಬ್ರಾಹ್ಮಣರಿಗೆ ಅನ್ನದಾನವಂ ಮಾಡುವಿರಿ-ಎಂದು ನಿಮ್ಮ ಕೀರ್ತಿಯನ್ನು ಕೇಳಿಬಂದೆನು. ನನಗೆ ಅನ್ನವಸ್ತ್ರಗಳಂ ಕೊಟ್ಟರೆ ನಾನು ಎಂದೂ ಇಲ್ಲಿಯೇ ಇದ್ದು ಆಲಸ್ಯಗೊಳ್ಳದೆ ಹೇಳಿದ ಕೆಲಸಗಳೆಲ್ಲವನ್ನೂ ಮಾಡುತಿರುವೆನು-ಎನಲು ಏಕನಾಥನು ಆತನನ್ನು ಕುರಿತು-ನೀವು ಯಾರು? ನಿಮ್ಮ ಊರುಯಾವುದು? ನಿಮ್ಮ ಹೆಸರೇನು? ಹೇಳಬೇಕು-ಎಂದು ಬೆಸಗೊಂಡನು.

ಶ್ರೀರುಕ್ಮಿಣೀಪತಿಯು-ನಾನು ಏಕಾಂಗಿ. ನನಗೆ ಮಡದಿಯೂ ಮಕ್ಕಳೂ ಯಾರೂ ಇಲ್ಲ. ನನಗೆ ಸಂಪತ್ತು ಮೊದಲೇ ಇಲ್ಲ. ಪ್ರಸಾದವನ್ನು ತೆಗೆದುಕೊಂಡು ಅನನ್ಯಭಾವದಿಂದ ನಿಮ್ಮ ಸೇವೆಯನ್ನು ಮಾಡುತ್ತ ಇರಬೇಕೆಂಬ ಅಪೇಕ್ಷೆಯಿಂದ

ಇಲ್ಲಿಗೆ ಬಂದೆನು. ಇನ್ನೂ ಅನೇಕಸ್ಥಳಗಳಂ ನೋಡಿದೆ. ಅಲ್ಲಿ ಇರುವುದಕ್ಕೆ ಮನಸ್ಸು ಒಡಂಬಡಲಿಲ್ಲ-ಎನಲು, ಆಮಾತಿಗೆ ಏಕನಾಥನು ಆಶ್ಚರ್ಯಗೊಂಡು-ನಿಮ್ಮ ಇಚ್ಛೆಯಿದ್ದರೆ ನಮ್ಮ ಮನೆಯಲ್ಲಿ ಅವಶ್ಯವಾಗಿ ಇರಬಹುದು-ಎಂದನು.

ಆ ಮಾತಿಗೆ ಶ್ರೀಹರಿಯು ಸಂತೋಷಪಟ್ಟನು. ಯಾವನು ಬ್ರಹ್ಮಾದಿದೇವ ರಿಗೂ ಪೂಜ್ಯನೋ, ಶಿವನು ಮೊದಲಾದವರೂ ಯಾವನ ಸ್ಮರಣೆಯಂ ಮಾಡುತಿರು ವರೋ, ಆ ಲೀಲಾನಾಟಕಿಯಾದ ಜಗಜ್ಜೀವನನು ಪರಿಚಾರಕನಾದನು. ಯಾವನ ಕೀರ್ತಿಯನ್ನು ವರ್ಣಿಸಲು ತೊಡಗಿ ಶ್ರುತಿಪುರಾಣಗಳೆಲ್ಲವೂ ಮರುಳಾದುವೋ ಆತನು ಗಂಗೆಯ ಉದಕವಂ ತುಂಬಿಕೊಂಡು ಕಾವಡಿಯನ್ನು ಪ್ರೀತಿಯಿಂದ ಹೊರು ತ್ತಿರುವನು. ಯಾವನು ಕ್ಷೀರಸಾಗರದಲ್ಲಿ ಪ್ರಭಾಕರಗಿರಿಯಲ್ಲಿ ಶೇಷಶಾಯಿಯಾಗಿ ಇರುವನೋ, ಯಾವನಿಗೋಸ್ಕರ ಯೋಗಿಗಳು ಅಷ್ಟಾಂಗಯೋಗವನ್ನು ಸಾಧಿಸುತ್ತ ಕಷ್ಟಪಡುವರೋ ಆ ಸ್ವಾಮಿಯು ಪ್ರಾತಃಕಾಲದಲ್ಲಿ ಎದ್ದು ದೇಹಶ್ರಮವನ್ನು ಮನಸ್ಸಿಗೆ ತಾರದೆ ದೇವರ ಉಪಕರಣಗಳನ್ನು ಬೆಳಗಿ ಕೊಡುತಿರುವನು. ನೀಲಮೇ ಘಶ್ಯಾಮನೂ ಸುಕುಮಾರನೂ ಸಾಯುಜ್ಯವನ್ನು ಕೊಡುವುದರಲ್ಲಿ ವಿಖ್ಯಾತನೂ ಆದ ಆ ರುಕ್ಮಿಣೀಕಾಂತನು ಸಂಮಾರ್ಜನವಂ ಮಾಡಿ ದೇವರ ಮನೆಯಂ ಸಾರಿಸುತ್ತಿರು ವನು. ಯಾವನ ಪಾದದ ದೆಸೆಯಿಂದ ಭಾಗೀರಥಿಯು ಪ್ರಕಟೆಯಾದಳೋ ಆತನು ದೇವರ ಪೂಜೆಗೆ ಅಗ್ರೋದಕವನ್ನು ತಂದುಕೊಡುತ್ತಿರುವನು. ಎಂಬತ್ತೆಂಟುಸಾಸಿರ ಮಹಾಋಷಿಗಳು ಸದ್ಭಾವದಿಂದ ಯಾವನಂ ಪೂಜಿಸುವರೋ ಆತನು ಬ್ರಾಹ್ಮಣ ರೂಪವಂ ಧರಿಸಿ ಗಂಧವನ್ನು ತೇದುಕೊಡುತ್ತಿರುವನು. ಅಷ್ಟಮಹಾಸಿದ್ಧಿಗಳೂ ದಾಸಿಯರಾಗಿ ಇರುಳೂ ಹಗಲೂ ಯಾವನ ಸೇವೆಯಂ ಮಾಡುವರೋ ಆತನು ದೇವರ ಪೂಜೆಗೋಸ್ಕರ ಪುಷ್ಪಗಳಿಂದ ಹಾರವಂ ಮಾಡಿಕೊಡುತಿರುವನು. ಚಂದ್ರನೂ ಸೂರ್ಯನೂ ನಕ್ಷತ್ರಗಳೂ ಯಾವನ ತೇಜಸ್ಸಿನಿಂದ ಪ್ರಕಾಶಿಸುತ್ತಿರುವರೋ ಆತನು ದೀಪವನ್ನು ಹತ್ತಿಸುತ್ತಿರುವನು. ಇಂದ್ರಾದಿಸಕಲದೇವತೆಗಳೂ ಯಾವನ ಆಜ್ಞಾ ಧಾರಕರೋ ಆತನು ಏಕನಾಥನ ದೇವರ ಪೂಜೆಗೆ ಅನೇಕೋಪಚಾರಗಳನ್ನು ಮಾಡಿ ಕೊಡುತ್ತಿರುವನು. "ಕೃಷ್ಣ" ಎಂದು ಕೂಗಲು, ಅಕ್ಷಣನೇ ಸಾದರನಾಗಿ ಇದಿ ರಿಗೆ ಬಂದು ನಿಂತಿರುವನು. ಇಂತು ಸೇವೆಯಂ ಮಾಡುತ್ತ ಯಾವವಿಷಯದಲ್ಲಿಯೂ ಕೊರತೆ ತೋರದಂತೆ ಸರ್ವಕಾಲದಲ್ಲಿಯೂ ಜಾಗರೂಕನಾಗಿದ್ದನು. ಶ್ರೀಖಂಡ ವನ್ನು ತೇದುಕೊಡುವ ಬ್ರಾಹ್ಮಣನಾದುದರಿಂದ ಕೆಲವರು, ಶ್ರೀಖಂಡೀಯ-ಎಂದು ಹೆಸರಿಟ್ಟು ಕರೆಯುತಿದ್ದರು. ಗ್ರಾಮವಾಸಿಗಳೆಲ್ಲರೂ ನೋಡಿ ಆಶ್ಚರ್ಯಗೊಂಡು, ಏಕನಾಥನ ಮನೆಯಲ್ಲಿ ಒಬ್ಬ ಬ್ರಾಹ್ಮಣನು ಸೇವೆಮಾಡಿಕೊಂಡಿರುವನು. ಸಂಬಳ ವನ್ನು ಅಪೇಕ್ಷಿಸುವುದಿಲ್ಲ. ಸಕಲಕಾರ್ಯಗಳನ್ನೂ ನಿರ್ವಹಿಸುತ್ತಿರುವನು. ಏಕನಾ ಥನಿಗೆ ತಿಳಿಯದಂತೆ ಅಡಿಗೆಮನೆಯಲ್ಲಿ ಆತನ ಮಡದಿಗೂ ಸಹಾಯನಾಗಿ ಕೆಲಸಗ

ಳನ್ನು ಮಾಡುತ್ತಿರುವನು. ಗುಡಿಸಿ ಸಾರಿಸಿ ಪಾತ್ರೆಗಳಂ ತೊಳೆದು, ನಡುವೆ ಅವಕಾಶ ದೊರೆಯಲು, ಮೊಸರನ್ನು ಕಡೆಯುವನು. ನನಗೆ ಕೆಲಸವನ್ನು ಹೇಳುವುದಕ್ಕೆ ಸಂಕೋಚಪಡಬೇಡ-ಎನ್ನುವನು. ಸ್ವಲ್ಪ ಅವಕಾಶವು ಸಿಕ್ಕಿದರೆ ಪಾಕಶಾಲೆಯನ್ನು ಬಳಿದು ಪಾಕಕ್ಕೆ ಬೇಕಾದ ಸಾಹಿತ್ಯವೆಲ್ಲವನ್ನೂ ಸಿದ್ಧಪಡಿಸುತ್ತಿರುವನು. ಸಮಯದಲ್ಲಿ 'ಬ್ರಾಹ್ಮಣರಿಗೆ ತಾನೇ ಬಡಿಸುವುದಕ್ಕೆ ಹೋಗುತ್ತಿರುವನು. ಆ ಅನ್ನಕ್ಕೆ ಹೊಸಪರಿಯಾಗಿ ವಿಜಾತೀಯವಾದ ರುಚಿಯುಂಟಾಗುತ್ತಿರುವುದು. ಜಗಜ್ಜೀವನನು ಬಡಿಸಿದ ಉದಕವನ್ನು ಪಾನಮಾಡುವಾಗಲೂ ಅನ್ನವನ್ನು ಭೋಜನಮಾಡುವಾಗಲೂ ಬ್ರಾಹ್ಮಣರು ವಿಸ್ಮಿತರಾಗುತ್ತಿದ್ದರು. ಉಚ್ಛಿಷ್ಟಪತ್ರಗಳಂ ಎತ್ತುವುದು ದೇವರಿಗೆ ಅತ್ಯಂತಪ್ರಿಯವಾದ ಕಾರ್ಯವಾದುದರಿಂದ ಕಚ್ಚೆಯನ್ನು ಬಿಗಿದು ಹಾಕಿಕೊಂಡು ಅನ್ನವನ್ನು ಸ್ವಹಸ್ತದಿಂದ ಬಳಿದು ಎಲೆಗಳಂ ತಂದು ಹೊರಗೆ ಹಾಕಿ ಕೈಗಳಂ ತಿಕ್ಕಿ ತೊಳೆದುಕೊಳ್ಳುತ್ತಿದ್ದನು.

ಏಕನಾಥನ ತಾಯ್ತಂದೆಗಳು ಆಯುಷ್ಯವು ತೀರಿದುದರಿಂದ ಸಂದುಹೋದರು. ಆಗ ಬಂದು ವಿಚಿತ್ರವು ನಡೆದುದು:—ಭಾವುಕರಾದ ಶ್ರೋತೃಗಳಿರಾ! ಕೇಳಿರಿ. ಏಕನಾಥನ ಪಿತೃಗಳ ದಿವಸವು ಪ್ರಾಪ್ತವಾಗಲು, ಏಕನಾಥನು—ನಾಳೆದಿನ ಪಿತೃಗಳನ್ನು ತೃಪ್ತಿಪಡಿಸುವುದಕ್ಕೋಸ್ಕರ ನೀವು ನಮ್ಮ ಮನೆಗೆ ಭೋಜನಕ್ಕೆ ಬರಬೇಕೆಂದು ಬ್ರಾಹ್ಮಣರಿಗೆ ಔತಣವಂಹೇಳಿ ಆದಿನ ಪ್ರಾತಃಕಾಲಕ್ಕೆ ಎದ್ದು ಸ್ನಾನವಂ ಮಾಡಿ ನಿತ್ಯಕರ್ಮವಂ ಆಚರಿಸಿ ಪಾಕವಂ ಮಾಡಿಸಿ ಸಿದ್ಧಗೊಳಿಸಿದನು.

ಬ್ರಾಹ್ಮಣರು ಸ್ನಾನಾಹ್ನಿಕಗಳನ್ನು ಮಾಡಿಕೊಂಡು ಹನ್ನೆರಡುಗಳಿಗೆಯ ವೇಳೆಗೆ ಮನೆಗೆ ಬಂದರು. ಏಕನಾಥನು ಉಪ್ಪರಿಗೆಯನೇರಿ ಧೋತ್ರಗಳನ್ನು ಒಣಗಿಸುತಿದ್ದನು. ಆಗ ಕೆಳಗೆ ಅಂತ್ಯಜಜಾತಿಯ ಸ್ತ್ರೀಪುರುಷರಿರ್ವರೂ ಬೀದಿಯನ್ನು ಗುಡಿಸುತಿದ್ದರು. ದಿವ್ಯವಾದ ಪಕ್ವಾನ್ನಗಳ ಸುವಾಸನೆಯು ತಮಗೆ ಪ್ರಾಪ್ತವಾಗಲು, ಬ್ರಾಹ್ಮಣರು ಪುಣ್ಯವಂತರು ; ಭೋಜನವಂ ಮಾಡುವರು-ಎಂದು ಹೆಂಗಸು ನುಡಿದಳು. ಅದಕ್ಕೆ ಪುರುಷನು ಮಡದಿಯಂ ಕುರಿತು—ನೀನು ವ್ಯರ್ಥವಾಗಿ ಏಕೆ ಬಯಸುವೆ ? ಬಿಸಿಬಿಸಿದಾದ ಪಕ್ವಾನ್ನಂಗಳು ಎಷ್ಟುಜನ್ಮಗಳಲ್ಲಿಯೂ ನಮಗೆ ದೊರೆಯವು. ಇಂದು ಅವರ ಮನೆಯಲ್ಲಿ ಶ್ರಾದ್ಧವು. ಬರಿದಾದ ಎಂಜಲೆಲೆಗಳನ್ನು ಹೊರಗೆ ತಂದು ಬಿಸುಡುವರು. ಅದನ್ನು ನೀನು ಅರಿಯದೆ ಸುಮ್ಮನೆ ವಾಸನೆಯನ್ನು ಹಿಡಿದೆ. ಎತ್ತ ಮದುವೆಗೆ ಹೋದರೆ ಅದಕ್ಕೆ ಜೋಳದ ಸಿಪ್ಪೆಯನ್ನೇ ತಿಂಡಿಹಾಕುವರು. ಆದುದರಿಂದ ಪ್ರಿಯೆ ! ನಮಗೆ ಪಕ್ವಾನ್ನಪ್ರಾಪ್ತಿಯು ಎಲ್ಲಿಯದು ?—ಎಂದನು. ಇಂತಿವರ ಸಂವಾದನನ್ನು ಏಕನಾಥನು ಕಿವಿಯಲ್ಲಿ ಕೇಳಿ ತನ್ನ ಮಡದಿಯಂ ಕರೆದು—ಹೊಲೆಯರಿಬ್ಬರು ಬೀದಿಯನ್ನು ಗುಡಿಸುತ್ತಿರುವರು; ಇವರು ಪಕ್ವಾನ್ನಭೋಜನವನ್ನು ಅಪೇಕ್ಷಿಸಿದರು. ಈಗ ಮನೆಯಲ್ಲಿ ಅಡಿಗೆಯು ಸಿದ್ಧವಾಗಿದೆ. ಇವರಿಗೆ ಭೋಜನಕ್ಕೆ

ಹಾಕಿಸಬೇಕು—ಎಂದನು. ಅದಕ್ಕೆ ಆಕೆ—ಅಡಿಗೆ ಬಹುವಾಗಿದೆ. ಮಕ್ಕಳುಮರಿಗಳನ್ನು ಕರೆದುಕೊಂಡು ಬರುವಂತೆ ಇವರಿಗೆ ಹೇಳಬೇಕು. ಇಬ್ಬರಿಗೆ ಮಾತ್ರ ಭೋಜನಕ್ಕೆ ಬಡಿಸಿದರೆ ಮನೆಯಲ್ಲಿರುವ ಉಳಿದವರು ತೃಪ್ತರಾಗದೆ ಹಾಗೆಯೇ ನಿಲ್ಲುವರು. ಇವರು ಹೋಗಿ ಅವರಿಗೆ ಹೇಳಲು, ಬಳಿಕ ಅವರೆಲ್ಲರೂ ಓಡಿಬಂದಾರು; ಆದುದರಿಂದ ಮೊದಲೇ ಸರ್ವರನ್ನೂ ಕರೆಯಿಸಿ ಪ್ರೀತಿಯಿಂದ ಭೋಜನಕ್ಕೆ ಹಾಕಿಸಬೇಕು. ಜನಾರ್ದನನು ಸರ್ವಭೂತಗಳಲ್ಲಿಯೂ ಇರುವುದರಿಂದ ಅನಾಮಿಕರಿಗಾದರೂ ತೃಪ್ತಿಯನುಂಟುಮಾಡಬೇಕು—ಎಂದು ನುಡಿದಳು. ಏಕನಾಥನು ಹೊರಗೆ ಬಂದು—ಎಲ್ಲರನ್ನೂ ಕರೆದುಕೊಂಡು ಬರುವಂತೆ ಆ ಅಂತ್ಯಜರಿಗೆ ಹೇಳಿ ಎಲ್ಲರನ್ನೂ ಬೀದಿಯಲ್ಲಿ ಸೇರಿಸಿ ಮನದಲ್ಲಿ ಸಂತೋಷಗೊಂಡು ಬ್ರಾಹ್ಮಣರ ಪೂಜೆಗೋಸ್ಕರ ಸಿದ್ಧಗೊಳಿಸಿದ್ದ ಗಂಧಪುಷ್ಪಾದಿಗಳನ್ನೂ ಅವರಿಗೇ ಕೊಡಿಸಿ ಶೂದ್ರನ ಕೈಯಿಂದ ಎಡೆಗಳಂ ಹಾಕಿಸಿ ಪಕ್ವಾನ್ನಂಗಳಂ ಬಡಿಸಿಸಿ ತುಪ್ಪ ಸಕ್ಕರೆ ಉಪ್ಪಿನಕಾಯಿ ಶಾಕಗಳು ಮುಂತಾದುವೆಲ್ಲವನ್ನೂ ಹೊರಗೆ ತರಿಸಿ, ಪ್ರಾಣಿಗಳಲ್ಲಿ ಜನಾರ್ದನನು ನಿಶ್ಚಯವಾಗಿಯೂ ಇರುವನು—ಎಂಬ ದೃಢವಾದ ಭಾವವಂ ಮನದಲ್ಲಿ ತಾಳಿ ಶ್ರೀಪತಿಯೇಭೋಕ್ತೃವೆಂದು ಸಂಕಲ್ಪವಂ ಮಾಡಿ ಉದಕವಂ ಬಿಟ್ಟು ತುತ್ತನ್ನು ತೆಗೆದುಕೊಳ್ಳಿ-ಎಂದು ಅವರಿಗೆ ಹೇಳಲು, ಅವರು ಮಕ್ಕಳುಮರಿಗಳೊಡನೆ ಪಕ್ವಾನ್ನಂಗಳಂ ಭೋಜನಮಾಡಿ, ಎಂದೂ ಕಾಣದ ಕೇಳದ ರಸವನನುಭವಿಸಿ, ಏಕನಾಥನೇ! ನಿನ್ನ ವ್ಯಾಪಾರವು ಧನ್ಯವಾದುದು. ನಮಗೆ ತೃಪ್ತಿಯನುಂಟುಮಾಡಿದೆ. ನಾವು ಅಂತ್ಯಜರು ಹೀನಜಾತಿಯವರು. ಇಂತಹ ಮೃಷ್ಟಾನ್ನವನ್ನು ನಾವು ಎಂದೂ ಕಾಣೆವು. ನೀನು ದಯಾವಂತನು ; ವಿಷ್ಣುಭಕ್ತನು. ಜನ್ಮವಿರುವವರೆಗೂ ಜ್ಞಾಪಕವಾಗಿರುವಂತೆ ಮಾಡಿದೆ—ಎಂದರು.

ಅವರು ಯಾವಯಾವವಸ್ತುಗಳನ್ನು ಬೇಡುವರೋ ಅವನೆಲ್ಲವನ್ನೂ ಬಡಿಸಿಸಿ ಸರ್ವರನ್ನೂ ತೃಪ್ತಿಪಡಿಸಿ ಎಲೆಯಡಿಕೆಗಳಂ ಕೊಡಿಸಿ ಉಳಿದ ಅನ್ನವನ್ನು ಅವರವರ ಉಡಿಯಲ್ಲಿ ಹಾಕಿಸಿದನು.

ಬಳಿಕ ಕೇವಲತ್ವರೆಯಿಂದ ಕಸಮುಸರೆಗಳಂ ತೊಳೆಯಿಸಿ ಸಂಮಾರ್ಜನೆಯಂ ಮಾಡಿಸಿ ಉದಕವನ್ನೂ ಸಾಮಗ್ರಿಗಳನ್ನೂ ತರಿಸಿ ಪಾಕಕ್ಕೆ ಆರಂಭವಂ ಮಾಡಿಸಿದನು. ಮೊದಲಿಗಿಂತ ಶತಗುಣಾಧಿಕವಾಗಿ ಭಕ್ಷ್ಯಭೋಜ್ಯಂಗಳೆಲ್ಲವೂ ಸಿದ್ಧವಾದುವು. ನಿಮಂತ್ರಿತರಾದ ಬ್ರಾಹ್ಮಣರಿಗೆ-ಏಕನಾಥನು ಚಂಡಾಲರಿಗೆ ಭೋಜನವಂ ಮಾಡಿಸಿದನೆಂಬುದು ವಿದಿತವಾಗಲು, ನಿಮಂತ್ರಣಕ್ಕೆ ನಮಗೆಹೇಳಿ ಚಂಡಾಲರಿಗೆ ಭೋಜನವಂ ಮಾಡಿಸಿದನಲ್ಲಾ !-ಎಂದು ಕ್ರೋಧಾವಿಷ್ಟರಾಗಿ—ಈ ಭ್ರಷ್ಟನ ಅನ್ನವನ್ನು ಇಂದು ಮೊದಲಾಗಿ ಪ್ರಾರ್ಥಿಸಿದರೂ ಸ್ವೀಕರಿಸಬಾರದು—ಎಂದು ಎಣಿಸಿ, ಏಕನಾಥನಂ ಕುರಿತು ನಿಷ್ಠುರೋಕ್ತಿಯಿಂದ—ಎಲೆ ಕರ್ಮಭ್ರಷ್ಟನೇ! ನೀನು ಅತ್ಯಂತಾನುಚಿತವಾದ ಕೆಲಸವನ್ನು ಮಾಡಿದೆ. ಬ್ರಾಹ್ಮಣರ ಭೋಜನವಾಗುವುದಕ್ಕೆ ಮೊದಲೇ

ಅಂತ್ಯಜನನ್ನು ಪೂಜಿಸಿದೆ. ಇಂದು ನಿನ್ನ ಪಿತೃವಿನ ಶ್ರಾದ್ಧವು. ನಿನ್ನ ಪಿತೃ
ಗಳು ಅಂತ್ಯಜರಾಗಿದ್ದರೆಂದು ವೇದಶಾಸ್ತ್ರನಿಂದಿತರಾದ ಹೊಲೆಯರನ್ನು ಪೂಜಿಸಿ
ದೆಯಾ? ನಿನ್ನಿಂದ ಈಗಲೇ ಜಾತಿಸಂಕರವಾಯಿತು. ಬ್ರಾಹ್ಮಣಾಚಾರವನ್ನು
ಮುಳುಗಿಸಿ ಭ್ರಷ್ಟಾಚಾರವನ್ನು ಆರಂಭಿಸಿದೆಯಾ?—ಎನಲು, ಏಕನಾಥನು ಆ
ಬ್ರಾಹ್ಮಣರ ಮಾತಂ ಕೇಳಿ, ವಿನೀತನಾಗಿ—ಪೂಜ್ಯರೇ! ತಮಗೋಸ್ಕರ ಈಗ ಬೇರೆ
ಪಾಕವಂ ಮಾಡಿಸಿರುವೆನು. ಮೊದಲು ಆದ ಪಾಕದ ಸುವಾಸನೆಯನ್ನು ಅಂತ್ಯಜರು
ಗ್ರಹಿಸಿದುದರಿಂದ ಅದನ್ನು ತಮಗೆ ವಿನಿಯೋಗಿಸುವುದೆಂತು ಎಂದು ಅವರ ಉಚ್ಛಿಷ್ಟ
ವನ್ನು ಅವರಿಗೆ ಹಾಕಿಸಿ ಬೇರೆ ಪಾಕವನ್ನು ಸಿದ್ಧಮಾಡಿಸಿರುವೆನು. ಕ್ಷಮಿಸಿ ಪಿತೃ
ಶ್ರಾದ್ಧವನ್ನು ಆಗಮಾಡಬೇಕು. ಕೃಪಾಮೂರ್ತಿಗಳಿರಾ! ಪ್ರಸನ್ನರಾಗಿ—ಎಂದು
ನಮಸ್ಕರಿಸಿ ಬಿನ್ನವಿಸಿಕೊಂಡನು.

ಬ್ರಾಹ್ಮಣರು—ಇಂದು ನೀನು ನಮಗೆ ಅಪಮಾನವಂ ಮಾಡಿದೆ. ಮಹಾಯ
ಜ್ಞದ ಪುರೋಡಾಶವನ್ನು ವಾಯಸಗಳ ಮುಂದೆ ಬಿಸುಟಂತೆ, ಭಾಗೀರಥಿಯ ಕುಪ್ಪಿಗೆ
ಗಳನ್ನು ಬಹಿರ್ಭೂಮಿಯಲ್ಲಿ ಉರುಳಿಸಿಬಿಟ್ಟಂತೆ, ರಾಜಕಾಂತೆಯರ ರತ್ನಖಚಿ
ತಾಭರಣಗಳನ್ನು ದಾಸಿಯರಿಗೆ ಕೊಟ್ಟಂತೆ, ಮಲಯಪರ್ವತಚಂದನವನ್ನು ಕತ್ತೆಗೆ
ಲೇಪಮಾಡಿದಂತೆ, ವಿಷ್ಣುಪೂಜೆಗೆಯೋಗ್ಯವಾದ ತುಳಸಿಯನ್ನು ಮಸೀದಿಯಲ್ಲಿ ತೆಗೆದು
ಕೊಂಡುಹೋಗಿ ಪೂಜಿಸಿದಂತೆ, ಅಗ್ನಿಹೋತ್ರದ ಅಗ್ನಿಯನ್ನು ಗುಡಗುಡಿಯಲ್ಲಿ ಇರಿಸಿ
ದಂತೆ, ಸುಧಾರಸವನ್ನು ಬೀದಿಯಲ್ಲಿ ಚೆಲ್ಲಿದಂತೆ ನಮಗೆ ಅರ್ಹವಾದ ಅನ್ನವನ್ನು
ಚಂಡಾಲರ ಮುಂದೆ ಇಟ್ಟೆ. ನಮ್ಮ ತಿರಸ್ಕಾರವಂ ಮಾಡಿ ಅನುಚಿತಕಾರ್ಯವನ್ನು
ಮಾಡಿದುದರಿಂದ ನಿನಗೆ ಬಹಿಷ್ಕಾರವಂ ಹಾಕಿರುವೆವು—ಎಂದು ನುಡಿದು ಥಟ್ಟನೆ ಎದ್ದು
ಹೊರಟುಹೋದರು.

ಬಳಿಕ ಏಕನಾಥನು ಚಿಂತಾಕ್ರಾಂತನಾಗಿ ಏನೂತೋರದೆ ಸುಮ್ಮನೆ ಕುಳಿತು
ಕೊಂಡನು. ಆಗ ಮನೆಯಲ್ಲಿ ಇದ್ದ ಶ್ರೀಖಂಡೀಯ—ಎಂಬ ಎರಡನೆಯ ಹೆಸರುಳ್ಳ
ಕೃಷ್ಣನು ನೋಡಿ ಏಕನಾಥನ ಬಳಿಗೆ ಬಂದು-ಇಂದು ಬ್ರಾಹ್ಮಣರು ಇಲ್ಲವೆಂದು
ಚಿಂತೆಯಂ ಮಾಡಲಾಗದು. ನಿಮ್ಮ ಸಾಕ್ಷಾತ್ಪಿತೃಗಳೇ ಭೋಜನಕ್ಕೆ ಬಂದಾರು.
ಮನೆಯಲ್ಲಿ ಪಾಕವೆಲ್ಲವೂ ಸಿದ್ಧವಾಯಿತು. ಇನ್ನು ಬೇಗನೆ ಎಲೆಗಳನ್ನು ಹಾಕಿಸಬ
ಹುದು-ಎನಲು, ಏಕನಾಥನು ಪರಮಹರ್ಷವುಳ್ಳವನಾಗಿ ಮನದಲ್ಲಿ ಆಶ್ಚರ್ಯಗೊಂಡು
ಎಲೆಗಳಂ ಹಾಕಿಸಿ ಬಗೆವಗೆಯ ಭಕ್ಷ್ಯಭೋಜ್ಯಗಳನ್ನೂ ಶಾಕಸೂಪಾದಿಗಳನ್ನೂ
ತುಪ್ಪಸಕ್ಕರೆ ಮೊದಲಾದುದೆಲ್ಲವನ್ನೂ ಬಡಿಸಿಸಿ ಆಗ ಮಂತ್ರವನ್ನು ಮುಖದಿಂದ ನುಡಿ
ವುದೂ ಪಿತೃಗಳು ಬಂದು ಕುಳಿತರು. ಅರ್ಘ್ಯಪಾದ್ಯಾದ್ಯುಪಚಾರಗಳಿಂದ ಪೂಜೆ
ಯಂ ಮಾಡಿ ಚಂದನಯಜ್ಞೋಪವೀತಾದಿಗಳನ್ನೂ ತಾಂಬೂಲಹಿರಣ್ಯದಕ್ಷಿಣೆಗಳನ್ನೂ
ಸಮರ್ಪಿಸಿ ಬ್ರಹ್ಮಾರ್ಪಣವೆಂದು ಜಲಧಾರೆಯಂ ಬಿಡಲು, ಪಿತೃಗಳು ತಮತಮಗೆ

ಅಪೇಕ್ಷ್ಯವಾದವುಗಳನ್ನು ತೆಗೆದುಕೊಂಡು ಪ್ರೀತಿಯಿಂದ ಭೋಜನವಂ ಮಾಡಿದವರಾದರು.

ಜನಾರ್ದನನ ಪಾದದಲ್ಲಿ ದೃಢವಾದ ಭಕ್ತಿಯಂ ಮಾಡಲು, ಆ ಪಿತೃರೂಪಿಯಾದ ಜನಾರ್ದನನೇ ಪ್ರಕಟನಾದನು. ಪಿತೃಗಳನ್ನು ಕಣ್ಣಾರೆಕಂಡು ಏಕನಾಥನು ಪರಮಾನಂದವಂ ತಾಳಿದನು. ಪಿತೃಗಳು ತೃಪ್ತರಾದ ಬಳಿಕ ಏಕನಾಥನು ಅವರಿಗೆ ಕರಶುದ್ಧಿಯಂ ಮಾಡಿಸಿ ಅವರಿಗೆ ದಕ್ಷಿಣಾತಾಂಬೂಲಗಳಂ ಸಮರ್ಪಿಸಿ ಅವರನ್ನು ಕುರಿತು ಅನ್ನಶೇಷವನ್ನೇನಮಾಡುವುದು ?-ಎಂದು ಬೆಸಗೊಳ್ಳಲು, ಇಷ್ಟರೊಡನೆ ಭೋಜನ ಮಾಡುವುದು—ಎಂದು ಉತ್ತರವನ್ನು ಹೇಳಿದರು. ಆಗ ಊರಿನ ಬ್ರಾಹ್ಮಣರು ನಿಂತು ಈ ಶಬ್ದವಂ ಕೇಳಿ ಬಾಗಿಲಂ ತೆಗೆದುಕೊಂಡು ಒಳಗೆ ಬಂದು ನೋಡುವಾಗ ಸಾಕ್ಷಾತ್ಪಿತೃಗಳೇ ಬಂದು ಭೋಜನವಂ ಮಾಡಿದ್ದರು. ಇವರನ್ನು ನೋಡಿ ಪಿತೃಗಳು ಥಟ್ಟನೆ ಅದೃಶ್ಯರಾದರು. ಈಯದ್ಭುತವಂ ನೋಡಿ ಬ್ರಾಹ್ಮಣರು ಅತ್ಯಾಶ್ಚರ್ಯಗೊಂಡು ಹೊರಗೆ ಬಂದು, ಈಯೇಕನಾಥನು ಸಾಕ್ಷಾದ್ವಿಷ್ಣುವಿನ ಅವತಾರವೇ ಅಲ್ಲದೆ ಕೇವಲ ಮನುಷ್ಯನಲ್ಲ. ನಾವು ಕರ್ಮಾಭಿಮಾನವಂ ಪಿಡಿದು ವ್ಯರ್ಥವಾಗಿ ಈತನನ್ನು ಛಳಿಸಿದೆವು. ಈತನಿಗೆ ಶ್ರೀಕೃಷ್ಣನು ಸಹಾಯನಾಗಿರುವನು. ಈತನಿಗೆ ಸಂಕಟವೇನಾದರೂ ಒದವಿದರೆ ಆಕ್ಷಣದಲ್ಲಿಯೇ ಬಂದು ಪರಿಹರಿಸುವನು. ಸಾಕ್ಷಾತ್ಪಿತೃಗಳಿಗೆ ಭೋಜನವಂ ಮಾಡಿಸಿ ನಮಗೆ ನಾಚಿಕೆಯನ್ನುಂಟುಮಾಡಿದನು—ಎಂದು ಪರಸ್ಪರವಾಗಿ ಮಾತನಾಡಿಕೊಂಡರು. ಕೆಲವರು—ನಾನಾಪಕ್ವಾನ್ನಭೋಜನವೂ ಕೈಗೆ ದಕ್ಷಿಣೆಯೂ ದೊರೆಯುವುದು. ಮುಂದೆ ಆಗುವುದು ಯಾರಿಗೂ ತಿಳಿಯದು. ಆ ದೋಷವು ಕರ್ಮವನ್ನು ಸೇರಿದುದು. ಇನ್ನು ನಾಳೆ ಬೆಳಗಾಗುವುದೂ ಈತನ ಮನೆಗೆ ಹೋಗಿ—ಈಗ ಪ್ರಾಯಶ್ಚಿತ್ತವಂ ಮಾಡಿಕೊಂಡು ಸ್ವಜಾತಿಧರ್ಮದಿಂದ ಇರುವಂತೆ ಈತನಿಗೆ ನೀತಿಯಂ ಹೇಳಬೇಕು. ಸುಮ್ಮನೆ ಪವಿತ್ರನೆಂದರೆ ಅಹಂಕಾರವುಂಟಾದೀತು ; ಆದುದರಿಂದ ದಂಡಿಸಿ ಮತ್ತೆ ಸತ್ಕರ್ಮದಲ್ಲಿ ಹತ್ತಿಸಬೇಕು—ಎಂದು ಆಲೋಚಿಸಿದರು.

ಮರುದಿನ ಬ್ರಾಹ್ಮಣರೆಲ್ಲರೂ ವಾಳವಂಟಿಯೆಂಬಲ್ಲಿ ಗುಂಪುಕೂಡಿ, ಏಕನಾಥನಂ ಕರೆಯಿಸುವುದೂ ಆತನು ಬಂದು ನಮಸ್ಕಾರವಂ ಮಾಡಿ, ಏನು ಕಾರ್ಯವಂ ಮನದಲ್ಲಿ ಬಗೆದು ನನ್ನಂ ಕರೆಯಿಸಿದಿರಿ ?—ಎಂದು ಬೆಸಗೊಂಡನು. ಅದಕ್ಕೆ ಅವರು ನಿನ್ನ ಅಜ್ಞಾನದಿಂದ ದೋಷವು ಪ್ರಾಪ್ತವಾಯಿತು. ಅದರ ಪರಿಹಾರಕ್ಕೋಸ್ಕರ ವಿಧ್ಯುಕ್ತವಾದ ಪ್ರಾಯಶ್ಚಿತ್ತವಂ ಮಾಡಿಕೊಂಡು ವೇದವಾಕ್ಯಗಳಿಗೆ ಸನ್ಮಾನವಂ ಮಾಡಬೇಕು-ಎನಲು, ಏಕನಾಥನು ಆ ನುಡಿಯಂ ಕೇಳಿ, ನಾನು ಸರ್ವಪ್ರಕಾರದಿಂದಲೂ ಪ್ರಾಯಶ್ಚಿತ್ತವಂ ಮಾಡಿಕೊಳ್ಳುವನಲ್ಲ. ತಾಯಿಯೂ ತಂದೆಯೂ ಸರ್ವವೂ ಶ್ರೀಕೃಷ್ಣನೇ ಆಗಿರುವಾಗ ನಾನು ವಿಪರೀತವನ್ನು ಎಂತು ಆಚರಿಸತಕ್ಕುದು-ಎಂದು ಉತ್ತರವಂ ನುಡಿದನು. ಅದಕ್ಕೆ ಬ್ರಾಹ್ಮಣರು-ನೀನು ಹೇಳುವುದು ಯಥಾರ್ಥವೇ

ಸರಿ. ಆದರೂ ನಮ್ಮ ಮಾತಿಗೆ ಸನ್ಮಾನವಂ ಮಾಡಬೇಕು. ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದರಿಂದಲ್ಲದೆ ಯಾವುದರಿಂದಲೂ ಶುದ್ಧಿಯಿಲ್ಲ–ಎಂದು ಹೇಳಿ, ಬಳಿಕ ಗಂಗೆಯಲ್ಲಿ ಮುಳುಗಿಸಿ ಗೋಮಯಭಸ್ಮಗಳ ಲೇಪವಂ ಮಾಡಿಸಿ ವೇದಮಂತ್ರಗಳನ್ನು ಉಚ್ಚರಿಸಿ ಪ್ರಾಯಶ್ಚಿತ್ತವಂ ಮಾಡಿಸುತಿದ್ದರು.

ಆಗ ತ್ರ್ಯಂಬಕೇಶ್ವರಿಯಿಂದ ಒಬ್ಬ ಬ್ರಾಹ್ಮಣನು ಆಕಸ್ಮಿಕವಾಗಿ ಅಲ್ಲಿಗೆ ಬಂದು ಅಲ್ಲಿದ್ದ ಜನಗಳನ್ನು ಕುರಿತು–ಏಕನಾಥನು ಯಾರು? ನನಗೆ ತೋರಬೇಕು–ಎಂದು ಕೇಳಿದನು. ಆ ಬ್ರಾಹ್ಮಣನಿಗೆ ಕುಷ್ಠವು ಹತ್ತಿ ಎಳ್ಳನಷ್ಟಾದರೂ ಸ್ಥಳಬಿಡದೆ ಇದ್ದಿತು. ಅದೋ ಉದಕದಲ್ಲಿ ನಿಂತು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತಿರುವನೇ ಏಕನಾಥನೆಂಬವನು. ಏತಕ್ಕೋಸ್ಕರ ಆತನನ್ನು ಕೇಳಿದೆ? ನಮಗೆ ಹೇಳು–ಎಂದು ಬ್ರಾಹ್ಮಣರು ಬೆಸಗೊಂಡರು.

ಆ ಬ್ರಾಹ್ಮಣನು–ನಾನು ತ್ರ್ಯಂಬಕದಲ್ಲಿ ಅನುಷ್ಠಾನವಂ ಮಾಡಿಕೊಂಡಿದ್ದೆನು. "ಏಕನಾಥನಿಗೆ ಪುಣ್ಯವು ಬಹುವುಂಟಾಗಿದೆ; ನೀನು ಹೋಗಿ ಆತನಲ್ಲಿ ಕೇಳು; ಆತನು ತನ್ನ ಪುಣ್ಯದಲ್ಲಿ ಸ್ವಲ್ಪವನ್ನು ನಿನಗೆ ಕೊಟ್ಟರೂ ನಿನ್ನ ಕುಷ್ಠವೆಲ್ಲವೂ ಹೋಗುವುದು-ಎಂದು ಪರಮೇಶ್ವರನು ಸ್ವಪ್ನದಲ್ಲಿ ಹೇಳಿದುದರಿಂದ ಇಲ್ಲಿಗೆ ಬಂದೆನು-ಎಂದನು. ಆ ಮಾತಂ ಕೇಳಿ ಅಲ್ಲಿದ್ದ ಬ್ರಾಹ್ಮಣರು ಆಶ್ಚರ್ಯಗೊಂಡರು. ಕೆಲವರು–ಬ್ರಾಹ್ಮಣರನ್ನು ಬಿಟ್ಟು ಅಂತ್ಯಜರಿಗೆ ಭೋಜನವಂ ಮಾಡಿಸಿದರೆ ಇದು ಪುಣ್ಯವೆಂದು ಯಾವ ಶಾಸ್ತ್ರದಲ್ಲಿ ಹೇಳಲ್ಪಟ್ಟದೆ?–ಎಂದರು.–ಕೆಲವರು–ಕೈಯಕಂಕಣಕ್ಕೆ ಕನ್ನಡಿಯೇಕೆ? ಒಂದುಕ್ಷಣ ತಾಳಿ; ಈಗ ಏಕನಾಥನ ಭಾವವು ಪ್ರಕಟಿತವಾಗುವುದು–ಎಂದರು.

ಬಳಿಕ ಕುಷ್ಠರೋಗದ ಆ ಬ್ರಾಹ್ಮಣನು ನದಿಯಲ್ಲಿ ಸ್ನಾನಮಾಡುತಿದ್ದ ಏಕನಾಥನ ಬಳಿಗೆಹೋಗಿ–ಒಬ್ಬ ಅಂತ್ಯಜನಿಗೆ ಅನ್ನವನ್ನು ಹಾಕಿದ ಸುಕೃತವನ್ನು ಕೊಡುವಂತೆ ಈಶ್ವರನು ಅಪ್ಪಣೆಯಂ ಕೊಟ್ಟಿರುವನು-ಎನಲು, ಏಕನಾಥನು–ಅವಶ್ಯವಾಗಲಿ-ಎಂದು, ಇದೋಕೊಟ್ಟಿರುವೆನು-ಎನ್ನುತ್ತ ಆತನಕೈಯಲ್ಲಿ ಉದಕಧಾರೆಯಂ ಬಿಟ್ಟನು. ಬ್ರಾಹ್ಮಣರೆಲ್ಲರೂ ತಟಸ್ಥರಾಗಿ ಕೌತುಕವಂ ನೋಡುತಿದ್ದರು. ಆಗ ರೆಪ್ಪೆಬಡಿವಷ್ಟರಲ್ಲಿ ಕುಷ್ಠರೋಗಿಯ ಶರೀರವು ಸುಂದರವಾಗಿ ಮಹಾಕಾಂತಿಯುಳ್ಳುದಾಯಿತು. ಎಲ್ಲರೂ ಕಂಡು ಆಶ್ಚರ್ಯಗೊಂಡರು.–ಕರ್ಮತತ್ವದ ಅಭಿಮಾನವು ನಮ್ಮನ್ನು ಕೆಡಿಸಿತು. ವಿಷ್ಣುಭಕ್ತನಿಗೆ ಪ್ರಾಯಶ್ಚಿತ್ತವಂ ಮಾಡಿಸಿದ ದೋಷವು ನಮಗೆ ಪ್ರಾಪ್ತವಾಯಿತು–ಎಂದು ಬ್ರಾಹ್ಮಣರು ಅನುತಾಪಗೊಂಡು ಏಕನಾಥನಂ ಕುರಿತು-ನೀನು ವಿಷ್ಣುವಿನವತಾರವು, ಸರ್ವಪ್ರಕಾರದಲ್ಲಿಯೂ ಮನುಷ್ಯನಲ್ಲ. ಇದು ನಮಗೆ ತಿಳಿಯಿತು. ಹಿಮಾಚಲಕ್ಕೆ ಬೀಸಣಿಗೆಯ ಗಾಳಿಯಿಂದೇನು? ಆಕಾಶಕ್ಕೆ ವಸ್ತ್ರದಿಂದೇನು? ಅಗ್ನಿಗೆ ಸ್ನಾನವು ಏಕೆ? ಅಮೃತಕ್ಕೆ ಪಾಕವೇಕೆ? ಸಮುದ್ರಕ್ಕೆ ತೀರ್ಥಾಟನೆಯೇಕೆ? ಅಂತು ನಿರ್ಮಲನೂ

ವೈಷ್ಣವವೀರನೂ ಆದ ನಿನಗೆ ಪ್ರಾಯಶ್ಚಿತ್ತವು ಅನಾವಶ್ಯಕವು. ಈಗ ನಾವು ತಿಳಿದೆವು. ನೀನು ಅಘಟಿತವಾದ ಕೆಲಸವನ್ನು ಮಾಡಿತೋರಿದೆ. ಸಾಕ್ಷಾತ್ಪಿತೃಗಳನ್ನೇ ಕರೆದು ಭೋಜನವಂ ಮಾಡಿಸಿದೆ. ಇದನ್ನು ಕಂಡು ಕೇಳಿರಲಿಲ್ಲ. ಈಗ ಪ್ರತ್ಯಕ್ಷವಾಗಿ ಕಂಡೆವು-ಎಂದು ಅಭಿನಂದಿಸಿ ಏಕನಾಥನನ್ನು ಕೈಯಲ್ಲಿ ಹಿಡಿದುಕೊಂಡು ಮನೆಗೆ ಕರೆದು ತಂದು—ನಿನಗೆ ಶ್ರೀರುಕ್ಮಿಣೀಪತಿಯು ಸಹಾಯನಾಗಿರುವನು. ಇದೀಗ ನಮಗೆ ನಿಶ್ಚಯವಾಗಿ ತಿಳಿಯಬಂದುದು-ಎಂದರು.

ಬಳಿಕ ಏಕನಾಥನು ಬ್ರಾಹ್ಮಣರಿಗೆಲ್ಲರಿಗೂ ದಕ್ಷಿಣೆಯಂ ಕೊಟ್ಟು ಪಾದತೀರ್ಥವನ್ನು ಶಿರಸ್ಸಿನಲ್ಲಿ ಧರಿಸಿದನು. ಅವರು ಆಶ್ಚರ್ಯಪಡುತ್ತ ತಮ್ಮತಮ್ಮ ಮನೆಗಳಿಗೆ ಹೋದರು. "ಏಕನಾಥನು ಧನ್ಯನು ; ವಿಷ್ಣುಭಕ್ತನು ; ಬ್ರಾಹ್ಮಣರ ಸೇವೆಯಲ್ಲಿ ನಿರತನು ; ದೇವತಾರ್ಚನೆಯನ್ನು ವಿಧ್ಯುಕ್ತವಾಗಿ ಸದ್ಭಕ್ತಿಯಿಂದ ಮಾಡುತಿರುವನು" ಎಂದು ಸಕಲರೂ ಸ್ತೋತ್ರವಮಾಡುತಿದ್ದರು. ಕೆಲವರು ನಿಂದಿಸುತಿದ್ದರು. ಆದರೂ ಏಕನಾಥನು ಸಂತುಷ್ಟನಾಗಿಯೇ ಇರುತಿದ್ದನು. ವ್ಯಸನವನ್ನು ಹತ್ತಿಸಿಕೊಳ್ಳನು.

ಇಂತಿರಲು, ಒಬ್ಬ ಬ್ರಾಹ್ಮಣನು ಸಂಸಾರದಲ್ಲಿ ಪಶ್ಚಾತ್ತಾಪಗೊಂಡು ಶ್ರೀರುಕ್ಮಿಣೀಪತಿಯ ದರ್ಶನವಾಗಬೇಕೆಂದು ಕುತೂಹಲಿತನಾಗಿ ದ್ವಾರಕೆಯಂ ಸೇರಿ ತಪಸ್ಸ ಮಾಡುತಿದ್ದನು.

ಒಂದು ದಿನ ಸ್ವಪ್ನದಲ್ಲಿ ರಾಧೆಯೂ ರುಕ್ಮಿಣೀಪತಿಯೂ ಬಂದು—ಚಕ್ರಪಾಣಿಯು ಈದ್ವಾರಕೆಯಲ್ಲಿ ಇಲ್ಲ. ಗಂಗಾತೀರದ ಪೈಠಣದಲ್ಲಿ ಏಕನಾಥನೆಂಬ ಭಾಗವತ ಶಿರೋಮಣಿಯ ಮನೆಯಲ್ಲಿ ಇರುವನು. ನೀನು ಅಲ್ಲಿಗೆ ಹೋಗುವನಾಗು. ಸ್ವಾಮಿಯು ಶ್ರೀಖಂಡೀಯ—ಎಂಬ ಹೆಸರುಳ್ಳ ಪರಿಚಾರಕನಾಗಿ ಅಲ್ಲಿ ಹನ್ನೆರಡುವರ್ಷಗಳಿಂದ ನಿಂತಿರುವನು. ಭಕ್ತಸೇವೆಯಲ್ಲಿ ನಿರತನಾಗಿ ಅಲ್ಲಿಯೇ ನೆಲಸಿರುವನು. ನೀನು ಅಲ್ಲಿ ಸ್ವಾಮಿಯ ದರ್ಶನವಂ ಮಾಡುವನಾಗು. ನಮ್ಮನ್ನು ಎಂದಿಗೂ ಬಿಟ್ಟಿರುವನಲ್ಲ ; ಆದರೂ ಈಗ ಬಿಟ್ಟಿರುವನು. ನೀನು ಹೋಗಿ ಇಲ್ಲಿಗೆ ಕರೆತರುವನಾಗು-ಎಂದು ನುಡಿದರು. ಆ ಬ್ರಾಹ್ಮಣನು ಅಂತಹ ಸ್ವಪ್ನವಂ ಕಂಡು ಎಚ್ಚರಿಕೆಗೊಂಡು ಎದ್ದು ಅಲ್ಲಿಂದ ಹೊರಟು ಪ್ರತಿಷ್ಠಾನವಂ ಸೇರಿ-ಇಲ್ಲಿ ಬ್ರಾಹ್ಮಣರ ಸೇವೆಯಲ್ಲಿ ತತ್ಪರನಾಗಿರುವ ಏಕನಾಥನೆಂಬ ಭಾಗವತನು ಯಾರು ? ಆತನ ಮನೆಯಾವುದು ? -ತೋರಿಸಬೇಕು-ಎಂದು ಊರ ಜನರಂ ಕೇಳುತ್ತ ಏಕನಾಥನ ಮನೆಗೆ ಬಂದನು.

ಏಕನಾಥನು ತಪಸ್ವಿಯಾದ ಆ ಬ್ರಾಹ್ಮಣನನ್ನು ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ ಕುಳಿತುಕೊಳ್ಳುವುದಕ್ಕೆ ಆಸನವಂ ಕೊಟ್ಟು—ಎಲ್ಲಿಂದ ಬಂದಿರಿ ? ಯಾವಯಾವ ತೀರ್ಥಯಾತ್ರೆಯಂ ಮಾಡಿಕೊಂಡು ಇಲ್ಲಿಗೆ ಬಂದಿರಿ ?—ಎಂದು ಬೆಸಗೊಳ್ಳಲು, ಆದಕ್ಕೆ ಆಬ್ರಾಹ್ಮಣನು, ಕೃಷ್ಣಶ್ರೀಖಂಡೀಯ-ಎಂಬ ಪರಿಚಾರಕನ ಸಂದರ್ಶನವಂ ಮಾಡುವುದಕ್ಕೋಸ್ಕರ ಇಲ್ಲಿಗೆ ಬಂದೆನು-ಎಂದು ಹೇಳಲು, ಆಗ

ಏಕನಾಥನು ಆತನನ್ನು ಕುರಿತು—ನೀವು ಯಾವನ ಸಂದರ್ಶನಕ್ಕೋಸ್ಕರ ಬಂದಿರುವಿರೋ ಆತನು ಉದಕವನ್ನು ತರುವುದಕ್ಕೋಸ್ಕರ ಗಂಗಾತೀರಕ್ಕೆ ಹೋಗಿರುವನು. ಒಂದುಕ್ಷಣ ತಾವು ಸ್ವಸ್ಥಚಿತ್ತರಾಗಿ ಕುಳಿತುಕೊಳ್ಳಿ. ಆತನು ಕ್ಷಿಪ್ರದಲ್ಲಿಯೇ ಬರುವನು-ಎಂದು ನುಡಿಯುತಿರುವಷ್ಟರಲ್ಲಿ ಜಗನ್ನಾಥನು ಹೆಗಲಮೇಲೆ ಕಾವಡಿಯನು ಹೊತ್ತುಕೊಂಡು ಮನೆಯೊಳಗೆ ಪ್ರವೇಶಿಸಿದನು.

ಆ ತಪಸ್ವಿಯು ಸ್ವಾಮಿಯನ್ನುಕಣ್ಣಾರೆ ನೋಡಿ ಮನದಲ್ಲಿ ಅತ್ಯಂತಸಂಕೋಚವನ್ನು ಹೊಂದಿ ಏನನೂ ಮಾತನಾಡಲು ತೋರದೆ ಸುಮ್ಮನೆ ಇದ್ದನು.

ಸ್ವಾಮಿಯು ಆ ತಪಸ್ವಿಯನ್ನು ಕುರಿತು-ನಾನು ಇಲ್ಲಿ ಹನ್ನೆರಡುವರ್ಷಗಳಿಂದಲೂ ಆನಂದಯುಕ್ತನಾಗಿರುವೆನು—ಎಂದು ನುಡಿದು ಆತನನ್ನು ಪ್ರಸನ್ನದೃಷ್ಟಿಯಿಂದ ನೋಡಿದನು.

ಆ ತಪಸ್ವಿಯು ಸ್ವಾಮಿಯ ಮಾತನ್ನು ಕೇಳಿ ಮನದಲ್ಲಿ ಕಳವಳಗೊಂಡು-ಅಹಹ! ಅದ್ಭುತವಾದ ಭಕ್ತಿಯುಳ್ಳ ಈಯೇಕನಾಥನ ಮನೆಯಲ್ಲಿ ಸ್ವಾಮಿಯು ಹನ್ನೆರಡುವರ್ಷಗಳಿಂದ ಪರಿಚಾರಕನಾಗಿ ವಾಸಮಾಡಿಕೊಂಡಿರುವನಲ್ಲಾ-ಎಂದು ಆಶ್ಚರ್ಯಪಡುತಿದ್ದನು.

ಏಕನಾಥನು ಆ ತಪಸ್ವಿಯನ್ನು ಕುರಿತು-ಈಶ್ರೀಖಂಡೀಯಬ್ರಾಹ್ಮಣನು ನಮ್ಮ ಮನೆಯಲ್ಲಿ ಇದ್ದುಕೊಂಡು ಉತ್ತಮವಾದ ತನ್ನ ನಡೆವಳಿಯಿಂದ ನಮ್ಮೆಲ್ಲರ ಮನಸ್ಸನ್ನೂ ಮರುಳುಮಾಡಿರುವನು—ಎಂದನು.

ಜಗನ್ನಾಥನು ಅಷ್ಟರಲ್ಲಿ ಸತ್ವರನಾಗಿ ಅಲ್ಲಿಂದ ಹೊರಟು ದೇವರಮನೆಗೆ ಹೋಗಿ ಹೆಗಲಮೇಲೆ ಇದ್ದ ಕಾವಡಿಯನ್ನು ಕೆಳಗೆ ಇಟ್ಟು ಅಲ್ಲಿಯೇ ಅದೃಶ್ಯನಾದನು.

ತಪಸ್ವಿಯು ದೇವರಮನೆಯಿಂದ ಸ್ವಾಮಿಯು ಹೊರಗೆ ಬರುವನೆಂದು ನಿರೀಕ್ಷಿಸಿಕೊಂಡು ಅತ್ತಕಡೆಯೇ ನೋಡುತ ಕುಳಿತುಕೊಂಡಿದ್ದನು. ಎಷ್ಟುಹೊತ್ತು ನಿರೀಕ್ಷಿಸಿದರೂ ಒಳಗಣಿಂದ ಬರಲೇಇಲ್ಲ. ಒಳಗೂ ಕಾಣಲೇಇಲ್ಲ. ಆತನು-ಸ್ವಾಮಿಯು ನನ್ನನ್ನು ನೋಡುತ್ತಲೇ ಒಳಗೆ ಹೋಗಿ ಅದೃಶ್ಯನಾದನಲ್ಲಾ—ಎಂದು ಚಿಂತಿಸುತ್ತ ಶೋಕಾಕ್ರಾಂತನಾಗಿ ಭೂಮಿಯಲ್ಲಿ ಬಿದ್ದನು.

ಏಕನಾಥನು ಆತನನ್ನು ನೋಡಿ ಎಚ್ಚರಗೊಳಿಸಿ—ಏತಕ್ಕೆ ಶೋಕಾಕ್ರಾಂತರಾಗಿ ನೆಲದಲ್ಲಿ ಬಿದ್ದಿರಿ? ಏನು ಸಂಗತಿ? ಇದಂ ಬೇಗನೆ ನನ್ನಲ್ಲಿ ಹೇಳಬೇಕು—ಎಂದು ಬೆಸಗೊಳಲು, ಆ ತಪಸ್ವಿಯು ಎಲ್ಲಾ ವೃತ್ತಾಂತವನ್ನೂ ತಿಳಿಯಿಸಿ ಆಯೇಕನಾಥನ ಪಾದಗಳಲ್ಲಿ ಬಿದ್ದನು.

ಆಗ ಇಬ್ಬರಿಗೂ ಪ್ರೇಮವು ಉಕ್ಕಿಬಂದುದು. ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಏಕನಾಥನು ಆತನನ್ನು ಕುರಿತು—ನೀವು ಧನ್ಯರು. ನಿಮ್ಮ ಪುಣ್ಯವು ಅತಿಶಯಿತವಾದುದು. ಜಗನ್ನಿವಾಸನನ್ನು ಕಣ್ಣಿಂದ ಕಂಡು ಅನಿಹಿತರಾಗಿ ಆತನ

ಪಾದಗಳಿಗೆ ವಂದಿಸಿದಿರಿ. ನಾವು ದೇವಾದಿದೇವನನ್ನು ಅರಿಯದೆ ಆತನಿಂದ ಸೇವೆಯಂ ಮಾಡಿಸಿಕೊಂಡೆವು-ಎಂದು ನುಡಿದು ಹೃದಯದಲ್ಲಿ ಪಶ್ಚಾತ್ತಾಪವುಳ್ಳವರಾಗಿ ಜಗನ್ನಾಥನನ್ನು ಕುರಿತು-ಕೇಶವನೇ! ಭಕ್ತವತ್ಸಲನೇ! ದೀನಜನಾಧಾರನೆ! ನೀನು ನಮ್ಮ ಮನೆಯಲ್ಲಿ ಬಹುವಾಗಿ ಕಷ್ಟಪಟ್ಟೆ. ನನ್ನ ಅಜ್ಞಾನದಿಂದ ಮಹತ್ತರವಾದ ಅಪರಾಧವು ಘಟಿಸಿತು. ನೀನು ಅತ್ಯಂತಸುಕುಮಾರನು. ನಮಗೋಸ್ಕರ ಕಾವಡಿಯನ್ನು ಹೊತ್ತುಕೊಂಡು ಬಂದೆ. ಪಲ್ಲವಕೋಮಲವಾದ ನಿನ್ನ ಕಾಲಿಗೆ ಕಲ್ಲುಗಳು ಚುತ್ತಿಕೊಂಡಿದ್ದಾವು. ಹನ್ನೆರಡು ವರ್ಷಗಳವರೆಗೂ ನನ್ನ ಸಮೀಪದಲ್ಲಿದ್ದರೂ ಅಜ್ಞನಾದ ನನ್ನ ಮನಸ್ಸಿನಲ್ಲಿ ಏನೂ ತಿಳಿವಳಿಕೆಯುಂಟಾಗಲಿಲ್ಲ. ನೀನು ಬ್ರಾಹ್ಮಣವೇಷವನ್ನು ಧರಿಸಿಕೊಂಡು ಬಂದಿದ್ದುದರಿಂದ ನಾನು ತಿಳಿಯದೆ ನಿನಗೆ ಕೆಲಸಗಳನ್ನೂ ನೇಮಿಸಿದೆನು. ನೀನು ಬ್ರಹ್ಮಾದಿದೇವರಿಗೂ ಪೂಜ್ಯನು. ಸದಾಶಿವನು ನಿನ್ನ ನಾಮವನ್ನೇ ಜಪಿಸುತ್ತಿರುವನು. ಅಂತಹ ಮಹಾನುಭಾವನಾದ ನೀನು ಸ್ವಹಸ್ತದಿಂದ ನನಗೆ ಪೂಜೆಗೋಸ್ಕರ ಗಂಧವನ್ನು ತೇದುಕೊಡುತ್ತಿದ್ದೆಯಲ್ಲಾ! ತಪಸ್ವಿಗಳನೇಕರು ನಿನ್ನ ದರ್ಶನವನ್ನಪೇಕ್ಷಿಸಿ ಘೋರವಾದ ತಪಸ್ಸನ್ನಾಚರಿಸುವರು. ಅನೇಕರು ತೀರ್ಥಾಟನೆಯಂ ಮಾಡುವರು. ಆದರೂ ನೀನು ದರ್ಶನವನ್ನು ಕೊಡೆ. ಇಂತಹ ದುರ್ಲಭನು ನೀನು. ಹೃಷೀಕೇಶನೇ! ನಿನ್ನ ಲಾಘವವು ಯಾರಿಗೂ ತಿಳಿಯದು. ನೀನು ಯಶೋದೆಯ ಉದರದಲ್ಲಿ ಬರಲು, ನಿನ್ನನ್ನು ಆಕೆಯು ಸಾಧಾರಣಪುತ್ರನೆಂದೇ ಭಾವಿಸಿದ್ದಳು. ಯಾವಾಗ ನೀನು ಆಕೆಯಂ ಬಿಟ್ಟು ಮಧುರೆಗೆ ಹೊರಟೆಯೋ ಆಗ ಆಕೆಯ ಮನಸ್ಸಿಗೆ ತೋರಿತು. ಅದರಂತೆ ನೀನು ಹನ್ನೆರಡುವರುಷ ನನ್ನ ಸಮೀಪದಲ್ಲಿದ್ದರೂ ನಾನು ನಿನ್ನನ್ನು ಅನಂತನೆಂದು ತಿಳಿಯದೆಹೋದೆ-ಎಂದು ಹಂಬಲಿಸಿ ಪಶ್ಚಾತ್ತಾಪಯುಕ್ತನಾಗಿ ದುಃಖಪಡುತ್ತಿದ್ದನು. ಆ ಪ್ರೇಮವನ್ನು ವರ್ಣಿಸಿದರೆ ಗ್ರಂಥವು ಬಹುವಿಸ್ತಾರವಾಗುವುದು; ಅದಂತಿರಲಿ.

ಆ ಏಕನಾಥನ ಕಾಂತೆ ಪರಮಪತಿವ್ರತೆ. ಆಕೆಯು ಸ್ವಾಮಿಯಂ ಕುರಿತು-ದೇವಾದಿದೇವನೇ! ರುಕ್ಮಿಣೀಕಾಂತನೆ! ನಾವು ನಿನ್ನನ್ನು ಬಹುವಾಗಿ ಕಷ್ಟಪಡಿಸಿದೆವು. ಗೋವಿಂದನೇ! ನೀನು ಪರಮಸುಕುಮಾರನು. ಪ್ರಾತಃಕಾಲದಲ್ಲಿ ಮುಂಚೆ ಎದ್ದು ಕೆಲಸವನ್ನು ಮಾಡುತಿದ್ದೆ. ನಾವು ತಿಳಿಯದೆ ನಿನಗೆ ಅಮರ್ಯಾದೆಯಂ ಮಾಡಿದೆವು. ನೀನು ನಮಗೆ ಭೋಜನವಂ ಮಾಡಿಸುತಿದ್ದೆ. ನಿನ್ನ ಹಸಿವುಬಾಯಾರಿಕೆಗಳನ್ನು ನಾನು ವಿಚಾರಿಸಲಿಲ್ಲ. ಶ್ರೀಕೃಷ್ಣನೇ! ನಾನು ಇಂತಹ ನೀಚೆ-ಎಂದು ನುಡಿಯುತ್ತ ಪಶ್ಚಾತ್ತಾಪಪಡುತಿದ್ದಳು.

ಶ್ರೀಕೃಷ್ಣನು ಹನ್ನೆರಡುವರ್ಷಗಳವರೆಗೂ ಅವರ ಸಂಗತಿಯಲ್ಲಿ ಇದ್ದನು. ಆ ಸ್ವಾಮಿಯು ಪ್ರತಿದಿನವೂ ಮಾಡುತಿದ್ದ ಕಾರ್ಯಗಳನ್ನು ಏಕನಾಥನು ನಿರಂತರವಾಗಿ ತನ್ನ ಮನದಲ್ಲಿ ನೆನೆಯುತಿದ್ದನು.

ಬಳಿಕ ಒಂದುದಿನ ರಾತ್ರಿಯಲ್ಲಿ ಏಕನಾಥನು ನಿದ್ದೆಗೈಯುತಿರಲು, ಸ್ವಪ್ನದಲ್ಲಿ ಜ್ಞಾನದೇವನು ಬಂದು–ಅಲಕಾವತಿಯಲ್ಲಿ ಅಜಾನವೆಂಬ ವೃಕ್ಷದ ಕೆಳಗೆ ಸಮಾಧಿಯಲ್ಲಿರುವ ನನಗೆ ನಿನ್ನ ದರ್ಶನವನ್ನು ಕೊಡಬೇಕು-ಎಂದು ಹೇಳಿದಂತೆಯೂ, ತಾನು ಅಲ್ಲಿಗೆ ಹೋದಂತೆಯೂ, ಬಳಿಕ ಜ್ಞಾನದೇವನು ಆ ವೃಕ್ಷದ ಒಂದು ಪಾರ್ಶ್ವದಲ್ಲಿ ತನ್ನ ಒಂದು ಹಸ್ತವನ್ನು ಇಟ್ಟುಕೊಂಡು ತ್ವರೆಯಿಂದ ಮೇಲೆ ಎದ್ದಂತೆಯೂ ಆದುದನ್ನು ಕಂಡು ಥಟ್ಟನೆ ತಾನು ಎಚ್ಚರಗೊಂಡು ಹೊರಟು ಅಲಕಾವತಿಯನ್ನು ಸೇರಿ ಇಂದ್ರಾಣಿಯಲ್ಲಿ ಸ್ನಾನಮಾಡಿ ಸಿದ್ಧೇಶ್ವರನ ಸಂದರ್ಶನವನ್ನು ಮಾಡಿಕೊಂಡು ಸಮಾಧಿಯ ಬಳಿಗೆ ಹೋಗಿ ಅದರ ಆವರಣವನ್ನು ತೆಗೆದು ನೋಡಲು, ವಜ್ರಾಸನದಲ್ಲಿ ಧ್ಯಾನಾರೂಢನಾಗಿ ಕುಳಿತುಕೊಂಡಿದ್ದ ತೇಜಃಪುಂಜಶರೀರನಾದ ಜ್ಞಾನದೇವನು ಗೋಚರನಾದನು. ತೇಜಸ್ವಿಯಾದ ಆ ಜ್ಞಾನದೇವನಿಗೆ ಸಾಟಿಹೇಳಲು ಯಾವುದೂ ಇಲ್ಲ. ಏಕನಾಥನು ಜ್ಞಾನದೇವನನ್ನು ಕಂಡು ನಮಸ್ಕಾರಮಾಡಿದನು. ಜ್ಞಾನದೇವನು ವೃಕ್ಷದ ಪಾರ್ಶ್ವದಲ್ಲಿ ಕೈಯೂರಿಕೊಂಡು ಎದ್ದು ಏಕನಾಥನನ್ನು ಆಲಿಂಗಿಸಿಕೊಂಡು ಮತ್ತೆ ಮೊದಲಂತೆ ಯೋಗಾಸನದಲ್ಲಿ ಕುಳಿತುಕೊಂಡನು. ಒಡನೆಯೆ ಸಮಾಧಿಯ ಬಾಗಿಲು ಮೊದಲಂತೆ ಮುಚ್ಚಿಕೊಂಡು ಗಾರೆಹಾಕಿದಂತೆ ದೃಢವಾಗಿ ಸೇರಿತು.

ಆಕಾಲದಲ್ಲಿ ಅಲಕಾವತೀಪಟ್ಟಣವು ಹಾಳಾಗಿದ್ದಿತು. ಭೋಜನಸಾಮಗ್ರಿಗಳೇನೂ ದೊರೆಯುತಿರಲಿಲ್ಲ. ಏಕನಾಥನೊಡನೆ ಬಂದಿದ್ದ ಶಿಷ್ಯರೆಲ್ಲರೂ ಹಸಿವಿನಿಂದ ಪೀಡಿತರಾಗಿ ಕಂಗೆಟ್ಟರು. ಪಂಡರೀನಾಥನು ತನ್ನ ಭಕ್ತಜನದ ಹಸಿವುಬಾಯಾರಿಕೆಗಳನ್ನು ತಿಳಿದು ದಯೆಯಿಂದ ಒಬ್ಬವಣಿಜನ ವೇಷವಂ ಧರಿಸಿಕೊಂಡು ದೂರದಲ್ಲಿ ವ್ಯಾಪಾರ ಮಾಡುತ್ತ ಕುಳಿತನು.

ಏಕನಾಥನು ಆ ವಣಿಜನನ್ನು ನೋಡಿ ಸಂತೋಷಗೊಂಡು-ಇದೋ ಅಲ್ಲಿ ಒಬ್ಬ ವಣಿಜನು ವ್ಯಾಪಾರವು ಮಾಡುತ್ತ ಕುಳಿತುಕೊಂಡಿರುವನು. ಅವನ ಬಳಿಗೆ ಹೋಗಿ ಮೂಲ್ಯವನ್ನು ಕೊಟ್ಟು ಬೇಕಾದ ಭೋಜನಸಾಮಗ್ರಿಗಳಂ ತೆಗೆದುಕೊಂಡು ಬನ್ನಿ-ಎಂದು ತನ್ನ ಶಿಷ್ಯರಿಗೆ ಹೇಳಿದನು.

ಅವರಲ್ಲಿ ಒಬ್ಬನು ಆ ವಣಿಜನ ಬಳಿಗೆ ಹೋಗಿ ಭೋಜನಸಾಮಗ್ರಿಗಳಂ ತೆಗೆದುಕೊಂಡು, ಮೂಲ್ಯವನ್ನು ಬೇಗನೆ ತಂದುಕೊಡುತ್ತೇವೆ. ನೀನು ಸ್ವಸ್ಥಚಿತ್ತನಾಗಿ ಇಲ್ಲಿಯೇ ಕುಳಿತುಕೊಂಡಿರು-ಎಂದು ಹೇಳಿದನು.

ಆ ಮಾತಿಗೆ ಪಂಡರೀನಾಥನು–ನಾವು ಈ ಹೊತ್ತು ಇಲ್ಲಿಯೇ ಇರುವೆವು. ನೀವು ನಿಮ್ಮ ಬಿಡಾರದಲ್ಲಿ ಸ್ವಯಂಪಾಕವನ್ನು ಮಾಡಿಕೊಂಡು ಭೋಜನವಂ ಮಾಡಿ. ನಾವು ನಿಮ್ಮ ಗುರುಗಳಾದ ಏಕನಾಥರನ್ನು ಬಲ್ಲೆವು. ಅವರು ನಮ್ಮ ಗುರುತನ್ನು ಅರಿಯರು. ಅವರು ಯಾತ್ರೆಗೆ ಬಂದರೆಂಬ ವೃತ್ತಾಂತವನ್ನು ಕೇಳಿ ನಾವು ಸಾಮಗ್ರಿಗಳಂ ತೆಗೆದುಕೊಂಡು ಇಲ್ಲಿಗೆ ಬಂದೆವು–ಎಂದು ನುಡಿದು ಅಲ್ಲಿಯೇ ಅದೃಶ್ಯನಾದನು.

ಬಳಿಕ ಭೋಜನಸಾಮಗ್ರಿಗಳನ್ನು ಕೊಟ್ಟು ಆವಣಿಜನು ಅದೃಶ್ಯನಾದನೆಂಬ ಆಶ್ಚರ‍್ಯಸಂಗತಿಯು ಏಕನಾಥನಿಗೆ ತಿಳಿಯಿತು. ಏಕನಾಥನ ಹೃದಯದಲ್ಲಿ ಪ್ರೇಮರಸವು ತುಂಬಿತುಳುಕಿತು. ಕಂಠವು ಬತ್ತಿಕೊಂಡುಬಂದಿತು-"ನನಗೋಸ್ಕರ ಫಂಡರೀನಾಥನು ಬಹುವಾಗಿ ದಣಿದುಕೊಂಡನು. ನನಗೆ ಆತನ ಸಂದರ್ಶನವಾಗಲಿಲ್ಲವಲ್ಲಾ—ಎಂದು ಹಂಬಲಿಸಿದನು. ಬಳಿಕ ಪಾಕವು ಸಿದ್ಧವಾಯಿತು. ಬ್ರಾಹ್ಮಣರಿಂದ ಯುಕ್ತನಾಗಿ ಭೋಜನವನ್ನು ಮಾಡಿ ಆರಾತ್ರಿ ಅಲ್ಲಿ ಇದ್ದು ಕೀರ್ತನವಂ ಮಾಡಿ ಮರುದಿವಸ ಆ ಸಮಾಧಿಗೆ ನಮಸ್ಕಾರವಂ ಗೈದು ಅಲ್ಲಿಂದ ಹೊರಟು ಪ್ರತಿಷ್ಠಾನವಂ ಸೇರಿ ಅಲ್ಲಿ ನಿರಂತರವೂ ಪ್ರೇಮಭರದಿಂದ ಭಗವದ್ಗುಣಕೀರ್ತನವನ್ನು ಮಾಡುತ್ತಿದ್ದನು.

ಏಕನಾಥನ ಸ್ಥಿತಿಯು ಎಂತಹುದೆಂದರೆ:—ತ್ರೈಲೋಕ್ಯವೂ ಜನಾರ್ದನಸ್ವರೂಪವು. ಆತನೇ ಸರ್ವಭೂತಗಳಲ್ಲಿಯೂ ವ್ಯಾಪಕನು—ಎಂಬ ನಿಶ್ಚಯವುಳ್ಳುದು. ಈಯರ್ಥದಲ್ಲಿ ಸಂಶಯವೇನೂ ತೋರದು. ಜನಾರ್ದನನ ಧ್ಯಾನದಲ್ಲಿ ಲೀಲನಾಗಿ ಇದ್ದುದರಿಂದ ತಾನೂ ಜನಾರ್ದನನೇ—ಆಗಿದ್ದನು. ಅಲ್ಲಿ ಭೇದವೇನೂ ಕಾಣದು. ನದಿಯೂ ನೀರೂ ಎಂತೋ ಅಂತಿದ್ದರು. ಒಂದು ತೇಜಸ್ಸೇ ಬೇರೆಬೇರೆ ಎರಡು ಹೆಸರಂ ಪಡೆದಿರುವುದೋ ಎಂಬಂತೆ ಏಕನಾಥನೂ ಜನಾರ್ದನನೂ ಅಭಿನ್ನರಾಗಿ ಇರುತ್ತಿದ್ದರು. ಕರ್ಪೂರವೂ ಸುಗಂಧವೂ, ಉದಕವೂ ದ್ರವತ್ವವೂ, ಪುಷ್ಪವೂ ಮಕರಂದವೂ ಒಂದೇ ಕಡೆಯಲ್ಲಿ ಎಂತು ಇರುವುವೋ ಅಂತು ಸಂಮಿಳಿತರಾಗಿ ಸಮರಸಭಾವದಿಂದ ಇದ್ದರು. ಮಹೀಪತಿಯು ಅನನ್ಯಶರಣನಾಗಿ ಆ ಸ್ವಾಮಿಯ ಪಾದಗಳಿಗೆ ವಂದಿಸುತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತಾರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ನಾಲ್ವತ್ತೇಳನೆಯ ಅಧ್ಯಾಯ.

ರಾಮದಾಸನ ಚರಿತ್ರೆ.

ಎಲೈ ಶ್ರೋತೃಗಳಿರಾ! ಯಾವುದರಿಂದ ಪರಮಾರ್ಥದ ರುಚಿ ಹತ್ತುವುದೋ, ಯಾವುದನ್ನು ಪ್ರೀತಿಪುರಸ್ಸರವಾಗಿ ಕಿವಿಗಳಿಂದ ಕೇಳಿದ ಮಾತ್ರಕ್ಕೆ ದುರಿತಗಳೆಲ್ಲವೂ ಓಡಿಹೋಗುವುವೋ ಮತ್ತು ಮಾಯಾಪಾಶವು ಹರಿದುಹೋಗುವುದೋ, ಶಾಂತಿಸುಖವು ಅನಾಯಾಸದಿಂದ ಕೈಸೇರುವುದೋ, ಭಜನದ ಪ್ರೇಮವು ಹೃದಯದಲ್ಲಿ ದೃಢ

ವಾಗಿ ನೆಲಸುವುದೋ ಅಂತಹ ಮಹಿಮೆಯುಳ್ಳ ಭಕ್ತರ ಕಥೆಯನ್ನು ಆಲಿಸಿರಿ. ಇದರ ವ್ಯುತ್ಪತ್ತಿಯಂ ಬಹುವಾಗಿ ಏನ ಹೇಳಲಿ? ಅನುಭವಿಗಳು ಇದರ ಗುರುತನ್ನು ಹೊರಗೂ ಒಳಗೂ ಬಲ್ಲರು. ಯಾರಿಗೆ ಮನಸ್ಸಿನಲ್ಲಿ ವಿರಕ್ತಿಯು ಹುಟ್ಟುವುದೋ ಅವರೇ ಈ ಭಕ್ತಿಮಾರ್ಗದಲ್ಲಿ ಹತ್ತುವರು. ಲೌಕಿಕಪ್ರೀತಿಯಂ ಬಿಟ್ಟು ಯಾರು ಕೀರ್ತನದಲ್ಲಿ ಸ್ವೇಚ್ಛೆಯಿಂದ ಕುಣಿಯುವರೋ ಅವರಿಗಲ್ಲದೆ ಇತರರಿಗೆ ಈ ಕಥೆಯ ರಸವು ಹತ್ತದು. ಆದುದರಿಂದ ನೀವು ಭಾಗ್ಯವಂತರಾದ ಶ್ರೋತೃಗಳು. ಪೂರ್ವದಲ್ಲಿ ಬಹುಸುಕೃತವನ್ನು ಮಾಡಿದ್ದಿರಿ. ಅದರಿಂದಲೇ ಶ್ರವಣದಲ್ಲಿ ಅಪೇಕ್ಷೆಗೊಂಡು ಕುಳಿತಿರಿ. ಪೂರ್ವಾಧ್ಯಾಯದಲ್ಲಿ ಏಕನಾಥನ ಚರಿತ್ರೆಯಂ ಕೇಳಿದಿರಲ್ಲವೆ? ಇನ್ನು ಮುಂದಣ ಕಥೆಯನ್ನು ಆಲಿಸುವುದು.

ಕೃಷ್ಣಾತೀರದಲ್ಲಿ ಜಾಂಬೂನದವೆಂಬ ಊರೊಳಗೆ ಶ್ರೀರಾಮೋಪಾಸಕನೂ ಪರಮಭಾವುಕನೂ ಆದ ಒಬ್ಬ ಬ್ರಾಹ್ಮಣನಿದ್ದನು. ಆತನು ಸರ್ವವಿಷಯಗಳಲ್ಲಿಯೂ ವಿರಕ್ತನು. ಅಲ್ಲಿ ಗ್ರಾಮಕರಣಿಕನೆನಿಸಿಕೊಂಡು ಜೀವನಮಾಡುತ್ತಿದ್ದನು. ಭೂತದಯಾಪೇಕ್ಷಾಚಿತ್ತವುಳ್ಳವನಾಗಿ ಅನಾಥರನ್ನು ಸಂತೋಷಪಡಿಸುತಿದ್ದನು. ಶ್ರೀರಾಮಜಯಂತಿಯು ಬರಲು, ಸಾತ್ತ್ವಿಕರಾದ ವಿಷ್ಣುಭಕ್ತರಂ ಕರೆದು ಪತಾಕಾದಿಗಳಿಂದ ಮಂಟಪರಚನೆಯಂ ಮಾಡಿ ಉಲ್ಲಾಸಯುಕ್ತನಾಗಿ ಸಕಲಸಾಹಿತ್ಯಗಳನ್ನೂ ಸಿದ್ಧಪಡಿಸಿಕೊಂಡು ಪ್ರತಿದಿನವೂ ಭಕ್ಷ್ಯಭೋಜ್ಯಾದಿಗಳಿಂದ ಬ್ರಾಹ್ಮಣರಂ ಸಂತರ್ಪಿಸುತ್ತ ರಾತ್ರಿಕಾಲದಲ್ಲಿ ಹರಿಕೀರ್ತನವಂ ಮಾಡುತ್ತಿದ್ದನು. ನವರಾತ್ರದಲ್ಲಿಯೂ ಇನ್ನೀತರದಿಂದ ಮಹೋತ್ಸವವಂ ಮಾಡುತ್ತ ಇದ್ದನು. ಮನೆಯಲ್ಲಿ ಪುರಾತನಗಳಾದ ಶ್ರೀಸೀತಾರಾಮಲಕ್ಷ್ಮಣರ ಮೂರ್ತಿಗಳು ಇದ್ದುವು. ಅವುಗಳನ್ನು ಮಂಟಪದಲ್ಲಿ ಇರಿಸಿ ಸಮಸ್ತೋಪಚಾರಗಳಿಂದ ಪೂಜಿಸುತ್ತಿದ್ದನು. ಭೇರೀಮೃದಂಗಾದಿಮಂಗಳವಾದ್ಯಗಳು ಬಾಗಿಲಲ್ಲಿ ಘೋರ್ಗರೆಯುತ್ತಿದ್ದುವು. ಪ್ರತಿವರ್ಷವೂ ಇದೇ ಪ್ರಕಾರದಲ್ಲಿ ವಿಭವದಿಂದ ಮಾಡುತ್ತ ದಶಮಿಯದಿನ ಲಲಿತವನ್ನು ಮಾಡಿ ಸಕಲಸಾಧುಸಜ್ಜನರನ್ನೂ ಪೂಜಿಸುತ್ತ ಮನದಲ್ಲಿ ಅಧಿಕವಾದ ವಿಶ್ವಾಸವನ್ನು ಹಿಡಿದು ಸದ್ಭಾವದಿಂದ ನಮಸ್ಕಾರವನ್ನು ಮಾಡುತಿದ್ದನು.

ಪುತ್ರಸಂತಾನವು ಇಲ್ಲದಿದ್ದುದರಿಂದ ಆತನ ಮಡದಿಯು ಬಹುವ್ಯಸನವುಳ್ಳವಳಾಗಿದ್ದಳು. ಇಂತಿರುವಲ್ಲಿ ಒಂದು ದಿವಸ ರಾತ್ರಿ ನಿದ್ರೆಗೈಯುತಿರುವಾಗ ಸ್ವಪ್ನದಲ್ಲಿ ರಘುನಾಥನು ಬಂದು ಆಬ್ರಾಹ್ಮಣನಂ ಕುರಿತು-ನಿಮ್ಮ ಉದರದಲ್ಲಿ ಮಾರುತಿಯು ಅವತಾರವಂ ಮಾಡುವನು. ಪರಿಪೂರ್ಣವಾದ ಭಕ್ತಿಜ್ಞಾನವೈರಾಗ್ಯವುಳ್ಳ ಅಂಜನಾದೇವಿಯ ನಂದನನನ್ನೇ ಕುಮಾರನನ್ನಾಗಿ ಪಡೆಯುವೆ-ಎಂದು ನುಡಿಯಲು, ಇಂತು ಕನಸನ್ನು ಕಂಡು ಆಬ್ರಾಹ್ಮಣನು ಎಚ್ಚರಿಕೆಗೊಂಡು ಮನದಲ್ಲಿ ಆಶ್ಚರ್ಯಪಡುತ್ತ ತನ್ನ ಮಡದಿಯನ್ನು ಕುರಿತು ಸ್ವಪ್ನಸಂಗತಿಯನ್ನು ಹೇಳಿದನು. ಪತಿಯ ವಚನವಂ ಕೇಳಿ

ಆಕೆ ಸಂತೋಷಗೊಂಡಳು. ಸ್ವಲ್ಪಕಾಲ ಕಳೆಯುವುದೂ ದೈವಾನುಗ್ರಹದಿಂದ ಆಕೆ ಗರ್ಭಿಣಿಯಾಗಿ ನವಮಾಸಪೂರ್ತಿಯಾಗಲು, ನಿಧಿಯಂತಿರುವ ಪುತ್ರನನ್ನು ಪಡೆದಳು. ಮನೆಯಲ್ಲಿ ಸಕಲಸಂಪತ್ತಿಯೂ ಇದ್ದಿತು. ಪುತ್ರನ ಮುಖವಂ ನೋಡಿದುದರಿಂದ ಆ ಬ್ರಾಹ್ಮಣನು ಬಹುಸಂತೋಷಗೊಂಡು ಜಾನಕೀನಾಯಕನು ಪ್ರಸನ್ನನಾಗಿ ತನಗೆ ಮಗನನ್ನು ಕೊಟ್ಟನೆಂದು ಸಂಭ್ರಮಪಡುತ್ತ, ಹನ್ನೆರಡನೆಯ ದಿನದಲ್ಲಿ ಆ ಮಗುವಿಗೆ "ರಾಮದಾಸ" ಎಂದು ನಾಮಕರಣವನ್ನು ಮಾಡಿದನು. ಬಳಿಕ ಕುಮಾರನು ದಿನ ದಿನಕ್ಕೆ ಬೆಳೆಯುತ್ತ ಬರಲು, ಐದನೆಯ ವರುಷದಲ್ಲಿ ಉಪನಯನವಂ ಮಾಡಿ ಒಬ್ಬ ವೈದಿಕಬ್ರಾಹ್ಮಣನನ್ನು ಮನೆಯಲ್ಲಿಯೇ ಇಟ್ಟುಕೊಂಡು ಆತನ ಬಳಿಯಲ್ಲಿ ವಿದ್ಯಾಭ್ಯಾಸವಂ ಮಾಡಿಸಿದನು.

ಬಳಿಕ ಆತನ ಮಡದಿಯು ಆತನನ್ನು ಕುರಿತು-ಮಗನಿಗೆ ಮದುವೆಯಂ ಮಾಡಬೇಕೆಂದು ಸೂಚಿಸಲು; ಆತನು ಅಂಗೀಕರಿಸಿ ಕನ್ಯಕೆಯಂ ನೋಡಿಕೊಂಡು ಬರುವುದಕ್ಕೋಸ್ಕರ ಪುರೋಹಿತನನ್ನು ಕಳುಹಿಸಿಕೊಟ್ಟನು.

ಪುರೋಹಿತನು ಹೋಗಿ ತಕ್ಕ ಕನ್ಯೆಯಂ ನೋಡಿಕೊಂಡುಬರಲು, ಬಳಿಕ ಲಗ್ನವನ್ನು ನಿಶ್ಚಯಮಾಡಿಸಿ ವಸ್ತ್ರಾಭರಣ ಮುಂತಾದ ಸಕಲಸಾಹಿತ್ಯವನ್ನೂ ಸಿದ್ಧಪಡಿಸಿಕೊಂಡು ನಂಟರಿಷ್ಟರನ್ನೂ ಕರೆದುಕೊಂಡು ಹೊರಟನು. ಬೀಗನು ಮಂಗಳ ವಾದ್ಯಪುರಸ್ಸರವಾಗಿ ಇದಿರುಗೊಂಡು ಉಲ್ಲಾಸದಿಂದ ವರಪೂಜೆಯಂ ಮಾಡಿ ತಕ್ಕ ಬಿಡಾರದಲ್ಲಿ ಇಳಿಯಿಸಿದನು. ಮರುದಿವಸ ದೇವತಾಪ್ರತಿಷ್ಠೆಯಂ ಮಾಡಿ ಬ್ರಾಹ್ಮಣ ಸಂತರ್ಪಣೆಯಂ ಮಾಡಿದನು. ಸುಮುಹೂರ್ತದಲ್ಲಿ ಮಧುಪರ್ಕವಿಧಾನವಂ ಮಾಡಿಸಿ ಅಂತರಪಟವಂ ಹಿಡಿದು ಬ್ರಾಹ್ಮಣರು ಮಂಗಳಾಷ್ಟಕವಂ ಪಾಡಿದರು. ಎಲ್ಲರೂ "ಸಾವಧಾನ" ಎನ್ನುತ್ತಿದ್ದರು.

ಒಬ್ಬ ಪುರೋಹಿತನು ಸಮೀಪದಲ್ಲಿಯೇ ಕುಳಿತಿರಲು, ರಾಮದಾಸನು ಆತನಂ ಕುರಿತು-ನೀವು ಯಾರನಧಿಕರಿಸಿ, ಸಾವಧಾನ—ಎಂದು ಹೇಳುವಿರಿ ?—ಎಂದು ಬೆಸಗೊಳ್ಳಲು, ವಿನೋದಕ್ಕೆ ಆತನು-ಸಾವಧಾನವೆಂಬುದು ನಿಮಗೋಸ್ಕರವೇ. ಈಪ್ರೊತ್ತಿನಿಂದ ನಿಮಗೆ ನಿಶ್ಚಯವಾಗಿ ಸಂಸಾರಬಂಧವುಂಟಾಯಿತು. ಈ ಸಂಸಾರವು ಪರಮ ದುಃಖರೂಪವಾದುದು. ಇದರಲ್ಲಿ ಲೇಶಮಾತ್ರವಾದರೂ ಸುಖವಿಲ್ಲ. ಈ ಸಂಸಾರವನ್ನು ಸಾರವೆಂದು ಯಾರು ತಿಳಿಯುವರೋ ಅವರು ಸರ್ವಸ್ವವನ್ನೂ ಕಳೆದುಕೊಂಡವರೇ ಸರಿ. ಇಂತೆಂಬ ಅರ್ಥವಂ ತಿಳಿಯಿಸುವುದಕ್ಕೋಸ್ಕರ ಸಕಲಬ್ರಾಹ್ಮಣರೂ ನಿಮ್ಮನ್ನು ಕುರಿತು—ಸಾವಧಾನ-ಎಂದು ಹೇಳುವರು-ಎನಲು, ರಾಮದಾಸನು ಆ ಮಾತಂಕೇಳಿದುದರಿಂದಲೆ ಗಡಗಡನೆ ಮೈಯಲ್ಲಿ ಕಂಪವನ್ನು ಹೊಂದಿ ಹೃದಯದಲ್ಲಿ ವೈರಾಗ್ಯವಂ ತಾಳಿ ಅಲ್ಲಿಂದ ಓಡಿದವನಾದನು. ಆಗ ತಾಯ್ತಂದೆಗಳು ಹಿಡಿಯುವುದಕ್ಕೋಸ್ಕರ ಬೆನ್ನಹತ್ತಿದರು. ಆದರೂ ಆತನ ಮನಸ್ಸು ಹಿಂತಿರುಗಲಿಲ್ಲ. ಊಟ

ಮಾಡುವನು ವಿಷಮಿಶ್ರವಾದ ಅನ್ನವಂ ಬಡಿಸಿದುದನ್ನು ತಿಳಿದರೆ ಉಪಚಾರವೆಲ್ಲ ವನ್ನೂ ಉಪೇಕ್ಷಿಸಿ ಎಂತು ಎಡೆಯಂ ಬಿಟ್ಟುಹೋಗುವನೋ ಅಂತು ರಾಮದಾಸನು ವಿಷಯಸುಖಗಳಲ್ಲಿ ಅಸಹ್ಯತೆಗೊಂಡು ಓಡಿಹೋದನು. ಜನರು ಹಿಡಿಯಬೇಕೆಂದು ಬಹುಪ್ರಯತ್ನವಂ ಮಾಡಿದರು. ಆದರೂ ರಾಮದಾಸನು ಯಾರಮಾತನ್ನೂ ಕೇಳ ಲಿಲ್ಲ. ಯಾರ ಕೈಗೂ ಸಿಕ್ಕಲಿಲ್ಲ. ತಾಯ್ತಂದೆಗಳಿಬ್ಬರೂ ಆತನ ಹಿಂದೆಯೇ ಅರಣ್ಯ ದಲ್ಲಿ ಓಡಿಹೋಗಿ ಮಮತೆಯನ್ನುಂಟುಮಾಡಬೇಕೆಂದು ಎಷ್ಟುಬಗೆಯಲ್ಲಿ ಸಮಾಧಾ ನವಂ ಹೇಳಿದರೂ ಆತನು ಎಂತಾದರೂ ತಿರುಗಲಿಲ್ಲ.

ಆತನು ತಂದೆಯಂ ಕುರಿತು-ನೀವು ವ್ಯರ್ಥವಾಗಿ ನನ್ನನ್ನು ಪ್ರಪಂಚದಲ್ಲಿ ಏಕೆ ಸಿಕ್ಕಿಸುವಿರಿ? ಸಂಸಾರವು ದುಃಖರೂಪವಾದದು. ನನಗೆ ನಿಶ್ಚಯವಾಗಿ ತಿಳಿದು ಬಂದಿತು. ಸುಖವನ್ನು ಅನುಭವಿಸುವುದಕ್ಕೋಸ್ಕರ ಸೌಂದರ್ಯವುಳ್ಳ ಹೆಣ್ಣನ್ನು ಮದುವೆಮಾಡಿಕೊಂಡು ಆಕೆಯ ಸಂರಕ್ಷಣೆಯಲ್ಲಿಯೇ ಶರೀರವಂ ಶೋಷಿಸಬೇಕು. ಧನವಂತರ ಉಪಸರ್ಪಣೆಯಂ ಮಾಡಿ ದ್ರವ್ಯವನ್ನು ಸಂಪಾದಿಸಿದರೆ, ಕಳ್ಳರು ಬಿದ್ದು ಪ್ರಾಣವನ್ನೇ ತೆಗೆದುಕೊಳ್ಳುವರು. ಬಲೆಯು ನೀರಿನಲ್ಲಿ ಬಿದ್ದಿರುವಾಗ ತಿಳಿದರೆ ಮೀನುಗಳು ತಳದಲ್ಲಿ ಹೋಗಿ ಎಂತು ಅಡಗಿಕೊಳ್ಳುವುವೋ ಅದೇತೆರದಿಂದ ನಾನೂ ಎಚ್ಚರಗೊಂಡೆನು. ನಳಿಕಾಯಂತ್ರವನ್ನು ಕಂಡು ಆಕಾಶದಲ್ಲಿ ಹಾರಿಹೋಗುವ ಗಿಳಿಯಂತೆ ಸಂಸಾರದ ಬಲೆಯು ಬೀಳುವುದರೊಳಗಾಗಿ ನಾನೂ ಎಚ್ಚತ್ತು ಅರಣ್ಯಕ್ಕೆ ಓಡಿಬಂದೆನು. ಇನ್ನುಮೇಲೆ ನೀವು ನನ್ನ ವಿಷಯದಲ್ಲಿ ಮಮತೆಯಂ ಬಿಟ್ಟು ಮನೆಗೆ ಹೋಗಬೇಕು-ಎಂದು ನುಡಿದು ಸತ್ವರನಾಗಿ ಹೊರಟು ದೂರಸ್ಥಲವಂ ಸೇರಿದನು.

ಆತನ ತಂದೆಯು-ಈತನು ಮಾರುತಿಯ ಅವತಾರವು. ಆತನು ಬ್ರಹ್ಮಚಾರಿ ಯಾದುದರಿಂದ ಈ ಸಂಸಾರದಲ್ಲಿ ಸಿಕ್ಕಿಬೀಳನು-ಎಂದು ತನ್ನ ಮನದಲ್ಲಿ ತಿಳಿದು ಪೂರ್ವದಲ್ಲಿ ತನಗೆ ಆದ ಸ್ವಪ್ನದ ಅರ್ಥವನ್ನೇ ಹೆಂಡತಿಗೂ ಜ್ಞಾಪಿಸಿ ಆಕೆಯೊಡನೆ ಹಿಂತಿರುಗಿ, ತಮ್ಮ ವಂಶವು ಉತ್ಕೃಷ್ಟವಾದುದು. ಮಗನು ವೈರಾಗ್ಯವುಳ್ಳವನಾ ದನು-ಎಂದು ಮನಸ್ಸಿಗೆ ಸಮಾಧಾನವನ್ನು ಮಾಡಿಕೊಂಡು, ತಮ್ಮ ಊರನ್ನು ಸೇರಿ ಮನೆಯಂ ಪೊಕ್ಕು ಮೋಹಮಮತೆಗಳಂ ಬಿಟ್ಟು ಶ್ರೀರಘುನಾಥನಂ ಧ್ಯಾನಿಸು ತಿದ್ದನು.

ಇತ್ತಲು ರಾಮದಾಸನು ಅರಣ್ಯದೊಳ್ ವೈರಾಗ್ಯಭರಿತನಾಗಿ ಏಕಾಂತದಲ್ಲಿ ಕುಳಿತು ಈ ಕಲಿಯುಗದಲ್ಲಿ ತೀರ್ಥಯಾತ್ರೆಗಳೂ ವ್ರತಾನುಷ್ಠಾನಗಳೂ ಸಾಧನ ವೆನಿಸುವುದಿಲ್ಲ; ಆದುದರಿಂದ ಶ್ರೀರಾಮನನ್ನು ಶರಣುವೊಕ್ಕು ಆತನ ಚಿಂತನವನ್ನೇ ಮಾಡಬೇಕು. ನಾಮಸ್ಮರಣೆಯಿಂದಲೇ ಗಣಿಕೆಯು ವೈಕುಂಠವನ್ನು ಸೇರಿದಳು. ಧೂರ್ಜಟಿಯು ನಾಮವಂ ಜಪಿಸಿ ಶೀತಳನಾದನು-ಎಂದು ಬಗೆದು ದೃಢವಾದ ವಿಶ್ವಾಸ

ವನ್ನು ಹಿಡಿದು ಸರ್ವಕಾಲದಲ್ಲಿಯೂ ರಾಮನಾಮಸ್ಮರಣೆಯಂ ಮಾಡುತ್ತ, ಫಲವಾಗಲಿ, ಕಂದಮೂಲವಾಗಲಿ, ಉದಕವಾಗಲಿ ಯಾವುದನ್ನೂ ತೆಗೆದುಕೊಳ್ಳದೆ ಆಹಾರವನ್ನೇ ವರ್ಜಿಸಿ ದೃಢನಿಷ್ಠೆಯಿಂದ! ಅಯೋಧ್ಯಾವಾಸಿಯೆ! ದಶರಥಕುಮಾರನೆ! ಕೌಸಲ್ಯಾತನಯನೇ! ಜಾನಕೀಪತಿಯೇ! ರಾವಣಾಂತಕನೇ! ಜಗದುದ್ಧಾರನೇ! ಸಾಯುಜ್ಯಪ್ರದನೇ! ಶ್ರೀರಾಮನೇ! ನಾನು ಅನಾಥನು ದೀನನು, ನೀನು ಭಕ್ತಪಕ್ಷಪಾತಿಯು; ಪತಿತಪಾವನನು; ಆದುದರಿಂದ ನನಗೆ ದರ್ಶನವಂ ಕೊಡಬೇಕು—ಎಂದು ಮೊರೆಯಿಡುತಿರಲು, ಆಗ ಆಂಜನೇಯನು ಪ್ರಕಟನಾಗಿ ಕ್ರೂರರೂಪದಿಂದ ದರ್ಶನವಂ ಕೊಟ್ಟನು; ಆದರೂ ರಾಮದಾಸನು ಮನದಲ್ಲಿ ಭಯಪಡಲಿಲ್ಲ. ಅಗ್ನಿಯು ಪ್ರಜ್ವಲಿಸಿ ಕೃಶಾನುವನ್ನು ಸುಡುವುದಕ್ಕೆ ಬಂದರೆ ಅವನು ಎಂತು ಭಯಪಡನೋ ಪೂರ್ಣಿಮೆಯಲ್ಲಿ ಸಮುದ್ರವು ಉಕ್ಕಿ ತನ್ನ ಕಲ್ಲೋಲಗಳನ್ನು ಮುಳುಗಿಸಬೇಕೆಂದರೆ ಅವು ಎಂತು ಮುಳುಗವೋ, ಆಕಾಶವು ಕ್ರೋಧಯುಕ್ತವಾಗಿ ಅಂತರಿಕ್ಷವನ್ನೇ ಗ್ರಾಸಮಾಡಲಿಚ್ಛಿಸಿದರೆ ಅದು ಎಂತು ಚಲಿಸದೋ ಅಂತು ಮಾರುತಿಯು ರಾಮದಾಸನನ್ನು ಕ್ರೂರಭಾವದಿಂದ ಅಂಜಿಸಿದರೂ ಬೇರೆಯಲ್ಲವಾದುದರಿಂದ ಆತನು ನಿರ್ಭಯನಾಗಿ ಇದ್ದನು. ಈ ನಿಷ್ಠೆಯಮಂ ನೋಡಿ ಮಾರುತಿಯು ಸಂತುಷ್ಟನಾಗಿ ಬಳಿಕ ಸೌಮ್ಯರೂಪವಂ ಧರಿಸಿ ದರ್ಶನವನ್ನು ಕೊಟ್ಟು ಆತನನ್ನು ಆಲಿಂಗಿಸಿಕೊಂಡನು. ರಾಮದಾಸನು ಮಾರುತಿಯ ಪಾದಗಳಿಗೆ ಎರಗಿ ಶ್ರೀರಾಮದೇವರ ದರ್ಶನವಾಗುವ ಉಪಾಯವನ್ನು ನನಗೆ ಹೇಳಬೇಕೆಂದನು. ಆಂಜನೇಯನು ಅಭಯವಂ ಕೊಟ್ಟು ಅದೃಶ್ಯನಾದನು.

ಬಳಿಕ ರಾಮದಾಸನು ಊರಲ್ಲಿ ಹೋಗಿ ಮಿತವಾದ ಭಿಕ್ಷಾಟನವಂ ಮಾಡಿ ಸ್ವಲ್ಪವಾದ ಆ ಅನ್ನವಂ ಭಕ್ಷಿಸಿ ಮತ್ತೆ ಅರಣ್ಯದಲ್ಲಿಯೇ ಹೋಗಿ ಕುಳಿತು ರಾಮನಾಮಸ್ಮರಣೆಯಂ ಮಾಡುತಿದ್ದನು. ಆತನಿಗೆ ಪಶ್ಚಾತ್ತಾಪಬಲದಿಂದ ನಿದ್ರಾಲಸ್ಯಗಳು ಬಾರವು; ತನ್ನ ಮನಸ್ಸೇ ತನ್ನ ಮಾತನ್ನು ಕೇಳುವಂತಹುದು. ತನ್ನ ಮನಸ್ಸೇ ತನಗೆ ಹೇಳುವಂತಹುದು. ಮನಸ್ಸಿಗಿಂತಲೂ ಜ್ಞಾನವನ್ನುಂಟುಮಾಡುವ ಸದ್ಗುರು ಬೇರೆಯಿಲ್ಲ-ಎಂಬ ಬೋಧೆಯಂ ಕೈಕೊಂಡು ಇನ್ನೂರೈದು ಶ್ಲೋಕಂಗಳಂ ಮಾಡಿದನು. ಅವನ್ನು ವಿಶ್ವಾಸದಿಂದ ಯಾರು ಪಠಿಸುವರೋ ಅವರಿಗೆ ವೈರಾಗ್ಯಫಲವು ಪ್ರಾಪ್ತವಾಗುವುದು.

ರಾಮದಾಸನು ಶ್ರೀರಾಮಸ್ವರೂಪವನ್ನು ಸರ್ವಕಾಲದಲ್ಲಿಯೂ ಧ್ಯಾನಿಸುತ್ತ ಕೀರ್ತನದಲ್ಲಿ ಕುಣಿಯುತಿದ್ದನು. ಆನಂದಾಶ್ರು ಕಣ್ಣುಗಳಲ್ಲಿ ತುಂಬಿ ತುಳುಕಾಡುತಿದ್ದಿತು. ಪ್ರೇಮಭರದಿಂದ ಕಂಠವು ಬತ್ತಿಕೊಂಡು ಬರುತಿದ್ದಿತು. ವೃಕ್ಷತೃಣಪಾಷಾಣಪಶುಪಕ್ಷಿಮೃಗಾದಿಗಳೆಲ್ಲವನ್ನೂ ಮಿತ್ರವರ್ಗವೆಂದೂ ಸಜ್ಜನರೆಂದೂ ನಿಶ್ಚಯಿಸಿದ್ದನು. ಮಧ್ಯಾಹ್ನದಲ್ಲಿ ಭಿಕ್ಷಾಟನಕ್ಕೆ ಒಂದುಕ್ಷಣ ಊರಲ್ಲಿ ಹೋಗಿದ್ದು

ಕ್ಷುಧೆಯ ಶಾಂತಿಯಂ ಮಾಡಿಕೊಂಡು ಮತ್ತೆ ಅರಣ್ಯದಲ್ಲಿಯೇ ಬಂದು ಕುಳಿತುಕೊಳ್ಳುತಿದ್ದನು. ಪ್ರಾಪಂಚಿಕವ್ಯವಹಾರವುಳ್ಳ ಜನಗಳು ಯಾರಾದರೂ ತನ್ನ ಸಮೀಪಕ್ಕೆ ಬಂದರೆ, ಯಾವುದಾದರೂ ಉಪಾಯದಿಂದ ತನ್ನನ್ನು ಬಲೆಯಲ್ಲಿ ಸಿಕ್ಕಿಸಾರು—ಎಂದು ಓಡಿಹೋಗುತಿದ್ದನು. ಪರಮಾರ್ಥದಲ್ಲಿ ಆಸಕ್ತಿಯುಳ್ಳ ಪುರುಷನು ಸುಜ್ಞಾನಿಯಾದರೂ ಧೈರ್ಯವಂತನಾದರೂ, ಪ್ರಾಪಂಚಿಕವ್ಯವಹಾರವುಳ್ಳ ಜನಗಳ ಸಂಗತಿಯುಂಟಾದ ಮಾತ್ರದಿಂದ ಅನರ್ಥಕ್ಕೆ ಗುರಿಯಾಗುವನು. ಹೃದ್ಯವಾದ ಕಸ್ತೂರಿಯನ್ನು ಒಂದು ಕ್ಷಣ ಇಂಗಿನಲ್ಲಿ ಸೇರಿಸಿಡಲು, ಹೆಚ್ಚಾಗಿ ಹತ್ತಿದ ಈಯಿಂಗಿನ ವಾಸನೆಯಿಂದ ಅದು ಬೆಲೆಯಲ್ಲಿ ಕಡಿಮೆಯಾಗಿಹೋಗುವುದು. ಹೊಗೆಯಸೊಪ್ಪನ್ನೂ ಅಡಿಕೆಯನ್ನೂ ಒಂದು ಪಾತ್ರೆಯಲ್ಲಿ ಹಾಕಿದರೆ ಅದರ ದುರ್ಗಂಧವೇ ಅಡಿಕೆಗೆ ಹತ್ತುವುದು. ಪ್ರಪಂಚವ್ಯವಹಾರವುಳ್ಳ ಅಜ್ಞಾನಿಗಳು ಅವಿದ್ಯೆಯಿಂದ ಪರಿವೇಷ್ಟಿತರಾಗಿರುವರು. ಅವರ ಸಂಗತಿಯಲ್ಲಿ ವಿರಕ್ತರು ಸೇರಿದರೆ ಕೆಟ್ಟುಹೋಗುವುದರಲ್ಲಿ ಸಂಶಯವಿಲ್ಲ. ನಿಶ್ಚಯವೆಂದು ತಿಳಿಯತಕ್ಕದು.

ರಾಮದಾಸನು ವೈರಾಗ್ಯಶೀಲನು. ಜನಗಳು ಕಾಣುವುದೂ ಮರೆಯಾಗಿಹೋಗುವನು. ಸರ್ವಕಾಲದಲ್ಲಿಯೂ ದೇಹಭಾವವಂ ಮರೆತು ನಾಮಸ್ಮರಣೆಯನ್ನು ಮಾಡುತಿದ್ದನು.

ಬಳಿಕ ಒಂದುದಿನ ಆಷಾಢಮಾಸದಲ್ಲಿ ಪಂಡರಿಯ ಯಾತ್ರೆಗೆ ಹೊರಟು ನಡೆಯುತಿರಲು, ಮಾರ್ಗದಲ್ಲಿ ಮಾರುತಿಯು ಕಂಡು "ಶ್ರೀರಾಮಚಂದ್ರನು ನಿನಗೆ ಸಂದರ್ಶನವಂ ಕೊಟ್ಟಾನು"—ಎಂದು ನುಡಿದನು.

ರಾಮದಾಸನು ಈ ಶುಭಕರವಾದ ನುಡಿಯನ್ನು ಕೇಳಿ ಸಂತೋಷಗೊಂಡು ತ್ವರೆಯಿಂದ ನಡೆದು ಪಂಡರಪುರವಂ ಸೇರಿದನು. ಅಲ್ಲಿ ಎಲ್ಲಿನೋಡಿದರೂ ತಾಳವೂ ಮದ್ದಲೆಯೂ ಮೊಳಗುತಿದ್ದುವು. ವಿಷ್ಣುಭಕ್ತರು ಆನಂದದಿಂದ ಪಾಡುತ್ತ ಕುಣಿಯುತ್ತ ಇದ್ದರು. ಮುಂದೆ ಭೀಮರಥಿಯು ಪ್ರವಹಿಸುತಿದ್ದಿತು. ರಾಮದಾಸನು ಅದನ್ನು ಕಂಡು, ನಾನು ಯಾವನ ಧ್ಯಾನವಂ ಮಾಡುತ್ತಿರುವೆನೋ ಆತನ ಸಂಬಂಧವೇನೂ ಇಲ್ಲಿ ಕಾಣುವುದಿಲ್ಲ—ಎಂದು ತನ್ನ ಮನದಲ್ಲಿ ವಿಕ್ಷೇಪಗೊಂಡು ಮತ್ತೆಮತ್ತೆ ಶ್ರೀರಾಮಭಜನೆಯಂ ಮಾಡುತಿದ್ದನು. ಅಲ್ಲಿಂದ ಮುಂದೆ ಹೊರಟು ಶ್ರೀರಾಮಚರಿತ್ರೆಯನ್ನು ಮುಖದಿಂದ ಪಾಡುತ್ತ ಮಹಾದ್ವಾರಕ್ಕೆ ಬಂದು ಹನುಮದ್ಗರುಡರಂ ಕಂಡು ಅಭಿವಂದಿಸಿ, ಮುಂಗಡೆಯಲ್ಲಿ ಆನಂದದಿಂದ ಕೀರ್ತನವಂ ಮಾಡುತಿದ್ದ ಸಂತರನ್ನೂ, ವೈಕುಂಠದಿಂದಲೇ ಇಳಿದುಬಂದುವೋ ಎಂಬಂತೆ ಇದ್ದ ಗರುಡಧ್ವಜಪತಾಕಾದಿಗಳನ್ನೂ ಕಂಡು ಬಹುಹರ್ಷವಂ ತಾಳಿದನು.

ಬಳಿಕ ಆ ಭಾಗವತರಂ ನಮಸ್ಕರಿಸಿ ದೇವರ ದರ್ಶನಕ್ಕೆ ಹೊರಟು, ಇಟ್ಟಿಗೆಯ ಮೇಲೆ ನಿಂದಿರುವ ಜಗಜ್ಜೀವನನನ್ನು ದೂರದಿಂದ ಕಂಡನು. ಪಾದಗಳನ್ನು

ಸಮವಾಗಿ ಊರಿಕೊಂಡು ಕರಗಳನ್ನು ಸೊಂಟದಮೇಲೆ ಇರಿಸಿಕೊಂಡು ನಾಸಾಗ್ರದಲ್ಲಿ ದೃಷ್ಟಿಯಂ ನಿಲಿಸಿ ಕಂಗೊಳಿಸುತಿರುವ ಪರಮಾತ್ಮನ ಸ್ವರೂಪಮಂ ಕಂಡು-ನಾನು ನಿತ್ಯವೂ ಮಾನಸದಲ್ಲಿ ಪೂಜಿಸುವ ಶ್ರೀರಾಮರೂಪವು ಕಾಣುವುದಿಲ್ಲ-ಎಂದು ಆಲಿಂಗನಮಂಮಾಡಿಕೊಳ್ಳದೆ ಇದಿರಲ್ಲಿ ನಿಂತು-ಎಲೆ ಶ್ರೀರಾಮಚಂದ್ರನೇ! ಕೈಗಳಲ್ಲಿ ಇದ್ದ ಧನುಸ್ಸನ್ನೂ ಬಾಣವನ್ನೂ ಏನುಮಾಡಿದೆ? ಕರಗಳನ್ನು ಸೊಂಟದಲ್ಲಿ ಏಕೆ ಇರಿಸಿರುವೆ? ನಿನ್ನ ರೂಪವನ್ನು ಏಕೆ ಬದಲುಮಾಡಿದೆ? ಇದನ್ನು ನನಗೆ ಹೇಳು-ಎಂದು ದೇವರಂ ಕುರಿತು ನುಡಿದು, ಅದಕ್ಕೆ ಸ್ವಾಮಿಯು ಪ್ರತ್ಯುತ್ತರಮಂ ನುಡಿಯದೆ ಇದ್ದುದರಿಂದ ಮತ್ತೆ-ನನ್ನೊಡನೆ ಏನನ್ನೂ ಮಾತನಾಡುವುದಿಲ್ಲವೆಂದು ಶಪಥವನ್ನು ಮಾಡಿರುವೆಯಾ? ನನ್ನಿಂದ ಏನಪರಾಧವು ನಡೆದಿರುವುದು? ಹೇಳು. ಸರಯೂ ನದಿಯೆಲ್ಲಿ ಹೋಯಿತು? ಇಲ್ಲಿ ಭೀಮರಥಿಯು ಹರಿಯುತಿರುವುದು. ಇಂತಹ ವಿಪರೀತವು ಏಕೆ ಆಗಿರುವುದು? ಅಯೋಧ್ಯಾಪುರವು ಲುಪ್ತವಾಗಿ ಫಂಡರಪುರವಾಗಿದೆ. ನಿನ್ನ ಸುಂದರಿ ಸೀತೆಯೇನಾದಳು? ಇಲ್ಲಿ ಬೇರೆ ನಾಲ್ವರು ಸ್ತ್ರೀಯರು ಇರುವರು. ಅಪರಿಮಿತವಾದ ವಾನರರ ಸೇನೆಯು ಇಲ್ಲಿ ಕಾಣುವುದಿಲ್ಲ. ಹನುಮಂತನೊಬ್ಬನು ಕಾಣುತಿರುವನು. ಈತನು ಸೈನ್ಯದಿಂದ ಏಕೆ ಹೊರಗಾದನು? ನಿನಗೆ ಯಾವ ಭಕ್ತನು ಆಶೆಯನ್ನು ಹತ್ತಿಸಿ ನಿಲಿಸಿರುವನು? ನಾನು ಈಗ ಯಾರನ್ನು ಆಲಿಂಗಿಸಿಕೊಳ್ಳಬೇಕು? ಯಾರಿಗೆ ಸಾಷ್ಟಾಂಗನಮಸ್ಕಾರಮಂ ಮಾಡಬೇಕು? ಯಾವುದರಿಂದ ನನ್ನ ಮನಸ್ಸಿಗೆ ಸಮಾಧಾನವಾಗುವುದು?-ಎಂದು ಗದ್ಗದಸ್ವರದಿಂದ ನುಡಿದು ಕಣ್ಣುಗಳಿಂದ ಬಾಷ್ಪಮಂ ಸುರಿಯಿಸುತ್ತ-ಅಯೋಧ್ಯಾವಾಸಿಯೇ! ಜಾನಕೀಕಾಂತನೇ! ನನಗೆ ಬೇಗನೆ ದರ್ಶನಮಂ ಕೊಡು-ಎಂದು ಅನನ್ಯಭಾವದಿಂದ ಪ್ರಾರ್ಥಿಸಲು, ಶ್ರೀರುಕ್ಮಿಣೀಪತಿಯು ಈತನ ನಿಶ್ಚಯಮಂ ನೋಡಿ ಸಂತುಷ್ಟನಾಗಿ-ಇವನ ಭಕ್ತಿಯು ಉತ್ಕೃಷ್ಟವಾದುದು. ಇದನ್ನೇ ಉಪಾಸನನಿಶ್ಚಯವೆನ್ನಬೇಕು-ಎಂದನು.

ಬಳಿಕ ರುಕ್ಮಿಣಿಯು ಜಗಜ್ಜೀವನನನ್ನು ಕುರಿತು-ಶ್ರೀರಾಮೋಪಾಸಕನಾದ ಭಕ್ತನು ನಿಮ್ಮ ಸಂದರ್ಶನಕ್ಕೋಸ್ಕರ ಬಂದಿರುವನು. ಆದುದರಿಂದ ಶ್ರೀರಾಮರೂಪಮಂ ಧರಿಸಬೇಕು-ಎನಲು, ಫಂಡರೀನಾಥನು ಆ ಮಾತಂ ಕೇಳಿ, ತನ್ನ ರೂಪವನ್ನು ಬದಲುಮಾಡಿ ರಾಮರೂಪಮಂ ತಾಳಿ, ಕಿರೀಟಕುಂಡಲಾದಿಗಳಿಂದ ಅಲಂಕೃತನಾಗಿ ಕೈಗಳಲ್ಲಿ ಧನುರ್ಬಾಣಂಗಳಂ ಪಿಡಿದು ಕಂಗೊಳಿಸುತ್ತ ದರ್ಶನಮಂ ಕೊಡುವುದಕ್ಕೆ ಸಿದ್ಧನಾಗಿ ನಿಂತನು. ಸಮೀಪದಲ್ಲಿದ್ದ ರುಕ್ಮಿಣೀದೇವಿಯೂ ಆಕ್ಷಣದಲ್ಲಿ ಸೀತೆಯಾಗಿ ನಿಂತಳು. ಅವರಂ ಕಂಡು ರಾಮದಾಸನು ಚಿತ್ತದಲ್ಲಿ ಆನಂದಮಂ ತಾಳಿ ಸನ್ನಿಧಿಗೆ ಬಂದು ಶ್ರೀರಾಮಮೂರ್ತಿಯನ್ನು ಆಲಿಂಗಿಸಿಕೊಂಡು ಧ್ಯಾನಮಂ ಮಾಡಿ ಸಮಾಧಾನಗೊಂಡನು. ನೇತ್ರಗಳಲ್ಲಿ ಆನಂದಬಾಷ್ಪವು ತುಂಬಿತುಳುಕಾಡಿತು. ಕಂಠದಲ್ಲಿ ಪ್ರೇಮವು ಒತ್ತಿಕೊಂಡು ಬಂದಿತು. ಬಳಿಕ ಸ್ವಾಮಿಯ ಪಾದಗಳ ಮೇಲೆ

ಶಿರಸ್ಸನಿರಿಸಿ ಸದ್ಭಾವದಿಂದ ದೃಢವಾಗಿ ಹಿಡಿದು ಸ್ವಾಮಿಯನ್ನು ಕುರಿತು—ದೇವಾದಿ ದೇವನೇ! ಬಹುದಿನಕ್ಕೆ ದರ್ಶನವಂ ಕೊಟ್ಟೆ. ಇದರಿಂದ ನನ್ನ ಮನಸ್ಸಿಗೆ ಸಮಾಧಾನವಾಯಿತು—ಎಂದು ನುಡಿಯಲು, ಜಗಜ್ಜೀವನನು ಕೃಪಾದೃಷ್ಟಿಯಿಂದ ನೋಡಿ, ಎಲೆ ರಾಮದಾಸನೆ! ನಿನ್ನ ವಿಶ್ವಾಸಕ್ಕೋಸ್ಕರ ನಾನು ಶ್ರೀರಾಮರೂಪವಂ ಧರಿಸಿ ಬೆನು. ಇನ್ನುಮೇಲೆ ಇದೇರೂಪವಂ ಧ್ಯಾನಿಸುತ್ತಿರು. ಭೇದಬುದ್ಧಿಯಂ ಬಿಡುವನಾಗು. ಶಿಷ್ಯರನ್ನು ಸಂಗ್ರಹಿಸಿ ಸಂಪ್ರದಾಯಾನುಸಾರದಿಂದ ಸದ್ಭಾವವುಳ್ಳವನಾಗಿ ಕೀರ್ತನವಂ ಮಾಡುತಿರು. ಇದರಿಂದ ಜಡತೆಯುಳ್ಳ ಅಜ್ಞಾನಿಗಳೂ ನನ್ನ ಭಕ್ತಿಮಾರ್ಗವಂ ಹಿಡಿದಾರು—ಎಂದು ನುಡಿದು ಸಿರದಲ್ಲಿ ಅಭಯಹಸ್ತವನಿರಿಸಿ ಕ್ಷಣದಲ್ಲಿ ಮೊದಲಂತೆ ಪಾಂಡುರಂಗರೂಪವಂ ಧರಿಸಿದನು. ಮಾಯಾಲಾಘವಿಯಾದ ಜಗಜ್ಜೀವನನು ತನ್ನ ಲಾಘವವನ್ನು ಇತರರಿಗೆ ತಿಳಿಯಲೀಯನು. ರಾಮದಾಸನ ಭಕ್ತಿಭಾವವು ಶ್ಲಾಘ್ಯವ ದುದು. ಜಾನಕೀಪತಿಯನ್ನು ಸ್ವಾಧೀನವಮಾಡಿಕೊಂಡನು. ರಾಮದಾಸನು ಇಚ್ಛೈಸಿದಂತೆ ಶ್ರೀಪತಿ ಆದನು.

ಬಳಿಕ ರಾಮದಾಸನು ವಿಟ್ಠಲಮೂರ್ತಿಯನ್ನು ಆಲಿಂಗಿಸಿಕೊಂಡು ಕೀರ್ತನವನ್ನಾರಂಭಿಸಿದನು. ರಾಮಕೃಷ್ಣರೂಪಗಳೆರಡೂ ಬೇರೆಯೆಂಬ ಭೇದಬುದ್ಧಿಯು ಇದ್ದಿತು. ಅದನ್ನು ಸ್ವಾಮಿಯು ಹೋಗಲಾಡಿಸಿ ಅದ್ವೈತಭಜನೆಯಲ್ಲಿ ನಿಲಿಸಿದನು. "ಗೋಪಾಳಕಾಲ" ಎಂಬ ಉತ್ಸವವು ಆದಬಳಿಕ ರಾಮದಾಸನು ಸ್ವಾಮಿಯ ಅನುಜ್ಞೆಯಂಪಡೆದು ಅಲ್ಲಿಂದ ಹೊರಟು ತನ್ನ ಆಶ್ರಮಕ್ಕೆ ಬರುವಾಗ ಮಾರ್ಗದಲ್ಲಿ "ಜೆಜೂರಿ" ಎಂಬ ಊರು ದೊರೆಯಲು, ಅಲ್ಲಿ ನಿಂತನು. ಅದು ಪರಮೇಶ್ವರನ ಅವತಾರವಾದ "ಮಹಾಲಸಾಕಾಂತ ಮತ್ತು ಖಂಡೇರಾಯ" ಎಂದು ಪ್ರಸಿದ್ಧಿಯುಳ್ಳ ಸ್ವಾಮಿಯ ಕ್ಷೇತ್ರವು. ಆ ಸ್ವಾಮಿಯು ರಾಮದಾಸನ ಆಗಮನಕ್ಕೆ ಸಂತೋಷಪಟ್ಟು, ಈತನು ಧನ್ಯನು; ವಿಷ್ಣುಭಕ್ತನು. ಮತ್ತೊಂದು ದೈವವನ್ನು ಅರಿಯದವನು. ಯಾವನು ಪಾಂಡುರಂಗಮೂರ್ತಿಗೆ ನಮಸ್ಕಾರವಂ ಮಾಡನೋ ಆತನು ನನ್ನ ದರ್ಶನಕ್ಕೆ ಎಂತು ಬಂದಾನು? ಆದುದರಿಂದ ಮನುಷ್ಯರೂಪವನ್ನು ಧರಿಸಿ ಈತನಂ ಕಂಡುಬರಬೇಕು ಎಂದು ಎಣಿಸಿ, ಆಗ ರಾಜನಾಗಿದ್ದ ಶಿವಾಜಿಯ ರೂಪವಂ ತಾಳಿ ಹಣೆಗೆ ಭಂಡಾರವಂ ಹಚ್ಚಿಕೊಂಡು ಕುದುರೆಯನೇರಿ ಬಂದು ದೂರದಲ್ಲಿ ರಾಮದಾಸನಂ ಕಂಡು, ಥಟ್ಟನೆ ಇಳಿದು—ಇಂದು ಸುದಿವಸವು. ಸ್ವಾಮಿಯ ಸಂದರ್ಶನವಾಯಿತು—ಎಂದು ವಂದಿಸಿ ಆಲಿಂಗನವಂ ಮಾಡಿಕೊಂಡನು. ಯಾವನು ಸಾಕ್ಷಾದೀಶ್ವರನ ಅವತಾರವೋ ಆತನು ರಾಮದಾಸನಿಗೆ ವಂದಿಸಿ ಕೈಮುಗಿದುಕೊಂಡು ಆತನಂ ಕುರಿತು, ನೀನು ಪಂಡರಪುರಕ್ಕೆ ಬರುವಾಗ ನನಗೆ ದರ್ಶನವಂ ಕೊಡುತಿರಬೇಕು. ನಾನು ಬೆಟ್ಟದಮೇಲೆ ಇದ್ದುಕೊಂಡು ಬಹುದಿವಸಗಳಿಂದ ನಿಮ್ಮ ದರ್ಶನವಂ ಅಪೇಕ್ಷಿಸುತಿದ್ದೆನು. ಯಾರು ಶ್ರೀರಾಮಭಜನೆಯಂ ಮಾಡುತಿರುವರೋ ಆ ಸಜ್ಜನರು ನನಗೆ

ಇಷ್ಟತಮರು—ಎಂದು ನುಡಿದನು. ಅದಕ್ಕೆ ರಾಮದಾಸನು ಉತ್ತರವೇನನೂ ಆಡದೆ, ಇದೇನು ಆಶ್ಚರ್ಯ !—ಎಂದು ಚಿಂತಿಸಿ, ಸರ್ವಕಾಲದಲ್ಲಿಯೂ ಶ್ರೀರಾಮನಾಮವನ್ನು ಭಜಿಸುವ ಪರಮೇಶ್ವರನ ಅವತಾರವಾದ ಮಹಾಲಸಾಕಾಂತಸ್ವಾಮಿಯ ದರ್ಶನವಂ ಮಾಡಿಕೊಂಡು ಬರಬೇಕೆಂದು ನಿಶ್ಚಯಿಸಿ ಹೊರಟು ಬೆಟ್ಟವನ್ನು ಹತ್ತಿ ಭಗವಂತನಾದ ಖಂಡೇರಾಯನಂ ಕಂಡು, ಶ್ರೀರಾಮಸ್ವರೂಪವನ್ನು ಧ್ಯಾನಿಸಿ ನಮಸ್ಕಾರವಂ ಮಾಡಿ ಸಭಾಮಂಟಪದಲ್ಲಿ ಕೀರ್ತನವನೆಸಗಿ "ಪಂಚಾನನ, ಹಯವಾಹನ" ಎಂಬ ಮಂಗಳದಾರತಿಯ ಹಾಡುಗಳಂ ರಚಿಸಿ ಆನಂದದಿಂದ ಪಾಡಿ ಆರತಿಯಂ ಬೆಳಗಿದನು. ಬಳಿಕ ನಮಸ್ಕಾರವಂ ಮಾಡಿ ಅಲ್ಲಿಂದ ಹೊರಟು ಜಾಂಬಕ್ಕೆ ಹಿಂತಿರುಗಿ ಬರುವಾಗ 'ಸ್ವಾಮಿಯು ತನ್ನ ರೂಪವಂ ಧರಿಸಿ ರಾಮದಾಸನಿಗೆ ದರ್ಶನವಂ ಕೊಟ್ಟನು' ಎಂದು ಸುದ್ದಿಯಂ ಕೇಳಿ, ಶಿವಾಜಿಯು ನಡೆತಂದು ಸದ್ಭಾವದಿಂದ ರಾಮದಾಸನಿಗೆ ಶರಣಾಗತನಾಗಲು, ಆತನು ಆ ರಾಜನ ಅಧಿಕಾರವನರಿತು ಉಪದೇಶವಂ ಮಾಡಿದನು. ಇನ್ನು ಅನೇಕರಾದ ವೈರಾಗ್ಯಶೀಲರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಭಜನಮಾರ್ಗದಲ್ಲಿ ನಿಲಿಸಿದನು.

ಆ ರಾಮದಾಸನು ಸರ್ವಕಾಲವಲ್ಲಿಯೂ ವಿರಕ್ತನು. ಮನದಲ್ಲಿ ತಲ್ಲಣವು ಸ್ವಲ್ಪವೂ ಇಲ್ಲ. ಮಾನಾಪಮಾನಗಳಂ ಸಮವಾಗಿ ತಿಳಿದು ಅರಣ್ಯದಲ್ಲಿ ಏಕಾಂಗಿಯಾಗಿ ಕುಳಿತಿರುತಿದ್ದನು. ಜನಗಳು ಯಾರಾದರೂ ಬಂದು ಹಿಂಸೆಪಡಿಸಿದರೆ ದೂರಕ್ಕೋಡಿಹೋಗುತಿದ್ದನು. ರಾಜನನ್ನೂ ಬಡವರನ್ನೂ ಸಮರನ್ನಾಗಿ ಎಣಿಸಿದ್ದನು. ಸರ್ವಭೂತಗಳಲ್ಲಿಯೂ ಉಂಟಾದ ಸದ್ಭಾವದಿಂದ ಪೂರ್ಣವಾದ ಆತ್ಮಜ್ಞಾನವು ಪ್ರಕಟಿತವಾಯಿತು. ಆಅನುಭವವಿಶೇಷದಿಂದ ರಸಭರಿತವಾದ ಶಬ್ದಗಳುಳ್ಳ 'ದಾಸಬೋಧ' ಎಂಬ ಅಧ್ಯಾತ್ಮಗ್ರಂಥವನ್ನು ವಿರಚಿಸಿದನು. ಬುದ್ಧಿಮಂತರು ಅದನ್ನು ಸದ್ಭಾವದಿಂದ ಓದಲು, ಅವರಿಗೆ ಅಸಾಧಾರಣವಾದ ಜ್ಞಾನವುಂಟಾಗುವುದು. ರಾಮದಾಸನ ಜ್ಞಾನವು ಅದ್ಭುತವಾದುದು ಪ್ರಪಂಚವನ್ನೇ ಉದ್ಧರಿಸುವುದಕ್ಕೋಸ್ಕರ ಶ್ರೀರಾಮಭಕ್ತನಾಗಿ ಭೂಮಿಯಲ್ಲಿ ಅವತರಿಸಿದನು. ಆತನು ಸಿದ್ಧಾಂತಜ್ಞಾನದಲ್ಲಿ ಬಹುಶ್ರೇಷ್ಠನು. ದೀನರ ವಿಷಯದಲ್ಲಿ ಕರುಣಾಕರನು. ಹೊನ್ನನ್ನೂ ಹೆಣ್ಣನ್ನೂ ಸಮವಾಗಿ ಕಾಣುತಿದ್ದನು. ಇಂದ್ರನ ಸಿರಿಯು ಇದಿರಲ್ಲಿ ಬಂದರೂ ಲಕ್ಷ್ಯಮಾಡನು. ಕಿವಿಗಳಿಂದ ಶ್ರೀರಾಮಚರಿತ್ರೆಯನ್ನು ಕೇಳುತ್ತ ಮುಖದಿಂದ ಶ್ರೀರಾಮನಾಮವಂ ಜಪಿಸುತ್ತ ಶ್ರೀರಾಮಮೂರ್ತಿಯನ್ನು ಧ್ಯಾನಿಸುತ್ತ ಸರ್ವಭೂತಗಳನ್ನೂ ಸಮತೆಯಿಂದ ಕಾಣುತಿದ್ದನು.

ಮುಂದಣ ಅಧ್ಯಾಯದಲ್ಲಿ ತುಕ್ಕಾರಾಮನೆಂಬ ಭಕ್ತನಿಗೆ ಪುರುಷೋತ್ತಮನು ಪ್ರಸನ್ನನಾದ ಕಥೆಯು ಅದ್ಭುತವಾಗಿರುವುದು. ರಸೋದಯವುಳ್ಳ ಆಕಥೆಯನ್ನು

ರುಕ್ಮಿಣೀಪತಿಯೇ ನುಡಿಯಿಸುವನು. ಶ್ರೋತೃಗಳು ಚಿತ್ತಸ್ವಾಸ್ಥ್ಯದಿಂದ ಕೇಳ ಬೇಕೆಂದು ಮಹೀಪತಿಯು ಬಿನ್ನವಿಸಿಕೊಳ್ಳುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತೇಳನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ನಾಲ್ವತ್ತೆಂಟನೆಯ ಅಧ್ಯಾಯ.

ತುಕ್ಕಾರಾಮನ ಚರಿತ್ರೆ.

ಜಯ ಜಯ ಕರುಣಾಸಾಗರನೇ! ಆನಂದಘನನೇ! ಭಕ್ತವತ್ಸಲನೇ! ರಾಜೀವನನಯನನೇ! ವಿಧಿಜನಕನೇ! ದಾನವಮರ್ದನನೇ! ಜಗಜ್ಜೀವನನೇ! ಪಾಂಡುರಂಗನೇ! ವಿಶ್ವವ್ಯಾಪಕನೇ! ಕಮಲಾಪತಿಯೇ! ಸಜ್ಜನಜೀವನೇ! ಆನಂದಮೂರ್ತಿಯೇ! ನಿರ್ಗುಣನೇ! ವಿಶ್ವಪತಿಯೇ! ನಿನ್ನ ಗತಿಯು ವೇದಶಾಸ್ತ್ರಗಳಿಗೂ ಅತರ್ಕ್ಯವಾದುದು. "ವಿಶ್ವಬಾಹುಗಳಿಂದ ವಿಶ್ವವಂ ನಿರ್ಮಿಸುವನು. ವಿಶ್ವಚಕ್ಷುಸ್ಸುಗಳಿಂ ನೋಡುವನು. ವಿಶ್ವಪಾದಗಳಿಂ ಗಮನಮಾಡುವನು" ಎಂದು ವೇದಗಳು ಉದ್ಘೋಷಿಸುವುವು. ವಿಶ್ವರೂಪನೇ! ಆತ್ಮಾರಾಮನೇ! ಗುಣನಿಧಿಯೇ! ಉತ್ತಮೋತ್ತಮನೇ! ಸ್ವಾನಂದಪ್ರಕಾಶಕನೇ! ಮೇಘಶ್ಯಾಮನೇ! ನಿನ್ನ ಮಹಿಮೆಯು ಸಾಮ್ಯವಿಲ್ಲದಂತಹುದು. ನಿನ್ನ ಮೂರ್ತಿಯನ್ನು ನಿರೂಪಿಸಲು ತೊಡಗಿ, ಶ್ರುತಿಗಳು "ನೇತಿ" ಎಂದು ನುಡಿಯುತ್ತಿರುವುವು. ಪುರಾಣಂಗಳ ವ್ಯುತ್ಪತ್ತಿಯು ಕುಂಠಿತವಾಯಿತು. ಶಾಸ್ತ್ರಗಳು ನಾಚಿಕೊಂಡುವು. ತಪಸ್ಸಿನಿಂದಲೂ, ತೀರ್ಥಾಟನೆಯಿಂದಲೂ ನೀನು ದೊರೆಯುವನಲ್ಲ. ಅಂತಹ ನೀನು ನಿನ್ನ ಭಕ್ತರ ಕೀರ್ತನವಂ ಕೇಳುವುದಕ್ಕೆ ಅವರಲ್ಲಿಗೆ ಓಡಿಹೋಗುವೆ. ಯೋಗಿಗಳು ವಜ್ರಾಸನದಲ್ಲಿ ಕುಳಿತು ಸಾಧನವಂ ಮಾಡಿದರೂ ನಿನ್ನಂ ಅರಿಯರು. ಭಾವುಕರು ಹುಡುಕಿ ನೋಡುವರು. ನೀನು ಸರ್ವವೇದಾಂತಿಗಳಿಗೂ ಕಿರೀಟದ ರತ್ನವು. ಸನಕಾದಿಗಳಿಗೂ ಪೂಜ್ಯನು; ಶ್ರೇಷ್ಠನು. ಅಂತಹ ನೀನು ಭಕ್ತರ ಮನೆಯಲ್ಲಿ ತಾನಾಗಿ ಕಷ್ಟಪಡುತ್ತಿರುವೆ. ಭಕ್ತರ ಕಾರ್ಯಗಳನ್ನು ಮಾಡುವ ವಿಷಯದಲ್ಲಿ ನಿನ್ನ ಮನಸ್ಸಿಗೆ ನಾಚಿಕೆಯಾಗದು. ಮಾನಾಪಮಾನವು ತಿಳಿಯದು. ಎಲೆ ಪಂಢರೀನಾಥನೇ! ನಿನ್ನ ಭಕ್ತರು ನಿನ್ನನೆಂದಿಗೂ ಬಾಧಿಸರು. ಪ್ರಪಂಚದ ಕಷ್ಟವು ಅಪಾರವಾದುದೆಂದು ತೋರಿಸಿ ಅವರಿಗೆ ವೈರಾಗ್ಯವು ಹುಟ್ಟುವಂತೆ ಮಾಡುವೆ. ಆ ವೈರಾಗ್ಯದ ಬಲದಿಂದ ನಿನ್ನ ಧ್ಯಾನವನ್ನು ಸರ್ವಕಾಲ

ದಲ್ಲಿಯೂ ಮಾಡುತ್ತ, ಮನಸ್ಸಿನಲ್ಲಿ ತಲ್ಲಣಗೊಳ್ಳದೆ ಪ್ರೇಮಭಾವದಿಂದ ಕೀರ್ತನದಲ್ಲಿ ಭಕ್ತರು ಪಾಡುವರು. ನೀನು ಅಭಕ್ತರ ಹೃದಯದಲ್ಲಿ ಹೊಕ್ಕು ಭಕ್ತರಂ ಕ್ಲೇಶಗೊಳಿಸಿ ಬಳಿಕ ನೀನೇ ಓಡಿಬಂದು ಭಕ್ತರ ಮಾನವಂ ಸಂರಕ್ಷಿಸುತ್ತಿರುವೆ. ಅಘಟಿತವ್ಯಾಪಾರವಂ ಮಾಡಿ ತೋರಿಸಿ ಲೋಕದಲ್ಲಿ ಕೀರ್ತಿಯಂ ಬೆಳೆಯಿಸುವೆ. ಇಂತು ನೀನು ಭಕ್ತರ ಸಾಲಗಾರನಾಗಿ ಅವರ ಗುಣಂಗಳಂ ವರ್ಣಿಸುವುದಕ್ಕೆ ಯಾರನಾದರೂ ನಿಮಿತ್ತಮಾಡುವೆ. ನನ್ನ ಬುದ್ಧಿಯು ಮಂದವಾದುದು. ನೀನು ಅದನ್ನು ಪ್ರಕಾಶಗೊಳಿಸುವೆ. ಆದುದರಿಂದ ನಿನಗೆ ಅಡಿಗಡಿಗೂ ನಮಸ್ಕಾರವಂ ಮಾಡುವೆನು. ಅನಾಥನಾಥನೇ! ರುಕ್ಮಿಣೀಪತಿಯೇ! ಇಷ್ಟನ್ನಾದರೂ ಪ್ರೀತಿಯಿಂದ ಹೇಳುವುದಕ್ಕೆ ಬುದ್ಧಿಯು ಕುಂಠಿತವಾಗಿದೆ. ನಿನ್ನ ಕೃಪೆಯು ಉಂಟಾಗದಿದ್ದರೆ ನಿನ್ನ ಭಜನೆಯು ಅದೆಂದಿಗೂ ದೊರೆಯಲಾರದು. ಯಾವಯಾವ ಕಾಲಕ್ಕೆ ಏನೇನಾಗುವುದೋ ಅದೂ ನಿನ್ನ ಸತ್ವದಿಂದಲ್ಲದೆ ಆಗಲಾರದು. ಪ್ರತಿಕ್ಷಣವೂ ವೃತ್ತಿಯಂ ಬೇರೆಮಾಡುತ್ತ ಮನದಲ್ಲಿ ಸಂಕಲ್ಪವಿಕಲ್ಪಗಳು ಹುಟ್ಟುವುವು. ನೀನು ಅಂತರಸಾಕ್ಷಿಯಾಗಿರುವೆ. ಶ್ರೀಪತಿಯೇ! ನನ್ನ ಮುಖದಿಂದ ಎಷ್ಟೆಂದು ಹೇಳಲಿ? ಇಷ್ಟನ್ನಾದರೂ ಹೇಳದೆಯೇ ಇದ್ದರೆ ನಿನಗೆ ಕರುಣೆ ಸ್ವಲ್ಪವೂ ಹುಟ್ಟದು. ಪಸುಳೆಯು ರೋದನವಂ ಮಾಡಲು, ತಾಯಿಯು ಎತ್ತಿ ಹೃದಯದಲ್ಲಿ ಇಟ್ಟುಕೊಂಡು ಸಮಾಧಾನಗೊಳಿಸುವಂತೆ, ಭಕ್ತರು ದೀನವಚನಗಳಿಂದ ನಿನ್ನನ್ನು ಸ್ತುತಿಯಿಸಲು, ಬಳಿಕ ನೀನು ಕೃಪಾದೃಷ್ಟಿಯಿಂದ ನೋಡಿ ಅವರಿಗೆ ಪ್ರೇಮಭಜನೆಯಂ ಕುಡುವೆ. ನಿನ್ನ ರೀತಿಯು ಇಂತಹುದೆಂದು ಪೂರ್ವದಲ್ಲಿ ಅನೇಕರಾದ ಸಂತರು ವರ್ಣಿಸಿರುವರು. ಆ ಭಕ್ತರ ಚರಿತ್ರೆಯನ್ನು ಶ್ರೀಪತಿಯೇ! ನೀನು ನುಡಿಯಿಸುವನಾಗು.

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ನಾಮದಾಸನ ದೃಢಭಾವವಂ ನೋಡಿ ಪಂಢರೀನಾಥನು ತಾನು ರಘುನಾಥನಾದನೆಂಬ ಕಥೆಯಂ ಕೇಳಿದಿರಲ್ಲಾ? ಇನ್ನು ಮುಂದಣ ಕಥೆಯಂ ಸಾದರರಾಗಿ ಕೇಳಬೇಕು.

ಅಲಕಾಪುರಿಗೆ ಬಂದುವರೆಯೋಜನದ ಮೇಲೆ ದೇವಗಾಂವ-ಎಂಬ ಪುಣ್ಯಕ್ಷೇತ್ರವಿರುವುದು. ಅಲ್ಲಿ "ತುಕ್ಕ" ಎಂಬ ವೈಶ್ಯನೊಬ್ಬನು ಇದ್ದನು. ಅವನಿಗೆ "ಅಬಳ" ಎಂಬ ಉಪನಾಮವುಂಟು. ಅವನು ವಾಣಿಜ್ಯವೃತ್ತಿಯಲ್ಲಿದ್ದನು. ಅಸತ್ಯವನ್ನು ಎಂದಿಗೂ ನುಡಿಯನು. ಅವನಿಗೆ ಇರ್ವರು ಮಡದಿಯರಿದ್ದರು. ಮನೆಯಲ್ಲಿ ಧನಸಂಪತ್ತು ಬಹುವಾಗಿದ್ದಿತು. ಆದರೂ ಆತನು ನಿರಂತರವೂ ದೇಹಾಭಿಮಾನವಿಲ್ಲದೆ ಏಕಾಂತದಲ್ಲಿ ಕುಳಿತು ಭಗವತ್ಸ್ಮರಣೆಯಂ ಮಾಡುತಿದ್ದನು. ಆತನ ತಾಯ್ತಂದೆಗಳು ಸಂದುಹೋದರು. ಬಳಿಕ ದುಃಖರೂಪವಾದ ಸಂಸಾರವು ಮೈಗೆ ಹತ್ತಿತು. ಆಗ ಬಹು ದಿವಸ ಕ್ಷಾಮಕಾಲವಾಗಿದ್ದಿತು. ಆಗ ಆತನು ದ್ರವ್ಯವೆಲ್ಲವನ್ನೂ ವೆಚ್ಚಮಾಡಿದನು ಇನ್ನು ಸ್ವಲ್ಪವೇ ಧನವೂ ಧಾನ್ಯವೂ ಉಳಿದಿದ್ದಿತು. ಅದು ಅಲ್ಲಲ್ಲಿಯೇ ಅತಂತ್ರವಾಗಿ

ಹೋಯಿತು. ಪೂರ್ಣಿಮೆಯಲ್ಲಿ ಉಕ್ಕಿದ ಸಮುದ್ರದ ಜಲವು ಅಲ್ಲಿಯೇ ಎಂತು ಅಡಗು ವುದೋ, ಹಿಮಕಾಲವು ಬರುವುದೂ ವರ್ಷಾಕಾಲದ ಮೇಘವು ಎಂತು ಅಗೋಚರ ವಾಗುವುದೋ, ಬೇಸಗೆಯು ಪ್ರಾಪ್ತವಾಗಲು, ತೃಣವು ಎಂತು ಒಣಗಿಹೋಗು ವುದೋ, ಸೂರ್ಯನು ಉದಯಿಸಲು ನಕ್ಷತ್ರಕುಲವು ಎಂತು ಲೋಪಿಸಿಹೋಗು ವುದೋ, ವಾರ್ಧಕವು ಬರಲು, ಯೌವನವಿಲಾಸವು ಎಂತು ನಾಶವನೈದುವುದೋ ಅಂತು ಕ್ಷಾಮವುಂಟಾಗಲು, ಆತನ ಮನೆಯಲ್ಲಿದ್ದ ಧನಧಾನ್ಯವೆಲ್ಲವೂ ವೆಚ್ಚವಾಗಿಹೋ ಯಿತು. ಮಕ್ಕಳು ಮರಿಗಳು ಅನ್ನವಿಲ್ಲದೆ ತಲ್ಲಣಿಸುತಿದ್ದರು. ಕಿರಿಯಾಕೆಗೆ ಸಂತಾ ನವಿರಲಿಲ್ಲ. ಕಾಳು ಕಣ್ಣಿಗೆ ಕಾಣದಿರಲು, ಬೇಯಿಸಿದ ಸೊಪ್ಪನ್ನು ಎಲ್ಲರೂ ತಿನ್ನು ತಿದ್ದರು. ಆದರೆ ಬರುವಂತಹುದು ತಪ್ಪಲಾರದು. ಆ ಸಮಯದಲ್ಲಿ ಹಿರಿಯಾಕೆಯು "ಅನ್ನ, ಅನ್ನ" ಎನ್ನುತಲೇ ಬಿದ್ದುಹೋದಳು. ತುಕ್ಕನು ಅದರಿಂದ ಬಹುಲಜ್ಜಿತ ನಾಗಿ ಪ್ರಪಂಚದ ಮಮತೆಯನ್ನು ಮರೆತನು. ಸಂಪತ್ತು ಹೋಗುವುದೂ, ಮಾನವೂ ಅದರೊಡನೆಯೇ ಹೋಯಿತು. ನಂಟರಿಷ್ಟರು ನಗಲಾರಂಭಿಸಿದರು. ಯಾರು ಬಹು ಸನ್ಮಾನವಂ ಮಾಡುತ್ತಿದ್ದರೋ ಅವರೇ ನಿಂದೆಯಂ ಮಾಡುತ ಬಂದರು. ವ್ಯಾಪಾರ ವೇನೂ ನಡೆಯಲಿಲ್ಲ. ಅದರಿಂದ ಅನ್ನವಸ್ತ್ರಕ್ಕೆ ಬಹುಕಷ್ಟವುಂಟಾಯಿತು. ಪುರು ಷನು ದ್ರವ್ಯಹೀನನಾದರೆ, ನಂಟರಿಷ್ಟರು ಅವನಂ ಕಂಡು ಮಾತನಾಡಿಸರು. ಮರದ ಎಲೆಗಳೆಲ್ಲವೂ ಉದುರಿಹೋಗಲು, ವಿಲಾಸಿಗಳಾದ ಜನರು ಅದರ ನೆಳಲಲ್ಲಿ ಕುಳಿತು ಕೊಳ್ಳುವರೇ? ರಾಜನು ಪರಚಕ್ರದಲ್ಲಿ ಸಿಕ್ಕಿಬೀಳಲು, ದೇಹಾಭಿಮಾನವುಳ್ಳ ಯೋ ಧರು ಓಡಿಹೋಗದೆ ಸಹಾಯರಾಗಿ ನಿಲ್ಲುವರೇ? ದಾರಿದ್ರ್ಯವು ಬರಲು, ನಂಟರು ಅವ ಮಾನವನ್ನು ಮಾಡುವರು. ಅಂತಹ ಕಷ್ಟಕಾಲವು ಬಂದೊದವಿದುದರಿಂದ ಪರಮ ಲಜ್ಜಿತನಾಗಿ ಪ್ರಪಂಚದೊಳಗಾಗಿ ಮಿತ್ರನಾದವನೊಬ್ಬನನ್ನೂ ಕಾಣದೆ ಯಾವುದಾ ದರೂ ವಾಣಿಜ್ಯವೃತ್ತಿಯನ್ನು ಅವಲಂಬಿಸಿದರೂ ಅದರಲ್ಲಿ ನಷ್ಟವೇ ಬರುತ ಬರಲು, ಆಗ ಚಿತ್ತದಲ್ಲಿ ವಿವೇಕವನ್ನು ತಂದುಕೊಂಡು, ಈ ನರದೇಹವು ನಶ್ವರವಾದುದು; ನಾನು ಜನ್ಮವನ್ನು ವ್ಯರ್ಥವಾಗಿ ಕಳೆದೆನು. ಮಿಥ್ಯಾಭೂತವಾದ ಈ ಪ್ರಪಂಚದ ಮಾಯೆಯಲ್ಲಿ ಸಿಕ್ಕಿ ಪಂಡರೀನಾಥನಂ ಮರೆತೆನು. ತಿಗಣೆಗಳು ಸೇರಿದ ಮಂಚದಲ್ಲಿ ಮಲಗಿ ನಿದ್ರಿಸುವುದು ಎಂತು ಸುಖಸಿದ್ರೆಯೆನಿಸಿಕೊಳ್ಳದೋ ಅಂತು ಪ್ರಪಂಚದ ವಿಷಯಸುಖವು ಸುಖವೆನಿಸಿಕೊಳ್ಳದು. ಅದಂ ಸುಖವೆಂದು ಯಾವನು ಹೇಳು ವನೋ ಅವನನ್ನು ಮೂರ್ಖನೆನ್ನಬೇಕು. ಬಂಜೆಗೆ ಮಗನು ಹುಟ್ಟಿದನೆಂದರೆ ವೃಥಾ ಸಂತೋಷವೇತಕ್ಕೆ? ಎಂದು ಬಗೆದು ವೈರಾಗ್ಯವಿಶೇಷದಿಂದ ಸುಖದುಃಖಗಳನ್ನು ಸಮವಾಗೆಣಿಸಿ ಹಗಲೂ ರಾತ್ರಿಯೂ ಭಜನೆಯಂ ಮಾಡುತಿದ್ದನು. ಅಲ್ಲಿ ಪುರಾತನವಾದ ಪಾಂಡುರಂಗದೇವಾಲಯವೊಂದು ಜೀರ್ಣವಾಗಿದ್ದಿತು. ಅದನ್ನು ತಾನೇ ಮೆತ್ತನೆ ಸಾರಣೆ ಮುಂತಾದವುಗಳಿಂದ ಸರಿಪಡಿಸಿದನು. ಅದು ಸಕಲಸಾಧನಗಳಲ್ಲಿಯೂ

ಶ್ರೇಷ್ಠವಾದುದು. ಏಕಾದಶೀವ್ರತವನ್ನು ಆರಂಭಿಸಿ ಏಕನಿಷ್ಠೆಯಿಂದ ಜಾಗರವನ್ನು ಮಾಡುತ್ತಿದ್ದನು. ಕೀರ್ತನವನ್ನು ತಾನೇ ಮಾಡುವುದಕ್ಕೆ ಮೊದಲಿಂದ ಅದರ ಅಭ್ಯಾಸವು ಇರಲಿಲ್ಲವಾದುದರಿಂದ ಯಾರಾದರೂ ಸಂತರು ಮಾಡುತ್ತಿದ್ದರೆ ಅವರ ಹಿಂದೆ ನಿಂತು ಪಲ್ಲವಿಗಳನ್ನು ಹೇಳುತಿದ್ದನು. ಪೂರ್ವಿಕರಾದ ಶ್ರೇಷ್ಠರಾದ ಸಂತರ ವಚನಗಳನ್ನು ಪಾಠಮಾಡಿ, ಇವಕ್ಕಿಂತಲೂ ಅಧಿಕವಾದ ಮಾರ್ಗವು ಮತ್ತೊಂದಿಲ್ಲವೆಂದು ಏಕಭಾವವನ್ನು ದೃಢವಾಗಿ ಹಿಡಿದು ಭೂತಮಾತ್ರದಲ್ಲಿ ದಯೆಯಿಂದ ಉಪಕಾರವಂ ಮಾಡುತ್ತ ಸವಿನುಡಿಗಳಿಂದ ಸಂತೋಷಪಡಿಸುತಿದ್ದನು. "ಆತನು ಪರೋಪಕಾರವನ್ನು ಯಾವರೀತಿಯಿಂದ ಮಾಡುತಿದ್ದನು" ಎಂದೀರಿ; ಅದನ್ನು ಶ್ರೋತೃಮಹಾಶಯರಾದ ನಿಮಗೋಸ್ಕರ ವಿಸ್ತರದಿಂದ ಹೇಳುವೆನು; ಆಲಿಸುವುದು. ಯಾರಾದರೂ ಮಾರ್ಗಸ್ಥರು ಬಂದು ಇಳಿಯುವುದಕ್ಕೆ ಸ್ಥಳವನ್ನು ವಿಚಾರಿಸುತಿದ್ದರೆ, ತನ್ನ ಮನೆಗೆ ಕರೆದುಕೊಂಡು ಹೋಗಿ ಇಳಿಯಿಸಿಕೊಳ್ಳುವನು. ಯಾರಾದರೂ ಹಸಿವುಗೊಂಡು ಬರಲು, ಮನೆಯಲ್ಲಿ ಅನ್ನವಿದ್ದರೆ ಅವರಿಗೆ ಹಾಕಿಸುವನು. ಇಲ್ಲದಿದ್ದರೆ ಅವರಿಗೋಸ್ಕರ ಕಷ್ಟಪಟ್ಟು ಸಂಪಾದಿಸಿಕೊಂಡು ಬರುವನು. ಯಾರಾದರೂ ಅಡವಿಯಲ್ಲಿ ಇದ್ದರೆ ಅವರಿಗೆ ಉದಕವನ್ನು ತೆಗೆದುಕೊಂಡು ಹೋಗಿ ಕುಡಿಯಿಸುವನು. ದೂರದಿಂದ ದಾರಿನಡೆದು ದಣಿದು ಬಂದವರ ಕಾಲುಗಳನ್ನು ಒತ್ತಿ ಅವರನ್ನು ಮಲಗಿಸುವನು. ಯಾರಾದರೂ ಭಾರವನ್ನು ಹೊತ್ತುಕೊಂಡುಬಂದರೆ, ಆ ಭಾರವನ್ನು ತಾನೇ ತೆಗೆದುಕೊಂಡು ಅವರ ದಣಿವನ್ನು ಪರಿಹಾರಮಾಡುವನು. ಪ್ರವಾಸಿಗಳು ಯಾರಾದರೂ ರೋಗದಿಂದ ಪೀಡಿತರಾಗಿ ಸವಿಾಪದಲ್ಲಿ ಆಪ್ತರು ಯಾರೂ ಇಲ್ಲದಿರಲು, ಅವರಿಗೆ ಕೃಪೆಯಿಂದ ತಾನೇ ಔಷಧೋಪಚಾರಗಳಂ ಮಾಡುವನು; ಹಸುಗಳಿಗೂ ಎತ್ತುಗಳಿಗೂ ದುಡಿಯುವ ಸಾಮರ್ಥ್ಯ ತಪ್ಪಿದಬಳಿಕ ಅವುಗಳನ್ನು ಸಾಕುತಿದ್ದವನು ಬಿಟ್ಟುಬಿಡಲು, ಅವುಗಳ ಮೈಯನ್ನು ತಡವಿ ಮೇವನ್ನೂ ನೀರನ್ನೂ ಕೊಡುವನು ಸಂತರು ಮನೆಗೆ ಬಂದರೆ ಅವರ ಪಾದಂಗಳಂ ತೊಳೆದು ತೀರ್ಥವನ್ನು ತೆಗೆದುಕೊಳ್ಳುವನು. ಈಪ್ರಕಾರದಿಂದ ಶಾರೀರಕವಾದ ತಪವನ್ನು ಮಾಡುತಿರಲು, ಕವಿತ್ವಸ್ಫೂರ್ತಿಯುಳ್ಳವನಾಗಿ ಶ್ರುತಿಸ್ಮೃತಿಗಳಲ್ಲಿ ವರ್ಣಿಸಿರುವ ಅರ್ಥವನ್ನು ಪ್ರಾಕೃತದಿಂದ ಹೇಳುತ ಬಂದನು. ಇಲ್ಲಿ ಪ್ರಸ್ತಾವದ ಸಂಗತಿಯಿಂದ ಪೂರ್ವದ ಕಥೆಯು ಬಂದಿತು. ಅದು ಬಹುರಸಭರಿತವಾಗಿರುವುದು. ಶ್ರೋತೃಗಳು ಮನಸ್ಸನ್ನುಕೊಟ್ಟು ಕೇಳತಕ್ಕದು.

ನಾಮದೇವನು ಒಂದುಕಾಲದಲ್ಲಿ ಪಾಂಡುರಂಗಸ್ವಾಮಿಯ ಸನ್ನಿಧಿಯಲ್ಲಿ ಪ್ರಾಕೃತದಿಂದ ಶತಕೋಟಿಗ್ರಂಥಗಳನ್ನು ಹೇಳುವೆನು-ಎನಲು, ಆನುಡಿಯಂ ಕೇಳಿ ರುಕ್ಮಿಣೀಪತಿಯು—ನಾಮದೇವನೇ! ನೀನು ವ್ಯರ್ಥವಾಗಿ ಪ್ರತಿಜ್ಞೆಯಂ ಮಾಡಿದೆ. ಕಲಿಯುಗದಲ್ಲಿ ಶತವರ್ಷಮಿತವಾದ ಆಯುಸ್ಸಿರುವುದು. ಅದರಲ್ಲಿಯೂ ಅನೇಕ

ವಿಘ್ನಗಳು ಬರುತ್ತಿರುವುವು. ನೀನು ಪ್ರತಿಜ್ಞೆಯನ್ನೇನೋ ಮಾಡಿದೆ. ಇದು ಸಿದ್ಧಿಯೊಂದುವಂತೆ ಕಾಣುವುದಿಲ್ಲ—ಎಂದನು.

ಬಳಿಕ ನಾಮದೇವನು ಸ್ವಾಮಿಯ ಪಾದಗಳಮೇಲೆ ಶಿರಸ್ಸನಿರಿಸಿ—ಸ್ವಾಮಿಯೇ! ನಾನು ನಿನ್ನ ಆಶ್ರಯಬಲದಿಂದ ಹೇಳಿದೆ. ಆ ಪ್ರತಿಜ್ಞೆಯನ್ನು ನೀನೇ ಸಿದ್ಧಿಹೊಂದಿಸಬೇಕು. ನನ್ನ ಸಾಮರ್ಥ್ಯವೆಷ್ಟರದು ? ನೀನು ಮಾಡಬೇಕೆಂದರೆ ಯಾವುದು ಆಗುವುದಿಲ್ಲ ?—ಎನಲು, ನಾಮದೇವನ ವಿನಯವಚನವಂ ಕೇಳಿ ಶಾರ್ಙ್ಗಧರನು ಪ್ರಸನ್ನನಾಗಿ ಮಸ್ತಕದಮೇಲೆ ಅಭಯಕರವನಿರಿಸಿ ಸರಸ್ವತಿಯಂ ಕರೆದು, "ನೀನು ಈ ನಾಮದೇವನ ನಾಲಗೆಯ ಮೇಲೆ ನಿಂತು ಶ್ರುತಿಗಳಲ್ಲಿ ಗರ್ಭಿತವಾದ ಅರ್ಥವನ್ನು ಪ್ರಾಕೃತದಿಂದ ನುಡಿಯಿಸಬೇಕು" ಎಂದು ಆಜ್ಞೆಯಂ ಮಾಡಿದನು.

ಸರಸ್ವತಿಯು ಸ್ವಾಮಿಯನ್ನು ಕುರಿತು—ನಾಮದೇವನು ಪ್ರಸಾದರೂಪವಾದ ಗ್ರಂಥವನ್ನು ಹೇಳುವನು. ಆದರೆ ಅದನ್ನು ಬಹುವೇಗದಿಂದ ಬರೆಯುವಂತಹನನ್ನು ಹೊಂದಿಸಬೇಕು. ಮುಖದಿಂದ ಶಬ್ದಗಳು ಹೊರಡುತಿರುವಾಗಲೇ ಬರೆಯಬೇಕು. ಅಂತಲ್ಲದೆ ಮತ್ತೊಂದುವೇಳೆ ಅದನ್ನು ಕೇಳಿದರೆ ಹೇಳುವುದಕ್ಕೆ ಬಾರದು-ಎಂದು ಬಿನ್ನವಿಸಲು, ಮೋಕ್ಷಸ್ವಾಮಿಯು—ಇಂತು ಬಹುತ್ವರೆಯಿಂದ ಬರೆಯುವ ಲೇಖಕರನ್ನು ಯಾರನ್ನೂ ಕಾಣೆ. ನಾನೇ ಸರ್ವಕಾಲದಲ್ಲಿಯೂ ಬರೆಯುತ್ತ ಕುಳಿತುಕೊಳ್ಳುವೆನು—ಎಂದು ನುಡಿದು ಸರ್ವವಿಲಾಸಭೋಗಗಳನ್ನೂ ಬಿಟ್ಟು ಮನಸ್ಸನ್ನು ಏಕಾಗ್ರವಂ ಮಾಡಿಕೊಂಡು ಆ ನಾಮದೇವನ ಕವಿತ್ವವನ್ನು ಪ್ರೀತಿಭರದಿಂದ ಬರೆಯುತ್ತ ಕುಳಿತನು. ಯಾವನನ್ನು ವೇದಶಾಸ್ತ್ರಗಳು ಸ್ತುತಿಯಿಸುವುವೋ, ಯಾವನ ಚರಿತ್ರೆಯಂ ವಾಲ್ಮೀಕಿ ವರ್ಣಿಸಿದನೋ ಆ ಶ್ರೀಪತಿಯು ವೈಕುಂಠಭುವನವನ್ನೂ, ಕ್ಷೀರಸಾಗರದಲ್ಲಿ ಶೇಷಶಯನವನ್ನೂ ಬಿಟ್ಟು, ಮಷೀಭಾಜನವನ್ನೂ ಲೇಖನಿಯನ್ನೂ ಕೈಯಲ್ಲಿ ಹಿಡಿದುನಿಂತು, ನಾಮದೇವನ ಮುಖದಿಂದ ಏನು ಕವಿತ್ವವು ಹೊರಡುವುದೋ ಅದನ್ನು ಆಲಿಸಿಕೊಂಡು ನಿದ್ರಾಲಸ್ಯಂಗಳಂ ಬಿಟ್ಟು ಹಗಲೂ ಇರುಳೂ ಜಾಗರೂಕನಾಗಿ ಬರೆಯುತಿದ್ದನು. ಈಪ್ರಕಾರದಿಂದ ಬಹುದಿವಸಪರ್ಯಂತ ನಾಮದೇವನ ಸಂಗತಿಯಲ್ಲಿ ಬರೆಯುತಿದ್ದು ಬಳಿಕ ಬಂದುದಿನ ಗ್ರಂಥಸಂಖ್ಯೆಯನ್ನು ಮಾಡುವಾಗ ತೊಂಬತ್ತುನಾಲ್ಕುಕೋಟಿಯು ನಾಲ್ವತ್ತೊಂಬತ್ತುಲಕ್ಷವಾಯಿತು. ಅದಂ ನೋಡಿ ಜಗಜ್ಜೀವನನು ವಿಸ್ಮಿತನಾಗಿ—ನಾಮದೇವನ ಭಕ್ತಿಯು ಅದ್ಭುತವಾದುದು. ಅಪಾರವಾದ ನನ್ನ ಮಹಿಮೆಯನ್ನು ವರ್ಣಿಸಿದನು. ನಿಗಮಗಳಿಗೂ ಅದರ ಪಾರವು ತಿಳಿಯದು—ಎಂದು ಸಂತೋಷಗೊಂಡು ನಾಮದೇವನನ್ನು ಕುರಿತು—ಪುರುಷೋತ್ತಮನಾದ ನನ್ನನ್ನು ನೀನು ವಶ್ಯವಂ ಮಾಡಿದೆ-ಎಂದು ನುಡಿದು ಸ್ವಹಸ್ತದಿಂದ ಆತನ ಬೆನ್ನಂ ತಟ್ಟಿ, ಮನದಲ್ಲಿ ಪ್ರೇಮವಿನ್ನೊಂದು ನಿಂತಿರುವುದು. ಅದನ್ನು ಮುಂದೆ ಸಾಧಿಸುವೆನು. ಇನ್ನು ನೀನು ನನ್ನ ಸ್ವರೂಪವನ್ನು ಧ್ಯಾನಿಸಿ ಪ್ರೇಮಯುಕ್ತನಾಗಿ ಕಣ್ಣು ತುಂಬುವಂತೆ

ನೊಂತು—ಎನಲು, ನಾಮದೇವನು ಸ್ವಾಮಿಯಂ ಧ್ಯಾನಿಸಿ ಪಾದಗಳಿಗೆರಗಿದನು. ಬಳಿಕ ಬಾದುದಿವಸ ಸ್ವಾಮಿಯು ನಾಮದೇವನನ್ನು ಕುರಿತು-ನೀನು ಶತಕೋಟಿ ಗ್ರಂಥವಂ ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡಿದೆ. ಅದಂ ಸಿದ್ಧಿಹೊಂದಿಸುವುವರಲ್ಲಿ ಕೆಲವು ಗ್ರಂಥವು ಉಳಿದಿರುವುದು. ಅದನ್ನು ಬರೆಯಬೇಕು—ಎಂದು ನುಡಿದು ಆತನ ಕೈಯಂ ಹಿಡಿದುಕೊಂಡು ಹೊರಟು ತುಕ್ಕನ ಸ್ವಪ್ನದಲ್ಲಿ ಕಾಣಿಸಿಕೊಂಡು-ಎಲೆ ತುಕ್ಕನೆ! ನೀನು ನನ್ನ ಆಜ್ಞೆಯಿಂದ ಕವಿತ್ವವಂ ಮಾಡಬೇಕು. ಈ ನಾಮದೇವನ ಶತಕೋಟಿಪ್ರತಿಜ್ಞೆಯನ್ನು ನೀನು ಕೊನೆಮುಟ್ಟಿಸಿ ಸಿದ್ಧಿಹೊಂದಿಸಬೇಕು—ಎಂದು ನುಡಿದು ಸ್ವಹಸ್ತದಿಂದ ಬೆನ್ನನ್ನು ತಟ್ಟಿ ಅದೃಶ್ಯನಾದನು.

ಬಳಿಕ ತುಕ್ಕನು ಎಚ್ಚರಿಕೆಗೊಂಡು ನೋಡುವಾಗ ರುಕ್ಮಿಣೀಪತಿಯೂ ನಾಮದೇವನೂ ಯಾರೂ ಕಾಣಲಿಲ್ಲ. ಈ ಅದ್ಭುತವಾದ ಚಮತ್ಕಾರವಂ ನೋಡಿ ಸಂತೋಷಗೊಂಡು ಅದೇ ಆಜ್ಞೆಯನ್ನು ಸಿರದಿಂದ ವಹಿಸಿ ಕವಿತ್ವಕ್ಕೆ ಆರಂಭವಂ ಮಾಡಿದನು. ಅದನುಳಿದು ಮತ್ತೊಂದುಮಾತನಾಡನು. ಅದನ್ನು ಪ್ರೇಮದಿಂದ ಕೀರ್ತನಮಾಡಲು, ಪ್ರೇಮಳರಾದ ಭಕ್ತರು ಆದರದಿಂದ ಕೇಳುವರು. ಕೆಲವರು ವಿಕಲ್ಪಿಗಳಾದ ಚತುರರು—ಇದು ನೂತನವಾದ ಕವಿತ್ವವು ; ನಮಗೆ ಪ್ರಮಾಣವಾಗಿ ತೋರುವುದಿಲ್ಲ. ಆದುದರಿಂದ ನಾವು ಶ್ರವಣಮಾಡುವುದಿಲ್ಲ-ಎನ್ನುವರು. ಕೆಲವರು ಪೂರ್ವಿಕರಾದ ಮಹಾತ್ಮರ ವಾಕ್ಯಗಳಂ ಬಿಟ್ಟು ತಮ್ಮ ದೊಡ್ಡತನವಂ ಏಕೆ ತೋರಿಸಬೇಕು—ಎನ್ನುವರು. ಕೆಲವರು ಸಿದ್ಧವಾಗಿರುವ ಪಕ್ವಾನ್ನವಂ ಬಿಟ್ಟು ಕೈಯನ್ನು ಏಕೆ ಸುಟ್ಟುಕೊಳ್ಳಬೇಕು—ಎನ್ನುವರು. ಶ್ರೀ ರುಕ್ಮಿಣೀಪತಿ ಅಪ್ಪಣೆಯಂ ಕೊಟ್ಟಿರಲು, ಜನಗಳು ಆತನ ಕವಿತ್ವವನ್ನು ಏಕೆ ನಿಂದಿಸುವರು ?—ಎಂದೀರಿ. ಪೂರ್ವದಿಂದಲೂ ಭಾವುಕರ ಬೆನ್ನ ಹಿಂದೆ ವಿಕಲ್ಪಿಗಳು ಇದ್ದೇ ಇರುವರು. ಪೂರ್ವದಲ್ಲಿ ತ್ರೇತಾಯುಗದೊಳ್ ವಾಲ್ಮೀಕಿ ಮಹರ್ಷಿ ಮುಂದೆ ನಡೆಯುವ ರಾಮಾಯಣಚರಿತ್ರೆಯನ್ನು ಹೇಳಲು, ಆಗಲೂ ಇದ್ದ ಅಭಕ್ತರು ಅವನ್ನು ಪ್ರಮಾಣವೆಂದು ತಿಳಿಯುತ್ತಿರಲಿಲ್ಲ. ಬಳಿಕ ಸ್ವಾಮಿಯು ರಾಮಾವತಾರವಂ ಮಾಡಿ ಅದೇರೀತಿಯಿಂದ ಲೀಲೆಗಳಂ ತೋರಿಸಲು, ಆಗ ಅನುಭವಕ್ಕೆ ಬಂದುದರಿಂದ ಅದನ್ನು ಯಥಾರ್ಥವಾಗಿ ಸರ್ವರೂ ತಿಳಿಯುವರಾದರು. ದ್ವಾಪರಯುಗದಲ್ಲಿ ವ್ಯಾಸರು ಹೇಳಿದುದನ್ನು ನೋಡಿ ಧೃತರಾಷ್ಟ್ರನು ವಿಶ್ವಾಸಪಡಲಿಲ್ಲ. ಬಳಿಕ ನಡೆದ ಕಾರ್ಯಗಳಂ ತಿಳಿದು ಆತನು ಸಂಜಯನಿಗೆ ನಮಸ್ಕಾರವಂ ಮಾಡಿದನು. ಇಂತು ಭಾವುಕರ ಹಿಂದೆ ವಿಕಲ್ಪಿಗಳು ಯಾವಾಗಲೂ ಇರುವರು. ಆದುದರಿಂದ ತುಕ್ಕನ ಅಭಂಗಗಳಂ ಮೂರ್ಖರೂ ಪಾಮರರೂ ನಿಂದಿಸುತ್ತಿದ್ದರು. ಸೂರ್ಯನ ಪ್ರಕಾಶವಂ ಕಂಡು "ಡುಡುಳಿ" ಎಂಬ ಜಂತು ಎಂತು ಜುಗುಪ್ಸೆಪಡುವುದೋ, ಚಂದ್ರೋದಯವಂ ಕಂಡು ತಸ್ಕರರು ಎಂತು ಸಂಕಟಪಡುವರೋ, ದಾತೃವಿನ ಕೀರ್ತಿಯಂ ಕೇಳಿ ಲೋಭಿಯು ಎಂತು ದುಃಖಪಡುವನೋ, ದಿವ್ಯೌಷಧಿಗಳು ರಾತ್ರಿಯಲ್ಲಿ ಹೊಳೆ

ಯುವುದನ್ನು ಕಂಡು ರೋಗಗಳು ಎಂತು ತಲ್ಲಣಿಸುವುವೋ, ಪಂಡಿತನ ಪಾಂಡಿತ್ಯವಂ ಕೇಳಿ, ಕುರಿಗಳನ್ನು ಮೇಯಿಸುವವನು ಎಂತು ವ್ಯರ್ಥವೆನ್ನುವನೋ, ಗಂಧರ್ವರು ಸುಸ್ವರದಿಂದ ಪಾಡುತಿರಲು, ಗರ್ದಭಗಳು ಎಂತು ರುಚಿಗೊಳ್ಳವೋ, ಶ್ರೇಷ್ಠವಾದ ಕಪಿಲೆಯೆಂಬ ಧೇನುವನ್ನು ಕಂಡು ಹಿಂಸಕರು ಎಂತು ಪೂಜಿಸರೋ, ತುಕ್ಕನ ಕವಿತ್ವದ ವಿಷಯದಲ್ಲಿ ಕುಟಿಲರಾದ ವಿಕಲ್ಪಿಗಳು ಅಂತು ಇದ್ದರು. ಭಾವುಕರು ಆತನ ಕವಿತ್ವವಂ ಪ್ರೀತಿಯಿಂದ ಕೇಳುತಿದ್ದರು. ತುಕ್ಕನು ಆ ನಿಂದನಾಭಿನಂದನಗಳನ್ನು ಸಮವಾಗಿ ತಿಳಿದು ತಾನು ಭಕ್ತಿಯಿಂದ ಶ್ರೀಹರಿಯಂ ಭಜಿಸುತ್ತ ಇತರರು ಯಾರಾದರೂ ಹರಿದಾಸರು ಕೀರ್ತನವನ್ನು ಮಾಡಿದರೆ ಆದರದಿಂದ ಶ್ರವಣಮಾಡುತ್ತಿರುವನು. ದಿನದಿನಕ್ಕೆ ಪ್ರೀತಿಯು ಅಧಿಕವಾಗುತ ಬರಲು, ಅದನ್ನು ಬೆಳೆಯುವ ಭಕ್ತಿಯೆಂದು ಹೇಳಬೇಕು. ರಾತ್ರಿಯಲ್ಲಿ ನಿದ್ದೆಹತ್ತದು. ಏಕಾಂತದಲ್ಲಿ ಹರಿಭಜನೆಯಂ ಮಾಡುವನು. ಆಷಾಢಕಾರ್ತಿಕಮಾಸಗಳಲ್ಲಿ ನಿಯಮದಿಂದ ಪಂಢರೀಯಾತ್ರೆಗೆ ಹೋಗುತ್ತ ಇದ್ದನು. ಅಲ್ಲದೆ ಪ್ರತ್ಯೇಕಾದಶೀದಿನವೂ ಸ್ವಾಮಿಯ ದರ್ಶನಕ್ಕೆ ಹೋಗುತಿದ್ದನು. ಸರ್ವಕಾಲದಲ್ಲಿಯೂ ನಿರಪೇಕ್ಷನಾಗಿ ಇರುತಿದ್ದನು.

ಬಳಿಕ ಶಿವಾಜಿರಾಯನು ತುಕ್ಕೋಬನ ಕೀರ್ತಿಯಂ ಕೇಳಿ ಒಂದುದಿನ ಆತನ ಸಂದರ್ಶನಕ್ಕೋಸ್ಕರ ಹೊರಟನು. ಆಗ ಅವಿಂಧರ ಪ್ರಾಬಲ್ಯವು ಬಹುವಾಗಿದ್ದಿತು. ಸಿಂಹಗಡದಲ್ಲಿ ಇದ್ದ ರಾಜನು ಯಾರಿಗೂ ತಿಳಿಯದಂತೆ ಪೂನಾಪಟ್ಟಣವನ್ನು ಸೇರಿದನು. ಅಲ್ಲಿ ರಾತ್ರಿವೇಳೆಯಲ್ಲಿ ಒಬ್ಬ ವರ್ತಕನ ಮನೆಯಲ್ಲಿ ತುಕ್ಕೋಬನು ಕೀರ್ತನವಂ ಮಾಡುತಿದ್ದುದನ್ನು ಕೇಳಿ ಸಂತೋಷಗೊಂಡು ಅಲ್ಲಿಗೆ ಹೋಗಿ ಯವನರ ಭಯದಿಂದ ಅಡಗಿಕೊಂಡಿದ್ದು ಕೀರ್ತನವಂ ಕೇಳಿ ತುಕ್ಕೋಬನ ದರ್ಶನವಂ ಮಾಡಿ ಬೆಳ್ಳಿಯ ತಟ್ಟೆಯಲ್ಲಿ ಸುವರ್ಣದ್ರವ್ಯಗಳನ್ನು ತುಂಬಿ ಭಕ್ತಿಯಿಂದ ತುಕ್ಕೋಬನ ಮುಂದಿಟ್ಟು ನಮಸ್ಕಾರವಂ ಮಾಡಿದನು.

ಭಾಗವತಶಿರೋಮಣಿಯಾದ ತುಕ್ಕೋಬನು ಆ ರಾಜದ್ರವ್ಯವನ್ನು ಕಂಡು ಗಡಗಡನೆ ನಡುಗಿ ಶಿವಾಜಿಯನ್ನು ಕುರಿತು—ಅಯ್ಯಾ! ನಾವು ಒಬ್ಬ ವಿಟ್ಠಲನನ್ನೇ ನೋಡತಕ್ಕವರು. ನಮಗೆ ಏಕೆ ಬೇಕು! ಭಗವಂತನನುಳಿದು ಮತ್ತಾವುದನ್ನೂ ನಮ್ಮ ಮನಸ್ಸು ಒಲ್ಲದು. ರತ್ನಗಳಂ ಸಂಗ್ರಹಿಸಿ ಮಹಾರಾಜನ ಬಳಿಗೆ ತರುವಂತೆ ನಮ್ಮ ದರ್ಶನಕ್ಕೆ ಬರುವಾಗ ನೀನು ಉಡಿಯಲ್ಲಿ ದ್ರವ್ಯಗಳಂ ತಂದೆ. ನೀನು ಉದಾರ ಬುದ್ಧಿಯುಳ್ಳವನೇಸರಿ. ಆದರೆ ಹರಿಭಕ್ತರಾದ ನಮಗೆ ಇಷ್ಟವಲ್ಲದುದನ್ನು ತಂದಿಟ್ಟೆ. ನೀನು ತಂದ ಈ ದ್ರವ್ಯವು ನಮಗೆ ಗೋಮಾಂಸದ ಸಮಾನವು—ಎನಲು, ಶಿವಾಜಿಯು ಆ ನುಡಿಯಂ ಕೇಳಿ ನಾಚಿಕೆಗೊಂಡನು.

ಆತನಂ ಕುರಿತು ತುಕ್ಕೋಬನು-ಅಯ್ಯಾ ರಾಜನೆ! ನಮ್ಮನ್ನು ಸಂತೋಷಪಡಿಸಬೇಕೆಂದು ನಿನಗಪೇಕ್ಷೆಯಿದ್ದರೆ ನೀನು ಕೃಷ್ಣಸ್ಮರಣೆಯಂ ಮಾಡಬೇಕು-

ಅದರಿಂದ ನಮಗೆ ಸಂತೋಷವಾಗುವುದು. ಕೊರಲಲ್ಲಿ ತುಳಸೀಮಾಲೆಯಂ ಧರಿಸಬೇಕು. ಏಕಾದಶೀವ್ರತವನ್ನು ಮಾಡಬೇಕು. ಚಿತ್ತದಲ್ಲಿ ಪ್ರೇಮೋಲ್ಲಾಸವಂ ಪಡೆದು ವಿಟ್ಠಲದಾಸನೆನಿಸಿಕೊಳ್ಳಬೇಕು. ನಮಗೆ ಈ ಆಶೆಯಿರುವುದು. ಇದನ್ನು ನೀನು ಪೂರ್ಣಮಾಡಬೇಕು-ಎಂದು ನುಡಿಯಲು, ರಾಜನು ಇಂತಹ ನಿರಪೇಕ್ಷಸ್ಥಿತಿಯಂ ಕಂಡು ಮನದಲ್ಲಿ ಆಶ್ಚರ್ಯಗೊಂಡು ಅನನ್ಯಭಾವದಿಂದ ಮತ್ತೆ ಸಾಷ್ಟಾಂಗನಮಸ್ಕಾರವಂ ಮಾಡಿ, ಆದಿನ ಹರಿದಿವಸವಾಗಿದ್ದುದರಿಂದ ಕೀರ್ತನವನ್ನು ಕೇಳುತ್ತ ಕುಳಿತನು.

ತುರುಷ್ಕರಾಜನು ಶಿವಾಜಿಯಂ ಹಿಡಿಯುವುದಕ್ಕೆ ತೊಡಗಿ ಈತನಂ ಗೊತ್ತುಮಾಡುವುದಕ್ಕೋಸ್ಕರ ಬೇಹಿನವರನ್ನು ಇಟ್ಟು ಇದ್ದನು. ಆಜನಗಳು ಶಿವಾಜಿ ಇಲ್ಲಿ ಇರುವುದಂ ಕಂಡು ತಮ್ಮ ರಾಜನ ಬಳಿಗೆ ಹೋಗಿ 'ಶಿವಾಜಿಯು ತುಕ್ಕೋಬನ ದರ್ಶನಕ್ಕೆ-ಬಂದಿರುವನು '' ಎಂದು ಹೇಳಲು, ಆತನು ಶಿವಾಜಿಯಂ ಹಿಡಿಯುವುದಕ್ಕೆ ಎರಡುಸಾಸಿರ ಪಠಾಣರನ್ನು ಕಳುಹಿಸಿದನು. ಅವರು ನಾನಾವಿಧವಾದ ಆಯುಧಂಗಳಂ ತೆಗೆದುಕೊಂಡು ಅರ್ಧರಾತ್ರದ ಸಮಯದಲ್ಲಿ ಹರಿಕಥಾಕೀರ್ತನೆಯಾಗುತಿದ್ದ ಆ ಮನೆಯ ಸಮೀಪಕ್ಕೆ ಬಂದು ಸುತ್ತಲೂ ಮುತ್ತಿಗೆಯಂ ಹಾಕಿದರು. ಶಿವಾಜಿಯ ಗುರುತಂ ಕಂಡವರು ಒಳಗೆ ಬಂದು ಆತನಂ ಹಿಡಿದುಕೊಂಡು ಹೋಗಬೇಕೆಂದು ಆಲೋಚಿಸುವಷ್ಟರಲ್ಲಿ ಈ ವೃತ್ತಾಂತವು ಶಿವಾಜಿಗೆ ತಿಳಿಯಿತು. ಅಲ್ಲಿದ್ದ ಕೆಲವರು "ಈಗ ನೀವು ಓಡಿಹೋಗಬೇಕು'' ಎಂದು ಆಲೋಚನೆಯಂ ಹೇಳಿದರು. ಆ ಭಯದಿಂದ ಆತನು ಸಂಭ್ರಾಂತನಾಗಿ ಚಿಂತೆಯಂ ಮಾಡುತಿದ್ದನು. ಶ್ರವಣಮಾಡುವರ ಮನಸ್ಸು ಸ್ವಸ್ಥವಾಗಿಲ್ಲದಿರಲು, ತುಕ್ಕೋಬನು ತಿಳಿದು, "ನೀವು ಗುಸಗುಸನೆ ಏನುಮಾತನಾಡುವಿರಿ? ನನ್ನಲ್ಲಿ ಹೇಳಿ'' ಎನಲು, ಸುಜ್ಞಾನಿಗಳು ಸಮೀಪಕ್ಕೆ ಹೋಗಿ ಶಿವಾಜಿಯನ್ನು ಹಿಡಿದುಕೊಂಡು ಹೋಗುವುದಕ್ಕೋಸ್ಕರ ಪರಚಕ್ರವು ಬಂದಿದೆ. ನಮಗೆ ಅಪ್ಪಣೆಯಂ ಕೊಟ್ಟರೆ ಈತನನ್ನು ಓಡಿಸುವೆವು. ಇದರಿಂದ ಈತನ ಜೀವವು ಉಳಿದೀತು-ಎಂದು ಮೆಲ್ಲನೆ ತಿಳಿಯಿಸಿದರು.

ಆಗ ತುಕ್ಕೋಬನು ಕೀರ್ತನಮಧ್ಯದಲ್ಲಿ ಯಾವಬಗೆಯಿಂದಲೂ ಏಳಬಾರದು-ಎಂಬ ಧರ್ಮನೀತಿಯನ್ನು ನೀವು ಸರ್ವರೂ ಬಲ್ಲಿರಷ್ಟೆ-ಎಂದನು.

ಶಿವಾಜಿಯು ಆ ಮಾತಂ ಕೇಳಿ, ಬದುಕಿಸುವನೂ ಕೊಲಿಸುವನೂ ದೇವದೇವನಾದ ರುಕ್ಮಿಣೀಪತಿಯೇ ಅಲ್ಲದೆ ಮೂರುಲೋಕದಲ್ಲಿ ಮತ್ತಾವನೂ ಇಲ್ಲ. ಈ ಹೊತ್ತು ಏಕಾದಶೀಮಹಾದಿವಸ. ಸಂತರೂ ಭಾಗವತರೂ ದೇವರ ಸನ್ನಿಧಿಯಲ್ಲಿರುವಾಗ ಹರಿಕೀರ್ತನದಲ್ಲಿ ಮರಣವು ಪ್ರಾಪ್ತವಾದರೆ ನಾನು ಪುಣ್ಯವಂತನೇ ಸರಿ-ಎಂದು ದೃಢವಾದ ನಿಶ್ಚಯವಂ ಪಿಡಿದು ಕುಳಿತುಕೊಂಡನು.

ಇತ್ತಲು ಪರಪಕ್ಷದವರನೇಕರು ಶಿವಾಜಿಯಂ ಹಿಡಿಯಬೇಕೆಂದು ಆಲೋಚಿಸಿ ಒಳಗೆ ನುಗ್ಗಿ ನೋಡಿ ಶಿವಾಜಿಯ ಗುರುತನ್ನು ತಿಳಿಯದೆ ಹೊರಗೆ ಬಂದು ತಮ್ಮ ಯಜಮಾನನಂ ಕುರಿತು-ಕಥಾಮಂದಿರದಲ್ಲಿ ಅನೇಕರು ಕುಳಿತಿರುವರು. ಅವರಲ್ಲಿ ಶಿವಾಜಿ ಯಾವನೋ ನಮಗೆ ಅವನ ಗುರುತು ತಿಳಿಯದು—ಎಂದರು.

ಆದುರುಳನು ಆ ಯೋಧರಮಾತಂ ಕೇಳಿ ಬಹುಕೋಪೋದ್ದೀಪಿತನಾಗಿ—ಕಥಾರಂಗದಲ್ಲಿ ಎಷ್ಟು ಮಂದಿಗಳು ಕುಳಿತಿರುವರೋ ಅವರೆಲ್ಲರನ್ನೂ ಹೊಡೆದುಬಿಟ್ಟರೆ, ಶಿವಾಜಿಯನ್ನೂ ಹೊಡೆದುದಾಗುವುದು—ಎಂದು ಸಿಕ್ಷ್ಯಯಿಸಿದನು.

ಪರಮಾತ್ಮನು ಸರ್ವಾಂತರ್ಯಾಮಿಯೂ ಸರ್ವಸಾಕ್ಷಿಯೂ ಆದುದರಿಂದ ಈ ವೃತ್ತಾಂತವು ತುಕ್ಕೋಬನ ಮನಸ್ಸಿಗೆ ತಿಳಿಯಿತು. ಒಡನೆಯೇ ಪಂಡರೀನಾಥನಂ ಧ್ಯಾನಿಸಿದವನಾಗಿ—ಅನಾಥನಾಥನೇ! ಕೃಪಾರಾಶಿಯೇ! ಈಸಮಯದಲ್ಲಿ ನೀನು ಪ್ರಸನ್ನನಾಗು. ನಿನ್ನ ಕೀರ್ತನಕ್ಕೆ ಜನರು ಬಂದು ಕುಳಿತಿರುವಾಗ ಇವರಿಗೆ ವಿಪತ್ತು ಪ್ರಾಪ್ತವಾದರೆ ಅದಂ ಪರಿಹರಿಸುವನು ನೀನಲ್ಲದೆ ಮತ್ತಾರುಂಟು? ಎಲ್ಲಿ ನಿನ್ನ ನಾಮಸಂಕೀರ್ತನವಾಗುವುದೋ ಅಲ್ಲಿ ಸಮಸ್ತವಿಪತ್ತುಗಳೂ ಪರಿಹಾರಹೊಂದುವುವು—ಎಂದು ಸಂತರು ಹೇಳುವರು. ಅದು ಈಗ ಅಸತ್ಯವಾಗುವಂತೆ ತೋರುವುದು. ಜಗಜ್ಜೀವನನೆ! ನನ್ನ ಮನಸ್ಸಂ ನೋಡುವುದಕ್ಕೋಸ್ಕರ ಈ ಭಯವನ್ನು ತೋರಿಸಿದೆಯೋ? ನಾನು ನನ್ನ ಮರಣಕ್ಕೋಸ್ಕರ ಭಯಪಡುವುದಿಲ್ಲ. ಇಷ್ಟು ಜನಗಳಿಗೂ ದುಃಖವುಂಟಾದರೆ ನಾನು ನೋಡಲಾರೆನು. ಭಜನಕ್ಕೆ ಕ್ಷೋಭವುಂಟಾಯಿತಲ್ಲಾ! ಇದಕ್ಕಿಂತಲೂ ಬೇರೆ ಮರಣವುಂಟೆ?--ಎಂದು ವ್ಯಸನಪಡುವೆನು. ಲಕ್ಷ್ಮೀಪತಿಯೇ! ನೀನು ನನ್ನ ಮನಸ್ಸನ್ನು ತಿಳಿಯದವನೆ?--ಎಂದು ಪ್ರಾರ್ಥನೆಯಂ ಮಾಡಲು, ಜಗಜ್ಜೀವನನು ಇಂತಹ ಕರುಣಾವಚನವಂ ಕೇಳಿ ಆಕ್ಷಣದಲ್ಲಿಯೇ ಬಂದು ತುಕ್ಕೋಬನಿಗೆ ಸಮಾಧಾನವನ್ನುಂಟುಮಾಡಿ, ಬಂದುಇರುವ ಪರಚಕ್ರವನ್ನು ನಾನು ನೋಡಿಕೊಳ್ಳುವೆನು. ನೀನು ಮನಸ್ಸನ್ನು ಸ್ವಸ್ಥಮಾಡಿಕೊಂಡು ಭಜನವಂ ಮಾಡುತ್ತಿರು—ಎಂದು ನುಡಿದು, ತಾನು ಶಿವಾಜಿರಾಯನ ರೂಪವಂ ಧರಿಸಿ ಕುದುರೆಯನೇರಿ ತ್ವರೆಯಿಂದ ಹೊರಗೆ ಹೊರಟನು. ಕೀರ್ತನದಲ್ಲಿ ಸಮಸ್ತರೂ ಕುಳಿತೇಇರುವರು. ಅವರಿಗೆ ಯಾರಿಗೂ ಸುದ್ದಿ ತಿಳಿಯದಂತೆ ಕೌತುಕವಂ ಮಾಡಿದನು:—ಭಾವುಕರು ಅದನಾಲಿಸುವುದು. ಯಾವಮನೆಯಲ್ಲಿ ಕೀರ್ತನೆಯಾಗುತಿದ್ದಿತೋ ಅಲ್ಲಿಯೇ ಶ್ರೀಹರಿಯು ಪ್ರಕಟನಾಗಿ, ತನ್ನ ಮುಖದಿಂದಲೇ ಶಿವಾಜಿಯು ಓಡಿಹೋಗುವನು—ಎಂದು ಉಚ್ಚಸ್ವರದಿಂದ ಕೂಗಿದನು. ಆಗ ಅಲ್ಲಿ ನೆರೆದಿದ್ದವರೆಲ್ಲರೂ ಸಂಭ್ರಾಂತರಾಗಿ ಶಿವಾಜಿಯನ್ನು ಹಿಂದೆಮುಂದೆ ನೋಡಿದವರಾದರು. ಒಂದು ನಿಮಿಷ ಅವರ ಕಣ್ಣಿಗೆ ಕಾಣಿಸಿಕೊಂಡು ತ್ವರೆಯಿಂದ ಓಡಿ ಸೈನ್ಯವೆಲ್ಲವನ್ನೂ ತನ್ನ ಬೆನ್ನ

ಹತ್ತಿಸಿ ಮಹಾಲಾಘವವಂ ತೋರಿಸಿದನು. ನಗರವಾಸಿಗಳೆಲ್ಲರೂ ತವಕದಿಂದ ಸೌಧಂಗಳನೇರಿ ನಿಂತುನೋಡಿ—ರಾಜನು ಮುಂದುಗಡೆಯಲ್ಲಿ ವೇಗದಿಂದ ಹೋಗುತಿರುವನು. ತುರುಷ್ಕರು ಆತನ ಬೆನ್ನಂ ಹತ್ತಿರುವರು. ಇನ್ನು ಆತನು ಜೀವಿಸುವುದು ಕಷ್ಟ ; ಅನರ್ಥವು ತೋರುವುದು—ಎಂದು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು.

ತುರುಷ್ಕಸೈನ್ಯದಲ್ಲಿ ಕಾವಲಿದ್ದವರಿಗೆಲ್ಲರಿಗೂ ವೈಕುಂಠನಾಥನು ಶಿವಾಜಿರಾಯನಂತೆ ಕಾಣಿಸಿಕೊಳ್ಳಲು, ಅವರೆಲ್ಲರೂ, ಶಿವಾಜಿಯು ತನ್ನ ಮನೆಗೆ ಪಲಾಯನವಾಡುವನು—ಎಂದು ಹೇಳುತ್ತ, ಎಚ್ಚತ್ತು ತ್ವರೆಯಿಂದ ಓಡಿದರು. ಕೆಲವರಿಗೆ ಸಮೀಪದಲ್ಲಿಯೇ ಕಾಣಿಸುವನು. ಹಿಡಿಯುವುದಕ್ಕೆ ಹೋದರೆ ಏನೂಇಲ್ಲ. ಕೆಲವರು ತೀವ್ರವಾದ ವೇಗದಿಂದ ಬೆನ್ನಟ್ಟಿ ಬೇಗನೆ ಹೊಡೆಯಬೇಕು—ಎನ್ನುವರು. ಕೆಲವರು ಮುಂದೆ ನೋಡಬೇಕು-ಎನ್ನುವರು. ಕೆಲವರು—ನೀವು ಭಯಸ್ಥರು ; ಆತನು ವೀರನಾದುದರಿಂದ ಆತನಂ ಹಿಡಿಯಲಾರಿರಿ—ಎನ್ನುವರು. ಕೆಲವರು—ನಾವು ಎರಡುಸಾಸಿರ ಶೂರರು ; ಇಷ್ಟುಮಂದಿಗಳ ಮುಂದೆ ಒಬ್ಬ ಶೂರನು ಓಡುತ್ತಿರುವನು. ಕೈಯಲ್ಲಿ ಆಯುಧಂಗಳಂ ಏಕೆ ಹಿಡಿದಿರುವಿರಿ? ಬೇಗದಿಂ ಕೊಲ್ಲಬಾರದೆ?—ಎನ್ನುವರು. ಕೆಲವರು—ಬೆಳಗಾದಬಳಿಕ ಸಾವಕಾಶರಾಗಿ ಹುಡುಕೋಣ. ಈಗ ನಮ್ಮ ಕಣ್ಣಿಗೆ ಕಾಣಿಸನು. ವ್ಯರ್ಥವಾಗಿ ಏಕೆ ಓಡುವಿರಿ—ಎನ್ನುವರು. ಬಳಿಕ ಒಂದುಕ್ಷಣ ಎಲ್ಲರೂ ನಿಂತರು. ಆಗ ಶಾರ್ಙ್ಗಧರನೂ ಸಮೀಪದಲ್ಲಿ ನಿಂತಂತೆ ಕೌತುಕವಂ ತೋರಿದನು. “ಸಿಕ್ಕಿದನು ಹಿಡಿಯಿರಿ ಹಿಡಿಯಿರಿ” ಎಂದು ಬೆಂಬತ್ತಿದರು. ಆದರೆ ಜಗದ್ವೀರನು ಕೈಗೆ ಸಿಕ್ಕನು. ಒಂದುಕ್ಷಣ ಸಮೀಪದಲ್ಲಿಯೇ ಕಾಣಿಸಿಕೊಳ್ಳುವನು. ಹಿಡಿಯಹೋಗಲು ಸಿಕ್ಕನು. ಶುಕ್ಲಪಕ್ಷದ ಬೆಳದಿಂಗಳಿದ್ದುದರಿಂದ ಅದರ ಪ್ರಕಾಶದಿಂದ ಯವನರೆಲ್ಲರೂ ಓಡುತಿರುವರು. ಆ ರಾತ್ರಿಯ ಒಂದು ಯಾಮದಲ್ಲಿ ಐದುಗಾವುದದ ದೂರ ಅರಣ್ಯಕ್ಕೆ ಕರೆದುಕೊಂಡುಹೋಗಿ ಹಾಕಿದನು. ಯಾವ ಬೆಟ್ಟದಲ್ಲಿ ಮುಳ್ಳಿನ ವನವಿದ್ದುದೋ ಮಹಾಭಯಂಕರವಾದ ಆ ದುರ್ಗಮಕ್ಕೆ ಒಯ್ದು ತಾನು ಅದೃಶ್ಯನಾದನು.

ಅಲ್ಲಿ ಆ ಯೋಧರು ಸುತ್ತಲೂ ಹುಡುಕಿನೋಡಿ ಶಿವಾಜಿರಾಯನನ್ನು ಎಲ್ಲಿಯೂ ಕಾಣದೆ-ನಾವು ಭ್ರಾಂತರಾಗಿ ವ್ಯರ್ಥವಾಗಿ ಓಡಿಬಂದೆವು—ಎಂದರು. ಕೆಲವರು—ನಾವು ಸಮೀಪದಲ್ಲಿಯೇ ಚೆನ್ನಾಗಿಕಂಡೆವು-ಎಂದರು. ಅಷ್ಟುಹೊತ್ತಿಗೆ ಚಂದ್ರಾಸ್ತಮಯವಾಯಿತು. ಕತ್ತಲೆ ಕವಿದುದು. ಆಗ ಮಾರ್ಗದಲ್ಲಿ ನಡೆಯುವುದಕ್ಕೂ ಕಾಣದೆ ಒಬ್ಬರ ಮೇಲೊಬ್ಬರು ಬೀಳುತ್ತ ಅಲ್ಲಲ್ಲಿ ಎಡವಿಬೀಳುತ್ತ-ನಮಗೆ ಇಂತಹ ದುರವಸ್ಥೆಯು ಪ್ರಾಪ್ತವಾಯಿತು-ಎಂದು ವ್ಯಸನಪಡುತ್ತಿದ್ದರು. ಮೈಗೆ ಮುಳ್ಳುಗಳು ನಾಟಿಕೊಂಡುವು. ಬಟ್ಟೆಗಳೆಲ್ಲವೂ ಹರಿದುಹೋದುವು. ಕೆಲವರು-ಪ್ರಾಣವು ಹೋಗುವುದು-ಎಂದು ದೀರ್ಘಸ್ವರದಿಂದ ರೋದನವನ್ನು ಮಾಡಿದರು. ದುಸ್ಸಹವಾದ ಚಳಿಯಿಂ

ದಲೂ ಗಾಳಿಯಿಂದಲೂ ವಿಕಲವಾಗಿ ಸೈನ್ಯವೆಲ್ಲವೂ ಛಿನ್ನಭಿನ್ನವಾಯಿತು. ಕುದುರೆಗಳೆಲ್ಲವೂ ಓಡಿಹೋದುವು. ಆ ಅಡವಿಯಲ್ಲಿ ಎಲ್ಲರೂ ತಲ್ಲಣಿಸಿದರು. ಜಗಜ್ಜೀವನನು ಯಾರನ್ನೂ ಕೊಲ್ಲದೆಯೇ ಇಂತಹ ಅದ್ಭುತವನ್ನು ತೋರಿದನು. ಕೆಲವರು ಬೆತ್ತಲೆನಿಂತರು. ಕೆಲವರಿಗೆ ಹೊದೆಯುವುದಕ್ಕೆ ಇಲ್ಲದೆಹೋಯಿತು. ಎಲ್ಲರಿಗೂ ಸುಲಿಗೆಯಾಯಿತು. ಶಸ್ತ್ರಗಳು ಕೈಯಿಂದ ಬಿದ್ದುಹೋದುವು. ಕುದುರೆಗಳು ಅಡವಿ ಪಾಲಾದುವು. ಆ ದುರ್ಜನರಿಗೆ ಇಂತು ಶಿಕ್ಷೆಯಂ ಮಾಡಿ ಶ್ರೀಹರಿಯು ತುಕ್ಕೋಬನ ಕೀರ್ತನರಂಗದಲ್ಲಿ ಲೀಲೆಯಿಂದ ಕುಣಿಯುತ್ತಿದ್ದನು. ಶ್ರವಣಕ್ಕೆ ಬಂದು ಕುಳಿತಿದ್ದ ಜನರಿಗೆ ತಿಳಿಯದಂತೆಯೇ ಇಷ್ಟುಕೆಲಸವನ್ನು ಮಾಡಿ ವಿಘ್ನವನ್ನು ಪರಿಹರಿಸಿ ಅಘಟಿತವಾದ ಮಾಯೆಯಂ ಘಟನೆಮಾಡಿ ತುಕ್ಕೋಬನ ಕಿವಿಯಲ್ಲಿ ಈ ವೃತ್ತಾಂತವೆಲ್ಲವನ್ನೂ ಹೇಳಿ, ಇನ್ನು ನಿರ್ಭಯನಾಗಿ ಕೀರ್ತನವಂ ಮಾಡತಕ್ಕದು-ಎಂದು ನುಡಿದನು. ಆಗ ಭಾಗವತರೆಲ್ಲರೂ, ವನಮಾಲಿಯು ಸಂತುಷ್ಟನಾದನೆಂದು ಜಯಜಯನಾದವಂ ಮಾಡಿ ಕರಾಸ್ಫಾಲನವನ್ನು ಮಾಡುತ್ತ ಹರಿನಾಮವನ್ನು ಉದ್ಘೋಷಿಸಿದರು.

ಬಳಿಕ ಎಲ್ಲರೂ ಶಿವಾಜಿಯಂ ಕುರಿತು–ಈಗ ಬಂದಿದ್ದ ಪರಚಕ್ರವು ಯಾವ ಪರಿಹಾರೋಪಾಯವೂ ಇಲ್ಲದೆ ತನಗೆತಾನೇ ಓಡಿಹೋಯಿತು-ಎಂದು ಹೇಳಲು, ಆತನು ಆಶ್ಚರ್ಯಗೊಂಡು, ಯಾರಿಂದಲೂ ಅನಿವಾರ್ಯವಾದ ಅರಿಷ್ಟವು ಬಂದಿದ್ದಿತು. ಶಾರ್ಙ್ಗಧರನು ಪ್ರಸನ್ನನಾಗಿ ಪರಿಹರಿಸಿದನು-ಎಂದು ನುಡಿದು ಸಂತೋಷಗೊಂಡು ಕೀರ್ತನವಂ ಶ್ರವಣಮಾಡುತ್ತ ರಾತ್ರಿಯೆಲ್ಲವೂ ಜಾಗರದಲ್ಲಿದ್ದನು. ಅರುಣೋದಯವಾಗುವುದೂ ರುಕ್ಮಿಣೀಪತಿಗೆ ಮಂಗಳನೀರಾಜನವಂ ಬೆಳಗಿ ಹರಿನಾಮವನ್ನು ಉದ್ಘೋಷಿಸಿ ದಂಡಪ್ರಣಾಮವಂ ಮಾಡಿದರು.

ಬಳಿಕ ಶಿವಾಜಿಯು ತನ್ನ ಸ್ಥಳಕ್ಕೆ ಹೊರಟನು. ನಗರವಾಸಿಗಳು ಆತನಂ ಕಂಡು-ನಿನ್ನೆ ರಾತ್ರಿ ಊರಿಂದ ಓಡಿ ಹೋದಂತೆಯೂ ತುರುಷ್ಕರು ಬೆಂಬತ್ತಿದಂತೆಯೂ ಕಂಡೆವು. ಇದೇನು ಆಶ್ಚರ್ಯ ? ಆ ಸಂಕಟದಲ್ಲಿ ನೀವು ಎಂತು ಬದುಕಿದಿರಿ?-ಎಂದು ಬೆಸಗೊಳ್ಳಲು, ಅದಕ್ಕೆ ಆತನು-ಈಶ್ವರವ್ಯಾಪಾರವು ಅಘಟನಘಟನೆಯುಳ್ಳುದು. ಕೃಪಾನಿಧಿಯಾದ ಆ ಪರಮೇಶ್ವರನು ಅರಿಷ್ಟದ ದೆಸೆಯಿಂದ ನನ್ನನ್ನು ಬದುಕಿಸಿದನು–ಎಂದನು.

ಬಳಿಕ ಒಂದುದಿನ ಶಿವಾಜಿಯು ತುಕ್ಕಾರಾಮರಿಗೆ ಧನವಂ ಕೊಟ್ಟರೆ ಎಂತೂ ತೆಗೆದುಕೊಳ್ಳರು. ಆದುದರಿಂದ ನಾನು ದರಿದ್ರನ ವೇಷವಂ ಹಾಕಿಕೊಂಡು ಅವರ ಮನೆಗೆ ಧಾನ್ಯವಂ ತೆಗೆದುಕೊಂಡು ಹೋಗಿ ಕೊಡಬೇಕು. ಇಲ್ಲದಿದ್ದರೆ ಅವರು ರಾಜದ್ರವ್ಯವನ್ನು ಎಂದಿಗೂ ತೆಗೆದುಕೊಳ್ಳರು–ಎಂದು ಮನದಲ್ಲಿ ಆಲೋಚನೆಯಂ ಮಾಡಿ ಜೀರ್ಣವಸ್ತ್ರವಂ ಹೊದೆದುಕೊಂಡು ಎರಡು ಹೇರಿನ ಧಾನ್ಯವನ್ನು ಎತ್ತಿನಮೇಲೆ

ಹೇರಿಕೊಂಡು ನಡೆದು ರಾತ್ರಿ ಎರಡುಗಳಿಗೆಯ ಸಮಯಕ್ಕೆ ತುಕ್ಕೋಬನ ಮನೆಗೆ ಬಂದನು.

ಆಗ ಆತನು ಬೃಂದಾವನದ ಬಳಿಯಲ್ಲಿ ಜಪಸರವಂ ಹಿಡಿದುಕೊಂಡು ಕುಳಿತಿದ್ದನು. ಆ ಸಮಯದಲ್ಲಿ ರಾಜನು ಧಾನ್ಯದ ಹೇರನ್ನು ಬಾಗಿಲಲ್ಲಿ ಕೆಡಹಿ, ಸ್ವಾಮಿ! ನಾನು ಭಕ್ತಿಯಿಂದ ಧಾನ್ಯವನ್ನು ಸಂಗ್ರಹಿಸಿದ್ದೆನು. ತಮ್ಮ ಪಾದದಲ್ಲಿ ಭಕ್ತಿಯಿರುವುದರಿಂದ ಅದರಲ್ಲಿ ಸ್ವಲ್ಪವಂ ತಂದಿರುವೆನು. ನಾನು ಅನಾಥನು; ದೀನನು. ಇದನ್ನು ಮನೆಯಲ್ಲಿ ಇರಿಸಬೇಕು-ಎಂದು ನುಡಿದು ನಮಸ್ಕಾರವಂ ಮಾಡಿ ಹೊರಟುಹೋದನು.

ಬಳಿಕ ತುಕ್ಕೋಬನಿಗೆ-ಇದು ಕೃತ್ರಿಮವೆಂದು ತಿಳಿಯಿತು. ಗುರುತನ್ನು ಹಿಡಿದರೆ, ಆತನ ಪ್ರೇಮವು ಬಾಡಿಸುವುದು; ಆದುದರಿಂದ ಸುಮ್ಮನೆ ಇರಬೇಕು-ಎಂದು ನಾಮಸ್ಮರಣೆಯಂ ಮಾಡುತ್ತಲೇ ಇದ್ದು, ತನ್ನ ಕಾಂತೆಯಂ ಕರೆದು, ರಾಜನು ಈ ಧಾನ್ಯವನ್ನು ತಂದಿರಿಸಿರುವನು ಇದೆಲ್ಲವನ್ನೂ ಮನೆಯಲ್ಲಿ ಇಟ್ಟುಕೊಂಡರೆ ನಮ್ಮ ಸುಕೃತವು ಬಾಡಿಸಿಹೋದೀತು. ಆದುದರಿಂದ ಒಂದುದಿವಸಕ್ಕೆ ತಕ್ಕಷ್ಟನ್ನು ನೀನು ಇದರಲ್ಲಿ ತೆಗೆದುಕೊಂಡು ಉಳಿದುದನ್ನು ಬ್ರಾಹ್ಮಣರಂ ಕರೆದು ಅವರಿಗೆ ಕೊಟ್ಟುಬಿಡಬೇಕು-ಎಂದು ನುಡಿದನು.

ಆಕೆ ಈ ನುಡಿಯಂ ಕೇಳಿ ಕ್ರೋಧಸಂತಪ್ತೆಯಾಗಿ ಹಣೆಯಂ ಬಡಿದುಕೊಳ್ಳುತ್ತ-ನಾನು ದರಿದ್ರೆ; ನಿರ್ಭಾಗ್ಯೆ. ಅಯಾಚಿತವಾಗಿ ಧಾನ್ಯದ ಹೇರು ಮನೆಗೆಬಂದರೂ ಈ ಧಾನ್ಯವನ್ನೂ ಮಕ್ಕಳಿಗೆ ಉಣಲೀಯದಂತೆ ಬ್ರಾಹ್ಮಣರಿಗೆ ಹಂಚುವುದುಂಟೇ? ಇನ್ನುಮೇಲೆ ಸಂಸಾರವನ್ನು ಎಂತು ಮಾಡಬೇಕು ?-ಎಂದಳು.

ಆತನು ಆ ಮಾತಿಗೆ ಮಡದಿಯಂ ಕುರಿತು-ಜನ್ಮಾಂತರಸಂಚಿತವಾದ ಸುಕೃತವು ಎಷ್ಟಿರುವುದೋ ಅಷ್ಟೇ ನಿನ್ನ ಪಾಲಿಗೆ ಬಂದೀತಲ್ಲದೆ ಹೆಚ್ಚಾದುದನ್ನು ಬೇಡಿದರೆ ಎಲ್ಲಿಂದ ಬರುವುದು ?-ಎಂದು ಉತ್ತರವಂ ಹೇಳಿ, ಒಂದುದಿನಕ್ಕೆ ತಕ್ಕಷ್ಟು ಧಾನ್ಯವನ್ನು ಇಟ್ಟುಕೊಂಡು ಉಳಿದುದನ್ನು ಬ್ರಾಹ್ಮಣರಿಗೆ ಸಮರ್ಪಿಸಿದನು.

ಬಳಿಕ ಒಂದುದಿವಸ ತುಕ್ಕೋಬನು ದೇವಸ್ಥಾನದಲ್ಲಿ ಆನಂದದಿಂದ ಕೀರ್ತನವಂ ಮಾಡುತಿರಲು, ಒಂದು ಅದ್ಭುತವು ನಡೆದುದು:-ಭಾವುಕರು ಆಲಿಸತಕ್ಕುದು.

ತಾಳಮದ್ದಲೆಗಳ ಸುಸ್ವರವು ಆಕಾಶದಲ್ಲಿ ತುಂಬಿತು. ಸಮಸ್ತರೂ ಆನಂದದಿಂದ ಪರವಶರಾಗಿ ಕೀರ್ತನವಂ ಕೇಳುತಿದ್ದರು.

ಆವೂರಲ್ಲಿ ಒಬ್ಬ ಬಳೆಗಾರನಿದ್ದನು. ಅವನು ಪರಮಭಾವುಕನು. ಕೀರ್ತನವಂ ಕೇಳುವುದಕ್ಕೆ ನಿತ್ಯವೂ ಬರುತಿದ್ದನು. ಆದಿವಸ ಅವನ ಮಗುವು ಅಸ್ವಸ್ಥವಾಗಿ ಪ್ರಾಣಸಂಕಟದಲ್ಲಿ ಇದ್ದಿತು. ಹೆಂಡತಿಯು ಅವನಂ ಕುರಿತು-ಈ ಹೊತ್ತು ನೀವು ಹರಿಕಥೆಗೆ ಹೋಗಬೇಡಿ-ಎಂದು ನಿರ್ಬಂಧಿಸಿದಳು. ಆದರೂ ಅವನು ಅವಳ ಮಾತು

ಕೇಳವೆ ಕೀರ್ತನಕ್ಕೆ ಬಂದು ಸೇರಿದ್ದನು. ಮಗುವು ಆಗಲೇ ಪ್ರಾಣವಂಬಿಟ್ಟಿತು. ತಾಯಿಯು ದೀರ್ಘಸ್ವರದಿಂದ ರೋದನವಂ ಮಾಡುತ್ತ ಆಕಳೇಬರವನ್ನು ಎತ್ತಿಕೊಂಡು ಕೀರ್ತನಸ್ಥಳಕ್ಕೆ ಬಂದು ಅವನ್ನು ಅಲ್ಲಿ ಇರಿಸಿ ತುಕ್ಕೋಬನಂ ಕುರಿತು—ನೀನು ನಮ್ಮ ಬೆನ್ನಂ ಹತ್ತಿದೆ. ನನ್ನ ಪತಿಯನ್ನು ಮರುಳುಮಾಡಿ ಮೋಹವು ಮಾತೆಗಳಂ ಬಿಡಿಸಿದೆ. ನಿನ್ನ ಕಥೆಯಂ ಈ ಹೊತ್ತು ಕೇಳಿದುದರಿಂದ ಈ ಮಗುವಿನ ಪ್ರಾಣವು ಹೋಯಿತು. ನಮ್ಮ ಮನೆಯಲ್ಲಿ ಮೊದಲಿಂದಲೂ ಹರಿನಾಮದ ಸಾಲಾವಳಿಯಿಲ್ಲ—ಎಂದು ನುಡಿಯಲು, ಶ್ರವಣಕ್ಕೆ ಬಂದಿದ್ದವರೆಲ್ಲರೂ ವ್ಯಸನಪಡುತ್ತ ಸುಮ್ಮನೆ ಕುಳಿತರು. ಭಿಕ್ಷುಕನು ಮೃಷ್ಟಾನ್ನವಂ ತಿನ್ನುವಾಗ ಆಕಸ್ಮಿಕವಾಗಿ ಅದರಲ್ಲಿ ಮಣ್ಣು ಬಿದ್ದಂತೆ ಕೀರ್ತನದಲ್ಲಿ ರಸಭಂಗವಾಯಿತು. ಆಗ ಆ ಬಳೆಗಾರ್ತಿಯಂ ಕುರಿತು ಜನಗಳೆಲ್ಲರೂ—ನೀನು ಹೆಣವನ್ನು ಇಲ್ಲಿಗೆ ಏಕೆ ತಂದೆ! ಕೂಸನ್ನು ಬದುಕಿಸುವುದಕ್ಕೆ ಇವರಲ್ಲಿ ಅಮೃತಸಂಜೀವಿನಿಯೇನೂ ಇಲ್ಲ—ಎಂದರು.

ತುಕ್ಕೋಬನು ಅವರ ನುಡಿಯಂ ಕೇಳಿ, ಹರಿನಾಮದ ಮುಂದೆ ಅಮೃತವು ತುಚ್ಛವಾದುದು. ಇಂದ್ರಾದಿಗಳಿಗೂ ಅದು ದುರ್ಲಭವಾದುದು. ನಿಮಗೆ ಆ ವಿಶ್ವಾಸವಿಲ್ಲ. ಈಗಲೇ ಅದರ ಅನುಭವವನ್ನು ನೋಡೋಣ—ಎಂದು ನುಡಿದು ಅಪೂರ್ವವಾದ ಚಮತ್ಕಾರವಂ ತೋರಿಸಿದನು. ಶ್ರೋತೃಗಳೆಲ್ಲರನ್ನೂ ಕುರಿತು—ವಿಟ್ಠಲ ವಿಟ್ಠಲ-ಎಂದು ನುಡಿಯುತಿರಿ. ಇದೇ ಅಮೃತಸಂಜೀವಿನಿಯು. ಮನದಲ್ಲಿ ವಿಕಲ್ಪವಂ ಮಾಡದಿರಿ—ಎಂದು ಹೇಳಲು, ಆಗ ಆ ಸಭೆಯೊಳಗಣಿಂದ ಎದ್ದ ವಿಟ್ಠಲನಾಮಧ್ವನಿಯು ಅಂತರಿಕ್ಷನೆಲ್ಲವನ್ನೂ ತುಂಬಿತು. ಅಲ್ಲಿದ್ದ ಧ್ವಜಪತಾಕಾದಿಗಳು ಹಾಸಿದ್ದ ರತ್ನಕಂಬಳಿಗಳು ತಾಳಮೃದಂಗಗಳು ಮುಂತಾದವುಗಳ ಒಳಗಣಿಂದಲೂ ವಿಟ್ಠಲನಾಮಧ್ವನಿಯು ಎದ್ದಂತಿದ್ದುದು. ಆಗ ಆಕಾಶದಲ್ಲಿ ಸುರವರರು ಬಂದು ಆನಂದವನ್ನು ನೋಡುತಿದ್ದರು. ತಿಳಿದವರು ತಿಳಿಯದವರು, ದೊಡ್ಡವರು ಸಣ್ಣವರು ಮುಂತಾದವರೆಲ್ಲರೂ ಪ್ರೇಮದಿಂದ ವಿಟ್ಠಲನಾಮವನ್ನು ಕೀರ್ತಿಸುತ್ತಿದ್ದರು. ಸಕಲರೂ ಆನಂದಸಾಗರದಲ್ಲಿ ಮುಳುಗಿದರು. ಯಾರನ್ನು ನೋಡಿದರೂ ಅವರೆಲ್ಲರೂ ವಿಟ್ಠಲಮೂರ್ತಿಯಾಗಿಯೇ ಕಾಣುತಿದ್ದರು. ಜಾತಿಭೇದವೇನೂ ತೋರುತಿರಲಿಲ್ಲ. ಇಂತಹ ಅದ್ಭುತಸ್ಥಿತಿಯುಂಟಾಗಿರಲು, ಆಗ ಆಪ್ರೇತವು ಎದ್ದು ಕುಳಿತುದು. ಎಲ್ಲರೂನೋಡಿ ವಿಸ್ಮಿತರಾದರು. ಸಮೀಪದಲ್ಲಿಯೇ ನಿಂತಿದ್ದ ಮಗುವಿನ ತಾಯಿ ಮಹಾಸಂತೋಷಭರಿತೆಯಾಗಿ ತುಕ್ಕೋಬನಂ ಕುರಿತು—ನಾನು ಅಜ್ಞಾನದಿಂದ ನಿನ್ನನ್ನು ವ್ಯರ್ಥವಾಗಿ ನಿಂದಿಸಿದೆನು—ಎಂದಳು.

ಈ ಕೌತುಕವಂ ನೋಡಿ ಸಕಲರೂ ಹರಿನಾಮಕ್ಕಿಂತಲೂ ಅಮೃತಸಂಜೀವಿನಿ ಬೇರೆಯಿಲ್ಲವೆಂದು ಬಗೆದು ದೃಢವಾದ ವಿಶ್ವಾಸವುಳ್ಳವರಾದರು.

ಮುಂದಣ ಅಧ್ಯಾಯದಲ್ಲಿ ರುಕ್ಮಿಣೀಪತಿಯು ಮಹೀಪತಿಗೆ ಅಭಯವಂಕೊಟ್ಟ ಕಥೆಯಂ ಸುರಸವಾಗಿ ನುಡಿಯಿಸುವನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತೆಂಟನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ನಾಲ್ವತ್ತೊಂಬತ್ತನೆಯ ಅಧ್ಯಾಯಂ.

ಜಯ ಕೃಪಾಸಾಗರನೇ ಜಗದ್ವೀರನೇ! ನೀನು ಸಗುಣಸ್ವರೂಪವನ್ನು ಕಣ್ಣಿಗೆ ತೋರುವೆ. ಭಕ್ತನಿಗೆ ಮಹಾಸಂಕಟವು ಬರಲು, ಆಗ ನೀನೇ ಪರಿಹಾರವಂ ಮಾಡಿ ಲೀಲೆಯಂ ನಟಿಸುವೆ. ನೀನು ಸರ್ವಾಂಗದಲ್ಲಿಯೂ ಶ್ಯಾಮಲನಾಗಿ ಕಾಣುವೆ. ಕಟಿಯಲ್ಲಿ ಹಳದಿಯ ಪೀತಾಂಬರವನ್ನೂ ವಕ್ಷಸ್ಸ್ಥಳದಲ್ಲಿ ಅದೇಬಣ್ಣದ ಪದಕವನ್ನೂ ಧರಿಸಿರುವೆ. ಅದರಮೇಲೆ ರತ್ನದಕಾಂತಿಯು ಥಳಥಳಿಸುತಿರುವುದು. ಪೀತವರ್ಣದ ಕನಕಕಿರೀಟಕಾಂತಿಯಂ ಕಂಡು ಚಂದ್ರನು ನಾಚಿಕೆಗೊಂಡನು. ಪೀತವರ್ಣದ ಮಕರಾಕಾರವಾದ ಕುಂಡಲಗಳು ಕಿವಿಗಳಲ್ಲಿ ವಿಶೇಷದಿಂ ಹೊಳೆಯುತಿರುವುವು. ಕಂಠದಲ್ಲಿರುವ ಅದೇವರ್ಣದ ಮೋಹನಮಾಲೆಯನ್ನೂ ಅದರ ಮಧ್ಯದ ಕೌಸ್ತುಭಮಣಿಕಾಂತಿಯನ್ನೂ ಕಂಡು ಭಕ್ತರು ಸರ್ವಕಾಲದಲ್ಲಿಯೂ ಮರುಳಾಗುತಿರುವರು. ಹಣೆಯಲ್ಲಿ ಪೀತವರ್ಣದ ಕೇಸರದ ತಿಲಕವನ್ನೂ ಮೈಯಲ್ಲಿ ಲೇಪಿಸಿರುವ ಅದೇ ಬಣ್ಣದ ಗಂಧವನ್ನೂ ಆ ಪೀತವರ್ಣದ ಕಿಂಕಿಣಿಗಳನ್ನೂ ಕಾಣುತ್ತಲೇ ತಲ್ಲೀನರಾಗುವರು. ಪೀತವರ್ಣದದೇ ಹೊದಿಕೆ; ಕೈಯಲ್ಲಿ ಅದೇವರ್ಣದ ವೀರಕಂಕಣವು; ಪೀತವರ್ಣದದೇ ಏಕಾವಳೀಹಾರವು. ಇದು ನಿನಗೆ ಶೋಭಿಸುತಿರುವುದು. ಪೀತವರ್ಣದವೇ ವಂಕಿತೊಡರುಗಳು; ಅಂತಹುದೇ ನೂಪುರವು; ಕಂಗೊಳಿಸುತಿರುವುವು. ನಿನ್ನ ಚರಣನಖಂಗಳ ಅಸದೃಶವಾದ ತೇಜಸ್ಸನ್ನು ಪ್ರೇಮಳರಾದ ಭಕ್ತರು ನೋಡುತಿರುವರು. ಬ್ರಹ್ಮಾದಿಗಳಿಗೆ ದುರ್ಲಭವಾದ ನಿನ್ನ ಪಾದಯುಗಳವು ದಾಸರಿಗೆ ಪ್ರಾಪ್ತವಾಗಲು, ಅವರು ಪ್ರಪಂಚವನ್ನೇ ಬಿಟ್ಟು ಅದನ್ನೇ ವರ್ಣಿಸುತ್ತಿರುವರು. ಮಾನಾಪಮಾನಂಗಳಂ ಮನಸ್ಸಿಗೆತಾರದೆ ಲೌಕಿಕಸ್ಥಿತಿಯನ್ನು ಬಿಟ್ಟು ನಿರ್ಲಜ್ಜರಾಗಿ ಯಾರು ಕೀರ್ತನದಲ್ಲಿ ಕುಣಿಯುತ್ತ ನಿನ್ನಂ ಪೊಗಳುವರೋ ಶ್ರೀಪತಿಯೇ! ಅವರು ನಿನ್ನನ್ನೇ ಸೇರುವರು. ಯಾರು ಮನದಲ್ಲಿ ದುರಾಶೆಯನ್ನು ಬಿಟ್ಟು, ಸಗಣಿಯನ್ನೂ ಚಿನ್ನವನ್ನೂ ಸಮವಾಗಿ ಕಾಣುವರೋ, ಯಾರಿಗೆ ಸ್ವರ್ಗಸುಖದಲ್ಲಿ ಬೇಸರವೋ ಅವರು

ನಿನ್ನ ಪ್ರೀತಿಗೆ ಪಾತ್ರರಾಗುವರು. ಯಾರು ದೇಹಲೋಭವಂ ಬಿಟ್ಟು ತ್ರಿವರ್ಗವನ್ನೂ ಒದೆದು ನಿರಪೇಕ್ಷರಾಗಿರುವರೋ ಅವರು ನಿನ್ನನ್ನೇ ಹೊಂದುವರು. ಪ್ರೇಮಳರಾದ ಭಕ್ತರು ಸಂಕಟದಲ್ಲಿ ಸಿಕ್ಕಲು, ನೀನು ಸಗುಣರೂಪವಂ ಧರಿಸಿ ಸಮಯವೇನನ್ನೂ ನೋಡದೆ ತತ್ಕಾಲದಲ್ಲಿಯೇ ಅವರಿಗೆ ಪ್ರಸನ್ನನಾಗುವೆ. ಕಲಿಯುಗದಲ್ಲಿ ಬೌದ್ಧಾವತಾರವೆಂದು ಶಾಸ್ತ್ರಪುರಾಣಂಗಳು ಹೇಳುವುವು. ಒಂದೊಂದು ವೇಳೆಯಲ್ಲಿ ಆ ವಚನಪ್ರಮಾಣಂಗಳಂ ತಪ್ಪಿಸಿ ಸ್ವೇಛ್ಛೆಯಿಂದ ಸಗುಣನಾಗುವೆ. ಅಸಮಯದಲ್ಲಿ ಕರುಗಳು ತಾಯಿಯ ಮೊಲೆಯನ್ನು ಉಣ್ಣುವುದಕ್ಕೆ ಹೋದರೂ, ಆಧೇನುವು ಪ್ರೀತಿಯಿಂದ ನೊನೆಯಂ ಬಿಡುವುದಲ್ಲದೆ ಎಂದಿಗೂ ಕಾಠಿನ್ಯವಂ ವಹಿಸುವುದಿಲ್ಲ. ಅಂತು ಅವತಾರಕ್ಕೆ ಕಾಲವು ಬಾರದೆ ಇದ್ದರೂ ಪ್ರೇಮಳಭಕ್ತರು ನಿನ್ನನ್ನು ಕರೆಯುವರು. ನೀನು ಅವರಲ್ಲಿ ಕೃಪೆಯುಳ್ಳವನಾಗಿ ಅವರೊಡನೆ ಮಾತನಾಡುವೆ. ಇಂತಹ ಏಕನಿಷ್ಠೆಯುಳ್ಳ ಯಾವ ಭಾಗವತರು ನಿನ್ನಂ ಸ್ವಾಧೀನಮಾಡಿಕೊಂಡು ಇದ್ದರೋ ಅವರ ಚರಿತ್ರೆಯಂ ವರ್ಣಿಸಬೇಕೆಂದು ಮನಸ್ಸು ಅಪೇಕ್ಷೆಪಡುತ್ತಿರುವುದು. ದೀನದಯಾಳುವೇ! ವನಮಾಲಿಯೇ! ನಾನು ಅಸಾಧ್ಯವಾದ ಮೌರ್ಖ್ಯದ ಹಟವಂ ಹಿಡಿದಿರುವೆನು. ನೀನು ಹೃದಯಕಮಲದಲ್ಲಿ ಕುಳಿತು ಸ್ವಾನಂದರಸವನ್ನೇ ನುಡಿಯಿಸುವವನಾಗಬೇಕು. ತಂದೆಯು ಮಗನ ಕೈಯನ್ನು ಹಿಡಿದು ಅಕ್ಷರಗಳನ್ನು ಬರೆಯಿಸಿ ಎಂತು ಕಲಿಸುವನೋ ಅಂತು ನೀನು ನನಗೆ ಬುದ್ಧಿಯನಿತ್ತು ನನ್ನ ಮುಖದಿಂದ ಗ್ರಂಥವಂ ನುಡಿಯಿಸಬೇಕು. ನೀನು ಗೋವರ್ಧನಪರ್ವತವನ್ನು ಎತ್ತಿ ಗೋಪಾಲರಿಗೆ ದೊಡ್ಡತನವಂ ಕೊಟ್ಟಂತೆ ನೀನೇ ಗ್ರಂಥವಂ ರಚಿಸಿ ನನಗೆ ಗೌರವವಂ ಕೊಡುವೆ. ಪಂಢರೀನಾಥನೆ! ನಾನು ಮಂದಬುದ್ಧಿಯುಳ್ಳವನು. ಕಥೆಯಂ ಹೇಳುವುದಕ್ಕೆ ಬಾರದು. ಇಂತಹನ ಮುಖದಿಂದ ಭಕ್ತರ ಚರಿತ್ರೆಯಂ ಹೇಳಿಸುವೆ. ಇದು ಆಶ್ಚರ್ಯವು. ಯಾವಕಾಲದಲ್ಲಿ ಏನು ನಡೆದಿದ್ದಿತೋ ಅದನ್ನು ನಾನು ಕಂಡವನಲ್ಲ. ಆದರೂ ಬರೆಯುವಾಗ ಏನು ತಡೆಯಾದರೂ ಆಕ್ಷಣವೇ ನೀನು ಬುದ್ಧಿಗೆ ಸ್ಫೂರ್ತಿಯಂ ಕೊಡುವೆ. ನೀನು ಬುದ್ಧಿಪ್ರಕಾಶಕನಾದುದರಿಂದ ಸರ್ವಭಾರವನ್ನೂ ನಿನ್ನ ಮೇಲೆ ಹಾಕಿರುವೆನು.

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ವಿಟ್ಠಲನಾಮಸಂಕೀರ್ತನದಿಂದ ಪ್ರೇತವು ಎದ್ದಿತೆಂಬ ಕಥೆಯಂ ಕೇಳಿದಿರಷ್ಟೆ. ಆ ಚಮತ್ಕಾರವಂ ನೋಡಿ ಸರ್ವರೂ ಬಹುಸನ್ಮಾನವಂ ಮಾಡಿದರು. ಆಬಳಿಕ ತುಕ್ಕೋಬನು ಅರಣ್ಯದಲ್ಲಿ ಹೋಗಿ ಶ್ರೀಹರಿಯ ಚಿಂತನವಂ ಮಾಡುತ್ತಿದ್ದನು. ಡಾಂಭಿಕತ್ವವನ್ನೂ ಲೌಕಿಕಪ್ರತಿಷ್ಠೆಯನ್ನೂ ಸನ್ಮಾನವಾಗಬೇಕೆಂಬ ಅಭಿನಿವೇಶವನ್ನೂ ಬಿಟ್ಟು ಏಕನಿಷ್ಠೆಯಿಂದ ಹರಿಸ್ಮರಣೆಯಂ ಮಾಡುತಿದ್ದನು. ಪ್ರಾಪಂಚಿಕವ್ಯವಹಾರವುಳ್ಳ ಜನಗಳು ನಿಂದಿಸುವಂತಹ ವಿಲಕ್ಷಣಸ್ಥಿತಿಯುಳ್ಳವನಾಗಿದ್ದನು. ಯಾರಾದರೂ ಒಂದು ಸ್ತ್ರೀ

ತ್ರವಂ ಮಾಡಿದರೆ ಆ ಸ್ಥಳವಂ ಬಿಟ್ಟು ಹೋಗುವನು. ಎಲ್ಲಿ ತನ್ನಂ ದೂಷಿಸು ವರೋ ಅಲ್ಲಿ ಅದಂ ಕೇಳುತ್ತ ಕುಳಿತುಕೊಳ್ಳುವನು. ಯಾರಾದರೂ ಪಕ್ವಾನ್ನಂ ಗಳಂ ಮಾಡಿಸಿ ಅವರದಿಂದ ಭೋಜನಕ್ಕೆ ಬಡಿಸಿದರೆ, ಅದರ ರುಚಿಯನ್ನು ಮನಸ್ಸಿಗೆ ತಾರದೆ ವಿವೇಕದಿಂದ ನಾಲಗೆಯಂ ಬಿಗಿಹಿಡಿಯುವನು. ಯಾರಾದರೂ ಬಡವರು ದೀನರು ಸೊಪ್ಪಂ ಬೇಯಿಸಿ ಹಾಕಿದರೂ ಅದನ್ನು ಕ್ಷುಚ್ಛಾಂತಿಯಾಗುವವಾಟ್ಟಿಗೆ ಪ್ರೀತಿಯಿಂದ ಭುಂಜಿಸುವನು. ಹಗಲು ಅರಣ್ಯದಲ್ಲಿ ಇರುವನು. ರಾತ್ರಿ ತನ್ನೂ ರಿಗೆ ಬಂದು ಕೀರ್ತನವಂ ಮಾಡುತಿರುವನು. ಎರಡು ತಿಂಗಳವರೆಗೆ ಊರಲ್ಲೇ ಇದ್ದು ಮನೆಯ ಕಡೆಗೆ ಹೋಗದೆಯೇ ಇರಲು, ಆತನ ಮಡದಿಯು ಮನೆಮನೆ ಯಲ್ಲಿಯೂ ದೂರಿಕೊಳ್ಳುತ್ತ ಬಂದಳು. ಎಲೆ ಸಖಿಗಳಿರಾ ! ನನ್ನ ಕರ್ಮದ ವೈಪರೀ ತ್ಯವನ್ನು ಏನೆಂದುಹೇಳಲಿ; ಮನೆಯ ಯಜಮಾನನು ನಮ್ಮ ಯೋಗಕ್ಷೇಮವನ್ನು ವಿಚಾರಿಸದೆಯೇ ಅರಣ್ಯದಲ್ಲಿ ಹೋಗಿ ಕುಳಿತುಕೊಳ್ಳುವನು. ಎಲ್ಲಾ ಗೃಹಕೃತ್ಯ ವನ್ನೂ ಬಿಟ್ಟು ಕೀರ್ತನದಲ್ಲಿ ಪ್ರೇಮಭರಿತನಾಗಿ ಕುಣಿಯುತ್ತ ಹೃದಯದಲ್ಲಿ ಪುರು ಷೋತ್ತಮನಂ ಧ್ಯಾನಿಸುತ್ತ ಭಜನೆಯಲ್ಲಿ ನಿರತನಾಗಿರುವನು. ಎರಡು ತಿಂಗಳ ವರೆಗೆ ಊರಲ್ಲಿಯೇ ಇದ್ದು ಮನೆಗೆ ಬರಲಿಲ್ಲ. ನಾನು ಚಿಂತಾಭರದಿಂದ ವ್ಯಸನ ಪಡುತಿರುವೆನು. ಎಂದಾದರೂ ಆತನನ್ನು ನೀವು ಕಂಡರೆ, "ಹೆಂಡತಿಯನ್ನು ಬಿಟ್ಟೀರಿ, ಜನಗಳಲ್ಲಿ ನಾಚಿಕೆಗೇಡಾಗಿದೆ" ಎಂದು ಹೇಳಿ-ಎಂದಳು.

ಒಂದುದಿನ ನೀರಿಗೆಹೋಗಿ ಕೊಡದಲ್ಲಿ ನೀರನ್ನು ತುಬಿಕೊಂಡು ಮನೆಗೆ ಹಿಂತಿ ರುಗಿ ಬರುವಾಗ ತುಕ್ಕೋಬನು ಸ್ನಾನವಂ ಮಾಡಿಕೊಂಡು ದೇವಾಲಯಕ್ಕೆ ಹೋ ಗುತ್ತಿದ್ದನು. ಆಕೆಯು ಮರ್ಯಾದೆಯನ್ನು ಉಲ್ಲಂಘಿಸಿ ಪತಿಯ ಸೆರಗನ್ನು ಹಿಡಿದು ನಿಲಿಸಿ-ನೀನು ನಿರ್ಲಜ್ಜನು; ನಿಶ್ಶಂಕನು; ಯಾವ ಕಾಲದಲ್ಲಿಯೂ ಕೀರ್ತನದಲ್ಲಿ ಕುಣಿಯುತಿರುವೆ. ಮನೆಯ ಕಡೆಗೆ ತಿರುಗಿ ನೋಡೆ. ನಾನು ಸುಮ್ಮನೆ ತಲ್ಲಣಿಸು ತ್ತಿರುವೆನು. ನಾನು ಲೋಕಸ್ಥಿತಿಯನ್ನು ಬಿಟ್ಟು ಹೋಗಲಾರದೆ ಲಜ್ಜೆಯನ್ನು ಹಿಡಿದು ಮನೆಯಲ್ಲಿ ಎಷ್ಟು ಕ್ಲೇಶಪಟ್ಟರೂ ತೀರದು. ನೀನು ನಮಗೆ ಏನು ದಾರಿ ಯಂ ಮಾಡಿದೆ. ಈಗ ಹೇಳಿಬಿಡು-ಎಂದಳು. ಅದಕ್ಕೆ ಆತನು ಮಡದಿಯನ್ನು ಕುರಿತು-ನಿನ್ನ ತಾಯ್ತಂದೆಗಳು ಮದುವೆಯಂ ಮಾಡಿದಾಗ ನಿನ್ನನ್ನು ನನಗೆ ಒಪ್ಪಿಸಿ ಕೊಟ್ಟಿದ್ದರೆ ನಿನಗೆ ನಾನು ಅನ್ನವಸ್ತ್ರಂಗಳಂ ಕೊಡುವೆನು-ಎನಲು, ಆ ನುಡಿಯಂ ಕೇಳಿ ಆಕೆ-ಹಾಗಾದರೆ ಮತ್ತಾರಿಗೆ ಒಪ್ಪಿಸಿ ಕೊಟ್ಟರು; ಅದನ್ನಾದರೂ ಹೇಳು- ಎಂದು ಕೇಳಿದಳು. ಆತನು-ನಮ್ಮ ತಾಯ್ತಂದೆಗಳಿಗೆ ಒಪ್ಪಿಸಿ ಕೊಟ್ಟರು-ಎಂದನು. ಅದಕ್ಕೆ ಆಕೆ-ನಿನ್ನ ತಾಯ್ತಂದೆಗಳು ಸಂದುಹೋದರು. ಅವರನ್ನು ನೀನು ಸುಟ್ಟು ಬಿಟ್ಟೆ. ಈಗ ನಾನು ಅವರನ್ನು ಎಲ್ಲಿ ಹುಡುಕಲಿ?-ಎನಲು, ಅದಕ್ಕೆ ತುಕ್ಕೋಬನು ನನ್ನ ತಂದೆ ಪಾಂಡುರಂಗನೇ, ವಿಶ್ವಜನನಿಯಾದ ರುಕ್ಮಿಣೀದೇವಿಯೇ ನನ್ನ ತಾಯಿ.

ಅವರು ಅಕ್ಷಯರು. ಅವ್ಯಯರು. ಪ್ರಪಂಚವು ಸೃಜಿಸಲ್ಪಟ್ಟರೆ ಅವರು ಬೆಳೆಯ ತಕ್ಕವರೂ ಅಲ್ಲ. ಪ್ರಳಯವಾಗುವಾಗ ನಾಶವನ್ನು ಐದುವರೂ ಅಲ್ಲ. ಘಟದಲ್ಲಿ ಸೇರಿರುವ ಆಕಾಶದಂತೆ ಅವರು ಲೋಕಕ್ಕೆ ಅಭಿನ್ನರು. ಘಟವು ನಾಶವನ್ನೈದಿದರೆ ಆಕಾಶವೂ ನಾಶವನ್ನು ಐದಿತೆಂದು ನುಡಿಯಲಾಗದು. ಅದರಂತೆ ಲೋಕವು ನಾಶವನ್ನೈದಿದರೂ ನಮ್ಮ ತಾಯ್ತಂದೆಗಳಿಗೆ ಎಂದಿಗೂ ನಾಶವಿಲ್ಲ. ನೀನು ಅವರ ಪಾದಗಳನ್ನು ಸ್ಮರಿಸುತ್ತ ಇದ್ದರೆ ಅವರೇ ಅನ್ನವಸ್ತ್ರಗಳಂ ಕೊಡುವರು. ಈಯರ್ಥದಲ್ಲಿ ಸಂಶಯವಿಲ್ಲ.—ಎಂದು ಹೇಳಿದನು. ಆ ಮಾತಂ ಕೇಳಿ ಆಕೆ—ಪ್ರಾಣೇಶ್ವರನೆ! ಈಗ ನೀವು ಮನೆಗೆ ಬರಬೇಕು. ನಿಮ್ಮಿಂದ ಸಂಸಾರವು ಶೋಭಿಸುವುದು. ನೀವು ಮನೆಯಲ್ಲಿದ್ದರೆ, ನೋಡುವ ನಂಟರಿಷ್ಟರಿಗೆಲ್ಲರಿಗೂ ಸರಿಯಾಗಿರುವುದು. ನಾನೂ ಶ್ರೀಹರಿಯ ಭಜನೆಯಂ ಮಾಡುವೆನು. ಅನ್ನವಸ್ತ್ರಗಳನ್ನು ಆತನೇ ಕರುಣಿಸಲಿ. ನೀವು ಮನೆಯಲ್ಲಿ ಸುಮ್ಮನೆ ಇದ್ದುಕೊಂಡು ಭಜನೆಯಂ ಮಾಡುತ್ತಿರಿ.—ಎನಲು, ತುಕ್ಕೋಬನು-ನನ್ನ ಮಾತಂ ನೀನು ಅಂಗೀಕರಿಸಿದವಳಾದರೆ ಈ ವಿಷಯದಲ್ಲಿ ಕೈಮುಟ್ಟಿ ಭರವಸೆಯಂ ಕೊಡು. ನಾನು ಈಗಲೇ ಮನೆಗೆ ಬರುವೆನು-ಎಂದನು. ಆಕೆಯು ಅದೇಪ್ರಕಾರದಿಂದ ಕೈಯಲ್ಲಿ ಭರವಸೆಯಂ ಕೊಟ್ಟು ಪತಿಯನ್ನು ಮನೆಗೆ ಕರೆದುತಂದಳು. ಆಗ ಸಕಲರೂ ಆಶ್ಚರ್ಯಗೊಂಡರು. ಕೆಲವರು, ನಾಲ್ಕುದಿನ ವೈರಾಗ್ಯವಂ ತೋರಿಸಿ ತನ್ನ ಪ್ರತಿಷ್ಠೆಯಂ ಮೆರೆದು ಮತ್ತೆ ಪ್ರಾಪಂಚಿಕವಾಯೆಯಲ್ಲಿ ಬಂದು ಬಿದ್ದನು—ಎಂದರು. ಕೆಲವರು- ಯುಕ್ತವಾದುದು; ಸಂಸಾರದಲ್ಲಿಯೇ ಪರಮಾರ್ಥಸಾಧನೆಯಾಗುವುದು. ತುಕ್ಕೋಬನು ತನ್ನ ಹೆಂಡತಿಯನ್ನು ಸಂರಕ್ಷಿಸುವುದು ನಮಗೆ ಸಮಾಧಾನಕರವು—ಎಂದರು. ಕೆಲವರು—ಬೆಟ್ಟದ ಗುಹೆಯಲ್ಲಿ ಹೋಗಿ ಕುಳಿತು ಯಾರು ವೈಕುಂಠಕ್ಕೆ ಹೋಗಿರುವರು ? ಹೇಳಿ-ಎಂದರು. ಇಂತು ತಂತಮಗೆ ತೋರಿದಂತೆ ಮಾತನಾಡಿಕೊಂಡರು. ಕೆಲವರು—ನಿಂದಿಸಿದರು. ಕೆಲವರು ಅಭಿನಂದಿಸಿದರು. ತುಕ್ಕೋಬನು ಹರ್ಷಖೇದಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳದೆ ಆನಂದನಿರ್ಭರನಾಗಿದ್ದನು.

ಒಂದುದಿನ ಏಕಾದಶಿ ಬರಲು, ಅಂದು ತುಕ್ಕೋಬನು ಬೃಂದಾವನದ ಬಳಿಯಲ್ಲಿ ಕುಳಿತು ಕಾಂತೆಯನ್ನು ಸಮೀಪಕ್ಕೆ ಕರೆದು—ಹರಿಕಥೆಯಂ ಶ್ರವಣಮಾಡೆಂದುಹೇಳಿ ಇದಿರಲ್ಲಿ ಕುಳ್ಳಿರಿಸಿ ಕೈಯಲ್ಲಿ ತಂಬೂರಿಯಂ ನಾದಗೊಳಿಸುತ್ತ ಹನ್ನೊಂದು ಅಭಂಗಗಳೆಂಬ ಪದಗಳನ್ನು ಉಪದೇಶಿಸಿದನು. ಶ್ರೋತೃಗಳಿರಾ! ನೀನೆಲ್ಲರೂ ಅವನ್ನು ಶ್ರವಣಮಾಡಿದ್ದರೆ ಚೆನ್ನಾಗಿದ್ದಿತು. ನಾನು ಅವುಗಳ ಅಭಿಪ್ರಾಯವನ್ನು ಮನಸ್ಸಿಗೆ ತಂದು ಮುದ್ದುಮಾತುಗಳಿಂದ ಹೇಳುವೆನು. ಮಂದಬುದ್ಧಿಯಾದ ನಾನು ತುಕ್ಕೋಬನ ಅಭಂಗಗಳ ಅರ್ಥವನ್ನು ಹೇಳುವುದು ಸೂರ್ಯನನ್ನು ನೋಡುವುದಕ್ಕೆ ದೀಪವಂ ಹತ್ತಿಸಿದಂತಾಯಿತು. ಅಮೃತದ ಸಿದ್ಧಿಗೆ ವೈದ್ಯನು ತನ್ನ

ಔಷಧವಂ ಕೊಟ್ಟಂತಾಯಿತು. ಆದರೆ ಗಂಗೆಯಲ್ಲಿ ಕಾಡುಹಳ್ಳದ ನೀರು ಸೇರಿದರೆ ಆದನ್ನು ಅಪವಿತ್ರವೆನಬಹುದೆ? ಪರಿಸಕ್ಕೆ ಸೋಂಕಿದ ಲೋಹದಲ್ಲಿ ಕಪ್ಪು ನಿಲ್ಲುವುದೇ? ಆ ಸತ್ಪುರುಷನ ವಚನಗಳು ಅಸದೃಶಗಳು. ಬಹುಗಂಭೀರವಾದ ಅರ್ಥವುಳ್ಳವುಗಳು. ಅವುಗಳ ಸಂಬಂಧದಿಂದ ನನ್ನ ಮಾತಿಗೂ ಮಾನ್ಯತೆಯುಂಟು. ಆತನ ಕೃಪೆಯಿಂದಲೇ ಸ್ವಲ್ಪವನ್ನು ಹೇಳುವೆನು:—ಭಾವುಕರಾದ ನೀವು ಆಲಿಸತಕ್ಕದು.

ತುಕೋಬನು ತನ್ನ ಮಡದಿಯಂಕುರಿತು—ಈ ನರದೇಹವು ವಿಚಿತ್ರವಾದುದು. ಇಲ್ಲಿ ಹರಿಸ್ಮರಣೆಯಂ ಮಾಡಿದರೆ ಭಾಗ್ಯವು ಅತ್ಯದ್ಭುತವಾಗಿ ಬೆಳೆಯುವುದು. ಯಾರು ಪರಮಾರ್ಥವನ್ನು ದೃಢಮಾಡುವುದಿಲ್ಲವೋ ಅವರು ವ್ಯರ್ಥವಾಗಿ ಪ್ರಪಂಚದ ಹೊರೆಯೆನಿಸಿ ಬರಿಯ ಕಲ್ಲುಗಳನ್ನು ಬೇಯಿಸುವಂತವರಿಗೆ ಸಮಾನರೆನಿಸುವರು. ಎಂಬತ್ತು ವರಹಗಳನ್ನು ಅರಸನಿಗೆ ತೆರಿಗೆಕೊಡಬೇಕು. ಕೊಡದಿದ್ದರೆ ಕಾಲನೆಂಬ ಅಧ್ಯಕ್ಷನು ಉಪದ್ರವಗೊಳಿಸುವನೆಂಬ ಭಯದಿಂದ ಹತ್ತು ವರಹಗಳನ್ನು ಒಪ್ಪಿಸಿ ಇರುವೆನು. ಇನ್ನು ಎಪ್ಪತ್ತು ವರಹಗಳು ಉಳಿದಿರುವುವು. ಅವಕ್ಕೆ ಆಧಾರವೇನೂ ಕಾಣುವುದಿಲ್ಲ. ಆ ಹತ್ತು ವರಹಗಳು ಯಾವುವೆಂದು ಆಶಂಕೆತೋರೀತು. ದೇಹದಲ್ಲಿ ಹತ್ತಿರುವ ಹತ್ತಿಂದ್ರಿಯಂಗಳೇ—ಎಂದು ತಿಳಿಯತಕ್ಕದು. ನಿಂದೆಯೂ ಸ್ತೋತ್ರವೂ ಕಿವಿಯಿಂದ ಸಮವಾಗಿ ಕೇಳಲ್ಪಡುವುದು. ಚಿನ್ನವೂ ಮಣ್ಣೂ ಕಣ್ಣಿಗೆ ಸಮವಾಗಿ ಕಾಣುವುದು. ಸಕ್ಕರೆಯೂ ಹಾವುಮೆಕ್ಕೆಕಾಯೂ ನಾಲಗೆಗೆ ಸಮವಾದ ರುಚಿಯುಳ್ಳುದಾಗಿರುವುದು. ಪುಂಗವೇಲವೂ ಮಕುಳವೂ ಮೂಗಿಗೆ ಸಮವಾದ ವಾಸನೆಯುಳ್ಳುದಾಗಿರುವುದು. ಮೃದುವಾದುದೂ ಕಠಿನವಾದುದೂ ಚರ್ಮಕ್ಕೆ ಸಮವಾದ ಹಿತವುಳ್ಳುದಾಗಿರುವುದು. ಇಂದ್ರಿಯಗಳಲ್ಲಿ ಮನಸ್ಸು ಚಂಚಲವಾದುದು. ಅದನ್ನು ವಿಟ್ಠಲನ ಪಾದಾರವಿಂದಗಳಲ್ಲಿ ಸಮವಾಗಿ ನಿಲಿಸಿದಬಳಿಕ ಈ ಜ್ಞಾನೇಂದ್ರಿಯಂಗಳಂತೆಯೇ ಕರ್ಮೇಂದ್ರಿಯಗಳೂ ಆದುವು. ಅವಕ್ಕೆ ಬೇರೆಕರ್ತೃತ್ವವಿಲ್ಲ. ಆ ದಶೇಂದ್ರಿಯಗಳೂ ಸಹಜವಾಗಿನಿಲ್ಲಲು, ಉಳಿದ ಎಪ್ಪತ್ತು ವರಹಗಳನ್ನು ನಿಶ್ಶೇಷವಾಗಿ ಕೊಡಬೇಕೆಂದು ಅಲ್ಲಿಯ ಯಜಮಾನನಾದ ಪಾಂಡುರಂಗನು ಹೃದಯವೆಂಬ ಚಾಕದಲ್ಲಿ ಕುಳಿತುಕೊಂಡು ಹಂಡೆ ಮೊದಲಾದ ಪಾತ್ರೆಗಳನ್ನೂ ಧನಗಳನ್ನೂ ಕೊಟ್ಟು ಉಳಿದುದನ್ನು ನಿಶ್ಶೇಷವಮಾಡಿಬಿಟ್ಟು ಇದೇಬುದ್ಧಿಯನ್ನು ದೃಢಮಾಡಿಕೊಂಡು ನಿಷ್ಕಳಂಕನಾಗು—ಎನುತಿರುವನು. ಈತನಿಗೆ ಉಳಿದುದನ್ನು ಕೊಡದೆ ಮರೆಯಲ್ಲಿರೋಣ -ಎಂದರೆ, ಈತನುಇಲ್ಲದಂತಹ ಸ್ಥಳವು ಇಲ್ಲವೇಇಲ್ಲ. ಮನದಲ್ಲಿ ಆಲೋಚಿಸಿ ನೋಡು. ಆತನು ವಿಶ್ವವ್ಯಾಪಕನು, ಜಗನ್ನಾಥನು. ಈತನ ಭಯದಿಂದ ಓಡಿಹೋದರೆ ಬೆನ್ನಿಗೆ ಹಾಕಿಕೊಳ್ಳುವವನು ಈ ಸೃಷ್ಟಿಯಲ್ಲಿ ಎರಡನೆಯವನು ಕಾಣುವುದಿಲ್ಲ. ಈತನ ದೂತರು ಬೆಂಬತ್ತಿಯೇ ಇರುವರು. ಯಜಮಾನನಾದ ಈತನನ್ನು ಮೊದಲೇ

ಭಜಿಸಿದ್ದರೆ ನಮಗೆ ಸಂಕಟವೇಕೆ ಉಂಟಾಗುತಿದ್ದಿತು ? ಆದರೆ ಈಗಲಾದರೂ ಉಳಿದೆಲ್ಲವನ್ನೂ ಸಲಿಸಿಬಿಟ್ಟು ಇಲ್ಲಿಯೇ ಸಂತತವೂ ಇರೋಣ. ಆತನು ತನ್ನ ಮನಸ್ಸಿಗೆ ತೋರಿದ ಭೃತಿಯನೇನಾದರೂ ಕೊಟ್ಟರೆ ಅದರಿಂದಲೇ ಜೀವನವನ್ನು ಮಾಡೋಣ. ಈತನು ಸಕಲವನ್ನೂ ಸುಲಿದುಕೊಂಡುಬಿಟ್ಟು ಸಂಸಾರದಲ್ಲಿ ಇರದಂತೆಯೇ ಮಾಡುವನು. ಈ ಭಯದಿಂದ ಈತನಕಡೆಯಿಂದ ಯಾರೂ ಸಾಲವಂ ತೆಗೆದುಕೊಳ್ಳರು. ಒಬ್ಬೊಬ್ಬನ ವಿಷಯದಲ್ಲಿ ಸದ್ಗುರುವಿನ ಹೊಣೆಯಂ ತೆಗೆದುಕೊಂಡು ಅವನನ್ನು ನಿಸ್ಸತ್ತ್ವನನ್ನಾಗಿ ಮಾಡುವನು. ಅಭಿಮಾನವಂ ಬಿಡಿಸಿ ಎಲ್ಲರೂ ನಗುವಂತೆ ಮಾಡುವನು. ಇಂತು ಪರೀಕ್ಷಿಸುವುದರಲ್ಲಿ ಯಾರು ಆತನ ಮನಸ್ಸಿಗೆ ಬರುವರೋ ಅವರನ್ನು ವೈಕುಂಠದಲ್ಲಿ ಸೇರಿಸುವನು. ಅದೇಪ್ರಕಾರದಿಂದ ಬೆಂಬತ್ತಿ ನನ್ನ ಜೀವತ್ವವನ್ನೂ ಅಪಹರಿಸಿರುವನು. ಆತನ ರೀತಿಯನ್ನು ಮೊದಲು ತಿಳಿದಿದ್ದರೂ ತಿಳಿಯದವನಾಗಿರುವೆನು. ಯಾವನು ಬಹುನಿರ್ದಯನಾಗಿ ಕಷ್ಟಪಡಿಸಿದನೋ ಆತನ ಕೈಗೇ ಸಿಕ್ಕಿದೆನು. ಆದುದರಿಂದ ಈಗ ನೀನು ಮನಸ್ಸಿನಲ್ಲಿ ವಿವೇಕವಂ ತಂದುಕೊಂಡು ಸಂಸಾರದಲ್ಲಿ ಉಪೇಕ್ಷೆಯುಳ್ಳವಳಾಗು. ನನ್ನ ಜೀವದ ನಾಶಕ್ಕೆ ಆರಂಭವಾದ ಮೇಲೆ ಯಾವುದಕ್ಕೆ ಅನುಮಾನಪಡಬೇಕು ? ಸಹಜವಾಗಿ ತೋರಿದರೆ ಅದು ನಿನಗೆ ಏಕೆ ಹಿತವಾಗದೆಹೋದೀತು ? ನನಗೆ ಉಪವಾಸವು ಪ್ರಾಪ್ತವಾಗಲು, ಇನ್ನೇಕೆ ಲಜ್ಜೆಪಡಬೇಕು ? ದೇಹದ ಮೇಲೆ ಆಶೆಯಿಟ್ಟವಳಾದರೆ ನಿನ್ನ ಜೀವಕ್ಕೆ ಏನು ಆದಂತಾಯಿತು ? ನಿನಗೂ ನನಗೂ ಸಂಬಂಧವು ತಪ್ಪದಂತಹ ಉಪಾಯವನ್ನು ಹೇಳುವೆನು. ಈಯಾಲೋಚನೆಯನೀಡೇರಿಸಿದರೆ ಮಕ್ಕಳಿಂದಲೂ ಮರಿಗಳಿಂದಲೂ ಕೂಡಿ ಒಂದೇ ಬಳಿಯಲ್ಲಿ ಬಾಳುವುದಾಗುವುದು. ಇಲ್ಲದಿದ್ದರೆ ಯೋಗ್ಯವಲ್ಲ. ಮಕ್ಕಳು ಏನನ್ನು ಉಣಬೇಕು ?—ಎಂದು ಕೇಳೇಯೆ, ಆಚಿಂತೆಯಂ ಎಂತೂ ಮಾಡಬಾರದು. ಅವರವರ ಅನ್ನವಸ್ತ್ರವಂ ಅವರವರ ಹಣೆಯಲ್ಲಿ ಬ್ರಹ್ಮನು ಬರೆದೇ ಇರುವನು. ನೀನು ನಿನ್ನ ಕೊರಲಂ ತಪ್ಪಿಸಿಕೊಂಡು ಎಂಬತ್ತುನಾಲ್ಕುಲಕ್ಷದ ಯೋನಿಗಳಲ್ಲಿ ಗರ್ಭವಾಸದ ಕಷ್ಟವು ಯಾವುದರಿಂದ ಬಿಡಲ್ಪಡುವುದೋ ಆವಿಚಾರವನ್ನು ಕೇಳುವಳಾಗು. ನಾನು ನಿನ್ನನ್ನು ಬಿಟ್ಟು ಬೇರೆಯಾಗಿ ಓಡಿದರೆ, ಆಧಾರವನ್ನು ನೋಡಿ ಕೊರಲಿಗೆ ಕಟ್ಟಿದ ನಿನ್ನ ಪಕ್ಷಪಾತಿಗಳು ನನ್ನನ್ನು ಬೆಂಬತ್ತಿ ಹಿಡಿದು ಬಡಿಯುವರು. ಧರ್ಮನ ದೂತರ ಕಠಿಣವಾದ ಪೆಟ್ಟಂ ಬಗೆಯಲು, ಜೀವವು ಗಡಗಡನೆ ನಡುಗುವುದು. ನನ್ನ ಆವಶ್ಯಕತೆಯು ನಿನಗೆ ಇದ್ದುದಾದರೆ, ನೀನು ಸಕಲವಿಷಯಗಳಲ್ಲಿಯೂ ಬೆದಾಸೀನ್ಯವುಳ್ಳವಳಾಗಬೇಕು. ಏನನಾಡಲಿ ? ನನ್ನ ಸಂಚಿತಕರ್ಮಕ್ಕೋಸ್ಕರ ಈ ಜೀವಭಾವವು ನನಗೆ ಗಂಟುಬಿದ್ದಿದೆ. ಅದು ಎಂತೂ ನನ್ನಿಂದ ನಿರ್ವಹಿಸತಕ್ಕುದಲ್ಲ. ಪಂಡರೀನಾಥನಿಗೆ ಸಮ್ಮತವಾಗಿ ಇದೆ. ಬಿಡಿಯಾದ ಭಿಕ್ಷುಕನಾಗಿರುವೆನು. ಆದರೂ ಆಶೆ ಬೆಂಬತ್ತಿಯೇ ಇರುವುದು. ಈಸ್ವಾಮಿಗೆ ಎಂತೂ ಕರುಣೆ ಬಾರದು.

ಸುಲಿಗೆಯಾಗುವುದು ನಿಶ್ಚಯ. ಸೋರೆಬುರುಡೆಯಲ್ಲಿ ನೀರನ್ನು ತರಬೇಕು. ಹಕ್ಕಿದೆಲೆಯಲ್ಲಿ ಉಣಬೇಕು—ಎಂದು ಮನಸ್ಸನ್ನು ದೃಢವಮಾಡಿಕೊಂಡು ಸರ್ವಸ್ವವನ್ನೂ ದಾನಮಾಡಬೇಕು. ಇಂತಹ ನಿಶ್ಚಯವಂ ಮಾಡಿದುದಾದರೆ ಸಜ್ಜನರೆಲ್ಲರೂ ನಿನ್ನನ್ನು ಮೆಚ್ಚುವರು. ಉಭಯಲೋಕಗಳಲ್ಲಿಯೂ ಕೀರ್ತಿಬಳೆಯುವ ಉಪಾಯವನ್ನು ಕೇಳುವಳಾಗು. ಅತರ್ಷಣದಿಂದ ದನಗಳು ಸತ್ತುಹೋದುವು. ನನಗೆ ಮಕ್ಕಳೇ ಆಗಲಿಲ್ಲ—ಎಂದು ಹೃದಯವನ್ನು ಕಠಿನವಮಾಡಿಕೊಂಡು ಆಶೆಯ ಸರ್ವಸ್ವವನ್ನೂ ಬಿಡಬೇಕು. ಈ ಪ್ರಪಂಚದ ವಿಷಯಸುಖವೆಂಬುದು ತುಚ್ಛ. ಅದನ್ನು ನಿಶ್ಶೇಷವಾಗಿ ಉಗಿದುಬಿಡಬೇಕು. ಈಪ್ರಕಾರದಿಂದ ನಡೆಯುವವರಿಗೆ ಸನಕಾದಿಗಳು ಅಪೇಕ್ಷಿಸುವಂತಹ ಪರಮಾನಂದವೆಂಬ ಧನವು ಪ್ರಾಪ್ತವಾಗುವುದು. ಬಹುಸಾಹಸದಿಂದ ಬಿಡುವಂತವರಿಗೆ ಭವಬಂಧನದ ಬಿಡುಗಡೆಯುಂಟಾಗುವುದು. ಬಳಿಕ ಬಹುಪರಿಶುದ್ಧರಾಗಿ ವೈಕುಂಠದ ಮಾರ್ಗವನ್ನು ಹಿಡಿದು ನಡೆಯುವರು. ಆ ಸುಖವು ನಮಗಿರ್ವರಿಗೂ ಉಂಟಾಗುವುದು. ದೇವತೆಗಳೂ ಋಷಿಗಳೂ ಉತ್ಸವವಂ ಮಾಡುವರು. ವಿಷ್ಣುದೂತರು ನಮ್ಮನ್ನು ರತ್ನಖಚಿತವಾದ ವಿಮಾನದಲ್ಲಿ ಸನ್ಮಾನದಿಂದ ಕುಳ್ಳಿರಿಸಿ ಕರೆದುಕೊಂಡು ಹೋಗುವರು. ಸಂತರೂ ಮಹಾಂತರೂ ಸಿದ್ಧರೂ ಕಿನ್ನರರೂ ಇದಿರುಗೊಳ್ಳುವರು. ಗಂಧರ್ವರು ಭಗವನ್ನಾಮಘೋಷಪುರಸ್ಸರವಾಗಿ ಸುಸ್ವರದಿಂದ ಹಾಡುತ್ತ ಗಾಯನವಂ ಮೆರೆವರು. ಮುಂದೆ ತಾಯ್ತಂದೆಗಳನ್ನು ಇದಿರಲ್ಲಿ ಕಾಣುವುದೂ ಅವರನ್ನು ಆಲಿಂಗಿಸಿಕೊಂಡು ಅವರ ಪಾದಗಳನ್ನು ದೃಢವಾಗಿ ಹಿಡಿಯುವಳಾಗು. ಅವರ ಸಮೀಪದಲ್ಲಿಯೇ ಇರೋಣ. ಆ ಸುಖವಂ ಅನುಭವಿಸುವುದಕ್ಕೋಸ್ಕರ ಚಿತ್ತವಂ ಸ್ಥಿರಮಾಡಬೇಕು. ಪ್ರಪಂಚದ ವ್ಯಾಪಾರಗಳನ್ನು ಬಿಟ್ಟು ದೃಢವಾಗಿ ಪರಮಾರ್ಥವನ್ನು ಸಂಪಾದಿಸಬೇಕು. ನೀನು ದೇವರನ್ನು ನೋಡುವುದಕ್ಕೆ ಸಾಹಸವಂ ಮಾಡು. ನಶ್ವರಪದಾರ್ಥಗಳಲ್ಲಿ ಆಶೆಯನ್ನು ಇಡಬೇಡ. ಪ್ರಾತಃಕಾಲದಲ್ಲಿ ಬೇಗನೆ ಎದ್ದು ಸ್ನಾನವಂ ಮಾಡು. ನಾಳೆ ದ್ವಾದಶಿ, ಸೋಮವಾರ; ಪರ್ವದಿವಸ. ಉತ್ತಮವಾಗಿಕೂಡಿರುವುದು. ಆದುದರಿಂದ ಮನಸ್ಸನ್ನು ಶುದ್ಧಮಾಡಿ ಬ್ರಾಹ್ಮಣರನ್ನು ಕರೆದು ಸಂಕಲ್ಪವಂ ಮಾಡಿ ಅವರಿಂದ ಮನೆಯಂ ಸೂರೆಗೊಳಿಸು. ಮುಂದೆ ಅನ್ನವಸ್ತ್ರಕ್ಕೆ ಹೇಗೆ?—ಎಂದು ಆಲೋಚನೆಯಂ ಮಾಡಬೇಡ. ತಾಯಿಯೂ ತಂದೆಯೂ ಪ್ರಾಣಸಖನೂ ಆದ ಪಾಂಡುರಂಗನು ಶಿರಸ್ಸಿನ ಮೇಲೆ ಇರುವನು. ಆತನೇ ಬೇಕಾದುದೆಲ್ಲವನ್ನೂ ತಂದುಕೊಡುವನು ಆಚಿಹ್ನಂಗಳನ್ನು ನೀನೆ ಬಲ್ಲೆ. ಆಪಾಂಡುರಂಗನು ಹೃದಯದಲ್ಲಿ ಪ್ರಕಟನಾದುದರಿಂದ ವಿಷಯಸುಖವು ಸೇರದಂತಾಯಿತು ಸಗುಣರೂಪವಂ ಕಣ್ಣಿಂದ ನೋಡಲು, ಅನೇಕವಾದ ಮನಸ್ಸಿನ ಎಳೆತಗಳೆಲ್ಲವೂ ತಪ್ಪಿಹೋಗಾವು. ಕನಕವೂ ಕಾಂತೆಯೂ ಇತರವಸ್ತುವೂ ಯಾರ ಮನಸ್ಸಿಗೆ ಬೇಡವೋ ಆ ನಾವು ಪಾಷಾಣಕ್ಕಿಂತಲೂ ಕಡೆಯಾಗಿರುವೆವು.

ಹಸಿವುಬಾಯಾರಿಕೆಗಳು ಬಾಧಿಸವು. ನಂಟರೂ ಸಜ್ಜನರೂ ತರುಗುಲ್ಮಲತಾದಿಗಳೂ ಸಮಭಾವದಿಂದಲೇ ಕಾಣುವುವು. ರುಕ್ಮಿಣೀಪತಿಯು ಸಮೀಪದಲ್ಲಿಯೇ ಇರುವುದರಿಂದ ಸುಖದುಃಖಗಳು ಸಮವಾಗಿಯೇ ತೋರುವುವು. ನಶ್ವರವಿಷಯಗಳ ಭ್ರಾಂತಿಯಂ ಬಿಟ್ಟು ಪ್ರೀತಿಯಿಂದ ಭಜನವಂಮಾಡಬೇಕು. ಸದ್ಗುರುಗಳ ಕೃಪೆಯಿಂದ ಇದನ್ನು ಸ್ವಾಮಿಯು ನನ್ನ ಬಾಯಲ್ಲಿ ನುಡಿಯಿಸಿದನು. ನೀನೂ ಆದರಗೊಂಡು ಕೇಳದೆ. ಆದರೆ ಈಪ್ರಕಾರದಿಂದ ನಡೆದು ತೋರುವಳಾಗು. ರುಕ್ಮಿಣೀಪತಿಯು ಪ್ರಸನ್ನನಾಗಿ ನನ್ನ ಅಂಗೀಕಾರವಂ ಮಾಡಿರುವನು. ಇನ್ನುಮೇಲೆ ಸರ್ವಪ್ರಕಾರದಲ್ಲಿಯೂ ಬೇರೆಯಾಗಲಾರದು. ಈ ಮಾತಿನಲ್ಲಿ ದೃಢವಾದ ವಿಶ್ವಾಸವನ್ನು ಇಟ್ಟು ಶರಣಾಗತೆಯಾದರೆ ನಿರಾಯಾಸವಾಗಿ ಇದೇ ನಿನಗೆ ಉಪದೇಶವಾಯಿತು. ಕಸವನ್ನು ಬಳಿದು ಸಾರಿಸಿ ತುಳಸಿಯ ಬೃಂದಾವನಕ್ಕೆ ಶೃಂಗಾರವಂ ಮಾಡು. ಭಕ್ತಿಯಿಂದ ಬ್ರಾಹ್ಮಣರನ್ನು ಪೂಜಿಸು. ಮನೋವಾಕ್ಕಾಯಗಳಿಂದ ವಿಷ್ಣುಭಕ್ತರ ದಾಸಿಯಾಗು. ವಿಟ್ಠಲನಾಮವನ್ನೇ ಪ್ರೇಮಭರಿತೆಯಾಗಿ ಹಗಲೂ ಇರುಳೂ ಜಪಿಸುತಿರು—ಎಂದು ತುಕ್ಕೋಬನು ತನ್ನ ಸ್ತ್ರೀಗೆ ಉಪದೇಶವಂ ಮಾಡಿದನು.

ಅದರ ಆಶಯವು ಸಂಪೂರ್ಣವಾಗಿ ನನ್ನ ಅನುಸಂಧಾನಕ್ಕೆ ಬಂದುದು. ಸಂತರು ಆದರನುಭವವಂ ಬಲ್ಲರು. ಅದನ್ನು ಈಗ ಭಾಗವತಾಗ್ರೇಸರನಾದ ತುಕ್ಕೋಬನು ಹನ್ನೊಂದು ಅಭಂಗಗಳ ಮುಖದಿಂದ ಹೇಳಿದನು. ಅವುಗಳ ಅರ್ಥವು ಸಾಧಾರಣವಾಗಿ ನನ್ನಿಂದ ಹೇಳಲ್ಪಟ್ಟಿತು. ಮೂಲದ ಆ ಪದಗಳನ್ನು ನೋಡಿ ಅವುಗಳ ಅರ್ಥವನ್ನು ಮನಸ್ಸಿಗೆ ತಂದು ಯಾರು ಆಪ್ರಕಾರದಿಂದ ನಡೆಯುವರೋ ಪುಣ್ಯವಂತರಾದ ಅವರು ಸಂಸಾರಸಾಗರವಂ ದಾಂಟುವರು; ನಿಶ್ಚಯ. ತನ್ನ ಕಾಂತೆಯಂ ನಿಮಿತ್ತಮಾಡಿಕೊಂಡು ತುಕ್ಕೋಬನು ಸಾಧಕರಿಗೆಲ್ಲರಿಗೂ ಉಪದೇಶಮಾಡಿದನು. ಯಾವುದರಿಂದ ಭವಪಾಶವು ಹರಿದುಹೋಗಲು ಶಾಂತಿಸುಖವು ಅನಾಯಾಸದಿಂದ ಕೈಸೇರುವುದೋ ಆ ಅರ್ಥವನ್ನು ಹೇಳಿದನು. ಚಕೋರಗಳ ಸಂಕಟವಂ ನೋಡಿ ಚಂದ್ರನು ಆಕಾಶದಲ್ಲಿ ಉದಯಿಸಲು, ಪ್ರಕಾಶವು ಯಾರಿಗೂ ವಂಚನೆಯಂ ಮಾಡದೆ ಸರ್ವರಿಗೂ ಸಮವಾದ ಸ್ಥಿತಿಯಿಂದ ಎಂತು ಇರುವುದೋ ಅಂತು ತುಕ್ಕೋಬನು ಕನಿಕರದಿಂದ ತನ್ನ ಕಾಂತೆಗೆ ಮಾಡಿದ ಉಪದೇಶದ ಅರ್ಥವು ಇತರರಂ ಯಾರನ್ನೂ ಮರೆಮಾಂಚಲಿಲ್ಲ. ಯಾವ ಸ್ವಭಾವವು ಆತನಿಗೆ ಇದ್ದುದೋ ಅದು ದೃಢವಾಗಿಯೇ ಆತನಲ್ಲಿ ನಿಂತಿತು. ಆತನ ವಚನಗಳು ಕಿವಿಗಳಲ್ಲಿ ಬೀಳುವುದೂ ಆಕೆಯ ಮನಸ್ಸು ದ್ರವಿಸಿತು. ಕಥಾನುಸಂಧಾನದಲ್ಲಿ ಪ್ರೀತಿಯನಿಟ್ಟು ಶ್ರವಣಮಾಡುತ್ತ ಕುಳಿತಳು. ತುಕ್ಕೋಬನು ಇನ್ನೂ ಹರಿಯ ಗುಣಗಳಂ ವರ್ಣಿಸುತ್ತ ನಾಲ್ಕುಯಾಮದಲ್ಲಿಯೂ ಜಾಗರವನ್ನು ಮಾಡಿ ಅರುಣೋದಯವಾಗುವುದೂ ಸ್ವಾಮಿಗೆ ಆರತಿಯಂ ಬೆಳಗಿದನು.

ಬಳಿಕ ತುಕ್ಕೋಬನ ಮಡದಿಯು ಚಿತ್ತಶುದ್ಧಿಯಂ ತಾಳಿ ಇಂದ್ರಾಣಿಯ ತೀರಕ್ಕೆ ಹೋಗಿ ಸ್ನಾನವಂ ಮಾಡಿ ಮನೆಗೆಬಂದು ಬ್ರಾಹ್ಮಣರಂ ಕರೆದು ಸಂಕಲ್ಪವಂ ಮಾಡಿ ನಿಷ್ಕಾಮಬುದ್ಧಿಯಿಂದ ಮನೆಯ ಸರ್ವಸ್ವವನ್ನೂ ಅವರಿಗೆ ಸೂರೆಮಾಡಿದಳು. ಬ್ರಾಹ್ಮಣರೆಲ್ಲರೂ ಪಾತ್ರೆಗಳನ್ನೂ ಧನಗಳನ್ನೂ ಧಾನ್ಯಗಳನ್ನೂ ವಸ್ತ್ರಗಳನ್ನೂ ತೆಗೆದುಕೊಂಡು ಹೋದರು. ಬಳಿಕ ಒಬ್ಬ ಜಟಾಧಾರಿಯಾದ ಸಂನ್ಯಾಸಿಯು ಬಂದು ಮನೆಯಲ್ಲಿ ಹುಡುಕಿನೋಡಿ ಏನೂ ದೊರೆಯದೆ ಇದ್ದುದರಿಂದ ಒಲೆಯಲ್ಲಿ ಇದ್ದ ಬೂದಿಯನ್ನು ತೆಗೆದುಕೊಂಡು ಮೈಗೆ ಬಳಿದುಕೊಂಡನು. ಅದನ್ನು ಕಂಡು ಎಲ್ಲರೂ—ಹದಿನಾಲ್ಕು ರತ್ನಗಳನ್ನು ಹಂಚಿಕೊಳ್ಳುವಾಗ ಶಂಕರನಿಗೆ ಹಾಲಾಹಲವು ದೊರೆತಂತೆ ಇವನಿಗೆ ಬೂದಿಯು ದೊರೆಯಿತು. ಇವನು ಅದೃಷ್ಟಹೀನನು—ಎಂದು ನಗುತಿದ್ದರು.

ತುಕ್ಕೋಬನು ಇಷ್ಟು ಕೆಲಸವನ್ನೂ ಮಾಡಿ ಹೊರಗೆ ಹೊರಟನು. ಮನೆಯಲ್ಲಿ ತಿಲಮಾತ್ರವೂ ಅನ್ನವಿಲ್ಲವೆಂದು ಆತನ ಮಡದಿಯು ವ್ಯಸನಪಡುತಿದ್ದಳು. ಹಿಂದಣ ದಿವಸ ಏಕಾದಶಿ. ಎಲ್ಲರಿಗೂ ಉಪವಾಸವಾಗಿದ್ದಿತು. ಮಕ್ಕಳು ಮರಿಗಳು ಕ್ಷುಧೆಯಿಂದ ಪೀಡಿತರಾಗಿದ್ದರು. ಏನಮಾಡಬೇಕೆಂದು ಚಿಂತಿಸುತಿದ್ದಳು.

ಆಗ ಜಗಜ್ಜನನಿಯಾದ ರುಕ್ಮಿಣಿಯು ಅಪೂರ್ವ ಹೊಲತಿಯ ರೂಪವನ್ನು ತಾಳಿ ತುಕ್ಕೋಬನಂ ವಸ್ತ್ರವನ್ನು ಬೇಡಬೇಕೆಂದು ಆಲೋಚಿಸಿ ಹೊರಟು ಆತನಂ ಕಂಡು—ಬ್ರಾಹ್ಮಣರಿಗೆ ಮನೆಯ ಸರ್ವಸ್ವವನ್ನೂ ಸೂರೆಗೊಳಿಸಿದಿರಿ. ಇನ್ನೇನಾದರೂ ಉಳಿದಿದ್ದರೆ ನನಗೆ ಕೊಡಬೇಕು-ಎಂದು ಯಾಚಿಸಿದಳು.

ತುಕ್ಕೋಬನು ಮನೆಗೆ ಬಂದು ಹಿಂದೆ ಹಿತ್ತಲಲ್ಲಿ ಒಣಗುವುದಕ್ಕೆ ಕಟ್ಟಿದ್ದ ಸೀರೆಯನ್ನು ಕಂಡು ಅದನ್ನು ಎಳೆದು ಆಕೆಗೆ ಕೊಟ್ಟು ಹೊರಟುಹೋದನು. ಅದನ್ನು ಕಂಡು ಊರಜನಗಳು ವಿಸ್ಮಿತರಾಗಿ—ಈತನು ಸಂಸಾರಕ್ಕೆ ನೀರಂ ಬಿಟ್ಟನು. ಈತನ ವ್ಯಾಪಾರವು ವಿಪರೀತವಾಯಿತು-ಎಂದರು. ಈ ಸುದ್ದಿಯನ್ನು ಆತನ ಮಡದಿಯು ಕೇಳಿ ಕ್ರೋಧಭರಿತೆಯಾಗಿ—ನನ್ನ ಪ್ರಾಕ್ತನಕರ್ಮವು ವಿಪರೀತವಾದುದು. ನಾನು ಜನಗಳಲ್ಲಿ ಅಪಕೀರ್ತಿಗೊಳಗಾದೆನು—ಎಂದು ವ್ಯಸನಪಡಲಾರಂಭಿಸಿದಳು. ಆಗ ನೆರೆಹೊರೆಯ ಹೆಂಗಸರೆಲ್ಲರೂ ಬಂದು ಅಂಗಳದಲ್ಲಿ ಸೇರಿದರು. ಅವರನ್ನು ಕುರಿತು-ಅಕ್ಕಂದಿರಾ! ಏನಹೇಳಲಿ? ಮನಸ್ಸು ತಲ್ಲಣಿಸುತ್ತಿರುವುದು. ಈ ದುಃಖವನ್ನು ಯಾರೊಡನೆ ಹೇಳಿಕೊಳ್ಳಲಿ? ನನ್ನ ಪತಿಯು ಎರಡುತಿಂಗಳವರೆಗೆ ಊರಲ್ಲಿಯೇ ಇದ್ದೂ ಮನೆಯಕಡೆ ಇಣಿಕಿನೋಡಲಿಲ್ಲ. ಆಗ ಊರಜನರು ಹಿಂದೆಯೂ ಮುಂದೆಯೂ ಮನಸ್ಸುಬಂದಂತೆ ಸಣ್ಣಮಾತುಗಳನ್ನು ಆಡುತ್ತಿದ್ದರು. ಅದನ್ನು ಕೇಳಿ ಸೈರಿಸಲಾರದೆ ನಿನ್ನೆದಿನ ಹೋಗಿ ಸಮಾಧಾನವನ್ನು ಮಾಡಿ ಮನೆಗೆ ಕರೆದುತಂದೆನು. ರಾತ್ರಿ ಹರಿಕೀರ್ತನೆಯನ್ನು ಆರಂಭಿಸಿ ನಾನಾದೃಷ್ಟಾಂತಗಳನ್ನು ಹೇಳಿ ನನ್ನನ್ನು

ಮರುಳುಮಾಡಿ, ತಾಯ್ತಂದೆಗಳು ರುಕ್ಮಿಣೀವಿಟ್ಠಲರು. ಅವರ ಪಾದಂಗಳಂ ನೆನೆಯುತ್ತಿರು. ಅವರು ಸುಲಭವಾಗಿ ಅನ್ನವಸ್ತ್ರಗಳಂ ಕೊಡುವರು–ಎಂದು ಹೇಳಿದನು. ನಾನು ಆ ಮಾತುಗಳನ್ನು ನಂಬಿ ಮನೆಯಲ್ಲಿದ್ದ ಧನಧಾನ್ಯಪಾತ್ರಾದಿಗಳೆಲ್ಲವನ್ನೂ ಬ್ರಾಹ್ಮಣರಿಗೆ ಸೂರೆಕೊಟ್ಟು ಉದಾಸೀನೆಯಾಗಿ ಕುಳಿತೆನು. ಉಟ್ಟಸೀರೆಯನ್ನು ಒಗೆದು ತಂದು ಹಿತ್ತಲಲ್ಲಿ ಒಣಗುವುದಕ್ಕೆ ಕಟ್ಟಿರಲು, ಅದನ್ನು ಎಳೆದು ಹೊಲತಿಗೆ ಕೊಟ್ಟನು. ಇವನ್ನು ನೀವೆ ಕಂಡಿರಲ್ಲಾ ! ನಾನು ಪರರ ಮನೆಯಲ್ಲಿ ಕೆಲಸವಂ ಮಾಡಿ ದುಡ್ಡನ್ನು ಸಂಪಾದಿಸಿ ಮಕ್ಕಳನ್ನು ಸಾಕುತ್ತ ಮನೆಯಲ್ಲಿ ಇದ್ದೆನು. ಆತನ ಪ್ರಾರಬ್ಧಕರ್ಮವಂತು ಹೊರಗೆ ಅನುಕೂಲವಾಗಿರುವುದು. ನಾನು ಇದ್ದಂತೆ ಇದ್ದುಕೊಂಡು ಕಾಲವಂ ಕಳೆಯದೆ ಗ್ರಹಚಾರವಶದಿಂದ ದುರ್ಬುದ್ಧಿಯಂ ಮಾಡಿ ಆತನನ್ನು ಮನೆಗೆ ಕರೆದುತಂದು ಸರ್ವಸ್ವವನ್ನೂ ಕಳೆದುಕೊಂಡೆನು. ರುಕ್ಮಿಣೀಪಾಂಡುರಂಗರ ಪಾದಗಳನ್ನು ಹಗಲೂ ರಾತ್ರಿಯೂ ಸ್ಮರಿಸುತಿದ್ದರೆ, ಅವರೇ ಅನ್ನವಸ್ತ್ರಗಳಂ ಕೊಡುವರೆಂದು ಆತನ ಮಾತಿನ ನಂಬಿಕೆಯಿಂದ ಎರಡುಮೂರಾವೃತ್ತಿ ಸ್ಮರಿಸುತ ಬಂದೆನು. ತತ್ಕಾಲಕ್ಕೆ ದಾರಿದ್ರ್ಯವು ಬಂದೊದವಿತು. ಮಕ್ಕಳುಮರಿಗಳು "ಅನ್ನ ಅನ್ನ" ಎಂದು ತಲ್ಲಣಿಸುತ್ತ ಇರುವರು. ಈತನು ಇಂತು ಘಾತವಂ ಮಾಡಿದನೆಂದು ಮನಸ್ಸು ಸಂತಪ್ತವಾಗಿದೆ. ಆದಕಾರಣ ಈಗ ನಾನು ದೇವಸ್ಥಾನಕ್ಕೆ ಹೋಗಿ ಮಾಡಬೇಕಾದ ಕಾರ್ಯವನ್ನು ಮಾಡುವೆನು. ಮನೆಯ ಯಜಮಾನನು ದೇವರ ಪಾದಗಳ ಮಹಿಮೆಯನ್ನು ಬಹುವಾಗಿ ಹೇಳಿರುವನು. ಅದನ್ನು ಈಗ ಧ್ವಂಸಮಾಡುವೆನು–ಎಂದು ನುಡಿದು ಥಟ್ಟನೆ ಹೊರಟು ಬಂದು ಪಾಷಾಣವನ್ನು ತೆಗೆದುಕೊಂಡು ಮಹಾದ್ವಾರದ ಸಮೀಪಕ್ಕೆ ಬರುತಿರಲು, ಭಕ್ತವತ್ಸಲನಾದ ಭಗವಂತನು ಅದನ್ನುತಿಳಿದು ದೇವಾಲಯದೊಳಗೆ ಗಡಗಡನೆ ನಡುಗಿ ಲೀಲೆಯನ್ನು ತೋರಿದನು.

ಯಾವನು ಮತ್ಸ್ಯರೂಪವನ್ನು ತಾಳಿ ಸಮುದ್ರದಲ್ಲಿ ಶಂಖಾಸುರನಂ ಕೊಂದನೋ, ಯಾವನು ಕೂರ್ಮರೂಪವಂ ಧರಿಸಿ ಬೆನ್ನಿನ ಮೇಲೆ ಮಂದರಪರ್ವತವನ್ನು ವಹಿಸಿದನೋ, ಯಾವನು ವರಾಹಾವತಾರವಂ ಮಾಡಿ ಕೋರೆಯಮೇಲೆ ಭೂಮಿಯಂ ಧರಿಸಿದನೋ, ಯಾವನು ಬಹುರಭಸದಿಂದ ಸ್ತಂಭದಲ್ಲಿ ಪ್ರಕಟನಾಗಿ ಮಹಾದೈತ್ಯನಾದ ಹಿರಣ್ಯಕಶಿಪುವಂ ಸೀಳಿದನೋ, ಬಲಿಚಕ್ರವರ್ತಿಯು ದಾನಾಭಿಮಾನದಿಂದ ಉಬ್ಬಿರಲು, ಯಾವನು ತ್ರಿವಿಕ್ರಮಾವತಾರವಂ ಮಾಡಿ ಅವನನ್ನು ಪಾತಾಳಕ್ಕೆ ತುಳಿದುಬಿಟ್ಟನೋ, ಯಾವನು ರೇಣುಕೆಯ ಉದರದಲ್ಲಿ ಪುಟ್ಟಿ ಸಕಲಪೃಥ್ವಿಯನ್ನೂ ಕ್ಷತ್ರಿಯಶೂನ್ಯವಾದುದನ್ನಾಗಿ ಮಾಡಿದನೋ, ಯಾವನು ಸಕಲದೇವತೆಗಳನ್ನೂ ಜಯಿಸಿದ ರಾವಣನನ್ನು ರಾಮಾವತಾರವಂ ಮಾಡಿ ನಿಗ್ರಹಿಸಿದನೋ, ಯಾವನು ಶ್ರೀಕೃಷ್ಣನಾಗಿ ಕಂಸಚಾಣೂರಾದಿಮಹಾದೈತ್ಯರನ್ನು ಸಂಹರಿಸಿದನೋ, ಆ ಮಹಾಪ್ರತಾಪಶಾಲಿಯೆನಿಸಿದ ವೈಕುಂಠವಿಹಾರಿಯಾದ ರುಕ್ಮಿಣೀಕಾಂತನು ತುಕ್ಕೋಬನ ಹೆಂಡತಿಗೆ

ಭಯಪಟ್ಟು ನಡುಗುತ್ತಿದ್ದನು. ಮೈಯೆಲ್ಲವೂ ಬೆವರಿತು. ಇದನ್ನು ಕಂಡು ರುಕ್ಮಿಣಿಯು ವಿಸ್ಮಿತೆಯಾಗಿ—ಸ್ವಾಮಿಯೇ! ಇಂದು ನಿಮ್ಮ ಮನದಲ್ಲಿ ಚಿಂತೆಯುಂಟಾಗಿರುವಂತೆ ತೋರುವುದು. ಇದಕ್ಕೆ ಕಾರಣವೇನು? ಅಪ್ಪಣೆಯಾಗಬೇಕು—ಎನಲು, ಅದಕ್ಕೆ ವೈಕುಂಠನಾಥನು—ಪ್ರಿಯೆ! ತುಕ್ಕೋಬನ ಹೆಂಡತಿ ಕೋಪಗೊಂಡು ನನ್ನ ಪಾದಗಳನ್ನು ಒಡೆಯಬೇಕೆಂದು ಕೈಯಲ್ಲಿ ಪಾಷಾಣವಂ ತೆಗೆದುಕೊಂಡು ಬರುತ್ತಿರುವಳು. ಇದರ ಪರಿಹಾರವೇನೂ ತೋರಲಿಲ್ಲ. ಇದಕ್ಕಾಗಿ ಚಿಂತಿಸುತ್ತಿರುವೆನು—ಎಂದನು. ರುಕ್ಮಿಣಿಯು ಇದಕ್ಕೆ ಚಿಂತೆಯೇನು? ಇಲ್ಲಿಂದ ಸ್ವಲ್ಪಕಾಲ ಎಲ್ಲಿಗಾದರೂ ಹೋಗಿ ಇದ್ದು ಮತ್ತೆ ಬರಬಹುದಲ್ಲವೆ?—ಎನಲು, ಜಗಜ್ಜೀವನನು—ನಾನು ನನ್ನ ಅಧೀನನಾಗಿಲ್ಲ. ಭಕ್ತರ ಅಧೀನನಾಗಿರುವೆನು. ಅವರ ಆಜ್ಞೆಯಂತೆ ನಡೆಯುತ್ತಿರುವೆನು. ಬಾಲಕನು ಬಂದು ತಂದೆಯ ಸೆರಗನ್ನು ಹಿಡಿದರೆ ಬಲಾತ್ಕಾರದಿಂದ ಬಿಡಿಸಿಕೊಳ್ಳಲು ಆಗುವುದಿಲ್ಲ. ಅವನು ತನ್ನ ಮೋಹದಿಂದ ಕಟ್ಟುಬಿದ್ದಿರುವನು. ತುಂಬಿಯು ತನ್ನ ಮುಖದಿಂದ ಮರವನ್ನು ಕೊರೆಯುವುದಾದರೂ ಅನುರಾಗವಿರುವುದರಿಂದ ಕಮಲದಳವನ್ನು ಭೇದಿಸಲಾರದು. ನನ್ನ ಗತಿಯೂ ಅಂತು ಇರುವುದು. ನಾನು ಇಲ್ಲಿಂದ ಹೊರಟುಹೋದರೆ ತುಕ್ಕೋಬನ ಮನಸ್ಸು ಭಗ್ನವಾಗುವುದು. ಆತನು ಸಗುಣಮೂರ್ತಿಯನ್ನು ಕಾಣದಿದ್ದರೆ ತನ್ನ ಪ್ರಾಣವನ್ನೇ ಬಿಟ್ಟಾನು. ಆತನ ಮನೋಗತದಂತೆ ನಿಂತರೆ ಆತನ ಹೆಂಡತಿಯು ಬಂದು ಈಗಲೇ ಕಾಲಮೇಲೆ ಕಲ್ಲನ್ನು ಇಡುವಳು. ಇದರಿಂದ ಚಿಂತೆಯುಂಟಾಗಿದೆ-ಎಂದನು.

ಅತ್ತಲು ತುಕ್ಕೋಬನ ಹೆಂಡತಿಯು ದೇವಾಲಯವನ್ನು ಕುರಿತು ಹೊರಟು ಬಹುಕೋಪದಿಂದ ಬೇಗಬೇಗನೆ ಬರುತ್ತಿರಲು, ಮಾರ್ಗದಲ್ಲಿ ತುಕ್ಕೋಬನು ಕಂಡು ನೀನು ಎಲ್ಲಿಗೆ ಹೋಗುತ್ತಿರುವೆ? ನನಗೆ ಹೇಳು—ಎಂದು ಬೆಸಗೊಳ್ಳಲು, ಆಕೆ--ನಿನ್ನ ತಂದೆಯಾದ ರುಕ್ಮಿಣೀಕಾಂತನು ತನ್ನ ಪಾದವಂ ಸ್ಮರಿಸುತ್ತಿರುವ ನನಗೆ ಬಹು ಘಾತವನ್ನು ಮಾಡಿದನು. "ಪಾದವನ್ನೇ ಸ್ಮರಿಸುತ್ತಿರು. ಆತನೇ ಅನ್ನವಸ್ತ್ರಗಳಂ ಕೊಡುವನು" ಎಂದು ನೀನು ನನಗೆ ಉಪದೇಶವಂ ಮಾಡಿದೆ. ನಾನು ಆ ಮಾತಿನಲ್ಲಿ ವಿಶ್ವಾಸವನಿಟ್ಟು ಬ್ರಾಹ್ಮಣರಿಗೆ ಸರ್ವಸ್ವವಂ ಕೊಟ್ಟು ಮನೆಯಂ ಸೂರೆಗೊಳಿಸಿದೆನು. ಮಕ್ಕಳು ಮರಿಗಳು ಅನ್ನವಸ್ತ್ರಗಳಿಲ್ಲದೆ ಅನಾಥರಾದರು. ಆತನ ಪಾದವು ಇಂತಹ ಘಾತವಂ ಮಾಡಿದುದರಿಂದ ಪಾಷಾಣವಂ ತೆಗೆದುಕೊಂಡು ಹೋಗಿ ಸಿಟ್ಟಿಯದಿಂದ ಆ ಪಾದವನ್ನು ಒಡೆದುಬಿಡುವೆನು—ಎಂದು ಹೇಳಿದಳು. ಆಕೆಯ ಮಾತಂ ಕೇಳಿ ತುಕ್ಕೋಬನು ಮನದಲ್ಲಿ ಸಂಕಟಗೊಂಡು ಕಣ್ಣೀರಿಯಂ ಸುರಿಯಿಸುತ್ತ ತನ್ನಲ್ಲಿ, ಇವಳೊಡನೆಯೆ ಹೋಗಿ ಮೃದುವಾದ ಮಾತನ್ನೇ ಆಡಬೇಕು. ಕೋಪವು ತಗ್ಗದೆ ಇದ್ದರೆ ಆ ಕಲ್ಲನ್ನು ತನ್ನ ಮೇಲೆ ಹಾಕು-ಎನ್ನಬೇಕು-ಎಂದು ಆಲೋಚನೆಯಂ ಮಾಡಿ ಆಕೆಯೊಡನೆಯೇ ಹೊರಟನು.

ಅದನ್ನು ತಿಳಿದು ವೈಕುಂಠಪತಿಯು ನಡುಕವಿಲ್ಲದೆ ಸ್ವಸ್ಥನಾಗಿ ನಿಂತನು. ಆಗ ರುಕ್ಮಿಣಿಯು ಕಂಡು ವಿಸ್ಮಿತೆಯಾಗಿ ಸ್ವಾಮಿಯಂ ಕುರಿತು–ಇದೇನು ? ಇದು ವರೆಗೂ ನಡುಗುತ್ತಿದ್ದಿರಿ. ಈಗ ಸ್ವಸ್ಥರಾಗಿರುವಿರಿ. ಇದು ನನಗೆ ಆಶ್ಚರ್ಯಕರವಾಗಿರುವುದು. ಈಗ ಯಾರ ಆಶ್ರಯವುಂಟಾಯಿತು ? ನಿಮ್ಮ ಪ್ರಾಣಸಖನು ಯಾವನು ಬಂದನು ?–ಎಂದು ಬೆಸಗೊಳಲು, ಅದಕ್ಕೆ ದೀನದಯಾಳುವು–ಇನ್ನೊಂದು ಬಗೆಯ ಅರಿಷ್ಟವೇ ಬರುವುದಾಗಿ ಇದೆ. ತುಕ್ಕೋಬನು ನನ್ನ ಪ್ರೇಮಳಭಕ್ತನು ; ಆದುದರಿಂದ ನನ್ನಲ್ಲಿ ಅವನಿಗೆ ಅಂತಃಕರಣವುಂಟಾಯಿತು. ನನ್ನ ಪಾದಗಳನ್ನು ತನ್ನ ಕಾಂತೆಯು ಒಡೆದಾಳೆಂದು ಹಿಂದೆಯೇ ಬರುತಿರುವನು. ಆಕಲ್ಲನ್ನು ನನ್ನ ಮೇಲೆ ಹಾಕೆಂದು ಆಕೆಯಂ ಕುರಿತು–ನುಡಿವನು. ಆದುದರಿಂದ ಈಗ ಅವನ ಚಿಂತೆಯೇ ಹತ್ತಿದೆ. ಇದಕ್ಕೆ ಏನುಪಾಯವು ಮಾಡತಕ್ಕದೋ ನನಗೆ ತೋರುವುದಿಲ್ಲ. ಆಕೆಯು ಭಕ್ತಿವಿರೋಧವುಳ್ಳವಳು. ವಿವೇಕವಿಚಾರವೇನೂ ಇಲ್ಲ. ತುಕ್ಕೋಬನ ಕಾಲಿನ ಮೇಲೆ ಕಲ್ಲನ್ನು ಹಾಕಾಳು. ಅವನ ಕಾಲು ನೊಂದೀತು. ಬಳಿಕ ಕೀರ್ತನದಲ್ಲಿ ಎಂತು ಕುಣಿದಾನು-ಎಂದು ಚಿಂತೆಯುಂಟಾಗಿದೆ–ಎಂದನು. ರುಕ್ಮಿಣಿಯು–ಸ್ವಾಮಿಯೆ ! ನೀವು ಏಕೆ ವ್ಯಾಕುಲತೆಗೊಳ್ಳುವಿರಿ ? ನಿಮ್ಮ ಕೃಪೆಯು ಯಾವನ ಮೇಲೆ ಉಂಟಾಗುವುದೋ ಅವನಿಗೆ ಕಾಲನೂ ಅಂಜುವನು. ಸೂರ್ಯನು ಪ್ರಸನ್ನನಾದರೆ ಅಂಧಕಾರವು ಎಂತು ಇರದೋ, ಕ್ಷೀರಸಾಗರವು ಪ್ರಾಪ್ತವಾಗಿರಲು, ಹಸಿವು ಎಂತು ಇರದೋ ಅಂತು ನಿಮ್ಮ ನಾಮಾಮೃತವು ತುಕ್ಕೋಬನ ಮುಖದಲ್ಲಿ ಇರಲು, ಅವನಿಗೆ ಯಾವ ವಿಷಯದಲ್ಲಿಯೂ ಭಯವಿರದು-ಎಂದಳು.

ಅಷ್ಟುಹೊತ್ತಿಗೆ ತುಕ್ಕೋಬನ ಹೆಂಡತಿಯು ತಲೆಯ ಮೇಲೆ ಕಲ್ಲಂ ಹೊತ್ತುಕೊಂಡು ಮಹಾದ್ವಾರಕ್ಕೆ ಬಂದಳು. ಆಕೆಯು ಒಳಗೆ ಪ್ರವೇಶಿಸಲು, ತುಕ್ಕೋಬನ ಕಾಲ ಮೇಲೆ ಎಲ್ಲಿ ಕಲ್ಲಂ ಹಾಕುವಳೋ ಎಂದು ಬಗೆದು ರುಕ್ಮಿಣಿಯು ಥಟ್ಟನೆ ಬಾಗಿಲಂ ಮುಚ್ಚಿಕೊಂಡು ತುಕ್ಕೋಬನಂ ಹೊರಗೆ ತಡೆದಳು.

ಪಸುಳೆಯು ಬೆಂಕಿಯಂ ಹಿಡಿಯುವುದಕ್ಕೆ ಹೋದರೆ ತಾಯಿಯು ಎಂತು ತಪ್ಪಿಸುವಳೋ ಅಂತು ಸ್ವಾಮಿಯು ವಿಪತ್ತುಗಳಿಂದ ತಪ್ಪಿಸಿ ಭಕ್ತರಂ ಸಂರಕ್ಷಿಸುವನು.

ಆಗ ಹೊರಗೆ ನಿಂತಿದ್ದ ತುಕ್ಕೋಬನು ಮನದಲ್ಲಿ–ಶ್ರೀರುಕ್ಮಿಣೀಪತಿಯು ನನ್ನ ಮಡದಿಗೆ ಪ್ರಸನ್ನನಾಗಿ ನನ್ನ ಮೇಲೆ ಕೋಪಿಸಿಕೊಂಡುದರಿಂದ ಬಾಗಿಲು ಅಡ್ಡವಾಗಿ ಬಂದಿತೋ, ಇಲ್ಲದಿದ್ದರೆ ರಾತ್ರಿ ಕೀರ್ತನದಲ್ಲಿ ನಿದ್ರೆಯಿಲ್ಲದೆ ಕಾದು, ಈಗ ನಾನು ಬಂದರೆ ಗದ್ದಲವಂ ಮಾಡಾನೆಂದು ವಿಶ್ರಾಂತಿಗೊಳ್ಳುವುದಕ್ಕೋಸ್ಕರ ನನ್ನಂ ಹೊರಗೆ ತಡೆದನೋ, ಇಲ್ಲದಿದ್ದರೆ ನನ್ನ ಮೇಲೆ ಸಿಟ್ಟಯುವಾಗಿಯೇ ಕೋಪಗೊಂಡಿರುವನೋ, ನನ್ನ ಮಡದಿಯ ಭಕ್ತಿವಿಶೇಷದಿಂದ ಆಕೆಗೆ ಪ್ರಸನ್ನನಾಗಿ ನನ್ನನ್ನು ಹೊರವಾಡಿದನೋ-ಎಂದು ಬಗೆವಗೆಯಿಂದ ಬಗೆದು ರೋದನವಂ ಮಾಡುತಿದ್ದನು.

ಆತನ ಪ್ರೇಮವು ವರ್ಣಿಸುವುದಕ್ಕೆ ಅಸದಳವು. ಆಗ ಥಟ್ಟನೆ ಬಾಗಿಲು ತೆರೆದುದು. ಒಳಗೆ ಜಗಜ್ಜನನಿಯಾದ ರುಕ್ಮಿಣಿಯು ತುಕೋಬನ ಮಡದಿಯಂ ಕುರಿತು-ಸ್ವಾಮಿಯು ಏನಪರಾಧವಂ ಮಾಡಿದರೆಂದು ಇವರ ಕಾಲನ್ನು ಒಡೆಯುವುದಕ್ಕೆ ನಿಂತಿರುವೆ? ನಿನಗೆ ಏನುಬೇಕು? ಅದಂ ನನ್ನ ಬೇಡು; ಸಂಕೋಚಪಡಬೇಡ-ಎನಲು, ಆಕೆ ರುಕ್ಮಿಣೀದೇವಿಯಂ ಕುರಿತು-ಜನನಿಯೇ! ಕೇಳು. ಒಂದೆರಡಾವೃತ್ತಿ ಸ್ವಾಮಿಯು ಪಾದವಂ ನೆನೆದೆನು. ಅದರಿಂದ ಮನೆಯಲ್ಲಿ ಅನುಕೂಲ್ಯವೇನೂ ಉಂಟಾಗಲಿಲ್ಲ. ಇದ್ದ ಸಂಸಾರದ ಅನುಕೂಲ್ಯವೆಲ್ಲವನ್ನೂ ಮಾರಿದನು. ಮನೆಯಲ್ಲಿ ಅನ್ನವಸ್ತ್ರಗಳಿಲ್ಲದೆ ಮಕ್ಕಳು ಮರಿಗಳೆಲ್ಲರೂ ಅಳುವರು; ಅದರಿಂದ ನನ್ನ ಮನಸ್ಸಿಗೆ ಸಂತಾಪವುಂಟಾಗಿದೆ. ಈ ಪಾದಗಳು ಇಷ್ಟೊಂದು ಘಾತವಂ ಮಾಡಿದುದರಿಂದ ಇವನ್ನು ನಾನು ಘಾತಪಡಿಸುವೆನು-ಎಂದಳು. ಅದಕ್ಕೆ ರುಕ್ಮಿಣಿಯು-ಸಂಸಾರದಲ್ಲಿ ನಿನಗೆ ಏನು ಬೇಕಾಗುವುದೋ ಅದನ್ನು ನಾನು ಪೂರಣಮಾಡುವೆನು-ಎಂದು ನುಡಿದು, ಸೀರೆಯನ್ನೂ ಕುಪ್ಪಸವನ್ನೂ ಒಂದುಹಿಡಿಯು ದ್ರವ್ಯವನ್ನೂ ಆಕೆಗೆ ಕೊಟ್ಟಳು. ರುಕ್ಮಿಣಿಯು ಅಂತುಕೊಡುವುದೂ, ಆಕೆ ಸಮಾಧಾನವಂ ತಾಳಿ ಕಲ್ಲನ್ನು ಬಿಸುಟ್ಟು ಸೀರೆಯನ್ನು ಉಟ್ಟುಕೊಂಡು ರುಕ್ಮಿಣೀದೇವಿಗೆ ನಮಸ್ಕಾರವಂಮಾಡಿ ಕೈಯಲ್ಲಿ ದ್ರವ್ಯವನ್ನು ತೆಗೆದುಕೊಂಡು ಹೊರಗೆ ಬಂದಳು.

ಮುಂದಣ ಅಧ್ಯಾಯದಲ್ಲಿ ಕಥೆಯು ರಸವತ್ತರವಾಗಿರುವುದು. ಶ್ರೋತೃಗಳು ಸಾದರರಾಗಿರಬೇಕು. ಶ್ರೀರುಕ್ಮಿಣೀಕಾಂತನು ಹೃದಯದಲ್ಲಿ ಕುಳಿತುಕೊಂಡು ತಾನೇ ಗ್ರಂಥವಂ ಹೇಳುತಿರುವನು. ಮಹೀಪತಿಯು ತನ್ಮುದ್ರಾಂಕಿತನು; ಸಂತರ ಶರಣಾಗತನು.

ಇಂತು ಶ್ರೀಭಕ್ತವಿಜಯದಲ್ಲಿ ನಾಲ್ವತ್ತೊಂಬತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಐವತ್ತನೆಯ ಅಧ್ಯಾಯ.

ಜಯ ಜಯ ಕೃಪಾಸಾಗರನೇ! ಚಕ್ರಪಾಣಿಯೇ! ಭವಭಂಜಕನೇ! ಸಾಯುಜ್ಯವನ್ನು ಕೊಡುವವನೇ! ನನ್ನನ್ನು ಕೃಪಾದೃಷ್ಟಿಯಿಂದ ನೋಡಿ ಕರ್ಮಬಂಧವಂ ಪರಿಹರಿಸು. ನನ್ನ ಆಶಾಪಾಶವನ್ನು ಕಡಿದು ನಿರಪೇಕ್ಷತೆಯನ್ನೂ ಉದಾಸೀನವೃತ್ತಿ

ಯನ್ನೂ ಕೊಡಬೇಕು. ನಿನ್ನ ಭಜನೆಯಲ್ಲಿ ಸಂತತವೂ ಭಕ್ತಿಹತ್ತುವಂತೆ ಮಾಡಬೇಕು. ದೇಹದಲ್ಲಿ ಕಾಮಕ್ರೋಧಾದಿಗಳು ಅನಿವಾರ್ಯವಾಗಿರುವುವು. ನೀನು ಕೃಪೆಮಾಡಿದರೆಳಗ ಅಂತರವು ಶುದ್ಧವಾಗುವುದು.“ ಲೌಕಿಕಪ್ರತಿಷ್ಠೆ ಮತ್ತು ಅಭಿಮಾನವು” ಎಂಬ ಮಹಾವಿಘ್ನವು ಇದಿರಲ್ಲಿ ಬಂದು ನಿಲ್ಲುವುದು. ಮನಸ್ಸೂ ಅದರಲ್ಲಿಯೇ. ಆಸಕ್ತವಾಗಿರುವ ಕಾರಣ ನಿನ್ನ ಚಿಂತನವು ಘಟಿಸದು. ಇಂತಹ ದುರ್ಗುಣಗಳಿದ್ದರೂ ಲೋಕಾಚಾರಕ್ಕೆ ನಿನ್ನವನೆನಿಸಿರುವೆನು. ಭಕ್ತವಾತ್ಸಲ್ಯದಿಂದ ನನ್ನನ್ನು ಉದ್ಧರಿಸಬೇಕು; ಈ ಮನಸ್ಸು ಬಹುಚಂಚಲವಾದುದು. ಆದರೂ ನಿನ್ನ ಚರಣಾರವಿಂದದಲ್ಲಿ ಸ್ಥಿರವಾಗಿ ನಿಲ್ಲಬೇಕು.-ಎಂದು ನಿತ್ಯವೂ ಅಪೇಕ್ಷಿಸುತ್ತಿರುವೆನು. ನನ್ನ ಮನಸ್ಸನ್ನು ನೀನೆ ಬಲ್ಲೆ. ಕೈಯೂ ನಿನ್ನ ಅರ್ಚನೆಯನ್ನೇ ಅಪೇಕ್ಷಿಸುತ್ತಿರುವುದು. ನಿನ್ನನ್ನು ಷೋಡಶೋಪಚಾರಗಳಿಂದ ಅರ್ಚಿಸಬೇಕು. ಚರಾಚರಾತ್ಮಕವಾದ ಈ ಪ್ರಪಂಚದಲ್ಲಿರುವ ಸರ್ವಭೂತಗಳಲ್ಲಿಯೂ ನಿನ್ನನ್ನೇ ಸಮತೆಯಿಂದ ನೋಡಬೇಕು. ಮನದಲ್ಲಿ ವಿಕಲ್ಪವೂ ದ್ವೇಷವೂ ಹುಟ್ಟಬಾರದು. ಶ್ರೀಹರಿಯೇ ! ಇಂತು ಮಾಡಬೇಕು. ನಿನ್ನ ಯಾತ್ರೆಗೆ ನಡೆದು ಪಾದಗಳನ್ನು ಸಾರ್ಥಕಗಳನ್ನಾಗಿ ಮಾಡಬೇಕು. ದೇಹಾಭಿಮಾನವಂ ಬಿಟ್ಟು ಕೀರ್ತನದಲ್ಲಿ ನಿರ್ಲಜ್ಜನಾಗಿ ಕುಣಿಯಬೇಕು ರುಕ್ಮಿಣೀಪತಿಯೇ ! ನಿನ್ನ ಭಕ್ತರ ಚರಿತ್ರೆಯನ್ನು ಮುಖದಿಂದ ಪಾಡಬೇಕು. ನಾನು ಯಾವಾಗಲೂ ಇದನ್ನೇ ಅಪೇಕ್ಷಿಸಿ ನಿನ್ನಂ ಪ್ರಾರ್ಥಿಸುತ್ತಿರುವೆನು. ಅಸಾಧ್ಯವಾದ ಈ ಹಟವನ್ನೇ ಹಿಡಿದಿರುವೆನು. ಆದುದರಿಂದ ಕಥೆಯನ್ನು ರಸಭರಿತವಾಗಿ ನುಡಿಯಿಸುತ್ತಿರುವೆ. ಇದಂ ಕೇಳಿದ ಮಾತ್ರಕ್ಕೆ ಶ್ರೋತೃಗಳು ಸಂತೋಷಪಡುತಿರುವರು.

ಎಲೈ ಶ್ರೋತೃಗಳಿರಾ ! ತುಕ್ಕೋಬನ ಮಡದಿಯೊಡನೆ ರುಕ್ಮಿಣೀದೇವಿಯು ಪ್ರಸನ್ನೆಯಾಗಿ ಮಾತನಾಡಿ ಸೀರೆಯನ್ನೂ ಕುಪ್ಪುಸವನ್ನೂ ಕೈಹಿಡಿಯ ದ್ರವ್ಯವನ್ನೂ ಕೊಟ್ಟುದರಿಂದ ಆಕೆ ಸಮಾಧಾನಗೊಂಡು ಸಂತುಷ್ಟಚಿತ್ತೆಯಾಗಿ ರುಕ್ಮಿಣಿಗೆ ನಮಸ್ಕಾರವಂ ಮಾಡಿ ಹೊರಗೆ ಬರಲು, ತುಕ್ಕೋಬನು ಈಸಂಗತಿಯಂ ಕಂಡು ಕಾಂತೆಯಂ ಕುರಿತು-ನೀನು ತ್ವರೆಪಟ್ಟುದರಿಂದ ಕೈಸೇರುತಿದ್ದ ಪರಮಾರ್ಥದ ಹಿತವು ತಪ್ಪಿಹೋಯಿತು. ಅದೆಂತೆಂದರೆ, ಹೊಲದಲ್ಲಿ ನಿಂತ ಪೈರನ್ನೇ ಮುರಿದರೆ ಮುಂದೆ ಆಗುವ ಧಾನ್ಯಕ್ಕೆ ಹಾನಿಯುಂಟಾಗುವುದಿಲ್ಲವೇ? ಹಾಲನ್ನೇ ಕುಡಿದರೆ ಮುಂದೆ ಬೆಣ್ಣೆಯು ಎಂತು ಆಗುವುದು? ಬೆಳೆದ ಕಬ್ಬನ್ನೇ ತಿಂದರೆ ಮುಂದೆ ಸಕ್ಕರೆಯು ದೊರೆಯುವುದೇ? ನೀನು ಮಾಡಿದುದೂ ಅಂತಾಯಿತು. ಆದರೆ ಈಗಲೂ ವಿವೇಕವಂ ತಂದುಕೊಂಡು ದ್ರವ್ಯವನ್ನು ಬ್ರಾಹ್ಮಣರಿಗೆ ಹಂಚಿಬಿಡು. ಗಾಜಿನ ದಾನದಿಂದ ಮುಕ್ತಾಫಲವು ದೊರೆಯುವಂತೆ, ಖದ್ಯೋತವನ್ನು ಬಿಟ್ಟರೆ ಸೂರ್ಯನೇ ಮನೆಗೆ ಬಂದಂತೆ, ತಿಪ್ಪೆಗುಂಡಿಯನ್ನು ಬಿಟ್ಟುಬಿಟ್ಟರೆ ಕ್ಷೀರಸಾಗರವು ದೊರೆಯುವಂತೆ, ಗುಲಗಂಜಿಯ ಸರವನ್ನು ಪ್ರೀತಿಯಿಂದ ಕೊಟ್ಟರೆ ಅನರ್ಘವಾದ ಮುಕ್ತಾಹಾರವು ದೊರೆಯುವಂತೆ, ಈಚಲುಮರ

ವನ್ನು ಆದರಿಸದೆ ಬಿಟ್ಟರೆ ಕಲ್ಪವೃಕ್ಷವು ದೊರೆಯುವಂತೆ, ಧನಸಂಪತ್ತಿಯನ್ನೂ ಬುದ್ಧಿ ಸಿದ್ಧಿಗಳನ್ನೂ ನೀನು ಮನದಿಂದ ಅಪೇಕ್ಷಿಸದೆ ಇರುವಳಾದರೆ, ಯಾವುದನ್ನು ದೇವತೆಗಳೂ ಅಪೇಕ್ಷಿಸುವರೋ ಅಂತಹ ಸಾಯುಜ್ಯವನ್ನು ಹೊಂದುವೆ-ಎಂದನು. ಆಕೆಯು ಪತಿಯ ತತ್ತ್ವವಚನವನ್ನು ಕೇಳಿ ಸಮಾಧಾನಗೊಂಡು ಆಕ್ಷಣದಲ್ಲಿ ಬ್ರಾಹ್ಮಣರನ್ನು ಕರೆದು ಆದ್ರವ್ಯವನ್ನು ಅವರಿಗೆ ಹಂಚಿ ಬಳಿಕ ಲೋಭವನ್ನೂ ಮಮತೆಯನ್ನೂ ಬಿಟ್ಟು ಪಂಢರೀನಾಥನಂ ಹೃದಯದಲ್ಲಿ ಧ್ಯಾನಿಸುತಿದ್ದಳು.

ಶ್ರೋತೃಗಳಿರಾ! ಮುಂದಣ ಕಥೆಯಂ ಸ್ವಸ್ಥಚಿತ್ತರಾಗಿ ಆಲಿಸಿ. ತುಕ್ಕೋಬನ ಪ್ರಶಂಸೆಯು ಎಲ್ಲೆಲ್ಲಿಯೂ ಹರಡಿತು. ದೊಡ್ಡದೊಡ್ಡವರೆಲ್ಲರೂ ಮಾನ್ಯತೆಯಂ ಮಾಡುತ ಬಂದರು. ತುಕ್ಕೋಬನ ಸಂಗಡ ರುಕ್ಮಿಣೀಪತಿಯು ಭೋಜನಮಾಡುವನು-ಎಂದು ಜನವಾರ್ತೆಯುಂಟಾಯಿತು. ಚಿಂಚುವಟದೇವನೆಂಬಾತನು ಇದನ್ನು ಕೇಳಿ ಈ ಅಸಾಧ್ಯಕಾರ್ಯವು ಅವನಿಗೆ ಎಂತು ಲಭಿಸಿತು? ನಾವು ಪ್ರತಿಷ್ಠಿತರು; ಬ್ರಾಹ್ಮಣರು; ನಾವು ಗಣಪತಿಯನ್ನು ಪ್ರಸನ್ನನನ್ನಾಗಿ ಮಾಡಿಕೊಂಡಿರುವೆವು. ತುಕ್ಕೋಬನು ವೈಶ್ಯಜಾತಿಯವನು. ಆತನೊಡನೆ ಚಕ್ರಪಾಣಿಯು ಭೋಜನನಂಮಾಡುವನೆಂಬುದು ಅಘಟಿತವಾದುದು ; ಯಥಾರ್ಥವಾಗಿ ತೋರುವುದಿಲ್ಲ. ಆದರೆ ಆತನನ್ನು ಇಲ್ಲಿಗೆ ಕರೆದು ತಂದು ಪರೀಕ್ಷೆಯಂ ಮಾಡಬೇಕು-ಎಂದು ಆಲೋಚನೆಯಂ ಮಾಡಿದನು.

ಈ ವೃತ್ತಾಂತವು ತುಕ್ಕೋಬನಿಗೆ ತಿಳಿಯಿತು. ಚಿಂಚುವಟದೇವರು ದೊಡ್ಡ ಬ್ರಾಹ್ಮಣರು ; ನನ್ನ ಸ್ಮರಣೆಯಂ ಮಾಡಿದರು. ಆದುದರಿಂದ ಅಲ್ಲಿಗೆ ಹೋಗಿ ಅವರ ದರ್ಶನವಂ ಮಾಡಬೇಕು-ಎಂದು ಆತನು ಅಪೇಕ್ಷೆಗೊಂಡು ತ್ವರೆಯಿಂದ ಹೊರಟು ಮೂಷಕವಾಹನನ ದರ್ಶನವಂ ಮಾಡಿಕೊಂಡು ಆತನ ಬಳಿಗೆ ಬಂದು ಕುಳಿತುಕೊಂಡನು. ಚಿಂಚುವಟದೇವನು ತುಕ್ಕೋಬನಂ ಕಂಡು-ತನ್ನ ಮನದಲ್ಲಿ ಅಪೇಕ್ಷಿಸಿದಂತೆಯೇ ಆಯಿತು. ಚಮತ್ಕಾರವನ್ನು ಕಣ್ಣಿಂದ ನೋಡಬೇಕು-ಎಂದುಕೊಂಡನು. ಅಷ್ಟುಹೊತ್ತಿಗೆಮಧ್ಯಾಹ್ನಕಾಲವಾಗಿದ್ದಿತು. ಭೋಜನಸಮಯವಾದುದರಿಂದ ತುಕ್ಕೋಬನಿಗೆ ಭೋಜನಕ್ಕೆ ಬಡಿಸಿ; ಭೋಜನಮಾಡಬೇಕು-ಎಂದನು.

ಆಗ ತುಕ್ಕೋಬನು-ನನ್ನೊಡನೆ ಭೋಜನಮಾಡುವುದಕ್ಕೆ ಪಂಢರೀನಾಥನು ಇಲ್ಲಿಗೆ ಬರುವನು. ಆದುದರಿಂದ ಇನ್ನೊಂದೆಲೆಯಂ ಹಾಕಬೇಕು. ನೀವೂ ಗಜಾನನನನ್ನು ಪ್ರಾರ್ಥಿಸಿ ಇಲ್ಲಿಗೆ ಭೋಜನಕ್ಕೆ ಕರೆದು ತರಬೇಕು-ಎಂದನು. ಆಮಾತಂ ಕೇಳಿ ಆತನು ಆಶ್ಚರ್ಯಗೊಂಡು ನನ್ನ ಮಂತ್ರವೇ ನಮಗೆ ಫಲಿಸಿತು-ಎಂದು ನುಡಿದು ಗಣಪತಿಯ ಸನ್ನಿಧಿಗೆ ಹೋಗಿ ಕೈಗಳಂ ಮುಗಿದುಕೊಂಡು ನಾನಾವಿಧ ಸ್ತೋತ್ರಗಳಂ ಮಾಡಿದನು. ಆದರೂ ಗಣಪತಿಯು ಭೋಜನಕ್ಕೆ ಏಳಲಿಲ್ಲ. ಸದ್ಭಕ್ತಿಯೊಂದು ಇಲ್ಲದಂದು ಶಾಸ್ತ್ರಯುಕ್ತಿಗಳಿಂದೇನು? ಮನದಲ್ಲಿ ವಿಕಲ್ಪವು ತುಂಬಿರಲು, ಹೊರಗೆ ಖರಿಯ ಪೂಜೆಯಂ ಮಾಡಿದರೆ ಯಾವ ದೈವತವು ಪ್ರಸನ್ನ

ವಾದೀತು? ಗಜೇಂದ್ರನಿಗೆ ರುಕ್ಮಿಣೀಪತಿಯು ಪ್ರಸನ್ನನಾದನು. ಅವನು ಶಾಸ್ತ್ರ ವ್ಯುತ್ಪತ್ತಿಯೇನಂ ಬಲ್ಲನು? ಪರಮಾತ್ಮನು ಪ್ರೇಮಯುಕ್ತವಾದ ಭಕ್ತಿಯಂ ನೋಡಿ ಗೋಪಸ್ತ್ರೀಕುಲವನ್ನು ಉದ್ಧರಿಸಲಿಲ್ಲವೆ? ಋಷಿಪತ್ನಿಯರು ಭಕ್ತಿ ಯಿಂದ ಅನ್ನವಂ ತೆಗೆದುಕೊಂಡು ಹೋಗಿ ಕೊಡಲು, ಜಗಜ್ಜೀವನನು ಅವರಿಗೆ ಪ್ರಸನ್ನನಾದನು. ಕಪಟವಿಲ್ಲದ ಭಾವುಕರಾದ ಭಕ್ತರಿಗೆ ಜಗನ್ನಾಥನು ಅಧೀನನಾ ಗಿರುವನು; ಗೋಪಾಲರು ಸಿಳ್ಳುಹಾಕುತಿರಲು, ಶ್ರೀಕೃಷ್ಣನು ಪ್ರೀತಿಯಿಂದ ಕೇಳು ತಿದ್ದನು. ಅದಂತಿರಲಿ. ಹಲವುಮಾತುಗಳಿಂದೇನು? ಆಮರ್ಮವಂ ವೈಷ್ಣವ ವೀರರೇ ಬಲ್ಲರು. ಯಾರು ಮನಶ್ಶುದ್ಧಿಯಿಂದ ಶಾರ್ಙ್ಗಧರನನ್ನು ಸ್ವಾಧೀನನಂ ಮಾಡಿಕೊಂಡಿರುವರೋ ಅವರೇ ಮಹಾತ್ಮರು.

ಬಳಿಕ ಅಲ್ಲಿದ್ದ ಬ್ರಾಹ್ಮಣರು ತುಕೋಬನಂ ಕುರಿತು–ಪಾಷಾಣಮೂರ್ತಿಯು ಭೋಜನಮಾಡುವುದೆಂತು? ನೈವೇದ್ಯಸಮರ್ಪಣೆಯಂ ಮಾಡಿದರೆ ಆಸುವಾಸನೆಯು ದೇವರಿಗೆ ಸೇರುವುದು–ಎನಲು, ತುಕೋಬನು–ಈಮೂರ್ತಿಯಲ್ಲಿ ವಿಘ್ನೇಶ್ವರನು ಇಲ್ಲ. ನಿಮಗೆ ಸಂಶಯವಿದ್ದರೆ ಹೇಳುವೆನು; ಕೇಳಿ. ಸಮುದ್ರೋದಕದಲ್ಲಿ ಸ್ನಾನವಂ ಮಾಡುವಾಗ ಒಬ್ಬ ಭಕ್ತನು ಮುಳುಗುತಿದ್ದನು. ಆತನು, ತನಗೆ ಪ್ರಸನ್ನ ನಾಗಬೇಕೆಂದು ಸ್ತೋತ್ರಮಾಡಿದುದರಿಂದ ಆತನಂ ಕರೆಗೆ ತೆಗೆಯುವುದಕ್ಕೋಸ್ಕರ ಅಲ್ಲಿಗೆ ಹೋಗಿರುವನು. ಇದರ ಪರೀಕ್ಷೆಯಂ ಮಾಡಬೇಕಾದರೆ ಒಂದು ಮುಹೂರ್ತ ಕುಳಿತುಕೊಳ್ಳಿ. ದೇವಸ್ಥಾನದಲ್ಲಿ ಗಜವದನನು ಇಲ್ಲದೆಯೇ ಇರುವಾಗ ನೀವು ನಿವೇದ್ಯವಂ ಯಾರಿಗೆ ತೋರಿಸಿದಿರಿ?–ಎಂದನು. ಎಲ್ಲರೂ ಆಶ್ಚರ್ಯಪಡುತ್ತ ಸ್ವಲ್ಪ ಕಾಲ ಸುಮ್ಮನೆ ಇದ್ದರು. ಅಷ್ಟುಹೊತ್ತಿಗೆ ಗಣಪತಿಯ ಸಿಂಹಾಸನದ ಮೇಲೆ ತೋಯಿಸಿದ ನೀರು ಬಸಿಯುತಿದ್ದಿತು. ಬಳಿಕ ಪೀತಾಂಬರವಂ ಹಿಂಡಿ ನೋಡುವಾಗ ಸಮುದ್ರೋದಕವು ಕ್ಷಾರವಾಗಿ ಹತ್ತಿದ್ದಿತು. ಇದನ್ನು ಕಂಡು ಎಲ್ಲರೂ ವಿಸ್ಮಿತರಾದರು.

ಚಿಂಚುವಟದೇವನು ತುಕೋಬನಂ ಕುರಿತು–ಪೀತಾಂಬರವು ಏತರಿಂದ ನನೆ ದಿದೆ–ಎಂದು ಕೇಳಲು, ಮುಳುಗುತಿದ್ದ ತನ್ನ ಭಕ್ತನ್ನು ಎತ್ತಿ ತೀರದಲ್ಲಿ ಕುಳ್ಳಿರಿಸಿ ಬಂದಿರುವನು–ಎಂದು ನುಡಿದನು. ಚಿಂಚುವಟದೇವನು ಈ ವಿಷ್ಣುಭಕ್ತನ ಮಹಿ ಮೆಯು ಅದ್ಭುತವಾದುದು. ನಮ್ಮಿಂದ ತಿಳಿಯಲು ಶಕ್ಯವಲ್ಲ–ಎಂದು ವಿಸ್ಮಿತನಾಗಿ ಈ ಗಣಪತಿಯು ಸಮುದ್ರಕ್ಕೆ ಹೋಗಿದ್ದುದು ನಿಮಗೆ ಎಂತುತಿಳಿದುದು? ಪ್ರತ್ಯ ಕ್ಷವಾಗಿ ನಿದರ್ಶನಪಡಿಸಿದಿರಿ–ಎಂದು ಬೆಸಗೊಳಲು, ಅದಕ್ಕೆ ಆತನು–ಗಣಪತಿಯು ನನ್ನ ಸಂಗಡ ಮಾತನಾಡುವನು. ಶ್ರೀಪಾಂಡುರಂಗಸ್ವಾಮಿಯಂ ಆರಾಧಿಸುವುದ ರಿಂದ ಸಕಲದೇವರ ಗತಿಯೂ ವಿದಿತವಾಗಿರುವುದು. ಸೂರ್ಯನಾರಾಯಣನು ಪ್ರಸ ನ್ನನಾದರೆ ಯಾವುದುತಾನೇ ಕಾಣಿಸದು? ಕಲ್ಪವೃಕ್ಷವನ್ನು ಆಶ್ರಯಿಸಿದವರಿಗೆ ಯಾವ ಅಭೀಷ್ಟವು ಕೈಗೂಡದು? ಪಂಢರೀನಾಥನ ಕೃಪೆಯಿಂದ ಸಕಲದೇವತೆ

ಗಳೂ ಪ್ರಸನ್ನರಾಗುವರು. ಭಕ್ತನ ಶುದ್ಧಭಾವವಂ ನೋಡಿ ಪಂಡರೀನಾಥನು ಭೋಜನಕ್ಕೆ ಬಂದಿರುವನು. ನೀವೂ ಗಣಪತಿಯಂ ಪ್ರಾರ್ಥಿಸಿ ಭೋಜನಕ್ಕೆ ಕರೆದು ತನ್ನಿ-ಎಂದನು.

ಚಿಂಚುವಟದೇವನು ತುಕ್ಕೋಬನಂ ಕುರಿತು-ನೀವು ರುಕ್ಮಿಣೀಪತಿಯಂ ಪ್ರಾರ್ಥಿಸಿ ಕರೆದುತಂದಿರಿ. ಅಪ್ರಕಾರದಿಂದ ನೀನೇ ಈ ಗಣಪತಿಯನ್ನೂ ಪ್ರಾರ್ಥಿಸಿ ಭೋಜನಕ್ಕೆ ಬರಮಾಡಬೇಕು-ಎನಲು, ತುಕ್ಕೋಬನು ಗಣಪತಿಯ ಸನ್ನಿಧಿಗೆ ಬಂದು ಕೈಗಳಂ ಮುಗಿದುಕೊಂಡು-ಜಯಜಯ ಮಹಾಗಣಪತಿಯೇ! ಚತುರ್ದಶ ವಿದ್ಯಾರಾಶಿಯೇ! ನಿನ್ನ ಕೃಪಾದೃಷ್ಟಿಯಿಂದ ವಿಘ್ನಗಳೆಲ್ಲವೂ ಓಡಿಹೋಗುವುವು. ಹೃದಯದಲ್ಲಿ ನಿನ್ನ ಪ್ರೇಮದ ಅನುಭವವನ್ನುಂಟುಮಾಡಿ ಭವಪಾಶಬಂಧವೆಲ್ಲವನ್ನೂ ಕಡಿದುಬಿಡುವೆ. ನಾನು ಭಕ್ತಿಯಿಂದ ನಿನ್ನಂ ಪ್ರಾರ್ಥಿಸುವೆನು. ನಿನಗೆ ಸಮರ್ಪಿಸುವ ನೈವೇದ್ಯವಂ ಪ್ರೀತಿಯಿಂದ ನೀನು ಭೋಜನಮಾಡಬೇಕು-ಎಂದು ಬೇಡಿಕೊಳಲು, ಆಮಾತಂ ಕೇಳಿ ಗಜವದನನು ಭೋಜನಕ್ಕೆ ಬಂದು ಕುಳಿತನು. ಆಗ ಒಂದೆಲೆಯಲ್ಲಿ ರುಕ್ಮಿಣೀರಮಣನೂ ಆತನ ಸಮೀಪದಲ್ಲಿಯೇ ಗಣಪತಿಯೂ ತುಕ್ಕೋಬನ ಭಕ್ತಿಗೋಸ್ಕರ ಇಬ್ಬರೂ ಬಂದು ಕುಳಿತರು. ಯಾರ ಕಣ್ಣಿಗೂ ಕಾಣಿಸರು. ಎಲೆಯೊಳಗಣ ಅನ್ನವು ಮಾತ್ರ ಮುಗಿದುಹೋಗುವುದು. ಈ ಚಮತ್ಕಾರವಂ ಕಂಡು ಚಿಂಚವಟದೇವನು ಆಶ್ಚರ್ಯವಂ ತಾಳಿ-ನಾನು ಗಣಪತಿಯ ಉಪಾಸನೆಯಂ ಮಾಡಿದೆನು. ಆದರೆ ಪ್ರತ್ಯಕ್ಷನಾಗಿ ಎಂದಿಗೂ ಭೋಜನಮಾಡಲಿಲ್ಲ. ತುಕ್ಕೋಬನು ಈ ಅದ್ಭುತವಾದ ಲೀಲೆಯಂ ತೋರಿದನು. ಗಣಪತಿಯು ಭೋಜನಕ್ಕೆ ಬಂದುದೇನು ಅಘಟಿತವು? ಸಾಕ್ಷಾತ್ಪಂಡರೀನಾಥನನ್ನೇ ಕರೆದು ತಂದನು. ಇದು ಮಹಾಸಾಧಕರಿಗೂ ದುರ್ಲಭವಾದುದು. ಕ್ಷೀರಸಮುದ್ರವೇ ಸ್ವಾಧೀನವಾಗಿರಲು, ನದಿಯು ಪ್ರಸನ್ನವಾಗುವುದೇನಾಶ್ಚರ್ಯವು? ರುಕ್ಮಿಣೀರಮಣನು ಪ್ರಸನ್ನನಾದರೆ ಇತರದೇವತೆಗಳೆಲ್ಲರೂ ಬಂದು ನಿಂತಿರುವರು. ಕಾಮಧೇನುವೇ ಮನೆಗೆ ಬರಲು, ಇತರಧೇನುಗಳೆಲ್ಲವೂ ತಮಗೆತಾವೇ ಬರುವುವು. ಚಂದ್ರನ ದರ್ಶನವಾಗಲು ನಕ್ಷತ್ರಗಳೆಲ್ಲವೂ ಗೋಚರವಾದಂತೆಯೇ ಆಗುವುವು. ವಜ್ರಾಸನದಲ್ಲಿ ಹಠಯೋಗವುಳ್ಳವರಿಗೂ ಯಾವನ ದರ್ಶನವು ದುರ್ಲಭವೋ ಸಗುಣನೂ ಸಾಕಾರನೂ ಆದ ಆ ಜಗದ್ವೀರನು ತನ್ನ ದಾಸರ ಸಂಕಟದಲ್ಲಿ ಬಂದು ನಿಲ್ಲುವನು-ಎಂದು ನುಡಿದನು.

ಬಳಿಕ ಬ್ರಾಹ್ಮಣರು--ತುಕ್ಕಾರಾಮನು ಪ್ರೇಮಳನು; ವಿಷ್ಣುಭಕ್ತನು; ಬ್ರಹ್ಮಾದಿಗಳಿಗೂ ದುರ್ಲಭನಾದ ವೈಕುಂಠನಾಯಕನನ್ನು ಸ್ವಾಧೀನನಂ ಮಾಡಿದನು-ಎಂದು ಸ್ತೋತ್ರಮಾಡಿದರು.

ಕರಶುದ್ಧಿಯಂ ಮಾಡಿಸಿ ತಾಂಬೂಲವಂ ಕೊಡಲು, ತೆಗೆದುಕೊಂಡು ಹರಿಕೀರ್ತನೆಯನಾರಂಭಿಸಿ ಒಂದುರಾತ್ರಿ ಅಲ್ಲಿ ಇದ್ದು ಮಾರನೆಯದಿನ ಗಣಪತಿಗೆ ನಮಸ್ಕ

ರವಂ ಮಾಡಿ ಚಿಂಚುವಟದೇವನ ಅನುಜ್ಞೆಯಂ ಪಡೆದು ತುಕ್ಕಾರಾಮನು ತನ್ನ ಊರಿಗೆ ಹೊರಟನು.

ಊರ ಸಮೀಪದಲ್ಲಿ ಬರುತಿರುವಾಗ ಒಬ್ಬ ತೋಟದವನು ಆ ತುಕ್ಕಾರಾಮನಂ ಕಂಡು ನಮಸ್ಕರಿಸಿ ಬದ್ಧಾಂಜಲಿಯಾಗಿ—ತೋಟದಲ್ಲಿ ಆಳೆಯಂ ಕಟ್ಟಿರುವೆನು. ಅಲ್ಲಿಯವರೆಗೆ ಬಿಜಯಂಗೈವುದೆಂದು ಪ್ರಾರ್ಥಿಸಲು, ಆತನು ಅವನ ಸದ್ಭಾವವಂ ನೋಡಿ ಅಂಗೀಕರಿಸಿದನು. ತೋಟದವನು ಸಂತೋಷಪಟ್ಟು ತುಕ್ಕಾರಾಮನನ್ನು ಕರೆದುಕೊಂಡುಹೋಗಿ ಆಸನದಲ್ಲಿ ಕುಳ್ಳಿರಿಸಿ, ನೀವು ದೀನದಯಾಳುಗಳು ; ಇಲ್ಲಿಗೆ ಬಂದಿರಿ. ನನ್ನ ಜನ್ಮವು ಸಫಲವಾಯಿತು-ಎಂದು ನುಡಿದು ಕಬ್ಬಿನ ಜಲ್ಲೆಯಂ ಮುರಿದು ತಂದು ಸಿಪ್ಪೆಯಂ ಹೆರೆದು ಕೊಟ್ಟನು. ತುಕ್ಕಾರಾಮನಿಗೆ ಅದರ ರುಚಿಯೇನೂ ಹತ್ತಲೇ ಇಲ್ಲ. ಯಾವನು ಬ್ರಹ್ಮರಸವಂ ಸೇವಿಸುವನೋ ಆತನಿಗೆ ಇತರರಸದಲ್ಲಿ ಏನು ರುಚಿಯಿದ್ದೀತು ? ಸೂರ್ಯನ ಪ್ರಕಾಶದಲ್ಲಿರುವನಿಗೆ ದೀಪದ ಇಚ್ಛೆಯು ಎಂತು ಇಲ್ಲವೋ ; ಸಿದ್ಧಾಂತಜ್ಞಾನವುಳ್ಳವನಿಗೆ ಪಾಷಂಡವಾದವು ಎಂತು ಅನಭಿಮತವೋ ; ಕಾಮಧೇನುವು ಮನೆಯಲ್ಲಿರಲು, ಎಂತು ಆಡಿನ ಅಪೇಕ್ಷೆಯಿಲ್ಲವೋ ಅಂತು ನಾಮಾಮೃತದ ಸವಿ ಹತ್ತಿರುವನಿಗೆ ಇತರರಸಾಯನಗಳಲ್ಲಿ ಮನಸ್ಸು ಇಲ್ಲವು. ಆದುದರಿಂದ ಆತನಿಗೆ ಕಬ್ಬಿನ ರುಚಿಯು ತೋರಲಿಲ್ಲ. ಆದರೆ ತೋಟದವನ ಭಾವವಂ ನೋಡಿ ಒಂದುಕ್ಷಣ ಸ್ವಸ್ಥನಾಗಿ ಕುಳಿತನು. ತೋಟದವನು ಬೆಳಗಿದ ಚೆಂಬಿನಲ್ಲಿ ಕಬ್ಬಿನ ರಸವನ್ನು ತಂದುಕೊಟ್ಟು ಕುಡಿಸಿದನು. ಮತ್ತು ಹೊರಡುವ ಸಮಯದಲ್ಲಿ-ಮನೆಯಲ್ಲಿ ಮಕ್ಕಳಿಗೆ ಕೊಡುವುದಕ್ಕೆ ಕಬ್ಬಿನಜಲ್ಲೆಗಳಂ ತೆಗೆದುಕೊಂಡು ಹೋಗಬೇಕು -ಎಂದು ಬಿನ್ನವಿಸಿ ಹತ್ತುಜಲ್ಲೆಗಳನ್ನು ಕಟ್ಟಿಕೊಟ್ಟನು. ಅವನ್ನು ಹೆಗಲ ಮೇಲೆ ಹೊತ್ತುಕೊಂಡು ಅಲ್ಲಿಂದಹೊರಟು ಊರಲ್ಲಿ ಬರುತಿರಲು, ಹುಡುಗರೆಲ್ಲರೂ ಕಬ್ಬನ್ನು ಬೇಡಿದರು. ಆತನಿಗೆ "ತನ್ನವರು ಪೆರರು" ಎಂಬ ಭೇದವೇನೂ ಇಲ್ಲ. ಎಲ್ಲರಿಗೂ ಜಲ್ಲೆಗಳಂ ಮುರಿದುಕೊಡುತಬಂದನು. ಮನೆಗೆ ಯಜಮಾನನೂ ಕಳ್ಳನೂ ಎಂತು ಸಮರೋ ; ಸೂರ್ಯನ ಪ್ರಕಾಶಕ್ಕೆ ದರಿದ್ರನೂ ರಾಜನೂ ಎಂತು ಸಮರೋ ; ಗಂಗೆಗೆ ತನ್ನ ತೀರದಲ್ಲಿರುವ ಸವಿಮಾವಿನಮರವೂ ಗೊಬ್ಬಳಿಮರವೂ ಎಂತು ಸಮಗಳೋ ; ಅಂತು ತುಕ್ಕಾರಾಮನಿಗೆ ಲೋಕದಲ್ಲಿರುವ ಎಲ್ಲರೂ ಸಮರು. ಆನೆಯೂ ಇರುವೆಯೂ ನಡೆಯುತ್ತಿರಲು, ಭೂಮಿಗೆ "ಭಾರ ಲಘು" ಎಂಬ ಎಣಿಕೆಯೆಂತು ಇಲ್ಲವೋ ; ಅನೇಕವಿಧವಾದ ಜಲಚರಜಂತುಗಳು ತನ್ನಲ್ಲಿ ಇದ್ದರೂ ಅವುಗಳಲ್ಲಿ "ಆಪ್ತ ಅನಾಪ್ತ" ಎಂಬ ವಿಚಾರವು ಸಮುದ್ರನಿಗೆ ಎಂತು ಇಲ್ಲವೋ ಅಂತು ತುಕ್ಕಾರಾಮನಿಗೆ " ಇಷ್ಟರು ಅನಿಷ್ಟರು " ಎಂಬ ಎಣಿಕೆಯೇನೂ ಇರಲಿಲ್ಲ. ಆಕಾಶದಲ್ಲಿ ಕಂಗೊಳಿಸುವ ಪೂರ್ಣಿಮಾಚಂದ್ರನಂತೆ ಆತ್ಮಾರಾಮನಾದ ತುಕ್ಕಾರಾಮನು ಸರ್ವರಿಗೂ ಸಮನಾಗಿರುವನು. ತುಕ್ಕಾರಾಮನ ಮನೋವೃತ್ತಿಯು ಅಸಾಧಾರಣವಾ

ದುದು. ಕಬ್ಬಿನ ಜಲ್ಲೆಗಳಂ ತನ್ನ ಮನೆಗೆ ತೆಗೆದುಕೊಂಡು ಹೋಗಬೇಕೆಂಬ ಅಪೇಕ್ಷೆಯು ಆತನಿಗೆ ಇರಲಿಲ್ಲ. ಕಬ್ಬಿನ ಜಲ್ಲೆಗಳಂ ಮಕ್ಕಳಿಗೆ ಹಂಚಿದ ಬಳಿಕ ಉಳಿದಿದ್ದ ಒಂದು ಜಲ್ಲೆಯನ್ನು ತೆಗೆದುಕೊಂಡು ಮನೆಗೆ ಬಂದನು.

ಮಡದಿಯು ಕೈಯಲ್ಲಿ ಉಳಿದಿದ್ದ ಒಂದುಜಲ್ಲೆಯನ್ನು ನೋಡಿ, ಬೀದಿಯಲ್ಲಿ ಮಕ್ಕಳಿಗೆಲ್ಲರಿಗೂ ಹಂಚಿಬಂದರೆಂದೂಹಿಸಿ ಸಂತಾಪಗೊಂಡು ಆತನ ಕೈಯಲ್ಲಿದ್ದ ಜಲ್ಲೆಯಂ ಕಿತ್ತುಕೊಂಡು-ಯಾರೋ ಧರ್ಮಕ್ಕೆ ಕಬ್ಬಂ ಕೊಟ್ಟರೆ ಅದನೆಲ್ಲವನ್ನೂ ನಿಮ್ಮಹಿರಿಯರಿಗೆ ಹಂಚಿದಿರಾ! ಮನೆಯಲ್ಲಿ ಮಕ್ಕಳು ತಿನ್ನುವುದಕ್ಕೆ ಇಲ್ಲದೆ ಬಾಯ್ಬಿಡುತಿರುವರು-ಎಂದು ಕಠಿನವಾದ ನುಡಿಯಂ ನುಡಿದು ಅಲ್ಲಿಗೂ ಸಹನೆಬಾರದೆ ಇದ್ದುದರಿಂದ ಆಕಬ್ಬಿನ ಜಲ್ಲೆಯನ್ನು ಎತ್ತಿ ಬೆನ್ನಮೇಲೆ ಬಡಿಯಲು, ಅದು ಮೂರುತುಂಡಾಗಿ ಎರಡು ನೆಲದಲ್ಲಿ ಬಿದ್ದುವು. ಒಂದು ಆಕೆಯ ಕೈಯಲ್ಲಿ ನಿಂತಿತು. ಆಗ ತುಕ್ಕಾರಾಮನು ಶಾಂತಿಯನವಲಂಬಿಸಿ ಮಡದಿಯಂ ಕುರಿತು-ಪಾಂಡುರಂಗನ ಸಾಹಾಯ್ಯದಿಂದ ಪಾಲು ಚೆನ್ನಾಯಿತು. ನಿನ್ನ ಪಾಲಿನದು ನಿನ್ನ ಕೈಯಲ್ಲಿಯೇ ನಿಂತಿತು. ಕೆಳಗೆ ಬಿದ್ದ ಎರಡನ್ನೂ ನಾನೂ ಮಕ್ಕಳೂ ತೆಗೆದುಕೊಳ್ಳುವೆವು-ಎಂದನು. ಆತನ ಉಪಶಾಂತಿಯಂ ನೋಡಿ ಆಕೆಯು ಆಶ್ಚರ್ಯಗೊಂಡು-ಈತನು ನಿರ್ಲಜ್ಜನು. ಪ್ರಪಂಚದ ಭ್ರಾಂತಿಯಂ ಬಿಟ್ಟಿರುವನು. ಇನ್ನು ಮೇಲೆ ನಾನು ಬರಿಯ ಭ್ರಮೆಯಂ ಹಿಡಿದು ಈತನನ್ನು ವ್ಯರ್ಥವಾಗಿ ಪೀಡಿಸಿದುದರಿಂದ ಫಲವೇನು? ಈತನು ಮಾನಾಪಮಾನವಂ ತೊರೆದು ಸಂಸಾರದ ಸಂಗತಿಯನ್ನೇ ವರ್ಜಿಸಿರುವನು-ಎಂದು ಮನದಲ್ಲಿ ವಿವೇಕವಂ ತಂದುಕೊಂಡು ಸುಮ್ಮನೆ ಇರುತಿದ್ದಳು.

ತುಕ್ಕಾರಾಮನ ಶಾಂತಿಗುಣವಂ ವರ್ಣಿಸುವುದಕ್ಕೆ ದೃಷ್ಟಾಂತವಾವುದೂ ತೋರದುದರಿಂದ ಮಹೀಪತಿಯು ವಿವೇಕವಂ ತಂದುಕೊಂಡು ಪುರಾತನರಾದ ಭಕ್ತರ ಸ್ಥಿತಿಗಳನ್ನು ಶೋಧಿಸುತ ಬರಲು, ಭಾಗವತದಲ್ಲಿ ಹನ್ನೊಂದನೆಯ ಸ್ಕಂಧದಲ್ಲಿ ಉದ್ಧವನಂ ಕುರಿತು ಶ್ರೀಕೃಷ್ಣನು ಹೇಳಿರುವ "ಕದರ್ಯ" ಎಂಬ ಬ್ರಾಹ್ಮಣನ ಕಥೆಯು ಮನಸ್ಸಿಗೆ ಒಪ್ಪಿತು. ಅದನ್ನು ಏಕನಾಥರ ಟೀಕೆಯಲ್ಲಿ ಸಜ್ಜನರಾದ ನೀವು ನೋಡಿರಬಹುದು. ತುಕ್ಕಾರಾಮನು ಅಂತಹ ಶಾಂತಿಗುಣವುಳ್ಳವನೆಂದು ತೋರುವುದು. ಈ ದೃಷ್ಟಾಂತವೂ ಗೌಣವಾಗಿಯೇ ಇರುವುದೆಂದು ನಾನು ತಿಳಿವೆನು. ಅದೇಕೆಂದರೆ, ಕದರ್ಯ ಸಂನ್ಯಾಸವಂ ತೆಗೆದುಕೊಂಡಿದ್ದನು. ಈತನು ಗೃಹಸ್ಥಾಶ್ರಮದಲ್ಲಿಯೇ ಇದ್ದುಕೊಂಡು ಮಾನಾಪಮಾನಂಗಳಂ ಸಮವಾಗಿ ತಿಳಿದಿದ್ದನು. ಹೆಂಡತಿಯು ಹೊಡೆದರೂ ಕೋಪವುಂಟಾಗಲೇ ಇಲ್ಲ. ಆದುದರಿಂದ ಈತನಿಗೆ ಯಾವ ಹೋಲಿಕೆಯೂ ಸರಿಬೀಳದು. ಕ್ಷೀರಸಾಗರಕ್ಕೆ ಇತರಜಲಧಿಗಳ ಸಾಮ್ಯವು ಸಂಗತವಾದುದೆ? ಸಾಯುಜ್ಯಕ್ಕೆ ಸಾಲೋಕ್ಯಸಾಮೀಪ್ಯಸಾರೂಪ್ಯಂಗಳ ಹೋಲಿಕೆ ಉಚಿತವೆ? ತುಕ್ಕಾರಾಮನ ಸ್ಥಿತಿ ಅತ್ಯದ್ಭುತವಾದುದು-ಎಂದು ಶ್ರೋತೃಗಳು

ಅವಧರಿಸತಕ್ಕುದು. ಆತನು ಭಾಗವತಶಿರೋಮಣಿಯು. ಜಗದ್ಗುರುವೇ ಆಗಿ ಅವತರಿಸಿರುವನು. ಆತನನ್ನು ದೊಡ್ಡವನೆಂದರೆ ದೊಡ್ಡವನು; ಅಲ್ಲದಿದ್ದರೆ ದೊಡ್ಡವನಲ್ಲವೆ? ಸಮುದ್ರನು ಗಂಭೀರನೆಂದರೇ ಗಂಭೀರನು; ಅಲ್ಲದಿದ್ದರೆ ಗಂಭೀರನಲ್ಲವೆ? ಸೂರ್ಯನು ಮಹಾತೇಜಸ್ವಿಯೆಂದು ಅಡಿಗಡಿಗೆ ನುಡಿಯಬೇಕೇ? ಚಂದ್ರನು ಶೀತಲನಾಗಿರುವನೆಂದರೆ ಆ ಮಾತು ಪುನರುಕ್ತವಲ್ಲವೆ? ಪೃಥ್ವಿಯನ್ನು ಕ್ಷಮೆಯೆಂದು ವರ್ಣಿಸಿರುವುದರಿಂದಲೇ ಆಕೆ ಅಂತು ಇರುವಳೇ? ಸ್ವಾಭಾವಿಕವಾದ ಗುಣವನ್ನು ಬಣ್ಣಿಸುವುದೇನು? ವಿವೇಕಶಾಂತಿಗಳೆಂಬ ಆಭರಣಗಳು ತುಕ್ಕಾರಾಮನ ಶರೀರಕ್ಕೆ ಅಕ್ಷಯವಾದ ಕಾಂತಿಯನ್ನುಂಟುಮಾಡಿದ್ದುವು. ಅದಂ ವಿವರಿಸಿ ಹೇಳುವುದೇನು? ಪವಿತ್ರರಾದ ಜ್ಞಾನಿಗಳೇ ಬಲ್ಲರು. ಶಾರೀರವಾಙ್ಮಯಮಾನಸತಪಸ್ಸುಗಳಲ್ಲಿ ಆತನಿಗೆ ಸಮರೆನಿಸಿದವರು ಯಾರೂ ಇಲ್ಲ. ದೇವತೆಗಳು ಬ್ರಾಹ್ಮಣರು ಗುರುಗಳು ತಿಳಿದವರು ಮುಂತಾದವರನ್ನು ಪೂಜಿಸುವುದೂ, ಸದಾಚಾರವೂ ಬ್ರಹ್ಮಚರ್ಯವೂ ಅಹಿಂಸೆಯೂ ಶಾರೀರತಪವು-ಎಂದು ತಿಳಿಯತಕ್ಕುದು. ಇತರರ ಮನಸ್ಸಿಗೆ ಸಂಕಟವನ್ನುಂಟುಮಾಡದುದಾಗಿಯೂ ಪ್ರಿಯವಾಗಿಯೂ ಸತ್ಯವಾಗಿಯೂ ಇರುವ ಮಾತನ್ನು ಆಡುವುದೂ, ಸಚ್ಛಾಸ್ತ್ರವಿಚಾರವೂ ವಾಙ್ಮಯತಪವೆನಿಸಿಕೊಳ್ಳುವುದು. ಪ್ರಸನ್ನಭಾವವೂ ಮೌನವೂ ಭಾವಶುದ್ಧಿಯೂ ಮಾನಸತಪವೆನಿಸಿಕೊಳ್ಳುವುದು. ಇವು ಮೂರು ತುಕ್ಕಾರಾಮನ ಶರೀರಕ್ಕೆ ಭೂಷಣವಾಗಿರುವುವು. ಹದಿನೈದುದಿನಗಳಿಗೆ ಬಂದಾವೃತ್ತಿ ಪ್ರತ್ಯೇಕಾದಶಿ ತಪ್ಪದೆ ಪಂಡರಪುರಕ್ಕೆ ವಾರೆನಡೆಯುವ ದೃಢವಾದ ನಿಯಮವಂ ಹಿಡಿದು ಕಾಲ್ನಡೆಯಿಂದ ಹೋಗಿಬರುತಿದ್ದನು. ಊರಿಂದ ಹೊರಟರೆ ಪ್ರೇಮಭರಿತನಾಗಿ ಪಾಡುತ್ತ ಕುಣಿಯುತ್ತ ಏಳನೆಯದಿವಸ ಪಂಡರಪುರವಂ ಸೇರುತಿದ್ದನು. ಮೂರುದಿನ ಅಲ್ಲಿದ್ದು ಬಳಿಕ ಹಿಂತಿರುಗಿ ಬರುತ್ತಿದ್ದನು. ಈಪ್ರಕಾರ ಮೂರುವರ್ಷ ನಡೆದುದು. ಬಳಿಕ ಶೀತಜ್ವರದಿಂದ ಪೀಡಿತನಾಗಿ ಹೋಗಿಬರುವುದಕ್ಕೆ ಶರೀರದಲ್ಲಿ ಶಕ್ತಿಯಿಲ್ಲದುದರಿಂದ ಚಿಂತಾಕ್ರಾಂತನಾಗಿ-ಬಂದು ಹೆಜ್ಜೆಯನ್ನೂ ಇಡಲಾರೆ; ಪಂಡರಿಗೆ ವಾರೆನಡೆಯುವ ನಿಯಮವು ತಪ್ಪಿತಲ್ಲಾ! ಏನು ದುಷ್ಕೃತವಿದ್ದಿತೋ? ಆದುದರಿಂದ ವಿಘ್ನವುಂಟಾಯಿತು. ಇನ್ನು ಪಂಡರಿಗೆ ಹೊರಡುವ ಭಕ್ತರ ಕೈಯಲ್ಲಿ ಕಾಗದವಂ ಬರೆದುಕೊಡಬೇಕು-ಎಂದು ಆಲೋಚಿಸಿ ವಿಜ್ಞಾಪನೀಯಾಂಶವನ್ನು ಬರೆದುಕೊಟ್ಟು ಕಳುಹಿಸಿದನು. ಆತನ ಲೇಖನವು ಇಪ್ಪತ್ತು ಅಭಂಗಗಳುಳ್ಳುದು. ಅದರ ಅಭಿಪ್ರಾಯವನ್ನು ಭಾವುಕರಾದ ನೀವು ಕೇಳಬೇಕು. ಶ್ರವಣಮಾತ್ರದಿಂದಲೇ ಚಿತ್ತದಲ್ಲಿ ಪ್ರೇಮವು ದೃಢವಾಗಿ ನಿಲ್ಲುವುದು. ಆ ಪತ್ರಿಕಾಭಿಪ್ರಾಯವೇನೆಂದರೆ:—

“ಎಲೆ ದೇವಾದಿದೇವನೇ! ರುಕ್ಮಿಣೀಪತಿಯೇ! ನಿನ್ನನುಳಿದು ನನಗೆ ಮತ್ತೊಂದು ಭಾಗ್ಯವಿಲ್ಲವೆಂದು ಮನದಲ್ಲಿ ಧೈರ್ಯವಂ ಹಿಡಿದು ಪ್ರೀತಿಯಿಂದ ಪತ್ರವಂ

ಬರೆದಿರುವೆನು. ನಿನ್ನ ಪಾರವನ್ನು ಶ್ರುತಿಪುರಾಣಂಗಳು ಕಾಣವು. ಪಾಮರನಾದ ನಾನು ಏನವರ್ಣಿಸಬಲ್ಲೆನು. ಆದರೂ ಪ್ರೌಢವಲ್ಲದ ನನ್ನ ಅಂತಹ ಮಾತುಗಳನ್ನು ಚಕ್ರಪಾಣಿಯೇ! ನೀನು ಅಂಗೀಕರಿಸಬೇಕು. ನಿನ್ನ ಪಾದಗಳ ಸಾರಳ್ಯದಿಂದ ನನ್ನ ಶಿರಸ್ಸನ್ನು ಅವುಗಳಮೇಲೆ ಇರಿಸಿರುವೆನು. ನೀನು ಸಕಲದೇವರಲ್ಲಿಯೂ ಶ್ರೇಷ್ಠನಾದ ದೇವನು. ಎಲೆ ಗೋಪಿಕಾಪತಿಯೇ! ಸಗುಣನೇ! ಲಕ್ಷ್ಮೀವಲ್ಲಭನೇ! ನಿನ್ನ ಉದಾರತ್ವವನ್ನೂ ಪ್ರಖ್ಯಾತವಾದ ಸತ್ಕೀರ್ತಿಯನ್ನೂ ವೈಭವವನ್ನೂ ಮೂರುಲೋಕಗಳಲ್ಲಿ ಸರ್ವರೂ ವರ್ಣಿಸುವರು. ನಾಮಕೀರ್ತನಮಾತ್ರದಿಂದಲೇ ಪಾತಕದ ರಾಶಿಗಳನ್ನು ನಾಶಮಾಡುವೆ. ಕರ್ಮಗಳೆಲ್ಲವೂ ಸುಟ್ಟುಹೋಗುವುವು. ದಾರಿದ್ರ್ಯವೂ ದುಃಖವೂ ಕಣ್ಣಿಗೆ ಕಾಣುವುದಿಲ್ಲ. ಸರ್ವಸುಖಗಳೂ ನಿನ್ನ ಪಾದಗಳಲ್ಲಿಯೇ ಇರುವುವು. ನಿನ್ನ ಪಾದವು ಇಂದ್ರಾದಿಗಳಿಗೂ ದುರ್ಲಭವು. ನಿನ್ನ ದಾಸರು ಉತ್ತಮವಾದ ಬೋಧೆಯಂ ಪಡೆದು ಕೀರ್ತನದಲ್ಲಿ ಆನಂದದಿಂದ ಕೈಚಪ್ಪಳೆಗಳಂ ಬಾಜಿಸುತ್ತ ಕುಣಿಯುವರು. ರುಕ್ಮಿಣೀಕಾಂತನೇ! ಪ್ರಪಂಚದಲ್ಲಿರುವ ಅನಂತಜಡಜೀವರಿಗೆಲ್ಲರಿಗೂ ನೀನೇ ಜೀವನ. ನನ್ನ ಸಂಚಿತದುಷ್ಕರ್ಮವೇನಿರುವುದೋ? ಅದರಿಂದ ನಾನು ಬರಲು ತಡೆಯಾಯಿತು. ನನ್ನ ಸುದ್ದಿಯೇ ತಿಳಿಯಲಿಲ್ಲವೆಂದು ನೀನು ನನ್ನನ್ನು ಉಪೇಕ್ಷಿಸಿದೆಯೋ? ನಿರ್ದಯನಾಗಿಯೇ ಉಪೇಕ್ಷಿಸಿದೆಯೋ? ನಿಷ್ಠುರಭಾವವಂ ಪಿಡಿದು ನನ್ನನ್ನು ಬಿಟ್ಟೆಯೋ? ವಿಶೇಷಕಾರ್ಯಗೌರವದಿಂದ ನನ್ನನ್ನು ಮರೆತೆಯೋ? ನಾನು ನಿನ್ನ ಮಾರ್ಗವನ್ನೇ ನಿರೀಕ್ಷಿಸುತ್ತಿರುವೆನು. ನಿನ್ನ ಪಾದವನ್ನು ನನಗೆ ತೋರಿಸು. ನನಗೆ ಏನನಾದರೂ ಕೊಡಬೇಕಾಗುವುದೆಂಬ ಧರ್ಮಸಂಕಟವು ತೋರಿದುದರಿಂದ ನನ್ನನ್ನು ಕರೆಯಿಸದೆ ಬಿಟ್ಟೆಯೋ? ನೀನು ಮನದಲ್ಲಿ ಇಷ್ಟು ಸಂಕೋಚವುಳ್ಳವನಾದರೆ ನಮ್ಮನ್ನು ಏಕೆ ಹೆತ್ತೆ? ನಾವು ಯಾರಬಳಿಗೆ ಹೋಗಿ ಬಾಯ್ದೆರೆದು ಕೇಳಿಕೊಳ್ಳಬೇಕು? ನೀನು ನಮ್ಮನ್ನು ಬಿಟ್ಟರೆ ನಮಗೆ ಇನ್ಯಾರು ಇರುವರು? ನಮ್ಮ ಶ್ರಮವಂ ಪರಿಹರಿಸುವನು ನೀನಲ್ಲದೆ ಮತ್ತಾವನು? ನಾನು ಇನ್ನಾರ ದಾರಿಯನ್ನು ನಿರೀಕ್ಷಿಸಲಿ? ಹೇಳು. ನಮಗೆ ಪ್ರಾಣಾಪ್ತನಾದ ಸಖನು ಯಾರು? ನೀನು ನಮ್ಮನ್ನು ಬಿಟ್ಟರೆ ನಮ್ಮ ಭವಭಂಗವು ಎಂತಾದೀತು? ನನ್ನ ಜೀವದ ಸಂಕಟವನ್ನು ಹೇಳಿಕೊಂಡರೆ ಕೇಳತಕ್ಕವನು ಯಾವನು? ನೀನಲ್ಲದೆ ಅದಂ ಪರಿಹರಿಸುವನು ಮತ್ತಾವನು? ಹಿಂದೆಯೂ ಮುಂದೆಯೂ ಯಾರನ್ನೂ ಕಾಣೆನು. ದೇವಾದಿದೇವನೇ ರುಕ್ಮಿಣೀಪತಿಯೇ! ನನ್ನಲ್ಲಿ ಏನುದೊಡ್ಡತನವಂ ಕಂಡುದರಿಂದ ನನ್ನಲ್ಲಿ ಕರುಣೆಬಾರದು? ದಯಾಳುವೆ! ನನ್ನನ್ನು ಏಕೆ ಬಿಟ್ಟೆ? ನನ್ನ ಕಣ್ಣುಗಳು ತಣಿವಂತೆ ದರ್ಶನವನ್ನು ಕೊಡು. ನಿನ್ನಮೇಲೆ ಏನುಭಾರವನ್ನೂ ನಾನು ಹಾಕುವುದಿಲ್ಲ. ಹಗಲೂ ಇರುಳೂ ನಿನ್ನನಾಮವನ್ನು ಉಚ್ಚರಿಸುತ ಇರುವೆನು. ಪ್ರಾರಬ್ಧಾನುಸಾರದಿಂದ ಏನು ದೊರೆವುದೋ ಅದನ್ನೇ ಗಟ್ಟಿಯಾಗಾದರೂ ತೆಕ್ಕೆಗಾ

ದರೂ ಮಾಡಿಕೊಂಡು ಕಾಲವನ್ನು ಕಳೆಯುವೆನು. ಮನಸ್ಸಿನಲ್ಲಿ ತಲ್ಲಣಗೊಳ್ಳುವು
ದಿಲ್ಲ. ಮತ್ತು ನಿನ್ನ ಮೇಲೆ ಭಾರವಂ ಹಾಕುವುದಿಲ್ಲ. ಇದೇ ನನ್ನ ನಿಶ್ಚಯವು.
ನೀನು ಹೃದಯದಲ್ಲಿ ಇರುವನು. ಅಂತರ್ಯವನ್ನು ಬಲ್ಲೆ. ನಿನ್ನ ದರ್ಶನವಾಗಬೇಕೆಂದು
ಕಳವಳಪಡುವುದು ಮಕ್ಕಳಾದ ನಮಗೆ ಸ್ವಭಾವವು. ನಿನಗೆ ಮಕ್ಕಳು ಅನೇಕರಾ
ದರು. ಅವರ ಕೀರ್ತಿಯು ಹೆಚ್ಚಿತು. ಆದುದರಿಂದ ಮನಸ್ಸಂ ಕಠಿನಮಾಡಿಕೊಂಡು
ನನ್ನನ್ನು ಉಪೇಕ್ಷಿಸಿದೆಯಾ? ಸಾರಳ್ಯದಿಂದ ನೊಂಡಾಟವಂ ಮಾಡಿ ನನ್ನೊಡನೆ ಜಗಳ
ವಾಡುವನೆಂದು ನನ್ನನ್ನು ಬಿಟ್ಟೆಯಾ? ಅಲ್ಲದಿದ್ದರೆ ಕುಟುಂಬವು ದೊಡ್ಡದಾಗಲು, ಮನೆ
ಯಲ್ಲಿ ವೆಚ್ಚವು ಬಹುವಾದುದರಿಂದ ಮನವಂ ದೃಢಮಾಡಿಕೊಂಡು ನನ್ನನ್ನು ಅತ್ತಿಮ
ನೆಯಲ್ಲಿ ಹಾಕಿಬಿಟ್ಟೆಯಾ? ಅಂತಲ್ಲದಿದ್ದರೆ ವ್ಯಾಪಾರವನ್ನುಮಾಡಿ ಅದರಲ್ಲಿ ಬಹು
ನಷ್ಟವು ಸಂಭವಿಸಿದುದರಿಂದ ಕಾರ್ಪಣ್ಯವಂ ವಹಿಸಿ ನನ್ನನ್ನು ಸಂಕಟದಲ್ಲಿ ಬಿಟ್ಟೆಯಾ?
ಅಲ್ಲದಿದ್ದರೆ ಸಾಲಗಾರರು ಬಂದು ಬಾಗಿಲಲ್ಲಿ ಕುಳಿತರೋ ? ಅದರಿಂದ ನನ್ನಮರೆವು
ಬಂದುದೋ ? ನನ್ನನ್ನು ಕರೆದುಕೊಂಡುಬರುವುದಕ್ಕೆ ಕಳುಹಿಸದೆಇದ್ದರೂ ಚಿಂತೆ
ಯಿಲ್ಲ. ಬರಿಯ ಬಾಯ್ಮಾತನ್ನು ಹೇಳಿಕಳುಹಿಸಿದ್ದರ ನಿನ್ನದು ಏನು ವೆಚ್ಚವಾಗುತಿ
ದ್ದಿತು? ಬಣಯಶಸ್ಸನಾದರೂ ತೆಗೆದುಕೊಳ್ಳದೆಹೋದೆ. ಮನದಲ್ಲಿ ಭಯವುಂಟಾ
ದುದರಿಂದ ನಮ್ಮನ್ನು ಬಿಟ್ಟುಬಿಟ್ಟೆಯಲ್ಲಾ ! ಸಂಪಾದನೆಯಂ ಯಾರಿಗೋಸ್ಕರ ಮಾ
ಡುವೆ ? ಮಕ್ಕಳುಮರಿಗಳು ನಿನಗೆ ಬೇಡ. ಬರಿಯಬಾಯಮ್ಮಾತನ್ನು ವೆಚ್ಚಮಾಡಿ ಯಶ
ಸ್ಸನ್ನು ತೆಗೆದುಕೊಳ್ಳುವುದಕ್ಕೆ ನಿನಗೆ ಆಗದೆಹೋಯಿತು. ಹಣವನ್ನು ಯತ್ನದಿಂದ
ರಕ್ಷಣೆಮಾಡಿಟ್ಟಿರುವೆ. ಅದಂ ಯಾರಿಗೆ ಕೊಟ್ಟೇಯೆ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ
ಸುಖವಿಲ್ಲ. ಹಸಿವುಗೊಂಡು ಅಳುತಿರುವರು. ಆದರೆ ಯಾವುದರಿಂದ ನಿನಗೆ ಲೋಕ
ದಲ್ಲಿ ಪ್ರತಿಷ್ಠೆಯುಂಟಾಗುವುದೋ ಅದಂ ಮಾಡಬೇಕು. ನಮ್ಮನ್ನು ಗೋಳಾಡಿಸಿ
ದರೆ ಎಂದಿಗೂ ನಿನಗೆ ಒಳ್ಳಿತಾಗುವುದಿಲ್ಲ. ಈವಿಚಾರವಂ ಮನಸ್ಸಿಗೆ ತಂದು ದೀನನಾದ
ನನ್ನ ಯೋಗಕ್ಷೇಮವಂ ವಿಚಾರಿಸಬೇಕು. ಇಲ್ಲದಿದ್ದರೆ ನಿನ್ನ ದಾಕ್ಷಿಣ್ಯವನ್ನು ಬಿಟ್ಟು
ಸರ್ವಪ್ರಕಾರದಲ್ಲಿಯೂ ನಿನ್ನ ದೊಡ್ಡತನವಂ ಉಳಿಯಿಸುವುದಿಲ್ಲ. ಈಯರ್ಥವನ್ನು
ಸಂತರ ಸಂಗಡ ಹೇಳಿ ನಿನ್ನ ಸಂಪಾದನೆಯೆಲ್ಲವನ್ನೂ ಮುಳುಗಿಸುವೆನು. ನಿನ್ನ ನಾಮ
ವನ್ನು ಹಗಲಿರುಳೂ ಜಪಿಸುವೆನು. ಅದನ್ನು ಯಾವಾಗಲೂ ಮನಸ್ಸಿಗೆ ತಾರದೆ ಔದಾ
ಸೀನ್ಯವನ್ನೇ ಮಾಡುವೆ. ದಯಾಳುವೆ ! ನಮ್ಮ ಆಶೆಯನ್ನು ಏಕೆ ಮುಳುಗಿಸುವೆ ?
ನೀನು ಮಹಾಸಮರ್ಥನು. ಜಗನ್ಮಲ್ಲನು. ನಿನ್ನ ಹೊಟ್ಟೆಯಲ್ಲಿ ಭಾಗ್ಯಹೀನರಾದ ನಾವು
ಹುಟ್ಟಿದೆವು. ಈಯಪಕೀರ್ತಿಯುಂಟಾಯಿತು. ಜನಗಳಲ್ಲಿ ನಾಚಿಕೆಗೇಡಾಯಿತು. ಇಲ್ಲಿ
ತಿನ್ನುವುದಕ್ಕೆ ಅನ್ನವಿಲ್ಲದಿರಲು, ತೌರ್ಮನೆಯಿಂದ ಕರೆಯುವುದಕ್ಕೂ ಬಾರದಿದ್ದಮೇಲೆ
ಈ ಕೆಟ್ಟಜೀವನವನ್ನು ಏಕೆ ಮಾಡಬೇಕು ? ರುಕ್ಮಿಣೀಪತಿಯೇ ! ಮುಂದಾದರೂ
ನನ್ನ ಜ್ಞಾಪ್ತಿಯು ನಿನಗಿರಲಿ. ಹಗಲೂ ರಾತ್ರಿಯೂ ವ್ಯಸನವು ಹತ್ತಿರುವುದು. ಮನ

ದಲ್ಲಿ ನಿಷ್ಠುರಭಾವವಂ ವಹಿಸಲಾರೆನು. ಪ್ರಾಣವು ಕಂಠವನ್ನು ಬತ್ತಿಕೊಂಡು ಬರುತಿದೆ. ಮನಸ್ಸು ನಿನ್ನಪಾದದ ಬಳಿಗೆ ಬಂದು ಇದೆ. ನಿನ್ನ ದರ್ಶನವಂ ತೆಗೆದುಕೊಳ್ಳುವುದಕ್ಕೋಸ್ಕರ ಚಿತ್ತವು ಬಹುವಾಗಿ ತಲ್ಲಣಿಸುತಿರುವುದು. ಎಲ್ಲಾ ಕ್ಲೇಶಗಳನ್ನೂ ಬಿಟ್ಟು ಬರಗೆಟ್ಟವನಾಗಿ ನಿನ್ನ ಮಾರ್ಗವಂ ನೋಡುತಿರುವೆನು. ದೃಢವಾದ ಕೃಪಾ ದೃಷ್ಟಿಯಿಂದ ನೋಡಿ ತ್ವರೆಯಿಂದ ನನ್ನನ್ನು ಕರೆಯಿಸಿಕೊಳ್ಳಬೇಕು. ಬಂದುನಿಮಿಷವೂ ಮನಸ್ಸಿಗೆ ಧೈರ್ಯವಿಲ್ಲ. ಬುದ್ಧಿಗೆ ಸ್ಥೈರ್ಯವೆಲ್ಲಿಂದ ಬಂದೀತು? ಅಡಿಗಡಿಗೆ ಮನವನ್ನು ನಿಗ್ರಹಿಸಿಕೊಂಡರೂ ಮತಿಯು ಶುದ್ಧವಾಗದು. ಇಂತಹ ದಶೆಯು ಪ್ರಾಪ್ತವಾಗಿದೆ. ನೀನು ಸರ್ವವನ್ನೂ ಬಲ್ಲೆ. ದಾಸನಾದ ನನ್ನ ಭವಭಂಗವಂ ಮಾಡಬೇಕು. ನಿನ್ನ ಶರಣಾಗತರಾದವರನ್ನು ಯಾರನ್ನೂನೀನು ಉಪೇಕ್ಷಿಸಲಿಲ್ಲವೆಂದು ಕೇಳಿದುದರಿಂದ ನಿನ್ನ ಪಾದಂಗಳಂ ಸ್ಮರಿಸಿ ಶಿರಸ್ಸನ್ನು ಅವುಗಳಮೇಲೆ ಇಟ್ಟು ಇರುವೆನು. ಎಂದಿಗೆ ಉಚಿತವಂ ಕೊಡುವೆಯೋ? ಅದು ನನಗೆ ತಿಳಿಯದು. ಆದರೂ ಮನಸ್ಸನ್ನು ಸಮಾಧಾನಪಡಿಸಿಕೊಂಡು ನಿನ್ನ ಕೀರ್ತಿಯನ್ನು ಹಗಲೂ ಇರುಳೂ ವರ್ಣಿಸುತ್ತ ಇರುವೆನು. ನನ್ನ ಈಬಿನ್ನಹವಂ ಕೇಳಿ ನನ್ನನ್ನು ಬೇಗದಿಂ ಕರೆಯಿಸಿಕೊಳ್ಳುವನಾಗು. ಈ ವಾರೆನಡೆಯುವರು ಹಿಂತಿರುಗಿ ಬರುವವರೆಗೂ ಮಾರ್ಗವನ್ನು ನೋಡುತಿರುವೆನು. ಬಳಿಕ ಇವರ ಇದುರಿಗೆ ಹೋಗಿ ಸದ್ಭಾವದಿಂದ ನಮಸ್ಕಾರವಮಾಡಿ–ಸ್ವಾಮಿಯು ಏನಪ್ಪಣೆಯಂ ಕೊಟ್ಟಿರುವನು?–ಎಂದು ಕೇಳುವೆನು. ಮಹಾದ್ವಾರದ ಹಂತದ ಕಲ್ಲು ಎಂತು ಬಿದ್ದಿರುವುದೋ, ನಿಂತವನು ಕೋಲನ್ನು ಬಿಡಲು, ಅದು ಎಂತು ಭೂಮಿಯಲ್ಲಿ ಬೀಳುವುದೋ, ತಾಯಿಯ ಬಳಿಯ ಮಗುವು ಹಟವನ್ನು ಹಿಡಿದು ಗಡಬಡನೆ ಭೂಮಿಯ ಮೇಲೆ ಎಂತು ಹೊರಳಾಡುವುದೋ ಅಂತು ಸಾಷ್ಟಾಂಗಪ್ರಣಾಮವಂ ಮಾಡಿರುವನೆಂದು ಸಂತರು ನಿನಗೆ ಬಿನ್ನವಿಸದೆ ಇರರು. ಎಲೈ ಲಕ್ಷ್ಮೀಪತಿಯೇ! ನಿನ್ನ ಚರಿತ್ರೆಯನ್ನು ಸಂತೋಷದಿಂದ ಮಳಲೊಟ್ಟನಲ್ಲಿ ಪಾಡಿ ಕುಣಿದರೆ ದೇಹದಲ್ಲಿರುವ ತ್ರಿವಿಧತಾಪಗಳೂ ಪರಿಹಾರವೊಂದುವುವು. ತಾಯಿಯಾದ ನಿನ್ನಬಳಿಗೆ ಬಂದು ಪ್ರೇಮದಿಂದ ಸ್ತನ್ಯಪಾನವಂ ಮಾಡುವೆನು. ನನ್ನ ಕರುಣಾವಚನವಂ ಕೇಳಿ ಬೇಗನೆ ಉತ್ತರವಂ ಕಳುಹಿಸಬೇಕು. ಕೃಪಾಸಾಗರನೇ! ಜಗಜ್ಜೀವನನೇ! ಗುಣದೋಷಗಳೇನನೂ ಮನಸ್ಸಿಗೆ ತರಲಾಗದು. ನನ್ನಪಾಪಗಳಂ ಪರಿಹರಿಸಿ ನಿನ್ನ ಪಾದಗಳಂ ತೋರಿಸಬೇಕು. ನನ್ನ ದುರಿತಗಳನ್ನು ಪರಿಹರಿಸುವುದಕ್ಕೆ ಸಾಮರ್ಥ್ಯವಿಲ್ಲದವನಾಗಿ ಮನಸ್ಸನ್ನು ದೃಢಮಾಡಿಕೊಂಡು ನನ್ನನ್ನು ಪರದೇಶಿಯನ್ನಾಗಿ ಮಾಡಿಬಿಟ್ಟೆಯಾ? ನಿನ್ನ ಕೀರ್ತಿಯನ್ನು ಕೇಳಿ ನಿನ್ನ ದರ್ಶನಕ್ಕೆ ಅವಕಾಶವಿಲ್ಲದೆ ಹಗಲೂ ರಾತ್ರಿಯೂ ವ್ಯಸನಪಡುತ್ತಿರುವೆನು. ನಿನ್ನ ಸಾಕ್ಷಾದ್ದರ್ಶನವಾಗಲು, ಅಪಾರಲಾಭವುಂಟಾಗುವುದು. ಕಾಲವು ಕಳೆದುಹೋಗುವುದು. ವ್ಯರ್ಥವಾಗಿ ಶೋಕವನ್ನು ಮಾಡುತ್ತ ಕುಳಿತರೆ ಮತ್ತೂ ದುಃಖವುಂಟಾಗುವುದು. ಕಲ್ಪನೆಗಳು ಹಿತವಾಗಿ ತೋರವು. ಶ್ರೀಹರಿಯೇ! ನೀನು

ಅಂತರಸಾಕ್ಷಿಯಾಗಿರುವನು. ಇನ್ನುಮೇಲೆ ನಿನಗೆ ತಿಳಿದಂತೆ ಮಾಡು. ನಾನು ತಲ್ಲಣವನ್ನು ಬಿಟ್ಟು ಸ್ವಸ್ಥನಾಗಿ ನಿಂತೆನು. ಆದರೆ ನನ್ನನ್ನು ಉಪೇಕ್ಷಿಸಿ ಬಿಟ್ಟರೆ ನಿನಗೆ ನನ್ನ ಗೋಳು ತಾಗುವುದು. ಅದರಿಂದ ನೀನು ಸತ್ತುಹೋದರೆ ಆದೋಷವು ನನಗೆ ಬರುವುದಲ್ಲಾ ! ಆದಕಾರಣ ನಿನಗೆ ಆಶೀರ್ವಾದವನ್ನು ಮಾಡುವೆನು. ರುಕ್ಮಿಣೀಪತಿಯೇ ! ಈಗ ನೀನು ಸ್ವಸ್ವರೂಪದಿಂದ ಬಾಳು. ನೀನು ಬಲ್ಲ ಚೆನ್ನಾಗಿ ಇದ್ದರೆ ಮಮತೆಯಿಂದ ಎಂದಿಗಾದರೂ ನನ್ನ ಸಂರಕ್ಷಣೆಯನ್ನು ಮಾಡೀಯೆ. ಒಂದುವೇಳೆ ದೂರದಲ್ಲಿ ನನ್ನನ್ನು ಬಿಟ್ಟರೂ ಪತ್ರಮುಖದಿಂದ ಯೋಗಕ್ಷೇಮವನ್ನಾದರೂ ತೆಗೆದುಕೊಂಡೀಯೆ. ಪ್ರೇಮವು ಉತ್ಕಟವಾದರೆ ತೌರ್ಮನೆಯನ್ನಾದರೂ ನನಗೆ ತೋರಿಸೀಯೆ. ಜಗನ್ನಾಥನೇ ! ನನ್ನ ಮಾತಂ ಕೇಳು. ಕೊನೆಗೆ ನಿನಗೆ ತಿಳಿದಂತೆ ಮಾಡು. ಇನ್ನು ಮೇಲೆ ಹರಟುವುದಿಲ್ಲ. ನಿನ್ನ ಮನಸ್ಸಿಗೆ ತೋರಿದಂತೆ ಪ್ರತ್ಯುತ್ತರವನ್ನು ಕಳುಹು. ನಾನು ತಿಳಿದೋ ತಿಳಿಯದೆಯೋ ಮಾತನಾಡಿದ ಅಪರಾಧವನ್ನು ಕ್ಷಮಿಸು. ಮೊದಲು ಮಕ್ಕಳನ್ನು ಮುದ್ದಿಸುವಂತೆ ಮುದ್ದಿಸಿ ನನ್ನ ಮನೋರಥವನ್ನು ಪೂರಣಮಾಡು. ದರ್ಶನವನ್ನು ಕೊಟ್ಟು ಭವಬಂಧನದ ಸಂಕಟವನ್ನು ಪರಿಹರಿಸು. ''

ಇಂತೆಂದು ಪತ್ರದಲ್ಲಿ ಬರೆದು ಸಂತರ ಕೈಯಲ್ಲಿ ಕೊಟ್ಟು ಅವರನ್ನು ಕುರಿತು- ನೀವು ನನ್ನ ಬಿನ್ನಹವನ್ನು ಸ್ವಾಮಿಗೆ ತಿಳಿಯಿಸಬೇಕು. ತುಕ್ಕನ ಅನ್ಯಾಯವೇನಂ ಕಂಡು ಅವನನ್ನು ಬಿಟ್ಟು ಇರುವೆ?-ಎಂದು ಕೇಳಬೇಕು. ನನ್ನ ಸಂಕಟವನ್ನು ತಿಳಿಯಿಸಬೇಕು. ತುಕ್ಕನಿಗೆ ಪಂಡರಿಗೆ ಬರಲು ಶಕ್ತಿಯಿಲ್ಲ. ಇಟ್ಟಿಗೆಯ ಮೇಲೆ ಸಮವಾಗಿ ಇಟ್ಟಿರುವ ನಿನ್ನ ಚರಣಾರವಿಂದವನ್ನು ಅವನು ನೋಡುವುದಕ್ಕೆ ಇಲ್ಲವಲ್ಲಾ !-ಎಂದು ಬಿನ್ನವಿಸಿ-ಎಂದು ನುಡಿದನು.

ಶ್ರೋತೃಗಳಿರಾ ! ಕಥೆಯ ಅನುಸಂಧಾನವನ್ನು ದೂರದಲ್ಲಿ ಬಿಟ್ಟು ಗ್ರಂಥವನ್ನು ಅತಿವಿಸ್ತರಮಾಡುವೆ-ಎಂದೀರಿ. ಈ ಶಂಕೆಯನ್ನು ಚಿತ್ತದಲ್ಲಿ ಮಾಡಲಾಗದು. ಆನಂದವಿಶೇಷದಿಂದ ಸ್ಮೃತಿತಪ್ಪಲು, ಕಥಾಸರಣಿಯು ಮರೆತುಹೋಯಿತು. ಇಂತೂ ಅಲ್ಲ. ನಾನು ವ್ಯರ್ಥವಾಗಿ ಗ್ರಂಥವನ್ನು ಬಳೆಯಿಸಲಿಲ್ಲ. ತುಕ್ಕನ ಲೇಖನವನ್ನು ನೋಡಿ ಅದರ ಅರ್ಥವನ್ನು ಬರೆದಿರುವೆನು. ತುಕ್ಕಾರಾಮನ ಪ್ರೇಮವಿಶೇಷವನ್ನು ವರ್ಣಿಸುವುದಕ್ಕೆ ಸಹಜವಾಗಿ ನನ್ನ ಬುದ್ಧಿಯು ಸಾಲದು. ಚಿತ್ರಗಾರನು ಸೂರ್ಯಮಂಡಲವಂ ಬರೆಯಬಲ್ಲನು. ಪ್ರಕಾಶವನ್ನು ಕೊಡಲಾರನು. ನದಿಯು ಪೂರ್ಣವಾಗಿ ಪ್ರವಹಿಸಿದರೂ ಅದು ಸಮುದ್ರಕ್ಕೆ ಸರಿಯಾಗಲಾರದು. ಧೇನುವು ಪೂರ್ಣವಾಗಿ ಹಾಲನ್ನು ಕರೆದರೂ ಕಾಮಧೇನುವಿಗೆ ಸರಿಯೆನಿಸಲಾರದು. ಹಿತ್ತಾಳೆಯು ದೂರದಿಂದ ಹೊಳೆದರೂ ಅದು ಶುದ್ಧಕಾಂಚನವೆನಿಸಲಾರದು. ಸುಧಾರಸದ ಸಾಮರ್ಥ್ಯವು ಔಷಧಗಳಿಗೆ ಬರಲಾರದು. ಮೇಘೋದಯದಲ್ಲಿ ನವಿಲ್ಗಳು ಕುಣಿಯುವುದು

ಎತ್ತುಗಳಿಗೆ ಬರಲಾರದು. ಆಮೆರತರ ಕಳಿಗಳೂ ಬೇರೆಬೇರೆ ಇರುವುವು. ಆ ಅಭಂಗಗಳ ಸ್ವಾರಸ್ಯವು ನನ್ನ ಮಾತಿನಲ್ಲಿ ಎಂದಿಗೂ ಇಲ್ಲ. ಸುಜ್ಞಾನಿಗಳಾದ ಚತುರರು ಬಲ್ಲರು. ಸೂರ್ಯೋದಯದಲ್ಲಿ ನಕ್ಷತ್ರಗಳ ಕಾಂತಿ ಲೋಪಿಸಿಹೋಗುವಂತೆ ತುಕ್ಕೋಬನ ಪ್ರೇಮರಸವಂ ಹೇಳುವ ವಿಷಯದಲ್ಲಿ ಸಮಸ್ತರ ಮತಿಯು ಪ್ರತಿಭೆಯೂ ಕುಂಠಿತವಾಗುವುವು. ಕಸ್ತೂರಿಯಲ್ಲಿ ಮೃತ್ತಿಕೆಯು ಸೇರಲು, ಎಂತು ಸುವಾಸಿತವಾಗುವುದೋ; ಅಂತು ಸಂತರ ಸ್ತೋತ್ರದಲ್ಲಿ ಬಗೆಯು ಹತ್ತಲು, ಅನಾಯಾಸದಿಂದ ಪಾವನನೆನಿಸುವುದು. ಇದಂತಿರಲಿ. ವಿಷ್ಣುಭಕ್ತರು ಫಂಡರಿಗೆ ಹೋದರು. ತುಕ್ಕಾರಾಮನು ಅವರ ವಶಕ್ಕೆ ಪತ್ರಿಕೆಯಂ ಬರೆದು ಕಳುಹಿಸಿಕೊಟ್ಟನು.

ಮುಂದಣ ಅಧ್ಯಾಯದಲ್ಲಿ ಶ್ರೋತೃಗಳು ಪ್ರೇಮಭರಿತರಾಗಿ ಕೇಳಬೇಕು. ಕೃಪಣನು ಧನವನ್ನು ಎಣಿಸುವಾಗ ಮನಸ್ಸನ್ನು ಸ್ವಲ್ಪವಾದರೂ ಬೇರೆಕಡೆಯಲ್ಲಿ ಇಡದಂತೆ ಶ್ರೋತೃಗಳು ಈ ಕಥಾಶ್ರವಣಸಂದರ್ಭದಲ್ಲಿ ಮನಸ್ಸನ್ನು ಮತ್ತೊಂದು ಲಕ್ಷ್ಯದಲ್ಲಿ ಇಡಬಾರದು. ದುರ್ಜನನು ಪರನಿಂದೆಯಂ ಕೇಳಿ ಎಂತು ತಲ್ಲೀನನಾಗುವನೋ; ಅಂತು ಕಥಾಶ್ರವಣದಲ್ಲಿಯೇ ಲೀನವಾದ ಮನಸ್ಸುಳ್ಳವರಾಗಬೇಕು. ಆಪ್ರಕಾರದಿಂದ ಮನಸ್ಸನ್ನು ಕೊಟ್ಟು ಕೇಳಲು, ರುಕ್ಮಿಣೀಪತಿಯು ಸಂತುಷ್ಟನಾಗುವನು. ಆದುದರಿಂದ ಶ್ರವಣದಲ್ಲಿ ಆದರವಿಶೇಷವಿರಬೇಕೆಂದು ಮಹೀಪತಿಯು ಬಿನ್ನವಿಸಿಕೊಳ್ಳುವನು.

ಇಂತು ಶ್ರೀಭಕ್ತವಿಜಯದಲ್ಲಿ ಐವತ್ತನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಐವತ್ತೊಂದನೆಯ ಅಧ್ಯಾಯಂ.

ಜಯ ದೀನದಯಾಳುವೇ! ಹೃಷೀಕೇಶನೇ! ಭಕ್ತವರಹೃದಯನಿವಾಸಿಯೇ! ರುಕ್ಮಿಣೀಕಾಂತನೇ! ಫಂಡರೀಶನೇ! ಜಗದ್ಗುರುವೇ! ಜಗಲ್ಲೀಲಾನಾಟಕಸೂತ್ರಧಾರನೇ! ವಿಶ್ವಾಧಾರನೇ! ಯದುರಾಜನೇ! ಮಹಾಲಕ್ಷ್ಮಿಯು ನಿನ್ನ ಪಾದಗಳನ್ನು ಹೃದಯದಲ್ಲಿ ನೆನೆದು ತಲ್ಲೀನೆಯಾಗಿರುವಳು. ಅಂತರಸಾಕ್ಷಿಯೇ! ಚರಾಚರವಾಸಿಯೇ! ಆದ್ಯನೇ! ನಿರ್ಗುಣನೇ! ಪುಂಡರೀಕವರದನೇ! ಫಂಡರೀನಾಥನೇ! ಅವಿನಾಶನೇ! ಕರುಣಾಸಮುದ್ರನೇ! ವೈಕುಂಠಪತಿಯೇ! ವಿರಾಟ್ಸ್ವರೂಪನೇ! ವಾಮನಮೂರ್ತಿಯೇ! ನೀನು ಪರಶುವಂ ಹಿಡಿದು ಭೂಮಿಯನ್ನು ದುಷ್ಟಕ್ಷತ್ರಿಯರಹಿತವಾದುದನ್ನಾಗಿ ಮಾಡಿ ಬ್ರಾಹ್ಮಣರನ್ನು ಸ್ಥಾಪಿಸಿದೆ. ಅಸುರಮರ್ದನನೇ! ಭಕ್ತಸ್ಥಾಪ

ಕನೇ! ತ್ರೈಲೋಕ್ಯಪತಿಯೇ! ವಿಧಿಜನಕನೇ! ಪ್ರೇಮಳಭಕ್ತರ ಪ್ರಿಯಸಖನು ನೀನಲ್ಲದೆ ಮತ್ತಾವನಿರುವನು? ನಾನು ನಿನ್ನ ಸ್ತುತಿಯನ್ನು ಸ್ವಮುಖದಿಂದ ಮಾಡ ಬೇಕೆಂದರೆ, ನನ್ನ ಬುದ್ಧಿಗೆ ಅಖಂಡವಾದ ಸ್ಫೂರ್ತಿಯಿಲ್ಲ. ಅರ್ಚನೆಯಂ ಮಾಡು ವೆನೆಂದರೆ, ಅನುಕೂಲವಾದ ಸಾಹಿತ್ಯವಿಲ್ಲ. ಅನುತಾಪದಿಂದ ತೀರ್ಥಾಟನವನ್ನಾ ದರೂ ಮಾಡುವೆನೆಂದರೆ, ಶರೀರದಲ್ಲಿ ಶಕ್ತಿ ಕಡಿಮೆಯಾಯಿತು. ಸತ್ಪಾತ್ರದಲ್ಲಿ ದಾನ ವಂ ಮಾಡುವೆನೆಂದರೆ ಕೈಯಲ್ಲಿ ಧನವಿಲ್ಲ. ವಿಧ್ಯುಕ್ತವಾದ ವ್ರತವಂ ಮಾಡುವೆನೆಂ ದರೆ, ಕ್ಷುಧೆಯಿಂದ ಪ್ರಾಣವು ವ್ಯಾಕುಲವಾಗುವುದು. ಸರ್ವಭೂತಗಳನ್ನೂ ವಂದಿ ಸುವೆನೆಂದರೆ, ಗುಣದೋಷಗಳು ನೆನಪಿಗೆ ಬರುವುವು. ಶಾಸ್ತ್ರಗಳ ಅಭ್ಯಾಸವಂ ಮಾಡುವೆನೆಂದರೆ, ನನಗೆ ಅಂತಹ ಆಯುಸ್ಸಿಲ್ಲ. ಪಶ್ಚಾತ್ತಾಪದಿಂದ ಪ್ರಪಂಚದ ಭ್ರಾಂತಿಯನ್ನೇ ಬಿಡುವೆನೆಂದರೆ, ಮನದಲ್ಲಿ ವೈರಾಗ್ಯವು ದೃಢವಾಗಿ ನಿಲ್ಲದು. ಏಕಾಂ ತದಲ್ಲಿ ನಿನ್ನ ಧ್ಯಾನವಂ ಮಾಡುವೆನೆಂದರೆ, ಚಂಚಲವಾದ ಈ ಮನಸ್ಸನ್ನು ಸ್ಥೈರ್ಯ ಗೊಳಿಸುವುದಕ್ಕೆ ಆಗದು. ಇದು ಸ್ವರೂಪಾನುಸಂಧಾನವಂ ಬಿಟ್ಟು ಅಡವಿಯಡವಿದಿರು ಗುವುದು. ಇಂದ್ರಿಯನಿಗ್ರಹವಂ ಮಾಡುವೆನೆಂದರೆ, ಇದು ನನ್ನ ಸ್ವಾಧೀನವಲ್ಲ. ಈ ಪ್ರಕಾರದ ಅವಗುಣಗಳಿಂದ ಪರಿವೃತನಾಗಿರುವೆನು. ನನ್ನ ಅಂತರವನ್ನು ನೀನೆ ಬಲ್ಲೆ. ಆದುದರಿಂದ ರುಕ್ಮಿಣೀಪತಿಯೇ! ನಿನ್ನನ್ನು ಪ್ರಾರ್ಥಿಸುವೆನು. ಯಾವ ಭಕ್ತ ರು ನಿನ್ನನ್ನು ಪೂಜಿಸುತಿರುವರೋ ಅವರ ಸದ್ಗುಣಂಗಳಂ ವರ್ಣಿಸುವುದಕ್ಕೆ ಉತ್ತ ಮವಾದ ಸ್ಫೂರ್ತಿಯಂ ಕೊಡಬೇಕು. ಮನೋವಾಕ್ಕಾಯಗಳಿಂದಲೂ ಇದೇ ಪ್ರಸಾ ದವನ್ನು ಅಪೇಕ್ಷಿಸುವೆನು. ಇದನುಳಿದು ಮತ್ತೊಂದಪೇಕ್ಷೆಯಿಲ್ಲ. ಆದುದರಿಂದ ಸ್ವಾಮಿಯೇ! ನನ್ನ ಮನೋರಥವಂ ಪೂರಣಮಾಡಬೇಕು.

ಶ್ರೋತೃಗಳಿರಾ! ಕೇಳಿ. ಹಿಂದಣ ಅಧ್ಯಾಯದಲ್ಲಿ ತುಕ್ಕಾರಾಮನು ಪ್ರೇಮ ಭರಿತನಾಗಿ ಪತ್ರಿಕೆಯಂ ಬರೆದು ಸಂತರಸಂಗಡ ಕಳುಹಿಸಿದನೆಂಬ ಸರಸವಾದ ಕಥೆ ಯಂ ಕೇಳಿದಿರಷ್ಟೆ. ಅವರು ಇಪ್ಪತ್ತು ಅಭಂಗವುಳ್ಳ ಆ ಲೇಖನವಂ ತೆಗೆದುಕೊಂಡು ಫಂಡರಪುರಕ್ಕೆ ಹೊರಟರು. ಮಾರ್ಗದಲ್ಲಿ ಆನಂದಾತಿಶಯದಿಂದ ಕೀರ್ತನವಂ ಮಾಡುತ್ತ ಉತ್ಸಾಹಗೊಂಡು ಫಂಡರಪುರವಂ ಕಂಡು ಸಾಷ್ಟಾಂಗನಮಸ್ಕಾರವಂ ಮಾಡಿ ಒಬ್ಬರನೊಬ್ಬರು ಆಲಿಂಗಿಸಿಕೊಳ್ಳುತ್ತ ಆನಂದಬಾಷ್ಪವು ಕಣ್ಣುಗಳಿಂದ ಸುರಿಯುತ್ತಿರಲು, ರುಕ್ಮಿಣೀಪತಿಗೆ ಆರತಿಯನೆತ್ತಿ ಧ್ವಜಪತಾಕೆಗಳನ್ನು ಕೈಯಲ್ಲಿ ತೆಗೆದುಕೊಂಡು ಚಂದ್ರಭಾಗೆಯ ತೀರಕ್ಕೆ ಬಂದು ಸ್ನಾನವಂಮಾಡಿ ನಿತ್ಯನಿಯಮಂ ಗಳಂ ನೆರವೇರಿಸಿ ಪುಂಡರೀಕನನ್ನು ಆಲಿಂಗಿಸಿಕೊಂಡು ಬಳಿಕ ಕ್ಷೇತ್ರಪ್ರದಕ್ಷಿಣೆಯಂ ಮಾಡಿ ತಾಳಮೃದಂಗಗಳಂ ಬಾಜಿಸುತ್ತ ಆನಂದಭರದಿಂದ ಪಾಡುತ್ತ ನರ್ತನಮಾ ಡುತ್ತ ಮಹಾದ್ವಾರವಂ ಸೇರಿ ಗರುಡಸ್ತಂಭದ ಬಳಿಯಲ್ಲಿ ಸಾಷ್ಟಾಂಗನಮಸ್ಕಾರವಂ ಮಾಡಿ, ತುಕ್ಕಾರಾಮನು ಬರೆದುಕೊಟ್ಟ ಬಿನ್ನವತ್ತಳೆಯನ್ನು ಬಿನ್ನವಿಸಿದರು.

ಆ ಕರುಣಾವಚನನಂ ಕೇಳಲು, ರುಕ್ಮಿಣೀಪತಿಗೆ ಕಂಠವು ಬತ್ತಿಕೊಂಡು ಬಂದಿತು. ಸ್ವಾಮಿಯು ಸಂಭ್ರಾಂತನಾಗಿ, ಬೇಟೆಗಾರನ ಬಲೆಗೆ ಸಿಕ್ಕಿದ ತನ್ನ ಮರಿಯಂ ಕಂಡ ಜಿಂಕೆಯಂತೆಯೂ, ಸಿಡುಬಿನಿಂದ ಸಂಕಟಪಡುತ್ತಿರುವ ಪಸುಳೆಯನ್ನು ನೋಡಿದ ಜನನಿಯಂತೆಯೂ, ಜೀವನವು ಬತ್ತಿಹೋಗಲು, ತಲ್ಲಣಿಸುತ್ತಿರುವ ಮತ್ಸ್ಯದಂತೆಯೂ, ಕಳ್ಳನು ಹಣವೆಲ್ಲವನ್ನೂ ಸೂರೆಮಾಡಲು, ತಪಿಸುವ ಲುಬ್ಧನಂತೆಯೂ, ತನ್ನ ಭಕ್ತನ ಸಂಕಟವಂ ತಿಳಿದು ಚಿಂತಾಭರದಿಂದ ಕುದಿಕುದಿಯುತ್ತ ಕಣ್ಣಿನಿದುಂಬಿ-ಯಾತ್ರಿಕರೆಲ್ಲರೂ ಬಂದರು; ಬಬ್ಬ ತುಕ್ಕಾರಾಮನು ಕಾಣುವುದಿಲ್ಲ. ಇವರಿಂದ ನನ್ನ ಮನಸ್ಸಿಗೆ ಸ್ವಲ್ಪವೂ ಸಂತೋಷವಿಲ್ಲ. ಈಗ ನಾನು ಇಲ್ಲಿಂದ ಹೊರಡುವೆನೆಂದರೆ, ಯಾತ್ರಿಗೆ ಸಂತರನೇಕರು ಬಂದಿರುವರು. ಇದಕ್ಕೆ ಏನು ಆಲೋಚನೆ?-ಎಂದು ರುಕ್ಮಿಣಿಯಂ ಬೆಸಗೊಳ್ಳಲು, ಆಕೆ-ಸ್ವಾಮಿಯೇ! ಆತನಂ ಕರೆದುತರುವುದಕ್ಕೆ ಗರುಡನಿಗೆ ಅಪ್ಪಣೆಯಂಕೊಟ್ಟರೆ ಬಂದು ನಿಮಿಷದಲ್ಲಿ ಕರದುಕೊಂಡು ಬರುವನು. ಈ ಸಾಮರ್ಥ್ಯವು ನಿಮಗೆ ಇರುವಾಗ ವ್ಯರ್ಥವಾಗಿ ಏಕೆ ಚಿಂತೆಯಂಮಾಡಬೇಕು?-ಎಂದು ನುಡಿದಳು. ಆ ನುಡಿಯಂ ಕೇಳಿ ಹೃಷೀಕೇಶನು ಸಂತೋಷಗೊಂಡು ಗರುಡನಂ ಕರೆದು ಅವನಂ ಕುರಿತು-ನೀನು ತ್ವರೆಯಿಂದ ದೆಹೂಗೆ ಹೋಗಿ ಕಾರ್ಯವಂ ಸಾಧಿಸಬೇಕು-ಎಂದು ನುಡಿದು, ಬಳಿಕ ಲೇಖನಿಯಂ ತೆಗೆದುಕೊಂಡು ಸ್ವಹಸ್ತದಿಂದ ಇಂತು ಪತ್ರದಲ್ಲಿ ಬರೆದನು :- ಯಾವವರೆಗೆ ವೈಕುಂಠಕೈಲಾಸಾದಿಗಳು ಇರುವುವೋ ಆವರೆಗೆ ನೀನು ಚಿರಂಜೀವಿಯಾಗಿರತಕ್ಕವನು. ನಿರಂತರವೂ ನನ್ನ ಹೃದಯಮಂದಿರದಲ್ಲಿರುತ್ತ ನನ್ನ ಸ್ಮೃತಿಪಥಕ್ಕೆ ವಿಷಯನಾಗುತಿರುವೆ. (ಎಂದು ಆಶೀರ್ವಾದವಂ ಮಾಡಲು, ರುಕ್ಮಿಣಿಯು ವಿಲಾಸವಿಲಸಿತವಾದ ಮನವುಳ್ಳವಳಾಗಿ, ಸ್ವಾಮಿಯೇ! ನಿಮ್ಮ ಮುಖದಿಂದ ಬಂದ ಮಾತು ಎಂದಿಗೂ ಅಸತ್ಯವಲ್ಲ-ಎಂದು ಮುಗುಳ್ನಗೆಯಿಂದ ನಕ್ಕಳು) ತುಕ್ಕಾರಾಮನೇ! ನಿನ್ನ ವ್ಯಥೆಯನ್ನು ಕೇಳಿದ ನನ್ನ ಮನಸ್ಸು ವ್ಯಾಕುಲವಾಗಿರುವುದು. ಅದೆಂತೆಂದರೆ-ನಿನ್ನ ಮನಸ್ಸೇ ಸಾಕ್ಷಿಯಾಗಿದೆ. ಜಾತ್ರಿಗರು ಬಿನ್ನವಿಸುವುದೂ ಬಹುವಾಗಿ ಕಳವಳಗೊಂಡಿರುವೆನು. ನಿನ್ನದರ್ಶನಕ್ಕೆ ಓಡಿಬರುವೆನೆಂದರೆ, ಇಲ್ಲಿ ಯಾತ್ರಿಕರು ಅನೇಕರು ಬಂದಿರುವರು. ಆದುದರಿಂದ ನಿನ್ನಂ ಕರೆದುತರುವುದಕ್ಕೆ ಗರುಡನಂ ಕಳುಹಿಸಿರುವೆನು. ನೀನು ಮನದಲ್ಲಿ ಸಂಕೋಚಪಡದೆ ಇವನ ಬೆನ್ನಮೇಲೆ ಕುಳಿತುಕೊಂಡು ಬಂದು ಕ್ಷಣದೊಳಗಾಗಿ ನನಗೆ ದರ್ಶನವಂ ಕೊಡು.

ಇಂತು ಪತ್ರವಂ ಬರೆದು ಗರುಡನಂ ಕುರಿತು-ನನ್ನಸ್ಥಳದಲ್ಲಿ ತುಕ್ಕಾರಾಮನೆಂದು ತಿಳಿದು ಆತನಂ ಬೆನ್ನಮೇಲೆ ಕುಳ್ಳಿರಿಸಿಕೊಂಡು ಬರುವನಾಗು-ಎಂದು ಆಜ್ಞಾಪಿಸಲು, ಆತನು ಅವಶ್ಯವೆಂದು ಪಾದಗಳಮೇಲೆ ಶಿರವನಿಟ್ಟು-ಸ್ವಾಮಿಯೇ! ನೀವು ಯಾರಂ ಕೈಹಿಡಿವಿರೋ ಅವರು ನನಗೆ ವಂದ್ಯರು. ಸರಸ್ವತಿಯು ಮೂರ್ಖನಿಗೆ ಪ್ರಸ

ನ್ನೆಯಾದರೆ ಅವನನ್ನು ಪಂಡಿತರು ಸನ್ಮಾನಿಸುವುದಿಲ್ಲವೇ ? ಸಮುದ್ರನು ನದಿಯಂ ಅಂಗೀಕರಿಸಲು, ಅದನ್ನು ತೆರೆಗಳು ಉಪೇಕ್ಷಿಸುವುದುಂಟೇ ? ಅಂತು ತುಕ್ಕಾರಾಮನ ಅಂತಶ್ಶುದ್ಧಿಯಂ ನೋಡಿ ನೀವು ಅಭಿಮಾನಿಸಿರುವಾಗ ನಾವು ಬೇರೆ ನೋಡಲು ಶಕ್ತರೇ ?-ಎಂದು ಬಿನ್ನವಿಸಿ ಮತ್ತೆ ಪಾದಗಳಿಗೆ ಎರಗಿ ಅಲ್ಲಿಂದ ಹೊರಟನು.

ಇತ್ತ ತುಕ್ಕಾರಾಮನು ತಲೆಯ ಮೇಲೆ ಕೈಗಳಂ ಇರಿಸಿಕೊಂಡು ತಾಯ ಮಾರ್ಗವನ್ನೇ ನೋಡುವ ಬಾಲಕನಂತೆ ಹಗಲೂ ಇರುಳೂ ಯಾತ್ರಿಕರ ಮಾರ್ಗವನ್ನೇ ನಿರೀಕ್ಷಿಸುತ್ತ, ಬಾಯಾರಿಕೆಯಿಂದ ಬಾಯಂ ತೆರೆದುಕೊಂಡು ಮೇಲೆನೋಡುತಿರುವ ಚಾತಕದಂತೆಯೂ, ಹಸಿವುಗೊಂಡು ತಾಯನ್ನೇ ನೋಡುವ ಆವೆಯ ಮರಿಯಂತೆಯೂ, ಕಳೆದುಕೊಂಡ ಧನವನ್ನೇ ರಾತ್ರಿಯೂ ಹಗಲೂ ಚಿಂತಿಸುತ್ತ ಹಂಬಲಿಸುವ ಲುಬ್ಧನಂತೆಯೂ, ತದೇಕಾಯತ್ತಚಿತ್ತನಾಗಿ ಕಳವಳಗೊಂಡು, ನೀರು ಬತ್ತಲು, ತಲ್ಲಣಿಸುವ ಮೀನಂತೆ ಪಂಡರಪುರದ ವಿಯೋಗದಿಂದ ತಲ್ಲಣಿಸುತಿದ್ದನು. ಆಗ ಆಕಸ್ಮಿಕವಾಗಿ ಗರುಡನು ಬಂದು ಇದಿರಲ್ಲಿ ನಿಲ್ಲಲು, ತುಕ್ಕಾರಾಮನು ಕಂಡು ದಂಡಪ್ರಣಾಮವಂ ಮಾಡಿ ಆಲಿಂಗಿಸಿಕೊಂಡು-ಶ್ರೀರುಕ್ಮಿಣೀಪತಿಯು ಸುಖದಿಂದಿರುವನೇ ?-ಎಂದು ಕ್ಷೇಮಸಮಾಚಾರವಂ ಕೇಳಿ, ಆ ಸ್ವಾಮಿಯ ಸಂದರ್ಶನವು ನನಗೆ ಎಂದಿಗಾಗುವುದೋ ಎಂದು ವ್ಯಸನಪಡುತಿರುವೆನು. ಕೋಪಗೊಂಡು ಮನವಂ ಕಠಿನಮಾಡಿಕೊಂಡು ನನ್ನನ್ನು ಪರದೇಶಿಯಂ ಮಾಡಿಬಿಟ್ಟನೋ ? ಯಾತ್ರಿಕರು ಅನೇಕರು ಬಂದು ಸೇರಿರಬಹುದು. ಆ ಸಂಭ್ರಮದಲ್ಲಿ ನನ್ನ ಮರೆವು ಉಂಟಾಯಿತೋ ? ನನ್ನಲ್ಲಿ ಏನು ದೋಷವು ಸಂಭವಿಸಿತೋ ನಾನು ಅರಿಯೆನು—ಎನಲು, ಗರುಡನು ಆತನ ಮಾತಂ ಕೇಳಿ-ಜಗಜ್ಜೀವನನು ನಿನಗೋಸ್ಕರ ಬಹುವ್ಯಾಕುಲನಾಗಿರುವನು. ಪಸುಳೆಯನ್ನು ಅಗಲಿದ ಜನನಿಯಂತೆಯೂ, ಮರಿಗಳನ್ನು ಅಗಲಿದ ಹುಲ್ಲೆಯಂತೆಯೂ ನಿನ್ನ ವಿಯೋಗದಿಂದ ತಲ್ಲಣಿಸುತಿರುವನು. ಬಾಯಾರಿದವನು ನೀರಿಲ್ಲದಿರಲು ತಪಿಸುವಂತೆ ತಪಿಸುತ್ತ ಸರ್ವಕಾಲದಲ್ಲಿಯೂ ನಿನ್ನನ್ನೇ ನೆನೆಯುತಿರುವನು. ಈಗ ನಿನ್ನನ್ನು ಕರೆದು ತರುವುದಕ್ಕೆ ನನಗೆ ಅಪ್ಪಣೆಯಂ ಕೊಟ್ಟಿರುವನು-ಎಂದು ನುಡಿದನು.

ತುಕ್ಕಾರಾಮನು ಆಮಾತಂ ಕೇಳಿ ಸಂತೋಷಪಟ್ಟನು. ಗರುಡನು ಸ್ವಾಮಿ ಬರೆದುಕೊಟ್ಟ ಪತ್ರವನ್ನು ಓದಲು, ಆಶಬ್ದಗಳು ಕಿವಿಯಲ್ಲಿ ಬಿದ್ದಮಾತ್ರಕ್ಕೆ ಆನಂದಾಶ್ರು ಕಣ್ಣುಗಳಲ್ಲಿ ತುಂಬಿ ತುಳುಕಾಡಿತು. ಬಳಿಕ ಆಪತ್ರವನ್ನು ತುಕ್ಕೋಬನು ತೆಗೆದುಕೊಂಡು ಅಡಿಗಡಿಗೂ ಸಿರದಲ್ಲಿ ವಹಿಸಿ ಹೃದಯದಲ್ಲಿ ಇರಿಸಿ ಪ್ರೀತಿಯಿಂದ ಆಲಿಂಗಿಸಿಕೊಂಡನು. ಮೇಘವು ವರ್ಷಿಸಲು, ಬಾಗಿದ ಬಳ್ಳಿಯು ಎಂತು ವಿಕಾಸಗೊಳ್ಳುವುದೋ ಸೂರ್ಯನು ಉದಯಿಸಲು, ಸೊಪ್ಪಿನ ಮಡಿಯು ಎಂತು ಉಲ್ಲಾಸಗೊಳ್ಳುವುದೋ ಅಂತು ಉಲ್ಲಾಸಗೊಂಡನು. ಪೂರ್ವದಲ್ಲಿ ಶ್ರೀರಾಮಚಂದ್ರನ ಮಾರ್ಗವಂ ನಿರೀಕ್ಷಿಸುತ, ನಂದಿಗ್ರಾಮದಲ್ಲಿದ್ದ ಭರತನು ಆಂಜನೇಯನ ಮುಖದಿಂದ

ಶ್ರೀರಾಮನ ಆಗಮನದ ಸುದ್ದಿಯಂ ಕೇಳಿ ಎಂತು ಸಂತೋಷಪಟ್ಟನೋ ಅಂತು
ಗರುಡನು ತಂದುಕೊಟ್ಟ ರುಕ್ಮಿಣೀಪತಿಯ ಲೇಖನದಿಂದಲೂ ಗರುಡನು ನುಡಿದ ಶುಭ
ವಚನದಿಂದಲೂ ಸಂತೋಷಪಟ್ಟನು. ಆತನ ಮನಸ್ಸು ಅನಾಕುಲವಾಯಿತು.

ಬಳಿಕ ಗರುಡನು ಮೃದುಮಧುರವಾದ ನುಡಿಯಿಂದ—ಅಯ್ಯಾ ! ಈಗ ನನ್ನ
ಬೆನ್ನಮೇಲೆ ಕುಳ್ಳಿರು. ಒಂದು ಕ್ಷಣದಲ್ಲಿ ನಿನ್ನನ್ನು ಫಂಡರಪುರಕ್ಕೆ ಒಯ್ಯುವೆನು.
ರೋಗದಿಂದ ಬಹುಜರ್ಜರಿತಗಾತ್ರನಾಗಿ ನಡೆಯುವುದಕ್ಕೆ ಶಕ್ತಿಯಿಲ್ಲದುದರಿಂದ ಫಂಡ
ರೀನಾಥನು ಕೃಪೆಯಂ ಮಾಡಿ ನನ್ನನ್ನು ಕಳುಹಿಸಿರುವನು. ವಿಲಂಬಮಾಡದೆ ಬೇಗ
ಏಳು-ಎಂದು ನುಡಿಯಲು, ಆಮಾತಂ ಕೇಳಿ ತುಕ್ಕಾರಾಮನು—ನೀನು ನಮ್ಮ
ಸ್ವಾಮಿಯ ವಾಹನವಾದುದರಿಂದ ಸೇವಕರಾದ ನಮಗೆಲ್ಲರಿಗೂ ಪೂಜ್ಯನಾಗಿರುವೆ.
ಕಾಲುಗಳಲ್ಲಿ ಇರತಕ್ಕ ಪಾದುಕೆಗಳನ್ನು ಸಿರದಲ್ಲಿ ಧರಿಸಬಾರದು. ಆದರಂತೆ ಕಾಲ್ಗ
ಡಗವನ್ನೂ ಶಿರಸ್ಸಿಗೆ ಇಟ್ಟುಕೊಳ್ಳಬಾರದು. ಮಹಾದ್ವಾರದ ಹಂತದ ಕಲ್ಲನ್ನು ಪ್ರತಿ
ಮೆಯ ಸ್ಥಾನದಲ್ಲಿ ಇರಿಸಬಾರದು. ಸೇವಕನು ರಾಜನಿಗೆ ಬಹುಪ್ರೀತಿಪಾತ್ರನೆನಿಸಿ
ದರೂ ಅವನನ್ನು ಸಿಂಹಾಸನದಮೇಲೆ ಕುಳ್ಳಿರಿಸಬಾರದು. ಆದುದರಿಂದ ಪೂಜ್ಯನಾದ
ವಿಷ್ಣುವಾಹನನೇ ! ಕೇಳು. ನಾನು ಎಂತೂ ನಿನ್ನಮೇಲೆ ಕುಳಿತುಕೊಳ್ಳುವುದಿಲ್ಲ.
ನಿನ್ನ ಪುಣ್ಯವಿಶೇಷವು ನನ್ನಿಂದ ವರ್ಣಿಸಲು ಶಕ್ಯವಲ್ಲ. ಯಾವನು ಪುರಾಣಪುರು
ಷನೋ ವೈಕುಂಠವಿಹಾರಿಯೋ, ಯಾವನ ಉದರದಲ್ಲಿ ಅನಂತಬ್ರಹ್ಮಾಂಡಗಳೂ ಇರು
ವುವೋ ಅಂತಹ ಪರಮಾತ್ಮನನ್ನು ಬೆನ್ನಮೇಲೆ ಹೊತ್ತುಕೊಂಡು ತಿರುಗುವೆ. ಆದು
ದರಿಂದ ನನಗೆ ಆಶ್ಚರ್ಯವಾಗುವುದು. ಯಾವನು ದೇವತೆಗಳಿಗೂ ರಾಕ್ಷಸರಿಗೂ ಅಜ
ಯ್ಯನೋ ಆ ಸ್ವಾಮಿಗೆ ವಾಹನವಾಗಿ ಕೈಗಳಂ ಮುಗಿದುಕೊಂಡು ನಿಂತಿರುವೆ.
ನಮ್ಮಂತಹ ಉಪಾಸಕರಿಗೆ ಸ್ವಾಮಿಯ ಸೇವಕನಾದ ನೀನು ಆತನ ಸಮಾನನಾದವನು.
ಆಕಾರಣದಿಂದ ಸರ್ವಪ್ರಕಾರದಿಂದಲೂ ನಿನ್ನಮೇಲೆ ಕುಳಿತುಕೊಳ್ಳುವುದಿಲ್ಲ. ನಾನು
ನಿನ್ನಲ್ಲಿ ಇದನ್ನು ಬಿನ್ನವಿಸಿಕೊಳ್ಳುವೆನು. ಈಗ ನನ್ನ ಅವಸ್ಥೆಯೆಲ್ಲವನ್ನೂ ನೋಡಿರು
ವೆಯಷ್ಟೆ. ಬೇಗನೆ ಫಂಡರಪುರಕ್ಕೆ ಹೋಗಿ ರುಕ್ಮಿಣೀಪತಿಯನ್ನು ಕರೆದುತರ
ಬೇಕು. ಜಗಜ್ಜೀವನನು ನಿನ್ನ ಅಧೀನನಾಗಿರುವನು. ನೀನು ಆತನನ್ನು ಕರೆದು
ತಂದು ದರ್ಶನವನ್ನು ಮಾಡಿಸಬೇಕು-ಎಂದು ನುಡಿದು ಗರುಡನ ಪಾದಗಳನ್ನು ಸದ್ಭಾ
ವದಿಂದ ಪಿಡಿದು ಸಾಷ್ಟಾಂಗನಮಸ್ಕಾರವನ್ನು ಮಾಡಿದನು.

ಬಳಿಕ ಗರುಡನು, ಅವಶ್ಯವಾಗಲಿ—ಎಂದು ಅಲ್ಲಿಂದ ಹೊರಟು ರುಕ್ಮಿಣೀಪತಿ
ಯನ್ನು ಕರೆದು ತಂದು ತುಕ್ಕಾರಾಮನಿಗೆ ದರ್ಶನವಂ ಮಾಡಿಸುವೆನೆಂದು ನಿಶ್ಚಯಿಸಿ
ಫಂಡರಪುರಕ್ಕೆ ಬಂದನು.

ಹೃಷೀಕೇಶನು ಗರುಡನನ್ನು ನೋಡಿ ಆತನ ಬೆನ್ನಮೇಲೆ ತುಕ್ಕೋಬನಂ
ಕಾಣದೆ ಸಂಭ್ರಾಂತನಾದನು. ಅತ್ತೆಯ ಮನೆಯಲ್ಲಿರುವ ಮಗಳನ್ನು ಕರೆದುತರುವ

ದಕ್ಕೆ ಕಳುಹಿಸಲ್ಪಟ್ಟವನು ಒಬ್ಬನೇ ಹಿಂತಿರುಗಿಬಂದರೆ ತಾಯಿಯು ಎಂತು ಕಳವಳ ಗೊಳ್ಳುವಳೋ ಅಂತು ಜನನಿಯಾದ ರುಕ್ಮಿಣಿಯು ಮೋಹಪರವಶೆಯಾಗಿ ಸುಮ್ಮನೆ ಇದ್ದಳು.

ಗರುಡನು ಸ್ವಾಮಿಯ ಸಮೀಪಕ್ಕೆ ಬಂದು ಪಾದದ ಮೇಲೆ ಶಿರಸ್ಸನಿರಿಸಿ ಬದ್ಧಾಂಜಲಿಯಾಗಿ-ಸ್ವಾಮಿಯೇ! ದೇವಾದಿದೇವನೇ! ತುಕ್ಕಾರಾಮನು ನನ್ನ ಮೇಲೆ ಕುಳಿತು ಕೊಳ್ಳುವುದಿಲ್ಲವೆಂದನು. ನಿನ್ನ ವಿಯೋಗದಿಂದ ಹಗಲೂ ಇರುಳೂ ವ್ಯಸನಪಡುತಿರುವನು. ಆದುದರಿಂದ ನೀನೇ ಆತನಿಗೆ ದರ್ಶನವಂ ಕೊಡುವುದಕ್ಕೋಸ್ಕರ ಹೊರಟು ನಡೆಯಬೇಕು-ಎಂದನು. ಜಗಜ್ಜೀವನನು ಆ ಮಾತಿಗೆ ಅವಶ್ಯವಾಗಲೆಂದು ಗರುಡನನ್ನು ಆಲಿಂಗಿಸಿಕೊಂಡನು. ರುಕ್ಮಿಣೀದೇವಿಯುಂ ಕರೆದು ಅಂತರಂಗವನ್ನು ತಿಳಿಯಿಸಿದನು. ಅದಕ್ಕೆ ಆಕೆಯು-ಈಗ ಜಾತ್ರೆಗೆ ಭಕ್ತರು ಅನೇಕರು ಬಂದಿರುವರು. ಇವರಂ ಬಿಟ್ಟು ಹೊರಡುವುದು ಉಚಿತವಲ್ಲ. ಕಾಂತೆಯಿಲ್ಲದ ಮನೆಯೂ, ಉದಕವಿಲ್ಲದ ನದಿಯೂ, ರಾಜನಿಲ್ಲದ ಸೈನ್ಯವೂ, ಚಂದ್ರನಿಲ್ಲದ ಗಗನಮಂಡಲವೂ ಕುಂಕುಮವಿಲ್ಲದ ಅಲಂಕಾರವೂ ಎಂತು ಮಲಿನವಾಗಿರುವುದೋ ಅಂತು ಈ ಸಮಯದಲ್ಲಿ ನೀವು ಇಲ್ಲದಿದ್ದರೆ ಪಂಡರಪುರವೇ ಶೂನ್ಯವಾಗಿ ತೋರುವುದು. ಆದುದರಿಂದ ಈಗಿನ ಉತ್ಸವವು ಬಳೆದಬಳಿಕ ತುಕ್ಕೋಬನ ದರ್ಶನಕ್ಕೆ ಹೊರಡುವುದು ಅಭಿಮತವಾದುದು-ಎಂದು ಉತ್ತರವನ್ನು ಹೇಳಿದಳು. ಅದಂ ಕೇಳಿ ಜಗನ್ನಾಥನು ಅಂಗೀಕರಿಸಿದನು.

ಆ ಉತ್ಸವದ ಸಂದರ್ಭದಲ್ಲಿ ಸಿಂಬರಾಜನೆಂಬವನು ಆರ್ತನಾಗಿ ಇದ್ದುದರಿಂದ ಸ್ವಾಮಿಗೆ ಹೆಜ್ಜೆಯ ನಮಸ್ಕಾರವಂ ಮಾಡುತ ಬಂದನು. ಸ್ವಾಮಿಯು ಅವನಿಗೆ ಪ್ರಸನ್ನನಾಗಿ ಏನಾದರೂ ವರವನ್ನು ಕೊಡಬೇಕೆಂದು ಎಣಿಸಿದನು. ಇಷ್ಟರಲ್ಲಿ ಶ್ರೋತೃಮಹಾಶಯರು ಶಂಕೆಗೊಂಡು-ಸಿಂಬರಾಜನು ಯಾರು ? ಎಲ್ಲಿಯವನು ? ಅವನ ಸಂಗತಿಯನ್ನು ವಿಸ್ತರದಿಂದ ಹೇಳಬೇಕು-ಎಂದು ಪ್ರಶ್ನೆಯಂ ಮಾಡಿದರು. ಅದಂ ಕೇಳಿ ಮಹೀಪತಿಯು ಬಹುಸಂತೋಷವಂ ತಾಳಿದನು. ಶ್ರೋತೃಗಳು ಮಾಡಿದ ಈ ಪ್ರಶ್ನೆಯು ಚಕೋರಗಳಿಗೆ ಚಂದ್ರೋದಯವಾದಂತೆ, ಹಸಿವುಗೊಂಡವನಿಗೆ ಪ್ರಾರಬ್ಧಗತಿಯಿಂದ ಅಮೃತವೃಷ್ಟಿಯಾದಂತೆ, ದರಿದ್ರನ ಅಂಗಳದಲ್ಲಿ ಕಾಮಧೇನುವು ಬಂದು ನಿಂತಂತೆ, ಕಬ್ಬಿಣದ ಪೆಟ್ಟಿಗೆಯಲ್ಲಿ ಪರಿಸವು ಬಂದುಬಿದ್ದಂತೆ ಆಯಿತು. ಶ್ರೋತೃಗಳ ಈ ಪ್ರಶ್ನೆಯಿಂದ ವಕ್ತೃವು ಸಂತೋಷಗೊಂಡು ಸಿಂಬರಾಜನ ಚರಿತ್ರೆಯನ್ನು ಅವಧರಿಸಬೇಕೆಂದು ನುಡಿಯಲು ತೊಡಗಿರುವನು.

ಆ ದೇಶದಲ್ಲಿ ದೇವದೈಠಣ-ಎಂಬ ಒಂದು ಊರುಂಟು. ಅಲ್ಲಿ ಆತನ ವಂಶೀಯರು ಪೂರ್ವದಿಂದ ವಾಸಮಾಡಿಕೊಂಡು ಇರುತಿದ್ದರು. ಆ ಸಿಂಬರಾಜನು ವಿಷ್ಣುಭಕ್ತನೆನಿಸಿಕೊಂಡು ಸದ್ಭಾವದಿಂದ ಸಂತರ ಪೂಜೆಯಂ ಮಾಡುತ್ತ ಕಾಲಕ್ರಮದಿಂದ ಮನದಲ್ಲಿ ಪಶ್ಚಾತ್ತಾಪವಂ ತಾಳಿ-ವಾಯೆಯು ಅನಿವಾರ್ಯವಾದುದು. ಪ್ರಾಪಂಚಿಕ

ವ್ಯವಹಾರಗಳಲ್ಲಿಯೇ ಆಯುಸ್ಸೆಲ್ಲವೂ ವೆಚ್ಚವಾಯಿತು. ಇನ್ನುಮೇಲೆ ಈ ಸಂಸಾರವು ಸಾಕು—ಎಂದು ಬಗೆದು ಅಲ್ಲಿಂದ ತೀರ್ಥಯಾತ್ರೆಗೆ ಹೊರಟು ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನನಂಮಾಡಿ ಸಂತೋಷಗೊಂಡು ಭೂತಲದಲ್ಲಿರುವ ಅನೇಕತೀರ್ಥಗಳಲ್ಲಿ ಸ್ನಾನವಂ ಮಾಡಿ, ಸಪ್ತಪುರಿಗಳನ್ನು ನೋಡಿ ಬಳಿಕ ಹಿಮಾಚಲಪ್ರಾಂತಕ್ಕೆ ಹೊರಟನು. ಅದನೆಲ್ಲವನ್ನೂ ವರ್ಣಿಸಿದರೆ ಗ್ರಂಥವು ಬಹುವಿಸ್ತರವಾಗುವುದು; ಆದುದರಿಂದ ಸಂಕ್ಷೇಪಿಸಿಯೇ ಹೇಳಿದೆನು. ಭಾಗೀರಥಿಯ ಮೂರು ಕಾವಡಿಗಳನ್ನು ರಾಮೇಶ್ವರಕ್ಕೆ ತೆಗೆದುಕೊಂಡುಹೋಗಿ ಸ್ವಾಮಿಗೆ ಸಮರ್ಪಣೆಮಾಡಿದನು. ಇಂತಹ ಸುಕೃತವನ್ನು ಬಹುವಾಗಿ ಸಂಪಾದಿಸಿ ಮತ್ತೆ ಹಿಂತಿರಿಗಿ ತನ್ನ ಸ್ಥಳವನ್ನು ಸೇರಿ ನಿರಂತರವೂ ಹರಿಕೀರ್ತನೆಯಲ್ಲಿ ಆಸಕ್ತನಾಗಿ ಪ್ರೀತಿಯಿಂದ ನಾಮಸಂಕೀರ್ತನವಂ ಮಾಡುತಿದ್ದನು.

ಯಾವನು ನಿಷ್ಕಾಮನಾಗಿ ವ್ರತಗಳನ್ನೂ ತಪಸ್ಸನ್ನೂ ಆಸ್ಥೆಯಿಂದ ಮಾಡಿರುವನೋ ಅವನಿಗೆ ಶ್ರೀಹರಿಕೀರ್ತನದಲ್ಲಿ ವಿಶ್ವಾಸವು ಹುಟ್ಟುವುದು. ಅಂತು ನಿತ್ಯವೂ ಕೀರ್ತನೆಯಲ್ಲಿ ವಿಶ್ವಾಸವುಳ್ಳವನಾಗಿದ್ದರೆ ತೀರ್ಥಯಾತ್ರೆಗಳೂ ಯಾಗಗಳೂ ಜಪಗಳೂ ತಾವಾಗಿ ಸಿದ್ಧಿಸುವುವು. ನಿರ್ಲಜ್ಜನಾಗಿ ಶ್ರೀಹರಿಯ ಗುಣಗಳಂ ವರ್ಣಿಸಬೇಕು. ಬಹುಭಾಷಣಗಳಿಂದೇನು ? ಮಾನಾಭಿಮಾನಂಗಳಂ ಬಿಟ್ಟು ಸರ್ವಕಾಲದಲ್ಲಿಯೂ ಭಜನೆಮಾಡುವ ಭಾಗವತರೇ ಆ ಪ್ರೇಮದ ಗುರುತನ್ನು ಬಲ್ಲರು. ಶ್ರೀಹರಿನಾಮಸಂಕೀರ್ತನೆಯಲ್ಲಿ ಆಸಕ್ತಿಯಿಲ್ಲದೆ ಇತರವಾದ ಅನೇಕಸಾಧನಗಳಂ ಮಾಡಿದರೂ, ಬಹುಕಷ್ಟದಿಂದ ಆಳವಾಗಿ ಕೊಳವನ್ನು ತೋಡಿಸಲು ನೀರು ಬಾರದಿದ್ದರೆ ಎಂತೋ, ಕ್ಷೇತ್ರದಲ್ಲಿ ಕೃಷಿಯಂ ಮಾಡಲು ಬೆಳೆಯಾಗದಿದ್ದರೆ ಎಂತೋ, ಅನೇಕವಾನ್ಯವೃತ್ತಿಯಂ ಸಂಪಾದಿಸಲು, ಸಂತಾನವಿಲ್ಲದಿದ್ದರೆ ಎಂತೋ, ವಿಶೇಷಶ್ರಮದಿಂದ ಅಭ್ಯಾಸಮಾಡಿದ ವಿದ್ಯೆಯು ಸಮಯಕ್ಕೆ ಒದವದಿದ್ದರೆ ಎಂತೋ, ಶೌರ್ಯೌದಾರ್ಯಗಾಂಭೀರ್ಯಗುಣಂಗಳಿಲ್ಲದೆ ರಾಜನು ಸಿಂಹಾಸನವನ್ನೇರುವುದು ಎಂತೋ, ಎಲೆಯಲ್ಲಿ ಮೃಷ್ಟಾನ್ನವಂ ಬಡಿಸಿ ತುಪ್ಪವಂ ಬಡಿಸದಿದ್ದರೆ ಎಂತೋ ಅಂತು ವ್ಯರ್ಥವಾಗುವುದು—ಎಂದು ತಿಳಿದು ಪ್ರೇಮಯುಕ್ತನಾಗಿ ಸರ್ವಕಾಲದಲ್ಲಿಯೂ ಭಗವನ್ನಾಮಕೀರ್ತನದಲ್ಲಿ ದೃಢವಾದ ಮನಸ್ಸುಳ್ಳವನಾಗಿರಲು, ಪಂಡರೀನಾಥನು ಗಣಪತಿಯಂ ಕುರಿತು-ನನ್ನ ಕೀರ್ತನದಲ್ಲಿ ವಿಶೇಷಸ್ಫೂರ್ತಿಯುಂಟಾಗುವಂತಹ ವರವನ್ನು ನಿಂಬರಾಜನಿಗೆ ನೀನು ಕೊಡಬೇಕು-ಎನಲು, ಆ ಮಾತಿಗೆ ಗಣಪತಿಯು ಅವಶ್ಯವಾಗಲಿ—ಎಂದು ಉತ್ತರವಂಹೇಳಿ, ಒಂದು ದಿನ ರಾತ್ರಿ ನಿಂಬರಾಜನು ನಿದ್ರೆಯಂ ಮಾಡುತಿರುವಾಗ ಸ್ವಪ್ನದಲ್ಲಿ ಬ್ರಾಹ್ಮಣರೂಪದಿಂದ ಬಂದು ತಟ್ಟಿ ಎಬ್ಬಿಸಿ, ವರಪ್ರಸಾದವಂ ತೆಗೆದುಕೊಳ್ಳುವನಾಗು-ಎಂದು ಮುಖದಲ್ಲಿದ್ದ ತಾಂಬೂಲವನ್ನು ಆತನ ಕೈಯಲ್ಲಿ ಕೊಟ್ಟನು. ಅದನ್ನು ನಿಂಬರಾಜನು ನಿದ್ರೆಯಲ್ಲಿಯೇ ಬಾಯೊಳಗೆ ಹಾಕಿಕೊಂಡನು. ಆಗ ಗಣಪತಿಯು-ಇನ್ನುಮೇಲೆ ಅಭ್ಯಾಸ

ವೇನೂ ಇಲ್ಲದೆಯೇ ಹರಿಯ ಗುಣಂಗಳಂ ಬಹುವಾಗಿ ವರ್ಣಿಸುವೆ. ಕೀರ್ತನರಂಗದಲ್ಲಿ ಸರಸ್ವತಿಯು ನಿನಗೆ ಪ್ರಸನ್ನೆಯಾಗಿರುವಳು-ಎಂದು ಅಕ್ಷಯವರವಂ ಕೊಟ್ಟು ಅದೃಶ್ಯನಾದನು.

ಬಳಿಕ ನಿಂಬರಾಜನು ಎಚ್ಚರಿಕೆಗೊಂಡು ಸ್ವಪ್ನದ ಸಂಗತಿಯಂ ಮನಸ್ಸಿಗೆ ತಂದು ನೋಡಿದನು. ಬ್ರಾಹ್ಮಣನು ಸವಿಾಪದಲ್ಲಿ ಇರಲಿಲ್ಲ. ಮುಖದಲ್ಲಿ ತಾಂಬೂಲವು ಮಾತ್ರ ಇದ್ದಿತು. ಅದನ್ನು ಅಗಿದು ನುಂಗಿ ಎದ್ದು ಕುಳಿತುಕೊಂಡು ಕೈಯನ್ನು ನೋಡಿಕೊಳ್ಳಲು, ಕೆಂಪುಬಣ್ಣವು ಹತ್ತಿದ್ದಿತು. ಅದನ್ನು ಉದಕದಿಂದ ಎಷ್ಟುತೊಳೆದರೂ ಹೋಗಲಿಲ್ಲ. ಸಮುದ್ರವು ಕೂಪಕ್ಕೆ ನೀರನ್ನು ಕೊಟ್ಟರೆ ಅದು ಎಂತಹ ಅನಾವರ್ಷದಲ್ಲಿಯೂ ಎಂತು ಬತ್ತದೆ ಇರುವುದೋ, ಉನ್ಮನಿಯಿಂದ ಉಂಟಾದ ತೃಪ್ತಿಯು ಎಂತು ಹಸಿವಿನಿಂದ ಕಿಡುವುದಿಲ್ಲವೋ, ಲೋಹಕ್ಕೆ ಪರುಸದಿಂದ ಉಂಟಾದ ಸುವರ್ಣತ್ವವು ಎಂತು ನಾಶವೈದುವುದಿಲ್ಲವೋ, ಗಂಗೆಯಿಂದ ಪರಿಗ್ರಹಿಸಲ್ಪಟ್ಟವನ ಆಯುಸ್ಸು ವ್ಯಾಧಿಯಿಂದ ಎಂತು ಕ್ಷೀಣವಾಗುವುದಿಲ್ಲವೋ, ಭಾಸ್ಕರನಿಂದ ಕೊಡಲ್ಪಟ್ಟ ಕಾಂತಿಯು ಎಂತು ಹೋಗುವುದಿಲ್ಲವೋ ಅಂತು ಆತನ ಕೈಗೆ ಹತ್ತಿದ ತಾಂಬೂಲದ ಆರುಣ್ಯವು ತೊಳೆದರೂ ಎಂತೂ ಹೋಗಲಿಲ್ಲವು.

ಅಂದಿನಿಂದ ನಿಂಬರಾಜನು ಕೀರ್ತನವನ್ನು ಮಾಡುತಬಂದನು. ಸಂತರೆಲ್ಲರೂ ಶ್ರವಣವಂ ಮಾಡಿ ತಲ್ಲೀನರಾಗುತ್ತಿದ್ದರು. ಆತನು ಲೌಕಿಕಲಜ್ಜೆಯನ್ನೂ ಮಾನವನ್ನೂ ಆಶಾಪಾಶಗಳನ್ನೂ ಭೇದಾಭೇದಗಳನ್ನೂ ಬಿಟ್ಟು ಆನಂದರಸವಂ ಅನುಭವಿಸುತ್ತಿದ್ದನು. ಸಹಜವಾದ ಇಂತಹ ವೃತ್ತಿಯಲ್ಲಿರುತ್ತ ಒಂದುದಿನ ಪಂಢರಪುರಕ್ಕೆ ಬಂದು ಸದ್ಭಾವದಿಂದ ಭಜನೆಯಂ ಮಾಡುತಿದ್ದನು.

ಬಳಿಕ ಜಗಜ್ಜೀವನನು ರುಕ್ಮಿಣಿಯಂ ಕುರಿತು-ನಿಂಬರಾಜನಿಗೆ ಏನಾದರೂ ವರವನ್ನು ಕೊಡು-ಎಂದು ನುಡಿಯಲು, ಆ ದೇವಿಯು ಸ್ವಾಮಿಯ ನುಡಿಯಂ ಕೇಳಿ ಲೀಲಾವಿನೋದದಿಂದ ತೋಟಗಾರ್ತಿಯ ರೂಪವನ್ನು ಅಂಗೀಕರಿಸಿ ಹಣ್ಣಿನ ಹೋಳುಗಳನ್ನು ಕುಕ್ಕೆಯಲ್ಲಿ ಇರಿಸಿಕೊಂಡು ಮಾರ್ಗದಲ್ಲಿ ಕುಳಿತಿದ್ದಳು.

ಅಷ್ಟುಹೊತ್ತಿಗೆ ನಿಂಬರಾಜನು ದೇವಸ್ಥಾನದೊಳಗಣಿಂದ ಬಂದನು. ಆಕೆ ಆತನನ್ನು ಕುರಿತು—ಮನೆಯಲ್ಲಿ ಕೂಸು ಅಳುತಿರುವುದು. ಅದನ್ನು ಎತ್ತಿಕೊಂಡು ಬರುವೆನು. ಒಂದುಕ್ಷಣ ನನ್ನಮೇಲೆ ಕೃಪೆಯಂ ಮಾಡಿ ಇಲ್ಲಿ ಕುಳಿತುಕೊಂಡಿರಬೇಕು. ಬೀದಿಯಲ್ಲಿ ಬಹುಜನಗಳು ತಿರುಗಾಡುತಿರುವರು. ಯಾರಾದರೂ ತೆಗೆದುಕೊಂಡು ಹೋದಾರು. ನೀನು ಈ ಕುಕ್ಕೆಯನ್ನು ನೋಡುತಿರಬೇಕು—ಎನಲು, ಆ ಮಾತಂ ಕೇಳಿ ನಿಂಬರಾಜನು ಕರುಣೆಗೊಂಡು—ಆಗಲಿ ; ನಾನು ಕಾದುಕೊಂಡಿರುವೆನು. ನೀನು ಹೋಗಿ ಬೇಗನೆ ಬಾ-ಎಂದನು. ಬಳಿಕ ಆಕೆ ಆತನ ಕಡೆಗೆ ಬೆನ್ನನ್ನು ಮಾಡಿ ಹೊರಟು ದೇವಸ್ಥಾನದ ಬಳಿಗೆ ಹೋಗಿ ಅಲ್ಲಿಯೇ ಅದೃಶ್ಯೆಯಾದಳು.

ನಿಂಬರಾಜನು ಬಂದು ಜಾವದವರೆಗೆ ಮಾರ್ಗವಂ ನೋಡಿದರೂ ಆಕೆ ಬರಲಿಲ್ಲ. ಆಗ ಕುಕ್ಕೆಯ ಮೇಲೆ ಮುಚ್ಚಿದ್ದ ವಸ್ತ್ರವಂ ತೆಗೆದು ನೋಡಲು, ಒಳಗೆ ಚಿನ್ನದ ಗಟ್ಟಿಗಳೇ ಆಗಿದ್ದುವು. ಹಣ್ಣುಹೋಳುಗಳೇನೂ ಕಾಣಲಿಲ್ಲ. ಆಗ ಆತನು ಮನದಲ್ಲಿ ವಿಸ್ಮಿತನಾಗಿ-ಜಗಜ್ಜನನಿಯಾದ ಆದಿಮಾಯೆಯು ನನ್ನ ಮನಸ್ಸನ್ನು ಪರೀಕ್ಷಿಸುವುದಕ್ಕೋಸ್ಕರ ಇಂತು ಮಾಡಿರುವಳು. ಇದು ಅನರ್ಥಹೇತುವೇ ಹೊರತು ಬೇರೆಯಲ್ಲ-ಎಂದು ತಿಳಿದು ಅನುತಾಪಗೊಂಡು, ಹಿಂಸಕನ ಮನೆಯಂ ಹೊಕ್ಕ ಬ್ರಾಹ್ಮಣನು ಅಲ್ಲಿಯ ದುರಾಚಾರಂಗಳಂ ನೋಡಿ ಅಸಹ್ಯತೆಗೊಂಡು ಎಂತು ಹಿಂತಿರುಗಿ ಓಡಿ ಬರುವನೋ ; ಪರಿಶುದ್ಧನು ಮದ್ಯವಂ ಕಂಡು ಅಲ್ಲಿಂದ ಎಂತು ಥಟ್ಟನೆ ಹೋಗುವನೋ ; ಅಂತು ಆ ಚಿನ್ನದ ಗಟ್ಟಿಯಂ ಕಂಡು ಜುಗುಪ್ಸೆಗೊಂಡು ಅದನಲ್ಲಿಯೇ ಉಳಿದು ಅಲ್ಲಿಂದ ಹೊರಟು ದೇವಸ್ಥಾನವಂ ಹೊಕ್ಕು ರುಕ್ಮಿಣೀದೇವಿಯ ಸನ್ನಿಧಿಯಂ ಸೇರಿ ಸದ್ಭಾವದಿಂದ ಸಾಷ್ಟಾಂಗನಮಸ್ಕಾರವಂ ಮಾಡಿ ಕೈಗಳಂ ಮುಗಿದುಕೊಂಡು ತಾಯೆ ! ನನ್ನನ್ನು ಏಕೆ ಸಿಕ್ಕಿನಲ್ಲಿ ಹಾಕುವೆ ? ನಾನು ನಿನ್ನ ಕೃಪೆಯೊಂದನ್ನು ಅಪೇಕ್ಷಿಸುವೆನಲ್ಲದೆ ಧನಸಂಪತ್ತಿಯನ್ನು ಒಲ್ಲೆನು-ಎಂದು ಮತ್ತೆ ನಮಸ್ಕಾರವನ್ನು ಎಸಗಿ ತನ್ನ ಬೀಡಿಗೆ ಬಂದು ಪ್ರೇಮಭಾವದಿಂದ ಭಗವನ್ನಾಮಸ್ಮರಣೆಯಂ ಮಾಡುತಿದ್ದನು.

ಇತ್ತ ರುಕ್ಮಿಣೀದೇವಿಯು ಸ್ವಾಮಿಯಂ ಕುರಿತು-ಜಗನ್ನಾಥನೇ ! ನಿನ್ನ ಆಜ್ಞೆಯಂ ಸಿರದಿಂದ ವಹಿಸಿ ನಿಂಬರಾಜನಿಗೆ ಕಾಂಚನವಂ ಕೊಟ್ಟೆನು. ಅದು ಅವನ ಮನಸ್ಸಿಗೆ ಬರಲಿಲ್ಲ-ಎನಲು, ಅದಕ್ಕೆ ಸ್ವಾಮಿಯು ಪಕ್ಕಾ-ದೇವಿ ! ನನ್ನ ದಾಸರು ಭಜನದಲ್ಲಿಯೇ ಸಂತುಷ್ಟರಾದವರು. ಅವರನ್ನು ಮಾಯಾಮಮತೆಗಳೂ ಲೋಭಾದಿಗಳೂ ಬಾಧಿಸಲಾರವು. ಗಾಳಿಯು ಪರ್ವತವನ್ನು ಅಲ್ಲಾಡಿಸಿದರೆ, ಬಣ್ಣವು ಆಕಾಶಕ್ಕೆ ಅಂಟಿದರೆ, ಶೈತ್ಯವು ಸೂರ್ಯನನ್ನು ಬಾಧಿಸಿದರೆ, ಚಂದ್ರನಿಗೆ ಸೆಕೆಯಾದರೆ, ಅಗ್ನಿಯು ಸಮುದ್ರವನ್ನು ಬಾಧಿಸಿದರೆ, ವಾಯುವು ಸೆರೆಗೆ ಸಿಕ್ಕಿದರೆ, ನನ್ನ ಭಕ್ತರನ್ನು ಆಶೆಯು ಬಾಧಿಸೀತು. ಅವರು ಎಲ್ಲಾ ವಿಷಯದಲ್ಲಿಯೂ ಉದಾಸೀನರು-ಎಂದು ನುಡಿಯಲು, ಆ ಮಾತಂ ಕೇಳಿ ರುಕ್ಮಿಣಿಯು ವಿಸ್ಮಿತೆಯಾದಳು.

ಮಾರನೆಯದಿನ ಪ್ರಾತಃಕಾಲದಲ್ಲಿ ಸಂತರ ಗುಂಪು ಎಲ್ಲವೂ ಸ್ನಾನಕ್ಕೆ ಹೊರಡಲು, ನಿಂಬರಾಜನೂ ಅವರೊಡನೆ ವಿನೋದದಿಂದ ಚಂದ್ರಭಾಗೆಯ ತೀರಕ್ಕೆ ಬಂದನು. ಆ ಸಮಯದಲ್ಲಿ ಪಂಢರೀನಾಥನು, ನಿಂಬರಾಜನಿಗೆ ಅಕ್ಷಯವಾದ ಉಚಿತವರವಂ ಕೊಡಬೇಕು. ಅದರಿಂದ ಅವನು ನನ್ನ ಕೀರ್ತನದಲ್ಲಿ ಪ್ರೇಮವಿಶೇಷವುಳ್ಳವನಾಗಿರುವನು-ಎಂದು ಆಲೋಚನೆಯಂ ಮಾಡಿ ವಿಪ್ರವೇಷವಂ ಕೊಂಡು ಕೊರಲಲ್ಲಿ ತುಳಸೀಮಾಲೆಯಂ ಧರಿಸಿ ಹಣೆಗೆ ಬುಕ್ಕಿಟ್ಟನ್ನು ಬಳಿದುಕೊಂಡು ಅಲ್ಲಿಗೆ ಬಂದು ನಿಂಬರಾಜನಂ ಕುರಿತು-ನಾನು ಭೀಮರಥಿಯಲ್ಲಿ ಸ್ನಾನವಂ ಮಾಡಲು ಹೋಗುವೆನು. ಜನದ ಸಂ

ದಣಿಯಲ್ಲಿ ಕಳ್ಳರು ಹೊಂಚುಹಾಕುತ್ತಿರುವರು. ಆದುದರಿಂದ ಮೇಖಲೆಯೂ, ಟೊಪ್ಪಿಗೆಯೂ, ಮಾಲೆಯೂ, ನಿಮ್ಮ ಬಳಿಯಲ್ಲಿ ಇರಲಿ–ಎಂದು ಅವನ್ನು ಅವನ ವಶಕ್ಕೆ ಕೊಟ್ಟು-ಇವನ್ನು ನೀವು ರೆಪ್ಪೆಮುಚ್ಚದೆ ನೋಡುತ್ತಿರಬೇಕು-ಎಂದು ಹೇಳಿ ಅದೃಶ್ಯನಾದನು

ಬಳಿಕ ನಿಂಬರಾಜನು ಸುತ್ತಲೂ ನೋಡಿದನು. ಆ ಬ್ರಾಹ್ಮಣನು ಎಲ್ಲಿಯೂ ಕಾಣಲಿಲ್ಲ. ಬಹುಕಾಲ ನಿರೀಕ್ಷಿಸುತ್ತ ಕುಳಿತನು. ಆದರೂ ಆತನು ಬರಲಿಲ್ಲ. ಅಲ್ಲಿದ್ದ ಸಂತರಂ ಕುರಿತು–ಇಲ್ಲಿ ಒಬ್ಬ ಬ್ರಾಹ್ಮಣನು ಬಂದು–ಸ್ನಾನಕ್ಕೆ ಹೋಗುವೆನು. ಈ ಆಭರಣಗಳು ನಿಮ್ಮ ಸಮೀಪದಲ್ಲಿ ಇರಲಿ–ಎಂದು ಕೊಟ್ಟು ಅರ್ಧನಿಮಿಷದಲ್ಲಿ ಅದೃಶ್ಯನಾದನು. ನಾನು ಚಿಂತಾಕ್ರಾಂತನಾಗಿ ಮಾರ್ಗವಂ ನೋಡುತ್ತಿರುವೆನು. ಈವರೆಗೂ ಬರಲಿಲ್ಲ. ಇದಕ್ಕೆ ಏನಾಲೋಚನೆಯಂ ಹೇಳುವಿರಿ?–ಎಂದು ಬೆಸಗೊಳ್ಳಲು, ಆ ಮಾತಂ ಕೇಳಿ ಅವರು ಆಶ್ಚರ್ಯಗೊಂಡು-ಆತನು ಪ್ರಾಕೃತಬ್ರಾಹ್ಮಣನಲ್ಲ. ಶ್ರೀರುಕ್ಮಿಣೀಕಾಂತನೇ ಸರಿ. ನಿಮಗೆ ಉಚಿತವಂ ಕೊಟ್ಟು ಅದೃಶ್ಯನಾದನು. ಆದುದರಿಂದ ಮನದಲ್ಲಿ ಸಂಶಯಮಂ ಬಿಟ್ಟು ಈ ಅಲಂಕಾರಂಗಳನ್ನು ನೀವು ಧರಿಸಬೇಕು–ಎಂದರು. ಅವರ ಮಾತನ್ನು ಕೇಳಿ ಅಂಗೀಕರಿಸಿ ಅವರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಆ ಮೇಖಲೆಯನ್ನೂ, ತುಳಸೀಮಾಲೆಯನ್ನೂ, ಟೊಪ್ಪಿಗೆಯನ್ನೂ ಧರಿಸಿದನು. ಬಳಿಕ ಎಲ್ಲರೂ ಆತನಂ ಕುರಿತು–ಅಯ್ಯಾ ಭಾವುಕನೇ! ಸ್ವಾಮಿಯು ನಿನಗೆ ಉಡುಗೊರೆಯಂ ಕೊಟ್ಟು ದೀವಳಿಗೆಹಬ್ಬವಂ ಮಾಡಿದನು. ಇಂದು ನೀನು ಈ ಮಳಲೊಟ್ಟಿನಲ್ಲಿ ನಿಂತು ಸ್ವಮುಖದಿಂದ ಕೀರ್ತನವಂಮಾಡಿ ಕ್ಷುಧಿತವಾಗಿರುವ ನಮ್ಮ ಕಿವಿಗಳಿಗೆ ತೃಪ್ತಿಯನ್ನುಂಟುಮಾಡು–ಎಂದು ನುಡಿದು ಮದ್ದಲೆಯ ದನಿಗೆ ಸರಿಯಾಗಿ ತಂಬೂರಿಯಂ ಶ್ರುತಿಮಾಡಿಸಿ ತಾಳ ಮೊದಲಾದ ಸಾಹಿತ್ಯವೆಲ್ಲವನ್ನೂ ತಂದು ದಿವ್ಯಪತಾಕೆಗಳಂ ನಿಲಿಸಿ ಸಂಭ್ರಮದಿಂದ ಕೀರ್ತನವಂ ಕೇಳುವುದಕ್ಕೆ ಸಿದ್ಧರಾದರು. ಶಾಸ್ತ್ರಜ್ಞರೂ, ಪೌರಾಣಿಕರೂ, ಇನ್ನು ಅನೇಕರೂ, ಶ್ರವಣಕ್ಕೆ ಬಂದು ಸೇರಿದರು. ಸೂರ್ಯಾಸ್ತಮಯವಾಗುವುದೂ ನಿಂಬರಾಜನು ಕೀರ್ತನಕ್ಕೆ ಆರಂಭವಂಮಾಡಿ ಭಗವನ್ನಾಮಘೋಷವಂ ಮಾಡುತ್ತ ಕರತಾಳವಂ ಹಾಕುತ್ತ ಹೃದಯದಲ್ಲಿ ರುಕ್ಮಿಣೀಪತಿಯಂ ನೆನೆಯುತಿರಲು, ಕಣ್ಣುಗಳಿಂದ ಆನಂದಾಶ್ರು ಸುರಿಯುತಿದ್ದಿತು. ದೇವತೆಗಳೆಲ್ಲರೂ ವಿಮಾನಾರೂಢರಾಗಿ ಕೌತುಕವಂ ನೋಡುತ್ತಿದ್ದರು. ಸಾಬಡೇರಾಗದಿಂದ ನಾಮಕೀರ್ತನೆಯಂ ಮಾಡಲು, ಸಕಲರೂ ಮೋಹಿತರಾದರು. ಸುಜ್ಞಾನಿಗಳೂ, ವಿಚಕ್ಷಣರೂ, ತಲ್ಲೀನರಾಗಿ ನಿಂತರು. ವಕ್ತೃವಿನ ಚಿತ್ತದಲ್ಲಿ ಪ್ರೇಮವು ತುಂಬಿರಲು, ಪುರುಷೋತ್ತಮನು ಸಂತುಷ್ಟನಾಗುವನು. ಚಾತುರ್ಯಗಳೇನೂ ಬೇಡ. ಪ್ರೇಮವಿಲ್ಲದ ಗಾಯನವೂ, ಪ್ರಾಣವಿಲ್ಲದ ಶರೀರವೂ, ಉಪ್ಪಿಲ್ಲದ ಊಟವೂ ರುಚಿಸದು. ಸಂತಾನವಿಲ್ಲದ ಕಾಂತೆಯು ಸುಂದರಿಯಾದರೂ ಶೋಭಿಸಳು.

ಪ್ರೇಮವಿಲ್ಲದ ಗಾಯನವನ್ನು ಕೀರ್ತನವೆನ್ನಬಾರದು. ರಾಮ! ಕೃಷ್ಣ! ಮೇಘಶ್ಯಾಮ! ಗೋವಿಂದ! ಗೋಪಾಲ! ಪುರುಷೋತ್ತಮ! ಅಚ್ಯುತ! ಆತ್ಮಾರಾಮ! ಶ್ರೀನರಹರಿಯೇ! ಹೃದಯದಲ್ಲಿ ಸದ್ಭಕ್ತಿಯನ್ನು ಉಂಟುಮಾಡು–ಎಂದು ಮಂಗಳ ನಾಮಂಗಳನ್ನು ಉಚ್ಚರಿಸುತ್ತ ನಿಂಬರಾಜನು ಕೀರ್ತನವಂ ಮಾಡುತ್ತಿದ್ದನು.

ಬಳಿಕ ಗರುಡಧ್ವಜನು ಸಂತುಷ್ಟನಾಗಿ ಬಾಲಕನ ರೂಪವಂ ಧರಿಸಿ ನವಿಲ್ಗರಿಗಳನ್ನು ಕೈಯಲ್ಲಿ ಹಿಡಿದುಕೊಂಡು ನಿಂಬರಾಜನ ಹೆಗಲಮೇಲೆ ನಿಂತುಕೊಂಡು ಸ್ವಹಸ್ತದಿಂದ ಚಾಮರವಂ ಬೀಸುತ್ತಿದ್ದನು. ಭಾವುಕರಿರಾ! ಈ ಆಶ್ಚರ್ಯವಂ ಕೇಳಬೇಕು. ಯಾವನು ಕ್ಷೀರಸಾಗರದಲ್ಲಿ ಶೇಷಶಯನನೋ, ಸಮುದ್ರರಾಜನ ಪುತ್ರಿಯಾದ ಮಹಾಲಕ್ಷ್ಮಿಯ ವಲ್ಲಭನೋ ಆತನು ನಿಜಭಕ್ತನ ಮೇಲೆ ಚಾಮರವಂ ಬೀಸುತಿದ್ದನು. ಹಠಯೋಗಿಗಳು ಯೋಗಾಸನದಲ್ಲಿ ಕುಳಿತುಕೊಂಡು ಧ್ಯಾನವಂ ಮಾಡುವರು. ಅವರಿಗೂ ಬೇಗನೆ ದರ್ಶನವನ್ನು ಕೊಡನು. ನಾನಾಯಾಗಗಳನ್ನೂ ತಪ್ರೋವ್ರತಗಳನ್ನೂ ಮಾಡಿದರೂ ದೊರೆಯನು. ಅಂತಹ ಜಗಜ್ಜೀವನನಾದ ದೀನದಯಾಳುವು ತನ್ನ ದಾಸರಿಗೆ ಸನ್ಮಾನವಂ ಮಾಡುವನು. ಶಿವನು ಏಕಾಂತದಲ್ಲಿ ಯಾವನಂ ಸ್ಮರಿಸುವನೋ ಆ ಭಕ್ತಭೂಷಣನು ನಿಂಬರಾಜನ ಬೆನ್ನಲ್ಲಿ ನಿಂತು ಚಾಮರವಂ ಬೀಸುತ್ತಿದ್ದನು. ಮೇಘಶ್ಯಾಮನು ಯಾವಾಗ ಬಂದನೋ ಆಗಲೇ ಅರುವತ್ತುನಾಲ್ಕು ಕಳೆಗಳೂ ಹದಿನಾಲ್ಕು ವಿದ್ಯೆಗಳೂ ಅನುಕೂಲಿಸಿ ಬಂದುವೆಂದು ವಿಚಕ್ಷಣರು ಬಗೆದರು. ಸಭೆಯವರೆಲ್ಲರೂ ಸ್ತಬ್ಧರಾಗಿದ್ದರು. ನಾಲ್ಕುಜಾವವೂ ಕೀರ್ತನವಾಯಿತು. ಯಾರಿಗೂ ಆಲಸ್ಯವೂ ನಿದ್ರೆಯೂ ಬರಲಿಲ್ಲ. ಕ್ಷೀರಸಮುದ್ರದ ಬಳಿಯಲ್ಲಿ ಬರಗಾಲವೂ, ಅಮೃತದೆಡೆಯಲ್ಲಿ ರೋಗಗಳೂ, ಸೂರ್ಯನ ಸನ್ನಿಧಿಯಲ್ಲಿ ಕತ್ತಲೆಗಳೂ ಎಂತು ಬರಲಾರವೋ ಅಂತು ಸದ್ಭಕ್ತಿಯುಳ್ಳವನ ಕೀರ್ತನದಲ್ಲಿ ನಿದ್ರೆಯೂ ಆಲಸ್ಯವೂ ಬರಲಾರವು. ಜಾತಿವರ್ಣಭೇದಂಗಳಂ ಬಿಟ್ಟು ಎಲ್ಲರೂ ಒಂದೆಡೆಯಲ್ಲಿ ಸೇರಿ ತಾಳಮೃದಂಗಗಳನ್ನು ಬಾಜಿಸುತ್ತ ಭೇದದ್ವಂದ್ವವಂ ಮರೆತು ಭಗವನ್ನಾಮಕೀರ್ತನೆಯಂ ಮಾಡುತ್ತ ಆನಂದಸಾಗರದಲ್ಲಿ ಓಲಾಡುತಿದ್ದರು. ರಾತ್ರಿಶೇಷವು ನಾಲ್ಕುಗಳಿಗೆ ಇದ್ದಿತು. ಆ ಸಮಯದಲ್ಲಿ ಒಂದಾಶ್ಚರ್ಯವು ನಡೆಯಿತು.

ಒಬ್ಬ ಸಾಧುಕಾರನ ಹೆಂಡತಿಯು ಸ್ನಾನಕ್ಕೆ ಹೋಗುತಿದ್ದಳು. ಆಕೆಯ ದೃಷ್ಟಿಗೆ ಸಾಕ್ಷಾತ್ಪಂಡರೀನಾಥನು ಕಾಣಲು, ತ್ವರೆಯಿಂದ ಕೀರ್ತನರಂಗಕ್ಕೆ ಓಡಿಬಂದು ನಿಂಬರಾಜನ ಸಮೀಪದಲ್ಲಿ ರುಕ್ಮಿಣೀರಮಣನ ದರ್ಶನವಂ ಮಾಡಬೇಕೆಂಬಷ್ಟರಲ್ಲಿ ಆಸ್ವಾಮಿಯು ಅಗೋಚರನಾದನು. ಬಳಿಕ ಆಕೆ ವಿಸ್ಮಿತೆಯಾಗಿ ರೋದನವಂ ಮಾಡುತ್ತ ನಿಂಬರಾಜನ ಪಾದವಂ ಹಿಡಿಯಲು, ಸಮಸ್ತರೂ ಆಕೆಯನ್ನು ಕುರಿತು-ಏತಕ್ಕೆ ಓಡಿಬಂದೆ? ಏನು ವಿಸ್ಮಯವಂ ಕಂಡೆ? ಏಕೆ ಗೋಳಿಡುವೆ? ನಮ್ಮಲ್ಲಿ ಹೇಳು-ಎನಲು, ಆಕೆ ಎಲ್ಲರಿಗೂ ನಮಸ್ಕಾರವಂ ಮಾಡಿ-ನಿಂಬರಾಜನ ಹೆಗಲ ಮೇಲೆ

ನಾನು ಶ್ರೀಹರಿಯಂ ನೋಡಿದೆನು. ಕೈಯಲ್ಲಿ ನವಿಲ್ಗರಿಯನ್ನು ಪಿಡಿದು ಬೀಸುತಿದ್ದನು. ಆದುದರಿಂದ ಓಡಿಬಂದೆನು. ಇಲ್ಲಿ ಎಲ್ಲಿಯೂ ಕಾಣಲಿಲ್ಲ. ಎಲ್ಲಿಗೆ ಹೋದನೋ ತಿಳಿಯದು. ಮೇಘಶ್ಯಾಮಲನೂ ಸುಕುಮಾರನೂ ಆದ ಜಗನ್ನಾಥನನ್ನು ಮತ್ತೆ ನನಗೆ ದರ್ಶನವಮಾಡಿಸಬೇಕೆಂದು ಅಪೇಕ್ಷಿಸುವೆನು-ಎಂದು ಉತ್ತರವಂ ಹೇಳಿದಳು. ಎಲ್ಲರೂ ಆಕೆಯ ನುಡಿಯಂ ಕೇಳಿ ಆಶ್ಚರ್ಯಗೊಂಡು-ಇದೇನು ಚೋದ್ಯವಾದ ಮಾತನಾಡುವಳು ? ಪರೀಕ್ಷಿಸಬೇಕು-ಎಂದು ನಿಂಬರಾಜನ ಸಮೀಪಕ್ಕೆ ಬಂದು ಆತನ ಹೆಗಲ ಮೇಲೆ ನೋಡುವಾಗ ಸಂತರು ಚೆಲ್ಲಿದ್ದ ಗಂಧದ ಹುಡಿಯಲ್ಲಿ ಪುಟ್ಟಪುಟ್ಟಹೆಜ್ಜೆಗಳು ಊರಿದ್ದುವು. ಅನನ್ನು ನೋಡಿ ವಿಸ್ಮಿತರಾಗಿ ನಿಂಬರಾಜನಿಗೆ ನಮಸ್ಕಾರವಂ ಮಾಡಿದರು. ಯಾವಳು ಪಂಢರೀನಾಥನನ್ನು ಅಲ್ಲಿ ಕಂಡಳೋ ಆಕೆಗೂ ನಮಸ್ಕಾರವಂ ಮಾಡಿ-ಅಮ್ಮಾ ! ನೀನು ಬಹುಸುಕೃತಶಾಲಿನಿಯಾದುದರಿಂದ ರುಕ್ಮಿಣೀಕಾಂತನನ್ನು ಪ್ರತ್ಯಕ್ಷವಾಗಿ ಕಂಡೆ-ಎಂದು ಆಕೆಯನ್ನು ಅಭಿನಂದಿಸಿದರು. ಸೂರ್ಯೋದಯವಾಗುವುದೂ ನಿಂಬರಾಜನು ಆರತಿಯನ್ನು ಬೆಳಗಿದನು. ಎಲ್ಲರೂ ಹೊರಟರು.

ಬಳಿಕ ಪೂರ್ಣಿಮೆ ಬರಲು, "ಗೋಪಾಳಕಾಲ" ಎಂಬ ಉತ್ಸವವು ಬಳೆಯಿತು. ಜಾತ್ರಿಗರ ಗುಂಪೆಲ್ಲವೂ ಚೆದರಿಹೋಯಿತು. ಸ್ವಾಮಿಯು ವ್ಯಸನಪಡುವನಾದನು. ಮಗಳನ್ನು ಅತ್ತೆಯ ಮನೆಗೆ ಕಳುಹಿಸುವಾಗ ತಾಯಿಯು ಎಂತು ಖೇದಗೊಳ್ಳುವಳೋ ಅಂತು ಜಾತ್ರಿಗರೆಲ್ಲರೂ ಹೊರಟುಹೋಗಲು, ಪಂಢರೀನಾಥನು ಖೇದಗೊಂಡು ರುಕ್ಮಿಣಿಯಂ ಕುರಿತು-ದೇವಿ ! ಈಗ ಈ ಪಂಢರಪುರವು ಬಿಕೋ ಎನುತಿರುವುದು. ಭಕ್ತರೆಲ್ಲರೂ ತಮ್ಮತಮ್ಮ ಸ್ಥಳಗಳಿಗೆ ಹೊರಟುಹೋದರು. ಆದುದರಿಂದ ಈಗ ನಾವಿಬ್ಬರೂ ತುಕ್ಕೋಬನ ದರ್ಶನಕ್ಕೆ ಹೋಗಿ ಬರೋಣ-ಎಂದು ನುಡಿದು ಕುತೂಹಲಿತನಾಗಿ ತ್ವರೆಯಿಂದ ಗರುಡನಂ ಕರೆದು ಯೋಗಿಗಳು ಧ್ಯಾನಿಸುವಂತಹ ಸಗುಣರೂಪವಂ ಧರಿಸಿ ರುಕ್ಮಿಣೀಸಮೇತನಾಗಿ ಗರುಡನನ್ನು ಏರಿ ನಿಮಿಷಮಾತ್ರದಲ್ಲಿ 'ದೆಹೂ' ಎಂಬ ಗ್ರಾಮದ ಸಮೀಪಕ್ಕೆ ಬಂದನು.

ತುಕ್ಕೋಬನು ಮನದಲ್ಲಿ ಸಂಕಟಗೊಂಡು ಮಾರ್ಗವಂ ನೋಡುತ್ತ ಚಕ್ರಪಾಣಿಯು ರುಕ್ಮಿಣೀಸಮೇತನಾಗಿ ಎಂದಿಗೆ ಬಂದಾನು ?-ಎಂದು ಚಿಂತಿಸಿ, ಬಳಿಕ ಇಂದು ನನ್ನ ಬಲಗಣ್ಣಿ ರೆಪ್ಪೆಯು ಹಾರುತಿರುವುದು. ಅಡಿಗಡಿಗೆ ಬಲದೋಳು ಚಲಿಸುತಿರುವುದು. ಪ್ರತಿಕ್ಷಣವೂ ಮನಸ್ಸಿಗೆ ಸಮಾಧಾನವಾಗುತಿರುವುದು. ಇಂತಹ ಉತ್ತಮಶಕುನಗಳು ಆಗುತಿರುವುವು-ಎಂದು ಸಂತೋಷಪಡುತಿರಲು, ಅಷ್ಟುಹೊತ್ತಿಗೆ ಆಕಾಶಮಾರ್ಗದಲ್ಲಿ ಗರುಡನು ದೃಗ್ಗೋಚರನಾದನು. ತುಕ್ಕೋಬನು ನೋಡಿ ಸಾಷ್ಟಾಂಗನಮಸ್ಕಾರವಂ ಮಾಡಿದನು. ಬ್ರಹ್ಮಾದಿಗಳಿಗೂ ಯಾವನ ನೆಲೆಯು ತಿಳಿಯದೋ ಆ ದೇವಾದಿದೇವನು ಭಕ್ತನ ಪ್ರೇಮಭಾವವಂ ತಿಳಿದು ಪ್ರಕಟನಾದನು. ನೀಲಮೇಘಶ್ಯಾಮನೂ ಸುಕುಮಾರನೂ ಪೀತಾಂಬರಧರನೂ, ಮಕರಾಕಾರವಾದ

ದಿವ್ಯಕುಂಡಲಗಳನ್ನೂ ಕೌಸ್ತುಭವನ್ನೂ ದೇದೀಪ್ಯಮಾನವಾದ ರತ್ನಖಚಿತವಾದ ಕಿರೀಟವನ್ನೂ ಏಕಾವಳೀಹಾರವನ್ನೂ ಧರಿಸಿದವನೂ ಆದ ಆಸ್ವಾಮಿಯು, ಕಾಲ್ಗಡಗಗಳು ಝುಣಝುಣತ್ಕಾರವಂ ಮಾಡುತಿರಲು, ರುಕ್ಮಿಣೀಸಮೇತನಾಗಿ ಇದುರಿಗೆ ಬಂದು ನಿಂತನು.

ತುಕ್ಕೋಬನು ಆ ರೂಪವಂ ಕಂಡು ಅಪಾರಸಂತೋಷವುಳ್ಳವನಾಗಿ ಅಭಿವಂದಿಸಿ ಆಲಿಂಗನವಂ ಮಾಡಿಕೊಂಡು ಪಾದಗಳನ್ನು ದೃಢವಾಗಿ ಹಿಡಿದನು.

ಮುಂದಣ ಅಧ್ಯಾಯದಲ್ಲಿ ಕಥೆಯು ಬಹುಸುರಸವಾಗಿರುವುದು. ಸಂತರು ಸಾದರರಾಗಿ ಕೇಳತಕ್ಕುದು.

ಇಂತು ಭಕ್ತವಿಜಯದಲ್ಲಿ ಐವತ್ತೊಂದನೆಯ ಅಧ್ಯಾಯಂ ಸಂಪೂರ್ಣಂ.
ಮಂಗಳಮಸ್ತು.

ಐವತ್ತೆರಡನೆಯ ಅಧ್ಯಾಯ.

ಜಯಜಯ ಭಕ್ತವತ್ಸಲನೇ! ಕರುಣಾಕರನೇ! ಅಕ್ಷಯನೇ! ಅಭಂಗನೇ! ಜಗದುದ್ಧಾರಕನೇ! ಅಖಿಲಸ್ತಂಭನೇ! ಸಾಯುಜ್ಯಪ್ರದನೇ! ವಿಟ್ಠಲನೇ! ನೀನು ಯಾವನನ್ನು ಕೃಪಾದೃಷ್ಟಿಯಿಂದ ನೋಡುವೆಯೋ ಅವನಿಗೆ ಭವಬಂಧವೆಂಬ ಬಲೆಯು ತಪ್ಪಿಹೋಗುವುದು. ಪ್ರಾಪಂಚಿಕಮಾಯೆಯ ಬಿಡುಗಡೆಯಂ ಮಾಡಿ ಕೊನೆಗೆ ಅಕ್ಷಯಪದಸುಖವನ್ನು ನೀನು ಕುಡುವೆ. ನಿನ್ನ ಔದಾರ್ಯವನ್ನು ವರ್ಣಿಸುವುದಕ್ಕೆ ಸಹಸ್ರಮುಖಗಳುಳ್ಳ ಆದಿಶೇಷನಿಂದಲೂ ಆಗಲಾರದು. ಮಹಾಕವಿಗಳ ಬುದ್ಧಿಯು ಮಂದವಾಗಿ ಹೋಗುವುದು. ಹಾಗಿರುವಲ್ಲಿ ನಾನೇನು ? ಮಶಕನು. ನಿನ್ನ ಪ್ರೀತಿವಿಶೇಷವು ಅಸಾಧಾರಣವಾದುದು. ಬಾಲಕರು ತಾಯಿಯನ್ನು ಕುರಿತು ಮನಸ್ಸಿಗೆ ಬಂದಂತೆ ಮಾತನಾಡಿದರೂ ಆಕೆ ಅದರಿಂದ ಅಸಮಾಧಾನಗೊಳ್ಳದೆ ಮೋಹದಿಂದ ಎಂತು ಸಂತೋಷಪಡುವಳೋ ಅಂತು ನೀನು ಸಂತೋಷಪಡುವೆ. ನೀನು ಕೃಪೆಯಂ ಮಾಡಿ ನನ್ನ ವಚನಗಳಂ ಅಂಗೀಕರಿಸಬೇಕು. ನಾನು ನಿನಗೋಸ್ಕರವೇ ಇದನ್ನು ಪ್ರಾರ್ಥಿಸುವೆನು. ನೀನು ನುಡಿಯಿಸಿದ ನುಡಿಯನ್ನು ನಿನಗೇ ಸಮರ್ಪಿಸುವೆನು. ಮೇಘಗಳು ಸಮುದ್ರೋದಕವಂ ತಂದು ವರ್ಷಿಸಲು, ನದಿಗಳು ಅದನ್ನು ಮತ್ತೆ ಸಮುದ್ರಕ್ಕೇ ಸೇರಿಸುವುವು. ಯಾವುದು ಯಾರ ಒಡವೆಯೋ ಅದನ್ನು ಅವರಿಗೆ ಮುಟ್ಟಿಸುವುದು ವಿಶೇಷವೇನು ? ಸೂರ್ಯದರ್ಶನಕ್ಕೆ ಹೋಗಬೇಕಾದರೆ ಅದು ಆತನ ಪ್ರಕಾಶದಿಂದಲೇ ಆಗತಕ್ಕುದು. ಅಂತು ನಿನ್ನನ್ನು ಸ್ತುತಿಯಿಸುವುದು ನಿನ್ನ ಸತ್ತ್ವದಿಂದಲ್ಲದೆ ನಮ್ಮಿಂದ ಆಗತಕ್ಕುದಲ್ಲ. ಪೃಥ್ವಿಗೆ ನಮಸ್ಕಾರವಂ ಮಾಡಲು, ಆಕೆಯ ಮೇಲೆ ತನ್ನ ಭಾರವು

ಎಂತು ಬೀಳುವುದೋ ಅಂತು ನಿನ್ನನ್ನು ವರ್ಣಿಸಲು ಆಧಾರವಾದ ನಿನ್ನ ಮೇಲೆಯೆ ಭಾರವು ಇಡಲ್ಪಟ್ಟಿರುವುದು. ಭಕ್ತರ ನಾಲಗೆಗೆ ನಿನ್ನ ಚರಿತ್ರೆಯು ಬರಬೇಕಾದರೆ ನೀನೇ ಕಾರಣನೆನಿಸಿರುವೆ. ಅಗ್ನಿಗೆ ಧೂಪವಂ ಹಾಕಲು, ಆತನಿಂದಲೇ ಹೊಗೆಯು ಎಂತು ಹೊರಡುವುದೋ ಅಂತು ನಿನ್ನನ್ನು ವರ್ಣಿಸಲು, ನಿನ್ನಿಂದಲೇ ನುಡಿಗಳು ಹೊರಡುವುವು. ಗಂಗೆಯು ಅಭಿಷೇಕವನ್ನು ಅದರ ಉದಕದಿಂದಲೇ ಎಂತು ಮಾಡುವರೋ ಅಂತು ನಿನ್ನ ವರ್ಣನೆಯಂ ಕವಿಗಳು ನಿನ್ನ ಪ್ರಸಾದದಿಂದಲೇ ಮಾತುವರು. ಚಂದ್ರನು ಉದಯಿಸಿರಲು, ಆತನ ಪ್ರಕಾಶದಿಂದಲೇ ಆತನಂ ನೋಡುವರು. ತಾಯಿಯಲ್ಲಿ ವಿಶೇಷಶ್ರದ್ಧೆಯನ್ನು ಮಾಡುವುದೇನು ದೊಡ್ಡದು ? ಆ ಶರೀರವೇ ಆಕೆಯದಾಗಿದೆ. ಕಲ್ಪವೃಕ್ಷದ ಕೆಳಗೆ ಕುಳಿತುಕೊಂಡು ಕಲ್ಪಿಸಿದ ಉದಕವನ್ನು ಅದಕ್ಕೆ ಹಾಕಿ ಉಪಕಾರವಂ ತೋರಿಸಲು ಸುಜ್ಞಾನಿಗಳು ಲಜ್ಜೆಪಡುವುದಿಲ್ಲವೆ ? ವೇದಗಳು ನಿನ್ನ ಸಾಮರ್ಥ್ಯದಿಂದಲೇ ನಿನ್ನನ್ನು ಸ್ತುತಿಯಿಸಲುಜ್ಜುಗಿಸಿ ಬಳಿಕ ವಿವೇಕವಂ ತಂದುಕೊಂಡು ಪರಿಶೀಲಿಸಿ 'ನೇತಿನೇತಿ' ಎಂದು ನುಡಿವುವು. ಇಂತಹ ಮಹಾಮಹಿಮನಾದ ನೀನು ನಿನ್ನ ದಾಸರ ಹೃದಯದ ಅಭಿಪ್ರಾಯವಂ ಬಲ್ಲೆ. ಆದುದರಿಂದ ಈಗ ಅಭಯವರವಂ ಕೊಟ್ಟು ನಿನ್ನ ಭಕ್ತರ ಕಥೆಯಂ ನುಡಿಯಿಸಬೇಕು.

ಎಲೈ ಶ್ರೋತೃಗಳಿರಾ ! ಪೂರ್ವಾಧ್ಯಾಯದ ಕಡೆಯಲ್ಲಿ ಶ್ರೀರುಕ್ಮಿಣೀಪತಿಯು ದೆಹೂಗ್ರಾಮಕ್ಕೆ ಬಂದು ತುಕ್ಕಾರಾಮನಿಗೆ ತನ್ನ ಸಗುಣರೂಪವಾದ ಸಂದರ್ಶನವಂ ಕರುಣಿಸಿದನೆಂಬುದನ್ನು ಕೇಳಿದಿರಷ್ಟೆ. ಬಳಿಕ ಸ್ವಾಮಿಯು ಪ್ರಸನ್ನನಾಗಿ ಆತನಂ ಕುರಿತು—ನಿನಗೆ ಬೇಕಾದ ವರವಂ ಕೇಳು. ಅದು ಬ್ರಹ್ಮದೇವನಿಗೆ ಲಭ್ಯವಾಗತಕ್ಕುದಲ್ಲವಾದರೂ ನಿನಗೆ ಕೊಡುವೆನು-ಎನಲು, ಅದಕ್ಕೆ ತುಕ್ಕೋಬನು ಅಭಿವಂದಿಸಿ ಬದ್ಧಾಂಜಲಿಪುಟನಾಗಿ, ಸ್ವಾಮಿಯೇ ! ನಿನ್ನ ಮರೆವು ಚಿತ್ತದಲ್ಲಿ ಎಂದಿಗೂ ಉಂಟಾಗಬಾರದು. ಪ್ರೇಮವಿಶೇಷದಿಂದ ನಿನ್ನ ಗುಣಗಳನ್ನೇ ಅಡಿಗಡಿಗೆ ಪಾಡುತಿರಬೇಕು. ಮತ್ತು ನಿನ್ನ ಅಂತರಂಗಭಕ್ತರ ಸಂಗತಿಯು ಸರ್ವಕಾಲದಲ್ಲಿಯೂ ಇರಬೇಕು. ನಾನು ಇದನ್ನೇ ಬೇಡಿಕೊಳ್ಳುವೆನು. ನನ್ನ ಕೋರಿಕೆಯನ್ನು ಭಂಗಿಸಬೇಡ. ನಿನ್ನ ಭಜನೆಯಲ್ಲಿಯೇ ಪ್ರೀತಿಯಿರಬೇಕು. ನನಗೆ ಧನಸಂಪತ್ತಿಯೇನೂಬೇಡ. ಮುಂದೆ ಚತುರ್ವಿಧವಾದ ಮುಕ್ತಿಯಂ ಕೊಟ್ಟೀಯೆ. ಅದೂ ನನಗೆ ಬೇಕಾಗಿಲ್ಲ. ರುಕ್ಮಿಣೀಪತಿಯೇ ! ಸರ್ವಕಾಲದಲ್ಲಿಯೂ ಸಂತರ ಸಮಾಗಮವೂ, ನಾಲಗೆಯಲ್ಲಿ ನಿನ್ನ ನಾಮಾಮೃತವೂ ಇರಲು, ಗರ್ಭವಾಸವುಂಟಾದರೂ ಸುಖಕರವಾಗಿಯೇ ಇರುವುದು. ಆದುದರಿಂದ ಇದನ್ನೇ ಬೇಡುವೆನು.

ವೈಕುಂಠಪತಿಯು ಆತನ ಭಾವವಂ ಬಗೆದು ಆಶ್ಚರ್ಯಗೊಂಡು ಗರುಡನಂ ಕುರಿತು—ಈತುಕ್ಕೋಬನು ವಿರಕ್ತನು; ಭಕ್ತೋತ್ತಮನು. ಎಲ್ಲವನ್ನೂ ತ್ಯಾಗಮಾಡಿ ನನ್ನನೊಬ್ಬನನ್ನೇ ಆರಾಧಿಸುತಿರುವನು. ನನ್ನ ವಿಯೋಗದಿಂದ ಆನಂದೋದಕಂಗಳಂ

ಬಿಟ್ಟು ಕೃಶನಾದನು. ನೀನು ನೋಡು–ಎನಲು, ಗರುಡನು–ಸ್ವಾಮಿಯೇ! ನೀವು ಪತ್ರಿಕೆಯಲ್ಲಿ ಯಾವ ವರೆಗೆ ವೈಕುಂಠಕೈಲಾಸಾದಿಗಳಿರುವುವೋ ಅವರೆಗೆ ನೀನು ಚಿರಂಜೀವಿಯಾಗಿರತಕ್ಕವನು-ಎಂದು ಆಶೀರ್ವಾದವಂ ಬರೆದಿರುವಿರಿ. ನಿಮ್ಮ ಆ ವಚನವು ಕಲ್ಪಾಂತರದಲ್ಲಿಯೂ ಅಸತ್ಯವಾಗದು. ಹಾಗಿದ್ದರೂ ಶರೀರವು ಕೃಶವಾಗಿದೆ-ಎಂದು ಏಕೆ ವ್ಯಸನಪಡುವಿರಿ? ಯಾವಾಗ ಈತನ ಚಿತ್ತವು ನಿಮ್ಮ ಚರಣಾರವಿಂದಗಳ ಭಜನೆಯಲ್ಲಿ ನಿರತವಾಯಿತೋ ಆಗಲೇ ಕಾಲನು ಸ್ವಾಧೀನನಾದನು. ಈತನು ನಿಮ್ಮ ಅಂಶವು. ಸಂತರೆಲ್ಲರೂ ಬಲ್ಲರು. ಅನಂತಜನ್ಮಗಳಲ್ಲಿ ಏಕಾಗ್ರಚಿತ್ತನಾಗಿ ನಿಮ್ಮ ಭಜನವಂ ಮಾಡಿ ಪ್ರೀತಿಯಿಂದ ನಿಮ್ಮ ಗುಣಂಗಳಂ ವರ್ಣಿಸಿರುವುದರಿಂದ ನಿಮ್ಮನ್ನು ಸ್ವಾಧೀನವಮಾಡಿಕೊಂಡಿರುವನು–ಎಂದು ಉತ್ತರವಂ ನುಡಿದನು.

ಬಳಿಕ ಜಗನ್ನಾಥನು ತುಕ್ಕೋಬನಂ ಕುರಿತು-ನಾನು ಬಹುವಾಗಿ ಹಸಿವುಗೊಂಡಿರುವೆನು. ಉಪವಾಸದಿಂದಲೇ ಹೊರಟು ನಿನ್ನ ದರ್ಶನಕ್ಕೆ ಬಂದೆನು. ಆದುದರಿಂದ ಮನೆಯಲ್ಲಿ ಏನು ಸಿದ್ಧವಾಗಿರುವುದೋ ಅದನ್ನು ಎಲೆಯಲ್ಲಿ ಇಟ್ಟುಕೊಂಡು ತರಬೇಕು. "ಇದು ಬಾಗಿದುದು ಇದು ಹಸಿದು" ಎಂದು ಸಂಕೋಚಪಡಲಾಗದು-ಎಂದನು.

ಎಲೈ ಶ್ರೋತೃಗಳಿರಾ! ಶ್ರೀಲಕ್ಷ್ಮೀದೇವಿಯು ಸನ್ನಿಧಿಯಲ್ಲಿರುವಾಗ ಚಕ್ರಪಾಣಿಯು ಏತಕ್ಕೆ ಹಸಿವುಗೊಂಡನು?-ಎಂದೀರಿ. ಸ್ವಾಮಿಗೆ ಭೋಜನವಂ ಮಾಡಿಸಬೇಕೆಂಬ ಅಪೇಕ್ಷೆಯು ತುಕ್ಕೋಬನಿಗೆ ಇದ್ದ ಕಾರಣ ಸ್ವಾಮಿಯು ಆತನ ಮನೋಗತವಂ ತಿಳಿದು ಭೋಜನಮಾಡದೆಯೇ ಹೊರಟುಬಂದನು. ಯಾವುದರಿಂದ ಪ್ರೇಮಳ ಭಕ್ತನ ಅಪೇಕ್ಷೆಯು ಪೂರ್ಣವಾಗುವುದೋ ಅದನ್ನೇ ದೀನನಾಥನು ಮಾಡುತಿರುವನು.

ಬಳಿಕ ತುಕ್ಕೋಬನು ಸಂತೋಷಗೊಂಡು ಉದಕವಂ ತೆಗೆದುಕೊಂಡು ಬಂದು ಸ್ವಾಮಿಯ ಪಾದಪದ್ಮಂಗಳಂ ತೊಳೆದು ಕೋಮಲವಾದ ತುಳಸೀದಳಗಳ ಮಾಲಿಕೆಯಂ ಕಂಠದಲ್ಲಿ ಹಾಕಿ ಪ್ರೀತಿಯಿಂದ ಪಾತ್ರದಲ್ಲಿ ಜೋಳರೊಟ್ಟಿಯನ್ನೂ ಸೊಪ್ಪಿನ ಶಾಕವನ್ನೂ ಉಪ್ಪನ್ನೂ ಮುಂದೆ ತಂದಿರಿಸಲು, ಸ್ವಾಮಿಯು ಅದನ್ನೇ ಪ್ರೀತಿಯಿಂದ ಭಕ್ಷಿಸುತ್ತಿದ್ದನು.

ಈ ಮಾತಂ ಕೇಳಿ, ಕ್ಷೀರಾಬ್ಧಿವಾಸಿಯಾದ ಜಗಜ್ಜೀವನನು ಜೋಳರೊಟ್ಟಿಗಳನ್ನು-ಏಕೆ ಭಕ್ಷಿಸಾನು?--ಎಂದು ಶಂಕೆಯುಂಟಾಗಬಹುದು. ಆದರೆ ಹೃದಯದಲ್ಲಿ ಸದ್ಭಾವವೊಂದಿರಲು, ಶ್ರೀಹರಿಯು ಅದಕ್ಕೆ ಹಸಿವುಗೊಳ್ಳುವನು. ಕುಲಜಾತಿಗಳೇನನೂ ವಿಚಾರಿಸನು. ದುರ್ಬುದ್ಧಿಯಾದ ದುರ್ಯೋಧನನು ನಾನಾವಿಧವಾದ ಪಕ್ವಾನ್ನಗಳನ್ನು ಮಾಡಿಸಿ ಮಾರ್ಗವಂ ನಿರೀಕ್ಷಿಸುತಿದ್ದನು. ಆದರೂ ಅಲ್ಲಿ ಭೋಜನವಂ ಮಾಡಲಿಲ್ಲ. ವಿದುರನ ಮನೆಯಲ್ಲಿ ನುಚ್ಚನ್ನೇ ಭಕ್ಷಿಸಿದನು. ದ್ರೌಪದಿಯು ಸದ್ಭಾವದಿಂದ ಮಾರ್ಗವಂ ನಿರೀಕ್ಷಿಸುತ್ತಿರಲು, ಭೋಜನಕ್ಕೆ ಕುಳಿತಿದ್ದರೂ ಎಡೆಯಂ

ಬಿಟ್ಟು ಓಡಿಬಂದು ಆಕೆಯ ಸಮೀಪದಲ್ಲಿ ಕುಳಿತು ಸೊಪ್ಪಿನ ಶಾಕವನ್ನು ಬೇಡಿದನು. ಯಾವನು ಪರಮಪವಿತ್ರನಾದ ಯಜ್ಞಪುರುಷನೋ, ಅವನು ಗೋಪಾಲಕರ ಉಚ್ಛಿಷ್ಟವನ್ನು ಭಕ್ಷಿಸಿದನು. ಶಬರಿಯ ಉಚ್ಛಿಷ್ಟಫಲಗಳನ್ನು ತಿಂದನು. ಅಂತಹ ಪರಮಾತ್ಮನು ತುಕ್ಕೋಬನ ಮನೆಯಲ್ಲಿ ಕದನ್ನವನ್ನು ಭಕ್ಷಿಸಿದುದೇನಾಶ್ಚರ್ಯವು? ಆದುದರಿಂದ ಶ್ರೋತೃಗಳು ಪುರಾತನವಾದ ಕಥೆಯನ್ನು ಮನಸ್ಸಿಗೆ ತಂದುಕೊಂಡು ಸಂದೇಹವಂ ಬಿಡಬೇಕು. ಅದಂತಿರಲಿ. ಜಗನ್ನಾಥನು ರುಕ್ಮಿಣೀಸಹಿತನಾಗಿ ಭೋಜನವಂ ಮಾಡಿದ ಬಳಿಕ ತುಕ್ಕೋಬನು ಕರಶುದ್ಧಿಯನ್ನು ಮಾಡಿಸಿ ಮುಖಶುದ್ಧ್ಯರ್ಥವಾಗಿ ತುಲಸೀದಲವಂ ತಂದು ಸಮರ್ಪಿಸಲು, ಸ್ವಾಮಿಯು ಸ್ವೀಕರಿಸಿ ಭಕ್ಷಿಸಿದನು. ಬಳಿಕ ತುಕ್ಕೋಬನು ದೇವನ ಉಚ್ಛಿಷ್ಟವನ್ನು ಭಕ್ತಿಯಿಂದ ಭಕ್ಷಿಸಿದನು.

ಇಂತು ಸ್ವಾಮಿಯು ಸಂತುಷ್ಟನಾಗಿ ತುಕ್ಕೋಬನಂ ಕುರಿತು—ಇನ್ನು ಮೇಲೆ ನೀನು ನನ್ನನ್ನು ಹೃದಯವೆಂಬ ಸಂಪುಟದಲ್ಲಿ ಇರಿಸಿಕೊಂಡಿರು. ವಿಯೋಗದುಃಖವಂ ತಾಳಬೇಡ. ನೀನು ಯಾವಾಗ ನನ್ನನ್ನು ಕರೆವೆಯೋ ಆಗ ನನ್ನ ಸಗುಣರೂಪವನ್ನು ನಿನಗೆ ತೋರಿಸುವೆನು—ಎಂದು ಅಭಯವನಿತ್ತು ಹೊರಡಲು, ತುಕ್ಕೋಬನು ರುಕ್ಮಿಣೀಸಹಿತನಾದ ಸ್ವಾಮಿಯ ಪಾದಕಮಲಗಳ ಮೇಲೆ ಶಿರಸ್ಸನಿರಿಸಿದನು. ಸ್ವಾಮಿಯು ಆತನನ್ನು ಸಂತೈಸಿ ಬಳಿಕ ಅಲ್ಲಿಂದ ಹೊರಟು ಪಂಡರಪುರವಂ ಸೇರಿದನು.

ಒಬ್ಬ ಬ್ರಾಹ್ಮಣನು ತನಗೆ ವ್ಯುತ್ಪತ್ತಿಯುಂಟಾಗಬೇಕೆಂಬ ಅಪೇಕ್ಷೆಯಿಂದ ಆಳಂದಿಯಲ್ಲಿ ತಪೋನುಷ್ಠಾನವಂ ಮಾಡುತಿರಲು, ಜ್ಞಾನದೇವನು ಸ್ವಪ್ನದಲ್ಲಿ ಬಂದು ನೀನು ತುಕ್ಕೋಬನ ಬಳಿಗೆ ಹೋಗು. ಆತನು ನಿನ್ನಲ್ಲಿ ಪ್ರಸಾದವಂ ಮಾಡಾನು. ಆದರಿಂದ ನಿನ್ನ ಮನೋರಥವು ಪೂರ್ಣವಾದೀತು—ಎಂದು ಹೇಳಲು, ಆ ಬ್ರಾಹ್ಮಣನು ಸಂದೇಹಗೊಳ್ಳದೆ ಅದೇರೀತಿಯಿಂದ ತುಕ್ಕೋಬನನ್ನು ಏಕಾಂತದಲ್ಲಿ ಕಂಡು-ನಾನು ಆಳಂದಿಯಲ್ಲಿ ತಪವಂ ಮಾಡುತಿದ್ದೆನು. ಜ್ಞಾನದೇವರು ನನ್ನನ್ನು ನಿಮ್ಮ ಬಳಿಗೆ ಕಳುಹಿದರು. ನೀವು ಅನುಗ್ರಹಿಸಬೇಕು—ಎಂದು ತನ್ನ ಮನೋಗತವಂ ತಿಳಿಯಿಸಿದನು.

ತುಕ್ಕೋಬನು ಆ ಮಾತನ್ನು ಕೇಳಿ ಆಶ್ಚರ್ಯಗೊಂಡು—ನಾನು ಜಪತಪೋನುಷ್ಠಾನವೇನನ್ನೂ ಅರಿಯದ ಅಜ್ಞಾನಿಯು. ಜ್ಞಾನದೇವರು ನನಗೆ ದೊಡ್ಡತನವನ್ನು ಏಕೆ ಕೊಟ್ಟರು? ನಾನು ಪುಣ್ಯಸಂಪಾದನೆಯನೇನಾದರೂ ಮಾಡಿದ್ದರೆ ಈತನಿಗೋಸ್ಕರ ಅದನ್ನಾದರೂ ವೆಚ್ಚಮಾಡಬಹುದಾಗಿದ್ದಿತು—ಎಂದು ಮನದಲ್ಲಿ ಬಗೆದು, ಈತನ ಹಣೆಯಲ್ಲಿ ವಿದ್ಯಾಪ್ರಾಪ್ತಿ ಬರೆದಿಲ್ಲವೆಂದು ಬೇಸರಗೊಂಡು ಪರಿಹರಿಸಿಕೊಳ್ಳುವುದಕ್ಕೋಸ್ಕರ ನನ್ನ ಬಳಿಗೆ ದೊಡ್ಡ ಉಪಾಧಿಯನ್ನು ಕಳುಹಿದರೋ ಏನೋ-ಎಂದಾಲೋಚಿಸಿ ಬಳಿಕ ಹನ್ನೊಂದು ಅಭಂಗಗಳನ್ನೂ ಒಂದು ತೆಂಗಿನಕಾಯನ್ನೂ ಆ ಬ್ರಾಹ್ಮಣನಿಗೆ ಕೊಟ್ಟು—ಇದನ್ನು ನೀನು ಭಕ್ಷಿಸು. ಈ ಅಭಂಗಗಳಂ ಪಠಿಸು. ತತ್ಕಾಲದಲ್ಲಿಯೇ ನಿನಗೆ ಜ್ಞಾನವುಂಟಾದೀತು-ಎಂದು ಹೇಳಿದನು.

ಆಗ ಆ ಬ್ರಾಹ್ಮಣನು ಮನದಲ್ಲಿ ವಿಕಲ್ಪಗೊಂಡು, ತೆಂಗಿನಕಾಯನ್ನು ಭಕ್ಷಿಸಿದರೆ ನನಗೆ ಜ್ಞಾನವೆಂತು ಉಂಟಾದೀತು? ಪ್ರಾಕೃತವಾದ ಈ ಅಭಂಗಗಳು ನನಗೆ ಏಕೆ ಬೇಕು?–ಎಂದು ಅನಾಸ್ಥೆಯುಳ್ಳವನಾಗಿ ಅವನ್ನು ಅಲ್ಲಿಯೇ ಬಿಟ್ಟು ಹೊರಟುಹೋದನು.

ಅದೃಷ್ಟಹೀನನಿಗೆ ಚಿಂತಾಮಣಿಯು ದೊರೆತರೂ ಅದು ಪಾಷಾಣವಾಗಿ ತೋರಿದಂತೆ, ನಿರ್ಭಾಗ್ಯನಿಗೆ ನಿಧಿಯು ಸಿಕ್ಕಿದರೂ ಅದು ಮಸಿಯಾಗಿ ಕಂಡಂತೆ, ದಿವ್ಯಾನ್ನವು ರೋಗಿಗೆ ಕಹಿಯಾಗಿ ತೋರಿದಂತೆ, ನೀಚನಿಗೆ ಭಾಗೀರಥಿಯು ಕುಪ್ಪಿಗೆಯು ಮದ್ಯವಾಗಿ ತೋರಿದಂತೆ, ತುಕ್ಕೋಬನು ಕೊಟ್ಟ ಪ್ರಸಾದವು ಆ ಬ್ರಾಹ್ಮಣನಿಗೆ ನಿಸ್ಸತ್ತ್ವವಾಗಿ ತೋರಿತು.

ಬಳಿಕ ತುಕ್ಕೋಬನು-ಪಾಮರನಾದ ನನಗೆ ದೊಡ್ಡತನವಂ ಕೊಟ್ಟು ನಿರ್ಬಂಧಕಾರನನ್ನು ನನ್ನಲ್ಲಿ ಕಳುಹಿದಿರಿ. ನಿಮ್ಮ ಆಜ್ಞೆಯಂ ಸಿರದಿಂದ ವಹಿಸಿ ಆತನಿಗೆ ಉಚಿತವಂ ಕೊಟ್ಟೆನು. ಆತನು ವಿಕಲ್ಪಗೊಂಡು ಹನ್ನೊಂದು ಅಭಂಗಗಳನ್ನೂ ಮಹಾಫಲವನ್ನೂ ಬಿಟ್ಟು ಹೊರಟುಹೋದನು–ಎಂದು ಜ್ಞಾನದೇವನಿಗೆ ಪತ್ರಿಕೆಯಂ ಬರೆದು ಆಳಿಂದಿಗೆ ಕಳುಹಿಸಿ ತಾನು ಶ್ರೀವಿಟ್ಠಲಮೂರ್ತಿಯಂ ಧ್ಯಾನಿಸುತ್ತ ತನ್ನಾಮಸಂಕೀರ್ತನೆಯಲ್ಲಿ ನಿರತನಾಗಿದ್ದನು.

ಆಗ ಶಿವಾಜಿರಾಯನ ಬಳಿಯಲ್ಲಿ ಶಾಸ್ತ್ರಜ್ಞಪಂಡಿತನಾದ ಒಬ್ಬ ಪೌರಾಣಿಕನಿದ್ದನು. ಆತನ ಪರಿಚಾರಕನೊಬ್ಬನು ಕೇವಲಮೂಢನಾಗಿದ್ದನು. ಅವನು ತುಕ್ಕೋಬನ ಬಳಿಗೆಬಂದು ನಮಸ್ಕಾರವಂ ಮಾಡಿದನು. ತುಕ್ಕೋಬನು ಆ ತೆಂಗಿನಕಾಯನ್ನು ಅವನಿಗೆ ಎತ್ತಿಕೊಟ್ಟು, ಬರೆದಿಟ್ಟದ್ದ ಆ ಹನ್ನೊಂದು ಅಭಂಗಗಳನ್ನು ಕೊಟ್ಟು ಕಳುಹಿಸಿದನು. ಆ ಪರಿಚಾರಕನು ಆ ತೆಂಗಿನಕಾಯನ್ನು ಒಡೆದು ತಿಂದು ತನ್ನ ಸ್ಥಳಕ್ಕೆ ಬರುತಿರಲು, ಅಲ್ಲಿಯೊಂದೆಡೆಯಲ್ಲಿ ಪುರಾಣಕೀರ್ತನವಾಗುತಿದ್ದಿತು. ಶಾಸ್ತ್ರಜ್ಞರೂ ಅಲ್ಲಿ ಸೇರಿದ್ದರು. ಆಗ ಅವನು ಪೌರಾಣಿಕನಂ ಕುರಿತು-ನೀವೀಗ ಓದಿದ ಶ್ಲೋಕಕ್ಕೆ ಅರ್ಥವನ್ನು ಹೇಳುವಲ್ಲಿ ಕೆಲವು ಪದಗಳರ್ಥವು ಉಳಿದಿವೆ-ಎಂದನು.

ಆಗ ಅಲ್ಲಿದ್ದ ಪಂಡಿತರು ಪರಿಶೀಲಿಸಿ ನೋಡಲು, ಯಥಾರ್ಥವಾಗಿ ತೋರಿತು. ಆಗ ಎಲ್ಲರೂ-ಇವನಿಗೆ ಏನಾದರೂ ಬರುತಿರಲಿಲ್ಲ. ಥಟ್ಟನೆ ಪುರಾಣವ್ಯುತ್ಪತ್ತಿಯೆಂತು ಉಂಟಾಯಿತು ?-ಎಂದು ಕೇಳಲು, ಅದಕ್ಕೆ ಆತನು-ತುಕ್ಕೋಬನು ಹನ್ನೊಂದು ಅಭಂಗಗಳನ್ನೂ ಒಂದು ತೆಂಗಿನಕಾಯನ್ನೂ ಕೊಟ್ಟಿದ್ದನು. ಆ ಫಲವನ್ನು ನಾನು ಒಡೆದು ತಿನ್ನುವುದೂ ನನಗೆ ಗೀರ್ವಾಣಭಾಷಾವ್ಯುತ್ಪತ್ತಿಯುಂಟಾಯಿತು-ಎಂದು ಉತ್ತರವಂ ಕೊಟ್ಟನು. ಅದನ್ನು ಕೇಳಿ ಎಲ್ಲರೂ ಸುಮ್ಮನಾದರು. ಪೌರಾಣಿಕನು ಆತನನ್ನು ಸಮೀಪಕ್ಕೆ ಕರೆದು ಆತನ ಕೈಗೆ ಒಂದು ಪತ್ರವಂ ಕೊಟ್ಟು-ನೀನು ಇದನ್ನು ಓದಿ ಇದಕ್ಕೆ ಅರ್ಥವನ್ನು ಹೇಳಿದರೆ ನಮಗೆ ನಿಶ್ಚಯವಾಗುವುದು–ಎನಲು, ಆತನು ತುಕ್ಕೋಬನ ಪಾದವಂ ನೆನೆದು ಬಳಿಕ ಓದಿ ಅರ್ಥವನ್ನು ಹೇಳಿ

ದನು. ಎಲ್ಲರೂ ಕೇಳಿ ವಿಸ್ಮಿತರಾಗಿ ವಿಷ್ಣುಭಕ್ತರ ಪ್ರಭಾವವು ಅಪ್ರಮೇಯ ವಾದುದು. ಆಗದಂತಹ ಕಾರ್ಯವನ್ನು ಮಾಡಿ ತೋರುವರು. ಬಂದುಸದ್ಭಾವ ದಿಂದ ಶ್ರೀಹರಿಯನ್ನು ಸ್ವಾಧೀನಮಾಡಿಕೊಂಡಿರುವರು. ಆ ಲೀಲಾನಾಟಕನಾದ ಭಗ ವಂತನು ಸಾಸುವೆಯು ಕಾಳನ್ನೂ ಪರ್ವತವನ್ನಾಗಿ ಮಾಡುವನು. ಆತನ ಪ್ರಿಯ ಭಕ್ತರ ಚರಿತ್ರೆಯು ಅಸಾಧಾರಣವಾದುದು-ಎಂದು ನುಡಿದರು.

ಚಿಂಚವಟಿಯಲ್ಲಿದ್ದ ದೇವ ಮೊದಲಾದ ಬ್ರಾಹ್ಮಣರೆಲ್ಲರೂ ಆ ಮೂಢನಾದ ಪರಿ ಚಾರಕನಿಗೆ ಜ್ಞಾನವುಂಟಾದ ಸಂಗತಿಯನ್ನುಕೇಳಿ ಬಂದುದಿನ ಸಭೆಸೇರಿ—ನಾವು ಮ ತಾಭಿಮಾನವನ್ನು ಹಿಡಿದು ವ್ಯರ್ಥವಾಗಿ ತುಕ್ಕೋಬನನ್ನು ಹೇಳನಮಾಡಿದೆವು. ಆತ ನನ್ನು ಸಾಮಾನ್ಯಮನುಷ್ಯನೆಂದು ಹೇಳಬಾರದು. ಆತನನ್ನು ಇಲ್ಲಿಗೆ ಬರಿಸಿ, ನೀ ನು ಯಾರಾಗಿರುವೆ ? ಹೇಳು—ಎಂದು ಕೇಳಬೇಕು. ಆತನು ಬ್ರಾಹ್ಮಣರಲ್ಲಿ ಭಕ್ತಿಯು ಳ್ಳವನು. ಉತ್ತರವಂ ಹೇಳುವನು-ಎಂದು ಮಾತನಾಡಿಕೊಂಡು ತುಕ್ಕೋಬನನ್ನು ಇಲ್ಲಿಗೆ ಕರೆದುಕೊಂಡುಬಾ—ಎಂದು ಒಬ್ಬದೂತನನ್ನು ದೆಹೂಗೆ ಕಳುಹಿಸಿದರು.

ಆ ದೂತನು ದೆಹೂಗ್ರಾಮವನ್ನು ಸೇರಿ ತುಕ್ಕೋಬನಂ ಕಂಡು ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ಆಗ ಅಲ್ಲಿ ಹರಿಕೀರ್ತನವಾಗುತಿದ್ದಿತು. ಸಜ್ಜನರು ಅನೇಕರು ಅಲ್ಲಿ ನೆರೆದು ಪ್ರೇಮಭಾವದಿಂದ ಶ್ರವಣಮಾಡುತಿದ್ದರು. ಆಕೀರ್ತನನಾ ದವು ಆಕಾಶದಲ್ಲಿ ತುಂಬಿ ಇದ್ದಿತು. ಸರ್ವರೂ ದೇಹಭಾವವಂ ಮರೆತಿದ್ದರು. ಯಾ ರಿಗೂ ಪ್ರಾಪಂಚಿಕಭ್ರಾಂತಿಯು ಇರಲಿಲ್ಲ. ರೆಪ್ಪೆಗಳ ಚಲನೆಯು ನಿಂತುಹೋಯಿತು. ಸರ್ವರ ವೃತ್ತಿಯೂ ಭಗವನ್ನಾಮರೂಪದಲ್ಲಿಯೇ ಸ್ಥಿರವಾಗಿ ನಿಂತಿತು. ತಾಳಹಾಕು ವನೂ ಮದ್ದಲೆಯಂ ಬಾಜಿಸುವನೂ ತಾವು ಯಾರೆಂಬ ಸ್ಮೃತಿಯಿಲ್ಲದೆ ಸ್ವಕೀ ಯಪರಕೀಯವೆಂಬುದನ್ನೂ ತಿಳಿಯದೆ ತಲ್ಲೀನರಾಗಿದ್ದರು. ದೀವಟಿಗೆಯಂ ಹಿಡಿ ದಿದ್ದವನೂ ದೇಹಸ್ಮೃತಿಯಿಲ್ಲದೆ ಭಗವನ್ನಾಮರೂಪದಲ್ಲಿಯೇ ಲೀನವಾದ ಮನಸ್ಸು ಳ್ಳವನಾಗಿದ್ದನು. ಆಗ ಅವನು ದೀವಟಿಗೆಯನ್ನು ಮೇಲೆ ಎತ್ತಲು, ಉರಿಯು ಮಂಟ ಪಕ್ಕೆ ಹತ್ತಿತು. ಇಲ್ಲಿ ಮತ್ತೊಂದು ಕಥೆ ಬಂದಿತು. ಶ್ರೋತೃಗಳು ಅವಧರಿಸಬೇಕು.

"ಚಾಂಬಾರಗೊಂದಿ" ಎಂಬ ಊರಲ್ಲಿ ಪ್ರಸಿದ್ಧನಾದ ಶೇಖಮಹಮ್ಮದನೆಂಬ ಒಬ್ಬ ಜ್ಞಾನಿಯಿದ್ದನು. ಆತನು ಅಲ್ಲಿ ಆನಂದದಿಂದ ಕೀರ್ತನಮಾಡುತ್ತಿದ್ದನು. ಶ್ರವಣಮಾಡುವುದಕ್ಕೆ ಸಣ್ಣವರೂ ದೊಡ್ಡವರೂ ಬಡವರೂ ಶ್ರೀಮಂತರೂ ಸುಜ್ಞಾ ನಿಗಳಾದ ಬ್ರಾಹ್ಮಣರೂ ಪಂಡಿತರೂ ನೆರೆದಿದ್ದರು. ಕಥೆಯಲ್ಲಿ ಅದ್ಭುತರಸವುಂಟಾಗಿ ಮನಸ್ಸಿಗೆ ಹತ್ತಿರಲು, ಎಲ್ಲರಿಗೂ ಮಾತೇ ತೋರದಂತೆ ಇದ್ದಿತು. ಆಗ ವಕ್ತೃವು ಮೇಲೆಡೆಗೆ ಹಾರಿ ಮಂಟಪವಂ ತಿಕ್ಕಿದನು. ಎಲ್ಲರೂ ನೋಡಿ ವಿಸ್ಮಿತರಾದರು. ಸಮೀಪದಲ್ಲಿ ಕುಳಿತಿದ್ದವರು—ನೀವು ಮಂಟಪವನ್ನು ಏತಕ್ಕೆ ತಿಕ್ಕಿ ತೋರಿಸಿದಿರಿ? ಈ ಕಾರ್ಯವಂ ಕಂಡುದರಿಂದ ನಮಗೆ ವಿಸ್ಮಯವುಂಟಾಗಿರುವುದು—ಎನಲು, ಅದಕ್ಕೆ

ಆತನು, ದೆಹೂಗ್ರಾಮದಲ್ಲಿ ವಿಷ್ಣುಭಕ್ತನಾದ ತುಕ್ಕೋಬನು ಪ್ರೇಮಭಾವದಿಂದ ಕೀರ್ತನವಂ ಮಾಡುತಿರುವನು. ಅಲ್ಲಿ ಮಂಟಪಕ್ಕೆ ದೀವಟಿಗೆಯ ಉರಿಯು ಹತ್ತಿಕೊಂಡು ಬಂದಿತು. ಆವುರಿಯು ನನಗೆ ಕಂಡುಬಂದುದರಿಂದ ನಾನು ನನ್ನ ಕೈಯಿಂದ ಆರಿಸಿದೆನು-ಎಂದು ಹೇಳಿದನು. ಅವಮಾತನ್ನು ಕೇಳಿ ಅವರು-ದೆಹೂಗ್ರಾಮವು ಇಲ್ಲಿಗೆ ದೂರವಾಗಿದೆ. ಆಸಂಗತಿಯು ನಿಮಗೆ ತಿಳಿದಬಗೆಯೆಂತು ? ಅಲ್ಲಿಯೂ ಕಥೆಯಂ ಕೇಳುವುದಕ್ಕೆ ಅನೇಕರು ನೆರೆದಿರಬಹುದು. ಅವರ ಕಣ್ಣಿಗೆ ಕಾಣಲಿಲ್ಲವೆ? ನೀವು ಅಲ್ಲಿಯ ಉರಿಯನ್ನು ಆರಿಸಿದಿರೆಂಬುದು ನಮಗೆ ಯಥಾರ್ಥವಾಗಿ ತೋರುವುದಿಲ್ಲ-ಎನಲು ಅವಕ್ಕೆ ಶೇಖಮಹಮ್ಮದನು-ತುಕ್ಕೋಬನ ಕೀರ್ತನದಲ್ಲಿ ಶ್ರೀಹರಿಯ ಲೀಲೆಗಳಂ ಶ್ರವಣಮಾಡುತ ಕುಳಿತಿರುವರಿಗೆ ದೇಹಭಾವವು ಮರೆತು ಹೋಗಿರುವುದು. ಎಲ್ಲರ ಚಿತ್ತವೂ ಕಥಾರಸದಲ್ಲಿ ಲೀನವಾಗಿರುವುದು. ಮಂಟಪಕ್ಕೆ ಉರಿಯು ಹತ್ತಿದ್ದುದು ಯಾರಿಗೂ ತೋರಲಿಲ್ಲ-ಎಂದನು.

ಅದಂ ಕೇಳಿ ಅಲ್ಲಿಯ ಜನಗಳು- ಅಲ್ಲಿ ಪಾಂಡರೀನಾಥನು ಇರಲಿಲ್ಲವೇ? ಆತನು ಅದೇಕೆ ಆವಿಪತ್ತನ್ನು ಪರಿಹರಿಸಲಿಲ್ಲ ?-ಎಂದು ಮತ್ತೆ ಪ್ರಶ್ನೆಮಾಡಿದರು. ಅದಕ್ಕೆ ಶೇಖಮಹಮ್ಮದನು-ಹೃಷೀಕೇಶನು ಭಕ್ತಿಭಾವಕ್ಕೆ ಮರುಳಾಗಿರುವುದರಿಂದ ಆತನಿಗೆ ತನ್ನ ದೇವತ್ವವೂ ತೋರಲಿಲ್ಲ. ಕೀರ್ತನದಲ್ಲಿ ಲೀನನಾದ ಭಕ್ತನಿಗೆ ತನ್ನ ಭಕ್ತತ್ವವೂ ತೋರಲಿಲ್ಲ. ಅವರಿಬ್ಬರೂ ಒಂದಾಗಿಯೇ ಇರುವರು. ಯಾರನ್ನು ಯಾರು ರಕ್ಷಿಸುವರು ? ಅವರ ಇಂತಹ ಅವಸ್ಥೆಯು ನನಗೆ ತಿಳಿದುಬಂದಿತು. ಉರಿಯುತ್ತಿರುವ ಎರಡು ದೀಪಗಳನ್ನು ಒಂದೇಕಡೆಗೆ ಸೇರಿಸಿದರೆ ಅದು ಎಂತು ಅಭಿನ್ನವಾಗುವುದೋ, ಹೊಳೆಯ ಮಧ್ಯದಲ್ಲಿರುವ ತಿಟ್ಟನಲ್ಲಿ ಎರಡಾಗಿ ಹರಿಯುವ ಪ್ರವಾಹವು ಮುಂದೆ ಒಂದಾಗಿ ಎಂತು ಸೇರುವುದೋ, ಬೆಣ್ಣೆಯನ್ನೂ ತುಪ್ಪವನ್ನೂ ಕಾಯಿಸಿದರೆ ಅದರಲ್ಲಿ ಭೇದವು ಎಂತು ಕಾಣದೋ ಅಂತು ದೇವನೂ ಭಕ್ತನೂ ಒಂದಾಗಿಹೋಗಲು, ಯಾರದುಃಖವು ಯಾರಿಗೂ ತಿಳಿಯಲಿಲ್ಲ. ಶ್ರೋತೃಗಳು ಅದೇ ಸ್ಥಿತಿಯನ್ನು ಹೊಂದಿರುವರು. ನನ್ನ ಈ ಮಾತು ಯಥಾರ್ಥವಾಗಿ ತೋರದಿದ್ದರೆ ಅಲ್ಲಿಂದ ಸುದ್ದಿಯಂ ತರಿಸಬಹುದು-ಎಂದನು.

ಆ ಮಾತಿಗೆ ಶ್ರೋತೃಗಳು ಸಂತೋಷಪಟ್ಟು-ರಾತ್ರಿ ವಿಶೇಷಸಂಗತಿಯೇನು ನಡೆಯಿತೋ ಅದನ್ನು ಯಥಾಸ್ಥಿತಿಯಾಗಿ ಬರೆದು ಕಳುಹಿಸಬೇಕೆಂದು ದೆಹೂಗ್ರಾಮದ ಗೌತನಿಗೆ ಪತ್ರಿಕೆಯಂ ಬರೆದುಕೊಟ್ಟು ತಳಾರನನ್ನು ಕಳುಹಿಸಿದರು.

ಬಳಿಕ ಮರುದಿವಸ ಸೂರ್ಯಾಸ್ತಮಯವಾಗುವುದೂ ಇಂತು ಅದರ ಪ್ರತ್ಯುತ್ತರ ಬಂದಿತು:—ರಾತ್ರಿಯಲ್ಲಿ ಕೀರ್ತನವಾಗುತಿರಲು, ಹತ್ತಿಕೊಂಡ ದೀವಟಿಗೆಯುರಿಯಿಂದ ಮಂಟಪವು ಒಂದುಮೊಳ ಸುಟ್ಟು ಕರಿಮುರಿಯಾಗಿರುವುದು. ಈ ಸಂಗತಿ ರಾತ್ರಿ ಯಾರಿಗೂ ತಿಳಿಯಲಿಲ್ಲ. ಎಲ್ಲರೂ ಬೆಳಗೆ ಎದ್ದು ನೋಡಿ ಆಶ್ಚರ್ಯಗೊಂಡರು-ಎಂದು.

ಇಂತು ಬರೆದಿದ್ದ ಲೇಖನವನ್ನು ನೋಡಿದುದರಿಂದ ಸಕಲರಿಗೂ ಸತ್ಯವಾಗಿ ತೋರಿತು. ಬಳಿಕ ಶೇಖಮಹಮ್ಮದನ ಬಳಿಗೆ ಬಂದು ನಮಸ್ಕಾರಮಾಡಿ ಅಲ್ಲಿಯ ವೃತ್ತಾಂತವು ನಿಮಗೆಂತು ತಿಳಿದುದು? ಈ ಚಮತ್ಕಾರವು ನಮಗೆ ಅತ್ಯಾಶ್ಚರ್ಯವನ್ನುಂಟುಮಾಡಿರುವುದು—ಎನಲು, ಆತನು ಆ ಮಾತಂ ಕೇಳಿ—ಈ ಸಂಗತಿಯನ್ನು ನಾನು ನಿಮಗೆ ತಿಳಿಯಿಸುವುದೆಂತು? ಮೀನು ನೀರಧಾರೆಯನ್ನು ಏರುವುದು. ಆ ಗತಿಯು ಇತರರಿಗೆ ತಿಳಿಯಲಸಾಧ್ಯವು. ಜಲಚರಗಳು ಅನೇಕಗಳಿರುವುವು. ಆದರೆ ಮೀನಂತೆ ನೀರನ್ನು ತಳ್ಳಲು ಅವುಗಳಿಂದ ಆಗದು. ಅಂತು ಭಾಗವತರ ಮನಸ್ಸಿನ ಗುರುತನ್ನು ಭಾವುಕರೇ ಬಲ್ಲರು. ಇತರರು ತಿಳಿಯಲಾರರು. ಅಂತರಿಕ್ಷದಲ್ಲಿ ಪಕ್ಷಿಗಳು ಹಾರುವುವು. ಅಲ್ಲಿ ಮಾರ್ಗವು ಕಾಣುವುದಿಲ್ಲ. ಆದರೂ ಅಲ್ಲಿ ಸಂಚರಿಸುವ ಆ ಪಕ್ಷಿಗಳು ಆ ಮಾರ್ಗವನ್ನು ಎಂತು ಬಲ್ಲುವೋ, ಇರುವೆಗಳ ಮಾರ್ಗವನ್ನು ಅವುಗಳೇ ಎಂತು ಬಲ್ಲುವೋ, ಅಂತು ಗುರುಭಕ್ತಿಯ ಗುರುತನ್ನು ಭಾಗ್ಯವಂತರೇ ಬಲ್ಲರು; ಇತರಮಾಯಾಲೋಭಿಗಳು ಅರಿಯರು—ಎಂದು ನುಡಿದು ಸ್ವಸ್ಥನಾಗಿ ಭಜನೆ ಮಾಡುತಿದ್ದನು. ಶ್ರೋತೃಗಳೆಲ್ಲರೂ ಆಶ್ಚರ್ಯಪಟ್ಟು ಸಾಷ್ಟಾಂಗನಮಸ್ಕಾರಮಂ ಮಾಡಿದರು. ಅದಂತಿರಲಿ.

ಎಲೈ ನಮ್ಮ ಶ್ರೋತೃಗಳಿರಾ! ಪೂರ್ವದ ಕಥೆಯಂ ಕೇಳಿ. ಚಿಂಚವಟಿಯಿಂದ ಬಂದ ದೂತನು ತುಕ್ಕೋಬನ ಬಳಿಗೆ ಬಂದು ಅಲ್ಲಿ ಆಗುತಿದ್ದ ಕೀರ್ತನದಲ್ಲಿ ಲೀನವಾದ ಮನಸ್ಸುಳ್ಳವನಾಗಿ ತಾನು ಹೇಳತಕ್ಕುದನ್ನು ಹೇಳಬೇಕೆಂಬ ಸ್ಮೃತಿಯಿಲ್ಲದೆ ಪ್ರಾಪಂಚಿಕವಾದ ತಲ್ಲಣವನ್ನು ಬಿಟ್ಟು ಸುಖದಲ್ಲಿ ನಿಮಗ್ನನಾಗಿದ್ದನು. ಹಿಂತಿರುಗಿ ತನ್ನೆಡೆಗೆ ಹೋಗಬೇಕೆಂಬುದೂ ಅವನಿಗೆ ತೋರಲಿಲ್ಲ. ತುಕ್ಕೋಬನ ದರ್ಶನವಾದ ಮಾತ್ರದಿಂದ ತತ್ಕೀರ್ತನದಲ್ಲಿ ಲೀನನಾದನು.

ಇತ್ತಲು ಚಿಂಚವಟಿಯಲ್ಲಿ ಎಲ್ಲರೂ—ಬಹುದಿವಸವಾಯಿತು; ತುಕ್ಕೋಬನು ಬರಲಿಲ್ಲ. ಹೋದ ಆಳೂ ಹಿಂದಿರುಗಲಿಲ್ಲ—ಎಂದು ದಾರಿಯನ್ನೇ ನೋಡುತಿದ್ದು, ಸುದ್ದಿಯೇನೂ ತಿಳಿಯದೆ ಇದ್ದುದರಿಂದ ಮತ್ತೊಬ್ಬ ಆಳನ್ನು ಕಳುಹಿದರು.

ಅವನೂ ಬಂದು ತುಕ್ಕೋಬನ ಕೀರ್ತನದಲ್ಲಿ ಐಕ್ಯವಂ ಹೊಂದಿದನು. ಮತ್ತೆ ಸುದ್ದಿಯಾವುದೂ ಬಾರದಿದ್ದುದರಿಂದ ಇನ್ನೊಬ್ಬ ದೂತನನ್ನು ಅಟ್ಟಿದರು. ಅವನೂ ಕೀರ್ತನದಲ್ಲಿ ದೇಹಭಾವವಂ ಮರೆತು ನಿಂತನು.

ಬಳಿಕ ಚಿಂಚವಟಿಯ ಆ ಬ್ರಾಹ್ಮಣರು-ನಾವು ಮೂವರು ದೂತರನ್ನು ಕಳುಹಿದೆವು. ಒಬ್ಬನಾದರೂ ಹಿಂದಿರಿಗಿ ಬರಲಿಲ್ಲ. ಹಳ್ಳದ ನೀರು ಗಂಗೆಯಲ್ಲಿ ಸೇರಿದರೆ ಎಂತು ನಿರ್ಮಲವಾಗುವುದೋ, ನಾನಾಪುಷ್ಪಗಳ ಪರಿಮಳವು ವಾಯುವಿನೊಡನೆ ಸೇರಿ ಎಂತು ಸಮರಸವಾಗುವುದೋ, ತೆರೆಯು ನೀರಲ್ಲಿ ಎಂತು ಲೀನವಾಗುವುದೋ, ಮೇಘವು ಆಕಾಶದಲ್ಲಿ ಎಂತು ಲೀನವಾಗುವುದೋ ಅಂತು ಅವರು

ಸ್ಥಿತಿಯನ್ನು ಪಡೆದರು. ಅವರು ತುಕ್ಕೋಬನಿಗೆ ಹೇಳಿದ್ದರೆ, ಆತನು ಎಂದಿಗೂ ಬಾರದೆ ಇರುತ್ತಿರಲಿಲ್ಲ. ಆತನು ವಿಕಲ್ಪವಂ ಮಾಡುವನಲ್ಲ. ಆತನಂತಹ ಬ್ರಾಹ್ಮಣಭಕ್ತನಾದ ವೈಷ್ಣವನು ಯಾವನೂ ಇಲ್ಲ. ಆದುದರಿಂದ ನಾವೇ ಅಭಿಮಾನವನ್ನು ಬಿಟ್ಟು ಆತನ ದರ್ಶನವಂಮಾಡಿ ಮನಸ್ಸಿಗೆ ತೋರುವ ಸಂಶಯವೇನೇನುಂಟೋ ರಹಸ್ಯವಾದ ಅದನೆಲ್ಲವನ್ನೂ ಕೇಳಬೇಕು—ಎಂದು ಆಲೋಚಿಸಿ ತುಕ್ಕೋಬನಲ್ಲಿಗೆ ಹೊರಟರು.

ಯಾರೂ ಹೇಳದಿದ್ದರೂ ತುಕ್ಕೋಬನು ಈ ಸಂಗತಿಯಂ ತಿಳಿದು-ಆಳುಗಳನ್ನು ಕಳುಹಿದರೂ ಅವರು ಬಂದು ಸುದ್ದಿಯಂ ಹೇಳಲಿಲ್ಲವೆಂದು ಪಂಚವಟಿಯ ಆ ಬ್ರಾಹ್ಮಣರೇ ಈಗ ಕೃಪೆಯಂ ಮಾಡಿ ನಡೆದುಬರುತಿರುವರು. ನಾನು ಇಲ್ಲಿಂದ ಇದುರಿಗೆ ಹೋಗದಿದ್ದರೆ ಬ್ರಾಹ್ಮಣರಿಗೆ ಅಪಮಾನವನ್ನು ಮಾಡಿದಂತಾಗುವುದು. ಲಕ್ಷ್ಮೀಪತಿಯು ಅವರ ಪಾದವನ್ನು ಹೃದಯದಲ್ಲಿ ಭೂಷಣವಾಗಿ ಧರಿಸಿರುವನು. ಆದುದರಿಂದ ಅವರು ಇಲ್ಲಿಗೆ ಬಂದು ಸೇರುವುದರೊಳಗಾಗಿ ನಾನು ಇದುರಿಗೆ ಹೋಗಬೇಕೆಂದು ಆಗಲೇ ಹೊರಟು, ಚಾತಕಕ್ಕೆ ಬಾಯಾರಿಕೆಯುಂಟಾಗಲು, ಮೇಘವು ಅತ್ತಲೇ ಓಡಿಹೋಗುವಂತೆ ಆ ಬ್ರಾಹ್ಮಣರು ತನ್ನಂ ನೋಡಬೇಕೆಂದು ಅಪೇಕ್ಷಿಸಿ ಬರಲು, ತುಕ್ಕೋಬನು ಶ್ರೀಹರಿಯ ಗುಣಗಳಂ ಪರಿಪರಿಯಿಂದ ಪಾಡುತ್ತ ತಾನು ಅವರ ಬಳಿಗೆ ಹೋದನು. ಆ ಬ್ರಾಹ್ಮಣರೂ ಇದುರಿಗೆ ಬಂದರು. ತುಕ್ಕೋಬನು ಅವರನ್ನು ಕಂಡು ಅತ್ಯಂತಪ್ರೀತಿಯಿಂದ ದಂಡಪ್ರಣಾಮವಂ ಮಾಡಿದನು.

ಆಗ ಆಬ್ರಾಹ್ಮಣರು ತುಕ್ಕೋಬನಂ ಕುರಿತು—ನೀನು ವಿಷ್ಣುಭಕ್ತರಲ್ಲಿ ಶ್ರೇಷ್ಠನಾದುದರಿಂದ ನಿನ್ನ ದರ್ಶನಕ್ಕೋಸ್ಕರ ನಾವು ಬರುತಿದ್ದೆವು. ಇಲ್ಲಿಯೇ ನಮ್ಮ ಮನೋಗತವು ಪೂರ್ಣವಾಯಿತು—ಎಂದು ಆಲಿಂಗಿಸಿಕೊಂಡರು.

ತುಕ್ಕೋಬನು ಅವರಿಗೆ ಆಸನವಿತ್ತು ಉಪಚರಿಸಿದನು. ಅವರು ತುಕ್ಕೋಬನಂ ಕುರಿತು—ನೀನು ಕಲಿಯುಗದಲ್ಲಿ ಅವತರಿಸಿ ದುರ್ಘಟವಾದ ಚರಿತ್ರೆಯನ್ನು ತೋರಿಸಿದವನಾದೆ. ಅದನ್ನು ತಿಳಿದ ನಮ್ಮ ಮನಸ್ಸಿಗೆ ಆಶ್ಚರ್ಯವಾಗಿದೆ. ಆದುದರಿಂದ ಸಮಯವಂ ನೋಡಿ ಏಕಾಂತದಲ್ಲಿ ನಿನ್ನಲ್ಲಿ ಪ್ರಶ್ನೆಮಾಡಬೇಕೆಂದು ಬಂದೆವು. ನೀನು ಯಾವನಾಗಿರುವೆ? ಯಥಾರ್ಥವಾದ ಉತ್ತರವನ್ನು ನಮ್ಮಲ್ಲಿ ಹೇಳು—ಎಂದು ಕೇಳಲು, ಆಗ ತುಕ್ಕೋಬನು—ಪರೀಕ್ಷೆಯಿಂದ ತೋರಿಸದಿದ್ದರೆ ಇವರ ಸಂಶಯವು ಹೋಗಲಾರದು-ಎಂದು ಆಲೋಚಿಸಿ, ತನ್ನ ತೊಡೆಯ ಮೇಲಣ ಚರ್ಮವಂ ಪಿಡಿದು ಎಳೆದುಕೊಯ್ದನು. ಆಛಿದ್ರದೊಳಗೆ ಹಂಜಿದ ಹತ್ತಿಯು ತುಂಬಿದ್ದಂತೆ ಕಾಣಿಸಿತು. ಅದಂ ಕಂಡು ಬ್ರಾಹ್ಮಣರು ಆಶ್ಚರ್ಯಪಟ್ಟು—ಈತನ ಮಾನುಷತ್ವದ ಬಾಳ್ಕೆಯು ಎಂತು ನಡೆವುದೋ ತಿಳಿಯದು. ರಕ್ತಮಾಂಸವೇನೂ ಇಲ್ಲದೆ ದೇಹದಲ್ಲಿ ಚೈತನ್ಯವು ಎಂತು ನಿಂತಿರುವುದೋ—ಎಂದರು. ಕೆಲವರು—ಈಶ್ವರನು ಮಾಯಾಲಾಘವಿ. ಆತನ

ವ್ಯಾಪಾರವು ಅಘಟಿತಘಟನಾಪಟುವಾದುದು. ಅಲ್ಲದೆ ತುಕ್ಕೋಬನು ಭಾಗವತೋತ್ತಮನು. ಪಂಚಭೂತದ ವೇಷ್ಟನವನ್ನು ಸ್ವೇಚ್ಛೆಯಿಂದ ತಂದುಕೊಂಡಿರುವನು. ಗಂಗೆಯನ್ನು ಎಂತು ಉದಕವೆನ್ನಬಾರದೋ, ಪರಿಸವನ್ನು ಪಾಷಾಣವೆಂದು ಎಂತು ಹೇಳಬಾರದೋ, ಚಿನ್ನವನ್ನು ಧಾತುವೆಂದು ಎಂತು ನುಡಿಯಬಾರದೋ, ಅಂತು ಈತನನ್ನು ಪ್ರಾಕೃತಮನುಷ್ಯನೆನ್ನಬಾರದು. ಜಗದ್ಗುರುವೇ ಇಂತು ಅವತರಿಸಿರುವನು. ಭಕ್ತಪುಂಗವನಾದ ಗರುಡನು ಪಕ್ಷಿಜಾತಿಯಲ್ಲಿ ಎಂತು ಪುಟ್ಟಿದನೋ ಅಂತು ಈ ವಿಷ್ಣುಭಕ್ತನು ವೈಶ್ಯಜಾತಿಯಲ್ಲಿ ಹುಟ್ಟಿರುವನು. ಈಯುಪಮಾನವೂ ಗೌಣವಾಗಿಯೇ ಕಾಣುವುದು. ಗರುಡನು ವಿಷ್ಣುವಿಗೆ ವಾಹನವಾಗಿ ತನ್ನ ಶರೀರವನ್ನು ಮಾತ್ರ ಪಾವನವನ್ನಾಗಿ ಮಾಡಿಕೊಂಡನು. ಈ ತುಕ್ಕೋಬನು ಶ್ರೀಹರಿಯ ಕೀರ್ತನವಂ ಮಾಡಿ ಜಡಜೀವರೆಲ್ಲರನ್ನೂ ಉದ್ಧರಿಸುವನು. ಮುಂದೆಯೂ ಈತನ ಕವಿತ್ವವಂ ಕೇಳಲು, ದುರ್ಜನನಿಗೂ ವೈರಾಗ್ಯವುಂಟಾಗುವುದು. ಭಾವುಕರೂ ಸುಜ್ಞಾನಿಗಳೂ ಆದ ವಿಷ್ಣುಭಕ್ತರಿಗೆ ಪ್ರಕಾಶಮಾನವಾದ ಮಾರ್ಗವಂ ತೋರಿಸಿದನು-ಎಂದು ನುಡಿದು ಅಭಿವಂದಿಸಿದರು. ತುಕ್ಕೋಬನು ಅವರು ವಂದಿಸುವುದಂ ತಡೆದು ತಾನು ಅವರ ಪಾದಗಳಿಗೆರಗಿ ಅವರನ್ನು ಕುರಿತು-ನೀವು ಅನುಚಿತವಾದ ಕಾರ್ಯವಂ ಮಾಡುವಿರಿ. ನಮ್ಮ ಸ್ವಾಮಿಯು ಭೃಗುಮುನಿಯ ಪಾದಘಾತದ ಗುರುತನ್ನು ಈಗಲೂ ತನ್ನ ಹೃದಯದಮೇಲೆ ಇರಿಸಿಕೊಂಡಿರುವನು. ಯಾವನು ದೇವಾದಿದೇವನಾದ ಜಗನ್ನಾಥನೋ ಆತನಿಗೂ ನೀವು ಪೂಜ್ಯರು. ನಾನು ಹೀನಜಾತಿಯವನು ; ಅನಾಥನು ; ದೀನನು. ಕೃಪೆಯಿಂದ ನನಗೆ ದೊಡ್ಡತನವಂ ಕೊಡುವಿರಿ-ಎಂದನು.

ಬ್ರಾಹ್ಮಣರು ಆ ಮಾತಿಗೆ ಯಾವನು ಭಗವದ್ಭಜನೆಯಲ್ಲಿ ನಿರತನಾಗಿರುವನೋ ಅವನನ್ನು ಹೀನಜಾತಿಯವನೆಂದು ಹೇಳಲು ಶ್ರುತಿಗಳೂ ಕುಂಠಿತಗಳಾಗಿರುವುವು. ಕಪಿಗಳು ಶ್ರೀರಾಮಭಜನೆಯಲ್ಲಿ ನಿರತರಾಗಿರಲು, ಅವರನ್ನು ವಾಲ್ಮೀಕಿಯು ರಾಮಾಯಣದಲ್ಲಿ ವರ್ಣಿಸಿದನು. ವ್ಯಾಸಮುನೀಂದ್ರನು ಗೋಪಾಲರ ಕೀರ್ತಿಯನ್ನು ಶ್ರೀಪುರಾಣದಲ್ಲಿ ಇರಿಸಿದನು. ಆದುದರಿಂದ ನಿನ್ನನ್ನು ಸ್ತುತಿಯಿಸಲು ನಮಗೆ ಅಧಿಕಾರವುಂಟು. ವಿಷ್ಣುಭಕ್ತರ ಕೀರ್ತಿಯು ಮೂರುಲೋಕಗಳಲ್ಲಿಯೂ ತುಂಬಿರುವುದು. ಬಹುದಿವಸದಿಂದ ಮನದಲ್ಲಿ ಅಪೇಕ್ಷೆಯಿದ್ದಿತು. ಅದು ಇಂದು ಪೂರ್ಣವಾಯಿತು. ಸ್ವಹಸ್ತದಿಂದ ತೊಡೆಯಂ ಕೊಯ್ದು ನಮಗೆ ಪರೀಕ್ಷೆಯನ್ನು ತೋರಿಸಿದೆ-ಎಂದು ಮತ್ತೆ ಪ್ರೀತಿಯಿಂದ ತುಕ್ಕೋಬನನ್ನು ಆಲಿಂಗಿಸಿಕೊಂಡು ಆತನಂಕುರಿತು-ನಮ್ಮ ಆಂಬವಟಿಗೆ ಬಂದು ಬಂದುರಾತ್ರಿ ಕೀರ್ತನವಂ ಮಾಡಬೇಕು-ಎಂದುಹೇಳಲು, ತುಕ್ಕೋಬನು ಅವರ ಮನಸ್ಸನ್ನು ಸಂತೋಷಪಡಿಸುವುದಕ್ಕೋಸ್ಕರ ಅವರೊಡನೆ ಹೋಗಿ ಅಲ್ಲಿ ಬಂದುದಿನ ಇದ್ದನು.

ಬಳಿಕ "ಲೋಹಗಾಂವ" ಎಂಬ ಊರ ಜನಗಳು-ತಮ್ಮ ಗ್ರಾಮಕ್ಕೆ ತುಕ್ಕೋಬನಂ ಕರೆದುಕೊಂಡು ಬಂದು ಕೀರ್ತನವಂ ಮಾಡಿಸಿ ಮನವು ತಣಿವಂತೆ ಕೇಳಬೇಕು; ಆ ಪರಮಾಮೃತವನ್ನು ಸೇವಿಸಿದರೆ ಈ ಸಂಸಾರಕ್ಕೆ ಬಂದುದು ಸಾರ್ಥಕವಾದೀತು-ಎಂದು ಆಲೋಚಿಸಿ ತುಕ್ಕೋಬನಲ್ಲಿಗೆ ಬಂದು ವಿನಯದಿಂದ ತಮ್ಮ ಕೋರಿಕೆಯನ್ನು ಹೇಳಿಕೊಂಡು ಆತನನ್ನು ತಮ್ಮೂರಿಗೆ ಕರೆದುಕೊಂಡುಹೋಗಿ, ದಿವ್ಯಮಂಟಪವಂ ಕಟ್ಟಿಸಿ, ನಿತ್ಯವೂ ಸಂಭ್ರಮದಿಂದ ಹರಿಕೀರ್ತನೆಯಂ ಮಾಡಿಸಿ ಪ್ರೀತಿಯಿಂದ ಶ್ರವಣಮಾಡುತ್ತ, ಗಂಧಪುಷ್ಪತಾಂಬೂಲಾದಿಗಳಿಂದ ಎಲ್ಲರನ್ನೂ ಪೂಜಿಸುತ್ತ ಪ್ರತಿದಿನವೂ ಭಕ್ಷ್ಯಭೋಜ್ಯಾದಿಗಳಿಂದ ಬ್ರಾಹ್ಮಣಸಂತರ್ಪಣೆಯಂ ನಡೆಯಿಸುತ್ತ ಆನಂದದಲ್ಲಿ ಮುಳುಗಿದ್ದರು. ಇಂತು ಲೋಹಗಾಂವಿನಲ್ಲಿ ಒಂದು ತಿಂಗಳು ನಿತ್ಯವೂ ವಿಶೇಷದಿಂದ ಉತ್ಸವವು ಬೆಳೆಯಿತು.

ಆಗ ಪಂಡರಪುರದ ಹರಿದಾಸನೊಬ್ಬನು ದೇಶಾವಾರಕ್ಕೆ ಹೋಗಿ ಮಾರ್ಗವಶದಿಂದ ಆವೂರನ್ನು ಸೇರಿದನು. ಅಂಗಡಿಬೀದಿಯಲ್ಲಿ ಬರುತಿರುವಾಗ ಕುದುರೆಯ ಮೇಲೆ ಕುಳಿತುಕೊಂಡು ತೂಕಡಿಸುತ್ತ ಹೋಗುತಿದ್ದ ಒಬ್ಬ ಸಾದಿಯು ಗೋಚರನಾದನು. ಅವನಂ ಕಂಡು—ಅಯ್ಯಾ ! ಕುದುರೆಯಮೇಲೆ ನಿನಗೆ ನಿದ್ರೆಯು ಎಂತು ಬಂದಿತು?—ಎಂದು ಬೆಸಗೊಳಲು, ಅದಕ್ಕೆ ಅವನು, ನಿನ್ನೆರಾತ್ರಿ ನಾಲ್ಕುಜಾವವೂ ಜಾಗರಣವಾಯಿತು. ಒಂದುತಿಂಗಳಿಂದ ನಿತ್ಯವೂ ಈವೂರಲ್ಲಿ ತುಕ್ಕಾರಾಮನ ಹರಿಕಥಾಕೀರ್ತನವಾಗುತಿದೆ- ಎಂದು ಉತ್ತರವಂ ಹೇಳಿದನು. ಹರಿದಾಸನು ಆ ಮಾತಂ ಕೇಳಿ ಚಿಂತಾಕ್ರಾಂತನಾಗಿ, ಇನ್ನು ಲೋಹಗಾಂವಿನಲ್ಲಿ ಎಂತೂ ಉಳಿಯಬಾರದು. ಇಲ್ಲಿ ಮತ್ತೊಬ್ಬ ಪ್ರೇಮಳನ ಕಥೆಯು ಆಗುತ್ತಿರುವಾಗ ನಮ್ಮ ವಿದ್ಯೆಯು ರುಚಿಸದು. ದಿವ್ಯಾಮೃತವು ದೊರೆತಿರಲು ರೋಗಿಗೆ ಔಷಧವು ಎಂತು ಬೇಡವೋ, ಅಮೂಲ್ಯರತ್ನವು ಪ್ರಾಪ್ತವಾಗಿರಲು, ಗಾಜು ಎಂತು ಅಪೇಕ್ಷ್ಯವಲ್ಲವೋ, ಸೂರ್ಯನು ಉದಯಿಸಿರಲು, ದೀಪದ ಬೆಳಕು ಎಂತು ಆದರಣೀಯವಲ್ಲವೋ, ಗಂಗೆಯು ಪ್ರವಹಿಸುತ್ತಿರಲು, ವಾಪೀಕೂಪೋದಕವು ಎಂತು ಅನಾವಶ್ಯಕವೋ ಅಂತು ಆ ಪ್ರಾಜ್ಞನ ಕೀರ್ತನವಾಗುತಿರಲು, ನನ್ನ ಗಾನವು ರುಚ್ಯವೆನಿಸದು. ಆದಕಾರಣ ಇಲ್ಲಿಂದ ಹಿಂದಿರುಗಿ ಹೋಗುವುದು ಯುಕ್ತವಾದುದು-ಎಂದಾಲೋಚಿಸಿ ಮುಂದಣ ಊರಿಗೆ ಹೊರಟನು.

ಕೆಲವರು ಈ ಸಂಗತಿಯಂ ತಿಳಿದು ಊರೊಳಗೆಬಂದು ತುಕ್ಕೋಬನಿಗೆ ಹೇಳಿದರು. ತುಕ್ಕೋಬನು ಆ ವೃತ್ತಾಂತವಂ ಕೇಳಿ ಆಕ್ಷಣದಲ್ಲಿಯೇ ಎದ್ದು ಆ ಹರಿದಾಸನಂ ಪ್ರಾರ್ಥಿಸಿ ಕರೆದುತರಬೇಕೆಂದು ಹೊರಟನು. ಮತ್ತು—ನೀವು ಪ್ರಾರ್ಥಿಸಿ ಕರೆದುಕೊಂಡು ಬನ್ನಿ- ಎಂದು ಗ್ರಾಮಸ್ಥರನ್ನೂ ಮುಂದೆ ಕಳುಹಿಸಿಕೊಟ್ಟನು. ಗ್ರಾಮವಾಸಿಗಳು ಸತ್ವರರಾಗಿ ಮುಂದೆ ಹೊರಟು, ತುಕ್ಕೋಬನು ನಿಮ್ಮ ಸಂದ

ರ್ಶನಕ್ಕೆ ಬರುತಿರುವನು. ದಯೆಯಿಟ್ಟು ನೀವು ಹಿಂತಿರುಗಿ ಊರಿಗೆ ಬರಬೇಕು-ಎಂದು ಪ್ರಾರ್ಥಿಸಿ ಆ ಹರಿದಾಸನನ್ನು ಕರೆದುಕೊಂಡು ಬಂದರು. ತುಕ್ಕೋಬನು ಆಹರಿದಾಸನಂ ಕಂಡು ಸಾಷ್ಟಾಂಗನಮಸ್ಕಾರಮಾಡಿ ಆಲಿಂಗಿಸಿಕೊಂಡನು.

ಆ ಹರಿದಾಸನು ತುಕ್ಕೋಬನಂ ಕುರಿತು–ವೈಶಾಖಮಾಸದಲ್ಲಿ ಮಗನ ಮದುವೆಯಂ ಮಾಡಬೇಕೆಂದು ಪ್ರಯತ್ನವನ್ನು ಮಾಡಿರುವೆನು. ಅದಕ್ಕೋಸ್ಕರ ದ್ರವ್ಯಸಂಪಾದನೆಗೆ ಬಂದಿರುವೆನು-ಎಂದು ಹೇಳಲು, ತುಕ್ಕೋಬನು ಸಂತೋಷಪಟ್ಟು, ಆಗಲಿ; ಶ್ರೀಹರಿಯು ಸಾಹಾಯ್ಯವಂ ಮಾಡುವನು-ಎಂದು ಹೇಳಿ, ಆತನನ್ನು ಊರಿಗೆ ಕರೆದುಕೊಂಡುಬಂದು, ಇಳಿಯುವುದಕ್ಕೆ ಸ್ಥಳವಂ ಮಾಡಿಕೊಟ್ಟು ಬೇಕಾದ ಸಾಹಿತ್ಯಗಳಂ ಕೊಡಿಸಿ ಆತನಿಂದ ನಿತ್ಯವೂ ಹರಿಕಥಾಕೀರ್ತನವಂ ಮಾಡಿಸುತ್ತ ಇದ್ದನು. ಇಂತು ಒಂದು ತಿಂಗಳು ಆನಂದಸಂಭ್ರಮದಿಂದ ಕಳೆಯಿತು.

ಬಳಿಕ ತುಕ್ಕೋಬನು ಗ್ರಾಮಸ್ಥರಂ ಕುರಿತು-ಈ ಹರಿದಾಸರಿಗೆ ತಕ್ಕ ದ್ರವ್ಯಸನ್ಮಾನವನ್ನುಮಾಡಿ ಇವರನ್ನು ಕಳುಹಿಸಿಕೊಡಬೇಕು. ಬರಿದೆ ಈಬ್ರಾಹ್ಮಣರನ್ನು ಕಷ್ಟಪಡಿಸಿ ಇವರಿಗೆ ಈಗ ದ್ರವ್ಯಸಾಹಾಯ್ಯವೇನನೂ ಮಾಡದೆ ಕಳುಹುವುದು ನಿಮಗೆ ಭೂಷಣವಲ್ಲ. ಇದರಿಂದ ಪುಣ್ಯಸಂಪಾದನೆಯಾಗಲಾರದು. ಆದುದರಿಂದ ಈವೂರಲ್ಲಿರುವ ಬಡವರೂ ಭಾಗ್ಯವಂತರೂ ಎಲ್ಲರೂ ತಂತಮ್ಮ ಶಕ್ತಿಯನನುಸರಿಸಿ ಸಾಹಾಯ್ಯವಂ ಮಾಡಬೇಕು-ಎನಲು, ಅವರೆಲ್ಲರೂ ಆ ಮಾತಂ ಕೇಳಿ, ಅವಶ್ಯವಾಗಲಿ–ಎಂದು ಮಷೀಕರಂಡವನ್ನೂ ಲೇಖನಿಯನ್ನೂ ಪತ್ರಿಕೆಯನ್ನೂ ತರಿಸಿ, ಎಲ್ಲರೂ ಒಂದೆಡೆಯಲ್ಲಿ ಕುಳಿತುಕೊಂಡು, ಉತ್ತಮಮಧ್ಯಮಕನಿಷ್ಠರಂ ಬೇರ್ಪಡಿಸಿ ಹೆಸರುಗಳಂ ಬರೆದು, ಸಾಹಾಯ್ಯದ್ರವ್ಯಸಂಖ್ಯೆಯನ್ನು ನೀವೇ ಹಾಕಿ–ಎಂದು ತುಕ್ಕೋಬನ ಕೈಗೆ ಕೊಟ್ಟರು.

ತುಕ್ಕೋಬನು ಉತ್ತಮರಿಗೆ ತೂಳವನ್ನೂ ಮಧ್ಯಮರಿಗೆ ತಳಿಯನ್ನೂ ಕನಿಷ್ಠರಿಗೆ ಛಕಾರವನ್ನೂ ಹಾಕಿದನು. ಇದಂ ನೋಡಿ ಗ್ರಾಮವಾಸಿಗಳು–ಇದು ನಮ್ಮ ಮನಸ್ಸಿಗೆ ಸರಿಹೋಗಲಿಲ್ಲ–ಎನಲು, ತುಕ್ಕೋಬನು–ನಿಮ್ಮ ಮನಸ್ಸಿಗೆ ಸಮಾಧಾನವಿದ್ದಂತೆ ಮಾಡಿ–ಎಂದು ನುಡಿದನು.

ಬಳಿಕ ಅವರು ಸಂತೋಷದಿಂದ ಉತ್ತಮರಿಗೆ ಮೌಳವನ್ನೂ ಮಧ್ಯಮರಿಗೆ ಉದ್ದನ್ನೂ ಹಾಕಿದರು. ಕನಿಷ್ಠರಿಗೆ ಛಕಾರವೇ ಇದ್ದಿತು. ಇಂತು ಲೆಕ್ಕವನ್ನು ಬರೆದು ತುಕ್ಕೋಬನಿಗೆ ತೋರಿಸಿ ಅದರಂತೆ ದ್ರವ್ಯವನ್ನು ಕೂಡಿಸಿ ತಂದು ಸುರಿದು, ನಾವು ಬಹುಸಾಹಸವಂ ಮಾಡಿರುವೆವು; ಇನ್ನೂ ದ್ರವ್ಯಸಾಹಾಯ್ಯವಂ ಮಾಡಬೇಕೆಂದಿರುವೆವು-ಎಂದು ಅಹಂಭಾವದಿಂದ ಮಾತನಾಡಿದರು.

ತುಕ್ಕೋಬನು ಅವರ ಮಾತಂ ಕೇಳಿ, ಅಹಂಕಾರವೈಖರಿಯು ಇವರ ಮನದಲ್ಲಿ ಪ್ರಕಟವಾಯಿತು. ದಾನವಂ ಕೊಡುವ ಸಮಯದಲ್ಲಿ ದಾತೃವಿಗೆ ಅಭಿಮಾನ

ವುಂಟಾಗುವುದು--ಮೃಷ್ಟಾನ್ನದ ಕಬಳದಲ್ಲಿ ಸತ್ತ ನೊಣವು ಸಿಕ್ಕಿದಂತೆಯೂ, ಹಾಲಿನಲ್ಲಿ ಉಪ್ಪು ಬಿದ್ದಂತೆಯೂ, ಸಜ್ಜನರಲ್ಲಿ ಪಿಸುಣನು ಕೂಡಿದಂತೆಯೂ, ತಾರುಣ್ಯದಶೆಯಲ್ಲಿ ಕ್ಷಯರೋಗವು ಪ್ರಾಪ್ತವಾದಂತೆಯೂ, ಬ್ರಾಹ್ಮಣರ ಸಭೆಯಲ್ಲಿ ಹೊಲೆಯನು ಸೇರಿದಂತೆಯೂ, ವಿರಕ್ತನಿಗೆ ಸ್ತ್ರೀಸಂಗವು ಘಟಿಸಿದಂತೆಯೂ, ಚೆನ್ನಾಗಿ ಬೆಳೆಯುಳ್ಳ ಕ್ಷೇತ್ರದಲ್ಲಿ ತೋಳಗಳು ಬಂದೊದವಿದಂತೆಯೂ, ಮೇಘವು ವರ್ಷಿಸುವ ಸಮಯದಲ್ಲಿ ದಕ್ಷಿಣದ ಗಾಳಿಯು ಬೀಸಿದಂತೆಯೂ, ಪೂರ್ಣಿಮಾಚಂದ್ರನು ಉದಯಿಸಲು, ರಾಹುವು ಇದಿರಾದಂತೆಯೂ ಇರುವುದು. ಈಗ ಇವರಿಗೆ ಉಂಟಾದ ಅಹಂಕಾರವಂ ನಿವೃತ್ತಿಗೊಳಿಸಬೇಕು-ಎಂದು ಆಲೋಚಿಸಿ, ಅವರಂ ಕುರಿತು-ನೀವು ಸಾಹಾಯ್ಯದ್ರವ್ಯವನ್ನು ಎತ್ತಿ ತಂದಿರಲ್ಲಾ! ಊರಲ್ಲಿ ಒಬ್ಬನನ್ನೂ ಬಿಡದೆ ಎಲ್ಲರಿಂದಲೂ ತೆಗೆದುಕೊಂಡು ಬಂದಿರುವಿರಾ? ಹೇಳಿ-ಎನಲು, ಆಗ ಅವರು ಈ ಊರಲ್ಲಿ ಒಬ್ಬ ನೇಯಿಗೆಯವನಿರುವನು. ಅವನು ಬಡವನು ; ನೀಚನು ; ಮಹಾಕುಟಿಲನು. ಆದುದರಿಂದ ಅವನೊಬ್ಬನನ್ನು ಬಿಟ್ಟು ಉಳಿದವರೆಲ್ಲರಿಂದಲೂ ಅವರವರ ಯೋಗ್ಯತೆಯನ್ನು ಅನುಸರಿಸಿ ತೆಗೆದುಕೊಂಡಿರುವೆವು-ಎಂದು ಹೇಳಿದರು.

ತುಕೋಬನು ಅವರ ಮಾತಂ ಕೇಳಿ ಅವರನ್ನು ಕುರಿತು-ನೀವೇ ಆತನ ಮನೆಗೆ ಹೋಗಿ, ತುಕ್ಕನು ಹೇಳಿದನೆಂದು ಹೇಳಿ ಕಾಸನಾಗಲಿ, ಎರಡುಕಾಸನಾಗಲಿ ; ಏನನಾದರೂ ತೆಗೆದುಕೊಂಡು ಬರಬೇಕು-ಎನಲು, ಆ ಮಾತಿಗೆ ಅವರು ಮನಸ್ಪೊಪ್ಪದಿದ್ದರೂ ಅಂಗೀಕಾರಗೊಂಡು ಆ ನೇಯಿಗೆಯವನ ಮನೆಗೆ ಹೋಗಿ ಅಂಗಳದಲ್ಲಿ ನಿಂತುಕೊಂಡರು. ಅವನು ನೂಲೆಳೆಯಂ ಬಿಡಿಸುತಿದ್ದನು. ಇವರನ್ನು ಮಾತಾಡಿಸಲೇ ಇಲ್ಲ. ನೀವು ಯಾರು ? ಏಕೆಬಂದಿರಿ ?-ಎಂದೂ ಕೇಳದಿರಲು, ಬಂದವರು ಖಿನ್ನರಾಗಿ, ತುಕ್ಕಾರಾಮನ ದಾಕ್ಷಿಣ್ಯಕ್ಕೋಸ್ಕರ ಇಲ್ಲಿಗೆ ಬರಬೇಕಾಯಿತು. ಏನಮಾಡೋಣ ?-ಎಂದು ಚಿಂತಿಸಿ, ಆ ನೇಯಿಗೆಯವನು ಪುರಸ್ಕರಿಸದಿದ್ದರೂ ತಾವಾಗಿ-ಅಯ್ಯಾ! ಪಂಡರಪುರದಿಂದ ಹರಿದಾಸರು ಬಂದಿರುವರು. ಒಂದು ತಿಂಗಳಿಂದ ಅವರ ಹರಿಕಥಾಕೀರ್ತನವು ಆಗುತ್ತಿರುವುದು. ಅವರಿಗೋಸ್ಕರ ಏನನಾದರೂ ಸಾಹಾಯ್ಯದ್ರವ್ಯವನ್ನು ತೆಗೆದುಕೊಂಡು ಬರಬೇಕೆಂದು ತುಕೋಬನು ನಿನ್ನ ಬಳಿಗೆ ಕಳುಹಿಸಿರುವನು-ಎಂದು ನುಡಿಯಲು, ಅವನು ಆ ಮಾತನ್ನು ಕೇಳಿ, ತುಕೋಬನ ಬಗುಳಾಟಕ್ಕೆ ಆರಂಭವಾದಂದಿನಿಂದಲೂ ನೀವೂ ಉನ್ಮತ್ತರಾಗಿ ಆವಶ್ಯಕವಾದ ಲೌಕಿಕವ್ಯಾಪಾರವಂ ಬಿಟ್ಟು ಚಿತ್ತಲೆಕುಣಿಯುತ್ತಿರುವಿರಿ. ನಿಮ್ಮ ಸಂಸಾರಕ್ಕೂ ನಷ್ಟವನ್ನುಂಟುಮಾಡಿಕೊಂಡು ನನ್ನ ಸುತ್ತಲೂ ಏಕೆ ಹತ್ತಿರುವಿರಿ. ಮನೆಯಲ್ಲಿ ಬಟ್ಟಲು ಹರಿವಾಣವು ಏನೂ ಇಲ್ಲ. ಇದ್ದರೆ ಕೊನೆಗೆ ನಿಮಗೆ ತೀರಿಸುತ್ತಿದ್ದೆ-ಎಂದನು.

ಅವನ ಮಾತಂ ಕೇಳಿ ಅವನ ಮಡದಿಯು-ದೊಡ್ಡದೊಡ್ಡವರೆಲ್ಲರೂ ತುಕೋಬನ ಮಾತಿಗೋಸ್ಕರ ನಮ್ಮ ಮನೆಗೆ ಬಂದು ಅಂಗಳದಲ್ಲಿಯೇ ನಿಂತಿರುವರು.

ನೀವು ದುಸ್ಸ್ವಭಾವವುಳ್ಳವರು. ನಿಂದಕರು. ಒಳ್ಳೆಯ ಮಾತನ್ನೂ ಆಡಿರಿ. ಬಂದವರಿಗೆ ಕುಳಿತುಕೊಳ್ಳಲು ನಿಮ್ಮಲ್ಲಿ ಸ್ಥಳವು ದೊರೆಯದು. ಈಗಲಾದರೂ ವಿವೇಕವಂ ತಂದುಕೊಂಡು ಇವರಿಗೆ ಏನನಾದರೂ ಕೊಡಿ-ಎಂದಳು.

ಅವನು ಮಡದಿಯ ಮಾತಿಗೆ ಕೋಪಗೊಂಡು-ಮನೆಯಲ್ಲಿ ಒಂದು ತಂಬಿಗೆಯಿದೆ. ಅದನ್ನು ಕೊಟ್ಟು ಇವರನ್ನು ಹೊರಗೆ ಕಳುಹಿಸಿಕೊಡು-ಎನಲು, ಆಕೆ ಆ ಮಾತಿಗೆ ಸಮಾಧಾನಗೊಂಡು ಆ ಪಾತ್ರೆಯನ್ನು ತಂದು ಅವರ ಕೈಗೆ ಕೊಟ್ಟಳು.

ಅವರು ಬಹುಲಾಭವಾಯಿತೆಂದು ತಿಳಿದು ಆ ಪಾತ್ರೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಟು-ಈ ದುರ್ಜನನು ನಮಗೆ ಪ್ರಸನ್ನನಾದನು. ದಾವಾಗ್ನಿಯು ಶೀತಳವಾದಂತೆ, ಒಣಗಿದ ಮರವು ಚಿಗುರಿದಂತೆ, ಪಾಷಾಣವು ಆರ್ದ್ರವಾದಂತೆ, ರಾಹು ಸಜ್ಜನನಾಗಿ ಜಗತ್ತಿನಲ್ಲಿ ಪ್ರಕಾಶಿಸುವಂತೆ, ಈ ಮೂರ್ಖನು ನಮಗೆ ಅನುಕೂಲನಾಗಿ ಈ ಪಾತ್ರೆಯಂ ಕೊಟ್ಟನು-ಎಂದು ಮಾತನಾಡುತ್ತ ತುಕ್ಕೋಬನ ಬಳಿಗೆ ಬಂದು ಆತನ ಮುಂದೆ ಈ ಪಾತ್ರೆಯನ್ನು ಇರಿಸಿ ನಮಸ್ಕಾರವಂ ಮಾಡಿದರು.

ತುಕ್ಕೋಬನು ಅದಂನೋಡಿ ಅವರನ್ನು ಕುರಿತು-ಆ ನೇಯಿಗೆಯವನು ಮಹೋದಾರನು. ಉತ್ತಮವಾದ ಸಾಹಾಯ್ಯವಂ ಮಾಡಿದನು-ಎಂದು ಪಾತ್ರೆಯಂ ಕೈಯಲ್ಲಿ ತೆಗೆದುಕೊಂಡು—ಇದು ಚಿನ್ನದ ಪಾತ್ರೆಯು, ನೀವು ಇದರ ಪರೀಕ್ಷೆಯನ್ನು ಅರಿಯಿರಿ-ಎಂದನು.

ಆಗ ಆ ಗ್ರಾಮಸ್ಥರು-ಇದು ಹಿತ್ತಾಳೆಯಪಾತ್ರೆಯು, ಚೆನ್ನಾಗಿ ನಿರ್ಮಲವಾಗಿ ಬೆಳಗಿರುವುದರಿಂದ ಚಿನ್ನದಂತೆ ಕಾಣುವುದು-ಎಂದರು. ಬಳಿಕ ಅಗ್ನಿಯಲ್ಲಿ ಹಾಕಿಸಿ ನೋಡಲು, ಅದು ಶುದ್ಧಸುವರ್ಣವಾಗಿ ಇದ್ದಿತು. ಇಂತಹ ಕೌತುಕವಂ ನೋಡಿ ಸರ್ವರೂ ವಿಸ್ಮಿತರಾದರು. ಸಾಧುಸಜ್ಜನರ ಮಾಹಾತ್ಮ್ಯೆಯು ಅದ್ಭುತವಾದುದು. ಹಿತ್ತಾಳೆಯ ದೋಷವಂ ಕಳೆದನು. ತುಕ್ಕೋಬನ ಭಜನದ ಪ್ರೇಮವು ಅಸಾಧಾರಣವಾದುದು. ಉಪಮಾನವಂ ಹೇಳಬೇಕೆಂದರೆ ಪೆರತೊಂದು ಸರಿಯಾದ ವಸ್ತುವೇ ಇಲ್ಲ-ಎಂದು ಅಭಿನಂದಿಸಿದರು. ಬಳಿಕ ಹರಿದಾಸನಂ ಕರೆದು ಆತನ ಪಾದಂಗಳಂ ತೊಳೆದು ಕೊರಲಿಗೆ ಹೂವಿನ ಹಾರವಂ ಹಾಕಿ ವಸ್ತ್ರವಂ ಹೊದೆಯಿಸಿ ಸೇರಿಸಿದ ಸಾಹಾಯ್ಯದ್ರವ್ಯವೆಲ್ಲವನ್ನೂ ಆತನ ಮುಂತೆ ಇರಿಸಿ ಆದರದಿಂದ ನಮಸ್ಕರಿಸಿದರು.

ಆಗ ತುಕ್ಕೋಬನು ಹರಿದಾಸನಂ ಕುರಿತು-ಇವರು ಬಹೂದಾರರು. ನಿಮ್ಮ ಸಾಹಾಯ್ಯಾರ್ಥವಾಗಿ ಸಾಹಸಮಾಡಿ ಬಹುದ್ರವ್ಯವಂ ಕೂಡಿಸಿ ತಂದಿರುವರು. ಮತ್ತೊಬ್ಬ ಬಡವನಾದ ನೇಯಿಗೆಯವನು ಈ ಸುವರ್ಣಪಾತ್ರೆಯನ್ನು ನಿಮಗೆ ಮನಃಪೂರ್ವಕವಾಗಿ ಸಮರ್ಪಿಸಿರುವನು. ಈ ತುಲಸೀದಳವನ್ನು ನೀವು ಅಂಗೀಕರಿಸಿ ನಿಮ್ಮ ಮಗನ ಮದುವೆಯನ್ನು ನೆರವೇರಿಸಬೇಕು-ಎಂದು ನುಡಿದು ಸದ್ಭಾವ

ದಿಂದ ಆತನ ಪಾದಗಳಿಗೆ ಎರಗಿದನು. ನಾವು ಉದಾರರೆಂಬ ಅಹಂಕಾರವು ಯಾರ ಮನಸ್ಸಿನಲ್ಲಿ ಇದ್ದಿತೋ ಅವರು ವಿಮುಖರಾಗಿ ನಿಂತರು. ಹರಿದಾಸನು ಬಹು ಸಂತೋಷಗೊಂಡು ತುಕ್ಕೋಬನ ಅನುಜ್ಞೆಯಂ ಪಡೆದು ಪಂಡರಪುರಕ್ಕೆ ತೆರಳಿದನು.

ವಿರಕ್ತನೂ ಪ್ರೇಮಳಭಕ್ತನೂ ಆದ ತುಕ್ಕೋಬನು ಅಲ್ಲಿಂದ ಹೊರಟು ದೆಹೂಗ್ರಾಮವಂ ಸೇರಿ ಸನ್ಮಾನಾಪೇಕ್ಷೆಯಂ ಬಿಟ್ಟು ದೀನನನ್ನೂ ಅನಾಥನನ್ನೂ ರಾಜನನ್ನೂ ಸಮತೆಯಿಂದ ಕಾಣುತ್ತ ಹೃದಯದಲ್ಲಿ ಅಧೋಕ್ಷಜನಂ ಚಿಂತಿಸುತ್ತ ಪರಮಾನಂದದಿಂದ ಇದ್ದನು. ಒಂದುದಿನ ನಿದ್ರೆಮಾಡುತ್ತಿರುವಾಗ–ಇಂದ್ರಾಣಿಯಲ್ಲಿ ಸ್ನಾನಕ್ಕೋಸ್ಕರ ಹೋಗಿದ್ದ ತಾನು, ಬ್ರಾಹ್ಮಣರೂಪದಿಂದ ಬಂದು ದರ್ಶನವಂ ಕೊಟ್ಟು ವಿಟ್ಠಲಸ್ವಾಮಿಯನ್ನು ನಮಸ್ಕರಿಸಲು, ಸ್ವಾಮಿಯು ಕೃಪೆಯಿಂದ ಮಸ್ತಕದಲ್ಲಿ ಕರವನಿರಿಸಿ ಉಪದೇಶವಂ ಮಾಡಿದಂತೆಯೂ, ಮತ್ತೆ ಆತನನ್ನು ಅಭಿವಂದಿಸಿ, ಸ್ವಾಮಿ! ನಮ್ಮ ಮನೆಗೆ ದಯೆಮಾಡಿ ಪ್ರೀತಿಯಿಂದ ಭೋಜನಮಾಡಬೇಕು–ಎಂದು ಪ್ರಾರ್ಥಿಸಲು, ಸ್ವಾಮಿಯು ಆಮಾತಿಗೆ-ನನ್ನ ಭೋಜನಕ್ಕೆ ಪಾವು ಸೇರು ತುಪ್ಪ ಬೇಕು. ಅದನ್ನು ಹಾಕುವುದಾದರೆ ನಿನ್ನ ಮನೆಗೆ ಭೋಜನಕ್ಕೆ ಬರುವೆನು-ಎಂದು ಉತ್ತರವಂ ಕೊಟ್ಟಂತೆಯೂ, ಅದಕ್ಕೆ ಒಡಂಬಟ್ಟು ಆ ಬ್ರಾಹ್ಮಣನ ಕೈಯನ್ನು ಹಿಡಿದುಕೊಂಡು ತ್ವರೆಯಿಂದ ತನ್ನ ಮನೆಗೆ ಬಂದು ತನ್ನ ಹೆಂಡತಿಯಂ ಕರೆದು-ಈ ಬ್ರಾಹ್ಮಣರು ಹಸಿವುಗೊಂಡು ಬಂದಿರುವರು. ಇವರಿಗೆ ಉತ್ತಮವಾದ ಭೋಜನ ಸಾಹಿತ್ಯವನ್ನು ಸಿದ್ಧಮಾಡಬೇಕು. ಊಟಕ್ಕೆ ಪಾವುಸೇರು ತುಪ್ಪವಾಗಬೇಕು-ಎಂದು ನುಡಿಯಲು, ಆಕೆ ಆಮಾತಂ ಕೇಳಿ ಬಹುಕೋಪಯುಕ್ತೆಯಾಗಿ-ಯಾವ ಬ್ರಾಹ್ಮಣನನ್ನು ಕರದುಕೊಂಡು ಬಂದಿರಿ? ನಾನು ತುಪ್ಪವನ್ನು ಎಲ್ಲಿಂದ ತರಲಿ?-ಎಂದು ನುಡಿದಂತೆಯೂ, ಶಾರ್ಙ್ಗಧರನು ಕಠಿನವಾದ ಈ ಮಾತನ್ನು ಕೇಳಿ ಆಕ್ಷಣದಲ್ಲಿ ಅದೃಶ್ಯನಾದಂತೆಯೂ, ಸ್ವಪ್ನವಂ ಕಂಡು ಥಟ್ಟನೆ ಎಚ್ಚರಿಕೆಗೊಂಡು ಸ್ವಪ್ನದ ಸಂಗತಿಯಂ ನೆನೆದು ಹೃದಯದಲ್ಲಿ ಅತ್ಯಂತಪ್ರೇಮಪೂರ್ಣನಾಗಿ ಸ್ವಾಮಿಯಂ ಕುರಿತು-ಸದ್ಗುರುನಾಥನೇ! ನೀನು ನನ್ನಲ್ಲಿ ಕೃಪೆಯಂ ಮಾಡಿದೆ. ನನ್ನಿಂದ ಸೇವೆಯೇನೂ ಘಟಿಸಲಿಲ್ಲ. ನದೀಸ್ನಾನಕ್ಕೆ ಹೋಗುತ್ತಿರುವಾಗ ನೀನು ಮಾರ್ಗದಲ್ಲಿಯೇ ಒದಗಿ, ನನ್ನ ಮಸ್ತಕದಮೇಲೆ ಅಭಯಕರವನಿರಿಸಿ, ಪಾವುಸೇರು ತುಪ್ಪವನ್ನು ಬೇಡಿ ಮನೆಯಲ್ಲಿ ದೊಡ್ಡ ಕಲಹವನ್ನುಂಟುಮಾಡಿ ಹೊರಟುಹೋದೆಯಲ್ಲಾ! "ಕೇಶವಚೈತನ್ಯ ರಾಘವಚೈತನ್ಯ" ಎಂದು ಮಾಲಿಕೆಯ ಗುರುತಂ ಹೇಳಿ ನನ್ನ ಹೆಸರು "ಬಾಬಾಜಿ" ಎಂದು ನುಡಿದು, ತ್ರಿಪುರಾರಿಯು ನಿರಂತರವೂ ಜಪಿಸುವ ಶ್ರೀರಾಮನಾಮಮಂತ್ರವನ್ನು ಪ್ರೀತಿಯಿಂದ ಉಪದೇಶಿಸಿ, ಶ್ರೇಷ್ಠವಾದ ಮಾಘಶುದ್ಧದಶಮೀಗುರುವಾರದಲ್ಲಿ ನನ್ನನ್ನು ಅಂಗೀಕರಿಸಿದೆ-ಎಂದು ನುಡಿದು ಮನದಲ್ಲಿ ವಿಶ್ವಾಸವಂ ಹಿಡಿದು ಪರಿಭಜನೆ

ಯಂ ಮಾಡುತ್ತ ಆನಂದದಿಂದ ಹರಿನಾಮಸಂಕೀರ್ತನವಂ ಮಾಡುತ್ತ ವಿವಿಧವಾದ ದೃಷ್ಟಾಂತಗಳಿಂದ ಯುಕ್ತವಾಗಿ ರಸಭರಿತವಾದ ಕವನವಂ ಮಾಡುತ್ತ ಇರುತಿದ್ದನು.

ಭಾಗ್ಯಶಾಲಿಗಳು ಆತನ ಕವನವಂ ಕೇಳಿ-ಈತನು ಸಾಮಾನ್ಯಮನುಷ್ಯನಲ್ಲ. ಭಗವದವತಾರವೇ ಸರಿ. ಶ್ರೀರುಕ್ಮಿಣೀಪತಿಯು ಈತನ ಮುಖದಿಂದ ಪ್ರಪಂಚ ವನ್ನು ಉದ್ಧರಿಸುತಿರುವನು-ಎಂದು ಅಭಿನಂದಿಸುತಿದ್ದರು.

ಇದಂ ಕೇಳಿ ದುರಾತ್ಮರು ಮನದಲ್ಲಿ ಸಂಕಟಗೊಂಡು-ಇವನು ಶಾಸ್ತ್ರಮಾ ರ್ಗವಂ ಬಿಟ್ಟು ಪಾಷಂಡವಾದದಲ್ಲಿ ನಿರತನಾಗಿರುವನು. ಕರ್ಮಮಾರ್ಗವಂ ಮುಳು ಗಿಸಿ ಸಕಲ ಜನಗಳನ್ನೂ ಭಜನದಲ್ಲಿ ಹತ್ತಿಸಿದನು. ಭಕ್ತಿಮಾರ್ಗವೊಂದನುಳಿದು ಮತ್ತೊಂದು ಮಾತನಾಡುವುದಿಲ್ಲ. ಇವನು ಏನು ಕವಿತ್ವವಂಮಾಡಿ ಇರುವನೋ ಅದರ ಪುಸ್ತಕಗಳೆಲ್ಲವನ್ನೂ ವಸ್ತ್ರದಲ್ಲಿ ಕಟ್ಟಿ ನೀರಿನಲ್ಲಿ ಮುಳುಗಿಸಿಬಿಡಬೇಕು-ಎಂದು ಆಲೋಚಿಸಿ ನಿಶ್ಚಯಮಾಡಿ, ಪಂಜರದಲ್ಲಿ "ರಾಮರಾಮ" ಎಂದು ಮುದ್ದು ಮುದ್ದಾಗಿ ನುಡಿಯಂ ನುಡಿವ ಗಿಳಿಯಂ ಕಂಡು ಸಂಕಟಪಡುವ ಗಿಡುಗನಂತೆ ಹೃದ ಯದಲ್ಲಿ ಅಸೂಯೆಯಿಂದ ಸಂತಪಿಸುತ್ತ ತುಕ್ಕೋಬನ ಮನೆಯಂ ನುಗ್ಗಿ ಆತನನ್ನು ಕುರಿತು-ಪಾಷಂಡವಾದಗಳನ್ನು ಹೇಳಿ ಜನವೆಲ್ಲವನ್ನೂ ಭಕ್ತಿಮಾರ್ಗದಲ್ಲಿ ಹತ್ತಿಸಿ ರುವೆ. ನಿನ್ನ ಪ್ರಾಕೃತವಾದ ಕವನದ ಮಾತುಗಳನ್ನು ಕಿವಿಯಿಂದ ಕೇಳಬಾರದು-ಎಂದು ನುಡಿದು ಬಲಾತ್ಕಾರದಿಂದ ಪುಸ್ತಕಗಳಂ ಕಿತ್ತುಕೊಂಡು ಮೊಟ್ಟೆಕಟ್ಟಿ ಅದ ರಲ್ಲಿ ಪಾಷಾಣವಂಹಾಕಿ, ಗಂಡಕೀಶಿಲೆಯ ಮೂರ್ತಿಯನ್ನು ದುರಾತ್ಮನಾದ ಪಾಪಿಯು ದುರ್ಬುದ್ಧಿಯಿಂದ ಒಡೆದು ಬಿಸುಡುವಂತೆ ನದಿಯಲ್ಲಿ ಮುಳುಗಿಸಿಬಿಟ್ಟು, ಅಲ್ಲಿಗೆ ಬಂದಿದ್ದ ತುಕ್ಕೋಬನಂ ಕುರಿತು-ಇದು ಹದಿಮೂರು ದಿವಸದವರೆಗೆ ನೆನೆಯದೆ ಇದ್ದರೆ, ಇದನ್ನು ನಾವು ಪ್ರಮಾಣವೆಂದು ತಿಳಿಯುವೆವು. ಇದೇ ನಿಶ್ಚಯವು-ಎಂದು ಹೇಳಿ ತಂತಮ್ಮ ಮನೆಗಳಿಗೆ ಹೊರಟುಹೋದರು.

ಎರಕಹೊಯ್ದ ಗಾಜಿನ ಬಟ್ಟಲನ್ನು ಒಡೆದಿಟ್ಟಂತೆ, ಮಡಿಕೆಹಾಕಿ ಇರಿಸಿದ ಹೊಸವಸ್ತ್ರವನ್ನು ಅಗ್ನಿಯಲ್ಲಿ ಹಾಕಿದಂತೆ, ಘುಮಘುಮಿಸುತಿರುವ ವಕುಳಪುಷ್ಪದ ತೋಟಕ್ಕೆ ಆಡುಗಳನ್ನು ಬಿಟ್ಟು ಮೇಯಿಸಿದಂತೆ ಆಯಿತು. ನಿರ್ಜಲಭೂಮಿಯಲ್ಲಿ ಇದ್ದ ಮಧುರೋದಕಪರಿಪೂರ್ಣವಾದ ಬಾವಿಯನ್ನು ಹೂಳಿಸಲು, ದಯಾಳುವಿಗೆ ಎಂತು ತಲ್ಲಣವಾಗುವುದೋ, ಸಿದ್ಧವಾಗಿದ್ದ ಷಡ್ರಸಯುಕ್ತವಾದ ಅನ್ನವನ್ನು ನಾಯಿ ಮು ಟ್ಟಲು, ಸ್ವಯಂಪಾಕಿಗೆ ಎಂತು ಸಂತಾಪವಾಗುವುದೋ, ದಿವ್ಯವಾದ ಮುತ್ತನ್ನು ಬೆಂ ಕಿಯಲ್ಲಿ ಹಾಕಿದರೆ ವರ್ತಕನಿಗೆ ಎಂತು ಸಂಕಟವಾಗುವುದೋ ಅಂತು ದುರ್ಜನರು ಪುಸ್ತಕಗಳ ಮೊಟ್ಟೆಯನ್ನು ನೀರಿನಲ್ಲಿ ಮುಳುಗಿಸಲು, ತುಕ್ಕೋಬನಿಗೆ ಮಹತ್ತಾದ ಚಿತ್ತಕ್ಷೋಭವುಂಟಾಯಿತು.

ಬಳಿಕ ತುಕ್ಕೋಬನು ಅತಿಖಿನ್ನನಾಗಿ ದೇವಾಲಯಕ್ಕೆ ಬಂದು ಹಂತದ ಕಲ್ಲು ಎಂತು ಚಲಿಸದೆ ಇರುವುದೋ ಅಂತು ಮಹಾದ್ವಾರದಲ್ಲಿ ಚಲಿಸದೆ ಮಲಗಿ-ಅನಾಥನಾಥನೇ! ಪಂಡರೀಶನೇ! ನನ್ನನ್ನು ವ್ಯರ್ಥವಾಗಿ ಕಷ್ಟಪಡಿಸಿ, ಕಡೆಗೆ ಅರಿಷ್ಟವನ್ನು ಉಂಟುಮಾಡಿ ಪುಸ್ತಕಗಳೆಲ್ಲವನ್ನೂ ನೀರಿನಲ್ಲಿ ಮುಳುಗಿಸಿದೆ. ನೀನು ನನ್ನ ಸ್ವಪ್ನದಲ್ಲಿ ಗೋಚರನಾಗಿ ಮೂಢಮತಿಯಾದ ನನಗೆ ಆಜ್ಞೆಯಂ ಮಾಡಿ ನಾಮದೇವನ ಪ್ರತಿಜ್ಞೆಯಲ್ಲಿ ಉಳಿದಿದ್ದುದನ್ನು ನನ್ನಿಂದ ಹೇಳಿಸಿದೆ. ಈಗ ಇಂತಹ ಅನರ್ಥವು ಏಕೆ ಉಂಟಾಯಿತು? ನಿನ್ನ ಚಿತ್ತಕ್ಕೆ ಬಂದಂತೆ ಮಾಡು-ಎಂದು ನುಡಿದು ಹೃದಯದಲ್ಲಿ ತತ್ಸ್ವರೂಪವಂ ಧ್ಯಾನಿಸಿ ಪ್ರೇಮಭರಿತನಾಗಿ ಮುಖದಿಂದ "ರಾಮಕೃಷ್ಣ ಹರೇ" ಎಂದು ಮಂತ್ರವಂ ಜಪಿಸುತ್ತ ಫಲಮೂಲವನ್ನಾಗಲಿ, ಅನ್ನವನ್ನಾಗಲಿ, ಆವುದನ್ನಾಗಲಿ ತೆಗೆದುಕೊಳ್ಳದೆ ಯಾರೊಡನೆಯೂ ಮಾತನಾಡದೆ ದೇಹಾಭಿಮಾನವನ್ನೂ ಆಶೆಯನ್ನೂ ಬಿಟ್ಟು ಇರಲು, ಜಗಜ್ಜೀವನನು ಇದಂ ತಿಳಿದು ತುಕ್ಕೋಬನಿಗೆ ಸಮಾಧಾನವಂ ಮಾಡುವುದಕ್ಕೋಸ್ಕರ ಬಾಲರೂಪವಂ ಪರಿಗ್ರಹಿಸಿ ಸಮೀಪಕ್ಕೆ ಬಂದು ಶಿರಸ್ಸಿನಲ್ಲಿ ಅಭಯಕರವನ್ನು ಇರಿಸಿ-ಇಂತಹ ದುರ್ಧರವಾದ ಅರಿಷ್ಟವು ಬಂದೊದವಿದರೂ ಅದನ್ನು ಪರಿಹರಿಸುವೆನು. ನೀನು ಮನವನ್ನು ಸ್ವಸ್ಥಮಾಡಿಕೊಂಡು ಇರು-ಎಂದು ನುಡಿದು, ಆತನ ಹೃದಯದ ನೈರ್ಮಲ್ಯವಂ ಕಂಡು ಅಲ್ಲಿ ಕುಳಿತುಕೊಳ್ಳುವುದಕ್ಕೋಸ್ಕರ ಆಗಲೇ ಅದೃಶ್ಯನಾದನು.

ಹದಿಮೂರು ದಿನಗಳು ಕಳೆದುವು. ಬಳಿಕ ಜನಗಳು ಪುಸ್ತಕಗಳನ್ನು ನೀರಿಂದ ತೆಗೆದುನೋಡುವಾಗ ಒಂದಕ್ಷರಕ್ಕಾದರೂ ನೀರು ಸೋಂಕಿರಲಿಲ್ಲ. ಅದಂ ನೋಡಿ-ನಮ್ಮಿಂದ ಅನ್ಯಾಯವು ಎಸಗಲ್ಪಟ್ಟಿತು. ನಾವು ತಿಳಿಯದೆ ಭಾಗವತನಿಗೆ ಅಪಚಾರಮಾಡಿದೆವು. ಜಗಜ್ಜೀವನನು ಈತನಿಗೆ ಸಹಾಯನಾಗಿ ಅರಿಷ್ಟವಂ ಪರಿಹರಿಸಿದನು-ಎಂದು ಪಶ್ಚಾತ್ತಾಪಹೊಂದಿ ದೇವಾಲಯದ ಮಹಾದ್ವಾರದ ಬಳಿಗೆ ಬಂದು ತುಕ್ಕೋಬನನ್ನು ಕುರಿತು-ಶ್ರೀಹರಿಯು ನಿನಗೆ ಪ್ರಸನ್ನನಾದನು. ಪುಸ್ತಕದ ಪತ್ರಗಳು ನನೆಯದೆಯೆ ಇರುವುವು. ಇದೋ ಕಣ್ದೆರೆದು ನೋಡು- ಎಂದು ಪುಸ್ತಕಗಳನ್ನು ಮುಂದೆ ಇರಿಸಿ ಸಾಷ್ಟಾಂಗನಮಸ್ಕಾರವಂ ಮಾಡಿ-ಈತನಿಗೆ ರುಕ್ಮಿಣೀಪತಿಯೇ ಸಹಾಯನಾಗಿರುವಲ್ಲಿ ನಮ್ಮಿಂದ ಏನು ಅಪಾಯವಾದೀತು? ಅಮೃತದ ಕುಪ್ಪಿಗೆಯಲ್ಲಿ ರೋಗವು ಎಂತು ಸೇರಲಾರದೋ, ಸೂರ್ಯನ ಮನೆಯಲ್ಲಿ ಅಂಧಕಾರವು ಎಂತು ಬಂದಿರದೋ, ಚಂದ್ರನ ಮನೆಯಲ್ಲಿ ಸೆಕೆಯೆಂತು ಆಗಲಾರದೋ, ಅಂತು ಈ ವಿಷ್ಣುಭಕ್ತನಲ್ಲಿ ಅರಿಷ್ಟವು ಸೇರದು-ಎಂದು ಪರಸ್ಪರವಾಗಿ ಮಾತನಾಡಿಕೊಳ್ಳುತ್ತ, ತಮ್ಮ ತಮ್ಮ ಮನೆಗಳಂ ಸೇರಿ ಭಗವನ್ನಾಮಸಂಕೀರ್ತನದಲ್ಲಿ ತತ್ಪರರಾಗಿದ್ದರು.

ತುಕ್ಕೋಬನು ಕಣ್ದೆರೆದು ಮುಂದೆ ಪುಸ್ತಕಗಳಂ ನೋಡಿ ಅವುಗಳಿಗೆ ಬಾಧೆಯೇನೂ ಆಗದೆ ಇದ್ದುದರಿಂದ ಮನಸ್ಸಮಾಧಾನವನ್ನು ಹೊಂದಿ ಕಣ್ಣುಗಳಂ ಪಡೆದ

ಕುರುಡನಂತೆಯೂ, ಅಮೃತವಂ ಕುಡಿದು ಎದ್ದ ಮಹಾರೋಗಿಯಂತೆಯೂ ಬಹು ಸಂತೋಷವಂ ತಾಳಿ-ಪಂಡರೀನಾಥನು ಒಲಿದನೆಂದು ಭಕ್ತಿವಿಶೇಷದಿಂದ ಬದ್ಧಾಂಜಲಿಯಾಗಿ ಆಸ್ವಾಮಿಯಂ ಕುರಿತು ಏಳುಅಭಂಗಗಳನ್ನು ತನ್ನ ಮುಖದಿಂದ ಬಿನ್ನವಿಸಿದನು. ಅದರ ಸ್ವಾರಸ್ಯವಂ ವರ್ಣಿಸಲು ಶಕ್ಯವಲ್ಲ. ಆದರೂ ಅದರ ಭಾವವನ್ನು ಮನಸ್ಸಿಗೆ ತಂದು ಸ್ವಲ್ಪವಾಗಿ ಹೇಳುವೆನು:- ಶ್ರೋತೃಗಳು ಅವಧರಿಸತಕ್ಕದು.

ತುಕ್ಕೋಬನು ಕಣ್ಣುಗಳನ್ನು ಮುಚ್ಚಿಕೊಂಡು, ಪ್ರೇಮರಸವು ಹೃದಯದಲ್ಲಿ ಉಕ್ಕಿ ಕಂಠವನ್ನು ಒತ್ತಿಕೊಂಡು ಬರುತಿರಲು, ಜಯ ಜಯ ವಿಟ್ಠಲನೇ! ನನ್ನಿಂದ ಬಹು ಅನ್ಯಾಯವಾಯಿತು. ಲೌಕಿಕೋಕ್ತಿಗಳಂ ಹತ್ತಿಸಿಕೊಂಡು ನಿನ್ನ ಬಾಗಿಲಲ್ಲಿ ಎಡೆಬಿಡದೆ ಕುಳಿತೆನು. ಕ್ಷುತ್ತೃಷ್ಣಾದುಃಖಭಾರವನ್ನು ನಿನ್ನ ಮೇಲೆ ಹಾಕಿದೆನು. ನೀನು ನನ್ನ ಹೃದಯಮಂದಿರದಲ್ಲಿ ಕುಳಿತು ನನ್ನ ಯೋಗಕ್ಷೇಮವಂ ವಹಿಸಿದೆ. ಪತ್ರಗಳನ್ನು ನೀರಲ್ಲಿ ನನೆಯದಂತೆ ಕಾದೆ. ಲೌಕಿಕಾಪವಾದವಂ ತಪ್ಪಿಸಿದೆ. ಅನಾಥರ ನಾಥನೆಂಬ ಬಿರುದನ್ನು ನೀನು ಸತ್ಯವನ್ನಾಗಿಮಾಡಿದೆ. ದಯಾಳುವೇ! ನೀನು ಬಾಲರೂಪವಂ ಧರಿಸಿ ನನಗೆ ದರ್ಶನವಂ ಕೊಟ್ಟೆ. ಮನಸ್ಸಿಗೆ ಸಮಾಧಾನವಂಮಾಡಿ ನನ್ನ ಶಿರಸ್ಸಿನಲ್ಲಿ ಅಭಯಹಸ್ತವನಿರಿಸಿದೆ. ಇನ್ನು ಮೇಲೆ ದುರ್ಜನರು ನನ್ನ ಕುತ್ತಿಗೆಯನ್ನು ಕುಯ್ಯಲಿ; ಸುಖದಿಂದ ಪೀಡಿಸುವರಾಗಲಿ; ಎಂದಿಗೂ ನಿನ್ನ ಮೇಲೆ ಭಾರವಂ ಹಾಕುವವನಾಗುವುದಿಲ್ಲ. ನಾನು ಚಂಡಾಲನು ; ಪತಿತನು ; ಯಥಾರ್ಥವಾಗಿ ತಪ್ಪನ್ನು ಮಾಡಿದೆನು. ನಿನ್ನನ್ನು ನೀರಲ್ಲಿ ನಿಲಿಸಿ ಪುಸ್ತಕಗಳಂ ಕಾಯುವಂತೆ ಮಾಡಿದೆನು. ಸಮರ್ಥರ ಮೇಲೆ ಭಾರವಂ ಹಾಕುವ ಅಧಿಕಾರವು ನನಗೆ ಇಲ್ಲವೆಂಬುದನ್ನು ನಾನರಿಯದೆಹೋದೆ. ಪಾಮರನು; ನನಗೆ ವಿವೇಕವಿಚಾರವೇನೂ ಇಲ್ಲ. ಆಗಿಹೋದುದು ಹೋಯಿತು. ನುಂಗಿದ ತುತ್ತು ಮತ್ತೆ ಬಾರದು. ರುಕ್ಮಿಣೀಪತಿಯೇ! ಮುಂದಾದರೂ ನಿನಗೆ ಸಂಕಟವನ್ನುಂಟುಮಾಡುವುದಿಲ್ಲ. ಕತ್ತಿನಮೇಲೆ ಕತ್ತಿಯನ್ನು ಇರಿಸದೆಯೇ, ಬೆನ್ನಮೇಲೆ ಯಾರೂ ತಾಡನವಮಾಡದೆಯೇ ಇಲ್ಲದ ಆಘಾತವಂ ಮಾಡಿದೆನು. ನಿನ್ನ ಮನಸ್ಸನ್ನು ನನ್ನ ಬಳಿಯಲ್ಲಿಯೂ ನದಿಯ ಮಡುವಿನಲ್ಲಿಯೂ ಹಂಚಿಬಿಟ್ಟು ಎರಡುಕಡೆಯ ಅಪಾಯವನ್ನೂ ತಪ್ಪಿಸಿ ಲೋಕದಲ್ಲಿ ಕೀರ್ತಿಯನ್ನು ಬೆಳೆಯಿಸಿದೆ. ನಾನು ಮಾಡಬಾರದಂತಹ ಕಾರ್ಯವನ್ನು ಮಾಡಿದೆನು. ಸಹಿಸುವನು ಜಗಜ್ಜೀವನನಾದ ನೀನೊಬ್ಬನೇ ಅಲ್ಲದೆ ಮತ್ತೊಬ್ಬನಿಲ್ಲ. ಕೃಪಾಸಾಗರನೇ! ಚಕ್ರಪಾಣಿಯೇ! ನಿನಗೆ ಸಮಾನನಾದವನನ್ನು ಮೂರುಲೋಕದಲ್ಲಿಯೂ ಕಾಣೆನು. ಪ್ರೀತಿಯಿಂದ ನಿನ್ನನ್ನು ಸ್ತುತಿಯಿಸುವೆನೆಂದರೆ ಮತಿಯು ಕುಂಠಿತವಾಗಿ ನಿಂತಿತು. ನೀನು ದೀನಬಂಧುವು. ಕೃಪಾಳುವು. ತಾಯಿಗಿಂತಲೂ ಅಧಿಕವಾದ ಮಮತೆಯುಳ್ಳವನು. ಚಂದ್ರನಿಗಿಂತಲೂ ಶೀತಳನಾದವನು. ಪ್ರೇಮದ ತೆರೆಯು ಒಂದರ ಹಿಂದೆ ಒಂದಾಗಿ ಬರುತಿರುವುದು. ನೀನು ದೇವಾದಿದೇವನು. ನಿನಗೆ ಉಪಮಾನವಂ ಹೇಳುವುದಕ್ಕೆ ಸ್ಥಳವಿಲ್ಲ.

ಸಕಲಜೀವರಿಗೂ ಜೀವನು. "ಜೀವಶಿವ" ಎಂಬ ಮಂತ್ರವಂ ಪಠಿಸುವೆನು. ನಿನ್ನನ್ನು ಪಂಚಭೂತಾತ್ಮನೆಂದು ಹೇಳೋಣ—ಎಂದರೆ ಅವು ನಿನ್ನಿಂದಲೇ ನಿರ್ಮಿಸಲ್ಪಟ್ಟವು. ಅಮೃತಕ್ಕೆ ಸರಿಯಾದ ಸವಿಯುಳ್ಳವನೆಂದರೆ ನೀನು ಅದಕ್ಕೂ ಬೇರೆಯಾಗಿರುವವನು. ಇನ್ನು ಮೇಲೆ ಯಾವಮಾತನ್ನೂ ಆಡುವನಲ್ಲ. ನಾನು ಅನಂತಾಪರಾಧಿಯು. ಕ್ಷಮಿಸಬೇಕು. ಈ ಸಂಸಾರವು ಅವಗುಣವುಳ್ಳುದು. ಅಸಾರವಾದ ಅನ್ಯಾಯಕ್ಕೆ ನೆಲೆಯಾದುದು. ಅಡಿಗಡಿಗೂ ಎಷ್ಟೆಂದು ಹೇಳಲಿ? ಚಿತ್ತವನ್ನು ಸ್ಥಿರವಾಗಿರಲೀಯದು. ಇನ್ನು ಈಸಂಸಾರವು ಸಾಕು. ಬುದ್ಧಿಯು ಅನಂತಕಲ್ಪನೆಗಳು ತೆರೆತೆರೆಗಳಂತೆ ಬರುತಿರುವುವು. ಅವುಗಳ ಸಂಸರ್ಗದಿಂದ ಮನಸ್ಸು ಬಂಧಿಸಲ್ಪಟ್ಟಿರುವುದು. ದೇವಾದಿದೇವನೇ! ಪಂಡರೀನಾಥನೆ! ನನ್ನ ಚಿಂತೆಗಳನೆಲ್ಲವಂ ಪರಿಹರಿಸು. ಕರ್ಮದ ಬಲೆಯನ್ನು ಪರಿಹರಿಸಿ ನನ್ನ ಹೃದಯಮಂದಿರದಲ್ಲಿಯೇ ಇರುವನಾಗು--ಎಂದಿಂತು ವಿವಿಧವಾದ ಸ್ತೋತ್ರವಂಮಾಡಿ ರುಕ್ಮಿಣೀಪತಿಯಂ ಕುರಿತು ಮಾತನಾಡಿ ಪ್ರೇಮದಿಂದ ಗರ್ಭಗೃಹಕ್ಕೆ ಬಂದು ಸ್ವಾಮಿಯನ್ನು ಆಲಿಂಗಿಸಿಕೊಂಡನು.

ಇಂತು ನಿರಂತರವೂ ಸ್ವಾಮಿಯ ಸಗುಣರೂಪವನ್ನು ಮನದಲ್ಲಿ ನೆಲೆಗೊಳಿಸಿ ಮುಖದಿಂದ ತನ್ನಾಮಕೀರ್ತನೆಯಂ ಮಾಡುತಿದ್ದು ಬಳಿಕ ಶರೀರಸಹಿತನಾಗಿ ವೈಕುಂಠವನ್ನು ಹೊಂದಿದವನಾದನು. ಹೃದಯಸ್ಥನಾದ ರುಕ್ಮಿಣೀಪತಿಯು-ತುಕ್ಕಾರಾಮನು ಈಗಲೂ ಇಹಲೋಕದಲ್ಲಿಯೇ ಇರುವನೆಂದು ಅಪ್ಪಣೆಕೊಡಿಸಿರುವನು. ನಿಷ್ಠೆಯುಳ್ಳ ಭಕ್ತರು ಯಾರೋ ಅವರಿಗೆ ಸ್ವಪ್ನದಲ್ಲಿ ತುಕ್ಕಾರಾಮನು ದರ್ಶನವಂ ಕೊಡುತಿರುವನು. ಭಗವಂತನಾದ ದತ್ತಾತ್ರೇಯಮುನೀಂದ್ರನು ಎಂತು ಸ್ವೇಚ್ಛೆಯಿಂದ ಭೂಮಂಡಲದಲ್ಲಿ ಎಲ್ಲೆಲ್ಲಿಯೂ ಸಂಚರಿಸುತ್ತಿರುವನೋ ಅಂತು ತುಕ್ಕಾರಾಮನೂ ಸಂಚರಿಸುತಿರುವನು. ಈವಿಷಯದಲ್ಲಿ ಸಂಶಯವು ತೋರಿದರೆ, ಸಂತರು ಸಾಕ್ಷ್ಯವೇನೆಂದು ಕೇಳಬಹುದು. ಆತನು ನಿಯಾಬಾವನ ಸ್ವಪ್ನದಲ್ಲಿ ಬಂದು ಕೃಪೆಯಿಂದ ಉಪದೇಶವಂ ಮಾಡಿರುವನು. ಚಿತ್ತದಲ್ಲಿ ಶುದ್ಧವಾದ ಪ್ರೇಮವಿದ್ದರೆ ಎಲ್ಲರಿಗೂ ಉಪದೇಶವಂ ಮಾಡುತಿರುವನು. ಆತನು ಪರಮಸದ್ಗುರು. ಈಗಲೂ ಚಿರಂಜೀವಿಯಾಗಿರುವನು. ಆತನೇ ಏಕಾಂತದಲ್ಲಿ ಕೃಪೆಯಂ ಮಾಡಿ ನನ್ನಿಂದ ಗ್ರಂಥವಂ ಬರೆಯಿಸಿದನು. ಈ ಮಾತಿಗೆ ಶ್ರೋತೃಗಳು ಚಿತ್ತದಲ್ಲಿ ಸಂಶಯಪಡಲಾಗದು. ಆತನು ವಿಶ್ವವ್ಯಾಪಕನಾದ ಚೈತನ್ಯಘನನು. ಆತನು ಸದ್ಗುರುವೆನಿಸಿರುವನು. ಮಹೀಪತಿಯು ದೇಹಾಭಿಮಾನವಂ ಬಿಟ್ಟು ಆತನ ಶರಣಾಗತನಾಗಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಐವತ್ತೆರಡನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಬೋಧಲನ ಚರಿತ್ರೆ.

ಜಯ ಜಯ ಭಕ್ತಭೂಷಣನೇ! ವಿಶ್ವಂಭರನೇ! ಜಗದುದ್ಧಾರಕನೇ! ಸಗುಣ ಸ್ವರೂಪನೇ! ನಿರ್ವಿಕಾರನೇ! ಸಾಯುಜ್ಯವನ್ನು ಕೊಡುವವನೇ! ಜಗದ್ಗುರುವೇ! ಮಾಯಾಚಕ್ರಚಾಲಕನೇ! ಪೀತಾಂಬರಧರನೇ! ವೈಕುಂಠನಾಥನೇ! ಚತುರ್ಮುಖ ಜನಕನೇ! ವೇದೋದ್ಧಾರಕನೇ! ಪಾಂಡುರಂಗನೇ! ಆನೆಯಲ್ಲಿಯೂ ಅಣುರೇಣುವಿನಲ್ಲಿಯೂ ಸಮನಾಗಿರುವೆ. ಇಂದ್ರಾದಿದೇವತೆಗಳೆಲ್ಲರೂ ನಿನ್ನ ಸತ್ತ್ವದಿಂದಲೇ ಪ್ರಕಾಶಿಸುತ್ತಿರುವರು. ನಿನ್ನ ಸತ್ತ್ವದಿಂದಲೇ ಚಂದ್ರಸೂರ್ಯರು ಆಕಾಶದಲ್ಲಿ ಸಂಚರಿಸುತಿರುವರು. ಅವರ ಸೂತ್ರವು ನಿನ್ನ ಕೈಯಲ್ಲಿಯೇ ಇರುವುದು. ಜಲಮಂಟಪದಲ್ಲಿ ಬೊಂಬೆಗಳಂ ಕುಣಿಯಿಸುವಂತೆ ಅವರನ್ನು ಕುಣಿಯಿಸುತಿರುವೆ. ಪ್ರಭಂಜನನು ಸಕಲತರುಲತಾದಿಗಳನ್ನು ಅಲ್ಲಾಡಿಸುವಂತೆ ನೀನು ಬ್ರಹ್ಮಾಂಡವೆಲ್ಲವನ್ನೂ ಲಾಘವದಿಂದ ಅಲ್ಲಾಡಿಸುವೆ. ಚರಾಚರವೆಲ್ಲವೂ ನಿನ್ನ ರೋಮಕೂಪದಲ್ಲಿ ಕಾಣುವುದು. ಅಂತಹ ನೀನು ಭಕ್ತೋತ್ತಮನಾದ ಪುಂಡರೀಕನ ಮುಂದೆ ಸೊಂಟದಮೇಲೆ ಕರಗಳನಿರಿಸಿಕೊಂಡು ನಿಂತಿರುವೆ. ನಿನ್ನ ಪಾದವನ್ನು ಬ್ರಹ್ಮಾದಿಗಳೂ ಅರಿಯರು. ಅಂತಹ ನೀನು ಭಕ್ತರ ಮಾತನ್ನು ಈಡೇರಿಸುತಿರುವೆ. ನಾನಾವಿಧವಾದ ಸಂಕಟವಂ ತೋರಿಸಿ ಬಳಿಕ ನೀನೇ ಬಂದು ಅದನ್ನು ಪರಿಹರಿಸುತಿರುವೆ. ಶೇಷಶಾಯಿಯೂ ಗರುಡಧ್ವಜನೂ ಆದ ಯಾವ ನಿನ್ನ ಪಾದವನ್ನು ಮಹಾಲಕ್ಷ್ಮಿಯು ಸೇವಿಸುತಿರುವಳೋ ಅಂತಹ ನೀನು ನಿಂತುಕೊಂಡು ಭಕ್ತರಿಂದ ಪೂಜೆಯಂ ತೆಗೆದುಕೊಳ್ಳುತಿರುವೆ. ಯೋಗಿವರೇಣ್ಯರು ವಜ್ರಾಸನದಲ್ಲಿ ಕುಳಿತು ನಿನ್ನನ್ನು ಧ್ಯಾನಿಸುವರು. ಅವರ ಧ್ಯಾನಕ್ಕೆ ಸಿಕ್ಕೆ. ಅಂತಹ ನೀನು ಪ್ರೇಮಳಭಕ್ತರ ಕೀರ್ತನದಲ್ಲಿ ನಾಚಿಕೆಯಿಲ್ಲದೆ ಕುಣಿಯುತಿರುವೆ. ನೆನೆದ ನಿನ್ನ ಭಕ್ತರ ಚರಿತ್ರೆಯನ್ನು ನೀನೆ ಹೇಳಿಸುವೆ. ಅಂತಲ್ಲದಿದ್ದರೆ ನಾನು ಮಂದಮತಿ; ನನಗೆ ಸಂತತವಾದ ಬುದ್ಧಿ ಯೆಲ್ಲಿ ಬಂದಿತು ?

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ಪಂಡರೀನಾಥನು ತುಕ್ಕಾರಾಮನಿಗೆ ಪ್ರಸನ್ನನಾಗಿ ನೀರಲ್ಲಿ ಪತ್ರಗಳು ನನೆಯದಂತೆ ಹದಿಮೂರು ದಿವಸಗಳವರೆಗೂ ಸಂರಕ್ಷಿಸಿದನೆಂಬ ಕಥೆಯಂ ಕೇಳಿದಿರಷ್ಟೆ. ಇನ್ನು ಮುಂದಣ ಸುರಸವಾದ ಕಥೆಯನ್ನು ಆದರದಿಂದ ಅವಧರಿಸಿ.

ಬಾಲಘಾಟಪ್ರಾಂತದಲ್ಲಿ ಪ್ರಸಿದ್ಧವಾದ "ಧಾಮಣಗಾವ" ಎಂಬ ಊರುಂಟು. ಸಜ್ಜನರು ಬಲ್ಲರು. ಅಲ್ಲಿಯ ಗೌಡನು ಭಗವದ್ಭಕ್ತನೊಬ್ಬನಿದ್ದನು. ಅವನು ಶೂದ್ರನು. ಆತನಿಗೆ 'ಮಾಣಕೋಜಿಬೋಧಲ' ಎಂಬ ನಿಜನಾಮವೂ, 'ಜಗತಾಪ' ಎಂಬ ಉಪನಾಮವೂ ಉಂಟು. ಆತನ ಹೆಂಡತಿ 'ಮಮತೆ' ಎಂಬವಳು. ಪರಸ್ಪ

ಪತಿವ್ರತೆ. ಸಂಸಾರದಲ್ಲಿ ಪತಿಯ ಆಜ್ಞೆಯಿಲ್ಲದೆ ಸ್ವಲ್ಪವಾದರೂ ಅತಿಕ್ರಮಿಸಿ ನಡೆಯುತಿರಲಿಲ್ಲ. ಅವರ ಜ್ಯೇಷ್ಠಪುತ್ರನು "ಯಮಾಜಿ" ಎಂಬವನು. ಅವನೂ ವಿರಕ್ತನು. ಸೊಸೆ ಭಾಗೀರಥಿಯೆಂಬವಳು. ಅವಳೂ ಅಂತಹ ಸದ್ಗುಣರಾಶಿ. ಇಂತು ನಾಲ್ವರೂ ಏಕಚಿತ್ತರಾಗಿ ಪ್ರಾಪಂಚಿಕವ್ಯವಹಾರದಲ್ಲಿ ಇದ್ದರೂ ಅತ್ಯಂತ ವಿರಕ್ತರಾಗಿ ಹೃದಯದಲ್ಲಿ ಪಂಢರೀನಾಥನಂ ನೆನೆಯುತ್ತ ಹಗಲಿರುಳೂ ಭಜನೆಯಂ ಮಾಡುತಿದ್ದರು. ಮನೆಯಲ್ಲಿ ಬಹುಧನಧಾನ್ಯವು ಇದ್ದಿತು. ಕೊಟ್ಟಿಗೆಯಲ್ಲಿ ತುಂಬುವಂತೆ ಆಕಳೂ ಎತ್ತುಗಳೂ ಇದ್ದುವು. ದೊಡ್ಡತನವೂ ಮಾನ್ಯತೆಯೂ ಗೌಡಿಕೆಯೂ ಆತನಿಗೆ ಇದ್ದಿತು. ಆಬೋಧಲನು ಹನ್ನೆರಡುದಿನಗಳಿಗೆ ಒಮ್ಮೆ ಪ್ರತ್ಯೇಕಾದಶಿ ಪಂಢರಪುರಕ್ಕೆ ವರನಡೆಯುವ ನಿಯಮವನ್ನು ಇಟ್ಟುಕೊಂಡು ಪರ್ವಕಾಲವಾದ ದ್ವಾದಶಿಯಲ್ಲಿ ಬ್ರಾಹ್ಮಣಸಂತರ್ಪಣೆಯಂ ಮಾಡಿಸಿ ದೀನಾನಾಥರಾದ ಅನ್ನಾರ್ಥಿಗಳಿಗೂ ಅನ್ನವಂ ಕೊಟ್ಟು ತ್ರಯೋದಶೀದಿನ ಅಲ್ಲಿಂದ ಹಿಂದಿರುಗಿ ಹೊರಟು ಧಾವಣಗಾವಿಗೆ ಬರುತಿದ್ದನು. ಇಂತು ಬಹುದಿವಸಗಳು ಕಳೆದುವು. ಬಳಿಕ ಕಠಿನವಾದ ಬರಗಾಲ ಬಂದಿತು. ಧಾನ್ಯದ ಧಾರಣೆಯು ಏರಿತು. ದ್ರವ್ಯವನ್ನು ಕೊಟ್ಟರೂ ಬಡವರಿಗೆ ಧಾನ್ಯವು ದೊರೆಯದೆ ಇದ್ದಿತು. ಇಂತಹ ಕಠಿನವಾದ ಕಾಲವಂ ನೋಡಿ ಬೋಧಲನು ಮನದಲ್ಲಿ ಕನಿಕರಗೊಂಡು—ಈ ಸೃಷ್ಟಿಯಲ್ಲಿ ಸಕಲಭೂತಗಳಲ್ಲಿಯೂ ಜಗಜ್ಜೀವನನು ವ್ಯಾಪಕನಾಗಿರುವನು—ಎಂದು ಮಡದಿಯಂ ಕುರಿತು—ಹಸಿವುಗೊಂಡು ಬಂದವರಿಗೆ ಶಕ್ತ್ಯನುಸಾರದಿಂದ ಅನ್ನೋದಕಗಳಂ ಕೊಡಬೇಕು. ಇದರಿಂದ ಅಕ್ಷಯವಾದ ಪುಣ್ಯವು ಉಂಟಾಗುವುದು. ಪರಸ್ಥಳದಲ್ಲಿ ವ್ಯಾಧಿಯಿಂದ ಸಂಕಟಪಡುತಿರುವವರಿಗೆ ಔಷಧವಂ ಕೊಟ್ಟು ಉಪಚರಿಸಿದರೂ, ಅನಾಥಪ್ರೇತಸಂಸ್ಕಾರವನ್ನು ಮಾಡಿದರೂ, ಬಾಯಾರಿದವನಿಗೆ ನೀರನ್ನು ಕೊಟ್ಟರೂ, ಅಕ್ಷಯವಾದ ಪುಣ್ಯವಿಶೇಷವು ಲಭಿಸುವುದು. ಈ ಪುಣ್ಯಲಾಭದಿಂದ ಸಾತ್ವಿಕವಾದ ವೈರಾಗ್ಯವುಂಟಾಗುವುದು ; ಅದರಿಂದ ವಿಷಯವಿಘ್ನಗಳೆಲ್ಲವೂ ಓಡಿಹೋಗುವುವು. ಬಳಿಕ ಉಂಟಾದ ಸುಜ್ಞಾನದಿಂದ ಶ್ರೀಹರಿಯ ಪಾದವು ದೊರೆವುದು. ಯಾರು ಉಗ್ರವಾದ ಜಪತಪಸ್ಸುಗಳನ್ನು ಮಾಡುವರೋ ಅವರಿಗೆ ಆ ಸುಕೃತವು ಫಲಭೋಗದಿಂದ ನಾಶವನ್ನೈದುವುದು. ಯಾರು ಪರೋಪಕಾರವನ್ನು ಮಾಡುವರೋ ಅವರಿಗೆ ವಿರಕ್ತಿಯು ದೃಢವಾಗುವುದು—ಎಂದು ಉಪದೇಶವಂ ಮಾಡಲು, ಆಕೆ ಅವಶ್ಯವಾಗಲಿ—ಎಂದು ನುಡಿದು ಅದೇಪ್ರಕಾರದಿಂದ ನಡೆಯುತಿದ್ದಳು.

ಆದಂಪತಿಗಳು ಸರ್ವಭೂತಗಳಲ್ಲಿಯೂ ದಯಾರಸವುಳ್ಳವರಾಗಿ ದುರ್ಭಿಕ್ಷದಲ್ಲಿ ಅನ್ನದಾನವಂ ಮಾಡುತಿರಲು, ಸ್ವದೇಶದಲ್ಲಿ ಎಲ್ಲಾ ಕಡೆಯಲ್ಲಿಯೂ ಕೀರ್ತಿಯು ಪ್ರಕಟವಾಯಿತು. ಯಾಚಕರು ಓಡಿಬರುತಿದ್ದರು. ಸಕ್ಕರೆಯ ರಾಶಿಯಮೇಲೆ ಇರುವೆಗಳೂ ನೊಣಗಳೂ ಬಂದು ಎಂತು ಮುತ್ತುವುವೋ, ಮರದ ನೆಳಲ ಸುಖವಂ

ಕಂಡು ಮಾರ್ಗಸ್ಥರು ಎಂತು ಬಂದು ಕುಳಿತುಕೊಳ್ಳುವರೋ ಅಂತು ಬೋಧಲನ ಮನೆಗೆ ಅನ್ನಾರ್ಥಿಗಳು ಬಂದು ಸೇರುತಿದ್ದರು.

ಬೋಧಲನು ಎತ್ತುಗಳ ಮೇಲೆ ಬಹುವಾದ ಧಾನ್ಯಸಂಭಾರವಂ ಹಾಕಿಕೊಂಡು ದಶಮಿಯೊಳಗಾಗಿ ಫಂತರಪುರವಂ ಸೇರಿ ಏಕಾದಶೀದಿನ ಅಲ್ಲಿ ಇದ್ದು ಚಂದ್ರಭಾಗೆ ಯಲ್ಲಿ ಸ್ನಾನವಂ ಮಾಡಿ ಪುಂಡರೀಕನ ಸಂದರ್ಶನವಾದಬಳಿಕ ಕ್ಷೇತ್ರಪ್ರದಕ್ಷಿಣೆಯುಂ ಮಾಡಿ ಕೈಯಲ್ಲಿ ತಾಳವನ್ನೂ ತಂಬೂರಿಯನ್ನೂ ತೆಗೆದುಕೊಂಡು ಶ್ರೀಹರಿನಾಮ ವನ್ನು ಪಾಡುತ ಪ್ರೇಮಾತಿಶಯದಿಂದ ಮಹಾದ್ವಾರಕ್ಕೆ ಬಂದು ದಂಡಪ್ರಣಾಮವಂ ಮಾಡಿ ದೇವಾಲಯದಲ್ಲಿ ಪ್ರವೇಶಿಸಿ ಕಣ್ಣು ತಣಿವಂತೆ ಸ್ವರೂಪವನ್ನು ನೋಡಿ ಸ್ವಾಮಿ ಯನ್ನು ಆಲಿಂಗಿಸಿಕೊಂಡು, ಅತ್ತೆಮನೆಯಿಂದ ಬಂದ ಮಗಳು ತಾಯಲ್ಲಿ ಎಂತು ರಹಸ್ಯವಂ ಹೇಳಿಕೊಳ್ಳುವಳೋ ಅಂತು ತನ್ನ ಹೃದಯದ ರಹಸ್ಯವಂ ಸ್ವಾಮಿಯಲ್ಲಿ ಹೇಳಿಕೊಂಡು ಪಾದಗಳಮೇಲೆ ಶಿರಸ್ಸನಿರಿಸಿ ಬಳಿಕ ಸಭಾಮಂಟಪಕ್ಕೆ ಬಂದು ಕೀರ್ತನವಂ ಮಾಡುತಿದ್ದನು. ರಾತ್ರಿ ನಾಲ್ಕುಜಾವವೂ ಆನಂದದಿಂದ ಜಾಗರಣವಂ ಮಾಡಿ ಬೆಳಗಾಗುವುದೂ ಬ್ರಾಹ್ಮಣರ ಕೈಯಿಂದ ಪಾಕವಂ ಮಾಡಿಸಿ ಹಸಿವುಗೊಂಡ ವರಿಗೆಲ್ಲರಿಗೂ ಅನ್ನದಾನವಂ ಮಾಡಿ ಸ್ವಾಮಿಯ ಅನುಜ್ಞೆಯಂತೆಗೆದುಕೊಂಡು ಹಿಂದಿರುಗಿ ತನ್ನ ಸ್ಥಳಕ್ಕೆ ಬರುತಿದ್ದನು. ಈ ಪ್ರಕಾರದಿಂದ ಬಹುಕಾಲವು ಕಳೆ ಯಿತು. ಮನೆಯಲ್ಲಿದ್ದ ಧಾನ್ಯವೆಲ್ಲವೂ ವೆಚ್ಚವಾಯಿತು. ಒಡವೆಗಳನ್ನೂ ಮಾರಿ, ಯಾಚಕರಿಗೆ ಅನ್ನವಂ ಕೊಡುತಿದ್ದನು. ಹಸುಗಳೂ ಎತ್ತುಗಳೂ ಮೇವಿಲ್ಲದೆ ಕಷ್ಟ ಪಡುತ ಇದ್ದುದರಿಂದ ಊರಜನಗಳಿಗೆಲ್ಲರಿಗೂ ಹಂಚಿಬಿಟ್ಟು ಉಪಾಧಿರಹಿತನಾಗಿ ಏಕಾಂತದಲ್ಲಿ ಕುಳಿತು ಭಜನೆಯುಂ ಮಾಡುತಿದ್ದನು. ಬಳಿಕ ದೇಹಶ್ರಮದಿಂದ ಸೇವಿಸಿ ಸಂಪಾದಿಸಿದ ದ್ರವ್ಯದಿಂದಲೂ ಅನ್ನದಾನಮಾಡಿ ಅತಿಥಿಗಳನ್ನು ಸಂತೋಷಪ ಡಿಸಿ ಉಳಿದುದರಲ್ಲಿ ಕುಟುಂಬಭರಣವಂ ಮಾಡುತಿದ್ದನು. ಇಂತಹ ಬಡತನವು ಒದವಿ ದರೂ ತನ್ನ ನಿಷ್ಠೆಯವನ್ನು ಎಂದಿಗೂ ಬಿಡದೆ ಸದ್ಭಾವದಿಂದ ಭಗವನ್ನಾಮಸ್ಮರಣೆಯುಂ ಮಾಡುತ್ತ ಭಜನೆಯಲ್ಲಿ ಇದ್ದನು.

ರುಕ್ಮಿಣೀಪತಿಯು ಇಂತಹ ನಿಷ್ಠೆಯುಂ ನೋಡಿ ಬೋಧಲನಿಗೆ ಪ್ರಸನ್ನನಾಗಿ ಏಕಾಂತದಲ್ಲಿ ದರ್ಶನವಂ ಕೊಡುತಿದ್ದನು. ಚಿತ್ತದಲ್ಲಿ ಶುದ್ಧವಾದ ಒಂದು ಭಾವ ವಿದ್ದರೆ ದೇವಾಧಿದೇವನು ಎಂತಾದರೂ ದರ್ಶನವನ್ನು ಕೊಡುವನು. ಸದ್ಭಕ್ತಿಯಿಲ್ಲ ದಂತಹ ಜ್ಞಾನವು ಏಕೆ? ಅಜ್ಞಾನಾಭಿಮಾನದಿಂದ ಭಾವವು ಎಂದಿಗೂ ಶುದ್ಧವಾಗ ಲಾರದು. ಮರವು ದೊಡ್ಡದಾಗಿ ಬೆಳೆದಬಳಿಕ ಎಂತು ಬಗ್ಗಲಾರದೋ, ವಾರ್ಧಕವು ಪ್ರಾಪ್ತವಾದಬಳಿಕ ವಿದ್ಯೆ ಎಂತು ಬಾರದೋ, ಮಡಿಕೆಯು ಬೆಂದಬಳಿಕ ಮತ್ತೆ ಎಂತು ಮಣ್ಣಾಗಲಾರದೋ, ಬೀಜವು ಹುರಿದಬಳಿಕ ಎಂತು ಮೊಳಕೆಗೊಳ್ಳದೋ ಅಂತು ಹೃದಯವು ಅಭಿಮಾನದಿಂದ ಕಲುಷಿತವಾದಬಳಿಕ ಶುದ್ಧವಾಗಲಾರದು.

ಸಂತರು ಅಂತಹ ಅಭಿಮಾನವನ್ನು ಎಂದಿಗೂ ತಾಳರು. ಅದಂತಿರಲಿ. ಸಂತರ ಸ್ಥಿತಿಯನ್ನು ವರ್ಣಿಸಲು ಗ್ರಂಥವು ಬಹುವಾಗಿ ಬೆಳೆವುದು. ಪಂಡರೀನಾಥನು ಬೋಧಲನ ಶುದ್ಧಭಾವವಂ ಕಂಡು ಪ್ರಸನ್ನನಾದನು. ಒಮ್ಮೆ ಏಕಾದಶಿಯಲ್ಲಿ ಪಂಡರಪುರಕ್ಕೆ ಹೋಗುವಾಗ ವೆಚ್ಚಕ್ಕೆ ಇಲ್ಲದಿದ್ದುದರಿಂದ ಆತನ ಹೆಂಡತಿಯು ಚಿಂತಾಕ್ರಾಂತೆಯಾಗಿ ಚಂದ್ರಭಾಗೆಯಲ್ಲಿ ಸ್ನಾನವಂ ಮಾಡುವಾಗ ಸಂಕಲ್ಪವನ್ನು ಹೇಳುವ ಬ್ರಾಹ್ಮಣರಿಗೆ ಏನು ದಕ್ಷಿಣೆ ಕೊಡಬೇಕು ?. ದ್ವಾದಶಿಯ ದಿನ ಬ್ರಾಹ್ಮಣರ ಭೋಜನವನ್ನು ಎಂತು ಮಾಡಿಸಬೇಕು ?–ಎನಲು, ಆತನು ದಾರಿಯಲ್ಲಿ ಒಂದು ಸೌದೆಯ ಹೊರೆಯಂ ತೆಗೆದುಕೊಂಡುಹೋಗಿ ಪಂಡರಪುರದ ಅಂಗಡಿಬೀದಿಯಲ್ಲಿ ಮಾರಿ ಅದನ್ನೇ ವೆಚ್ಚಕ್ಕೆ ಮಾಡಿಕೊಳ್ಳುವೆನು–ಎಂದು ಕೊಡಲಿಯನ್ನೂ ಹಗ್ಗವನ್ನೂ ತೆಗೆದುಕೊಂಡು ಪಂಡರಪುರಕ್ಕೆ ಹೊರಟನು. ಕಾಲಿಗೆ ಪಾದರಕ್ಷೆಯು ಇಲ್ಲ; ವಸ್ತ್ರಗಳೂ ಅತಿಜೀರ್ಣವಾದವುಗಳು. ಇಂತಹ ವಸ್ತ್ರವನ್ನೇ ತಲೆಗೆ ಸುತ್ತಿಕೊಂಡು ಶ್ರೀಹರಿಯ ಭಜನೆಯಂ ಮಾಡುತ ನಡೆದನು. ಮನೆಯಲ್ಲಿದ್ದ ಧನಸಂಪತ್ತು ಹೋದುದರಿಂದ, ಸ್ವಾಮಿಯು ಬಲೆಯಂ ಪರಿಹರಿಸಿ ಪ್ರಪಂಚದ ಮಾರ್ಗವನ್ನು ತಪ್ಪಿಸಿದನೆಂದು ಮನಸ್ಸಿಗೆ ಸಮಾಧಾನಮಾಡಿಕೊಂಡು ಇದ್ದನು. ಮೋಡವೆಲ್ಲವೂ ತೆಗೆದುಹೋಗಲು, ಆಕಾಶವು ಎಂತು ನಿರ್ಮಲವಾಗಿ ಕಾಣಿಸುವುದೋ, ಅಧಿಕವಾಗಿ ಹೆಚ್ಚಿಬಂದ ಪ್ರವಾಹವು ಇಳಿದುಹೋಗಲು, ಗಂಗಾನದಿಯು ಎಂತು ನಿರ್ಮಲವಾಗಿ ಕಾಣುವುದೋ ಅಂತು ಸಂಪತ್ತೆಲ್ಲವೂ ಹೋದುದರಿಂದ ಬೋಧಲನ ಮನಸ್ಸು ನಿರ್ಮಲವಾಯಿತು. ಪ್ರೇಮಭರಿತವಾದ ಹೃದಯವುಳ್ಳವನಾಗಿ ಭಗವದ್ಭಜನೆಯಂ ಮಾಡುತ ನಡೆದನು. ಪಂಡರಪುರವು ಸಮೀಪವಾಗಲು, ಅಲ್ಲಿ ಒಂದು ಸೌದೆಹೊರೆಯಂ ಕಟ್ಟಿ ತಲೆಯಮೇಲೆ ಹೊತ್ತುಕೊಂಡು ಬಂದು ಕ್ರಯಕ್ಕೆ ಮಾರಲು, ಮೂರುದುಡ್ಡು ಬಂದುದು. ಚಿತ್ತದಲ್ಲಿ ಅನುತಾಪವುಳ್ಳವನಾಗಿ ಚಂದ್ರಭಾಗೆಯಲ್ಲಿ ಸ್ನಾನವಂ ಮಾಡುವಾಗ ಸಂಕಲ್ಪವಂ ಹೇಳಿದ ಬ್ರಾಹ್ಮಣನಿಗೆ ಒಂದುದುಡ್ಡನ್ನು ದಕ್ಷಿಣೆಯನ್ನಾಗಿ ಕೊಟ್ಟನು. ಒಂದುದುಡ್ಡಿಗೆ ಗಂಧದ ಹುಡಿಯನ್ನೂ ಹೂವಿನಹಾರವನ್ನೂ ತೆಗೆದುಕೊಂಡುಹೋಗಿ ಭಕ್ತಿಯಿಂದ ಮೇಘಶ್ಯಾಮನಂ ಪೂಜಿಸಿದನು. ರಾತ್ರಿ ಹರಿಕೀರ್ತನವಂ ಕೇಳುತ ನಾಲ್ಕುಜಾವವೂ ಜಾಗರಣೆಯಂ ಮಾಡಿ ದ್ವಾದಶಿಯದಿನ ಸ್ನಾನವಂ ಮಾಡಿ-ಬ್ರಾಹ್ಮಣರಿಗೆ ಭೋಜನಸಾಮಗ್ರಿಯನ್ನು ಕೊಡಲು ಅನುಕೂಲತೆ ಇಲ್ಲವಲ್ಲಾ-ಎಂದು ಮನದಲ್ಲಿ ವ್ಯಾಕುಲನಾಗಿ ಮೂರುಕಾಸನ್ನು ಕೊಟ್ಟು ಅರೆಸೇರುಹಿಟ್ಟನ್ನು ತೆಗೆದುಕೊಂಡು ತನ್ನ ಹರಿಕುಬಟ್ಟೆಯಲ್ಲಿ ಕಟ್ಟಿ ಚಂದ್ರಭಾಗೆಯ ತೀರದಲ್ಲಿ ಕುಳಿತುಕೊಂಡು-ಯಾರಾದರೂ ಒಬ್ಬ ಬ್ರಾಹ್ಮಣರು ದೊರತರೆ, ನಾನೇ ಪುಣ್ಯವಂತನು. ಬೇಳೆಯೂ ಉಪ್ಪೂ ಇಲ್ಲ. ಈ ದರಿದ್ರನ ಅನ್ನವನ್ನು ಯಾರು ಅಂಗೀಕರಿಸುವರು ? ಯಾತ್ರೆಗೆ ದೊಡ್ಡದೊಡ್ಡವರು ಬಂದು ಸಮಾರಾಧನೆಯಂ ಮಾಡುತಿರುವರು. ದಿವ್ಯಮಂದಿರದಲ್ಲಿ ಭೋಜನವನ್ನು ಮಾಡುವ

ವರು ಮಜ್ಜಿಗೆಯನ್ನು ಎಂತು ಬೇಡರೋ, ಅಂತು ದೊಡ್ಡದೊಡ್ಡ ಗೃಹಸ್ಥರಂ ಬಿಟ್ಟು
ನನ್ನ ಬಳಿಯ ಹಿಟ್ಟನ್ನು ಯಾರು ತೆಗೆದುಕೊಳ್ಳುವರು ?—ಎಂದು ಚಿಂತಾಕ್ರಾಂತನಾಗಿ
ಶ್ರೀಹರಿಯ ಭಜನೆಯಂ ಮಾಡುತಿರಲು, ಭಕ್ತವತ್ಸಲನೂ ದೀನದಯಾಳುವೂ ಆದ
ಪಂಢರೀನಾಥನು ಬೋಧಲನ ಶುದ್ಧಭಾವವಂ ನೋಡಿ ವೃದ್ಧಬ್ರಾಹ್ಮಣನಾಗಿ ಕೈಯಲ್ಲಿ
ಕೋಲನ್ನು ಹಿಡಿದು ತಲೆಗೆ ಟೊಪ್ಪಿಗೆಯಂ ಹಾಕಿಕೊಂಡು ಜೀರ್ಣವಸ್ತ್ರವನ್ನು
ಉಟ್ಟುಕೊಂಡು ನಗುತ ಬೋಧಲನನ್ನು ಕುರಿತು-ನೀನು ಪುರಾತನನಾದ ಯಜಮಾ
ನನು. ನಾನು ಪಂಢರೀಕ್ಷೇತ್ರದಲ್ಲಿ ಇದ್ದುಕೊಂಡು ನಿನಗೆ ಆಶೀರ್ವಾದವನ್ನು ಮಾಡು
ತಿರುವೆನು. ಬ್ರಾಹ್ಮಣರು ಅನೇಕರಿರುವರು. ಅವರಿಗೆ ಯಜಮಾನರೂ ದೊಡ್ಡ
ವರನೇಕರಿರುವರು. ಬಡವನಾದ ನನ್ನನ್ನು ಯಾರೂ ಕೇಳುವರಿಲ್ಲ, ಆದುದ
ರಿಂದ ಹಸಿವುಗೊಂಡು ನಿನ್ನ ದರ್ಶನಕ್ಕೆ ಬಂದೆನು. ಏನಾದರೂ ಸಾಮಗ್ರಿಯಿದ್ದರೆ
ಬೇಗನೆ ನನಗೆ ಕೊಡು—ಎನಲು, ಬೋಧಲನು ಆ ಬ್ರಾಹ್ಮಣನ ವಚನವಂ ಕೇಳಿ
ಸಮಾಧಾನಗೊಂಡು, ಕೃಪಾಳುವಾದ ಜಗನ್ನಾಥನು ನನಗೆ ಪ್ರಸನ್ನನಾದನು—ಎಂದು
ತನ್ನ ಬಟ್ಟೆಯ ಗಂಟನ್ನು ಬಿಚ್ಚಿ ಹಿಟ್ಟನ್ನು ಆತನ ಉಡಿಯಲ್ಲಿ ಹಾಕಿ ಮನ
ಸ್ಸಿನಲ್ಲಿ ಸಂಕೋಚವಂ ಮಾಡಿಕೊಂಡು-ಸ್ವಾಮಿ! ಇದು ಬರೀಹಿಟ್ಟು. ಬೇಳೆ
ಯನ್ನೂ ಉಪ್ಪನ್ನೂ ಕೊಡುವುದಕ್ಕೆ ಅನುಕೂಲ್ಯವಿಲ್ಲ-ಎನಲು, ವೈಕುಂಠನಾಯ
ಕನು ಆ ಮಾತಂ ಕೇಳಿ—ಸಮಯದಲ್ಲಿ ಅನುಕೂಲವಾದುದನ್ನು ನೀನು ಕೊಟ್ಟೆ.
ನನಗೆ ಬೇಳೆಯೂ ಉಪ್ಪೂ ಬೇಕಾಗಿಲ್ಲ-ಎಂದನು. ಬೋಧಲನ ಮನಸ್ಸಿನಲ್ಲಿ ಆ
ಬ್ರಾಹ್ಮಣನು ತನ್ನ ಇದುರಿಗೆ ಭೋಜನವಂ ಮಾಡಬೇಕೆಂಬುದು ಇದ್ದಿತು. ಪಂಢ
ರೀನಾಥನು ಆ ಭಾವವಂ ತಿಳಿದು-ನಾವು ದೇವಸ್ಥಾನದಲ್ಲಿಯೇ ಬೀಡನ್ನು ಮಾಡಿ
ಕೊಂಡಿರುವೆವು. ಅಲ್ಲಿ ಅಡಿಗೆಯನ್ನು ಮಾಡುವುದಕ್ಕೆ ಸ್ಥಳವಿಲ್ಲ. ಕಾಡುಬೆರಣಿ
ಯನ್ನು ಆಯ್ದು ತಂದುಕೊಟ್ಟರೆ ಇಲ್ಲಿಯೇ ರೊಟ್ಟಿಯಂ ಮಾಡಿ ಭಕ್ಷಿಸುವೆನು—
ಎನಲು, ಅದಂ ಕೇಳಿದುದರಿಂದ ಬೋಧಲನ ಮನಸ್ಸಿಗೆ ಬಹುಸಂತೋಷವಾಯಿತು.
ನನ್ನ ಮನಸ್ಸಿನಲ್ಲಿ ಇದ್ದಂತೆ ಈ ಬ್ರಾಹ್ಮಣನು ಹೇಳಿದನೆಂದು ಉಲ್ಲಾಸಗೊಂಡು
ಕಾಡುಬೆರಣಿಯನ್ನು ಆಯ್ದು ಉಡಿಯಲ್ಲಿ ತೆಗೆದುಕೊಂಡುಬಂದನು. ಆಗ ಬ್ರಾಹ್ಮ
ಣನು ಸ್ನಾನವಂ ಮಾಡಿ ಆರ್ದ್ರವಾದ ಜೀರ್ಣವಸ್ತ್ರವನ್ನೇ ಉಟ್ಟುಕೊಂಡು ಬರಲು,
ಬೋಧಲನು ಜಾತ್ರಿಗರ ಬಳಿಗೆ ಹೋಗಿ ಬೆಂಕಿಯಂ ತಂದುಕೊಟ್ಟನು.

ಯಾವನ ಆಶ್ಚರ್ಯವ್ಯಾಪಾರವನ್ನು ನೋಡಿ ಮಹಾಲಕ್ಷ್ಮಿಯು ಪಾದಕ್ಕೆ ಎರಗಿ
ದಳೋ ಆ ವೈಕುಂಠವಾಸಿಯು ರೊಟ್ಟಿಗಳಂ ಮಾಡುತ ಕುಳಿತನು. ಋಷಿಗಳು
ಯಾವನಿಗೋಸ್ಕರ ವೇದಮಂತ್ರಗಳಿಂದ ಅವಧಾನವಂ ಕುಡುವರೋ ಆತನು
ಭಕ್ತನ ಸದ್ಭಾವಕ್ಕೆ ಮೆಚ್ಚಿ ಹಿಟ್ಟನ್ನು ನಾದುತಿದ್ದನು. ರುಕ್ಮಿಣಿಯು ಈವೃ
ತ್ತಾಂತವನ್ನು ತಿಳಿದು ವೃದ್ಧಸ್ತ್ರೀಯಾಗಿ ಥಟ್ಟನೆ ಆಸ್ಥಳಕ್ಕೆ ಬಂದಳು. ದೀಪಕ್ಕೆ

ತಕ್ಕಂತೆ ಪ್ರಕಾಶವು ಎಂತು ಉಂಟಾಗುವುದೋ, ಪುಷ್ಪಗಳಿಗೆ ತಕ್ಕಂತೆ ಪರಿಮಳವು ಎಂತು ನೆಲಸುವುದೋ, ಮೇಘಕ್ಕೆ ತಕ್ಕಂತೆ ಮಿಂಚು ಎಂತು ಶೋಭಿಸುವುದೋ, ಚಿತ್ರಕ್ಕೆ ತಕ್ಕಂತೆ ಬಣ್ಣವು ಎಂತು ಹತ್ತುವುದೋ, ಪ್ರಕೃತಿಗೆ ತಕ್ಕಂತೆ ಶರೀರವು ಎಂತು ಆಗುವುದೋ, ಬೀಜಕ್ಕೆ ತಕ್ಕಂತೆ ಬೆಳೆಯು ಎಂತಾಗುವುದೋ, ಋತುವಿಗೆ ತಕ್ಕಂತೆ ಆಕಾಶವು ಎಂತು ಇರುವುದೋ, ಪಾತ್ರಕ್ಕೆ ತಕ್ಕಂತೆ ನದಿಯು ಎಂತು ಹರಿಯುವುದೋ ಅಂತು ರುಕ್ಮಿಣಿಯು ತನ್ನಪತಿಗೆ ತಕ್ಕಂತೆ ರೂಪವನ್ನು ಧರಿಸಿದಳು. ಬಾಯಲ್ಲಿ ಹಲ್ಲುಗಳಿಲ್ಲ. ಕಿವಿಯಲ್ಲಿ ಓಲೆಯು, ಕೊರಲಲ್ಲಿ ಕರಿಯಮಣಿಯ ಸರವು; ಹಣೆಯಲ್ಲಿ ಕುಂಕುಮದ ಬಟ್ಟು ಶೋಭಿಸುತ್ತಿದ್ದುದು. ಜೀರ್ಣವಾದ ಬಿಳಿಯ ಸೀರೆಯನ್ನು ಉಟ್ಟುಕೊಂಡು ಕೈಯಲ್ಲಿ ಕೋಲನ್ನು ಹಿಡಿದು ಮೆಲ್ಲಮೆಲ್ಲನೆ ನಡೆಯುತ್ತ ಮಳಲೊಟ್ಟಿಗೆ ಬಂದು ಜಗಜ್ಜೀವನನ್ನು ಹುಡುಕುತಿದ್ದಳು. ಆಗ ಅಲ್ಲಿ ಸ್ವಾಮಿಯು ತಾಳಿಯನ್ನು ಹಾಕಿ ಹಿಟ್ಟನ್ನು ನಾದುತಿರಲು, ವಿಶ್ವಜನನಿಯು ಕಂಡು ನಕ್ಕು--ನಿಮ್ಮ ಗೃಹಸ್ಥನು ಯಾತ್ರೆಗೆ ಬಂದನೆಂದು ಆತನ ಬಳಿಗೆ ನೀವೊಬ್ಬರೇ ಬಂದಿರಿ. ನೀವು ಸ್ವಯಂಪಾಕಕ್ಕೆ ಹೊರಟು ನನ್ನನ್ನು ಬಿಟ್ಟು ಒಬ್ಬರೇ ಭೋಜನವಂ ಮಾಡಬೇಕೆಂದು ಇದ್ದಿರಿ. ನಾನು ಮುತ್ತೈದೆ, ಭೋಜನಕ್ಕೆ ಬಂದೆನು--ಎಂದಳು. ಆ ಮಾತಂ ಕೇಳಲು ಬೋಧಲನಿಗೆ ಸಂತೋಷವಾಯಿತು. ಆಗ ರುಕ್ಮಿಣಿಯು ಪತಿಯಂ ಕುರಿತು-ಸ್ವಾಮಿ! ನಾನೇ ಅಡಿಗೆಯಂ ಮಾಡುವೆನು-ಎಂದು ಹೇಳಿ ಬೇಗನೆ ಸ್ನಾನವಂ-ಮಾಡಿ ಸಮೀಪದಲ್ಲಿ ಬಂದು ಕುಳಿತುಕೊಂಡಳು. ಹಿಟ್ಟು ಸ್ವಲ್ಪವಾಗಿರುವುದರಿಂದ ಇವರಿಬ್ಬರಿಗೆ ಎಂತು ಸಾಲುವುದು ?-ಎಂದು ಬೋಧಲನು ಮನದಲ್ಲಿ ಸಂಕೋಚಪಡುತಿದ್ದನು.

ಅನಂತಶಕ್ತಿಗಳಿಗೆ ಒಡತಿಯಾದವಳು ಎಲ್ಲಿ ಇರುವಳೋ ಅಲ್ಲಿ ಸಕಲಸಿದ್ಧಿಗಳೂ ನೆಲೆಗೊಂಡಿರುವುವು. ಆಕೆಯ ಹಸ್ತಸ್ಪರ್ಶದಿಂದ ಅನ್ನವು ಅಭಿವೃದ್ಧಿಯನ್ನು ಹೊಂದಿತು. ಘಟದಲ್ಲಿ ಭಾಗೀರಥಿಯೇ ಬಂದು ಕುಳಿತುಕೊಳ್ಳಲು, ಉದಕವು ಎಂದಿಗೂ ಎಂತು ಮುಗಿಯದೋ, ಕಾಮಧೇನುವಿನ ತೋಟದಲ್ಲಿ ಮೇವು ಎಂತು ಕಡಿಮೆ ಬೀಳದೋ, ಭೂದೇವಿಯ ಮದುವೆಯಲ್ಲಿ ಸ್ಥಳಸಂಕೋಚವು ಎಂತು ಆಗಲಾರದೋ ಅಂತು ಜಗಜ್ಜನನಿಯಾದ ರುಕ್ಮಿಣಿಯು ಇದ್ದೆಡೆಯಲ್ಲಿ ಎಂದಿಗೂ ಏನೂ ಕಡಿಮೆಯಾಗಲಾರದು. ಪಕ್ವಾನ್ನವನೇನನಾದರೂ ಮಾಡಿದರೆ ಬೋಧಲನ ಮನಸ್ಸಿನಲ್ಲಿ ಬೇರೆ ಎಣಿಕೆಯುಂಟಾದೀತೆಂದು ರೊಟ್ಟಿಗಳನ್ನೇ ಅಮೃತಕ್ಕಿಂತಲೂ ಬಹುರಸಭರಿತವಾದವುಗಳನ್ನಾಗಿ ಮಾಡಿದಳು.

ಬಳಿಕ ಸ್ವಾಮಿಯು ಮೂರೆಲೆಗಳನ್ನು ಹಾಕಿ ಭಕ್ತನಂ ಕುರಿತು_ನೀನು ಈಗಲೇ ಪಙ್ಕ್ತಿಯಲ್ಲಿ ಪ್ರಸಾದವನ್ನು ತೆಗೆದುಕೊಳ್ಳಬೇಕು--ಎನಲು, ಆತನು_ಈಗಲೇ ನಾನು ಕುಳಿತುಕೊಳ್ಳುವುದಿಲ್ಲ. ನಿಮ್ಮಿಬ್ಬರ ಭೋಜನವಾದ ಬಳಿಕ ಉಚ್ಛಿಷ್ಟ

ಪಾತ್ರವನ್ನು ನನಗೆ ಕೊಡಬೇಕು-ಎಂದನು. ಆ ಮಾತಿಗೆ ಹೃಷೀಕೇಶನು ಅವಶ್ಯವಾಗ ಲೆಂದು ಭೋಜನಕ್ಕೆ ಕುಳಿತನು. ಆಗ ದೇವತೆಗಳು ಆಕಾಶದಲ್ಲಿ ಬಂದು ನೋಡು ತಿದ್ದರು. ಅದು ಇತರಜನದ ಕಣ್ಣಿಗೆ ಕಾಣದು. ದೇವತೆಗಳು ಸ್ವಾಮಿಯನ್ನು ಕುರಿತು--ಭಕ್ತವತ್ಸಲನೇ ! ಜಗನ್ನಾಥನೆ! ನಾವು ನಾನಾಪ್ರಯತ್ನಗಳನ್ನು ಮಾಡಿ ದರೂ ಅಮೃತಪಾನವನ್ನು ಮಾಡೆ. ಬೋಧಲನ ಭಕ್ತಿಯನ್ನು ನೋಡಿ ಕದನ್ನವನ್ನು ಪ್ರೀತಿಯಿಂದ ಭಕ್ಷಿಸುತ್ತಿರುವೆ-ಎನುತಿದ್ದರು. ಇತ್ತಲು, ಬ್ರಾಹ್ಮಣನೂ ಮುತ್ತೈ ದೆಯೂ ಭೋಜನವಂ ಮಾಡಿ ಬೋಧಲನಿಗೆ ಉಚ್ಛಿಷ್ಟಪಾತ್ರಗಳಂ ಕೊಟ್ಟು ರೆಪ್ಪೆ ಬಡಿಯುವಷ್ಟರಲ್ಲಿ ಅದೃಶ್ಯರಾದರು.

ಆಗ ಬೋಧಲನು-ಚಕ್ರಪಾಣಿಯು ಲಕ್ಷ್ಮೀಸಮೇತನಾಗಿ ವಿಪ್ರವೇಷದಿಂದ ಬಂದು ನನಗೆ ಸಮಾಧಾನವಂ ಮಾಡಿ ಅದೃಶ್ಯನಾದನು--ಎಂದು ಮನದಲ್ಲಿ ಬಗೆದು ಪಾತ್ರೆಯಲ್ಲಿ ಉಳಿದಿದ್ದ ಪ್ರಸಾದವನ್ನು ಪ್ರೀತಿಯಿಂದ ಭಕ್ಷಿಸಿ ದೇವಾಲಯಕ್ಕೆ ಹೋಗಿ ದೇವನಂ ಕುರಿತು--ಭಕ್ತವತ್ಸಲನೆ! ಜಗಜ್ಜೀವನನೆ! ಇಂದು ನಿನ್ನ ಮನಸ್ಸಿಗೆ ಕದನ್ನವು ಇಷ್ಟವಾಯಿತೆ ? ದೊಡ್ಡದೊಡ್ಡ ಸಮಾರಾಧನೆಗಳನ್ನು ಬಿಟ್ಟು ದೀನನಾದ ನನ್ನನ್ನು ಕೃಪೆಯಿಂದ ಅನುಗ್ರಹಿಸಿದೆ-ಎನಲು, ಆ ಮಾತಿಗೆ ರುಕ್ಮಿಣೀರಮಣನು-ಬ್ರಾಹ್ಮಣರಿಗೆ ನಾನಾಪಕ್ವಾನ್ನಗಳನ್ನು ಬಡಿಸುತ್ತಿರುವರು. ಅಲ್ಲಿಗೆ ಹೋದರೆ ನನಗೆ ಯಾರೂ ಅನ್ನ ವನ್ನು ಹಾಕರು. ನಾಳೆ ನಿನಗೆ ಕೌತುಕವಂ ತೋರಿಸುವೆನು-ಎಂದನು.

ಅಲ್ಲಿ ಒಬ್ಬ ಧನಿಕನು ಸಹಸ್ರಬ್ರಾಹ್ಮಣಸಂತರ್ಪಣೆಯ ಪ್ರಯತ್ನವಂ ಮಾಡಿ ಸಾಹಿತ್ಯವೆಲ್ಲವನ್ನೂ ಸಿದ್ಧಮಾಡಿ, ರಾತ್ರಿಯೆ ಬ್ರಾಹ್ಮಣರನ್ನು ಭೋಜನಕ್ಕೆ ಕರೆದು ಅವರೆಲ್ಲರ ಹೆಸರನ್ನೂ ಪತ್ರಿಕೆಯಲ್ಲಿ ಬರೆದುಕೊಂಡು ಆ ಮಳಲೊಟ್ಟಿನಲ್ಲಿ ತೆರೆಗ ಳನ್ನು ಕಟ್ಟಿಸಿ ಮರುದಿವಸ ಸ್ವಯಂಪಾಕವಂ ಮಾಡಿಸಿ ಕಾದುಕೊಂಡಿರಲು, ಬ್ರಾಹ್ಮ ಣರೆಲ್ಲರೂ ಬಂದು ಕುಳಿತರು. ಪತ್ರಿಕೆಯಲ್ಲಿ ಬರೆದಿದ್ದುದನ್ನು ನೋಡಲು, ಸಹ ಸ್ರಸಂಖ್ಯೆ ಸರಿಯಾಗಿದ್ದಿತು. ಬಳಿಕ ಅಧೋಕ್ಷಜನು ವೃದ್ಧಬ್ರಾಹ್ಮಣನಾಗಿ ಜೀರ್ಣ ವಸ್ತ್ರವಂ ಹೊದೆದು ಕೈಯಲ್ಲಿ ಕೋಲನ್ನು ಹಿಡಿದು, ತಲೆಯು ನಡುಗುತಿರಲು, ನಡೆದುಬಂದು ಬೋಧಲನನ್ನು ಕುರಿತು--ನೀನು ದೂರದಿಂದ ಕೌತುಕವಂ ನೋಡು ತಿರು--ಎಂದು ಹೇಳಿ ಆ ಧನಿಕನ ಸಮೀಪಕ್ಕೆ ಹೋಗಿ--ನಾನು ಹಸಿವುಗೊಂಡಿ ರುವೆನು. ಪಕ್ವಾನ್ನವನ್ನು ಅಪೇಕ್ಷಿಸುವೆನು-ಎನಲು, ಅವನು ಇಲ್ಲಿ ಅನುಕೂಲಿ ಸುವುದಿಲ್ಲ. ಹಿಂದಿರುಗಿ ಹೋಗಬೇಕು-ಎಂದನು. ಲಕ್ಷ್ಮೀಪತಿಯು ಆ ಮಾತಂ ಕೇಳಿ-ಸಹಸ್ರ ಬ್ರಾಹ್ಮಣರು ಕುಳಿತಿರುವಾಗ ಒಬ್ಬ ಅತಿಥಿಯನ್ನು ಹಿಂತಿರುಗಿಸಬೇಕೇ- ಎನಲು, ಆ ಧನಿಕನು, ಕರೆದಿರುವ ಬ್ರಾಹ್ಮಣರೇ ಇರುವಾಗ ಅತಿಥಿಯ ಆವಶ್ಯಕತೆ ಯೇನು ? ಇಂತವರು ಅನೇಕರು ಬಂದಾರು. ನಾವು ಅನ್ನವನ್ನು ಎಲ್ಲಿಂದ ತಂದು ಪೂರೈಸಬೇಕು ?-ಎಂದನು ಬಳಿಕ ಜಗನ್ನಾಥನು ಬಲಾತ್ಕಾರದಿಂದ ಎಲೆಯ ಮುಂದೆ

ಹೋಗಿ ಕುಳಿತನು. ಆಗ ಧನಿಕನು ಸೇವಕರಂ ಕರೆದು ಈ ಬ್ರಾಹ್ಮಣನನ್ನು ಎತ್ತಿ ಹೊರಗೆ ಹಾಕಿಬಿಡಿ—ಎನಲು, ಅವರು ವಿಚಾರವೇನನೂ ಮಾಡದೆ ವೈಕುಂಠನಾಯಕನನ್ನು ಎಬ್ಬಿಸಿದರು. ಬೋಧಲನು ನೋಡಿ ಆಶ್ಚರ್ಯಪಡುತಿದ್ದನು. ಕೆಲವರು ಕೈಕಾಲ್ಗಳನ್ನು ಹಿಡಿದರು. ಕೆಲವರು ಜುಟ್ಟನ್ನು ಹಿಡಿದೆಳೆದರು. ಈ ಬ್ರಾಹ್ಮಣನು ತುಂಟನು; ಬಲಾತ್ಕಾರದಿಂದ ಎಲೆಯ ಮುಂದೆ ಬಂದು ಕುಳಿತುಕೊಂಡಿರುವನು—ಎನ್ನುತ್ತ ಎತ್ತಿ ಹೊರಗೆ ತಂದುಹಾಕಿದರು. ಜಗಜ್ಜೀವನನು ಮತ್ತೆ ಉತ್ತರಿಸಿಕೊಂಡು ಬಂದು ನಿಂತನು. ಆಗ ತುಪ್ಪವಂ ಬಡಿಸಿದುದೂ ಆಯಿತು. ಪುರೋಹಿತನು ಬಂದು, "ಏಕೋವಿಷ್ಣುಃ" ಎಂದು ಮಂತ್ರವನ್ನು ನುಡಿದು ಆಪೋಶನವಂ ಹಾಕಲು, ಬ್ರಾಹ್ಮಣರೆಲ್ಲರೂ ಆಪೋಶನವಂ ತೆಗೆದುಕೊಂಡು ಭೋಜನಕ್ಕೆ ಕುಳಿತರು. ವೈಕುಂಠವಿಹಾರಿಯು ಅದನ್ನು ನೋಡಿ ಹಿಂತಿರುಗಿ ನಡೆದನು.

ಪ್ರಾಣವು ದೇಹವನ್ನು ಬಿಟ್ಟು ಹೊರಟುಹೋಗಲು, ಬಳಿಕ ದೇಹಕ್ಕೆ ವಿಪತ್ತಿಯು ಎಂತು ಉಂಟಾಗುವುದೋ ಅಂತು ರುಕ್ಮಿಣೀಕಾಂತನು ವಿಮುಖನಾಗಲು, ಅತಿಶಯಿತವಾದ ವಿಘ್ನವುಂಟಾಯಿತು:—ಅಧಿಕವಾದ ಬಿರುಗಾಳಿಯು ಬೀಸಿತು. ಅದರಿಂದ ಧೂಳಿಯು ಆಕಾಶದಲ್ಲಿ ಎಲ್ಲಿಯೂ ಆವರಿಸಿತು. ಊಟದ ಎಲೆಗಳಲ್ಲಿ ಮಣ್ಣು ತುಂಬಿತು. ಮತ್ತು ಎಲೆಗಳು ನಾಲ್ಕುಕಡೆಗೂ ಹಾರಿಹೋದುವು. ಕಟ್ಟಿದ್ದ ತೆರೆಗಳೆಲ್ಲವೂ ಕಸಿದುಕೊಂಡು ಬಿದ್ದುವು. ಇಂತು ಅನರ್ಥವಾಗಲು, ಬ್ರಾಹ್ಮಣರೆಲ್ಲರೂ ಎದ್ದು ಹೋದರು.

ಬೋಧಲನು ಅದನೆಲ್ಲವನ್ನೂ ನೋಡಿ ಆಶ್ಚರ್ಯಗೊಂಡು ರುಕ್ಮಿಣೀಕಾಂತನೊಬ್ಬನು ವಿಮುಖನಾದುದರಿಂದ ಸಮಸ್ತಬ್ರಾಹ್ಮಣರೂ ವಿಮುಖರಾಗಿ ಉಪವಾಸದಿಂದ ಎದ್ದರು. ಮರವನ್ನು ಬೇರೊಡನೆ ಕಡಿಯಲು ಕಾಜೆಗಳು ನಿಲ್ಲುವುವೆ? ಬ್ರಾಹ್ಮಣರ ಮುಖದಿಂದ ಭೋಜನವಂಮಾಡುವ ನೀಲಮೇಘಶ್ಯಾಮನು ವಿಮುಖನಾಗಲು, ಬ್ರಾಹ್ಮಣರು ಇಲ್ಲಿ ನಿಲ್ಲದೆಯೇ ಹೊರಟರು-ಎಂದನು. ತತ್ಕಾಲದಲ್ಲಿಯೇ ಇಂತು ಮಹಾವಿಘ್ನವು ಸಂಭವಿಸಿತು.

ಬಳಿಕ ಸ್ವಾಮಿಯು ಬೋಧಲನನ್ನು ಕುರಿತು ಜನಗಳೆಲ್ಲರೂ ಇಂತು ದಾಂಭಿಕರಾಗಿರುವರು. ನಿನ್ನ ಶುದ್ಧಭಾವವನ್ನು ನೋಡಿದ ನನಗೆ ಕದನ್ನವೇ ಸರಿಯಾಗಿದ್ದುದು. ನಾನು ದುರ್ಯೋಧನನ ಮನೆಯನ್ನು ಬಿಟ್ಟು ವಿದುರನ ಮನೆಯಲ್ಲಿ ನುಚ್ಚನ್ನೇ ಭಕ್ಷಿಸಿದೆನು. ದ್ರೌಪದಿಯ ಮನೆಯಲ್ಲಿ ಅರ್ಧರಾತ್ರಿವೇಳೆಯಲ್ಲಿ ಶಾಕದ ಸೊಪ್ಪನ್ನು ಬಯಸಿದೆನು. ಗೋಪಾಲಕರ ಉಚ್ಛಿಷ್ಟವನ್ನು ನಾನು ಪ್ರೀತಿಯಿಂದ ಭಕ್ಷಿಸಿದೆನು. ಋಷಿಪತ್ನಿಯರು ತಂದ ಅನ್ನವನ್ನು ಬಹುರುಚಿಯಾಗಿ ಉಂಡೆನು. ಗೋಪಾಲಕರು ಅಗಿದು ಹಾಕಿದ ಕಬಳವು ನನಗೆ ಅತ್ಯಂತನಿರ್ಮಲವಾಗಿ ತೋರಿತು—ಎಂದು ನುಡಿಯಲು, ಬೋಧಲನು ಅತ್ಯಂತಸಂತುಷ್ಟನಾಗಿ, ಜಗನ್ನಾಥನೆ!

ನಿನ್ನ ಪಾರವು ಯಾರಿಗೂ ತಿಳಿಯದು-ಎಂದು ನುಡಿದು, ಸ್ವಾಮಿಯ ಅಪ್ಪಣೆಯಂ ತೆಗೆದುಕೊಂಡು ಅಲ್ಲಿಂದ ಧಾಮಣಗಾವಿಗೆ ಹೊರಟನು.

ಮಾರ್ಗದಲ್ಲಿ ಬರುವಾಗ ಹಾಳಾದ ಒಂದು ಅರಣ್ಯವು ಸಿಕ್ಕಿತು. ಅಲ್ಲಿ ಹಸಿವೂ ನೀರಡಿಕೆಯೂ ಬಹುವಾಗಿ ಬಾಧಿಸುತಬಂದಿತು. ಸಮೀಪದಲ್ಲಿ ಊರಾವುದೂ ಕಾಣಲಿಲ್ಲ. ಆಗ ಜಗಜ್ಜೀವನನು ಪ್ರಸನ್ನನಾಗಿ ತನ್ನ ದಾಸನ ಹೃದಯವಂ ತಿಳಿದು ಮಾರ್ಗದಲ್ಲಿ ಸಂಕಲ್ಪಮಾತ್ರದಿಂದಲೇ ಪಥಿಕರಿಗೆ ವಿಶ್ರಾಂತಿಯುಂಟಾಗುವಂತೆ ಒಂದು ತೋಟವನ್ನು ನಿರ್ಮಿಸಿ, ತಾನು ತೋಟದವನಾಗಿ, ತನ್ನಮಡದಿ ರುಕ್ಮಿಣಿ ಕಪಿಲೆಯ ನೀರನೆತ್ತುತಿರಲು, ತಾನು ಭಕ್ತನ ಆಗಮನವನ್ನು ನಿರೀಕ್ಷಿಸುತ್ತಿದ್ದನು.

ಬೋಧಲನು ಆ ತೋಟವನ್ನು ಕಂಡು ಅದರೊಳಗೆ ಹೋಗಬೇಕೆಂಬ ಇಚ್ಛೆಯೇ ಇಲ್ಲದೆ ಶೀತೋಷ್ಣವನ್ನೂ ಸುಖದುಃಖವನ್ನೂ ಸಮವಾಗಿ ತಿಳಿದು ಭಜನೆಮಾಡುತ್ತಿದ್ದನು. ಆಗ ರುಕ್ಮಿಣೀದೇವಿಯು ಗೂಡೆಯಲ್ಲಿ ಭಕ್ಷ್ಯವನ್ನೂ ಮಜ್ಜಿಗೆಯನ್ನೂ ಇರಿಸಿಕೊಂಡು ಕಂದಮೂಲಗಳನ್ನು ಕೈಯಲ್ಲಿ ತೆಗೆದುಕೊಂಡು ಇದಿರಲ್ಲಿ ಬಂದು-ನೀನು ನಮ್ಮ ತೋಟವನ್ನು ಬಿಟ್ಟುಹೋಗುವೆ. ನಮ್ಮ ಯಜಮಾನರು ನಿನ್ನನ್ನು ದೂರದಿಂದಲೇ ನೋಡಿ ನಿನ್ನ ಆಗಮನವನ್ನೇ ನೋಡುತ್ತ ಕುಳಿತಿರುವರು. ಪಂಡರಿಯ ಜಾತ್ರಿಗನಾದ ನೀನು ಬಂದು ನಮ್ಮ ಆಶ್ರಮವಂ ಪವಿತ್ರವನ್ನಾಗಿಮಾಡು. ಹಸಿವುಬಾಯಾರಿಕೆಗಳಿದ್ದರೆ ಮನಸ್ಸಿನಲ್ಲಿ ಸಂಕೋಚಪಡಬೇಡ-ಎಂದು ನುಡಿಯಲು, ಬೋಧಲನು ಈ ಸ್ಥಳದಲ್ಲಿ ತೋಟವಿರಲಿಲ್ಲ. ಈಗ ಇದೆಂತು ಕಾಣಿಸಿತು ?-ಎಂದು ವಿಸ್ಮಿತನಾಗಿ ತೋಟವಂ ಪೊಕ್ಕು ಒಂದುಕ್ಷಣ ವಿಶ್ರಾಂತಿಗೊಂಡು ಸ್ವಲ್ಪ ಕಂದಮೂಲಫಲವನ್ನು ಭಕ್ಷಿಸಿ ಅಲ್ಲಿಂದ ಸ್ವಲ್ಪದೂರ ಹೊರಟು ಹಿಂತಿರುಗಿ ನೋಡಲು, ತೋಟವದು ಕಾಣಲಿಲ್ಲ. ಆಗ–ಇವನು ಬಹುವಾಗಿ ಹಸಿವುಗೊಂಡಿರುವನೆಂದು ಪಂಡರೀನಾಥನು ಮಾಯೆಯಿಂದ ರಚಿಸಿದನು–ಎಂದು ತಿಳಿದು ತನ್ನಮನೆಯಂ ಸೇರಿ ಮಡದಿಯೊಡನೆ ನಡೆದ ವೃತ್ತಾಂತವೆಲ್ಲವನ್ನೂ ಹೇಳಿದನು.

ಬಳಿಕ ಒಂದುದಿನ ಬೋಧಲನು ತನ್ನ ಹೊಲದಲ್ಲಿ ಕಾವಲಿರುತ್ತ ಹೃದಯದಲ್ಲಿ ಪಾಂಡುರಂಗಮೂರ್ತಿಯನ್ನು ಧ್ಯಾನಿಸಿ ತನ್ನಾಮಸಂಕೀರ್ತನೆಯಂ ಮಾಡುತ್ತ ಕುಳಿತುಕೊಂಡಿದ್ದನು. ಆಗ ಪಕ್ಷಿಗಳು ತೆನೆಮೇಲೆ ಬಂದು ಕುಳಿತುಕೊಳ್ಳಲು, ಅವುಗಳನ್ನು ಹಾರಿಸುವುದಕ್ಕೋಸ್ಕರ ಕವಣೆಯಂ ತೆಗೆದುಕೊಂಡು ಅಷ್ಟರಲ್ಲಿ ಕರುಣಾರ್ದ್ರಚಿತ್ತನಾಗಿ–ಇನ್ನುಮೇಲೆ ಪಕ್ಷಿಗಳನ್ನು ಏಕೆ ಹಾರಿಸಬೇಕು ? ಇವುಗಳ ಆತ್ಮಕ್ಕೆ ದುಃಖವಾಗುವುದು. ಯಾರ ಅನ್ನವು ಎಲ್ಲಿರುವುದೋ ! ಇವು ಕ್ಷೇತ್ರದಲ್ಲಿ ಅಲ್ಲಲ್ಲಿ ಭಕ್ಷಿಸಲಿ. ಶ್ರೀರುಕ್ಮಿಣೀಕಾಂತನು ಸರ್ವಭೂತಗಳಲ್ಲಿಯೂ ಇರುವನೆಂದು ಪುರಾತನರಾದ ಸಂತರು ಹೇಳಿರುವರು–ಎಂದು ಬಗೆದು ಬಳಿಕ ಕವಣೆಯನ್ನು ಬಿಸುಟ್ಟು ಭಗವನ್ನಾಮಸಂಕೀರ್ತನೆಯಲ್ಲಿಯೇ ಆಸಕ್ತನಾಗಿದ್ದನು.

ಆಗ ಆತನ ಮಡದಿಯು ಗೂಡೆಯಲ್ಲಿ ರೊಟ್ಟಿಗಳನಿರಿಸಿಕೊಂಡು ಬಂದು ಭೋಜನಕ್ಕೆ ಬಡಿಸಿ ಬಳಿಕ ಪತಿಯನ್ನು ಕುರಿತು-ನೀವು ಯಾಚಕರಿಗೆ ತೆನೆಗಳನ್ನು ಕೊಡುವಿರಿ. ಮುಂದೆ ನಮ್ಮಗತಿ ಎಂತು ? ಅರಮನೆಯ ಕಂದಾಯದ ಹಣವು ಎಂತು ತೀರಬೇಕು ? ನಮ್ಮ ಹೊಟ್ಟೆಗೂ ಧಾನ್ಯವು ಬೇಕಾಗುವುದು. ಆದುದರಿಂದ ಇನ್ನು ಮೇಲೆ ನನ್ನ ಒಂದು ಮಾತನ್ನು ಚಿತ್ತದಲ್ಲಿಡಬೇಕು. ಒಂದು ತೆನೆಯನ್ನೂ ಯಾರಿಗೂ ಕೊಡಕೂಡದು. ಈವಿಷಯದಲ್ಲಿ ವಿಟ್ಠಲನ ಆಣೆ-ಎಂದು ನುಡಿದು ಮನೆಗೆ ಹೊರಟು ಹೋದಳು.

ಬಳಿಕ ಬೋಧಲನು ಆನಂದದಿಂದ ಕೀರ್ತನವಂ ಮಾಡುತಿದ್ದನು. ಆಗ ಪಂಢರಪುರಕ್ಕೆ ಹೋಗುವ ಜಾತ್ರಿಗರು ಬೋಧಲನಂ ಕಂಡು ಸಂತೋಷಪಟ್ಟರು. ಬೋಧಲನು ಅವರಿಗೆ ಸಾಷ್ಟಾಂಗನಮಸ್ಕಾರವಂ ಮಾಡಿದನು. ಅವರು-ಈತನ ಹೃದಯವು ಬಹುಕೋಮಲವಾದುದು-ಎಂದು ಮಾತನಾಡುತ್ತ ಬೋಧಲನಂ ಕುರಿತು-ಎಲೈ ವಿಷ್ಣುಭಕ್ತನೆ! ನೀನು ದುರ್ಭಿಕ್ಷದಲ್ಲಿ ನಮಗೆ ಅನ್ನವಂ ಕೊಟ್ಟವನು. ಈಗ ಹಸಿವು ಆಗುವುದು. ನಾಲ್ಕುತೆನೆಗಳಂ ಕೊಟ್ಟರೆ ಬಹುವಾಗಿ ಸಂತೋಷಿಸುವೆವು-ಎನಲು, ಬೋಧಲನು ಅವರ ಮಾತಂ ಕೇಳಿ ಕರುಣಾರ್ದ್ರಹೃದಯನಾಗಿ ಅವರಂ ಕುರಿತು-ನನಗೆ ಹೆಂಗಸು ಆಣೆಯನ್ನು ಹಾಕಿರುವಳು. ನೀವೇ ತೆಗೆದುಕೊಳ್ಳಿ-ಎಂದನು. ಆಗ ಅವರು ಅದೇಪ್ರಕಾರ ತೆನೆಗಳಂ ಮುರಿದು ಕೈಯಲ್ಲಿ ಹಿಡಿದುಕೊಂಡಿರಲು, ಹಿಂದುಗಡೆಯಿಂದ ಬಂದ ಯಾತ್ರಿಗರನೇಕರು ಅದನ್ನು ನೋಡಿ ವಿಟ್ಠಲನಾಮವಂ ಘೋಷಿಸುತ್ತ ಬೋಧಲನಂ ಕುರಿತು-ನಮಗೆ ತೆನೆಗಳಂ ಕೊಟ್ಟರೆ ನಿನ್ನಲ್ಲಿ ಶ್ರೀಹರಿಯು ದಯೆಮಾಡುವನು. ಈಗ ಅನ್ನದಾನವಂ ಮಾಡಿದರೆ ಅನಂತಪುಣ್ಯವುಂಟಾಗುವುದು-ಎಂದರು. ಆ ಮಾತಿಗೆ ಬೋಧಲನು ಸಮಾಧಾನಗೊಂಡು, ಇಂದು ಸಂತರ ದರ್ಶನವಾದುದರಿಂದ ಸುದಿನವೆಂದು ತಿಳಿದು ಅವರನ್ನು ಕುರಿತು-ನನ್ನ ಹೆಂಡಿತಿಯು ಆಣೆಯಂ ಹಾಕಿರುವಳು. ಆದುದರಿಂದ ನೀವೇ ತೆನೆಗಳಂ ಮುರಿದುಕೊಳ್ಳಿ-ಎಂದನು. ಆ ಜಾತ್ರಿಗರು ಇನ್ನೂರುಮಂದಿಗಳಿದ್ದರು. ಎಲ್ಲರೂ ಹೊಲದಲ್ಲಿ ನುಗ್ಗಿ ಜೋಳದ ತೆನೆಗಳನ್ನು ಕೊಳ್ಳೆ ಮಾಡಿ ತೆಗೆದುಕೊಂಡು ಹೊರಟುಹೋದರು.

ಬೋಧಲನು ಹೊಲವನ್ನು ಸೂರೆಗೊಳಿಸಿದನೆಂಬ ಸುದ್ದಿಯು ಊರಲ್ಲಿ ಹರಡಿತು. ಸಮಸ್ತರೂ ಆಶ್ಚರ್ಯಪಟ್ಟರು. ಕೆಲವರು ಬಹುತ್ಯಾಗಿಯೆಂದರು. ಕೆಲವರು ವಿವೇಕವಿಲ್ಲದೆ ಬಹುವಾಗಿ ವೆಚ್ಚಮಾಡುವನೆಂದರು. ಕೆಲವರು ಆತನ ಸಂಸಾರವನ್ನು ಶ್ರೀರುಕ್ಮಿಣೀಪತಿಯೇ ನಡೆಯಿಸುವನೆಂದರು. ಇಂತು ಅನೇಕರು ಅನೇಕವಿಧವಾಗಿ ಮಾತನಾಡಿಕೊಂಡರು.

ಮಕ್ಕಳು ತನ್ನನ್ನು ಉಪದ್ರವಗೊಳಿಸುವರೆಂಬ ಭಯದಿಂದ ಬೋಧಲನು ಊರಿಗೆ ಬಾರದೆ ಜಗಜ್ಜೀವನನ್ನು ಧ್ಯಾನಿಸಿ ಭಜನೆಯಂ ಮಾಡುತ ಕುಳಿತನು.

ಆಗ ಆತನ ಹಿರಿಯ ಮಗನು ಈ ವೃತ್ತಾಂತವನ್ನು ಕೇಳಿ ನೋಡುವುದಕ್ಕೋಸ್ಕರ ಹೊಲಕ್ಕೆ ಬಂದು ಮೋಟುಗಳನ್ನು ನೋಡಿ ಮನದಲ್ಲಿ ಬಹುವ್ಯಸನಗೊಂಡು ಚಿಂತೆಯಂ ಮಾಡುತ ಕುಳಿತನು. ಅದನ್ನು ತಾದೆಯಾದ ಬೋಧಲನು ತಿಳಿದು ಮಗನಿಗೆ ಅಭಂಗವನ್ನು ಉಪದೇಶಮಾಡಿ-ಎಲೆ ವತ್ಸನೆ! ಜೀವನ ಲಕ್ಷಣವಂ ಕೇಳು. ಇವನು ವ್ಯರ್ಥವಾಗಿ ಲೋಭವಂ ಮಾಡುವನು. ಜೇನುಹುಳುಗಳು ತಾವು ಉಪವಾಸವಿದ್ದು ಬಹುಶ್ರಮದಿಂದ ರಸವಂ ತಂದು ಕೂಡಿಸಿರಲು, ಬೇಟೆಗಾರನು ಬಂದು ಆ ಜೇನು ಹುಳುಗಳನ್ನು ಹೊರಡಿಸಿ ಮಧುವನ್ನು ತೆಗೆದುಕೊಂಡು ಹೋಗುವನು. ಬಳಿಕ ಆಜೇನುಗಳು ತಲ್ಲಣಿಸುವುವು. ಅದೇರೀತಿಯಲ್ಲಿ ಮನುಷ್ಯನು ಲೋಭವಂ ಹಿಡಿದು ಸಂಸಾರವಂ ನಡೆಯಿಸುತ ದ್ರವ್ಯವನ್ನು ಕೂಡಿಹಾಕಲು, ಕೊನೆಗೆ ಯಾರೋ ಸುಲಿದು ಕೊಳ್ಳುವರು. ಇಂದು ನಮ್ಮ ಹೊಲವು ಸತ್ಪಾತ್ರದಲ್ಲಿ ವೆಚ್ಚವಾಯಿತು. ನೀನು ಏಕೆ ಚಿಂತಾಕ್ರಾಂತನಾಗಿರುವೆ?-ಎಂದು ನುಡಿಯಲು, ಆತನಿಗೂ ಪಶ್ಚಾತ್ತಾಪ ಹುಟ್ಟಿತು. ಹುಲ್ಲೆಯ ಮರಿಗಳಿಗೆ ನೆಗೆಯುವಿಕೆಯನ್ನೂ, ಪಕ್ಷಿಯ ಮರಿಗಳಿಗೆ ಹಾರುವಿಕೆಯನ್ನೂ ಮೀನ ಮರಿಗಳಿಗೆ ಈಜುವಿಕೆಯನ್ನೂ ಕಲಿಸುವುದು ಎಂತು ಅನಾವಶ್ಯಕವೋ ಅಂತು ಅವನಿಗೆ ಹೃದಯದಲ್ಲಿ ಪಶ್ಚಾತ್ತಾಪಗೊಳ್ಳುವುದನ್ನು ಕಲಿಸುವುದು ಅನಾವಶ್ಯಕವು. ಬಳಿಕ ಆತನು ತಂದೆಗೆ ಸಾಷ್ಟಾಂಗನಮಸ್ಕಾರವಂ ಮಾಡಿ ಕೈಹಿಡಿದು ಮನೆಗೆ ಕರೆದುಕೊಂಡು ಹೋಗಿ ತಾಯೊಡನೆ ನಡೆದ ವೃತ್ತಾಂತವೆಲ್ಲವನ್ನೂ ಹೇಳಿದನು. ಆಕೆ ಈ ಸಂಗತಿಯನ್ನು ಕೇಳಿ ಸತ್ಪಾತ್ರದಲ್ಲಿ ಧಾನ್ಯವು ವೆಚ್ಚವಾಯಿತು. ಇಂದು ನಮ್ಮ ಸುಕೃತವು ಫಲಿಸಿತು-ಎಂದು ತಿಳಿದು ಸಮಾಧಾನಗೊಂಡಳು.

ಬೋಧಲನ ಹೆಂಡತಿಗೂ ಸಮಾಧಾನವಾದುದನ್ನು ತಿಳಿದು ಕುಟಿಲರು ಬಹುವಾಗಿ ನಿಂದಿಸಿದರು. ಅರಮನೆಯ ಕಂದಾಯದ ಹಣವನ್ನು ಇವನು ಎಂತು ಕೊಡುವನೋ ತಿಳಿಯದು—ಎಂದು ಹಾಸ್ಯಮಾಡಿದರು. ಬಳಿಕ ಕಂದಾಯದ ಪಟ್ಟಿಯಂ ಬರೆಯಿಸಿ ಬೋಧಲನು ಏಳುವರಹಗಳಂ ಕೊಡಬೇಕೆಂದು ಗೊತ್ತುಮಾಡಿಸಿದರು. ಆಗ ಅವರೆಲ್ಲರೂ—ಮನೆಯಲ್ಲಿ ಆಧಾರವೇನೂ ಇಲ್ಲದಿರುವಾಗ ಬೋಧಲನು ತನ್ನ ಹೊಲವಂ ಸೂರೆಗೊಳಿಸಿ ತಾಳವಂ ಬಾಜಿಸುತ ಹರಿನಾಮವನುದ್ಘೋಷಿಸುತ ಕುಳಿತಿರುವನು. ಮೊದಲು ಇವನ ಹಣವನ್ನು ತರಿಸಿದರೆ ಬಳಿಕ ನಾವೆಲ್ಲರೂ ಕೊಡೋಣ—ಇದಕ್ಕೆ ಯಾರಾದರೂ ವ್ಯತ್ಯಸ್ತವಾಗಿ ನಡೆದರೆ ಅವರೇ ಬೋಧಲನ ಹಣವನ್ನೂ ಕೊಡಬೇಕಾಗುವುದು—ಎಂದು ಗೊತ್ತುಮಾಡಿ ಆತನ ಮನೆಗೆ ಚಪ್ರನನ್ನು ಕಳುಹಿ ಕಂದಾಯದ ಹಣವನ್ನು ಬೇಗನೆ ಕೊಡಬೇಕೆಂದು ಹೇಳಿಸಿದರು.

ಆಗ ಆತನ ಮನೆಯಲ್ಲಿ ಮೂರುವರಹಗಳಿದ್ದುವು. ಏನು ಪ್ರಯತ್ನವಂ ಮಾಡಿದರೂ ಇನ್ನು ನಾಲ್ಕು ವರಹಗಳು ದೊರೆಯಲಿಲ್ಲ. ಆವೂರಿನಲ್ಲಿ 'ನಾಗಾಪ್ಪೊ' ಎಂಬ ಧನ

ವತಿಯಾದ ಒಬ್ಬ ಬ್ರಾಹ್ಮಣಿಯು ಇದ್ದಳು. ಬೋಧಲನು ರಾತ್ರಿ ಅವಳ ಮನೆಗೆ ಹೋಗಿ -ಮೊದಲೇ ಬಡ್ಡಿಯನ್ನು ತೆಗೆದುಕೊಂಡು ನಾಲ್ಕು ವರಹಗಳಂ ಕೊಡು-ಎಂದು ಕೇಳಲು, ಆಕೆ ಸಮ್ಮತಿಪಟ್ಟು ಬೆಳಗೆ ಕೊಡುವೆನೆಂದಳು. ಬೋಧಲನು ತನ್ನ ಮನೆಗೆ ಬಂದನು. ಆಕೆ ದ್ರವ್ಯವನ್ನು ದೊಡ್ಡ ಬಿಂದಿಗೆಯಲ್ಲಿ ತುಂಬಿ ನೆಲದಲ್ಲಿ ಹೂಳಿದ್ದಳು. ನೆಲವನ್ನು ತೋಡಿ ಅದರಲ್ಲಿ ನಾಲ್ಕುವರಹಗಳನ್ನು ತೆಗೆದಳು. ಮರುದಿವಸ–ಬೋಧಲನು ಜಾತ್ರಿಗರಿಂದ ಹೊಲವನ್ನು ಸೂರೆಗೊಳಿಸಿದನು–ಎಂಬ ಸುದ್ದಿಯನ್ನು ತಿಳಿದು ಈತನಿಗೆ ಹಣವನ್ನು ಕೊಟ್ಟರೆ ಅದು ಹಿಂತಿರುಗಿ ಬರುವುದಿಲ್ಲ. ಬಡ್ಡಿಗೆ ಆಸೆಮಾಡಿದರೆ ಮೂಲವೇ ಮುಳುಗುವುದು. ಹೊಟ್ಟೆನ ಆಸೆಯನ್ನು ಮಾಡಲು, ಎತ್ತು ಧಾನ್ಯವನ್ನು ತಿಂದು ಹೋದಂತೆಯೂ, ಮಜ್ಜಿಗೆಯ ಪಾತ್ರೆಯಂ ಮುಚ್ಚಿರಿಸಲು, ಹಾಲು ಉರುಟಿಹೋದಂತೆಯೂ ಆಗುವುದು. “ ಒಂದು ಟಂಕೆಯ ಆಸೆಯಿಂದ ವರಹಗಳೆಲ್ಲವೂ ಹೋಗುವುವು ” ಎಂದು ಜನಗಳು ಗಾದೆಯಂ ಹೇಳುವಂತೆ ಪ್ರತ್ಯಕ್ಷವಾಗಿ ಸಿದ್ಧಿಸುವುದು-ಎಂದು ತಿಳಿದು, ಹಣವನ್ನು ಕೇಳುವುದಕ್ಕೆ ಮನೆಗೆಬಂದ ಬೋಧಲನನ್ನು ಕುರಿತು–ನಾನು ಒಬ್ಬ ದೊಡ್ಡಮನುಷ್ಯನ ಮಾತಿನ ನಂಬುಗೆಯಿಂದ ನಿನಗೆ ಮಾತನ್ನು ಕೊಟ್ಟೆನು. ಈಗ ಆತನು ಇಲ್ಲವೆಂದು ಹೇಳಿಬಿಟ್ಟನು. ಈವೂರಲ್ಲಿ ಅನ್ಯಾರೂ ಧನಿಕರಿಲ್ಲವಲ್ಲಾ–ಎಂದಳು. ಬೋಧಲನು ಆ ಮಾತಂಕೇಳಿ ತನ್ನಮನೆಗೆ ಬಂದು ಚಿಂತಾಕ್ರಾಂತನಾಗಿ ತನ್ನ ಮಡದಿಯಂ ಕುರಿತು-ಕಂದಾಯದ ಹಣಕ್ಕೆ ಬಹು ನಿರ್ಬಂಧವಾಗಿದೆ. ಈವೂರಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಆದುದರಿಂದ ರಾಳೆರಾಶಿಯೆಂಬ ಊರಿಗೆ ಹೋಗಿ ಯಾವನಾದರೂ ಸಾಹುಕಾರನನ್ನು ನೋಡುವೆನು-ಎಂದು ಹೇಳಿ ಹರಿಭಜನೆಯಂ ಮಾಡುತ ಹೊರಟನು.

ಇತ್ತ ಬೋಧಲನು ಓಡಿಹೋದನೆಂಬ ವಾರ್ತೆಯು ಹರಡಿಕೊಳ್ಳಲು, ಬಾಗಿಲಲ್ಲಿ ಆಳನ್ನು ಕುಳ್ಳಿರಿಸಿ, ಅಂದು ಗುರುವಾರವಾದುದರಿಂದ ಮನೆಯ ಬಾಗಿಲಂ ಮುಚ್ಚಿ ಬೆಂಕಿನೀರುಗಳಿಗೂ ಅವಕಾಶವಂ ಕೊಡದೆ ತಡೆದು ಬಿಟ್ಟರು. ದುರ್ಜನರು ಇಂತಹ ಉಪದ್ರವವಂ ಮಾಡಲು, ಪಂಡರೀನಾಥನು ಕರುಣಗೊಂಡು-ನನ್ನ ಭಕ್ತನಿಗೆ ಸಂಕಟವು ಪ್ರಾಪ್ತವಾಗಿರುವುದು. ಆದುದರಿಂದ ಈಗ ಆತನ ಕಾರ್ಯವಂ ಸಾಧಿಸಬೇಕು. ಆತನು ಸಂತರಿಂದ ಹೊಲವನ್ನು ಸೂರೆಗೊಳಿಸದಿದ್ದರೆ ಊರ ದುಷ್ಟರು ಏಕೆ ಉಪದ್ರವವಂ ಮಾಡುತಿದ್ದರು ?-ಎಂದು ಬಗೆದು ಆವೂರಲ್ಲಿ ಇದ್ದ ವಿಠ್ಯನೆಂಬ ಅಂತ್ಯಜನ ರೂಪವಂ ಧರಿಸಿ ಏಳುವರಹಗಳನ್ನೂ ಚಾವಡಿಗೆ ತಂದು ಕೊಟ್ಟು ಕೈಗಳಂ ಮುಗಿದುಕೊಂಡು, ಮಾಣಕೋಜಿಗೌಡನು ವರಹಗಳಂ ಕಳುಹಿಸಿರುವನು–ಎಂದು ಹೇಳಿ ಅದೃಶ್ಯನಾದನು.

ಬಳಿಕ ಗ್ರಾಮಸ್ಥರು ಊರ ಹಣವೆಲ್ಲವನ್ನೂ ಎತ್ತಿ ಗಂಟುಕಟ್ಟಿ ಕಳುಹಿ, ಬೋಧಲನಿಗೆ ಈಸಂಕಟದಲ್ಲಿ ಹಣವು ಎಲ್ಲಿ ದೊರೆಯಿತು?-ಎಂದು ಆಶ್ಚರ್ಯಗೊಂಡರು.

ಬಳಿಕ ಮರುದಿವಸ ಬೋಧಲನು ಹಣವನ್ನು ತೆಗೆದುಕೊಂಡು ಬರಲು, ಅರಮನೆಯ ಹಣದ ಗಂಟು ಸಾಗಿ ಹೋದುದರಿಂದ ಊರಲ್ಲಿ ಗಲಬೆ ಏನೂ ಇರಲಿಲ್ಲ. ಆಗ ಅಧ್ಯಕ್ಷನು ಬೋಧಲನನ್ನು ಕುರಿತು-ನೀವು ಹೊಲೆಯನೊಡನೆ ಕಳುಹಿದ ಹಣವನ್ನು ತೆಗೆದುಕೊಂಡು ಹಣದ ಗಂಟನ್ನು ಅರಮನೆಗೆ ಸಾಗಿಸಿದೆವು-ಎಂದನು.

ಬೋಧಲನು ಈ ಮಾತಂ ಕೇಳಿ ರುಕ್ಮಿಣೀಕಾಂತನೇ ನಮ್ಮ ಸಂಕಟವನ್ನು ನೋಡಿ ಪ್ರಸನ್ನನಾದನೆಂದು ತಿಳಿದು ಕಣ್ಣುಗಳಿಂದ ಬಾಷ್ಪವಂ ಸುರಿಯಿಸುತ ಗದ್ಗದಕಂಠನಾಗಿ ಸ್ವಾಮಿಯನ್ನು ಕುರಿತು–ದಯಾಳುವೆ! ವ್ಯರ್ಥವಾಗಿ ನಿನ್ನನ್ನು ದಣಿಸಿದೆನು. ಕ್ಷೀರಾಬ್ಧಿವಾಸಿಯಾದ ಫಂಡರೀನಾಥನೇ! ನೀನು ಅಂತ್ಯಜನ ರೂಪವಂ ಧರಿಸಿದೆಯಲ್ಲಾ! ನಾನಾದರೋ ಪ್ರಪಂಚದ ಭ್ರಾಂತಿಯನ್ನು ಬಿಟ್ಟು ನಿನ್ನ ಪಾದವನ್ನೇ ನಂಬಿರುವೆನು. ನನಗೆ ನಿನ್ನ ಭಜನೆಯ ಮರುಳು ಹತ್ತಿತು. ಲೌಕಿಕಸಂಗತಿಯೇನೂ ಬೇಡ. ಈ ನಶ್ವರವಾದ ಜಡಶರೀರವಿದ್ದರೂ ಇದರ ಆಶೆಯಂ ಬಿಟ್ಟಿರುವೆನು. ಎಲೆ ಕರುಣಾಕರನೆ! ಈಗ ನನಗೆ ಬೇಗನೆ ಸಗುಣರೂಪದಿಂದ ದರ್ಶನವಂ ಕೊಡಬೇಕು–ಎಂದು ಪ್ರಾರ್ಥಿಸಲು, ಬೋಧಲನ ಶುದ್ಧಭಾವವಂ ನೋಡಿ ಫಂಡರೀನಾಥನು ಪ್ರಸನ್ನನಾದನು. ಆಗ ಬೋಧಲನು ಸ್ವಾಮಿಯಂ ಕುರಿತು–ಎಲೆ ದೀನಬಂಧುವೇ! ಕಂದಾಯವನ್ನು ಎಲ್ಲಿಂದ ಕೊಟ್ಟೆ–ಎಂದು ಕೇಳಲು, ಅದಕ್ಕೆ ಸ್ವಾಮಿಯು–ನೀನು ರಾಳೆರಾಶಿಗೆ ಹೋದ ಬಳಿಕ ಗ್ರಾಮಸ್ಥರು ತೀಕ್ಷ್ಣವಾದ ಬಹುನಿಬಂಧವಂ ಮಾಡಿದುದರಿಂದ ನಾಲ್ಕು ವರಹಗಳಂ ತಂದು ನಿನ್ನ ಮನೆಯಲ್ಲಿದ್ದ ಮೂರು ವರಹಗಳನ್ನು ತೆಗೆದುಕೊಂಡು ಸೇರಿಸಿ, ಏಳು ವರಹಗಳನ್ನು ಚಾವಡಿಗೆ ಕೊಟ್ಟೆನು–ಎಂದನು. ಆ ಮಾತಂ ಕೇಳಿ ಬೋಧಲನು ದೀನದಯಾಳುವೆ! ಫಂಡರೀನಾಥನೇ! ನಿನ್ನ ಸಾಮರ್ಥ್ಯದ ಮುಂದೆ ನಮ್ಮ ಯತ್ನವೇನು ನಡೆಯುವುದು?-ಎಂದು ಸಾಷ್ಟಾಂಗನಮಸ್ಕಾರವಂ ಮಾಡಿದನು.

ಬಳಿಕ ಯಾತ್ರಿಕರಿಗೆ ತೆನೆಗಳಂ ಕೊಟ್ಟುದರಿಂದ ಮೋಟಾದ ಹೊಲದಲ್ಲಿ ಧಾನ್ಯವು ಬಹುಸಮೃದ್ಧವಾಗಿ ಬೆಳೆಯಿತು. ಬರಿದಾಗಿದ್ದ ಹಗೇವುಗಳೆಲ್ಲವೂ ತುಂಬಿದ್ದುವು.

ಇಂತಹ ಕೌತುಕವನ್ನು ರುಕ್ಮಿಣೀರಮಣನು ಮಾಡಲು, ಸರ್ವರೂ ವಿಸ್ಮಿತರಾಗಿ–ಬೋಧಲನಿಗೆ ಶ್ರೀಹರಿಯು ಪ್ರಸನ್ನನಾದನು-ಎಂದು ಅಭಿನಂದಿಸಿದರು.

ಆ ದೀನದಯಾಳುವು ತನ್ನ ಭಕ್ತರ ಕೀರ್ತಿಯನ್ನು ಇಂತು ಬೆಳೆಯಿಸುವನು. ಮಹೀಪತಿಯು ಆತನ ಮುದ್ರಾಂಕಿತನಾಗಿ ಸಂತರ ಗುಣಂಗಳಂ ವರ್ಣಿಸುತ್ತಿರುವನು.

ಇಂತು ಶ್ರೀಭಕ್ತವಿಜಯದಲ್ಲಿ ಐವತ್ತುಮೂರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಐವತ್ತನಾಲ್ಕನೆಯ ಅಧ್ಯಾಯ.

ಜಯ ಜಯ ವಿಶ್ವವ್ಯಾಪಕನೇ! ರುಕ್ಮಿಣೀಪತಿಯೇ! ನೀನೆ ನನಗೆ ಧನಸಂಪತ್ತು. ತಾಯಿ ತಂದೆ ನಂಟರು ಇಷ್ಟರು ನೀನಲ್ಲದೆ ಇನ್ನಾರೂ ಇಲ್ಲ. ನೀನೆ ನನ್ನ ಅಧ್ಯಾತ್ಮಜ್ಞಾನವು. ನೀನೆ ನನ್ನ ಶ್ರವಣಮನನವು. ನೀನೆ ನನ್ನ ಗೀರ್ವಾಣಭಾಷೆಯು. ಪ್ರಾಕೃತವಚನಗಳೂ ನೀನೆ. ನೀನೆ ನನ್ನ ಚಾತುರ್ಯಕಳೆ. ಹೇಳುವನೂ ಹೇಳಿಸುವನೂ ನೀನೆ. ಮೇಘಶ್ಯಾಮನೇ! ನೀನು ನನ್ನ ಪ್ರೇಮದ ಮೂಲವು. ದಯಾಳುವೇ! ಶ್ರೀಪತಿಯೇ! ನೀನೆ ತಪ್ಪಿಲ್ಲದೆ ಬರೆಯುವ ನನ್ನ ಲೇಖಕನು. ವಿಶಾಲವಾದ ಬುದ್ಧಿಯೂ ನೀನೆ. ನೀನೆ ನನ್ನ ಅಕ್ಷಯಸುಖವು. ತಾರಕನಾದ ಸದ್ಗುರುವು ನೀನೆ. ನೀನೆ ನನಗೆ ಪ್ರೇಮಳಶ್ರೋತೃವು. ಸಮಯದಲ್ಲಿ ಸ್ಫೂರ್ತಿಯಂ ಕೊಡುವನೂ ನೀನೆ. ನನ್ನ ಮೇಲೆ ನಿನ್ನ ಕೃಪೆಯಿರಲು, ನನ್ನನ್ನು ಲೋಭಮಮತೆಗಳು ಬಾಧಿಸವು. ನೀನು ಕೃಪೆಯಂ ಮಾಡಲು, ಅಜ್ಞಾನಿಗಳೂ ಜ್ಞಾನವುಳ್ಳವರಾಗುವರು. ಅಂಧಕಾರವು ತುಂಬಿರುವಾಗ ಸೂರ್ಯನು ಉದಯಿಸಲು, ಆ ಅಂಧಕಾರವು ಎಂತು ನಾಶವನ್ನು ಹೊಂದುವುದೋ ಅಂತು ನಿನ್ನ ದಯೆಯು ಉಂಟಾಗಲು, ಅಜ್ಞಾನವು ನಿರ್ಮೂಲವಾಗುವುದು. ಕಾಡುಹಳ್ಳದ ಮೇಲೆ ಗಂಗೆಯು ಪ್ರವಹಿಸಲು, ಅದು ಎಂತು ಪವಿತ್ರವಾಗುವುದೋ ಅಂತು ನಿನ್ನ ಕೃಪಾದೃಷ್ಟಿಯು ಮೇಲೆ ಬೀಳಲು, ಜನನೂ ಪರಿಶುದ್ಧಾಂತಃಕರಣನಾಗಿ ಮೂರುಲೋಕವನ್ನೂ ಅಸಾಧಾರಣವಾದ ಕೀರ್ತಿಯಿಂದ ಬೆಳಗುತ್ತ ಸಾಮ್ಯವಿಲ್ಲದವನೆನಿಸುವನು. ವಿರಕ್ತರೂ ಪ್ರೇಮಳಭಕ್ತರೂ ಆದ ಯಾರು ನಿನ್ನನ್ನು ಕ್ಷಣಮಾತ್ರವಾದರೂ ಮರೆಯರೋ ಆ ಸಂತರ ಚರಿತ್ರೆಯನ್ನು ನೀನೆ ಕೃಪೆಯಿಂದ ಬರೆಯಿಸುವನಾಗಬೇಕು.

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ಜಗಜ್ಜೀವನನು ಕೌತುಕವಂ ತೋರಿಸಿ ಬರಿಯ ಹಗೇವುಗಳೆಲ್ಲವನ್ನೂ ಧಾನ್ಯದಿಂದ ತುಂಬಿಸಿದನೆಂಬ ಕಥೆಯಂ ಕೇಳಿದಿರಲ್ಲಾ! ಮತ್ತು ನೂರಾವೃತ್ತಿ ಯಾತ್ರಿಕರಿಂದ ಹೊಲವನ್ನು ಸೂರೆಗೊಳಿಸಿದರೂ ಮೋಟುಗಳಿಗೆ ಮತ್ತೆ ಮತ್ತೆ ತೆನೆಗಳು ಬಂದುವು. ದುರ್ಜನರೂ ಈ ವಿಸ್ಮಯವಂ ಕಂಡು—ಬೋಧಲನು ಈಶ್ವರಾವತಾರಪುರುಷನು. ಈತನನ್ನು ಪ್ರಾಕೃತಮನುಷ್ಯನೆನ್ನಬಾರದು. ನಾವು ಅಜ್ಞಾನಿಗಳು; ಪಾಮರರು; ಈತನನ್ನು ಬರಿದೆ ಛಳಿಸಿದೆವು—ಎಂದು ಅಭಿನಂದಿಸಿದರು.

ಬೋಧಲನು ಬರಿದಾಗಿ ತುಂಬಿದ ಹಗೇವುಗಳೆಲ್ಲವನ್ನೂ ಬ್ರಾಹ್ಮಣರಿಂದ ಸೂರೆಗೊಳಿಸಿದನು. ಮಲ್ಲಿಕಾಲತೆಯು ತನ್ನಲ್ಲಿ ಆದ ಪುಷ್ಪಗಳನ್ನು ವಿಲಾಸಿಗಳಿಗೆ ಎಂತು ಕುಡುವುದೋ, ಕಮಲವು ತನ್ನಲ್ಲಿ ಉಂಟಾದ ಮಕರಂದವನ್ನು ತುಂಬಿಗಳಿಗೆ

ಎಂತು ಕೂಡುವುದೋ, ಮೇಘವು ತನ್ನಲ್ಲಿ ತುಂಬಿದ ಉದಕವನ್ನು ಭೂಮಿಯ ಮೇಲೆ ಎಂತು ಸುರಿಯಿಸುವುದೋ ಅಂತು ಹೃಷೀಕೇಶನು ಪ್ರಸನ್ನನಾಗಿ ಕರುಣಿಸಿದ ಧಾನ್ಯಸಂಪತ್ತಿಯನ್ನು ವಿರಕ್ತನಾದ ಬೋಧಲನು ಬ್ರಾಹ್ಮಣರಿಗೆ ಹಂಚಿಬಿಟ್ಟನು. ಮೋಟುಗಳಲ್ಲಿ ತೆನೆಗಳು ಹೊರಟುದನ್ನು ನೋಡುವುದಕ್ಕೆ ಜನರು ಕುತುಕಿತರಾಗಿ ಬರುತಿದ್ದರು. ದೇಶದೇಶದಲ್ಲಿ ಬೋಧಲನ ಕೀರ್ತಿಯು ಪ್ರಕಟವಾಯಿತು. ಸಂತರ ಮಹಿಮೆಯು ಅಸದೃಶವಾದುದು—ಎಂದು ಎಲ್ಲರೂ ನುಡಿಯುತಿದ್ದರು.

ಬಳಿಕ ಒಂದುದಿನ ಬೋಧಲನು ಹೊಲವನ್ನು ಕಾಯುತ ಕುಳಿತಿರಲು, ಹಾಸಿಯೆಂಬ ಒಬ್ಬ ಒಕ್ಕಲಿತಿಯು ಬಂದು ಆತನ ಪಾದಗಳಂ ಪಿಡಿದಳು. ಆಹಾಸಿಯಾರು? ಯಾರವಳು?—ಎಂದರೆ, ಆಕೆಯ ವೃತ್ತಾಂತವಂ ವಿಸ್ತರದಿಂದ ಹೇಳುವೆನು. ಶ್ರೋತೃಗಳು ಅವಧರಿಸಬೇಕು.

ಧಾಮಣಗಾವಿಗೆ ಎರಡುಹರಿದಾರಿಯ ಮೇಲೆ ರಾಳೆರಾಶಿಯೆಂಬ ಗ್ರಾಮವಿರುವುದು. ಆಗ್ರಾಮದ ಗೌಡನು ಬೋಧಲನಿಗೆ ಮಾವನು. ಅವನು ಮುಕ್ತನಾದ ಬಳಿಕ ಮಮತೆಯು ತೌರ್ಮನೆಯನ್ನು ತೊರೆದಳು. ಆಕೆಯ ಅಣ್ಣತಮ್ಮಂದಿರು ಇಬ್ಬರು ದುರ್ಬುದ್ಧಿಗಳಿದ್ದರು. ಅವರು ಎಂದಿಗೂ ಯೋಗಕ್ಷೇಮವನ್ನು ವಿಚಾರಿಸುತಿರಲಿಲ್ಲ. ಅವರಿಗೆ ಕರ್ಮದ ಬಲದಿಂದ ಅಹಂಕಾರವು ಹತ್ತಿಇದ್ದಿತು. ಈಹಾಸಿಯು ಅವರ ಮನೆಯ ದಾಸಿಯು. ಭಾವುಕೆ. ಹೃದಯದಲ್ಲಿ ಭಕ್ತಿಯುಳ್ಳವಳು. ಪ್ರಪಂಚವ್ಯಾಪಾರದಲ್ಲಿರುತ್ತ ಶ್ರೀಹರಿಯ ಭಜನೆಯನ್ನು ಸರ್ವಕಾಲದಲ್ಲಿಯೂ ಮಾಡುತಿದ್ದಳು. ರಾಳೆರಾಶಿಗೂ ಧಾಮಣಗಾವಿಗೂ ಮಧ್ಯದ ಎಲ್ಲೆಯಲ್ಲಿ ಒಂದು ಹೊಲವು ಮಾನ್ಯವಾಗಿದ್ದಿತು. ರಾಳೆರಾಶಿಯ ಗ್ರಾಮಸ್ಥರು ದುಷ್ಟರಾದುದರಿಂದ ಆಮಾನ್ಯಕ್ಷೇತ್ರದಲ್ಲಿ ಹಾಸಿಯನ್ನು ಕಾವಲಿಗಿಟ್ಟದ್ದರು. ಬೋಧಲನು ಅಟ್ಟಣೆಯ ಮೇಲೆ ಕುಳಿತು ಕೀರ್ತನವಂ ಮಾಡುತಿರಲು, ಈಹಾಸಿಯು ನಿತ್ಯವೂ ಬಂದು ಶ್ರವಣಮಾಡುತ ಇದ್ದಳು. ಒಂದುದಿವಸ ಬೋಧಲನ ಪಾದಗಳನ್ನು ದೃಢವಾಗಿ ಪಿಡಿದು—ತನ್ನ ದೇಹದ ಸಾರ್ಥಕತೆ ಏತರಿಂದ ಆಗುವುದೋ ಆವುಪಾಯವನ್ನು ನನಗೆ ಹೇಳಬೇಕು—ಎಂದು ಬೆಸಗೊಂಡಳು.

ಬೋಧಲನು ಆಮಾತಂಕೇಳಿ—ಇವಳ ದೇಹವು ಪರಾಧೀನವಾದುದು. ಜಪವೂ ತಪಸ್ಸೂ ಧ್ಯಾನವೂ ತೀರ್ಥಯಾತ್ರೆಯೂ ಇವಳಿಗೆ ಘಟಿಸದು. ದಾಸನ ಮತ್ತು ದಾಸಿಯ ಬಾಳಿಕೆಯೇ ಪರಾಧೀನವಾದುದು. ಹಸುವಿನ, ಎತ್ತುಕುದುರೆಗಳ ಬಾಳಿಕೆಯೂ ಇಂತಹುದೇ. ಇವರ ಬಾಳಿಕೆ ದುಷ್ಕೃತಕ್ಕೆ ಈಡಾದುದು. ಆದುದರಿಂದ ಏನುಸಾಧನೆಯೂ ಇವರಿಗೆ ಘಟಿಸುವುದಿಲ್ಲ. ಆದರೆ ನಾಸು ಇಂತು ತಿಳಿದು ಸುಮ್ಮನೆ ಇದ್ದರೆ ಈಕೆಯ ವಿಶ್ವಾಸಕ್ಕೆ ಹಾನಿಬರುವುದು-ಎಂದಾಲೋಚಿಸಿ, ಆಕೆಯನ್ನು ಕುರಿತು—ಹಾಸಿಯೇ! ಕೇಳು. ನೀನು ನನ್ನನ್ನು ಕುರಿತು ಸಾಧನವನ್ನು ಕೇಳಿದೆ.

ಮನೆಗೆಲಸವನ್ನು ಮಾಡುವಾಗಲೂ ಸಂಚರಿಸುವಾಗಲೂ ಶ್ರೀಹರಿಯ ಚಿಂತನವಂ ಮಾತುತಿರಬೇಕು. ಮತ್ತು ಹದಿನೈದುದಿನಗಳಿಗೆ ಒನ್ಮೆ ಬರುವ ಏಕಾದಶಿಯಲ್ಲಿ ಉಪವಾಸನಂ ಮಾಡಿ ರಾತ್ರಿ ಕೀರ್ತನವಂ ಕೇಳುವುದಕ್ಕೆ ಧಾಮಣಗಾವಿಗೆ ಬರಬೇಕು. ರಾತ್ರಿ ನಾಲ್ಕುಜಾವವೂ ಭಗವನ್ನಾಮಸಂಕೀರ್ತನದಿಂದ ಜಾಗರವಂ ಮಾಡಿ ಪ್ರಾತಃಕಾಲಕ್ಕೆ ನಿನ್ನ ಊರಿಗೆ ಹೋಗಬೇಕು. ನಿನ್ನ ಒಡೆಯನ ಅಪ್ಪಣೆಯನ್ನೂ ಮಾಡಿಕೊಂಡು ಇಂತು ನಿಯಮವಂ ನಡೆಯಿಸುತಿದ್ದರೆ ನಿನ್ನ ದೇಹವು ಸಾರ್ಥಕವಾಗುವುದು. ಸಗುಣರೂಪದ ದರ್ಶನವಾಗುವುದು. ಶ್ರೀಪಾಂಡುರಂಗನ ಪಾದವು ದೊರೆಯುವುದು. ಈಮಾತಿನಲ್ಲಿ ಸಂಶಯಪಡಲಾಗದು-ಎಂದು ಹೇಳಿದನು.

ಆಮಾತಂ ಕೇಳಿ ಆದಾಸಿಯು ವಂದಿಸಿ ಅದೇರೀತಿಯಲ್ಲಿ ಪ್ರತ್ಯೇಕಾದಶಿ ಧಾಮಣಗಾವಿಗೆ ಬರುತಿರುವೆನು—ಎಂದಳು.

ಯಾರಿಗೆ ಎಷ್ಟು ಅಧಿಕಾರವೋ ಅವರಿಗೆ ಅಷ್ಟರಲ್ಲಿಯೇ ಸಂತರು ಸಮಾಧಾನವನ್ನು ಹೇಳುವರು. ಸದ್ವೈದ್ಯನು ರೋಗವನ್ನು ಮನಸ್ಸಿಗೆ ತಂದು ಅದಕ್ಕೆ ತಕ್ಕ ಔಷಧವನ್ನು ಎಂತು ಕುಡುವನೋ, ರಾಜನು ಸಿಂಹಾಸನದಮೇಲೆ ಕುಳಿತುಕೊಂಡು ಪ್ರಧಾನನ ಜಾಣ್ಮೆಗೆ ತಕ್ಕ ಕೆಲಸವನ್ನು ಎಂತು ಹೇಳುವನೋ, ಮನೆಯ ಯಜಮಾನೆಯು ತನ್ನ ಸೊಸೆಯ ಜಾಣತನಕ್ಕೆ ತಕ್ಕ ಕೆಲಸವನ್ನು ಎಂತು ಅಪ್ಪಣೆಮಾಡುವಳೋ, ಬುದ್ಧಿವಂತನಾದ ಸಾಧುಕಾರನು ವ್ಯಾಪಾರವನ್ನು ನೋಡಿ ಋಣವನ್ನು ಎಂತು ಕೊಡುವನೋ, ಚತುರನಾದ ವಕ್ತೃವು ಸಭೆಗೆ ತಕ್ಕಂತೆ ಕೀರ್ತನವನ್ನು ಎಂತು ಮಾಡುವನೋ, ಕಲ್ಕುಟಕನು ಕಲ್ಲ ಮೃದುತೆಯನ್ನೂ ಕಾಠಿನ್ಯವನ್ನೂ ತಿಳಿದು ಅದಕ್ಕೆ ತಕ್ಕ ಉಳಿಯನ್ನು ಎಂತು ಉಪಯೋಗಿಸುವನೋ ಸಂತರೂ ಅದೇತೆರದಿಂದ ಮೊದಲು ಅಧಿಕಾರವನ್ನು ನೋಡಿ ಬಳಿಕ ತಕ್ಕಂತೆ ಸಾಧನವಂ ಹೇಳುವರು. ಅದಂತಿರಲಿ.

ಹಾಸಿಯು ಬೋಧಲನು ಹೇಳಿದ ಮಾತುಗಳನ್ನು ದೃಢವಾಗಿ ಮನದಲ್ಲಿ ಹಿಡಿದು ಮನೆಗೆಲಸವಂ ಮಾಡುವಾಗ ನಾಮಕೀರ್ತನೆಯಂ ಮಾಡುತ್ತ ಹರಿದಿನದಲ್ಲಿ ಮುಂಚೆ ಎದ್ದು ಕೆಲಸಗಳನ್ನು ತ್ವರೆಯಿಂದ ತೀರಿಸಿಕೊಂಡು ತನ್ನ ಒಡೆಯನ ಅಪ್ಪಣೆಯಂ ಕೇಳಿ ಕೀರ್ತನದ ವೇಳೆಗೆ ಸರಿಯಾಗಿ ಧಾಮಣಗಾವಿಗೆ ಹೋಗುತ್ತಿದ್ದಳು. ಬೋಧಲನ ಕೀರ್ತನವು ಬಹುರಸಭರಿತವಾದುದು. ಅಜ್ಞಾನಿಗಳಿಗೂ ಅನ್ವಯಾರ್ಥಗಳು ಚೆನ್ನಾಗಿ ತಿಳಿಯುತ್ತಿದ್ದುವು. “ಭೋವರ” ಎಂಬ ಗ್ರಾಮದ ಜನಗಳೂ ಶ್ರವಣಕ್ಕೆ ಬರುತ್ತಿದ್ದರು. ಬಹುಜನಗಳು ಸೇರುವುದರಿಂದ ಮನೆಯೊಳಗೆ ಸ್ಥಳವು ಸಾಲದಿರಲು, ಬೀದಿಯ ಚೌಕದಲ್ಲಿ ನಿಂತು ಕೀರ್ತನವಂ ಮಾಡುತಿದ್ದನು. ಹಾಸಿಯು ಬೀದಿಯನ್ನು ಚೆನ್ನಾಗಿ ನಿರ್ಮಲವಾಗಿರುವಂತೆ ಮಾಡುತಿದ್ದಳು. ಜನಗಳಿಗೋಸ್ಕರ ಎರಡು ಗುಡಾಣಗಳಲ್ಲಿ ಪೂರ್ಣವಾಗಿ ಇರುವಂತೆ ನೀರನ್ನು ತುಂಬಿ ಇರಿಸುತಿದ್ದಳು. ಬೋಧ

ಲನ ಕೀರ್ತನದಲ್ಲಿ ಆಕಾಶವೇ ಮಂಟಪಾಕಾರವಾಗಿಯೂ ಭೂಮಿಯೇ ದೊಡ್ಡ ಆಸನವಾಗಿಯೂ ಇದ್ದಿತು. ದೇವತೆಗಳೆಲ್ಲರೂ ಕಥಾಕೀರ್ತನವಂ ಕೇಳಿ ಆನಂದಿಸು ತಿದ್ದರು.

ಒಂದು ಏಕಾದಶೀದಿನ ರಾಳೆರಾಶಿಗ್ರಾಮದವನೊಬ್ಬನು ಕೀರ್ತನಕ್ಕೆ ಬರುತಿ ರಲು, ಊರ ಸಮೀಪದಲ್ಲಿ ಅವನನ್ನು ಮಹಾಸರ್ಪವು ಕಡಿಯಿತು. ಆಕ್ಷಣವೇ ವಿಷವೇ ರಲು, ಪ್ರಾಣವು ಹೋಯಿತು. ಜನಗಳು ಅವನನ್ನು ಎತ್ತಿ ತಂದು ಕೀರ್ತನದ ಸ್ಥಳದಲ್ಲಿ ಕೂಡಿಸಿ-ಈ ವೃತ್ತಾಂತವನ್ನು ಯಾರಿಗೂ ತಿಳಿಯಿಸಬಾರದು. ಬೋಧಲನು ರಾಮನಾಮದ ಮಹಿಮೆಯನ್ನು ಬಹುವಾಗಿ ಜನಗಳಿಗೆ ಹೇಳುತಿರುವನು. ಭಕ್ತನಾದ ಪ್ರಹ್ಲಾದನನ್ನು ಅಗ್ನಿಯಲ್ಲಿ ಹಾಕಿದರೂ ಹರಿನಾಮಕೀರ್ತನದ ಮಹಿಮೆಯಿಂದ ಸುಡ ಲಿಲ್ಲ. ವಿಷವು ಅಮೃತವಾಯಿತು-ಎಂದು ಹೇಳುತಿರುವನು. ಕೀರ್ತನದಲ್ಲಿಯೇ ಇವನ ಪ್ರಾಣವು ಹೋಯಿತು-ಎಂದು ಇವನಮೇಲೆ ನಿಮಿತ್ತವಂ ಹಾಕಿ,ಇವನನ್ನು ಬದುಕಿಸಿದವನಾದರೆ ನಾಮದ ಮಹಿಮೆ ಯಥಾರ್ಥವೇ ಸರಿಯೆಂದು ಹೇಳೋಣ- ಎನುತ ಮಾತನಾಡಿಕೊಂಡು ಸುಮ್ಮನೆ ಶ್ರವಣವಂ ಮಾಡುತ ಕುಳಿತರು.

ಆಗ ಬೋಧಲನು ಜನಗಳನ್ನು ಕುರಿತು-ಎಲೆ ಶ್ರೋತೃಗಳಿರಾ! ಕೇಳಿ. ಭಗವನ್ನಾಮಕ್ಕೆ ಹಣವೇನನೂ ಕೊಡಬೇಕಾಗಿಲ್ಲ. ಅದು ಅತ್ಯಂತಪಾವನವಾದುದು. ಅಮೃತಕ್ಕಿಂತಲೂ ಮಧುರವಾದುದು. ನಾನು ಪರೀಕ್ಷೆಯಂ ಮಾಡಿ ಹೇಳುವೆನು. ಎಲ್ಲರೂ ಚಪ್ಪಳೆಗಳಂ ಬಾರಿಸುತ್ತ ವಿಟ್ಠಲನಾಮವನ್ನು ಉದ್ಘೋಷಿಸಬೇಕು-ಎಂದು ಹೇಳಿದನು. ಆ ಮಾತುಗಳಂ ಕೇಳಿ ಶ್ರೋತೃಗಳೆಲ್ಲರೂ ನಾಮಘೋಷವಂ ಮಾಡು ತಿದ್ದರು. ಕೀರ್ತನದಲ್ಲಿ ಶವವಂ ತಂದು ಕುಳ್ಳಿರಿಸಿರುವುದು ಬೋಧಲನಿಗೆ ತಿಳಿಯದು. ಆ ಶವವನ್ನು ನೋಡಿ-ಎಲೆ ಅಣ್ಣಾ! ನರದೇಹಕ್ಕೆ ಬಂದು ಹರಿಭಜನೆಯಲ್ಲಿ ಏಕೆ ಆಲಸ್ಯವಂ ಮಾಡುವೆ. ಕರತಾಳವಂ ಹಾಕುತ್ತ ಮುಖದಿಂದ ಹರಿನಾಮವನ್ನು ಉಚ್ಚರಿಸು. ಸುಮ್ಮನೆ ಏಕೆ ಕುಳಿತಿರುವೆ?-ಎಂದನು.

ಆಗ ಬೋಧಲನ ಕೀರ್ತನದಲ್ಲಿ ನಿಂತಿರುವಾಗ ಲೀಲಾನಾಟಕಿಯಾದ ಪಂಢರೀ ನಾಥನು ಭಕ್ತನ ಮಾತಂ ಕೇಳಿ-ಇವನ ಪ್ರಾಣವು ಹೋಗಿದೆ. ಇದನ್ನು ಬೋಧಲನು ಅರಿಯನು. ಇವನು ನಾಮವನ್ನುಚ್ಚರಿಸದಿದ್ದರೆ ಈತನಿಗೆ ಮನದಲ್ಲಿ ವಿಕ್ಷೋಭ ವುಂಟಾಗುವುದು-ಎಂದಾಲೋಚಿಸಿದನು. ಸ್ವಾಮಿಯು ಸನ್ನಿಹಿತನಾಗಿದ್ದರೂ ಕೀರ್ತ ನದಲ್ಲಿ ರಸಭಂಗವಾದೀತಲ್ಲಾ-ಎಂದು ರುಕ್ಮಿಣೀದೇವಿಯು ಯಮಧರ್ಮನಂ ಕರೆದು- ಕೀರ್ತನದಲ್ಲಿ ಶವವು ಕುಳಿತಿರುವುದು. ಇದರ ಪ್ರಾಣವನ್ನು ತಿರುಗಿಸು-ಎನಲು ಯಮನು ಜಗಜ್ಜನನಿಯ ಮಾತಂಕೇಳಿ, ಅವಶ್ಯವಾಗಲಿ-ಎಂದನು.

ಆಗ ಆಪ್ರೇತಕ್ಕೆ ಜೀವವು ಬಂದಿತು. ಬಳಿಕ ಜನಗಳು ಬೋಧಲನಿಗೆ ನಡೆ ದ ವೃತ್ತಾಂತವಂ ಹೇಳಿದರು. ಶ್ರೋತೃಗಳು ಅದಂಕೇಳಿ ವಿಸ್ಮಯಗೊಂಡು ಜಯ

ಜಯನಾದಪುರಸ್ಸರವಾಗಿ ಭಗವನ್ನಾಮಕೀರ್ತನೆಯಂ ಮಾಡಿದರು. ಭಕ್ತಮಂಡಲಿಯೆಲ್ಲವೂ ಆನಂದಪಟ್ಟಿತು. ಬೋಧಲನು ನೇತ್ರಕಮಲಗಳಿಂದ ಆನಂದಾಶ್ರುವಂ ಸುರಿಯಿಸುತ–ದೇವಾದಿದೇವನೆ! ಭಕ್ತವತ್ಸಲನೆ! ಅನಾಥನಾದ ನನ್ನ ಹಟವನ್ನು ಈಡೇರಿಸುವೆ. ನನಗೆ ಈ ವೃತ್ತಾಂತವು ತಿಳಿದಿದ್ದರೆ ಮನದಲ್ಲಿ ವಿಕ್ಷೋಭವುಂಟಾಗುತಿದ್ದಿತಲ್ಲಾ! ಅನ್ನದಲ್ಲಿ ನೊಣವು ಬಿದ್ದಿರಲು, ಬಾಲಕನು ಹೇಳದಿದ್ದರೂ ತಾಯಿಯು ಅದನ್ನು ಎಂತು ತೆಗೆದುಬಿಡುವಳೋ, ರುಕ್ಮಿಣೀಕಾಂತನೇ! ಅಂತು ನಮ್ಮ ಘಾತವನ್ನು ನಾವು ಹೇಳದಿದ್ದರೂ ನೀನೇ ಪರಿಹರಿಸುವೆ-ಎಂದು ಸ್ವಾಮಿಯನ್ನು ಕೊಂಡಾಡಿ ಆರತಿಯನ್ನೆತ್ತಿ ಪ್ರೀತಿಯಿಂದ ನಮಸ್ಕಾರವಂ ಮಾಡಿದನು.

ಧಾಮಣಗಾವಿನ ಜನಗಳೆಲ್ಲರೂ–ಬೋಧಲನು ಈಶ್ವರಾವತಾರಪುರುಷನು. ಜನಗಳನ್ನುದ್ಧರಿಸುವುದಕ್ಕೋಸ್ಕರ ಮರ್ತ್ಯಲೋಕದಲ್ಲಿ ಹುಟ್ಟಿರುವನು–ಎಂದರು. ಕೀರ್ತನದಲ್ಲಿ ಪ್ರೇತವನ್ನು ಎಬ್ಬಿಸಿದುದನ್ನು ಕಂಡುದರಿಂದ ಹಾಸಿಯೆಂಬ ಸ್ತ್ರೀಯ ಭಕ್ತಿಭಾವವು ದಿನದಿನಕ್ಕೆ ಬೆಳೆಯುತ ಬಂದಿತು. ಹದಿನೈದುದಿನಕ್ಕೆ ಒಮ್ಮೆ ಧಾಮಣಗಾವಿಗೆ ತಪ್ಪದೆ ಬಂದು ಕೀರ್ತನವಂ ಕೇಳುತಿದ್ದಳು. ಇಂತು ಮೂರು ವರ್ಷಗಳು ನಡೆದ ಬಳಿಕ ವಿಘ್ನಗಳುಂಟಾಗುವುದಾಯಿತು. ಪಾತ್ರೆಯಲ್ಲಿ ಹಾಲನ್ನು ತುಂಬಿರಿಸಿರಲು, ಅದನ್ನು ಉರುಟಿಸಿಬಿಡುವುದಕ್ಕೆ ಬೆಕ್ಕು ಎಂತು ಹೊಂಚುಹಾಕುವುದೋ ಅಂತು ಸಾಧಕರು ಈಶ್ವರನ ಭಜನೆಯಂ ಮಾಡುತ್ತಿರಲು, ಅದಕ್ಕೆ ಮಹಾವಿಘ್ನಗಳು ಸಮಯವಂ ಹೊಂಚುಹಾಕುತ್ತಿರುವುವು. ಯೋಗಿಗಳಿಗೆ ಸಿದ್ಧಿಗಳು ಮನಸ್ಸನ್ನು ಕೆಡಿಸುವಂತೆ, ಧನಿಕರನ್ನು ಕಳ್ಳರು ಉಪದ್ರವಂಗೊಳಿಸುವಂತೆ, ಚಂದ್ರನನ್ನು ರಾಹುವು ಕ್ಲೇಶಪಡಿಸುವಂತೆ, ಈಶ್ವರನಲ್ಲಿ ಭಕ್ತಿಯಂ ಮಾಡುವವರನ್ನು ವಿಘ್ನವು ಬಾಧಿಸುತ್ತಿರುವುದು. ಅದಂತಿರಲಿ. ಪೂರ್ವದ ಕಥೆಯ ಅನುಸಂಧಾನವನ್ನು ಸಜ್ಜನರು ಅವಧರಿಸಬೇಕು.

ಹಾಸಿಯು ಬೋಧಲನ ಅನುಗ್ರಹದಿಂದ ಜ್ಞಾನವನ್ನು ಪಡೆದು ಏಕಾದಶೀದಿವಸ ಕೇಳಿದ ಕೀರ್ತನವನ್ನು ಏಕಾಂತದಲ್ಲಿ ಕುಳಿತುಕೊಂಡು ಮನನಮಾಡುತಿದ್ದಳು. ಹರಿನಾಮದಲ್ಲಿ ವಿಶ್ವಾಸವು ಹುಟ್ಟಿದುದರಿಂದ ಅದೇ ನಿದಿಧ್ಯಾಸೆಯಾಯಿತು. ಇಂತು ಮೂರುವರ್ಷಗಳು ಕಳೆದ ಬಳಿಕ ಮಹಾವಿಘ್ನವು ಸಂಭವಿಸಿತು.

ಮಮತೆಯ ಅಣ್ಣತಮ್ಮಂದಿರಿಬ್ಬರೂ ತಾವು ಬೇರೆಯಾಗಬೇಕೆಂದೂ ದಾಸಿಯಾದ ಹಾಸಿಯನ್ನು ಮಾರಬೇಕೆಂದೂ ಆಲೋಚನೆಯಂಮಾಡಲು, ಈಸಂಗತಿ ಕರ್ಣಾಕರ್ಣಿಕೆಯಿಂದ ಹಾಸಿಯ ಕರ್ಣದಲ್ಲೂ ಬಿದ್ದಿತು. ಆಕೆ ಮನದಲ್ಲಿ ಬಹುಚಿಂತೆಗೊಂಡು ದುಷ್ಕರ್ಮವು ಪ್ರಬಲವಾದುದೆಂದು ಬಗೆದು, ಆದಿನ ಮನೆಯ ಕೆಲಸವೆಲ್ಲವನ್ನೂ ಬೇಗನೆ ತೀರಿಸಿಕೊಂಡು ಧಾಮಣಗಾವಿಗೆ ಬಂದು ಏಕಾಂತದಲ್ಲಿ ಬೋಧಲನಂ ಕಂಡು ಆತನ ಎರಡುಪಾದಗಳನ್ನೂ ಹಿಡಿದು ಕಣ್ಣುಗಳಿಂದ ನೀರನ್ನು ಸುರಿಸಿ

ಸುತಿರಲು, ಬೋಧಲನು ಆಕೆಯಂ ಕಂಡು-ಹಾಸಿ! ಇದೇನು? ನಿನ್ನ ರೀತಿಯು ಬೇರೆಯಾಗಿರುವುದು. ನಿನ್ನ ಮನಸ್ಸಿನಲ್ಲಿ ಏನು ಚಿಂತೆ ಉಂಟಾಗಿರುವುದು? ಅದನ್ನು ನನಗೋಸ್ಕರ ಹೇಳು-ಎಂದನು.

ಹಾಸಿಯು ಬೋಧಲನನ್ನು ಕುರಿತು-ತಂದೆಯೇ! ಇಂದಿನಿಂದ ನಿನ್ನ ಪಾದವು ತೊರೆದುದು. ನನ್ನ ಒಡೆಯನು ನನ್ನನ್ನು ಮಾರಬೇಕೆಂದಿರುವನು. ಗ್ರಾಹಕರು ದೂರದಿಂದ ಬಂದಿರುವರು. ಇನ್ನು ಮೇಲೆ ನಿಮ್ಮ ಕೀರ್ತನವು ನನ್ನ ಕಿವಿಯಲ್ಲಿ ಎಂತು ಬಿದ್ದೀತು?-ಎನಲು, ಅದಕ್ಕೆ ಬೋಧಲನು ಆಕೆಯನ್ನು ಕುರಿತು-ಅಮ್ಮಾ! ಕೇಳು. ದೇಹದ ಪ್ರಾರಬ್ಧವು ಎಲ್ಲಿಗೆ ತೆಗೆದುಕೊಂಡು ಹೋಗುವುದೋ ಅಲ್ಲಿಗೆ ಆವಶ್ಯಕವಾಗಿ ಹೋಗಬೇಕಾಗುವುದು. ನೀನು ಏಕೆ ವ್ಯಸನಪಡುವೆ? ಸಮುದ್ರದಲ್ಲಿ ಸುತ್ತುತಿರುವ ತೆರೆಗಳು ಆನೀರನ್ನು ಬಿಟ್ಟು ಬೇರೆ ಇಲ್ಲ. ಅದರಂತೆ ಶ್ರೀಪಾಂಡುರಂಗನು ಆನಂದ ಸಾಗರವು. ನಮ್ಮ ಜೀವವು ಅದರ ತೆರೆಯು-ಎಂದು ನೀನು ಅಂತರಂಗದಲ್ಲಿ ತಿಳಿದವಳಾದರೆ ದುಃಖವು ನಿನ್ನನ್ನು ಬಾಧಿಸದು.–ಎಂದು ಸಮಾಧಾನವನ್ನು ಹೇಳಿದನು.

ಅದಕ್ಕೆ ಹಾಸಿಯು–ನಾನು ಇದಕ್ಕೋಸ್ಕರ ವ್ಯಸನಪಡುವುದಿಲ್ಲ. ನೆರೆಯಲ್ಲಿದ್ದ ನಿಮ್ಮಸಂಗತಿ ತಪ್ಪಿಹೋಗುವಕಾರಣ ದುಃಖವಾಗುವುದು-ಎಂದು ನುಡಿದು ಅಲ್ಲಿಯೇ ಮೂರ್ಛಿತೆಯಾಗಿ ಬಿದ್ದು ಥಟ್ಟನೆ ಎಚ್ಚತ್ತು ಸಮಾಧಾನಗೊಂಡು ಬೋಧಲನ ಮಡದಿಯಂ ಕುರಿತು-ಅಮ್ಮಾ! ನಿಮ್ಮ ಅಣ್ಣತಮ್ಮಂದಿರು ನನ್ನನ್ನು ಮಾರುವುದಕ್ಕೆ ಸಿದ್ಧರಾಗಿರುವರು. ಆದುದರಿಂದ ಬಹುದುಃಖಿತೆಯಾಗಿರುವೆನು. ನೀವು ನಿಮ್ಮ ಮನೆಯಲ್ಲಿ ಇಟ್ಟುಕೊಂಡು ಕ್ರಯದ ಹಣವನ್ನು ಅವರಿಗೆ ಕೊಟ್ಟುಬಿಡಬೇಕು– ಎಂದು ಪಾದಗಳ ಮೇಲೆ ಬಿದ್ದಳು.

ಬೋಧಲನು ಹಾಸಿಯ ದುಃಖವನ್ನು ನೋಡಿ ಕರುಣೆಯುಳ್ಳವನಾಗಿ, ಏನಾದರೂ ಉಪಾಯವಂ ಮಾಡಿ ಈಕೆಯನ್ನು ಬಿಡಿಸಬೇಕು. ನನಗೆ ದ್ರವ್ಯವು ಅನುಕೂಲಿಸದಿದ್ದರೆ ಹೊಲವನ್ನು ಮಾರಿಯಾದರೂ ಅನಾಥೆಯಾದ ಈಕೆಗೆ ಬಿಡುಗಡೆಯಂ ಮಾಡಬೇಕು.-ಎಂದು ಬಗೆದು ಹಾಸಿಗೆ ಅಭಯವಂ ಕೊಟ್ಟು-ನೀನು ಮುಂದೆ ನಿನ್ನ ಮನೆಗೆ ಹೋಗು. ನಾನೂ ಹಿಂದೆ ತ್ವರೆಯಿಂದ ಬರುವೆನು-ಎಂದು ಹೇಳಿದನು.

ಆಕೆ ಆಮಾತಂ ಕೇಳಿ ದವಾಗ್ನಿಯಿಂದ ಸಂತಪ್ತವಾದ ಲತೆಯು ಅನುಕೂಲವಾದ ವೃಷ್ಟಿಯಿಂದ ತಣ್ಪನೊಂದಿ ಉಲ್ಲಸಿತವಾಗುವಂತೆ ಉಲ್ಲಾಸಗೊಂಡು ರಾಳಿರಾಶಿಗೆ ಹೊರಟುಹೋದಳು.

ಬಳಿಕ ಬೋಧಲನು ತ್ವರೆಯಿಂದ ಅಲ್ಲಿಗೆ ಹೋಗಿ ತನ್ನ ಭಾವಮೈದುನರನ್ನು ಕುರಿತು-ನೀವು ದಾಸಿಯನ್ನು ಮಾರುವಿರೆಂಬ ವಾರ್ತೆಯನ್ನು ಕೇಳಿದೆನು. ಅಂತು ನಿಮ್ಮ ಮನದಲ್ಲಿ ಇದ್ದರೆ ನಮ್ಮ ಮನೆಗೆ ಕೊಡಬೇಕು. ನೀವು ಹೇಳಿದ ಕ್ರಯವನ್ನು ಕೊಟ್ಟುಕಳುಹುವೆನು-ಎಂದನು.

ಆದುರ್ಬುದ್ಧಿಗಳು ಆಮಾತಂ ಕೇಳಿ-ನಮ್ಮ ದಾಸಿಯನ್ನು ನಿಮ್ಮ ಮನೆಗೆ ಎಂದಿಗೂ ಕೊಡುವುದಿಲ್ಲ. ನೀವು ನೆರೆಯ ಗ್ರಾಮದಲ್ಲಿ ಹೊಲವುಳ್ಳವರು. ಅಲ್ಲದೆ ಹಿಂದಣ ನಂಟರು. ಇತರರಿಗೆ ಸುಮ್ಮನೆ ಕೊಟ್ಟೇವಲ್ಲದೆ ನಿಮಗೆ ಮಾರುವುದಿಲ್ಲ-ಎಂದು ಉತ್ತರವಂ ಹೇಳಿದರು.

ಬೋಧಲನು ಅವರ ಬಿಂಕದ ನುಡಿಯಂಕೇಳಿ ಸುಮ್ಮನಾದನು. ಹಾಸಿಯು-ನನ್ನ ಕರ್ಮವು ವಿಪರೀತವಾದುದು—ಎಂದು ರೋದನಮಾಡುತ ಇದ್ದಳು. ಆಗ ಬೋಧಲನು ಹಾಸಿಯಂ ಕುರಿತು-ನಾನು ಶ್ರೀವಿಟ್ಠಲನಿಗೆ ಬಿನ್ನವಿಸಿ ನಿನ್ನನ್ನು ಕರೆಯಿಸಿಕೊಳ್ಳುವೆನು. ಆತನೆ ಬಂದು ನಿನ್ನನ್ನು ಕರೆದುಕೊಂಡುಹೋಗುವನು. ನೀನು ಚಿಂತಿಸಬೇಡ—ಎಂದು ಎಲ್ಲರೂ ಕೇಳುವಂತೆ ಸಮಾಧಾನೋಕ್ತಿಯನ್ನು ಹೇಳಿ ತನ್ನೂರಿಗೆ ಹೊರಟುಹೋಗಿ ಮಡದಿಯೊಡನೆ ಈ ವೃತ್ತಾಂತವೆಲ್ಲವನ್ನೂ ಹೇಳಿದನು.

ಇತ್ತ ರಾಳೆರಾಶಿಯಲ್ಲಿ ಅವರ ಮನದಲ್ಲಿ ಅತ್ಯಂತಭಯವುಂಟಾಯಿತು. ಬೋಧಲನು ವಿಟ್ಠಲನಲ್ಲಿ ಹೇಳಿ ಇನ್ನೇನು ಉಪದ್ರವವನ್ನು ಮಾಡಿಸುವನೋ ? ಅವನು ಇಲ್ಲಿ ಪ್ರತಿಜ್ಞೆಯಂ ಮಾಡಿರುವನು. ಅದು ಎಂದಿಗೂ ಅಸತ್ಯವಾಗಲಾರದು. ಆದುದರಿಂದ ಗ್ರಾಹಕರನ್ನು ಬೇಗನೆ ಕರೆಯಿಸಿ ಇವಳನ್ನು ಒಪ್ಪಿಸಿಬಿಡಬೇಕು—ಎಂದು ಆಲೋಚಿಸಿ ಇತರಗ್ರಾಮದಿಂದ ಕೊಳ್ಳುವರನ್ನು ಆದಿವಸವೇ ಕರೆಯಿಸಲು, ಅವರು ಬಂದು ಹಾಸಿಯನ್ನೂ ಆಕೆಯ ಮಕ್ಕಳನ್ನೂ ಇಪ್ಪತ್ತೈದು ವರಹಗಳ ಕ್ರಯಕ್ಕೆ ಒಪ್ಪಿ ಹಣವನ್ನು ಕೊಟ್ಟು ಕ್ರಯಪತ್ರವಂ ಬರೆಯಿಸಿಕೊಂಡರು.

ಆಗ ಹಾಸಿಯು—ಪಂಡರೀನಾಥನು ಬರಲಿಲ್ಲವಲ್ಲಾ—ಎಂದು ಅಳುತ್ತ, ದೀನದಯಾಳುವೇ! ಪಂಡರೀನಾಥನೇ ! ಈ ನನ್ನ ಸಂಕಟದಲ್ಲಿ ಪ್ರಸನ್ನನಾಗು. ಇಲ್ಲದಿದ್ದರೆ ದೇಹಲೋಭವನ್ನೂ ಮಮತೆಯನ್ನೂ ಬಿಟ್ಟು ಪ್ರಾಣವಂ ನೀಗುವೆನು. "ವಿಟ್ಠಲನೇ ಬಂದು ನಿನ್ನನ್ನು ಕರೆದುಕೊಂಡು ಹೋಗುವನು" ಎಂದು ಬೋಧಲನು ಹೇಳಿದನು. ಈಗ ಆತನ ಮಾತೂ ಅಸತ್ಯವಾಗಿ ಕಾಣುವುದು-ಎಂದು ಅಚಲವಾದ ಸದ್ಭಾವದಿಂದ ಧ್ಯಾನವಂ ಮಾಡುತಿರಲು, ಪಂಡರೀನಾಥನು ದಾಸಿಯ ಮನೋಗತವಂ ತಿಳಿದು ಬ್ರಾಹ್ಮಣರೂಪವಂ ತಾಳಿ ಬಂದು ಆಕೆಯಿದ್ದ ಮನೆಯ ಅಂಗಳದಲ್ಲಿ ನಿಂತು ಹಾಸಿಯಂ ಕುರಿತು-ಬೋಧಲನು ನಿನ್ನನ್ನು ಈಗಲೇ ಕರೆದುತರುವಂತೆ ಹೇಳಿರುವನು-ಎಂದು ನುಡಿಯಲು, ಆಕೆ ಆವಿಪ್ರನ ವಚನವಂ ಕೇಳಿ ಬಹುಹರ್ಷಯುಕ್ತೆಯಾಗಿ ಬಳಿಗೆ ಬಂದು ಎರಡುಪಾದಗಳನ್ನೂ ದೃಢವಾಗಿ ಹಿಡಿದಳು. ಆಗ ಒಂದು ಕೌತುಕವು ನಡೆಯಿತು:—ಪಂಡರೀನಾಥನು ದಾಸೀಸಮೇತನಾಗಿ ಅಲ್ಲಿಯೇ ಅದೃಶ್ಯನಾದನು.

ಬಳಿಕ ಗ್ರಾಹಕರು ಇದಂ ಕಂಡು-ನಮ್ಮ ಅದೃಷ್ಟವು ಕೆಟ್ಟದು-ಎಂದು ಎಣಿಸಿ—ದಾಸಿಯನ್ನು ಊರಿಗೆ ಕರೆದುಕೊಂಡು ಹೋಗಲಿಲ್ಲ. ಇಲ್ಲಿಯೇ ಅದೃಶ್ಯೆ

ಯಾದಳು. ನಮ್ಮ ಹಣವನ್ನು ನಮಗೆ ಕೊಟ್ಟುಬಿಡಿ. ಬಂದಿದ್ದ ಬ್ರಾಹ್ಮಣನು ಬೋಧಲನ ಹೆಸರನ್ನು ಹೇಳಿದನು. ಆದುದರಿಂದ ನೀವು ಧಾಮಣಗಾವಿಗೆ ಹೋಗಿ ಈ ವಿಷಯವನ್ನು ವಿಚಾರಿಸಿ- ಎಂದು ಅವರಂ ಕುರಿತು ನುಡಿಯಲು, ಅವರು-ಕ್ರಯ ಪತ್ರವಂ ನಿಮ್ಮ ಕೈಗೆ ಕೊಟ್ಟ ಬಳಿಕ ನಮ್ಮ ಮೇಲೆ ವಾತಿಲ್ಲ-ಎಂದರು. ಆದಕ್ಕೆ ಗ್ರಾಹಕರು-ಬೋಧಲನು ಬಂದು ನಿಮಗೆ ಬುದ್ಧಿಯಂ ಹೇಳಿ ದಾಸಿಯನ್ನು ಕೇಳಿದನು. ನೀವು ಕೊಡದಿದ್ದುದರಿಂದ ಹೊರಟುಹೋಗುವ ಸಮಯದಲ್ಲಿ ಆಕೆಯನ್ನು ವಿಟ್ಠಲನೇ ಬಂದು ಕರೆದುಕೊಂಡು ಹೋಗುವನೆನುತ ನುಡಿದನೆಂದು ಕೇಳಿದ್ದೆವು. ಅದೇ ರೀತಿಯಲ್ಲಿ ಈಗ ಆಯಿತೆಂದು ತೋರುವುದು. ಆತನ ಮೇಲೆ ವ್ಯವಹಾರ ಮಾಡಲು ಕಾರಣವಿಲ್ಲ. ನೀವು ನಮ್ಮ ಹಣವನ್ನು ಕೊಟ್ಟುಬಿಡಬೇಕು-ಎಂದು ಅವರೊಡನೆ ವ್ಯವಹರಿಸುತ್ತಿದ್ದರು. ಭಕ್ತಪಕ್ಷಪಾತಿಯಾದ ಪಂಢರೀನಾಥನು ತನ್ನ ದಾಸರ ಮಹಿಮೆಯನ್ನು ಪ್ರಕಾಶಗೊಳಿಸುವನು.

ಅದ್ಭುತವಾದ ಇನ್ನೊಂದು ಚರಿತ್ರೆಯನ್ನು ಹೇಳುವೆನು:—ಶ್ರೋತೃಗಳು ಅವಧರಿಸಬೇಕು.

ಧಾಮಣಗಾವಿನ ಜನಗಳು ಕೌತುಕಂಗಳಂ ನೋಡಿ-ಬೋಧಲನು ಸಾಮಾನ್ಯ ಮನುಷ್ಯನಲ್ಲ. ಜ್ಞಾನಿ; ಪರಮೋದಾರನು ; ಈಶ್ವರಾವತಾರಪುರುಷನು. ಜನಗಳನ್ನು ಸಂಸಾರದಿಂದ ಪಾರಗಾಣಿಸುತಿರುವನು-ಎಂದು ನುಡಿಯುತಿದ್ದರು.

ಬಳಿಕ ಒಂದು ಕಾಲದಲ್ಲಿ ಅನಾವೃಷ್ಟಿಯಿಂದ ಧಾನ್ಯದ ಬಿತ್ತನೆಯೇ ನಿಂತು ಹೋಯಿತು. ಆಶ್ವಯುಜಮಾಸಪರ್ಯಂತ ಮಳೆ ಬರಲಿಲ್ಲ. ಬಳಿಕ ಕಾರ್ತಿಕ ಮಾಸದಲ್ಲಿ ಸ್ವಾತಿಯ ಮಳೆಯು ಅಪಾರವಾಗಿ ಬಂದಿತು. ಆಗ ಬೋಧಲನು ಬಿತ್ತುವುದಕ್ಕೆ ಬೀಜವನ್ನು ಗ್ರಾಮಸ್ಥರಿಂದ ಕಡಮಾಡಿ ಮನೆಗೆ ತೆಗೆದುಕೊಂಡು ಬಂದನು. ಆ ಸಮಯದಲ್ಲಿ ಪಂಢರಿಗೆ ಹೋಗುವ ಜಾತ್ರಿಗರು ಪ್ರಾಪ್ತರಾದರು. ಬೋಧಲನು ಅವರಂ ಕಂಡು ಮನದಲ್ಲಿ ಬಹುಸಂತೋಷವಂ ತಾಳಿ ಅವರಿಗೆ ಸದ್ಭಾವದಿಂದ ದಂಡಪ್ರಣಾಮವಂ ಮಾಡಿ-ಇಂದು ನನ್ನ ಪುಣ್ಯೋದಯವು ; ಸಂತರ ಸಂದರ್ಶನವಾಯಿತು-ಎಂದನು.

ಆ ಗುಂಪಿನಲ್ಲಿ ಕೆಲವರು ಬ್ರಾಹ್ಮಣರಿದ್ದರು. ಅವರು ಬೋಧಲನಂ ಕುರಿತು-ನೀನು ದುರ್ಭಿಕ್ಷದಲ್ಲಿ ಅನ್ನದಾನಮಾಡುವನು-ಎಂದು ಕೇಳಿರುವೆವು. ಈಗ ನೀನು ನಮಗೆ ಸಾಹಾಯ್ಯವಂ ಮಾಡಬೇಕು-ಎನಲು, ಬೋಧಲನು ಅವರ ಮಾತಂ ಕೇಳಿ ಮನೆಯಲ್ಲಿ ಧಾನ್ಯವಿಲ್ಲ. ಈ ಸಂತರು ವಿಮುಖರಾಗಿ ಹೋದರೆ ಸತ್ತ್ವಕ್ಕೆ ಹಾನಿಯುಂಟಾಗುವುದು. ಏನ ಮಾಡುವುದು ?-ಎಂದು ಮನದಲ್ಲಿ ಚಿಂತಿಸಿ ತನ್ನ ಮಗನನ್ನು ಕರೆದು ಈಗ ತಂದಿರುವ ಬೀಜದಿಂದಲೇ ಈ ಸಂತರಿಗೆ ಭೋಜನವಂ ಮಾಡಿಸಬೇಕು.

ಭೂಮಿಯು ನಿರ್ಜೀವವು. ಆದರೂ ಬೆಳೆಯನ್ನು ಕುಡುವುದು. ಮನುಷ್ಯರು ಸಜೀವರು. ಇವರ ಉದರದಲ್ಲಿ ಬೀಜವನ್ನು ಬಿತ್ತಲು ಏನು ಫಲವಾಗುವುದಿಲ್ಲ?-ಎಂದನು.

ಯವಮಾಜಿಯು ತಂದೆಯ ಮಾತನ್ನು ಕೇಳಿ ಮನದಲ್ಲಿ ಸಂತೋಷಗೊಂಡು ಆಬೀಜವನ್ನು ಬೀಸಿಸಿ ಆಹಿಟ್ಟನಿಂದ ಅವರಿಗೆಲ್ಲರಿಗೂ ಭೋಜನವಂ ಮಾಡಿಸಿ ಅವರನ್ನು ಕಳುಹಿಸಿಕೊಟ್ಟನು.

ಬಳಿಕ ಮನೆಯಲ್ಲಿದ್ದ ಕಹಿಸೋರೆಯ ಬೀಜವಂ ತೆಗೆದುಕೊಂಡು ಹೋಗಿ ಹೊಲದಲ್ಲಿ ಬಿತ್ತಿದನು. ಈಶ್ವರನ ವ್ಯಾಪಾರವು ಅಮೇಯವಾದುದು. ಆ ಸೋರೆ ಬಳ್ಳಿಯಲ್ಲಿ ಅನೇಕಫಲಗಳು ಬಿಟ್ಟುವು. ಅದಂ ಕಂಡು ಊರ ಜನಗಳು-ಇದೇನು ವಿಪರೀತಕಾರ್ಯವು? ಧಾನ್ಯದ ಬೀಜವನ್ನು ಯಾತ್ರಿಕರಿಗೆ ವಿನಿಯೋಗಿಸಿ ಕಹಿಸೋರೆಯ ಬೀಜವನ್ನು ಈ ಹೊಲದಲ್ಲಿ ಬಿತ್ತಿರುವನು-ಎಂದು ನಕ್ಕರು. ಬೋಧಲನು ಊರ ಗೌಡನು. ನಮ್ಮ ಒಡೆಯನು. ನಮಗೋಸ್ಕರ ಸೋರೆಯನ್ನು ಬಿತ್ತಿರುವನು. ನಮಗೆಲ್ಲರಿಗೂ ಒಂದೊಂದು ಕಾಯನ್ನು ಕುಡುವನು-ಎಂದು ಕೆಲವರು ನುಡಿಯುತ್ತ ಹಾಸ್ಯಮಾಡಿದರು. ಕೆಲವರು-ಬೆಳೆಯು ಎಂತಿರುವುದೋ! ಹೋಗಿ ನೋಡೋಣ-ಎಂದು ಬೋಧಲನ ಹೊಲಕ್ಕೆ ಬಂದು, ಸೋರೆಯ ಬಳ್ಳಿಯಲ್ಲಿ ಬಹುವಾಗಿ ಬಿಟ್ಟದ್ದ ಫಲಗಳನ್ನು ಕಂಡು ಅವುಗಳಲ್ಲಿ ಒಂದನ್ನು ಪರೀಕ್ಷಾರ್ಥವಾಗಿ ಕಿತ್ತು ಒಡೆದು ನೋಡಿದರು. ಅದರಲ್ಲಿ ತುಂಬಿದಂತೆ ಉತ್ತಮವಾದ ಗೋಧಿಯು ಕಾಣಿಸಿತು. ಬಳಿಕ ಎಲ್ಲರೂ ಬಂದು ನೋಡಿ ಆಶ್ಚರ್ಯಪಟ್ಟರು. ಕ್ಷೇತ್ರಾಧ್ಯಕ್ಷನು ಈ ಸಂಗತಿಯನ್ನು ಆದೇಶದ ತುರುಷ್ಕರಾಜನ ಬಳಿಗೆ ಬರೆದು ಕಳುಹಿದನು.

ಅವನು ಈವಿಷಯವನ್ನು ಕೇಳಿ ಸೇವಕರನ್ನು ಕಳುಹಿಸಿ ಬೋಧಲನನ್ನು ಕರೆಯಿಸಿ ಕೋಪಯುಕ್ತನಾಗಿ-ಸೋರೆಕಾಯಿಯಲ್ಲಿ ಗೋಧಿ ಎಂತು ಬಂದಿತು?-ಎಂದು ಬೆಸಗೊಳ್ಳಲು, ಆತನು ಇದ್ದ ಸಂಗತಿಯನ್ನು ಯಥಾರ್ಥವಾಗಿ ಹೇಳಿದನು. ಸಂಜಯನು ಹೇಳಿದ ಗೀತೆಯನ್ನು ಕೇಳಿ ಧೃತರಾಷ್ಟ್ರನು ಎಂತು ವಿಶ್ವಾಸಗೊಳ್ಳಲಿಲ್ಲವೋ ಅಂತು ಆ ರಾಜನು ಬೋಧಲನ ಆ ಮಾತನ್ನು ಕೇಳಿ ವಿಶ್ವಾಸಗೊಳ್ಳದೆ ಆತನ ಮಾತನ್ನು ಅಸತ್ಯವೆಂದು ಭಾವಿಸಿ-ಈ ಮಾಣಿಕೋಜಿಗೌಡನನ್ನು ತಮ್ಮ ಜಾತಿಗೆ ಸೇರಿಸಿಬಿಡಿ-ಎಂದು ತನ್ನವರಿಗೆ ಆಜ್ಞೆಯಂ ಮಾಡಲು, ಅವರು ಆಕ್ಷಣ ಮಾಂಸವನ್ನು ತಂದು ಮುಂದಿರಿಸಿ ತಿನ್ನೆಂದು ಬಲಾತ್ಕಾರವಮಾಡಿದರು. ಆಗ ಬೋಧಲನು ಭಗವಂತನನ್ನು ಮನದಲ್ಲಿ ಧ್ಯಾನಿಸಲು, ಆ ಮಾಂಸವೆಲ್ಲವೂ ಎಲ್ಲರ ಇದಿರಿಗೆ ಹೂತುಲಸಿಯಾಯಿತು. ರಾಯನು ಅದನ್ನು ಕಂಡು ವಿಸ್ಮಿತನಾಗಿ ಬೋಧಲನಲ್ಲಿ ಸದ್ಭಾವವಂ ತಾಳಿ ಥಟ್ಟನೆ ಎದ್ದು ಆತನಿಗೆ ನಮಸ್ಕಾರವಂ ಮಾಡಿ-ನಿನಗೆ ಧನಧಾನ್ಯ ಮೊದಲಾದುದು ಏನು ಇಷ್ಟವಾಗಿರುವುದೋ ಅದನ್ನು ಬೇಡು; ಕುಡುವೆನು-ಎಂದನು.

ಬೋಧಲನು ಅವರ ಮಾತಂಕೇಳಿ ಬೇಸರಗೊಂಡು ಥಟ್ಟನೆ ಎದ್ದು ಅವನಂ ಕುರಿತು-ನನಗೆ ಅಂತಹ ಅಪೇಕ್ಷೆಯೇನೂ ಇಲ್ಲ. ಕಾಮಧೇನುವನ್ನು ಮನೆಯಲ್ಲಿ ಇಟ್ಟುಕೊಂಡು ಮನೆಮನೆಯ ಬಾಗಿಲಿಗೆ ಏಕೆ ಹೋಗಬೇಕು? ಕಲ್ಪವೃಕ್ಷವು ಅಂಗ ಳದಲ್ಲಿರುವಾಗ ಈಚಲ ತೋಪನ್ನು ಏಕೆ ಹಾಕಿಸಬೇಕು? ಐರಾವತವಾಹನವಂ ಬಿಟ್ಟು ಕತ್ತೆಯನ್ನು ಏಕೆ ಏರಬೇಕು? ಮಾವಿನ ತೋಪನ್ನು ಬಿಟ್ಟು ತಾರೆಯ ಮರದ ಕೆಳಗೆ ಏಕೆ ಕುಳಿತುಕೊಳ್ಳಬೇಕು? ಮನುಷ್ಯದೇಹದಲ್ಲಿ ಬೇಸರಗೊಂಡು ಪಶು ಜನ್ಮವನ್ನೇಕೆ ಪಡೆಯಬೇಕು? ಚಂಪಕಾದಿಪುಷ್ಪಗಳಂ ಬಿಟ್ಟು "ಪುಂಗಪೇಲ" ಎಂಬುದನ್ನು ಏಕೆ ಗ್ರಹಿಸಬೇಕು? ಸಂತರ ಸಂಗವಂ ಬಿಟ್ಟು ನಿಂದಕನಲ್ಲಿ ಏಕೆ ಪ್ರೀತಿ ಯಂ ಮಾಡಬೇಕು? ಹರಿಕೀರ್ತನೆಯಂ ಬಿಟ್ಟು ದುಷ್ಟಪದವನ್ನು ಏಕೆ ಪಾಡ ಬೇಕು? ಮನೆಯಲ್ಲಿ ಹಾಲುಮೊಸರು ಇರುವಾಗ ಮನೆಮನೆಗೆ ಹೋಗಿ ಮಜ್ಜಿಗೆಯನ್ನು ಏಕೆ ತಿರಿಯಬೇಕು? ಪರಮಹಂಸಾಶ್ರಮವಂ ಪಡೆದವನು ಗೃಹಸ್ಥಾಶ್ರಮಕ್ಕೆ ಮತ್ತೆ ಏಕೆ ಬರಬೇಕು? ಭಗವದನುಗ್ರಹದಿಂದ ವೈರಾಗ್ಯವೊಂದಿದವನಿಗೆ ರಾಜಸನ್ಮಾನವು ಏಕೆ ಬೇಕು?—ಎಂದು ನುಡಿದು ತನ್ನೂರಿಗೆ ಹಿಂದಿರಿಗಿ ಬಂದನು. ಆತನು ದೇಹ ಧಾರಿಯಾಗಿದ್ದರೂ ಅಹಂಭಾವವುಳ್ಳವನಾಗಿರಲಿಲ್ಲ. ಭಗವನ್ನಾಮರೂಪಗಳಲ್ಲಿ ಚಿತ್ತವು ನೆಲಸಿದ್ದುದರಿಂದ ಆತನ ಭಕ್ತತ್ವವು ಆತನಿಗೆ ತೋರಲಿಲ್ಲ. ಭಕ್ತೈಕಾಯತ್ತನಾದ ದೇವನಿಗೆ ದೇವತ್ವವೂ ತೋರಲಿಲ್ಲ. ಪಾಂಡುರಂಗನ ಭಜನೆಯಲ್ಲಿ ಆಸಕ್ತನಾದ ಬೋಧಲನಿಗೆ "ನಾನು" ಎಂಬುದು ಮರೆತುಹೋಯಿತು. ಹೃದಯದಲ್ಲಿ ಸ್ವಾಮಿಯು ನರ್ತನಮಾಡುತಿರಲು; ಬೋಧಲನು ಅದ್ವಯಸ್ಥಿತಿಯುಳ್ಳವನಾಗಿ ತಾನೇತಾನಾಗಿದ್ದನು. ಸದ್ಭಾವವಿಶೇಷದಿಂದ ಧಾಮಣಗಾವನ್ನೇ ಪಂಢರಪುರವನ್ನಾಗಿ ಮಾಡಿ ನಾನಾಚರಿತ್ರೆ ಗಳಂ ತೋರಿಸಿ ಜಡಮೂಢರನ್ನು ಉದ್ಧರಿಸಿದನು.

ಮುಂದಣ ಅಧ್ಯಾಯದಲ್ಲಿ ಪ್ರೇಮಳಭಕ್ತನಾದ ಗಣೇಶನ ಚರಿತ್ರೆಯು ಬಹು ರಸಭರಿತವಾದುದು. ಶ್ರೋತೃಗಳು ಪ್ರೀತಿಯಿಂದ ಕೇಳತಕ್ಕದು. ದೀನದಯಾಳು ವಾದ ರುಕ್ಮಿಣೀಕಾಂತನು ಕೃಪೆಯಿಂದ ಗ್ರಂಥವಂ ಹೇಳಿಸುವನು. ಮಹೀಪತಿಯು ಆತನ ಶರಣಾಗತನು. ಪ್ರೀತಿಯಿಂದ ಭಜನೆಯಂ ಮಾಡುತಿರುವನು.

ಇಂತು ಶ್ರೀ ಭಕ್ತವಿಜಯದಲ್ಲಿ ಐವತ್ತನಾಲ್ಕನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಗಣೇಶನಾಥ ಕೇಶವಸ್ವಾಮಿ ಗೋಸಾಯಿ-ಎಂಬುವರ ಚರಿತ್ರೆ.

ಜಯ ಅವ್ಯಯನೆ! ಅಚಲನೆ! ಅನಾಮರೂಪನೆ! ಪರಮಪುರುಷನೆ! ಬ್ರಹ್ಮಾಂಡನಾಯಕನೆ! ಜಗನ್ನಿವಾಸನೆ! ಶ್ರೀಹರಿಯೇ! ಭಕ್ತರು ನಿನ್ನನ್ನು ಸೇವಿಸುತಿರುವರು. ನೀನು ಅವರ ಚಿಂತನೆಯಲ್ಲಿರುವೆ. ಚಾತಕವೂ ಮೇಘವೂ ಎಂತು ಮಿತ್ರತ್ವದಿಂದ ಇರುವುವೋ ಭಕ್ತರೂ ನೀನೂ ಅಂತು ಇರುವಿರಿ. ಬಾಲಕನು ತಾಯನ್ನು ಕಾಣದಿದ್ದರೆ ದುಃಖಪಡುವನು. ಆಕೆಗೂ ಅದೇಪ್ರಕಾರವುಳ್ಳ ಪ್ರೀತಿಯಿರುವುದು. ಭಕ್ತನ ಮನೋವೃತ್ತಿಯೆಂತೋ ನೀನೂ ಅದಕ್ಕೆ ತಕ್ಕಂತೆ ಇರುವೆ. ಪೂರ್ಣಿಮಾ ಚಂದ್ರನ ಪ್ರಕಾಶವಂ ಕಂಡು ಚಕೋರವು ಉಲ್ಲಾಸಪಡುವಂತೆ ನೀನು ನಿನ್ನ ಭಕ್ತರ ಕೀರ್ತಿಯಂ ಕೇಳಿ ಉಲ್ಲಾಸಪಡುವೆ. ಭಕ್ತರು ನಿನ್ನನ್ನು ಭಕ್ತಿಯಿಂದ ಸ್ತುತಿಯಿಸುವರು. ನಿನಗೆ ಭಕ್ತರ ಕೀರ್ತಿಯು ಇಷ್ಟವಾಗಿರುವುದು. ಆದುದರಿಂದ ನನ್ನಿಂದ ಭಕ್ತವಿಜಯಗ್ರಂಥವಂ ಬರೆಯಿಸಿದವನಾದೆ.

ಎಲೈ ಶ್ರೋತೃಗಳಿರಾ! ಪೂರ್ವಾಧ್ಯಾಯದಲ್ಲಿ ಬೋಧಲನು ತುರುಷ್ಕರಾಜನಿಗೆ ಪರೀಕ್ಷೆಯಂ ತೋರಿ ಅವನು ಕುಡುವ ಧನಧಾನ್ಯಸಂಪತ್ತಿಯಂ ಬಿಟ್ಟು ಹರಿಭಜನೆಯಲ್ಲಿಯೇ ಸಂಸಕ್ತವಾದ ಮನವುಳ್ಳವನಾಗಿದ್ದನೆಂಬ ಕಥೆಯಂ ಕೇಳಿದಿರಷ್ಟೆ. ಈಗ ಸುಜ್ಞಾನಿಯೂ ವಿರಕ್ತನೂ ಅತ್ಯಂತವಿವೇಕಿಯೂ ಸದ್ಗುರೂಪಾಸಕನೂ ಆದ ಗಣೇಶನಾಥನೆಂಬವನ ಚರಿತ್ರೆಯನ್ನು ಆಲಿಸಿ.

ಬಾಲಘಾಟ ಪ್ರಾಂತದಲ್ಲಿ "ಸಾರಸೆ ಉಜ್ಜಯಿನಿ" ಎಂಬ ಎರಡು ಊರುಗಳು ಇರುವುವು. ಆ ಗಣೇಶನಾಥನು ಆಯೆರಡರಲ್ಲಿಯೂ ವಾಸಿಸುತ ಭಕ್ತಿಯಿಂದ ಕೀರ್ತನವಂ ಮಾಡುತಿದ್ದನು. ಸಕಲವಿಷಯಗಳಲ್ಲಿಯೂ ವಿರಕ್ತಿಯುಳ್ಳವನಾಗಿದ್ದನು. ಹಗಲು ಅರಣ್ಯದಲ್ಲಿ ಏಕಾಗ್ರಚಿತ್ತನಾಗಿ ಭಜನೆಯನ್ನು ಮಾಡುತ್ತ ರಾತ್ರಿಕಾಲದಲ್ಲಿ ಊರಿಗೆ ಬಂದು ಶ್ರೀಹರಿಯ ಗುಣಂಗಳನ್ನು ಆನಂದದಿಂದ ಪಾಡುತ್ತಿದ್ದನು. ಸನ್ಮಾನವನ್ನೂ ಧನಕನಕವಸ್ತುವಾಹನಾದಿಗಳನ್ನೂ ಮೃಷ್ಟಾನ್ನವನ್ನೂ ಯಾವುದನ್ನೂ ಒಲ್ಲದೆ ವೈರಾಗ್ಯಸಂಪನ್ನನಾಗಿದ್ದನು.

ಶಿವಾಜಿರಾಯನು ಪಂಢರಪುರದ ಯಾತ್ರೆಗೆ ಬಂದಿದ್ದಾಗ ಒಂದು ಕಾಲದಲ್ಲಿ ಗಣೇಶನಾಥನ ಕೀರ್ತಿಯನ್ನು ಕೇಳಿ ಆತನ ಸಂದರ್ಶನವನ್ನು ಬಯಸಿ ಆತನ ಬಳಿಗೆ ಬಂದು ಸಾಷ್ಟಾಂಗನಮಸ್ಕಾರವಂ ಮಾಡಿ ಕೀರ್ತನವಂ ಶ್ರವಣಮಾಡುತ್ತ ಕುಳಿತನು.

ಗಣೇಶನಾಥನ ಜ್ಞಾನವು ಅಪಾರವಾದುದು. ಕವಿತೆಯು ಪ್ರಸಾದಲಬ್ಧವಾದುದು. ಅನೇಕದೃಷ್ಟಾಂತಪುರಸ್ಸರವಾಗಿ ಅಭಂಗಗಳಂ ರಚಿಸಿ ಪಾಡುತಿದ್ದನು. ಶ್ರೋತೃಗಳು ಕೇಳಿ ಅಪಾರವಾದ ಆನಂದವಂ ತಾಳುತಿದ್ದರು.

ಶಿವಾಜಿರಾಯನು ತಾನು ಮಲಗುವುದಕ್ಕೋಸ್ಕರ ಒಂದು ಮಂಚವನ್ನು ಹೊಸತಾಗಿ ಮಾಡಿಸಿದ್ದನು. ಮೊದಲ ದಿವಸದಲ್ಲಿ ಗಣೇಶನಾಥನನ್ನು ಆ ಮಂಚದಮೇಲೆ ಮಲಗಿಸಬೇಕೆಂದು ಆಲೋಚಿಸಿ ಕೈಮುಗಿದುಕೊಂಡು-ಸ್ವಾಮಿ! ನಾನು ಹೊಸತಾದ ಒಂದು ಮಂಚವನ್ನು ಮಾಡಿಸಿರುವೆನು. ತಾವು ಒಂದುರಾತ್ರಿ ನಮ್ಮ ಆಶ್ರಮವನ್ನಲಂಕರಿಸಿ ಆ ಮಂಚದಲ್ಲಿ ಪವಡಿಸಬೇಕು-ಎಂದು ವಿನಯದಿಂದ ಪ್ರಾರ್ಥಿಸಿ ಪಾದಗಳಿಗೆ ಎರಗಲು, ಗಣೇಶನಾಥನು ಆ ಮಾತಿಗೆ ಹುಲಿಯಿಂದ ಹಿಡಿಯಲ್ಪಡುವ ಹುಲ್ಲೆಯಂತೆ ಸಂತಪಿಸುತ್ತ ತಾನು ವೈರಾಗ್ಯಶೀಲನಾದರೂ ಆ ರಾಯನ ಆದರವಿಶೇಷಕ್ಕೆ ಒಪ್ಪಿ ಒಂದು ಬೊಗಸೆಯ ಸಣ್ಣ ಕಲ್ಲುಗಳನ್ನು ಆಯ್ದು ಸೆರಗಿನಲ್ಲಿ ಕಟ್ಟಿಕೊಂಡನು. ರಾಯನು-ನೋಡಿ ಇದೇನು ? ಕಲ್ಲುಗಳನೇಕೆ ಸೆರಗಿನಲ್ಲಿ ಕಟ್ಟಿಕೊಂಡಿರಿ?-ಎಂದು ಬೆಸಗೊಳಲು, ನಾಮಗಳನ್ನು ಎಣಿಕೆಮಾಡುವುದಕ್ಕೆ ಬೇಕೆಂದು ಉತ್ತರವಂ ಹೇಳಿದನು.

ಬಳಿಕ ರಾಯನು ಆತನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ತನ್ನ ಬೀಡಿಗೆ ಕರೆದುಕೊಂಡುಹೋಗಿ ಹೂವಿನ ಹಾಸಿಗೆಯನ್ನು ಹಾಸಿಸಿ ಮಂಚದಲ್ಲಿ ಮಲಗಿಕೊಳ್ಳಲು ಸಿದ್ಧಮಾಡಿದನು. ಹದಿಮೂರು ಗುಣಗಳುಳ್ಳ ಉತ್ತಮವಾದ ತಾಂಬೂಲವನ್ನು ಆತನ ಮುಂದೆ ತಟ್ಟೆಯಲ್ಲಿರಿಸಿ ದೀಪಸ್ತಂಭಗಳಲ್ಲಿ ದೀಪವಂ ಹತ್ತಿಸಿ ನಾಲ್ಕು ಕಡೆಗಳಲ್ಲಿಯೂ ತೆರೆಗಳಂ ಹಾಕಿಸಿ ಘಮಘಮಿಸುವ ಪರಿಮಳದ್ರವ್ಯಗಳನ್ನೂ ಅನೇಕ ವಿಲಾಸೋಪಚಾರಸಂಭಾರಗಳನ್ನೂ ಅಲ್ಲಿ ಇರಿಸಿ ತಾನು ಹೊರಗೆ ಹೊರಟುಬಂದನು.

ಗಣೇಶನಾಥನು ಆಸ್ಪರ್ಶವಿಷಯವಂ ನೋಡಿ ಮನದಲ್ಲಿ ಪಶ್ಚಾತ್ತಾಪಯುಕ್ತನಾಗಿ ಆರಾಯನ ಭೋಗೋಪಚಾರಗಳಂ ನೋಡಿ, ಹಿಂಸಕನ ಮನೆಯಲ್ಲಿ ಸಿಕ್ಕಿಕೊಂಡ ಶ್ರೋತ್ರಿಯನಂತೆಯೂ, ಹುಲಿಯಿಂದ ಗವಿಗೆ ಒಯ್ಯಲ್ಪಟ್ಟ ಹಸುವಿನಂತೆಯೂ, ರಾಜನಿಂದ ಅರಣ್ಯದಿಂ ಹಿಡಿದುತರಲ್ಪಟ್ಟು ಮನೆಯಲ್ಲಿ ಕಟ್ಟಿದ ಹುಲ್ಲೆಯಂತೆಯೂ, ನೀರಿಂದ ಹೊರಗೆ ಹಾಕಿದ ಮೀನಿನಂತೆಯೂ ತಲ್ಲಣಿಸುತ್ತ ಹೊಸತಾಗಿ ಹಿಡಿದುತಂದು ಪಂಜರದಲ್ಲಿ ಸೇರಿಸಲ್ಪಟ್ಟು ಮೇವನ್ನೂ ನೀರನ್ನೂ ಒಲ್ಲದೆ ಸಂಕಟಪಡುವ ಗಿಳಿಯಂತೆ ಯಾವುದನ್ನೂ ಒಲ್ಲದೆ ಸಂಕಟಪಡುತ್ತ, ತಾನು ತಂದಿದ್ದ ಕಲ್ಲುಗಳನ್ನು ಹಾಸಿಗೆಯಮೇಲೆ ಹಾಸಿಕೊಂಡು ಮಂಚದ ಮೇಲೆ ಸ್ವಲ್ಪಕಾಲ ಮಲಗಿದ್ದನು. ಅಷ್ಟರಲ್ಲಿ ಸೂರ್ಯೋದಯವಾಯಿತು. ರಾಯನು ದರ್ಶನಕ್ಕೋಸ್ಕರ ಬಂದನು. ಆಗ ಮಂಚದ ಮೇಲೆ ಹರಡಿದ್ದ ಕಲ್ಲುಗಳನ್ನು ನೋಡಿ ಆಶ್ಚರ್ಯಗೊಂಡು ದಂಡಪ್ರಣಾಮವಂ ಮಾಡಿ ಬದ್ಧಾಂಜಲಿಪುಟನಾಗಿ ಆತನನ್ನು ಕುರಿತು-ಮಂಚದ ಮೇಲೆ ನಿದ್ರೆ ಚೆನ್ನಾಗಿ

ಹತ್ತಿತೇ ?-ಎಂದು ಕೇಳಲು, ಅದಕ್ಕೆ ಗಣೇಶನಾಥನು-ರಾಯನೇ ! ನಿನ್ನ ಮನೋರಥವು ಪೂರ್ಣವಾಗಬೇಕೆಂದು ನಾನು ಬಂದು ಮಂಚದ ಮೇಲೆ ಮಲಗಿದೆನು. ಈಗ ಇಲ್ಲಿ ಜೀವಕ್ಕೆ ಸುಖವನ್ನು ಕೊಟ್ಟರೆ ಮುಂದೆ ಸಂತತವಾದ ದುಃಖವನ್ನು ಅನುಭವಿಸಬೇಕಾಗುವುದು. ಆದುದರಿಂದ ಕಲ್ಲುಗಳಂ ಹಾಸಿಕೊಂಡು ಇದ್ದೆನು. ಕಜ್ಜಿಯನ್ನು ತುರಿಸುವಾಗ ಸುಖವಾಗಿ ತೋರುವುದು. ತಿನಿಸು ಆರಿದಮೇಲೆ ಸಂಕಟವಾಗುವುದು. ಭೋಜನವಂ ಮಾಡುವಾಗ ರುಚಿಯಾಗಿರುವುದು; ಅದನ್ನು ಕಾರುವಾಗ ದುಃಖವಾಗುವುದು. ಅಂತು ವಿಷಯಸುಖವು ಆದಿಯಲ್ಲಿ ಸುಖಕರವಾಗಿರುವುದು; ಪರಿಣಾಮದಲ್ಲಿ ಬಹುದುಃಖಕರವಾದುದು. ಮೊದಲು ಭಕ್ಷಿಸುವಾಗ ವತ್ಸನಾಭವು ಮಧುರವಾಗಿ ತೋರುವುದು; ಬಳಿಕ ಭಕ್ಷಿಸಿದವನ ಪ್ರಾಣವನ್ನೇ ತೆಗೆದುಕೊಳ್ಳುವುದು. ಅದರಂತೆ ವಿಷಯಭೋಗವೂ ಅನುಭವಿಸಿದಮೇಲೆ ಭಯಂಕರವಾಗಿರುವುದು. ಇದು ನಿಶ್ಚಯ-ಎಂದು ತಿಳಿಯಬೇಕು-ಎಂದನು.

ರಾಯನು ಆ ಮಾತಂ ಕೇಳಿ ಪಶ್ಚಾತ್ತಾಪಗೊಂಡು-ಇಂದಿನಿಂದ ನಾನು ಎಂತೂ ಮಂಚದ ಮೇಲೆ ಮಲಗುವುದಿಲ್ಲ-ಎಂದು ನಿಶ್ಚಯಿಸಿ ಆ ಮಂಚವನ್ನು ಬ್ರಾಹ್ಮಣನಿಗೆ ಸಮರ್ಪಿಸಿಬಿಟ್ಟನು.

ಸಂತರ ಸಂಗದ ಮಹಿಮೆಯು ಇಂತಹುದು. ಬ್ರಹ್ಮಾದಿಗಳಿಗೂ ಅಗಮ್ಯವಾದುದು. ಗಣೇಶನಾಥನ ಸ್ಥಿತಿಯು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರವಸ್ಥೆಗಳಲ್ಲಿಯೂ ವೈರಾಗ್ಯಭರಿತವಾದುದು. ಗ್ರಾಮದಲ್ಲಿ ವಾಸವಂಬಿಟ್ಟು ಅರಣ್ಯದಲ್ಲಿಯೇ ಸಂಚರಿಸುತ್ತಿದ್ದನು. ಸ್ವದೇಶದಲ್ಲಿ ಕೀರ್ತನವಂ ಮಾಡುತಿರಲು, ಭಾವುಕರನೇಕರು ದರ್ಶನಕ್ಕೆ ಬರುತಿದ್ದರು. ನಿತ್ಯವೂ ಸ್ವೇಚ್ಛೆಯಿಂದ ಒಬ್ಬೊಬ್ಬನಿಗೆ ಅನುಗ್ರಹವಂ ಮಾಡುತಿದ್ದನು. ಆತನ ಹಸ್ತವು ಮಸ್ತಕದ ಮೇಲೆ ಬಿದ್ದಮಾತ್ರಕ್ಕೆ ಶಿಷ್ಯನ ಮಾಯಾಪ್ರಪಂಚಭ್ರಾಂತಿಯು ಹಾರಿಹೋಗುತಿದ್ದಿತು. ಅಂತು ಅನುಗೃಹೀತರಾದವರು ಸಾಂಸಾರಿಕವ್ಯಾಪಾರವೆಲ್ಲವನ್ನೂ ಬಿಟ್ಟು ಅಡವಿಯಡವಿತಿರುಗುತಿದ್ದರು. ಶಿಷ್ಯನು ದುರ್ಜನನಾಗಲಿ; ದುರಾಚಾರಿಯಾಗಲಿ; ನಿಂದಕನಾಗಲಿ; ಜ್ಞಾನಿಯೇ ಆಗಲಿ; ಗಣೇಶನಾಥನ ಹಸ್ತವು ಸಿರದಲ್ಲಿ ಬಿದ್ದಮಾತ್ರಕ್ಕೆ ಅವನಿಗೆ ಪರಮವೈರಾಗ್ಯವುಂಟಾಗುತಿದ್ದಿತು. ಇಂತು ಒಂದು ವರ್ಷದ ವರೆಗೆ ನಡೆಯಲು, ಮುನ್ನೂರರುವತ್ತುಮಂದಿ ಶಿಷ್ಯರಾದರು. ಅವರೆಲ್ಲರೂ ಕೇವಲವೈರಾಗ್ಯಭರಿತರಾಗಿ ಆತ್ಮಜ್ಞಾನವಂ ಪಡೆದರು. "ಗಣೇಶನಾಥನಿಂದ ಯಾರು ಉಪದೇಶವಂ ತೆಗೆದುಕೊಳ್ಳುವರೋ ಅವರು ತತ್ಕಾಲದಲ್ಲಿಯೇ ದೇಹಭ್ರಾಂತಿಯಂ ಬಿಟ್ಟು ಗುರುವಿನ ಹಿಂದೆ ತಿರುಗುತಿರುವರು" ಎಂದು ಜನಗಳು ಮಾತನಾಡಿಕೊಳ್ಳುತಿದ್ದರು. ಕೆಲವರು-ಆತನು ಮಾಂತ್ರಿಕನು; ಬುದ್ಧಿಯನ್ನು ಭ್ರಮೆಗೊಳಿಸುವನೆಂದೂ, ಕೆಲವರು-ಆತನಿಗೆ ಆತ್ಮಜ್ಞಾನವು ಪೂರ್ಣವಾಗಿರುವುದೆಂದೂ, ಕೆಲವರು-ಆತನೇ ಸಾಕ್ಷಾತ್ಪಾಂಡುರಂಗನೆಂದೂ, ಕೆಲವರು-ಅಸತ್ಯದ ದಂಭವೆಂದೂ, ಕೆಲವರು-ಆತನ

ಸಂಗವಂ ಮಾಡಲು, ಭವಭಂಗವುಂಟಾಗುವುದೆಂದೂ, ಕೆಲವರು-ಹಣೆಯಲ್ಲಿ ಬರೆದುದು ತಪ್ಪದೆಂದೂ ನಡೆಯುತ್ತಿದ್ದರು. ಕೆಲವರು ಕುಟಿಲರು—ಅನೇಕರ ಸಂಸಾರವಂ ತಪ್ಪಿಸಿ ದುಃಖಪಡಿಸುತ್ತಿರುವನು. ಆತನಂ ಕಂಡು ನಾಲ್ಕುಮಾತನಾಡಬೇಕು-ಎಂದು ಆಲೋಚಿಸಿ ಗಣೇಶನಾಥನಂ ನೋಡಲು ಬಂದರು. ಆಗ ಆತನು ಒಂದು ಮಾವಿನಮರದ ನೆಳಲಲ್ಲಿ ಧ್ಯಾನಾರೂಢನಾಗಿ ಕುಳಿತಿದ್ದನು. ಮಾನಸಪೂಜೆಯಾಗುವುದೂ ಯಾರನಾದರೂ ಅನುಗ್ರಹಿಸಲು ಕರವನ್ನು ಇರಿಸಬೇಕೆಂದು ಸುತ್ತಲೂ ನೋಡಿದನು. ಆಗ ಆ ಕುಟಿಲರು ಎದ್ದು ನಿಂತುಕೊಂಡು—ಸ್ವಾಮಿ! ಜನಗಳನ್ನು ಮರುಳುಮಾಡಿ ನಿಮ್ಮ ಮಾರ್ಗಕ್ಕೆ ಎಳೆದುಕೊಂಡು ಸಂಸಾರವಂ ಕೆಡಿಸುವಿರಿ. ಇದರಿಂದ ಅನೇಕರು ಸಂಕಟಪಡುತ್ತಿರುವರು. ಈಗ ನಮ್ಮ ಮಾತಂ ಕೇಳಿ. ನೀವು ಸಂತರು; ಆತ್ಮಜ್ಞಾನಿಗಳು. ನಿಮಗೆ ಸ್ಥಾವರಜಂಗಮವೆಲ್ಲವೂ ಸಮವಾಗಿ ಕಾಣುವುದು. ಆದಕಾರಣ ಇಂದಿನಿಂದ ನೀವು ಮರಗಳಿಗೆ ಉಪದೇಶವಂ ಮಾಡುತ ಬರಬೇಕು—ಎಂದು ಹೇಳಲು, ಗಣೇಶನಾಥನು ಆ ಮಾತಿಗೆ ಒಡಂಬಟ್ಟು, ಮರ್ತ್ಯಲೋಕದಲ್ಲಿ ಬಹುಪ್ರಕಾರವಾದ ಸಾಧನಗಳಿಂದಲೂ ಯಾವ ಕಾರ್ಯವು ಆಗಲಾರದೋ ಅಂತಹುದನ್ನು ತೋರಿಸಿದನು. ಅದೇನೆಂದರೆ, ಅಲ್ಲಿ ಪುರಾತನವಾದ ಒಂದು ಮಾವಿನ ಮರವಿದ್ದಿತು. ಅದಕ್ಕೆ ತಾರಕಮಂತ್ರವನ್ನು ಉಪದೇಶಮಾಡಿದನು. ಆ ಜನಗಳು ಆತನನ್ನು ಕುರಿತು-ನೀವು ಮನುಷ್ಯರಿಗೆ ಅನುಗ್ರಹವಂ ಮಾಡಲು, ಅವರಿಗೆ ತತ್ಕಾಲದಲ್ಲಿಯೇ ಪ್ರಾಪಂಚಿಕಭ್ರಾಂತಿಯು ಬಿಟ್ಟುಹೋಗುವುದು. ಅದು ಪ್ರತ್ಯಕ್ಷವಾಗಿ ಕಾಣಿಸುತ್ತಿದ್ದಿತು. ಈಗ ಮರಕ್ಕೆ ಮಾಡಿದ ಉಪದೇಶವು ಸಿದ್ಧಿಸಿತೆಂಬುದು ನಮಗೆ ಪ್ರತ್ಯಕ್ಷವಾಗಿ ತೋರುವಂತೆ ಮಾಡಿ ನಮ್ಮ ಸಂಶಯವಂ ಪರಿಹರಿಸಬೇಕೆಂದು ನುಡಿಯಲು, ಗಣೇಶನಾಥನು ನಿವೇದನಕ್ಕೋಸ್ಕರ ತಂದಿಟ್ಟಿದ್ದ ರೊಟ್ಟಿಯನ್ನು ಕೈಯಲ್ಲಿ ತೆಗೆದುಕೊಂಡು-ಇದು ದೇವರ ಪ್ರಸಾದವು. ಇದನ್ನು ಪ್ರೀತಿಯಿಂದ ಭಕ್ಷಿಸು—ಎಂದು ಆ ಮರವನ್ನು ಕುರಿತು ಹೇಳಿದನು. ಅದರಲ್ಲಿ ಬಿರಿದಿದ್ದ ಒಂದುಕಡೆ ಬಾಯ್ಬಿಟ್ಟಿತು. ಗಣೇಶನಾಥನು ರೊಟ್ಟಿಯನ್ನು ಅದರಲ್ಲಿ ಹಾಕಿದನು. ಬಳಿಕ ಮೊದಲಂತೆಯೇ ಕೂಡಿಕೊಂಡಿತು. ಈ ಕೌತುಕವಂ ನೋಡಿ ಅವರೆಲ್ಲರೂ ವಿಸ್ಮಿತರಾಗಿ ಗಣೇಶನಾಥನಿಗೆ ನಮಸ್ಕಾರವಂ ಮಾಡಿ—ನಿಮ್ಮಂತಹ ಭಾಗವತೋತ್ತಮರಾದ ಜ್ಞಾನಿಗಳು ಯಾರೂ ಇಲ್ಲ. ನಾವು ಅಹಂಕಾರಗ್ರಸ್ತರಾಗಿ ನಿಮ್ಮನ್ನು ವ್ಯರ್ಥವಾಗಿ ಕ್ಲೇಶಗೊಳಿಸಿದೆವು—ಎಂದು ನುಡಿದು ತಂತಮ್ಮ ಮನೆಗಳಿಗೆ ಹೊರಟು ಹೋದರು.

ಬಳಿಕ ಒಂದು ದಿವಸ ಗಣೇಶನಾಥನು ಅರಣ್ಯದಲ್ಲಿ ಕೀರ್ತನವಂ ಮಾಡುತಿರಲು, ಸುಜ್ಞಾನಿಗಳಾದ ಪಂಡಿತರೂ ಭಾವುಕರೂ ಭಾಗವತರೂ ಅನೇಕಜಾತಿಯವರೂ ಬಂದು ಕುಳಿತಿದ್ದರು. ತಾಳಮೃದಂಗಾದಿಗಳು ಮೊಳಗುತ್ತಿದ್ದುವು. ಭಗವನ್ನಾಮದ ಉದ್ಘೋಷವು ಆಗುತ್ತಿದ್ದಿತು. ಆ ನಾದವು ಆಕಾಶದಲ್ಲಿ ಎರಡು ಹರಿದಾರಿಯ

ವರೆಗೆ ಹೋಗುವುದಾಯಿತು. ಆಗ ಗಣೇಶನಾಥನು ಎಲ್ಲರನ್ನೂ ಕುರಿತು-ಎರಡು ಕೈಗಳನ್ನೂ ಎತ್ತಿ ಚಪ್ಪಾಳೆಯಂ ಬಾರಿಸಿ-ಎಂದನು. ಅದಕ್ಕೆ ಅಲ್ಲಿದ್ದ ಪಂಡಿತೋತ್ತಮರು-ನಾವು ಬ್ರಾಹ್ಮಣರು; ಉತ್ತಮವರ್ಣದವರು. ಜಾತಿಹೀನನಾದ ನಿನ್ನ ಹಾಗೆ ನಂತೆ ನಾವು ಕೀರ್ತನದಲ್ಲಿ ಚಪ್ಪಾಳೆಯನ್ನು ಬಾರಿಸೆವು-ಎಂದರು. ಅದಕ್ಕೆ ಗಣೇಶನಾಥನು ಅವರನ್ನು ಕುರಿತು ನೀವು ಬ್ರಾಹ್ಮಣರು; ಶ್ರೇಷ್ಠರೇಸರಿ. ಆದರೆ ಕೀರ್ತನದಲ್ಲಿ ಚಪ್ಪಾಳೆಯಂ ಬಾರಿಸುವುದರಿಂದ ಕೊರತೆಯೇನು? ನಿಮ್ಮ ಕೃಪೆಯಿಂದ ಪಾಷಾಣಗಳೂ ತಾಳವಂ ಹಾಕಾವು-ಎನಲು, ಆಕ್ಷಣದಲ್ಲಿ ಅಲ್ಲಿದ್ದ ಪಾಷಾಣಗಳು ತಾಳವಂ ಹಾಕುವಂತೆ ಶಬ್ದವಂ ಮಾಡಿದುವು. ಇದು ಮಹತ್ತಾದ ಹೊಸಪರಿಯು. ಕಲ್ಲುಗಳಿಗೆ ಜೀವವು ಎಂತು ಉಂಟಾಯಿತೋ ತಿಳಿಯದು. ಈ ಗಣೇಶನಾಥನ ಪ್ರಭಾವವು ಸಾಟಿಯಿಲ್ಲದುದು; ಇಂದ್ರಾದಿಗಳಿಗೂ ತಿಳಿಯದು-ಎಂದು ನುಡಿದು ಚಿತ್ತದಲ್ಲಿ ಅನುತಾಪಗೊಂಡು ಅವರೆಲ್ಲರೂ ತಾಳಗಳಂ ಹಾಕಿದರು. ಅದರಿಂದ ಗಣೇಶನಾಥನ ಮನಸ್ಸಿಗೂ ಸಮಾಧಾನವಾಯಿತು. ಸ್ವಾಮಿಗೆ ಆರತಿಯನ್ನು ಎತ್ತಿದನು. ಎಲ್ಲರೂ ಪ್ರಸಾದವಂ ತೆಗೆದುಕೊಂಡು ತಂತಮ್ಮ ಮನೆಗಳಿಗೆ ಹೋದರು. ಗಣೇಶನಾಥನು ಪ್ರೇಮಳ ಭಕ್ತನಾದುದರಿಂದ ಪಂಡರೀನಾಥನು ವರವಂ ಕೊಟ್ಟನು. ಉಜ್ಜಯಿನಿಯಲ್ಲಿಯೂ ಸಾರಸೆಯಲ್ಲಿಯೂ ಈಗಲೂ ಜಾತ್ರೆಯು ಆಗುತ್ತಿರುವುದು. ಭಾವುಕರಾದ ಸಂತರಿಗೆ ಅಲ್ಲಿ ಚಮತ್ಕಾರವು ತೋರುತಿರುವುದು. ದೀನದಯಾಳುವಾದ ಭಗವಂತನು ನಿಜಭಕ್ತರ ಕೀರ್ತಿಯನ್ನು ಬಳೆಯಿಸುವನು.

ಇನ್ನು ಪರಮಭಕ್ತನಾದ ಕೇಶವಸ್ವಾಮಿಯ ಚರಿತ್ರೆಯಂ ಹೇಳುವೆನು:-ಭಾವುಕರು ಕೇಳತಕ್ಕುದು.

ಆ ಕೇಶವಸ್ವಾಮಿಯು ಯದೃಚ್ಛೆಯಿಂದ ದೇಶಸಂಚಾರವಂ ಮಾಡುತ್ತ ಒಮ್ಮೆ ಬೀಜಪುರಕ್ಕೆ ಬಂದನು. ಅಲ್ಲಿ ಏಕಾದಶೀದಿನ ಅಂಗಡಿಬೀದಿಯ ಚೌಕದಲ್ಲಿ ಹರಿಕಥಾಕೀರ್ತನವನ್ನಾರಂಭಿಸಿದನು. ಶ್ರವಣಮಾಡುವುದಕ್ಕೆ ತಿಳಿದವರು ತಿಳಿಯದವರು ಸಣ್ಣವರು ದೊಡ್ಡವರು ಭಾಗ್ಯವಂತರು ಮುಂತಾಗಿ ಅನೇಕರು ಬಂದುಸೇರಿದರು. ದೀಪಗಳ ಬೆಳಕು ಹೆಚ್ಚಾಗಿದ್ದಿತು. ತಾಳಮೃದಂಗಗಳ ನಾದವು ಗಗನಮಂಡಲವಂ ವ್ಯಾಪಿಸಿತು. ಆಗ ಆ ಕೇಶವಸ್ವಾಮಿಯು ತಮ್ಮ ಶಿಷ್ಯನಾದ ಒಬ್ಬ ಬ್ರಾಹ್ಮಣನನ್ನು ಕರೆದು-ಇಂದು ಏಕಾದಶಿಯಾದುದರಿಂದ ಸರ್ವರಿಗೂ ಉಪವಾಸವಾಗಿರುವುದು. ಆದುದರಿಂದ ನೀನು ಅಂಗಡಿಗೆ ಹೋಗಿ ಶುಂಠಿಯನ್ನೂ ಸಕ್ಕರೆಯನ್ನೂ ತೆಗೆದುಕೊಂಡು ಬಾ. ಅದನ್ನು ದೇವರಿಗೆ ನಿವೇದ್ಯಮಾಡಿ ಜನಗಳಿಗೆ ಆ ಪ್ರಸಾದವಂ ಕೊಡಬೇಕು-ಎಂದು ಹೇಳಲು, ಆತನು ಗುರುವಿನ ಆಜ್ಞೆಯನ್ನು ಅಂಗೀಕರಿಸಿ ತರುವುದಕ್ಕೆ ಹೋದನು. ಎಲ್ಲಿ ನೋಡಿದರೂ ಅಂಗಡಿಗಳು ಮುಚ್ಚಿದ್ದುವು. ಒಬ್ಬ ವೈಶ್ಯನ ಅಂಗಡಿಗೆ ಹೋಗಿ ಮಲಗಿದ್ದವನನ್ನು ಕೂಗಿ ಎಬ್ಬಿಸಿ ಶುಂಠಿಯನ್ನೂ ಸಕ್ಕರೆಯನ್ನೂ ಕುಡು-ಎಂದನು. ಅವನು ಎದ್ದು

ಕತ್ತಲೆಯಲ್ಲಿ ಹುಡುಕಿ ಶುಂಠಿಯ ಕೊನೆಗಳೆಂದು ಭ್ರಮಿಸಿ ವತ್ಸನಾಭವನ್ನು ತಂದು ಏಳುಸೇರನ್ನು ಅಳೆದುಕೊಟ್ಟು ಅದಕ್ಕೆ ಸರಿಯಾಗಿ ಸಕ್ಕರೆಯನ್ನೂ ಕೊಟ್ಟು–ನನ್ನ ಮಗನು ಸಂತೆಗೆ ಹೋಗಿದ್ದುದರಿಂದ ನಾನು ಕೀರ್ತನಕ್ಕೆ ಬರಲು ಸಂದರ್ಭಿಸಲಿಲ್ಲ. ಜನಗಳು ಅನೇಕರು ಕೂಡಿರಬಹುದು. ಈ ಸಕ್ಕರೆ ಸಾಲಲಾರದು–ಎಂದು ನುಡಿದು ಮತ್ತಷ್ಟು ಸಕ್ಕರೆಯನ್ನು ಕೊಟ್ಟನು. ಅಭಯವರವೆಂದು ಶಾಪವನ್ನು ಕೊಟ್ಟಂತೆ, ಪ್ರಾರ್ಥನೆಯೆಂದು ಅಪಶಬ್ದಂಗಳನ್ನು ನುಡಿದಂತೆ, ಹೂವಿನ ಹಾರವೆಂದು ಸರ್ಪವಂ ಕೊರಲಲ್ಲಿ ಧರಿಸಿದಂತೆ, ಅನುಷ್ಠಾನವೆಂದು ಕೃತ್ರಿಮಪ್ರಯೋಗವಂ ಮಾಡಿದಂತೆ, ಔಷಧವೆಂದು ರೋಗವನ್ನು ಕೊಟ್ಟಂತೆ, ನಿದ್ರಾಲಸ್ಯದಿಂದ ಶುಂಠಿಯೆಂದು ವಿಷವನ್ನು ಕೊಟ್ಟನು. ತೆಗೆದುಕೊಂಡಾತನೂ ತಿಳಿಯದೆ ಬಂದು ಅದನ್ನು ಕತ್ತರಿಸಿ ಚೂರುಮಾಡಿ ದೇವರ ಮುಂದೆ ಇರಿಸಿದನು.

ಆಗ ಪಂಢರೀನಾಥನು–ಇಲ್ಲಿಗೆ ಬಂದಿರುವ ಶ್ರೋತೃಗಳು ಪ್ರಸಾದವನ್ನು ಭಕ್ಷಿಸಾರು. ಅದರಿಂದ ದೊಡ್ಡ ಅನರ್ಥವಾದೀತು. ಇಂದು ಏಕಾದಶಿಯಲ್ಲಿ ಉಪವಾಸವಿದ್ದು ವತ್ಸನಾಭವನ್ನು ತಿಂದು ಆಕ್ಷಣ ಮೃತರಾದಾರು. ಬಳಿಕ ನನ್ನ ಕೀರ್ತನವಂ ಯಾರೂ ಶ್ರವಣಮಾಡದೆಯೇ ಹೋದಾರು. ನನ್ನ ಭಕ್ತರ ವಚನದಲ್ಲಿ ಯಾರೂ ವಿಶ್ವಾಸವನ್ನು ಇಡದಂತೆ ಆದೀತು. ಇಂತು ಆಗಲು, ನನ್ನ ಕೀರ್ತಿಯೆಲ್ಲವೂ ಅಸತ್ಯವಾಗಿ ತೋರೀತು–ಎಂದು ಆಲೋಚಿಸಿ ವತ್ಸನಾಭದ ವಿಷವೆಲ್ಲವನ್ನೂ ಹೀರಿಬಿಟ್ಟು ವಿಷವನ್ನೇ ಅಮೃತವನ್ನಾಗಿ ಮಾಡಿದನು.

ಇತ್ತಲು ಕೇಶವನಾಥನು ಆನಂದಭರಿತನಾಗಿ ಪಾಡುತ್ತ ಕುಣಿಯುತ್ತ ಕೈಯಿಂದ ತಾಳವಂ ಹಾಕುತ್ತ ನಾಲ್ಕು ಜಾವವೂ ಕೀರ್ತನವಂ ಮಾಡಿ ಆರತಿಯಂ ಬೆಳಗಿ ಆ ವತ್ಸನಾಭದ ಪ್ರಸಾದವನ್ನು ಸರ್ವರಿಗೂ ಹಂಚಿದವನಾದನು.

ಕೆಲವರು ಶ್ರೀಹರಿಯ ಪ್ರಸಾದವೆಂದು ಅಲ್ಲಿಯೇ ಭಕ್ಷಿಸಿ ಮನೆಗೆ ಹೊರಟು ಹೋದರು. ಕೆಲವರು ಸೆರಗಿನಲ್ಲಿ ಕಟ್ಟಿಕೊಂಡು ಹೋದರು.

ಬಳಿಕ ಸೂರ್ಯೋದಯವಾಯಿತು. ಅಂಗಡಿಯ ವೈಶ್ಯನು ಎದ್ದು ನೋಡಲು, ಮುಂದುಗಡೆಯಲ್ಲಿ ವತ್ಸನಾಭದ ಚೀಲವು ಇದ್ದಿತು. ಆಗ ಅವನು ಸಂಭ್ರಾಂತನಾಗಿ–ಸಂತರನೇಕರು ಕೀರ್ತನವಂ ಕೇಳುವುದಕ್ಕೆ ಕೂಡಿರಬಹುದು. ಅವರೆಲ್ಲರೂ ಮೃತರಾದಾರು. ನನ್ನ ಮೇಲೆ ಅಪರಾಧವು ಬಂದೀತು. ಇದರಿಂದ ದೊಡ್ಡ ಅನರ್ಥವಾದೀತು. ಮುಂದೆ ಏನುಗತಿ? ಶುಂಠಿಯೆಂದು ವತ್ಸನಾಭವಂ ಕೊಟ್ಟೆನಲ್ಲಾ! ಊರಲ್ಲಿ ಈವಾರ್ತೆಯು ಹರಿಡಿದರೆ ನನ್ನನ್ನು ಸಂರಕ್ಷಿಸುವರಾರು? ನಾನು ಸತ್ತ ಬಳಿಕ ರೌರವನರಕವಂ ಅನುಭವಿಸಬೇಕಾಯಿತಲ್ಲಾ! ಇಹಪರಗಳೆರಡರಲ್ಲಿಯೂ ಗತಿಯಂ ಕಿಡಿಸಿಕೊಂಡ ನನ್ನಂತಹ ದುರ್ಬುದ್ಧಿಯು ಯಾವನೂ ಇರನು. ನಿಂದ್ಯವಾದ ಹಂದಿಗಿಂತಲೂ ಕತ್ತೆಗಿಂತಲೂ ನಾನು ನೀಚನಾದೆನಲ್ಲಾ! ನನ್ನಂತಹ ಪಾಪಿಷ್ಠನು ಯಾವನು ಇರು

ವನು ?-ಎಂದಿಂತು ಅನುತಾಪಗೊಂಡು—ಇನ್ನು ಮೇಲೆ ಏಕೆ ಬದುಕಬೇಕು ?ಬಾವಿಯ ಲ್ಲಾದರೂ ಬಿದ್ದು ಪ್ರಾಣವಂ ಬಿಡುವುದು ಒಳ್ಳೆತೆಂದು ನಿಶ್ಚಯಿಸಿ ಅಂಗಡಿಯನ್ನು ಬಿಟ್ಟು ಹೊರಟು ಊರಲ್ಲಿ ಸುದ್ದಿಯೇನೆಂದು ವಿಚಾರಿಸಲು, ಯಾವನೂ ಸತ್ತನೆಂಬುದಿ ರಲಿಲ್ಲ, ಅಲ್ಲಲ್ಲಿ ಆಲಿಸಲು, ರೋದನಶಬ್ದವೂ ಕೇಳಿ ಬರಲಿಲ್ಲ. ಜನಗಳಂ ಕುರಿತು-ನೀವು ರಾತ್ರಿ ಹರಿಕಥೆಗೆ ಹೋಗಿದ್ದಿರಾ? ಪ್ರಸಾದವನ್ನು ತಂದಿದ್ದುದೇನಾದರೂ ಇದ್ದರೆ ನನಗೆ ಸ್ವಲ್ಪವನ್ನು ಕೊಡಿ—ಎನಲು, ಅವರು-ನಮಗೆ ಉಪವಾಸವಾದುದರಿಂದ ಅಲ್ಲಿ ಕೊಟ್ಟ ಶುಂಠಿಯನ್ನೂ ಸಕ್ಕರೆಯನ್ನೂ ಅಲ್ಲಿಯೇ ಭಕ್ಷಿಸಿ ಮನೆಗೆ ಹೊರಟು ಬಂದೆವು-ಎಂದರು. ಮತ್ತೆ ಅವರನ್ನು ಕುರಿತು—ನಿಮಗೆ ಉಪವಾಸವಾದುದರಿಂದ ಹೊಟ್ಟೆಯಲ್ಲಿ ಬಹುಸಂಕ ಟವಾದೀತು. ಬೇಗನೆ ಭೋಜನವಂ ಮಾಡಿ—ಎನಲು, ಅದಕ್ಕೆ ಅವರು-ನಮಗೆ ಉಪ ವಾಸದ ಪದ್ಧತಿಯು ಯಾವಾಗಲೂ ಉಂಟು. ಹಸಿವು ತಡೆವುದು. ನಿನ್ನಂತಹ ಅಸ್ನಾತು ರನು ಯಾವನೂ ಇಲ್ಲ-ಎಂದು ಉತ್ತರವಂ ಹೇಳಿದರು. ಆಮಾತಂ ಕೇಳಿ ಅಲ್ಲಿಂದ ಹೊರಟು ಶ್ಮಶಾನಭೂಮಿಗೆ ಹೋಗಿ ನೋಡಿ, ಅಲ್ಲಿಯೂ ವ್ಯತ್ಯಾಸವೇನೂ ತೋರದಿ ದ್ದುದರಿಂದ ಅತ್ಯಾಶ್ಚರ್ಯಗೊಂಡು-ಪಂಢರೀನಾಥನು ಅರಿಷ್ಟವಂ ಪರಿಹರಿಸಿ ಎಲ್ಲರಿಗೂ ಮೃತ್ಯುವನ್ನು ತಪ್ಪಿಸಿದನು-ಎಂದು ಸಂತೋಷಿಸಿದನು.

ಇತ್ತಲು ಕೇಶವಸ್ವಾಮಿಯು ಸ್ನಾನವಂ ಮಾಡಿ ಆರಾಧ್ಯವಾದ ಪಂಚಲೋಹದ ಮೂರ್ತಿಯನ್ನು ನೋಡಲು, ಅದು ಕರಿದಾಗಿ ಕಂಡಿತು. ಚಂದ್ರಬಿಂಬವು ರಾಹುಗ್ರಹ ಣದಿಂದ ತತ್ಕಾಲದಲ್ಲಿಯೇ ತೇಜೋಹೀನವಾಗಿ ಕಾಣುವಂತೆ ಆಕಸ್ಮಿಕವಾಗಿ ಆ ಭಗವ ನ್ಮೂರ್ತಿಯು ನೀಲವರ್ಣವಾಗಿ ಥಳಥಳಿಸುತಿರಲು, ಏನುಕಾರಣದಿಂದ ಇಂತು ಕರಿದಾ ಯಿತು?-ಎಂದು ಚಿಂತಿಸುತಿದ್ದನು. ಈ ಸಂಗತಿ ಊರಲ್ಲಿ ಹರಡಿತು. ನೋಡುವುದಕ್ಕೆ ಅನೇಕರು ಬಂದರು. ಆ ವೈಶ್ಯನೂ ಕೇಶವಸ್ವಾಮಿಯ ಬಳಿಗೆ ಬಂದು-ಸ್ವಾಮಿ! ನಿನ್ನೆ ರಾತ್ರಿ ಕತ್ತಲೆಯಲ್ಲಿ ಶುಂಠಿಯನ್ನು ಹುಡುಕುವಾಗ ವತ್ಸನಾಭದ ಚೀಲವು ಕೈಗೆ ಸಿಕ್ಕಿತು. ನಾನು ನಿದ್ರೆಯಿಂದ ಭ್ರಾಂತನಾಗಿ ಅದನ್ನೇ ಕೈಯಾರೆ ತೂಗಿಕೊಟ್ಟೆನು. ಪಂಢರೀನಾಥನು ಆ ಅರಿಷ್ಟವಂ ಪರಿಹರಿಸಿ ಶ್ರೋತೃಗಳನ್ನು ಸಲಹಿದನು. ನನ್ನ ಅಪ ರಾಧಕ್ಕೆ ನನಗೆ ಏನು ಪ್ರಾಯಶ್ಚಿತ್ತವಾಗತಕ್ಕುದೋ ಅದನ್ನು ಹೇಳಬೇಕು-ಎನಲು, ಆತನು ಆಮಾತಂ ಕೇಳಿ ಪ್ರೇಮವಿಶೇಷದಿಂದ ಆನಂದಬಾಷ್ಪವಂ ಸುರಿಯಿಸುತ ಸ್ವಾಮಿಯಂ ಕುರಿತು-ಜಯ ಜಯ ದೀನದಯಾಳುವೆ! ವಿಟ್ಠಲನೇ! ಇಂದಿನ ದೊಡ್ಡ ಅಪಕೀರ್ತಿಯನ್ನು ದೂರವಮಾಡಿದೆ. ನಿನ್ನ ಬಿರುದನ್ನು ಸತ್ಯವೆನಿಸಿದೆ. ಕೃಪೆಯಿಂದ ದಾಸನಂ ಸಂರಕ್ಷಿಸಿದೆ. ದಾರುಣವಾದ ವತ್ಸನಾಭದ ವಿಷವು ಏರಲು, ನಿನ್ನ ಮೂರ್ತಿಯು ಕರಿದಾಯಿತು. ಅನೇಕರ ಪ್ರಾಣವಂ ಕಾದೆ. ನಿನ್ನ ನಾಮವನ್ನು ಪ್ರಹ್ಲಾದಭಕ್ತನು ಜಪಿಸಲು, ಆತನಿಗೆ ಮಹಾವಿಷವು ಅಮೃತವಾಯಿತು. ನೀನು ಸಕಲದೇವರಲ್ಲಿಯೂ ಶ್ರೇಷ್ಠನು. ನಿನ್ನನ್ನು ಭಜಿಸಿದವನು ವಿಷಶಾಪದ ಶಾಂತಿಯಂ ಹೊಂದುವನು. ಮಹಾಪ್ರ

ಭಾವನಾದ ನೀನು ದಾರುಣವಾದ ಕಾಳೀಯಸರ್ಪವನ್ನು ಕಾಲಿಂದ ತುಳಿದು ಅಡಗಿಸಿದೆ. ಆಗ ಅವನದಾದ ವಿಷವು ನಿನಗೆ ಏನುಬಾಧೆಯನ್ನೂ ಉಂಟುಮಾಡಲಿಲ್ಲ. ಇಂತಿರಲು, ಈ ವತ್ಸನಾಭದ ವಿಷವು ಎಷ್ಟರದು ? ಆ ವಿಷದಿಂದ ಕೃಷ್ಣವರ್ಣನಾಗಿರುವ ನಿನ್ನನ್ನು ನೋಡಲು ಆಶ್ಚರ್ಯವಾಗಿರುವುದು. ಅಮೃತಕ್ಕೆ ಮೃತಿ ಬಂದಿತೋ, ಸೂರ್ಯನಿಗೆ ಕತ್ತಲೆಯು ಅಂಟಿತೋ, ಭಾಗೀರಥಿಯು ಮಾಲಿನ್ಯವಂ ಪಡೆದಳೋ, ಧೂಳಿಯಿಂದ ಆಕಾಶವು ಮಾಸಿತೋ, ಚಂದ್ರಮಂಡಲಕ್ಕೆ ಸೆಕೆ ತಟ್ಟಿತೋ, ಕ್ಷೀರಸಾಗರಕ್ಕೆ ಶೋಷವು ಉಂಟಾಯಿತೋ—ಎಂಬಂತೆ ನನಗೆ ತೋರುವುದು. ಒಮ್ಮೆ ಇದೆಲ್ಲವೂ ಸಂಘಟಿಸಿದರೂ ನಿನಗೆ ವಿಷದ ಬಾಧೆಯು ಎಂದಿಗೂ ಉಂಟಾಗಲಾರದು. ಭಕ್ತನ ಮರ್ಯಾದೆಯನ್ನು ಪಾಲಿಸುವುದಕೋಸ್ಕರ ಲೀಲೆಯಂ ತೋರಿಸುತಿರುವೆ. ನೀನು ಅಜನು; ಅಜಿತನು; ಕಲಿಕಾಲರಿಗೂ ನಿಯಾಮಕನು. ಮಹಾಮಹಿಮನೆ! ದಯೆಯಿಟ್ಟು ನೀನು ಮೊದಲಂತೆ ಶೋಭಿಸುವನಾಗು-ಎಂದು ಪ್ರಾರ್ಥಿಸಿದನು.

ರುಕ್ಮಿಣೀಪತಿಯು ಭಕ್ತನ ಪ್ರಾರ್ಥನೆಯಂ ಕೇಳಿ ಸಂತುಷ್ಟನಾಗಿ ಮೊದಲಂತೆ ಆಕೃತಿಯನ್ನುತಾಳಿದನು. ಈ ಕೌತುಕವಂ ನೋಡಿ ಸರ್ವರೂ ಆಶ್ಚರ್ಯಗೊಂಡು ಈ ಕಲಿಯುಗದಲ್ಲಿ ಕೀರ್ತನಕ್ಕಿಂತಲೂ ಅಧಿಕವಾದ ಸಾಧನವಿಲ್ಲ—ಎಂದು ನುಡಿದರು.

ಬಳಿಕ ಆ ವೈಶ್ಯನು ಪಶ್ಚಾತ್ತಾಪವನ್ನು ಹೊಂದಿ ಪ್ರಪಂಚವ್ಯಾಪಾರವೆಲ್ಲವನ್ನೂ ಬಿಟ್ಟು ಸರ್ವಕಾಲದಲ್ಲಿಯೂ ಕೇಶವಸ್ವಾಮಿಯ ಸಂಗತಿಯಲ್ಲಿರುತ್ತ ಹರಿಕಥಾಶ್ರವಣದಲ್ಲಿ ಕುತೂಹಲಿತನಾದನು.

ಎಲೈ ಶ್ರೋತೃಗಳಿರಾ! ಇನ್ನೊಂದು ರಸವತ್ತರವಾದ ಚರಿತ್ರೆ ಆಲಿಸತಕ್ಕದು.

“ಗೋಮಾಯಿಯಮ್ಮ” ಎಂಬ ಒಬ್ಬ ಬ್ರಾಹ್ಮಣಿ ವಿಧವೆಯಿದ್ದಳು. ಆಕೆ ಅತ್ಯಂತದರಿದ್ರೆ; ದುರ್ಬಲೆ; ಅಶನವಸನಗಳಿಗೆ ಕಷ್ಟವಾಗಿದ್ದಿತು. ಜೀರ್ಣವಾದ ಬಟ್ಟೆಯನ್ನು ಉಟ್ಟುಕೊಂಡು ಮನೆಮನೆಗೂ ಭಿಕ್ಷಕ್ಕೆ ಹೋಗುತಿದ್ದಳು. ಒಂದು ಕಾಲದಲ್ಲಿ ಶ್ರೀವಿಟ್ಠಲನ ಸಂದರ್ಶನವಂ ಮಾಡಬೇಕೆಂದು ಪಂಢರಪುರದ ಯಾತ್ರೆಗೆ ಹೊರಟಳು. ನದಿಯ ಬಳಿಗೆ ಬಂದಳು. ಅತ್ಯಧಿಕವಾದ ಪ್ರವಾಹವು ಬಂದಿದ್ದಿತು. ಅದಂಕಂಡು ನನ್ನನ್ನು ಯಾರು ದಾಟಿಸುವರು ?—ಎಂದು ಚಿಂತಾಕ್ರಾಂತೆಯಾಗಿದ್ದಳು. ಅಲ್ಲಿ ಅನೇಕರು ಸೇರಿದ್ದರು. ಎಲ್ಲರೂ ಅಂಬಿಗರಿಗೆ ದ್ರವ್ಯವಂಕೊಟ್ಟು ಹೊಳೆಯಂ ದಾಂಟಿ ಹೋದರು. ಗೋಮಾಯಿಯು-ನನ್ನನ್ನೂ ಹೊಳೆಯಂ ದಾಂಟಿಸಬೇಕೆಂದು ಹರಿಗೋಲಿನ ಬಳಿಗೆ ಹೋಗುವಳು. ಅಂಬಿಗರು ತಳ್ಳುವರು ; ಅಳುತ್ತ ಮರಳಿ ಬರುವಳು ; ಬಟ್ಟೆಯೆಲ್ಲವೂ ನನೆದುಹೋಯಿತು. ದೀರ್ಘಸ್ವರದಿಂದ ರೋದನವಂ ಮಾಡುತ್ತ—ನನ್ನನ್ನು ಆಚೆಯ ಕಡೆಗೆ ಯಾರೂ ಸೇರಿಸುವುದಿಲ್ಲವೇ—ಎಂದಳು. ಅಂಬಿಗರು—ದುಡ್ಡನ್ನು ಕೊಟ್ಟ ಹರಿಗೋಲಿನಲ್ಲಿ ಕುಳಿತುಕೊಳ್ಳಬೇಕು. ಬರಿದೆ ನಾವು ಕುಳ್ಳಿರಿಸುವದಿಲ್ಲ-ಎನಲು-ಆಕೆ-ಒಂದು ಬೊಗಸೆಯ ಹಿಟ್ಟನ್ನು ಕೊಡುವೆನು. ಇದಂ ತಗೆದು

ಕೊಂಡು ಹೊಳೆಯಂ ದಾಟಿಸಬೇಕು. ನನ್ನಲ್ಲಿ ದುಡ್ಡು ಇಲ್ಲ-ಎಂದು ಬಹುವಿಧವಾಗಿ ಪ್ರಾರ್ಥಿಸಿದಳು. ಆದರೂ ಬಹುಕಠಿನರಾದ ಅವರಿಗೆ ಕರುಣೆ ಬರಲಿಲ್ಲ. ಯಾತ್ರೆಯವರೆಲ್ಲರೂ ಹೊಳೆಯಂ ದಾಂಟಿ ಆಚೆಯ ತೀರಕ್ಕೆ ಹೊರಟುಹೋದರು. ಗೋಮಾಯಿಯೊಬ್ಬಳು ಹೊಳೆಯಂ ದಾಂಟುವುದಕ್ಕೆ ಮಾರ್ಗವಿಲ್ಲದೆ ಇತ್ತ ದಡದಲ್ಲಿಯೇ ನಿಂತಳು. ನನಗೆ ರುಕ್ಮಿಣೀಪತಿಯ ದರ್ಶನವಾಗುವಂತಿಲ್ಲ. ಓಡಿಬಂದುದು ವ್ಯರ್ಥವಾಯಿತಲ್ಲಾ–ಎಂದು ಗೋಳಿಡುತ ಕುಳಿತಳು.

ದಯಾರ್ದ್ರಚಿತ್ತನಾದ ಪಂಢರೀನಾಥನು ಆಕೆಯ ಗೋಳನ್ನು ಸಹಿಸಲಾರದೆ ಅಂಬಿಗನ ರೂಪವಂ ತಾಳಿ ಆಕೆಯ ಬಳಿಗೆ ಬಂದು-ಎಲೆಮುದುಕಿ ! ನೀನು ಆಚೆಯ ತೀರಕ್ಕೆ ಹೋಗಬೇಕಾದರೆ ಬೇಗ ಏಳು-ಎನಲು, ಆಕೆ-ಅಪ್ಪಾ ! ನಾನು ದರಿದ್ರೆ. ನಿನಗೆ ಕೊಡುವುದಕ್ಕೆ ನನ್ನಲ್ಲಿ ದುಡ್ಡಿಲ್ಲ. ಒಂದು ಬೊಗಸೆಹಿಟ್ಟನ್ನು ಕೊಡುವೆನು. ಇದನ್ನು ತೆಗೆದುಕೊಂಡು ದಾಂಟಿಸುವುದಾದರೆ ಬರುವೆನೆಂದಳು.

ಆ ಮಾತಿಗೆ ಶೇಷಶಾಯಿಯು-ನಾನು ಯಾರಕಡೆಯಿಂದಲೂ ಏನನೂ ತೆಗೆದುಕೊಳ್ಳುವನಲ್ಲ. ದಿಕ್ಕಿಲ್ಲದ ಬಡವರುಯಾರೋ ಅವರನ್ನು ದಾಂಟಿಸುವುದಕ್ಕೋಸ್ಕರವೇ ನಾನು ಪಂಢರಪುರದಲ್ಲಿ ಬಹುದಿವಸಗಳಿಂದ ಇರುವೆನು–ಎನಲು, ಆ ಮಾತಿಗೆ ಆಕೆ ಬಹುಸಂತೋಷವಂ ತಾಳಿ–ಅಯ್ಯಾ! ನನೆದುಹೋಗಿದ್ದ ನನ್ನ ಈ ಜೀರ್ಣವಸ್ತ್ರವು ಈಗತಾನೆ ಒಣಗಿದೆ. ಈಗಳಾದರೋ ರಾತ್ರಿ; ಉಟ್ಟುಕೊಳ್ಳುವುದಕ್ಕೆ ಮತ್ತೊಂದು ಸೀರೆಯಿಲ್ಲ. ನನೆಯದಂತೆ ಕರೆದುಕೊಂಡು ಹೋಗುವೆಯಾ ?–ಎಂದು ಕೇಳಿದಳು.

ಪಂಢರೀನಾಥನು–ನೀನು ಮುದುಕಿ; ನಮ್ಮತಾಯಿಯಂತೆ. ನನ್ನ ಹೆಗಲಮೇಲೆ ಕುಳಿತುಕೊಂಡರೆ ಕೈಕಾಲು ನನೆಯದಂತೆ ಆಚೆಯತೀರಕ್ಕೆ ಕರೆದುಕೊಂಡು ಹೋಗುವೆನು–ಎಂದು ಹೇಳಿ ಆಕೆಯನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಒಂದು ನಿಮಿಷದಲ್ಲಿ ಪಂಢರಪುರಕ್ಕೆ ತಂದು ಬಿಟ್ಟನು. ಆಗ ಆಕೆ ಆ ಅಂಬಿಗನನ್ನು ನೋಡಿ-ಅಯ್ಯಾ! ನಿನ್ನ ಶರೀರವು ತೋಯದಂತೆ ನನ್ನನ್ನು ಎಂತು ತಂದೆ?-ಎನಲು, ಚಕ್ರಪಾಣಿಯು-ನಾನು ನಾಡಾಡಿಯಾದ ಅಂಬಿಗನಲ್ಲ. ದಾಸರನ್ನು ಸಂಸಾರಸಾಗರದಿಂದ ದಾಂಟಿಸುವವನು. ಸ್ವಲ್ಪವಾದರೂ ನನೆಯಿಸುವುದಿಲ್ಲ-ಎಂದು ಉತ್ತರವಂ ನುಡಿದನು.

ಬಳಿಕ ಗೋಮಾಯಿಯು–ನೀನು ನನಗೆ ಮಹತ್ತಾದ ಉಪಕಾರವಂ ಮಾಡಿದೆ. ಒಂದು ಬೊಗಸೆಯ ಹಿಟ್ಟನ್ನು ಕೊಡುವೆನು. ನೀನು ತೆಗೆದುಕೊಳ್ಳುವನಾಗು-ಎನಲು, ಸ್ವಾಮಿಯು ಅದಕ್ಕೆ–ನಾನು ಯಾರಿಂದಲೂ ಏನನೂ ತೆಗೆದುಕೊಳ್ಳುವುದಿಲ್ಲ. ಕೊಡಬೇಕೆಂಬ ಅಪೇಕ್ಷೆ ನಿನಗೆ ಸಂಪೂರ್ಣವಾಗಿದ್ದರೆ ರೊಟ್ಟಿಯಂ ಮಾಡಿ ಬ್ರಾಹ್ಮಣನಿಗೆ ಬಡಿಸು. ನಾನು ಅದರಿಂದ ತೃಪ್ತನಾಗುವೆನು. ನಾಳೆ ದ್ವಾದಶಿಯಾಗಿದೆ. ಈ ಕ್ಷೇತ್ರದಲ್ಲಿ ಬ್ರಾಹ್ಮಣನಿಗೆ ಭೋಜನವಂ ಮಾಡಿಸಿದರೆ ಅಕ್ಷಯವಾದ ಪುಣ್ಯವುಂಟಾಗುವುದು-ಎಂದು ಹೇಳಿ ಆ ಕ್ಷಣದಲ್ಲಿ ಅಲ್ಲಿಯೇ ಮರೆಗೊಂಡನು.

ಬಳಿಕ ಆಕೆ ದೇವಾಲಯಕ್ಕೆ ಹೋಗಿ ದೇವರ ದರ್ಶನವಂ ಮಾಡಿಕೊಂಡು ಅಂದು ಕೀರ್ತನವಂ ಕೇಳಿ ಮರುದಿವಸ ದ್ವಾದಶಿಯಲ್ಲಿ ಬೆಳಗಾಗುವುದೂ ಚಂದ್ರಭಾಗೆಯಲ್ಲಿ ಸ್ನಾನವಂ ಮಾಡಿ ಸೆರಗಿನಲ್ಲಿ ಹಿಟ್ಟನ್ನು ಕಟ್ಟಿಕೊಂಡು ಮಳಲೊಟ್ಟನಕ್ಕುಳಿತು, ಇಂದು ದ್ವಾದಶೀಪರ್ವಕಾಲ; ಬ್ರಾಹ್ಮಣನಿಗೆ ಸಾಮಗ್ರಿಯಂ ಕುಡಬೇಕು. ನನ್ನ ಬಳಿಯಲ್ಲಿ ಹಿಟ್ಟು ಮಾತ್ರ ಇದೆ. ಮಿಕ್ಕಸಂಭಾರವಂ ತೆಗೆದು ಕುಡುವುದಕ್ಕೆ ಕೈಯಲ್ಲಿ ದುಡ್ಡು ಇಲ್ಲ. ಏನಮಾಡಲಿ?—ಎಂದು ಚಿಂತಿಸುತ್ತ ಯಾವ ಬ್ರಾಹ್ಮಣನನ್ನು ಕಂಡರೂ ಮಧುರವಾದ ಮಾತಿನಿಂದ ಪ್ರಾರ್ಥಿಸುತ್ತಿದ್ದಳು. ಯಾರೂ ಆಕೆಯ ಸಮೀಪವಂ ಸೇರರು. ಕೆಲವರು ಆಕೆಯಂ ಕಂಡು, ಅಪಶಕುನವಾಯಿತು; ಇಂದಿನ ನಮ್ಮ ಕಾರ್ಯವು ಕೈಗೂಡುವುದೋ ಇಲ್ಲವೋ—ಎಂದರು. ಕೆಲವರು-ಬೆಲ್ಲವನ್ನೂ ತುಪ್ಪವನ್ನೂ ಅಕ್ಕಿಯನ್ನೂ ಬಿಟ್ಟು, ನಿನ್ನ ಬಣಹಿಟ್ಟನ್ನು ಯಾರು ತೆಗೆದುಕೊಳ್ಳುವರು ?-ಎಂದು ನುಡಿದು ಹೋಗುತ್ತಿದ್ದರು.

ಆಕೆ ಬಹು ವ್ಯಸನವುಳ್ಳವಳಾಗಿ ಸ್ವಾಮಿಯಂ ಕುರಿತು—ಪಂಢರೀನಾಥನೇ! ಏನುಪಾಯವಂಮಾಡಲಿ? ದ್ವಾದಶೀದಿನ ಬ್ರಾಹ್ಮಣನು ದೊರೆಯದಿದ್ದರೆ ನಾನು ಎಂತೂ ಭೋಜನಮಾಡುವವಳಲ್ಲ—ಎಂದು ದೃಢವಾದ ನಿಶ್ಚಯವುಳ್ಳವಳಾಗಿ ಮೊರೆಯಿಟ್ಟಳು.

ಸ್ವಾಮಿಯೂ ಆಕೆಯ ನಿಶ್ಚಯಕ್ಕೆ ಮೆಚ್ಚಿ ಆಕ್ಷಣದಲ್ಲಿಯೇ ವೃದ್ಧಬ್ರಾಹ್ಮಣನಾಗಿ ಬಂದು ಆಕೆಯನ್ನು ಕುರಿತು-ಇಂದು ದ್ವಾದಶೀಪರ್ವಕಾಲವು; ನಾನು ಬಡಬ್ರಾಹ್ಮಣನು; ನಿನ್ನ ಬಳಿಗೆ ಬಂದು ಇರುವೆನು. ರೊಟ್ಟಿಯನ್ನು ಮಾಡುವ ಹಿಟ್ಟು ನಿನ್ನಲ್ಲಿ ಇದ್ದರೆ ಸದ್ಭಾವದಿಂದ ನನ್ನ ಉಡಿಯಲ್ಲಿ ಹಾಕು-ಎನಲು, ಆಕೆ ಆ ಮಾತಂ ಕೇಳಿ ಮನಸ್ಸಮಾಧಾನವನ್ನು ತಾಳಿದಳು.

ಸ್ವಾಮಿಯೂ ಮತ್ತೆ ಆಕೆಯನ್ನು ಕುರಿತು—ನನಗೆ ಇಳಿದುಕೊಳ್ಳುವುದಕ್ಕೆ ಎಲ್ಲಿಯೂ ಸ್ಥಳವು ದೊರೆಯಲಿಲ್ಲ. ದೇವಸ್ಥಾನದಲ್ಲಿಯೇ ಇಳಿದು ಇರುವೆನು. ಅಲ್ಲಿ ಅಡಿಗೆಯನ್ನು ಮಾಡಿಕೊಳ್ಳಲು ಅವಕಾಶವಿಲ್ಲ. ನೀನು ರೊಟ್ಟಿಯಂ ಮಾಡಿಕೊಟ್ಟರೆ ಇಲ್ಲಿಯೇ ತಿಂದು ಹೋಗುವೆನು; ಹಸಿವು ಬಹುವಾಗಿದೆ—ಎನಲು, ಆಕೆ ಪರಮಾನಂದಭರಿತೆಯಾಗಿ ತಾನೇ ಬೇಗನೆ ಹೋಗಿ ಕಾತುಬೆರಣಿಗಳನ್ನು ಆಯ್ದುಕೊಂಡುಬಂದು ಸ್ನಾನವಂ ಮಾಡಿ ರೊಟ್ಟಿಗಳನ್ನು ಎಸಗಿ ಬಡಿಸಿದಳು. ಶ್ರೀಪಾಂಡುರಂಗನು ಪ್ರೀತಿಯಿಂದ ಭಕ್ಷಿಸಿ ಮುಖಶುದ್ಧಿಗೋಸ್ಕರ ತುಳಸೀದಳವನ್ನು ತೆಗೆದುಕೊಂಡು ಅದೃಶ್ಯನಾದನು.

ಇಂತು ಶ್ರೀಭಕ್ತವಿಜಯದಲ್ಲಿ ಐವತ್ತೈದನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ಸಂತೋಬ ನೀಳೋಬ ಉದ್ಧವ-ಎಂಬಿವರ ಚರಿತ್ರೆ.

ಜಯ! ವೈಕುಂಠವಾಸಿಯೇ! ಮನೋಮೋಹನನೇ! ಕ್ಷೀರಾಬ್ಧಿವಾಸಿಯೇ! ಅವಿನಾಶನೇ! ನಿರ್ವಿಕಲ್ಪನೆ! ಕಲ್ಪತರುವೆ! ಪುರುಷೋತ್ತಮನೇ! ಪಾಂಡುರಂಗನೇ! ಕೃಷ್ಣನೆ! ವಿಷ್ಣುವೆ! ಸದಾಶಿವನೇ? ಸಕಲಜೀವರಿಗೂ ವಿಶ್ರಾಂತಿಸ್ಥಾನವಾದವನೇ! ಕರುಣಾನಿಧಿಯೂ ಸತ್ಸುಖದ ನಿಕ್ಷೇಪವೂ ನೀನೊಬ್ಬನೆ. ನೀನು ನಿರಾಧಾರರಿಗೆ ಆಧಾರಭೂತನು. ಅದೃಷ್ಟಹೀನರಿಗೂ ಅಪಾರವಾಗಿ ಕುಡುವವನು. ನೀನು ಭಕ್ತರ ಪಕ್ಷಪಾತಿ. ನೀನು ನಿನ್ನ ಭಕ್ತನನ್ನು ನಿರಪೇಕ್ಷನನ್ನಾಗಿಮಾಡಿ ಅವನಿಗೆ ಭಜನದಲ್ಲಿಯೇ ಪ್ರೀತಿಯಂ ಹತ್ತಿಸಿ ಅವನ ಭವಭಂಗವಂ ಮಾಡುವೆ. ನೀನು ದೀನಾನಾಥರ ನಂಟನು. ಬಲಹೀನರಿಗೆ ಅಭಯುವಂ ಕುಡುವವನು. ಮೂಢಮತಿಯಾದ ನನ್ನಿಂದ ಗ್ರಂಥವಂ ಹೇಳಿಸಬೇಕು.

ಎಲೈ ಶ್ರೋತೃಗಳಿರಾ! ವೈರಾಗ್ಯವೆಂಬ ಮಂಟಪಕ್ಕೆ ಸ್ತಂಭಭೂತನಾದ, ವಿಷ್ಣುಭಕ್ತರಲ್ಲಿ ಶ್ರೇಷ್ಠನಾದ ಸಂತೋಬನ ಚರಿತ್ರೆಯಂ ಆದರದಿಂದವಧರಿಸಬೇಕು.

ಆ ಸಂತೋಬನು ಧನಕನಕವಸ್ತುವಾಹನಾದಿಸಂಪತ್ತಿಯುಳ್ಳವನಾಗಿ ಮಾನ್ಯನಾಗಿದ್ದನು. ಆತನು ಒಂದುದಿವಸ ತುಕೋಬನ ಕೀರ್ತನವಂ ಕೇಳಿ ಚಿತ್ತದಲ್ಲಿ ಪಶ್ಚಾತ್ತಾಪವುಳ್ಳವನಾಗಿ-ಈ ನರದೇಹವು ನಶ್ವರವಾದುದು. ಈ ಸಂಸಾರವು ಮಿಥ್ಯಾಮಾಯಾಭ್ರಾಂತಿಯುಳ್ಳುದು. ಆದುದರಿಂದ ನನ್ನ ಆಯುಸ್ಸನ್ನು ಇನ್ನುಮೇಲೆ ಏಕೆ ಬರಿದೆ ಕಳೆದುಬಿಡಬೇಕು?—ಎಂದು ಆಲೋಚಿಸಿ ತನ್ನ ಪರಿಜನರಂ ಕರೆದು—ನೀವು ನಿಮ್ಮ ಮಾರ್ಗವನ್ನು ನೋಡಿಕೊಂಡು ಎಲ್ಲಿಗಾದರೂ ಹೊರಟುಹೋಗಿ-ಎಂದು ಹೇಳಿ ಅವರನ್ನು ಪರಿಹರಿಸಿಕೊಂಡು, ಬಳಿಕ ಬ್ರಾಹ್ಮಣರಂ ಕರೆದು ತನ್ನ ಸರ್ವಸ್ವವನ್ನೂ ಅವರಿಗೆ ಹಂಚಿಬಿಟ್ಟು ನಾಲ್ಕುಮೊಳದ ಹರಿಕುಬಟ್ಟೆಯನ್ನು ತಾನು ಧರಿಸಿಕೊಂಡು ಉಪಾಧಿರಹಿತನಾಗಿ ಭಗವನ್ನಾಮಕೀರ್ತನೆಯಂ ಮಾಡುತ ಇದ್ದನು. “ರಾಂಜಣಗಾವ” ಎಂಬ ಊರು ಆತನಿಗೆ ವಾಸಸ್ಥಾನವಾಗಿದ್ದುದು. ವೈರಾಗ್ಯವು ದೃಢವಾದ ಬಳಿಕ ಕೀರ್ತನದಲ್ಲಿ ನಾಚಿಕೆಯಂ ಬಿಟ್ಟು ಕುಣಿಯುತ “ಭೀಮರಥಿ ಮುಳಮುಡಿ” ಎಂಬ ನದಿಗಳ ಸಂಗಮವು ಎಲ್ಲಿ ಆಗುವುದೋ ಆ ಅರಣ್ಯದಲ್ಲಿ ಹೋಗಿ ಕುಳಿತನು. ಪಂಜರದ ಬಂಧವು ತಪ್ಪಲು, ಗಿಳಿಯು ಮರದಮೇಲೆ ಹೋಗಿ ಕುಳಿತುಕೊಂಡು ಎಂತು ಉಲ್ಲಾಸಪಡುವುದೋ, ಕಮಲದ ಸೆರೆಯು ತಪ್ಪಲು, ತುಂಬಿಯು ಎಂತು ಹರ್ಷಗೊಳ್ಳುವುದೋ, ಅಂತು ಮಾಯಾಪ್ರಪಂಚಬಂಧವು ತಪ್ಪಲು, ಸಂತೋಬನು ಪರಮಾನಂದಭರಿತನಾಗಿದ್ದನು. ಈ ಸಂಗತಿಯು ಊರಲ್ಲಿ ಹರಡಿತು. ಎಲ್ಲರೂ ಆಶ್ಚರ್ಯಗೊಂಡರು. ಆತನ ತಾಯಿ ಕೇಳಿ ಹೊರಳಾಡಿ ಅತ್ತು—ಮನೆಯಲ್ಲಿದ್ದ ಸಕಲಸಂಪತ್ತಿಯನ್ನೂ ಸೂರೆಮಾಡಿ

ಇಂತಹ ವಿಪರೀತಕಾರ್ಯವಂ ಮಾಡಿದನಲ್ಲಾ ! ಒಬ್ಬನೇ ಮಗನು. ಅವನೂ ಇಂತು ವಿರಕ್ತನಾದನು. ಹಿರಿಯರು ಬಹುಪ್ರತಿಷ್ಠೆಯಿಂದ ಬಾಳಿದರು. ಇನ್ನುಮೇಲೆ ಬೀಗರು ಮುಂತಾದ ನಂಟರೂ ಇಷ್ಟರೂ ಎಲ್ಲರೂ ನಗುವರಲ್ಲಾ !-ಎಂದು-ದುಃಖಿಸಿ, ತರುಣಿಯಾದ ಮಡದಿಯನ್ನು ನೋಡಿದರೆ ಮತ್ತೆ ಸಂಸಾರದ ಕಡೆಗೆ ತಿರುಗಾನು-ಎಂದು ಆಲೋಚಿಸಿ, ಸೊಸೆಗೆ ಚೆನ್ನಾಗಿ ಅಲಂಕಾರವಂಮಾಡಿ ಅವಳನ್ನು ಕಳುಹಿಸಿಕೊಟ್ಟಳು. ಆಕೆ ಪ್ರಯತ್ನದಿಂದ ಹುಡುಕಿ ಬಂದು ಬೆಟ್ಟದ ಮೇಲೆ ದೇವಾಲಯದೊಳಗೆ ಏಕಾಂತಭಾವದಲ್ಲಿ ಧ್ಯಾನಾರೂಢನಾಗಿ ಕುಳಿತಿದ್ದ ಪತಿಯ ಬಳಿಯಂ ಸೇರಿ ಮುಂದೆ ಬಂದು ನಿಂತಳು. ಆಗ ಆತನು ಕಣ್ದೆರೆದು ನೋಡಿ-ನೀನೇಕೆ ಇಲ್ಲಿಗೆ ಬಂದೆ? ಹಿಂದಿರುಗಿ ಹೊರಟು ಹೋಗು. ಬಹುವಾದ ಮಾತನಾಡಬೇಡ-ಎನಲು, ಆಕೆ-ನಿಮ್ಮನ್ನುಬಿಟ್ಟು ನಾನು ದೂರ ಹೋಗುವಳಲ್ಲ. ಜಲಚರಜಂತುಗಳು ನೀರನ್ನು ಬಿಟ್ಟರೆ ಅವಕ್ಕೆ ಬೇರೆಗತಿಯೆಂತು ? ರತ್ನದ ಹೊಳೆವು ಅದನ್ನು ಬಿಟ್ಟು ಎಂತು ಹೋಗತಕ್ಕುದಲ್ಲವೋ ಅಂತು ಪತಿವ್ರತೆಯು ತನ್ನ ಪತಿಯನ್ನು ತಾನು ಬಿಟ್ಟು-ಹೋಗತಕ್ಕುದಲ್ಲವು-ಎಂದಳು.

ಅದಕ್ಕೆ ಸಂತೋಬನು-ನಿನ್ನ ಮನದಲ್ಲಿ ಅಂತು ದಾರ್ಢ್ಯವಿದ್ದರೆ ನಿನ್ನ ಮೈಯ ಮೇಲಣ ವಸ್ತ್ರಭೂಷಣಗಳನ್ನೂ ಯಾಚಕರಿಗೆ ಕೊಟ್ಟುಬಿಡು. ಇಲ್ಲದಿದ್ದರೆ ಬೇಗನೆ ನಿನ್ನ ಮನೆಗೆ ಹೊರಟುಹೋಗು-ಎನಲು, ಆಕೆ ಅದಕ್ಕೆ ಸಮ್ಮತಿಗೊಂಡು ಮನದಲ್ಲಿ ಪಶ್ಚಾತ್ತಾಪವನ್ನು ಹೊಂದಿ ವಸ್ತ್ರಭೂಷಣಗಳನ್ನು ಕೈಯಾರೆ ತೆಗೆದು ಬಿಸುಟಳು. ಸಂತೋಬನು ತನ್ನ ಜೀರ್ಣವಸ್ತ್ರದಲ್ಲಿ ಅರ್ಧವನ್ನು ಹರಿದು ಕೊಟ್ಟನು. ಬಳಿಕ ಆಕೆಯೂ ವೈರಾಗ್ಯವಂ ತಾಳಿ ಪತಿಯೊಡನೆ ಶ್ರೀಹರಿಭಜನೆಯಲ್ಲಿ ಕುಳಿತಳು.

ಆಗ ಜಠರಾಗ್ನಿಯು ಪ್ರದೀಪ್ತವಾಗಲು, ಹಸಿವಿನಿಂದ ಆಕುಲನಾಗಿ ಸಂತೋಬನು ಕಾಂತೆಯಂ ಕುರಿತು-ಭಿಕ್ಷವನ್ನು ಬೇಡುವುದಕ್ಕೋಸ್ಕರ ನೀನು ಊರಿಗೆ ಹೋಗಿ ಬಾ. 'ಪಾರಗಾವ' ಎಂಬಊರಲ್ಲಿ ನಂಟರಿಷ್ಟರು ಅನೇಕರಿರುವರು. ಆದುದರಿಂದ ನಿರ್ಲಜ್ಜೆಯಾಗಿ ಅಲ್ಲಿಗೇ ಹೋಗಬೇಕು. ಸಕಲರೂ ಮಮತೆಯಂ ತೋರಾರು, ಅವರಿಗೆ ಪ್ರತ್ಯುತ್ತರವಂ ಹೇಳಬಾರದು. ಯಾರಾದರೂ ಬಂದು ರೊಟ್ಟಿಯನ್ನು ಸಮಗ್ರವಾಗಿ ಭಿಕ್ಷಕ್ಕೆ ಹಾಕಲು, ತೆಗೆದುಕೊಳ್ಳಬೇಡ-ಎಂದು ಹೇಳಲು, ಆಕೆ ಆಗಲೆಂದು ಪ್ರಾಣನಾಥನ ಅಪ್ಪಣೆಯಂತೆ ನಡೆದು ಲೌಕಿಕವಾಯಾಮಮತೆಗಳಂಬಿಟ್ಟು ಊರಲ್ಲಿ ಪ್ರವೇಶಿಸಿ ಮನೆಮನೆಗೂ ಭಿಕ್ಷವನ್ನು ಬೇಡುವುದಕ್ಕೆ ಹೊರಟಳು. ಕಂಡವರೆಲ್ಲರೂ-ಇವರು ಜನ್ಮಾಂತರದಲ್ಲಿ ಏನು ಸುಕೃತವಂ ಮಾಡಿದ್ದರೋ ! ಹೃದಯದಲ್ಲಿ ವೈರಾಗ್ಯವು ದೃಢವಾಯಿತು-ಎನುತಿದ್ದರು. ಆಕೆಯು ಮನೆಮನೆಯ ಬಾಗಿಲಿಗೆ ಹೋಗಿ 'ಹರಿವಿಟ್ಠಲ' ಎಂದು ಉಚ್ಚರಿಸಿ, ಅಷ್ಟರಲ್ಲಿಯೇ ಭಿಕ್ಷವು ಬಂದರೆ ತೆಗೆದುಕೊಳ್ಳುತ, ಇಲ್ಲದಿದ್ದರೆ ಸುಮ್ಮನೆ ಮುಂದೆ ಹೊರಟುಹೋಗುತ ಇದ್ದಳು. ದಾರಿಯಲ್ಲಿ ನಾದಿನಿಯ ಮನೆಯು ಸಿಕ್ಕಿತು. ಅಲ್ಲಿಗೂ ಹೋಗಿ ಬಾಗಿಲಲ್ಲಿ ನಿಂತು-'ಹರಿ

ವಿಟ್ಠಲ” ಎಂದಳು. ಸಂತೋಬನ ಸೋದರಿಯು ಒಳಗಣಿಂದ ಓಡಿಬಂದು ಮೋಹದಿಂದ ಆಲಿಂಗಿಸಿಕೊಂಡು ಅಳುತ್ತ—ಅತ್ತಿಗೆಯಮ್ಮಾ! ನೀವು ಸುಕುಮಾರಾಂಗಿಯರು; ಸುಂದರಿಯರು; ಗಂಭೀರವಾದ ಗುಣವುಳ್ಳವರು. ಈಶ್ವರನು ಥಟ್ಟನೆ ಇಂತು ನಿಮ್ಮ ವಿಷಯದಲ್ಲಿ ಕೋಪಿಸಿಕೊಳ್ಳಬಹುದೇ? ಪಲ್ಲಕ್ಕಿಯಲ್ಲಿಯೇ ಕುಳಿತುಕೊಂಡು ಹೋಗು ತಿದ್ದಿರಿ. ಈಗ ನಡೆಯುವಾಗ ಕಲ್ಲುಗಳೆಷ್ಟು ಒತ್ತಿಕೊಳ್ಳುವುವೋ! ಥಳಥಳಿಸುವ ಒಡ ವೆಗಳನ್ನು ತೆಗೆದುಬಿಸುಟು, ಇಂತಹ ವೃತ್ತಿಯನ್ನು ಏಕೆ ಹಿಡಿದಿರಿ? ಮಿರುಮಿರುಗುವ ದಿವ್ಯದುಕೂಲಗಳಂ ಬಿಟ್ಟು ಇಂತಹ ಹರಿಕುಬಟ್ಟೆಯನ್ನು ಏಕೆ ಉಟ್ಟುಕೊಂಡಿರಿ? ಮನೆ ಯಲ್ಲಿ ರುಚಿಕರವಾದ ಪಕ್ವಾನ್ನಗಳನ್ನು ಬಿಟ್ಟು ಮನೆಮನೆಗೆ ಬಂದು ಭಿಕ್ಷವನ್ನು ಏಕೆ ಬೇಡುವಿರಿ?-ಎಂದು ನುಡಿದು, ಎರಡು ರೊಟ್ಟಿಗಳನ್ನೂ ಉಪಸ್ಕರಗಳನ್ನೂ ತಂದು ಬಲಾತ್ಕಾರದಿಂದ ಜೋಳಿಗೆಯಲ್ಲಿ ಹಾಕಿದಳು.

ಸಂತೋಬನ ಮಡದಿಯು ಅದಂ ಕಂಡು ಇಷ್ಟೆಲ್ಲವನ್ನೂ ಏಕೆ ಹಾಕಿದಿರಿ? ಈ ಸಂಗತಿಯು ಯಜಮಾನರಿಗೆ ತಿಳಿದರೆ ಅವರು ನನ್ನ ವಿಷಯದಲ್ಲಿ ಬಹುವಾದ ಕೋಪವಂ ತಾಳುವರು-ಎಂದಳು. ಅದಕ್ಕೆ ಆ ನಾದಿನಿಯು—ನಾನು ಇದನ್ನು ಪ್ರೀತಿ ಯಿಂದ ಕೊಟ್ಟಿರುವೆನು. ನಿಮ್ಮ ಆಶ್ರಮಕ್ಕೆ ಹೋಗಿ ನೀವಿಬ್ಬರೂ ಭೋಜನಮಾಡ ಬೇಕು; ನನ್ನಾಣೆ; ನೀವಿದನ್ನು ಪರಿಹರಿಸಲಾಗದು-ಎಂದಳು.

ಸಂತೋಬನ ಮಡದಿಯು ಅಲ್ಲಿಂದ ಹಿಂತಿರುಗಿ ಬೆಟ್ಟಕ್ಕೆ ಬಂದು ಪತಿಯನ್ನು ಕುರಿತು-ನೀವು ಇದನ್ನು ಭೋಜನಮಾಡಬೇಕು-ಎಂದು ತಂದ ಜೋಳಿಗೆಯ ಭಿಕ್ಷ ವನ್ನು ಆತನ ಮುಂದೆ ಇಟ್ಟಳು. ಆತನು ಅದರಲ್ಲಿ ಇದ್ದ ಸಮಗ್ರವಾದ ರೊಟ್ಟಿ ಗಳನ್ನು ಕಂಡು ಇದೇನೆಂದು ಕೇಳಲು, ಆಕೆಯು ವೃತ್ತಾಂತವೆಲ್ಲವನ್ನೂ ಹೇಳಿದಳು. ಸಂತೋಬನು ಅದನ್ನು ಕೇಳಿ ಅನುತಾಪಗೊಂಡು ಆಕೆಯಂ ಕುರಿತು-ನೀನು ಪಾರ ಗಾಂವಿನಲ್ಲಿ ಈ ಭಿಕ್ಷವನ್ನು ಯಾರಿಂದ ತಂದಿರುವೆಯೋ ತಗೆದುಕೊಂಡು ಹೋಗಿ ಅವರಿಗೇ ಕೊಟ್ಟುಬಿಡಬೇಕು. ನನ್ನ ಈ ಮಾತನ್ನು ನೀನು ಕೇಳದಿದ್ದರೆ ನಾನು ಭೋಜನವಂ ಮಾಡುವುದಿಲ್ಲ-ಎಂದನು.

ಆಕೆಯು ಪತಿಯ ಹಟವಂ ನೋಡಿ ಆಗಲೆಂದು ಒಪ್ಪಿಕೊಂಡು ಅದನ್ನು ತೆಗೆ ದುಕೊಂಡು ಹೋಗಿ ನಾದಿನಿಗೆ ನಡೆದ ಸಂಗತಿಯಂ ಹೇಳಿ, ಕೊಟ್ಟು ಹಿಂತಿರುಗಿ, “ಭೀಮರಾ” ಎಂಬ ನದಿಯ ಬಳಿಗೆ ಬರುವಾಗ ಸೂರ್ಯನು ಅಸ್ತಂಗತನಾದುದರಿಂದ ಕತ್ತಲೆ ಕವಿದುಕೊಂಡಿತು. ಅಪರಿಮಿತವಾದ ವೃಷ್ಟಿಯು ಸುರಿಯಿತು. ನದಿಯ ಪ್ರವಾಹವು ಬಹುವಾಗಿ ಬಂದಿತು. ಅದಂ ಕಂಡು, ಮುಂದೇನುಮಾಡಬೇಕೆಂದು ಚಿಂತಾಕ್ರಾಂತೆಯಾಗಿ-ನನಗೆ ದೇವನೂ ಗುರುವೂ ಆದ ಪತಿಯು ಆಚೆಯತೀರದಲ್ಲಿ ದೂರದಲ್ಲಿ ಇರುವನು. ನಾನು ಈಚೆಯ ತೀರದಲ್ಲಿ ನಿಂತೆನು. ಪ್ರಾರಬ್ಧಕರ್ಮವು ಬಲವತ್ತರವಾದುದರಿಂದ ಪತಿಯನ್ನು ಅಗಲಿಸಿತು. ಸುಕೃತದ ಸಂಚಯವು ಇಲ್ಲದ

ಕಾರಣ ಪತಿಯ ಸೇವೆಯು ಘಟಿಸದಂತಾಯ್ತು. ಈಗ ಏನಮಾಡಲಿ?-ಎಂದು ಚಿಂತಿಸಿ ಸ್ವಾಮಿಯಂ ಕುರಿತು-ಕರುಣಾಕರನೇ! ಕೇಶವನೇ! ಸಂಕಟಪರಿಹಾರಕನೇ! ವಿಟ್ಠಲನೇ! ಈಗ ನೀನು ನನಗೆ ಪ್ರಸನ್ನನಾಗಬೇಕು-ಎಂದು ಸದ್ಭಾವದಿಂದ ಪ್ರಾರ್ಥನೆಯಂ ಮಾಡಲು, ದಯಾನಿಧಿಯಾದ ಫಂಡರೀನಾಥನು ಆಕೆಯ ಸಂಕಟವಂ ತಿಳಿದು ತತ್ಕಾಲದಲ್ಲಿಯೇ ಒಲಿದು ಅಂಬಿಗನ ರೂಪವಂ ತಾಳಿ ಬಳಿಗೆ ಬಂದು ಆಕೆಯನ್ನು ಕುರಿತು-ಅಮ್ಮಾ! ನಿನ್ನ ಪತಿ ಸಂತೋಬನು ಆಚೆಯ ತೀರದಲ್ಲಿರುವನು. ನೀನೇಕೆ ಇಲ್ಲಿ ಚಿಂತಾಕುಲೆಯಾಗಿ ಕುಳಿತೆ? ನೀನು ಆಚೆಯ ತೀರಕ್ಕೆ ಹೋಗಬೇಕಾಗಿದ್ದರೆ ನಾನು ನಿನ್ನನ್ನು ಹೊಳೆಯಿಂದ ದಾಂಟಿಸುವೆನು-ಎನಲು, ಆಕೆ-ನಾನು ನಿಮ್ಮ ತಂಗಿಯು. ನೀವು ದಯೆಯಿಟ್ಟು ಹೊಳೆಯಿಂದ ದಾಂಟಿಸಬೇಕು-ಎಂದಳು.

ಶ್ರೀಹರಿಯು ಆಗಲೆಂದು ಆಕೆಯನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡು ಒಂದುನಿಮಿಷದೊಳಗಾಗಿ ಆಚೆಯತೀರಕ್ಕೆ ಕರೆದುಕೊಂಡುಹೋಗಿ ಇಳಿಯಿಸಿ, ಅದೋ ಅಲ್ಲಿ ಸಂತೋಬನು ಕುಳಿತಿರುವನು-ಎಂದು ತೋರಿಸಿ-ಆಗಲೇ ಅಂತರ್ಧಾನವನ್ನೈದಿದನು.

ಬಳಿಕ ಆಕೆ ಪತಿಯ ಸಮೀಪಕ್ಕೆ ಬಂದು ಈ ವೃತ್ತಾಂತವೆಲ್ಲವನ್ನೂ ಹೇಳಲು, ಆತನು ಆಕೆಯನ್ನು ಕುರಿತು-ವೈಕುಂಠನಾಥನು ನಿನಗೆ ಪ್ರಸನ್ನನಾದನು. ನನ್ನನ್ನು ಏಕೆ ಪರಿಕ್ಷಿಸುತ್ತಿರುವನೋ? ಈಗ ಆಸ್ವಾಮಿಯ ದರ್ಶನವು ನನಗಾಗದಿದ್ದರೆ ನಾನು ಎಂತೂ ಭೋಜನಮಾಡುವುದಿಲ್ಲ. ಈನುಡಿಯನ್ನು ಸತ್ಯಪ್ರತಿಜ್ಞೆಯೆಂದು ತಿಳಿ-ಎಂದನು.

ಮರುದಿವಸ ಫಂಡರೀನಾಥನು ಪಾರಗಾವಿನಲ್ಲಿ ಇದ್ದ ಒಬ್ಬ ಸದ್ಭಕ್ತನ ಸ್ವಪ್ನದಲ್ಲಿ ಹೋಗಿ-ನೀನು ಮನೆಯಲ್ಲಿ ಪಕ್ವಾನ್ನವಂ ಮಾಡಿಸಿ ತೆಗೆದುಕೊಂಡು ಹೋಗಿ ಸಂತೋಬನಿಗೆ ಭೋಜನವಂ ಮಾಡಿಸುವನಾಗು. ನಿನಗೆ ಸುಕೃತವಿಶೇಷವು ಘಟಿಸುವುದಕ್ಕೋಸ್ಕರ ನಾನು ಹೇಳುವೆನು-ಎಂದು ಹೇಳಿದನು.

ಆತನು ಎಚ್ಚರಿಕೆಗೊಂಡು, ಸ್ವಾಮಿಯ ಅಪ್ಪಣೆಯಂತೆ ಮನೆಯಲ್ಲಿ ಪಕ್ವಾನ್ನಗಳಂ ಮಾಡಿಸಿ ಸಂತೋಬನ ಬಳಿಗೆ ತೆಗೆದು ಕೊಂಡು ಹೋಗಿ ನಡೆದ ವೃತ್ತಾಂತವಂ ಹೇಳಲು, ಸಂತೋಬನು ಆತನನ್ನು ಕುರಿತು-ನಿನಗೆ ರುಕ್ಮಿಣೀಕಾಂತನು ಪ್ರಸನ್ನನಾದನು. ನನ್ನಲ್ಲಿ ಏನು ದುಷ್ಕೃತವಿರುವುದೋ ಅದರಿಂದ ನನ್ನನ್ನು ಉಪೇಕ್ಷಿಸಿರುವನು. ಆ ಶ್ರೀಹರಿಯ ದರ್ಶನವಾಗದಿದ್ದರೆ ನಾನು ಎಂದಿಗೂ ಭೋಜನಮಾಡುವುದಿಲ್ಲ-ಎಂದು ಉತ್ತರವಂ ಹೇಳಿದನು. ಬಂದವನು ಆತನ ಮನೋನಿಶ್ಚಯಕ್ಕೆ ವಿಸ್ಮಿತನಾಗಿ ಹಿಂತಿರುಗಿ ಹೊರಟುಹೋದನು.

ಕಲಿಯುಗದಲ್ಲಿ ಪ್ರಾಣವು ಅನ್ನಗತವಾದುದು. ಆದರೆ ಸಂತೋಬನ ದೃಢನಿಶ್ಚಯವು ಅತ್ಯದ್ಭುತವಾದುದು. ಆತನ ಮನೋದಾರ್ಢ್ಯಕ್ಕೆ ಮೆಚ್ಚಿ ಶ್ರೀರುಕ್ಮಿಣೀಕಾಂತನು ಸಾಕ್ಷಾದ್ದರ್ಶನವಂ ಕೊಟ್ಟು ಆತನನ್ನು ಅನುಗ್ರಹಿಸಿದನು.

ಬಳಿಕ ಸಂತೋಬನು "ರಾಂಝುಣಗಾವ" ಎಂಬ ಊರಿಗೆ ನಿತ್ಯವೂ ಭಿಕ್ಷಕ್ಕೆ ಹೋಗುತ್ತಿದ್ದನು. ಅಲ್ಲಿ ದುಸ್ಸ್ವಭಾವನಾದ ಒಬ್ಬ ಬ್ರಾಹ್ಮಣನು ಪ್ರತಿದಿವಸವೂ ಹೆಂಡತಿಯೊಡನೆ ಕಲಹಗಳನ್ನು ಮಾಡುತ್ತ, ಆಕೆ ಏನಾದರೂ ಉತ್ತರವನ್ನು ಕೊಟ್ಟರೆ "ಸಂತೋಬನು ಸಂಸಾರವನ್ನು ಬಿಟ್ಟುಹೋಗಿ ವಿರಕ್ತನಾದಂತೆ ನಾನೂ ಬಿಟ್ಟುಹೋಗುವೆನು. ಬಳಿಕ ನಿನಗೆ ಕಷ್ಟವು ಪ್ರಾಪ್ತವಾದೀತು" ಎಂದು ಹೆದರಿಸುತ್ತಿದ್ದನು. ಹೆಂಡತಿಯು ಅದನ್ನು ಕೇಳಿ ಸುಮ್ಮನಿರುತ್ತಿದ್ದಳು. ಹೇಡಿಯು ತನ್ನಲ್ಲಿ ಶೌರ್ಯವಿಲ್ಲದೆಯೇ ಸುಮ್ಮನೆ ಕತ್ತಿಯನ್ನು ಎಂತು ಝಳಪಿಸುವನೋ, ಗರ್ಭದ ಛಾಯೆಯೇ ಇಲ್ಲದೆ ಬಂಜೆಯು ಎಂತು ಬಯಕೆಯನ್ನು ಹೇಳಿಕೊಳ್ಳುವಳೋ, ಮೇಘವು ಮಳೆಯನ್ನು ಕರೆಯದೆ ಆಕಾಶದಲ್ಲಿ ಎಂತು ಗುಡುಗುವುದೋ, ವಕ್ಷಃಪ್ರದೇಶದಲ್ಲಿ ಕುಚಗಳು ಇಲ್ಲದೆಯೇ ವೇಷಧಾರಿಗಳು ಎಂತು ಸ್ತ್ರೀಯಾಕಾರವಂ ತೋರಿಸುವರೋ, ಕ್ಷತ್ರಿಯತ್ವವೂ ಸಿಂಹಾಸನಾಧಿಪತಿತ್ವವೂ ಇಲ್ಲದೆಯೇ ರೂಪಧಾರಿಯು ತಾನು ದೊರೆಯೆಂದು ಎಂತು ಹೇಳಿಕೊಳ್ಳುವನೋ, ಅಂತು ಚಿತ್ತದಲ್ಲಿ ಶಾಂತಿಯೂ ವಿರಕ್ತಿಯೂ ಇಲ್ಲದೆಯೆ ಬರಿಯ ವೈರಾಗ್ಯದ ಮಾತುಗಳನ್ನಾಡುವವರಿಗೆ ಇಹಪರವೆರಡರಲ್ಲಿಯೂ ಪರಮಾರ್ಥವುಂಟಾಗಲಾರದು. ಆ ಬ್ರಾಹ್ಮಣನು ಹೆದರಿಸುತ್ತಿದ್ದುದನ್ನು ನೋಡಿ ಅವನ ಹೆಂಡತಿಯು ಭಯಪಟ್ಟು ಏನನೂ ಆಡಲಾರದೆ ಸುಮ್ಮನೆ ಇದ್ದಳು.

ಒಂದುದಿವಸ ಸಂತೋಬನು ಭಿಕ್ಷಕ್ಕೆ ಬಂದು ಅಂಗಳದಲ್ಲಿ ನಿಂತನು. ಆಗ ಆ ಬ್ರಾಹ್ಮಣಿಯು-ನಮ್ಮ ಮನೆಯ ಯಜಮಾನರು ಯಾವಮಾತಿಗೂ "ಸಂತೋಬನು ಸಂಸಾರವನ್ನು ಬಿಟ್ಟು ಹೋಗಿ ವಿರಕ್ತನಾದಂತೆ ನಾನೂ ಬಿಟ್ಟು ಹೋಗುವೆನು" ಎಂದು ಹೇಳುತ್ತಿರುವರು. ಇದಕ್ಕೆ ಏನುಪಾಯವನ್ನು ಹೇಳುವಿರೋ ಅದರಂತೆ ನಾನು ನಡೆದುಕೊಳ್ಳುವೆನು-ಎಂದಳು. ಸಂತೋಬನು ಆಕೆಯ ಮಾತಂ ಕೇಳಿ-ಅಮ್ಮಾ! ನಿನ್ನ ಪತಿಗೆ ಏನಾದರೂ ಮಂತ್ರವನ್ನು ಉಪದೇಶಿಸಿ, ತಿರುಕನು ಮನೆಮನೆಯ ಬಳಿಗೆ ಹಿಡಿದುಕೊಂಡು ಬಂದು ಕುಣಿಯಿಸುವ ಕೋತಿಯು ಅವನಿಗೆ ಎಂತು ಸ್ವಾಧೀನವಾಗಿರುವುದೋ, ಅಂತು ನಿನಗೆ ಅಧೀನನಾಗಿರುವಂತೆ ಮಾಡುವೆನು. ನೀನು ಚಿಂತಿಸಬೇಡ-ಎನಲು, ಆಕೆ ಆನುಡಿಯಂ ಕೇಳಿ ಸಂತೋಷಪಟ್ಟಳು. ಸಂತೋಬನು ಭಿಕ್ಷವನ್ನು ತೆಗೆದುಕೊಂಡು ತನ್ನ ಆಶ್ರಮಕ್ಕೆ ಹೊರಟುಹೋದನು.

ಬಳಿಕ ಮರುದಿವಸ ಬ್ರಾಹ್ಮಣನು ಹೊರಗಣಿಂದ ಮನೆಗೆ ಬಂದು ಮಡದಿಯಂ ಕುರಿತು-ನಾನು ಬಹುವಾಗಿ ಹಸಿವುಗೊಂಡಿರುವೆನು. ನೀನು ಇನ್ನೂ ಅಡಿಗೆಮಾಡಿಲ್ಲ. ಸಂತೋಬನಂತೆ ಸಂಸಾರವನ್ನು ತ್ಯಾಗಮಾಡಿ ನನ್ನ ಮನಸ್ಸು ಬಂದಂತೆ ಹೊರಟು ಹೋಗುವೆನು-ಎಂದನು. ಆಕೆಯು ಆಮಾತಿಗೆ ಏಕೆ ವಿಲಂಬವಂ ಮಾಡುವಿರಿ?-ಸಂತೋಬನು ಎಂತು ಆದನೋ ನೀವೂ ಅಂತು ಆಗಬಹುದು-ಎಂದು ಉತ್ತರವನ್ನು ಹೇಳಿದಳು.

ಆ ಬ್ರಾಹ್ಮಣನು ಆನುಡಿಯಂ ಕೇಳಿ ಕ್ರೋಧಸಂತಪ್ತನಾಗಿ ಇನ್ನುಮೇಲೆ ಪ್ರಾಣವನ್ನಿಟ್ಟುಕೊಂಡಿರುವುದು ತಕ್ಕುದಲ್ಲವೆಂದು ಆಲೋಚನೆಯಂ ಮಾಡಿ, ಬಟ್ಟೆಯನ್ನೂ ತಂಬಿಗೆಯನ್ನೂ ತೆಗೆದುಕೊಂಡು ಹೊರಟು, ಬೆಟ್ಟದ ಮೇಲಿದ್ದ ಸಂತೋಬನ ಸಮೀಪಕ್ಕೆ ಹೋಗಿ-ನಾನೂ ಸಂಸಾರವನ್ನು ಬಿಟ್ಟು ನಿಮ್ಮಂತೆ ಆಗಿಬಂದೆನು. ಇನ್ನು ಮೇಲೆ ನಿಮ್ಮ ಸಂಗವನ್ನು ಎಂದಿಗೂ ಬಿಡುವುದಿಲ್ಲ. ಅನುಗ್ರಹವಂ ಮಾಡಿ ನನ್ನನ್ನು ಪರಮಾರ್ಥದಲ್ಲಿ ಹತ್ತಿಸಬೇಕು-ಎಂದು ಪ್ರಾರ್ಥಿಸಲು, ಸಂತೋಬನು-ಅವಶ್ಯವಾಗಲಿ; ನನಗೂ ಅನಾಯಾಸದಿಂದ ನಿಮ್ಮ ಸಂಗವು ದೊರೆಯಿತು. ನಿಮ್ಮಂತಹ ವಿರಕ್ತರು ಮೂರುಲೋಕದಲ್ಲಿಯೂ ಇಲ್ಲ. ಕೈಯಲ್ಲಿ ಈ ಸೋರೆಯ ಬುರುಡೆಯನ್ನು ತೆಗೆದು ಕೊಂಡು ಹೋಗಿ ನನಗೋಸ್ಕರ ನೀರನ್ನು ತಂದುಕೊಡಿ. ಕಳ್ಳರು ದಾರಿಯಲ್ಲಿ ಹೊಂಚುಹಾಕುತಿರುವರು. ಆದುದರಿಂದ ನಿಮ್ಮ ಪಾಗು ಮುಂತಾದ ವಸ್ತ್ರಗಳೆಲ್ಲ ವನ್ನೂ ಇಲ್ಲಿಯೇ ಇರಿಸಿ-ಎಂದನು. ಆ ಬ್ರಾಹ್ಮಣನು ಆಮಾತಿಗೆ ಸಮ್ಮತಿಪಟ್ಟು ಬಟ್ಟೆಗಳೆಲ್ಲವನ್ನೂಅಲ್ಲಿಯೇ ಇಟ್ಟು,ಸೋರೆಬುರುಡೆತೆಗೆದುಕೊಂಡು ನೀರುತರುವುದಕ್ಕೆ ಹೊಳೆಯಬಳಿಗೆ ಹೋಗಿ ಬಹುಕ್ಷುಧಾರ್ತನಾಗಿ ಸಂಕಟಪಡುತ್ತ ಹಿಂತಿರುಗಿ ಬರುತ್ತಿದ್ದನು. ಅಷ್ಟರಲ್ಲಿ ಸಂತೋಬನು ಆತನ ಬಟ್ಟೆಗಳೆಲ್ಲವನ್ನೂ ಹರಿದು ಮುಳ್ಳುಗಿಡದ ಮೇಲೆ ಹಾಕಿ ಅವನ ಪಾತ್ರೆಯನ್ನು ಹೊಳೆಯ ಮಡುವಿನಲ್ಲಿ ಎಸೆದುಬಿಟ್ಟನು. ಬಳಿಕ ಬಳಿಗೆ ಬಂದ ಆ ಬ್ರಾಹ್ಮಣನನ್ನು ಕುರಿತು–ನಿಮ್ಮ ಬಟ್ಟೆಯೆಲ್ಲವನ್ನೂ ಕೌಪೀನವಂ ಮಾಡಿ ರುವೆನೆಂದನು. ಅದಕ್ಕೆ ಆ ಬ್ರಾಹ್ಮಣನು ಸಂಕೋಚಪಟ್ಟು ಕೌಪೀನವನ್ನು ಧರಿಸಿ ಸಂತೋಬನಂ ಕುರಿತು–ನನಗೆ ಅತ್ಯಧಿಕವಾದ ಹಸಿವು ಆಗಿದೆ. ಪ್ರಾಣವು ಆಕುಲ ವಾಗಿ ಕಂಠಗತವಾಗಿದೆ-ಎನಲು, ಸಂತೋಬನು "ನೇಪತೀರಟೆ" ಎಂಬುದನ್ನು ಮುರಿದುಕೊಟ್ಟು, ಅದನ್ನು ತಾನೂ ಪತ್ನಿಯೊಡನೆ ಭಕ್ಷಿಸುತ್ತ ಕುಳಿತನು.

ಬ್ರಾಹ್ಮಣನು-ಇದು ಕಹಿಯಾಗಿದೆ; ನನ್ನಿಂದ ತಿನಲಾಗುವುದಿಲ್ಲ–ಎನಲು, ಸಂತೋಬನು-ಸರ್ವವಿಷಯಗಳನ್ನೂ ತ್ಯಾಗಮಾಡಿ ಇಲ್ಲಿಗೆ ಬಂದಿರುವೆನೆಂದು ಹೇಳಿದಿರಿ. ನಿಮಗೆ ಈ ನಾಲಗೆಯ ರುಚಿಯು ಏಕೆ ಬೇಕೋ? ಆದರೆ ನಿಮಗೆ ಶೀತಲ ವಾದ ಮತ್ತೇನನಾದರೂ ತಂದು ಕುಡುವೆನು. ಅದರಿಂದ ಕ್ಷುಧಾನಿವಾರಣವಂ ಮಾಡಿಕೊಳ್ಳಿ–ಎಂದು ನುಡಿದು ಬಳಿಕ ತಾನೇ ಎದ್ದು ಸ್ವಹಸ್ತದಿಂದ ಬೇವನ್ನು ತಂದು ಆತನಿಗೆ ಕೊಟ್ಟು ತಾನೂ ಮಡದಿಯೊಡನೆ ಭಕ್ಷಿಸುತ್ತ ಇರಲು, ಬ್ರಾಹ್ಮಣನು-ನನಗೆ ಇದೇನೂ ಚೆನ್ನಾಗಿ ಕಾಣುವುದಿಲ್ಲ. ಹಸಿದೋ ಒಣಗಿದುದೋ ಆದ ರೊಟ್ಟಿಯನ್ನು ತಿಂದುಕೊಂಡು ಮನೆಯಲ್ಲಿ ಸುಖದಿಂದ ಇರುತಿದ್ದೆನು. ನನ್ನ ಬುದ್ಧಿಯು ಕೆಟ್ಟಿತು. ಸಂಸಾರವನ್ನು ಬಿಟ್ಟು ವಿರಕ್ತನಾದೆನು. ಈಗ ದಾರುಣವಾದ ಚಳಿಯಾಗುತಿರುವುದು. ಹಸಿವಿನಿಂದ ಪೀಡಿತನಾಗಿರುವೆನು. ಏನುಪಾಯವಂ ಮಾಡಲಿ?–ಎಂದು ಮೆಲ್ಲಮೆಲ್ಲನೆ ಬಿಕ್ಕಿಬಿಕ್ಕಿ ಅಳುತ್ತ ಸಂಕಟಪಟ್ಟನು.

ಸಂತೋಬನು ಅವನ ದುರವಸ್ಥೆಯಂ ನೋಡಿ-ನೀವು ಅದೇಕೆ ಸಂಸಾರದಲ್ಲಿ ವಿರಕ್ತರಾಗಿ ಬಂದಿರಿ?-ಎನಲು, ಆತನು-ಪ್ರಾರಬ್ಧಕರ್ಮವು ದುಷ್ಟವಾದುದರಿಂದ ಹೆಂಡತಿಯ ಸಂಗಡ ಜಗಳವಂಮಾಡಿ ನಿರ್ವೇದಗೊಂಡು ನಿಮ್ಮ ಬಳಿಗೆ ಬಂದೆನು. ನಿಮ್ಮ ಸಂಗತಿಯೂ ಬಹುಕಠಿನವಾಗಿರುವುದು. ವಸ್ತ್ರಗಳನ್ನು ಹರಿದು ಬಿಸುಟಿರಿ. ಈಗ ಇದೇಸ್ಥಿತಿಯಲ್ಲಿ ಮನೆಗೆ ಹೋಗುವುದಕ್ಕೆ ನಾಚಿಕೆಯಾಗುವುದು. ರಾತ್ರಿವೇಳೆಯಲ್ಲಾದರೂ ಹೋಗುವೆನೆಂದರೆ, ಕೌಪೀನಧಾರಿಯಾದ ಯಾವನೋ ವಿರಾಗಿಯು ಬಂದನೆಂದು ತಿಳಿದು ಮಡದಿಯು ಮನೆಗೆ ಬರಲೀಯಳು-ಎಂದನು.

ಸಂತೋಬನು ಆಮಾತಂ ಕೇಳಿ-ನೀವು ನಿಮ್ಮ ಮಡದಿಯೊಡನೆ ಸಂತೋಬನಂತೆ ವಿರಕ್ತನಾಗಿ ಹೋಗುವೆನೆಂದು ಯಾವ ಮಾತಿಗೂ ನುಡಿಯುತಿದ್ದಿರಲ್ಲವೆ? ಈ ದಿನ ಮೊದಲುಗೊಂಡು ಇಂತಹ ಮಾತನಾಡುವುದಿಲ್ಲವೆಂದು ಆಣೆಯನ್ನು ಇಟ್ಟುಕೊಂಡರೆ, ಹೊರಗೆ ಯಾರಿಗೂ ತಿಳಿಯದಂತೆ ನಿಮ್ಮನ್ನು ಮನೆಗೆ ಕರೆದುಕೊಂಡು ಹೋಗಿ ಬಿಡುವೆನು-ಎಂದನು. ಆ ಬ್ರಾಹ್ಮಣನು ಅದಕ್ಕೆ-ಇನ್ನು ಮೇಲೆ ಶ್ರೀಹರಿಸಾಕ್ಷಿಯಾಗಿಯೂ ಹೆಂಡತಿಯ ಸಂಗಡ ಜಗಳವಾಡುವುದಿಲ್ಲ; ಆಡಿದರೆ ನಾಲಗೆಯು ಬಿದ್ದುಹೋಗಲಿ-ಎಂದು ಆತನ ಪಾದಗಳನ್ನು ಹಿಡಿದುಕೊಂಡನು.

ಸಂತೋಬನು ಆ ಬ್ರಾಹ್ಮಣನ ಮನೆಗೆ ಹೋಗಿ ಆತನ ಮಡದಿಯಂ ಕುರಿತು-ನಾನು ನಿನ್ನ ಪತಿಗೆ ರಹಸ್ಯದಲ್ಲಿ ಮಂತ್ರೋಪದೇಶವನ್ನು ಮಾಡಿ ನಿನಗೆ ಸ್ವಾಧೀನನಾಗಿ ಇರುವಂತೆ ಮಾಡಿರುವೆನು. ಇನ್ನು ಮೇಲೆ ಮನೆಗೆ ಕಳುಹಿಸಿಕುಡುವೆನು. ಮುಂದೆ ಆತನ ಸಂಗಡ ನೀನು ಜಗಳವಾಡಬೇಡ. ಎಚ್ಚರಿಕೆಯಿಂದಿರು. ನಿನ್ನ ಪತಿಯು ಕೌಪೀನವನ್ನು ಧರಿಸಿಕೊಂಡು ಬಂದಾನು. ನೀನು ಆತನಿಗೆ ಬೇಗನೆ ವಸ್ತ್ರವಂ ಕುಡುವಳಾಗು-ಎಂದು ಹೇಳಿ, ಆಕೆಯ ಮನಸ್ಸಿಗೆ ಸಂತೋಷವನ್ನುಂಟುಮಾಡಿ ಅಲ್ಲಿಂದ ಹಿಂತಿರುಗಿ ತನ್ನ ಸ್ಥಳಕ್ಕೆ ಬಂದು ಆ ಬ್ರಾಹ್ಮಣನನ್ನು ಕುರಿತು-ನೀವು ನಿಮ್ಮ ಮನೆಗೆ ಹೋಗಿ. ಹೆಂಡತಿಯ ಸಂಗಡ ಕಲಹವಂ ಮಾಡಬೇಡಿ. ಕಲಹವಂ ಮಾಡಿದರೆ ನಿಮ್ಮಂತಹ ಕೆಟ್ಟವರೇ ಇಲ್ಲ-ಎಂದು ನುಡಿಯಲು, ಆತನು ಅಭಿವಂದಿಸಿ ಅಲ್ಲಿಂದ ಹೊರಟು, ಊರಲ್ಲಿ ಯಾರಾದರೂ ಕಂಡಾರು; ಬ್ರಾಹ್ಮಣರು ಈ ಸಂಗತಿಯಂ ತಿಳಿದು ಬಹಿಷ್ಕಾರವನ್ನು ಹಾಕಾರು-ಎಂದು ಮನದಲ್ಲಿ ಭೀತನಾಗಿ ರಾತ್ರಿಯ ಕತ್ತಲೆಯಲ್ಲಿ ಮನೆಯಂ ಸೇರಿ ಅಂದಿನಿಂದ ಮಡದಿಯೊಡನೆ ಕಲಹವಂ ಮಾಡದೆ ಇರುತಿದ್ದನು.

ಬಳಿಕ ಆಷಾಢಮಾಸವು ಪ್ರಾಪ್ತವಾಯಿತು. ಕನ್ಯಕೆ ಅತ್ತೆಯ ಮನೆಯಿಂದ ತೌರ್ಮನೆಗೆ ಎಂತು ಉಲ್ಲಾಸದಿಂದ ಹೋಗುವಳೋ ಅಂತು ಸಂತೋಬನು ಉಲ್ಲಾಸಭರಿತನಾಗಿ, ಪಾಡುತ ಕುಣಿಯುತ ಪಂಢರಪುರಕ್ಕೆ ಹೊರಟನು. ಆತನೊಡನೆ ಯಾತ್ರಿಕರು ಎರಡು ಸಾಸಿರಮಂದಿಗಳಿದ್ದರು. "ನೀರಾ ಭೀಮರಾ" ಎಂಬ ಎರಡು ನದಿಗಳು ಸೇರಿರುವ ಎಡೆಗೆ ಎಲ್ಲರೂ ಬಂದರು. ವರ್ಷಾಧಿಕ್ಯದಿಂದ ಪ್ರವಾಹವು ಹೆಚ್ಚಾಗಿ

ಬಂದಿದ್ದಿತು. ಅದಂ ಕಂಡು ಎಲ್ಲರೂ-ಇಂದು ನದಿಯನ್ನು ದಾಟಿ ಹೋಗದಿದ್ದರೆ ನಾಳೆ ಫಂಡರಪುರವಂ ಸೇರಲಾಗದು. ಒಂದು ಹರಿಗೋಲು ಇದ್ದರೆ ಸುಲಭವಾಗಿ ದಾಟಿ ಹೋಗಬಹುದಾಗಿದ್ದಿತು-ಎಂದು ಚಿಂತಾಕ್ರಾಂತರಾಗಿ ದಡದಲ್ಲಿ ಕುಳಿತರು.

ಆಗ ಸಂತೋಬನು-ದೇಹದ ಮೇಲಣ ಆಸೆಯಂಹಿಡಿದರೆ ಭಗವಂತನ ದರ್ಶನವು ಎಂತುಆದೀತು ? ತೇಲಿಸುವನೂ ಮುಳುಗಿಸುವನೂ ಶ್ರೀಹರಿಯೇ-ಎಂದು ನಿಶ್ಚಯ ಮಾಡಿ ನೀರಲ್ಲಿ ಇಳಿದು ಕಾಲ್ನಡೆಯಿಂದ ನಡೆದನು. ಆತನು ದೃಢವಾದ ಭಾವವುಳ್ಳ ಭಾಗವತಶಿರೋಮಣಿ. ಆದುದರಿಂದ ಉದಕವು ಆತನನ್ನು ಮುಳುಗಿಸಲಾರದಾಗಿದ್ದಿತು. ಎಷ್ಟುದೂರನಡೆದರೂ ನೀರು ಮೊಳಕಾಲಿಗೆ ಸರಿಯಾಗಿದ್ದಿತು. ಕೈಯಲ್ಲಿ ವೀಣೆಯಂ ತೆಗೆದುಕೊಂಡು ಮುಖದಲ್ಲಿ ಭಗವನ್ನಾಮಕೀರ್ತನವಂ ಮಾಡುತ ಹೊಳೆಯಂ ದಾಂಟು ವನಾಗಿ ನಡೆಯುತ್ತಿರಲು, ಅದಂಕಂಡು ಎಲ್ಲರೂ ವಿಸ್ಮಿತರಾಗಿ ಆತನಂ ಕುರಿತು-ತಾವು ಈಶ್ವರಸ್ವರೂಪರೆಂದು ತಮ್ಮ ಸಂಗವಂ ಬಯಸಿ ಬಂದೆವು. ನಮ್ಮೆಲ್ಲರನ್ನೂ ಬಿಟ್ಟು ತಾವು ಮಾತ್ರ ಆಚೆಯ ತೀರಕ್ಕೆ ಹೋಗುವಿರಾ ? ನಮ್ಮ ದುಷ್ಕರ್ಮದ ದೆಸೆಯಿಂದ ನಮಗೆ ಸ್ವಾಮಿಯ ಸಂದರ್ಶನವು ಲಭಿಸದಂತಾಯಿತು. ಅಪಾರವಾದ ಮಹಿಮೆಯಂ ಕೇಳಿ ಫಂಡರಪುರದ ಯಾತ್ರೆಗೆ ಬಂದೆವು. ಇನ್ನು ಹಿಂತಿರುಗಿ ಹೋಗಬೇಕಾಯಿತು-ಎಂದರು.

ಸಂತೋಬನು ಅವರ ಮಾತಂ ಕೇಳಿ ಹೊಳೆಯ ಮಧ್ಯದಲ್ಲಿಯೇ ನಿಂತು, ಸ್ತ್ರೀಯರು ಪುರುಷರು ಚಿಕ್ಕವರು ದೊಡ್ಡವರುಮುಂತಾಗಿ ನೀವೆಲ್ಲರೂ ನನ್ನಹಿಂದೆಯೇ ನಡೆದುಬನ್ನಿ. ತಡವನ್ನು ಮಾಡಬೇಡಿ. ಮನದಲ್ಲಿ ಭಯಪಡಬೇಡಿ. ನಿಮ್ಮನ್ನು ಫಂಡರೀನಾಥನು ಹೊಳೆಯಿಂದ ದಾಂಟಿಸುವನು-ಎಂದು ಉತ್ತರವಂ ನುಡಿದನು.

ಆ ಮಾತಂಕೇಳಿ ಸರ್ವರೂ ಸಂತೋಷಗೊಂಡು-ಸಂತೋಬರು ಫಂಡರಪುರಕ್ಕೆ ನಡೆದರು. ಅವರಿಗೆ ನೀರು ಮೊಳಕಾಲವರೆಗೆ ಬರುತಿರುವುದು. ನಾವೂ ಇವರೊಡನೆಯೇ ಹೊರಡಬೇಕು-ಎಂದು ನಿಶ್ಚಯಿಸಿ ಎತ್ತು ಕುದುರೆಗಳ ಮೇಲೆ ಹೊರೆಯನ್ನು ಹೇರಿಕೊಂಡು ಒಬ್ಬರಹಿಂದೆ ಒಬ್ಬರು ಹೊರಟು ಹೊಳೆಯ ಬಳಿಗೆ ಬಂದರು.

ಆಗ ಫಂಡರೀನಾಥನು ಅದಂ ಕಂಡು—ಹೊಳೆಯ ಪ್ರವಾಹವು ಅಪಾರವಾಗಿರುವುದು. ಎಲ್ಲರೂ ನೀರಲ್ಲಿ ಮುಳುಗಿಹೋದಾರಲ್ಲಾ ! ನನ್ನ ಭಕ್ತನಾದ ಸಂತೋಬನು ನದಿಯಲ್ಲಿ ಇಳಿದು ನಡೆದನು. ಎಲ್ಲರೂ ಅವನಂತಹ ದೃಢಭಾವವುಳ್ಳವರಲ್ಲ. ಪಾಷಾಣವನ್ನು ಕಾಷ್ಠವೆಂದು ನೀರಲ್ಲಿ ಹಾಕಿದರೆ ಅದು ಮುಳುಗಿ ಹೋಗದೆ ಇರದು. ಆದುದರಿಂದ ಈಗ ನಾನು ಇವರನ್ನು ಸಂರಕ್ಷಿಸದಿದ್ದರೆ ಭಕ್ತನ ಮಾತು ಅಸತ್ಯವಾಗಿ ಹೋದೀತು. ಯಾತ್ರೆಯವರೆಲ್ಲರೂ ಮುಳುಗಿ ಹೋದರೆ ಬಳಿಕ ನನ್ನ ದರ್ಶನವಂ ತೆಗೆದುಕೊಳ್ಳುವರು ಯಾರು ? ಪೂರ್ವಿಕರಾದ ಸಂತರ ವಚನವನ್ನು ಅಭಿಜ್ಞರೂ ಅಸತ್ಯವೆಂದು ತಿಳಿದಾರು—ಎಂದು ಆಲೋಚಿಸಿ ಬೆನ್ನ ಮೇಲೆ ಯಾತ್ರೆಯವರೆಲ್ಲರನ್ನೂ

ವಹಿಸಿ ನದಿಯಂ ದಾಂಟಿಸಲಿಚ್ಛೈಸಿ ಕೂರ್ಮರೂಪವಂ ತಾಳಿದನು. ಯಾವನ ಆಧಾರದಿಂದ ಬ್ರಹ್ಮಾಂಡದಲ್ಲಿ ಸಕಲಜೀವಗಳೂ ಇರುವುವೋ ಆಸ್ವಾಮಿಯು ನದಿಯ ಪಾತ್ರವಿದ್ದಷ್ಟು ಅಗಲವೂ ಉದ್ದವೂ ಆದ ಶರೀರವುಳ್ಳವನಾಗಿ ನಿಂತು ತನ್ನ ಭಕ್ತರ ಘಾತವಂ ತಪ್ಪಿಸಿದನು. ಬ್ರಹ್ಮಾದಿದೇವತೆಗಳಿಗೆ ಪೂಜ್ಯನೂ, ಯೋಗೀಂದ್ರರಿಂದ ಸರ್ವಕಾಲದಲ್ಲಿಯೂ ಹೃದಯದಲ್ಲಿ ಧ್ಯಾನಿಸಲ್ಪಡುವನೂ ಆದ ಆಸ್ವಾಮಿಯು ಯಾತ್ರಿಕರಿಗೆ ತನ್ನ ಬೆನ್ನನ್ನು ನೀಡಿದನೆಂಬುದು ಅಪೂರ್ವವಾಗಿ ತೋರುವುದು. ಅದಂತಿರಲಿ. ಸಕಲಜಾತಿಯ ಸ್ತ್ರೀಯರೂ ಪುರುಷರೂ ಸಣ್ಣವರೂ ದೊಡ್ಡವರೂ ಶ್ರೀಹರಿನಾಮವನ್ನು ಉದ್ಘೋಷಿಸುತ್ತ ನಡೆದರು. ಎತ್ತುಕುದುರೆಗಳ ಮೇಲೆ ಹೊರೆಯನ್ನು ಹೇರಿಕೊಂಡು ಜಯಜಯನಾದವಂ ಮಾಡುತ್ತ ಉದಕದಲ್ಲಿ ಪ್ರವೇಶಿಸಲು, ಮೊಳಕಾಲವರೆಗೆ ನೀರು ಬಂದುದು. ಅದಂ ಕಂಡು ಕೆಲವರು—ನಾವು ಸುಮ್ಮನೆ ವಿಲಂಬಮಾಡಿ ನಿಂತೆವು. ಆಗಲೆ ಹೊರಡಬಹುದಾಗಿದ್ದಿತು—ಎಂದೂ, ಕೆಲವರು ಸಂತೋಷದಿಂದ ಕರಾಸ್ಫಾಲನವಂ ಮಾಡುತ್ತ ಸಂತರ ಸಂಗವು ಸರ್ವೋತ್ತಮವಾದುದು—ಎಂದೂ ನುಡಿಯುತ್ತ ಆಚೆಯ ತೀರವಂ ಸೇರಿದರು. ಸ್ವಾಮಿಯು ಕೂರ್ಮರೂಪವಂ ಧರಿಸಿ ದಾಂಟಿಸಿದುದು ಯಾರಿಗೂ ತಿಳಿಯದು. ಆ ಸ್ವಾಮಿಯು ವಿಚಿತ್ರವಾದ ಮಾಯಾವಿಲಾಸದಿಂದ ಸರ್ವರನ್ನೂ ರಕ್ಷಿಸಿ ನದಿಯ ದೆಸೆಯಿಂದ ದಾಂಟಿಸಿದನು.

ಬಳಿಕ ಯಾತ್ರೆಯವರೆಲ್ಲರೂ ಪಂಡರಪುರವಂ ಸೇರಿ ಚಂದ್ರಭಾಗೆಯಲ್ಲಿ ಸ್ನಾನವಂ ಮಾಡಿ ಪ್ರೇಮಯುಕ್ತರಾಗಿ ಕೀರ್ತನವಂ ಮಾಡುತ್ತ ದೇವಾಲಯವಂ ಪೊಕ್ಕು ಸಾಷ್ಟಾಂಗಪ್ರಣಾಮವಂಮಾಡಿ ಸ್ವಾಮಿಯನ್ನು ಆಲಿಂಗಿಸಿಕೊಂಡು ಸದ್ಭಾವದಿಂದ ಸ್ತುತಿಯಿಸಿದರು.

ಸಂತೋಬನು—ಶ್ರೀಹರಿಯಂ ಕುರಿತು—ಶ್ರೀಪತಿಯೇ! ನೀನು ಭಕ್ತರನ್ನು ನಾನೋಪಾಯಗಳಿಂದ ರಕ್ಷಿಸುತಿರುವೆ. ನಿನ್ನ ಸತ್ಕೀರ್ತಿಯಂ ವರ್ಣಿಸಲು ಆದಿಶೇಷನ ವಾಕ್ಕು ಕುಂಠಿತವಾಯಿತು. ಕೂರ್ಮರೂಪವಂ ಧರಿಸಿ ಬೆನ್ನ ಮೇಲೆ ತಾಳಿ ಜಡಜೀವರೆಲ್ಲರನ್ನೂ ದಾಂಟಿಸಿದೆ. ಈಗ ನಿನ್ನ ಚರಣಾರವಿಂದದಲ್ಲಿ ನನಗೆ ಸ್ಥಳವಂ ಕುಡಬೇಕು-ಎಂದು ಪ್ರಾರ್ಥಿಸಲು, ದೀನದಯಾಳು ಆ ಮಾತಂ ಕೇಳಿ-ನೀನು ನನ್ನ ಪ್ರೇಮಳಭಕ್ತನು. ಸರ್ವಕಾಲದಲ್ಲಿಯೂ ನನ್ನ ಸಮೀಪದಲ್ಲಿಯೇ ಇರು--ಎಂದು ಅಪ್ಪಣೆಯಂ ಕೊಟ್ಟನು.

ಮತ್ತೊಂದು ಕಥೆಯು ರಸಾಲವಾಗಿರುವುದು. ಶ್ರೋತೃಗಳು ಆದರದಿಂದ ಆಲಿಸತಕ್ಕುದು. ತುಕ್ಕಾರಾಮನು ಯಾವನ ಸ್ವಪ್ನದಲ್ಲಿ ಬಂದು ಕೃಪೆಯಿಂದ ಉಪದೇಶವಂ ಮಾಡಿದನೋ ಆ ನೀಳೋಬನ ಭಕ್ತಿಯಂ ನೋಡಿ ಶ್ರೀಹರಿಯು ಪ್ರಸನ್ನನಾದನು. ಆತನ ಚರಿತ್ರೆಯು ಬಹುರಸಭರಿತವಾದುದು.

ಆ ನೀಳೋಬನು ಪ್ರತಿಷ್ಠೆಯನ್ನೂ ದಂಭವನ್ನೂ ಅರಿಯನು. ಸರ್ವಕಾಲ ದಲ್ಲಿಯೂ ಸದ್ಭಾವದಿಂದ ಹರಿಕೀರ್ತನವಂ ಮಾಡುತ್ತ ಪುರಾತನವಾದ ಸಂತರ ಸೂಕ್ತಿಗಳಂ ಹೇಳುತ್ತ ಸಂತರ ಚರಿತ್ರೆಯಂ ಪಾಡುತಿದ್ದನು. ಮಕ್ಕಳು ಮರಿಗಳು ಆತನಿಗೆ ಇದ್ದರು. ಆದರೂ ಆತನಿಗೆ ತನ್ನವರೆಂಬ ಅಭಿಮಾನವಿರಲಿಲ್ಲ. ಅಯಾ ಚಿನವೃತ್ತಿಯಿಂದ ದೊರೆತಷ್ಟರಲ್ಲಿ ಅತಿಥಿಪೂಜೆಯಂ ಮಾಡುತಿದ್ದನು. ಒಂದು ಸಮಯದಲ್ಲಿ ಮಗಳ ಮದುವೆಯ ಪ್ರಯತ್ನವಂ ಮಾಡಿದನು. ನಂಟರೂ ಅಭಕ್ತರೂ ದಾಂಭಿಕರೂ ಅನೇಕರು ಸೇರಿದರು. ಮನೆಯಲ್ಲಿ ಸಂಭಾರವು ಸ್ವಲ್ಪವಾಗಿಯೇ ಇದ್ದಿತು. ಆದುದರಿಂದ ಆತನ ಮಡದಿಯು ಆತನಂ ಕುರಿತು-ನಿಮ್ಮದು ಯಾವಾಗಲೂ ಉದಾ ಸೀನವೃತ್ತಿಯು. ಬೀಗರಲ್ಲಿ ಕಡೆಗೆ ಅವಮಾನವು ಆದೀತಲ್ಲಾ-ಎನಲು, ಆ ಮಾತಿಗೆ ಆತನು-ಕಡಿಮೆಯಾದುದೆಲ್ಲವನ್ನೂ ಪೂರೈಸುವುದಕ್ಕೆ ಭಗವಂತನು ಇರುವನು. ನೀನು ವ್ಯಸನಪಡುವುದಕ್ಕೆ ನಿಮಿತ್ತವಿಲ್ಲ. ಆತನೇ ಮಾನವನ್ನು ರಕ್ಷಿಸುವನು- ಎಂದು ನುಡಿದನು.

ಜಗಜ್ಜೀವನನು ಅದಂ ತಿಳಿದು ವೃದ್ಧಬ್ರಾಹ್ಮಣನಾಗಿ ಜೀರ್ಣವಸ್ತ್ರವನ್ನು ಉಟ್ಟುಕೊಂಡು ಉತ್ತರೀಯದಲ್ಲಿ ಸ್ವಲ್ಪಸಾಮಗ್ರಿಯನ್ನು ಕಟ್ಟಿಕೊಂಡು ಹೆಗಲ ಮೇಲೆ ಇಟ್ಟುಕೊಂಡು ಅಲ್ಲಿಗೆ ಬಂದು ನೀಳೋಬನಂ ಕುರಿತು-ನಾನು ಬಡಬ್ರಾಹ್ಮಣ ನು. ಸ್ವಲ್ಪಸಾಮಗ್ರಿಯಂ ತಂದಿರುವೆನು. ಅಡಿಗೆಯಂ ಮಾಡಿ ನನಗೆ ಬಡಿಸಬೇಕು- ಎನಲು, ಆ ಮಾತಂ ಕೇಳಿ ನೀಳೋಬನು ಆ ಬ್ರಾಹ್ಮಣನಿಗೆ ನಮಸ್ಕಾರವಂ ಮಾಡಿ ನಿಮ್ಮ ಸಾಮಗ್ರಿಯನ್ನು ಏಕೆ ತೆಗೆದುಕೊಳ್ಳಬೇಕು? ಈಗ ದೇವರಿಗೆ ನಿವೇದನವಾಗು ವುದು. ಇಲ್ಲಿಯೇ ಪ್ರಸಾದವನ್ನು ತೆಗೆದುಕೊಳ್ಳಿ-ಎಂದನು.

ಸ್ವಾಮಿಯು-ನನಗೆ ಮೃಷ್ಟಾನ್ನದ ಅಪೇಕ್ಷೆಯಿರುವುದು. ಆದುದರಿಂದ ಭಕ್ಷ್ಯಭೋಜ್ಯವಂ ಮಾಡಿ ಹೊಟ್ಟೆ ತುಂಬುವಂತೆ ಭೋಜನವನ್ನು ಮಾಡಿಸಬೇಕು- ಎನಲು, ನೀಳೋಬನು ಮಡದಿಯಂ ಕರೆದು ಭೋಜನಕ್ಕೆ ಬಂದಿರುವ ಈ ಬ್ರಾಹ್ಮಣನ ಸಾಮಗ್ರಿಯನ್ನು ಹಾಗೆಯೇ ಇರಿಸಿ, ಅಡಿಗೆಯಂ ಮಾಡಿ ಭೋಜನವನ್ನು ಮಾಡಿಸ ಬೇಕು-ಎಂದು ಹೇಳಿದನು. ಆಕೆ ಅವಶ್ಯವಾಗಲಿ-ಎಂದು ಸಾಮಗ್ರಿಯನ್ನು ಉಡಿಯಲ್ಲಿ ತೆಗೆದುಕೊಂಡು-ಈಸಾಮಗ್ರಿಯು ಸ್ವಲ್ಪವಾಗಿರುವುದು. ಇದರಿಂದ ನೀವು ಹೊಟ್ಟೆ ತುಂಬುವಂತೆ ಭೋಜನವಂ ಮಾಡುವುದೆಂತು ?-ಎನಲು, ರುಕ್ಮಿಣೀಕಾಂತನು ಇದನ್ನು ನಿಮ್ಮ ಮದುವೆಯ ಸಂಭಾರದಲ್ಲಿ ಬೆರಸಿ. ನನ್ನ ಈ ಸಾಮಗ್ರಿಯನ್ನು ನೀವು ತೆಗೆದುಕೊಳ್ಳುವುದಿಲ್ಲವೆಂದರೆ ನಾನು ಎಂತೂ ಇಲ್ಲಿ ಇರುವುದಿಲ್ಲ-ಎಂದನು.

ನೀಳೋಬನು ಮಡದಿಯಂ ಕುರಿತು-ಬಬ್ಬ ಬ್ರಾಹ್ಮಣನಿಗೆ ಭೋಜನವಂ ಮಾಡಿಸುವುದಕ್ಕೆ ಏನು ಪ್ರಯಾಸವು? ಬೇಗ ಅಡಿಗೆಯಂ ಮಾಡಿ ಬ್ರಾಹ್ಮಣನಿಗೆ ಬಡಿಸು-ಎಂದನು. ರುಕ್ಮಿಣೀಕಾಂತನು ಅದಂ ಕೇಳಿ-ಅಡಿಗೆಯಂ ಮಾಡುವುದಕ್ಕೆ

ವಿಳಂಬವಾಗುವುದಾಗಿದ್ದರೆ ಈಗ ಸಿದ್ಧವಾಗಿರುವ ಅನ್ನವನ್ನೇ ಭೋಜನಮಾಡುವೆನು-ಎಂದು ನುಡಿದು ನೀಳೋಬನ ಪಙ್ಕ್ತಿಯಲ್ಲಿ ಭೋಜನವಂ ಮಾಡಿ ರಾತ್ರಿ ಸ್ವಸ್ಥವಾದ ಮನವುಳ್ಳವನಾಗಿ ಕುಳಿತು_ನೀಳೋಬನಂ ಕುರಿತು_ನಾಳೆದಿನ ನಿಮ್ಮ ಮನೆಯಲ್ಲಿ ಮದುವೆ; ನೀರನ್ನು ತರುವುದಕ್ಕೆ ಬ್ರಾಹ್ಮಣನು ಇಲ್ಲವೆಂದು ತೋರುವುದು. ನನ್ನನ್ನೇ ಇಟ್ಟುಕೊಂಡರೆ ನಿಮ್ಮ ಮನೆಯಲ್ಲಿ ಮೃಷ್ಟಾನ್ನವಂ ಭುಂಜಿಸಿ ಈಶ್ವರಪ್ರೀತ್ಯರ್ಥವಾಗಿ ನಾಲ್ಕು ಕೊಡಗಳ ನೀರನ್ನು ತಂದು ಹಾಕುವೆನು-ಎನಲು, ನೀಳೋಬನು ಅವಶ್ಯವಾಗಲಿ-ಎಂದು ಆತನ ಪಾದಗಳಿಗೆ ಎರಗಿದನು.

ಮರುದಿವಸ ಪ್ರಾತಃಕಾಲದಲ್ಲಿ ವನಮಾಲಿಯು ಬೇಗನೆ ಎದ್ದು ಯಾರಿಗೂ ತಿಳಿಯದಂತೆ ಸಂಮಾರ್ಜನಾದಿಗಳನ್ನು ಮಾಡಿದನು. ಆಸಮಯಕ್ಕೆ ವರನ ತಂದೆಯು ತನ್ನೊಡನೆ ಐನೂರುಮಂದಿಗಳನ್ನು ಕರೆದುಕೊಂಡು ಮದುವೆಗೆ ಬಂದನು. ನೀಳೋಬನು ಪೂಜಿಸಿ ಇದಿರುಗೊಂಡನು. ಸಾಹಿತ್ಯವಂ ಪೂರೈಸುವುದಕ್ಕೆ ಅಲ್ಲಿ ಜಗಜ್ಜೀವನನೇ ಇದ್ದಕಾರಣ ಯಾವಸಂದರ್ಭದಲ್ಲಿಯೂ ಏನೂ ಕಡಿಮೆಬೀಳಲಿಲ್ಲ. ಕಲ್ಪವೃಕ್ಷದ ನೆಳಲ ಆಶ್ರಯವು ಇರಲು, ಉಪವಾಸಕ್ಲೇಶವು ಎಂತು ಉಂಟಾಗುವುದು ? ಸೂರ್ಯನು ನಂಟನಾಗಿ ಮನೆಗೆ ಬರಲು, ಅಲ್ಲಿ ಕತ್ತಲೆಯ ಬಾಧೆ ಎಲ್ಲಿಂದ ಬಂದೀತು ? ಸಮುದ್ರರಾಜನೇ ಗುಡಾಣದಲ್ಲಿ ಬಂದು ಕುಳಿತುಕೊಳ್ಳಲು ಅಲ್ಲಿ ಉದಕವು ಕಡಿಮೆಬೀಳುವುದೆ? ಗಣಪತಿಯೇ ಪಾಠವನ್ನು ಹೇಳಲು, ವಿದ್ಯಾರ್ಥಿಯು ಮೂಢನೆನಿಸುವನೇ ? ಬ್ರಹ್ಮದೇವನೇ ಒಲಿದು ಸೌಂದರ್ಯವಂ ನೀಡಲು ಸಾಮುದ್ರಿಕಲಕ್ಷಣವು ನ್ಯೂನವಾಗುವುದೆ? ಸರಸ್ವತಿಯೇ ಕವಿತ್ವವಂ ಬರೆಯಲು, ಅದರಲ್ಲಿ ತಪ್ಪು ಬೀಳುವುದೇ? ಅಂತು ಹೃಷೀಕೇಶನು ಪ್ರಸನ್ನನಾಗಿ ಮದುವೆಗೆ ಬಂದಿರಲು, ಯಾವ ವಿಷಯದಲ್ಲಿಯೂ ಏನೂ ಕಡಿಮೆಯಾಗಲಿಲ್ಲ.

ವೈಕುಂಠನಾಥನು ತ್ವರೆಯಿಂದ ಕಾವಡಿಯಂ ಹೊತ್ತುಕೊಂಡು ನೀರನ್ನು ತಂದು ಹಾಕುತಿದ್ದನು. ಆತನ ಸಾಮಗ್ರಿಯನ್ನು ಉಗ್ರಾಣದಲ್ಲಿ ತೆಗೆದುಕೊಂಡುಹೋಗಿ ಸಂಭಾರಗಳಲ್ಲಿ ಬೆರಸಿದುದರಿಂದ ಸ್ವಲ್ಪವಾದರೂ ಎಲ್ಲವೂ ಅಪಾರವಾಯಿತು. ನಿತ್ಯವೂ ಐನೂರು ಮಂದಿಗಳು ಭೋಜನಮಾಡುತಿದ್ದರೂ ಸಂಭಾರಗಳು ಮುಗಿಯಲಿಲ್ಲ. ತ್ವರೆಯ ಕಾರ್ಯವು ಬಿದ್ದರೆ ಸಾಮಗ್ರಿಯನ್ನು ತಾನೇ ತೆಗೆದುಕೊಂಡುಹೋಗಿ ಕುಡುತಿದ್ದನು. ಎಂಜಲೆಲೆಗಳನ್ನು ತಾನೇ ಬಳಿಯುತಿದ್ದನು. ತ್ವರೆಯಿಂದ ಅಂಗಳವಂ ಪರಿಶುದ್ಧಿಗೊಳಿಸುತಿದ್ದನು. ಭೋಜನವೇಳೆಯಲ್ಲಿ ಎಲೆಗಳಲ್ಲಿ ಸಾಮಗ್ರಿಗಳು ಕಡಿಮೆಬೀಳಲು, ತಾನೇ ಥಟ್ಟನೆ ತಂದು ಬಡಿಸುತಿದ್ದನು. ಸಾವಕಾಶತೆಯಿಂದ ಭೋಜನಮಾಡಬೇಕೆಂದು ನಂಟರಿಗೆ ಉಪಚಾರೋಕ್ತಿಗಳನ್ನು ಹೇಳುತಿದ್ದನು. ನೀಳೋಬನು ಅದನೆಲ್ಲವನ್ನೂ ನೋಡಿ ಆಶ್ಚರ್ಯಗೊಂಡು-ಈಬ್ರಾಹ್ಮಣನು ಬಹು ಸಜ್ಜನನು. ಈ ಮದುವೆಯ ಕೆಲಸವೆಲ್ಲವನ್ನೂ ತಾನೊಬ್ಬನೇ ನಿರ್ವಹಿಸುವನು.

ಸ್ವಲ್ಪವಾದರೂ ಕೊರತೆಯುಂಟಾಗಲು ಅವಕಾಶವನ್ನು ಕೊಡನು-ಎಂದು ಮನದಲ್ಲಿ ಎಣಿಸಿ ಆತನನ್ನು ಕುರಿತು—ನೀವು ನಮ್ಮ ಕಾರ್ಯಗಳ ನಿರ್ವಾಹದ ವಿಷಯದಲ್ಲಿ ಬಹುಸಾಹಾಯ್ಯವನ್ನು ಮಾಡಿದಿರಿ. ನಿಮ್ಮ ನಾಮಧೇಯವೇನು? ನನಗೆ ಹೇಳಬೇಕು-ಎನಲು, ಜಗಜ್ಜೀವನನು-ನನ್ನ ಹೆಸರು ವಿಠೋಬನೆಂದು. ನಿಮ್ಮ ಮನೆಯಲ್ಲಿ ಯಥೇಷ್ಟವಾಗಿ ಮೃಷ್ಟಾನ್ನಭೋಜನವಂ ಮಾಡಿದೆನು-ಎಂದನು. ಆಗ ನೀಳೋಬನು-ನನ್ನ ಮೇಲೆ ಈತನ ಉಪಕಾರವು ಬಹುವಾಯಿತು. ಈತನು ಹೊರಟುಹೋಗುವಾಗ ಉಡುಗೊರೆಯಂ ಕೊಟ್ಟು ಕಳುಹಬೇಕು. ಇಲ್ಲದಿದ್ದರೆ ಈವುಪಕಾರವು ತೀರುವ ಮಾರ್ಗವಿಲ್ಲ—ಎಂದು ಮನದಲ್ಲಿ ಆಲೋಚನೆಯಂ ಮಾಡಿದನು.

ಶ್ರೀಹರಿಯು ಐದುದಿನವೂ ಆತನ ಮನೆಯಲ್ಲಿ ಇದ್ದುಕೊಂಡು ನಾನಾವಿಧವಾದ ಕಷ್ಟವಂ ವಹಿಸಿದನು. ಆರನೆಯದಿನ ನೀಳೋಬನು ನಂಟರೆಲ್ಲರನ್ನೂ ಸಾಗಕಳುಹಿ ತನ್ನ ಮನೆಗೆ ಬರಲು, ಹೃಷೀಕೇಶನು ಆತನ ಸಂಗಡವೇ ಮನೆಗೆ ಬಂದು ಎಲ್ಲರೂ ಕಾಣುವಂತೆ ದೇವರ ಮನೆಯಂ ಹೊಕ್ಕು ಬಂದು ನಿಮಿಷದೊಳಗಾಗಿ ಅಲ್ಲಿಯೇ ಅದೃಶ್ಯನಾದನು.

ಆಗ ನೀಳೋಬನು ಹೊಸಶಲ್ಯವನ್ನು ತೆಗೆದುಕೊಂಡು ಬಂದು ಆತನಿಗೆ ಹೊದೆಯಿಸಬೇಕೆಂದು, "ವಿಠೋಬನೆಲ್ಲಿ? ಕರೆಯಿರಿ"-ಎಂದು, ಬಳಿಕ ತಾನೇ-ವಿಠೋಬನೇ !—ಎಂದು ಕೂಗಿ ಕರೆದನು. ಆರಾಜೀವನೇತ್ರನು ಎಲ್ಲಿಯೂ ಕಾಣಲಿಲ್ಲ. ಬಳಿಕ ಸ್ವಾಮಿಯೇ ಬಂದಿದ್ದನೆಂಬುದು ಮನಸ್ಸಿಗೆ ತೋರಲು, ಪಂಡರೀನಾಥನೇ ! ನಿನ್ನನ್ನು ನಾನು ಬಹುವಾಗಿ ಕಷ್ಟಪಡಿಸಿದೆನು. ಈ ಪ್ರಪಂಚವಿಷಯವನ್ನು ಸುಡಬೇಕು. ನಾನು ಬಹುವಿಪರೀತವನ್ನು ಮಾಡಿದೆನಲ್ಲಾ—ಎಂದು ನುಡಿದು ಮನದಲ್ಲಿ ಪಶ್ಚಾತ್ತಾಪವಂ ತಾಳಿದನು.

ಶ್ರೀಹರಿಯು ಆತನ ಭಕ್ತಿಗೋಸ್ಕರ ಪಿಂಗಳನೇರಿಯಲ್ಲಿ ಈಗಲೂ ಇರುವನು. ಫಾಲ್ಗುನಕೃಷ್ಣದ್ವಿತೀಯಾದಿವಸ ಅಲ್ಲಿ ಮಹೋತ್ಸವವು ಆಗುತಿರುವುದು.

ಎಲೈ ಶ್ರೋತೃಗಳಿರಾ ! ಮತ್ತೊಂದು ರಸವತ್ತರವಾದ ಕಥೆಯನ್ನು ಆಲಿಸಿ. "ಧಾರೂರು" ಎಂಬ ಗ್ರಾಮದಲ್ಲಿ ಉದ್ಧವಚಿದ್ಘನನೆಂಬ ಭಕ್ತಶಿರೋಮಣಿಯಿದ್ದನು. ಯಾವನು ರಚಿಸಿರುವ ಅಭಂಗಗಳು ಅತ್ಯದ್ಭುತಗಳಾಗಿರುವುವೋ ಆವುದ್ಧವಚಿದ್ಘನನು ಹರಿಕೀರ್ತನವಂ ಮಾಡುತ್ತ ದೇಶಸಂಚಾರಕ್ಕೆ ಹೊರಟನು. ಆತನು ಚೈತ್ರಶುಕ್ಲದ ಪಾಡ್ಯಮಿಗೆ ಬೆವರಕ್ಕೆ ಬಂದು ಅಲ್ಲಿ ಆನಂದದಿಂದ ಕೀರ್ತನವನಾರಂಭಿಸಿದನು. ಶ್ರವಣಕ್ಕೆ ಅನೇಕರು ಬಂದು ನೆರೆದರು. ಕೀರ್ತನಶ್ರವಣದಿಂದ ಅವರ ಚಿತ್ತವು ಅದರಲ್ಲಿಯೇ ಹತ್ತಿತು. ಆಗ ಆವೂರಲ್ಲಿ ಬಬ್ಬೊಬ್ಬರಲ್ಲಿ ಒಂದೊಂದುದಿನ ಕೀರ್ತನವಾಗಬೇಕೆಂದು ಎಲ್ಲರೂ ಹೇಳಲು, ಉದ್ಧವನು—ಶ್ರೀರಾಮಜಯಂತ್ಯುತ್ಸವಕ್ಕೆ ತ್ವರೆಯಿಂದ ಧಾರೂರಿಗೆ ಹೋಗಬೇಕಾಗಿದೆ-ಎಂದನು. ಆಗ್ರಾಮವಾಸಿಗಳೆಲ್ಲರೂ ರಾಮ

ಜಯಂತ್ಯುತ್ಸವವನ್ನೂ ಇಲ್ಲಿಯೇ ಮಾಡಬೇಕು—ಎನಲು, ಅವರ ಶುದ್ಧಭಾವವನ್ನು ನೋಡಿ ಉದ್ಧವನು ಅಂಗೀಕರಿಸಿದನು. ಆಗ ಒಂದು ದೊಡ್ಡಮನೆಯನ್ನು ಸಿದ್ಧಗೊಳಿಸಿ ಅಲ್ಲಿ ಚಪ್ಪರವನ್ನು ಹಾಕಿ ಮಂಟಪವನ್ನು ಕಟ್ಟಿ ಅದರಲ್ಲಿ ಶ್ರೀರಾಮಮೂರ್ತಿಯನ್ನು ಇರಿಸಿದರು. ನಿತ್ಯವೂ ಆಸ್ತಿಕರನೇಕರು ನೆರೆಯುತ್ತಿದ್ದರು. ಪ್ರತಿದಿವಸವೂ ಭಕ್ಷ್ಯಭೋಜ್ಯಾದಿಗಳಿಂದ ಬ್ರಾಹ್ಮಣಸಂತರ್ಪಣೆಯಾಗುತಿದ್ದಿತು. ಒಂದುದಿನ ಉದ್ಧವನು ಎಲ್ಲರೊಡನೆ ಧ್ವಜಪತಾಕಾದಿಗಳನ್ನು ತೆಗೆದುಕೊಂಡು ಮಂಗಳವಾದ್ಯಪುರಸ್ಸರವಾಗಿ ಭಜನೆಯನ್ನು ಮಾಡುತ್ತ ಉತ್ಸವವನ್ನು ಬೆಳೆಯಿಸಿಕೊಂಡು ಬರುತಿದ್ದನು. ಅಲ್ಲಿ ಒಂದುಕಡೆ ತುರುಷ್ಕರ ಸಮಾಧಿನಿಲಯವೊಂದು ಇದ್ದಿತು. ಅಲ್ಲಿ ಕೆಲವರು ದುಷ್ಟರು ಸೇರಿದ್ದರು. ಅವರು—ಉದ್ಧವನೆಂಬವನು ಅನೇಕರೊಡನೆ ಮನಸ್ಸಿಗೆ ಬಂದಂತೆ ಮಾಡುತ್ತ ಬರುತಿರುವನು. ಇವನನ್ನು ಸಗಣಿಯಿಂದ ಹೊಡೆದು ಎಲ್ಲರನ್ನೂ ಅವಮಾನಗೊಳಿಸಬೇಕು—ಎಂದು ಮಾತನಾಡಿಕೊಂಡು ಗುಂಪುಕೂಡಿ ಬಂದರು. ಆಗ ತುರುಷ್ಕರ ಪ್ರಾಬಲ್ಯವು ಬಹುವಾಗಿ ಇದ್ದುದರಿಂದ ಯಾರೂ ಅವರಿಗೆ ನ್ಯಾಯವನ್ನು ಹೇಳಲಾರದೆ ಇದ್ದರು. ಅಷ್ಟರಲ್ಲಿ ಉದ್ಧವನು ಅಟ್ಟಹಾಸದಿಂದ ಸಮೀಪಕ್ಕೆ ಬಂದನು. ಆ ಕುಟಿಲರು ಮೇಲೆ ಬಿದ್ದು ಧ್ವಜಪತಾಕಾದಿಗಳನ್ನು ಕಿತ್ತುಕೊಂಡು ತಂಬೂರಿಯ ತಂತಿಗಳನ್ನು ಕಡಿದು ಮದ್ದಲೆಗಳನ್ನು ಒಡೆದುಬಿಸುಟು ಎಲ್ಲರನ್ನೂ ಹೊಡೆದು ಉಪದ್ರವಗೊಳಿಸಿದರು. ಆದರಿಂದ ಸಜ್ಜನರಿಗೆಲ್ಲರಿಗೂ ವ್ಯಸನವಾಯಿತು. ಉತ್ಸವದೊಡನೆ ಬಂದಿದ್ದವರೆಲ್ಲರೂ ಸಂಕಟಗೊಂಡು ತಂತಮ್ಮ ಠಾಣಗಳಿಗೆ ಹೊರಟುಹೋದರು. ಕಷ್ಟಪಟ್ಟು ಮಾಡಿದ ಷಡ್ರಸೋಪೇತವಾದ, ದೇವರ ನಿವೇದನಕ್ಕೆ ಯೋಗ್ಯವೆನಿಸಿದ ಅಡಿಗೆಯನ್ನು ಶ್ವಾನವು ಮುಟ್ಟಲು, ಮಾಡಿದವಳು ಎಂತು ತಲ್ಲಣಗೊಳ್ಳುವಳೋ, ವಧೂವರರು ಕಲ್ಯಾಣಮಂಟಪದಲ್ಲಿ ಭೋಜನಕ್ಕೆ ಕುಳಿತಿರುವಾಗ ದೀಪವು ಆರಿಹೋಗಲು, ವರನ ತಾಯಿಯು ಎಂತು ವ್ಯಸನಪಡುವಳೋ ಅಂತು ತುರುಷ್ಕರು ಉಪದ್ರವಗೊಳಿಸಿದುದರಿಂದ ಉದ್ಧವನು ಮಹತ್ತರವಾದ ವ್ಯಸನವಂ ತಾಳಿ ಮಂಟಪದ ಬಳಿಗೆ ಬಂದು ಸ್ವಾಮಿಯನ್ನು ಕುರಿತು-ಇದು ನಿನ್ನ ಚಿತ್ತದಲ್ಲಿ ಇಲ್ಲದಿದ್ದರೆ ಅಟ್ಟಹಾಸವನ್ನು ಏಕೆ ಮಾಡಿಸಿದೆ ? ನೀನು ವಿಶ್ವಾತ್ಮಕನಾಗಿರುವಾಗ ನಾನು ಏಕೆ ವ್ಯಸನಪಡಬೇಕು ? ದುಷ್ಟರ ಕಡೆಯಿಂದ ಅವಮಾನವನ್ನು ಮಾಡಿಸಿದೆ-ಎಂದು ಮಂಟಪದೊಳಗಣಿಂದ ಶ್ರೀರಾಮಮೂರ್ತಿಯನ್ನು ಎತ್ತಿ ದೇವರ ಜಗುಲಿಯ ಮೇಲೆ ಇರಿಸಿ ಮಂಟಪವೆಲ್ಲವನ್ನೂ ಕಿತ್ತು ಚಪ್ಪರವನ್ನು ಬಿಚ್ಚಿ ಹರಿದಾಸರಿಗೆ ನಮಸ್ಕಾರವನ್ನು ಮಾಡಿ ಸ್ವಸ್ಥಚಿತ್ತನಾಗಿ ಭಜನೆಯಂ ಮಾಡುತ ಕುಳಿತನು.

ಆಗ ಮಾರುತಿಯು-ನನ್ನ ಸ್ವಾಮಿಯಾದ ಶ್ರೀರಘುನಾಥನ ಮಹೋತ್ಸವವನ್ನು ಭಕ್ತರು ಮಾಡುತಿದ್ದರೆ ದುಷ್ಟರು ಉಪದ್ರವಗೊಳಿಸಿದರಲ್ಲಾ ! ನಾನು ಇದನ್ನು ನೋಡಿಕೊಂಡು ಸುಮ್ಮನಿದ್ದರೆ ನನ್ನ ಬಾಳಿಕೆಯೇ ವ್ಯರ್ಥ. ಈಗ ಬೆದರವನ್ನೇ

ತಲೆಕೆಳಗಾಗುವಂತೆ ಮಾಡುವೆನು-ಎಂದು ಕೋಪಗೊಂಡು ಆ ತುರುಷ್ಕರ ಸಮಾಧಿ ನಿಲಯದ ಮೇಲೆ ಹತ್ತಿ ನಿಂತು ಗೋಡೆಯನ್ನು ಅಲ್ಲಾಡಿಸುತಿದ್ದನು. ಅದರ ಸಮೀಪದಲ್ಲಿ ಜ್ಞಾನಿಯೂ ವೃದ್ಧನೂ ಆದ ಒಬ್ಬ ವಿರಕ್ತತುರುಷ್ಕನ ಕುಟೀರವು ಇದ್ದಿತು. ಆತನು ಆಂಜನೇಯನನ್ನು ಕಂಡು, ಶ್ರೀರಾಮಭಕ್ತರನ್ನು ಸಂಕಟಪಡಿಸಿದುದರಿಂದ ಈ ವಿಪತ್ತಿಯುಂಟಾಗಿರುವುದೆಂದು ತಿಳಿದು ಕೈಗಳನ್ನು ಮುಗಿದುಕೊಂಡು ಹನುಮಂತನಂ ಕುರಿತು-ನನ್ನ ಕುಟೀರವು ಸಮೀಪದಲ್ಲಿಯೇ ಇದೆ. ಮಹಾನುಭಾವನೇ! ಇದನ್ನು ರಕ್ಷಿಸಬೇಕು-ಎಂದನು. ಆಮಾತನ್ನು ಕೇಳಿ ಸಮಾಧಿನಿಲಯದ ಒಳಗೆ ಇದ್ದ ತುರುಷ್ಕರೆಲ್ಲರೂ-ಈ ವೃದ್ಧನಿಗೆ ಮರುಳು ಹಿಡಿದುದೋ! ಇದೇನು? ಯಾರೊಡನೆ ಇಂತು ಮಾತನಾಡುವನು?-ಎನಲು, ಆ ವಿರಕ್ತನು-ಒಂದು ಕಪಿಯು ಬಂದು ಸಮಾಧಿಶಾಲೆಯನ್ನು ಕೆಡಿಹುತಿರುವುದು. ನೀವು ಬೇಗನೆ ಹೊರಗೆ ಬನ್ನಿ-ಎಂದನು. ಅವರು ಈ ಮಂದಿರವು ಬಹುದೃಢಬಂಧವಾಗಿರುವುದು. ಕಪಿಯು ಅಪ್ಪನಿಂದಲೂ ಕೆಡಹುವುದಕ್ಕೆ ಆಗದು-ಎಂದರು.

ಆಂಜನೇಯನು ಮತ್ತೆಯೂ ಕೋಪಿತನಾಗಿ ಸಮಾಧಿನಿಲಯವೆಲ್ಲವನ್ನೂ ನಿಮಿಷದಲ್ಲಿ ಕೆಡೆಹಿಬಿಟ್ಟನು. ಆಗ ಏಕವಾದ ಹಾಹಾಕಾರವುಂಟಾಯಿತು. ಅಲ್ಲಿಯ ರಾಜನಿಗೆ ಈ ಸಂಗತಿಯು ತಿಳಿಯಿತು. ಆತನು ಆಕಸ್ಮಿಕವಾಗಿ ಉಂಟಾದ ಹೊಟ್ಟೆಯ ನೋವಿನಿಂದ ಬಹುವಾಗಿ ಸಂಕಟಪಡುತಿದ್ದನು. ಆಂಜನೇಯನನ್ನು ಕಂಡ ವೃದ್ಧನಾದ ತುರುಷ್ಕನು ಬಂದು, ಉದ್ಧವಚಿದ್ಘನನು ಮಹಾಭಾಗವತನು. ದುಷ್ಟರು ಸೇರಿಕೊಂಡು ಸಗಣಿಯಿಂದ ಆತನನ್ನು ಹೊಡೆದು ಅವಮಾನವಂ ಮಾಡಿದರು. ಅದರಿಂದ ಆಂಜನೇಯನು ಕೋಪಿಸಿಕೊಂಡು ಸಮಾಧಿನಿಲಯವನ್ನು ಕೆಡೆಹಿದನು-ಎಂದು ಹೇಳಿದನು. ರಾಜನು ಆ ಮಾತನ್ನು ಕೇಳಿ ಭಯಗೊಂಡು ಉದ್ಧವಚಿದ್ಘನನ ಪಾದಗಳಿಗೆ ಎರಗಿ ಸಾಸಿರವರಹಗಳನ್ನು ಕಾಣಿಕೆಗೊಟ್ಟು-ಇನ್ನು ನಿಶ್ಚಿಂತರಾಗಿ ಸುಖದಿಂದ ನಿಮ್ಮ ಉತ್ಸವವನ್ನು ಬಳೆಯಿಸಿ. ನಿಮ್ಮನ್ನು ಸಂಕಟಪಡಿಸಿದವರು ಕ್ಷಣದಲ್ಲಿ ಧ್ವಂಸವನ್ನೈದಿದರು. ಆಂಜನೇಯನನ್ನು ಪ್ರಾರ್ಥಿಸಿ ನಮ್ಮನ್ನು ಬದುಕಿಸಬೇಕು-ಎಂದು ಬಿನ್ನವಿಸಿಕೊಂಡನು. ಗ್ರಾಮವಾಸಿಗಳು ಮತ್ತೆ ಚಪ್ಪರವನ್ನು ಹಾಕಿ ಮಂಟಪವನ್ನು ಕಟ್ಟಿ ಅಲಂಕಾರಮಾಡಿ ಜಾನಕೀಪತಿಯನ್ನು ಅಲ್ಲಿ ಬಿಜಯಮಾಡಿಸಿದರು. ತಾಳಮೃದಂಗಾದಿಗಳೊಡನೆ ಆನಂದದಿಂದ ಪಾಡುತ ಕುಣಿಯುತ ದಶಮಿಯವರೆಗೂ ಉತ್ಸವವನ್ನು ಬಳೆಯಿಸಿ ತ್ರಯೋದಶೀದಿನ ಲಲಿತವನ್ನು ಮಾಡಿ ಉದ್ಧವಚಿದ್ಘನನಿಗೆ ಸನ್ಮಾನವನ್ನು ಮಾಡಿದರು.

ಇಂತು ಶ್ರೀಭಕ್ತವಿಜಯದಲ್ಲಿ ಐವತ್ತಾರನೆಯ ಅಧ್ಯಾಯಂ ಸಂಪೂರ್ಣಂ.

ಮಂಗಳಮಸ್ತು.

ವಿಸೋಬನ ಚರಿತ್ರೆ.

ಜಯಜಯ ವೈಕುಂಠವಾಸಿಯೇ! ಗುಣಸಮುದ್ರನೇ! ಕರುಣಾನಿಧಿಯೇ! ನಿನ್ನ ಪಾದದ ಮಹಿಮೆಯನ್ನು ವರ್ಣಿಸುವುದಕ್ಕೆ ಲಕ್ಷ್ಮೀದೇವಿಯು ಅಲ್ಲಿಯೇ ನೆಲಸಿ ನಿಂದಿರುವಳು. ಜಯಜಯ ಕ್ಷೀರಾಬ್ಧಿವಾಸಿಯೇ ! ಮೇಘಶ್ಯಾಮನೇ ! ಅನಂತರೂಪನೇ ! ಅನಂತನಾಮನೇ ! ಅನಂತಾವತಾರನೇ ! ಪುರುಷೋತ್ತಮನೇ ! ವೇದಗಳಿಗೂ ನಿನ್ನ ಮಹಿಮೆಯು ತಿಳಿಯದು. ಜಯ ದ್ವಾರಕಾವಾಸಿಯೇ! ನವನೀತಚೋರನೇ! ಗೋಪೀಮನೋಮೋಹನನೇ ! ಮಧುರಾನಾಥನೇ ! ಕಂಸಮರ್ದನನೇ ! ಧರ್ಮಸ್ಥಾಪಕನೇ ! ಶ್ರೀಹರಿಯೇ ! ಗರುಡಧ್ವಜನೇ ! ನಿನ್ನ ಸ್ವರೂಪವೂ ಮಹಿಮೆಯೂ ಅನ್ಯಾದೃಶವಾದುದು. ಜಗನ್ನಾಟಕಸೂತ್ರಧಾರನೇ ! ಅಧೋಕ್ಷಜನೇ ! ರುಕ್ಮಿಣೀದೇವಿಯೇ ನಿನ್ನನ್ನು ಬಲ್ಲಳು. ಜಯ ಭೀಮಾತೀರವಾಸಿಯೇ ! ಪುಂಡರೀಕವರದನೇ ! ಭಕ್ತರಿಗೆ ಅಭಯವನ್ನು ಕೊಟ್ಟು ಕೃಪಾದೃಷ್ಟಿಯಿಂದ ಪೋಷಿಸುವೆ. ನೀನು ಮೂಢನಾದ ನನ್ನಿಂದ ಗ್ರಂಥವಂ ಮಾಡಿಸಿದುದು ಅದ್ಭುತವು. ಮಶಕಕ್ಕೆ ವರವನ್ನು ಕೊಟ್ಟು ಅದರಿಂದ ಮೇರುವನ್ನು ಎತ್ತಿಸಿದಂತಾಯಿತು. ನೀನು ಕಪಿಗಳನ್ನೂ ಕರಡಿಗಳನ್ನೂ ಕೂಡಿಹಾಕಿ ಅವುಗಳಿಂದ ಲಂಕೆಯನ್ನು ಸಾಧಿಸಿದಂತೆ, ಜ್ಞಾನದೇವನು ಕೋಣನಿಗೆ ವರವಂಕೊಟ್ಟು ವೇದವನ್ನು ಹೇಳಿಸಿದಂತೆ, ಪರಿಸವು ಲೋಹಕ್ಕೆ ತನ್ನ ಸುಗುಣವನ್ನು ಕೊಟ್ಟು ಶುದ್ಧವಾದ ಚಿನ್ನವಂ ಮಾಡುವಂತೆ, ಗಂಗೆಯು ಕಾಡುಹಳ್ಳಕ್ಕೆ ಪವಿತ್ರತೆಯನ್ನು ಕುಡುವಂತೆ, ಕಸ್ತೂರಿಯು ತನ್ನ ಜತೆಯಲ್ಲಿ ಮೃತ್ತಿಕೆಯನ್ನೂ ತುಲೆಯಲ್ಲಿ ತೂಗಿಸಿಕೊಳ್ಳುವಂತೆ ನನ್ನ ಮಾತನ್ನು ಗ್ರಂಥವನ್ನಾಗಿ ಮಾಡಿಸಿದೆ. ನೀನು ಸರ್ವೋತ್ತಮನು. ಆದರೂ ಪ್ರೀತಿಯಿಂದ ಭಕ್ತರನ್ನು ಪೂಜಿಸುವೆ. ವಿಶೇಷದಿಂದ ಉಪಚರಿಸುವ ವಿಷಯದಲ್ಲಿ ನಿನಗೆ ಲಜ್ಜೆಯಾಗದು. ಭಕ್ತರು ನಿನ್ನನ್ನು ಅತಿಶಯದಿಂದ ಸ್ತುತಿಯಿಸುವರು. ನಿನಗೆ ಅವರ ಚರಿತ್ರೆಯೇ ಇಷ್ಟವಾಗಿರುವುದು. ನಿಮಿತ್ತಮಾತ್ರಕ್ಕೆ ನನ್ನನ್ನು ಮುಂದುಮಾಡಿರುವೆ. ನೀನೇ ಸ್ವತಂತ್ರನಾದ ವಕ್ತೃವು.

ಶ್ರೋತೃಗಳಿರಾ ! ಅವಹಿತಮನಸ್ಕರಾಗಿ ಆಲಿಸುವುದು. ಇದು ಕಲಶಸ್ಥಾನೀಯವಾದ ಅಧ್ಯಾಯದ ಕಥೆಯು. ಈ ಕಡೆಯ ಅಧ್ಯಾಯವು—ಮೊಸರನ್ನು ಕಡೆಯಲು, ಕೈಗೆ ಬಂದ ಬೆಣ್ಣೆಯಂತೆಯೂ, ಅಡಿಗೆಯನ್ನು ಮಾಡಲು, ಎಡೆಗೆ ಬಂದ ಮೃಷ್ಟಾನ್ನದಂತೆಯೂ, ಮಾವಿನಮರಕ್ಕೆ ನೀರನ್ನು ಹಾಕಲು, ಕೈಸೇರಿದ ಅಮೃತಫಲದಂತೆಯೂ, ಶ್ರಮಪಟ್ಟು ಕೃಷಿಯನ್ನು ಮಾಡಲು, ಪ್ರಾಪ್ತವಾದ ಬೆಳೆಯಂತೆಯೂ ಇರುವುದೆಂದು ನನಗೆ ತೋರುವುದು. ಅನೇಕಭಕ್ತರ ಚರಿತ್ರೆಗಳನ್ನು ಒಳಕೊಂಡಿರುವ ಈ ಭಕ್ತವಿಜಯಗ್ರಂಥದ ಐವತ್ತಾರು ಅಧ್ಯಾಯಗಳು ಪ್ರಸಿದ್ಧವಾದ ಐವತ್ತಾರು ದೇಶಗಳ ರತ್ನಗಳಂತೆ ಕಂಗೊಳಿಸುತಿರುವುವು. ಇದರ ಐವತ್ತಾರು ಅಧ್ಯಾಯಗಳೆಂಬ ನದಿಗಳು ಕಥಾಸಾರವೆಂಬ ನೀರನ್ನು ಪ್ರವಹಿಸುತ ಪಾಂಡುರಂಗಸ್ವಾಮಿಯೆಂಬ ಆನಂದಸಾಗರ

ವನ್ನು ಹೊಂದಿ ವಿಜಯಿಸುತ್ತಿರುವುವು. ಈ ಗ್ರಂಥದ ಶ್ರವಣದಿಂದ ಭಾವುಕರಾದ ಶ್ರೋತೃಗಳು ಜಯವಂ ಪಡೆಯುವರು. ಎಲೈ ಶ್ರೋತೃಗಳಿರಾ ! ಈಯಧ್ಯಾಯದಲ್ಲಿ ಇರುವ ರಸವತ್ತರವಾದ ಕಥೆಯೊಂದನ್ನು ಆಲಿಸಿ.

ಭಕ್ತೋತ್ತಮನಾದ ವಿಸೋಬನೆಂಬ ಒಬ್ಬ ಧನಿಕನಿದ್ದನು. ಆತನು ಪಂಢರೀ ಕ್ಷೇತ್ರದಲ್ಲಿ ಇದ್ದುಕೊಂಡು ದ್ರವ್ಯವನ್ನು ಕೊಡುತ್ತ ತೆಗೆದುಕೊಳ್ಳುತ್ತ ಸಾಧುಕಾರನೆ ನಿಸಿಕೊಂಡಿದ್ದನು. ಸಂಸಾರದಲ್ಲಿದ್ದರೂ ವಿರಕ್ತನಾಗಿದ್ದನು. ಆತನಿಗೆ ನಾಲ್ವರುಮಕ್ಕ ಳಿದ್ದರು. ಮಡದಿಯೂ ಅನುಕೂಲೆಯಾದ ಪತಿವ್ರತೆ. ಕಠಿನಕಾಲದಲ್ಲಿಯೂ ಆತನ ವಚನವನ್ನು ಮೀರದೆ ಇದ್ದಳು. ವಿಸೋಬನು ಪ್ರಾಪಂಚಿಕವ್ಯವಹಾರದಲ್ಲಿಯೂ ಸುಳ್ಳುಮಾತನಾಡದೆ, ಹಸಿವುಗೊಂಡು ಬಂದವರಿಗೆ ಆದರದಿಂದ ಅನ್ನದಾನವನ್ನು ಮಾಡು ತ್ತಿದ್ದನು. ಬರಗಾಲವು ಪ್ರಾಪ್ತವಾಯಿತು. ಎರಡು ಬಳ್ಳದ ಧಾರಣೆಯಾಯಿತು. ಆಗಲೂ ಬಂದವರಿಗೆ ಇಲ್ಲವೆನ್ನದೆ ಸಂತೋಷದಿಂದ ಅನ್ನವಂ ಕೊಡುತಿದ್ದನು. ಮನೆ ಯಲ್ಲಿದ್ದ ಧನಧಾನ್ಯವೆಲ್ಲವೂ ಮುಗಿಯಿತು. ಆದರೂ ಯಾಚಕರು, ತಾಯಿಯ ಎದೆ ಯಲ್ಲಿ ಹಾಲು ಇಲ್ಲದಿದ್ದರೂ ಮಗುವು ಬಂದು ಕಡಿಯುವಂತೆ ಆತನಲ್ಲಿ ಧನಧಾನ್ಯಗಳಿಲ್ಲದಿ ದ್ದರೂ ಬಂದು ಬಾಧಿಸುತಿದ್ದರು. ತಂದೆಯ ಬಡತನವನ್ನು ಪಸುಳೆಗಳು ಎಂತು ಅರಿಯರೋ ಅಂತು ವಿಸೋಬನ ನಿಸ್ಸ್ವತೆಯನ್ನು ಯಾಚಕರು ಅರಿಯದೆ ಇದ್ದರು. ಆದರೂ ಆತನು ಬೇಸರಗೊಳ್ಳದೆ ಶಕ್ತಿಯನ್ನನುಸರಿಸಿ ಭೋಜನಮಾಡಿಸುತಿದ್ದನು. ಆತನ ವ್ಯಾಪಾರವು ನಿಂತು ಹೋದುದರಿಂದ ಮನೆಯಲ್ಲಿದ್ದ ಒಡವೆಗಳನ್ನೂ ವಸ್ತುಗಳ ನ್ನೂ ದೊಡ್ಡದೊಡ್ಡ ಪಾತ್ರೆಗಳನ್ನೂ ಮಾರಿ ಅನ್ನದಾನವನ್ನು ಮಾಡುತ್ತ ಲೌಕಿಕ ಮಮತೆಯನ್ನೂ ಸಾಂಸಾರಿಕಚಿಂತೆಯನ್ನೂ ದೇಹಾಭಿಮಾನವನ್ನೂ ಬಿಟ್ಟು ಸರ್ವ ಕಾಲದಲ್ಲಿಯೂ ಪಾಂಡುರಂಗನನ್ನು ಧ್ಯಾನಿಸುತಿದ್ದನು.

ಬಳಿಕ ಯಾಚಕರಿಗೆ ಅನ್ನದಾನಮಾಡಲು ಏನೂ ಸತ್ತ್ವವಿರಲಿಲ್ಲ, ಊರಲ್ಲಿ ಎಲ್ಲಿ ಹೋದರೂ ಏನೂ ದೊರೆಯದು. “ ವಿಸೋಬನ ಶ್ರೀಮತ್ತ್ವವು ಮುಳುಗಿತು ; ನಿಸ್ಸ್ವನಾದನು ” ಎಂದು ಜನಗಳು ನುಡಿಯುತಬಂದರು. ಕೆಲವರು-ಬುದ್ಧಿವಂತ ನಲ್ಲ. ಆತನಿಗೆ ತನ್ನ ಹಿತವೂ ತಿಳಿಯದು. ವಿವೇಕಿಗಳು ಪ್ರಪಂಚವ್ಯವಹಾರದಲ್ಲಿ ಇದ್ದುಕೊಂಡು ಪರಮಾರ್ಥವನ್ನು ಸಾಧಿಸುವರು-ಎಂದೂ, ಕೆಲವರು-ದುಷ್ಕರ್ಮದ ದೆಸೆಯಿಂದ ಧನಧಾನ್ಯವೆಲ್ಲವೂ ಇದ್ದೆಡೆಯಲ್ಲಿಯೇ ಹೋಯಿತು. ಆದರೂ ಅತಿಥಿಗ ಳಿಗೂ ಅಭ್ಯಾಗತರಿಗೂ ಅನ್ನದಾನಮಾಡುವುದರಲ್ಲಿ ಬೇಸರಗೊಳ್ಳನು_ಎಂದೂ, ಕೆಲ ವರು_ಇನ್ನು ಮೇಲೆ ವಿಸೋಬನನ್ನು ನಂಬಿದವರ ಗತಿಯು ಅವನಂತೆಯೇ ಆಗು ವುದು_ಎಂದೂ ತೋರಿದಂತೆ ನುಡಿಯುತಿದ್ದರು.

“ ಕಾಸಗಾವ ” ಎಂಬ ಊರಲ್ಲಿ ಒಬ್ಬ ಪಠಾಣನಿದ್ದನು. ಅವನಿಗೆ ಈತನ ಸ್ಥಿತಿಯು ತಿಳಿಯದು. ಆದುದರಿಂದ ಅವನಲ್ಲಿ ಸಾಲವನ್ನು ತಂದು ಅನ್ನದಾನವನ್ನು

ಮಾಡುತಿದ್ದನು. ಆಗಾಗ ತಂದುದೆಲ್ಲವನ್ನೂ ಒಟ್ಟಿಗೆ ಲೆಕ್ಕಮಾಡಲು, ಏಳುನೂರಾಯಿತು. ಅದಕ್ಕೆ ನೂರಕ್ಕೆ ಎರಡರಂತೆ ಬಡ್ಡಿಯನ್ನು ಕೊಡುವುದಾಗಿ ಪತ್ರವನ್ನು ಬರೆದುಕೊಟ್ಟನು.

ಬಳಿಕ ಒಂದುದಿನ "ರಾಮಪುರೀಭಾವ" ಎಂಬ ಪ್ರಸಿದ್ಧಪುರುಷನು ಪಂಡರೀಯಾತ್ರೆಗೆ ಬಂದನು. ವಿಸೋಬನ ಸ್ಥಿತಿಯು ಸರ್ವಭೂತಗಳಲ್ಲಿಯೂ ಸಮವಾಗಿದೆಯೋ ವಿಷಮವಾಗಿದೆಯೋ ಪರೀಕ್ಷಿಸಿ ನೋಡಬೇಕೆಂದು ಆಲೋಚಿಸಿ ಕುತ್ಸಿತವೇಷವಂ ಕೈಕೊಂಡು ಬಚ್ಚಲೊಳಗಣ ಕೆಸರನ್ನು ಬಳಿದುಕೊಂಡು ಹರಿಕುಬಟ್ಟೆಯನ್ನು ಉಟ್ಟುಕೊಂಡು ಅಮಂಗಳವಾದ ಕೌಪೀನವನ್ನು ಹಾಕಿಕೊಂಡು ಕೈಯಲ್ಲಿ ಜೋಕಿಯನ್ನು ತೆಗೆದುಕೊಂಡು ಮರುಳನಂತೆ ರಾತ್ರಿವೇಳೆಯಲ್ಲಿ ವಿಸೋಬನ ಮನೆಗೆ ಬಂದು-ನನಗೆ ಹಸಿವು ಆಗುವುದು-ಎಂದನು. ವಿಸೋಬನು ಆಶಬ್ದವನ್ನು ಕಿವಿಯಲ್ಲಿ ಕೇಳಿದ ಮಾತ್ರಕ್ಕೆ ಹೊರಗೆ ಬಂದು ಮಹಾಪುರುಷನೆಂಬುದನ್ನು ಅರಿಯದೆ ಇದ್ದರೂ-ಸ್ವಾಮಿ ! ಎಲ್ಲಿಂದ ಬಂದಿರಿ ! ಭೋಜನವನ್ನು ಮಾಡಿಕೊಂಡು ಹೋಗಿ-ಎಂದು ನುಡಿದು, ಮೈಗೆ ಬಳಿದುಕೊಂಡಿದ್ದ ದುರ್ಗಂಧದ ಕೆಸರನ್ನು ಕಂಡು ಬಿಸಿನೀರಲ್ಲಿ ತನ್ನ ಕೈಯಿಂದಲೇ ತೊಳೆದು ಒರಸಿ ಮತ್ತೊಂದು ಕೌಪೀನವನ್ನು ಕೊಟ್ಟು ಗಂಧಾಕ್ಷತಂಗಳಂ ಸಮರ್ಪಿಸಿ ಕೊರಲಲ್ಲಿ ತುಳಸೀಮಾಲೆಯನ್ನು ಹಾಕಿ ಭೋಜನವನ್ನು ಮಾಡಿಸಿ ಸಾಷ್ಟಾಂಗನಮಸ್ಕಾರವನ್ನು ಮಾಡಿ ಮುಖಶುದ್ಧಿಗೋಸ್ಕರ ತುಳಸೀದಳವನ್ನು ಕೊಟ್ಟು ಕಳುಹಿಸಿದನು.

ಆಗ ರಾಮಪುರೀಭಾವನು-ಈತನ ಬ್ರಹ್ಮಜ್ಞಾನವು ತಾತ್ತ್ವಿಕವಾದುದು. ಹುಲಿಯಲ್ಲಿಯೂ ಹಸುವಿನಲ್ಲಿಯೂ ಚೇಳಲ್ಲಿಯೂ ಈತನ ಭಾವವು ಸಮವಾಗಿರುವುದು. ಇಂತವನು ಹುಡುಕಿದರೂ ಲೋಕದಲ್ಲಿ ದೊರೆಯನು. ಈತನು ರಾಜನಿಗೂ ಬಡವನಿಗೂ ಸಮವಾಗಿ ಸನ್ಮಾನವನ್ನು ಮಾಡುವನು. ಪರದ್ರವ್ಯವನ್ನೂ ಪರನಾರಿಯರನ್ನೂ ವಮನಕ್ಕೆ ಸರಿಯಾಗಿ ನೋಡುವನು. ಸಕಲರನ್ನೂ ಸಮವಾಗಿ ಸನ್ಮಾನಿಸುವನು. ಆದುದರಿಂದ ಈತನ ಮನೆಯಲ್ಲಿ ರುಕ್ಮಿಣೀಕಾಂತನು ಸರ್ವಕಾಲದಲ್ಲಿಯೂ ವಾಸಮಾಡುತಿರುವನು. ಈತನ ಸ್ಥಿತಿಯು ಇಂತಹುದಾದುದರಿಂದ ನನ್ನನ್ನು ಪೂಜಿಸಿದನು-ಎಂದು ತಿಳಿದು ಸಂತೋಷಗೊಂಡು ತನ್ನ ಆಶ್ರಮಕ್ಕೆ ಹೊರಟನು.

ಬಳಿಕ ಕಾಸಗಾವದ ಪಠಾಣನಿಗೆ "ವಿಸೋಬನು ನಿಸ್ಸ್ವನಾಗಿ ಹೋದನು. ನಿನ್ನ ದ್ರವ್ಯವು ಮತ್ತೆ ಬರುವಂತಿಲ್ಲ. ಎಂತಾದರೂ ಪ್ರಯತ್ನಮಾಡಿ ತೆಗೆದುಕೊಳ್ಳುವುದು" ಎಂದು ಜನಗಳು ಹೇಳಲು, ಅವನು ಥಟ್ಟನೆ ಪಂಡರಪುರಕ್ಕೆ ಬಂದು ವಿಸೋಬನನ್ನು ಕುರಿತು-ನನ್ನ ಹಣವನ್ನು ಈಕ್ಷಣ ಕೊಟ್ಟುಬಿಡಬೇಕು. ಕೊಡದಿದ್ದರೆ ನಾನು ಇಲ್ಲಿ ಬಿಟ್ಟುಹೋಗುವುದಿಲ್ಲ-ಎನಲು, ವಿಸೋಬನು-ಕೊಡುವುದಕ್ಕೆ ಆಧಾರವಿಲ್ಲವಲ್ಲಾ-ಎಂದು ಚಿಂತಿಸಿ ಬಳಿಕ ಧೈರ್ಯವಂ ತಂದುಕೊಂಡು, ಇಂದಿನಿಂದ ಇನ್ನೇಳು ದಿವಸಕ್ಕೆ

ಹಣವನ್ನು ನಿನ್ನ ಬಳಿಗೆ ಕೊಟ್ಟು ಕಳುಹಿಸುವೆನು-ಎಂದು ಹೇಳಲು, ಅದಕ್ಕೆ ಅವನು ನನಗೆ ನಂಬುಗೆ ಇಲ್ಲ. ಆದುದರಿಂದ ಯಾರಿಂದಾದರೂ ಹೇಳಿಸು-ಎನಲು, ವಿಸೋಬನು ಸಭ್ಯರಾದ ಕೆಲವರು ಗ್ರಾಮಸ್ಥರನ್ನು ಕರೆದುಕೊಂಡು ಬಂದು ಅವರ ಮುಂದೆ ತನ್ನ ಅವಧಿಯನ್ನು ಹೇಳಿಕೊಂಡನು. ಅವರು ಆ ಪಠಾಣನನ್ನು ಕುರಿತು-ಅಯ್ಯಾ! ಈ ವಿಸೋಬನು ಎಂದಿಗೂ ಅಸತ್ಯವಾದ ಮಾತನ್ನು ಆಡತಕ್ಕವನಲ್ಲ. ಇಂದಿಗೆ ಏಳನೆಯ ದಿವಸಕ್ಕೆ ಹಣವನ್ನು ಕಳುಹುವುದಾಗಿ ಹೇಳುವನು-ಎಂದರು. ಅದಕ್ಕೆ ಆ ಪಠಾಣನು ನಿಮ್ಮ ಮಾತಿನಂತಾಗಲಿ. ನನ್ನ ಋಣಸಂಬಂಧವನ್ನು ತಪ್ಪದೆ ಪರಿಹರಿಸಿಬಿಡಬೇಕು-ಎಂದು ನುಡಿದು ತನ್ನ ಊರಿಗೆ ಹೊರಟುಹೋದನು.

ಬಳಿಕ ಏಳನೆಯದಿವಸವು ಪ್ರಾಪ್ತವಾಯಿತು. ವಿಸೋಬನು-ಸಾಧುಕಾರನು ನನ್ನ ಮಾರ್ಗವನ್ನೇ ನೋಡುತಿರುವನು. ಏನಾಲೋಚನೆಯನ್ನು ಮಾಡಲಿ? ನನ್ನ ಮಾತು ಎಂದಿಗೂ ಸುಳ್ಳಾಗಿಲ್ಲ. ಈಗ ಅದೃಷ್ಟವು ಇಂತು ಕೆಟ್ಟುದಾಗಿರುವುದು-ಎಂದು ಚಿಂತಾಕ್ರಾಂತನಾಗಿ ಅಷ್ಟರಲ್ಲಿಯೇ ವಿವೇಕವನ್ನು ತಂದುಕೊಂಡು ದೇವರ ಪೂಜೆಗೆ ಕುಳಿತನು. ಸಾಲಗಾರನ ಧ್ಯಾನವೇ ಹತ್ತಿದುದರಿಂದ ಮನಸ್ಸು ಸ್ವಸ್ಥವಾಗಿರಲಿಲ್ಲ. ಆದರೂ ಮನವನ್ನು ಬಿಗಿಹಿಡಿದು-ಪಾಂಡುರಂಗನೇ! ನನ್ನ ಮಾತನ್ನು ಸಲಹು-ಎಂದು ಅನನ್ಯಭಾವದಿಂದ ಮೊರೆಯಿಟ್ಟನು.

ರುಕ್ಮಿಣೀಪತಿಯು ಆತನ ಸಂಕಟವನ್ನು ನೋಡಿ ಕನಿಕರಗೊಂಡು, ಆತನ ಪೂರ್ವದ ಕರಣಿಕನ ರೂಪವಂ ತಾಳಿ ಆ ಪಠಾಣನ ಬಳಿಗೆ ಹೋಗಿ-ನಿಮ್ಮ ಅವಧಿಯು ತೀರಿದುದರಿಂದ ವಿಸೋಬನು ನನ್ನನ್ನು ಇಲ್ಲಿಗೆ ಕಳುಹಿಸಿದನು. ಬಡ್ಡಿಯೊಡನೆ ಲೆಕ್ಕವನ್ನು ಮಾಡಿ ನಿಮ್ಮ ಹಣವನ್ನು ನೀವು ಎಣಿಸಿ ತೆಗೆದುಕೊಳ್ಳುವುದು-ಎನಲು, ಆತನು ಆ ಮಾತನ್ನು ಕೇಳಿ ಕರಣಿಕನಾದ ಸ್ವಾಮಿಯನ್ನು ಕುರಿತು-ವಿಸೋಬನಿಗೆ ದ್ರವ್ಯವು ದೊರೆಯುವಂತಿರಲಿಲ್ಲ. ಇನ್ನು ಯಾವಸಾಧುಕಾರನು ಗಂಟುಬಿದ್ದನೋ ಆಶ್ಚರ್ಯವಾಗಿದೆ-ಎಂದನು.

ಅದಕ್ಕೆ ಸ್ವಾಮಿಯು-ವಿಸೋಬನು ಸಾತ್ತ್ವಿಕಶಿರೋಮಣಿ. ಕಲ್ಪಾಂತರದಲ್ಲಿಯೂ ಅಸತ್ಯವಾದ ಮಾತನ್ನು ಆಡನೆಂದು ತಿಳಿಯಿರಿ-ಎಂದು ನುಡಿದು ಆತನಿಂದ ಪತ್ರವನ್ನು ತರಿಸಿ ನಾಲ್ವರು ಗೃಹಸ್ಥರನ್ನು ಕರೆಯಿಸಿ ಅವರ ಮುಂದೆ ಹಣವನ್ನು ಲೆಕ್ಕಮಾಡಿ ಸಲಿಸಿ ಪತ್ರವನ್ನು ತೆಗೆದುಕೊಂಡು ತಲೆಯನ್ನು ಹರಿದು ಅಲ್ಲಿಂದ ಅದೃಶ್ಯನಾಗಿ ಪಂಢರಪುರಕ್ಕೆ ವಿಸೋಬನ ಮನೆಗೆ ಬಂದು, ಆತನು ಪಾರಾಯಣಮಾಡುವ ಗೀತಾಪುಸ್ತಕದಲ್ಲಿ ಆ ಪತ್ರವನ್ನು ಇಟ್ಟು ಅಂತರ್ಧಾನವನ್ನೈದಿದನು.

ಬಳಿಕ ವಿಸೋಬನು ಪಾರಾಯಣಕ್ಕೆ ಗೀತಾಪುಸ್ತಕವನ್ನು ಬಿಚ್ಚಿ ಅದರಲ್ಲಿ ತನ್ನ ಹಸ್ತಾಕ್ಷರದ ಪತ್ರವನ್ನು ಕಂಡು ಇದೇನೆಂದು ವಿಸ್ಮಿತನಾಗಿ-ಆತನ ಸಾಲವಂ ತೀರಿಸದೆ ಪತ್ರವನ್ನು ಯಾರು ತಂದರು?-ಎಂದು ಯೋಚಿಸಿ, ಹೆಂಡತಿಯನ್ನೂ ಮಕ್ಕ

ಳನ್ನೂ ವಿಚಾರಿಸಿ, ಹರಿದ ಪತ್ರಕ್ಕೆ ತ್ಯಾಪೆಯನ್ನು ಅಂಟಿಸಿ- ಅದನ್ನು ತೆಗೆದುಕೊಂಡು ಹೋಗಿ ಆ ಸಾಧುಕಾರನಿಗೆ ಕುಡಬೇಕೆಂದು ಆಲೋಚಿಸಿ ಒಡನೆಯೇ ಹೊರಟು ಕಾಸಗಾವನ್ನು ಸೇರಿ ಆತನನ್ನು ಕಂಡನು.

ಪಠಾಣನು ವಿಸೋಬನನ್ನು ಕುರಿತು-ನಿಮ್ಮ ಪುರಾತನಕರಣಿಕನು ಇಂದು ಬೆಳಗಾದಾಗಲೇ ಬಂದು ಬಡ್ಡಿಯೊಡನೆ ಹಣವೆಲ್ಲವನ್ನೂ ಕೊಟ್ಟು ಪತ್ರವನ್ನು ತೆಗೆದುಕೊಂಡು ಹೋದನು. ಈಗ ನೀವು ಏನುಕಾರಣದಿಂದ ಬಂದಿರಿ ?—ಎನಲು, ವಿಸೋಬನು ವಿಸ್ಮಿತನಾಗಿ-ಈ ಸಮಾಚಾರವೇ ನನಗೆ ತಿಳಿಯದು. ಈ ಪತ್ರವು ಗೀತಾಪುಸ್ತಕದಲ್ಲಿ ಇದ್ದಿತು. ಸಾಲವು ತೀರದಿರುವಾಗ ಪತ್ರವು ನಮ್ಮಲ್ಲಿ ಬಂದುದರಿಂದ ನಾನು ನಿಮ್ಮ ಬಳಿಗೆ ಬಂದೆನು—ಎಂದನು. ಆ ಪಠಾಣನು ಸಾಕ್ಷಿಗಳನ್ನು ಕರೆಯಿಸಿ ಕೇಳಲು, ಅವರು-ಹಣವೆಲ್ಲವೂ ಸಂದಿದೆ—ಎಂದು ಹೇಳಿದರು.

ಬಳಿಕ ವಿಸೋಬನು ಪಂಡರಪುರಕ್ಕೆ ಬಂದು ತನ್ನ ಕರಣಿಕನನ್ನು ಕರೆಯಿಸಿ—ನೀನು ನಮ್ಮ ಸಾಲವನ್ನು ತೀರಿಸಿದೆಯಾ ?-ದಿಟವನ್ನು ಹೇಳು-ಎಂದು ಬೆಸಗೊಳ್ಳಲು, ಅವನು ಪಾಂಡುರಂಗನಾಣೆ ಈ ಸಂಗತಿಯೇ ನನಗೆ ತಿಳಿಯದು-ಎಂದನು. ಬಳಿಕ—ಇದು ಸ್ವಾಮಿಯ ವಿಲಾಸವೇಸರಿ-ಎಂದು ನಿಶ್ಚಯಿಸಿ ಬಾಷ್ಪಪೂರಿತನಾಗಿ ಸ್ವಾಮಿಯನ್ನು ಕುರಿತು-ಕೃಪಾಸಾಗರನೇ ! ಜಗನ್ನಾಥನೇ ! ನನಗೋಸ್ಕರ ನೀನು ಬಹುವಾಗಿ ದಣಿದೆ-ಎಂದು ಅತಿಶಯದಿಂದ ಸ್ತುತಿಯಿಸಿದನು.

ವಿಸೋಬನಿಗೆ ಸ್ವಾಮಿಯು ಪ್ರಸನ್ನನಾದನೆಂಬ ಮಾತು ಎಲ್ಲೆಲ್ಲಿಯೂ ಪ್ರಕಟವಾಯಿತು. ಸರ್ವರೂ ಪ್ರತ್ಯಕ್ಷವಾಗಿ ನೋಡಿ ಆಶ್ಚರ್ಯಪಟ್ಟರು.

ಭಕ್ತರಿಗೆ ಸಂಕಟವು ಪ್ರಾಪ್ತವಾಗಲು, ತತ್ಕಾಲದಲ್ಲಿಯೇ ಶ್ರೀಹರಿಯು ಪ್ರಸನ್ನನಾಗುವನು. ಸಮಯಗಳನ್ನು ನೋಡನು. ಆತನು ಕೃಪಾರಾಶಿಯು. ಪೂರ್ವದಲ್ಲಿ ಕೃತತ್ರೇತಾದ್ವಾಪರಯುಗಗಳಲ್ಲಿ ಸಾಕ್ಷಾದವತಾರವನ್ನು ಮಾಡಿದ್ದನು. ಆಗ ಭಕ್ತರನ್ನು ಸಂರಕ್ಷಿಸಿದುದು ಏನಾಶ್ಚರ್ಯವು ? ಈ ಕಲಿಯುಗದಲ್ಲಿ ಬೌದ್ಧಾವತಾರವಂ ಮಾಡಿ ಪಾಷಾಣಮೂರ್ತಿಯಾಗಿದ್ದೂ ಭಕ್ತರಿಗೆ ವಿವಿಧವಾದ ಚಮತ್ಕಾರವಂ ತೋರಿ ಸಂತರ ಮಹಿಮೆಯನ್ನು ಬೆಳಗುವನು. ಮೂರು ಯುಗಗಳಿಗಿಂತಲೂ ಕಲಿಯುಗ ಶ್ರೇಷ್ಠವೆಂದು ಭಾಗವತದಲ್ಲಿ ಶುಕರು ಹೇಳಿರುವರು. ಇಲ್ಲಿ ಎಂಟು ಗಳಿಗೆಯೊಳಗಾಗಿ ಭಕ್ತರಿಗೆ ವೈಕುಂಠನಾಯಕನು ಪ್ರಸನ್ನನಾಗುವನು. ಆದರೆ ಸೂಕ್ಷ್ಮವಾದ ಒಂದು ಅಡ್ಡಿಯಿರುವುದು. ಭಕ್ತನ ಹೃದಯವು ಶುದ್ಧವಾಗಿರಬೇಕು. ವಿಕಲ್ಪವೆಂಬ ಬಲೆಯಲ್ಲಿ ಸಿಕ್ಕದೆ ಇರುವವನಿಗೆ ಭಗವಂತನು ಪ್ರಸನ್ನನಾಗುವನು. ಅಹುದೋ ಅಲ್ಲವೋ—ಎಂಬ ಸಂಶಯವು ಚಿತ್ತದಲ್ಲಿ ಹುಟ್ಟಲು, ಸೇವೆಯಂ ಮಾಡಿದವನು ತನ್ನ ಹಿತಕ್ಕೆ ವೈರಿಯಾಗಿ ಶ್ರೀಹರಿಯ ಪಾದಗಳಿಗೆ ದೂರನಾಗುವನು. "ತನ್ನ ಭಕ್ತನು ಸಂಕಟದಲ್ಲಿ ಬೀಳಬೇಕು ; ಆ ಸಮಯದಲ್ಲಿ ತಾನು ಪ್ರಸನ್ನನಾಗಿ ಭಕ್ತನ

ಕೀರ್ತಿಯನ್ನು ಬೆಳೆಯಿಸಬೇಕು" ಎಂದು ರುಕ್ಮಿಣೀಪತಿಯು ಇಚ್ಛಿಸುತಿರುವನು. ಹೊಳೆಯ ದಡದಲ್ಲಿ ಕುಳಿತು ಅಂಬಿಗನು-ಯಾರಾದರೂ ನೀರಲ್ಲಿ ಮುಳುಗಬೇಕು. ನಾನು ಅವರನ್ನು ಕರೆಗೆ ತೆಗೆಯಬೇಕು-ಎಂದು ಎಂತು ಅಪೇಕ್ಷಿಸುವನೋ, ದಾನಶೀಲನು ಅನ್ನಸತ್ರವನ್ನು ಹಾಕಿ-ಜನರು ಹಸಿವುಗೊಂಡು ತಲ್ಲಣಿಸುತ್ತ ಬರಬೇಕು ; ನಾನು ಅವರಿಗೆ ತೃಪ್ತಿಯನ್ನು ಮಾಡಿಸಬೇಕು-ಎಂದು ಎಂತು ಇಚ್ಛಿಸುವನೋ, ಸದ್ವೈದ್ಯನು, ಧನಿಕನಿಗೆ ಏನಾದರೂ ರೋಗವು ಬರಬೇಕು; ನಾನು ಔಷಧವನ್ನು ಕೊಟ್ಟು ಆ ರೋಗವಂ ಪರಿಹರಿಸಿ ಸ್ವಾರ್ಥವನ್ನು ಪಡೆಯಬೇಕು-ಎಂದು ಎಂತು ಬಯಸುವನೋ, ಬುದ್ಧಿಶಾಲಿಯಾದ ಕವಿಯು-ಯಾರಾದರೂ ನನ್ನನ್ನು ಆಕ್ಷೇಪಣೆಮಾಡಬೇಕು ; ಅದಕ್ಕೆ ನಾನು ಅನೇಕವಾದ ದೃಷ್ಟಾಂತಗಳಿಂದ ಸಮಾಧಾನವನ್ನು ಹೇಳಿ ಶಂಕೆಯಂ ಪರಿಹರಿಸಬೇಕು-ಎಂದು ಎಂತು ಹಾರೈಸುವನೋ ಅಂತು ಪಾಂಡುರಂಗನು ಕಟಿಯಲ್ಲಿ ಕರಗಳನಿಟ್ಟುಕೊಂಡು-ಭಕ್ತರು ನನ್ನ ಮೇಲೆ ಭಾರವನ್ನು ಹಾಕಿ ದುರ್ಘಟವಾದ ಕಾರ್ಯವನ್ನು ಆರಂಭಿಸಬೇಕು. ನಾನು ಅವರಿಗೆ ಒಲಿದು ಜಗತ್ತಿನಲ್ಲಿ ಅವರ ಕೀರ್ತಿಯಂ ಬೆಳೆಗಬೇಕು-ಎಂದು ಇಚ್ಛಿಸುತಿರುವನು. ಆದರೂ ಯಾರೂ ಧೈರ್ಯವುಳ್ಳವರಾಗಿ ಅಂತು ನಡೆಯರು. ಎಲೈ ಶ್ರೋತೃಗಳಿರಾ ! ಯಾರು ಆಶಾಪಾಶವಂ ಹರಿದು ನಶ್ವರವಾದ ದೇಹದ ಆಶೆಯಂ ಬಿಟ್ಟು ಇದ್ದರೋ ಮಹನೀಯರಾದ ಆ ಭಾಗವತರ ರಸಭರಿತವಾದ ಕಥೆಗಳನ್ನು ಭಾವುಕರಾದ ನೀವು ಕೇಳಿ ಧನ್ಯರಾದಿರಿ.

ಇನ್ನು ಈಗ ಗ್ರಂಥದ ಅನುಕ್ರಮಣಿಕೆಯನ್ನು ಪ್ರಾರಂಭಿಸುವೆನು. ಅದನ್ನು ಮತ್ತೆ ಮನನಮಾಡಬೇಕು. ಮೊದಲನೆಯ ಅಧ್ಯಾಯದಲ್ಲಿ :-ಗಣೇಶಸರಸ್ವತಿಗಳನ್ನು ಅಭಿವಂದಿಸಿ ಸದ್ಗುರುಪಾದವಂ ಸ್ಮರಿಸಿದುದೂ, ಕಲಿಯುಗದಲ್ಲಿ ದೋಷವು ಪ್ರಬಲವಾಗಿರಲು, ಶ್ರೀಲಕ್ಷ್ಮೀಪತಿಯು ಭಕ್ತರಿಗೆ ಮರ್ತ್ಯಲೋಕದಲ್ಲಿ ಅವತರಿಸಿ ನಾಮಮಹಿಮೆಯನ್ನು ಪ್ರಕಟಮಾಡಿ ಸಕಲರನ್ನೂ ಭಜನೆಯಲ್ಲಿ ಹತ್ತಿಸಬೇಕು-ಎಂದು ಆಜ್ಞಾಪಿಸಿದುದೂ ; ಎರಡನೆಯದರಲ್ಲಿ :-ಜಯದೇವನನ್ನು ಕಳ್ಳರು ಸಂಕಟಪಡಿಸಿದುದೂ, ಗತಜೀವಿತೆಯಾದ ಪದ್ಮಾವತಿಯನ್ನು ಬದುಕಿಸಿದುದೂ ; ಮೂರನೆಯದರಲ್ಲಿ :-ತುಳಸೀದಾಸನು ಪಾಷಾಣನಂದಿಗೆ ಭೋಜನಮಾಡಿಸಿದುದೂ, ಮೃತನಾದವನನ್ನು ಅನುಗ್ರಹದಿಂದ ಎಬ್ಬಿಸಿದುದೂ, ಶ್ರೀರಘುವೀರನು ಆತನಿಗೆ ದರ್ಶನವನ್ನು ಕೊಟ್ಟುದೂ ; ನಾಲ್ಕನೆಯದರಲ್ಲಿ :-ನಾಮದೇವನು ಕಪ್ಪೆಚಿಪ್ಪಿನಲ್ಲಿ ದೊರೆಯಲು, ದಾಮಶೆಟ್ಟಿಯು ಸಂತೋಷಪಟ್ಟುದೂ, ಬಳಿಕ ಗೋಣಾಯಿಗೆ ಪಂಢರೀನಾಥನು ದರ್ಶನವಂ ಕೊಟ್ಟುದೂ; ಐದನೆಯದರಲ್ಲಿಯೂ ಆರನೆಯದರಲ್ಲಿಯೂ ಏಳನೆಯದರಲ್ಲಿಯೂ :-ಕಬೀರನು ಅಯೋನಿಸಂಭವನಾಗಿ ಕಮಾಲಮೋಮಿನನೆಂಬವನ ಮನೆಯಲ್ಲಿ ಬೆಳೆದುದೂ, ಸ್ವಾಮಿಯು ಶಲ್ಯವನ್ನು ನೆಯ್ದುದೂ, ಸಂತರಿಗೋಸ್ಕರ ಕಳ್ಳತನವನ್ನು ಮಾಡಿದ ಕಮಾಲನೆಂಬ ಮಗನ ಶಿರಸ್ಸನ್ನು ಛೇದಿಸಿದುದೂ, ಸಾಧುಗಳು ಬದುಕಿಸಿದುದೂ, ಕಬೀರನಿಗೆ

ಅಯೋಧ್ಯಾನಾಥನು ಪ್ರಸನ್ನನಾಗಿ ಒಬ್ಬೊಬ್ಬ ಸಾಧುವಿಗೆ ಒಬ್ಬೊಬ್ಬ ಕಬೀರನಾದುದೂ ; ಎಂಟನೆಯುದರಲ್ಲಿ ಒಂಬತ್ತನೆಯುದರಲ್ಲಿ:—ನಿವೃತ್ತಿಸೋಪಾನಜ್ಞಾನದೇವರು ಯತಿಯ ಉದರದಲ್ಲಿ ಅವತರಿಸಿದುದರಿಂದ ಅವರಿಗೆ ಬ್ರಾಹ್ಮಣರು ಬಹಿಷ್ಕಾರಹಾಕಿದುದೂ:—ಜ್ಞಾನದೇವನು ಕೋಣನ ಮುಖದಿಂದ ವೇದವನ್ನು ಹೇಳಿಸಿದುದೂ, ಮಂತ್ರೋಚ್ಚಾರಣೆಯಿಂದ ಪಿತೃಗಳಿಗೆ ಭೋಜನಮಾಡಿಸಿದುದೂ ; ಹತ್ತನೆಯುದರಲ್ಲಿ:—ಜ್ಞಾನದೇವನು ಪಂಢರಪುರದಿಂದ ನಾಮದೇವನನ್ನು ಕರೆದುಕೊಂಡು ತೀರ್ಥಯಾತ್ರೆಗೆ ಹೊರಟು ಹಸ್ತಿನಾಪುರದಲ್ಲಿ ಸಿಂತು ಹಸುವನ್ನು ಬದುಕಿಸಿದುದೂ, ಹನ್ನೊಂದನೆಯುದರಲ್ಲಿ-ಕಬೀರನ ಮಡದಿಯು ಸತ್ಯದಿಂದ ವೈಶ್ಯನಿಗೆ ಪಶ್ಚಾತ್ತಾಪವುಂಟಾದುದೂ, ನಾಮದೇವನಿಗೂ ಕಬೀರನಿಗೂ ಪರಸ್ಪರಸಂದರ್ಶನವಾದುದೂ ; ಹನ್ನೆರಡನೆಯುದರಲ್ಲಿ:—ನಾಮದೇವನಿಗೆ ಮಾರವಾಡದೇಶದಲ್ಲಿ ಬಾಯಾರಿಕೆಯಾದುದರಿಂದ ಬಾವಿಯ ನೀರು ಉಬ್ಬಿಬಂದುದೂ, ನಾಗನಾಥದೇವಾಲಯವನ್ನು ಹಿಂತಿರುಗಿಸಿದುದೂ, ಹದಿಮೂರನೆಯುದರಲ್ಲಿ:—ಸ್ವಾಮಿಯು ಹೊಲೆಯನಾದ ಕೂರ್ಮದಾಸನ ಭಕ್ತಿಗೆ ಮೆಚ್ಚಿ ದರ್ಶನವನ್ನು ಕೊಟ್ಟುದೂ, ಆ ಸಂದರ್ಭದಲ್ಲಿ ಸಾವಂತನ ಹೃದಯದಲ್ಲಿ ಅಡಗಿದ್ದುದೂ ; ಹದಿನಾಲ್ಕನೆಯುದರಲ್ಲಿ:—ರಾಕನೆಂಬ ಕುಂಬಾರನು, ಆವಿಯಲ್ಲಿದ್ದ ಬೆಕ್ಕಿನ ಮರಿಗಳನ್ನು ಸ್ವಾಮಿಯು ಸಂರಕ್ಷಿಸಲು, ವಿರಕ್ತನಾದುದೂ; ಹದಿನೈದನೆಯುದರಲ್ಲಿ:--ಗೋರನೆಂಬ ಕುಂಬಾರನಿಗೆ ಹೋದ ಕೈಗಳು ಭಗವದನುಗ್ರಹದಿಂದ ಮತ್ತೆ ಬಂದುದೂ, ಅವನ ಮೃತನಾದ ಬಾಲಕನು ಬದುಕಿದುದೂ, ಹದಿನಾರನೆಯುದರಲ್ಲಿ:—ನಾಮದೇವನು ಗುರುವನ್ನು ಸಮಾಶ್ರಯಿಸಿದುದೂ, ಹದಿನೇಳನೆಯುದರಲ್ಲಿ ನಾಮದೇವನು ತನ್ನ ಕರಸ್ಪರ್ಶದಿಂದ ಮಳಲನ್ನು ಪರುಸವನ್ನಾಗಿ ಮಾಡಿ ಪರುಸಭಾಗವತನನ್ನು ಅನುಗ್ರಹಿಸಿದುದೂ, ಹದಿನೆಂಟನೆಯುದರಲ್ಲಿ:—ಜಗನ್ಮಿತ್ರನಿಗೆ ಕ್ಷೇತ್ರವಿಚಾರಕನು ಕೋಟಲೆಯನಿಗಿದುದರಿಂದ ಸ್ವಾಮಿಯು ವ್ಯಾಘ್ರರೂಪನಾಗಿ ಬಂದು ಕೌತುಕವನ್ನು ತೋರಿದುದೂ, ಹತ್ತೊಂಬತ್ತನೆಯುದರಲ್ಲಿ:—ಯೋಗಪರಮಾನಂದನು ದೇಹದಂಡನದಿಂದ ಸ್ವಾಮಿಯ ಸಾಕ್ಷಾತ್ಕಾರವನ್ನು ಪಡೆದುದೂ, ಇಪ್ಪತ್ತನೆಯುದರಲ್ಲಿ:—ಹರಿಹರರಲ್ಲಿ ಭೇದಬುದ್ಧಿಯುಳ್ಳ ನರಹರಿಯೆಂಬ ಅಕ್ಕಸಾಲೆಗೆ ಸ್ವಾಮಿಯು ಏಕರೂಪದಿಂದ ದರ್ಶನವನ್ನುಕೊಟ್ಟುದೂ, ಇಪ್ಪತ್ತೊಂದನೆಯುದರಲ್ಲಿ:—ನಾಮದೇವನ ಏಕಾದಶೀವ್ರತಾಚರಣೆಯನ್ನು ಸ್ವಾಮಿಯು ವೃದ್ಧಬ್ರಾಹ್ಮಣರೂಪದಿಂದ ಪರೀಕ್ಷಿಸಿದುದೂ, ಇಪ್ಪತ್ತೆರಡನೆಯುದರಲ್ಲಿ:—ಮತ್ಸ್ಯೇಂದ್ರನ ಭಸ್ಮದ ಮಹಿಮೆಯಿಂದ ತಿಪ್ಪೆಗುಂಡಿಯಲ್ಲಿ ಗೋರಕ್ಷನಾಥನು ಹುಟ್ಟಿದುದೂ, ಮತ್ಸ್ಯೇಂದ್ರನು ಗೋರಕ್ಷನಾಥನನ್ನು ಶಿಷ್ಯನನ್ನಾಗಿ ಮಾಡಿಕೊಂಡು ಅವನ ಶಿಷ್ಯವೃತ್ತಿಯನ್ನು ಪರೀಕ್ಷಿಸಿ ಸಂತೋಷಿಸಿದುದೂ; ಇಪ್ಪತ್ತುಮೂರನೆಯುದರಲ್ಲಿ:—ಚಾಂಗದೇವನು ಹುಲಿಯನ್ನು ವಾಹನವನ್ನಾಗಿ ಮಾಡಿಕೊಂಡುಬರಲು, ಜ್ಞಾನದೇವನು ಗೋಡೆಯನ್ನು ನಡೆಯಿಸಿಕೊಂಡು ವಿಶ್ರಾಂತಿವಟದ ಬಳಿಯಲ್ಲಿ ಆತನಿಗೆ ದರ್ಶನವಂ ಕೊಟ್ಟುದೂ; ಇಪ್ಪತ್ತುನಾಲ್ಕನೆಯುದರಲ್ಲಿ:—ಬಹಿ

ಪ್ಲುತನಾದ ಚೋಖಾಮೇಳನಿಗೆ ಸ್ವಾಮಿಯು ಪ್ರಸನ್ನನಾದುದೂ; ಇಪ್ಪತ್ತೈದನೆಯದರಲ್ಲಿ:–ರಾಮನಾಮಸಂಕೀರ್ತನದಿಂದ ಪದ್ಮನಾಭನು ಕಾಶಿಯ ಸಾಧುಕಾರನ ರೋಗವನ್ನು ಪರಿಹಾರಮಾಡಿದುದೂ; ಕಬೀರನು ತುಳಸೀದಾಸನೆಂಬ ವರ್ತಕನಿಗೆ ತನ್ನ ಮಡದಿಯನ್ನು ಮಾರಿ ಸಂತರ ಸತ್ಕಾರವಂ ಮಾಡಿದುದೂ; ಕಬೀರನ ಮಡದಿಯಲ್ಲಿ ಮನವಂ ಮಾಡಿದ ಆ ತುಳಸೀದಾಸನನ್ನು ಸ್ವಾಮಿಯು ರಾಜಭಟಾಧ್ಯಕ್ಷನ ರೂಪದಿಂದ ಬಂದು ಹೆದರಿಸಿ ಅವನಿಗೆ ಸದ್ಬುದ್ಧಿಯನ್ನುಂಟುಮಾಡಿದುದೂ; ಇಪ್ಪತ್ತಾರನೆಯದರಲ್ಲಿ:–ಪಿಪಾಜಿರಾಯನು ವಿರಕ್ತಿಯಿಂದ ರಾಜ್ಯವನ್ನು ಬಿಟ್ಟು ದ್ವಾರಕಿಗೆ ಹೋಗಿಬರುತ ಮಾರ್ಗದಲ್ಲಿ ಸಿಕ್ಕಿದ ವ್ಯಾಘ್ರಕ್ಕೆ "ರಾಮಕೃಷ್ಣ" ಎಂಬ ಮಂತ್ರವನ್ನು ಉಪದೇಶಮಾಡಿ ಅದಕ್ಕೆ ಸದ್ಗತಿಯನುಂಟುಮಾಡಿದುದೂ, ಇಪ್ಪತ್ತೇಳನೆಯ ಇಪ್ಪತ್ತೆಂಟನೆಯ ಇಪ್ಪತ್ತೊಂಬತ್ತನೆಯ ಮೂವತ್ತನೆಯ ಅಧ್ಯಾಯಗಳಲ್ಲಿ:–ನರಸಿಂಹಮಹಾಂತನಿಗೆ ಈಶ್ವರನು ಪ್ರಸನ್ನನಾಗಿ ರಾಸಮಂಡಲದ ದರ್ಶನವನ್ನು ಮಾಡಿಸಿದುದೂ ಆತನ ಮಗನ ಮದುವೆಯಾದುದೂ, ಹುಂಡಿಯನ್ನು ಸಲಿಸಿದುದೂ, ಮಗಳಿಗೆ ವಸ್ತ್ರಾಭರಣಂಗಳಂ ಕೊಟ್ಟುದೂ ; ಮೂವತ್ತೊಂದನೆಯದರಲ್ಲಿ:–ರಾಮದಾಸನ ಭಕ್ತಿಗೆ ಮೆಚ್ಚಿ ಸ್ವಾಮಿಯು ಢಾಕೂರಿಗೆ ಬಂದುದೂ ; ಮೂವತ್ತೆರಡನೆಯದರಲ್ಲಿ:-ನಿರಾಧಾರಬ್ರಹ್ಮಚಾರಿಯ ಭಕ್ತಿವಿಶೇಷದಿಂದ ಮಧುರೆಯ ಪುರಾತನಮೂರ್ತಿಯು ಹರಿದ್ವಾರಕ್ಕೆ ಬಿಜಯಂಗೈದುದೂ ; ಮೂವತ್ತುಮೂರನೆಯದರಲ್ಲಿ:--ಸುರದಾಸನಿಗೆ ಮಧುರೆಯಲ್ಲಿ ಸ್ವಾಮಿಯು ಪ್ರಸನ್ನನಾಗಿ ಮುಕ್ತಿಯನಿತ್ತುದೂ ; ಮೂವತ್ತುನಾಲ್ಕನೆಯದರಲ್ಲಿ:–ರುಕ್ಮಿಣೀಪತಿಯು ಶ್ಯೇನನೆಂಬ ನಾಪಿತನ ರೂಪವಂ ಧರಿಸಿ ರಾಜನಿಗೆ ಕ್ಷೌರಕರ್ಮವನೆಸಗಿ ವಿಸ್ಮಯಗೊಳಿಸಿದುದೂ; ಮೂವತ್ತೈದನೆಯದರಲ್ಲಿ:--ಸಾತ್ತ್ವಿಕನೆಂಬ ರಾಜನು ಸ್ವಾಪರಾಧದಿಂದ ಕೈಯನ್ನು ಕಡಿದುಕೊಳ್ಳಲು, ಸ್ವಾಮಿಯು ಆತನ ಸದ್ಭಾವಕ್ಕೆ ಪ್ರಸನ್ನನಾಗಿ ಮೊದಲಂತೆ ಆತನಿಗೆ ಕೈಯನ್ನು ಉಂಟುಮಾಡಿದುದೂ, ಕರ್ಮಾಬಾಯಿಯ ಭಕ್ತಿವಿಶೇಷದಿಂದ ಶಿಲಾಮೂರ್ತಿಯೂ ಭೋಜನಮಾಡಿದುದೂ, ಅರ್ಚಕರಿಗೆ ಸ್ವಪ್ನವಾದುದೂ ; ಮೂವತ್ತಾರನೆಯದರಲ್ಲಿ:–ಭಗವಂತನು ಭಕ್ತಿಮಾರ್ಗಕ್ಕೆ ಮೆಚ್ಚಿ ಸೀರಲ್ಲಿದ್ದ ಜಸವಂತನನ್ನು ಉದ್ಧರಿಸಿದುದೂ, ಸುರದಾಸನು ಸಂತರ ಸೇವಾಧುರಂಧರನೆನಿಸಿಕೊಂಡುದೂ, ಆತನ ಸದ್ಭಾವಕ್ಕೆ ಸ್ವಾಮಿಯು ಪ್ರತ್ಯಕ್ಷನಾದುದೂ ; ಮೂವತ್ತೇಳನೆಯದರಲ್ಲಿ:–ರಸಿಕಮುರಾರನು ತನ್ನ ಸತ್ತ್ವಪ್ರಭಾವದಿಂದ ದುಷ್ಟನಾದ ತುರುಷ್ಕರಾಜನನ್ನು ವಿನೀತನನ್ನಾಗಿಮಾಡಿ ಅವನಿಂದ ಕಾರ್ಯಸಾಧನೆಯಂ ಮಾಡಿಕೊಂಡುದೂ, ಮೂವತ್ತೆಂಟನೆಯದರಲ್ಲಿ:--ಮೀರಾಬಾಯಿಯ ಸದ್ಭಾವದಿಂದ ಭಗವಂತನು ಪಾನಮಾಡಿದ ವಿಷವು ಅಮೃತವಾದುದೂ ; ಮೂವತ್ತೊಂಬತ್ತನೆಯದರಲ್ಲಿ:–ಕಾಹ್ನೋಪಾತ್ರೆಗೆ ಪಂಡರೀನಾಥನು ಪ್ರಸನ್ನನಾದುದೂ ; ನಾಲ್ವತ್ತನೆಯದರಲ್ಲಿ:–ಸ್ವಾಮಿಯು ದಾಮಾಜಿಪಂತನನ್ನು ಸಂಕಟದಲ್ಲಿ ರಕ್ಷಿಸಿದುದೂ ; ನಾಲ್ವತ್ತೊಂದನೆಯದರಲ್ಲಿ:–ಮೃತ್ಯುಂಜಯನು

'ವೇದಾಂತ ಮತ್ತು ಸಿದ್ಧಾಂತ' ಎಂಬ ವಿಶ್ವಕದ್ರುಗಳಿಂದ ಲಿಂಗಗಳನ್ನು ತರಿಸಿದುದೂ ; ನಾಲ್ವತ್ತೆರಡನೆಯದರಲ್ಲಿ :–ಸ್ವಾಮಿಯು ಕುದುರೆಯನ್ನು ಕೈಯಲ್ಲಿ ಹಿಡಿದುಕೊಂಡು ಕಾದಿದ್ದು ಭಾನುದಾಸನಿಗೆ ಅನುಗ್ರಹತನ್ನು ಮಾಡಿದುದೂ; ನಾಲ್ವತ್ತುಮೂರನೆಯದರಲ್ಲಿ:–ವಿದ್ಯಾನಗರಕ್ಕೆ ಪಾಂಡುರಂಗಸ್ವಾಮಿಯು ಹೋದುದೂ, ಭಾನುದಾಸನು ಅಲ್ಲಿಂದ ಮತ್ತೆ ಪಂಡರಪುರಕ್ಕೆ ಕರೆದುಕೊಂಡುಬಂದುದೂ ; ನಾಲ್ವತ್ತುನಾಲ್ಕನೆಯದರಲ್ಲಿ:– ನಾಗನಾಥನು ಭೈರವಭಟ್ಟನಿಗೆ ಎರಡನೆಯ ಜನ್ಮವನ್ನುಕೊಟ್ಟು ಬ್ರಹ್ಮಜ್ಞಾನವನ್ನುಪದೇಶಮಾಡಿದುದೂ ; ನಾಲ್ವತ್ತೈದನೆಯದರಲ್ಲಿ :–ಏಕನಾಥನು ಜನಾರ್ದನಪಂತರನ್ನು ಶರಣುಹೊಂದಲು, ಅವರು ದತ್ತಾತ್ರೇಯರ ದರ್ಶನವನ್ನು ಮಾಡಿಸಿ ಪ್ರಸಾದವಂ ಕೊಟ್ಟುದೂ; ನಾಲ್ವತ್ತಾರನೆಯದರಲ್ಲಿ :–ಶ್ರೀಕೃಷ್ಣನು ಏಕನಾಥನ ಮನೆಯಲ್ಲಿ ಹನ್ನೆರಡು ವರ್ಷ ಸೇವೆಯಂಮಾಡಿದುದೂ, ಆಸಂಗತಿ ಏಕನಾಥನಿಗೆ ಕಡೆಯಲ್ಲಿ ತಿಳಿದುದೂ ; ನಾಲ್ವತ್ತೇಳನೆಯದರಲ್ಲಿ :––ಮಾರುತಿಯ ಅವತಾರವಾದ ರಾಮದಾಸನು ಸಂಸಾರಕ್ಲೇಶಕ್ಕೆ ಹೆದರಿಕೊಂಡು ಅರಣ್ಯಕ್ಕೆ ಓಡಿಹೋದುದೂ, ಪಾಂಡುರಂಗನು ರಾಮರೂಪದಿಂದ ದರ್ಶನವನ್ನು ಕೊಟ್ಟುದೂ, ನಾಲ್ವತ್ತೆಂಟನೆಯದರಲ್ಲಿ :–ತುಕ್ಕೋಬನಿಗೆ ವೈರಾಗ್ಯಪ್ರಾಪ್ತಿಯೂ, ಕೀರ್ತನದಲ್ಲಿ ಸ್ವಾಮಿಯು ಬಂದು ಪರಚಕ್ರವನ್ನು ನಿವಾರಿಸಿದುದೂ; ನಾಲ್ವತ್ತೊಂಬತ್ತನೆಯದರಲ್ಲಿ :–ತುಕ್ಕೋಬನು ಮಡದಿಗೆ ಉಪದೇಶವನ್ನು ಮಾಡಿ ಮನೆಯ ಸರ್ವಸ್ವವನ್ನೂ ಬ್ರಾಹ್ಮಣರಿಗೆ ಸೂರೆಗೊಟ್ಟುದೂ; ಐವತ್ತನೆಯದರಲ್ಲಿ :–ತುಕ್ಕೋಬನು ಬಹುದೈನ್ಯದಿಂದ ಪತ್ರವನ್ನುಬರೆದು ಪಂಡರಪುರಕ್ಕೆ ಸ್ವಾಮಿಯ ಸನ್ನಿಧಿಗೆ ಕಳುಹಿಸಿದುದೂ, ಐವತ್ತೊಂದನೆಯದರಲ್ಲಿ :–ಸ್ವಾಮಿಯು ಗರುಡಾರೂಢನಾಗಿ ತುಕ್ಕೋಬನ ಬಳಿಗೆ ಬಂದುದೂ, ಅದರ ಮಧ್ಯದಲ್ಲಿ ಕೀರ್ತನದಲ್ಲಿ ನಿಂಬರಾಜನ ಹೆಗಲ ಮೇಲೆ ಸ್ವಾಮಿಯು ಬಾಲಕರೂಪದಿಂದ ನಿಂತಿದ್ದುದೂ, ಐವತ್ತೆರಡನೆಯದರಲ್ಲಿ :–ದೀವಟಿಗೆಯ ಉರಿಯಿಂದ ಮಂಟಪವು ಸುಟ್ಟುಹೋಗುತಿರಲು, ಶೇಖಮಹಮ್ಮದನು ತಿಳಿದುಆರಿಸಿದುದೂ, ತುಕ್ಕೋಬನು ಬ್ರಾಹ್ಮಣರ ಸಂಶಯವನ್ನು ಪರಿಹರಿಸಿದುದೂ, ಪಂಡರಪುರದಿಂದ ಬಂದ ಹರಿದಾಸನಿಗೆ ಸನ್ಮಾನವನ್ನು ಮಾಡಿಸಿದುದೂ, ದುಷ್ಟರು ತುಕ್ಕೋಬನ ಗ್ರಂಥಗಳನ್ನು ನೀರಲ್ಲಿ ಮುಳುಗಿಸಲು, ಅವು ಭಗವದನುಗ್ರಹದಿಂದ ನನೆಯದೆ ಇದ್ದುದೂ ; ಐವತ್ತುಮೂರನೆಯದರಲ್ಲಿ :–ಬೋಧಲನು ಹೊಲವನ್ನು ಯಾಚಕರಿಗೆ ಸೂರೆಗೊಟ್ಟುದೂ, ಅರಮನೆಯ ಕಂದಾಯವನ್ನು ಸ್ವಾಮಿಯೇ ತೆಗೆದುಕೊಂಡುಹೋಗಿ ಸಲಿಸಿದುದೂ, ಮೋಟುಗಳಲ್ಲಿ ಮತ್ತೆ ತೆನೆಗಳು ಆದುದೂ ; ಐವತ್ತುನಾಲ್ಕನೆಯದರಲ್ಲಿ :––ಕೀರ್ತನದಲ್ಲಿ ಶವಕ್ಕೆ ಜೀವಿತವು ಬಂದುದೂ, ಹಾಸಿಯೆಂಬ ದಾಸಿಯು ಭಗವಂತನಲ್ಲಿ ಲೀನೆಯಾದುದೂ, ಹೊಲದಲ್ಲಿ ಬಿತ್ತಿದ ಕಹಿಸೋರೆಯಲ್ಲಿ ಗೋಧಿಯಾದುದೂ ಈಸಂಗತಿಯನ್ನು ಕೇಳಿ ಕೋಪಗೊಂಡ ತುರುಷ್ಕರಾಜನು ಬೋಧಲನ ಮಹಿಮೆಗೆ ಪರವಶನಾದುದೂ, ಐವತ್ತೈದನೆಯದರಲ್ಲಿ ;–ಗಣೇಶನಾಥನು ಮರಕ್ಕೆ ಉಪದೇಶಮಾಡಿದುದೂ,

ಕೇಶವಸ್ವಾಮಿಯು ಕೀರ್ತನದಲ್ಲಿ ಜನಗಳು ವತ್ಸನಾಭವನ್ನು ತಿಂದು ಬದುಕಿದುದೂ, ಪಂಢರೀನಾಥನು ಗೋಮಾಯಿಯನ್ನು ಹೊಳೆಯಿಂದ ದಾಂಟಿಸಿ ಪ್ರೀತಿಯಿಂದ ರೊಟ್ಟಿಯನ್ನು ಭಕ್ಷಿಸಿದುದೂ; ಐವತ್ತಾರನೆಯದರಲ್ಲಿ:-ಸಂತೋಬನ ಭಕ್ತಿಯನ್ನು ನೋಡಿ ಶ್ರೀಹರಿಯು ಕೂರ್ಮರೂಪವನ್ನು ತಾಳಿ ಯಾತ್ರಿಯವರನ್ನು ಹೊಳೆಯಿಂದ ದಾಟಿಸಿದುದೂ, ಸ್ವಾಮಿಯು ನೀಳೋಬನ ಮನೆಯಲ್ಲಿ ಮದುವೆಗೆ ಸಹಾಯನಾಗಿದ್ದುದೂ, ಮಾರುತಿಯು ಉದ್ಧವಚಿದ್ಘನನಿಗೆ ಸಹಾಯನಾಗಿ ತುರುಷ್ಕನಮಾಧಿಸಿಲಯವನ್ನು ಕೆಡಿಸಿದುದೂ ; ಐವತ್ತೇಳನೆಯದರಲ್ಲಿ:--ಸ್ವಾಮಿಯು ಭಕ್ತೋತ್ತಮನಾದ ವಿಸೋಬನ ಸಾಲವನ್ನು ತೀರಿಸಿದುದೂ ಪ್ರತಿಪಾದಿತಗಳಾಗಿವೆ. ಐವತ್ತಾರು ಅಧ್ಯಾಯಗಳೆಂಬ ಅಮೂಲ್ಯರತ್ನಗಳಿಂದ ಪರಿಕಲಿತವಾದ ಐವತ್ತೇಳನೆಯ ಅಧ್ಯಾಯವೆಂಬ ಕುಂದಣದ ಪದಕವು ವೈಕುಂಠನಾಯಕನಿಗೆ ಅರ್ಪಿಸಲ್ಪಟ್ಟಿರುವುದು.

ಹರಿ ಭರತ್ರಿ ಜಾಲಂಧರ ಸದಾನಂದ ಶಂಕರ ನರಸಿಂಹನಗರನಿವಾಸಿಯಾದ ಗೋಪೀಚಂದ, ಧನಾಜಾಟ ಬಾಜೀದಖಾನ ಭಾವ ನರಸಿಂಹಭಾರತಿ ನಾರಾಯಣ ಅಚ್ಯುತಾಶ್ರಮ ಘೂರ್ಜರದೇಶದ ಹಿರಿಯಸಿಂಗ, ಮಲ್ಲಿಕಾದಾಸ ಕವೀಶ್ವರಗಂಗ, ವಿವೇಕಸಿಂಧುವೆಂಬ ಅಧ್ಯಾತ್ಮಗ್ರಂಥವನ್ನು ರಚಿಸಿದ ವಿಖ್ಯಾತನಾದ ಮುಕುಂದರಾಜ, ಯಾಜ್ಞವಲ್ಕ್ಯ ಕೃಷ್ಣದಾಸಮುದ್ಗಲ ಕಾಹ್ನಾ ನಾಮ ಲೋಲಂಬರಾಜ ಚಾಂದಬೋಧಲ ಶೇಖಫರೀದ, ಸತ್ಯವಂತನಾದ ಸಹೂಸೇನ, ನರಹರಿ ಜಯರಾಮ ಮಾಲೋಪಂತ ನರಸಿಂಹಸರಸ್ವತಿ, ಜಾನಕೀಪತಿಯನ್ನು ಸ್ವಾಧೀನಮಾಡಿಕೊಂಡ ವಿಖ್ಯಾತನಾದ ಮಹಾಮುದ್ಗಲ, ಏಕಲಿಂಗ ವೈರಾಳಸಿದ್ಧ ಸುಮತಿ ಕಮಲಾಕರ, ಅಗಾಧಲೀಲೆಯುಳ್ಳ ರೇಣುಕಾನಂದನ, ಶ್ರೀಪತಿ ದಾಸಪಂತ ವಿಖ್ಯಾತನಾದ ಮಾಧವದಾಸ, ಪ್ರಹ್ಲಾದಬಡವೆ ಬಾಪ್ರೋಜಿಪಂತ ಗೋಸಾವೀನಂದನ ವಾಮನಸ್ವಾಮಿ ಗಿರಿಜಾಬಾಯಿ ಚಿನ್ಮಯನಂದನ, ಕೀರ್ತನದಿಂದ ಸಂತೋಷಪಡಿಸಿದ ಬಶವಲಿಂಗ, ಅಂತೋಬ ಭಗವಂತಭಟ್ಟ ವಿಟ್ಠಲಪುರಂದರ, ವೈಕುಂಠನಾಥನನ್ನು ವಶ್ಯನು ಮಾಡಿಕೊಂಡ ವೈನಾವತಿ, ಲಲ್ಲಹಾನಭೋಜಿಪಿಂಜಾರದಾದ, ಬಹಿನಾಬಾಸ ಪ್ರೇಮಚಂದ, ಹರಿವಿಜಯವನ್ನು ರಾಮವಿಜಯವನ್ನೂ ಪಾಂಡವಪ್ರತಾಪವನ್ನೂ ಮಾಡಿದ ನಾರ್ಝುರಕರ ಶ್ರೀಧರಸ್ವಾಮಿ ರಘುಪತಿ ಶೇಷ ಪೂರ್ಣಜ್ಞಾನಿ-ಎಂಬಿವರೇ ಮುಂತಾದ ಅನೇಕರಾದ, ಸಂತರು ಪರಮೇಶ್ವರನ ಅನುಗ್ರಹವನ್ನು ಪಡೆದು ಧನ್ಯರೆನಿಸಿರುವರು. ಇವರ ಪಾದಗಳಿಗೆ ನಾನು ಸಾಷ್ಟಾಂಗನಮಸ್ಕಾರವನ್ನು ಮಾಡುವೆನು. ಭಾಗವತಧರ್ಮದಲ್ಲಿ ತತ್ಪರರಾದವರು ಇನ್ನೂ ಯಾರು ಇರುವರೋ, ಯಾರು ಏಕನಿಷ್ಠೆಯುಳ್ಳ ಪಂಢರಪುರದ ಜಾತ್ರಿಗರೋ, ಯಾರು ಭಕ್ತಿವಿಶೇಷವನ್ನು ತಾಳಿ ಪಂಢರಪುರದಲ್ಲಿ ವಾಸಮಾಡುವರೋ, ಮುಂದೆಯೂ ಗುಪ್ತರಾಗಿ ಅವತರಿಸಿ ಪ್ರಕಟರಾಗುವ ಮಹನೀಯರಾದ ಭಾಗವತರು ಯಾರೋ ಅವರ ಪಾದಗಳಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡುವೆನು. ಈಶ್ವರನ

ವಿಭೂತಿಯು ಅಸಂಖ್ಯವಾಗಿರುವುದು. ಭೂಮಿಯ ಮೇಲೆ ಕರೆವ ಮಳೆಯ ಧಾರೆಗಳೂ ಪೃಥ್ವಿಯಲ್ಲಿ ಅಂಕುರಿಸಿರುವ ತೃಣಲತಾತರುಗಳೂ ಸಮುದ್ರದ ತೆರೆಗಳೂ ಎಂತು ಎಣಿಸಲು ಶಕ್ಯವಲ್ಲವೋ ಅಂತು ಭಗವಂತನ ವಿಭೂತಿಗಳು ಎಣಿಸಲು ಅಶಕ್ಯವಾದವುಗಳು. ಲೀಲಾನಾಟಕನಾದ ರುಕ್ಮಿಣೀಕಾಂತನು ತಾನೇ ಸ್ವಾಮಿಯೂ ಭಕ್ತನೂ ಆಗಿರುವನು. ಸಂತರು ಆತನನ್ನೇ ನೋಡುತ್ತ ಭಕ್ತರನ್ನೂ ಕಾಣುತಿರುವರು. ಸಮುದ್ರದರ್ಶನದಿಂದ ನದಿಗಳನ್ನೂ, ಸೂರ್ಯನ ದರ್ಶನದಿಂದ ಕಿರಣಗಳನ್ನೂ ಎಂತು ಕಂಡಂತಾಗುವುದೋ ಅಂತು ಸ್ವಾಮಿಯನ್ನು ನೋಡುವುದರಿಂದ ಭಕ್ತರನ್ನೂ ನೋಡಿದಂತಾಗುವುದು. ಅಶ್ವತ್ಥಕ್ಕೆ ಪ್ರದಕ್ಷಿಣೆಯಂ ಮಾಡಲು, ಶಾಖೆಗಳನ್ನೂ ಎಂತು ಪ್ರದಕ್ಷಿಣೆಮಾಡಿದಂತಾಗುವುದೋ ಅಂತು ಶ್ರೀಹರಿಗೆ ನಮಸ್ಕಾರವಂ ಮಾಡಲು, ಭಕ್ತರನ್ನೂ ನಮಸ್ಕರಿಸಿದಂತಾಗುವುದು. ಸಕ್ಕರೆಗೂ ಮಾಧುರ್ಯಕ್ಕೂ ಎಂತು ಭೇದವಿಲ್ಲವೋ ಅಂತು ವೈಕುಂಠನಾಥನಿಗೂ ಭಕ್ತರಿಗೂ ಭೇದವಿಲ್ಲ. ಅವರಿರ್ವರ ಕೃಪೆಯಿಂದ ಈ ಭಕ್ತವಿಜಯವು ನಿರ್ಮಿಸಲ್ಪಟ್ಟಿತು. ಇದರ ಶ್ರವಣದಿಂದ ಶ್ರೋತೃಗಳ ಮನೋರಥವು ಪೂರ್ಣವಾಗುವುದು. ಯಾರು ಭಕ್ತರ ಚರಿತ್ರೆಯನ್ನು ಸರ್ವಕಾಲದಲ್ಲಿಯೂ ಪಾಡುತಿರುವರೋ ಅವರಿಗೆ ಅದ್ಭುತವಾದ ಜ್ಞಾನವುಂಟಾಗುವುದು. ಪಂಢರೀನಾಥನು ಕೃಪೆಯನ್ನು ಮಾಡಿ ದರ್ಶನವಂ ಕುಡುವನು ಈ ಗ್ರಂಥವನ್ನು ಯಾರು ಸಂಗ್ರಹಿಸಿ ಇಟ್ಟುಕೊಳ್ಳುವರೋ ಅವರ ಮನೆಯಲ್ಲಿ ವಿಘ್ನಗಳು ಸೇರಲಾರವು; ಸುತ್ತಲೂ ಸುದರ್ಶನವು ತಿರುಗುತಿರುವುದು. ನಿಶ್ಚಯವೆಂದು ತಿಳಿಯತಕ್ಕದು. ಈ ಗ್ರಂಥದಲ್ಲಿ ಜಗಜ್ಜೀವನನು ಪ್ರಸನ್ನನಾಗಿರುವುದನ್ನೇ ಹೇಳಿರುವುದರಿಂದ ಇದನ್ನು ಓದಿದವರೂ ಕೇಳಿದವರೂ ಆ ರುಕ್ಮಿಣೀರಮಣನಿಂದಲೇ ಸಂರಕ್ಷಿಸಲ್ಪಡುವರು. "ಇದು ಕಲಿಯುಗದ ಚರಿತ್ರೆ; ಸಾಮಾನ್ಯವು" ಎಂದು ತಿಳಿಯಲಾಗದು. ಈಯುಗವು ಶ್ರೇಷ್ಠವೆಂದು ಅನೇಕಮಹರ್ಷಿಗಳು ಹೇಳುವರು. ಮುಹೂರ್ತಮಾತ್ರ ಏಕಾಗ್ರತೆಯಿಂದ ಧ್ಯಾನಿಸಲು, ವೈಕುಂಠನಾಥನು ಪ್ರಸನ್ನನಾಗುವನು. ಈ ಭಕ್ತರ ಚರಿತ್ರೆಯು ಇಂದ್ರಾದಿಗಳಿಗೂ ಪಾವನವಾದುದು. ಇದನ್ನು ಕೇಳಿ ಮನದಲ್ಲಿ ವಿಕಲ್ಪವನ್ನು ಮಾಡಲಾಗದು. ರುಕ್ಮಿಣೀರಮಣನು ಎಂತು ಆಜ್ಞಾಪಿಸಿದನೋ ಅಂತು ಗ್ರಂಥವನ್ನು ಬರೆದಿರುವೆನು. ಊದುವನು ಊದಿದಂತೆ ವಾದ್ಯವು ಎಂತು ಧ್ವನಿಗೂಡುವುದೋ, ಗಾಳಿಯು ಬೀಸಿದಂತೆ ಭೂಮಿಯಲ್ಲಿ ತೃಣವು ಎಂತು ಬಗ್ಗುವುದೋ ಸೂತ್ರಧಾರನು ಕುಣಿಸುವಂತೆ ಪುತ್ಥಳಿಯು ಎಂತು ಕುಣಿವುದೋ ಅಂತು ಬುದ್ಧಿಪ್ರದನಾದ ರುಕ್ಮಿಣೀಪತಿಯು ಪ್ರೇರಿಸಿದಂತೆ ಈ ಭಕ್ತವಿಜಯಗ್ರಂಥವು ಆಗಿರುವುದು.

ಈ ಗ್ರಂಥವು ಪ್ರವರೆಯ ದಕ್ಷಿಣಭಾಗದ ಪಂಚಕ್ರೋಶದಲ್ಲಿ "ತಾಹಾರಬಾದ" ಎಂಬ ಊರಲ್ಲಿ ಒಂದುಸಾಸಿರದಾರುನೂರೆಂಬತ್ತುನಾಲ್ಕನೆಯ ಶಾಲಿವಾಹನಶಕಾಬ್ದಕ್ಕೆ ಸಂದ ಚಿತ್ರಭಾನುಸಂವತ್ಸರದ ವೈಶಾಖಬಹುಳದ್ವಾದಶೀದಿನಕ್ಕೆ ಸಿದ್ಧಿಹೊಂದಿತು.

ಇನ್ನು ಮೇಲೆ ಪಂಢರೀನಾಥನೇ ನನ್ನ ಕೊನೆಯ ಬಿನ್ನಪವನ್ನು ಲಾಲಿಸಬೇಕು. ಎಲೈ ಸ್ವಾಮಿಯೇ! ಈ ಗ್ರಂಥವನ್ನು ಹೇಳುವವನೂ ಕೇಳುವವನೂ ರಕ್ಷಿಸುವವನೂ ನೀನೆ. ನೀನು ಅವಿನಾಶಿಯಾದ ಜಗದ್ಗುರುವು. ಮಾಯಾತೀತನಾದ ಸರ್ವೇಶ್ವರನು. ನಿರಾಧಾರರಿಗೆ ಆಧಾರನು. ದಾಸರ ಜನ್ಮಮರಣಂಗಳನ್ನು ಪರಿಹರಿಸುವವನು. ಭಕ್ತರು ಎಂತು ಹಟವಂ ಮಾಡುವರೋ ಅಂತು ನೀನು ಪಾಲಿಸುವೆ. ಅವರ ಭಕ್ತಿಯನ್ನು ನೋಡಿ ಹೃದಯದಲ್ಲಿ ವಾಸವಂ ಮಾಡುವೆ. ಕೆಲವರಿಗೆ ಆತ್ಮಜ್ಞಾನವನ್ನು ಕೊಟ್ಟೆ. ಕೆಲವರಿಗೆ ಬೇಡಿದ ಸಾಯುಜ್ಯವಂ ಕೊಟ್ಟೆ. ಕೆಲವರು ವಜ್ರಾಸನದಲ್ಲಿ ಕುಳಿತು ನಿನ್ನನ್ನು ಧ್ಯಾನಿಸುತ್ತಿರುವರು. ನಾನು ಸಂತರ ಗುಣಗಳ ವರ್ಣನೆಯಲ್ಲಿಯೇ ಅಪೇಕ್ಷೆಯುಳ್ಳವನು. ನಿನ್ನ ದಾಸರ ಕೀರ್ತನದಲ್ಲಿಯೇ ಪ್ರೇಮಯುಕ್ತನಾಗಿರುವೆನು. ಬೇಸರವಿಲ್ಲದೆ ಎಂದೂ ನಿನ್ನ ದಾಸರನ್ನೇ ಸ್ತುತಿಯಿಸಲು ಅಪೇಕ್ಷೆಗೊಂಡಿರುವೆನು. ಎಲೈ ಪರಮಾತ್ಮನೇ! ಕೃಪೆಯಿಂದ ನನ್ನನ್ನು ಪರಿಪಾಲಿಸು.

ಕಂ॥ ವರಪುಂಡರೀಕವರದಂ ।
ಸಿರಿಯರಸಂ ಪುಂಡರೀಕನಯನಂ ಶ್ರೀಪಂ ॥
ಡರಪುರವಿಲಸಿತವಿಭವಂ ।
ಪೊರೆಗೆಮ್ಮಂ ಪಾಂಡುರಂಗವಿಟ್ಠಲದೇವಂ ॥

ಇಂತು ಶ್ರೀಭಕ್ತವಿಜಯದಲ್ಲಿ ಐವತ್ತೇಳನೆಯ ಅಧ್ಯಾಯಂ ಸಂಪೂರ್ಣಂ.

ಭಕ್ತವಿಜಯಂ ಸಂಪೂರ್ಣವಾದುದು.

ಮಂಗಳಮಸ್ತು.

ಪರಿಶಿಷ್ಟ.

ಪುಂಡರೀಕಚರಿತ್ರೆ.

ಹಿಂದೆ ಪಂಡರಪುರದಲ್ಲಿ ಪುಂಡರೀಕನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನು ಬಹು ಕಠಿನಸ್ವಭಾವನೂ ಮಾತಾಪಿತೃವಿರೋಧಿಯೂ ಆಗಿದ್ದನು. ಅವನ ತಾಯ್ತಂದೆಗಳು ಅಸಮಾಧಾನಗೊಂಡು ಅವನಲ್ಲಿ ಇರಲೊಲ್ಲದೆ ಕಾಶಿಯನ್ನು ಸೇರಿ ಅಲ್ಲಿ ಕೆಲವುದಿನವಿದ್ದು, ಮತ್ತೆ ಪುತ್ರವ್ಯಾಮೋಹದಿಂದ ಹಿಂತಿರುಗಿ ತಮ್ಮೂರಿಗೆ ಬಂದರು.

ಆಗ ಪುಂಡರೀಕನ ಮಡದಿ ತಾನೂ ಕಾಶಿಯನ್ನು ನೋಡಬಯಸಿ ಪತಿಯಲ್ಲಿ ಹೇಳಿಕೊಂಡಳು. ಆತನು ಆಗಲೆಂದು ಒಪ್ಪಿ ಮಡದಿಯೊಡನೆ ಕಾಶಿಗೆ ಹೊರಟನು. ಅಗಲಿರಲಾರದೆ ತನ್ನ ಹಿಂದೆಯೆ ಬಂದ ಮಾತಾಪಿತೃಗಳನ್ನು ಕುರಿತು—ನೀವು ನಮ್ಮೊಡನೆ ಬರಲಾಗದು; ನಾವು ಕರೆದು ಕೊಂಡು ಹೋಗುವುದಿಲ್ಲ. ನಿಮ್ಮ ಯೋಗಕ್ಷೇಮವನ್ನು ನಾವು ವಿಚಾರಿಸುವುದಿಲ್ಲ—ಎಂದು ಗರ್ಜಿಸಿ ನುಡಿದನು. ಆದರೂ ಆ ವೃದ್ಧರು ಹಿಂದೆಯೇ ಹೊರಟರು.

ಪುಂಡರೀಕನು ಕಾಶಿಯ ಬಳಿಯ ಕುಕ್ಕುಟಾಶ್ರಮವನ್ನು ಸೇರಿ, ಅಲ್ಲಿ ವೃದ್ಧರಾದ ತಾಯ್ತಂದೆಗಳನ್ನು ಪರಮಭಕ್ತಿಯಿಂದ ಸೇವಿಸುತ್ತಿದ್ದ ಕುಕ್ಕುಟಮಹರ್ಷಿಗಳನ್ನು ಕಂಡು ಅವರನ್ನು ಕುರಿತು—ಸ್ವಾಮಿ! ಕಾಶಿ ಇನ್ನೆಷ್ಟುದೂರದಲ್ಲಿದೆ?—ಎಂದು ಬೆಸಗೊಂಡನು. ಅವರು—ನಾನು ಕಾಶಿಯನ್ನೂ ಕಾಣೆ; ರಾಮೇಶ್ವರವನ್ನೂ ಕಾಣೆ. ಎಷ್ಟು ದೂರದಲ್ಲಿದೆಯೋ ನಾನರಿಯೆನು. ನನಗೆ ಈ ಮಾತಾಪಿತೃಗಳ ಚರಣಸನ್ನಿಧಿಯೇ ಕಾಶಿ, ಮತ್ತು ರಾಮೇಶ್ವರ—ಎಂದು ಉತ್ತರವನ್ನು ನುಡಿದನು.

ಪುಂಡರೀಕನು ಆ ಮಾತನ್ನು ಕೇಳಿದೊಡನೆಯೇ ಸುಜ್ಞಾನವನ್ನು ಪಡೆದು ಕಾಶಿಗೆ ಹೋಗುವುದನ್ನು ಬಿಟ್ಟು ಪಶ್ಚಾತ್ತಾಪಯುಕ್ತನಾಗಿ ಅಲ್ಲಿಂದ ಹೊರಟು ತಾಯ್ತಂದೆಗಳನ್ನು ಹುಡುಕಿ ಕಂಡು ಅವರಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಬೇಡಿ, ಉಪಚರಿಸಿ ಅವರನ್ನು ಊರಿಗೆ ಕರೆದುಕೊಂಡು ಬಂದು ಮನೆಯನ್ನು ಸೇರಿ ಅಸಾಧಾರಣವಾದ ಭಕ್ತಿವಿಶೇಷವುಳ್ಳವನಾಗಿ ನಿರಂತರವೂ ನಿಯಮದಿಂದ ಅವರ ಸೇವೆಯನ್ನು ಮಾಡುತಿದ್ದನು.

ಭಗವಂತನಾದ ಶ್ರೀಕೃಷ್ಣನು ಮಾತಾಪಿತೃಸೇವಾಧುರಂಧರನಾದ ಆತನ ಸದ್ಭಾವಕ್ಕೆ ಮೆಚ್ಚಿ ಆತನನ್ನು ನೋಡುವುದಕ್ಕೋಸ್ಕರ ಶ್ರೀರುಕ್ಮಿಣೀಸಮೇತನಾಗಿ ವಿಲಾಸದಿಂದ ಅಲ್ಲಿಗೆ ಬಂದನು. ಪುಂಡರೀಕನು ಏಕಾಗ್ರಚಿತ್ತನಾಗಿ ತಾಯ್ತಂದೆಗಳನ್ನು ಸೇವಿಸುತ್ತಿದ್ದನು. ಎಷ್ಟು ಹೊತ್ತಾದರೂ ಅತ್ತಿತ್ತ ನೋಡಲಿಲ್ಲ. ಸ್ವಾಮಿಯು ಅಚ್ಚರಿಗೊಂಡು ಆತನ ಸೇವೆಯನ್ನು ಪರಾಮರ್ಶಿಸುತಿದ್ದನು.

ಬಳಿಕ ವೃದ್ಧರಾದ ಪುಂಡರೀಕನ ತಾಯ್ತಂದೆಗಳು ಸ್ವಾಮಿಯ ಕಾಲಂದುಗೆಯ ಕಿರುಗೆಜ್ಜೆಗಳ ಝಣತ್ಕಾರವನ್ನು ಆಲಿಸಿ, ಮಗನನ್ನು ಕುರಿತು—ವತ್ಸಾ! ಇಲ್ಲಿಗೆ ಯಾರೋ ಬಂದಿರುವಂತಿದೆ. ಇವರಿಗೆ ಆಸನವನ್ನಿತ್ತು ಉಪಚರಿಸು—ಎನಲು, ಪುಂಡರೀಕನು ಅಲ್ಲಿದ್ದ ಒಂದು ಇಟ್ಟಿಗೆಯನ್ನು ತನ್ನ ಬೆನ್ನ ಹಿಂದೆ ಎಸೆದು—ಇದನ್ನೇ ಆಸನವನ್ನಾಗಿ ಮಾಡಿಕೊಳ್ಳಿ—ಎಂದು ನುಡಿದು, ತಾನು ಆಗ ಮಾಡಬೇಕಾದ ಸೇವೆಯೆಲ್ಲವನ್ನೂ ನೆರವೇರಿಸಿ, ಬಳಿಕ ಹಿಂತಿರುಗಿ ನೋಡಿದನು. ಆಗ ದಿವ್ಯಾಲಂಕಾರಭೂಷಿತನೂ ದಿವ್ಯತೇಜೋವಿರಾಜಮಾನನೂ ಕರಯುಗಳೋಪಶೋಭಿತಕಟಿತಟನೂ ಆದ ಪರಮಾತ್ಮನು ದೃಗ್ಗೋಚರನಾದನು. ಪುಂಡರೀಕನು ಥಟ್ಟನೆ ಎದ್ದು ಸಾಷ್ಟಾಂಗನಮಸ್ಕಾರಮಾಡಿ ಸ್ವಾಮಿಯನ್ನು ಸ್ತುತಿಯಿಸಿದನು.

ಸ್ವಾಮಿಯೂ ಆತನನ್ನು ಕುರಿತು—ಪುಂಡರೀಕನೆ! ಮಾತಾಪಿತೃಸೇವಾಧುರಂಧರನಾದ ನಿನ್ನ ಸದ್ಭಕ್ತಿಗೆ ಮೆಚ್ಚಿ ನಿನಗೆ ವರವನ್ನು ಕೊಡುವುದಕ್ಕೆ ಬಂದಿರುವೆನು. ನಿನ್ನ ಅಭೀಷ್ಟವೇನು? ಬೇಡು—ಎನಲು, ಪುಂಡರೀಕನು ಪರಮೋಲ್ಲಾಸಗೊಂಡು ವಿನಯಾವನತನಾಗಿ ಆ ಸ್ವಾಮಿಯನ್ನು ಕುರಿತು—ಎಲೈ ದಯಾನಿಧಿಯಾದ ಶ್ರೀಹರಿಯೇ! ನಿನ್ನ ಚರಣಾರವಿಂದಸಂದರ್ಶನದಿಂದ ನಾನು ಧನ್ಯನಾದೆನು. ನಿನ್ನ ಸಾಕ್ಷಾತ್ಕಾರವನ್ನು ಉಂಟುಮಾಡಿದ ಈ ಮಾತಾಪಿತೃಸೇವೆ ನನಗೆ ಸಂತತವಾಗಿ ನಿಯಮದಿಂದ ನಡೆವಂತೆ ನೀನು ಅನುಗ್ರಹಿಸಬೇಕು. ಕರುಣಾನಿಧಿಯಾದ ನೀನು ಇಲ್ಲಿಯೇ ನಿಂತು ಭಕ್ತರನ್ನು ಉದ್ಧರಿಸುತ್ತಿರಬೇಕು—ಎಂದು ಪ್ರಾರ್ಥಿಸಲು, ಭಕ್ತವತ್ಸಲನಾದ ಸ್ವಾಮಿ ಹಾಗೆಯೇ ಆಗಲೆಂದು ಕರುಣಿಸಿ ಪಾಂಡುರಂಗವಿಟ್ಠಲನೆಂಬ ಮಂಗಳನಾಮವನ್ನು ತಾಳಿ ಈಗಲೂ ಅಲ್ಲಿಯೇ ತನ್ನ ಲೀಲೆಗಳನ್ನು ಮೆರೆಯುತ್ತ ಭಕ್ತರನ್ನು ಸಲಹುತ್ತಿರುವನು.